
ಕನ್ನಡ ಚಂದ್ರ

ರಾ.ನಂ. ೬೦ ಅಭಿನಂದನ ಗ್ರಂಥ



ದೇಣಿಗೆ:
ರಾ ಶಂ ಬ [illegible]ನಂದದವ ಸ್ವಾಮಿ
ಬೆಂಗಳೂರು



ಚೈತನ್ಯದ ಚಿಲುಮೆ, ನಿಸ್ವಾರ್ಥ ಕನ್ನಡ ಕರ್ಮಯೋಗಿ
ರಾ.ನಂ. ಚಂದ್ರಶೇಖರ

ಕನ್ನಡ ಚಂದ್ರ

ಕನ್ನಡ-ಕನ್ನಡಿಗ-ಕರ್ನಾಟಕದ

ಸಂಭ್ರಮ-ಸಂಕಟಗಳ ಚಿಂತಕ, ಲೇಖಕ

ಹಲವು ಹೋರಾಟಗಳ ಹೆಮ್ಮೆಯ ಕಾರ್ಯಕರ್ತ

ರಾ.ನಂ. ಚಂದ್ರಶೇಖರ

ಅವರ ಷಷ್ಟ್ಯಬ್ದಿ ಸಂದರ್ಭದಲ್ಲಿ

ಹಿರಿಯರು, ಮಿತ್ರರು ಹಾಗೂ ಅಭಿಮಾನಿಗಳು

ಅರ್ಪಿಸಿದ ಅಭಿನಂದನ ಗ್ರಂಥ

ರಾ.ನಂ.ಚಂ. – ೬೦ : ಅಭಿನಂದನ ಸಮಿತಿ

೬, ರಾಘವೇಂದ್ರ ಕಾಂಪ್ಲೆಕ್ಸ್, ೨ನೇ ಎಡ ತಿರುವು, ಸಿ.ಕೆ.ಸಿ.ಗಾರ್ಡನ್, ಬೆಂಗಳೂರು-೫೬೦ ೦೨೭
ದೂರವಾಣಿ: ೦೮೦-೨೨೨೧೯೮೯೯ ಮಿಂಚಂಚೆ: uppibh@gmail.com

ಅಧ್ಯಕ್ಷರು

ಡಾ. ಎಂ. ಚಿದಾನಂದಮೂರ್ತಿ

ಕಾರ್ಯದರ್ಶಿ

ಬಾ. ಹ. ಉಪೇಂದ್ರ

ಸಹ ಕಾರ್ಯದರ್ಶಿಗಳು

ಕೆ. ಎಚ್. ನರಸಿಂಹಮೂರ್ತಿ
ಬಿ. ಎ. ನಂಜುಂಡಸ್ವಾಮಿ

ಖಜಾಂಚಿ

ಎಚ್. ಎನ್. ರಮೇಶ್ ಬಾಬು

ಸದಸ್ಯರು

ಗೊ. ರು. ಚನ್ನಬಸಪ್ಪ
ಡಾ. ವಿಜಯಾ
ಕೆ. ಎನ್. ಭಗವಾನ್
ಹಿರಿಯಣ್ಣ
ಬಿ. ಎಸ್. ಜಯಪ್ರಕಾಶ ನಾರಾಯಣ

ಅಭಿನಂದನ ಗ್ರಂಥದ ಪ್ರಧಾನ ಸಂಪಾದಕರು

ಪ್ರೊ. ಎಲ್. ಎಸ್. ಶೇಷಗಿರಿ ರಾವ್

ಸಹ ಸಂಪಾದಕರು

ಎಚ್. ಎಸ್. ಗೋಪಾಲ ರಾವ್
ಎಸ್. ಶಿವಲಿಂಗಯ್ಯ

ಕನ್ನಡ ಚಂದ್ರ

ರಾ.ನಂ. ೬೦ ಅಭಿನಂದನ ಗ್ರಂಥ

ಪ್ರಧಾನ ಸಂಪಾದಕರು

ಪ್ರೊ. ಎಲ್. ಎಸ್. ಶೇಷಗಿರಿ ರಾವ್

ಸಂಪಾದಕ ಮಂಡಳಿ

ಎಚ್. ಎಸ್. ಗೋಪಾಲ ರಾವ್
ಎಸ್. ಶಿವಲಿಂಗಯ್ಯ

ಪ್ರಕಾಶಕರು

ರಾ.ನಂ.ಚಂ.-೬೦ : ಅಭಿನಂದನ ಸಮಿತಿ

೬, ರಾಘವೇಂದ್ರ ಕಾಂಪ್ಲೆಕ್ಸ್, ೨ನೇ ಎಡ ತಿರುವು
ಸಿ.ಕೆ.ಸಿ. ಗಾರ್ಡನ್, ಬೆಂಗಳೂರು-೫೬೦ ೦೨೭

KANNADA CHANDRA (Kannada), a Felicitation volume for Sri Ra.Nam. Chandrashekhara, Kannada Writer and activist; a collection of articles, Chief Editor Prof. L.S. Sheshagiri Rao
Associate Editors: H.S.Gopala Rao & S.Shivalingaiah

Published by
Ra.Nam.Cham.-60 : Abhinandana Samithi
#6, Raghavendra Complex, 2nd Cross Left , C.K.C.Garden
Bengaluru - 560027.
Ph: 080-22219899, E-mail: uppibh@gmail.com


Pages	:	xvi + 456 + photos
First Impression	:	2012
Copies	:	500
©	:	Authors
Paper used	:	80 gsm. N.S. Maplitho
Price	:	Rs. 250/-

ಕನ್ನಡದ ಚಂದ್ರ (ಅಭಿನಂದನ ಗ್ರಂಥ)
ಪ್ರಧಾನ ಸಂಪಾದಕರು: ಪ್ರೊ. ಎಲ್. ಎಸ್. ಶೇಷಗಿರಿ ರಾವ್
ಸಂಪಾದಕ ಮಂಡಳಿ : ಎಚ್. ಎಸ್. ಗೋಪಾಲ ರಾವ್, ಎಸ್. ಶಿವಲಿಂಗಯ್ಯ

ಪ್ರಕಾಶಕರು
ರಾ.ನಂ.ಚಂ.–೬೦ : ಅಭಿನಂದನ ಸಮಿತಿ
೬, ರಾಘವೇಂದ್ರ ಕಾಂಪ್ಲೆಕ್ಸ್, ೨ನೇ ಎಡ ತಿರುವು, ಸಿ.ಕೆ.ಸಿ. ಗಾರ್ಡನ್
ಬೆಂಗಳೂರು–೫೬೦ ೦೨೭
ದೂರವಾಣಿ: ೦೮೦–೨೨೨೧೯೮೯೯

ಪುಟಗಳು	:	xvi + 456 + ಫೋಟೋಗಳು
ಮೊದಲ ಮುದ್ರಣ	:	೨೦೧೨
ಪ್ರತಿಗಳು	:	೫೦೦
ಹಕ್ಕುಗಳು	:	ಲೇಖಕರವು
ಬಳಸಿದ ಕಾಗದ	:	೮೦ ಜಿಎಸ್ಎಂ. ಎನ್.ಎಸ್.ಮ್ಯಾಪ್‌ಲಿಥೊ
ಬೆಲೆ	:	ರೂ. ೨೫೦/– (ಇನ್ನೂರೈವತ್ತು ರೂಪಾಯಿಗಳು)
ಮುಖಪುಟ ವಿನ್ಯಾಸ	:	ಅರುಣ್‌ಕುಮಾರ್ ಜಿ.

ಮುದ್ರಕರು
ಇಳಾ ಮುದ್ರಣ
ನಂ. ೩೬, ೪೦ ಅಡಿರಸ್ತೆ, ರಾಘವನಗರ
ನ್ಯೂ ಟಿಂಬರ್‌ಯಾರ್ಡ್ ಲೇಔಟ್
ಬೆಂಗಳೂರು–೫೬೦ ೦೨೬
ಫೋನ್: 080-26757159



ಪರಿವಿಡಿ

ಭಾಗ ೨ : ಸಂಪನ್ನ ಸಂಸ್ಕೃತಿಯ ತಂಗಾಳಿ

ಭಾಗ ೩ : ವಿಜ್ಞಾನ, ಉದ್ದಿಮೆಯ ಜೋರು ಬೀಸು

ಭಾಗ ೪ : ಕನ್ನಡ ಚಂದ್ರ ದರ್ಶನ

ಅರಿಕೆ

ಶ್ರೀ ರಾ.ನಂ. ಚಂದ್ರಶೇಖರ ಅವರಿಗೆ ಐವತ್ತೊಂಬತ್ತು ವರ್ಷ ತುಂಬಿ ಅರವತ್ತಕ್ಕೆ ಕಾಲಿಡುವ ಶುಭ ಸಮಯದಲ್ಲಿ ಈ ಪುಸ್ತಕವನ್ನು ನಾವೇ ಪ್ರಕಟಿಸುತ್ತಿದ್ದರೂ, ನಮಗೇ ಒಮ್ಮೊಮ್ಮೆ ಅನುಮಾನ ಮೂಡುತ್ತದೆ. 'ಹೌದಾ, ನಮ್ಮ ರಾ.ನಂ. ಅರವತ್ತಕ್ಕೆ ಕಾಲಿಡುತ್ತಿದ್ದಾರಾ? ಅಥವಾ ನಮ್ಮ ಮಾಹಿತಿ ತಪ್ಪಾ?'

ಅಷ್ಟು ಚಟುವಟಿಕೆಯ ಬದುಕು ನಡೆಸುತ್ತಾರೆ; ತಮ್ಮ ಉದ್ಯೋಗವನ್ನು ಯಶಸ್ವಿಯಾಗಿ ನಿರ್ವಹಿಸುತ್ತಲೇ ಹತ್ತು ಹಲವು ಕನ್ನಡದ ಕೆಲಸಗಳಲ್ಲಿ ತೊಡಗಿಕೊಳ್ಳುತ್ತ, ಊರೆಲ್ಲ ಓಡಾಡುತ್ತ ಗೆಳೆಯರೊಡನೆ ನಗುನಗುತ್ತ ಕಾಲಕಳೆಯುವ, ಸ್ವಂತ ವಾಹನವಿಲ್ಲದ ಸ್ವಂತ ಮೊಬೈಲ್ ಫೋನ್ ಸಹ ಇಲ್ಲದ ಈ ನಮ್ಮ ಗೆಳೆಯ.

ಕನ್ನಡ–ಕನ್ನಡಿಗ–ಕರ್ನಾಟಕಗಳ ಬಗ್ಗೆ ನಿಖರವಾದ ಮಾಹಿತಿ ಬೇಕಾದಾಗ ಮೊದಲು ನೆನಪಿಗೆ ಬರುವವರು ರಾ.ನಂ.. ಕನ್ನಡದ ಕೆಲಸವಾಗಬೇಕು, ಒಂದು ಸಭೆ ಕೂಡಿಸಬೇಕು, ಕನ್ನಡಕ್ಕೆ ಸಂಬಂಧಿಸಿದ ಹಾಗೆ ಒಂದು ಪ್ರಕಟಣೆಯನ್ನು ಕೊಡಬೇಕಾದಾಗ ಮೊದಲು ನೆನಪಾಗುವವರು ರಾ.ನಂ. ಅವರು ನಾಲ್ಕು ದಿನ ಊರಿಗೆ ಹೋದರೆ ನಾಲ್ಕು ಸಲ ನೆನಪಾಗಿರುತ್ತಾರೆ. ಒಮ್ಮೊಮ್ಮೆ, ಒಂದಿಷ್ಟು ಕೋಪದಿಂದ "ಈಗಲೇ ಊರಿಗೆ ಹೋಗಬೇಕಾಗಿತ್ತೆ ಈ ಮನುಷ್ಯ" ಎನಿಸುತ್ತದೆ.

ನಾನಂತೂ ಎಷ್ಟೋ ಬಾರಿ ಕನ್ನಡ–ಕನ್ನಡಿಗ–ಕರ್ನಾಟಕಗಳನ್ನು ಕುರಿತು ಲೇಖನ ಬರೆಯಬೇಕಾದಾಗ ದೂರವಾಣಿ ಕರೆ ಮಾಡುತ್ತೇನೆ: "ರಾನಂ, ಇಷ್ಟು ಮಾಹಿತಿ ಬೇಕಲ್ಲ?" "ಯಾವಾಗ ಬೇಕು, ಸರ್?" ನಾನು ಹೇಳುತ್ತೇನೆ. ನಾನು ಹೇಳಿದ ಅವಧಿಯೊಳಗೆ



ಅಧಿಕೃತ ಮಾಹಿತಿಯನ್ನು, ಅಗತ್ಯವಾದ ಪುಸ್ತಕಗಳನ್ನು ತಂದುಕೊಡುತ್ತಾರೆ; ರಾ.ನಂ. ಅಥವಾ ಅವರ (ನಮ್ಮೆಲ್ಲರ) ಗೆಳೆಯರ ಬಳಗದ ಬಂಧುಗಳು.

ಕನ್ನಡದ ಕೆಲಸವೆಂದರೆ ದೈಹಿಕ ಶ್ರಮವನ್ನು ಲೆಕ್ಕಿಸದ, ಕೈಯಿಂದ ಹಣ ವೆಚ್ಚವಾಗುವುದೆಂದು ಯೋಚಿಸದ, ನಾವಿರುವ ಹುದ್ದೆಗೆ, ನಮಗೆ ಸಮಾಜದಲ್ಲಿರುವ ಸ್ಥಾನಕ್ಕೆ ಈ ಬೆಂಚ್ ಎತ್ತುವುದು ಹೇಗೆ, ಕುರ್ಚಿಯನ್ನು ಸಾಗಿಸುವುದು ಹೇಗೆ ಎಂದೆಲ್ಲ ಒಂದು ಕ್ಷಣವೂ ಯೋಚಿಸದೆ ಕೆಲಸದಲ್ಲಿ ತೊಡಗುವ ನಮ್ಮ ಅಭಿಮಾನದ ಗೆಳೆಯರ ಬಳಗದ ಪ್ರಮುಖ ಸದಸ್ಯರಲ್ಲಿ ಒಬ್ಬರು ರಾ.ನಂ.. ಚಿಂತನೆಯ ಚಾವಡಿಯ ಪ್ರಮುಖ ಸದಸ್ಯರೇ ರಾ.ನಂ.

ಬೆಳಗಿನಿಂದ ಸಂಜೆಯವರೆಗೆ ಕಚೇರಿಯಲ್ಲಿ ದುಡಿದು, ಎಲ್ಲರಂತೆ ಸಂಸಾರವನ್ನು ನಿರ್ವಹಿಸಿ, ಹತ್ತು ಕಡೆಗೆ ಓಡಾಡಿ, ಹತ್ತು ಕೆಲಸಗಳಲ್ಲಿ ತೊಡಗಿಕೊಂಡು ರಾ.ನಂ. ಲೇಖನಗಳನ್ನು, ಪುಸ್ತಕಗಳನ್ನು ಬರೆದಿದ್ದಾರೆ. ಅದೂ ಕನ್ನಡಿಗರು ತಮ್ಮ ಕಪಾಟುಗಳಲ್ಲಿ ಉಳಿಸಿಕೊಳ್ಳಬೇಕಾದ ಪುಸ್ತಕಗಳು. ಅವರು ಸಿದ್ಧಪಡಿಸಿದ ಪುಟ್ಟ ಪುಸ್ತಕ 'ಕನ್ನಡ ಕೈದೀವಿಗೆ' ಯಿಂದ ಹಿಡಿದು, ಇತ್ತೀಚೆಗೆ (೪-೧೨-೨೦೧೨) ಪ್ರಕಟಿಸಿದ 'ಸ್ಥಳೀಯರಿಗೆ ಉದ್ಯೋಗ' ವರೆಗೆ ಅವರ ಪ್ರತಿ ಕೃತಿಯಲ್ಲಿಯೂ ವ್ಯಕ್ತಪಡಿಸುವ ಅಭಿಪ್ರಾಯಕ್ಕೆ, ನೀಡುವ ಸಲಹೆಗೆ ಅಧಿಕಾರಯುತವಾದ ಮಾಹಿತಿಯ ಭದ್ರವಾದ ಅಡಿಪಾಯವಿರುತ್ತದೆ, ದೀರ್ಘ ಚಿಂತನೆಯ ಬೆನ್ನೆಲುಬು ಇರುತ್ತದೆ. ನಾನೂ ಹಲವು ಸಂಘಟನೆಗಳಲ್ಲಿ ಕೆಲಸ ಮಾಡಿದ್ದೇನೆ. ಸಂಘಟನೆಯ ವಿಷಯದಲ್ಲಿ ಅನುಭವ ಪಡೆದಿದ್ದೇನೆ. ಆದರೆ ರಾ.ನಂ. ಅವರ 'ಸಂಘಟನೆಯ ಮೂಲತತ್ತ್ವಗಳು' ಪುಸ್ತಿಕೆಯನ್ನು ಓದಿದಾಗ ಅವರ ವಿಸ್ತಾರವಾದ ಅನುಭವ, ಹೊಣೆಗಾರಿಕೆಯ ಚಿಂತನೆ, ಅವರು ಸೂಕ್ಷ್ಮವಾಗಿ ಗಮನಿಸುವ ವಿವರಗಳು ಎಲ್ಲವನ್ನು ಕಂಡು ಸಂತೋಷವಾಯಿತು, ಅಚ್ಚರಿಯಾಯಿತು. 'ಕನ್ನಡ ಹೋರಾಟಗಳು' ಪುಸ್ತಕದಲ್ಲಿ ಕನ್ನಡಪರ ಹೋರಾಟಗಳನ್ನು ನಿರೂಪಿಸಿದಾಗ, ಇಂಥ ಹೋರಾಟಗಳಲ್ಲಿ ಭಾಗವಹಿಸಿದ ಎಲ್ಲ ವ್ಯಕ್ತಿಗಳಿಗೆ ಮತ್ತು ಸಂಘಟನೆಗಳಿಗೆ ಸಾಧ್ಯವಾದಷ್ಟು ನ್ಯಾಯ ದೊರಕಿಸಬೇಕೆಂಬ ಹೊಣೆಗಾರಿಕೆಯ ಅವರ ಕಳಕಳಿಯನ್ನು ನಾನೇ ಕಾಣುತ್ತಿದ್ದೆ. 'ಕನ್ನಡ ವೆಂದರೆ ಬರಿ ನುಡಿಯಲ್ಲ...' ಬರಿ ಪುಸ್ತಕವಲ್ಲ, ಎಲ್ಲ ಕನ್ನಡಿಗರು ಗಮನಿಸಬೇಕಾದ ಮಾಹಿತಿಯ, ಚಿಂತನೆಯ ಗಣಿ.

ತನ್ನ ಹೆಸರನ್ನು ಸಾರ್ಥಕಗೊಳಿಸಿದ ಕನ್ನಡ ಶಕ್ತಿ ಕೇಂದ್ರವು 'ಕನ್ನಡ-ಕನ್ನಡಿಗ-ಕರ್ನಾಟಕ' ಪುಸ್ತಕವನ್ನು ಸಿದ್ಧಗೊಳಿಸಿದಾಗ ರಾ.ನಂ. ಎಷ್ಟರಮಟ್ಟಿಗೆ, ಎಷ್ಟು ರೀತಿಗಳಲ್ಲಿ ದುಡಿದರು ಎನ್ನುವುದು ನನಗೆ ಈಗಲೂ ನೆನಪಿದೆ. ಅದನ್ನು ಬಳಸಿದವರೆಲ್ಲ ಅದರ ನಿಖರವಾದ ಮಾಹಿತಿಯ ಸಮೃದ್ಧಿಗೆ ಅಚ್ಚರಿಪಡುತ್ತಾರೆ, ಸಂತೋಷಪಡುತ್ತಾರೆ. ಆ ಸಾಧನೆಯ ಕೀರ್ತಿಯ ಸಾಕಷ್ಟು ಭಾಗ ನಮ್ಮ ರಾ.ನಂ. ಚಂದ್ರಶೇಖರ ಅವರಿಗೆ ಸಲ್ಲಬೇಕು. ಕನ್ನಡ ಪತ್ರಿಕೆಗಳೂ, ಪ್ರಕಾಶಕರೂ ಅವರ ಬರಹದ ಮೌಲ್ಯವನ್ನು ಗುರುತಿಸುತ್ತಿರುವುದು ಸಂತೋಷದ ಸಂಗತಿ.

ನಮ್ಮೆಲ್ಲರ ಅನುಭವದಲ್ಲಿ ನಮ್ಮ ಸ್ನೇಹಿತರಾಗಿ, ಸಹಕಾರ್ಯಕರ್ತರಾಗಿ ರಾ.ನಂ. ಚಂದ್ರಶೇಖರ ಅವರಂತಹವರು ಅಪರೂಪ. ಕನ್ನಡ ನಾಡಿಗೆ ಅವರಂತೆ ತಿಳಿವಳಿಕೆಯುಳ್ಳ ಸ್ಪಷ್ಟ ಚಿಂತನೆಯ ಲೇಖಕರು ಅಗತ್ಯ. ಅವರಂತಹ ಹೊಣೆಗಾರಿಕೆಯಿಂದ ಕೆಲಸ ಮಾಡುವ ಕಾರ್ಯಕರ್ತರು ಅವಶ್ಯ. ಹತ್ತು ಜನರೊಡನೆ ನಗುನಗುತ್ತ, ಸಾರ್ಥಕ ಕಾರ್ಯಕ್ರಮಗಳನ್ನು ಯೋಚಿಸುತ್ತ ಕಾರ್ಯಪ್ರವೃತ್ತರಾಗುವ ಕನ್ನಡ ಭಕ್ತರು ಸದ್ಯದ ಜರೂರು.

ಈ ಪುಸ್ತಕವನ್ನು ಸಿದ್ಧಗೊಳಿಸುವ ಸಂತೋಷದ ಕಾರ್ಯದಲ್ಲಿ ಹಲವರು ನಮಗೆ ನೆರವಾಗಿದ್ದಾರೆ. ಡಾ. ಎಂ. ಚಿದಾನಂದಮೂರ್ತಿಯವರು ಸಲಹೆಗಳನ್ನು ನೀಡಿ ನೆರವಾಗಿದ್ದಾರೆ. ವಿಶ್ವಾಸದಿಂದ ಲೇಖನಗಳನ್ನು ಬರೆದುಕೊಟ್ಟ ಲೇಖಕರು ದೊಡ್ಡ ಉಪಕಾರ ಮಾಡಿದ್ದಾರೆ. ಇಳಾ ಮುದ್ರಣದ ಶ್ರೀ ಗುರುಮೂರ್ತಿಯವರು, ಅವರ ಮುದ್ರಣಾಲಯದ ಬಂಧುಗಳೂ ವಿಶ್ವಾಸದಿಂದ ಈ ಪುಸ್ತಕವನ್ನು ಅಂದವಾಗಿ ಅಚ್ಚು ಮಾಡಿಕೊಟ್ಟಿದ್ದಾರೆ. ಇವರೆಲ್ಲರಿಗೆ ನಮ್ಮ ಕೃತಜ್ಞತಾಪೂರ್ವಕ ವಂದನೆಗಳು.

ಪುಸ್ತಕದ ಸಿದ್ಧತೆಯ ಕಾರ್ಯದ ಬಹು ಭಾಗವನ್ನು ವಹಿಸಿಕೊಂಡು ಸಂಪಾದಕ ಮಂಡಲಿಯ ಸ್ನೇಹಿತರು ನಗುನಗುತ್ತ ಈ ಕಾರ್ಯವನ್ನು ನಿರ್ವಹಿಸಿದ್ದಾರೆ. ನಾನು ಅವರಿಗೆ ಕೃತಜ್ಞ.

ಶ್ರೀ ರಾ.ನಂ. ಚಂದ್ರಶೇಖರ ಅವರಿಗೂ, ಅವರ ಕುಟುಂಬವರ್ಗಕ್ಕೂ ಎಲ್ಲ ಮಂಗಳವಾಗಲಿ, ರಾ.ನಂ. ಅವರ ಸಮರ್ಥ ಸೇವೆ ಕನ್ನಡ–ಕನ್ನಡಿಗ–ಕರ್ನಾಟಕಗಳಿಗೆ ಬಹುಕಾಲ ಲಭ್ಯವಾಗಲಿ ಎಂಬುದು ನಮ್ಮೆಲ್ಲರ ಹೃತ್ಪೂರ್ವಕ ಹಾರೈಕೆ.

ಎಲ್ಲ ಕನ್ನಡ ಜನತೆಗೆ, ನಾಡು–ನುಡಿಗಳಿಗೆ ಶುಭವಾಗಲಿ.

ಎಲ್.ಎಸ್. ಶೇಷಗಿರಿ ರಾವ್
ಪ್ರಧಾನ ಸಂಪಾದಕ

ಅಭಿನಂದನ ಸಮಿತಿಯ ಪರವಾಗಿ

ಕನ್ನಡ ಗೆಳೆಯರ ಬಳಗವು ಬಹಳ ಹಿಂದಿನಿಂದಲೂ ಮಿತ್ರವಲಯಕ್ಕೆ ಆಗಾಗ ಭೋಜನಕೂಟಗಳನ್ನು ಏರ್ಪಡಿಸುತ್ತಾ ಬಂದಿದೆ. ೨೦೧೨ರ ಜನವರಿ ತಿಂಗಳಲ್ಲಿ ಅಂತಹ ಒಂದು ಭೋಜನಕೂಟದಲ್ಲಿ ಪ್ರೊ.ಎಂ.ಎಚ್.ಕೃಷ್ಣಯ್ಯನವರು ನನ್ನನ್ನು ವೇದಿಕೆಯಿಂದ ಪಕ್ಕಕ್ಕೆ ಕರೆದು "ಏನಪ್ಪಾ, ರಾ.ನಂ.ಗೆ ೬೦ ತುಂಬುವ ಸಂದರ್ಭಕ್ಕೆ ಏನಾದರೂ ಕಾರ್ಯಕ್ರಮ ಹಮ್ಮಿಕೊಂಡಿದ್ದೀರಾ" ಎಂದು ಕೇಳಿದರು. ನಾನು ಯೋಚಿಸಲಾರಂಭಿಸಿದೆ, 'ಈಗ ಜನವರಿ ತಿಂಗಳು, ರಾ.ನಂ. ಜುಲೈ ೨೧ರಂದು ೬೦ಕ್ಕೆ ಕಾಲಿಡುತ್ತಾರೆ. ಅಂದರೆ ಇನ್ನು ಉಳಿದಿರುವುದು ಆರು ತಿಂಗಳು ಮಾತ್ರ; ಇವರಿಗೆ ಏನು ಹೇಳುವುದು' ಎಂದು. ಅಷ್ಟರಲ್ಲಿ ಎಂ.ಎಚ್.ಕೃಷ್ಣಯ್ಯನವರು ಯಾರಿಗೂ ಕಾಣದಂತೆ, ನನ್ನ ಕೈಗೆ ಸಾವಿರ ರೂಪಾಯಿಯ ಒಂದು ಮಡಿಸಿದ ನೋಟನ್ನಿಟ್ಟು, "ನೋಡಪ್ಪಾ, ಇದು ನನ್ನ ಕಡೆಯಿಂದ; ಇನ್ನೂ ಬೇಕಾದರೆ ಕೇಳಿ" ಎಂದವರೇ ಮತ್ತೆ ವೇದಿಕೆಯ ಕಡೆಗೆ ಹೊರಟರು. ನನ್ನ ಕೈಯಲ್ಲಿದ್ದ ಸಾವಿರ ರೂಪಾಯಿಯ ನೋಟು ನನ್ನನ್ನು ನೋಡಿ ಮುಗುಳ್ನಕ್ಕಿತು. ಕಾರ್ಯಕ್ರಮದ ನಂತರ ಹಲವಾರು ಸ್ನೇಹಿತರು "ಎಂ.ಎಚ್.ಕೃಷ್ಣಯ್ಯನವರು ಕರೆದಿದ್ದು ಯಾಕೆ" ಎಂದು ಕೇಳಿ, ವಿಷಯ ತಿಳಿದಾಗ; "ಹೌದಪ್ಪಾ ಅದೊಂದು ಕಾರ್ಯ ಆಗಲೇ ಬೇಕು" ಎಂದು ತೀರ್ಮಾನವನ್ನೂ ಕೊಟ್ಟುಬಿಟ್ಟರು!



ಅಲ್ಲಿಂದಾಚೆಗೆ ಆ ಸಾವಿರ ರೂಪಾಯಿಯ ನೋಟು ನನ್ನನ್ನು ಸತತವಾಗಿ ಕಾಡಲಾರಂಭಿಸಿತು. ಏನು ಮಾಡುವುದು? ಹೇಗೆ ಮಾಡುವುದು? ಸಂಪನ್ಮೂಲಕ್ಕೇನೂ ಕೊರತೆಯ ಸಂಭವವಿಲ್ಲ.

ಆದರೆ ಇಲ್ಲಿಯವರೆಗೂ ರಾ.ನಂ. ಹಿಂದಿದ್ದುಕೊಂಡೇ, ಅವರ ನೇತೃತ್ವದಲ್ಲಿಯೇ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಾ ಬಂದಿದ್ದ ನಮಗೆ, ಈಗ ಅವರಿಲ್ಲದೇ ಕಾರ್ಯಕ್ರಮ ಯೋಜಿಸಿ, ಕಾರ್ಯಗತ ಮಾಡುವುದು ಹೇಗಪ್ಪಾ ಎಂಬ ಚಿಂತೆ. ಆಗ ಎಚ್. ಎಸ್. ರಮೇಶ್‌ಬಾಬು ಸಲಹೆಯಂತೆ ಡಾ. ಎಂ. ಚಿದಾನಂದಮೂರ್ತಿ ಪ್ರೊ. ಎಲ್. ಎಸ್. ಶೇಷಗಿರಿರಾವ್, ಡಾ. ವಿಜಯಾ, ಕನ್ನಡ ಗೆಳೆಯರ ಬಳಗದ ಸಂಚಾಲಕರು, ಎಸ್. ಶಿವಲಿಂಗಯ್ಯ ಮತ್ತಿತರರೊಡನೆ ಚರ್ಚಿಸಿ, ಇದರ ಸಂಬಂಧ ಒಂದು ಸಭೆಯನ್ನು ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದಲ್ಲಿ ದಿ.೧೬.೦೩.೨೦೧೨ರಂದು ಕರೆದೆವು. ಆ ಸಭೆಯಲ್ಲಿ ಸಮಿತಿಯ ರಚನೆ, ಕಾರ್ಯಕ್ರಮದ ರೂಪುರೇಷೆಗಳನ್ನು ಕುರಿತು ಸಮಾಲೋಚಿಸಿ, ಅಭಿನಂದನ ಗ್ರಂಥಕ್ಕೆ ಬೇಕಾದ ಲೇಖನಗಳು ಕೈಸೇರಿದ ನಂತರ ಕಾರ್ಯಕ್ರಮದ ದಿನಾಂಕ ನಿರ್ಧರಿಸುವುದೆಂದು ತೀರ್ಮಾನಿಸಲಾಯಿತು.

ಚಾಲನೆ ದೊರೆತ ನಂತರ ಡಾ.ಎಂ.ಚಿದಾನಂದಮೂರ್ತಿಯವರು ಸತತವಾಗಿ ನಮ್ಮನ್ನು ಹುರಿದುಂಬಿಸುತ್ತಾ, ಕೆಲಸಗಳನ್ನು ನೆನಪಿಸುತ್ತಾ, ತಾವೂ ಎಲ್ಲರಿಗಿಂತಲೂ ವೇಗವಾಗಿ ಹಣವನ್ನೂ, ಲೇಖನಗಳನ್ನೂ ಸಂಗ್ರಹಿಸಿಕೊಡತೊಡಗಿದರು. ಪ್ರೊ. ಎಲ್.ಎಸ್.ಶೇಷಗಿರಿ ರಾವ್, ಡಾ. ವಿಜಯಾ ಅವರೂ ನಮ್ಮ ಸಭೆಗಳಲ್ಲಿ ಸತತವಾಗಿ ಭಾಗವಹಿಸುತ್ತಾ, ನಮಗೆ ಒತ್ತಾಸೆಯಾಗಿ ನಿಂತು ಸೂಕ್ತ ಸಲಹೆ, ಸೂಚನೆಗಳನ್ನು ನೀಡುತ್ತಾ, ಸಮಿತಿಯ ಕೆಲಸಗಳಲ್ಲಿ ತೊಡಗಿಸಿಕೊಂಡರು. ಹಿರಿಯರಾದ ಗೊ.ರು.ಚನ್ನಬಸಪ್ಪ, ಎಚ್.ಎಸ್.ಗೋಪಾಲ ರಾವ್, ಕೆ.ಎಚ್.ನರಸಿಂಹ ಮೂರ್ತಿ ಕೆ.ಎನ್.ಭಗವಾನ್, ಬಿ.ಎ.ನಂಜುಂಡಸ್ವಾಮಿ, ರಾಯಚೂರು ಹಿರಿಯಣ್ಣ ಜಿ.ಎಸ್.ಜಯಪ್ರಕಾಶ ನಾರಾಯಣ ಮೊದಲಾದವರೂ ಈ ಕೆಲಸಗಳಿಗೆ ತಮ್ಮ ಕೈಜೋಡಿಸಿದರು. ಆದರೂ, ಜುಲೈ ೨೧ರ ವೇಳೆಗೆ ಕಾರ್ಯಕ್ರಮ ಮಾಡಲು ಅನುವಾಗುವಷ್ಟು ಬೇಗ ಲೇಖನಗಳು ನಮ್ಮ ಕೈಸೇರಲಿಲ್ಲ. ಹೀಗಾಗಿ ನಾವು ಅನುಕೂಲಕರವಾದ ಮುಂದಿನ ದಿನಾಂಕಕ್ಕಾಗಿ ಎದುರು ನೋಡಬೇಕಾಯಿತು.

ಅನೇಕ ಹಿಂಜರಿತ, ಅಡೆ-ತಡೆಗಳನ್ನು ದಾಟಿ, ಪುಸ್ತಕ ಸಿದ್ಧಗೊಂಡು ಕಾರ್ಯಕ್ರಮ ಸಾಕಾರಗೊಳ್ಳಲು ೨೦೧೩ರ ಜನವರಿ ೬ರವರೆಗೆ ಕಾಯಬೇಕಾಯಿತು. ಅಭಿನಂದನ ಗ್ರಂಥ ಮೌಲಿಕವಾಗಿ ಮೂಡಿಬರುವಲ್ಲಿ ಸಹಕರಿಸಿದ ಲೇಖನ ಕರ್ತೃಗಳಿಗೂ, ತಮ್ಮ ಅನುಭವ ಹಾಗೂ ಶ್ರಮವನ್ನು ಧಾರೆ ಎರೆದಿರುವ ಸಂಪಾದಕ ಸಮಿತಿಯವರಿಗೂ ಅಚ್ಚುಕಟ್ಟಾಗಿ ಮುದ್ರಿಸಿರುವ ಇಳಾ ಮುದ್ರಣದ ಬಿ.ಗುರುಮೂರ್ತಿ ಹಾಗೂ ಅವರ ಸಿಬ್ಬಂದಿಯವರಿಗೂ, ಫೋಟೋ ಒದಗಿಸಿದ ಡಿ.ಸಿ. ನಾಗೇಶ್ ಅವರಿಗೂ, ಅಲ್ಲದೆ ಈ ಗ್ರಂಥಕ್ಕೆ ಉಪಯೋಗಿಸಿರುವ ಅನೇಕ ಚಿತ್ರಗಳ ಧಾತೃಗಳಿಗೂ ಕೃತಜ್ಞತಾಪೂರ್ವಕ ಅಭಿನಂದನೆಗಳು. ಇವರೆಲ್ಲರೂ ರಾ.ನಂ.ಗೆ ತೋರಿರುವ ಗೌರವ ಪ್ರೀತಿ ಅನನ್ಯ.

ಇನ್ನು ಕಾರ್ಯಕ್ರಮ ಅರ್ಥಪೂರ್ಣವಾಗಿ ಸಂಪನ್ನವಾಗಲು ಶ್ರಮಿಸಿದ ಎಚ್.ಎಸ್. ರಮೇಶ್ ಬಾಬು, ಕೆ.ಎಚ್. ನರಸಿಂಹಮೂರ್ತಿ, ಮ. ಚಂದ್ರಶೇಖರ

ನಂ. ನಂಜಪ್ಪ, ಟಿ. ತಿಮ್ಮೇಶ್, ಜಿ.ಪಿ. ರಾಮಣ್ಣ ಹಾಗೂ ಇಲ್ಲಿ ಹೆಸರಿಸದ ಇನ್ನಿತರ ಗೆಳೆಯರಿಗೂ, ಕನ್ನಡ ಸಂಘ – ಸಂಸ್ಥೆಗಳಿಗೂ ಅವರ ಸಹಾಯ, ಸಹಕಾರಕ್ಕಾಗಿ ಸಮಿತಿಯ ಹೃತ್ಪೂರ್ವಕ ವಂದನೆಗಳು.

ಇಂತಹ ಮೌಲ್ಯಯುತ ಅಭಿನಂದನ ಗ್ರಂಥವು ಕನ್ನಡಿಗರಿಗೆ ಅಲ್ಪ ಬೆಲೆಯಲ್ಲಿ ಲಭಿಸಲು ಕಾರಣಕರ್ತರಾದವರು ನಮ್ಮ ದಾನಿಗಳು. ಯಾವುದೇ ಹೆಸರಿಗಾಗಿ ಹಂಬಲಿಸದೇ, ತೆರೆ ಮರೆಯಲ್ಲಿದ್ದುಕೊಂಡೇ ಧನಸಹಾಯ ಮಾಡುವ ಮೂಲಕ, ಈ ಕೃತಿಯನ್ನು ಲೋಕಾರ್ಪಣೆ ಮಾಡುವಲ್ಲಿ ಈ ಕೊಡುಗೈ ಸಮೂಹವು ನೆರವಾಗಿದೆ.

ಕೊನೆಯದಾಗಿ, ಈ ಕೃತಿಯನ್ನು ಕೈಗೆ ತೆಗೆದುಕೊಂಡಿರುವ ಓದುಗ ಪ್ರಭುವೆ ಇಂತಹ ಸಾಮಾಜಿಕ/ಸಾಹಿತ್ಯಿಕ ಕಾರ್ಯಗಳಿಗೆ ಪ್ರೇರಣೆಯಾಗಿ ಮೇಲೆ ಸ್ಮರಿಸಿರುವ ಎಲ್ಲರ ಮೌಲಿಕ ಪ್ರಯತ್ನಗಳೂ ಸಾರ್ಥಕವಾಗಿ, ಯಶಸ್ಸು ದೊರಕಿಸಬಲ್ಲ ಶಕ್ತಿಯು ಓದುಗರಾದ ನಿಮಗಿದೆ.

ವಂದನೆಗಳು.

ದಿನಾಂಕ: ೦೬–೦೧–೨೦೧೩ **ಬಾ.ಹ. ಉಪೇಂದ್ರ**
ಬೆಂಗಳೂರು ಕಾರ್ಯದರ್ಶಿ



ಶಂಬಾ ವಿಚಾರ ವೇದಿಕೆಯ ಉದ್ಘಾಟನಾ ಸಮಾರಂಭದಲ್ಲಿ



ಶಂಬಾ ಜೋಶಿ ಅಭಿನಂದನ ಸಮಿತಿಯೊಂದಿಗೆ ಶಂಬಾ ದಂಪತಿಗಳ ಜೊತೆಯಲ್ಲಿ



ಮಣಿಪಾಲದಲ್ಲಿ ಸೇಡಿಯಾಪು ಕೃಷ್ಣಭಟ್ಟರೊಂದಿಗೆ



ಸಾಹಿತಿಗಳ ಕಲಾವಿದರ ಬಳಗದ ಮುಂಚೂಣಿಯಲ್ಲಿ



ಕನ್ನಡ ಶಕ್ತಿ ಕೇಂದ್ರದ ಹಂಪಿಯ ರಾಜ್ಯಮಟ್ಟದ ಸಮಾವೇಶದಲ್ಲಿ ನಟ ಅಶೋಕ್‌ರೊಂದಿಗೆ



ಕನ್ನಡ ಶಕ್ತಿ ಕೇಂದ್ರದ ಮೆರವಣಿಗೆಯಲ್ಲಿ



ಕನ್ನಡ ಶಕ್ತಿ ಕೇಂದ್ರದ ಧರಣಿಯಲ್ಲಿ ಇತರ ಸಂಘಟನೆಗಳೊಂದಿಗೆ



ಮನೆಮನೆಗೆ ಕನ್ನಡ ಪುಸ್ತಕ ಕಾರ್ಯಕ್ರಮದಲ್ಲಿ ಅಂದಿನ ಮೇಯರ್ ಕೆ. ಚಂದ್ರಶೇಖರ್ ಅವರೊಂದಿಗೆ




ಶಂಬಾ ವಿಚಾರ ವೇದಿಕೆಯ ಗೆಳೆಯರೊಂದಿಗೆ ಸಾಂಸ್ಕೃತಿಕ ಪ್ರವಾಸದಲ್ಲಿ



ಹಂಪಿಯನ್ನು ಹಿಪ್ಪಿಗಳಿಂದ ಮುಕ್ತಗೊಳಿಸಲು ಧರಣಿ ನಿರತರಾಗಿ



'ಶಾಸ್ತ್ರೀಯ ಭಾಷೆಯಾಗಿ ಕನ್ನಡ' ಕೃತಿ ಬಿಡುಗಡೆ ಸಂದರ್ಭದಲ್ಲಿ



ಕನ್ನಡ ಗೆಳೆಯರ ಬಳಗದ ರಾಜ್ಯಮಟ್ಟದ ಸಮಾವೇಶದಲ್ಲಿ



ಡಾ. ಎಂ. ಚಿದಾನಂದಮೂರ್ತಿಯವರ 'ಭಾಷಿಕ ಬೃಹತ್ ಕರ್ನಾಟಕ' ಕೃತಿಯನ್ನು
ಡಾ. ಜಿ.ಎಸ್. ಶಿವರುದ್ರಪ್ಪನವರು ಲೋಕಾರ್ಪಣೆ ಮಾಡಿದಾಗ



ಎಚ್.ಕೆ. ಪಾಟೀಲರನ್ನು ಎಚ್.ಎ.ಎಲ್. ಕಾರ್ಯಕರ್ತರೊಂದಿಗೆ ಕರೆತರುವಾಗ



ಕೆಲ ಆಪ್ತರೊಂದಿಗೆ



'ಕಾವೇರಿ ಅಂತಿಮ ತೀರ್ಪು-ಕರ್ನಾಟಕದ ಮೇಲಾಗುವ ಪರಿಣಾಮಗಳು' ಪುಸ್ತಕ ಬಿಡುಗಡೆಯಲ್ಲಿ



ಶಿವಮೊಗ್ಗ ಕರ್ನಾಟಕ ಸಂಘದ ಅತಿಥಿ ಭಾಷಣಕಾರರಾಗಿ



ತಂದೆ ಆರ್. ನಂಜುಂಡಭಟ್ಟರ ಜಯಂತಿಯ ವಿಚಾರಗೋಷ್ಠಿಯ ಉದ್ಘಾಟಕ
ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿಯವರೊಂದಿಗೆ



ಕನ್ನಡ ಗೆಳೆಯರ ಬಳಗದ ರಜತ ಮಹೋತ್ಸವ ಸಮಾರಂಭದಲ್ಲಿ




ಕ.ರಾ.ರ.ಸಾ.ಸಂ. ಕನ್ನಡ ಕ್ರಿಯಾ ಸಮಿತಿಯ ಕಾರ್ಯಕ್ರಮದಲ್ಲಿ
ಅಂದಿನ ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ಚಂಪಾ ಅವರೊಂದಿಗೆ



ಬೆಳಗಾವಿಯಲ್ಲಿ ಜರುಗಿದ ವಿಶ್ವ ಕನ್ನಡ ಸಮ್ಮೇಳನದ ಗೋಷ್ಠಿಯಲ್ಲಿ ವಿಚಾರ ಮಂಡನೆ



ಕನ್ನಡ ಹೋರಾಟಗಳು – ಒಂದು ನೋಟ 'ಪುಸ್ತಕ ಬಿಡುಗಡೆ' ಕಾರ್ಯಕ್ರಮದಲ್ಲಿ



ನವದೆಹಲಿಯಲ್ಲಿ ಪ್ರಧಾನಮಂತ್ರಿ ಮನಮೋಹನ್ ಸಿಂಗ್ ಅವರನ್ನು ಭೇಟಿ ಮಾಡಿದ
ಕನ್ನಡ ಅಭಿವೃದ್ಧಿ ಪ್ರಾಧಿಕಾರದ ನಿಯೋಗದೊಂದಿಗೆ



ಕನ್ನಡ ಅಭಿವೃದ್ಧಿ ಪ್ರಾಧಿಕಾರದ ನಿಯೋಗದೊಂದಿಗೆ
ಕೇಂದ್ರ ವಿದೇಶಾಂಗ ಸಚಿವ ಎಸ್.ಎಂ.ಕೃಷ್ಣರೊಂದಿಗೆ



ಕೇಂದ್ರ ಕಾರ್ಮಿಕ ಸಚಿವ ಮಲ್ಲಿಕಾರ್ಜುನ ಖರ್ಗೆಯವರನ್ನು ಭೇಟಿ ಮಾಡಿದ
ಕನ್ನಡ ಅಭಿವೃದ್ಧಿ ಪ್ರಾಧಿಕಾರದ ನಿಯೋಗದಲ್ಲಿ



ದೆಹಲಿಯಲ್ಲಿ ಉಪ ಸಭಾಪತಿ ಕೆ. ರೆಹಮಾನ್ ಖಾನ್ ಅವರನ್ನು
ಭೇಟಿ ಮಾಡಿದ ನಿಯೋಗದೊಂದಿಗೆ



ಕರ್ನಾಟಕದ ಹಕ್ಕೊತ್ತಾಯಗಳನ್ನು ಕೇಂದ್ರ ಗೃಹ ಕಾರ್ಯದರ್ಶಿಗೆ ನೀಡಿದ ನಿಯೋಗದೊಂದಿಗೆ



ಎ.ಎನ್. ಮೂರ್ತಿರಾವ್ ಅವರ ನೂರನೇ ಜನ್ಮದಿನ ನಮನ ಕಾರ್ಯಕ್ರಮದಲ್ಲಿ
'ಕನ್ನಡ ಚಳವಳಿ ಮತ್ತು ಸಾಹಿತಿಗಳ ಕಲಾವಿದರ ಬಳಗ' ಪುಸ್ತಕ ಬಿಡುಗಡೆಯಲ್ಲಿ



ಪು.ತಿ. ನರಸಿಂಹಾಚಾರ್ ಅವರಿಗೆ ೯೦ ತುಂಬಿದ ಸಂಭ್ರಮದಲ್ಲಿ



ಡಾ. ಎಂ.ಚಿದಾನಂದಮೂರ್ತಿಯವರ ೭೦ನೇ ಹುಟ್ಟು ಹಬ್ಬದಲ್ಲಿ



ಹಿಂದಿ ಸಾಮ್ರಾಜ್ಯಶಾಹಿ ವಿರೋಧಿ ಸಮಿತಿಯ ಧರಣಿಯಲ್ಲಿ



೯೦ರ ಹರೆಯದ ಎಚ್.ಎಸ್.ದೊರೆಸ್ವಾಮಿ ದಂಪತಿಗಳನ್ನು ಸನ್ಮಾನಿಸಿದಾಗ



ಕನ್ನಡ ಶ್ರೀಸಾಮಾನ್ಯರ ಕೂಟದವರು ಏರ್ಪಡಿಸಿದ ಎಚ್.ಎನ್.ರಮೇಶ್‌ಬಾಬು ಹಾಗೂ ಬಾ.ಹ.ಉಪೇಂದ್ರ ದಂಪತಿಗಳ ಸನ್ಮಾನ ಸಮಾರಂಭದಲ್ಲಿ



೫೦ನೇ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಸಪ್ನ ಬುಕ್ ಹೌಸ್‌ನಿಂದ ಬಿಡುಗಡೆಯಾದ ೫೦ ಪುಸ್ತಕಗಳಲ್ಲಿ 'ಕನ್ನಡ-ಕನ್ನಡಿಗ-ಕರ್ನಾಟಕ'ಕ್ಕೆ ಸನ್ಮಾನಿತರಾದಾಗ



ನೆರೆಯ ಕೇರಳ ರಾಜ್ಯದಲ್ಲಿ ಸನ್ಮಾನಿತರಾದಾಗ



ಶ್ರೀರಾಮ ಜಾಧವ ಪ್ರಶಸ್ತಿ ಸ್ವೀಕಾರ ಸಮಾರಂಭದಲ್ಲಿ



ಎಚ್.ಎ.ಎಲ್. ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ
ನಟಿ ಗಿರಿಜಾ ಲೋಕೇಶ್‌ರಿಂದ ಸನ್ಮಾನಿತರಾದಾಗ



ಕೇಂದ್ರೀಯ ಸದನದ ಕಾರ್ಯಕ್ರಮದಲ್ಲಿ
ಕೇಂದ್ರ ಸಚಿವ ಎಂ.ವಿ.ರಾಜಶೇಖರನ್‌ರಿಂದ ಸನ್ಮಾನ ಸ್ವೀಕಾರ



ಕ.ರಾ.ರ.ಸಾ.ಸಂ. ಕನ್ನಡ ಕ್ರಿಯಾ ಸಮಿತಿಯ ರಾಜ್ಯಾಧ್ಯಕ್ಷ ವ.ಚ. ಚನ್ನೇಗೌಡರ ಸನ್ಮಾನದಲ್ಲಿ



ಎಚ್.ಎ.ಎಲ್.ನ ಲಲಿತ ಕಲಾ ಸಂಘದಿಂದ ಸನ್ಮಾನಿತರಾದಾಗ



'ಹೊಸ ಸರ್ಕಾರ-ಕನ್ನಡಿಗರ ನಿರೀಕ್ಷೆಗಳು' ವಿಚಾರ ಸಂಕಿರಣದಲ್ಲಿ ಮೂಡಿಬಂದ ನಿರ್ಣಯಗಳನ್ನು ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ಅರ್ಪಿಸಿದಾಗ



ರಾಯಚೂರು ಪ್ರದೇಶದ ನೆರೆಸಂತ್ರಸ್ತರಿಗೆ ಪರಿಹಾರ ಸಾಮಗ್ರಿ ವಿತರಣೆಯಲ್ಲಿ ಇತರ ಕನ್ನಡ ಸಂಘಟನೆಗಳೊಂದಿಗೆ



ಸರ್ಪಭೂಷಣ ಶಿವಯೋಗಿಗಳ ಮಠದ ಬುಧವಾರದ ಸಭೆಯಲ್ಲಿ (ಕನ್ನಡ ಅನುಭವ ಮಂಟಪ)



ಶಾಸಕ ನಂದೀಶ್ ರೆಡ್ಡಿಯವರೊಂದಿಗೆ ಎಚ್.ಎ.ಎಲ್.ನ ಕಾರ್ಯಕ್ರಮವಲ್ಲಿ



‘ಕಾವೇರಿ ನ್ಯಾಯಾಧೀಕರಣದ ಅಂತಿಮ ತೀರ್ಪು’ ಕಿರುಪುಸ್ತಕವನ್ನು
ಎಚ್.ಎಸ್. ದೊರೆಸ್ವಾಮಿ ಅವರು ಬಿಡುಗಡೆಗೊಳಿಸಿದಾಗ



ಕನ್ನಡ ರಾಜ್ಯೋತ್ಸವದ ದಿನ ಲಾಲ್‌ಬಾಗ್ ಬಳಿ ಕುವೆಂಪು ಪ್ರತಿಮೆಗೆ ಮಾಲಾರ್ಪಣೆ ಮಾಡಿದಾಗ



ಕನ್ನಡ ಜಾಗೃತಿ ಸಮಾವೇಶವನ್ನು ಕೇಂದ್ರ ರೈಲ್ವೆ ಸಚಿವ ಜಾಫರ್ ಷರೀಫ್ ಉದ್ಘಾಟಿಸಿದಾಗ



ಕೇಂದ್ರ ಸಚಿವ
ವೀರಪ್ಪ ಮೊಯಿಲಿ ಅವರನ್ನು
ಸಂದರ್ಶಿಸಿದಾಗ



ರಾ.ನಂ. ತಾಯಿ ಶ್ರೀಮತಿ ಪಿ.ಕೆ. ಜಯಲಕ್ಷ್ಮಿ – ತಂದೆ ಶ್ರೀ ಆರ್. ನಂಜುಂಡ ಭಟ್ಟ




ಬಾಲ್ಯ ಕಳೆದ ಮನೆಯ ಮುಂದೆ, ನಿಡಿಗೆರೆಯಲ್ಲಿ ಒಡಹುಟ್ಟಿದವರೊಡನೆ



ರಾ.ನಂ. ಆಜೀವ ಬಂಧನಕ್ಕೆ ಸಾಕ್ಷಿಯಾದ ತಾಯಿ, ತಂದೆ



ಹಿರಿಯ ಮಗ ಅಜಯ್–ಮಾಧವಿ ಮದುವೆಯಲ್ಲಿ



ಕಿರಿಯ ಮಗ ಚೇತನ್–ವಾಣಿ ಮದುವೆಯಲ್ಲಿ




ವಾಣಿ–ಚೇತನ್, ಗಾಯಿತ್ರಿ–ರಾ.ನಂ., ಅಜಯ್–ಮಾಧವಿ
ನಾವಿಬ್ಬರು, ನಮಗಿಬ್ಬರು



ಜನುಮದ ಜೋಡಿ!



ಅಮರನಾಥ ಯಾತ್ರೆಯ ಸಂದರ್ಭದಲ್ಲಿ 'ತಂಗಾಳಿಯಲ್ಲಿ ವಾಕಿಂಗ್....'



ಸಂಜನಳೊಂದಿಗೆ
ಕಲ್ಲೇ–ಮಲ್ಲೇ ದೇವರಾಗಿ



ಕೊರೆಯುವ ಚಳಿಯಲ್ಲೂ ಅರ್ಧತೋಳಿನಲ್ಲೇ



'ಅಮರನಾಥದಲ್ಲಿ ಪ್ರವಾಸಿ ರಾ.ನಂ. ದಂಪತಿ



ಯಾವಾಗಲೂ ಕುದುರೆಯ ಮೇಲೇ ಬರುವ ರಾನಂ

ಭಾಗ ೧
ಬಿಗಿದಿಹ ಕಾರ್ಮೋಡಗಳು

9

ಕನ್ನಡದ ಗಡಿ ಕಾಯ್ದ ಭಾಲ್ಕಿಯ ಹಿರೇಮಠ

■ ಡಾ. ಬಸವಲಿಂಗ ಪಟ್ಟದ್ದೇವರು

ಹನ್ನೆರಡನೆಯ ಶತಮಾನ ಕನ್ನಡದ ಯುಗ. ಧರ್ಮ, ದೇವರು ವಿದ್ಯೆ ಕೇವಲ ಪಂಡಿತರ ಸ್ವತ್ತಾಗಿದ್ದ, ಕೆಲವರಿಗಷ್ಟೇ ಸೀಮಿತವಾಗಿದ್ದ ಕಾಲದಲ್ಲಿ ವಚನಕಾರರು ಅವನ್ನು ಜನಸಾಮಾನ್ಯರ ಮನೆ ಬಾಗಿಲಿಗೆ ತಂದರು. ಜನವಾಣಿಯನ್ನೇ ದೇವವಾಣಿಯನ್ನಾಗಿ ಮಾಡಿದರು. ಕ್ರಾಂತಿಯೋಗಿ, ಮಹಾ ಮಾನವತಾವಾದಿ ವಿಶ್ವಗುರು ಬಸವಣ್ಣನವರ ನೇತೃತ್ವದಲ್ಲಿ ಕನ್ನಡ ಭಾಷೆ, ಸಾಹಿತ್ಯ ಶ್ರೀಮಂತವಾಯಿತು. ಸಾಮಾನ್ಯರಲ್ಲಿ ಸಾಮಾನ್ಯರಾದ ತುರುಗಾಹಿ ರಾಮಣ್ಣನಂತಹವರು ವಚನ ಬರೆದರು. ಸಮಾಜದ ಅತ್ಯಂತ ಕೆಳಸ್ತರದ ಸೂಳೆಯ ಸಂಕವ್ವೆ ಆಯ್ದಕ್ಕಿ ಲಕ್ಕಮ್ಮ, ಮಾದಾರ ಚೆನ್ನಯ್ಯ, ಡೋಹಾರ ಕಕ್ಕಯ್ಯ, ಕಿನ್ನರಿ ಬ್ರಹ್ಮಯ್ಯ, ನುಲಿಯ ಚಂದಯ್ಯ–ಈ ರೀತಿಯಾಗಿ ನೂರಾರು ಶರಣ–ಶರಣೆಯರು ವಚನ ಸಾಹಿತ್ಯದ ಮೂಲಕ ಕನ್ನಡದ ಕಹಳೆಯನ್ನೂದಿದರು. ಕಾಶ್ಮೀರದಿಂದ ಬಂದ ಮೋಳಿಗೆಯ ಮಾರಯ್ಯ, ಸೌರಾಷ್ಟ್ರದಿಂದ ಬಂದ ಆದಯ್ಯ, ತಮಿಳುನಾಡಿನಿಂದ ಬಂದ ಮಾದಾರ ಚನ್ನಯ್ಯ, ಮಹಾರಾಷ್ಟ್ರದಿಂದ ಬಂದ ಉರಿಲಿಂಗದೇವ, ಉರಿಲಿಂಗಪೆದ್ದಿ, ಅಫಘಾನಿಸ್ತಾನದಿಂದ ಬಂದ ಮರುಳ ಶಂಕರದೇವ ಇವರ್ಯಾರೂ ತಮ್ಮ ಭಾಷೆಯಲ್ಲಿ ವಚನ ಬರೆಯಲಿಲ್ಲ. ನೂರಾರು ಶರಣ–ಶರಣೆಯರು ಬಸವಕಲ್ಯಾಣಕ್ಕೆ ಆಗಮಿಸಿ, ಕನ್ನಡ ಭಾಷೆ ಕಲಿತು, ಕನ್ನಡದಲ್ಲಿಯೇ ವಚನ ಬರೆದಿರುವುದು ಬಹಳ ಮಹತ್ವದ ಐತಿಹಾಸಿಕ ಸತ್ಯ. ಇಂದಿಗೂ ನಮಗೆ ಅನುಕರಣೀಯ. ಒಂದು ಕಾಲಕ್ಕೆ ವಿಶ್ವಕ್ಕೆ ಅಮೂಲ್ಯ ಸಾಹಿತ್ಯ–ಸಂಸ್ಕೃತಿ–ಸಮಾನತೆ, ವರ್ಗ–ವರ್ಣ–ಜಾತಿ ಭೇದವಿಲ್ಲದೆ



ಪ್ರಜಾಪ್ರಭುತ್ವದ ಮೌಲ್ಯಗಳನ್ನು ಅನುಭವ ಮಂಟಪದ ಮೂಲಕ ಸ್ಥಾಪಿಸಿ ವಿಶ್ವ ಮಾನವ ಪ್ರಜ್ಞೆ ಮೆರೆದವರು. ಇದರಿಂದ ಒಳಗೂ–ಹೊರಗೂ ಕಲ್ಯಾಣವಾಗಿ ಭಾಷೆ, ಸಾಹಿತ್ಯ, ಸಂಸ್ಕೃತಿ ಸಮೃದ್ಧವಾಯಿತು.

ಹನ್ನೆರಡನೆಯ ಶತಮಾನದ ನಂತರ ಈ ಭಾಗ ಕ್ರಮೇಣವಾಗಿ ಮೊಗಲರ ಮರಾಠಿಗರ ಆಡಳಿತಕ್ಕೆ ಒಳಗಾಗಿ ಉರ್ದು ಭಾಷೆ ಆಕ್ರಮಿಸಿಕೊಂಡಿತ್ತು. ಮರಾಠಿ ಲಿಪಿಯಿಂದ ಕನ್ನಡ ತಾಯ ಹೆಸರು ಕುಂಠಿತವಾಯಿತು. ಉನ್ನತ ಶಿಕ್ಷಣ, ವೃತ್ತಿ ಶಿಕ್ಷಣಗಳಾದ ಇಂಜಿನಿಯರಿಂಗ್, ವೈದ್ಯಕೀಯ ಶಿಕ್ಷಣವೆಲ್ಲವನ್ನೂ ಉರ್ದುವಿನಲ್ಲಿ ಕಲಿಯುವ ಪ್ರಸಂಗ ಬಂತು. ಉರ್ದುವಿನ ಹೊರತಾಗಿ ಬೇರೆ ಭಾಷೆಯಲ್ಲಿ ವ್ಯವಹಾರ ಮಾಡಿದರೆ, ಕಲಿಸಿದರೆ ಶಿಕ್ಷೆಗೆ ಗುರಿಯಾಗುತ್ತಿದ್ದರು. ಉರ್ದು ಸರಕಾರಿ ಆಡಳಿತ ಭಾಷೆಯಾಗಿ ವಿರಾಜಮಾನ ವಾಯಿತು. ಹೈದ್ರಾಬಾದ್ ನಿಜಾಮನ ಕಾಲದಲ್ಲಂತೂ ಕನ್ನಡ ತಾಯಿ ಕೋಮಾ ಸ್ಥಿತಿಗೆ ಹೋದಳು. ದೌರ್ಜನ್ಯದಿಂದ, ಬಲತ್ಕಾರದಿಂದ ಸಾಹಿತ್ಯ–ಸಂಸ್ಕೃತಿ ನಾಶವಾಗತೊಡಗಿತು. ಎದೆಯ ಮೇಲಿನ ಲಿಂಗವನ್ನೂ ಸಹಿತ ಮುಸ್ಲಿಮರ ಗೋರಿಯ ಆಕಾರದ ಕರಡಿಗೆಯನ್ನು ಮಾಡಿಸಿ ಹಾಕಿಕೊಳ್ಳಲು ಪ್ರಾರಂಭ ಮಾಡಿದರು. ಮುಸ್ಲಿಮರು ನೋಡಿದರೆ ಇದು ನಿಮ್ಮದೇ ಗೋರಿಯಂತೆ ಇದೆ ಎಂದು ತೋರಿಸುತ್ತಿದ್ದರಂತೆ. 'ಕಾಟೊ–ಲೂಟೊ–ಆಪಸಮೇ ಬಾಟೊ' ಎಂದು ರಜಾಕಾರರ ಕ್ರೂರತನ ಪ್ರದರ್ಶನ ಸತತ ಜಾರಿಯಲ್ಲಿತ್ತು.

"ಕನ್ನಡದ ಬುಡಕಡಿಯಲಿಕೆ ಕನ್ನಡಿಗರೆಕೊಡಲಿ ತಾವಾಗ್ಯಾರ?
ತುರ್ಕಣಿ, ಮರಾಠಿಗರು ಕೊಡಲಿಯನು ಬೀಸ್ಯಾರ!
ಹಿಂದುಗಳ ಕಡಿಯಲಿಕೆ ನಿಜಾಮ ಪೋಲಿಸರು ರಜಾಕಾರರು ಮುಂದಾಗ್ಯಾರ
ಕಾಟೋ ಪೀಟೊ ಲೂಟೊ ಬಾಟೊ ದಂದೆಯಲಿ ತೊಡಗ್ಯಾರ!
ಹೈದ್ರಾಬಾದಿ ರಾಜ್ಯದಲ್ಲಿ ಹೈವಾನಿ ಹುಕುಮತ್ತು ನಡೆಸ್ಯಾರ !
ಭಯಗೊಂಡು ಹಿಂದುಗಳು ಊರು ಬಿಟ್ಟೋಡ್ಯಾರ, ಅರಣ್ಯ ಸೇರ್‍ಯಾರ !
ಶೂಲಿಯನ್ನೇರ್‍ಯಾರ, ಬಾವಿತಳವ ಕಂಡಾರ, ಹಳ್ಳಕೊಳ್ಳ ಸೇರ್‍ಯಾರ!
ಹದ್ದು–ಕಾಗೆ–ನಾಯಿ–ನರಿ–ಹುಲಿ–ಚಿರತೆಗಳಿಗೆ ಆಹಾರವಾಗ್ಯಾರ!
ಹಿಂದೆಂದೂ ಕಂಡಿಲ್ಲ ಮುಂದೆಂದೂ ಕಾಣೋಲ್ಲ!
ಸತ್ತವರ ಶವಗಳ ಕಂಡು ಕಂಡು ಶಿವನೂ ಕಣ್ಣೀರಿಟ್ಟನೆಂದ ದಿಗಂಬರ ಕರಿಬಸವೇಶ್ವರ"
ಮನೆ ಮನೆಯ ಹೊಕ್ಕಾರ! ಮಾಲಕರ ಎಳೆದಾರ!
ಮಚ್ಚಿಲೆ ಹೊಡೆದಾರ! ನಡುಬೀದಿನಾಗ!
ಬಂಗಾರ ಬೆಳ್ಳಿಯನು! ಬಲ್ಲಂತೆ ಕಸಿದಾರ!
ಬೇಲಿಹೊಲಮೇಯ್ದಂಗ ! ಚನ್ನಬಸವ
ಚೆಲುವೆಯರ ಹಿಡಿದಾರ! ಮೊಲೆಮೂಗ ಕೊಯ್ದಾರ
ಬೀದಿಯಲಿ ಮಾನಗೆಡಿಸಿ ಬಿಟ್ಟಾರ !!
ಗರ್ಭಿಣಿಯ ಗರ್ಭವನು! ಚೂರಿಲಿ ಸೀಳ್ಯಾರ!
ಅತ್ಯಾಚಾರ ಅತಿಯಾಯಿತು! ಚನ್ನಬಸವ!!

ಕೂಸಿನ ಹೊಟ್ಟ್ಯಾಗ! ಚೂರಿಯನು ಚುಚ್ಯಾರ!
ಸಿಗಸ್ಯಾರ ಗ್ವಾಡಿಗೆ! ಸಾಲು ಸಾಲಾಗಿ!
ಹಾದ್ಯಾಗ ಕಡಿದಾರ! ಬೀದ್ಯಾಗ ಕಡಿದಾರ!
ಹಿಂದುಗಳ ಸಂಹಾರ ! ಚನ್ನಬಸವ !!

ಪ್ರತ್ಯಕ್ಷದರ್ಶಿಯಾದ ಕವಿ ದೇಶಾಂಶ ಹುಡುಗಿಯವರ ಮೇಲಿನ ಸಾಲುಗಳಲ್ಲಿ ನಿಜಾಮ ಆಡಳಿತದ ಕ್ರೌರ್ಯದ ದರ್ಶನವಿದೆ. ಇದರಿಂದ ಆ ಕಾಲದ ಕನ್ನಡದ ಸ್ಥಿತಿಗತಿ ನಮಗೆ ಅರ್ಥವಾದೀತು.

ಹೀಗೆ ಕನ್ನಡದ ಅವಸಾನವಾಗುತ್ತಿದ್ದಾಗ, ಎಂಟುನೂರು ವರ್ಷಗಳ ನಂತರ ಮತ್ತೊಮ್ಮೆ ಕನ್ನಡದ ಕಹಳೆಯನ್ನೂದಿದವರು ಭಾಲ್ಕಿಯ ಮಠದ ಚನ್ನಬಸವ ಪಟ್ಟದ್ದೇವರು. "ಕನ್ನಡಕ್ಕಾಗಿ ಕೈ ಎತ್ತು, ನಿನ್ನ ಕೈ ಕಲ್ಪವೃಕ್ಷವಾಗುವುದು; ಕನ್ನಡಕ್ಕಾಗಿ ಕೊರಳೆತ್ತು, ನಿನ್ನ ಕೊರಳು ಪಾಂಚಜನ್ಯವಾಗುವುದು; ಕನ್ನಡಕ್ಕಾಗಿ ಕಿರುಬೆರಳೆತ್ತಿದರೂ ಸಾಕು ಅದೇ ಗೋವರ್ಧನಗಿರಿಧಾರಿಯಾಗುವುದು" ಎಂಬ ಕುವೆಂಪು ಕವಿವಾಣಿ ರಚನೆಗೊಳ್ಳುವುದಕ್ಕಿಂತ ಮುಂಚೆ, ಭಾಲ್ಕಿ ಮಠದ ಲಿಂಗೈಕ್ಯ ಪೂಜ್ಯ ಶ್ರೀ ಚನ್ನಬಸವ ಪಟ್ಟದ್ದೇವರು ಆಚರಣೆಯಲ್ಲಿ ತಂದರು. ಕನ್ನಡವೇ ಸರ್ವಸ್ವ, ಕನ್ನಡವೇ ಉಸಿರು, ಕನ್ನಡವೇ ಪ್ರಾಣ ಮಾಡಿಕೊಂಡರು.

ಕನ್ನಡದ ಕುಲದೇವ ಚನ್ನಬಸವ ಪಟ್ಟದ್ದೇವರು
ಕನ್ನಡದ ನೆಲದೇವ ಚನ್ನಬಸವ ಪಟ್ಟದ್ದೇವರು
ಕನ್ನಡದ ಜಲದೇವ ಚನ್ನಬಸವ ಪಟ್ಟದ್ದೇವರು
ಕನ್ನಡದ ಮರುತದೇವ ಚನ್ನಬಸವ ಪಟ್ಟದ್ದೇವರು
ಕನ್ನಡದ ಪ್ರಾಣದೇವ ಚನ್ನಬಸವ ಪಟ್ಟದ್ದೇವರು
ಕನ್ನಡಾಂಬರದೇವ ಚನ್ನಬಸವ ಪಟ್ಟದ್ದೇವರು
ಕಲ್ಯಾಣ ನಾಡಲ್ಲಿ ಶರಣ ಜನ ನೆಲೆಯಲ್ಲಿ
ಭಾಲ್ಕಿಯ ಚನ್ನಬಸವ ಪಟ್ಟದ್ದೇವರಿಗೆ
ಕನ್ನಡ ಸೇವೆಯ ಅಗ್ರ ಪಟ್ಟವೆಂದ
ದಿಗಂಬರ ಕರಿಬಸವೇಶ್ವರ

ಪರಮ ಪೂಜ್ಯರು ಕನ್ನಡ ಸೇವೆಯೇ ತಮ್ಮ ಲಿಂಗಪೂಜೆ ಮಾಡಿಕೊಂಡರು. ಕನ್ನಡ ಸೇವೆಯೇ ತಮ್ಮ ಜಪ-ತಪ ಮಾಡಿಕೊಂಡು ಬಸವಾದಿ ಪ್ರಮಥರ ನಂತರ ಈ ಭಾಗದಲ್ಲಿ ಕನ್ನಡದ ಸೇವೆಗಾಗಿ ಹಲವಾರು ರಚನಾತ್ಮಕ ಕಾರ್ಯ ಕೈಕೊಂಡರು.

೧೯೨೨ರಲ್ಲಿ ಶ್ರೀಗಳ ಪಟ್ಟಾಭಿಷೇಕವಾದ ನಂತರ ಕನ್ನಡದ ಸ್ಥಿತಿಗತಿ ಕಂಡು ಪ್ರಪ್ರಥಮವಾಗಿ ೧೯೩೬ರಲ್ಲಿ ನಮ್ಮ ಶಾಖಾಮಠ ಮೋರ್ಗಿ (ಅದು ಈಗ ಆಂಧ್ರಪ್ರದೇಶದ ಮೇಡಕ್ ಜಿಲ್ಲೆಯ ನಾರಾಯಣಖೇಡ ತಾಲ್ಲೂಕಿನಲ್ಲಿ ಇದೆ) ಯಲ್ಲಿ ಆ ಭಾಗದ ಪ್ರಮುಖ ಜನರನ್ನು ಕರೆಯಿಸಿ ಒಂದು ಸಭೆ ಮಾಡಿದರು. ಅಪ್ಪಾರಾವ ಶಟಗಾರ ಗೋವಿಂದರಾವ ದೇಶಪಾಂಡೆ, ಬಸಪ್ಪ ಗಡ್ಡೆ, ಸಿದ್ಧಪ್ಪ ಚಪಟೆ, ಬಸಪ್ಪ ಕೊಟಾಳೆ ವೀರಸಂಗಪ್ಪ

ಪ್ರೋ. ಪಾಟೀಲ, ಕಾಮಶೆಟ್ಟೆಪ್ಪ ಮೂಲಗೆ, ಶೇಷರಾವ ಪಾಟೀಲ, ಹಾವಗೆಪ್ಪ ಪಾಟೀಲ ಸಂಗಪ್ಪ ಪಾಟೀಲ ಹೊಕರಾಣಿ, ಮಾಣಿಕರಾವ ಪಾಟೀಲ ಶಹಪೂರ, ಅಡೆಪ್ಪ ದಾಂಬರಗಿದ್ದಿ, ಮಾರುತೆಪ್ಪ ಪಾಟೀಲ ಗೂಡುರು, ಹಣಮಂತರಾವ ಕೇಶವಾರ ಇನ್ನೂ ಮುಂತಾದ ಅನೇಕರು ಆ ಸಭೆಯಲ್ಲಿ ಭಾಗಿಯಾದರು. ಕನ್ನಡ ಶಾಲೆಯ ಬಗ್ಗೆ ಚರ್ಚೆಯಾಯಿತು. ಕನ್ನಡದ ಮಹತ್ವದ ಬಗ್ಗೆ ಅಪ್ಪಗಳು ತಿಳಿಸಿ ಹೇಳಿದರು. ಆದರೆ ಅನೇಕರು ನಮಗೆ ಕನ್ನಡ ಬೇಡ; ಉರ್ದು, ಮರಾಠಿ ಶಾಲೆ ತೆಗೆಯಿರಿ ಎಂದು ಹೇಳಿದರು. ಆದರೆ ಅಪ್ಪಗಳು ಕನ್ನಡವೇ ನಮ್ಮ ಮಾತೃ ಭಾಷೆ. ವಚನ ಸಾಹಿತ್ಯ ಇರುವುದು ಕನ್ನಡದಲ್ಲಿ. ಕನ್ನಡ ಕಲಿಯದಿದ್ದರೆ ನಮ್ಮ ಸಾಂಸ್ಕೃತಿಕ ಪರಂಪರೆ ಉಳಿಯದು. ನಮ್ಮ ಧರ್ಮ, ಸಾಹಿತ್ಯ ಉಳಿಯದು. ಒಂದಿಲ್ಲ ಒಂದು ದಿವಸ ಕನ್ನಡಕ್ಕೆ ಭವಿಷ್ಯ ಇದೆ. ನನ್ನ ಮಾತು ನಂಬಿರಿ. ಕನ್ನಡ ನಮ್ಮ ತಾಯೆಂದು ತಿಳಿಸಿ ಹೇಳಿದರು. ಆದರೆ ಅದರಲ್ಲಿ ಕೆಲವರು ನಾವು ಕನ್ನಡ ತೆಗೆದುಕೊಂಡು, ಕನ್ನಡ ಭಾಷೆ ಕಲಿತು ನಮ್ಮ ಮಕ್ಕಳಿಗೆ ಪಂಚಾಂಗ ಹೇಳುವ ಐನಾರ (ಜಂಗಮ) ಮಾಡಬೇಕೇನು? ಎಂದು ಕೇಳಿದರು. ಪಂಚಾಂಗ ಹೇಳುವವರು ಮಾತ್ರ ಕನ್ನಡ ಕಲಿಬೇಕು ಎನ್ನುವ ಕಲ್ಪನೆ ಅವರಿಗಿತ್ತು. ಪ್ರಭುತ್ವದ ಪ್ರಾಬಲ್ಯದ ಉರ್ದು ಕಲಿತರೆ ನೌಕರಿ ಸಿಗುತ್ತವೆ ಎನ್ನುವ ಕಾಲ ಅದಾಗಿತ್ತು. ಮನಸ್ಸಿಲ್ಲದಿದ್ದರೂ ಪೂಜ್ಯ ಗುರುಗಳ ಒತ್ತಾಯಕ್ಕಾಗಿಯಾದರೂ ಅನೇಕರು ಸಮ್ಮತಿಯನಿತ್ತು, ಅದಕ್ಕೆ ಪ್ರಪ್ರಥಮವಾಗಿ "ಶಾಂತಿವರ್ಧಕ ಗುರುಕುಲ ಕನ್ನಡ ಪಾಠಶಾಲೆ" ಎಂದು ನಾಮಕರಣ ಮಾಡಿದರು.

ಮಠಕ್ಕೆ ಸಂಬಂಧಪಟ್ಟ ಸುಮಾರು ಇಪ್ಪತ್ತು ಎಕರೆ ಭೂಮಿ ಇತ್ತು. ಅಲ್ಲಿಯೇ ಗುಡಿಸಲುಗಳು, ತಗಡಿನ ಕೋಣೆಗಳು, ಛಪ್ಪರಗಳು, ಸಣ್ಣ ಸಣ್ಣ ಕುಟೀರಗಳು ನಿರ್ಮಾಣವಾದವು. ಅಪ್ಪಗಳು ಗ್ರಾಮ ಗ್ರಾಮಕ್ಕೆ ಸಂಚಾರ ಮಾಡಿದರು. ಮಕ್ಕಳನ್ನು ಕನ್ನಡ ಶಾಲೆಗೆ ಕಳುಹಿಸಿರಿ ಎಂದು ತಿಳಿವಳಿಕೆ ನೀಡಿದರು. ಮಕ್ಕಳನ್ನು ಕೂಡಿಸುವುದೇ ಒಂದು ಸಾಹಸದ ಕೆಲಸವಾಯಿತು. ಗ್ರಾಮದಲ್ಲಿ ಹೆಣ್ಣುಮಕ್ಕಳು, ದೊಡ್ಡವರು, ಸಣ್ಣವರು, ಕನ್ನಡ ಕಲಿತು ಏನ ಪ್ರಯೋಜನ? ಎಂದು ಪ್ರಶ್ನೆ ಮಾಡುತ್ತಿದ್ದರು. ಅಪ್ಪಗಳು ಖಿನ್ನರಾಗುತ್ತಿದ್ದರು. ಆದರೂ ನಿರಾಶರಾಗದೆ ನಾವು ಕನ್ನಡಿಗರು, ನಮ್ಮ ಧರ್ಮಭಾಷೆ ಕನ್ನಡ. ನಮ್ಮ ಮಾತೃಭಾಷೆ ಕನ್ನಡ. ನಮ್ಮ ಮಕ್ಕಳಿಗೆ ಕನ್ನಡವನ್ನೇ ಕಲಿಸಬೇಕು ಎಂದು ಪರಿ ಪರಿಯಿಂದ ಹೇಳುತ್ತಿದ್ದರು. ನೂರಾರು ಗ್ರಾಮಗಳಿಗೆ ತಿರುಗಿ ತಿರುಗಿ, ಮೊದಲನೆಯ ವರ್ಷ ಐವತ್ತು ಮಕ್ಕಳಿಗೆ ಆಶ್ರಯ ನೀಡಿ, ಕನ್ನಡ ಶಾಲೆ ಪ್ರಾರಂಭವಾಯಿತು. ಆಗಿನ ಕಾಲದ ಗಡಿಭಾಗವಾದ ಹೈದ್ರಾಬಾದ ಕರ್ನಾಟಕವೆಂಬ ನಿಜಾಮರಾಜ್ಯದಲ್ಲಿ ಪ್ರಪ್ರಥಮ ಕನ್ನಡ ಶಾಲೆ ಇದಾಗಿತ್ತು. ಕೊಪ್ಪಳದ ಭಾನಾಪೂರ ಶಾಸ್ತ್ರಿಗಳು ಮುಖ್ಯ ಅಧ್ಯಾಪಕರಾಗಿದ್ದರು. ಸಂಗಪ್ಪ ಮಾಳಗೆ, ವೆಂಕಟರಾವ ಕಮಲನಗರ, ಮಾಧವರಾವ ಪಾಟೀಲ, ಕಮಲನಗರ ಸಿದ್ಧವೀರಯ್ಯನವರು ಶಿಕ್ಷಕರಾಗಿದ್ದರು. ಅವರಿಗೆ ತಿಂಗಳಿಗೆ ಎರಡು ರೂಪಾಯಿ, ಕೆಲವರಿಗೆ ಐದು ರೂಪಾಯಿ ಸಂಬಳವಿತ್ತೆಂದು ಗುರುಗಳು ನನಗೆ ಹೇಳಿದ್ದುಂಟು.

ಮೋರ್ಗಿ ಶಾಲೆಯಲ್ಲಿ ಕನ್ನಡ ಕಲಿತವರಲ್ಲಿ, ಸ್ವಾತಂತ್ರ್ಯ ಸಿಕ್ಕ ನಂತರ ಅನೇಕರು ಶಾಲಾ ಶಿಕ್ಷಕರಾಗಿದ್ದಾರೆ. ಇತರ ಬೇರೆ ಬೇರೆ ಹುದ್ದೆಯಲ್ಲಿದ್ದಾರೆ ಎಂಬುದನ್ನು

ಇಲ್ಲಿ ಸ್ಮರಿಸಬೇಕು. ಕನ್ನಡಕ್ಕೆ ಭವಿಷ್ಯವಿದೆ ಎಂದು ಗುರುಗಳು ಹೇಳಿದ್ದ ಅಮರವಾಣಿ ಸತ್ಯವಾಗಿದೆ ಎಂದು ಅನೇಕರು ಸ್ಮರಿಸಿಕೊಳ್ಳುತ್ತಾರೆ.

ಕಷ್ಟಗಳು ಬರುವಾಗ ಒಂದರ ಮೇಲೆ ಒಂದು ಬರುತ್ತವೆ. ಶಾಲೆ ಆರಂಭವಾಯಿತು; ಆದರೆ ಕನ್ನಡ ಶಾಲೆಗೆ ವಿದ್ಯಾರ್ಥಿಗಳನ್ನು ಕೂಡ್ರಿಸುವದು ಒಂದು ಕಷ್ಟವಾದರೆ ಇನ್ನೊಂದು ಕಷ್ಟ ಎದುರಾಯಿತು. ನಿಜಾಮ್ ಸರ್ಕಾರದ ಅಧಿಕಾರಿಗಳು, ಪೊಲೀಸರು ಬಂದು "ಶಾಲಾ ಬಂದಕರೋ, ಬಂದಕರೋ" ಎಂದು ಕಿರುಕುಳ ನೀಡಲು ಪ್ರಾರಂಭಿಸಿದರು. ನಿಲ್ಲಿಸುತ್ತೇವೆ, ನಿಲ್ಲಿಸುತ್ತೇವೆ ಎಂದು ಅಪ್ಪಗಳು ಸುಳ್ಳು ಹೇಳುತ್ತ ಬಂದರು. ಮತ್ತೆ ಮತ್ತೆ ಅಧಿಕಾರಿಗಳ ಕಿರುಕುಳ ಹೆಚ್ಚಾಯಿತು. ಆಗ ಅಪ್ಪಗಳು ಹೊರಗಡೆ ದ್ವಾರಕ್ಕೆ ಉರ್ದು ಪಾಠ ಶಾಲೆ ಎಂದು ಉರ್ದುವಿನಲ್ಲಿಯೇ ಒಂದು ಬೋರ್ಡ್ ಬರೆಯಿಸಿದರು. ಈಗ ಹೊರಗೆ ಕನ್ನಡ ಬೋರ್ಡ ಹಾಕಿ ಒಳಗೆ ಇಂಗ್ಲಿಷ್ ಕಲಿಸುವಂತೆ, ಹೊರಗೆ ಉರ್ದು ಬೋರ್ಡು ಹಾಕಿ ಒಳಗೆ ಕನ್ನಡ ಕಲಿಸಲು ಪ್ರಾರಂಭ ಮಾಡಿದರು. ಹೊರಗೆ ಉರ್ದು ಬೋರ್ಡು ನೋಡಿ ಅಧಿಕಾರಿಗಳು ತಿರುಗಿ ಹೋಗುತ್ತಿದ್ದರು. ಹೀಗೆ ಅನೇಕ ಕಷ್ಟಗಳ ಮಧ್ಯದಲ್ಲಿಯೂ ಪರಿಶ್ರಮದಿಂದ ಕನ್ನಡ ಉಳಿಸಿದರು, ಬೆಳೆಸಿದರು. ಕನ್ನಡವೇ ಪ್ರಾಣ ಕನ್ನಡವೇ ಶಕ್ತಿ, ಕನ್ನಡವೇ ಭಕ್ತಿ, ಕನ್ನಡವೇ ಸರ್ವಸ್ವ, ಕನ್ನಡವೇ ಸರ್ವಾಂಗ ಲಿಂಗವೆಂದು ತಮ್ಮ ಸರ್ವಸ್ವವನ್ನೂ ಕನ್ನಡಕ್ಕಾಗಿ ಮುಡಿಪಾಗಿಟ್ಟರು.

ಅಪ್ಪಗಳ ಕನ್ನಡ ಪ್ರೇಮದ ಬಗ್ಗೆ ಇತ್ತೀಚೆಗೆ ನಡೆದ ಒಂದು ಘಟನೆ ಹೇಳುತ್ತೇನೆ. ಮಠದ ಭಕ್ತರೊಬ್ಬರು ಇಂಜಿನೀಯರ್ ಆಗಿದ್ದರು. ಮದುವೆಗೆ ಬಂದು ಆಶೀರ್ವದಿಸ ಬೇಕೆಂದು ಕೇಳಿಕೊಂಡರು. ಅಪ್ಪಗಳು ಒಪ್ಪಿಗೆಯನ್ನಿತ್ತರು. ಅವರು ಹದಿನೈದು ದಿನಗಳ ನಂತರ ಮದುವೆಯ ಆಮಂತ್ರಣ ಪತ್ರಿಕೆ ತಂದುಕೊಟ್ಟರು. ಅಪ್ಪಗಳು ಅದನ್ನು ಬಿಚ್ಚಿ ನೋಡಿದರು. ಅದು ಇಂಗ್ಲಿಷಿನಲ್ಲಿ ಇತ್ತು. ಅಪ್ಪಗಳು ಖಂಡ ತುಂಡಾಗಿ ನಿನ್ನ ಮದುವೆಗೆ ನಾನು ಬರುವುದಿಲ್ಲ ಎಂದು ಹೇಳಿಬಿಟ್ಟರು. ಅವರು ಗಾಬರಿಯಾಗಿ ಏಕೆ ಅಪ್ಪಗಳೇ? ನಮ್ಮಿಂದ ಏನಾದರೂ ತಪ್ಪಾಯಿತೆ? ಎಂದು ಕೈ ಮುಗಿದು ಕೇಳಿಕೊಂಡರು. ಆಗ ಅಪ್ಪಗಳು 'ನೀವು ಕನ್ನಡದ ಗಾಳಿ ಸೇವಿಸಿ, ಕನ್ನಡದ ಆಹಾರವನ್ನುಂಡು, ಕನ್ನಡ ನೆಲದಲ್ಲಿ ವಾಸಿಸಿ ಇಂಗ್ಲಿಷಿನಲ್ಲಿ ಪತ್ರಿಕೆ ಹಾಕಲು ನಾಚಿಕೆಯಾಗುವುದಿಲ್ಲವೆ?' ಎಂದು ಗುಡುಗಿದರು. ನಮ್ಮ ಗೆಳೆಯರಿಗೆ ಕನ್ನಡ ಬರುವುದಿಲ್ಲ ಎಂದು ಉತ್ತರಿಸುತ್ತಿರುವಾಗ, ಹೋಗು ನಾನು ನಿನ್ನ ಮದುವೆಗೆ ಬರುವುದಿಲ್ಲ. ನೀನು ಏನೂ ಕುಂಟುನೆಪ ಹೇಳುವುದು ಬೇಡ ಎಂದುಬಿಟ್ಟರು. ಅವನು ಗಾಬರಿಯಾಗಿ, 'ತಪ್ಪಾಯಿತು ಈ ಪತ್ರಿಕೆ ಇನ್ನೂ ಎಲ್ಲಿಯೂ ವಿತರಣೆಯಾಗಿಲ್ಲ ಪ್ರಥಮ ತಮಗೆ ಕೊಡಲು ಬಂದಿರುವೆ. ಇದನ್ನು ರದ್ದು ಮಾಡಿ ಕನ್ನಡದಲ್ಲಿ ಮುದ್ರಣ ಮಾಡಿಸಿಕೊಂಡು ಬರುತ್ತೇನೆ. ದಯವಿಟ್ಟು ತಾವು ದಯಮಾಡಿಸಬೇಕು' ಎಂದು ನಮ್ರವಾಗಿ ಪ್ರಾರ್ಥಿಸಿಕೊಂಡ. ಮತ್ತೆ ಅವರು ಹೋಗಿ ಕನ್ನಡದಲ್ಲಿ ಪತ್ರಿಕೆ ಮುದ್ರಣ ಮಾಡಿಕೊಂಡು ಅಪ್ಪಗಳ ಕೈಗೆ ಕೊಟ್ಟ ನಂತರವೇ ಪೂಜ್ಯರು ಮದುವೆಗೆ ಹೋದರು. ಇಂತಹ ಅಪಾರ ಕನ್ನಡ ಪ್ರೇಮವನ್ನು ಹೃದಯದ ತುಂಬಾ ತುಂಬಿಕೊಂಡವರು ಪೂಜ್ಯ ಚನ್ನಬಸವ ಪಟ್ಟದ್ದೇವರು.

ಪೂಜ್ಯ ಅಪ್ಪಗಳವರು ನಿಜಾಮ ರಾಜ್ಯದ ಉರ್ದುವಿನ ಪ್ರಭಾವದಲ್ಲಿ ಕನ್ನಡದ ದೀಪ ಬೆಳಗಿಸಿದ್ದು ಗಮನಾರ್ಹ. ಜನರ ಅಸಹಕಾರ, ಸರಕಾರದ ವಿರೋಧದ ಮಧ್ಯದಲ್ಲಿ ಕನ್ನಡ ಸೇವೆಗೆ ಭಾಲ್ಕಿ ಮಠದ ಪೂಜ್ಯ ಶ್ರೀ ಚನ್ನಬಸವ ಪಟ್ಟದ್ದೇವರು ತಮ್ಮನ್ನೇ ತಾವು ಅರ್ಪಿಸಿಕೊಂಡವರು. ಅಂತೆಯೇ ಭಾಲ್ಕಿ ಹಿರೇಮಠ ಕನ್ನಡದ ಮಠ, ಭಾಲ್ಕಿ ಶ್ರೀಗಳು ಕನ್ನಡದ ಪಟ್ಟದ್ದೇವರೆಂದೇ ಖ್ಯಾತಿವೆತ್ತವರು.

ಎರಡು–ಮೂರು ವರ್ಷದಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಒಂದು ನೂರಾ ಇಪ್ಪತ್ತು ಆಯಿತು. ಅಪ್ಪಗಳು ವಿದ್ಯಾರ್ಥಿಗಳನ್ನು ಬಹಳ ಪ್ರೀತಿಯಿಂದ ಕಾಣುತ್ತಿದ್ದರು. ಉತ್ತಮ ಸಂಸ್ಕಾರ, ಸಾಮೂಹಿಕ ಪ್ರಾರ್ಥನೆ, ಲಿಂಗಪೂಜೆ, ವಚನ ಪಠಣ ನಡೆಯುತಿತ್ತು. ಯೋಗಾಸನ, ಭಾಷಣ ಇತ್ಯಾದಿ ಪಠ್ಯೇತರ ಚಟುವಟಿಕೆಗಳಲ್ಲಿಯೂ ಮಕ್ಕಳಿಗೆ ತರಬೇತಿ ನೀಡಲಾಗುತಿತ್ತು. ಆಗಿನ ಕಾಲದಲ್ಲಿ ಈ ಭಾಗ ಆರ್ಥಿಕವಾಗಿ ಹಿಂದುಳಿದ ಭಾಗವಾಗಿತ್ತು. ಬಡವರು ತಮ್ಮ ಹೊಟ್ಟೆ ತುಂಬಿಸಿಕೊಳ್ಳುವುದೇ ಕಷ್ಟ. ಮಕ್ಕಳನ್ನು ಶಾಲೆಗೆ ಕಳಿಸುತ್ತಿರಲಿಲ್ಲ. ಹಾಗಾಗಿ ವಿದ್ಯಾರ್ಥಿಗಳಿಗೆ ಪ್ರಸಾದ, ಬಟ್ಟೆ, ಪುಸ್ತಕ, ಪಾಟಿ ಎಲ್ಲವನ್ನೂ ಉಚಿತವಾಗಿ ಪೂರೈಸಲಾಗುತ್ತಿತ್ತು. ಎಲ್ಲವನ್ನು ಉಚಿತವಾಗಿ ಕೊಟ್ಟರೂ ಸಹಿತ ಕನ್ನಡ ಕಲಿಯಲು ಕಲಿಸಲು, ಪ್ರೋತ್ಸಾಹ ನೀಡಲು ಪಾಲಕರು ಹಿಂಜರಿಯುತ್ತಿದ್ದರು. ಅಪ್ಪಗಳು ಏಕಾಂಗ ವೀರರಾಗಿ, ನಿರಾಶರಾಗದೇ ಕನ್ನಡ ಕಾರ್ಯ ಧರ್ಮದ ಕಾರ್ಯ, ದೇವರ ಕಾರ್ಯ ಜಂಗಮದ ಕಾರ್ಯ ಎಂದು ಬಂದ ಕಷ್ಟ, ನೋವು ನುಂಗಿ ಸಮಸ್ಯೆಗಳನ್ನು ಎದುರಿಸುತ್ತಾ ಮುಂದುವರೆಸಿದರು.

ಮಕ್ಕಳಿಗೆ ಪ್ರಸಾದ ವ್ಯವಸ್ಥೆಗಾಗಿ ವಿನೂತನ ಯೋಜನೆ ರೂಪಿಸಿದರು. ಹಚ್ಚಡಗಳ (ದಪ್ಪ ಬಿಳಿ ಬಟ್ಟೆ) ಖರೀದಿ ಮಾಡಿ, ಹರಿದು ನೂರಾರು ಜೋಳಿಗೆ ಹೊಲಿಸಿದರು. ಪ್ರತಿಯೊಂದು ಮನೆಗೆ ಒಂದು ಜೋಳಿಗೆ ಕೊಟ್ಟು, ಜೋಳ ಬೀಸುವ ಕಲ್ಲಿನ ಸಮೀಪದಲ್ಲಿ ತೂಗು ಹಾಕಲಾಯಿತು. ನಸುಕಿನಲ್ಲಿ, ಜೋಳ ಬೀಸುವ ವೇಳೆ ಆ ಜೋಳಿಗೆಯಲ್ಲಿ ಒಂದು ಮುಷ್ಠಿ ಜೋಳ ಹಾಕಿ ಬೀಸಲು ಪ್ರಾರಂಭ ಮಾಡಬೇಕು ಎಂದು ಹೇಳುತ್ತಿದ್ದರು. ಪ್ರತಿನಿತ್ಯ ಒಂದು ಮುಷ್ಠಿ ಜೋಳ, ಜೋಳಿಗಿಯಲ್ಲಿ ಹಾಕಿ ಬೀಸುತ್ತಿದ್ದರು. (ಆಗ ಜೋಳ ಬೀಸುವ ಗಿರಣಿಗಳು ಇರಲಿಲ್ಲ) ಜೋಳಿಗೆಯಲ್ಲಿ ಸಂಗ್ರಹವಾದ ಜೋಳವನ್ನು ವಾರಕ್ಕೆ ಒಂದು ಸಲ ತೆಗೆದುಕೊಂಡು ಬರಲು ಮೂರು ಕುದುರೆಗಳು ಹಾಗೂ ಎರಡು ಕಂಟ್ಲೆಗಳು(ಎತ್ತುಗಳು) ಹೋಗುತ್ತಿದ್ದವು. ಇದನ್ನು ಸಂಗ್ರಹ ಮಾಡಲು ಹಾವಯ್ಯ ಮತ್ತು ಶಿವಮೂರ್ತಯ್ಯ ಎಂಬುವವರನ್ನು ನೇಮಿಸಲಾಗಿತ್ತು. ಪ್ರತಿಯೊಂದು ಜೋಳಿಗೆಯ ಮೇಲೆ "ಶಾಂತಿವರ್ಧಕ ಕನ್ನಡ ಪಾಠಶಾಲೆ ಮುಷ್ಠಿ ಫಂಡ" ಎಂದು ಬರೆಯಿಸಲಾಯಿತು. ಸಂಗ್ರಹವಾದ ಜೋಳವನ್ನು ಪ್ರಸಾದ ನಿಲಯದಲ್ಲಿ ಬೀಸುವುದಕ್ಕೆ ಮೂವರು ಕುರುಡರು ಇದ್ದರೆಂದು ಅಪ್ಪಗಳು ಹೇಳುತ್ತಿದ್ದರು. ಅದರಲ್ಲಿ ವಿಶೇಷವೆಂದರೆ, ಒಬ್ಬನ ಹೆಸರು ಮೆಹಬೂಬಸಾಬ್ ಎಂದು. ಹಣಮಂತರಾಯ (ಮ್ಯಾನೇಜರ್) ಅಪ್ಪಗಳ ಸೇವೆಯಲ್ಲಿ ಅರ್ಪಣಾಭಾವ ದಿಂದ ದುಡಿದವರು. ನಲವತ್ತು ವರ್ಷಗಳ ಕಾಲ ಅಪ್ಪಗಳ ಸೇವೆ ಮಾಡಿ ಸಂಪೂರ್ಣ ಲೆಕ್ಕಪತ್ರದ ಜವಾಬ್ದಾರಿ ಹೊತ್ತವರು. ಪ್ರಾಮಾಣಿಕತೆಗೆ, ದಕ್ಷತೆಗೆ ಹೆಸರಾದವರು. ಅಪ್ಪಗಳ

ಸೇವೆಗೆ ತಮ್ಮನ್ನೇ ತಾವು ಅರ್ಪಿಸಿಕೊಂಡವರು. ಮುಷ್ಠಿಫಂಡಿನಿಂದ ಪ್ರಾರಂಭವಾದ ಶಾಂತಿವರ್ಧಕ ಕನ್ನಡ ಪಾಠಶಾಲೆ ಉಚಿತ ಪ್ರಸಾದ ನಿಲಯ ವ್ಯವಸ್ಥಿತವಾಗಿ ನಡೆಯತೊಡಗಿತು. ಉತ್ತರ ಕರ್ನಾಟಕದಲ್ಲಿಯೇ ಪ್ರಪ್ರಥಮ ಉಚಿತ ಪ್ರಸಾದ ನಿಲಯ ಇದಾಗಿತ್ತು.

ಇದೆಲ್ಲ ವ್ಯವಸ್ಥಿತವಾಗಿ ನಡೆಯುವಾಗ ಬರಗಾಲ ಪ್ರಾರಂಭವಾಯಿತು. ನೀರಿನ ಆಭಾವ ಹೆಚ್ಚಾಯಿತು. ಅಪ್ಪಗಳು ಎರಡು ಎತ್ತಿನ ಗಾಡಿಗಳ ಮೇಲೆ ಮಾಂಜರಾ ನದಿಯಿಂದ ನೀರು ತರಿಸುತ್ತಿದ್ದರು. ಆದರೂ ನೀರು ಸಾಕಾಗುತ್ತಿರಲಿಲ್ಲ. ಭಕ್ತರನ್ನೂ ಕಾರ್ಯಕಾರಿ ಸದಸ್ಯರನ್ನೂ ಕರೆಯಿಸಿ ಸಮಾಲೋಚನೆ ಮಾಡಲಾಯಿತು. ನೀರಿನ ಆಭಾವ ಇರುವುದರಿಂದ ಶಾಲೆ ವರ್ಗಾಯಿಸುವುದೇ ಸೂಕ್ತ ಎಂದು ಅಭಿಪ್ರಾಯ ಬಂತು. ಹತ್ತಾರು ಕಡೆ ಸ್ಥಳ ನೋಡಿ, ಮಾಂಜರಾನದಿ, ದೇವನದಿ (ದೇವಣಿ) ಕೂಡುವ (ಸಂಗಮದ) ಸ್ಥಳ ಆಯ್ಕೆ ಮಾಡಲಾಯಿತು. ಎಲ್ಲಾ ಮಕ್ಕಳನ್ನು ಕರೆದುಕೊಂಡು ಪಾಠೋಪಕರಣ ಸಾಮಾನುಗಳನ್ನು ಎತ್ತಿನ ಗಾಡಿಗಳಲ್ಲಿ ಹಾಕಿಸಿಕೊಂಡು ಬಂದು ಸಂಗಮೇಶ್ವರ ದೇವಾಲಯದಲ್ಲಿ ತಾತ್ಕೂರ್ತಿಕ ವ್ಯವಸ್ಥೆ ಮಾಡಲಾಯಿತು. ದೆವ್ವದ ಮನೆಯೆಂದೇ ಹೆಸರುವಾಸಿಯಾಗಿದ್ದ ಹಳೆ ಮನೆಯಲ್ಲಿ ಅಪ್ಪಗಳು ಇಳಿದುಕೊಂಡರು. ಖೇಡ ಗ್ರಾಮದ ಅಣ್ಣಾರಾವ ಸಂಗಣ್ಣ ಎಂಬುವವರು, ಮೂರು ಎಕರೆ ಭೂಮಿಯನ್ನು ಎರಡು ನದಿಗಳು ಕೂಡುವ ಸ್ಥಳದ ಎತ್ತರವಾದ ದಿನ್ನೆಯಲ್ಲಿ ದಾಸೋಹ ಮಾಡಿದರು. ಅಲ್ಲಿ ಕಟ್ಟಡ ಕಟ್ಟಲು ಪ್ರಾರಂಭಿಸಿದರು. ಎತ್ತರವಾದ ದಿನ್ನೆ ಸರಿಮಾಡಿಸಲು ಹನ್ನೆರಡು ಮಣ ಜೋಳ ಬೇಡಿದರು. ಆದರೆ ಅಪ್ಪಗಳು ತಾವೇ ಸ್ವಂತ ನಿಂತು, ಪ್ರತಿನಿತ್ಯ ಕಾಯಕ ಮಾಡಿ ದಿನ್ನೆ ಸರಿ ಮಾಡಿದರು. ಜೊತೆಗೆ ವಿದ್ಯಾರ್ಥಿಗಳೂ ದುಡಿದರು. ಮಾರವಾಡಿ ಗೋಪಿಕಿಷನ್, ಪತ್ತೆಪೂರದ ಶರಣಪ್ಪ, ನಾರಾಯಣಖೇಡದ ಶಟಕಾರರು ಮುಂತಾದ ಭಕ್ತರು ಒಂದೊಂದು ಕೋಣೆಯನ್ನು ಕಟ್ಟಿಸಿಕೊಟ್ಟರು. ಎತ್ತರವಾದ ದಿನ್ನೆ ಮೇಲೆ ಇಂದಿಗೂ ಸುಂದರ, ಐತಿಹಾಸಿಕವಾದ ಕಟ್ಟಡ ನೋಡಲು ಸಿಗುತ್ತದೆ.

ಇದೇ ಶಾಲೆಯಲ್ಲಿ ಖ್ಯಾತ ಸಾಹಿತಿಗಳಾದ ಶಾಂತರಸರು ಅಭ್ಯಾಸ ಮಾಡಿದ್ದಾರೆ. ಶಾಂತರಸರು ದಿಟ್ಟ ಸ್ವಭಾವದವರು. ಒಮ್ಮೆ ವಿದ್ಯಾರ್ಥಿಗಳಲ್ಲಿ ಲಿಂಗಕ್ಕೆ ಪತ್ರಿ ಯಾಕೆ ಧರಿಸಬೇಕು? ಎಂದು ಚರ್ಚೆ ಬಂತು. ಒಬ್ಬ ವಿದ್ಯಾರ್ಥಿ ಮೂರು ಜನ್ಮದ ಪಾಪ ಹೋಗುತ್ತದೆ ಎಂದ; ಮತ್ತೊಬ್ಬ ಪುಣ್ಯ ಬರುತ್ತದೆ ಎಂದು ಹೇಳಿದ. ಶಾಂತರಸರು ಬಂದು ಅಪ್ಪಗಳಿಗೆ ಕೇಳಿಯೇ ಬಿಟ್ಟರು. ಆಗ ಅಪ್ಪಗಳು "ಶಾಂತಪ್ಪನವರೆ ನಾನು ಪತ್ರಿ ಧರಿಸುವುದು ಪುಣ್ಯ ಬರಲೆಂದು ಅಲ್ಲ, ನಮ್ಮ ಮಕ್ಕಳು ಕನ್ನಡ ಕಲಿತು ಜ್ಞಾನಿಗಳಾಗಬೇಕು, ನೀತಿವಂತರಾಗಬೇಕು, ಸುಜ್ಞಾನಿಗಳಾಗಿ ಕನ್ನಡ ನಾಡು-ನುಡಿ ಶ್ರೀಮಂತಗೊಳಿಸಬೇಕು ಎಂದು ನಾನು ಲಿಂಗಕ್ಕೆ ಪತ್ರಿ ಏರಿಸುತ್ತೇನೆ" ಎಂದು ಹೇಳಿದರೆಂದು ಶಾಂತರಸರು ತಮ್ಮ ಲೇಖನದಲ್ಲಿ ಬರೆದುಕೊಂಡಿದ್ದಾರೆ. ಹೀಗೆ ಅಪ್ಪಗಳಿಗೆ ಕನ್ನಡ ನಾಡು-ನುಡಿ ಎಂದರೆ ಪಂಚಪ್ರಾಣ.

ನಂತರ ಲಾತೂರ, ಭಾಲ್ಕಿ, ಹಣೆಗಾಂವ, ಜಹಿರಾಬಾದ ಮುಂತಾದ ಕಡೆ ಕನ್ನಡ ಶಾಲೆಗಳು ಪ್ರಾರಂಭವಾದವು. ನಿಜಾಮ ಸರಕಾರದ ರಜಾಕಾರ ಹಾವಳಿಯಲ್ಲಿ

ವಿದ್ಯಾರ್ಥಿಗಳ ಕಲಿಕೆ ಹಾಳಾಗಬಾರದು ಎಂದು ವಿದ್ಯಾರ್ಥಿಗಳ ಸುರಕ್ಷತೆ ಸಲುವಾಗಿ ಅಪ್ಪಗಳು ಎಲ್ಲಾ ವಿದ್ಯಾರ್ಥಿಗಳನ್ನು ಕರೆದುಕೊಂಡು ಸೋಲಾಪೂರಕ್ಕೆ ಹೋದರು. ಅಲ್ಲಿ ಕನ್ನಡದ ಕವಿಯತ್ರಿ ಜಯದೇವಿತಾಯಿ ಲಿಗಾಡೆ, ವಾರದ ಕಾಡಾದಿಯುವರು ಸಹಕರಿಸಿದ್ದನ್ನು ಅಪ್ಪಗಳು ಸದಾ ಸ್ಮರಿಸುತ್ತಿದ್ದರು. ಸರ್ದಾರ ವಲ್ಲಭಭಾಯಿ ಪಟೇಲರ ಪುಣ್ಯದಿಂದ ನಿಜಾಮ ಶರಣಾಗತನಾದ. ಮತ್ತೆ ಸೋಲಾಪೂರದಿಂದ ಶಾಲೆ ಸಂಗಮಕ್ಕೆ ಬಂದಿತು.

ಇದೇ ಸಂದರ್ಭದಲ್ಲಿ ವಿಪರೀತ ಮಳೆಯಿಂದಾಗಿ ನದಿ ತುಂಬಿ, ಶಾಲೆಯಲ್ಲಿ ನೀರು ನುಗ್ಗಿ ಬಂದು, ಮೂರು ದಿವಸ ಆ ಕಡೆಯವರು ಆಕಡೆ, ಈಕಡೆಯವರು ಈಕಡೆ ಆಗಿದ್ದರಿಂದ ಜಿಲ್ಲಾಧಿಕಾರಿಗಳು ಬಂದು ಇಲ್ಲಿನ ಶಾಲೆ ಸ್ಥಳಾಂತರಿಸಬೇಕು ಎಂದಾಗ ಸಂಗಮದಿಂದ ಕಮಲನಗರಕ್ಕೆ ಶಾಲೆ ಸ್ಥಳಾಂತರಿಸಲಾಯಿತು. ಕಮಲನಗರದ ಕನ್ನಡ ಶಾಲೆ ಕಟ್ಟಡ ಅಂದಿನ ಮುಖ್ಯಮಂತ್ರಿ ನಿಜಲಿಂಗಪ್ಪನವರಿಂದ ಉದ್ಘಾಟನೆಯಾಯಿತು.

ಬೀದರ ಜಿಲ್ಲೆಯಾದ್ಯಂತ ಕನ್ನಡದ ವಾತಾವರಣ ಸೃಷ್ಟಿ ಮಾಡಿದರು. ಕನ್ನಡದ ಹಬ್ಬ ಆಚರಿಸತೊಡಗಿದರು. ವಿಜಯದಶಮಿಯನ್ನು ಒಂಬತ್ತು ದಿವಸಗಳವರೆಗೆ ನಾಡಹಬ್ಬವನ್ನಾಗಿ ಆಚರಿಸಲು ಮುಂದಾದರು. ಭಾಷಣ, ವಚನ, ಸಂಗೀತ, ಕೀರ್ತನೆ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮ, ಕನ್ನಡದ ವಿವಿಧ ಚಟುವಟಿಕೆಗಳನ್ನು ನಡೆಸುತ್ತಿದ್ದರು. ಬೀದರ ಜಿಲ್ಲೆಯ ಹಳ್ಳಿ-ಪಟ್ಟಣಗಳಲ್ಲಿ ನಾಡಹಬ್ಬ ಆಚರಿಸಲು ಅಪ್ಪಗಳು ಪ್ರೇರಣೆ ನೀಡಿದರು. ಅಪ್ಪಗಳು ಸ್ವತಃ ಓಡಾಡಿ ಸಭೆ ನಡೆಸಿ, ಕನ್ನಡದ ನಾಡಹಬ್ಬಕ್ಕೆ ಚಾಲನೆ ನೀಡಿದರು. ಒಳಗೂ ಕನ್ನಡ, ಹೊರಗೂ ಕನ್ನಡ, ಎಲ್ಲಿ ನೋಡಿದರಲ್ಲಿ ಕನ್ನಡವೇ. ಕನ್ನಡದ ವಾತಾವರಣ ನಿರ್ಮಾಣ ಮಾಡಿದ ಶ್ರೇಯಸ್ಸು ಪೂಜ್ಯ ಶ್ರೀ ಚನ್ನಬಸವ ಪಟ್ಟದ್ದೇವರದು.

ಇದೇ ಸಂದರ್ಭದಲ್ಲಿ ಮರಾಠಿಗರು ಎಂ.ಇ.ಎಸ್. ಮೂಲಕ "ಜಾಲಾಚ ಪಾಹಿಜೆ" ಎಂದು ಹೈದ್ರಾಬಾದ ಕರ್ನಾಟಕ ಮಹಾರಾಷ್ಟ್ರದಲ್ಲಿ ಸೇರಬೇಕೆಂಬ ಹಠ ಹಿಡಿದು ದೌರ್ಜನ್ಯ ಮಾಡತೊಡಗಿದರು. ಆಗ ಶ್ರೀಗಳು ಕರ್ನಾಟಕದ ಏಕೀಕರಣದ ಸಲುವಾಗಿ ಅವಿಶ್ರಾಂತವಾಗಿ ದುಡಿದರು. ನೂರಾರು ಜನ ಪ್ರಮುಖರೊಂದಿಗೆ, ಸಾವಿರಾರು ಭಕ್ತರೊಂದಿಗೆ ಕಮಲನಗರದಲ್ಲಿ ರೈಲು ರೋಖೊ ಚಳವಳಿ ಮಾಡಿದರು.

ಕಮಲನಗರದಲೆಲ್ಲ! ಕನ್ನಡದ ಕಹಳೆಯೋ!
ರೈಲು ನಿಲ್ದಾಣದಲ್ಲಿ! ಕನ್ನಡದ ದಂಡು!!
ರೈಲು ಕಂಬಿಯ ಮೇಲೆ ! ಸಾಲು ಬಾಲರ ಹಿಂಡು!
ಸಿರಿಗನ್ನಡಂಗೆಲ್ಗೆ! ಚನ್ನಬಸವ

ಆ ರೈಲು ಚಳವಳಿ ಕೇಂದ್ರ ಸರಕಾರದ ಗಮನ ಸೆಳೆಯಿತು. ಇದೇ ಸಂದರ್ಭದಲ್ಲಿ ಮರಾಠಿಗರು ಕಮಲನಗರದಲ್ಲಿ ಮಹಾರಾಷ್ಟ್ರ ಏಕೀಕರಣ ಸಮಿತಿಯ ಮಹಾಸಭೆ ನಡೆಸಿದರು. ಕನ್ನಡದ ಯುವಕರು ಕನ್ನಡ ಕರಪತ್ರಿಕೆ ಹಂಚುವ ಪ್ರಸಂಗದಲ್ಲಿ ನೂರಾರು ಯುವಕರ ಮೇಲೆ ದೌರ್ಜನ್ಯ ಮಾಡಿದರು. ಕಲ್ಲಿನ ಏಟು ತಿಂದು ಮಕ್ಕಳು, ಯುವಕರು ಹೊಲ ಹೊಲದಲ್ಲಿ ಬಿದ್ದು ಓಡತೊಡಗಿದರು. ಅನೇಕರಿಗೆ ಗಾಯಗಳಾದವು. ಆಗ ತಕ್ಷಣ

ಪೂಜ್ಯ ಅಪ್ಪಗಳು ಬಂದು ಅವರಿಗೆ ಆರೈಕೆ ಮಾಡಿದರು. ಆಸ್ಪತ್ರೆ ಸೇರಿಸಿದರು. ರಾತ್ರಿಯೆಲ್ಲ ಎಚ್ಚರ ಉಳಿದು ಮಕ್ಕಳಿಗೆ-ಯುವಕರಿಗೆ ವಸತಿ, ಪ್ರಸಾದ ವ್ಯವಸ್ಥೆ ಮಾಡಿದರು. ಮಾತೃ ಹೃದಯಿಗಳಾಗಿ ಸೇವೆ ಮಾಡಿದರಲ್ಲದೆ ಅವರಿಗೆ ಧೈರ್ಯ ತುಂಬಿದರು. "ಅಡಿಯ ಮುಂದಿಡೆ ಸ್ವರ್ಗ, ಅಡಿಯ ಹಿಂದಿಡೆ ನರಕ" ಎಂದು ತಿಳಿ ಹೇಳಿ ಅವರಲ್ಲಿ ಮನೋಬಲ ಆತ್ಮಬಲ ಹೆಚ್ಚಿಸಿದರು.

೧೯೩೫ ರಲ್ಲಿ "ನಿಜಾಮ ಪ್ರಾಂತೀಯ ವೀರಶೈವ ಪರಿಷತ್ತು" ಚಾಲ್ತಿಗೆ ಬಂತು. ಸರ್ವಾನುಮತದಿಂದ ಸಂಗ್ರಾಮಪ್ಪ ಶೆಟಕಾರ ವಕೀಲರು ಉದಗೀರ ಇದರ ಅಧ್ಯಕ್ಷರಾದರು. ಧರ್ಮವೀರಜಿ ಕಾರ್ಯದರ್ಶಿ ಅದರ ಸಂರಕ್ಷಕರಾಗಿ ಅಪ್ಪಗಳಿಂದ ನೇಮಕಗೊಂಡರು. ೧೯೩೫ ರಲ್ಲಿ ಉದಗೀರದಲ್ಲಿ ಪ್ರಥಮ ಸಮ್ಮೇಳನ ಜರುಗಿತು. ಈ ಸಮ್ಮೇಳನ ಧಾರ್ಮಿಕ ಸಂಘಟನೆಗೆ ಒತ್ತು ನೀಡುವುದಲ್ಲದೆ, ಕನ್ನಡಿಗರೆಲ್ಲರೂ ಒಂದಾಗುವ ಅಗತ್ಯವನ್ನು ಒತ್ತಿ ಹೇಳಿತ್ತು. ಪೂಜ್ಯರು ಇಂತಹ ಸಭೆ ಸಮಾರಂಭದ ವೇದಿಕೆ ಬಳಸಿಕೊಂಡು ಕನ್ನಡಿಗರ ಹೃದಯದಲ್ಲಿ ಜಾಗೃತಿಯನ್ನುಂಟುಮಾಡುತ್ತಿದ್ದರು. ಕನ್ನಡಿಗರು ಒಗ್ಗಟ್ಟಾಗಿರಲು ಕರೆ ಕೊಡುತ್ತಿದ್ದರು.

ಪ್ರಭುರಾವ ಕಂಬಳಿವಾಲೆ ಕನ್ನಡಿಗರ ಏಕೀಕರಣಕ್ಕಾಗಿ ಶ್ರಮಿಸಿದರು. ಅಪ್ಪಗಳ ಕನ್ನಡ ಹೋರಾಟಕ್ಕೆ ಸದಾ ಬೆಂಬಲ ಕೊಟ್ಟು ಬೆನ್ನೆಲುಬಾಗಿ ನಿಂತವರು. ಒಮ್ಮೆ ಕನ್ನಡ ಕಾರ್ಯಕ್ಕಾಗಿ ಸಭೆ ಕರೆದಿದ್ದರಂತೆ. ನೂರು ಜನರಿಗೆ ಸಭೆಗೆ ಕರೆದರೆ ಯಾರೂ ಬಂದಿರಲಿಲ್ಲವಂತೆ. ಪೂಜ್ಯ ಚನ್ನಬಸವ ಪಟ್ಟದ್ದೇವರು ಒಬ್ಬರೇ ಒಬ್ಬರು ಮಾತ್ರ ಸಭೆಗೆ ಹಾಜರಾಗಿದ್ದರೆಂದು ಆಗಾಗ್ಗೆ ಭಾಷಣದಲ್ಲಿ ಹೇಳುತ್ತಿದ್ದರು. ಇದು ಅವರ ಕನ್ನಡ ಪ್ರೇಮ ತೋರಿಸುತ್ತದೆ.

ಪೂಜ್ಯ ಅಪ್ಪಗಳು ಹೊತ್ತಿಸಿದ ಕನ್ನಡದ ಜ್ಯೋತಿ ವಿಶಾಲವಾಗಿ ಎಲ್ಲಾ ಕಡೆ ಪಸರಿಸತೊಡಗಿತು. ಡಾ.ಜಯದೇವಿತಾಯಿ ಲಿಗಾಡೆಯವರು ಈ ಭಾಗದಲ್ಲಿ ಪೂಜ್ಯ ಅಪ್ಪಗಳ ಸನ್ನಿಧಾನದಲ್ಲಿ ಸಂಚರಿಸಿ ಕನ್ನಡದ ಕಹಳೆ ಮೊಳಗಿಸಿದರು. ಹೊಸ ಶಕ್ತಿ ತುಂಬಿದರು. ಕನ್ನಡದ ಏಕೀಕರಣದ ಜ್ವಾಲೆ ಹಳ್ಳಿ ಹಳ್ಳಿಗಳಲ್ಲಿ ಪಸರಿಸತೊಡಗಿತು. ಹಳ್ಳಿ ಹಳ್ಳಿಗಳಲ್ಲಿ ಸಭೆ-ಜಯಂತಿ-ಉತ್ಸವ ಏರ್ಪಟ್ಟವು. ಕನ್ನಡಿಗರಲ್ಲಿ ಭಾವನಾತ್ಮಕವಾಗಿ ಜಾಗೃತಿಯನ್ನುಂಟುಮಾಡಿದ್ದು, ಮುಂದೆ ಕೇಂದ್ರ ಸರಕಾರದವರಿಗೆ ಬಹುಮತ ತೋರಿಸಲು ಸಹಕಾರಿಯಾಯಿತು.

ಪೂಜ್ಯ ಅಪ್ಪಗಳು ಕೇಂದ್ರ ಸರಕಾರದ ಮೇಲೆ ಒತ್ತಡ ತರಲು, ಹೋರಾಟ ಮಾಡಲು ಕನ್ನಡ ಕ್ರಿಯಾ ಸಮಿತಿ ರಚನೆ ಮಾಡಿದರು. ಶ್ರೀಗಳ ಆದೇಶದ ಮೇರೆಗೆ ಆರ್.ವಿ.ಬಿಡಪ್ಪ ಅಧ್ಯಕ್ಷರಾಗಿ, ಭೀಮಣ್ಣ ಖಂಡ್ರೆ ಉಪಾಧ್ಯಕ್ಷರಾಗಿ ಮೀನಕೇರಿಯ ವಿ.ಎನ್. ಪಾಟೀಲ ಕಾರ್ಯದರ್ಶಿಯಾದರು. ಇದರಲ್ಲಿ ಆಧಾರಸ್ತಂಭದಂತೆ ಪ್ರಭುರಾವ ಕಂಬಳಿವಾಲೆ ಯವರ ಪಾತ್ರ ಬಹಳ ಮಹತ್ವದ್ದು.

ಕರ್ನಾಟಕ ಏಕೀಕರಣ ಆಂದೋಲನ ಸಮಿತಿಯ ಅಧ್ಯಕ್ಷರಾಗಿ ಸಿದ್ಧಲಿಂಗಪ್ಪ ಕಾಕನಾಳೆ ಆಯ್ಕೆಯಾದರು. ಸಿದ್ಧಲಿಂಗಪ್ಪ ಕಾಕನಾಳೆಯವರಿಗೂ ಶ್ರೀಗಳೇ ಪ್ರೇರಕ

ಶಕ್ತಿಯಾದರು. ಕರ್ನಾಟಕ ಉದಯವಾಗುವವರೆಗೆ (೧೯೫೬ ರವರೆಗೆ) ಸಿದ್ಧಲಿಂಗಪ್ಪ ಕಾಕನಾಳೆಯವರೇ ಮುಂದುವರಿದರು.

೧೯೫೩ ರಲ್ಲಿ ಫಜಲ್ ಅಲಿಯವರ ಅಧ್ಯಕ್ಷತೆಯಲ್ಲಿ ಹೃದಯನಾಥ ಕುಂಜ್ರು ಕೆ.ಎಂ.ಪಣಿಕ್ಕರ್ ಸದಸ್ಯರಾಗಿದ್ದ ರಾಜ್ಯ ಪುನರ್‌ವಿಂಗಡನಾ ಆಯೋಗ (ಎಸ್.ಆರ್.ಸಿ) ನೇಮಕವಾಯಿತು. ಈ ಆಯೋಗದವರು ಬೀದರಕ್ಕೆ ಬಂದಾಗ ಆರ್.ವಿ.ಬಿಡಪ್ಪ, ಭೀಮಣ್ಣ ಖಂಡ್ರೆ, ಪ್ರಭುರಾವ ಕಂಬಳಿವಾಲೆ, ವಿ.ಎನ್.ಪಾಟೀಲ, ಸಿದ್ಧಲಿಂಗಪ್ಪ ಕಾಕನಾಳೆ ಮುಂತಾದವರನ್ನು ಸೇರಿಸಿ, ಸಾವಿರಾರು ಜನರ ಸಹಿಯೊಂದಿಗೆ ಕಳಿಸಿಕೊಟ್ಟು ಆಯೋಗ ದವರಿಗೆ ಎಲ್ಲ ಪುರಾವೆಗಳನ್ನು ಒದಗಿಸಿದರು. ಕನ್ನಡ ಪ್ರದೇಶಗಳ ಬಗ್ಗೆ ಸಂಪೂರ್ಣ ಚಿತ್ರಣವನ್ನು ನೀಡುವಲ್ಲಿ ಯಶಸ್ವಿಯಾದರು.

ಆದರೂ ಇಲ್ಲಿ ಖೇದದ ಒಂದು ಸಂಗತಿ ಹೇಳಲೇಬೇಕು. ಇಷ್ಟೆಲ್ಲ ಪರಿಶ್ರಮ ಪಟ್ಟರೂ, ನೂರಕ್ಕೆ ಎಂಭತ್ತು ತೊಂಬತ್ತರಷ್ಟು ಕನ್ನಡಿಗರು ಇರುವ ಪ್ರದೇಶವಾದ ಅಕ್ಕಲಕೋಟ, ಸೋಲಾಪೂರ, ಜತ್ತ, ದೇಗಲೂರ, ಉದಗೀರ, ಉಮರ್ಗಾ, ನೀಲಂಗಾ ಮೊದಲಾದ ಪ್ರಾಂತಗಳು ಮಹಾರಾಷ್ಟ್ರಕ್ಕೆ ಹೋದವು. ನಾರಾಯಣಖೇಡ, ಜಹಿರಾಬಾದ ಆಂಧ್ರಕ್ಕೆ ಸೇರಿ ಹೋಗಿ ಕೇವಲ ಬೀದರ, ಭಾಲ್ಕಿ, ಔರಾದ, ಹುಮನಾಬಾದ ನಾಲ್ಕು ತಾಲ್ಲೂಕುಗಳು ಮಾತ್ರ ಬೀದರ ಜಿಲ್ಲೆಯಲ್ಲಿ ಉಳಿದವು. ನಂತರ ಬಾಬಾಸಾಹೇಬ ವಾರದ ಪ್ರಯತ್ನದಿಂದ ಬಸವಕಲ್ಯಾಣ ತಾಲ್ಲೂಕಾಗಿ ಮಾರ್ಪಾಡಾಯಿತು.


೧೯೨೪ ರಲ್ಲಿ ಪಟ್ಟಾಭಿಷೇಕವಾದಾಗಿನಿಂದ ಕೊನೆಯ ಉಸಿರಿನವರೆಗೆ ಕನ್ನಡಕ್ಕಾಗಿ ಅರ್ಪಣಾ ಭಾವದಿಂದ ದುಡಿದು, ಗಡಿನಾಡ ಸಂರಕ್ಷಕರಾದ ಪೂಜ್ಯರು ತಮ್ಮ ಹೃದಯದ ತುಂಬಾ ಕನ್ನಡ ಪ್ರೇಮ ತುಂಬಿಕೊಂಡವರು. ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರಾದ ಚಂಪಾ ಅವರು ಒಮ್ಮೆ ನಮ್ಮ ಶ್ರೀಮಠಕ್ಕೆ ಆಗಮಿಸಿ "ನಾನು ಯಾವ ಮಠಕ್ಕೂ ಹೋಗುವುದಿಲ್ಲ. ಯಾವ ಸ್ವಾಮಿಗಳ ದರ್ಶನಕ್ಕೂ ಹೋಗುವವನಲ್ಲ. ಆದರೆ ನಾನು ಕನ್ನಡದ ಮಠಕ್ಕೆ ಬಂದಿದ್ದೇನೆ, ಕನ್ನಡ ಪಟ್ಟದ್ದೇವರ ದರ್ಶನಕ್ಕೆ ಬಂದಿದ್ದೇನೆ" ಎಂದು ನುಡಿದರು. ಇದರಿಂದ ಶ್ರೀಗಳ ಕನ್ನಡತ್ವ ಏನು ಎಂದು ಗೊತ್ತಾಗುತ್ತದೆ. ಡಾ.ಚನ್ನಬಸವ ಪಟ್ಟದ್ದೇವರ ಕನ್ನಡಪರ ಕಾಳಜಿ, ಶ್ರೀಮಠದ ಕನ್ನಡಪರ ಚಟುವಟಿಕೆಗಳನ್ನು ಗೌರವಿಸಿ ಕರ್ನಾಟಕದ ಘನ ಸರಕಾರ ಸುವರ್ಣ ಕರ್ನಾಟಕ ಏಕೀಕರಣ ಪುರಸ್ಕಾರ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಮತ್ತು ಗುಲಬರ್ಗಾ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ನೀಡಿದ್ದು ಅವಿಸ್ಮರಣೀಯ. ಡೆಪ್ಯೂಟಿ ಚನ್ನಬಸಪ್ಪ, ಆಲೂರ ವೆಂಕಟರಾಯ, ಹರ್ಡೇಕರ ಮಂಜಪ್ಪ, ಫ.ಗು.ಹಳಕಟ್ಟಿ, ವಿ.ಕೃ.ಗೋಕಾಕ, ಕೆ.ವಿ.ಪುಟ್ಟಪ್ಪ ಇತ್ಯಾದಿ ಮಹನೀಯರಂತೆ ಡಾ. ಚನ್ನಬಸವ ಪಟ್ಟದ್ದೇವರು ಕನ್ನಡಕ್ಕಾಗಿ ತಮ್ಮನ್ನು ತಾವು ಅರ್ಪಿಸಿಕೊಂಡು ರಾತ್ರಿಯನ್ನೇ ಹಗಲಾಗಿ ಮಾಡಿ ದುಡಿದ ಮಹಂತರು. ಗಡಿನಾಡಲ್ಲಿ ಕನ್ನಡದ ಉಳಿವಿಗೆ ಶ್ರಮಿಸಿದ, ಕನ್ನಡ ಪತಾಕೆಯನ್ನು ಹಾರಿಸಿದ, ಕಲ್ಯಾಣ ನಾಡಲ್ಲಿ ಕನ್ನಡ ಉಳಿಸಿದ ಲಿಂಗೈಕ್ಯ ಡಾ. ಚನ್ನಬಸವ ಪಟ್ಟದ್ದೇವರಿಗೆ ನೂರು ನೂರು, ಸಾವಿರ ಸಾವಿರ ಶರಣು ಶರಣಾರ್ಥಿಗಳು. ❐

ಕರ್ನಾಟಕ ಏಕೀಕರಣದ ವಿವಿಧ ಮಜಲುಗಳು

■ ಡಾ . ಎಚ್.ಎಸ್. ಗೋಪಾಲ ರಾವ್

ಶಿಕ್ಷಣ ಮತ್ತು ಆಡಳಿತದಲ್ಲಿ ಕನ್ನಡ

ಕ್ರಿ.ಶ.ಸುಮಾರು ೧೯ನೆಯ ಶತಮಾನದ ಎರಡನೆಯ ದಶಕದ ಹೊತ್ತಿಗೆ ಇಬ್ಭಾಗವಾದ ಕರ್ನಾಟಕವು, ಟಿಪ್ಪು ಸುಲ್ತಾನನ ಸಾವಿನ ನಂತರ ಹಲವು ಆಡಳಿತಗಳಲ್ಲಿ ಹಂಚಿಹೋಯಿತು. ಎಲ್ಲ ಕಾಲದ ಆಡಳಿತ ಪದ್ಧತಿಯಂತೆ, ಆಡಳಿತವು ಆಳುವವವರ ಮರ್ಜಿಯನ್ನೇ ಅವಲಂಬಿಸಿತ್ತು. ಬ್ರಿಟಿಷರ ಆಡಳಿತಕ್ಕೆ ಸೇರಿದ ಭಾಗದಲ್ಲಿ ಇಂಗ್ಲಿಷ್ ಉನ್ನತ ಅಧಿಕಾರಿಗಳ ಮಟ್ಟದ ಆಡಳಿತ ಭಾಷೆಯಾದರೂ, ಜನ ಸಂಪರ್ಕವಿದ್ದ ಅಧಿಕಾರಿಗಳು, ಆ ಭಾಗದ ಜನತೆಯ ಭಾಷೆಯಲ್ಲೇ ಆಡಳಿತ ನಡೆಸಲು ಕ್ರಮ ತೆಗೆದುಕೊಂಡ ಉದಾಹರಣೆಗಳಿವೆ. ಮುಂಬಯಿ ಕರ್ನಾಟಕದ ಭಾಗದಲ್ಲಿ ಮರಾಠಿ, ಮದ್ರಾಸ್ ಪ್ರಾಂತ್ಯದಲ್ಲಿ ಕನ್ನಡದ ಜೊತೆಗೆ ತಮಿಳು, ಹೈದರಾಬಾದ್ ನಿಜಾಮನಿಗೆ ಸೇರಿದ ಭಾಗಗಳಲ್ಲಿ ಉರ್ದು ಮತ್ತು ಮರಾಠಿ ಭಾಷೆಗಳ ಪ್ರಭಾವವು ಬಲವಾಗಿತ್ತು. ಕನ್ನಡವು ಮನೆಮಾತಾಗಿ ಉಳಿಯಲೂ ಶ್ರಮಿಸುತ್ತಿತ್ತು. ಆಡಳಿತ ಮತ್ತು ವಾಣಿಜ್ಯ ವ್ಯವಹಾರಗಳಲ್ಲಿ ಮರಾಠಿಯೇ ಮುಖ್ಯವಾಗಿತ್ತು. ಮೈಸೂರು ಸಂಸ್ಥಾನದ ಹೊರತಾಗಿ, ಮುಂಬಯಿ ಕರ್ನಾಟಕದ ಭಾಗಗಳಲ್ಲಿ ಶಿಕ್ಷಣವೂ ಮರಾಠೀಮಯವಾಗಿತ್ತು. ನಿಜಾಮನ ಆಳ್ವಿಕೆಗೆ ಸೇರಿದ್ದ ಮರಾಠವಾಡ ಭಾಗದಲ್ಲೂ ಮರಾಠಿಯೇ ಪ್ರಭಾವೀ ಭಾಷೆಯಾಗಿತ್ತು. ಮುಂಬಯಿ ಆಧಿಪತ್ಯಕ್ಕೆ ಸೇರಿದ್ದ ಕನ್ನಡ ಭಾಷಿಕರ ಪ್ರದೇಶದ ಆಡಳಿತದಲ್ಲಿ ಕನ್ನಡವನ್ನು ಬಳಕೆಗೆ ತರಲು ಶ್ರಮಿಸಿದ ಕೀರ್ತಿಗೆ ಸರ್ ಥಾಮಸ್ ಮನ್ರೋ ಮತ್ತು ಜಾನ್ ಎ.ಡನ್‌ಲಪ್



ಅವರಂತಹ ಅಧಿಕಾರಿಗಳು ಮತ್ತು ಶಿಕ್ಷಣದಲ್ಲಿ ಕನ್ನಡವನ್ನು ಬಳಕೆಗೆ ತಂದ ಕೀರ್ತಿಗೆ ಸರ್ ವಾಲ್ಟರ್ ಎಲಿಯಟ್, ಆರ್.ಗ್ರಾಂಟ್ ಮತ್ತು ಡಬ್ಲ್ಯು. ಎ.ರಸೆಲ್ ಅವರಂತಹ ಬ್ರಿಟಿಷ್ ಅಧಿಕಾರಿಗಳ ಜೊತೆಗೆ ಡೆಪ್ಯುಟಿ ಚೆನ್ನಬಸಪ್ಪ ಅವರಂತಹ ಸ್ಥಳೀಯ ಅಧಿಕಾರಿಗಳು ಪಾತ್ರರಾಗಿದ್ದಾರೆ.

ಸಾಹಿತ್ಯದಲ್ಲಿ ಕನ್ನಡ

ದಕ್ಷಿಣ ಮಹಾರಾಷ್ಟ್ರ ಎಂದು ಕರೆಸಿಕೊಳ್ಳುತ್ತಿದ್ದ ಮುಂಬಯಿ ಕರ್ನಾಟಕಕ್ಕೆ ಸೇರಿದ್ದ ಪ್ರದೇಶಗಳಲ್ಲಿ, ವಿವಾಹದ ಆಮಂತ್ರಣ ಪತ್ರಿಕೆಗಳು ಮಾತ್ರವಲ್ಲದೆ, ಸಾರ್ವಜನಿಕ ಸಮಾರಂಭಗಳ ಆಹ್ವಾನ ಪತ್ರಿಕೆಗಳೂ ಕನ್ನಡ ಭಾಷೆ ಮತ್ತು ಮರಾಠಿ ಲಿಪಿಯಲ್ಲಿರುತ್ತಿದ್ದವು. ಮರಾಠಿ ಕುಟುಂಬಗಳಿಗೆ ಸೊಸೆಯರಾಗಿ ಹೋದ ಕನ್ನಡದ ಹೆಣ್ಣು ಮಕ್ಕಳು, ಬಿಟ್ಟು ಬಂದ ಮನೆಯ ಭಾಷೆಯನ್ನು ಮರೆತು, ಸೇರಿದ ಮನೆಯ ಭಾಷೆಯನ್ನು ಕಲಿಯುತ್ತಿದ್ದರು. ಇಂಗ್ಲಿಷ್‌ಗಿಂತಲೂ ಮರಾಠಿಯು ಪ್ರತಿಷ್ಠೆಯ ಭಾಷೆಯಾಗಿತ್ತು. ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಉರ್ದು ಮತ್ತು ಮರಾಠಿ ಭಾಷೆಗಳು ಹೆಚ್ಚು ಮನ್ನಣೆ ಪಡೆದಿದ್ದುವು. ಇಂತಹ ಸಮಯದಲ್ಲಿ ಆಡು ಭಾಷೆಯಾಗಿ ಮತ್ತು ಗ್ರಂಥಸ್ಥ ಭಾಷೆಯಾಗಿ ಕನ್ನಡವನ್ನು ಉಳಿಸಿಕೊಳ್ಳುವ ಗಂಭೀರ ಪ್ರಯತ್ನಗಳು ನಡೆದವು. ಅದರ ಫಲವೇ ೧೮೯೦ರಲ್ಲಿ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಸ್ಥಾಪನೆ. ಕನ್ನಡ ಮಾತನಾಡುವ ಎಲ್ಲ ಪ್ರದೇಶಗಳನ್ನೂ ಒಳಗೊಂಡಂತೆ, ಕನ್ನಡದ ಏಕರೂಪತೆ ಮತ್ತು ಕನ್ನಡಿಗರ ಐಕಮತ್ಯ ಸಾಧಿತವಾಗಬೇಕೆಂಬ ಹಂಬಲದಿಂದ ೧೯೧೫ರಲ್ಲಿ ಬೆಂಗಳೂರಿನಲ್ಲಿ ಸ್ಥಾಪಿತವಾದದ್ದೇ ಕನ್ನಡ (ಕರ್ನಾಟಕ) ಸಾಹಿತ್ಯ ಪರಿಷತ್ತು.

ಐದು ನೂರು ವರ್ಷಗಳ ಹಿಂದಷ್ಟೇ ಅತ್ಯಂತ ಪ್ರಸಿದ್ಧವಾಗಿದ್ದ ವಿಜಯನಗರ ಸಾಮ್ರಾಜ್ಯದ ಕೇಂದ್ರ ಸ್ಥಾನ ಹಂಪಿಯು ಮದ್ರಾಸ್ ಆಧಿಪತ್ಯದ ಆಡಳಿತಕ್ಕೆ ಸೇರಿತ್ತು. ಅಂತೆಯೇ ಕರ್ನಾಟಕದ ಅನೇಕ ಬಹು ಮುಖ್ಯ ಸಾಂಸ್ಕೃತಿಕ ಕ್ಷೇತ್ರಗಳು ಮುಂಬಯಿ ಮದ್ರಾಸ್, ಹೈದರಾಬಾದ್ ಪ್ರದೇಶಗಳ ಆಡಳಿತದಲ್ಲಿ ಹಂಚಿಹೋಗಿದ್ದವು. ಸಾಂಸ್ಕೃತಿಕವಾಗಿ ಕರ್ನಾಟಕವನ್ನು ಒಂದು ಮಾಡಲು ಶ್ರಮಿಸಿದ ಮೊದಲಿಗರಲ್ಲಿ ರಾ.ಹ.ದೇಶಪಾಂಡೆ ಆಲೂರು ವೆಂಕಟರಾಯರು, ಸರ್ ಎಂ.ವಿಶ್ವೇಶ್ವರಯ್ಯ ಮುಂತಾದವರು ಸೇರುತ್ತಾರೆ.

ಬ್ರಿಟಿಷ್ ಅಧಿಕಾರಿಗಳ ಒಡೆದು ಆಳುವ ನೀತಿಯು ಕರ್ನಾಟಕವನ್ನೂ ಒಡೆದಿತ್ತು. ೧೯೦೫ರಲ್ಲಿ ಬ್ರಿಟಿಷ್ ಸರ್ಕಾರವು ಯಾರ ಮಾತಿಗೂ ಬೆಲೆ ಕೊಡದೆ, ಬಂಗಾಲ ದೇಶವನ್ನು ವಿಭಜಿಸಿದಾಗ ಬಂಗಾಳಿ ಭಾಷಿಕರು ಅದನ್ನು ವಿರೋಧಿಸಿದ ಕ್ರಮವು, ಕನ್ನಡ ಜನತೆಯ ಕಣ್ಣು ತೆರೆಸಿತು. ಒಡೆದು ಹೋಗಿರುವ ತಾವು ಸಾಂಸ್ಕೃತಿಕವಾಗಿಯಾದರೂ ಒಂದಾಗಬೇಕೆಂಬ ಪ್ರಯತ್ನ ನಡೆಸಿದರು.

ರಾಜಕಾರಣದ ಸಂಪರ್ಕ

ಬಂಗಾಲದ ವಿಭಜನೆಯ ನಂತರ ಬಹಿರಂಗಗೊಂಡ ಜನರ ಅಸಮಾಧಾನವು ಭಾಷಾವಾರು ಪ್ರಾಂತ ರಚನೆಗೆ ಪ್ರೇರಣೆ ನೀಡಿತು. ಸಂವಿಧಾನ ಸುಧಾರಣೆಯ ಸಲುವಾಗಿ ೧೯೧೮ರಲ್ಲಿ ಮಾಂಟೆಗೋ ಚೆಲ್ಮ್ಸ್‌ಫರ್ಡ್ ಸಮಿತಿಯು ಕಾರ್ಯಪ್ರವೃತ್ತವಾಗಿತ್ತು.

ಸಂಯುಕ್ತ ಕರ್ನಾಟಕ ಪ್ರಾಂತ ರಚನೆಗೆ ಉತ್ತರ ಕರ್ನಾಟಕ ಪ್ರದೇಶದ, ವಿಶೇಷವಾಗಿ ಮುಂಬಯಿ, ಮದ್ರಾಸ್ ಆಧಿಪತ್ಯಗಳಿಗೆ ಸೇರಿದ್ದ ನಾಗರಿಕರು ಒತ್ತಾಯಿಸಿದರು. ಸಮಿತಿಯು ಭಾಷಾವಾರು ಪ್ರಾಂತ ರಚನೆಗೆ ಶಿಫಾರಸು ಮಾಡಿತು. ಬ್ರಿಟಿಷ್ ಮತ್ತು ಭಾರತ ಸರ್ಕಾರಗಳು ಮಾಂಟ್‌ಫೋರ್ಡ್ ವರದಿಯನ್ನು ಒಪ್ಪಿದವು. ಈ ಹಿನ್ನೆಲೆಯಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್, ಸೂಕ್ತವಾಗಿ ತನ್ನ ಪ್ರಾಂತಿಕ ಸಮಿತಿಗಳನ್ನೂ ರಚಿಸಲು ಮುಂದಾಯಿತು. ಭಾಷಾವಾರು ಪ್ರಾಂತ ರಚನೆಗೆ ಸಂಬಂಧಿಸಿದಂತೆ ವರದಿ ನೀಡಲು ಪಂಡಿತ್ ಮೋತಿಲಾಲ್ ನೆಹರೂ ಅವರ ನೇತೃತ್ವದಲ್ಲಿ ನೇಮಿತವಾದ ಸಮಿತಿಯೂ ಸಹ ಭಾಷಾವಾರು ಪ್ರಾಂತ ಸಮಿತಿಗಳ ರಚನೆ ಅವಶ್ಯಕವೆಂದು ಅಭಿಪ್ರಾಯಪಟ್ಟಿತು. ೧೯೨೦ರಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನವು ನಾಗಪುರದಲ್ಲಿ ನಡೆದಾಗ ಕರ್ನಾಟಕದ ವಿವಿಧ ಭಾಗಗಳಿಂದ ಸುಮಾರು ೮೦೦ ಜನ ಪ್ರತಿನಿಧಿಗಳು ಭಾಗವಹಿಸಿದರು. ಅಲ್ಲಿ ಕಾಂಗ್ರೆಸ್ ಸಂಸ್ಥೆಯು ತನ್ನ ಕಾರ್ಯನಿರ್ವಹಣೆಗಾಗಿ ಭಾಷೆಯನ್ನು ಆಧರಿಸಿ ಭಾರತವನ್ನು ೨೧ ಭಾಗಗಳನ್ನಾಗಿ ವಿಂಗಡಿಸಿತು. ಆಗ ಆವರೆಗಿನ ಮುಂಬಯಿ ಪ್ರಾಂತ ಸಮಿತಿಯಿಂದ ಪ್ರತ್ಯೇಕಗೊಂಡು, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯು ಅಸ್ತಿತ್ವಕ್ಕೆ ಬಂದಿತು. ಮುಂಬಯಿ ಆಧಿಪತ್ಯಕ್ಕೆ ಸೇರಿದ್ದ ಕನ್ನಡ ಭಾಷಿಕ ಪ್ರದೇಶಗಳು ಒಂದಾದಾಗ, ಮದ್ರಾಸ್ ಆಧಿಪತ್ಯಕ್ಕೆ ಸೇರಿದ್ದ ಬಳ್ಳಾರಿ ಜಿಲ್ಲೆಗೆ ಸಂಬಂಧಿಸಿದಂತೆ, ಕರ್ನಾಟಕ ಮತ್ತು ಆಂಧ್ರದ ನಾಯಕರ ನಡುವೆ ಭಿನ್ನಾಭಿಪ್ರಾಯ ಬಂದು, ಅದನ್ನು ಬಗೆಹರಿಸಲು ನೇಮಕಗೊಂಡ ಕೇಳ್ಕರ್ ಸಮಿತಿಯು ಬಳ್ಳಾರಿ ಜಿಲ್ಲೆಯ ಆದವಾನಿ, ಆಲೂರು ಮತ್ತು ರಾಯದುರ್ಗ ತಾಲ್ಲೂಕುಗಳನ್ನು ಆಂಧ್ರ ಪ್ರದೇಶ ಕಾಂಗ್ರೆಸ್ ವ್ಯಾಪ್ತಿಗೂ, ಉಳಿದ ಭಾಗಗಳನ್ನು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ವ್ಯಾಪ್ತಿಗೂ ಸೇರಿಸಿತು. ಹೀಗೆ ೧೯೨೦ರಲ್ಲಿ ಅಸ್ತಿತ್ವಕ್ಕೆ ಬಂದ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯು ಕರ್ನಾಟಕ ಏಕೀಕರಣದ ಮೊದಲ ಗೆಲುವು. ರಾಜಕೀಯವಾಗಿ ರಚನೆಯಾದ ಕರ್ನಾಟಕವನ್ನು ಸಮಗ್ರವಾಗಿ ಮತ್ತು ಎಲ್ಲ ಸ್ವರೂಪದಲ್ಲೂ ಒಂದುಮಾಡುವ ಪ್ರಯತ್ನವಾಗಿ ೧೯೨೪ರಲ್ಲಿ ಬೆಳಗಾವಿಯಲ್ಲಿ ಮಹಾತ್ಮಾ ಗಾಂಧಿ ಅವರ ಅಧ್ಯಕ್ಷತೆಯಲ್ಲಿ ನಡೆದ, ಅಖಿಲ ಭಾರತ ಕಾಂಗ್ರೆಸ್ ಮಹಾಧಿವೇಶನದ ಸಂದರ್ಭದಲ್ಲಿ ನಡೆದ ಮೊದಲ ಕರ್ನಾಟಕ ಏಕೀಕರಣ ಪರಿಷತ್ತಿನ ಸಭೆಯ ಪಾತ್ರವೂ ಮುಖ್ಯವಾಯಿತು. ಕರ್ನಾಟಕ ಏಕೀಕರಣದಲ್ಲಿ ಇದು ಒಂದು ಮುಖ್ಯ ಘಟ್ಟ. ಹುಯಿಲಗೋಳ ನಾರಾಯಣರಾಯರ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಕವಿತೆಯ ಹುಟ್ಟಿಗೆ ಕಾರಣವಾದ ಆ ಸಭೆಯು, ಕರ್ನಾಟಕದ ರಚನೆಗೆ ರಾಜಕೀಯವಾಗಿಯೂ ಇರುವ ಬೆಂಬಲವನ್ನು ಪ್ರಕಟಿಸಿತು. ಕರ್ನಾಟಕದ ರಚನೆಗೆ ಮುಂಬಯಿ ಮತ್ತು ಮದ್ರಾಸ್‌ನ ಶಾಸನ ಸಭೆಗಳಲ್ಲಿ ಮಾತ್ರವಲ್ಲದೆ, ಆಯಾ ಪ್ರದೇಶಗಳ ಸಾರ್ವಜನಿಕ ಬೆಂಬಲವೂ ವ್ಯಕ್ತವಾಯಿತು.

ಸಾಂಸ್ಥಿಕ ಪ್ರಯತ್ನಗಳು

ಮಾಂಟೆಗೋ-ಚೆಲ್ಮ್‌ಸ್‌ಫರ್ಡ್ ಸಮಿತಿಯು ಕಾಂಗ್ರೆಸ್ ಸಂಸ್ಥೆಯಲ್ಲಿ ಪ್ರಾಂತೀಯ ಸಮಿತಿಗಳ ರಚನೆಗೆ ಕಾರಣವಾದರೆ, ನಂತರದ ಸೈಮನ್ ಆಯೋಗವು ಭಾರತದ

ಪುನರ್ಘಟನೆಯ ಸಂದರ್ಭದಲ್ಲಿ, ಕರ್ನಾಟಕ ಪ್ರಾಂತ್ಯ ರಚನೆಗೆ ಪ್ರೇರಣೆ ನೀಡಿತು. ಸೈಮನ್ ಆಯೋಗವನ್ನು ಕಾಂಗ್ರೆಸ್ ಸಂಸ್ಥೆ ಬಹಿಷ್ಕರಿಸಿತ್ತಾದರೂ, ದುಂಡು ಮೇಜಿನ ಪರಿಷತ್ತಿನಲ್ಲಿ ಮಿರ್ಜಾ ಇಸ್ಮಾಯಿಲ್ ಮತ್ತು ಬೆನಗಲ್ ರಾಮರಾವ್ ಮೈಸೂರು ಸಂಸ್ಥಾನವನ್ನು ಪ್ರತಿನಿಧಿಸಿದರು. ಕರ್ನಾಟಕ ಏಕೀಕರಣ ಮತ್ತು ಭಾಷಾವಾರು ಪ್ರಾಂತ ರಚನೆಯ ವಿಷಯದ ಪ್ರಸ್ತಾವನೆಯಾದರೆ, ಜೊತೆಗಿರಲಿ ಎಂದು ಆವಶ್ಯಕ ಮಾಹಿತಿಗಳನ್ನು ಸಿದ್ಧಪಡಿಸಿಕೊಟ್ಟಿದ್ದವರು ಆರ್.ಆರ್.ದಿವಾಕರ್. ಸೈಮನ್ ಆಯೋಗಕ್ಕೆ ಕರ್ನಾಟಕ ಏಕೀಕರಣದ ವಿಷಯದಲ್ಲಿ ಸೂಕ್ತ ಸಾಕ್ಷ್ಯಗಳು ದೊರಕಲಿಲ್ಲ ಎಂಬ ಕಾರಣದಿಂದ, ಆಯೋಗವು ಕರ್ನಾಟಕ ಏಕೀಕರಣದ ವಿಚಾರವನ್ನು ಬಿಟ್ಟು, ಉಳಿದ ಪ್ರಾಂತ್ಯಗಳ ರಚನೆಯನ್ನು ಕುರಿತು ವರದಿ ಸಲ್ಲಿಸಿತು. ಅದರ ಫಲವಾಗಿ ಸಿಂಧ್ ಮತ್ತು ಒರಿಸ್ಸಾ ಪ್ರಾಂತ್ಯಗಳ ರಚನೆಯಾಯಿತು. ಸೈಮನ್ ಆಯೋಗದೆದುರು ಕರ್ನಾಟಕದ ವಿಚಾರದಲ್ಲೂ ಕನ್ನಡಿಗರು ಸಾಕ್ಷ್ಯ ನೀಡಿದ್ದಿದ್ದರೆ, ಆಗಲೇ ಕರ್ನಾಟಕದ ರಚನೆ ಆಗುತ್ತಿತ್ತು ಎಂಬ ಅಭಿಪ್ರಾಯವೂ ಇದೆ. ಕರ್ನಾಟಕ ಪ್ರಾಂತಿಕ ಪರಿಷತ್ತು ಮಾತ್ರವಲ್ಲದೆ ನಿರಂತರವಾಗಿ ಪ್ರತಿ ವರ್ಷವೂ ನಡೆದ ಕರ್ನಾಟಕ ಏಕೀಕರಣ ಪರಿಷತ್ತಿನ ಸಭೆಗಳು ಕರ್ನಾಟಕ ಏಕೀಕರಣವನ್ನು ಪ್ರಮುಖ ಗುರಿಯನ್ನಾಗಿರಿಸಿಕೊಂಡಿದ್ದವು. ಕನ್ನಡ ಸಾಹಿತ್ಯ ಸಮ್ಮೇಳನಗಳೂ, ಏಕೀಕರಣದ ವಿಚಾರವನ್ನು ಪ್ರಸ್ತಾಪಿಸುತ್ತಿದ್ದವು. ಮುಂಬಯಿ ಮತ್ತು ಮದ್ರಾಸ್ ಆಧಿಪತ್ಯಗಳ ಶಾಸನ ಸಭೆಗಳಲ್ಲಿ ಕನ್ನಡಿಗರ ಪ್ರಾತಿನಿಧ್ಯ ಕಡಿಮೆ ಇದ್ದುದರಿಂದ ಕರ್ನಾಟಕ ಪ್ರಾಂತ್ಯ ರಚನೆ ಸುಲಭದ ಮಾತಾಗಿರಲಿಲ್ಲ. ೧೯೪೬ರ ಜನವರಿ ೧೯ರಂದು ಮುಂಬಯಿಯಲ್ಲಿ ನಡೆದ ಕರ್ನಾಟಕ ಏಕೀಕರಣ ಪರಿಷತ್ತಿನ ಹತ್ತನೆಯ ಅಧಿವೇಶನವನ್ನು ಉದ್ಘಾಟಿಸಿದ ಸರ್ದಾರ್ ವಲ್ಲಭಭಾಯಿ ಪಟೇಲರು, ಶೀಘ್ರವೇ ಕರ್ನಾಟಕ ಪ್ರಾಂತ ರಚನೆಯು ಆಗುವುದೆಂಬ ಭರವಸೆ ನೀಡಿದರು. ಅಧಿವೇಶನದ ಅಧ್ಯಕ್ಷತೆ ವಹಿಸಿದ್ದ ಮುಂಬಯಿ ಪ್ರಾಂತ್ಯದ ಮುಖ್ಯ ಮಂತ್ರಿ ಬಿ.ಜಿ.ಖೇರ್ ಅವರೂ, ಭಾರತಕ್ಕೆ ಸ್ವಾತಂತ್ರ್ಯ ದೊರೆತ ನಂತರ ಕರ್ನಾಟಕ ಪ್ರಾಂತ ರಚನೆ ಆಗಬಹುದೆಂಬ ಸೂಚನೆ ನೀಡಿದರು. ೧೯೪೬ರ ಅಗಸ್ಟ್ ೩೧ರಂದು ದಾವಣಗೆರೆಯಲ್ಲಿ ನಡೆದ ಕರ್ನಾಟಕಸ್ಥರ ಮಹಾಸಭೆಯು ಸ್ವೀಕರಿಸಿದ ಗೊತ್ತುವಳಿಯು, ಕರ್ನಾಟಕ ಏಕೀಕರಣದ ವಿಚಾರದಲ್ಲಿ ಪ್ರಮುಖ ಪಾತ್ರವಹಿಸಿತು. 'ಶಕ್ಯವಾದರೆ ಮೈಸೂರನ್ನೊಳಗೊಂಡು, ಇಲ್ಲವಾದರೆ ಅದನ್ನು ಬಿಟ್ಟು ಕರ್ನಾಟಕ ಪ್ರಾಂತ' ಎಂಬ ಪ್ರಸ್ತಾವನೆಗೆ 'ಮೈಸೂರನ್ನೊಳಗೊಂಡು ಕರ್ನಾಟಕ ಪ್ರಾಂತ' ಎಂದು ತಿದ್ದುಪಡಿ ಮಾಡಿ ಗೊತ್ತುವಳಿ ಸ್ವೀಕರಿಸಲಾಯಿತು.

ಘಟನಾ ಸಮಿತಿಯಲ್ಲಿ ಭಾಷಾವಾರು ಪ್ರಾಂತ ರಚನೆಯ ಪ್ರಸ್ತಾಪ

ಸ್ವತಂತ್ರ ಭಾರತದ ಸಂವಿಧಾನ ರಚನೆಗೆ ನೇಮಕಗೊಂಡಿದ್ದ ಘಟನಾ ಸಮಿತಿಯು ೧೯೪೬ರ ಡಿಸೆಂಬರ್ ೯ರಿಂದ ಕಾರ್ಯಾರಂಭ ಮಾಡಲಿತ್ತು. ಆ ಸಂದರ್ಭದಲ್ಲೇ ಭಾಷಾವಾರು ಪ್ರಾಂತ ರಚನೆಯ ಬಗೆಗೂ ಚರ್ಚೆ ನಡೆದು ಸೂಕ್ತ ನಿರ್ಣಯ ಸ್ವೀಕರಿಸಲಾಗುವುದೆಂದು ನಿರೀಕ್ಷಿಸಲಾಗಿತ್ತು. ಆದರೆ ಘಟನಾ ಸಮಿತಿಯ ಚಾಲನಾ ಸಮಿತಿಯು ಭಾಷಾವಾರು ಪ್ರಾಂತ ರಚನೆಯು ಸದ್ಯಕ್ಕೆ ಅನವಶ್ಯಕವೆಂದು ತಿಳಿದಿತ್ತು.

ಆ ಸಂದರ್ಭದಲ್ಲಿ ಕರ್ನಾಟಕದ ಕೆಲವು ಪ್ರಮುಖರು ಜವಹರಲಾಲ್ ನೆಹರೂ ಅವರಿಗೆ ಭಾಷಾವಾರು ಪ್ರಾಂತ ರಚನೆಯ ಔಚಿತ್ಯ ಮತ್ತು ಅಗತ್ಯವನ್ನು ಮನದಟ್ಟುಮಾಡಿದರು. ಅದೇ ಹೊತ್ತಿಗೆ ಮುಂಬಯಿ ಮತ್ತು ಮದ್ರಾಸ್ ಪ್ರಾಂತಗಳ ಶಾಸನ ಸಭೆಗಳಲ್ಲೂ ಕರ್ನಾಟಕ ಪ್ರಾಂತ ರಚನೆಗೆ ಅನುಕೂಲವಾಗುವ ನಿರ್ಣಯಗಳು ಸ್ವೀಕೃತವಾಗಿದ್ದವು.

ಸ್ವಾತಂತ್ರ್ಯಾನಂತರ ಭಾಷಾವಾರು ಪ್ರಾಂತ ರಚನೆಗೆ ಆಯೋಗಗಳು

ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ಭಾಷಾವಾರು ಪ್ರಾಂತಗಳು ಅಸ್ತಿತ್ವದಲ್ಲಿರಲಿಲ್ಲ. ಕರ್ನಾಟಕ ಪ್ರಾಂತ ರಚನೆ ಅರ್ಥಾತ್, ಕರ್ನಾಟಕ ಏಕೀಕರಣದ ವಿಚಾರದಲ್ಲಿ ಹೋರಾಟಗಳು ಮುಂದುವರಿದೇ ಇದ್ದುವು. ಆ ಸಂದರ್ಭದಲ್ಲಿ ಕರ್ನಾಟಕ ಏಕೀಕರಣದ ವಿಚಾರವು ಮತ್ತಷ್ಟು ಗೊಂದಲಗಳನ್ನು ಸೃಷ್ಟಿಸುವ ಸಾಧ್ಯತೆಗಳು ಹೆಚ್ಚಾಗಿಯೇ ಇದ್ದುವು. ಬ್ರಿಟಿಷರ ಆಳ್ವಿಕೆಗೆ ಸೇರಿದ್ದ ಕನ್ನಡ ಭಾಷಿಕರ ಪ್ರದೇಶಗಳಲ್ಲದೆ, ಮೈಸೂರು ಒಡೆಯರ ಮತ್ತು ಹೈದರಾಬಾದ್ ನಿಜಾಮನ ಆಳ್ವಿಕೆಗೆ ಸೇರಿದ್ದ ಹಾಗೂ ಉತ್ತರ ಕರ್ನಾಟಕದ ಹಲವು ದೇಶೀಯ ಸಂಸ್ಥಾನಗಳು ಏಕೀಕೃತ ಕರ್ನಾಟಕದಲ್ಲಿ ಸೇರಬೇಕಾಗಿತ್ತು. ಅದು ಸುಲಭದ ಮಾತಾಗಿರಲಿಲ್ಲ. ಭಾರತಕ್ಕೆ ಸ್ವಾತಂತ್ರ್ಯ ಬಂದ ಸಂದರ್ಭದಲ್ಲಿ ಕೆಲವು ಸಂಸ್ಥಾನಗಳು ಭಾರತದ ಒಕ್ಕೂಟದೊಡನೆ ಸೇರಲು ಸುಲಭವಾಗಿ ಒಪ್ಪಿರಲಿಲ್ಲ. ಅಂತಹ ಸಂದರ್ಭದಲ್ಲಿ ಬ್ರಿಟಿಷರ ಆಳ್ವಿಕೆಗೆ ಸೇರಿದ್ದ ಕನ್ನಡ ಪ್ರದೇಶಗಳು ಏಕೀಕರಣದ ಪರವಾಗಿದ್ದವು. ಅಲ್ಪ ಸ್ವಲ್ಪ ವಿರೋಧದ ನಡುವೆ ಮೈಸೂರು ಸಂಸ್ಥಾನವೂ ಏಕೀಕರಣದ ಪರವಾಗಿ ನಿಂತಿತು. ಹೈದರಾಬಾದ್ ಸಂಸ್ಥಾನವು ಭಾರತ ಒಕ್ಕೂಟದೊಡನೆ ಸೇರಿದ ನಂತರ, ಬಹುತೇಕ ಆವರೆಗೆ ಇದ್ದ ಅನುಮಾನಗಳು ಬಗೆಹರಿದು ಭಾರತದ ಘಟನಾ ಸಮಿತಿಯು ಆಂಧ್ರ ಕರ್ನಾಟಕ, ಕೇರಳ ಮತ್ತು ಮಹಾರಾಷ್ಟ್ರ ಪ್ರಾಂತಗಳ ರಚನೆಗೆ ಸಂಬಂಧಿಸಿದಂತೆ ವರದಿ ನೀಡಲು, ನಿವೃತ್ತ ನ್ಯಾಯಾಧೀಶ ಎಸ್.ಕೆ.ಧರ್ ನೇತೃತ್ವದಲ್ಲಿ ಆಯೋಗವನ್ನು ನೇಮಿಸಿತು. ೧೭-೬-೧೯೪೮ರಂದು ನೇಮಕಗೊಂಡ ಆಯೋಗವು ತನ್ನ ವರದಿಯನ್ನು ೧೦-೧೨-೧೯೪೮ರಂದು ಸಲ್ಲಿಸಿತು. ಆ ವರದಿಯು ಕರ್ನಾಟಕ ಪ್ರಾಂತ ರಚನೆಗೆ ಅನುಕೂಲಕರವಾಗಿರಲಿಲ್ಲ. ಧರ್ ಆಯೋಗದ ವರದಿಯನ್ನು ಪರಿಶೀಲಿಸಿ ವರದಿ ಮಾಡಲು ಜೆ.ವಿ.ಪಿ. (ಜವಹರಲಾಲ್ ನೆಹರೂ, ವಲ್ಲಭಭಾಯಿ ಪಟೇಲ್, ಪಟ್ಟಾಭಿ ಸೀತಾರಾಮಯ್ಯ) ಸಮಿತಿಯ ರಚನೆಯಾಯಿತು. ೧೯೪೯ರ ಮಾರ್ಚ್ ೬ರಂದು ಗುಲಬರ್ಗಾದಲ್ಲಿ ನಡೆದ ಕರ್ನಾಟಕ ಏಕೀಕರಣ ಪರಿಷತ್ತಿನ ೧೨ನೆಯ ಮತ್ತು ಕೊನೆಯ ಸಮಾವೇಶವು, ಆವರೆಗೆ ಆಳುತ್ತಿದ್ದ ರಾಜ ಮನೆತನಗಳು ಮತ್ತು ದೆಹಲಿಯ ನಾಯಕರ ಬಗ್ಗೆ ಸ್ಥಳೀಯ ನಾಯಕರಲ್ಲಿದ್ದ, ಅತೀವವೆನಿಸುವಂತಹ ಭಕ್ತಿಯನ್ನು ಬಯಲಿಗೆಳೆಯಿತು. ಜೆ.ವಿ.ಪಿ. ಸಮಿತಿಯ ವರದಿಯೂ ಕರ್ನಾಟಕ ಪ್ರಾಂತ ರಚನೆಗೆ ಉತ್ತೇಜಕವಾಗಿರಲಿಲ್ಲ. ಕರ್ನಾಟಕ ಮಾತ್ರವಲ್ಲದೆ ಆಂಧ್ರ ಪ್ರಾಂತ ರಚನೆಗೆ ತೀವ್ರ ಒತ್ತಡ ಬಂದ ಕಾರಣದಿಂದ ಮತ್ತು ಪೊಟ್ಟಿ ಶ್ರೀರಾಮುಲು ಅವರು ಉಪವಾಸ ಸತ್ಯಾಗ್ರಹ ಮಾಡಿ, ಪ್ರಾಣತ್ಯಾಗ ಮಾಡಿದ ಹಿನ್ನೆಲೆಯಲ್ಲಿ ವಾಂಛೂ ಆಯೋಗ ನೇಮಕಗೊಂಡಿತು. ಅದರಗುಂಚಿ ಶಂಕರಗೌಡ ಪಾಟೀಲರ ಇಪ್ಪತ್ತಮೂರು ದಿನಗಳ ಉಪವಾಸ ಸತ್ಯಾಗ್ರಹ ಮತ್ತು ಅದರ ಬೆನ್ನಿಗೇ

೧೯-೪-೧೯೫೩ರಂದು ಹುಬ್ಬಳ್ಳಿಯಲ್ಲಿ ನಡೆದ ಗಲಭೆಗಳು. ೨೧-೪-೧೯೫೩ರಂದು ಮಿಶ್ರಾ ಆಯೋಗ ರಚನೆಗೊಳ್ಳಲು ಕಾರಣವಾದವು. ೧೮-೫-೧೯೫೩ರಂದು ಸಲ್ಲಿಕೆಯಾದ ಮಿಶ್ರಾ ವರದಿಯ ಮೇಲೆ ಲೋಕಸಭೆಯಲ್ಲಿ ಚರ್ಚೆ ನಡೆದು. ಅದು ಒಪ್ಪಿಗೆ ಪಡೆದು ೧-೧೦-೧೯೫೩ರಂದು ಆಂಧ್ರ ಪ್ರಾಂತ ರಚನೆಯಾಯಿತು.

೨೮-೫-೧೯೫೩ರಂದು ದಾವಣಗೆರೆಯಲ್ಲಿ ನಡೆದ ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ (ಅ.ಕ.ರಾ.ನಿ.) ಪರಿಷತ್ತಿನ ಮೊದಲ ಸಭೆಯು, ಕರ್ನಾಟಕ ಏಕೀಕರಣದಲ್ಲಿ ಆಗುತ್ತಿದ್ದ ವಿಳಂಬವನ್ನು ತೀವ್ರವಾಗಿ ಖಂಡಿಸಿತು. ಆಂಧ್ರ ರಾಜ್ಯ ನಿರ್ಮಾಣವಾದ ನಂತರ ತೀವ್ರವಾದ ಕರ್ನಾಟಕ ಪ್ರಾಂತ ರಚನೆಯ ಪರವಾದ, ಹೋರಾಟದ ಫಲವಾಗಿ ೨೨-೧೨-೧೯೫೩ರಂದು ಫಜಲ್ ಆಲಿ ನೇತೃತ್ವದಲ್ಲಿ ರಾಜ್ಯ ಪುನರ್ವಿಂಗಡಣಾ ಆಯೋಗ ನೇಮಕಗೊಂಡಿತು. ಆಯೋಗದಲ್ಲಿ ಹೃದಯನಾಥ ಕುಂಜ್ರು ಮತ್ತು ಕೆ.ಎಂ.ಪಣಿಕ್ಕರ್ ಸದಸ್ಯರಾಗಿದ್ದರು. ಆಯೋಗವು ವಿವಿಧ ಸಂಘ-ಸಂಸ್ಥೆಗಳು, ರಾಜಕೀಯ ಪಕ್ಷಗಳು ಮತ್ತು ಗಣ್ಯ ನಾಗರಿಕರನ್ನು ಸಂದರ್ಶಿಸಿ, ಅಭಿಪ್ರಾಯಗಳನ್ನು ಸ್ವೀಕರಿಸಿ, ಅಧ್ಯಯನ ಪೂರ್ವಕವಾದ ತನ್ನ ವರದಿಯನ್ನು ೧೦-೧೦-೧೯೫೫ರಂದು ಸಲ್ಲಿಸಿತು. ೧೬-೧-೧೯೫೬ರಂದು ರಾಜ್ಯ ಪುನರ್ವಿಂಗಡಣೆಯ ಬಗ್ಗೆ ಭಾರತ ಸರ್ಕಾರದ ನಿರ್ಣಯ ಪ್ರಕಟವಾಯಿತು. ೧೦-೮-೧೯೫೬ರಂದು ಲೋಕಸಭೆಯಲ್ಲಿ ಮತ್ತು ೨೫-೮-೧೯೫೬ರಂದು ರಾಜ್ಯಸಭೆಯಲ್ಲಿ ಅಂಗೀಕೃತವಾದ ವಿಧೇಯಕದ ಪ್ರಕಾರ, ೧-೧೧-೧೯೫೬ರಂದು ಏಕೀಕರಣಗೊಂಡ ಕರ್ನಾಟಕವು ವಿಶಾಲ ಮೈಸೂರು ರಾಜ್ಯ ಎಂಬ ಹೆಸರಿನಲ್ಲಿ ಅಸ್ತಿತ್ವಕ್ಕೆ ಬಂದಿತು.




ಅರವತ್ತೆರಡರ ಕನ್ನಡ ಚಳವಳಿ – ಕೆಲವು ನೆನಪುಗಳು

■ **ಎಂ.ಕೆ. ಗೋಪಿನಾಥ್**

ಅ.ನ. ಕೃಷ್ಣರಾಯ – ಮ.ರಾಮಮೂರ್ತಿ ಮುಖಂಡತ್ವದಲ್ಲಿ ೧೯೬೨ರಲ್ಲಿ ಆರಂಭವಾದ ಕನ್ನಡ ಚಳವಳಿಗೆ ೫೦ ವರ್ಷ ತುಂಬಿದ ಸಂದರ್ಭವನ್ನು ಕನ್ನಡ ಗೆಳೆಯರ ಬಳಗವು ೧೦-೫-೨೦೧೨ ರಂದು ಸಂಭ್ರಮದಿಂದ ಆಚರಿಸಿತು. ಆ ದಿನ ವೇದಿಕೆಯ ಮೇಲೆ ಭಾಷಣಗಳಾಗುತ್ತಿದ್ದಂತೆ ನನ್ನ ಮನಸ್ಸು ಒಮ್ಮೆಗೇ ಐವತ್ತು ವರ್ಷಗಳಷ್ಟು ಹಿಂದಕ್ಕೆ ಸರಿದುಬಿಟ್ಟಿತು. ನಾನು ವಸ್ತುತಃ ೨೨ ವರ್ಷದ ಯುವಕನೇ ಆಗಿಬಿಟ್ಟೆ. ಕನ್ನಡ ಚಳವಳಿ ಪ್ರಾರಂಭವಾದ ಘಳಿಗೆ ಹಾಗೂ ಅದರ ಮುಂದಿನ ಮಧುರ, ರೋಮಾಂಚಕ ದಿನಗಳು ನನ್ನ ಮನಸ್ಸಿನ ಪರದೆಯ ಮೇಲೆ ಒಂದರ ಹಿಂದೆ ಒಂದರಂತೆ ತೇಲಿಬರತೊಡಗಿ ನಾನು ಕೊಂಚಕಾಲ ಅರೆಮೂಕನಾದದ್ದು ದಿಟ. ಕಾರಣ ಆ ಚಳವಳಿಯಲ್ಲಿ ಸ್ವಲ್ಪವೇ ಆದರೂ ತುಂಬ ಭಾವನಾತ್ಮಕವಾದ ಭಾಗ ನನ್ನದಾಗಿತ್ತು. ಮುಂದಿನ ವರ್ಷಗಳಲ್ಲಿ ಕನ್ನಡ ಚಳವಳಿಯ ಸ್ವರೂಪವನ್ನೇ ಬದಲಿಸಿದ ಎಂ. ಚಿದಾನಂದಮೂರ್ತಿಯವರು ಅನಕೃ ಚಳವಳಿಯ ಕಾಲದಲ್ಲಿ ಮೈಸೂರಿನಲ್ಲಿದ್ದುದರಿಂದ, ೨೦೧೨ ಮೇ ೧೦ರ ಸಭೆಯಲ್ಲಿ ಅವರಿಂದ ಹಳೆಯ ದಿನಗಳ ನೆನಪನ್ನು ನಿರೀಕ್ಷಿಸುವಂತಿರಲಿಲ್ಲ. ಮುಖ್ಯ ಅತಿಥಿಗಳಾಗಿ ಬಂದಿದ್ದ ಎಲ್.ಎಸ್. ಶೇಷಗಿರಿ ರಾವ್, ಅನಕೃ ಚಳವಳಿಯ ದಿನಗಳಲ್ಲಿ ಕೋಲಾರದಲ್ಲಿದ್ದುದಾಗಿ ಅವರೇ ಹೇಳಿಕೊಂಡರು.

೨೭-೪-೧೯೬೨ ಕನ್ನಡನಾಡಿನ ಇತಿಹಾಸದಲ್ಲೇ ಚಿರಸ್ಮರಣೀಯವಾದ ದಿನ. ಸಂಜೆ ಸುಮಾರು ಆರೂಮುಕ್ಕಾಲರ



ಸಮಯ. ಫೋರ್ಟ್ ಹೈಸ್ಕೂಲಿಗೆ ಡಯಾಗನಲ್ ಆಗಿ ಈಗಿರುವ ಕಿಮ್ಸ್ ಆಸ್ಪತ್ರೆಯ ಇರ್ವಿನ್ ಸರ್ಕಲ್ ಮಗ್ಗಲಿನ ಮೂಲೆಯಲ್ಲಿ ಸುಮಾರು ಮುನ್ನೂರು–ನಾನ್ನೂರು ಜನ ನೆರೆದಿದ್ದಾರೆ. ಚಾಮರಾಜಪೇಟೆಯ ಶ್ರೀರಾಮಸೇವಾ ಮಂಡಳಿಯು ಪ್ರತಿವರ್ಷ ಏರ್ಪಡಿಸುತ್ತಿದ್ದ ರಾಮೋತ್ಸವ ಸಂಗೀತ ಕಛೇರಿಗಳಲ್ಲಿ ಹಾಡಲು, ತಮಿಳುನಾಡಿನ ಸಂಗೀತಗಾರರನ್ನೇ ಕರೆಸುತ್ತಿದ್ದುದರ ವಿರುದ್ಧ ಪ್ರತಿಭಟಿಸಲು ಸೇರಿದ್ದ ಸಭೆ ಅದು. ಅಂದು ಸಂಜೆ ಹಾಡಲಿದ್ದವರು ಎಂ.ಎಸ್. ಸುಬ್ಬುಲಕ್ಷ್ಮಿ. ಹಾಗಾಗಿ ಅಂದಿನ ಪ್ರತಿಭಟನೆ ಎಂ.ಎಸ್. ವಿರುದ್ಧ ನಡೆದದ್ದು ಕೇವಲ ಕಾಕತಾಳೀಯ ಅಷ್ಟೆ. ವಾಸ್ತವವಾಗಿ ಪ್ರತಿಭಟನೆ ಇದ್ದದ್ದು ರಾಮಸೇವಾ ಮಂಡಳಿಯ ವಿರುದ್ಧ.

ಆ ದಿನಗಳಲ್ಲಿ ನಮ್ಮ ಮನೆ ಇದ್ದದ್ದು ಮಲ್ಲೇಶ್ವರದಲ್ಲಿ. ಹಾಗಾಗಿ ನಾನು ಪ್ರತಿಭಟನೆ ನಡೆಯುತ್ತಿದ್ದ ಫೋರ್ಟ್ ಹೈಸ್ಕೂಲ್ ಬಳಿ ಬರುವ ಹೊತ್ತಿಗೆ ಸಂಜೆಯ ಮಬ್ಬು ಚೆನ್ನಾಗಿಯೇ ಇಳಿದಿತ್ತು; ಅನಕೃ ನೇತೃತ್ವದ ಪ್ರತಿಭಟನಾ ಸಭೆ ಆರಂಭವಾಗಿಬಿಟ್ಟಿತ್ತು. ನಾನು ಬಂದಾಗ ಮ. ರಾಮಮೂರ್ತಿ ಭಾಷಣ ಮಾಡುತ್ತಿದ್ದರು. ನಾನು ಮ.ರಾಮಮೂರ್ತಿ ಅವರ ಪತ್ತೇದಾರಿ ಕಾದಂಬರಿಗಳನ್ನು ಓದಿದ್ದೆ; ವ್ಯಕ್ತಿಶಃ ಅವರನ್ನು ನೋಡಿರಲಿಲ್ಲ. ಎತ್ತರದ ನಿಲುವಿನ ಆಜಾನುಬಾಹು ಆಳು, ಗಡಸುಧ್ವನಿ, ಕೆರಳಿದಂತಿದ್ದ ಕಣ್ಣುಗಳು, ಅಸ್ತವ್ಯಸ್ತವಾಗಿ ಹಿಂದಕ್ಕೆ ಬಾಚಿದ್ದ ಅರೆನರೆತ ತಲೆಗೂದಲು. ನೋಡಿದರೇನೆ ಭಯ ಹುಟ್ಟಬೇಕು ಹಾಗಿದ್ದರು ಮ. ರಾಮಮೂರ್ತಿ. ಅವರ ಮಾತು ಸಾಗಿತ್ತು. ಟೇಬಲ್ಲು, ಕುರ್ಚಿ ಮೈಕು ಇತ್ಯಾದಿ ಯಾವುದೂ ಇಲ್ಲ.

ಆ ದಿನ ಅಲ್ಲಿ ನೆರೆದಿದ್ದ ಪ್ರತಿಭಟನಾಕಾರರು ರಾಮಸೇವಾ ಮಂಡಳಿಯ ಚಪ್ಪರಕ್ಕೆ ಬೆಂಕಿ ಹಚ್ಚಿಬಿಟ್ಟದ್ದರೆಂಬ ವದಂತಿ ಹಬ್ಬಿ ಗೊಂದಲವುಂಟಾಗಿತ್ತು. ನಿಜವಾಗಿ ಹಾಗೇನೂ ಆಗಿದ್ದಂತಿರಲಿಲ್ಲ. ಏಕೆಂದರೆ ಮ. ರಾಮಮೂರ್ತಿ ತಮ್ಮ ಭಾಷಣದಲ್ಲಿ 'ಈ ರಾಮಸೇವಾ ಮಂಡಳಿಯನ್ನು ಸುಟ್ಟು ಬೂದಿ ಮಾಡಲು ನನ್ನ ಹಿಂದೆ ಇಷ್ಟು ಜನ ಬರಬೇಕಾದ್ದೇನೂ ಇಲ್ಲ. ಆ ಕೆಲಸ ಮಾಡಲು ನಾನೊಬ್ಬನೇ ಸಾಕು' ಎನ್ನುತ್ತಾ ಬೆಂಕಿಪೊಟ್ಟಣವನ್ನು ಕೈಯಲ್ಲಿ ಹಿಡಿದು ತೋರಿಸಿದರು. ವೃತ್ತಾಕಾರದಲ್ಲಿ ಮೆಟ್ಟಿಲು ಮೆಟ್ಟಿಲಾಗಿ ಕಟ್ಟಿದ ಮೂರು ಸುತ್ತಿನ ಸಿಮೆಂಟ್ ಕಟ್ಟೆ. ಅದರ ಮಧ್ಯೆ ನೆಟ್ಟಿದ್ದ ಧ್ವಜಸ್ತಂಭ. ಮೂರನೆಯ ಮೆಟ್ಟಿಲ ಮೇಲೆ ನಿಂತು ಕನ್ನಡದ ಕಹಳೆಯನ್ನು ಮೊದಲು ಮೊಳಗಿಸಿದವರು ಮ. ರಾಮಮೂರ್ತಿಯವರು. ಅಂದು ಅವರಾಡಿದ್ದು ಮಾತಲ್ಲ; ಅದು ಸಿಡಿಲು ಗುಡುಗಿನ ಆರ್ಭಟ. ಅವರು ೨೦ ನಿಮಿಷಗಳ ಕಾಲ ಮಾತನಾಡಿದರು.

ಬಳಿಕ ಮಾತನಾಡಿದವರು ನಾಡಿಗೇರ ಕೃಷ್ಣರಾಯರು. ವಾಮನಾಕಾರದ ಇವರ ಮಾತೆಂದರೆ ಹಾಸ್ಯದ ಹೊಳೆ. ಅಂದು ನಾಡಿಗೇರರು ಚಾಟಿ ಬೀಸಿದ್ದು ಅವೆನ್ಯೂ ರೋಡ್‌ನಲ್ಲಿ ಕಾಗದ, ಸೀಸದ ಕಡ್ಡಿಗಳ ಅಂಗಡಿ ಇಟ್ಟುಕೊಂಡು, ಕನ್ನಡಿಗರನ್ನು ಹೀಯಾಳಿಸಿ ಮಾತನಾಡುತ್ತಿದ್ದ ಒಬ್ಬ ತಮಿಳು ವ್ಯಕ್ತಿಯ ಮೇಲೆ. ಆ ದಿನದ ಗಂಭೀರ ವಾತಾವರಣದಲ್ಲೂ ಹಾಸ್ಯದ ಧ್ವನಿಯಲ್ಲಿಯೇ ಮಾತನಾಡಿದ ನಾಡಿಗೇರರು "ರಾಮೋತ್ಸವದ ಸಂಗೀತ ಕೇಳಿ ರಾಮ ಪ್ರತ್ಯಕ್ಷವಾಗಿ ಬಂದು, 'ಎನ್ನ ವೇಣು?' ಅಂತ

ತಮಿಳಿನಲ್ಲಿ ಕೇಳಿದನಂತೆ? ಅದಕ್ಕೆ ಅಲ್ಲಿ ಸೇರಿದ್ದ ಜನ, 'ಅಯ್ಯಾ ತಮಿಳುರಾಮ, ನಿನ್ನ ಕುರಿತು ಹಾಡೋರಿಗೆ ಕನ್ನಡದಲ್ಲಿ ಹಾಡಲಿಕ್ಕೆ ಹೇಳು. ನೀನೂ ಕನ್ನಡ ಕಲಿ' ಎಂದರಂತೆ" ಎಂದು ಹೇಳಿ ನೆರವಿಯನ್ನು ನಗಿಸುತ್ತಲೇ ಭಾಷಣ ಮುಗಿಸಿದರು.

ತರುವಾಯ ಮಾತನಾಡಿದ್ದು ಅನಕೃ. ಕನ್ನಡನಾಡು ಕಂಡ ಹತ್ತು ಮಂದಿ ಅಪ್ರತಿಮ ವಾಗ್ಮಿಗಳಲ್ಲಿ ಅನಕೃಗೆ ಪ್ರಥಮಸ್ಥಾನ ಸಲ್ಲಬೇಕು. ಅಂಥ ನಿರರ್ಗಳ ಮಾತುಗಾರಿಕೆ ಅವರದು. ಅಕುಂಠಿತ ವಿಚಾರಧಾರೆ ಅನಕೃ ಮಾತಿನ ಹೂರಣ. ರಾಮಸೇವಾ ಮಂಡಳಿಯ ಕಾರ್ಯವೈಖರಿಯ ಬಗೆಗೆ ಪ್ರತಿಭಟನೆ ಹೇಗೂ ನಡೆಯುತ್ತಿತ್ತಲ್ಲ. ಆಗ ಮಂಡಳಿಯ ಅಧ್ಯಕ್ಷರಾಗಿದ್ದವರು ಅನಕೃ ಅವರ ಅಣ್ಣ ಅ.ನ. ರಾಮರಾಯರು. ಅನಕೃ ತಮ್ಮ ಭಾಷಣದಲ್ಲಿ ಮೊದಲು ದನಿ ಎತ್ತಿದ್ದು ಸ್ವಂತ ಅಣ್ಣನ ವಿರುದ್ಧವೇ! "ಅಣ್ಣ! ಯಾತರ ಅಣ್ಣ? ಇಂಥ ಕನ್ನಡ ವಿರೋಧಿಯನ್ನು ನಾನು 'ಅಣ್ಣ' ಎಂದು ಕರೆಯೆ!" ಎಂದು ಗುಡುಗಿದರು ಅನಕೃ; ಅಣ್ಣನಿಗೆ ಧಿಕ್ಕಾರ ಹೇಳಿದರು.

ರಾಮೋತ್ಸವ ಸಂಗೀತ ಸಭೆಗಳಲ್ಲಿ ತಮಿಳುನಾಡಿನ ಸಂಗೀತಗಾರರ ಪಾರುಪತ್ಯ ಕೊನೆಗಾಣಲಿ ಎಂಬ ಹಕ್ಕೊತ್ತಾಯದಿಂದ ಪ್ರಾರಂಭಿಸಿ, ಕನ್ನಡಿಗರಿಗೆ ಸರಕಾರಿ ಉದ್ಯೋಗಗಳ ವಿಷಯದಲ್ಲಿ, ಇನ್ನಿತರ ಕ್ಷೇತ್ರಗಳಲ್ಲಿ ಆಗುತ್ತಿದ್ದ ಅನ್ಯಾಯವನ್ನು ಕೊನೆಗಾಣಿಸುವ ಮುಂದಿನ ಹೋರಾಟಕ್ಕೆ ಈ ಸಭೆ ನಾಂದಿಯಾಗಲಿ, ಎಂಬ ಧ್ಯೇಯವನ್ನು ಸಭೆಯ ಮುಂದಿಟ್ಟ ಅನಕೃ, 'ಕನ್ನಡಿಗರೇ ಎಚ್ಚೆತ್ತುಕೊಳ್ಳಿ, ನಿಮಗಾಗುತ್ತಿರುವ ವಂಚನೆಯ ವಿರುದ್ಧ ಧ್ವನಿ ಏರಿಸಿ ಮಾತನಾಡಿ. ನಿಮ್ಮೆಲ್ಲ ಹೋರಾಟಕ್ಕೆ ಬೆಂಬಲವಾಗಿ ನಾನಿದ್ದೇನೆ' ಎಂದು ನಭೋವಾಣಿ ಮೊಳಗಿಸಿದರು.

ರಣಾಂಗಣ ಸಿದ್ಧವಾಯಿತು. ೨೭ನೆಯ ದಿನಾಂಕ ಹೋಗಿ ೨೮ರಂದು ಸೂರ್ಯೋದಯವಾಯಿತು. ಯಾವ ಪತ್ರಿಕೆ ತೆಗೆದರೂ ಅನಕೃ, ಮ. ರಾಮಮೂರ್ತಿ ಭಾಷಣಗಳ ವರದಿಯೇ. ಇಂಗ್ಲಿಷ್ ಪತ್ರಿಕೆಗಳು ಅನಕೃ ಯುದ್ಧಕ್ಕೆ ಕರೆಕೊಟ್ಟರೇನೋ ಎಂಬಂತೆ ಹುಯಿಲಿಟ್ಟವು.

ಅನಕೃ ಭಾಷಣಕ್ಕೆ ಮೊಟ್ಟ ಮೊದಲ ಪ್ರತಿಕ್ರಿಯೆ ಬಂದಿದ್ದು 'ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ'ಯ ಪಿ. ಕೋದಂಡರಾಯರಿಂದ. ಈ ರಾಯರು ಸಾಮಾನ್ಯ ರಾಯರಲ್ಲ, ಆಂಗ್ಲರನ್ನೇ ಮೀರಿಸುವಂಥ ಇಂಗ್ಲಿಷ್ ಭಕ್ತ; ದೇಶಭಾಷೆಗಳ ಪರಮವೈರಿ. ಆ ಕಾಲದಲ್ಲಿ ಇಂಗ್ಲಿಷ್ ಪತ್ರಿಕೆಗಳಲ್ಲಿ ಕೋದಂಡರಾಯರ 'ವಾಚಕರ ಪತ್ರ' ಇಲ್ಲದಿದ್ದ ದಿನವೇ ಇರುತ್ತಿರಲಿಲ್ಲ. ಇಂಥ ರಾಯರು ಒಬ್ಬ ಯಕಃಶ್ಚಿತ್ ಕನ್ನಡ ಬರಹಗಾರ ಅನಕೃ ಕನ್ನಡಿಗರನ್ನು ವಹಿಸಿಕೊಂಡು ಮಾತನಾಡಿದ ಉದ್ಧಟತನವನ್ನು ಸಹಿಸಿಯಾರೆ? ಪೆನ್ನು ಕೈಗೆತ್ತಿಕೊಂಡು ಬರೆದೇಬಿಟ್ಟರು ಒಂದು ಪತ್ರವನ್ನು: 'ಭರತಖಂಡ ಬಹುಭಾಷೆಗಳ ರಾಷ್ಟ್ರ. ಇಲ್ಲಿ ಕನ್ನಡ, ತಮಿಳು ಮುಂತಾದ ಸಂಕುಚಿತ ಭಾವನೆಗಳನ್ನು ತರಬಾರದು. ಭಾಷಾವಾರು ಪ್ರಾಂತಗಳ ರಚನೆ ಮಾಡಿದ ನೆಹರೂಗೆ ಸರಿಯಾಗಿ ಬುದ್ಧಿ ಹೇಳುವವರು ಇರಲಿಲ್ಲ. ಬೆಂಗಳೂರಿನಲ್ಲಿ ಹಾಗೂ ಮೈಸೂರಿನಲ್ಲಿ ಕನ್ನಡಿಗರು ಹಾಯಾಗಿದ್ದಾರೆ. ಅಂಥವರನ್ನು ಶಾಂತಿಪ್ರಿಯ ತಮಿಳರ ಮೇಲೆ ಅನಕೃ ಎತ್ತಿಕಟ್ಟುತ್ತಿದ್ದಾರೆ. ಇದು ರಾಷ್ಟ್ರದ್ರೋಹ; ಇಂಥ

ಪ್ರಚೋದಕನನ್ನು ಬಹಿಷ್ಕರಿಸಬೇಕು. ಸಂಗೀತಕ್ಕೆ ಭಾಷೆಯಿಲ್ಲ' ಹೀಗೆಲ್ಲಾ ಹರಿದಿತ್ತು ಕೋದಂಡರಾಯರ ವಿಚಾರ ಲಹರಿ. ಅಪದ್ಧಕ್ಕೆ ಅಪ್ಪಣೆ ಎಂದರೆ ಬಾಯಿ ಹೋದ ಹಾಗೇ ಮಾತು. ಅವರು ಮಾಡಿದ್ದೂ ಅದನ್ನೇ. ಕೋದಂಡರಾಯರು ಒಳ್ಳೆ ಲಗ್ನ ನೋಡಿ ಪತ್ರಿಕೆಗೆ ಕಾಗದ ಬರೆದಿದ್ದರು ಅಂತ ಕಾಣುತ್ತದೆ. ಬೆಂಗಳೂರಿನ ತಮಿಳರೆಲ್ಲ ರಾಯರ ಬೆನ್ನಿಗೆ ನಿಂತರು. ಯಾವ ಇಂಗ್ಲಿಷ್ ಪತ್ರಿಕೆ ತೆಗೆದು ವಾಚಕರ ಕಾಲಂ ಓದಿದರೂ ಅನಕೃರನ್ನು ಟೀಕಿಸುವ, ಖಂಡಿಸುವ, ನಿಂದಿಸುವ ಬರಹಗಳೇ. ಕನ್ನಡಿಗರನ್ನು ನಿಂದಿಸಿ, ಅನಕೃ ಅವರನ್ನು ಅವಹೇಳನ ಮಾಡಿ ಇಂಗ್ಲಿಷ್ ಪತ್ರಿಕೆಗಳಿಗೆ ಕಾಗದ ಬರೆಯುವುದು ಕೆಲಜನರಿಗೆ favourite pastime (ಪ್ರಿಯವಾದ ಹವ್ಯಾಸ) ಆಗಿಹೋಯಿತು. ಅನಕೃ ಅವರನ್ನು ಸುಮ್ಮನಿರುವಂತೆ ಹೇಳಬೇಕು (ಮಾಡಬೇಕು) ಹಾಗೂ ಬೆಂಗಳೂರು ದಂಡನ್ನು ಮದರಾಸು ರಾಜ್ಯಕ್ಕೆ ಸೇರಿಸಬೇಕು ಎಂಬುದು ಎಲ್ಲ ಪತ್ರ ಲೇಖಕರ ಒಕ್ಕೊರಲಿನ ಬೇಡಿಕೆ ಆಗಿತ್ತು. ಅನಕೃ ಅವರನ್ನು ಸಮರ್ಥಿಸಿ ಕೆಲವು ಕನ್ನಡಿಗರೂ ಇಂಗ್ಲಿಷ್ ಪತ್ರಿಕೆಗಳಿಗೆ ಪತ್ರಗಳನ್ನು ಬರೆದರು.

ಪ್ರಸಿದ್ಧ ಪತ್ರಕರ್ತ ತಿರುಮಲೆ ತಾತಾಚಾರ್ಯ ಶರ್ಮರು ಆ ದಿನಗಳಲ್ಲಿ 'ಪ್ರಜಾಮತ' ಪತ್ರಿಕೆಯಲ್ಲಿ ಕಾಲಂ ಬರೆಯುತ್ತಿದ್ದರು. ಅವರು ಅನಕೃ ಅವರನ್ನು ಅತಿಶಯವಾಗಿ ಕೊಂಡಾಡಿ, ಕನ್ನಡಿಗರ ಬೇಡಿಕೆಗಳನ್ನು ಎತ್ತಿ ಹಿಡಿದು ಹತ್ತಾರು ಸಲ ಬರೆದರು. ಸಿದ್ದನಹಳ್ಳಿ ಕೃಷ್ಣಶರ್ಮರು ಅನಕೃ ಚಳವಳಿ ಪರನಿಂತು ನಾಲ್ಕಾರು ಹೇಳಿಕೆಗಳನ್ನು ಕೊಟ್ಟರು. ಇಷ್ಟರ ಹೊರತಾಗಿ ಆಗ ಬೆಂಗಳೂರಿನಲ್ಲಿದ್ದ ಯಾವ ಕನ್ನಡ ಲೇಖಕ/ಲೇಖಕಿಯೂ ಅನಕೃ ಪರ ಮಾತಾಡಲಿಲ್ಲ; ಕೆಲವರು ಹಿಂದೆ ಮೂದಲಿಸಿದರು; ಜರಿದರು. ಕನ್ನಡ ಚಳವಳಿಯನ್ನು 'ಸಂತೆ ಗಲಾಟೆ', 'ಗಲ್ಲಿ ಜಗಳ' ಎಂದದ್ದೂ ಆಯಿತು. ಇಂಗ್ಲಿಷ್ ಪತ್ರಿಕೆಗಳಂತೂ ತೆರೆದ ಬಾಯನ್ನು ಮುಚ್ಚಲೇ ಇಲ್ಲ!

ಹೀಗೆ ಅನಕೃ ಮೇಲಿನ ಗದಾಪ್ರಹಾರ ಮುಂದುವರಿಯುತ್ತಿದಂತೆ ಸ್ವಯಂ ಅನಕೃ ಅವರೇ ಇಂಗ್ಲಿಷಿನಲ್ಲಿ ಬರೆದ ಪತ್ರ ಬೆಂಗಳೂರಿನ ಎರಡು ಇಂಗ್ಲಿಷ್ ಪತ್ರಿಕೆಗಳಲ್ಲಿ ಪ್ರಕಟವಾಯಿತು. ಅದರ ಕೆಲವು ಭಾಗಗಳು ನನಗೆ ಈಗಲೂ ಬಾಯಿಗೆ ಬರುತ್ತವೆ. ತಮಿಳು ಸಂಗೀತಗಾರರಿಗೆ ಅನಕೃ ಕಿವಿಮಾತು ಹೀಗಿತ್ತು. "The Tamil Musicians, if they are real artists, must eschew institutions like the Sri Ramasevamandali, which have literally smothered Kannadigas and their musical talent." ("ತಮಿಳು ಸಂಗೀತಗಾರರು ನಿಜವಾದ ಕಲಾವಿದರೇ ಆಗಿದ್ದಲ್ಲಿ, ವಸ್ತುತಃ ಕನ್ನಡಿಗರ ಹಾಗೂ ಕನ್ನಡದ ಸಂಗೀತಗಾರರ ಕತ್ತು ಹಿಸುಕುತ್ತಿರುವ ರಾಮಸೇವಾ ಮಂಡಳಿಯಂಥ ಸಂಸ್ಥೆಗಳನ್ನು ವರ್ಜಿಸಬೇಕು."

ಅದೇ ಪತ್ರದ ಇನ್ನೊಂದು ವಾಕ್ಯ

"The Tamil Musicians, instead of basking under the sunshine of their glory, should refrain from accepting invitations to sing in Karnataka" ("ತಮಿಳು ಸಂಗೀತಗಾರರು ತಾವು ಗಳಿಸಿರುವ ಕೀರ್ತಿಯ ಛತ್ರಿಯಡಿ ಮೈಮರೆಯುವ

ಕೆಲಸವನ್ನು ಬಿಟ್ಟು, ಕರ್ನಾಟಕದಲ್ಲಿ ಹಾಡಬೇಕೆಂದು ಬರುವ ಆಹ್ವಾನಗಳನ್ನು ಒಪ್ಪಿಕೊಳ್ಳದೆ ದೂರ ಇರಬೇಕು.")

ಅನಕೃ ವಿರುದ್ಧ ಬರೆಯಲಾಗಿದ್ದ ಕಾಗದಗಳ ಪೈಕಿ ಒಂದರಲ್ಲಿ ಒಬ್ಬರು 'ಅನಕೃಗೆ ರಾಷ್ಟ್ರದ ಬಗೆಗೆ ಕಾಳಜಿಯೇ ಇಲ್ಲ. ಅವರು ರಾಷ್ಟ್ರೀಯತೆಯನ್ನು ಪ್ರತಿಪಾದಿಸುತ್ತಿಲ್ಲ. ಅವರು ದೇಶದ್ರೋಹಿ' ಎಂದೆಲ್ಲಾ ಬರೆದಿದ್ದರು. ಅದಕ್ಕೆ ಅನಕೃ ಉತ್ತರ:

"If the demand of Kannadigas for their legitimate rights is dubbed as antinational, woe be unto that type of nationalism where the big fish devours the small fish" ("ತಮಗೆ ನ್ಯಾಯವಾಗಿ ಸಲ್ಲಬೇಕಾದ್ದು ಸಲ್ಲಲಿ ಎಂದು ಕನ್ನಡಿಗರು ಕೇಳುವುದನ್ನು ರಾಷ್ಟ್ರದ್ರೋಹ ಎನ್ನುವುದಾದರೆ, ದೊಡ್ಡ ಮೀನು ಚಿಕ್ಕ ಮೀನನ್ನು ನುಂಗುವ ರೀತಿಯ ರಾಷ್ಟ್ರೀಯತೆಗೆ ಸಂತಾಪವಿರಲಿ.") "All this tall talk about emotional integration is meaningless" ("ಭಾವೈಕ್ಯವನ್ನು ಕುರಿತ ಈ ಉದ್ದುದ್ದನೆ ಮಾತೆಲ್ಲ ಅರ್ಥಹೀನ") ಎಂದೂ ಅನಕೃ ತಮ್ಮ ಟೀಕಾಕಾರರಿಗೆ ಸ್ಪಷ್ಟವಾಗಿ ಹೇಳಿದ್ದರು.

ಅನಕೃ ಇಂಗ್ಲಿಷ್‌ನಲ್ಲಿ ಬರೆದ ಈ ಪತ್ರ ಉರಿಯುವ ಬೆಂಕಿಗೆ ತುಪ್ಪ ಸುರಿದಂತಾಯಿತು. ವಿಶೇಷವಾಗಿ ಬೆಂಗಳೂರಿನ ತಮಿಳರು ಕನಲಿ ಕೆಂಡವಾದರು. ಮತ್ತೆ ಶುರುವಾಯಿತು, ಅನಕೃ ವಿರುದ್ಧ ಬರೆಯಲಾದ ಪತ್ರಗಳ ಮಳೆ. ಈ ಸಂದರ್ಭದಲ್ಲಿ ನಾನು ಕೂಡ ಸುಮಾರು ೩೧ ಪತ್ರಗಳನ್ನು ಇಂಗ್ಲಿಷ್‌ನಲ್ಲಿ ಬರೆದು ಬೆಂಗಳೂರಿನ ಇಂಗ್ಲಿಷ್ ಪತ್ರಿಕೆಗಳಿಗೆ ಕಳುಹಿಸಿದೆ. ಅವುಗಳಲ್ಲಿ ಹದಿಮೂರು ಪತ್ರಗಳು ಪ್ರಕಟವಾದವು ಅತ್ಯಂತ ಚಿಕ್ಕಪತ್ರದಲ್ಲಿ ಏಳುವಾಕ್ಯಗಳಿದ್ದವು. ತುಂಬ ದೊಡ್ಡದು ಎಂಬ ಪತ್ರ ಹದಿನೈದು ವಾಕ್ಯಗಳದ್ದಾಗಿತ್ತು. ನನ್ನ ಒಂದು ಪತ್ರದಲ್ಲಿ ಕನ್ನಡ ಚಳವಳಿಯ ಬಗೆಗೆ ಇಂಗ್ಲಿಷ್ ಪತ್ರಿಕೆಗಳ ದುಷ್ಟ ಧೋರಣೆಯ ಬಗ್ಗೆಯೇ ಬರೆದಿದ್ದೆ. ಆ ಪತ್ರ ಪ್ರಕಟವಾಗಲಿಲ್ಲ ಎಂದು ಬೇರೆ ಹೇಳಬೇಕೆ? ಉಳಿದಂತೆ ನಾನು ಬರೆದ ಪತ್ರಗಳಲ್ಲಿ ಅನಕೃ ವಿಚಾರಗಳ ಸಮರ್ಥನೆ ಇರುತ್ತಿತ್ತು.

ಈ ಮಧ್ಯೆ ಅನಕೃ–ಮ.ರಾಮಮೂರ್ತಿ ಜೋಡಿ ಬೆಂಗಳೂರಿನ ಮಲ್ಲೇಶ್ವರ ಶೇಷಾದ್ರಿಪುರ, ಚಾಮರಾಜಪೇಟೆ, ಗಾಂಧಿಬಜಾರ್ ಮುಂತಾದೆಡೆಗಳಲ್ಲಿ ಬೀದಿ ಸಭೆಗಳನ್ನು ನಡೆಸಿ ಜನರಲ್ಲಿ ಕನ್ನಡದ ಬಗೆಗೆ ನವಚೈತನ್ಯ ತುಂಬಿದ್ದರು.

'ಕನ್ನಡ ಸಿನಿಮಾಗಳನ್ನೇ ನೋಡಿ.' 'ಕನ್ನಡ ಪತ್ರಿಕೆಗಳನ್ನೇ ಓದಿ.' 'ವ್ಯವಹಾರದಲ್ಲಿ ಕನ್ನಡವನ್ನೇ ಬಳಸಿ.' 'ಕನ್ನಡಿಗ ವ್ಯಾಪಾರಗಾರರು ಇಟ್ಟಿರುವ ಅಂಗಡಿಗಳಲ್ಲಿ ಮಾತ್ರ ವ್ಯಾಪಾರ ಮಾಡಿ' ಇವು ಸಾಮಾನ್ಯವಾಗಿ ಅನಕೃ ಭಾಷಣದ ಪ್ರಮುಖ ಅಂಶ ಗಳಾಗಿರುತ್ತಿದ್ದವು. ವಿವಿಧ ಕ್ಷೇತ್ರಗಳಲ್ಲಿ, ಮುಖ್ಯವಾಗಿ ಕೇಂದ್ರ ಸರ್ಕಾರದ ಉದ್ಯೋಗ ಗಳನ್ನು ನೀಡುವ ವಿಚಾರದಲ್ಲಿ, ಕನ್ನಡಿಗರಿಗಾಗುತ್ತಿದ್ದ ಅನ್ಯಾಯವನ್ನು ಅನಕೃ ಮ.ರಾಮಮೂರ್ತಿ ಇಬ್ಬರೂ ಅಂಕಿ ಅಂಶಗಳ ಸಮೇತ ಎತ್ತಿ ಹಿಡಿಯುತ್ತಿದ್ದರು. "ಕನ್ನಡಿಗರಿಗೆ ಉದ್ಯೋಗ ಕೊಡುವುದು ನಿಮಗೆ ಆಗುವುದಿಲ್ಲವಾದರೆ ನಿಮ್ಮ ಐ.ಟ.ಐ.

ಎಚ್.ಎಂ.ಟಿ., ಮುಂತಾದ ಕಾರ್ಖಾನೆಗಳನ್ನು ಮದರಾಸಿಗೆ ತೊಗೊಂಡು ಹೋಗಿಬಿಡಿ" ಎಂದು ಮ. ರಾಮಮೂರ್ತಿ ಹಲವು ಸಲ ಗುಡುಗಿದ್ದರು.

ರಾಮಸೇವಾ ಮಂಡಳಿಯ ವಿರುದ್ಧ ನಡೆದ ಪ್ರತಿಭಟನೆಯ ದಿನ ಅನಕೃ ಮ.ರಾಮಮೂರ್ತಿ ಸಭೆಯಲ್ಲಿ ಇದ್ದವರು ಇನ್ನೂರು-ಮುನ್ನೂರು ಮಂದಿಯಾದರೆ ಬರುಬರುತ್ತಾ ಈ ಇಬ್ಬರ ಬೀದಿ ಸಭೆಗಳಿಗೆ ಎರಡು ಸಾವಿರ-ಮೂರು ಸಾವಿರ ಜನ ಸೇರಲಾರಂಭಿಸಿದ್ದರು. ಅನಕೃ, ಮ.ರಾಮಮೂರ್ತಿ ಜೊತೆಯಲ್ಲಿ ನಾಡಿಗೇರ ಕೃಷ್ಣರಾಯರು ಇದ್ದೇ ಇರುತ್ತಿದ್ದರು; ಇದ್ದು ನಗೆ ಭಾಷಣ ಮಾಡುತ್ತಿದ್ದರು. ಶ್ರೀ ಭಾರತೀಂದ್ರ ಸ್ವಾಮಿ ಮೈ.ಸು. ನಟರಾಜ್ ಮುಂತಾದ ಪ್ರಮುಖರು ಆಮೇಲಾಮೇಲೆ ಅನಕೃ ಜೊತೆ ಸೇರಿಕೊಂಡರು.

ಇಂಗ್ಲಿಷ್ ಪತ್ರಿಕೆಗಳಲ್ಲಿ ಅನಕೃ ಚಳವಳಿಯ ವಿರುದ್ಧ ಬರುತ್ತಿದ್ದ ಪತ್ರಗಳ ಸಂಖ್ಯೆ ಇಳಿಮುಖವಾಗುತ್ತಿದ್ದಂತೆ 'ಮ್ಯೂಸಿಕ್ ಲವರ್' ಎಂಬೊಬ್ಬರು ಅನಕೃ ಅವರನ್ನು ಎಗ್ಗು ಸಿಗ್ಗು ಇಲ್ಲದೆ ನಿಂದಿಸಿ ಇಂಗ್ಲಿಷ್ ಪತ್ರಿಕೆಗಳಲ್ಲಿ ಒಂದು ಪತ್ರ ಬರೆದರು. ಈ ಪತ್ರ ತುಂಬ ವಿಷಪೂರಿತವಾಗಿತ್ತು. ಪತ್ರ ಬರೆದಿದ್ದ ಸಂಗೀತಪ್ರೇಮಿ ತಮ್ಮ ಹೊಟ್ಟೆಯಲ್ಲಿದ್ದ ವಿಷವನ್ನೆಲ್ಲಾ ಅನಕೃ ಮೇಲೆ ಕಾರಿದ್ದರು. ಮ್ಯೂಸಿಕ್ ಲವರ್ ಉರುಳಿಸಿದ್ದ ಆಣಿಮುತ್ತುಗಳಲ್ಲಿ ಕೆಲವು ಹೀಗಿದ್ದವು. 'ಕನ್ನಡಭಾಷೆ ಸಂಗೀತಕ್ಕೆ ಹೇಳಿ ಮಾಡಿಸಿದ್ದಲ್ಲ ಹಾಗೂ ಕನ್ನಡವು ಒಳ್ಳೆಯ ವಾಗ್ಗೇಯಕಾರರನ್ನು ಸೃಷ್ಟಿಸಿಯೇ ಇಲ್ಲ. ಕರ್ನಾಟಕ ಸಂಗೀತ ಸಾಮ್ರಾಜ್ಯದ ಕೀರ್ತಿಶಿಖರ ವೆಂದರೆ ತ್ಯಾಗರಾಜರು. ಮ್ಯೂಸಿಕಲ್ ಟ್ರಿನಿಟಿ (ಸಂಗೀತ ಕ್ಷೇತ್ರದ ತ್ರಿಮೂರ್ತಿಗಳು) ಎನಿಸಿಕೊಂಡ ತ್ಯಾಗರಾಜ, ದೀಕ್ಷಿತ ಹಾಗೂ ಶಾಮಾಶಾಸ್ತ್ರಿಗಳಿಂದಷ್ಟೇ ಕರ್ನಾಟಕ ಸಂಗೀತವು ನಿಂತಿದೆಯೇ ಹೊರತು, ಕನ್ನಡದ ಯಾವ ಕೃತಿ ರಚನಕಾರರಿಂದಲೂ ಅಲ್ಲ. ಕನ್ನಡ ಕನ್ನಡ ಎಂದು ಬೊಬ್ಬೆ ಹೊಡೆಯುವ ಜನಕ್ಕೆ ಇದೆಲ್ಲ ಗೊತ್ತೆ?'

ಈ ಪತ್ರ ಕನ್ನಡಿಗರನ್ನು ರೊಚ್ಚಿಗೆಬ್ಬಿಸಿತು. ಸಾಮಾನ್ಯವಾಗಿ ತಾಳ್ಮೆಯ ಸಾಕಾರ ಮೂರ್ತಿಯಾಗಿರುತ್ತಿದ್ದ ಅನಕೃ ಅವರನ್ನು ಈ ಪತ್ರ ರೇಗಿಸಿತು. ಅಂದ ಹಾಗೆಯೇ ಈ ಮ್ಯೂಸಿಕಲ್ ಲವರ್ ಬೇರೆ ಯಾರೂ ಆಗಿರದೆ, ಕನ್ನಡದ ಪ್ರಸಿದ್ಧ ನಾಟಕಕಾರರೊಬ್ಬರ ಭಾವ ಮೈದುನ ಎಂದು ಆಮೇಲೆ ಗೊತ್ತಾಯಿತು. ಬೆಂಗಳೂರು ಅಥವಾ ಕನ್ನಡ ನಾಡಿನಲ್ಲೇ ಹುಟ್ಟಿಬೆಳೆದಿದ್ದ ಈ 'ಮ್ಯೂಸಿಕ್ ಲವರ್' ಉಸಿರಾಡುವ ಗಾಳಿಯನ್ನು ಕೂಡ ಮದರಾಸಿನಿಂದಲೇ ತರಿಸಿಕೊಳ್ಳುತ್ತಿದ್ದರು! ಕನ್ನಡ ಎಂಬ ಶಬ್ದವು ಕಿವಿಗೆ ಬೀಳದಂತೆ ಕಿವಿಗಳಿಗೆ ಘಂಟೆ ಕಟ್ಟಿಕೊಂಡುಬಿಟ್ಟಿದ್ದರು. ಇವರ ಮನೆ ಇದ್ದದ್ದು ಬಸವನಗುಡಿಯಲ್ಲಿ!

'ಮ್ಯೂಸಿಕ್ ಲವರ್' ಪತ್ರಕ್ಕೆ ಉತ್ತರವಾಗಿ ಅನಕೃ ಇಂಗ್ಲಿಷ್‌ನಲ್ಲಿ ಮತ್ತೊಂದು ಪತ್ರವನ್ನು ಪತ್ರಿಕೆಗಳಿಗೆ ಬರೆದರು. ಅದು ಪ್ರಾರಂಭವಾಗಿದ್ದುದು ಹೀಗೆ.

"The letter of 'Music Lover' who has no compunction in indulging in innuendo while concealing his identity, needs a rejoinder in the interests of Kannadigas and Tamil people. This Tirade ill becomes the Tamil people and its effect on both sides can be disastrous"

("ತಮ್ಮ ಹೆಸರನ್ನು ಮರೆಮಾಚಿ, ವ್ಯಕ್ತಿನಿಂದೆಯಲ್ಲಿ ತೊಡಗಲು ಸ್ವಲ್ಪವೂ ಹೇಸದ ಸಂಗೀತ ಪ್ರೇಮಿಯ ಪತ್ರಕ್ಕೆ ಮಾರುತ್ತರ ನೀಡಬೇಕಾಗಿದೆ. ತಮಿಳನ ಈ ವರ್ತನೆಯ ಪರಿಣಾಮ ಉಭಯ ಭಾಷೆಗಳವರ ಮೇಲೂ ತೀವ್ರತರದ್ದಾಗಬಹುದು".)

ಅದೇ ಪತ್ರದ ಇನ್ನೊಂದೆಡೆ ಕರ್ನಾಟಕ ಸಂಗೀತವನ್ನು ಕುರಿತು ಅನಕೃ ಹೀಗೆ ಬರೆದಿದ್ದರು. "Classical Karnataka Music is in the melting pot. Can the music lover produce composers like Mysore Vasudevacharya" ("ಶಾಸ್ತ್ರೀಯ ಕರ್ನಾಟಕ ಸಂಗೀತವಿಂದು ಕರಗುತ್ತಿದೆ. ಮೈಸೂರು ವಾಸುದೇವಾಚಾರ್ಯ ರಂಥ ಕೀರ್ತನ ರಚನಕಾರರನ್ನು ಸಂಗೀತ ಪ್ರೇಮಿ ಈ ಹೊತ್ತು ಸೃಷ್ಟಿಸಿಯಾರೆ?"

'ಮ್ಯೂಸಿಕ್ ಲವರ್'ರು ತಮ್ಮ ಪತ್ರದಲ್ಲಿ ಒಂದೆಡೆ ಪಿಟೀಲು ಚೌಡಯ್ಯನವರ ಹೆಸರನ್ನು ತಂದಿದ್ದರು. ಅದಕ್ಕೆ ಪ್ರತಿಕ್ರಿಯಿಸುತ್ತಾ ಅನಕೃ ಬರೆದಿದ್ದುದು ಹೀಗಿತ್ತು: "Much as we admire the musical talents of Chowdaiah, we Kannadigas are not very proud of him. Chowdaiah by joining hands with Tamil muscians has through out his life blocked the way of many a Kannada musician. The Tamil musicians should not allow this abominable state of affairs to continue." ("ಚೌಡಯ್ಯನವರ ಸಂಗೀತ ಪ್ರತಿಭೆಯ ಬಗೆಗೆ ಕನ್ನಡಿಗರಾದ ನಮಗೆ ಅಭಿಮಾನವಿದೆಯಾದರೂ, ಅವರ ಬಗೆಗೆ ನಾವು ಎಷ್ಟು ಮಾತ್ರವೂ ಹೆಮ್ಮೆಪಡುವುದಿಲ್ಲ. ಏಕೆಂದರೆ, ಈ ಚೌಡಯ್ಯನವರು ತಮಿಳು ಸಂಗೀತಗಾರರ ಜೊತೆ ಸೇರಿಕೊಂಡು ಅನೇಕಾನೇಕ ಕನ್ನಡ ಸಂಗೀತ ಪ್ರತಿಭೆಗಳ ದಾರಿಯಲ್ಲಿ ಮುಳ್ಳಾಗಿ ನಿಂತಿರುವುದಿದೆ. ತಮಿಳು ಸಂಗೀತಗಾರರು ಇಂಥ ಅಸಹ್ಯಕರ ಪರಿಸ್ಥಿತಿ ಮುಂದುವರಿಯಲು ಬಿಡಬಾರದು.")

ಕೊನೆಯದಾಗಿ ಅನಕೃ ಮ್ಯೂಸಿಕ್ ಲವರ್‌ನಂಥ ತಮಿಳರಿಗೆ ನೀಡಿದ್ದ ಎಚ್ಚರಿಕೆ:

"It is time music lover and men like him understood that the Kannadigas have awakened from their deep slumber and are prepared to defend their interest at all costs." ("ಮ್ಯೂಸಿಕ್ ಲವರ್ ಹಾಗೂ ಅವರಂಥವರು ಇಷ್ಟನ್ನು ಅರ್ಥಮಾಡಿಕೊಳ್ಳಲು ಇದು ಸಕಾಲ. ಕನ್ನಡಿಗರು ತಮ್ಮ ಕುಂಭಕರ್ಣ ನಿದ್ದೆಯಿಂದ ಎಚ್ಚೆತ್ತಿದ್ದಾರೆ. ಅಷ್ಟೇ ಅಲ್ಲ, ಎಂಥ ಬೆಲೆಯನ್ನಾದರೂ ತೆತ್ತು ತಮ್ಮ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಲು ಸಿದ್ಧರಿದ್ದಾರೆ.")

ಅನಕೃ ಇಂಗ್ಲಿಷ್ ಭಾಷೆಯಲ್ಲಿ ಬರೆದ ಈ ಎರಡು ಚರಿತ್ರಾರ್ಹ ಪತ್ರಗಳು ನನ್ನ ಬಳಿ ಬಹುಕಾಲ ಇದ್ದವು. ಮನೆ ಬದಲಾಯಿಸುವಾಗಲೋ ಇನ್ಯಾವ ಸಮಯದಲ್ಲೋ ಕಳೆದುಹೋಗಿವೆ. ಈ ಲೇಖನದಲ್ಲಿ ಉದ್ಧರಿಸಲಾಗಿರುವ ಭಾಗಗಳನ್ನು ನೆನಪಿನಿಂದ ಹೆಕ್ಕಿ ತೆಗೆದಿದ್ದೇನಾದರೂ ಉಧೃತ ಭಾಗಗಳು ನೂರಕ್ಕೆ ತೊಂಬತ್ತೈದು ಭಾಗ ಸರಿಯಾಗಿವೆ. ಇಷ್ಟಾದರೂ ದಾಖಲೆಯಲ್ಲಿ ಉಳಿಯಲೆಂದು ಈ ಲೇಖನದಲ್ಲಿ ಬಳಸಿದ್ದೇನೆ.

ಇಂಗ್ಲಿಷ್ ಪತ್ರಿಕೆಗಳಲ್ಲಿ ಅನಕೃ ಅವರ ಪತ್ರಗಳು ಪ್ರಕಟವಾದ ಹಿಂಚು ಮುಂಚು ಡಿಪಿಜಿಯವರು ಪತ್ರಿಕೆಗಳಿಗೆ ಇಂಗ್ಲಿಷ್‌ನಲ್ಲಿ ಒಂದು ಪತ್ರ ಬರೆದು ವಿಶಾಲ ಕರ್ನಾಟಕಕ್ಕೆ

ಮೈಸೂರು ಎಂಬ ಹೆಸರೇ ಇರಬೇಕೆಂದು ಒತ್ತಾಯ ಮಾಡಿದ್ದರು. ಅವರು ಕರ್ನಾಟಕ ಏಕೀಕರಣವನ್ನು ಒಪ್ಪಿಕೊಂಡಿರಲಿಲ್ಲ. ಅಷ್ಟೇ ಅಲ್ಲ ಕರ್ನಾಟಕ ಎಂಬ ಹೆಸರೇ ಅವರಿಗೆ ರುಚಿಸಿರಲಿಲ್ಲ. "The interests of the state as a whole must not be subordinated to what is merely a provincial attribute." ("ಇಡೀ ರಾಜ್ಯದ ಹಿತಾಸಕ್ತಿಗಳನ್ನು ಕೇವಲ ಪ್ರಾಂತೀಯವಾದ ಲಕ್ಷಣವೊಂದರ ಅಡಿಯಾಳನ್ನಾಗಿ ಮಾಡಬಾರದು") ಎಂದು ಬರೆದಿದ್ದ ಡಿವಿಜಿ "We as a people do not have the virtue of letting sleeping dogs lie" ("ಒಂದು ಜನಾಂಗವಾಗಿ ನಮಗೆ ನಿದ್ರಿಸುವ ನಾಯಿಯನ್ನು ಎಬ್ಬಿಸಬಾರದೆಂಬ ಮಾತಿನ ಪರಿ ತಿಳಿಯದು") ಎಂದೂ ಬರೆದಿದ್ದರು.

ಹಿರಿರ ಕಾಲದ ಕನ್ನಡ ಚಳವಳಿಯ ದಿನಗಳಲ್ಲಿ ಬಂದ ಇಂಗ್ಲಿಷ್ ಪತ್ರಗಳ ಕಥೆಯನ್ನು ಇಲ್ಲಿಗೆ ನಿಲ್ಲಿಸಿ, ಕನ್ನಡ ಲೇಖನಗಳ ಕಡೆ ಹೊರಳಬಹುದು.

ಮ. ರಾಮಮೂರ್ತಿಯವರ ಸಂಪಾದಕತ್ವದಲ್ಲಿ 'ಕನ್ನಡ ಯುವಜನ' ಎಂಬ ಹೆಸರಿನ ವಾರಪತ್ರಿಕೆಯೊಂದು ಹೊರಡುತ್ತಿತ್ತು. ಇದರಲ್ಲಿನ ಬಹುಪಾಲು ಲೇಖನಗಳು ಅವರವೇ ಆಗಿರುತ್ತಿದ್ದವು. ಕನ್ನಡಕ್ಕೆ ಸಂಬಂಧಿಸಿದ ಅಂದಂದಿನ ಆಗುಹೋಗುಗಳ ವರದಿಗಳು, ಪ್ರತಿಕ್ರಿಯೆಗಳು ಪತ್ರಿಕೆಯ ತುಂಬ ಇರುತ್ತಿದ್ದವು. ಹರಿತವಾದ ಹಾಗೂ ಅಷ್ಟೇ ಪರಿಣಾಮಕಾರಿಯಾದ ಭಾಷಾಶೈಲಿ ಮ.ರಾಮಮೂರ್ತಿಯವರಿಗೆ ಒಲಿದಿತ್ತು. 'ಮುರಳಿ' ಎಂಬ ಅಂಕಿತದಲ್ಲಿ ಪತ್ರಿಕೆಗಳಲ್ಲಿ ಸಂಗೀತ ವಿಮರ್ಶೆ ಮಾಡುತ್ತಿದ್ದ ಒಬ್ಬರ ಬಗ್ಗೆ ಅವರು ಬರೆದಿದ್ದುದು ಹೀಗಿತ್ತು. "ಕರ್ನಾಟಕದಲ್ಲಿ ಸಂಗೀತ ವಿಮರ್ಶಕರಿಗೆ ಬರವಿಲ್ಲ. ಕೆಲವರು 'ಮುರಳಿ,' 'ಶಂಖ,' 'ಡೋಲು' ಎಂಬೆಲ್ಲಾ ಹೆಸರುಗಳಲ್ಲಿ ಸಂಗೀತ ವಿಮರ್ಶೆ ಬರೆಯುವ ನೆವದಲ್ಲಿ ಕನ್ನಡದ ಸಂಗೀತಗಾರರನ್ನು ತೆಗಳಿರುತ್ತಾರೆ." ಸಿಟಿ ಮಾರುಕಟ್ಟೆ ಬಳಿ ವೀಳ್ಯದ ಎಲೆ ಮಾರುವವರೊಬ್ಬರು (ತಮಿಳರೆಂದು ಹೇಳಬೇಕಾಗಿಲ್ಲ) ಕನ್ನಡಿಗರನ್ನು ಯಾವ ಮಾತಿಗೋ ನಿಂದಿಸಿದ್ದರು. ಈ ಕುರಿತ ಲೇಖನಕ್ಕೆ ಮ.ರಾಮಮೂರ್ತಿ ಕೊಟ್ಟಿದ್ದ ತಲೆಬರಹ: 'ವೀಳ್ಯದ ಎಲೆ ವರ್ತಕರೊಬ್ಬರ ಪಿಚಕಾರಿ.'

ಜಿ. ವೆಂಕಟಾಚಲಂ ಎಂಬೊಬ್ಬ ಕಲಾವಿಮರ್ಶಕರು ಯಥಾಪ್ರಕಾರ ಇಂಗ್ಲಿಷ್‌ನಲ್ಲಿ ಪತ್ರಿಕೆಗಳಿಗೆ ಒಂದು ಪತ್ರ ಬರೆದು, "ಕನ್ನಡ ಸಂಸ್ಕೃತಿ ಎಂಬುದೊಂದಿದೆಯೆ? ಇದ್ದರೆ ಅದರ ಸ್ವರೂಪ ಏನು?" ಎಂದು ಕೇಳಿ ಕನ್ನಡಿಗರನ್ನು ಕೆಣಕಿದ್ದರು. ಇದಾದ ಒಂದೆರಡು ದಿನಗಳ ತರುವಾಯ ನಡೆದ ಜೀಡಿ ಸಭೆಯೊಂದರಲ್ಲಿ ಮ.ರಾಮಮೂರ್ತಿಯವರ ತಂದೆ ವೀರಕೇಸರಿ ಸೀತಾರಾಮ ಶಾಸ್ತ್ರಿಗಳು ಪತ್ರ ಬರೆದವರನ್ನು ಉದ್ದೇಶಿಸಿ, "ಅಯ್ಯೋ ಪೆದ್ದೆ! ಕನ್ನಡ ಸಂಸ್ಕೃತಿಯ ಸ್ವರೂಪ ಏನು ಅಂತ ಇಂಗ್ಲಿಷ್ ಪೇಪರ್‌ನೊಳಗೆ ಬರೆದರೆ ಯಾರು ಹೇಳುತ್ತಾರೆ? ನನ್ನ ಹತ್ತಿರ ಪಾಠಕ್ಕೆ ಬಾ, ಕನ್ನಡ ಸಂಸ್ಕೃತಿ ಅಂದರೆ ಏನು ಅಂತ ತಿಳಿಸಿಕೊಡುತ್ತೇನೆ" ಎಂದು ಸವಾಲೆಸೆದಿದ್ದರು.

ಗಾಂಧಿನಗರದಲ್ಲಿ ನಡೆದ ಒಂದು ಸಭೆಯಲ್ಲಿ ಗುಬ್ಬಿ ವೀರಣ್ಣನವರು ಮಾತನಾಡಿದರು. ಸ್ವಲ್ಪ ಹೆಚ್ಚು ಕಡಿಮೆ ಎಲ್ಲ ಸಭೆಗಳು ಆರಂಭವಾಗುವ ಮೊದಲಲ್ಲಿ ಪಿ. ಕಾಳಿಂಗರಾಯರು ಕನ್ನಡ ಗೀತೆಗಳನ್ನು ಹಾಡುತ್ತಿದ್ದರು.

೧೯೬೨ರ ಮೇ ತಿಂಗಳಿನಲ್ಲಿ ಆರಂಭವಾದ ಕನ್ನಡ ಚಳವಳಿ ೧೯೬೩ರ ಕೊನೆಯ ವರೆಗೆ ತುಂಬ ಬಿರುಸಿನಿಂದಲೂ, ೧೯೬೪ರ ಮಧ್ಯಭಾಗದವರೆಗೆ ಮಂದಗತಿಯಲ್ಲೂ ಸಾಗಿತು. ೧೯೬೪ರ ಡಿಸೆಂಬರ್ ತಿಂಗಳಿನಲ್ಲಿ ಮ.ರಾಮಮೂರ್ತಿ ತೋಟದ ಜಮೀನಿನಲ್ಲಿ ಬಾವಿ ತೋಡಿಸುವಾಗ ಮಣ್ಣು ಕುಸಿದು ಮರಣಹೊಂದುವ ಹೊತ್ತಿಗೆ (ಕನ್ನಡ) ಚಳವಳಿಯ ಕಾವು ಬಹುಮಟ್ಟಿಗೆ ತಣ್ಣಗಾಗಿತ್ತು.

ಮ.ರಾಮಮೂರ್ತಿಯವರು ದುರ್ಮರಣ ಹೊಂದಿದ ಸಂದರ್ಭದಲ್ಲಿ ಅನಕೃ 'ಸುಧಾ' ಪತ್ರಿಕೆಯಲ್ಲಿ "ನಮ್ಮ ರಾಮು" ಎಂಬ ಶೀರ್ಷಿಕೆಯಡಿ ಒಂದು ಪುಟ್ಟ ಶ್ರದ್ಧಾಂಜಲಿ ಲೇಖನ ಬರೆದು, ಅದರಲ್ಲಿ "ನಮ್ಮ ರಾಮಮೂರ್ತಿಯನ್ನು ಕಳೆದುಕೊಂಡಿರುವ ನನಗೆ ನನ್ನ ಸ್ವಂತ ಮಗನನ್ನೇ ಕಳೆದುಕೊಂಡಂತಾಗಿದೆ" ಎಂದು ದುಃಖಿಸಿದರು.

ಕನ್ನಡದ ಮಟ್ಟಿಗೆ ಅರವತ್ತೆರಡರಲ್ಲಿದ್ದ ಸ್ಥಿತಿಯು, ಸಮಸ್ಯೆಗಳ ಬಹುಭಾಗ ಇನ್ನೂ ಹಾಗೇ ಇದೆ. ಆಗ ತಮಿಳರ ದರಬಾರು. ಈಗ ಉತ್ತರ ಭಾರತೀಯರ ದೌಲತ್ತು. ಒಟ್ಟಿನಲ್ಲಿ ಕನ್ನಡಿಗರಿಗೆ ಸುಖವಿಲ್ಲ.

ಕನ್ನಡ ಕಲಿಯದೆ ಬೆಂಗಳೂರಿನಲ್ಲಿ ಅಥವಾ ಕರ್ನಾಟಕದಲ್ಲಿ ಬದುಕುವುದು ಸಾಧ್ಯವಿಲ್ಲ ಎಂಬಂಥ ಸ್ಥಿತಿ ಇನ್ನೂ ನಿರ್ಮಾಣವಾಗಿಲ್ಲ. ಅನಕೃ, ಮ.ರಾಮಮೂರ್ತಿ ಯವರಂಥ ತ್ಯಾಗಶೀಲ ಮುಂದಾಳುಗಳು ಎಲ್ಲೂ ಕಣ್ಣಿಗೆ ಬೀಳುತ್ತಿಲ್ಲ.





ಅ.ನ.ಕೃ. ರೂಪಿಸಿದ ಮೌಲ್ಯಾಧಾರಿತ ಕನ್ನಡ ಚಳವಳಿ

■ ಶಾ.ಮಂ. ಕೃಷ್ಣರಾಯ

ಒಂದು ಅರ್ಥದಲ್ಲಿ ಅ.ನ.ಕೃ. ಹುಟ್ಟು ಹೋರಾಟಗಾರ. ಸ್ವಾತಂತ್ರ್ಯ ಚಳವಳಿ ನಡೆದಾಗ ಅ.ನ.ಕೃ. ಅವರ ತಂದೆ ನರಸಿಂಗರಾಯರು ಬ್ರಿಟಿಷರ ಪರವಾಗಿದ್ದರು. ಕೃಷ್ಣರಾಯರು ಶಾಲೆಯ ದಿನಗಳಲ್ಲಿ ಅಸಹಕಾರ ಆಂದೋಲನದಲ್ಲಿ ಭಾಗವಹಿಸಿ, ವಿದೇಶಿ ವಸ್ತ್ರಗಳನ್ನು ದಹನಮಾಡಿ, ಶುದ್ಧ ಖಾದಿ ವಸ್ತ್ರಧಾರಿಗಳಾದರು. ಇದು ನರಸಿಂಗರಾಯರಿಗೆ ಹಿಡಿಸಲಿಲ್ಲ. ಮನೆಯಲ್ಲಿ ದುಸುಮುಸು ನಡೆಯುತ್ತಿತ್ತು. ತಂದೆಯ ವಿರೋಧ ಕಟ್ಟಿಕೊಂಡರೇ ಹೊರತು ಅವರು ತಮ್ಮ ಮನಸ್ಸಿಗೆ ವಿರೋಧವಾಗಿ ನಡೆಯಲಿಲ್ಲ.

ನಾಟಕ ಶಿರೋಮಣಿ ವರದಾಚಾರ್ಯರು ನರಸಿಂಗರಾಯರ ಸಹಪಾಠಿ. ವರದಾಚಾರ್ಯರ ನಾಟಕಗಳಲ್ಲಿನ ಲೋಪದೋಷಗಳನ್ನು ಎತ್ತಿತೋರಿಸಿ ಲೇಖನ ಬರೆದರು. ಅವರು ತನ್ನ ತಂದೆಯ ಮಿತ್ರ ಎಂಬ ಮುಲಾಜಿಗೆ ಒಳಗಾಗಲಿಲ್ಲ.



ಒಮ್ಮೆ ಹಾಸನ ರಾಜಾರಾಯರು, ಒಂದು ಸಭೆಯಲ್ಲಿ ಕನ್ನಡ ಲೇಖಕರ ಬಗ್ಗೆ ಕೊಂಚ ತಿರಸ್ಕಾರದ ಮಾತು ಆಡಿದಾಗ, ಅವರು ತಮ್ಮ ಹೆಂಡತಿಯ ಅಣ್ಣ ಎಂಬ ಮುಲಾಜಿಗೂ ಒಳಗಾಗದೆ – ಅದೇ ಸಭೆಯಲ್ಲಿ ಪ್ರತಿಭಟಿಸಿದರು.

ಕನ್ನಡ ಸಾಹಿತ್ಯಕ್ಕೆ ಪ್ರಗತಿಶೀಲ ದೃಷ್ಟಿಕೋನ ಅಗತ್ಯವೆಂದು ಅನಿಸಿದಾಗ 'ಪ್ರಗತಿಶೀಲ ಸಂಘ' ಕಟ್ಟಿಕೊಂಡು ಕರ್ನಾಟಕದ ತುಂಬ ಸುತ್ತಾಡಿ, ಪ್ರಚಾರ ಮಾಡಿ, ಹಿರಿಯ ಸಾಹಿತಿಗಳ ವಿರೋಧವನ್ನೂ ಲೆಕ್ಕಿಸದೆ, ಆಧುನಿಕ ಕನ್ನಡಕ್ಕೆ ಹೊಸ ಆಯಾಮ ನೀಡಲು ಪ್ರಯತ್ನಿಸಿದರು.

ಕರ್ನಾಟಕ ಏಕೀಕರಣವಾಗಬೇಕು, ಅಖಂಡ ಕರ್ನಾಟಕವಾಗಬೇಕೆಂದು ಕೃಷ್ಣರಾಯರು ಕರ್ನಾಟಕದ ಮೂಲೆ ಮೂಲೆ ಸುತ್ತಾಡಿ ಪ್ರಚಾರ ಮಾಡಿದರು. ಆಗ ಸಾಹಿತಿಗಳ ಒಂದು ಗುಂಪು ಮೈಸೂರುವಾದಿಗಳಾಗಿದ್ದರು. ಹಳೆಯ ಮೈಸೂರು ಪ್ರದೇಶ ಕರ್ನಾಟಕ ಏಕೀಕರಣದಲ್ಲಿ ಸೇರಬಾರದೆಂದು ಬಯಸುತ್ತಿದ್ದ ಕಾಲದಲ್ಲಿ, ಅ.ನ.ಕೃಷ್ಣರಾಯರು ಅಖಂಡ ಕರ್ನಾಟಕದ ಸ್ವಪ್ನವನ್ನು ಸಾಕಾರಗೊಳಿಸಲು ಪ್ರಯತ್ನಿಸಿದರು.

ಮುಂಬಯಿಯಲ್ಲಿ ಒಮ್ಮೆ ಮಾಮಾವರೇರಕರ್‌ರ ಅಧ್ಯಕ್ಷತೆಯಲ್ಲಿ ಸಭೆ ಸೇರಿದಾಗ ಅ.ನ.ಕೃಷ್ಣರಾಯರು ಕನ್ನಡದ ಇತಿಹಾಸ ಹೇಳಿ, ಮಹಾರಾಷ್ಟ್ರದಲ್ಲಿ ಕನ್ನಡ ಪ್ರದೇಶಗಳು ಎಷ್ಟಿವೆ, ಕನ್ನಡ ಸಂಸ್ಕೃತಿಯ ಬೇರು ಎಲ್ಲೆಲ್ಲಿ ಕಾಣುತ್ತವೆ ಎಂಬುದನ್ನು ವಿವರಿಸಿದಾಗ ದೊಡ್ಡ ಗಲಭೆಯಾಗಿ ಅವರಿಗೆ ಜನ ಹೊಡೆಯಲು ಮುನ್ನುಗ್ಗಿದರೂ, ರಾಯರು ಅಂಜದೆ ತಮ್ಮ ವಾದ ಮಂಡಿಸಿದರು. ಕನ್ನಡಕ್ಕೆ ಕುತ್ತು ಬಂದಾಗಲೆಲ್ಲ ಅ.ನ.ಕೃಷ್ಣರಾಯರು ಮುಂಚೂಣಿಯಲ್ಲಿ ನಿಂತು ವಿರೋಧಿಗಳ ಬಾಯಿ ಮುಚ್ಚಿಸಿದ್ದಾರೆ. ಕನ್ನಡ ನಾಡು ನುಡಿಗೆ ಆಗುತ್ತಿದ್ದ ಅನ್ಯಾಯವನ್ನು ಕಂಡು ಕೆರಳಿದ ಅವರು, ಬಹಿರಂಗವಾಗಿ ವೇದಿಕೆಯ ಮೇಲೆ ಭಾಷಣ ಮಾಡುತ್ತಿದ್ದರು, ಪತ್ರಿಕೆಗಳಲ್ಲಿ ಬರೆಯುತ್ತಿದ್ದರು. ಅವರು ಉಸಿರಾಡುತ್ತಿದ್ದುದೇ 'ಕನ್ನಡದ ಸ್ವಾಭಿಮಾನ' ಎಂದಿದ್ದಾರೆ ಪ್ರೊ. ಎಲ್.ಎಸ್. ಶೇಷಗಿರಿರಾಯರು.

೧೯೬೦ರಲ್ಲಿ ಮಣಿಪಾಲದಲ್ಲಿ ಅ.ನ.ಕೃ. ಅಧ್ಯಕ್ಷತೆಯಲ್ಲಿ ೪೨ನೆಯ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಿತು. ಅವರ ಅಧ್ಯಕ್ಷೀಯ ಭಾಷಣದಲ್ಲಿ ಕನ್ನಡ ಚಳವಳಿಯ ಹೊಳಹುಗಳು ಕಾಣುತ್ತವೆ. ಅಲ್ಲಿ ಕನ್ನಡ ನಾಡು ನುಡಿಯ ಸಮಸ್ಯೆಗಳನ್ನೂ ಪ್ರಸ್ತಾಪಿಸಿದ್ದಾರೆ.

ಬೆಂಗಳೂರಿನಲ್ಲಿ ಅನ್ಯಭಾಷಿಕರ ಹಾವಳಿ ಜಾಸ್ತಿಯಾದಾಗ, ಕನ್ನಡ ಪುಸ್ತಕ-ಪತ್ರಿಕೆಗಳ ಮಾರಾಟ ಕಡಿಮೆಯಾದಾಗ, ಕನ್ನಡ ಚಲನಚಿತ್ರಗಳಿಗಿಂತ ಇತರ ಭಾಷೆಯ ಚಲನಚಿತ್ರಗಳೇ ಹೆಚ್ಚು ಪ್ರದರ್ಶಿತವಾಗುತ್ತಿದ್ದಾಗ, ಕನ್ನಡ ಸಂಗೀತಗಾರರಿದ್ದರೂ ಅವರನ್ನು ಉಪೇಕ್ಷಿಸಿ, ತಮಿಳುನಾಡಿನ ಕಲಾವಿದರಿಗೆ ಆದ್ಯತೆ ನೀಡುತ್ತಿದ್ದಾಗ ಅ.ನ.ಕೃಷ್ಣರಾಯರು ಕನ್ನಡ ಉಳಿಸುವ ಚಳವಳಿ ಕೈಗೆತ್ತಿಕೊಂಡರು. ಆರಂಭದಲ್ಲಿ ಇವರೊಂದಿಗೆ ಕೋಣಂದೂರು ಲಿಂಗಪ್ಪ, ಬಂದಗದ್ದೆ ರಮೇಶ, ಡಿ.ಕೆ. ಮೂರ್ತಿ, ಮೈ.ಸು. ನಟರಾಜ್ ಸೈಕಲ್ ಸುಬ್ಬರಾವ್, ನಾ.ಕೃ. ಸತ್ಯನಾರಾಯಣ, ನಾಡಿಗೇರ ಕೃಷ್ಣರಾವ್ ಮ.ರಾಮಮೂರ್ತಿ, ಬೆ.ನಿ. ಈಶ್ವರಪ್ಪ, ಪ್ರೊ.ಜಿ.ಕೆ. ಅನಂತಸ್ವಾಮಿ, ಮೈ.ಸು. ಶೇಷಗಿರಿರಾವ್ ಮನು ಪಾಟೀಲ, ಸೂರ್ಯನಾರಾಯಣ ಚಡಗ, ಮಾ.ನಾ. ಚೌಡಪ್ಪ, ಶ್ರೀ ಭಾರತೀಂದ್ರ ಸ್ವಾಮಿಗಳು ಇದ್ದರು. ಕನ್ನಡ ಪರವಾಗಿದ್ದ ಎಲ್ಲ ಸಂಘ ಸಂಸ್ಥೆಗಳನ್ನೂ ಒಗ್ಗೂಡಿಸಿ 'ಸಂಯುಕ್ತರಂಗ' ಕಟ್ಟಿದರು. ಎಲ್ಲ ಸಂಘ ಸಂಸ್ಥೆಗಳನ್ನು ಒಗ್ಗೂಡಿಸಲು ಓಡಾಡಿದವರು ಕೋಣಂದೂರು ಲಿಂಗಪ್ಪ ಮತ್ತು ಮನು ಪಾಟೀಲ.

ಅದಕ್ಕೂ ಮೊದಲು ಕನ್ನಡ ಕೆಲಸ ಮಾಡಲು ಅವಕಾಶ ಸಿಗುತ್ತದೆಯೆಂಬ ಉದ್ದೇಶದಿಂದ, ಗೆಳೆಯರ ಒತ್ತಾಸೆಗೆ ಮಣಿದು ೧೯೫೬ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಚುನಾವಣೆಗೆ ನಿಂತು, ಕೇವಲ ನಾಲ್ಕು ಮತಗಳಿಂದ ಸೋತು ರಾಯರು ಮಾನಸಿಕವಾಗಿ ಅಸ್ವಸ್ಥರಾಗಿದ್ದರು. ಕನ್ನಡ ಹಿತರಕ್ಷಣೆಗಾಗಿ ಕನ್ನಡ ಹೋರಾಟದ ನೇತೃತ್ವ

ವಹಿಸಿಕೊಳ್ಳಬೇಕೆಂದು ಅಭಿಮಾನಿಗಳು ಒತ್ತಡ ತಂದರೂ ರಾಯರು ನಿರಾಸಕ್ತಿ ತೋರಿದ್ದರು. ಆದರೆ ಕಾನೂನು ಶಿಕ್ಷಣಕ್ಕಾಗಿ ಬಂದ ಕೋಣಂದೂರು ಲಿಂಗಪ್ಪನವರು ರಾಯರನ್ನು ಒಪ್ಪಿಸುವಲ್ಲಿ ಯಶಸ್ವಿಯಾಗಿದ್ದರು.

ಮೊದಲು ಕೋಣಂದೂರು ಲಿಂಗಪ್ಪನವರ ಸಾರಥ್ಯದಲ್ಲಿ 'ಕನ್ನಡ ಯುವಜನ ಸಭಾ' ಅಸ್ತಿತ್ವದಲ್ಲಿ ಬಂತು. ಅನಂತರ ಮಲ್ಲೇಶ್ವರ, ಶೇಷಾದ್ರಿಪುರ, ರಾಜಾಜಿನಗರಗಳಲ್ಲಿ ಕನ್ನಡ ಸಂಘಗಳು ಹುಟ್ಟಿಕೊಂಡವು. ಇದಕ್ಕೆ ಕಾರಣ ಅ.ನ.ಕೃಷ್ಣರಾಯರ ಪ್ರಭಾವಪೂರ್ಣ ಭಾಷಣಗಳು. ಕರ್ನಾಟಕ ಸರಕಾರವು ರಾಜ್ಯೋತ್ಸವ ಆಚರಿಸದಿದ್ದ ದಿನಗಳಲ್ಲಿ, ಅದನ್ನು ವಿಜೃಂಭಣೆಯಿಂದ ಆಚರಿಸಿ, ಕನ್ನಡಿಗರನ್ನು ಜಾಗೃತಗೊಳಿಸುವ ಪ್ರಯತ್ನ ಮಾಡಿದರು. ಕರ್ನಾಟಕ ಕುಲಪುರೋಹಿತರೆಂದೆನಿಸಿದ ಆಲೂರು ವೆಂಕಟರಾಯರು ರಾಜ್ಯೋತ್ಸವ ಸಮಾರಂಭದ ಮುಖ್ಯ ಅತಿಥಿಗಳಾಗಿದ್ದರು.

೧೯೬೧ರಲ್ಲಿ ಒಂದು ಸಂಜೆ ನಾ.ಕೃ. ಸತ್ಯನಾರಾಯಣ ಸಂಸ್ಕೃತ ಕಾಲೇಜಿನಲ್ಲಿ ಒಂದು ಸಭೆ ಆಯೋಜಿಸಿ, ಅ.ನ.ಕೃ. ಮತ್ತು ಮ. ರಾಮಮೂರ್ತಿಯವರನ್ನು ಒಂದೇ ವೇದಿಕೆಗೆ ಕರೆತಂದರು. ಈ ಸಭೆ ಮುಂದಿನ ಕನ್ನಡ ಹೋರಾಟಗಳಿಗೆ ನಾಂದಿ ಹಾಡಿತು. ಈ ಪ್ರಾರಂಭಿಕ ಚಟುವಟಿಕೆಗಳಿಂದ ಸ್ಫೂರ್ತಿ ಪಡೆದು, ಬೆಂಗಳೂರಿನ ಬಡಾವಣೆಗಳಲ್ಲಿ ಹಲವಾರು ಕನ್ನಡ ಸಂಘಗಳು ಹುಟ್ಟಿಕೊಂಡವು.

ಪ್ರತಿವರ್ಷವೂ ಚಾಮರಾಜಪೇಟೆಯ ರಾಮಸೇವಾ ಮಂಡಳಿ ಹಲವು ದಿನಗಳ ಸಂಗೀತೋತ್ಸವ ನಡೆಸುತ್ತಿತ್ತು. ಅಲ್ಲಿ ಕನ್ನಡ ಗಾಯಕರಿಗೆ ಅವಕಾಶವಿರಲಿಲ್ಲ; ಇತರ ಭಾಷಿಕರಿಗೇ ಮಣೆ ಹಾಕಲಾಗುತ್ತಿತ್ತು. ೧೯೬೨ರಲ್ಲಿ ಅದನ್ನು ಪ್ರತಿಭಟಿಸುವ ನಿರ್ಣಯ ಕೈಕೊಳ್ಳಲಾಯಿತು. ಕೊನೆಯ ದಿನ ಖ್ಯಾತ ಸಂಗೀತ ವಿದುಷಿ ಎಂ.ಎಸ್. ಸುಬ್ಬುಲಕ್ಷ್ಮಿಯವರ ಸಂಗೀತ ಕಾರ್ಯಕ್ರಮವಿತ್ತು. ಅಂದೇ ಪ್ರತಿಭಟಿಸುವುದೆಂದು ನಿರ್ಧರಿಸಿದ್ದರಿಂದ ಲಾಲ್‌ಬಾಗ್‌ನಲ್ಲಿ ಸಂಘಸಂಸ್ಥೆಗಳ ಪ್ರತಿನಿಧಿಗಳು ಸಾವಿರಾರು ಸಂಖ್ಯೆಯಲ್ಲಿ ಜಮಾಯಿಸಿದ್ದರು. ರಸ್ತೆಯ ಎರಡೂ ಬದಿಗೆ ನಿಂತ ಜನಸಮೂಹ ಮುಗಿಲು ಮುಟ್ಟುವ ಜಯಕಾರದೊಂದಿಗೆ ಮೆರವಣಿಗೆ ಹೊರಟು ಶಾಂತ ರೀತಿಯಲ್ಲಿ ಪ್ರತಿಭಟಿಸಿದರು. ಈ ಪ್ರತಿಭಟನೆ ಎಂ.ಎಸ್. ಸುಬ್ಬುಲಕ್ಷ್ಮಿಯವರನ್ನು ವಿರೋಧಿಸುವುದಾಗಿರಲಿಲ್ಲ. ಕನ್ನಡಿಗರಿಗೆ ಪ್ರಾಶಸ್ತ್ಯ ನೀಡಬೇಕೆಂಬುದಾಗಿತ್ತು. ತಮಾಷೆಯೆಂದರೆ ಆ ರಾಮಸೇವಾ ಮಂಡಳಿ ಪದಾಧಿಕಾರಿಗಳಲ್ಲಿ ಅ.ನ.ಕೃಷ್ಣರಾಯರ ಅಣ್ಣ ರಾಮರಾವ್ ಇದ್ದರು! ರಾಯರು ಅಣ್ಣನಿಗಾಗಿ ತತ್ತ್ವ ಬಿಟ್ಟುಕೊಡಲಿಲ್ಲ.

ಮರುದಿನ ಇದೊಂದು ದೊಡ್ಡ ಸುದ್ದಿಯಾಗಿ ಪತ್ರಿಕೆಗಳಲ್ಲಿ ಪ್ರಕಟವಾಯಿತು. ಕೆಲವರು ಸುಬ್ಬುಲಕ್ಷ್ಮಿಯವರನ್ನು ಅವಮಾನಿಸುವ ಸಂಚು ಎಂದು ಬಣ್ಣಕಟ್ಟಿದರು. ಆದರೆ ಅ.ನ.ಕೃಷ್ಣರಾಯರು ಮೊದಲೇ ಸದಾಶಿವಂ ಮತ್ತು ಸುಬ್ಬುಲಕ್ಷ್ಮಿಯವರಿಗೆ ಪತ್ರ ಬರೆದು '...ಇದು ಕನ್ನಡದ ಹೋರಾಟ, ನಿಮ್ಮ ವಿರುದ್ಧವಲ್ಲ' ಎಂದು ತಿಳಿಸಿದ್ದರಿಂದ ಸುಬ್ಬುಲಕ್ಷ್ಮಿಯವರೇ ಹೇಳಿಕೆ ಕೊಟ್ಟು, 'ಇದು ನ್ಯಾಯಕ್ಕಾಗಿ ಕನ್ನಡಿಗರ ಹೋರಾಟ' ಎಂದು ಹೇಳಿ ಅಪಸ್ವರಗಳಿಗೆ ತೆರೆ ಎಳೆಯಬೇಕಾಯಿತು.

ಅನಂತರ ಬೆಂಗಳೂರಿನ ಬಡಾವಣೆಗಳಲ್ಲಿ ಕನ್ನಡಿಗರನ್ನು ಜಾಗೃತಗೊಳಿಸುವ ಸಭೆಗಳನ್ನು ಏರ್ಪಡಿಸಲಾಯಿತು. ಭಾಷಣಕಾರರಲ್ಲಿ ನಾಡಿಗೇರ ಕೃಷ್ಣರಾವ್ ಮ. ರಾಮಮೂರ್ತಿ, ಮೈ.ಸು. ನಟರಾಜ್, ಬೀchi, ಜೆ.ನಿ. ಈಶ್ವರಪ್ಪ ಇರುತ್ತಿದ್ದರು. ಅ.ನ.ಕೃಷ್ಣರಾಯರ ಭಾಷಣ ಕೇಳಲು ಕನ್ನಡಾಭಿಮಾನಿಗಳು ಒಂದು ಬಡಾವಣೆಯಿಂದ ಇನ್ನೊಂದು ಬಡಾವಣೆಗೆ ಕಾಲ್ನಡಿಗೆಯಲ್ಲಿ ಹೋಗುತ್ತಿದ್ದರು. ಗಂಟೆಗಟ್ಟಲೆ ನಿಂತು ಜನ ಭಾಷಣ ಕೇಳುತ್ತಿದ್ದರು. ಒಂದೊಂದು ಸಭೆಗೆ ಹತ್ತು-ಹದಿನೈದು ಸಾವಿರ ಜನ ಸೇರುತ್ತಿದ್ದರು. ಅದೇ ಸಂದರ್ಭದಲ್ಲಿ ಇದು ಕನ್ನಡ ಹೋರಾಟಗಾರರ ಗುರುತಿನ ಲಾಂಛನವೆನ್ನುವಂತೆ. ಮ.ರಾಮಮೂರ್ತಿ ಅರಿಷಿಣ-ಕೆಂಪು ಬಣ್ಣದ ಧ್ವಜವನ್ನು ಚಾಲ್ತಿಗೆ ತಂದರು. ಅದು ಇಂದಿಗೂ ಕನ್ನಡಪರ ಹೋರಾಟಗಾರರ, ಕನ್ನಡಿಗರ ಕನ್ನಡ ಧ್ವಜವಾಗಿದೆ.

೧೯೬೩ ನವೆಂಬರ್ ೧, ೨, ೩ ಹೀಗೆ ಮೂರು ದಿನ ಸುಭಾಷ್‌ನಗರದ ಮೈದಾನದಲ್ಲಿ (ಇಂದಿನ ಕೆಂಪೇಗೌಡ ಬಸ್ ಸ್ಟ್ಯಾಂಡ್ ಇರುವ ಪ್ರದೇಶ) ಚಪ್ಪರ ನಿರ್ಮಿಸಿ ಬೃಹತ್ ಪ್ರಮಾಣದಲ್ಲಿ ರಾಜ್ಯೋತ್ಸವ ಆಚರಿಸಲಾಯಿತು. ಕನ್ನಡ ವಿದ್ಯಾರ್ಥಿಗಳು ಹೋರಾಟಗಾರರು, ಕಲಾವಿದರ ಸಹಕಾರದಿಂದ 'ಸಂಯುಕ್ತರಂಗ' (ಕನ್ನಡ ಸಂಘ-ಸಂಸ್ಥೆಗಳ ಪ್ರಾತಿನಿಧಿಕ ಸಂಸ್ಥೆ)ಕಾರ್ಯಕ್ರಮ ರೂಪಿಸಿತು. ನವೆಂಬರ್ ೧ರಂದು 'ಕನ್ನಡ ತಾಯಿ ಭುವನೇಶ್ವರಿ'ಯ ಮೆರವಣಿಗೆ ಹೊರಟಿತು. ಮುಂಚೂಣಿಯಲ್ಲಿ ಅ.ನ.ಕೃ. ಮ. ರಾಮಮೂರ್ತಿ. ನಾಡಿಗೇರ್, ಮೈ.ಸು. ನಟರಾಜ್ ಮತ್ತು ಇತರ ಕಲಾವಿದರು ಲೇಖಕರು, ಹೋರಾಟಗಾರರು, ಕನ್ನಡ ಪ್ರೇಮಿಗಳಿದ್ದರು. ಸುಭಾಷ್‌ನಗರದಿಂದ ಹೊರಟ ಮೆರವಣಿಗೆ ಅಕ್ಕಿಪೇಟೆ ಮಾರ್ಗವಾಗಿ, ಸೂಪರ್ ಟಾಕೀಸ್ ಮುಂದೆ ಹಾಯ್ದು ಚಾಮರಾಜಪೇಟೆಗೆ ಹೋಗಿ, ಸಾಹಿತ್ಯ ಪರಿಷತ್ತಿನ ಕಡೆಯಿಂದ, ಕೋಟೆ ಹೈಸ್ಕೂಲು ಬಳಸಿ ಅವಿನ್ಯೂ ರಸ್ತೆ, ಮೈಸೂರು ಬ್ಯಾಂಕ್ ಮಾರ್ಗವಾಗಿ, ಸುಭಾಷ್‌ನಗರವನ್ನು ಸೇರುತ್ತಿತ್ತು. ಕನ್ನಡದ ಉಳಿವು-ಬೆಳವಣಿಗೆಯ ಕುರಿತು ಭಾಷಣಗಳು, ಜಾನಪದ ಹಾಡು-ನೃತ್ಯ ಶಾಸ್ತ್ರೀಯ ನೃತ್ಯ ಮತ್ತು ಇತರ ಮನರಂಜನೆಯ ಕಾರ್ಯಕ್ರಮಗಳಿಂದ ಮೂರು ದಿನದ ಉತ್ಸವ ಕೊನೆಗೊಳ್ಳುತ್ತಿತ್ತು. ಇಂದಿಗೂ ನಡೆಯುವ ರಾಜ್ಯೋತ್ಸವದ ರೂಪರೇಷೆ ಹಾಕಿಕೊಟ್ಟವರು ಕನ್ನಡ ಚಳವಳಿಗಾರರು ಎಂದರೆ ಅತಿಶಯವಲ್ಲ.

೧೯೬೪-೬೫ರ ಕಾಲದಲ್ಲಿ 'ಕಾಂಚಿತಲೈವನ್' ಎಂಬ ತಮಿಳು ಚಿತ್ರ ಮೆಜೆಸ್ಟಿಕ್ ವರ್ತುಲದಲ್ಲಿದ್ದ ಗೀತಾ ಟಾಕೀಸ್‌ನಲ್ಲಿ ಪ್ರದರ್ಶನಕ್ಕೆ ಬಂತು. ಈ ಚಿತ್ರದಲ್ಲಿ ಕನ್ನಡಿಗರಿಗೆ ಅವಮಾನವಾಗುವಂತಹ ದೃಶ್ಯಗಳಿವೆಯೆಂದು ಪ್ರತಿಭಟಿಸಲು ಕೆಲವರು ಗುಂಪು ಕಟ್ಟಿಕೊಂಡು ಅ.ನ.ಕೃಷ್ಣರಾಯರಲ್ಲಿಗೆ ಬಂದರು. ಅನಕೃ ಪ್ರಚೋದಿಸಿದ್ದರೆ ಅಂದು ಉದ್ರಿಕ್ತರಾದ ಜನ ಥಿಯೇಟರಿಗೆ ಬೆಂಕಿ ಹಚ್ಚುತ್ತಿದ್ದರು. ರಾಯರು ಶಾಂತವಾಗಿ "ಮೊದಲು ನಾವೆಲ್ಲ ಚಿತ್ರ ನೋಡಿ, ಮುಂದೇನು ಮಾಡಬೇಕೆಂದು ನಿರ್ಧರಿಸೋಣ" ಎಂದು ಹೇಳಿ ಕಳಿಸಿದರು. ಮರುದಿನ ಹೋರಾಟಗಾರರ ಬಣದೊಂದಿಗೆ ಚಿತ್ರ ವೀಕ್ಷಿಸಿ, ಆಕ್ಷೇಪಾರ್ಹ ಭಾಗ ತೆಗೆದು ಹಾಕಲು ಹೇಳಲಾಯಿತು. ಆದರೂ ಕೆಲವು ಕಿಡಿಗೇಡಿಗಳು ಸೇರಿ

ಹೋರಾಟಕ್ಕೆ ಕಳಂಕ ಹಚ್ಚಬೇಕೆಂದು ಥಿಯೇಟರಿಗೆ ಕಲ್ಲು ತೂರಿದರು. ಇದು ಅ.ನ.ಕೃಷ್ಣರಾಯರ ಮನಸ್ಸಿಗೆ ಒಪ್ಪಿಗೆಯಾಗಲಿಲ್ಲ.

ಅ.ನ.ಕೃಷ್ಣರಾಯರು ರೂಪಿಸಿದ ಚಳವಳಿ ಅಹಿಂಸಾತ್ಮಕವಾದುದು. ತೆಲುಗು-ತಮಿಳರ ವಿರುದ್ಧ ಹೋರಾಟದ ಚಳವಳಿಯಾಗಿರಲಿಲ್ಲ. ಜನರ, ಸರಕಾರದ ಆಸ್ತಿಪಾಸ್ತಿಗಳಿಗೆ ನಷ್ಟವುಂಟು ಮಾಡುವುದಕ್ಕಲ್ಲ. ಎರಡನೆಯದಾಗಿ ಕನ್ನಡದ ಬಗ್ಗೆ ನಿಸ್ವಾರ್ಥವಾಗಿ ಹೋರಾಡಬೇಕೆಂಬುದು ಅವರ ಧೋರಣೆಯಾಗಿತ್ತು. ಚಳವಳಿಯ ನೆಪದಿಂದ ಅಧಿಕಾರ ಗ್ರಹಣ ಮಾಡುವುದು, ಚುನಾವಣೆಗೆ ನಿಲ್ಲುವುದು, ತಮ್ಮ ಸ್ವಾರ್ಥ ಸಾಧಿಸಿಕೊಳ್ಳುವ ಬಗ್ಗೆ ಅವರ ವಿರೋಧವಿತ್ತು.

ಚಳವಳಿಯಲ್ಲಿದ್ದ ಪ್ರಮುಖರಲ್ಲಿ ಒಬ್ಬರು ಚುನಾವಣೆಗೆ ನಿಂತು ಅಧಿಕಾರ ಪಡೆಯಲು ಪ್ರಯತ್ನಿಸುತ್ತಿದ್ದಾರೆಂದು ತಿಳಿದ ಅ.ನ.ಕೃಷ್ಣರಾಯರು ಅಂದೇ ಚಳವಳಿಗೆ ಸಲಾಂ ಹೊಡೆದು ಹೊರಬಂದರು. ತಮ್ಮ ಮನಸ್ಸಿಗೆ ಒಪ್ಪದ್ದನ್ನು ಅವರೆಂದೂ ಮಾಡಲಿಲ್ಲ. ಅನಂತರ ಅನೇಕರು ಮತ್ತೆ ಚಳವಳಿಯ ನೇತೃತ್ವ ವಹಿಸಲು ಅವರನ್ನು ಕರೆತರಲು ಪ್ರಯತ್ನಿಸಿ ವಿಫಲರಾದರು. ಅನಂತರ ಇದೇ ಬಗೆಯ ಮೌಲ್ಯಾಧಾರಿತ ಚಳವಳಿಯ ನೇತೃತ್ವ ವಹಿಸಿದವರು ಡಾ. ಎಂ. ಚಿದಾನಂದಮೂರ್ತಿಯವರು ಮಾತ್ರ!

ಅ.ನ.ಕೃಷ್ಣರಾಯರಿಗೆ ಕನ್ನಡ ಚಳವಳಿ ಹೊಟ್ಟೆಪಾಡಿನ ದಂಧೆ ಆಗಿರಲಿಲ್ಲ. ಜನರನ್ನೂ, ವ್ಯಾಪಾರಿಗಳನ್ನೂ ಹೆದರಿಸಿ, ಬೆದರಿಸಿ ಕಾಸು ಕೀಳುವುದಾಗಿರಲಿಲ್ಲ. ಕನ್ನಡ ಉಳಿಯಬೇಕು-ಬೆಳೆಯಬೇಕು ನಿಜ; ಆದರೆ ಅನ್ಯಭಾಷಿಕರನ್ನು ಪೀಡಿಸಿ, ಹಿಂಸಿಸಿ ಅಲ್ಲ ಎಂಬುದು ಅವರ ನಿಲುವಾಗಿತ್ತು.






ಕನ್ನಡ ಚಳವಳಿಯ ಅಪ್ರತಿಮ ನಾಯಕ ಮ.ರಾಮಮೂರ್ತಿ

■ ವೆ. ಶ್ರೀನಿವಾಸ

ಯಾವುದೇ ಚಳವಳಿ ಹುಟ್ಟುವುದು ಅನ್ಯಾಯ, ನೋವು, ಹಿಂಸೆಯಾದಾಗ ಮಾತ್ರ. ರೈತ ಚಳವಳಿ, ದಲಿತ ಚಳವಳಿ, ಕಾರ್ಮಿಕ ಚಳವಳಿ, ಸಮಾಜವಾದ ಚಳವಳಿ ಇತ್ಯಾದಿಗಳಿಗೆ ಈ ಹಿನ್ನೆಲೆ ಇದೆ. ಅದೇ ರೀತಿ ಕರ್ನಾಟಕದಲ್ಲಿ ವಲಸೆಗಾರರ ಹಾವಳಿಯಿಂದ ಕನ್ನಡಿಗರಿಗೆ ಅವಕಾಶ ವಂಚನೆ, ಹಿಂಸೆ, ದೌರ್ಜನ್ಯ, ಕನ್ನಡ ಸಂಸ್ಕೃತಿಗೆ ಧಕ್ಕೆ ಕನ್ನಡ ಚಳವಳಿಯ ಹುಟ್ಟಿಗೆ ಕಾರಣವಾಯಿತು. ಅನೇಕ ಕನ್ನಡ ಪರ ಸಂಘಟನೆಗಳ ಒಗ್ಗೂಡುವಿಕೆಯಿಂದ ಕರ್ನಾಟಕ ಸಂಯುಕ್ತ ರಂಗ ರಚನೆಗೆ ನಾಂದಿಯಾಯಿತು.

ಮ.ರಾಮಮೂರ್ತಿ, ಅ.ನ.ಕೃಷ್ಣರಾಯರು ಮೈ.ಸು.ನಟರಾಜ್ ನಾಡಿಗೇರ ಕೃಷ್ಣರಾಯರು, ಬೆ.ನಿ. ಈಶ್ವರಪ್ಪ, ಅ.ಸಂಜೀವಪ್ಪ ಮುಂತಾದ ಇನ್ನೂ ಅನೇಕ ಕನ್ನಡ ಮುಖಂಡರು ೧೯೬೦ರ ದಶಕದಲ್ಲಿ ಕನ್ನಡ ಪರ ಹೋರಾಟವನ್ನು ಪ್ರಾರಂಭಿಸಿದರು. ಅವರಲ್ಲಿ ಮ.ರಾಮಮೂರ್ತಿ ಕನ್ನಡ ಚಳವಳಿಯ ಅಗ್ರಗಣ್ಯ ನಾಯಕರು. ಶ್ರೀರಾಮಪುರದ ದೇವಯ್ಯ ಪಾರ್ಕ್‌ನ ಬಳಿ ಕರ್ನಾಟಕ ಸಂಯುಕ್ತ ರಂಗದ ಬಹಿರಂಗ ಸಭೆ ನಡೆಯಿತು. ನಾನು ಪ್ರಥಮವಾಗಿ ಅ.ನ.ಕೃಷ್ಣರಾಯರು, ಮ.ರಾಮಮೂರ್ತಿಯವರನ್ನು ಅಲ್ಲಿ ಕಂಡೆ; ಮ.ರಾಮಮೂರ್ತಿಯವರ ಸಿಂಹ ಗರ್ಜನೆಯ ಭಾಷಣವನ್ನು ಕೇಳಿ ರೋಮಾಂಚನವಾಯಿತು. ಆ ದಿನ ಶ್ರೀರಾಮಪುರದ ಮುಖ್ಯ ರಸ್ತೆಗಳಲ್ಲಿ ಕೆಲವು ತಿಳಿಗೇಡಿ ತಮಿಳರು ಕನ್ನಡ ನಾಮಫಲಕಗಳನ್ನು ಧ್ವಂಸ ಮಾಡಿ, ರಸ್ತೆಯಲ್ಲಿ ಕನ್ನಡ. ಕರ್ನಾಟಕಕ್ಕೆ ಧಿಕ್ಕಾರ (ಡೌನ್‌ವಿತ್) ಎಂದು ಬರೆದು ಗಲಭೆಯನ್ನು ಮಾಡಿದರು.



ಈ ಪುಂಡಾಟಿಕೆಯನ್ನು ಖಂಡಿಸಿದ ಮ.ರಾಮಮೂರ್ತಿಯವರು ಬಹಿರಂಗ ಸಭೆಯನ್ನು ರದ್ದುಮಾಡಿ, ಶ್ರೀರಾಮಪುರದ ಕಡೆ ಮುನ್ನುಗ್ಗಿದರು. ಅವರನ್ನು ಹಿಂಬಾಲಿಸುತ್ತಾ ಸಾವಿರಾರು ಜನ ಕನ್ನಡಾಭಿಮಾನಿಗಳು ಮೆರವಣಿಗೆ ಹೊರಟು ಈಗಿರುವ ರಾಮಮೂರ್ತಿ ರಸ್ತೆಗೆ ಗುಂಪು-ಗುಂಪಾಗಿ ಬಂದರು. ಎದುರಿಗೆ ತಮಿಳರು ಕನ್ನಡಕ್ಕೆ ಧಿಕ್ಕಾರ, ತಮಿಳಿಗೆ ಜಯಕಾರ ಹಾಕುತ್ತಾ ಬರುತ್ತಿದ್ದರು. ಮ.ರಾಮಮೂರ್ತಿಯವರನ್ನು ಹಿಂಬಾಲಿಸಿ ಬರುತ್ತಿದ್ದ ಕನ್ನಡ ಚಳವಳಿಗಾರರ ಮೇಲೆ ಅವರು ಹಲ್ಲೆ ಮಾಡಿದರು. ಘರ್ಷಣೆಯಾಯಿತು. ಪೊಲೀಸಿನವರು ಮಧ್ಯೆ ಪ್ರವೇಶ ಮಾಡಿ ಗಲಭೆಯನ್ನು ನಿಯಂತ್ರಣಕ್ಕೆ ತಂದರು. ಕನ್ನಡ ಹೋರಾಟಗಾರರಲ್ಲಿ ಕೆಲವರನ್ನು ಪೊಲೀಸರು ಬಂಧಿಸಿದರು.

ಮ.ರಾಮಮೂರ್ತಿಯವರು ಪೊಲೀಸ್ ಠಾಣೆಗೆ ಬಂದು ಜಾಮೀನು ಕೊಟ್ಟು ಕನ್ನಡ ಚಳವಳಿಗಾರರನ್ನು ಬಿಡಿಸಿದರು. ಆಗ ರಾತ್ರಿ ೧೨.೦೦ ಗಂಟೆಯಾಗಿತ್ತು. ಕರ್ನಾಟಕ ಸಂಯುಕ್ತರಂಗದ ಕನ್ನಡ ಜಾಗೃತಿ ಸಭೆಗಳು ಬೆಂಗಳೂರಿನ ಎಲ್ಲ ಬಡಾವಣೆಗಳಲ್ಲಿ ನಡೆಯುತ್ತಿದ್ದವು. ತಮಿಳುನಾಡಿನ ಡಿಎಂಕೆ ನಾಯಕರು ಬೆಂಗಳೂರಿನಲ್ಲಿ ಬಹಿರಂಗ ಸಭೆಗಳನ್ನು ಮಾಡುತ್ತಿದ್ದರು.

ಬೆಂಗಳೂರಿನ ಎಲ್ಲಾ ಬಡಾವಣೆಗಳಲ್ಲಿ, ಹೆಚ್ಚಾಗಿ ಶ್ರೀರಾಮಪುರ ಮತ್ತು ದಂಡು ಪ್ರದೇಶಗಳಲ್ಲಿ ಡಿಎಂಕೆ ಬಾವುಟಗಳನ್ನು ಹಾರಿಸುತ್ತಾ ಇದ್ದರು; ಒಂದು ಬಾರಿ ಡಿಎಂಕೆ ನಾಯಕ ಕಂದಪ್ಪನ ಸಭೆಯನ್ನು ಚಿಕ್ಕ ಲಾಲ್‌ಬಾಗ್ (ತುಳಸಿತೋಟ)ನಲ್ಲಿ ಆಯೋಜಿಸಿದ್ದರು. ಮ.ರಾಮಮೂರ್ತಿಯವರ ನಾಯಕತ್ವದಲ್ಲಿ ಸುಭಾಷ್‌ನಗರ ಮೈದಾನದಲ್ಲಿ (ಇಂದಿನ ಕೆಂಪೇಗೌಡ ಬಸ್‌ನಿಲ್ದಾಣ) ಭಾರಿ ಬಹಿರಂಗ ಸಭೆ; ಕಂದಪ್ಪ ಹಿಂದಕ್ಕೆ ಹೋಗು (ಕಂದಪ್ಪ ಗೋ ಬ್ಯಾಕ್), ಡಿಎಂಕೆ ನಾಯಕರಿಗೆ ಧಿಕ್ಕಾರ, ಸಿರಿಗನ್ನಡಂ ಗೆಲ್ಗೆ-ಎಂದು ಘೋಷಣೆ ಕೂಗುತ್ತಾ ಚಿಕ್ಕ ಲಾಲ್‌ಬಾಗಿನ ಹತ್ತಿರ ಹೋದಾಗ ಕಂದಪ್ಪನ ಸಭೆ ರದ್ದಾಯಿತು. ಇದು ಮ.ರಾಮಮೂರ್ತಿಯವರು ಮತ್ತು ಕನ್ನಡ ಚಳವಳಿಗಾರರಿಗೆ ದೊರೆತ ಜಯವಾಗಿತ್ತು.

ಕನ್ನಡ ಜಾಗೃತಿ ಸಭೆ ನಡೆಯುತ್ತಿದ್ದಾಗ, ಕರ್ನಾಟಕ ಸಂಯುಕ್ತ ರಂಗದಲ್ಲಿ ಬರಿ ಬ್ರಾಹ್ಮಣರ ಗುಂಪು ಇದೆ ಎಂದು ಹಲವರು ಟೀಕಿಸುತ್ತಿದ್ದರು. ಮ.ರಾಮಮೂರ್ತಿಯವರು ಯಾವ ಜಾತಿಗೂ ಅಂಟಿಕೊಂಡವರಲ್ಲ. ಅವರು ಬಹಿರಂಗ ಸಭೆಯಲ್ಲಿ ತಮ್ಮ ಜನಿವಾರವನ್ನು ಕಿತ್ತು ಎಸೆದವರು. ಕನ್ನಡವೇ ಜಾತಿ, ಕನ್ನಡವೇ ಧರ್ಮ, ಕನ್ನಡವೇ ದೇವರು ಎನ್ನುವ ತತ್ತ್ವಕ್ಕೆ ಬದ್ಧರಾಗಿದ್ದವರು. ಮನುಜಮತ, ಕನ್ನಡ ಪಥದ ಆರಾಧಕರು. ನಾನು ಅವರ ಎಲ್ಲಾ ಬಹಿರಂಗ ಸಭೆಗಳಿಗೆ ಹೋಗುತ್ತಿದ್ದೆ. ಕನ್ನಡ ಪಕ್ಷ ಸ್ಥಾಪನೆಯಾದ ನಂತರ ಅವರಿಗೆ ಬಹಳ ಹತ್ತಿರವಾದೆ. ನಾನು ಕನ್ನಡ ಪಕ್ಷದ ಕಾರ್ಯಕಾರಿ ಸಮಿತಿಯ ಸದಸ್ಯನಾಗಿದ್ದೆ.

ಪ್ರತಿ ಭಾನುವಾರ ಕರ್ನಾಟಕ ಮಿತ್ರ ಮಂಡಳಿ ಕಾಟನ್‌ಪೇಟೆ ಉಮಾಶಂಕರ್ ಕಾಫಿಪುಡಿ ಅಂಗಡಿಯ ಮಹಡಿ ಮೇಲೆ ಕನ್ನಡ ಪಕ್ಷದ ಕಾರ್ಯಕಾರಿ ಸಮಿತಿ ಸಭೆ

ನಡೆಯುತ್ತಿತ್ತು. ಬೆ.ನಿ. ಈಶ್ವರಪ್ಪ, ಕ.ಮು. ಸಂಪಂಗಿರಾಮಯ್ಯ, ಹುತಾತ್ಮ ಮು.ಗೋವಿಂದರಾಜು, ಜಗದೀಶ್‌ರೆಡ್ಡಿ, ವೆ. ಶ್ರೀನಿವಾಸ್, ಜಿ. ನಾರಾಯಣ್‌ಕುಮಾರ್ ನಾ. ದಾಸಪ್ಪ, ಸಿ. ಕೃಷ್ಣಪ್ಪ ಇನ್ನೂ ಅನೇಕ ಮುಖಂಡರು ಮ. ರಾಮಮೂರ್ತಿಯವರ ಅಧ್ಯಕ್ಷತೆಯಲ್ಲಿ ನಡೆಯುತ್ತಿದ್ದ ಸಭೆಗಳಲ್ಲಿ ಭಾಗವಹಿಸಿ, ನಾಡು-ನುಡಿಯ ಬಗ್ಗೆ ಚರ್ಚೆ ಮಾಡುತ್ತಿದ್ದರು. ಅದು ಕನ್ನಡ ಪಕ್ಷದ ಕೇಂದ್ರ ಕಛೇರಿಯಾಗಿತ್ತು. ಕೆಂಪೇಗೌಡ ರಸ್ತೆಯ ಕರ್ನಾಟಕ ವಾಣಿಜ್ಯ ಮಂಡಳಿ ಬಿಲ್ಡಿಂಗ್‌ನಲ್ಲಿ (ಪ್ರಭಾತ್ ಚಿತ್ರಮಂದಿರದ ಹಿಂಭಾಗದಲ್ಲಿ) ನಂತರ ಇಡೀ ದಿವಸ ಚರ್ಚೆಮಾಡಿ ಮ. ರಾಮಮೂರ್ತಿಯವರ ಅಧ್ಯಕ್ಷತೆಯಲ್ಲಿ ಅನೇಕ ಮುಖಂಡರು ಸೇರಿ ಕೊನೆಗೆ ಹಳದಿ ಕೆಂಪು ಬಾವುಟವನ್ನು ರಚಿಸಲಾಯಿತು; ಹಳದಿಯು ಶಾಂತಿ ಮತ್ತು ಕೆಂಪು ಕ್ರಾಂತಿಯ ಸಂಕೇತವೆಂದು, ಕನ್ನಡಿಗರು ಶಾಂತಿ ಪ್ರಿಯರು; ಕೆಣಕಿದರೆ ಕ್ರಾಂತಿಕಾರರು ಎಂಬ ಘೋಷಣೆಯೊಂದಿಗೆ ರಚನೆಯಾದ ಕನ್ನಡ ಪಕ್ಷದ ಬಾವುಟವು ಇಂದು ಕನ್ನಡ ನಾಡಿನ ಎಲ್ಲಾ ಭಾಗದಲ್ಲೂ ಕನ್ನಡ ಬಾವುಟವಾಗಿ ಹಾರಾಡುತ್ತಿದೆ.

ಡಾ. ರಾಜ್‌ಕುಮಾರ್‌ರವರಿಗೆ ಸನ್ಮಾನ

ಕನ್ನಡ ಕಣ್ಮಣಿ ಡಾ. ರಾಜ್‌ಕುಮಾರ್ ಅವರ ಚಿತ್ರ (ಸತಿಶಕ್ತಿ)ವನ್ನು ಸ್ಟೇಟ್ ಚಿತ್ರಮಂದಿರದಲ್ಲಿ ನೂರು ದಿನ ಪ್ರದರ್ಶಿಸಬೇಕು ಎಂಬುದು ಕನ್ನಡ ಚಳವಳಿಗಾರರ ನಿಲುವು. ಮ.ರಾಮಮೂರ್ತಿಯವರು ತಮ್ಮ ಭಾಷಣದಲ್ಲಿ, 'ಕನ್ನಡ ಚಿತ್ರಗಳನ್ನು ನೋಡಿ ಕನ್ನಡ ಕಲಾವಿದರಿಗೆ ಪ್ರೋತ್ಸಾಹ ಕೊಡಿ. ತಮಿಳರಿಗೆ ನಟ ಎಂ.ಜಿ. ರಾಮಚಂದ್ರನ್ ಇದ್ದಂತೆ ನಮಗೆ ಕನ್ನಡ ಸಾರ್ವಭೌಮ ಡಾ. ರಾಜ್‌ಕುಮಾರ್ ಇದ್ದಾರೆ. ಅವರ ಚಿತ್ರಗಳನ್ನು ನೋಡಿ. ಅವರ ಅಭಿನಯ ಯಾವ ಭಾಷೆಯ ನಟನಿಂದಲೂ ಸಾಧ್ಯವಿಲ್ಲ' ಎಂದು ಹೇಳುತ್ತಿದ್ದರು. ಅವರ ಭಾಷಣದಿಂದ ಪ್ರೇರಿತರಾಗಿ ಈ ಚಿತ್ರವನ್ನು ನೂರು ದಿನಗಳ ಕಾಲ ನಡೆಸಬೇಕು ಎಂದು ಪಣತೊಟ್ಟರು ಚಳವಳಿಗಾರರು. ಸ್ಟೇಟ್ ಚಿತ್ರಮಂದಿರ ಮಾಲೀಕರು ಈ ಚಿತ್ರವನ್ನು ೫೦ ದಿನದ ನಂತರ ತೆಗೆಯಲು ನಿರ್ಧರಿಸಿದರು. ಆಗ ಚಳವಳಿಗಾರರು ಹೌಸ್‌ಫುಲ್ ಸಂಘವನ್ನು ಸ್ಥಾಪಿಸಿದರು. ಸ್ಟೇಟ್ ಚಿತ್ರಮಂದಿರ ಪಕ್ಕದಲ್ಲಿ ಇದ್ದ ವಸಂತ ವಿಹಾರ ಕನ್ನಡ ಚಳವಳಿಗಾರ ಅಡ್ಡೆಯಾಗಿತ್ತು. ಅಲ್ಲಿಗೆ ಮ.ರಾಮಮೂರ್ತಿಯವರು ಬಂದು ಕಾಫಿ ಕುಡಿಯುತ್ತಿದ್ದರು. ವಾರಕ್ಕೆ ಒಂದು ದಿನ ಚಿತ್ರಮಂದಿರ ಭರ್ತಿಯಾದರೆ ಆ ಚಿತ್ರವನ್ನು ಮಾಲೀಕರು ನೂರು ದಿನ ನಡೆಸುವುದಾಗಿ ಷರತ್ತು ಹಾಕಿದರು. ಅದಕ್ಕೆ ಒಪ್ಪಿದ ಚಳವಳಿಗಾರರು ವಾರಕ್ಕೆ ಒಂದು ದಿನ ಎಲ್ಲರೂ ತಮ್ಮ ಕೈಯಿಂದ ಹಣವನ್ನು ಹಾಕಿ, ಉಳಿದ ಎಲ್ಲಾ ಟಿಕೆಟ್‌ಗಳನ್ನು ಕೊಂಡು, 'ಚಿತ್ರಮಂದಿರ ಭರ್ತಿಯಾಗಿದೆ' ಅಂತ ನಾಮಫಲಕವನ್ನು ಹಾಕಿಸಿ ನೂರು ದಿನ ನಡೆಸಿದರು. ನಗರದ ಕೆಂಪೇಗೌಡ ಚಿತ್ರಮಂದಿರದ ಪಕ್ಕದಲ್ಲಿ ಚಿಂದೋಡಿ ಲೀಲಾರವರ ಕೆ.ಬಿ.ಆರ್. ಡ್ರಾಮಾ ಕಂಪನಿ ಇತ್ತು. ಸಂಜೆ ಸಮಯದಲ್ಲಿ "ಹಳ್ಳಿ ಹುಡುಗಿ" ಎಂಬ ನಾಟಕವನ್ನು ನಡೆಸುತ್ತಿದ್ದರು. ಅವರ ಮಾಲೀಕರ ಹತ್ತಿರ ಮ.ರಾಮಮೂರ್ತಿಯವರು ಮಾತನಾಡಿ ಅಲ್ಲಿ ಶತದಿನೋತ್ಸವ ಸಮಾರಂಭ ಮಾಡಲು ಅನುಮತಿಯನ್ನು ಪಡೆದರು. ಒಂದು

ದಿವಸ ಬೆಳಿಗ್ಗೆ ೧೧:೦೦ ಗಂಟೆಗೆ ಡಾ. ರಾಜ್‌ಕುಮಾರ್‌ರವರನ್ನು ಕರೆತಂದು ಮ.ರಾಮಮೂರ್ತಿಯವರ ಅಧ್ಯಕ್ಷತೆಯಲ್ಲಿ, ಅದ್ದೂರಿಯಾಗಿ ಕನ್ನಡಿಗರೆಲ್ಲರ ಪರವಾಗಿ ಸನ್ಮಾನ ಮಾಡಿ ಗೌರವಿಸಲಾಯಿತು.

ಅಲಂಕಾರ್ ಚಿತ್ರಮಂದಿರ ಪ್ರಕರಣ : ಬೆಂಗಳೂರಿನಲ್ಲಿ ಹೆಚ್ಚಿನ ಚಿತ್ರಮಂದಿರಗಳಲ್ಲಿ ಕನ್ನಡ ಚಲನಚಿತ್ರಗಳಿಗೆ ಅವಕಾಶ ಕೊಡುತ್ತಿರಲಿಲ್ಲ. ಬರೀ ಹಿಂದಿ, ತಮಿಳು ಮತ್ತು ತೆಲುಗು ಚಿತ್ರಗಳನ್ನೇ ಪ್ರದರ್ಶನ ಮಾಡುತ್ತಿದ್ದರು. ಕೆಂಪೇಗೌಡ ರಸ್ತೆಯಲ್ಲಿರುವ ಕೆಂಪೇಗೌಡ ಹಿಮಾಲಯ ಹಾಗೂ ಜೆ.ಸಿ.ರಸ್ತೆಯಲ್ಲಿದ್ದ ಭಾರತ್ ಚಿತ್ರಮಂದಿರಗಳಲ್ಲಿ ಮಾತ್ರ ಕನ್ನಡ ಚಿತ್ರಗಳ ಪ್ರದರ್ಶನವಾಗುತ್ತಿತ್ತು. ಯಾವ ಚಿತ್ರಮಂದಿರಗಳು ಕನ್ನಡ ಚಿತ್ರಗಳನ್ನು ಹಾಕುತ್ತಿರಲಿಲ್ಲವೋ ಆ ಚಿತ್ರಮಂದಿರಗಳ ಮುಂದೆ ಕನ್ನಡ ಚಿತ್ರಗಳನ್ನು ಪ್ರದರ್ಶನ ಮಾಡುವಂತೆ ಒತ್ತಾಯಿಸಿ ಮ.ರಾಮಮೂರ್ತಿಯವರ ನಾಯಕತ್ವದಲ್ಲಿ ಪ್ರತಿಭಟನೆ ಮಾಡಲಾಗುತ್ತಿತ್ತು.

ಅದೇ ರೀತಿಯಲ್ಲಿ ಅಲಂಕಾರ ಚಿತ್ರಮಂದಿರದ ಮುಂಭಾಗ (ಅಲಂಕಾರ ಕಾಂಪ್ಲೆಕ್ಸ್ ಇರುವ ಸ್ಥಳದಲ್ಲಿ) ಕನ್ನಡ ಚಳವಳಿಗಾರರು ಪ್ರತಿಭಟನೆ ಮಾಡುತ್ತಿದ್ದಾಗ ಆ ಚಿತ್ರಮಂದಿರದ ಮಾಲೀಕರು 'ಕನ್ನಡ ಚಿತ್ರ ಪ್ರದರ್ಶನ ಮಾಡುವ ಬದಲು ಯಾವುದಾದರೂ ಗೋಡೌನ್ ಮಾಡುತ್ತೇನೆ' ಎಂದು ಅಬ್ಬರಿಸಿದರು. ಆಗ ಮ.ರಾಮಮೂರ್ತಿಯವರು 'ನೀನು ಕನ್ನಡ ಚಿತ್ರವನ್ನು ಪ್ರದರ್ಶನ ಮಾಡದೇ ಹೋದರೆ ನನ್ನ ಹೆಂಡತಿ ತಾಳಿಯನ್ನು (ಮಾಂಗಲ್ಯ) ಗೂಟಕ್ಕೆ ಕಟ್ಟಿ ಬರುತ್ತೇನೆ' ಎಂದು ಖಡಾಖಂಡಿತವಾಗಿ ಹೇಳಿದರು. ಆ ಮಾತಿಗೆ ಹೆದರಿ ಮಾಲೀಕ ಅಲಂಕಾರ್ ಚಿತ್ರ ಮಂದಿರದಲ್ಲಿ ಚಿತ್ರ ಪ್ರದರ್ಶನಕ್ಕೆ ಅವಕಾಶ ಮಾಡಿಕೊಟ್ಟು, ಕಲ್ಯಾಣ್‌ಕುಮಾರ್‌ರವರ 'ಬಂಗಾರಿ' ಚಿತ್ರವನ್ನು ಪ್ರದರ್ಶಿಸಿದರು.

ಕನ್ನಡ ನಟರ ಕಟೌಟ್‌ಗಳಿಗೆ ಚಪ್ಪಲಿ ಹಾರ : ಮೆಜೆಸ್ಟಿಕ್ ಚಿತ್ರಮಂದಿರ ಹಾಗೂ ಉಪ್ಪಾರಪೇಟೆ ಪೊಲೀಸ್ ಠಾಣೆಯ ಮುಂಭಾಗದಲ್ಲಿ ಕನ್ನಡ ನಟರ ಬ್ಯಾನರ್ ಹಾಗೂ ಕಟೌಟ್‌ಗಳಿಗೆ ಕೆಲವು ತಿಳಿಗೇಡಿ ತಮಿಳರು ಚಪ್ಪಲಿ ಹಾರವನ್ನು ಹಾಕಿದರು. ಇದನ್ನು ಕಂಡ ಮ.ರಾಮಮೂರ್ತಿಯವರು ಕೆಂಡಾಮಂಡಲರಾಗಿ, ಉಪ್ಪಾರಪೇಟೆ ಪೊಲೀಸ್‌ಠಾಣೆಗೆ ದೂರು (ಕಂಪ್ಲೆಂಟ್) ಕೊಟ್ಟು, ಯಾರು ಆ ಕೆಲಸವನ್ನು ಮಾಡಿದ್ದರೋ ಅವರನ್ನು ಬಂಧಿಸಿ, ಅವರಿಂದಲೇ ಆ ಚಪ್ಪಲಿ ಹಾರವನ್ನು ಪೊಲೀಸರ ಸಮಕ್ಷಮದಲ್ಲಿ ತೆಗೆಸಿದರು.

ಉದ್ಯಾನವನಗಳಲ್ಲಿ ವಾದ್ಯಗೋಷ್ಠಿ : ಬೆಂಗಳೂರಿನ ಎಲ್ಲಾ ನಗರ ಪಾಲಿಕೆ ಉದ್ಯಾನವನ ಗಳಲ್ಲಿ ನಗರ ಪಾಲಿಕೆ ವತಿಯಿಂದ ವಾದ್ಯಗೋಷ್ಠಿಗಳನ್ನು ಆಯೋಜಿಸುತ್ತಿದ್ದರು. ಆ ವಾದ್ಯಗೋಷ್ಠಿಯವರು ಬರೀ ತಮಿಳು, ತೆಲುಗು ಮತ್ತು ಹಿಂದಿ ಚಿತ್ರಗಳ ಗೀತೆಗಳನ್ನು ಹಾಡುತ್ತಿದ್ದರು. ಕನ್ನಡದ ಒಂದು ಗೀತೆಯನ್ನೂ ಹಾಡುತ್ತಿರಲಿಲ್ಲ. ಕರ್ನಾಟಕ ಸರ್ಕಾರ ನಗರ ಪಾಲಿಕೆಯವರು ಹಣವನ್ನು ನೀಡುತ್ತಿದ್ದರು. ಕನ್ನಡಿಗರ ಹಣದಲ್ಲಿ ಬೇರೆ ಭಾಷೆಯ ಚಲನಚಿತ್ರಗೀತೆಗಳನ್ನು ಹಾಡುತ್ತಿದ್ದರು. ಇದನ್ನು ತಿಳಿದು ಮ.ರಾಮಮೂರ್ತಿಯವರು ಯಾವ ಉದ್ಯಾನವನಗಳಲ್ಲಿ ಪ್ರತಿ ಶನಿವಾರ ವಾದ್ಯಗೋಷ್ಠಿ ನಡೆಸುತ್ತಿದ್ದರೋ ಅಲ್ಲಿ

ಪ್ರತಿಭಟನೆ ಮಾಡಿ, ಕನ್ನಡ ಚಿತ್ರಗೀತೆಗಳನ್ನು ಹಾಡಲು ಒತ್ತಾಯಿಸಿದ ಮೇಲೆ ಕನ್ನಡ ಗೀತೆಗಳನ್ನು ಹಾಡಲಾರಂಭಿಸಿದರು.

ಕೆಲವು ಸಂದರ್ಭಗಳಲ್ಲಿ ತಮಿಳರಿಗೂ, ಕನ್ನಡ ಚಳವಳಿಗಾರರಿಗೂ ಗಲಭೆಗಳಾದವು. ಸಂಪಿಗೆ ಚಿತ್ರಮಂದಿರದ ಮುಂದೆ ಇರುವ ಭಾಷ್ಯಂ ಉದ್ಯಾನವನ, ದಂಡು ಪ್ರದೇಶದ ಕಾಕ್ಸ್‌ಟೌನ್ ಉದ್ಯಾನವನ, ದೇವಯ್ಯ ಪಾರ್ಕ್‌ನಲ್ಲಿ ಸಹ ಗಲಭೆಗಳಾದವು. ಆದರೆ ಮ.ರಾಮಮೂರ್ತಿಯವರು ಎದೆಗುಂದದೆ ಮುನ್ನುಗ್ಗಿ, ತಮಿಳರ ದೌರ್ಜನ್ಯವನ್ನು ಯಶಸ್ವಿಯಾಗಿ ಎದುರಿಸಿದರು.

ಕಾಂಚಿತಲೈವನ್ ತಮಿಳು ಚಿತ್ರದ ಪ್ರತಿಭಟನೆ : ಕನ್ನಡ ಚಳವಳಿಗಾರರು ಮ.ರಾಮಮೂರ್ತಿಯವರ ಭಾಷಣದ ಪ್ರಭಾವದಿಂದ ಎಚ್ಚೆತ್ತು, ತಮಿಳು ಚಿತ್ರ ನೋಡುವುದನ್ನು ನಿಲ್ಲಿಸಿದ್ದರು. 'ರೂಪಲೇಖ' ಡಿ. ರಾಮನ್‌ರವರು ಕನ್ನಡ, ತಮಿಳು ತೆಲುಗು ಮತ್ತು ಹಿಂದಿ ಭಾಷೆಗಳನ್ನು ಬಲ್ಲವರಾಗಿದ್ದರು. 'ರೂಪಲೇಖ' ಎಂಬ ಚಲನಚಿತ್ರದ ಪತ್ರಿಕೆಯನ್ನು ನಡೆಸುತ್ತಿದ್ದರು. ಅವರಿಗೆ 'ಕಾಂಚಿತಲೈವನ್' ಚಿತ್ರದ ಬಗ್ಗೆ ವಿಷಯ ತಿಳಿಯಿತು. ಕನ್ನಡ ವೀರ ಪುಲಿಕೇಶಿಗೆ ಅವಮಾನ ಮಾಡಿ ತಮಿಳುರಾಜ (ಕಾಂಚಿರಾಜ) ಡಿ.ಎಂ.ಕೆ. ತಮಿಳು ಧ್ವಜವನ್ನು ಹಾರಿಸಿ ಕನ್ನಡಿಗರಿಗೆ ಅವಮಾನ ಮಾಡುವ ದೃಶ್ಯಗಳು! ಎಂ.ಜಿ. ರಾಮಚಂದ್ರನ್ ಕಾಂಚಿರಾಜನ ಪಾತ್ರದಲ್ಲಿ ಅಭಿನಯಿಸಿ ಎಂ. ಕರುಣಾನಿಧಿ ಕಥೆ, ಸಾಹಿತ್ಯ ಸಂಭಾಷಣೆ ಬರೆದಿರುವುದನ್ನು ಕಂಡು ರಾಮನ್‌ರವರು ಕನ್ನಡದ ಎಲ್ಲಾ ಪತ್ರಿಕೆಗಳಿಗೆ ಸುದ್ದಿ ಕಳುಹಿಸಿದ್ದರು. ಈ ಸುದ್ದಿಯು ಪತ್ರಿಕೆಗಳಿಂದ ಕನ್ನಡ ಚಳವಳಿಗಾರರಿಗೆ ತಿಳಿದು, ಅ.ನ.ಕೃ., ಮ.ರಾಮಮೂರ್ತಿಯವರು ಪ್ರತಿಭಟನೆಯನ್ನು ಮಾಡಿದಾಗ ಪ್ರದರ್ಶನವನ್ನು ರದ್ದುಮಾಡಿ, ಆಕ್ಷೇಪಾರ್ಹ ಭಾಗಗಳನ್ನು ತೆಗೆದುಹಾಕಿ ನಿರ್ಮಾಪಕರೂ, ಹಂಚಿಕೆದಾರರೂ ಕನ್ನಡ ಪರ ಹೋರಾಟಗಾರರಿಗೆ ಚಿತ್ರದ ಪ್ರದರ್ಶನವನ್ನು ಏರ್ಪಡಿಸಿದ್ದರು. ಅ.ನ.ಕೃ., ಮ.ರಾಮಮೂರ್ತಿ ಮತ್ತು ಕನ್ನಡ ಚಳವಳಿಗಾರರು ಆ ಚಿತ್ರವನ್ನು ನೋಡಿದಾಗ ಕನ್ನಡಿಗರಿಗೆ ಅವಮಾನ ಮಾಡಿದ ದೃಶ್ಯಗಳನ್ನು ಮಬ್ಬು ಮಾಡಿ (ಮಸುಕು) ಚಿತ್ರವನ್ನು ಪ್ರದರ್ಶನ ಮಾಡುತ್ತಿದ್ದರು. ತಮಿಳರ ಈ ಕುತಂತ್ರದಿಂದಾಗಿ ಕನ್ನಡ ಚಳವಳಿಗಾರರು ಸಿಟ್ಟಾಗಿ, ಮಿನರ್ವ ಚಿತ್ರಮಂದಿರದ ಸಿನಿಮಾ ಪರದೆ ಹರಿದು ಹಾಕಿ ಸೀಟ್‌ಗಳನ್ನು ಕಿತ್ತು ಬಿಸಾಡಿ, ಎಂ.ಜಿ.ಆರ್.ಗೆ, ಕರುಣಾನಿಧಿಗೆ ಧಿಕ್ಕಾರ ಹಾಕಿ, 'ಕನ್ನಡಕ್ಕೆ ಜಯವಾಗಲಿ' ಎಂದು ಚಿತ್ರಮಂದಿರದಿಂದ ಹೊರಗೆ ಬಂದರು. ಇತಿಹಾಸವನ್ನು ಸುಳ್ಳು ಮಾಡಿ ಕನ್ನಡಿಗರಿಗೆ ಅವಮಾನ ಮಾಡಿದ್ದ ಚಿತ್ರವನ್ನು ಸರ್ಕಾರವು ರದ್ದುಮಾಡಿತು. ಕಾಂಚಿತಲೈವನ್ ಚಿತ್ರದ ಪ್ರಕರಣದಿಂದ ಕನ್ನಡ ಕೇಸರಿ ಮ.ರಾಮಮೂರ್ತಿಯವರಿಗೂ ಅ.ನ.ಕೃ.ರವರಿಗೂ ಭಿನ್ನಾಭಿಪ್ರಾಯ ಬಂದು, ಅ.ನ.ಕೃ. ಕನ್ನಡ ಚಳವಳಿಯಿಂದ ಹಿಂದೆ ಸರಿದರು. ಆದರೂ ಮ.ರಾಮಮೂರ್ತಿಯವರು ಚಳವಳಿಯನ್ನು ಮುಂದುವರಿಸಿದರು. ಪುಸ್ತಕ ಮಾರಿದ ಹಣವನ್ನು ಚಳವಳಿಗೆ ಉಪಯೋಗಿಸಿದ್ದರಿಂದಾಗಿ ಸಂಸಾರ ನಡೆಸುವುದು ಕಷ್ಟವಾಗಿತ್ತು. ಅವರ ತಂದೆ ವೀರಕೇಸರಿ ಸೀತಾರಾಮಶಾಸ್ತ್ರಿಗಳು ದೊಡ್ಡ ವಿದ್ವಾಂಸರು, ಬರಹಗಾರರು, ಸ್ವಾತಂತ್ರ್ಯ ಹೋರಾಟಗಾರರು. ಅವರಿಗೆ ಸರ್ಕಾರವು

ತಲಘಟ್ಟಪುರದ ಬಳಿ (ತ್ಯಾಗಿಲ್ಯಾಂಡ್) ಜಮೀನನ್ನು ನೀಡಿತ್ತು. ಅದರಲ್ಲಿ ಟೊಮೆಟೋ ಗಿಡ ಬೆಳೆಯಲು ಒಂದು ಭಾವಿಯನ್ನು ತೋಡಿಸಲು ಪ್ರಾರಂಭಿಸಿದರು. ಆದರೆ ಅವರ ಹತ್ತಿರ ಹಣವಿರಲಿಲ್ಲ. ಯಶವಂತಪುರದಲ್ಲಿ ರಾಮದಾಸ್ ಎನ್ನುವ ಕನ್ನಡ ಪಕ್ಷದ ಮುಖಂಡರು, ಮ.ರಾಮಮೂರ್ತಿಯವರ ಅಭಿಮಾನಿ, ಬಾವಿಯನ್ನು ತೋಡಿಸಲು ಹಣದ ಸಹಾಯ ಮಾಡಿದರು. ಬಾವಿಯಲ್ಲಿ ನೀರು ಬಂದಾಗ, ಬಾವಿತೋಡುತ್ತಿದ್ದ ಕೆಲಸಗಾರರು ಸುದ್ದಿ ಹೇಳಿ ಕಳುಹಿಸಿದರು. ಅದನ್ನು ನೋಡಲು ಡಿಸೆಂಬರ್ ೨೫ ೧೯೬೭ರ ಕ್ರಿಸ್‌ಮಸ್ ಹಬ್ಬದ ದಿವಸ ಅವರ ಇಬ್ಬರು ಮಕ್ಕಳನ್ನು ಕರೆದುಕೊಂಡು ತಲಘಟ್ಟಪುರಕ್ಕೆ ಹೋಗಿ ಆ ಬಾವಿಯಲ್ಲಿ ನೀರಿಗೆ ಪೂಜೆ ಮಾಡಲು ಮಣ್ಣಿನ ಮೆಟ್ಟಿಲು ಇಳಿದು ಒಳಗೆ ಹೋದರು. ತನ್ನ ಇಬ್ಬರು ಮಕ್ಕಳು ಮತ್ತು ಇಬ್ಬರು ಕೂಲಿ (ಕೆಲಸದ ಆಳು)ಗಳು ಮ.ರಾಮಮೂರ್ತಿಯವರು ಸೇರಿ ಎಲ್ಲರ ಮೇಲೂ ಮಣ್ಣು ಕುಸಿದು ದುರಂತಮಯ ಅಂತ್ಯವಾಯಿತು. ಯಾವ ಕನ್ನಡದ ಮಣ್ಣಿಗೋಸ್ಕರ ಕನ್ನಡದ ಉಸಿರಾಗಿದ್ದರೋ ಅಂತಹ ಮ.ರಾಮಮೂರ್ತಿಯವರನ್ನು ಮಣ್ಣು ಬಲಿ ತೆಗೆದುಕೊಂಡುಬಿಟ್ಟಿತು.

ಮ.ರಾಮಮೂರ್ತಿಯವರು ಕನ್ನಡ ಚಳವಳಿಯ ಮುಖವಾಣಿಯಾಗಿ ಯುವಜನ ಪತ್ರಿಕೆಯನ್ನು ತಂದರು. ಅವರ ಸಂಪಾದಕತ್ವದಲ್ಲಿ ಕನ್ನಡಿಗರನ್ನು ಜಾಗೃತಿಗೊಳಿಸುವ ಅದ್ಭುತ ಲೇಖನಗಳು ಬರುತ್ತಿದ್ದವು. ಇವರು ನಲವತ್ತೆರಡು ಕಾದಂಬರಿಗಳನ್ನು ಬರೆದಿದ್ದಾರೆ. ಪತ್ತೇದಾರಿ ಕಾದಂಬರಿಗಳನ್ನು ಹೆಚ್ಚು ಬರೆದಿದ್ದಾರೆ. ಅನೇಕ ಭಿನ್ನಾಭಿಪ್ರಾಯಗಳಿಂದ ಇಂದಿನ ಚಳವಳಿಗಾರರಲ್ಲಿ ಒಮ್ಮತವಿಲ್ಲದೆ ಒಬ್ಬೊಬ್ಬರು ಒಂದೊಂದು ರೀತಿಯ ಚಳವಳಿ ಮಾಡುತ್ತಿದ್ದಾರೆ. ಒಬ್ಬರು ಇನ್ನೊಬ್ಬರನ್ನು ವಿರೋಧಿಸಿ ಚಳವಳಿ ಮಾಡುತ್ತಾರೆ. ಇನ್ನೂ ಕೆಲವರು ರಾಜಕೀಯ ಲಾಭ ಪಡೆಯುತ್ತಾರೆ. ಕೆಲವು ಸಾಹಿತಿಗಳು ಪ್ರಶಸ್ತಿಗೆ ಆಸೆಪಟ್ಟು ಸರ್ಕಾರವನ್ನು ಓಲೈಸಿಕೊಂಡಿದ್ದಾರೆ. ಮ.ರಾಮಮೂರ್ತಿಯಂಥ ಅಗ್ರಗಣ್ಯ ನಾಯಕರು ಇಂದಿನ ಚಳವಳಿಗಾರರಿಗೆ ಆದರ್ಶವಾಗಬೇಕು.

ಅ.ನ.ಕೃ., ನಾಡಿಗೇರ ಕೃಷ್ಣರಾಯರು, ತ.ರಾ. ಸುಬ್ಬರಾಯರು, ಅ. ಸಂಜೀವಪ್ಪ ಮೈ.ಸು. ನಟರಾಜ್, ಬಸವರಾಜು, ಕೇಸರಿ ಗೋಪಿನಾಥ್, ಸೈಕಲ್ ಸುಬ್ಬರಾವ್, ಬೆ.ನಿ. ಈಶ್ವರಪ್ಪ, ಕ.ಮು. ಸಂಪಂಗಿರಾಮಯ್ಯ, ಸಾ.ಕೃ.ಸಂಪಂಗಿ, ಮು.ಗೋವಿಂದರಾಜು ಇನ್ನೂ ಅನೇಕ ಕನ್ನಡ ಚಳವಳಿಯ ಮುಖಂಡರು ಯಾವುದೇ ನಿರೀಕ್ಷೆಯನ್ನೂ ಇಟ್ಟುಕೊಳ್ಳದೇ ಯಾವ ಅಧಿಕಾರವನ್ನೂ ಬಯಸದೇ ಒಂದು ತಪಸ್ಸಿನಂತೆ, ಕನ್ನಡತಾಯಿ ರಥವನ್ನು ಎಳೆದರು. ಎಲ್ಲಾ ಕನ್ನಡಿಗರೂ ಒಂದಾಗಬೇಕು ಎಂದು ಪ್ರಾರಂಭವಾದ ಕನ್ನಡ ಚಳವಳಿಯು ಅನೇಕ ಗುಂಪುಗಳಾಗಿ ಒಡೆದುಹೋಗಿವೆ. ಎಲ್ಲಾ ಭಿನ್ನಾಭಿಪ್ರಾಯಗಳನ್ನು ಬಿಟ್ಟು, ಒಂದೇ ನಾಯಕತ್ವದಲ್ಲಿ ಎಲ್ಲಾ ಕನ್ನಡಶಕ್ತಿಗಳೂ ಒಂದಾದರೆ, ರಾಜಕೀಯ ಶಕ್ತಿ ಯಾದರೆ, ಏಳು ಸಾಮ್ರಾಜ್ಯಗಳನ್ನು ಕಟ್ಟಿದ ವೀರ ಕನ್ನಡಿಗರು ಎಂಟನೇ ಸಾಮ್ರಾಜ್ಯವನ್ನೂ ಸಹ ಕಟ್ಟಬಹುದು. ರಾಷ್ಟ್ರೀಯಪಕ್ಷಗಳಿಂದ ಕನ್ನಡಿಗರಿಗೆ ಉಳಿಗಾಲವಿಲ್ಲ ಎಂಬುದನ್ನು ಮನಗಂಡ ಮ.ರಾಮಮೂರ್ತಿಯವರು, ಪ್ರಾಂತೀಯ ಪಕ್ಷವಾದ 'ಕನ್ನಡ ಪಕ್ಷ'ವನ್ನು

ಸ್ಥಾಪಿಸಿ, ಅದಕ್ಕೆ ಒಂದು ಸಂವಿಧಾನ, ಒಂದು ಬಾವುಟವನ್ನು ಕೊಟ್ಟಿದ್ದಾರೆ. ಇಂದು ಕನ್ನಡನಾಡಿನ ತುಂಬ ಅದೇ ಕನ್ನಡ ಬಾವುಟ ಹಾರುತ್ತಿದೆ. ಆದರೆ ಕನ್ನಡಿಗರು ಒಂದು ರಾಜಕೀಯ ಶಕ್ತಿಯಾಗಿ ಇನ್ನೂ ಒಗ್ಗೂಡಿಲ್ಲ.

ಕನ್ನಡ ಚಳವಳಿಯ ಪ್ರಭಾವ : ೬೦ರ ದಶಕದಲ್ಲಿ ನವೆಂಬರ್ ಒಂದರಂದು ಸರ್ಕಾರವು ರಜೆ ಕೊಡುತ್ತಿರಲಿಲ್ಲ. ಕನ್ನಡ ಚಳವಳಿಯ ಬೇಡಿಕೆಯಿಂದ ಕರ್ನಾಟಕ ಸರ್ಕಾರವು ರಜಾ ಘೋಷಣೆಯನ್ನು ಮಾಡಿತು. ಮೊದಲು ವರ್ಷಕ್ಕೆ ಒಂದು ಅಥವಾ ಎರಡು ಕನ್ನಡ ಚಲನಚಿತ್ರಗಳು ಬಿಡುಗಡೆಯಾಗುತ್ತಿದ್ದವು. ಕನ್ನಡ ಕಲಾವಿದರು ಹಳ್ಳಿ ಹಳ್ಳಿಗಳಿಗೆ ಹೋಗಿ ನಾಟಕ ಮಾಡಿ ಜೀವನವನ್ನು ಸಾಗಿಸುತ್ತಾ ಇದ್ದರು. ಇಂದು ಕನ್ನಡ ಚಿತ್ರರಂಗ ಬೆಳೆದಿದೆ. ನೂರಾರು ಚಿತ್ರಗಳು ಬಿಡುಗಡೆಯಾಗುತ್ತಿವೆ. ನಾಯಕನಟನಿಗೆ ಸಂಭಾವನೆಯಾಗಿ ಕೋಟಿಗಟ್ಟಲೆ ನೀಡುತ್ತಿದ್ದಾರೆ. ಅದೇ ರೀತಿ ಕನ್ನಡ ಪತ್ರಿಕೆಗಳ ಪ್ರಸಾರವೂ ಲಕ್ಷಗಟ್ಟಲೆ ಏರಿದೆ. ಓದುಗರ ಸಂಖ್ಯೆಯೂ ಹೆಚ್ಚಾಗಿದೆ. ಕನ್ನಡ ಕಾವಲು ಸಮಿತಿ/ಕನ್ನಡ ಅಭಿವೃದ್ಧಿ ಪ್ರಾಧಿಕಾರಗಳು ಇವೆ. ಇಂದು ಕನ್ನಡ–ಕನ್ನಡಿಗ–ಕರ್ನಾಟಕಕ್ಕೆ ಯಾವ ಭಾಗದಲ್ಲೇ ಅನ್ಯಾಯವಾದರೂ ತಕ್ಷಣ ಕನ್ನಡಿಗರು ಜಾಗೃತರಾಗಿ ಪ್ರತಿಭಟನೆಯನ್ನು ಮಾಡುತ್ತಾರೆ. ಶ್ರೀಸಾಮಾನ್ಯರಿಂದ ಪ್ರಾರಂಭವಾದ ಈ ಚಳವಳಿಗಾಗಿ ಹೋಟೆಲ್ ಕಾರ್ಮಿಕರು, ಸಣ್ಣಪುಟ್ಟ ಕೆಲಸ ಮಾಡುತ್ತಿದ್ದ ಹುಡುಗರು ಬಹಳ ಶ್ರಮಿಸಿದ್ದಾರೆ. ಅವರ ಕೊಡುಗೆ ಅಪಾರವಾಗಿದೆ. ಇಂದು ಅನೇಕ ಬುದ್ಧಿಜೀವಿಗಳು, ವಿಚಾರವಾದಿಗಳು ವಿದ್ಯಾವಂತರು ಕನ್ನಡಪರ ಹೋರಾಟಗಳಲ್ಲಿ ಭಾಗವಹಿಸುತ್ತಿದ್ದಾರೆ. ತ್ಯಾಗ, ಬಲಿದಾನಗಳನ್ನು ಮಾಡಿರುವ ಕನ್ನಡ ಚಳವಳಿಗಾರರು ಮ.ರಾಮಮೂರ್ತಿಯವರ 'ಕನ್ನಡಶಕ್ತಿ ಕರ್ನಾಟಕ ರಾಜ್ಯವನ್ನು ಆಳಬೇಕು' ಎಂಬ ಆಸೆಯನ್ನು ನೆರವೇರಿಸಬೇಕು. ಅದು ನನಸಾಗುವ ದಿನ ಬೇಗ ಬರಲಿ, ಕನ್ನಡ ಚಿತ್ರರಂಗದ ಎಪ್ಪತ್ತೈದನೇ ವರ್ಷದ ಸಂಭ್ರಮದಲ್ಲಿ ಕನ್ನಡ ಚಳವಳಿಗಾರರನ್ನು ಸನ್ಮಾನಿಸಬೇಕಾಗಿತ್ತು. ಆ ಸಂದರ್ಭದಲ್ಲಿ ಚಿತ್ರರಂಗದವರು ಕನ್ನಡ ಹೋರಾಟಗಾರರನ್ನು ಮರೆತಿದ್ದಾರೆ. ಕನ್ನಡ ಚಳವಳಿಯನ್ನು ಇಂದು ಸಮಾನತೆಯ ತಳಹದಿಯಲ್ಲಿ ನಾಯಕರು ಮುನ್ನಡೆಸಬೇಕು. ಮ.ರಾಮಮೂರ್ತಿಯವರಂತಹ ನಾಯಕರು ಬರಬೇಕು. ಕನ್ನಡಿಗರಿಗೆಲ್ಲರಿಗೂ ವಿದ್ಯೆ, ಉದ್ಯೋಗ, ವಸತಿ ಒದಗಿಸುವಂತಹ ನಾಯಕರು ಬರಬೇಕು ಸರ್ವಕನ್ನಡಿಗರಿಗೂ ಸಮಬಾಳು ಮತ್ತು ಸಮಪಾಲು ಬರುವಂತೆ ಆಗಬೇಕು. ಇಂತಹ ಕನಸು ಕಂಡ ಮ. ರಾಮಮೂರ್ತಿಯವರು ಅಮರರಾಗಲಿ !

❐



ಕನ್ನಡ ಚಳವಳಿ – ಒಂದು ಹಿನ್ನೋಟ

■ ಪ್ರೊ. ಸ.ನ. ವಿಶ್ವೇಶ್ವರಯ್ಯ

೧೯೫೬ರಲ್ಲಿ ಭಾಷಾವಾರು ಪ್ರಾಂತ್ಯಗಳ ರಚನೆಯಾದ ಸಂದರ್ಭದಲ್ಲಿ ಮೈಸೂರು ಸಂಸ್ಥಾನದೊಂದಿಗೆ ನಿಜಾಮರ ಆಳ್ವಿಕೆಯಲ್ಲಿದ್ದ ಹೈದರಾಬಾದ್, ಬ್ರಿಟಿಷರ ಆಳ್ವಿಕೆಯಲ್ಲಿದ್ದ ಮದರಾಸ್ ಮತ್ತು ಮುಂಬಯಿ ಪ್ರಾಂತ್ಯಗಳ ಕನ್ನಡ ಪ್ರದೇಶಗಳು ಹಾಗೂ ಸ್ವತಂತ್ರ ಕೊಡಗು ರಾಜ್ಯ ವಿಲೀನಗೊಂಡ ಬೆನ್ನಲ್ಲೇ ಗೊಂದಲಗಳು ಸೃಷ್ಟಿಯಾದವು. ಹೈದರಾಬಾದ್ ಪ್ರದೇಶದ ಜನರು ಉರ್ದು ಮಿಶ್ರಿತ ಕನ್ನಡ ಮಾತಾಡುವವರಾದರೆ, ಮುಂಬೈ ಕರ್ನಾಟಕದ ಜನರು ಮರಾಠಿ ಮಿಶ್ರಿತ ಕನ್ನಡ ಮಾತಾಡುವವ ರಾಗಿದ್ದರು. ಈಗಿನ ಆಂಧ್ರ ಗಡಿಗೆ ಹೊಂದಿಕೊಂಡ ಪ್ರದೇಶದವರು ತೆಲುಗು ಮಿಶ್ರಿತ ಕನ್ನಡ ಭಾಷಿಕರು. ಕೊಡಗಿನವರ ಮೇಲೆ ನೆರೆ ರಾಜ್ಯ ಕೇರಳದ ಮಲೆಯಾಳಂ ಭಾಷೆಯ ಪ್ರಭಾವ! ಹೀಗಾಗಿ ಅವರೆಲ್ಲ ಹಿಂದಿನ ಮೈಸೂರು ಸಂಸ್ಥಾನದ ಕನ್ನಡಿಗರೊಂದಿಗೆ ಬೆರೆಯುವುದು ತಡವಾಯಿತು. ಇದರ ಜೊತೆಗೆ ನೆರೆಹೊರೆ ರಾಜ್ಯದವರು ಗಡಿ ತಗಾದೆ ಶುರುವಿಟ್ಟುಕೊಂಡರು. ಅಷ್ಟೇ ಅಲ್ಲ, ಈ ಸಮಸ್ಯೆಯನ್ನು ಇನ್ನೂ ಜೀವಂತವಾಗಿರಿಸಿ, ಸತತ ಕಿರಿಕಿರಿ ಉಂಟು ಮಾಡುತ್ತಿದ್ದಾರೆ. ಬೆಳಗಾವಿ, ಕಾಸರಗೋಡು, ತಾಳವಾಡಿ ಫಿರ್ಕಾ ಈ ಭಾಗಗಳ ಕನ್ನಡಿಗರು ಪರಭಾಷಿಕರಿಂದ ಈಗಲೂ ಕಿರುಕುಳ ಅನುಭವಿಸುತ್ತಿದ್ದಾರೆ. ಮರಾಠಿಗರ ದೌರ್ಜನ್ಯವನ್ನು ಕೆಲವು ಸಾಹಿತಿಗಳು ಕನ್ನಡಾಭಿಮಾನಿಗಳು, ಚಳವಳಿಗಾರರು ವಿರೋಧಿಸುತ್ತ ಬಂದರು. ಬೆಳಗಾವಿಯನ್ನು ಕರ್ನಾಟಕದಲ್ಲೇ ಉಳಿಸಿಕೊಳ್ಳಲು ಸಾಕಷ್ಟು ಶ್ರಮ ವಹಿಸುತ್ತಿದ್ದರೂ ರಾಜಕೀಯ ಕಿತಾಪತಿಗಳು ಇನ್ನೂ ನಿಂತಿಲ್ಲ. ಇದೇ



ರೀತಿ ಕಾಸರಗೋಡಿನಲ್ಲಿ ಸಾಹಿತಿ ಕಯ್ಯಾರ ಕಿಜ್ಞಣ್ಣ ರೈ ಕೇರಳದ ವಿರುದ್ಧ ಮೊದಲು ಸೊಲ್ಲೆತ್ತಿದವರು. ಅವರೊಂದಿಗೆ ಅಲ್ಲಿನ ಸಾಹಿತಿಗಳೂ ಕನ್ನಡ ಕಾರ್ಯಕರ್ತರೂ ಕೈಜೋಡಿಸಿದರು. ರೈ ಅವರು ತಮ್ಮ ಇಳಿವಯಸ್ಸಿನಲ್ಲೂ ಹೋರಾಟದ ಕಸುವನ್ನು ಇಟ್ಟುಕೊಂಡಿದ್ದಾರೆ. ಇನ್ನು ಈಗ ತಮಿಳುನಾಡಿಗೆ ಸೇರಿಹೋಗಿರುವ ತಾಳವಾಡಿ ಫಿರ್ಕಾದ ಕನ್ನಡಿಗರ ಗತಿಯೂ ಇದೇ ಆಗಿದ್ದು, ಪ್ರಬಲ ವಿರೋಧ ವ್ಯಕ್ತವಾದರೂ ಅದೊಂದು ಚಳವಳಿಯಾಗಿ ಬೆಳೆಯಲಿಲ್ಲ.

ಇಂತಹ ಎಲ್ಲ ವಿದ್ಯಮಾನಗಳನ್ನೂ ಸೂಕ್ಷ್ಮವಾಗಿ ಗಮನಿಸುತ್ತಿದ್ದ ಬೆಂಗಳೂರಿನ ಹಿರಿಯ-ಕಿರಿಯ ಸಾಹಿತಿಗಳು ಅಲ್ಲಲ್ಲಿ ಸಭೆ ನಡೆಸಿ, ಗಡಿ ಸಮಸ್ಯೆಯ ಪರಿಹಾರಕ್ಕೆ ಮಾರ್ಗೋಪಾಯ ಹುಡುಕುತ್ತಿದ್ದುದು ಒಂದು ರೀತಿಯಲ್ಲಿ ಚಳವಳಿಗೆ ಮೂಲ ಕಾರಣವಾಯಿತು. ಪ್ರಾರಂಭದಲ್ಲಿ ಗಡಿ, ಪುನರ್ವಸತಿ, ಉದ್ಯೋಗ-ಹೀಗೆ ಕೆಲವೊಂದು ಸಮಸ್ಯೆಗಳ ನಿವಾರಣೆಗೆಂದು ಇದು ಪ್ರಾರಂಭವಾದರೂ, ಪ್ರತಿಭಟನಾ ರೂಪದ ಭಾಷಣಗಳಿಗಷ್ಟೇ ಸೀಮಿತವಾಗಿತ್ತು. ಹೋರಾಟದ ಸ್ವರೂಪ ಪಡೆಯಲೇ ಇಲ್ಲ. ಕಿರಿಯರು ಮಾತ್ರ ಹೋರಾಟಕ್ಕೆ ಸಿದ್ಧವಾಗಿದ್ದು ಸೂಕ್ತ ನಾಯಕತ್ವ ಮತ್ತು ಸಮಯಕ್ಕಾಗಿ ಕಾಯುತ್ತಿದ್ದರು.

ಬೆಂಗಳೂರಿನ ಚಾಮರಾಜಪೇಟೆಯಲ್ಲಿ ಪ್ರತಿವರ್ಷ ನಡೆಸಲಾಗುತ್ತಿದ್ದ ಅದ್ಧೂರಿಯಾದ ರಾಮೋತ್ಸವಕ್ಕೆ ಪರರಾಜ್ಯದ ಸಂಗೀತಗಾರರಿಗೇ ಮಣೆ! ಸ್ಥಳೀಯ ಕಲಾವಿದರು ಈ ಬಗ್ಗೆ ಸೊಲ್ಲೆತ್ತುತ್ತಿದ್ದರೂ, ಅದಕ್ಕೆ ಜನಸಾಮಾನ್ಯರ ಬೆಂಬಲ ಸಿಗದೆ ವರ್ಷದಿಂದ ವರ್ಷಕ್ಕೆ ಹೊರಗಿನವರ ಹಾವಳಿಯೇ ಹೆಚ್ಚುತ್ತಾ ಹೋಯಿತು. ಆ ದಿನ ರಾಮೋತ್ಸವ ಸಂಗೀತವನ್ನು ಆಲಿಸಲು ಜನ ಸಿಟಿ ಇನ್‌ಸ್ಟಿಟ್ಯೂಟ್‌ನ ಪೌಳಿ ಗೋಡೆಯ ಮೇಲೆ ಕುಳಿತಿದ್ದರು. ಆಗ ಶುರುವಾಯಿತು ನೋಡಿ ಕಲ್ಲಿನ ಸುರಿಮಳೆ! ನಾಲ್ಕೂ ಕಡೆಗಳಿಂದ ಶಿಲಾವರ್ಷ! ಪೊಲೀಸರು ಜನರನ್ನು ಚದುರಿಸಲು ಲಾಠಿ ಪ್ರಹಾರ ಮಾಡಬೇಕಾಯಿತು. ಆ ಬಳಿಕ ಮೊಳಕೆಯೊಡೆದದ್ದೇ ಕನ್ನಡ ಚಳವಳಿ.

೧೯೬೦ರ ನವೆಂಬರ್ ೧ನೇ ತಾರೀಖಿನಂದು ಮ.ರಾಮಮೂರ್ತಿ ಮತ್ತು ಅ.ನ.ಕೃ. ಕನ್ನಡ ಸಂಯುಕ್ತ ರಂಗವನ್ನು ಹುಟ್ಟುಹಾಕಿದರು. ಆಗಿನ ಸುಭಾಷ್ ನಗರ ಮೈದಾನ (ಈಗಿನ ಕೆಂಪೇಗೌಡ ಬಸ್‌ನಿಲ್ದಾಣ)ದಲ್ಲಿ ಅಂದು ಬೆಳಗ್ಗೆ ೯:೩೦ಕ್ಕೆ ಮೊದಲ ಕನ್ನಡ ರಾಜ್ಯೋತ್ಸವ ಸಮಾರಂಭ ನಡೆಯಿತು. ಅಲ್ಲಿಗೆ ಬಂದಿದ್ದವರಲ್ಲಿ ಶೇ. ೯೦ ರಷ್ಟು ಜನ ಹೋಟೆಲ್ ಮತ್ತು ಕಾರ್ಖಾನೆ ಕಾರ್ಮಿಕರು. ಅವರೆಲ್ಲರಲ್ಲಿ ಅಂದು ಹುಟ್ಟಿದ ಕನ್ನಡ ಕಿಚ್ಚು ಮತ್ತು ಕೆಚ್ಚು ಈಗಲೂ ಮುಂದುವರಿದಿದೆ. ಆ ಜನ ಈಗಲೂ ಹಲವು ಸಂಘ-ಸಂಸ್ಥೆಗಳ ಜೊತೆ ಗುರ್ತಿಸಿಕೊಂಡು ಕನ್ನಡ ನೆಲ, ಜಲ, ಭಾಷೆಗಳಿಗಾಗಿ ಹೋರಾಡುತ್ತಲೇ ಇದ್ದಾರೆ.

ಕನ್ನಡ ಸಾಹಿತ್ಯ ಪರಿಷತ್‌ನ ಅಂದಿನ ಅಧ್ಯಕ್ಷರಾಗಿದ್ದ ಶಿವಮೂರ್ತಿ ಶಾಸ್ತ್ರಿಗಳೇ ಅಧ್ಯಕ್ಷರಾಗಿ ಮುಂದುವರಿಯಬೇಕೆಂದು ಪರಿಷತ್ತಿನ ಉದ್ದಗಲಕ್ಕೂ ಗದ್ದಲ ಎಬ್ಬಿಸಿದ ವಾಟಾಳ್ ನಾಗರಾಜ್ ಕನ್ನಡ ಚಳವಳಿಯನ್ನೂ ಮುಂದುವರಿಸಿದರು. ಇವರ ಜೊತೆಗೆ ನಾಡಿಗೇರ ಕೃಷ್ಣರಾಯರಂಥ ಹಿರಿಯಸಾಹಿತಿಗಳೂ, ಹಲವು ಕಿರಿಯ ಸಾಹಿತಿಗಳೂ ಬಂದು ಸೇರಿದರು. ಅಲ್ಲಲ್ಲಿ ಸಭೆಗಳಾಗುತ್ತಿದ್ದವು. ಆಗಲೇ ಅದೊಂದು ಸಂಘಟಿತ

ಹೋರಾಟವಾಗುವ ಬದಲು, ಪರಸ್ಪರ ವಿರೋಧಾಭಾಸದ ಹೇಳಿಕೆಗಳಿಂದ ಚಳವಳಿಯ ಹಾದಿಯೇ ಬದಲಾಯಿತು. ಚಳವಳಿಗಳೇನೋ ನಡೆದುವಾದರೂ, ಗುಂಪು ಗುಂಪುಗಳಲ್ಲಿ ನಡೆದವು ಅಷ್ಟೆ. ಚಳವಳಿಯಲ್ಲಿ ಸಾಮಾನ್ಯರು, ಮಹಿಳೆಯರು ಭಾಗವಹಿಸುತ್ತಿರಲಿಲ್ಲ. ಮನೆಮನೆಯದಾಗಬೇಕಿದ್ದ ಕನ್ನಡ ಚಳವಳಿ ಕೆಲವರ ಖಾಸಗಿ ಚಳವಳಿಯಾಯಿತು. ಇಂದು ಕೂಡಾ ಹಾಗೆಯೇ ನಡೆದುಬಂದಿದೆ. ಸಂಘ, ಸಂಸ್ಥೆಗಳು ಸಂಘಟನೆ ಹೊಂದಲು ಅಲ್ಲಲ್ಲಿ ಪ್ರಯತ್ನಗಳಾದರೂ ಫಲಕಾರಿಯಾಗಲಿಲ್ಲ. ಹೀಗಾಗಿ ಇಂದು ನೂರಾರು ಸಂಘ ಸಂಸ್ಥೆಗಳು ರಾಜ್ಯೋತ್ಸವ ಆಚರಿಸುವುದನ್ನಂತೂ ಮಾಡುತ್ತ ಬಂದಿವೆ ಎಂಬುದೇ ಒಂದು ಸಮಾಧಾನದ ವಿಷಯ. ಕಾಲಕ್ರಮೇಣ ಈ ಸಂಘಟನೆಗಳಿಗೆ ರಾಜಕೀಯ ಪಕ್ಷಗಳ ನಂಟು ಬೆಳೆದು ರಾಜ್ಯೋತ್ಸವ 'ಅದ್ಧೂರಿ'ಯಾಗಲು ಶುರುವಾಯ್ತು. ತಿಂಗಳ ಪೂರ್ತಿ ವಿಸ್ತರಿಸಿದ ಅಬ್ಬರ ಸಂಗೀತದ, ಝುಗಮಗ ವಿದ್ಯುದ್ದೀಪಗಳ ವೈಭವ ಏರ್ಪಟ್ಟಿತು. ಒಂದಂತೂ ನಿಜ ವಾಟಾಳ್‌ನಾಗರಾಜ್‌ರ ಚಳವಳಿ ಹೇಗಾದರೂ ಇರಲಿ, ಅದರಿಂದ ಜನರಲ್ಲಿ ಕನ್ನಡ ಪ್ರಜ್ಞೆಯ ಜಾಗೃತಿಯಂತೂ ಆಯಿತೆಂಬುದು ಉತ್ಪ್ರೇಕ್ಷೆಯ ಮಾತಲ್ಲ. ಅವರ ಚಳವಳಿಯ ಪ್ರಖರತೆ ಹೇಗಿತ್ತೆಂದರೆ ಒಂದು ಹಂತದಲ್ಲಿ 'ಕನ್ನಡ ಎಂದರೆ ವಾಟಾಳ್; ವಾಟಾಳ್ ಎಂದರೆ ಕನ್ನಡ' ಎನ್ನಬಹುದಿತ್ತು.

ವಾಟಾಳರ ವಿಶಿಷ್ಟ ರೀತಿಯ ಚಳವಳಿಯಿಂದಾಗಿ ಮಾರ್ವಾಡಿಗಳು ಕನ್ನಡ ಕಲಿತರಷ್ಟೇ ಅಲ್ಲ, ಪರೋಕ್ಷವಾಗಿ ಚಳವಳಿಗೂ ಸಹಕರಿಸಿದರು. ತೆಲುಗರಂತೂ ಮನೆಯಲ್ಲಿ ತೆಲುಗು, ಹೊರಗೆ ಕನ್ನಡ ಅನ್ನುವ ಮಟ್ಟಿಗೆ ಬದಲಾದರು. ಮಲೆಯಾಳಿಗಳು ನಮಗಿಂತಲೂ ಚೆನ್ನಾಗಿ ಕನ್ನಡ ಕಲಿತರೇನೋ! ಆದರೆ ತಮಿಳರು ಮಾತ್ರ ಅಂದಿನಿಂದ ಇಂದಿನವರೆಗೂ ಹಾಗೆಯೇ ಹಠಮಾರಿಗಳಾಗಿಯೇ ಉಳಿದಿದ್ದಾರೆ. ಮರಾಠಿಗಳು ಹಾಗೂ ಹೀಗೂ ಹೊಂದಿಕೊಂಡರು. ಮುಸಲ್ಮಾನ ಬಾಂಧವರಲ್ಲೂ ಸಾಕಷ್ಟು ಮನಃಪರಿವರ್ತನೆ ಆಗಿ, ಶಾಲೆಗಳಲ್ಲಿ ಉರ್ದು ಬದಲಿಗೆ ಕನ್ನಡವನ್ನೇ ತಮ್ಮ ಮಕ್ಕಳಿಗೆ ಕಲಿಸಿದರು. ಇಂತಹ ಬೆಳವಣಿಗೆಗಳ ಹೆಚ್ಚಿನ ಶ್ರೇಯಸ್ಸು ವಾಟಾಳರಿಗೇ ಸಲ್ಲುತ್ತದೆಂದರೆ ತಪ್ಪಾಗದು. ಅದರಲ್ಲೂ ಡಬ್ಬಿಂಗ್ ಹಾಗೂ ಪರಭಾಷಾ ಚಿತ್ರಗಳ ವಿರುದ್ಧ ವಾಟಾಳ್ ನಾಗರಾಜ್ ಮತ್ತಿತರರು ಸತತ ಹೋರಾಟ ನಡೆಸಿದ್ದರಿಂದ ಹೆಚ್ಚಿನ ಲಾಭವಾಗಿದ್ದು ಕನ್ನಡ ಚಿತ್ರರಂಗಕ್ಕೆ. ಕನ್ನಡಚಿತ್ರ ರಂಗದ ಮೇರುನಟ ಡಾ. ರಾಜ್ ನಟಿಸಿದ ಚಿತ್ರಗಳು ಕರ್ನಾಟಕದ ಉದ್ದಗಲಕ್ಕೂ ಮುಟ್ಟಿ ಆ ನಟ ಮನೆಮನೆಗಳಲ್ಲಿ ಮನಮನಗಳಲ್ಲಿ, ಶಾಶ್ವತವಾಗಿ ಪ್ರತಿಷ್ಠಾಪನೆಯಾದರು. ಆಬಾಲವೃದ್ಧರಾದಿಯಾಗಿ ಎಲ್ಲರೂ ಡಾ. ರಾಜ್ ಅಭಿಮಾನಿಗಳಾದರು. ಅದರೊಂದಿಗೆ ಕನ್ನಡ ಚಿತ್ರರಂಗವೂ ಉತ್ತುಂಗಕ್ಕೇರಿತು. ಆಗ ಪ್ರಾರಂಭವಾಯಿತು ಡಾ. ರಾಜ್ ಅಭಿಮಾನಿಗಳ ಸಂಘ. ಸಾ.ರಾ. ಗೋವಿಂದು ಅವರ ನೇತೃತ್ವದಲ್ಲಿ ಕರ್ನಾಟಕದ ಪ್ರತಿ ಊರುಗಳಲ್ಲಿ ಸಂಘ ಪ್ರಾರಂಭವಾಯಿತು. ಬೆಂಗಳೂರಿಗಷ್ಟೇ ಸೀಮಿತವಾಗಿದ್ದ ಕನ್ನಡ ಚಳವಳಿ ನಾಡಿನ ಉದ್ದಗಲಕ್ಕೂ ಹಬ್ಬಿತು. ರಸ್ತೆ ತಡೆ, ರೈಲುತಡೆ, ಪ್ರತಿಭಟನೆ, ಸತ್ಯಾಗ್ರಹ ತಮಟೆ ಚಳವಳಿ ಹೀಗೆ ನಾನಾ ರೂಪದಲ್ಲಿ ಕನ್ನಡ ವಿರೋಧಿಗಳಿಗೆ ದಿಗಿಲು ಹುಟ್ಟಿಸಿತು. ವಾಟಾಳ್‌ರೊಂದಿಗಿದ್ದ ಮು.ಗೋವಿಂದರಾಜು ರೈಲಿಗೆ ತಲೆಯೊಡ್ಡಿ ಹುತಾತ್ಮರಾದರು.

ಚಳವಳಿಯ ಕಾವು ಆರುವ ಮುನ್ನವೇ ಎಂ. ಚಿದಾನಂದಮೂರ್ತಿಗಳ ನೇತೃತ್ವದಲ್ಲಿ 'ಕನ್ನಡ ಶಕ್ತಿ ಕೇಂದ್ರ'ವು ತಲೆ ಎತ್ತಿತ್ತು. ಇವರ ಚಳವಳಿಯು ಸೌಮ್ಯ ಸ್ವರೂಪದ್ದಾಗಿದ್ದರಿಂದಲೋ ಏನೋ, ಗೃಹಿಣಿಯರೂ ಬಹಿರಂಗ ಚಳವಳಿಗಳಲ್ಲಿ ಭಾಗವಹಿಸಲಾರಂಭಿಸಿದರು. ಆ ಪೈಕಿ ಪ್ರಮುಖವಾಗಿ ಗುರ್ತಿಸಿಕೊಂಡವರೆಂದರೆ ಶ್ರೀಮತಿಯರಾದ ಎಸ್. ರಮಾದೇವಿ, ಜಿ.ಎಸ್. ಗಾಯತ್ರಿ, ಬಾಲಾಂಬ, ಅಮೃತ ನಾರಾಯಣ, ಮಂಜುಳಾ ಮೋಹನ್, ಮಂಜುಳಾಂಬ ಮುಂತಾದವರು. ಸಂಪೂರ್ಣವಾಗಿ ಯುವಕರ ಸ್ವತ್ತಾಗಿದ್ದ ಚಳವಳಿಯು ಹೀಗೆ ಸಾರ್ವತ್ರಿಕವಾಯಿತು. ಬೆಂಗಳೂರಿನಲ್ಲಿ ಆಗಷ್ಟೇ ದೂರದರ್ಶನ ಕೇಂದ್ರ ಆರಂಭವಾಗಿತ್ತು. ಅದರಿಂದ ಕನ್ನಡ ಕಾರ್ಯಕ್ರಮಗಳೇನೂ ಮೂಡಿ ಬರುತ್ತಿರಲಿಲ್ಲ. ಅದನ್ನು ಪ್ರತಿಭಟಿಸಲು ಸುಮಾರು ಐದಾರು ಸಾವಿರ ಉತ್ಸಾಹಿಗಳು ಸೇರಿದ್ದ 'ದೂರದರ್ಶನ ಮುತ್ತಿಗೆ' ಯಶಸ್ವಿಯಾಯಿತು. ಇಂಥ ಉತ್ಸಾಹದ ಸಂಘಟನೆಯೇ ಮುಂದೆ ಗೋಕಾಕ್ ಚಳವಳಿಗೆ ನಾಂದಿಯಾಯಿತು. ಶಿಕ್ಷಣದಲ್ಲಿ ಭಾಷಾನೀತಿಯನ್ನು ಕುರಿತಂತೆ 'ಗೋಕಾಕ್ ಚಳವಳಿ'ಯಷ್ಟು ವ್ಯಾಪಕವಾದ ಹೋರಾಟ ಹಿಂದೆ ನಡೆದಿರಲಿಲ್ಲ ಮುಂದೆ ನಡೆಯುವ ಆಶಾಭಾವನೆಯೂ ಇಲ್ಲ. ಡಾ. ರಾಜ್ ಹೋರಾಟದ ನೇತೃತ್ವ ವಹಿಸಿದ್ದು ಇಡೀ ಕನ್ನಡ ಚಿತ್ರರಂಗದ ಬಲ ಅದಕ್ಕೆ ಬಂದುಬಿಟ್ಟಿತ್ತು. ಚಳವಳಿಯ ಇತಿಹಾಸದಲ್ಲೇ ಇದೊಂದು ಶಾಶ್ವತ ದಾಖಲೆ. ಕನ್ನಡಿಗರಿಗೆ ಎಲ್ಲೇ ಅನ್ಯಾಯವಾದರೂ ಅದನ್ನು ಮೆಟ್ಟಿನಿಲ್ಲುವ ಸ್ಥೈರ್ಯ ಕಾರ್ಮಿಕರಲ್ಲಿ ಮೂಡಿದ್ದಕ್ಕೂ ಇದೇ ಸ್ಫೂರ್ತಿ. ಖಾಸಗಿ ಕಂಪನಿಗಳಲ್ಲಿ ಕನ್ನಡಿಗರಿಗೆ ಅನ್ಯಾಯವಾದಾಗ, ಸರ್ಕಾರಿ ಕಛೇರಿಗಳಲ್ಲಿ ಕನ್ನಡದ ಅನುಷ್ಠಾನ ಆಗದಿದ್ದಾಗ, ಕ್ರೈಸ್ತ ದೇಗುಲಗಳಲ್ಲಿ ಕನ್ನಡ ಪ್ರಾರ್ಥನೆಗೆ ಅವಕಾಶ ನಿರಾಕರಿಸಿದಾಗ ಉಗ್ರರೂಪದ ಹೋರಾಟ ನಡೆಸಿದವರು ಈ ಕಾರ್ಮಿಕರೇ.

ನಂತರದ ದಿನಗಳಲ್ಲಿ ಈ ಚಳವಳಿಗೆ ಉಗ್ರಸ್ವರೂಪ ಸಿಕ್ಕಿದ್ದು ಆರ್.ಎಸ್.ಎನ್. ಗೌಡರು ಪ್ರಾರಂಭಿಸಿದ 'ಕನ್ನಡ ರಣಧೀರರ ಪಡೆ'ಯ ಮೂಲಕ. ಆಕಾಶವಾಣಿಗೆ ಮುತ್ತಿಗೆ ಹಾಕಿ ಕನ್ನಡ ಕಾರ್ಯಕ್ರಮಗಳ ಬಿತ್ತರಕ್ಕೆ ಕಾರಣವಾಗಿದ್ದು ಈ ಪಡೆಯೇ. ಹಿಂದೆ ಯಾರೂ ಮಾಡಲಾಗಿರದಂಥ ಕೆಲಸವನ್ನು ಪಡೆಯ ಹುಡುಗರು ಮಾಡಿದರು. ರಾಜ್ಯವ್ಯಾಪಿಯಾಗಿ ಹಬ್ಬಬೇಕಿದ್ದ ಪಡೆ 'ಉಗ್ರವಾದಿ' ಹಣೆಪಟ್ಟಿಯಿಂದ ಹೊರಬರಲಾರದೆ ಹೋಗಿದ್ದು ಮಾತ್ರ ದುರಾದೃಷ್ಟದ ಸಂಗತಿ.

ನೆರೆ ರಾಜ್ಯವಾದ ತಮಿಳುನಾಡು ಕಾವೇರಿ ನೀರಿನ ಹಂಚಿಕೆ ಮುಂದಿಟ್ಟುಕೊಂಡು ಮಳೆಬಾರದ ವರ್ಷಗಳಲ್ಲಿ ನಮ್ಮೊಂದಿಗೆ ಜಗಳವಾಡುತ್ತಲೇ ಬಂದಿದೆ. ನೀರಿನ ಹಂಚಿಕೆ ವಿಚಾರದಲ್ಲಿ ಕೇಂದ್ರ ಸರ್ಕಾರದಿಂದಲೇ ನಮಗೆ ಅನ್ಯಾಯವಾಗುತ್ತಿದೆ. ನಮ್ಮ ಜನಪ್ರತಿನಿಧಿಗಳು ಲೋಕಸಭೆಯಲ್ಲೂ, ರಾಜ್ಯಸಭೆಯಲ್ಲೂ ತಮಿಳುನಾಡಿನ ಸಂಸತ್ ಸದಸ್ಯರೊಡನೆ ಸೆಣಸಬಲ್ಲ ಶಕ್ತಿಯನ್ನೂ, ಸ್ಥೈರ್ಯವನ್ನೂ ಇನ್ನೂ ಬೆಳೆಸಿಕೊಂಡೇ ಇಲ್ಲ. ಪಕ್ಷಾತೀತವಾಗಿ ಹೋರಾಡುವುದನ್ನು ಆ ರಾಜ್ಯದವರಿಂದ ನಮ್ಮವರು ಕಲಿಯಬೇಕು. ನಮ್ಮವರು ಕೃಷಿ ಭೂಮಿಯನ್ನು ಎಂದಿಗೆ ಈಗಿನ ಎರಡರಷ್ಟಕ್ಕೆ ಹೆಚ್ಚಿಸಿಕೊಳ್ಳುವುದಿಲ್ಲವೋ ನ್ಯಾಯಾಲಯದಲ್ಲಿ ಸಮರ್ಥವಾಗಿ ವಾದ ಮಾಡಬಲ್ಲವರನ್ನು ನೇಮಿಸುವುದಿಲ್ಲವೋ

ಅಲ್ಲಿಯವರೆಗೂ ಈ ಸಮಸ್ಯೆ ಜೀವಂತವಾಗಿರುತ್ತದೆ. ಇದರ ಜೊತೆಗೆ ಆಲಮಟ್ಟಿ ಅಣೆಕಟ್ಟಿನ ಎತ್ತರ ಹಾಗೂ ಕೃಷ್ಣಾನದಿ ನೀರಿನ ಹಂಚಿಕೆಯದೂ ಒಂದು ಸಮಸ್ಯೆಯೇ.

ಬೆಳಗಾವಿ ಗಡಿ ಸಮಸ್ಯೆಗೆ ಎಂ.ಇ.ಎಸ್.ನವರೇ ಅಲ್ಲದೆ ಮಹಾರಾಷ್ಟ್ರ ಸರ್ಕಾರವೂ ಪುರುಳಿ ಹಾಕುತ್ತ ಬಂದಿದೆ. ಕಾಸರಗೋಡನ್ನು ನಮ್ಮವರೇ ಕಡೆಗಣಿಸಿದ್ದಾರೇನೋ ಎನಿಸುತ್ತದೆ. ಬೆಂಗಳೂರಿನ ಮಟ್ಟಿಗೆ ಹೇಳುವುದಾದರೆ, ಕಾವೇರಿ ನೀರಿನಲ್ಲಿ ಮೂರರಲ್ಲಿ ಒಂದು ಭಾಗದಷ್ಟನ್ನು ತಮಿಳರೇ ಕುಡಿಯುತ್ತಿದ್ದಾರೆ. ಸ್ಥಳೀಯ ಸಮಸ್ಯೆಗಳ ಜೊತೆಗೆ ಜಾಗತೀಕರಣದೊಂದಿಗೆ ಹುಟ್ಟಿಕೊಂಡ 'ಆಂಗ್ಲೀಕರಣ' ನಮ್ಮ ಶಿಕ್ಷಣವನ್ನಷ್ಟೇ ಅಲ್ಲದೆ ಸಂಸ್ಕೃತಿಯನ್ನೂ ಪರದೇಶಿಯನ್ನಾಗಿ ಮಾಡುತ್ತಿದೆ. ಒಂದು ಕಡೆ ನ್ಯಾಯಾಲಯಗಳು ಮತ್ತೊಂದು ಕಡೆ ಶಾಲಾ ಕಾಲೇಜುಗಳು ಇಂಗ್ಲಿಷ್ ಮಾಧ್ಯಮಕ್ಕೇ ಬೆಂಬಲ ನೀಡುತ್ತಿವೆ. ಕನ್ನಡ ನೆಲ, ಜಲ, ಭಾಷೆ, ಉದ್ಯೋಗ ಮುಂತಾದವುಗಳ ಕಡೆ ಸದಾ ಎಚ್ಚರ ವಹಿಸುವ ಸಲುವಾಗಿಯೇ 'ಕನ್ನಡ ಅಭಿವೃದ್ಧಿ ಪ್ರಾಧಿಕಾರ'ದ ಸ್ಥಾಪನೆಯಾಯಿತು. ಇದರಿಂದ ಹೆಚ್ಚಿನ ಉಪಯೋಗವೇನೂ ಆಗಿಲ್ಲ. ಕನ್ನಡಿಗರ ತೊಳಲಾಟ ನಿಂತಿಲ್ಲ. ಏಕೆಂದರೆ ಅದಕ್ಕೆ ಹೆಚ್ಚಿನ ಬಲವನ್ನು ಸರಕಾರವೇ ನೀಡಿಲ್ಲ.

ಹಿಂದಿನ ಎಲ್ಲ ಸಂಘಟನೆಗಳನ್ನೂ ಹಿಂದಕ್ಕೆ ಹಾಕಿರುವ 'ಕರ್ನಾಟಕ ರಕ್ಷಣಾ ವೇದಿಕೆ'ಯು ಈಗ ಸುಮಾರು ವರ್ಷಗಳಿಂದ ಉಗ್ರ ಹೋರಾಟಗಳನ್ನೇ ನಡೆಸುತ್ತ ಬಂದಿದೆ. ಒಂದು ಲಕ್ಷಕ್ಕೂ ಅಧಿಕ ಸದಸ್ಯ ಬಲ ಹೊಂದಿರುವ ಕ.ರ.ವೇ. ಸರಿಯಾದ ದಿಕ್ಕಿನಲ್ಲಿ ಹೆಜ್ಜೆಯಿಟ್ಟು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವಂತಾಗಲೆಂದು ಹಾರೈಸುತ್ತೇನೆ.

ಒಟ್ಟಾರೆಯಾಗಿ ಚಳವಳಿಯ ಹಿನ್ನೋಟವನ್ನು ಒಮ್ಮೆ ಅವಲೋಕಿಸಿದಾಗ ನನಗೆ ತಿಳಿದುಬರುವ ಅಂಶವೆಂದರೆ, ಎಲ್ಲ ಚಳವಳಿ ಸಂಘಟನೆಗಳೂ 'ನಡೆದಿದ್ದೇ ಹಾದಿ' ಎಂಬ ಧೋರಣೆಯಿಂದ ಸೊರಗಿವೆ. ಒಂದು ಪ್ರಬಲ ನಾಯಕತ್ವದ ಕೊರತೆ, ಮತ್ತೊಂದು ಜನಸಾಮಾನ್ಯರ ಮನೆ ಮನೆಯ ಚಳವಳಿಯಾಗದೆ ಕೆಲವರ ಚಳವಳಿಯಾಗಿಯೇ ಉಳಿದಿದ್ದು – ಈ ಎರಡೂ ಯೋಚಿಸತಕ್ಕವು. ಇನ್ನೂ ಒಂದು ವಿಚಾರವೆಂದರೆ ಕನ್ನಡಿಗರು ಯಾವತ್ತೂ ಒಂದಾಗಿ ಬಾಳು ನಡೆಸಲು ಮುಂದಾಗದಿರುವುದು! ಒಡೆದ ಮನೆ ಒಡೆದಮನ ಒಂದಾಗುವವೇ? ಕಾಲವೇ ನಿರ್ಧರಿಸಬೇಕು.

ಸಾಹಿತಿಗಳ–ಕಲಾವಿದರ ಬಳಗ ಮತ್ತು ಶಕ್ತಿ ಕೇಂದ್ರದ ಆಧಾರಸ್ತಂಭಗಳಾಗಿದ್ದ ಜಿ.ಕೆ. ಸತ್ಯ, ನಟ ಅಶೋಕ್, ರಾ.ನಂ. ಚಂದ್ರಶೇಖರ, ಬಾ.ಹ. ಉಪೇಂದ್ರ ನಾ. ಗೀತಾಚಾರ್ಯ, ರಮೇಶ್‌ಬಾಬು ಮುಂತಾದವರು ಕನ್ನಡ ಶಕ್ತಿಕೇಂದ್ರದ ತೇರನ್ನು ಬಹಳ ದೂರ ಎಳೆದರು. ಡಾ.ಎಂ. ಚಿದಾನಂದಮೂರ್ತಿ ಅವರಿಗೆ ಬೆನ್ನೆಲುಬಾಗಿದ್ದವರು ಪ್ರೊ. ಎಲ್.ಎಸ್.ಶೇಷಗಿರಿರಾಯರು. ಇವರಲ್ಲದೆ ಜಿ.ನಾರಾಯಣ, ಡಿ. ಲಿಂಗಯ್ಯ, ಡಾ. ಸಾ.ಶಿ. ಮರುಳಯ್ಯ ಮತ್ತು ಡಾ. ಎಚ್.ಎಂ. ಮರುಳಸಿದ್ಧಯ್ಯ ನಾನಾ ರೀತಿಯಲ್ಲಿ ಇವರಿಗೆ ನೆರವಾದರು. ಕನ್ನಡ ಚಳವಳಿಗೆ ಒಂದು 'ಗಾಂಭೀರ್ಯ' ತಂದುಕೊಟ್ಟಿದ್ದು ಕನ್ನಡ ಶಕ್ತಿ ಕೇಂದ್ರ. ಗೌರವಯುತವಾಗಿ ಚಳವಳಿ ನಡೆಸುವುದು ಹೇಗೆಂಬುದನ್ನು ತೋರಿಸಿಕೊಟ್ಟದ್ದೇ ಈ ಸಂಘಟನೆ. ಕೆಲವರು ಇವನ್ನು 'ಪೇಪರ್ ಚಳವಳಿ' ಎಂದು

ಟೀಕಿಸಿದ್ದೂ ಇದೆ. ಜಿ.ಕೆ. ಸತ್ಯ ಅವರು ಪತ್ರಿಕೋದ್ಯಮ, ಅಶೋಕ್ ಚಲನಚಿತ್ರ ಕಾರ್ಮಿಕ ಸಂಘಟನೆ, ಡಾ. ಪಿ.ವಿ. ನಾರಾಯಣ ಬರವಣಿಗೆ, ನಾ. ಗೀತಾಚಾರ್ಯ ಕಾಲೇಜು ಚಟುವಟಿಕೆ ಹೀಗೆ ನಾನಾ ಕಾರಣಗಳಿಂದ ದೂರ ಸರಿದರು. ಆದರೆ ಛಲಬಿಡದ ತ್ರಿವಿಕ್ರಮನಂತೆ ರಾ.ನಂ. ಚಂದ್ರಶೇಖರ ಕನ್ನಡ ಶಕ್ತಿ ಕೇಂದ್ರದ ಚಾಲನಶಕ್ತಿಯಾಗಿ ಹಲವು ರೀತಿಯ ಚಳವಳಿಗಳನ್ನು ನಡೆಸಿದರು. ಇವರ ಜೊತೆಗೆ ಬಾ.ಹ. ಉಪೇಂದ್ರ, ರಮೇಶ ಬಾಬು, ಮ.ಚಂದ್ರಶೇಖರ್, ಕ. ಜಯಚಂದ್ರ ಮುಂತಾದವರು ನಿಂತರು. ಹೆಗಲುಕೊಟ್ಟು ದುಡಿದ ಇನ್ನೊಬ್ಬ ಯುವಕ ಕಿನ್ನಿಗೋಳಿ ರಾಮಚಂದ್ರ. ಇವರು ಸದಾ ತೆರೆಮರೆಯಲ್ಲಿದ್ದು ಎಲ್ಲ ಕೆಲಸಗಳನ್ನೂ ಅಚ್ಚುಕಟ್ಟಾಗಿ ನಿರ್ವಹಿಸಿದರು.

ಇತ್ತೀಚಿನ ವರ್ಷಗಳಲ್ಲಿ ಕನ್ನಡಸಂಘ ಸಂಸ್ಥೆಗಳಲ್ಲಿ ಮಹಿಳೆಯರೂ ಹೆಚ್ಚಿನ ಸಂಖ್ಯೆಯಲ್ಲಿ ಸೇರ್ಪಡೆಯಾಗುತ್ತಿರುವುದು ಕನ್ನಡ ಅಭಿವೃದ್ಧಿಯ ದ್ಯೋತಕ. ಇದೊಂದು ಉತ್ತಮ ಬೆಳವಣಿಗೆ. ಕನ್ನಡಿಗರಲ್ಲಿ ಮೈಗೂಡಿರುವ ಆಲಸ್ಯ ಮಾಯವಾಗಿ, ತಾಯಂದಿರು ತಮ್ಮ ಮಕ್ಕಳಿಗೆ ಕನ್ನಡ ಶಿಕ್ಷಣ ನೀಡಿ, ಕನ್ನಡಾಭಿಮಾನ ಬೆಳೆಸುವಂತಾಗಲಿ. ಆಗ ಮಾತ್ರ ಕನ್ನಡದ ನೆಲ, ಜಲ, ಉದ್ಯೋಗ ಎಲ್ಲವೂ ದಕ್ಕಿ, ಗಡಿ ಸಮಸ್ಯೆಯೂ ಬಗೆಹರಿದು ಕನ್ನಡಿಗರು ನಿರಾಳವಾಗಿ ಜೀವನ ಸಾಗಿಸುವಂತಾದೀತು. ಅಂತಹ ದಿನಗಳಿಗಾಗಿ ನಾವೆಲ್ಲ ಆಶಿಸೋಣ.

❐



ಗೋಕಾಕ್ ಚಳವಳಿ ಮತ್ತು ಸಾಹಿತಿಗಳ ಕಲಾವಿದರ ಬಳಗ

■ **ಬೆ.ರಾ. ನಾಗರಾಜ್**

ಶ್ರೀ ಗುಂಡೂರಾವ್ ಮುಖ್ಯಮಂತ್ರಿಯಾಗಿದ್ದ ಸಮಯದಲ್ಲಿ ಭಾಷಾ ಸೂತ್ರವೊಂದನ್ನು ಪ್ರಕಟಿಸಿ, ಮೊದಲನೆ ಭಾಷೆಯಾಗಿ ಸಂಸ್ಕೃತವನ್ನೂ, ಎರಡನೆಯದಾಗಿ (ಐಚ್ಛಿಕ) ಕನ್ನಡ ಮತ್ತು ಇತರೆ ಭಾಷೆಗಳನ್ನೂ ಸೂಚಿಸಿದರು. ಅದರಿಂದ ಕನ್ನಡ ಕಲಿಕೆಗೆ ಬಹಳ ಹಾನಿಯಾಗುವುದೆಂದೂ, ಈ ಸೂತ್ರವನ್ನು ಹಿಂತೆಗೆದುಕೊಳ್ಳಬೇಕೆಂದೂ ಮತ್ತು ಕನ್ನಡವೊಂದನ್ನೇ ಪ್ರಥಮ ಭಾಷೆಯಾಗಿ ಕಡ್ಡಾಯಮಾಡಬೇಕೆಂದೂ ರಾಜ್ಯಾದ್ಯಂತ ಸಾಹಿತಿಗಳು ಮತ್ತು ಇತರರು ಹೇಳಿಕೆ ನೀಡಿ, ಪ್ರತಿಭಟಿಸಬೇಕೆಂದು ತಿಳಿಸಿದರು. ಆಗ ಸರ್ಕಾರವು ಗೋಕಾಕ್‌ರವರ ಅಧ್ಯಕ್ಷತೆಯಲ್ಲಿ ಮೂರು ಜನರ ಸಮಿತಿಯನ್ನು ರಚಿಸಿ, ಅದು ವರದಿ ಸಲ್ಲಿಸಿದನಂತರ ತೀರ್ಮಾನವನ್ನು ಕೈಗೊಳ್ಳುವುದಾಗಿ ತಿಳಿಸಿತು. ಆದರೆ ಧಾರವಾಡದಲ್ಲಿ ಸಾಹಿತಿಗಳು ಸಮಿತಿಯನ್ನು ಬಹಿಷ್ಕರಿಸುವುದಾಗಿ (ಗೋಕಾಕ್-ಗೋಬ್ಯಾಕ್ Gokak-Go Back) ಘೋಷಣೆಗಳನ್ನು ಕೂಗಿ ಪ್ರತಿಭಟನೆ ಮಾಡಿ ಚಳವಳಿಯನ್ನು ತೀವ್ರಗೊಳಿಸಬೇಕೆಂದು ತೀರ್ಮಾನಿಸಿದರು. ಈ ಚಳವಳಿಯಲ್ಲಿ ಅನಿರೀಕ್ಷಿತವಾಗಿ ಪಾಲ್ಗೊಳ್ಳಲು ನನಗೆ ಅವಕಾಶ ದೊರೆಯಿತು.



ಅ.ನ.ಕೃಷ್ಣರಾಯರು, ನಾಡಿಗೇರ್ ಕೃಷ್ಣರಾಯರು ಮ.ರಾಮಮೂರ್ತಿ, ಮೈ.ಸು. ನಟರಾಜ್ ಮತ್ತು ಶ್ರೀ ಭಾರತೀಂದ್ರ ಸ್ವಾಮಿಗಳು ಕರ್ನಾಟಕ ಸಂಯುಕ್ತರಂಗ ಸ್ಥಾಪಿಸುವುದಕ್ಕೆ ಮೊದಲು ನಗರದಲ್ಲಿ ಪ್ರತಿ ದಿವಸ ವಿವಿಧ ಬಡಾವಣೆಗಳಲ್ಲಿ ಸಂಜೆ ಬಹಿರಂಗ ಸಭೆಗಳನ್ನು ಏರ್ಪಡಿಸಿ, ಕನ್ನಡಿಗರಿಗೆ ಸಮಸ್ಯೆಗಳ ಬಗ್ಗೆ ವಿವರಿಸಿ

ಕನ್ನಡಿಗರನ್ನು ಎಚ್ಚೆತ್ತುಕೊಳ್ಳುವಂತೆ ಪ್ರಯತ್ನಿಸುತ್ತಿದ್ದರು. ಅ.ನ.ಕೃ.ರವರ ನಿರರ್ಗಳ ವಿಚಾರ ಪೂರಿತವಾದ ಮಾತುಗಳು ಮ.ರಾಮಮೂರ್ತಿಯವರ ಸಿಂಹಘರ್ಜನೆ ನಾನು ಚಳವಳಿಗೆ ಬರಲು ಕಾರಣ ವಾಯಿತು. ಆ ಸಮಯದಲ್ಲಿ ಅಲಸೂರಿನಲ್ಲಿ ಜಿ.ಕೆ. ಸತ್ಯರವರು ತಮ್ಮ ಸ್ನೇಹಿತರು ಮತ್ತು ಸಹಪಾಠಿಗಳೊಡನೆ "ಭಾರತೀಯ ಕರ್ಣಾಟಕ ಸಂಘ"ವನ್ನು ೧೯೬೬ರಲ್ಲಿ ಸ್ಥಾಪಿಸಿದರು. ಆ ಸಂಘದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದೆ. ಸುಮಾರು ೧೫ ವರ್ಷಗಳ ನಂತರ ಬೆಂಗಳೂರಿನ ಕಬ್ಬನ್ ಉದ್ಯಾನವನದಲ್ಲಿ ಗೋಕಾಕ್ ಚಳವಳಿ ಸಂಬಂಧ ಪ್ರತಿಭಟನಾ ಸಭೆಯಲ್ಲಿ ಜಿ.ಕೆ. ಸತ್ಯರವರು ಭಾಗವಹಿಸುತ್ತಿದ್ದರು. ಆದ ಕಾರಣ ಅವರನ್ನು ನೋಡಲು ಅಲ್ಲಿಗೆ ಹೋಗಿದ್ದಾಗ ಅವರು ನನ್ನನ್ನು ಕಂಡ ತಕ್ಷಣವೇ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಬೇಕೆಂದರು. ಈ ಪೀಠಿಕೆ ನಾನು ಚಳವಳಿಯಲ್ಲಿ ಭಾಗವಹಿಸಿದ ಹಿನ್ನೆಲೆ.

ಧಾರವಾಡದಲ್ಲಿ ಪಾಟೀಲ ಪುಟ್ಟಪ್ಪ, ಚಂಪಾ, ಚನ್ನವೀರಕಣವಿ ಮುಂತಾದವರು ಪ್ರತಿಭಟನಾ ಸಭೆಗಳನ್ನು ಏರ್ಪಡಿಸಿ ಚಳವಳಿಯ ಮುಂಚೂಣಿಯಲ್ಲಿದ್ದರು. ಇಲ್ಲಿ ಎಂ. ಚಿದಾನಂದಮೂರ್ತಿಯವರು ಇತರ ಸಾಹಿತಿಗಳು ಕಲಾವಿದರನ್ನೊಳಗೊಂಡಂತೆ ನ್ಯಾಷನಲ್ ಕಾಲೇಜಿನಲ್ಲಿ ಸಮಾಲೋಚನ ಸಭೆಯನ್ನೇರ್ಪಡಿಸಿ, ಚಳವಳಿಯ ಮುಂದಿನ ರೂಪುರೇಷೆಗಳನ್ನು ಚರ್ಚಿಸುತ್ತಿದ್ದಾಗ, ರೆಹಮಾನ್‌ಖಾನ್‌ರವರು ಸಭೆಯು ವ್ಯರ್ಥ ಮಾತುಗಳಲ್ಲಿ ಕಾಲಹರಣ ಮಾಡುತ್ತಿರುವುದಾಗಿ ಆಕ್ಷೇಪಿಸಿ, ಧಿಕ್ಕಾರ ಕೂಗಿ ಹೊರ ನಡೆಯಲು ಎದ್ದಾಗ, ಎಂ. ಚಿದಾನಂದಮೂರ್ತಿಯವರು ಅವರನ್ನು ಸಮಾಧಾನ ಪಡಿಸಿ ತಾವೆಲ್ಲರೂ ಮರುದಿನದಿಂದಲೇ ಕಾರ್ಯಪ್ರವೃತ್ತರಾಗುವವರೆಂದು ತಿಳಿಸಿದರು. ಆಗ ಸಭೆಯಲ್ಲಿ "ಸಾಹಿತಿಗಳ ಕಲಾವಿದರ ಬಳಗ" ಎಂಬ ಸಂಘಟನೆಯನ್ನು ರೂಪಿಸಿ ಚಳವಳಿಯನ್ನು ತೀವ್ರಗೊಳಿಸಬೇಕೆಂದು ತೀರ್ಮಾನಿಸಲಾಯಿತು. ಆಗ ಸರ್ಕಾರ ನಿಯಮ ೧೪೪ರ ಪ್ರಕಾರ ಸಭೆಗಳನ್ನು ನಿಷೇಧಿಸಿತ್ತು. ಆದ್ದರಿಂದ ಪ್ರತಿ ದಿವಸ ಒಬ್ಬೊಬ್ಬ ಸಾಹಿತಿ, ಕಲಾವಿದರು ಮತ್ತು ಕಾರ್ಯಕರ್ತರನ್ನೊಳಗೊಂಡಂತೆ, ನಗರದ ಪ್ರಮುಖ ಸ್ಥಳಗಳಲ್ಲಿ ಸತ್ಯಾಗ್ರಹದಲ್ಲಿ ಪಾಲ್ಗೊಂಡು ಬಂಧನಕ್ಕೊಳಗಾಗಬೇಕೆಂದು ನಿರ್ಣಯಿಸ ಲಾಯಿತು. ಆಗ ನನ್ನ ಪರಿಚಾರಿಕೆಯ ಕೆಲಸ ಪ್ರಾರಂಭವಾಯಿತು. ಅಂದಂದಿನ ಸತ್ಯಾಗ್ರಹದ ಕಾರ್ಯಕ್ರಮಗಳ ವಿವರವನ್ನು ಪತ್ರಿಕೆಗಳಿಗೆ ಅಂದಂದೇ ತಲುಪಿಸುವ ಕೈಂಕರ್ಯ. ಪತ್ರಿಕೆಗಳೂ ಸಹ ಬಹಳ ಸಹಕಾರ ನೀಡಿದವು. ಮುಖಪುಟದಲ್ಲಿ ಸ್ವಲ್ಪ ಸ್ಥಳವನ್ನು ನಮಗಾಗಿ ಮೀಸಲಿಟ್ಟಿದ್ದರು. ಈ ಕೆಲಸಗಳಲ್ಲಿ ಆಗ ವಿದ್ಯಾರ್ಥಿಗಳಾಗಿದ್ದ ನಾ. ಗೀತಾಚಾರ್ಯ (ಈಗ ಪ್ರೊಫೆಸರ್), ರೇಣುಕಾರಾಧ್ಯ, ವೈದ್ಯಕೀಯ ವಿದ್ಯಾರ್ಥಿ ಯಾಗಿದ್ದ ರಾಜಕುಮಾರ್ ಮತ್ತು ಕನ್ನಡ ಅಧ್ಯಾಪಕರುಗಳಾದ ಪಿ.ವಿ.ನಾರಾಯಣ್ (ಬಳಗದ ಕಾರ್ಯದರ್ಶಿ), ಸುಬ್ಬರಾವ್, ರಾಘವೇಂದ್ರರಾವ್ ಮತ್ತಿತರರು ಸಕ್ರಿಯವಾಗಿ ಭಾಗವಹಿಸಿದರು. ಚಾಮರಾಜಪೇಟೆಯ ಕನ್ನಡ ಸಾಹಿತ್ಯ ಪರಿಷತ್ತಿನ ಎದುರಿನಲ್ಲಿ ಜಿ.ಎಸ್. ಶಿವರುದ್ರಪ್ಪ ಮತ್ತು ಕಲಾವಿದ ಚಿ.ಸು. ಕೃಷ್ಣಶೆಟ್ಟಿ ಸತ್ಯಾಗ್ರಹದಲ್ಲಿ ಪಾಲ್ಗೊಂಡು ಬಂಧನಕ್ಕೊಳಗಾದರು.

ಕೆಲವು ದಿನಗಳ ನಂತರ ಈ ಕಂತಿನ ಸತ್ಯಾಗ್ರಹದ ಸಮಾರೋಪವಾಗಿ, ನಗರದ ಕನ್ನಡ ಸಂಘಟನೆಗಳ ಜೊತೆಗೂಡಿ, ಪುರಭವನದ ಮುಂದೆ ಬೃಹತ್ ಸಭೆಯನ್ನು ಏರ್ಪಡಿಸಿ ಎಲ್ಲರೂ ಬಂಧನಕ್ಕೊಳಗಾಗಬೇಕೆಂದು ತೀರ್ಮಾನಿಸಲಾಯಿತು. ಪ್ರತಿಭಟನೆಯ ದಿನದಂದು "ಪ್ರಜಾವಾಣಿ" ಪತ್ರಿಕೆಯ ಮುಖ ಪುಟದಲ್ಲಿ ದಪ್ಪಕ್ಷರಗಳಲ್ಲಿ ವಿವರಗಳನ್ನು ಪ್ರಕಟಿಸಿದ್ದರು. ಆ ಸಮಯದಲ್ಲಿ ಜೆ.ಎಚ್. ಪಟೇಲರು ಶಾಸಕರಾಗಿದ್ದರು. ಅವರು ರಾಜ್ಯರಸ್ತೆ ಸಾರಿಗೆ ಬಸ್ಸಿನಲ್ಲಿ ಬಂದು, ಪುರಭವನದ ಬಳಿ ಇಳಿದು, ನಗರದ ಕಾರ್ಮಿಕರ ಪರವಾಗಿ ಸತ್ಯಾಗ್ರಹದಲ್ಲಿ ಪಾಲ್ಗೊಂಡರು. ಆಗ ಎಲ್ಲರನ್ನೂ ಬಂಧಿಸಿ ಕೋರಮಂಗಲದ ಬಯಲು ಕಾರಾಗೃಹಕ್ಕೆ ಕರೆದೊಯ್ಯಲಾಯಿತು.

ಜೆ.ಎಚ್. ಪಟೇಲರು ವಾಹನದಲ್ಲಿ ಹೋಗುವಾಗ ಕನ್ನಡ ಘೋಷಣೆಗಳನ್ನು ಕೂಗಲು ಪ್ರೇರೇಪಿಸಿ, ಅವರೇ ಕೆಲವು ಘೋಷಣೆಗಳನ್ನು ಸೂಚಿಸಿದರು. ಡಾ. ಜೀವರಾಜ್ ಆಳ್ವ ಸಹ ಬಂಧನಕ್ಕೊಳಗಾಗಿದ್ದರು. ಅಂದು ಮಧ್ಯಾಹ್ನ ರೇಣುಕಾಪ್ರಸಾದ್‌ರವರು ಹಣ್ಣು ಹಂಪಲುಗಳನ್ನೂ, ತಿಂಡಿ ಪೊಟ್ಟಣಗಳನ್ನೂ ವಿತರಿಸಿದರು ಮತ್ತು ಚಳವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಎಲ್ಲರನ್ನೂ ಸಂಜೆ ಬಿಡುಗಡೆ ಮಾಡಲಾಯಿತು. ಆದರೆ ಎಂ. ಚಿದಾನಂದಮೂರ್ತಿ ಯವರು ಬಿಡುಗಡೆಗೆ ಒಪ್ಪದಿದ್ದಾಗ, ಅವರನ್ನು ಕೇಂದ್ರ ಕಾರಾಗೃಹಕ್ಕೆ ಕರೆದೊಯ್ಯಲಾಯಿತು. ಎರಡು ದಿನಗಳ ನಂತರ ಅವರ ಬಿಡುಗಡೆಯಾಯಿತು. ಈ ಸಮಯದಲ್ಲಿ ಲಂಕೇಶರು ಬಸವನಗುಡಿಯಲ್ಲಿದ್ದ ಅವರ ಪತ್ರಿಕೆಯ ಕಾರ್ಯಾಲಯದಲ್ಲಿ ಸುಮಾರು ಒಂದು ತಿಂಗಳವರೆಗೆ ಸಂಜೆ ಸಭೆ ಸೇರಿ ಸಮಾಲೋಚಿಸಲು ಅವಕಾಶ ಮಾಡಿಕೊಟ್ಟಿದ್ದರು.

ನಂತರ ಚಳವಳಿಯನ್ನು ತೀವ್ರಗೊಳಿಸಲು ಚಿತ್ರನಟ ರಾಜ್‌ಕುಮಾರ್‌ರವರು ರಾಜ್ಯಾದ್ಯಂತ ಪ್ರವಾಸ ಮಾಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಆ ಸಮಯದಲ್ಲಿ ಚಿನ್ನೇಗೌಡರು ಸರ್ಪಭೂಷಣ ಮಠದಲ್ಲಿ ನಡೆಯುತ್ತಿದ್ದ ಸಭೆಗಳಿಗೆ ಅನೇಕ ದಿನಗಳು ಬಂದು ಕಾರ್ಯಕ್ರಮವನ್ನು ರೂಪಿಸಿದರು. ಬಳಗವು ಕಬ್ಬನ್‌ಪಾರ್ಕ್‌ನ ಗೋಪಾಲಗೌಡವೃತ್ತದ ಮೂಲೆಯಲ್ಲಿ ಪ್ರತಿಭಟನಾ ಸಭೆಗಳನ್ನು ನಡೆಸುತ್ತಿದ್ದ ಸ್ಥಳದಿಂದಲೇ ರಾಜಕುಮಾರ್‌ರವರು ಪ್ರವಾಸ ಪ್ರಾರಂಭಿಸಿದರು. ಅಲ್ಲಿಂದ ಹೊರಡುವ ಮೊದಲು ಅವರು ವಾಹನದ ಮೇಲೇರಿ ನೆರೆದಿದ್ದ ಜನಸ್ತೋಮವನ್ನು ಉದ್ದೇಶಿಸಿ ಮಾತನಾಡಿ, ತಾವು ಕನ್ನಡದ ಕೆಲಸಕ್ಕೆ ಯಾವಾಗಲೂ ಸಿದ್ಧರಾಗಿರುವವರೆಂದರು. ರೆಹಮಾನ್‌ಖಾನ್‌ರೂ ಸಹ ವಾಹನದ ಮೇಲೆ ರಾಜಕುಮಾರ್‌ರವರೊಡನೆ ನಿಂತಿದ್ದರು. ಈ ಪ್ರವಾಸದ ಕಾರ್ಯಕ್ರಮಕ್ಕೆ ಎಲ್ಲ ಕಡೆ ಅಭೂತಪೂರ್ವ ಸ್ವಾಗತ ದೊರೆಯಿತು. ಬಹಳಷ್ಟು ಕಡೆ ಮಧ್ಯರಾತ್ರಿ ೧೨.೦೦ ಗಂಟೆ, ೧.೦೦ ಘಂಟೆ ಸಮಯದಲ್ಲೂ ಸಹ ವಾಹನ ಹೋಗುವ ಹಾದಿಯ ಹಳ್ಳಿಗಳಲ್ಲಿ ಜನರು ದೀಪವನ್ನು ಹೊತ್ತಿಸಿಕೊಂಡು ಕಾಯುತ್ತಿದ್ದರು. ಸಮಾರೋಪವಾಗಿ ನ್ಯಾಷನಲ್ ಕಾಲೇಜಿನಲ್ಲಿ ಏರ್ಪಡಿಸಿದ್ದ ಸಭೆಯು ಆಗ ನಗರ ಪೊಲೀಸ್ ಮುಖ್ಯಸ್ಥರಾಗಿದ್ದ ನಿಜಾಮುದ್ದೀನ್‌ರವರ ಕುತಂತ್ರದಿಂದ (ಗಲಭೆ) ಗೋಲಿಬಾರ್‌ನಲ್ಲಿ ಅಂತ್ಯವಾಯಿತು.

ನಂತರ ಗೋಕಾಕ್‌ರವರು ತಮ್ಮ ವರದಿಯಲ್ಲಿ ಕನ್ನಡ ಭಾಷೆಗೆ ಪ್ರಥಮ ಸ್ಥಾನ ನೀಡಿದರು. ಇದು ಇತಿಹಾಸ. ಈ ಚಳವಳಿಯ ನಿಮಿತ್ತ ಎಂ. ಚಿದಾನಂದಮೂರ್ತಿ ಅವರ ಜೊತೆಯಲ್ಲಿ ಕೆಲಸಮಾಡುವ ಅವಕಾಶ ದೊರೆತಿದ್ದು ಒಂದು ಸುಯೋಗ.

ನಗರಕ್ಕೆ ದೂರದರ್ಶನ ಪ್ರಸಾರ ಕೇಂದ್ರ ಬೇಕೆಂದು, ಪ್ರಧಾನಿ ಇಂದಿರಾ ಗಾಂಧಿಯವರ ಸ್ವಾತಂತ್ರ್ಯೋತ್ಸವದ ಭಾಷಣ ಪ್ರಸಾರವಾಗದಂತೆ ವಿದ್ಯುಚ್ಛಕ್ತಿ ವಿತರಣಾ ಕೇಂದ್ರದಲ್ಲಿ ವಿದ್ಯುತ್ ಸರಬರಾಜು ತಡೆದಿದ್ದಕ್ಕೆ ಮೊಕದ್ದಮೆ ದಾಖಲಾಗಿ ಸುಮಾರು ೭ ವರ್ಷ ವಿಚಾರಣೆ ನಡೆಯಿತು. ಒಮ್ಮೆ ಜಯನಗರದಲ್ಲಿದ್ದ ದಕ್ಷಿಣಕನ್ನಡ ಜಿಲ್ಲೆಯ ಹೆಸರಾಂತ ಸಾಹಿತಿಗಳಾದ ಕಡೆಂಗೋಡ್ಲು ಶಂಕರಭಟ್ಟರ ಪುತ್ರರಾದ, ಕಾನೂನು ಇಲಾಖೆಯ ಕಾರ್ಯದರ್ಶಿಗಳಾಗಿದ್ದ ಈಶ್ವರಭಟ್ಟರ ಮನೆಗೆ ಕರೆದುಕೊಂಡು ಹೋಗಿದ್ದರು. ಅವರು ಈ ಮೊಕದ್ದಮೆಯನ್ನು ಹಿಂತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಸಚಿವ ಸಂಪುಟದಲ್ಲಿ ನಿರ್ಣಯಿಸಿ ತೀರ್ಮಾನಿಸಬೇಕೆಂದರು. ಅದರಂತೆ ಒಂದು ದಿನ ಬೆಳಗಿನ ೭:೦೦ ಗಂಟೆಗೆ ಆಗ ಗೃಹಸಚಿವರಾಗಿದ್ದ ಜಾಲಪ್ಪನವರ ಮನೆಗೆ ಬನ್ನಿ ಎಂದ ಅವರು ವಿಜಯನಗರದಿಂದ ಅಲ್ಲಿಗೆ ಆಟೋದಲ್ಲಿ ಬಂದಿದ್ದರು. ಅವರ ಭೇಟಿ ಮೊದಲೇ ನಿಗದಿಯಾಗಿದ್ದರೂ ಸಹ ಅಂದು ಜಾಲಪ್ಪನವರು ಭೇಟಿಯಾಗಲು ಸಾಧ್ಯವಿಲ್ಲ ಎಂದರು. ಎಂ.ಚಿದಾನಂದಮೂರ್ತಿ ಅವರೇ ಮತ್ತೊಮ್ಮೆ ಖಾತರಿಪಡಿಸಿಕೊಂಡು ಭೇಟಿಯಾಗುವುದಾಗಿಯೂ, ನಾನು ಬರುವ ಅವಶ್ಯಕತೆಯಿಲ್ಲವೆಂದೂ ತಿಳಿಸಿದರು. ಮತ್ತೊಮ್ಮೆ ಅವರನ್ನು ಭೇಟಿಮಾಡಿ, ಸಂಪುಟದಲ್ಲಿ ನಿರ್ಣಯ ಮಂಡಿಸಿಸಿ, ಮೊಕದ್ದಮೆ ಹಿಂತೆಗೆದುಕೊಳ್ಳುವಲ್ಲಿ ನನಗೆ ಸಹಾಯ ಮಾಡಿದರು.

ರಾ.ನಂ. ಚಂದ್ರಶೇಖರ ಮತ್ತು ನನ್ನ ಒಡನಾಟ ಸುಮಾರು ೨೦ ವರ್ಷಗಳದ್ದು. ಅವರೂ, ನಾನೂ ಹಿಂದೂಸ್ಥಾನ ವಿಮಾನ ಕಾರ್ಖಾನೆಯಲ್ಲಿ ಸಹೋದ್ಯೋಗಿ ಗಳಾಗಿದ್ದರೂ ಪರಿಚಯ ಗೋಕಾಕ್ ಚಳವಳಿ ನಂತರವೇ. ಅವರದು ಒಂದು ವಿಶಿಷ್ಟ ವ್ಯಕ್ತಿತ್ವ, ಸದಾ ಹಸನ್ಮುಖಿ ಮತ್ತು ಯಾವಾಗಲೂ ವೇಗದ ನಡೆ. ಅವರು ಸಾಮಾನ್ಯರಂತೆ ನಡೆಯುವುದೇ ಇಲ್ಲ. ಹತ್ತಿರವಿರಲಿ, ದೂರವಿರಲಿ ಒಂದೇ ಓಟದ ನಡೆ. ಗೋಕಾಕ್ ಚಳವಳಿಯ ನಂತರ ಕನ್ನಡ ಚಳವಳಿಯಲ್ಲಿ ನಿರಂತರವಾಗಿ, ಸಂಪೂರ್ಣವಾಗಿ ತೊಡಗಿಸಿ ಕೊಂಡಿರುವ ವಿರಳರಲ್ಲಿ ವಿರಳರು. ಪ್ರಾಥಮಿಕ ಹಂತದಲ್ಲಿ 'ಕನ್ನಡ- ಕನ್ನಡಿಗ-ಕರ್ನಾಟಕ' ಪುಸ್ತಕವನ್ನು ಸಂಪಾದಿಸಿ, ಅದಕ್ಕಾಗಿ ಅಂಕಿಅಂಶಗಳನ್ನೂ, ವಿವರಗಳನ್ನೂ ನಾನಾ ಕಡೆಗಳಿಂದ ಸಂಗ್ರಹಿಸಿ, ಪರಿಷ್ಕರಿಸಿ ಒಂದು ಅಮೂಲ್ಯ ಆಕರ ಗ್ರಂಥವನ್ನಾಗಿ ಹೊರತಂದು ಯಶಸ್ವಿಯಾಗಿದ್ದಾರೆ. ಇದಕ್ಕಾಗಿ ಅವರು ಪಟ್ಟಿರುವ ಶ್ರಮ ಅಪಾರ. ಈ ಪುಸ್ತಕವನ್ನು ಕನ್ನಡ ಪುಸ್ತಕ ಪ್ರಾಧಿಕಾರವು ಪ್ರಕಟಿಸಿರುವುದು ಪುಸ್ತಕದ ಔಚಿತ್ಯಕ್ಕೆ ಸಾಕ್ಷಿ. ಗೋಕಾಕ್ ಚಳವಳಿ ನಂತರ, ಕನ್ನಡಶಕ್ತಿ ಕೇಂದ್ರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಎಂ.ಚಿದಾನಂದ ಮೂರ್ತಿಯವರಿಗೆ ಸಹಾಯಕರಾಗಿ ಅವರ ಜೊತೆಯಲ್ಲಿ ಕೆಲಸ ಮಾಡಿದ್ದಾರೆ. ಇದರ ಜೊತೆಜೊತೆಗೆ ಕನ್ನಡಕ್ಕೆ-ಕರ್ನಾಟಕಕ್ಕೆ ಸಮಸ್ಯೆಗಳು ಎದುರಾದಾಗ ಹೇಳಿಕೆಯನ್ನು ಸಿದ್ಧಪಡಿಸಿ, ಹಲವಾರು ಸಾಹಿತಿಗಳ ಮನೆಗೆ ಹೋಗಿ ಸಹಿಪಡೆದು ಒಬ್ಬಂಟಿಯಾಗಿ

ಪತ್ರಿಕೆಗಳಿಗೆ ವಿತರಿಸಿದ್ದಾರೆ. ಇದನ್ನು ಕಾಲಕಾಲಕ್ಕೆ ಮಾಡುತ್ತಲೇ ಬಂದಿದ್ದಾರೆ. ಶಕ್ತಿ ಕೇಂದ್ರವೂ ಸಹ ಉತ್ಸಾಹ ಕಳೆದುಕೊಂಡಾಗ, ಬಾ.ಹ.ಉಪೇಂದ್ರ, ಎಚ್.ಎನ್.ರಮೇಶ್‌ಬಾಬು ಮ.ಚಂದ್ರಶೇಖರ, ಕೆ.ಎಚ್.ನರಸಿಂಹಮೂರ್ತಿ ಮತ್ತು ಇನ್ನಿತರ ಸ್ನೇಹಿತರೊಡನೆ 'ಗೆಳೆಯರ ಬಳಗ' ಸಂಘಟನೆಯನ್ನು ಹುಟ್ಟುಹಾಕಿ, ನಿರಂತರವಾಗಿ ಕನ್ನಡ ಕೆಲಸವನ್ನು ಮಾಡುತ್ತಲೇ ಬಂದಿದ್ದಾರೆ.

ಬಹಳ ವರ್ಷಗಳ ಮೊದಲು ಶಿವಲಿಂಗಯ್ಯ, ಆರ್.ಶೇಷಶಾಸ್ತ್ರಿಯವರ ಜೊತೆಗೂಡಿ ಪ್ರಖ್ಯಾತ ಸಂಶೋಧಕರೂ, ವಿದ್ವಾಂಸರೂ ಆದ ಶಂ.ಬಾ. ಜೋಶಿಯವರನ್ನು ಅಭಿನಂದಿಸುವ ಕಾರ್ಯದಲ್ಲಿ ತೊಡಗಿದ್ದರು. ಇದಾದ ನಂತರ ಎಂ. ಚಿದಾನಂದ ಮೂರ್ತಿಯವರನ್ನು ಅಭಿನಂದಿಸುವ ಕಾರ್ಯದಲ್ಲಿ ಸಾ.ಶಿ. ಮರುಳಯ್ಯರೊಡಗೂಡಿ ಬಹಳ ದೊಡ್ಡ ಸಮಾರಂಭವನ್ನು ರವೀಂದ್ರ ಕಲಾಕ್ಷೇತ್ರದಲ್ಲಿ ಅಚ್ಚುಕಟ್ಟಾಗಿ ಏರ್ಪಡಿಸಿದ್ದರು. ಈ ಸಂದರ್ಭದಲ್ಲಿ ಹೊರತಂದ ಅವರ ಅಭಿನಂದನ ಗ್ರಂಥ ಮತ್ತು ಸಂಸ್ಮರಣ ಸಂಚಿಕೆಯ ತಯಾರಿಯಲ್ಲಿ ಇವರ ಶ್ರಮ ಅಪಾರ. ನಂತರ ಆ ನೆನಪಿನಲ್ಲಿ ಪ್ರತಿವರ್ಷವೂ ನೀಡುವ ಚಿದಾನಂದ ಪ್ರಶಸ್ತಿಯ ಯೋಜನೆಯಲ್ಲಿ ಈಗಲೂ ತೊಡಗಿಸಿ ಕೊಂಡಿದ್ದಾರೆ. ಕನ್ನಡದ ಅಪ್ರತಿಮ ಹೋರಾಟಗಾರರಾದ ಆಳ್ಲ ಚಿರಂಜೀವಿಯವರ ಹೆಸರಲ್ಲಿ ಪ್ರಶಸ್ತಿಯನ್ನು ಸ್ಥಾಪಿಸಿ, ಪ್ರತಿವರ್ಷವೂ ಕನ್ನಡದ ಪ್ರಮುಖ ಕಾರ್ಯಕರ್ತರನ್ನು ಸನ್ಮಾನಿಸುತ್ತಾ ಬಂದಿದ್ದಾರೆ. ಕನ್ನಡ ಗೆಳೆಯರ ಬಳಗವು ಆಗಾಗ ಏರ್ಪಡಿಸುವ ಕನ್ನಡ ಸಮಸ್ಯೆಗಳ ಚಿಂತನೆ ಇವರ ಇನ್ನೊಂದು ಪ್ರಮುಖವಾದ ಕಾರ್ಯಕ್ರಮ. ಎಷ್ಟೋ ಮಂದಿ ಕನ್ನಡ ಕಾರ್ಯಕರ್ತರು ಬಹಳ ಸಂಘಟನೆಗಳ ಮೂಲಕ ತೊಡಗಿಸಿಕೊಂಡರೂ ಎಲೆಮರೆಯ ಕಾಯಾಗಿಯೇ ಉಳಿದುಕೊಳ್ಳುತ್ತಾರೆ. ಅಂತಹ ನೂರಾರು ಕಾರ್ಯಕರ್ತರನ್ನು ಹುಡುಕಿ ಕರೆತಂದು, ಅವರಿಗೆ ಸನ್ಮಾನ ಮಾಡಿ ಸಂತೃಪ್ತಿ ಪಟ್ಟಿದ್ದಾರೆ. ಅಂತಹ ೧೦೦ ಕಾರ್ಯಕರ್ತರ ಕಿರುಪರಿಚಯದ 'ತೆರೆಮರೆಯ ಕನ್ನಡ ಕಲಿಗಳು' ಎಂಬ ಪುಸ್ತಕವನ್ನು ಹೊರತಂದಿದ್ದಾರೆ.

ಇವರ ಎಲ್ಲ ಕಾರ್ಯದಲ್ಲಿ ಜೊತೆಯಾಗಿ ತೊಡಗಿಸಿಕೊಂಡವರು ಅವರ ಸನ್ಮಿತ್ರರಾದ ಎಚ್.ಎನ್.ರಮೇಶ್‌ಬಾಬು. ಕೆಲವರಿಗೆ ಖಾಸಗಿಯಾಗಿ ಕೆಲವು ಸ್ನೇಹಿತರಿರುತ್ತಾರೆ. ಪ್ರವೃತ್ತಿಯಿಂದ ಇನ್ನು ಕೆಲವರಿರುತ್ತಾರೆ. ಆದರೆ ರಮೇಶರವರು ರಾ.ನಂ.ರವರ ಖಾಸಗಿ ಬದುಕಿನಲ್ಲಿ ಮತ್ತು ಕನ್ನಡದ ಕೆಲಸಗಳಲ್ಲಿ ಜೊತೆಜೊತೆಯಾಗಿ ತೊಡಗಿಸಿಕೊಂಡಿದ್ದಾರೆ. ಇವರ ಜೋಡಿ ಒಂದು ಅಪರೂಪವಾದದ್ದು ಮತ್ತು ವಿಶಿಷ್ಟವಾದದ್ದು. ಯಾವುದೇ ರಾ.ನಂ.ಕಾರ್ಯಕ್ರಮದಲ್ಲಿ ರಮೇಶರ ಹಾಜರಿ ಇದ್ದದ್ದೇ. ಅವರು ಕನ್ನಡದ ಕೆಲಸಗಳಿಗೆ ಸಾಕಷ್ಟು ಹಣವನ್ನೂ, ಸಮಯವನ್ನೂ ವ್ಯಯಮಾಡಿದ್ದಾರೆ.

ಈಗ ರಾ.ನಂ.ರವರ ೬೦ನೇ ಹುಟ್ಟುಹಬ್ಬದ ಪ್ರಯುಕ್ತ ಅಭಿನಂದನಾ ಕಾರ್ಯಕ್ರಮ ಮತ್ತು ಗ್ರಂಥವೊಂದನ್ನು ತರುವ ಕಾರ್ಯ ಬಹಳ ಉಚಿತವಾದದ್ದು. ಅವರು ಮತ್ತು ಅವರ ಕುಟುಂಬದವರೆಲ್ಲರೂ ಆರೋಗ್ಯದಿಂದಿರಲಿ ಎಂದು ಹಾರೈಸುತ್ತೇನೆ.

ಹಳಿ ತಪ್ಪಿರುವ ಕನ್ನಡ ಚಳವಳಿ

■ ಡಾ. ಎಂ. ಚಿದಾನಂದಮೂರ್ತಿ

೧೯೯೯ರಲ್ಲಿ ಅಚ್ಚಾಗಿರುವ "ಹುಬ್ಬಳ್ಳಿ ನೈರುತ್ಯ ರೈಲ್ವೆವಲಯ ಕೇಂದ್ರವಾಗಿ" (ಲೇಖಕ: ಎಂ. ಚಿದಾನಂದಮೂರ್ತಿ) ಎಂಬ ಕಿರುಕೃತಿಯನ್ನು ಕನ್ನಡ ಶಕ್ತಿ ಕೇಂದ್ರವು ಪ್ರಕಟಿಸಿದ್ದು ಅದರಲ್ಲಿರುವ ಕೆಲವು ವಾಕ್ಯಗಳು ಹೀಗಿವೆ–"ಉಪಕಾರ ಸ್ಮರಣೆ: ಕನ್ನಡ ಶಕ್ತಿ ಕೇಂದ್ರಕ್ಕೆ ಒಳ್ಳೆಯ ಹೆಸರಿದೆ. ಆದರೆ ಅದರ ಬಳಿ ಹಣ ಇಲ್ಲ. ಈ ಪುಸ್ತಕದ ಹತ್ತುಸಾವಿರ ಪ್ರತಿಗಳನ್ನು ಉಚಿತವಾಗಿ ಹಂಚಲು ಕನ್ನಡ ಶಕ್ತಿ ಕೇಂದ್ರವು ಉದ್ದೇಶಿಸಿ, ಕನ್ನಡದ ಬಗ್ಗೆ ಪ್ರೀತಿ ಇರುವವರಿಂದ ಹಣ ಪಡೆದು ಅಚ್ಚು ಮಾಡಿಸಿದೆ. ಹಲವರು ತಮ್ಮ ಕೈಲಾದಷ್ಟು ಧನಸಹಾಯ ಮಾಡಿದ್ದಾರೆ. ಅವರೆಲ್ಲರಿಗೂ ನಾವು ಕೃತಜ್ಞರು. ಚಾಮರಾಜಪೇಟೆಯ ಲಕ್ಷ್ಮಿ ಮುದ್ರಣಾಲಯದವರು ರಿಯಾಯ್ತಿ ದರದಲ್ಲಿ ಇದನ್ನು ಅಲ್ಪಕಾಲದಲ್ಲೇ ಅಚ್ಚು ಮಾಡಿಕೊಟ್ಟಿದ್ದಾರೆ (೧೯೯೯). ಅವರಿಗೂ ನಾವು ಋಣಿಗಳು. ಈ ಕಿರುಕೃತಿಯನ್ನು ಅದು ಇರುವಂತೆಯೇ ಯಾರಾದರೂ ಪುನರ್ಮುದ್ರಿಸಬಹುದು ಅಥವಾ ಪತ್ರಿಕೆಗಳು (ಧಾರಾವಾಹಿಯಾಗಿ) ಪ್ರಕಟಿಸಬಹುದು... ಈ ಪುಸ್ತಿಕೆಯ ಹಿಂದೆ ಅಖಂಡ ಕರ್ನಾಟಕದ ಬಗ್ಗೆ ಇರುವ ಪ್ರೀತಿ ಅಭಿಮಾನಗಳು ಮಿಡಿಯುತ್ತಿವೆ. ಇದನ್ನು ಓದಿ; ಓದಲು ಇನ್ನೊಬ್ಬರಿಗೆ ಕೊಡಿ. ಇದು ನಿಮಗೆ ಕನ್ನಡ ಶಕ್ತಿ ಕೇಂದ್ರದ ಪ್ರೀತಿಯ ಕೊಡುಗೆ". ಈ ವಾಕ್ಯಗಳ ಆಶಯ ಮುಂದೆ ಗೊತ್ತಾಗುತ್ತದೆ.



ಇಪ್ಪತ್ತನೆಯ ಶತಮಾನದ ಅಂತ್ಯದಲ್ಲಿ ನಾವು ಹುಬ್ಬಳ್ಳಿಯಲ್ಲಿ ನೈರುತ್ಯ ರೈಲ್ವೆ ಕೇಂದ್ರವು ಸ್ಥಾಪಿತವಾಗಲು ಸತತವಾಗಿ ಪ್ರಯತ್ನಿಸಿದೆವು. ಕೇಂದ್ರ ಸರ್ಕಾರದ, ಕರ್ನಾಟಕದ ಉದ್ದಿಮೆಗಳಲ್ಲೆಲ್ಲ

ಮಲೆಯಾಳಿಗಳೂ ಸೇರಿದಂತೆ ತಮಿಳರೇ ಹೆಚ್ಚಾಗಿ ನೇಮಕವಾಗುತ್ತಿದ್ದ ಕಾಲ ಅದು. ಅಲ್ಲೆಲ್ಲ ಕನ್ನಡಿಗರನ್ನು ಸಂಪೂರ್ಣವಾಗಿ ಉಪೇಕ್ಷೆ ಮಾಡಲಾಗಿತ್ತು. ಕಾರಣ, ಆಗ ದಕ್ಷಿಣ ರೈಲ್ವೆ ವಲಯಕ್ಕೆ ಚೆನ್ನೈ (ಆಗಿನ ಮದ್ರಾಸ್) ನಗರ ಕೇಂದ್ರವಾಗಿತ್ತು. ಚೆನ್ನೈನಿಂದಲೇ ಎಲ್ಲ ನೇಮಕಾತಿಗಳು ನಡೆಯುತ್ತಿದ್ದವು. ಬೆಂಗಳೂರಿನ ರೈಲ್ವೆ ನಿಲ್ದಾಣದಲ್ಲಿ ತಮಿಳಿನಲ್ಲಿಯೇ ಟಿಕೆಟ್ಟು ಕೇಳಬೇಕಾಗಿತ್ತು. ಅಲ್ಲಿನ ಹೋಟೆಲುಗಳೆಲ್ಲ ತಮಿಳರಿಂದ, ಪುಸ್ತಕದ ಅಂಗಡಿಯೆಲ್ಲ ತಮಿಳು ಪುಸ್ತಕಗಳಿಂದ ತುಂಬಿರುತ್ತಿದ್ದವು. ೧೯೭೦ರ ದಶಕದಲ್ಲಿ ಸರೀನ್ ಸಮಿತಿಯು ಪ್ರತ್ಯೇಕ ನೈರುತ್ಯ ವಲಯ (S-W Zone) ಶಿಫಾರಸ್ಸು ಮಾಡಿ, ಅದಕ್ಕೆ ಬೆಂಗಳೂರು ಕೇಂದ್ರ ಎಂದು ಹೇಳಿತು. ಅದು ಜಾರಿಯಾಗಲಿಲ್ಲ.

೧೯೮೬ರ ಸರೋಜಿನಿ ಮಹಿಷಿ ಆಯೋಗವು ಆ ಶಿಫಾರಸ್ಸುಗಳನ್ನು ಜಾರಿಗೊಳಿಸದಿರುವ ಬಗ್ಗೆ ತನ್ನ ಅಸಮಾಧಾನ ವ್ಯಕ್ತಪಡಿಸಿತು. ಕೇಂದ್ರ ಸರ್ಕಾರ ಆ ಕಡೆ ಗಮನ ಕೊಡಲಿಲ್ಲ. ೧೯೮೮ರಲ್ಲಿ ಸಂಸತ್ ಸದಸ್ಯರಾಗಿದ್ದ ಡಾ.ಪಿ. ವೆಂಕಟೇಶ್ ಜೊತೆ ನಾವೆಲ್ಲ ಸೇರಿ ಒಂದು ಚಳವಳಿ ರೂಪಿಸಿದೆವು. ನಮ್ಮ "ಸಾಹಿತಿಗಳ ಕಲಾವಿದರ ಬಳಗ"ದ ಜೊತೆ "ಕರ್ನಾಟಕ ರೈಲ್ವೆ ಸಂಘರ್ಷ ಸಮಿತಿ" ಕೈ ಜೋಡಿಸಿತು. ಆಗ ನಾವೆಲ್ಲ ಸೇರಿ ಬೆಂಗಳೂರಿನಲ್ಲಿ ನಡೆಸಿದ ರೈಲು ತಡೆ ಕಾರ್ಯಕ್ರಮವನ್ನು ಎಸ್. ನಿಜಲಿಂಗಪ್ಪನವರು ಉದ್ಘಾಟಿಸಿದರು. ಆ ತಡೆ ಸಾಂಕೇತಿಕವಾಗಿತ್ತು ಮತ್ತು ಯಾವ ರೈಲ್ವೆ ಪ್ರಯಾಣಿಕರಿಗೂ ತೊಂದರೆ ಆಗಲಿಲ್ಲ. ೧೯೯೧ರಲ್ಲಿ ರೈಲ್ವೆ ಸಚಿವರಾಗಿದ್ದ ಜಾಫರ್ ಷರೀಫ್‌ರಿಂದ ಬೆಂಗಳೂರಿನಲ್ಲಿ ನೈರುತ್ಯ ರೈಲ್ವೆ ವಲಯ ಆರಂಭವಾಗಲಿದೆಯೆಂಬ ಸುದ್ದಿ ತಿಳಿದು ಹರ್ಷವಾಯಿತಾದರೂ, ಅದೂ ಕಾರ್ಯರೂಪಕ್ಕೆ ಬರಲಿಲ್ಲ.

ಆದರೆ, ಮುಂದೆ ನಾನು ನನ್ನ ನಿಲುವಿನಲ್ಲಿ ಸ್ವಲ್ಪ ಬದಲಾವಣೆ ಮಾಡಿಕೊಳ್ಳಬೇಕಾಯ್ತು. ಬೆಂಗಳೂರು ಸಾಕಷ್ಟು ಉದ್ಯಮಗಳ ಕೇಂದ್ರವಾಗಿ ಬೆಳೆಯುತ್ತಿತ್ತು; ಅಲ್ಲಿನ ಖಾಸಗಿ, ಕೇಂದ್ರ (ಮತ್ತು ರಾಜ್ಯ) ಉದ್ಯೋಗಗಳೆಲ್ಲ ಅನ್ಯರ ಪಾಲು. ಸಾಹಿತಿಗಳ ಕಲಾವಿದರ ಬಳಗದ ಹೋರಾಟದ ಫಲವಾಗಿ ಅಸ್ತಿತ್ವಕ್ಕೆ ಬಂದ ಮಹಿಷಿ ಆಯೋಗದ ವರದಿ ಬರೀ ವರದಿಯಾಗಿ ಉಳಿದಿತ್ತು. ಎಲ್ಲ ದೃಷ್ಟಿಗಳಿಂದ ಉತ್ತರ ಕರ್ನಾಟಕ ಅಲಕ್ಷ್ಯಕ್ಕೆ ಈಡಾಗಿದ್ದ ಸಂದರ್ಭದಲ್ಲಿ, ರೈಲ್ವೆ ನೈರುತ್ಯ ವಲಯ ಕೇಂದ್ರವು ಬೆಂಗಳೂರಿನ ಬದಲು ಹುಬ್ಬಳ್ಳಿಯೇ ಆಗಬೇಕೆಂಬ ಸಕಾರಣವಾದ ಹಕ್ಕೊತ್ತಾಯವು ಆರಂಭವಾಯಿತು. ಆ ಹಕ್ಕೊತ್ತಾಯಕ್ಕೆ ನನ್ನ ಬೆಂಬಲ ಸಂಪೂರ್ಣವಾಗಿತ್ತು. ಹುಬ್ಬಳ್ಳಿ ರೈಲ್ವೆ ನೌಕರರ ಕನ್ನಡ ಸಂಘವು ಅದಕ್ಕೆ ದನಿಗೂಡಿಸಿತು. ೧೯೯೫ರ ಹೊತ್ತಿಗೆ ಸುರೇಶ್ ಕಲ್ಮಾಡಿಯವರು ರೈಲ್ವೆ ಸಚಿವರಾದ್ದರಿಂದ, ಕನ್ನಡ ಶಕ್ತಿ ಕೇಂದ್ರವು ಅವರಿಗೆ ಪತ್ರ ಬರೆದು, ನೈರುತ್ಯ ವಲಯ ಕೇಂದ್ರಕ್ಕೆ ಹುಬ್ಬಳ್ಳಿಯೇ ಸೂಕ್ತವೆಂದು ಹೇಳಿ, ಅದರ ಪ್ರತಿಗಳನ್ನುಕರ್ನಾಟಕದ ಲೋಕಸಭಾ ಸದಸ್ಯರಿಗೆ ಕಳುಹಿಸಿಕೊಡಲಾಯಿತು. ಆಗ ಲೋಕಸಭೆಯ ಉಪಾಧ್ಯಕ್ಷರಾಗಿದ್ದ ಎಸ್. ಮಲ್ಲಿಕಾರ್ಜುನಯ್ಯ, ಸದಸ್ಯರಾಗಿದ್ದ ಪ್ರಭಾಕರ್ ಕೋರೆಯವರಿಂದ ಅದಕ್ಕೆ ಲಿಖಿತ ಬೆಂಬಲವೂ ದೊರಕಿತು. ಇಪ್ಪತ್ತೇಳು ಲೋಕಸಭಾ ಸದಸ್ಯರು ಹುಬ್ಬಳ್ಳಿ ಪರವಾಗಿ ಪತ್ರ ಬರೆಯುವಂತೆ ಮಾಡುವಲ್ಲಿ ನಾವು ಯಶಸ್ವಿಯಾದೆವು. ಬೆಂಗಳೂರು ರೈಲ್ವೆ ನಿಲ್ದಾಣದ

ಮುಂದೆ ಹುಬ್ಬಳ್ಳಿ ಪರವಾಗಿ ಧರಣವನ್ನು ಕೂಡ ನಡೆಸಿದೆವು. ಕರ್ನಾಟಕ ಸರ್ಕಾರದ ನಿರ್ಧಾರವನ್ನು ನೋಡಿಕೊಂಡು ತಾವು ನಿರ್ಧರಿಸುವುದಾಗಿ ಸುರೇಶ್ ಕಲ್ಮಾಡಿ ತಿಳಿಸಿದ್ದರು. ನಾವು ೨೭–೨–೯೬ರಂದು ದೆಹಲಿಗೆ ನಿಯೋಗ ಹೋಗಲು ನಿರ್ಧರಿಸಿ ಅಲ್ಲಿಗೆ ಹೋದೆವು. ಕರ್ನಾಟಕ ಭವನದಲ್ಲಿ ಅಂದಿನ ಲೋಕಸಭಾ ಡೆಪ್ಯೂಟಿ ಸ್ಪೀಕರ್ ಮಲ್ಲಿಕಾರ್ಜುನಯ್ಯನವರ ಪ್ರಯತ್ನದಿಂದ ನಿರೀಕ್ಷೆಗೂ ಮೀರಿದ ಸಂಸದರು ಬಂದರು. ಆ ಹೊತ್ತಿಗೆ ಅಂದಿನ ಮುಖ್ಯಮಂತ್ರಿ ಎಚ್.ಡಿ. ದೇವೇಗೌಡರು ತಮ್ಮ ನಿಲುವು ಬದಲಿಸಿ ಹುಬ್ಬಳ್ಳಿ ಪರವಾಗಿ ಪತ್ರ ಬರೆದು ನನಗೆ ತಲುಪಿಸಿದ್ದರು. ಆ ಲೋಕಸಭಾ ಸದಸ್ಯರ ಸಭೆಯಲ್ಲಿ ಬೆಂಗಳೂರಿನಿಂದ ನಮ್ಮ ಜೊತೆ ಬಂದಿದ್ದ, ಬೆಂಗಳೂರು ಪರವಾಗಿದ್ದ ಒಬ್ಬ ಕಾರ್ಯಕರ್ತರು, ಎಲ್ಲರ ಮುಂದೆ ನನ್ನನ್ನು ತುಚ್ಛವಾಗಿ ಹೀಯಾಳಿಸಿದ್ದನ್ನು ನಾನು ಆ ಸಭೆಯಲ್ಲೇ ಸಭ್ಯತೆಯಿಂದ ತಳ್ಳಿ ಹಾಕಿದೆ. ಕನ್ನಡ, ಕರ್ನಾಟಕಕ್ಕಾಗಿ ಅಂತಹ ನಿಂದೆಗಳನ್ನು ಹಲವು ಬಾರಿ ಎದುರಿಸಿದ್ದೆ. ಎಚ್.ಡಿ.ದೇವೇಗೌಡರ ಪತ್ರವನ್ನು ನಾನು ಓದುತ್ತಿದ್ದಂತೆ ಮುಖ್ಯ ಮಂತ್ರಿಗಳ ಅಭಿಪ್ರಾಯವು ಇಡೀ ಕರ್ನಾಟಕದ, ಕನ್ನಡ ಜನತೆಯ ಅಭಿಪ್ರಾಯ ಎಂದು ಅಂದು ಭಾಗವಹಿಸಿದ್ದ ಎಲ್ಲ ಲೋಕ ಸಭಾಸದಸ್ಯರೂ ಒಪ್ಪಿಗೆ ನೀಡಿದರು. ಮುಂದೆ ಅನೇಕ ವಿವಾದಗಳ ಮಧ್ಯೆಯೇ ಅಂತಿಮವಾಗಿ ಹುಬ್ಬಳ್ಳಿಯೇ ನೈರುತ್ಯವಲಯ ಕೇಂದ್ರವೆಂದು ಭಾರತ ಸರ್ಕಾರ ಘೋಷಿಸಿ, ಆ ವಿವಾದಕ್ಕೆ ಅಂತಿಮ ತೆರೆಯನ್ನು ಎಳೆಯಿತು. ಹುಬ್ಬಳ್ಳಿಯು ರೈಲ್ವೆ ನೈರುತ್ಯ ವಲಯದ ಕೇಂದ್ರವಾಯಿತು.

ಮೇಲಿನದು ಒಂದು ಬಗೆಯ 'ಚಳವಳಿ'ಯೆಂದೇ ಹೇಳಬೇಕು. "ಚಲನವಲನ"ದ ತದ್ಭವವೇ ಚಳವಳಿ (ಇಂಗ್ಲಿಷ್: movement). ಒಂದು ನಿರ್ದಿಷ್ಟ ಗುರಿಯನ್ನಿಟ್ಟುಕೊಂಡು ಸತತವಾಗಿ ಕಾರ್ಯನಿರತವಾಗಿರುವುದೇ ಚಳವಳಿ. ಒಂದು ಸಮಸ್ಯೆಯನ್ನು ಗುರುತಿಸುವುದು ಅದಕ್ಕಾಗಿ ಸಭೆ, ಸಮಾರಂಭ, ತಜ್ಞರ ಜೊತೆ ಸಮಾಲೋಚನೆ, ಸಂಬಂಧಪಟ್ಟವರ ಭೇಟಿ ಅನಿವಾರ್ಯವಾದರೆ ಧರಣ, ರಸ್ತೆ ತಡೆ, ರೈಲು ತಡೆ ಇವೆಲ್ಲವನ್ನೂ ನಿಜವಾದ ಚಳವಳಿ ಒಳಗೊಳ್ಳುತ್ತದೆ. ಎಲ್ಲಿಯೂ ಹಿಂಸೆಗೆ, ಬೆದರಿಕೆಗೆ, ಹಣ ವಸೂಲಿಗೆ, ವಂಚನೆಗೆ, ಸುಳ್ಳು ಹೇಳಲು ನಿಜವಾದ ಚಳವಳಿಯಲ್ಲಿ ಅವಕಾಶವಿಲ್ಲ. ಮೇಲೆ ಹೇಳಿದ ಚಳವಳಿಗೆ ಹುಬ್ಬಳ್ಳಿಯನ್ನು ನೈರುತ್ಯ ವಲಯವನ್ನಾಗಿಸುವ ಸ್ಪಷ್ಟ ಉದ್ದೇಶವಿತ್ತು. ಅದಕ್ಕಾಗಿ ನಾವು ನಡೆಸಿದ, ಭಾಗವಹಿಸಿದ ಸಭೆಗಳು ಹಲವಾರು; ಹಲವಾರು ಲೋಕಸಭಾ ಸದಸ್ಯರನ್ನು ಕಂಡೆವು; ಚಂದ್ರಕಾಂತ ಬೆಲ್ಲದರ ನೇತೃತ್ವದಲ್ಲಿ ಹಲವಾರು ಶಾಸಕರ ಪತ್ರಗಳನ್ನು ಪಡೆದೆವು. ಎಸ್. ನಿಜಲಿಂಗಪ್ಪನವರ ಅಭಿಪ್ರಾಯ ಪತ್ರ ಪಡೆಯಲು ಬೆಂಗಳೂರಿನಿಂದ ಚಿತ್ರದುರ್ಗಕ್ಕೆ ಬಸ್ಸಿನಲ್ಲಿ ಹೋಗಿ ಬಂದೆ. ಅಂತಹುದಕ್ಕಾಗಿ ಖರ್ಚಾದ ಹಣ ಎಷ್ಟೆಂದು ಗೊತ್ತಿಲ್ಲ. ಆ ಹಣವೆಲ್ಲ ಬಹುತೇಕ ನನ್ನದೇ. ಕನ್ನಡ ಶಕ್ತಿ ಕೇಂದ್ರದ ಹಣವೆಲ್ಲ ಬಹುತೇಕ ನಾವು ಕನ್ನಡ ಕಾರ್ಯಕರ್ತರು ಸ್ವತಃ ಕೊಟ್ಟಿದ್ದು. ಈ ಲೇಖನದ ಆರಂಭದಲ್ಲಿ ಬಂದಿರುವ ಮಾತುಗಳು ಅದನ್ನೇ ಧ್ವನಿಸುತ್ತವೆ. ಹುಬ್ಬಳ್ಳಿ ಪರ ಚಳವಳಿಯಾಗಲೀ, ಮಹಿಷಿ ವರದಿ ಬರಲು ಮಾಡಿದ ಪ್ರಯತ್ನವಾಗಲೀ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ವಿಶ್ವವಿದ್ಯಾಲಯಗಳಿಗಾಗಿ ಮಾಡಿದ ಪ್ರಯತ್ನಗಳಾಗಲೀ, ಮಾತೃಭಾಷಾ ಮಾಧ್ಯಮಕ್ಕಾಗಿ

ಮಾಡಿದ ಉಪವಾಸ ಚಳವಳಿಯಾಗಲೀ ಎಲ್ಲಕ್ಕೂ ಒಂದು ನಿರ್ದಿಷ್ಟ ಗುರಿಯಿತ್ತು. ನಾವು ಅಧಿಕಾರಿಗಳು, ಮಹಾನಗರ ಪಾಲಿಕೆ ಮೇಯರುಗಳು, ಮಂತ್ರಿಗಳು, ಮುಖ್ಯಮಂತ್ರಿಗಳು ಪ್ರಧಾನಿಗಳನ್ನು ಭೇಟಿ ಮಾಡಿ ಒತ್ತಾಯ ಹಾಕಿದ್ದೇವೆ. ನನಗಿನ್ನೂ ನೆನಪಿದೆ ಎಚ್.ನರಸಿಂಹಯ್ಯನವರು ಹೇಳಿದ್ದು - "ಸ್ವಾತಂತ್ರ್ಯ ಚಳವಳಿಯ ಬಳಿಕ ನಾನು ಕಂಡ ಅತ್ಯಂತ ಶಿಸ್ತು ಬದ್ಧ ಚಳವಳಿಯೆಂದರೆ ಕನ್ನಡ ಚಳವಳಿ."

ಅಂತಹ ಚಳವಳಿಯಲ್ಲಿ ಉದ್ದಕ್ಕೂ ನಮ್ಮ ಜೊತೆ ಅತ್ಯಂತ ಶ್ರದ್ಧೆಯಿಂದ ದುಡಿದ ಕಾರ್ಯಕರ್ತನೆಂದರೆ ರಾ.ನಂ. ಚಂದ್ರಶೇಖರ. ಅವರ ಪ್ರಾಮಾಣಿಕತೆ, ನಿರಂತರ ಉತ್ಸಾಹ ಲವಲವಿಕೆ, ನಿಷ್ಠೆ ಇವು ಪ್ರಶ್ನಾತೀತ. ಕನ್ನಡ ಶಕ್ತಿ ಕೇಂದ್ರದ ಮುಂದುವರಿಕೆಯಾಗಿ ಅವರ ನೇತೃತ್ವದ ಕನ್ನಡ ಗೆಳೆಯರ ಬಳಗ ಕೆಲಸ ಮಾಡುತ್ತಿದೆ. ಅವರಿಗೀಗ ಐವತ್ತೊಂಬತ್ತು ತುಂಬಿ ಅರವತ್ತು ವರ್ಷ; ಆದರೆ ಅವರು ನಡೆ ನುಡಿಯಲ್ಲಿ ಮಾತ್ರ ಚಿರ ಯೌವನದ ಚುರುಕು ಯುವಕ.

ಇದು ಅತ್ಯಂತ ಸಂತೋಷದ ವಿಷಯ. ಆದರೆ ಈಗಿನ ಬಹುತೇಕ ಚಳವಳಿಗಳ ಬಗ್ಗೆ ಪತ್ರಿಕೆಗಳಲ್ಲಿ ಓದುತ್ತಿದ್ದರೆ ನಗು ಬರುತ್ತದೆ; ಅಸಹ್ಯವಾಗುತ್ತದೆ. ಭೂತದಹನ, ತಮಟೆ ಚಳವಳಿ, ಎಮ್ಮೆ, ಕೋಣ, ಕತ್ತೆಗಳ ಮೇಲೆ ಸವಾರಿ ಇವು ನಗುವನ್ನು ತರಿಸಿದರೆ; ಗುಟ್ಟಾಗಿ ಹಣವನ್ನು ಸಂಗ್ರಹಿಸುತ್ತಿರುವ ಸಂಗತಿ ತೀವ್ರ ನೋವನ್ನು ತರುತ್ತದೆ. ಹಲವಾರು ಉದ್ಯಮಿಗಳೂ, ವರ್ತಕರೂ ನನಗೆ ನೇರವಾಗಿ ಹೇಳಿದ್ದಾರೆ-ಅವರ ಬಳಿಗೆ ಬರುವ ತಂಡವು, ತಮ್ಮ ಸಂಘಟನೆಯ ಹೆಸರನ್ನೂ, ಅದರ ಮುಖಂಡರ ಹೆಸರನ್ನೂ ಹೇಳಿ ಹೆದರಿಸಿ, ಲಕ್ಷಗಟ್ಟಲೆ ಹಣವನ್ನು ಸುಲಿಯುತ್ತಿದ್ದಾರೆ. ನಾವು ಸಕ್ರಿಯವಾಗಿದ್ದಾಗ ಚಳವಳಿಗೆ ಒಂದು ಆದರ್ಶದ ಬೆಲೆಯಿತ್ತು; ಈಗ ನಗುವಿನ, ಭಯದ ಬೆಲೆ ಬಂದಿದೆ. ನನಗೆ ತಿಳಿದ ಮಟ್ಟಿಗೆ ಒಂದು ನಿರ್ದಿಷ್ಟ ಗುರಿಯ ಸಾಧನೆಗೆ ನಿರಂತರವಾಗಿ ಅನುಸರಣ ಮಾಡಿರುವ ಆಗಿನ ಒಂದೂ ಉದಾಹರಣೆ ಈಗ ಇಲ್ಲ. ಈ ಬಗ್ಗೆ ಹೆಚ್ಚು ಹೇಳುವುದು ಅನಗತ್ಯ.

ಇದೆಲ್ಲದರ ಮಧ್ಯೆ ಕನ್ನಡ ಚಳವಳಿಯನ್ನು ಜೀವಂತವಾಗಿ, ಮೌಲಿಕವಾಗಿ ಉಳಿಸಿರುವ ರಾ.ನಂ. ಚಂದ್ರಶೇಖರ ನಿಜವಾಗಿಯೂ ಅಭಿನಂದನಾರ್ಹರು. ಅವರನ್ನು ತೀರ ಹತ್ತಿರದಿಂದ ಬಲ್ಲ ನನ್ನ ಎದೆಯಾಳದ ಮಾತುಗಳು ಇವು.




ಚಳವಳಿಗಳ ಆಕಾಂಕ್ಷೆ

■ ಡಾ. ಜಿ. ರಾಮಕೃಷ್ಣ

ಆತ್ಮೀಯರಾದ ಶ್ರೀ ರಾ.ನಂ. ಚಂದ್ರಶೇಖರ ಅವರಿಗೆ ಶುಭಾಶಯ ಕೋರುತ್ತೇನೆ. ಅವರಿಗೆ ೬೦ ವರ್ಷ ಅಂದರೆ ನಂಬುವುದು ಕಷ್ಟ. ಸುಮಾರು ೩೫ ವರ್ಷಗಳ ತರುಣನಲ್ಲಿ ಕಾಣುವ ಉತ್ಸಾಹ ಮತ್ತು ಕ್ರಿಯಾಶೀಲತೆ ಇವರಲ್ಲಿದೆ. ಇನ್ನೂ ಹಲವು ಕಾಲ ಅದು ಹಾಗೆಯೇ ಮುಂದುವರಿಯಲೆಂದು ಆಶಿಸುತ್ತೇನೆ ಮತ್ತು ೩೫ರ ತಾರುಣ್ಯದಲ್ಲಿರುವವರು ಇವರ ಜೀವಂತಿಕೆಯಿಂದ ಕಲಿಯಬಹುದಾದ್ದನ್ನು ಕಲಿಯಬೇಕೆಂದು ಬಯಸುತ್ತೇನೆ.

ಇದು ಪ್ರಶಸ್ತಿಗಳ ಕಾಲ, ಚಳವಳಿಯದಲ್ಲ; ಎನ್ನುವ ಭಾವನೆ ಈಚಿನ ವರ್ಷಗಳಲ್ಲಿ ಸಕಾರಣವಾಗಿಯೇ ದಟ್ಟವಾಗುತ್ತ ಬಂದಿದೆ. ದಿನ ಬೆಳಗಾದರೆ ಏನಾದರೊಂದು ಹೊಸ ಪ್ರಶಸ್ತಿಯ ಘೋಷಣೆ ಇದ್ದೇ ಇರುತ್ತದೆ; ಅದೂ ಬಹುಮಟ್ಟಿಗೆ ಸಾಹಿತ್ಯಸಂಬಂಧಿಯಾದುದು. ಎಷ್ಟೋ ದೊಡ್ಡ ವಿಜ್ಞಾನಿಗಳ ಹೆಸರುಗಳು ಪ್ರಚಾರಕ್ಕೆ ಬರುವುದಿಲ್ಲ, ಆದರೆ ಒಂದು ಪದ್ಯ ಬರೆದರೆ, ಅದು ಹೇಗೋ ಸ್ವಲ್ಪ ಪ್ರಸಿದ್ಧಿ ಬಂದುಬಿಡುತ್ತದೆ. ಕರ್ನಾಟಕದವರೇ ಆದ ನೂರಾರು ಅಂತರರಾಷ್ಟ್ರೀಯ ಖ್ಯಾತಿಯ ವಿಜ್ಞಾನಿಗಳು, ಭಾರತೀಯ ವಿಜ್ಞಾನ ಸಂಸ್ಥೆ ಮುಂತಾದೆಡೆ ಸಂಶೋಧನೆಗಳನ್ನು ನಡೆಸುತ್ತಾರೆ. ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ಕೂಡ ದೊರೆಯುವುದಿಲ್ಲ, ಏಕೆಂದರೆ ಆಯ್ಕೆ ಸಮಿತಿಗೆ ವಿಜ್ಞಾನಿಗಳ ಪರಿಚಯ ಕಡಿಮೆ. ನಾನು ಕಾಲೇಜು ಅಧ್ಯಾಪಕನಾಗಿ ಕೆಲಸ ಮಾಡುತ್ತಿದ್ದಾಗ, ಯಾರಾದರೂ ವಿದ್ಯಾರ್ಥಿ ತಾನು ಕವನ ರಚಿಸುವುದಾಗಿ ಹೇಳಿಕೊಂಡು ಬಂದರೆ, ಆತ ಚಳವಳಿಗಳಲ್ಲಿ ಭಾಗಿಯಾಗುವ ಸಾಧ್ಯತೆ ಬಹಳ ಕಡಿಮೆಯೆಂದು



ಭಾವಿಸಿಕೊಂಡುಬಿಡುತ್ತಿದ್ದೆ. ಕೆಲವರಿಗೆ ಅದನ್ನು ಹೇಳಿದ್ದುದೂ ಉಂಟು. "ಮೊದಲು ಯಾವುದಾದರೂ ಚಳವಳಿಗಳಲ್ಲಿ ನೇರವಾಗಿ ಭಾಗವಹಿಸಿ; ಅಲ್ಲಿ ಕಣ್ತೆರೆದಾದ ಮೇಲೆ ಪದ್ಯ ಬರೆಯಿರಿ, ಅದು ಆರೋಗ್ಯಕರ" ಎಂಬುದು ಸಾಮಾನ್ಯವಾಗಿ ನಾನು ಹೇಳುತ್ತಿದ್ದ ಮಾತು. ಪದ್ಯ ಬರೆಯುವವರೇ ಬೇರೆ, ಚಳವಳಿಗಳಲ್ಲಿ ಭಾಗವಹಿಸುವವರೇ ಬೇರೆ ಎಂದಾದರೆ, ಎಷ್ಟೋ ವೇಳೆ ಪದ್ಯವು ಗಟ್ಟಿಯಾಗಿರುವುದಿಲ್ಲ ಮತ್ತು ಚಳವಳಿಯು ಸಪ್ಪೆಯಾಗುತ್ತದೆ. ಬೌದ್ಧಿಕ ಕ್ರಿಯೆ ಮತ್ತು ಚಳವಳಿಗಳ ಚಟುವಟಿಕೆ ಎರಡೂ ಮೇಳೈಸಿದಾಗ ಸಾಂಸ್ಕೃತಿಕ ಜೀವನವು ಔನ್ನತ್ಯದತ್ತ ಸಾಗಲು ಅನುವಾಗುತ್ತದೆಂದು ಭಾವಿಸುವುದು ತಪ್ಪಲ್ಲ. ಪ್ರಾಯೋಗಿಕವಾಗಿಯೂ ಅದು ಸಾಬೀತಾಗಿದೆ.

ನಮ್ಮ ರಾಜ್ಯಕ್ಕೆ ದಕ್ಕಿರುವ ರಾಷ್ಟ್ರೀಯ ಸಾಹಿತ್ಯ ಪ್ರಶಸ್ತಿಗಳು ಅನೇಕ. ಅದು ಸಂತಸದ ಸಂಗತಿಯೂ ಹೌದು. ಆದರೆ ಅವು ದುಡಿಯುವ ಜನರ ನೈಜ ಪರಿಸ್ಥಿತಿಯ ಮಾಪಕಗಳಲ್ಲ. ಆ ಜನರ ಜೀವನದ ಸಂಕಷ್ಟಗಳ ಮೌಲಿಕ ಪ್ರತಿಫಲನವಿರುವ ಸಾಹಿತ್ಯ ನಮ್ಮಲ್ಲಿ ಇಲ್ಲವೆಂದಲ್ಲ. ಇದೆ, ಆದರೆ ಅದು ಹೊರಗೆ ನಿಂತು ನೋಡಿದವರು ದಾಖಲಿಸಿರುವುದೇ ವಿನಾ, ನೇರವಾಗಿ ಅವರ ಮಧ್ಯದಿಂದಲೇ ಹೊಮ್ಮಿರುವುದಲ್ಲ. ಸಾಮಾನ್ಯವಾಗಿ "ಕನ್ನಡ ಚಳವಳಿ" ಎನಿಸಿಕೊಂಡಿರುವ ಚಳವಳಿಗಳ ಮೂಲ ಸಾಮಗ್ರಿ ಬಹುತೇಕ ಇತಿಹಾಸ ಮತ್ತು ಸಾಹಿತ್ಯದ ಕ್ಷೇತ್ರಗಳಿಗೆ ಸೀಮಿತವಾದುದು. ನಮ್ಮ ರಾಜ್ಯದ ಶಿಲ್ಪ ಪರಂಪರೆ, ರಾಜರ ಆಳ್ವಿಕೆ, ರಾಜ್ಯದ ವಿಸ್ತರಣೆ ಇಂಥವು ಒಂದು ಕಡೆ; 'ಮನುಷ್ಯ ಕುಲ ತಾನೊಂದೆ ವಲಂ' ನಂತಹ ಹೇಳಿಕೆಗಳಿರುವ ಸಾಹಿತ್ಯ ಇನ್ನೊಂದು ಕಡೆ. ನಮ್ಮ ಜನತೆಯ ಪರಂಪರೆ ಎಂದರೆ ಅವೆರಡೇ ಅಲ್ಲ. ಕೃಷಿ–ಉದ್ಯಮ–ಗೃಹಕೈಗಾರಿಕೆ ಮುಂತಾದವೂ ನಮ್ಮ ಪರಂಪರೆಯ ಅವಿಚ್ಛಿನ್ನ ಭಾಗ. ಸಂಸ್ಕೃತಿಯ ಉಗಮವು ಅವುಗಳ ಹಿನ್ನೆಲೆಯಲ್ಲೂ ಆಗಿದೆ. ಸಂಸ್ಕೃತಿಯ ಅನೇಕ ವಕ್ತಾರರು ಅದನ್ನು ಮರೆತುಬಿಡುತ್ತಾರೆ. ಎರಡು ತಿಂಗಳ ಹಿಂದೆಯೋ ಏನೋ ಬೆಂಗಳೂರು ಗಾಯನ ಸಮಾಜದ ಸರ್ವಸದಸ್ಯರ ಸಭೆ ನಡೆಯಿತು. ಅಲ್ಲಿ ಒಬ್ಬ ಮಹನೀಯರು ಗಂಭೀರವಾಗಿ ನೀಡಿದ ಸೂಚನೆ ಇದು: ನಮ್ಮ ಗಾಯನ ಸಮಾಜದ ಆಸುಪಾಸಿನಲ್ಲಿ ಬುಟ್ಟಿ ಹೆಣೆಯುವವರು ಬಹಳ ಜಾಸ್ತಿಯಾಗಿ ಬಿಟ್ಟಿದ್ದಾರೆ. ನಮ್ಮ ವಾಹನಗಳನ್ನು ನಿಲ್ಲಿಸಲು ಜಾಗವೇ ಇಲ್ಲ. ಇವರೊಂದು ಪಿಡುಗು. ಮೊದಲು ಇವರನ್ನು ಇಲ್ಲಿಂದ ಅಟ್ಟಿ ಬಿಡಬೇಕು.

ಎಲಾ, ಏನಿದು? ಅವರೆಂದಾದರೂ ಸಭಾಂಗಣಕ್ಕೆ ನುಗ್ಗಿ, ಸಂಗೀತಕ್ಕೆ ಅಡ್ಡಿ ಪಡಿಸಿದ್ದಾರೆಯೆ? ಇಲ್ಲವಲ್ಲ; ಹಾಗಿದ್ದರೆ ಸಂಗೀತದ ಆಸ್ವಾದ ಮಾಡುವ "ಸುಸಂಸ್ಕೃತರು" ಅವರನ್ನೇಕೆ 'ಪಿಡುಗು' ಎಂದು ಕರೆದರು? ಸಾಮಾಜಿಕವಾಗಿ 'ಪ್ರತಿಷ್ಠಿತ–ಅಪ್ರತಿಷ್ಠಿತ' ಎಂಬ ವಿಂಗಡಣೆಗೆ ಇದೊಂದು ಉದಾಹರಣೆ ಸಾಕು. ಬುಟ್ಟಿ ಹೆಣೆಯುವವರನ್ನು 'ಪಿಡುಗು' ಎಂದು ಮೂದಲಿಸಿದವರು ರಾಜ್ಯದ ಶಿಕ್ಷಣ ವ್ಯವಸ್ಥೆಯನ್ನು ಗಮನಿಸಿದರೆ ಎಂತಹ ತೀರ್ಮಾನಕ್ಕೆ ಬಂದಾರು? ಸರ್ಕಾರಿ ಶಾಲೆಗಳು ಹೊಲಸಾಗಿವೆ, ಕನ್ನಡ ಮಾಧ್ಯಮ ಎಂಬುದೊಂದು ಹುಚ್ಚು, ಖಾಸಗಿ ಶಾಲೆಗಳು ಪರವಾಗಿಲ್ಲ, ಕಾರ್ಪೋರೇಟ್ ಸಂಸ್ಥೆಗಳು ನಡೆಸುವ ಇಂಗ್ಲಿಷ್ ಮಾಧ್ಯಮದ ಶಾಲೆಗಳು ಅತ್ಯುತ್ತಮ; ಅಲ್ಲಿಗೂ ಕೆಳಸ್ತರದ

ಮಕ್ಕಳು ಬಂದುಬಿಟ್ಟರೆ ಎಲ್ಲಾ ಹಾಳಾಗುತ್ತದೆ, ಹೀಗೆ ಅವರು ಬಡಬಡಿಸುವುದು ಖಂಡಿತ. ರಾಷ್ಟ್ರಮಟ್ಟದಲ್ಲಿ ಇದು ಚರ್ಚೆಗೆ ಬಂದಿದೆ. ಶಿಕ್ಷಣದ ಹಕ್ಕನ್ನು ಎಲ್ಲ ಮಕ್ಕಳೂ ಪಡೆಯಲು ಸಾಧ್ಯವಾಗುವಂತೆ, ಆಯಾ ವಲಯದಲ್ಲಿನ ಶಾಲೆಗಳು ಸನಿಹದಲ್ಲಿ ವಾಸವಾಗಿರುವ ಮಕ್ಕಳಿಗೆ ಶೇ. ೨೫ರ ಪ್ರಮಾಣದಲ್ಲಿ ದಾಖಲಾತಿ ನೀಡಬೇಕು, ಎಂದು ಕೇಂದ್ರ ಸರ್ಕಾರ ಆಜ್ಞೆ ಹೊರಡಿಸಿದೆ; ಅಂತಹ ಮಕ್ಕಳ ಪರವಾಗಿ, ಸರ್ಕಾರವು ಅಗತ್ಯವಾದ ಹಣವನ್ನು ತುಂಬಲು ಸಹ ಒಪ್ಪಿದೆ. ಆದರೆ ಖಾಸಗಿ ಶಾಲೆಗಳ ಒಡೆಯರ ಅತೃಪ್ತಿಗೆ ಪಾರವಿಲ್ಲ. ಈ "ಅಯೋಗ್ಯ" ಮಕ್ಕಳು, ತಮ್ಮ "ಯೋಗ್ಯ" ಮಕ್ಕಳ ಕಲಿಕೆಗೆ ಅಡ್ಡಿಯುಂಟು ಮಾಡುತ್ತಾರೆಂಬ ವಾದ ನಮ್ಮ ಮುಂದಿದೆ. "ಕನ್ನಡ ಮಾಧ್ಯಮ" ಕಡ್ಡಾಯವಾಗ ಕೂಡದಷ್ಟೇ ಅಲ್ಲ, ಇಂದಿನ ಸನ್ನಿವೇಶದಲ್ಲಿ ಅದರ ಮಾತೇ ಕೂಡದು, ಎನ್ನುವವರ ವಾದದ ವಿಸ್ತರಣೆಯೇ, ಸಮಾಜದ ಒಂದು ಸ್ತರದವರನ್ನು 'ಪಿಡುಗು' ಎಂದು ಹಳಿಯುವ ಸಂಪ್ರದಾಯಕ್ಕೆ ನಮ್ಮನ್ನು ಎಳೆದೊಯ್ಯುತ್ತದೆ.

ಯಾವುದಕ್ಕಾಗಿ ಚಳವಳಿ ಮತ್ತು ಅದರ ಸ್ವರೂಪ ಏನಾಗಿರಬೇಕು ಎಂಬುದಕ್ಕೆ ದೃಗ್ಗಥದ ಸೂಚನೆ ಇಲ್ಲಿ ದೊರೆಯುತ್ತದೆ. ನಮ್ಮ ರಾಜ್ಯದ ವಿದ್ಯಮಾನಗಳನ್ನು ಸರಿಯಾಗಿ ವಿಶ್ಲೇಷಿಸಿಕೊಳ್ಳದೆ, ಚಳವಳಿಗಳ ಸ್ವರೂಪ ಕುರಿತು ವ್ಯಾಖ್ಯಾನಿಸುವುದು ಅಪ್ರಾಯೋಗಿಕ. ಬೆಂಗಳೂರಿನ ಹೊರಗಿನ ಸನ್ನಿವೇಶ ಇನ್ನೂ ಅಷ್ಟು ನಿರಾಶಾದಾಯಕವಾಗಿಲ್ಲ ದಿರಬಹುದು, ಆದರೆ ರಾಜಧಾನಿಯು ವಿವಿಧ ವೈಪರೀತ್ಯಗಳ ಆಗರವಾಗಿದೆ. ಒಂದೆರಡು ಉದಾಹರಣೆಗಳು ಸಾಕು: ಮನೆ ಕಟ್ಟುವ ಮತ್ತು ಬಡಗಿ ಕೆಲಸಗಳಿಗೆ ದೊರೆಯುವ ಕೆಲಸಗಾರರು ಬಹುಮಟ್ಟಿಗೆ ಕನ್ನಡೇತರರು. ಕಾಗದ, ಸಿಮೆಂಟ್, ಉಕ್ಕು, ಔಷಧಿಗಳು ಮುಂತಾದವುಗಳ ಸಗಟು ವ್ಯಾಪಾರಸ್ಥರು ಬಹುತೇಕ ಕನ್ನಡೇತರರು. ಕನ್ನಡ ಪುಸ್ತಕಗಳ ಪ್ರಕಾಶನದಲ್ಲೂ ಕನ್ನಡೇತರರು ಪ್ರಾಶಸ್ತ್ಯ ಪಡೆದಿದ್ದಾರೆ. ಇವೆಲ್ಲವುಗಳ ಮಾರಾಟ ವ್ಯವಸ್ಥೆಯಲ್ಲಿನ ಆಳವಾದ ಅನೈತಿಕ ವ್ಯವಹಾರಗಳ ಮಾತು ಒತ್ತಟ್ಟಿಗಿರಲಿ, ಮೂಲಭೂತ ಪ್ರಶ್ನೆ ಇಲ್ಲೆಲ್ಲಾ ಕನ್ನಡದವರೇಕಿಲ್ಲ ಎಂಬುದು. ತುಂಗಭದ್ರಾ ಮತ್ತು ಕೃಷ್ಣಾ ನಾಲೆಗಳ ಆಸುಪಾಸಿನಲ್ಲಿರುವ ಗದ್ದೆಗಳನ್ನು ನೆರರಾಜ್ಯದ ಕೆಲವು ಶ್ರೀಮಂತರು ಅಪಾರವಾಗಿ ಖರೀದಿಸಿದ್ದಾರೆಂದು ಹೇಳಲಾಗಿದೆ. ಹಾಗೆ ಜಮೀನು ಮಾರಿದ ಕನ್ನಡಿಗರು ಎಲ್ಲಿ ಹೋದರು? ಏನು ಮಾಡುತ್ತಿದ್ದಾರೆ? ಬೆಂಗಳೂರಿನ ಸುತ್ತಮುತ್ತ ಇದ್ದಬದ್ದ ಭೂಮಿ ಯನ್ನೆಲ್ಲಾ ಖರೀದಿಸಿರುವವರು ಎಲ್ಲರೂ ಕನ್ನಡಿಗರೇನಲ್ಲ. ಭೂಹಗರಣಗಳಲ್ಲೂ ಕನ್ನಡೇತರರ ಪಾಲುದಾರಿಕೆ ಉಗ್ರವಾಗಿದೆ.

ಕನ್ನಡವನ್ನು ಕಲಿಯಲು ಪ್ರಾಸಬದ್ಧವಾದ ಚುಟುಕಗಳ ಮೂಲಕ ಕರೆ ಕೊಡುವುದು ಸಾಲದು. ದಿನಂಪ್ರತಿ ಹೆಚ್ಚಿನ ಪ್ರಮಾಣದಲ್ಲಿ ಕನ್ನಡಿಗರು ನಮ್ಮ ರಾಜ್ಯದಲ್ಲೇ ನಿರ್ವಸಿತರಾಗುತ್ತಿದ್ದಾರಲ್ಲ, ಅದನ್ನು ಕುರಿತು ಚಿಂತನೆ ನಡೆಸದಿದ್ದರೆ, ನಮ್ಮ ಭಾಷಾ ಚಳವಳಿಗಳಿಗೆ ಪುಷ್ಟಿ ದೊರಕುವುದು ಅಸಂಭವ. ಅಂದರೆ, ಚಳವಳಿಗಳನ್ನು ಬೇರ್ಪಡಿಸಿ ಪ್ರತ್ಯೇಕವಾಗಿ ಒಂದೊಂದಕ್ಕೂ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗದೇನೋ ಎಂಬ ಆತಂಕ ಇಲ್ಲಿದೆ. ಸಿದ್ಧಾಂತದ ಮಾತುಗಳು ನಮ್ಮಲ್ಲಿ ಬೇಕಾದಷ್ಟಿವೆ; ವಿಶೇಷತಃ

ಲೋಹಿಯಾವಾದಿಗಳ ಬಣದಿಂದ. ಸಿದ್ಧಾಂತದಲ್ಲಿ ಪಾಂಡಿತ್ಯ ಮುಖ್ಯವೋ, ಅನುಷ್ಠಾನ ಯೋಗ್ಯವಾದ ಹಾದಿಯ ನಿಚ್ಚಳ ನಿರೂಪಣೆ ಮುಖ್ಯವೋ, ಎಂಬುದರ ವಿಶೇಷ ಚರ್ಚೆ ಅನಗತ್ಯ. ಕ್ರಿಯೆ ಕನಿಷ್ಠವಾಗಬಾರದೆಂಬುದು ಮುಖ್ಯ. ನಮ್ಮ ಕ್ರೂರ ವ್ಯವಸ್ಥೆ ಯಾವ ಮಟ್ಟಕ್ಕಿಳಿದಿದೆಯೆಂದರೆ, ಸರ್ಕಾರವೇ ನಿಗದಿಗೊಳಿಸಿದಷ್ಟು ಕೂಲಿ ಪಡೆಯಲು ದುಡಿಮೆಗಾರರು, ಸರ್ಕಾರದ ವಿರುದ್ಧ ಚಳವಳಿ ಹೂಡಬೇಕಾದಂತಹ ವಿಕಟ ಪರಿಸ್ಥಿತಿ ಉಂಟಾಗಿದೆ! ವರ್ಷಕ್ಕೆ ಕನಿಷ್ಠ ನೂರು ದಿನಗಳ ದುಡಿಮೆಯ ಆಶ್ವಾಸನೆ ಇರುವ ಯೋಜನೆಯಡಿ ದುಡಿಯುವವರಿಗೆ ತಿಂಗಳುಗಟ್ಟಲೆ ಕೂಲಿ ನೀಡುವುದಿಲ್ಲ; ನೀಡಿದಾಗ ಯಾವನೋ ಭ್ರಷ್ಟ ಅಧಿಕಾರಿ ಒಂದಷ್ಟು ಹಣವನ್ನು ಲಂಚವಾಗಿ ಕಸಿದುಕೊಳ್ಳುತ್ತಾನೆ. ಸರ್ಕಾರ, ಕಾನೂನು, ನ್ಯಾಯಾಲಯ, ಎಲ್ಲವೂ ಇರುವಾಗ ಅವುಗಳ ಮೂಗಿನಡಿಯಲ್ಲೇ ನಡೆಯುವ ಚೌರ್ಯ ಇದು. ಬೆಂಗಳೂರು ಮಹಾನಗರಪಾಲಿಕೆಯಂತಹ ಬೃಹತ್ ಸಂಸ್ಥೆಯು ನಗರದ ಸ್ವಚ್ಛತೆ ಕಾಪಾಡಲೆಂದು ನಾಗರಿಕರಿಂದ ತೆರಿಗೆ ವಸೂಲು ಮಾಡುತ್ತದೆ. ಆದರೆ ಕೆಲಸವನ್ನು ಗುತ್ತಿಗೆಗೆ ಕೊಟ್ಟು ಕೈಕಟ್ಟಿ ಕೂರುತ್ತದೆ. ಗುತ್ತಿಗೆದಾರ ಮಹಾನಗರಪಾಲಿಕೆಯಿಂದ ಹಣ ಪಡೆಯುತ್ತಾನೆ, ಆದರೆ ಕೂಲಿಕಾರನಿಗೆ ಅವನು ನಿಗದಿತ ಕೂಲಿ ಕೊಡುವುದಿಲ್ಲ. ತಲಾ ಏಳು ಸಾವಿರ ರೂಪಾಯಿಯಂತೆ ಕೂಲಿಯ ಬಾಬ್ತು ಲೆಕ್ಕ ಕೊಡುತ್ತಾನೆ, ಆದರೆ ಝಾಡಮಾಲಿಗಳಿಗೆ ೨೨೦೦ ರೂಪಾಯಿ ಕೊಡುತ್ತಾನೆ. ಈ ಅಸಂಘಟಿತ ದುಡಿಮೆಗಾರರು ಹದಿನೈದು ವರ್ಷಗಳಿಂದ ಹೋರಾಟ ನಡೆಸುತ್ತಾ ಬಂದಿದ್ದಾರೆ. ಮೂರು–ನಾಲ್ಕು ವರ್ಷಗಳಿಗೊಮ್ಮೆ ಆಜ್ಞೆಗಳು ಹೊರಬಂದಿವೆ, ಆದರೆ ಕೂಲಿ ಮಾತ್ರ ದೊರೆಯುತ್ತಿಲ್ಲ! ಅದನ್ನು ಪಡೆಯಲು ಅದಿನ್ನೆಂತಹ ಉಗ್ರ ಹೋರಾಟ ನಡೆಸಬೇಕೋ ತಿಳಿಯದು. ಸ್ವಚ್ಛತೆಯ ಬಗ್ಗೆ ನೂರು ಮಾತನಾಡುವ ನಾಗರಿಕರು ದುಡಿಮೆಗಾರರಿಗೆ ಕನಿಷ್ಠ ಕೂಲಿ ಕೊಡದಿದ್ದಾಗ, ತಿಳಿದೂ ತಿಳಿಯದಂತೆ ಸ್ವಸ್ಥವಾಗಿ ಕೂರುತ್ತಾರೆ. ನಮ್ಮ ಚಳವಳಿಗಳಿಗೆ ಹಿಡಿದ ಕನ್ನಡಿಗೆ ಇದೊಂದು ನಿದರ್ಶನ ಅಷ್ಟೆ. ಹಾಗಾದರೆ 'ಚಳವಳಿಗಳ ಕಾಲ ಆಗಿಹೋಯಿತು ಎಂದು ಜಾಗತೀಕರಣದ ಸ್ತುತಿ ಮಾಡುತ್ತಾ ಕೂಡಬೇಕೇನು?' ಎಂಬುದೇ ಪ್ರಶ್ನೆ.

ಚಳವಳಿ ನಡೆಸಬೇಕೇ, ಹಾಗಿದ್ದರೆ ಹೇಗೆ, ಎಂಬುದನ್ನು ನ್ಯಾಯಾಲಯಗಳು ತೀರ್ಮಾನಿಸುವ ದುಃಸ್ಥಿತಿ ನಮ್ಮ ದೇಶದ್ದು. ನ್ಯಾಯಾಲಯ ಮತ್ತು ಪೊಲೀಸರು ವಿಧಿಸುವ ಷರತ್ತುಗಳು ಚಳವಳಿ ಮಾಡುವವರಿಗೆ ಕೈಕೋಳ ತೊಡಿಸಿದಂತಾಗಿದೆ. ಮೆರವಣಿಗೆ ಕೂಡದು, ಮುಷ್ಕರ ಕೂಡದು, ಕೆಲಸದ ನಿಧಾನಗತಿ ಕೂಡದು; ಅಂದರೆ, ಚಳವಳಿಯು ಯಾವುದೋ ಶಾಸ್ತ್ರದ ಆಚರಣೆಯಾಗಿಬಿಡಬೇಕು! ಭ್ರಷ್ಟತನ, ಅಧಿಕಾರಿಗಳ ಛಾನಸ ಪ್ರವೃತ್ತಿ, ಶ್ರೀಮಂತಿಕೆಯಲ್ಲಿ ವಿಶ್ವದ ಅನೇಕ ರಾಷ್ಟ್ರಗಳನ್ನು ಮೀರಿಸುವ ದೇಶದಲ್ಲಿ, ದಿನಕ್ಕೆ ೨೩ ರೂಪಾಯಿ ಪಡೆದು ದಿನ ನೂಕುವ ಲಕ್ಷಗಟ್ಟಲೆ ಜನ, ಇವೆಲ್ಲಾ ಚಳವಳಿಗಳ ಅಭಾವದ ಪರಿಣಾಮ. ನಮ್ಮ ಯೋಜನೆಗಳ ಸ್ವರೂಪವನ್ನು ತಿಳಿಯಲು ೧೯೨೩ರಲ್ಲಿ ಲೆನಿನ್ ಬರೆದಿದ್ದ ನಾಲ್ಕು ಸಾಲುಗಳನ್ನು ಮೆಲುಕು ಹಾಕಬೇಕು. "ನಮ್ಮ ಶಿಕ್ಷಣ ಇಲಾಖೆ ಹೇಗಿದೆ ನೋಡಿ. ಒಂದು ಪ್ರಕಟಣಾ ವಿಭಾಗವಿದೆಯೆನ್ನಿ. ಅಲ್ಲಿ ಕೆಲಸಕ್ಕಿರುವವರು ಅದೆಷ್ಟು

ಜನ! ನಮ್ಮ ಆದ್ಯತೆ ಏನಾಗಿರಬೇಕು? ಕೇವಲ ಪ್ರಕಟಣೆಯೋ ಅಥವಾ ಪ್ರಕಟವಾದುದನ್ನು ಓದುವಂಥವರ ಹೆಚ್ಚಳಕ್ಕಾಗಿ ಶ್ರಮಿಸುವುದೋ? ಅಕ್ಷರಸ್ಥರು, ವಿದ್ಯಾವಂತರು, ಕಡಿಮೆ ಇದ್ದರೆ ನಮ್ಮ ಪ್ರಕಟಣೆಗಳಿಗೆ ಏನು ಸಮರ್ಥನೆ ಇದ್ದೀತು!" ಇದನ್ನು ಸಾರಿಗೆ, ವೈದ್ಯಕೀಯ ಗೃಹನಿರ್ಮಾಣ, ಉದ್ಯಮ, ಎಲ್ಲದಕ್ಕೂ ಅನ್ವಯಿಸಬೇಕು. "ಕೋಟಿ ಖಂಡುಗ ಧಾನ್ಯ ಬೆಳೆಯಲು ಲಾಭ ಸಾಲದೆ ಸುಡುವರು" ಎಂದು ವಿ.ಸೀ. ತಮ್ಮೊಂದು ಕವನದಲ್ಲಿ ಬರೆದಿದ್ದರು. ನಮ್ಮದು ರೈತರ ಜೀವಸುಡುವ ವ್ಯವಸ್ಥೆ. ಯಾವುದೋ ಬಹುರಾಷ್ಟ್ರೀಯ ಕಂಪನಿ ಬಂದು ನಮ್ಮನ್ನು ಉದ್ಧಾರಮಾಡಲು, ನಮ್ಮ ರೈತರ ನಾಲ್ಕು ಸಾವಿರ ಎಕರೆ ಭೂಮಿಯಿಂದ ಅವರನ್ನು ಹೊರಹಾಕುತ್ತದೆ. ಸರ್ಕಾರ ಅದಕ್ಕೆ ದಳ್ಳಾಳಿಯಾಗಿ ಕೆಲಸ ಮಾಡುತ್ತದೆ. ಆ ರೈತರ ಭವಿಷ್ಯದ ಚಿಂತೆ ಮಾಡುವ ಚಳವಳಿಗೆ ನಾವು ಪ್ರಥಮ ಸ್ಥಾನಕೊಟ್ಟರೆ, ಅದರಿಂದ ಬೇರೆ ಚಳವಳಿಗಳು ಮೂಡುತ್ತವೆ, ವಿಕಾಸವಾಗುತ್ತವೆ, ಪ್ರಬಲ ವಾಗುತ್ತವೆ, ಫಲಪ್ರದವಾಗುತ್ತವೆ. ಅದು ಹೇಗಾದರೂ ಆಗಲಿ, ಆ ರೈತರ ಹಳ್ಳಿಗಳಲ್ಲಿ ಕನ್ನಡಶಾಲೆ ನಡೆಸಬೇಕೆಂದು ಆಗ್ರಹಿಸಿದರೆ ಎಂತಹ ವಿಪರ್ಯಾಸ!

ನಮ್ಮ ಇಂದಿನ ಸನ್ನಿವೇಶದಲ್ಲಿ ಯಾವ ವಿಷಯಗಳನ್ನಾಧರಿಸಿ ಚಳವಳಿಗಳು ನಡೆಯುವ ಅಗತ್ಯ ಮತ್ತು ಸಾಧ್ಯತೆ ಇದೆಯೆಂಬುದನ್ನು ಪಟ್ಟಿಮಾಡುವ ಅವಶ್ಯಕತೆ ಇಲ್ಲ. ವಿದೇಶಿ ಬ್ಯಾಂಕುಗಳಲ್ಲಿ ನಮ್ಮ ದೇಶದ ಸಂಪತ್ತು ಅಕ್ರಮವಾಗಿ ತುಂಬಿಕೊಂಡಿರುವುದನ್ನು ಹಿಂದಕ್ಕೆ ಪಡೆಯುವುದರಿಂದ ಆರಂಭಿಸಿ, ನಮ್ಮ ಹಳ್ಳಿಗಳಲ್ಲಿ ಮಹಿಳೆಯರಿಗೆ ಶೌಚಾಲಯಗಳಿರಬೇಕು ಮತ್ತು ಭಂಗಿಗಳು ಮಲ ಹೊರುವ ಪದ್ಧತಿ ಸರ್ವಥಾ ಇರಕೂಡದು ಎಂಬುದರವರೆಗೆ ಕೈತುಂಬಿ ಸುರಿಯುವಷ್ಟು ವಿಚಾರಗಳಿವೆ, ಅವು ಎಲ್ಲರಿಗೂ ಗೊತ್ತುಂಟು. ಕನ್ನಡಕ್ಕಷ್ಟೇ ಸೀಮಿತಗೊಳ್ಳುವಂತಹ ಪ್ರತ್ಯೇಕ ಚಳವಳಿಗಳು ಯಾವುವೂ ಇಲ್ಲ; ಇದ್ದರೆ, ಅವುಗಳ ಮೂಲಕ್ಕೆ ಹೋಗಬೇಕು. ಆಗ ಅದು ಅಷ್ಟೊಂದು ಪ್ರತ್ಯೇಕವೇನಲ್ಲ ಎಂಬುದು ಸ್ಪಷ್ಟವಾಗುತ್ತದೆ. ಉದಾಹರಣೆಗೆ, ಕನ್ನಡ ಶಾಲೆಗಳ ಪ್ರಶ್ನೆಯನ್ನು ನೋಡಬಹುದು. ಅದು ಕೇವಲ ಭಾಷೆ ಮತ್ತು ವಿದ್ಯೆಯ ಪ್ರಶ್ನೆಯಾಗಿ ಉಳಿದಿಲ್ಲ. ವಿದೇಶಿ ಬಂಡವಾಳಕ್ಕಾಗಿ ಬಾಯಿಬಿಟ್ಟುಕೊಂಡು ಕೂತಿರುವ ಪ್ರಭುತ್ವವು ನಮ್ಮ ಸಾರ್ವಭೌಮತ್ವವನ್ನು ಮಣ್ಣು ಮಾಡಿದೆ. ವಿದೇಶಿ ಬಂಡವಾಳವು ನಮ್ಮ ಜನರ ಶ್ರಮ ಮತ್ತು ಭೂಮಿಯನ್ನು ಬೇಕಾಬಿಟ್ಟಿ ಕಸಿದುಕೊಳ್ಳುವಾಗ, ತನ್ನದೇ ಆದ ಬೇರೊಂದು ಸಂಸ್ಕೃತಿಯು ನಮ್ಮ ನಡುವೆ ಬೇರು ಬಿಡುವಂತೆ ಮಾಡುತ್ತದೆ. ಅದನ್ನು ನಿಗ್ರಹಿಸಲು ವ್ಯಾಪಕ ಚಳವಳಿಗಳಿಗೂ ಸಹ ಕಷ್ಟಸಾಧ್ಯ. ಆದರೆ ಅದಿಲ್ಲದೆ ಭಾವನಾತ್ಮಕ ನೆಲೆಯಿಂದಲೇ ಕನ್ನಡವನ್ನು ಸ್ಥಿರಗೊಳಿಸುತ್ತೇವೆಂಬುದು ಒಂದು ಭ್ರಮೆ. ಇತ್ತೀಚೆಗೆ ಶಿಕ್ಷಣದ ಹಕ್ಕಿನ ಬಗ್ಗೆ ಕಾಯಿದೆ ಹೊರಬಂದಾಗ, ನಮ್ಮ ರಾಜ್ಯದ ಖಾಸಗಿ ಆಂಗ್ಲ ಮಾಧ್ಯಮ ಶಾಲೆಗಳ ಸಂಘವು ಹುಯಿಲೆಬ್ಬಿಸಿರುವುದನ್ನು ಗಮನಿಸಿದರೆ ಇದು ತಿಳಿಯುತ್ತದೆ.

ಇದಕ್ಕೆ ಪರಿಹಾರವು ಸಮಗ್ರ ಚಳವಳಿಯಿಂದಲೇ ದೊರಕಬೇಕು. ಅದರ ಒಂದು ಮುಖವನ್ನು ಪರಿಶೀಲಿಸುವುದಾದರೆ, ಹಳ್ಳಿಯ ರೈತ ಮತ್ತು ಪಟ್ಟಣದ ಕಾರ್ಮಿಕ ತಮ್ಮ ಸೇವೆಗಳನ್ನು ಹೇಗೆ ಅದಲು ಬದಲು ಮಾಡಿಕೊಳ್ಳಬೇಕೆಂಬುದನ್ನು ಒತ್ತಿ ಹೇಳಬೇಕು.

ದೊಡ್ಡ ಉದ್ಯಮಗಳ ಉತ್ಪನ್ನಗಳು ಯಾವುವು ಮತ್ತು ಎಷ್ಟು ಪ್ರಮಾಣದಲ್ಲಿ ಹಳ್ಳಿಗಳಿಗೆ ಹೋಗುತ್ತವೆ? ಅಲ್ಲಿ ಇದಕ್ಕೆ ಗ್ರಾಹಕರಾರು? ಹಳ್ಳಿಯಿಂದ ಬರುವ ಆಹಾರಧಾನ್ಯ ಪಟ್ಟಣದಲ್ಲಿರುವ ಎಲ್ಲರಿಗೂ ಬೇಕು, ಆದರೆ ಪಟ್ಟಣದ ಉತ್ಪನ್ನಗಳಿಗೆ ಹಳ್ಳಿಯ ಜನ ಗ್ರಾಹಕರಾಗುವುದು ಅಲ್ಪಮಟ್ಟದಲ್ಲಿ. ಕೃಷಿಯ ಉತ್ತಮಿಕೆಗೆ ಬೇಕಾದ ಸಲಕರಣೆಗಳನ್ನು ಸಹ ಎಲ್ಲ ರೈತರೂ ಕೊಳ್ಳುವ ಸ್ಥಿತಿಯಲ್ಲಿಲ್ಲ. ಹಳ್ಳಿ ಮತ್ತು ಪಟ್ಟಣ ಸಮಾನವಾಗುವ ಪ್ರಕ್ರಿಯೆ ಆರಂಭವಾಗಬೇಕಾದ್ದೇ ಇಲ್ಲಿಂದ. ಅಂದರೆ, ನಗರಗಳ ಉತ್ಪನ್ನಗಳಿಗೆ ಹಳ್ಳಿಯ ಜನ ಗ್ರಾಹಕರಾಗುವುದರಿಂದ. ಆಗ ರೈತರ ಆತ್ಮಹತ್ಯೆಗಳ ಸರಣಿ ಸ್ತಬ್ಧಗೊಳ್ಳಲು ಸಾಧ್ಯ. ಇಂತಹ ಸ್ವಾಗತಾರ್ಹ ಬದಲಾವಣೆಗೆ ಅತ್ಯುತ್ಸಾಹದ ಹಲವು ವಿಧಗಳ ಚಳವಳಿಗಳು ಆಗತ್ಯ. ಅವೆಲ್ಲವೂ ಕನ್ನಡದ ಚಳವಳಿಗೆ ಪೂರಕವಾಗಿಯೇ ಇರುತ್ತವೆ. ಬೆನ್ನೆಲುಬುಗಳಂತಿರುತ್ತವೆ. ಅದು ಸಿದ್ಧಿಸುವ ತನಕ ಕನ್ನಡ ಮತ್ತು ಕನ್ನಡತನಕ್ಕಾಗಿ ಬಿಡಿ ಬಿಡಿ ಚಳವಳಿಗಳು ಬೇಕಿಲ್ಲ. ಅವನ್ನು ಕೈಗೆತ್ತಿಕೊಳ್ಳುವುದು ಬೇಡ, ಎಂದು ಇದರರ್ಥವಲ್ಲ. ಸೀಮಿತ ಫಲಗಳನ್ನು ಪಡೆಯುತ್ತಾ ಮುಂದುವರಿದರೆ, ಉನ್ನತಮಟ್ಟದ ಫಲವೂ ನಮ್ಮ ಬುಟ್ಟಿಗೆ ಬೀಳಬಹುದೇನೋ! ಇಲ್ಲವೆನ್ನುವುದು ಹೇಗೆ?




ಕನ್ನಡ ಚಳವಳಿ–ಸಂಸ್ಕೃತ ವಿದ್ಯಾರ್ಥಿಯ ದೃಷ್ಟಿಯಲ್ಲಿ

■ ಡಾ. ಜಿ. ಶ್ರೀನಿವಾಸಮೂರ್ತಿ

ರಾ.ನಂ. ಅರವತ್ತರ ಹತ್ತಿರ ನಡೆದಿದ್ದಾರೆ ಎಂದು ಕೇಳಿ ಸ್ವಂತಕ್ಕೆ ಗಾಬರಿಯಾಯಿತು. ನಮಗೆ ವಯಸ್ಸಾಗುವುದೇ ಇಲ್ಲ ಎಂಬ ಹಳೆಯ ಹುಮ್ಮಸ್ಸು ಗಾಬರಿಗೆ ಕಾರಣ. ಅರವತ್ತಕ್ಕೆ ಅರಳುಮರಳು ಎನ್ನುತ್ತಾರೆ. ಆದರೆ ಆ ಪ್ರಯೋಗಕ್ಕೆ ಅರಳಿ ಮತ್ತೆ ಮರಳುವುದು ಎಂಬ ಅರ್ಥ ಕೂಡ ಮಾಡಬಹುದು. ಅದಕ್ಕೇ ರಾನಂ ಜತೆಗಿನ ಎರಡು ದಶಕದ ಗೆಳೆತನವನ್ನ ಮೆಲುಕು ಹಾಕಲು ಹೊರಟೆ.

ಶಂ.ಬಾ. ವಿಚಾರವೇದಿಕೆಗೆ ನನ್ನನ್ನು ಎಳೆದು ಕಟ್ಟಿದ ರಾ.ನಂ. ನಾನು ಕಂಡ ಕನ್ನಡ ಚಳವಳಿಗಾರರೆಲ್ಲರಿಗಿಂತ ಭಿನ್ನ, ವಿಶಿಷ್ಟ. ಶಂಬಾ ಅವರಿಗೆ ಬೆಂಗಳೂರಿನಲ್ಲಿ ಸನ್ಮಾನ ಮಾಡಿ ಅಭಿನಂದನ ಗ್ರಂಥ ಅರ್ಪಿಸಿದ ಕೆಲಸದಲ್ಲಿ ರಾ.ನಂ. ಮತ್ತು ಎಸ್.ಶಿವಲಿಂಗಯ್ಯನವರದ್ದೇ ದೊಡ್ಡ ಪಾಲು. ಆಗ 'ಅಧ್ಯಯನ'ವೆಂಬ ಅಭಿನಂದನ ಗ್ರಂಥವಲ್ಲಿ ಆದ್ಯರಂಗಾಚಾರ್ಯರು ಭಾಷೆಯ ಭಾವನಾತ್ಮಕ ಸಂಬಂಧಗಳ ಬಗ್ಗೆ ಸೂಕ್ಷ್ಮಗ್ರಾಹಿಯಾದ ಲೇಖನ ಒಂದನ್ನು ಬರೆದಿದ್ದರು. ಅದು ಶಂಬಾ ಅವರ ಭಾಷೆಯನ್ನು ಕುರಿತ ಚಿಂತೆಗೆ ಕೊಟ್ಟ ಚಿಂತನೆಯ ರೂಪ. ಅದರ ಸಾರವೆಂದರೆ : ಭಾಷೆಯು ಭಾವ ಬುದ್ಧಿಗಳೆರಡರ ಅಭಿವ್ಯಕ್ತಿಗೆ. ಸಂವಹನಕ್ಕೆ ಸಮಾನವಾದ ಒಂದು ಸಾಧನ. ಬುದ್ಧಿಯು ಪ್ರಜ್ಞೆಯಾಗಿ, ಭಾವಕ್ಕೇ [ಶಂಬಾ ಪರಿಭಾಷೆಯಲ್ಲಿ ಪ್ರಾಣ ಪಾತಳಿಗೆ] ಕಟ್ಟು ಬೀಳದ ಸಾಧನವಾಗಿ ಮಾನವನನ್ನು ಮುನ್ನಡೆಸುವುದು ಅಪೇಕ್ಷಣೀಯ, ಆದರೆ ಆದ್ಯರು ಹೇಳಿದಂತೆ ಕಷ್ಟಸಾಧ್ಯ. ಇಲ್ಲಿ ಭಾಷೆಯು ಜನಗಳ ಭಾವನಾತ್ಮಕ ಸಂಬಂಧವನ್ನಷ್ಟೇ ಪಡೆದಾಗ ಕುರುಡು ಹಳಹಳಿಕೆ ಹೆಚ್ಚುತ್ತದೆ. ಬುದ್ಧಿಯನ್ನು



ಜಾಗೃತಗೊಳಿಸದ ಚಿಂತೆಯು ರಾಗ ದ್ವೇಷಗಳಿಂದ ಹುಚ್ಚು ಹುಮ್ಮಸ್ಸು, ಭಯದ ದ್ವೇಷಗಳಿಗೆ ಕಾರಣವಾಗುತ್ತದೆ.

ಕನ್ನಡ ಶಕ್ತಿ ಕೇಂದ್ರಕ್ಕಿಂತ ಶಂಬಾ ವಿಚಾರ ವೇದಿಕೆಯಲ್ಲೇ ಹೆಚ್ಚು ಹತ್ತಿರವಾಗಿದ್ದ ರಾ.ನಂ. ಜತೆಗೆ ಕನ್ನಡ ಚಳವಳಿಯ ಬಗ್ಗೆ ಅನೇಕ ಸಲ ಚರ್ಚಿಸಿದಾಗ ಎದ್ದೇಳುತ್ತಿದ್ದ ಪ್ರಶ್ನೆ 'ಚಳವಳಿಗಳು ಭಾವ ಪ್ರಚೋದಕವಾಗುವುದಕ್ಕಿಂತ ವೈಚಾರಿಕ ನೆಲೆಗಟ್ಟಿನಲ್ಲಿ ಹರಳು ಗಟ್ಟುವುದು ಹೇಗೆ?'ಎಂದೇ. ಅದಕ್ಕೆ ಅವರ ಪಲ್ಲವಿ 'ಕನ್ನಡ ಚಳವಳಿ ಕನ್ನಡ, ಕನ್ನಡಿಗ ಕರ್ನಾಟಕಗಳನ್ನು ಸಮಾನವಾಗಿ ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತದೆ' ಎಂದು. ಶಂಬಾ ಅವರ ಸಂಸ್ಕೃತಿ ಚಿಂತನೆಗಳನ್ನು ನಮ್ಮದಾಗಿಸಿಕೊಳ್ಳುವಲ್ಲೂ ಈ ತಾಕಲಾಟ ಇದ್ದೇ ಇದೆ. ಕರ್ನಾಟಕ ಒಂದು (ಪ್ರ)ದೇಶವಾಚಕ. ಕನ್ನಡಿಗ ಸೂಚಿಸುವುದು ಒಂದು ಭಾಷಾ ಸಮುದಾಯವನ್ನ. ಕನ್ನಡ ಇಲ್ಲಿನ ದೇಶ ಭಾಷೆ ಮತ್ತು ಸಮುದಾಯದ ಭಾಷೆ. ಕನ್ನಡ ಸಂಸ್ಕೃತಿ ಎನ್ನುವುದು ಕರ್ನಾಟಕದ ಒಟ್ಟು ಸಂಸ್ಕೃತಿಯೋ? ಕನ್ನಡ ಭಾಷಿಕರ ಸಂಸ್ಕೃತಿಯೋ? ಇದೇನು ಹಾರಿಕೆಯ ಪ್ರಶ್ನೆ ಅಥವಾ ಉತ್ತರಗಳ ಗೋಜಿಗಾಗಿ ಪ್ರಶ್ನಿಸಿಕೊಳ್ಳುತ್ತಿರುವುದಲ್ಲ. ಕೆಲವು ನಡೆಗಳನ್ನು ಜತೆಜತೆಯಾಗಿ ನೋಡಿದರೆ ಈ ಪ್ರಶ್ನೆಗಳ ಇಂಗಿತ ತಿಳಿದೀತು.

ರಾ.ನಂ. ಕಾರ್ಮಿಕರಾಗಿ, ಕಾರ್ಮಿಕ ಸಂಘಟನೆಯಲ್ಲಿಯೂ ಇದ್ದವರು. ಅಲ್ಲಿ ಆರ್ಥಿಕ ಸಂಗತಿಗಳೇ ಮುಖ್ಯ. ಆದರೆ ಅಲ್ಲಿಯೂ ಸಾಂಸ್ಕೃತಿಕ ಚಟುವಟಿಕೆಗಳುಂಟು. ಆದರೆ ಅದು ರಾಜಕೀಯ ದಾಳವಾಗಿ ಮಾತ್ರ. ಉದಾರೀಕರಣದ ಅನುಸರಣೆಯ ನಂತರ ಕಾರ್ಮಿಕ ಸಂಘಟನೆಗಳು ಹೇಗಾಗಿವೆ, ಏನಾಗಿವೆ ಎಂಬುದು ಎಲ್ಲರಿಗೂ ಗೊತ್ತು. ಹಾಗೇ ಅಲ್ಲಿನ ಸಾಂಸ್ಕೃತಿಕತೆ ಸಹ ಅಷ್ಟೇ ಬದಲಾಗಿದೆ. ಒಂದಂತೂ ನಿಜ, ಸಂಸ್ಕೃತಿಯೂ ಸೇರಿದಂತೆ ಎಲ್ಲ ವಿಷಯಗಳೂ ದುಡ್ಡಿನ ಸುತ್ತ ಗಿರಕಿ ಹೊಡೆಯುತ್ತಿವೆ. 'ತನ್ನ ಹಾಡು ಹಾಡುವ ಭಿಕ್ಷುಕನಿಗೆ ತಾನೇ ಒಂದಾಣೆ ಎತ್ತಿಕೊಡುವ' ಕೆ.ಎಸ್.ನರಸಿಂಹಸ್ವಾಮಿಯವರ ಸ್ಥಿತಿ ಈಗ ಎಲ್ಲಿಯೂ ಇಲ್ಲ. ಚಟುವಟಿಕೆಗಳೇ ಬದಲಾದ ಸಂದರ್ಭದಲ್ಲಿ ಚಳವಳಿಗಳು ಏನಾದವು? ಕರ್ನಾಟಕ (ಬೆಂಗಳೂರು) ದೂರದರ್ಶನದಲ್ಲಿ ಉರ್ದು ಕಾರ್ಯಕ್ರಮದ ಬಗ್ಗೆ ನಡೆದ ಮುಷ್ಕರವನ್ನು ಈಗಿನ ನೂರಾರು ಛಾನೆಲ್‌ಗಳ ಮಧ್ಯೆ ನೆನೆಸಿಕೊಂಡರೆ ಏನನ್ನಿಸುತ್ತೆ? ಸಂಪೂರ್ಣ ಕನ್ನಡಿಗರ ಒಡೆತನದ ಸಭ್ಯ ಕನ್ನಡ ಛಾನೆಲ್ ಟಿವಿ, ಅಥವಾ ಎಫ್‌ಎಂ ರೇಡಿಯೋ ಎಷ್ಟು? ನಮ್ಮೆಲ್ಲ ಆಂದೋಲನಗಳೂ ಸರ್ಕಾರದ ಜತೆಗಿನ ತಿಕ್ಕಾಟ ಎಂದೇ ಹೊರಟರೆ, ಸರ್ಕಾರದ ಹಸ್ತಕ್ಷೇಪ ಕಡಿಮೆಯಾದಂತೆ, ಎಂದರೆ ಉದಾರೀಕರಣದ ಜತೆಜತೆಗೆ ಆಂದೋಲನಗಳು ಚಳವಳಿಗಳು ಅರ್ಥಹೀನವಾಗುತ್ತವೆ. ಎಂದರೆ ನಮ್ಮೆಲ್ಲ ಚಳವಳಿಗಳು ಸರ್ಕಾರದ ಜತೆಗಿನ ತಾಕಲಾಟ, ಅನುಸಂಧಾನ, ಅನುಸರಣೆ ಮಾತ್ರ ಆದರೆ ಏನಾಗುವುದು ಎನ್ನುವುದನ್ನು ಕಾಣಬೇಕು.

ಇಷ್ಟೆಲ್ಲ ಪೀಠಿಕೆ ಕನ್ನಡ-ಸಂಸ್ಕೃತ ಸಂಬಂಧದ ಬಗ್ಗೆ ಯಾಕೆ? ಎಂದೆನ್ನಿಸಬಹುದು. ನಮ್ಮ ಸಾಂಸ್ಕೃತಿಕ ಇತಿಹಾಸದ ಜತೆ ಕನ್ನಡ ಚಳವಳಿಯ ಸ್ವರೂಪ ಎಂಥದ್ದು ಎನ್ನುವುದನ್ನು ಗಮನಿಸಲು ಈ ಪೀಠಿಕೆ. ವಚನಕಾಲದ ಚಳವಳಿ ಧಾರ್ಮಿಕ, ಸಾಮಾಜಿಕ ಚಳವಳಿಯು

ಭಾಗ. ಆಂಡಯ್ಯನಂತಹವರದ್ದು ಮೂಲತಃ ಸಾಹಿತ್ಯಕ ಎಂದು ಗಮನಿಸುತ್ತಾ ಹೋದರೆ ಭಾಷಿಕ ಮೂಲವಾದ ಚಳವಳಿ ಇಲ್ಲ. ಆದರೆ ೨೦ನೇ ಶತಮಾನದ ಭಾಷಿಕ ಚಳವಳಿ ಪ್ರಧಾನವಾಗಿ ರಾಜಕೀಯ ಸ್ವರೂಪದ್ದು. ಕನ್ನಡ ಮಾತನಾಡುವ ಪ್ರದೇಶಗಳ ಏಕೀಕರಣ ಅಂತಹ ಮೊದಲ ಚಳವಳಿ. ಅದು ಸ್ವತಂತ್ರ ಭಾರತದ ಪ್ರಜಾಪ್ರಭುತ್ವದ ಚಳವಳಿಯ ಭಾಗ. ಬಹುಮತವೆನ್ನುವುದು ನಾವು ಕಟ್ಟಿಕೊಂಡ ಪ್ರಜಾಪ್ರಭುತ್ವದ ಪ್ರಧಾನ ಮಾನದಂಡ. ಆದರೆ ಅಲ್ಪಸಂಖ್ಯಾತರ ರಕ್ಷಣೆಯೂ ಇದರೊಟ್ಟಿಗೆ ಬಂದ ಇನ್ನೊಂದು ಮುಖ್ಯ ರಾಜಕೀಯ ಸಿದ್ಧಾಂತ. ಆಧುನಿಕ ಸವಲತ್ತುಗಳನ್ನು ಹಂಚಿಕೊಳ್ಳುವುದೇ ಎಂದರೆ ಆರ್ಥಿಕ ಹಿತಾಸಕ್ತಿಯೇ ಪ್ರಮುಖ ಧ್ಯೇಯ. ಆದರೆ ಭಾಷಾವಾರು ಪ್ರಾಂತ್ಯ ರಚನೆಗೆ ಹಿಂದಿನಿಂದ ಬಂದ ಆರ್ಥಿಕ ಹಗ್ಗಜಗ್ಗಾಟಗಳು ನಂತರದಲ್ಲಿ ಭಾಷಿಕ ಸಮುದಾಯದ ನಡುವಿನ ಜಗಳಾಟಗಳಾದವು. ಅವು ನದೀ ನೀರು ಹಂಚಿಕೆ, ಉದ್ಯೋಗಾವಕಾಶ, ಬಂಡವಾಳ ಹೂಡಿಕೆ, ವಿದ್ಯಾಭ್ಯಾಸ, ಕೊನೆಯದಾಗಿ ಸಮೂಹ ಮಾಧ್ಯಮ ಎಲ್ಲ ಕಡೆ ಆರ್ಥಿಕ ಯೋಜನೆ, ಕಾನೂನು ಪಾಂಡಿತ್ಯ, ಸಂಪನ್ಮೂಲಗಳ ಕೊಡುಕೊಳೆಯಲ್ಲಿ ಚೌಕಾಸಿ ನಡೆಸುವ ಜಾಣ್ಮೆ ತೋರುವುದಕ್ಕಿಂತ ಭಾವುಕ ಕೂಗುಗಳೂ, ಕ್ಷಣಿಕ ಪ್ರತಿಕ್ರಿಯೆಗಳೂ ಹೆಚ್ಚಿ ಚಳವಳಿಗಳ ಆಶೋತ್ತರಗಳನ್ನೇ ಬುಡಮೇಲು ಮಾಡಿವೆ.

ಕನ್ನಡ–ಸಂಸ್ಕೃತದ ಸಂಬಂಧದಲ್ಲೂ ಹೀಗೇ ಆಯಿತು. ಅದಕ್ಕೆ ಒಂದು ದೊಡ್ಡ ಉದಾಹರಣೆ ಗೋಕಾಕ್ ಚಳವಳಿ. ಹಿಂದೆ ಸಂಸ್ಕೃತದ ಬಗ್ಗೆ – ಅದು ಬ್ರಾಹ್ಮಣರ ಭಾಷೆ ವೈದಿಕರ ಭಾಷೆ, ಆಳುವ ಭಾಷೆ, ಇತ್ಯಾದಿ ಆಗ್ರಹಗಳನ್ನು ಹೊತ್ತು, ತಮಿಳರಂತೆ ಕನ್ನಡಕ್ಕೆ ಅದು ಆತಂಕದ ಭಾಷೆ ಎಂದು ಗುರುತಿಸಿಕೊಳ್ಳಲಾಯಿತು. ೬೦ರ ದಶಕದ ಕೊನೆಗೆ ತಮಿಳರ ಮುಂದಾಳಿಕೆಯಲ್ಲಿ ಹಿಂದಿಯನ್ನು ವಿರೋಧಿಸಿದ್ದಕ್ಕೂ, ಈಚೆಗೆ ಅಭಿಜಾತ (ಶಾಸ್ತ್ರೀಯ) ಭಾಷೆ ಸ್ಥಾನಕ್ಕೆ ತಮಿಳರ ಜತೆ ಸೆಣಸುವಾಗ್ಲೂ, ಕೇಂದ್ರ ಸರಕಾರಕ್ಕೆ ನಮ್ಮ ಮನವಿ, ಅಹವಾಲು, ಗೋಳು–ಕರೆ ಇತ್ಯಾದಿ ಹಾಗೇ ಅದೇ ಧೋರಣೆಯಲ್ಲಿಯೇ ನಡೆದಿದ್ದೇವೆ. ಅದೇ ಸಂಸ್ಕೃತಕ್ಕೆ ವಿರುದ್ಧ ನಾವು ಕೇಂದ್ರ ಸರಕಾರಕ್ಕೆ ಯಾವತ್ತೂ ಏನೂ ಹೇಳಿಲ್ಲ. ಅಂದರೆ ರಾಷ್ಟ್ರೀಯ ಮಟ್ಟದಲ್ಲಿ ಸಂಸ್ಕೃತದ ಸ್ಥಾನದ ಬಗ್ಗೆ ಕನ್ನಡಿಗರ ನಿಲುವು ಏನು? ಅದೇ ಕನ್ನಡದ ವಿರುದ್ಧ ಸಂಸ್ಕೃತವಿದೆ ಎಂಬ ಆಲೋಚನೆ, ಕನ್ನಡಕ್ಕೆ ಸಮನಾದ ಸ್ಥಾನವನ್ನು ಸಂಸ್ಕೃತಕ್ಕೆ ಕೊಡಬಾರದು ಎಂಬ ಒತ್ತಾಯ ಮಾಡಲು ಪ್ರೇರಣೆ. ಆದರೆ ಯಾರು ಎಲ್ಲಿ ಆ ಸ್ಥಾನ ಕೊಡಬಾರದು? ಕರ್ನಾಟಕ ಸರಕಾರ ಆ ಸ್ಥಾನ ಕೊಡಬಾರದು. ಎಲ್ಲಿ ಕೊಟ್ಟಿದೆ? ಶಿಕ್ಷಣದಲ್ಲಿ. ಸರಿ ಅದನ್ನು ತೆಗೆಯಬೇಕು. ಈ ಆಲೋಚನೆ ಹಿಂದೆ ಇದ್ದದ್ದು ಎಸ್.ಎಸ್.ಎಲ್.ಸಿ., ಪಿ.ಯು.ಸಿ. ಪರೀಕ್ಷೆಗಳಲ್ಲಿ ಸಂಸ್ಕೃತ ವಿದ್ಯಾರ್ಥಿಗಳು ಹೆಚ್ಚು ಅಂಕ ಪಡೆದು ರಾಂಕ್ ಪಟ್ಟಿಯಲ್ಲಿ ಅವರೇ ಹೆಚ್ಚಿದ್ದರು ಎಂದು. ಸಂಸ್ಕೃತವನ್ನು ಕನ್ನಡದಲ್ಲಿ ಬರೆದು ಹೆಚ್ಚು ಅಂಕ ಪಡೆಯುತ್ತಾರೆ, ಮಾತೃಭಾಷೆ ಅಲ್ಲದ ಸಂಸ್ಕೃತವನ್ನು ಪ್ರಥಮ ಭಾಷೆಯಾಗಿ ಪರಿಗಣಿಸಿದ್ದೇ ತಪ್ಪು, ಇವೇ ಮುಂತಾದ ಕಾರಣಗಳನ್ನು ಕೊಟ್ಟು ಸಂಸ್ಕೃತಕ್ಕೆ ಇದ್ದ ಪ್ರಥಮಭಾಷೆ ಸ್ಥಾನವನ್ನು ತೆಗೆದು ಹಾಕಬೇಕೆಂದು ಸರಕಾರವನ್ನು ಕೇಳಿಕೊಂಡರು. ಅದಕ್ಕೆ ಗುಂಡೂರಾಯರ ಸರಕಾರ ಗೋಕಾಕರ ನೇತೃತ್ವದ ಆಯೋಗ ರಚನೆ ಮಾಡಿದ್ದು

ಅದು ವರದಿ ಕೊಟ್ಟಿದ್ದು, ಎಲ್ಲ ಸರಿಯೆ. ಆದರೆ ವರದಿ ಒಪ್ಪಬೇಕೆಂಬ ಕೂಗು ಶಿಕ್ಷಣಕ್ಕೆ ಸಂಬಂಧಿಸಿದ್ದು ಎನ್ನುವುದನ್ನೇ ಮರೆಸುವಂತೆ ಅಬ್ಬರದ ಕೂಗಾಯಿತು. ಇದನ್ನೇ ಬಡಿಗೆ ಮಾಡಿಕೊಂಡು ಕನ್ನಡ ರಾಜಕೀಯ ಮಾಡುವ ಉತ್ಸಾಹ ಉಬ್ಬಿತು. ಉತ್ಸಾಹಕ್ಕೆ ನೀರೆರೆಯುವುದಕ್ಕೆ ಸುಲಭೋಪಾಯ ತಾರೆಯರನ್ನು ನಿಜದ ಪರದೆಯ ಮುಂದೆ ನಿಲ್ಲಿಸುವುದು. ರಾಜಕುಮಾರರೇ ಕಣಕ್ಕೆ ಇಳಿದ ಮೇಲೆ ಕೇಳಬೇಕೆ? ಓಹೋ ಎನ್ನುವಷ್ಟರಲ್ಲಿ ನ್ಯಾಯಾಲಯದ ಮುಂದೆ ವಿಷಯ ಹೋಯಿತು. ಎಲ್ಲ ತಟಸ್ಥ. ದೊಡ್ಡ ಚಳವಳಿ ಯಾಗುವುದೆಂದು ನಿರೀಕ್ಷಿಸಿದ್ದು, ಕೇವಲ ಒಂದು ದೊಡ್ಡ ಧ್ವನಿಯ ಚಟುವಟಿಕೆ ಆಯಿತು. ನಾಯಕ ಸ್ಥಾನದಲ್ಲಿ ನಿಂತು ಮಾತನಾಡಿದವರ ಯಾವ ಮಾತೂ ಕೂಡ ನ್ಯಾಯಾಲಯದ ಅಥವಾ ಸರಕಾರೀ ವಕೀಲರ ಮೇಲೆ ಸಹ ಪ್ರಭಾವ ಬೀರಲಿಲ್ಲ. ಈ ಚಳವಳಿ ಕನ್ನಡದ ಪರ ಇರಬಹುದು, ಆದರೆ ಆ ಕನ್ನಡಕ್ಕೆ ಏನಾಗಬೇಕು ಎಂಬ ಎಚ್ಚರವೇ ಕಾಣಿಸದಂತೆ ಕೂಗಹತ್ತಿದ್ದು ಸಮೂಹ ಸನ್ನಿ ಎಂದವರ ಬಾಯಿ ಮುಚ್ಚಿಸುವಷ್ಟು ಮಾತ್ರ ಬಲವಾಗಿತ್ತು.

ಇದಕ್ಕೆ ಪ್ರತಿಯಾಗಿ ಕನ್ನಡವೇ ಕರ್ನಾಟಕದಲ್ಲಿ ಶಿಕ್ಷಣ ಮಾಧ್ಯಮವಾಗಬೇಕು ಎಂಬ ವಿಷಯ ಎಬ್ಬಿಸಿದಾಗ ಅಥವಾ ಮಾತೃಭಾಷೆ ಪ್ರಾಥಮಿಕ ಶಿಕ್ಷಣದ ಮಾಧ್ಯಮವಾಗ ಬೇಕೆಂದಾಗ ಎಂ.ಚಿದಾನಂದಮೂರ್ತಿ ಉಪವಾಸ ಕೂತರು. ಯಾವ ತಾರೆಯರೂ ಕ್ಯಾರೆ ಎನ್ನಲಿಲ್ಲ. ಮಾಧ್ಯಮಗಳ, ತಾರೆಯರ, ರಾಜಕೀಯ ಪಕ್ಷಗಳ ಮುಖಂಡರ ಆಸಕ್ತಿ ತಾವು ತೆರೆದ ಅಥವಾ ಪೋಷಿಸುತ್ತಾ ಬಂದ ಆಂಗ್ಲ ಮಾಧ್ಯಮ ಶಾಲೆಯಲ್ಲಿರುವಾಗ ಯಥಾಪ್ರಕಾರ ನ್ಯಾಯಾಲಯದ ಕಂತೆಗಳಲ್ಲಿ ಗಂಟು ಬಿದ್ದು, ಕೂತು, ಹೂತು ಹೋಗಿದೆ ಮಾಧ್ಯಮದ ವಿಷಯ. ಇಷ್ಟಾಗಿ ಶಿಕ್ಷಣ ಖಾತೆ ರಾಜ್ಯದ ಬಾಬ್ತು! ಅದೇ ಇಂಗ್ಲಿಷನ್ನು ಕನ್ನಡಶಾಲೆಗಳಲ್ಲಿ ಬೋಧಿಸಬೇಕೆಂದಾಗ ಸಲೀಸಾಗಿ ಜಾರಿ ಆಯಿತು.

ಹೊಸ ವಿದ್ಯುನ್ಮಾನ ಮಾಧ್ಯಮಗಳಲ್ಲಿ ಕನ್ನಡದ ಬಳಕೆ ಬಗ್ಗೆ ನಡೆದ ಚಳವಳಿಗಳು ಇದಕ್ಕಿಂತ ದುಃಸ್ಥಿತಿ ಎದುರಿಸಿದವು. ಆರಂಭದಲ್ಲಿ ಸಶಕ್ತ ಕನ್ನಡ ರಂಗಭೂಮಿಯೇ ಎಲ್ಲ ತರಹದ ಟಿವಿ ಕಾರ್ಯಕ್ರಮಗಳಿಗೆ ಕಲಾವಿದರನ್ನು ಒದಗಿಸಿತು. ಹೊಸ ಖಾಸಗಿ ಛಾನೆಲ್‌ಗಳನ್ನು ಪ್ರಾರಂಭಿಸುವ ವೇಳೆಗೆ ಕನ್ನಡದ ಜನತೆ ಸಂವಹನ ಕೌಶಲ, ಗ್ಲಾಮರ್ ತಾಂತ್ರಿಕ ಪರಿಣತಿಗಳನ್ನು ಗಳಿಸಿಕೊಳ್ಳಲೇ ಇಲ್ಲ. ಅಂದರೆ ಯಾರೂ ಏನೂ ಕಲಿಯಲಿಲ್ಲ ವೆಂದಲ್ಲ. ಹೊಸ ಉದ್ಯಮ ಬೃಹತ್ತಾಗಿ ಬೆಳೆಯುವ ಸೂಚನೆಗಳಿದ್ದಾಗ ಆ ಉದ್ಯಮಕ್ಕೆ ಬೇಕಾದ ತಯಾರಿ ಮಾಡಿಕೊಳ್ಳದೆ, ಕೆಲವು ಸವಲತ್ತುಗಳಿಗೆ ಅಂಗಲಾಚುವಲ್ಲೇ ಕಾಲ ಕಳೆದು, ದೂರದೃಷ್ಟಿ ಇಲ್ಲದೆ, 'ಎಣ್ಣೆ ಬಂದಾಗ ಕಣ್ಣು ಮುಚ್ಚಿ ಕುಳಿತಿರುವ' ಸ್ಥಿತಿ ತಲುಪಿದೆವು. ಈಗಲೂ ಎಚ್ಚೆತ್ತಿಲ್ಲ. ಟಿವಿ ಕಾರ್ಯಕ್ರಮದಲ್ಲಿ ತಮಗೆ ಛಾನ್ಸ್ ಇಲ್ಲ ಎಂದು ವಿದ್ಯಾರ್ಥಿಗಳೇಕೆ, ಅಧ್ಯಾಪಕ, ಸಾಹಿತಿಗಳೂ ಹಲುಬುವ ಚಿತ್ರ ಬೆಂಗಳೂರಾಚೆ ಜಿಲ್ಲಾ ಮಟ್ಟದಲ್ಲೂ ಇದ್ದೇ ಇದೆ. ಆದರೆ ಯಾರೂ ಈ ಉದ್ಯಮಕ್ಕೆ ಬೇಕಾದ ತರಬೇತಿಯನ್ನು ಜಿಲ್ಲಾ ಮಟ್ಟದಲ್ಲಿ ನಡೆಸುವ ಗೋಜಿಗೆ ಹೋಗಿಲ್ಲ. ಇಂತಹ ಪ್ರಬಲ ಮಾಧ್ಯಮದಲ್ಲಿ ಕನ್ನಡ ಮತ್ತು ಅದರ ವೈವಿಧ್ಯ ಉಳಿಸಿಕೊಳ್ಳಲು ಇದು ಮುಖ್ಯ ಎನಿಸಿಲ್ಲ.

ಇದರ ಜತೆ ಜತೆಗೇ ಇನ್ನೊಂದು ಗೊಂದಲಗೊಳಿಸುವ ಪ್ರವೃತ್ತಿ ಇದೆ. ಅದು ಶಿಕ್ಷಣ ಮತ್ತು ಸಮೂಹ ಮಾಧ್ಯಮಗಳಿಗೆ ಸಮಾನವಾಗಿ ಸಂಬಂಧಿಸಿದ್ದು. ಅದು ಕನ್ನಡದ ಶಿಷ್ಟ ಅಥವಾ ಪ್ರಮಾಣೀಕೃತ ಭಾಷೆಯ ಬಗ್ಗೆ. ತಮಿಳರು ಅಭಿಜಾತ ಭಾಷೆಯ ಸ್ಥಾನ ಕೇಳುವವರೆಗೆ ಮತ್ತು ಪಡೆದುಕೊಳ್ಳುವವರೆಗೆ ಕನ್ನಡಕ್ಕೂ ಅದು ಬೇಕೆಂಬ ಯೋಚನೆಯೇ ಬರಲಿಲ್ಲ. ಬದಲಿಗೆ ಅಭಿಜಾತತೆಯನ್ನೇ ಕೆಲವರು ಕೀಳುಗರೆದು, ಅದನ್ನು ಜಾನಪದದ ಜೊತೆ ದ್ವಂದ್ವಾತ್ಮಕ ವಿರೋಧದಲ್ಲೇ ನೋಡುವುದು ಚಾಳಿ ಎನ್ನವಷ್ಟು ಅಭ್ಯಾಸವಾಗಿತ್ತು. ಕನ್ನಡದ ಅಭಿಜಾತತೆಯ ಬಗ್ಗೆ ಹಕ್ಕು ಸಾಧಿಸಲು ಹೊರಟಾಗ ದಢಕ್ಕನೆ ಸಾವಿರ ವರ್ಷದ ಇತಿಹಾಸ ಹೇಳಲು ಹೊರಟ ಸಾಮಾನ್ಯ ಕನ್ನಡ ಅಧ್ಯಾಪಕರೂ, ಮೊದಲು ಮೂಗು ಮುರಿದದ್ದನ್ನೇ ಈಗ ವಿಜೃಂಭಿಸಲು ಹೊರಟರು. 'ಮಾರ್ಗ ವಿರೋಧಿಸುವುದೆಂದರೆ ಶಾಸ್ತ್ರೀಯ ಭಾಷೆ ಯಾಗಿ ಕನ್ನಡ ಬೇಡವೆಂದಲ್ಲ.' ಎಂಬ ಘನವಿದ್ವಾಂಸರ ಮಾತು ನನಗಂತೂ ಅರ್ಥವಾಗಿಲ್ಲ. ಇದೇ ಕಾಲಕ್ಕೆ ಬರಹದ ಮಾತು ಆಡುಮಾತಿಗೆ ಹತ್ತಿರವಾಗಿರಬೇಕು ಸಂಸ್ಕೃತದಿಂದ ಬಿಡಿಸಿಕೊಂಡು ತಂತಾನೆ ಸ್ವತಂತ್ರವಾಗಬೇಕು ಎನ್ನುವ ಭಾಷಾ ಚಳವಳಿ ಇನ್ನೊಂದು ಇದೆ. ಆಡಿದ್ದೇ ಕನ್ನಡ. ಅಂದರೆ ಈವತ್ತು ಟಿವಿ ರೇಡಿಯೋಗಳಲ್ಲಿ ಬಳಸುವ ಕನ್ನಡ ಒಂದು ಕಡೆ, ರಾಜ್ಯದ ಒಳಗೂ, ಹೊರಗೂ ಇರುವ ಜಾನಪದ ಕನ್ನಡದ ಇನ್ನೊಂದು ಧಾರೆ ಮತ್ತೊಂದು ಕಡೆ. ಇವೆರಡರಲ್ಲಿ ಇದರಲ್ಲಿ ಯಾರು, ಯಾವುದನ್ನು, ಹ್ಯಾಗೂ ಬಳಸಬಹುದು, ನಿಜ. ಆದರೆ ಇದರಿಂದ ಸಂವಹನಗೊಳ್ಳುವುದು ಏನು? ನಮ್ಮೆಲ್ಲ ಸಮೂಹ ಮಾಧ್ಯಮಗಳೂ, ಎಂದರೆ ಸಮಷ್ಟಿ ಕನ್ನಡ ಮನಸ್ಸು ಬರಿದೆ ಶಬ್ದಜಾಲದಲ್ಲಿ ಆಟವಾಡುತ್ತಿದೆಯೆ? ಈ ಕನ್ನಡ ಉಳಿಸಿ ಎಂದು ಚಳವಳಿ ಬೇಕೆ? ಯಾವುದು ಹೇಗಿರುತ್ತೋ ಹಾಗಿರುತ್ತೆ. ಅದಕ್ಕೆ ನಾವೇನು ಮಾಡಲೂ ಸಾಧ್ಯವಿಲ್ಲ ಎಂಬ ಸಿನಿಕತನ ಹಿಂದಿನ ಚಳವಳಿಗಳ ಫಲಶ್ರುತಿಯೇ? ಎಂದು ನನಗೆ ನಾನೇ ಎಷ್ಟೋ ಸಲ ಅಂದುಕೊಂಡಿದ್ದೇನೆ. ಸಂಸ್ಕೃತದ ವಿರುದ್ಧ ಕನ್ನಡ ಎಂಬ ಗೋಕಾಕ ಚಳವಳಿಯ ತಿರುವು ಮತ್ತು ತಿರುಳುಗಳೇ ಈ ಪರಿಸ್ಥಿತಿಯನ್ನು ಸೂಚಿಸಿತ್ತೇನೋ. ಶಿಕ್ಷಣ ಚಿಂತನೆ, ವಾದ ಎಚ್ಚರ ಎನ್ನವುದರ ಜಾಗದಲ್ಲಿ, ರಾಜಕೀಯ, ಭ್ರಮೆ, ಕೂಗು ಹೊಡೆದೆಬ್ಬಿಸು, ಬಡಿದೆಬ್ಬಿಸು ಎಂಬ ಅಂಶಗಳೇ ಬಲವಾಗಿ, ಶಿಕ್ಷಣದ ಗಂಭೀರ ವಿಷಯ ರಾಜಕೀಯ ಕೂಗಾಗಿದ್ದರ ಮೊದಲ ಅನುಭವ ನನಗಾದದ್ದೇ ಆಗ.

ಒಟ್ಟಾರೆಯಾಗಿ ಈಗ ಭಾಷೆ ಎನ್ನುವುದು ಸಂಸ್ಕೃತಿ, ಮಣ್ಣು, ಮಸಿ ಎನ್ನುವುದೆಲ್ಲ ಢೋಂಗಿ ಮಾತಾಗುತ್ತಿದೆ. ಶಿಕ್ಷಣವೇ ಸುಖವಾದ ಐಹಿಕ ಜೀವನಕ್ಕೆ ಸಾಧನ. ಬೆಂಗಳೂರಿಗೆ ಐಟಿ, ಬಿಟಿ ನುಗ್ಗಿ ಬಂದು ಸುಗ್ಗಿಯಾಗಿದೆ ಎಂದು ಭ್ರಮಿಸಿದ್ದೂ ಇದೆ. ಬೆಂಗಳೂರಿಗೆ ಐಟಿ ಬಂದಿದ್ದರಿಂದ ಕನ್ನಡಕ್ಕೆ ಕನ್ನಡಿಗರಿಗೆ ಏನಾಯಿತು ಎಂದು ಯಾವುದಾದರೂ ಸರ್ವೇಕ್ಷಣೆ ಅಧ್ಯಯನ ಆಗಿದೆಯೆ? ನನಗಂತೂ ತಿಳಿಯದು. ಆದರೆ ಕನ್ನಡದಲ್ಲಿ ತಂತ್ರಾಂಶ ಗಣನೀಯವಾಗಿ ಬೆಳೆದಿಲ್ಲ. ಹಾಗೆ ನೋಡಿದರೆ ಕೊರಿಯಾದಂತಹ ಪುಟ್ಟ ದೇಶಕ್ಕೆ ಹೋಲಿಸಿದರೆ ಇಡೀ ಭಾರತದಲ್ಲಿಯೇ ಕಂಪ್ಯೂಟರ್ ದೇಶಭಾಷೆಗಳ ಜತೆ ಕ್ರಿಯಾಶೀಲ ಸಂಬಂಧ ಪಡೆದಿಲ್ಲ. ಕನ್ನಡದ ಕೀಲಿಮಣೆಯನ್ನು ಇಂಗ್ಲಿಷ್ ಅಕ್ಷರದ ಮೇಲೆ


ಆರೋಪಿಸಿಕೊಳ್ಳಬೇಕಾಗಿದೆ. ಪ್ರಸಿದ್ಧ ಐ-ಫೋನಿನಲ್ಲಿ ಸುಓಮಿ, ಜೋಕ್‌ಮಲ್ ಸ್ವೆನ್ಸ್ಕ ಎಂಬೆಲ್ಲ ಭಾಷೆಗಳಿವೆ. ಅಲ್ಲಿ ಭಾರತದ ಭಾಷೆ ಎಂದರೆ ಸಿಗಬಹುದಾದ್ದು ಹಿಂದಿ ಒಂದೇ. ನಮ್ಮ ಗೆಳೆಯರೊಬ್ಬರು ಹೇಳಿದ್ದು 'ಜಿಡಿ ಸಾರ್, ಐ-ಫೋನು ತಗೊಂಡವರಿಗೆ ಇಂಗ್ಲೀಷ್ ಬರದೆ ಇರುತ್ತಾ' ಅಂತ. ಐಟಿ ಕಂಪೆನಿ ನಡೆಸುವವರಿಗೆ ನೆಲ-ಜಲ ಕೊಡಲು ವಿಶಾಲ ಹೃದಯ, ತೆರೆದ ಬಾಹುಗಳನ್ನು ತೋರಿದ ನಾವು, ಅವರನ್ನು ಕನ್ನಡಕ್ಕೆ ನಿಮ್ಮ ಕ್ಷೇತ್ರದಿಂದಲೇ ಮಾಡಬೇಕಾದ್ದನ್ನು ಮಾಡಿ ಎಂದು ಒತ್ತಾಯಿಸುವ ಗೋಜಿಗೆ ಹೋಗಲಿಲ್ಲ. ಅವರು ಮಾಡಬೇಕಾದದ್ದು ಒಂದಿಷ್ಟು ವಂತಿಗೆಯನ್ನು ಕೊಡುವುದೋ, ಯಾವುದೋ ಯೋಜನೆಗೆ ಪ್ರಾಯೋಜಕರೋ ಆಗುವುದಲ್ಲ. ಹಾಗೆ ಅಪೇಕ್ಷಿಸುವುದು, ರೋಲ್ಕಾಲ್ ಕನ್ನಡ ಸಂಘ ಸಂಸ್ಥೆಗಳ ಲಕ್ಷಣ. ನಾವು ಅಪೇಕ್ಷಿಸಬೇಕಾದದ್ದು ಉದ್ಯಮದಲ್ಲಿ ಸಹಭಾಗಿತ್ವವನ್ನ. ಈ ಕಂಪೆನಿಗಳ ಬಂಡವಾಳ ಹೂಡಿಕೆಯ ಹಾಗೆ ಕನ್ನಡ ನಾಡಿನ ಕನ್ನಡಿಗರ ನೆಲಜಲಾದಿಗಳ ಸಂಪನ್ಮೂಲದ ಹೂಡಿಕೆಯಾಗಿದೆ. ಅದಕ್ಕೆ ಪ್ರತಿಫಲವಾಗಿ ಕನ್ನಡ ಭಾಷೆಗೆ, ಕನ್ನಡದಲ್ಲಿಯೇ ವ್ಯವಹರಿಸುವ ವಣಿಜರಿಗೆ, ಕನ್ನಡ ವಿದ್ಯಾರ್ಥಿಗಳಿಗೆ ಅದೇ ಕ್ಷೇತ್ರದಿಂದ ಲಾಭವಾಗಬೇಕು. ಕನ್ನಡ ನಾಡಿನ ರೈತರಿಗೆ ಬಿಟಿ ಕಂಪೆನಿಗಳೇನು ಮಾಡಿವೆ? ಕನ್ನಡ ನಾಡಿನ ವಿಶಿಷ್ಟ ತಳಿಯ ಬೆಳೆ, ಸಸಿ, ಗಿಡ, ಮರ, ಜಾನುವಾರುಗಳಿಗೆ, ಆ ಮುಖೇನ ಅದನ್ನು ನಂಬಿ ಬದುಕುವವರಿಗೆ ಏನು ಮಾಡಿದೆ? ಏನು ಮಾಡಬೇಕು? ನಮ್ಮ ಸಂಪನ್ಮೂಲಗಳನ್ನು ನಮ್ಮ ಬಂಡವಾಳವಾಗಿಯೇ ಉಳಿಸಿ ಬೆಳೆಸಿಕೊಳ್ಳುವುದು ಹೇಗೆ? ಇದಕ್ಕೆಂತಹ ಹೋರಾಟ ಮಾಡಬೇಕು? ಅಥವಾ ಅನುಸಂಧಾನ ನಡೆಸಬೇಕು?

ಮುಕ್ತ ಮಾರುಕಟ್ಟೆಯ ಶಕ್ತಿಗಳ ಜತೆ ಸೆಣೆಸುವುದಲ್ಲದೆ, ರಾಷ್ಟ್ರೀಯ ಯೋಜನೆಗಳು ಸಂಸ್ಥೆಗಳು ಇಲ್ಲಿ ಬೆಳೆಯುವಾಗಲೂ ನಮ್ಮ ಎಚ್ಚರ ಬೇಕು. ದೇಶದಲ್ಲೇ ಪ್ರಮುಖವಾದ ಕಾನೂನು ವಿಶ್ವವಿದ್ಯಾಲಯ ಬೆಂಗಳೂರಿಗೆ ಬಂದು ಎಷ್ಟು ಕಾಲವಾಯಿತು? ಆದರೆ ನಾವು ಕನ್ನಡ, ಕನ್ನಡಿಗ, ಕರ್ನಾಟಕಗಳ ಪರವಾದ ಯಾವ ಖಟ್ಲೆಗೂ ಸುಪ್ರೀಂ ಕೋರ್ಟಿನಲ್ಲಿ ವಾದಿಸುವ ಕನ್ನಡದ ಹುಡುಗರನ್ನು ತಯಾರಿಸುವ ಪ್ರಯತ್ನ ಮಾಡಿಲ್ಲ. ಅಥವಾ ಇರುವ ಸರಕಾರಿ ವಕೀಲರಿಗೆ ತರಬೇತಿ ಕೊಡಿಸಿ ಬೆಳೆಸಿಲ್ಲ. ಅದು ಕಾವೇರಿ ವಿವಾದವೋ, ಗಡಿ ಸಮಸ್ಯೆಯೋ ಎಲ್ಲದಕ್ಕೂ ಹೊರಗಿನವರ ಸೇವೆಗೇ ಕೈ ಕಾಯಬೇಕು. ಎಲ್ಲ ಪಕ್ಷಗಳವರೂ ರಾಜ್ಯ ಸಭೆಗೆ ಹೊರನಾಡಿನವರನ್ನು ಕಳುಹಿಸಲು ಉದ್ಯುಕ್ತರಾದರೆ, ಕನ್ನಡದ ಜನ ಅವರಿಗೆ ಇಲ್ಲಿ ಬೇಕಾದ ಸವಲತ್ತು ಒದಗಿಸಲು ಪೈಪೋಟಿ ನಡೆಸುತ್ತಾರೆ. ಹೀಗಿಟ್ಟುಕೊಂಡು ವಲಸೆ ವಿರೋಧಿಸುವುದಾದರೂ ಹೇಗೆ? ಅದಕ್ಕೆ ಅಮಾಯಕ ಕೂಲಿ ಕಾರ್ಮಿಕರನ್ನು ದ್ವೇಷಿಸುವ ಪಟಾಲಂಗಳು ಸಿದ್ಧವಾಗುತ್ತವೆ. ಯಾವುದೇ ವಾದ ವಿವಾದವಾದರೂ ಹುಚ್ಚೆಬ್ಬಿಸಿ ತಮ್ಮ ಬೇಳೆ ಬೇಯಿಸಿಕೊಳ್ಳುವ ಕನ್ನಡ ಪಟಾಲಂಗಳು, ಅಕ್ಷರಶಃ ಕನ್ನಡ ನೆಲವನ್ನು ಹರಾಜು ಹಾಕುವ ಹಿರಣ್ಯಕಶಿಪುಗಳು. ದೇಸೀಯರನ್ನು ಒಕ್ಕಲೆಬ್ಬಿಸಿ, ಧನಿಕ ಪರಕೀಯರಿಗೆ ಪರಭಾರೆ ಮಾಡಿಸುವ ಧಾಂಡಿಗರು, ಬಾವುಟಗಳ ಮೇಲೂ ಕನ್ನಡ ತಾಯಿಯನ್ನು ಬೆತ್ತಲೆ ಮಾಡುತ್ತಿದ್ದಾರೆ. ಇವರ ಕನ್ನಡದ್ದೆನ್ನುವ ಕೂಗು ಕಿವಿ ಚುಚ್ಚುತ್ತಿದೆ. ದಾರಿ ಯಾವುದಯ್ಯಾ? ❐

ಕನ್ನಡ ಬೇಡವಾದ ಕನ್ನಡಿಗ – ಕರ್ನಾಟಕ

■ ಚಿ. ವಿ. ಶ್ರೀನಾಥಶಾಸ್ತ್ರಿ

ಕನ್ನಡದ, ಕನ್ನಡಿಗರ ಹಾಗೂ ಕರ್ನಾಟಕದ ಪರಿಸ್ಥಿತಿಗಳು ಪದೇ ಪದೇ ಆತಂಕಕ್ಕೆ ಒಳಗಾಗುತ್ತಲೇ ಇರುವುದು ಅತ್ಯಂತ ದುರದೃಷ್ಟಕರ ಸಂಗತಿಯಾಗಿದೆ. ಇದು ಕೇವಲ ಕನ್ನಡ ಭಾಷೆ ಹಾಗೂ ಕನ್ನಡಿಗರನ್ನು ಕುರಿತ ಒಂದು ಹುಚ್ಚು ವ್ಯಾಮೋಹದ ಮಾತೇನಲ್ಲ. ಇದು ನೈಜ ಪರಿಸ್ಥಿತಿ ಎಂಬುದನ್ನು ನಾವೆಲ್ಲರೂ ತೀವ್ರವಾಗಿ ಗಮನಿಸಬೇಕು. ಕನ್ನಡ ಭಾಷೆಗೆ ಗೌರವ ಇಲ್ಲದಿರುವುದು ಉದ್ಯೋಗ ಕ್ಷೇತ್ರದಲ್ಲಿ ಕನ್ನಡಿಗರಿಗೆ ಅವಕಾಶಗಳು ದೊರೆಯದಂತೆ ಹೂಡುವ ಕುತಂತ್ರಗಳು ಹಾಗೂ ಕರ್ನಾಟಕಕ್ಕೆ ನ್ಯಾಯವಾಗಿ ದೊರಕಬೇಕಾದ ಜಲ, ವಿದ್ಯುತ್ ಮುಂತಾದ ಅತ್ಯಗತ್ಯ ಸೌಲಭ್ಯಗಳ ಬಗ್ಗೆಯಾಗಲೀ, ಶೈಕ್ಷಣಿಕ, ವೈಜ್ಞಾನಿಕ, ಯಾಂತ್ರಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿನ ವಿವಿಧ ರೀತಿಯ ಚಟುವಟಿಕೆಗಳಿಗೆ ಅಗತ್ಯವಾದ ಸೌಲಭ್ಯಗಳ ಬಗ್ಗೆಯಾಗಲೀ, ಕೇಂದ್ರ ಸರ್ಕಾರ ಹಾಗೂ ಇವುಗಳಿಗೆ ಸಂಬಂಧಿಸಿದಂತೆ ನಿರ್ಣಯಗಳನ್ನು ತೆಗೆದುಕೊಳ್ಳುವ ರಾಷ್ಟ್ರೀಯ ಸಂಸ್ಥೆಗಳು ಸೂಕ್ತವಾದ ಗಮನವನ್ನೇ ನೀಡದಿರುವುದು – ಇವೆಲ್ಲ ಕನ್ನಡಿಗರ ಮನವನ್ನು ಕದಡುತ್ತಲೇ ಇರುತ್ತವೆ.



ಈ ವಿಷಯಗಳನ್ನು ಕುರಿತು ಯೋಚಿಸುವಾಗ ಎಲ್ಲ ಕನ್ನಡಿಗರೂ ವೈಯಕ್ತಿಕ, ರಾಜಕೀಯ, ಸಾಮಾಜಿಕ, ಧಾರ್ಮಿಕ ಜಾತಿ, ಮತ, ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ತಮ್ಮ ತಮ್ಮ ನಡುವೆ ಇರಬಹುದಾದ ಅಭಿಪ್ರಾಯ ಭೇದಗಳು, ಪರಸ್ಪರ ವಿರೋಧಿ ನಿಲುವುಗಳು, ಟೀಕಾಪ್ರಹಾರಗಳು ಮುಂತಾದವನ್ನು ಬದಿಗಿಟ್ಟು, ಕೇವಲ ವಿಷಯಾಧಾರಿತವಾಗಿ, ಕನ್ನಡ–ಕನ್ನಡಿಗ–

ಕರ್ನಾಟಕಗಳ ಹಿತಾಸಕ್ತಿಗೆ ಸಂಬಂಧಿಸಿದ ವಿಷಯಗಳಿಗೆ ಸೂಕ್ತ ಪರಿಹಾರಗಳನ್ನು ದೊರಕಿಸಿಕೊಳ್ಳಲು ಅಗತ್ಯವೂ, ಪೂರಕವೂ ಆದ ಭಾವಸಾಮರಸ್ಯದಿಂದ ನಡೆದುಕೊಳ್ಳಬೇಕಾಗಿದೆ. **ಈ ಭಾವಸಾಮರಸ್ಯಕ್ಕೆ ಕನ್ನಡ ಭಾಷೆಯೇ ಮೂಲ ಮತ್ತು ಬಲವಾದ ತಳಹದಿ ಎಂಬುದು ಅತ್ಯಂತ ಸಹಜ ಸಂಗತಿಯಾಗಿದೆ. ಅಂದರೆ ಮೂಲಭೂತವಾಗಿ ಕನ್ನಡಿಗರೆಲ್ಲರೂ ಕನ್ನಡವನ್ನು ಚೆನ್ನಾಗಿಯೂ, ಅಭಿಮಾನಪೂರ್ವಕವಾಗಿಯೂ ಕಲಿತಿರಲೇಬೇಕು; ತಮ್ಮ ಎಲ್ಲ ವ್ಯವಹಾರಗಳನ್ನು ಸಾಧ್ಯವಾದಷ್ಟೂ ಕನ್ನಡದಲ್ಲೇ ನಡೆಸಬೇಕು; ಕನ್ನಡನಾಡಿನಲ್ಲಿರುವ ಅನ್ಯಭಾಷೆಯವರು ಕನ್ನಡವನ್ನು ಕಲಿಯಲೇಬೇಕಾದಂತಹ ಪರಿಸ್ಥಿತಿಯನ್ನು ಉಂಟು ಮಾಡಬೇಕು. ಇದು ಎಲ್ಲ ಕನ್ನಡಿಗರ ಪ್ರಾಥಮಿಕ ಕರ್ತವ್ಯ.**

ಈ ಹಿನ್ನೆಲೆಯಲ್ಲಿ ಅತ್ಯಂತ ಪ್ರಮುಖವೂ, ಕನ್ನಡಿಗರಿಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಆಘಾತಕಾರಿಯೂ ಆದ ಒಂದು ಬೆಳವಣಿಗೆಯನ್ನು ಗಮನಿಸೋಣ. ಕರ್ನಾಟಕದ ಎಲ್ಲ ಖಾಸಗಿ ಶಿಕ್ಷಣ ಶಾಲೆಗಳೂ, ಇಂಗ್ಲಿಷ್ ಮಾಧ್ಯಮ ಶಾಲೆಗಳಾಗಿ ಪರಿವರ್ತಿತವಾಗುತ್ತಿರುವುದೇ ಈ ದಾರುಣ ಸಂಗತಿಗಳಿಗೆ ಕಾರಣವಾಗಿದೆ. ರಾಜ್ಯಾದ್ಯಂತ ಎಲ್ಲ ಖಾಸಗಿ ಶಾಲೆಗಳಲ್ಲೂ ಕನ್ನಡವನ್ನು ದೂರೀಕರಿಸಲಾಗುತ್ತಿದೆ. ಕೇವಲ ಕೆಲವು ಶಾಲೆಗಳಲ್ಲಿ ಮಾತ್ರ ಕನ್ನಡವನ್ನು ಕೇವಲ ಒಂದು ಪಾಠದ ವಿಷಯವಾಗಿ ಹೇಳಿಕೊಟ್ಟರೂ ಅದು ಕೇವಲ ನೆಪಮಾತ್ರ ಎಂಬುದು ವಾಸ್ತವ ಸಂಗತಿ. ಇದರಿಂದ ನೂರಕ್ಕೆ ತೊಂಬತ್ತರಷ್ಟು ಮಕ್ಕಳಿಗೆ ಕನ್ನಡದ ಬಗ್ಗೆ ಯಾವುದೇ ರೀತಿಯ ಹಂಬಲ, ಆಸಕ್ತಿ, ಉತ್ಸಾಹ ಇಲ್ಲವೇ ಇಲ್ಲದಂತಾಗಿದೆ. ಅವರು ತಮಗೆ ನಿಗದಿಪಡಿಸಿರುವ ಕನ್ನಡ ಪತ್ರಿಕೆಗಳನ್ನು ಅನಿವಾರ್ಯವೆಂಬಂತೆ ಪರೀಕ್ಷೆಗೆಂದು ಮಾತ್ರ ಓದುತ್ತಾರೆ. ಕೆಲವೇ ಕೆಲವರು ಒಮ್ಮೊಮ್ಮೆ ಕನ್ನಡ ಪತ್ರಿಕೆಗಳನ್ನು ತಿರುವಿಹಾಕಬಹುದು. ಕರ್ನಾಟಕದ ಮುಂದಿನ ಪೀಳಿಗೆಯಾದ ಈ ಮಕ್ಕಳು ಕನ್ನಡ ಪತ್ರಿಕೆಗಳು, ಕನ್ನಡ ಪುಸ್ತಕಗಳು, ಇವುಗಳಲ್ಲಿನ ಕಥೆ ಕವನ, ವೈಚಾರಿಕ ಲೇಖನಗಳು ಮುಂತಾದವನ್ನು ಓದಿ ಆನಂದಿಸುವ ಸಂದರ್ಭಗಳೇ ಇಲ್ಲ. ಅಲ್ಲದೆ ಕನ್ನಡದ ಅನೇಕ ವಿಧವಾದ ಸಾಹಿತ್ಯ, ಸಂಗೀತ, ಜಾನಪದ ಮುಂತಾದ ಚಟುವಟಿಕೆಗಳಲ್ಲಿ ಭಾಗವಹಿಸುವ, ಅವುಗಳ ಕಾರ್ಯಕ್ರಮಗಳನ್ನು ನೋಡಿ ಮನದುಂಬಿಕೊಳ್ಳುವ ತನ್ಮೂಲಕ ಬೌದ್ಧಿಕವಾಗಿ ಬೆಳೆಯುವ ಮತ್ತು ಈ ಕಲೆಗಳನ್ನು ಪ್ರೋತ್ಸಾಹಿಸುವ ಕಾರ್ಯಗಳಲ್ಲಿ ಇಂದಿನ ಪೀಳಿಗೆಯವರ ಇರುವಿಕೆಯು ಕ್ಷೀಣಿಸುತ್ತಿದೆ. ಕನ್ನಡದ ಪ್ರಖ್ಯಾತ ಸಾಹಿತಿಗಳ ಸಾಹಿತ್ಯ ಕೃತಿಗಳನ್ನು ಓದುವತ್ತ ಇಂದಿನ ಕನ್ನಡಿಗರಿಗೆ(?) ಗಮನವೇ ಇಲ್ಲ. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ಕಲೆ ಇವುಗಳಲ್ಲಿ ಆಸಕ್ತಿ ಬೆಳೆಸಿಕೊಳ್ಳುವವರು ಕೇವಲ ಕೆಲವೇ ಮಂದಿ ಆಗಿದ್ದು, ಈ ಸಂಖ್ಯೆ ಕುಸಿಯುತ್ತಲೇ ಇದೆ. ಹೀಗೆ ಕನ್ನಡಿಗರೆನಿಸಿಕೊಳ್ಳುವ ಕನ್ನಡನಾಡಿನವರೇ ಕರ್ನಾಟಕ ಹಾಗೂ ಕನ್ನಡದ ಬಗ್ಗೆ ಆಸಕ್ತಿ ಬೆಳೆಸಿಕೊಳ್ಳದೇ ಹೋದರೆ 'ಕನ್ನಡ-ಕನ್ನಡಿಗ-ಕರ್ನಾಟಕ' ಕೇವಲ ಕೆಲವರ ಘೋಷಣೆಯಾಗಿ ಮಾತ್ರ ಉಳಿಯುತ್ತದೆ.

ಈ ಅಪಾಯಕಾರಿ ಅಂಶಗಳನ್ನು ತೀವ್ರವಾಗಿ ಗಮನಿಸಿದಾಗ, ಮೂಲಭೂತವಾಗಿ ಕನ್ನಡ-ಕನ್ನಡಿಗ-ಕರ್ನಾಟಕಕ್ಕೆ ಮುಳುವಾಗಿರುವುದು ಶಿಕ್ಷಣ ಕ್ಷೇತ್ರದ ಕನ್ನಡ ವಿರೋಧಿ

ಚಟುವಟಿಕೆಗಳು ಎಂಬುದು ಸಹಜವಾಗಿಯೇ ತಿಳಿದುಬರುತ್ತದೆ. ಇಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದುದೆಂದರೆ, ಇದರಿಂದ ಕನ್ನಡಿಗರ ಬೌದ್ಧಿಕ ಸಾಮರ್ಥ್ಯದ ಬೆಳವಣಿಗೆಯು ಕುಂಠಿತವಾಗಿ ಕನ್ನಡ ಭಾಷೆಯೇ ಅಲ್ಲದೆ ಎಲ್ಲ ಕಾರ್ಯಕ್ಷೇತ್ರಗಳಲ್ಲೂ ಕನ್ನಡಿಗರಿಗೆ ಹಿನ್ನಡೆಯಾಗುತ್ತಿದೆ. ಮಕ್ಕಳಿಗೆ ಪ್ರಾಥಮಿಕ ಹಂತದಲ್ಲಿ ಶಿಕ್ಷಣ ಮಾಧ್ಯಮ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಯೇ ಇರಬೇಕೆಂದೂ, ಹಾಗಿದ್ದರೆ ಮಾತ್ರ ಮಕ್ಕಳಲ್ಲಿ ಉತ್ತಮವಾದ ಬೌದ್ಧಿಕ ಶಕ್ತಿ ಬೆಳೆಯುತ್ತದೆ ಎಂದೂ ಜಗತ್ತಿನ ಎಲ್ಲಾ ಶಿಕ್ಷಣತಜ್ಞರು ಭಾಷಾತಜ್ಞರು, ಮನೋವಿಜ್ಞಾನಿಗಳು, ಶ್ರೇಷ್ಠ ಚಿಂತಕರು ಒಕ್ಕೊರಲಿನಿಂದ ಹೇಳಿದ್ದಾರೆ.

ಪ್ರಾಥಮಿಕ ಶಿಕ್ಷಣದ ಕಲಿಕೆಯೆಂದರೆ ಮಕ್ಕಳು ತಾವು ನೋಡಿದ, ಓದಿದ ಹಾಗೂ ಕೇಳಿದ ವಿಷಯಗಳನ್ನು ನೆನಪಿನಲ್ಲಿ ಇಟ್ಟುಕೊಳ್ಳುವುದು, ಅವುಗಳ ಬಗ್ಗೆ ಆಸಕ್ತಿ ತೋರಿಸುವುದು, ನೆನಪಿನ ವಿಷಯಗಳನ್ನು ಸರಿಯಾಗಿ ಮನಸ್ಸಿಗೆ ತಂದುಕೊಂಡು ಆ ಬಗ್ಗೆ ಆಲೋಚಿಸುವುದು, ತಾವು ತಿಳಿದ ವಿಚಾರಗಳನ್ನು ಮಥಿಸಿ ಹೊಸ ವಿಚಾರಗಳನ್ನು ಕಂಡುಕೊಳ್ಳುವುದು, ಅವುಗಳನ್ನು ತಮ್ಮದೇ ಆದ ರೀತಿಯಲ್ಲಿ, ತಮ್ಮದೇ ಆದ ವಾಕ್ಯಗಳಲ್ಲಿ ಸಂವಹನ ಮಾಡುವುದು. ಇದು ಅವರ ಮುಂದಿನ ಜೀವನಕ್ಕೆ ಭದ್ರ ಬುನಾದಿಯಾಗುವ ಪರ್ವಕಾಲ.

ವಿಶ್ವಾದ್ಯಂತ ಮನಶ್ಶಾಸ್ತ್ರಜ್ಞರು ನಡೆಸಿರುವ ಆಳವಾದ ಸಂಶೋಧನೆಗಳ ಫಲಿತಾಂಶ ಗಳಿಂದ ತಿಳಿದಿರುವಂತೆ ಯಾರಲ್ಲೇ ಆಗಲಿ, ಮೆದುಳು ಸಂಬಂಧದ ಬುದ್ಧಿವಂತಿಕೆಯ ಮೇಲ್ಕಂಡ ಈ ಪ್ರವೃತ್ತಿಗಳು (ಐ.ಕ್ಯು.) ಆರಂಭದ ೧೨ ವರ್ಷಗಳೊಳಗಾಗಿ ಮಾತ್ರ ಬರುತ್ತದೆ. ಇಂತಹ ಪ್ರವೃತ್ತಿ ಬೆಳೆಸಿಕೊಳ್ಳುವ ಮಕ್ಕಳು ಮಾತ್ರ ಮುಂದೆ ಯಾವು ದನ್ನಾದರೂ ಚೆನ್ನಾಗಿ ಕಲಿಯಬಲ್ಲರು ಮತ್ತು ಬುದ್ಧಿವಂತರಾಗಬಲ್ಲರು. ಆದ್ದರಿಂದ ಮಕ್ಕಳು ನಿಜವಾಗಿ ಬುದ್ಧಿವಂತರಾಗಲು ೧೨ ವರ್ಷಗಳ ಒಳಗಿನ ವಿದ್ಯಾಭ್ಯಾಸ ಮತ್ತು ವಿದ್ಯಾಭ್ಯಾಸದ ಭಾಷೆ ಬಹುಮುಖ್ಯವಾದುದು. ಇದು ಯಾವುದೇ ತೊಡಕಿಲ್ಲದ ವೈಜ್ಞಾನಿಕ ಭಾಷೆಗಳ ಮೂಲಕ ನೀಡುವ ಶಿಕ್ಷಣದಿಂದ ಮಾತ್ರ ಸಾಧ್ಯ. ಬಹುಮುಖ್ಯವಾಗಿ ಭಾರತೀಯ ಭಾಷೆಗಳು ಅತ್ಯಂತ ವೈಜ್ಞಾನಿಕ, ಅಸಂದಿಗ್ಧ, ಧ್ವನ್ಯಾತ್ಮಕ ಭಾಷೆಗಳಾದ್ದರಿಂದ ಕನಿಷ್ಠ ಪ್ರೌಢಶಾಲೆಯವರೆಗೆ, ಭಾರತೀಯ ಭಾಷಾಮಾಧ್ಯಮದಲ್ಲಿ ಓದುವ ಮಕ್ಕಳಲ್ಲಿ ಬಹುಮುಖ್ಯವಾದ, ನಿಜವಾದ ಹಾಗೂ ಆಳವಾದ ಬುದ್ಧಿವಂತಿಕೆಯ ಅಂಶಗಳು ಹೆಚ್ಚಾಗಿ ಬೆಳೆದಿರುತ್ತವೆ. ಪ್ರಾಥಮಿಕ ಹಂತದಲ್ಲಿ ಇಂಗ್ಲಿಷ್‌ಗಿಂತಲೂ ಅತ್ಯಂತ ವೈಜ್ಞಾನಿಕ ಭಾಷೆ ಯಾದ ಕನ್ನಡದಲ್ಲಿ ವಿದ್ಯಾಭ್ಯಾಸ ಮಾಡುವ ಮಕ್ಕಳು ವಿಷಯಗಳನ್ನು ಅರಿಯುವ ಕಲಿಯುವ ವಿಷಯಗಳ ಬಗ್ಗೆ ಆಲೋಚಿಸುವ, ಅವುಗಳನ್ನು ಸ್ವಂತ ವಾಕ್ಯಗಳಲ್ಲಿ ಬರೆಯುವ ಪ್ರವೃತ್ತಿ ಹಾಗೂ ಶಕ್ತಿಯನ್ನು ಬೆಳೆಸಿಕೊಂಡಿರುತ್ತಾರೆ. ಆದರೆ ಈಗ ಇಂಗ್ಲಿಷ್ ಒಂದು ಅಗತ್ಯ ಪರಿಕರವಾದ್ದರಿಂದ, ಆರಂಭದಲ್ಲಿ ನಿಜವಾದ ಹಾಗೂ ಪರಿಪೂರ್ಣವಾದ ಭಾಷೆಯಾಗಿರುವ ಕನ್ನಡ ಭಾಷೆಯಲ್ಲಿ ವಿದ್ಯಾಭ್ಯಾಸ ಮಾಡಿದ ಮಕ್ಕಳಿಗೆ ಐದನೆಯ ತರಗತಿಯಿಂದ ಇಂಗ್ಲಿಷನ್ನು ಒಂದು ಭಾಷಾ ಪಠ್ಯವನ್ನಾಗಿ ಬೋಧಿಸಬೇಕು.

ಈ ವೇಳೆಗಾಗಲೇ ಮಕ್ಕಳಲ್ಲಿ ಬೆಳೆದುಬಿಟ್ಟಿರುವ ಬೌದ್ಧಿಕ ಅಂಶಗಳಿಗೆ ಇಂಗ್ಲಿಷ್ ಭಾಷೆಯ ಕಲಿಕೆಯಿಂದ ಯಾವ ಅಪಾಯವೂ ಉಂಟಾಗುವುದಿಲ್ಲ. ಅವರಿಗೆ ಉಂಟಾಗಬಹುದಾದ ಇಂಗ್ಲಿಷ್ ಕುರಿತ ಭಯ, ಆತಂಕ, ಕೀಳರಿಮೆ ಇವುಗಳನ್ನು ನಿವಾರಿಸಬೇಕು. ಆಗ ಅವರು ಇಂಗ್ಲಿಷ್ ಭಾಷೆಯಲ್ಲಿನ ಅವೈಜ್ಞಾನಿಕ, ಗೊಂದಲಮಯ ಅಂಶಗಳನ್ನು ಅರಗಿಸಿಕೊಂಡು ಇಂಗ್ಲಿಷ್ ಭಾಷೆಯಲ್ಲಿ ಪರಿಣತರಾಗುತ್ತಾರೆ. ಹೀಗೆ ಒಂದು ಹಂತದವರೆಗೆ ಕನ್ನಡದಲ್ಲೇ ಕಲಿತ ವಿದ್ಯಾರ್ಥಿಗಳು ಮುಂದೆ ಇಂಗ್ಲಿಷ್ ಮಾಧ್ಯಮಕ್ಕೆ ಬದಲಿಸಿಕೊಳ್ಳಲು ಸುಲಭ. ಕಲಿಕೆಯಲ್ಲಿ ಸ್ವಂತಿಕೆ ಹಾಗೂ ವಿಷಯಗಳನ್ನು ಅರ್ಥಮಾಡಿಕೊಳ್ಳುವ ಶಕ್ತಿಯನ್ನು ಪಡೆದ ವಿದ್ಯಾರ್ಥಿಗಳು ಈ ಬದಲಾವಣೆಯಲ್ಲಿ ಯಾವ ತೊಡಕನ್ನೂ ಕಾಣಲಾರರು. ಇದು ಎಲ್ಲ ಹಿರಿಯ ವಿದ್ವಾಂಸರ, ಚಿಂತಕರ, ಅನೇಕಾನೇಕ ಮಿತ್ರರ, ನನ್ನ ಮತ್ತು ನಮ್ಮ ಮಕ್ಕಳ ಅನುಭವ.

ಪ್ರಾಥಮಿಕ ಹಂತದಲ್ಲಿ ಇಂಗ್ಲಿಷ್ ಮಾಧ್ಯಮದಲ್ಲಿ ಕಲಿಯುವಾಗ ವಿದ್ಯಾರ್ಥಿಗಳು ವಿಷಯದ ಮೇಲೆ ಪ್ರಭುತ್ವ ಪಡೆಯುವ ಬದಲು ಅನಿವಾರ್ಯವಾಗಿ ಪಾಠಗಳನ್ನು (ಗಿಳಿ ಪಾಠದಂತೆ) ಉರು ಹೊಡೆಯುತ್ತಾರೆ. ಇಂಗ್ಲಿಷ್ ಪದಗಳಲ್ಲಿರುವ ಅಕ್ಷರಗಳು, ವಾಕ್ಯಗಳ ರಚನೆ ಮತ್ತು ಇತರ ಭಾಷಾ ಸಂಬಂಧಿ ವಿಚಾರಗಳು ಅತ್ಯಂತ ಗೊಂದಲಮಯವಾಗಿದ್ದು ಅತ್ಯಂತ ಉತ್ತಮವಾದ ಸಂರಚನೆ ಉಳ್ಳ ಕನ್ನಡಕ್ಕೆ ಇಂಗ್ಲಿಷ್ ಭಾಷೆಯನ್ನು ಹೋಲಿಸಲಾಗದು. ಆದ್ದರಿಂದಲೇ ಅತ್ಯಂತ ಅವೈಜ್ಞಾನಿಕ, ಸಂದಿಗ್ಧಮಯ ಹಾಗೂ ಧ್ವನ್ಯಾತ್ಮಕವಲ್ಲದ ಇಂಗ್ಲಿಷ್ ಭಾಷಾಮಾಧ್ಯಮದಲ್ಲಿ ಓದುವ ಮಕ್ಕಳು, ತಾವು ಅಭ್ಯಾಸ ಮಾಡುವ ವಿಷಯಗಳನ್ನು ಅರ್ಥಮಾಡಿಕೊಳ್ಳುವ ಮುನ್ನ, ನೂರಾರು ಪದಗಳ ಅತ್ಯಂತ ಅತಾರ್ಕಿಕ ಹಾಗೂ ಅವೈಜ್ಞಾನಿಕ ಅಕ್ಷರ ಸಂಯೋಜನೆಗಳನ್ನು (ಸ್ಪೆಲಿಂಗುಗಳನ್ನು) ಉರುಹಚ್ಚಲು, ತಮ್ಮ ಬಹಳಷ್ಟು ಸಮಯವನ್ನು ವ್ಯಯಿಸಬೇಕಾಗುತ್ತದೆ. ಹೀಗಾಗಿ ವಿದ್ಯಾರ್ಥಿಗಳು ವಾಕ್ಯಗಳಲ್ಲಿನ ವಿಷಯಗಳನ್ನು ಮನದಟ್ಟು ಮಾಡಿಕೊಳ್ಳುವ ಬದಲು ಅವುಗಳನ್ನು ಗಟ್ಟಿಮಾಡುವಲ್ಲಿ ಮಾತ್ರ ಪರಿಣತರಾಗುತ್ತಾರೆ. ಶಿಶುವಿಹಾರ/ಪ್ರಾಥಮಿಕ ಒಂದನೆಯ ತರಗತಿಯಿಂದ ಇಂಗ್ಲಿಷ್ ಮಾಧ್ಯಮದಲ್ಲೇ ಓದುವ ಮಕ್ಕಳಲ್ಲಿ ಕೆಲವರು ಪರೀಕ್ಷೆಗಳಲ್ಲಿ ಹೆಚ್ಚಿನ ಅಂಕಗಳನ್ನು ಗಳಿಸಬಹುದು. ಆದರೆ ಅವರು ನಿಜವಾದ ಕಲಿಕೆಯಲ್ಲಿ ಕನಿಷ್ಠ ಕೂಲಿಗಳಾಗಿ, ಅವರಲ್ಲಿ ಯಾವುದೇ ರೀತಿಯ ಸರಿಯಾದ ಮಾನಸಿಕ ಹಾಗೂ ಬೌದ್ಧಿಕ ವಿಕಸನವಾಗಿರುವುದಿಲ್ಲ. ಇಂಗ್ಲಿಷ್ ಭಾಷಾಮಾಧ್ಯಮದ ಪ್ರಾಥಮಿಕ ಶಿಕ್ಷಣವು ಅಪವಾದವೆಂಬಂತೆ ಕೆಲವೇ ಕೆಲವು ಮಕ್ಕಳನ್ನು ಬಿಟ್ಟು ಉಳಿದ ಎಲ್ಲ ಮಕ್ಕಳ ಬೌದ್ಧಿಕ ನರಗಳನ್ನು ದುರ್ಬಲಗೊಳಿಸುತ್ತದೆ; ಪ್ರತಿಭಾನ್ವಿತವಾದ ಸೃಷ್ಟಿ ಕಾರ್ಯಕ್ಕೆ ಅವರನ್ನು ಅನರ್ಹರನ್ನಾಗಿ ಮಾಡುತ್ತದೆ.

ಈ ವಿಚಾರಗಳನ್ನು ಮಹಾತ್ಮಾ ಗಾಂಧಿ, ರವೀಂದ್ರನಾಥ ಠ್ಯಾಗೋರ್ ಪ್ರೊ. ಎಂ.ಜಿ.ಕೆ. ಮೆನನ್, ಅಂತಾರಾಷ್ಟ್ರೀಯ ಖ್ಯಾತಿಯ ಅಮೆರಿಕದ ವಿಜ್ಞಾನಿ ಪ್ರೊ. ರಿಕ್ ಬ್ರಿಗ್ಸ್ ಮುಂತಾದ ಮಹಾನ್ ಪುರುಷರು ಅತ್ಯಂತ ವೈಜ್ಞಾನಿಕವಾಗಿಯೂ ತರ್ಕಬದ್ಧ

ವಾಗಿಯೂ ವಿಶ್ಲೇಷಿಸಿ, ಇವು ಸಾರ್ವಕಾಲಿಕವಾಗಿ ಅನ್ವಯವಾಗುವುದೆಂಬುದನ್ನು ತಿಳಿಸಿಕೊಟ್ಟಿದ್ದಾರೆ. ನಿವೃತ್ತ ನ್ಯಾಯಾಧೀಶರಾದ ರಾಮಾಜೋಯಿಸ್, ಸುಪ್ರಸಿದ್ಧ ಬಾಹ್ಯಾಂತರಿಕ್ಷ ವಿಜ್ಞಾನಿ ಯು.ಆರ್.ರಾವ್, ವಿಜ್ಞಾನಿ ಸಿ.ಎನ್.ಆರ್.ರಾವ್ ಅವರುಗಳ ಶಿಕ್ಷಣ ಮಾಧ್ಯಮ (ಪ್ರೌಢಶಾಲಾ ಪೂರ್ತಿ) ಕನ್ನಡ ಹಾಗೂ ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಂ ಅವರ ಶಿಕ್ಷಣ ಮಾಧ್ಯಮ ತಮಿಳು ಆಗಿತ್ತು. ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಮಹಾನ್ ದಿಗ್ಗಜ ಎನ್.ಆರ್.ನಾರಾಯಣಮೂರ್ತಿ ಅವರ ಆರಂಭದ ಶಿಕ್ಷಣ ಮಾಧ್ಯಮ ಕನ್ನಡವೇ ಆಗಿತ್ತು. ಕೆ.ವಿ. ಪುಟ್ಟಪ್ಪ, ಯು.ಆರ್.ಅನಂತಮೂರ್ತಿ, ಚಂದ್ರಶೇಖರ ಕಂಬಾರ ಎಸ್.ಎಲ್.ಭೈರಪ್ಪ, ಜಿ. ವೆಂಕಟಸುಬ್ಬಯ್ಯ, ಎಲ್.ಎಸ್.ಶೇಷಗಿರಿರಾವ್, ದೇ.ಜವರೇಗೌಡ ಚಂದ್ರಶೇಖರ ಪಾಟೀಲ, ಜಿ.ಎಸ್.ಶಿವರುದ್ರಪ್ಪ, ಎಂ.ಚಿದಾನಂದಮೂರ್ತಿ ದೊಡ್ಡರಂಗೇಗೌಡ ಪಾಟೀಲ ಪುಟ್ಟಪ್ಪ, ಜಿ. ನಾರಾಯಣ ಬರಗೂರು ರಾಮಚಂದ್ರಪ್ಪ ಸಿ.ಪಿ.ಕೃಷ್ಣಕುಮಾರ್ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಬಿ.ಕೆ. ಚಂದ್ರಶೇಖರ್ ಎಂ.ಎಂ. ಕಲಬುರ್ಗಿ ರಂಜಾನ್ ದರ್ಗಾ, ಮಮ್ತಾಜ್ ಆಲಿಖಾನ್, ಸ.ರ. ಸುದರ್ಶನ ಪಂಡಿತಾರಾಧ್ಯ, ನಿರಂಜನಾರಾಧ್ಯ, ಸಿ.ಆರ್.ಚಂದ್ರಶೇಖರ್, ಜಿ.ರಾಮಕೃಷ್ಣ, ಪುರುಷೋತ್ತಮ ಮುಂತಾಗಿ ಅನೇಕ ಸುಪ್ರಸಿದ್ಧ ಚಿಂತಕರು ಹಾಗೂ ಶಿಕ್ಷಣ ತಜ್ಞರು ಪ್ರಾಥಮಿಕ ಶಾಲೆಗಳಲ್ಲಿನ ಶಿಕ್ಷಣ ಮಾಧ್ಯಮ ಕನ್ನಡದಲ್ಲೇ ಇರಬೇಕು; ಇದಕ್ಕೆ ಇಂಗ್ಲಿಷ್ ಸರ್ವಥಾ ಯೋಗ್ಯವಲ್ಲ ಎಂದು ಅತ್ಯಂತ ತಾರ್ಕಿಕವಾಗಿ ಹೇಳುತ್ತಿದ್ದಾರೆ. ಅವರು ಯಾರೂ ಇಂಗ್ಲಿಷ್ ವಿರೋಧಿಗಳಲ್ಲ; ಇಂಗ್ಲಿಷ್ ಬೇಡ ಎಂದು ಹೇಳುತ್ತಿಲ್ಲ.

ಈ ಸಂದರ್ಭದಲ್ಲಿ ಶಿಕ್ಷಣದ ಭಾಷೆ ಮತ್ತು ಬುದ್ಧಿವಂತಿಕೆಯ ವಿಷಯವನ್ನು ಕುರಿತ ಒಂದು ಮುಖ್ಯವಾದ ವಿಷಯವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಪರಕೀಯರ ಆಳ್ವಿಕೆಯಲ್ಲಿದ್ದ ಭಾರತೀಯರ ಬುದ್ಧಿವಂತಿಕೆ, ಅದ್ಭುತ ಆಲೋಚನಾ ಪ್ರವೃತ್ತಿ ಇವುಗಳನ್ನು ಸುಮಾರು ನೂರೈವತ್ತು ವರ್ಷಗಳ ಹಿಂದೆ ಗಮನಿಸಿದ ಲಾರ್ಡ್ ಮೆಕಾಲೆ ಭಾರತದಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸವನ್ನು ಜಾರಿಗೆ ತಂದು. ಜನರ ಬುದ್ಧಿವಂತಿಕೆಯನ್ನು ಕಡಿಮೆಗೊಳಿಸಲು ಯತ್ನಿಸಿದ್ದು ಎಲ್ಲರಿಗೂ ತಿಳಿದಿರುವ ವಿಷಯ.

೨-೨-೧೮೩೫ ರಂದು ಬ್ರಿಟಿಷ್ ಪಾರ್ಲಿಮೆಂಟ್‌ನಲ್ಲಿ ಲಾರ್ಡ್ ಮೆಕಾಲೆ ಮಾಡಿದ ಭಾಷಣ

"ನಾನು ಭಾರತದ ಉದ್ದಗಲಗಳಲ್ಲಿ ಪ್ರವಾಸ ಮಾಡಿದ್ದೇನೆ. ಯಾವ ಜಾಗದಲ್ಲೂ ನಾನು ಒಬ್ಬನೇ ಒಬ್ಬ ಭಿಕ್ಷುಕನನ್ನಾಗಲೀ, ಕಳ್ಳನನ್ನಾಗಲೀ ನೋಡಲಿಲ್ಲ. ಅತ್ಯುನ್ನತ ಮಟ್ಟದ ನೈತಿಕತೆಯ ಐಶ್ವರ್ಯವನ್ನೂ, ಅತಿ ಹೆಚ್ಚಿನ ಬೌದ್ಧಿಕ ಸಂಪತ್ತನ್ನೂ ಅವರು ಹೊಂದಿದ್ದಾರೆ. ಈ ದೇಶದ ಬೆನ್ನೆಲುಬಾದ ಅತ್ಯಮೂಲ್ಯ ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಪರಂಪರೆಯನ್ನು ನಾವು ಮುರಿಯದಿದ್ದರೆ, ಈ ದೇಶವನ್ನು ನಾವು ನಿಜವಾಗಿ ಗೆಲ್ಲಲು ಸಾಧ್ಯವೇ ಇಲ್ಲ. ಆದ್ದರಿಂದ ನಾವು ಈ ದೇಶದ ಪ್ರಾಚೀನ ವಿದ್ಯಾಭ್ಯಾಸ ಪದ್ಧತಿಯನ್ನು ನಮ್ಮ ಪದ್ಧತಿಗೆ ಬದಲಿಸಬೇಕು. ಭಾರತೀಯರು ಇಂಗ್ಲಿಷ್ ಭಾಷೆ, ವಿದೇಶಿ ವಿಚಾರಗಳು ಮುಂತಾದವೆಲ್ಲಾ ಚೆನ್ನಾಗಿವೆ ಮತ್ತು ತಮಗಿಂತಾ ಉತ್ತಮ ಎಂದುಕೊಂಡರೆ, ಆಗ ಅವರು ತಮ್ಮತನವನ್ನು

ತಮ್ಮ ಸಂಸ್ಕೃತಿಯನ್ನು ಮರೆಯುತ್ತಾರೆ. ಇದರಿಂದಾಗಿ, ನಾವು ಅವರೇನಾಗಬೇಕು ಎಂದು ಬಯಸುತ್ತೇವೆ, ಹಾಗೆಯೇ ಆಗುತ್ತಾರೆ ಮತ್ತು ಭಾರತವು ನಿಜವಾಗಿ ಪರಕೀಯ ಆಳ್ವಿಕೆಯ ದೇಶವಾಗುತ್ತದೆ".

ಆದರೆ ಆಗಿನಿಂದ, ಈಗ್ಗೆ ಸುಮಾರು ಇಪ್ಪತ್ತು ವರ್ಷಗಳ ಹಿಂದಿನವರೆಗೆ ಭಾರತಾದ್ಯಂತ ಪ್ರೌಢಶಾಲೆಯವರೆಗೂ, ಭಾರತೀಯ ಭಾಷೆಗಳೇ ವಿದ್ಯಾಭ್ಯಾಸ ಮಾಧ್ಯಮಭಾಷೆ ಗಳಾಗಿದ್ದುದರಿಂದ, ಭಾರತೀಯರ ಬುದ್ಧಿವಂತಿಕೆಗೆ ಅಪಾಯವೊಡ್ಡುವ ಪರಕೀಯರ ದುರುದ್ದೇಶಗಳು ಸಫಲವಾಗಿರಲಿಲ್ಲ. ದುರದೃಷ್ಟವಶಾತ್, ಇತ್ತೀಚಿನ ವರ್ಷಗಳಲ್ಲಿ ಶಿಕ್ಷಣದ ಭಾಷೆ ಮತ್ತು ಬುದ್ಧಿವಂತಿಕೆಯನ್ನು ಕುರಿತು ವೈಜ್ಞಾನಿಕವಾಗಿ ಆಲೋಚಿಸದೆ, ಭಾರತದ ಮೂಲೆ ಮೂಲೆಗಳಲ್ಲಿ ವಿದ್ಯಾಸಂಸ್ಥೆಗಳನ್ನು ನಡೆಸುವವರು, ಪೂರ್ವ ಪ್ರಾಥಮಿಕ ಶಾಲೆ ಗಳಿಂದಲೂ ಮಕ್ಕಳು ಅತ್ಯಂತ ವೈಜ್ಞಾನಿಕವಾದ ತಮ್ಮ ಮಾತೃಭಾಷೆ/ಭಾರತೀಯ ಭಾಷೆಗಳನ್ನು ದೂರೀಕರಿಸುವ ಕಾರ್ಯಕ್ರಮಗಳನ್ನು ಕೈಗೊಂಡು, ತನ್ಮೂಲಕ ಭಾವೀ ಪ್ರಜೆ ಗಳಾಗುವ ಮಕ್ಕಳ ಬುದ್ಧಿವಂತಿಕೆಗೆ, ತನ್ಮೂಲಕ ಭಾರತದ ಹಿತಾಸಕ್ತಿಗಳಿಗೆ ಅಪಾಯಗಳನ್ನು ಒಡ್ಡುತ್ತಿದ್ದಾರೆ.

ವಿಜ್ಞಾನ ಮತ್ತು ತಂತ್ರಜ್ಞಾನದ ಇತ್ತೀಚಿನ ಅಗತ್ಯಗಳಿಗೆ ಅನುಸಾರವಾಗಿ ಸೂಕ್ತ ಪಠ್ಯ ಹಾಗೂ ಶಿಕ್ಷಣ ' ಕ್ರಮಗಳಲ್ಲಿ ಸುಧಾರಣೆಗಳನ್ನು ಮಾಡುವುದು ನಮ್ಮ ಉದ್ದೇಶ ವಾಗಿರಬೇಕೇ ಹೊರತು, ಮೆಕಾಲೆಯ ಕನಸುಗಳನ್ನು ಸಾಕಾರಗೊಳಿಸುವುದಲ್ಲ.

ಆದ್ದರಿಂದ ಎಲ್ಲ ವೈಜ್ಞಾನಿಕ ಹಾಗೂ ವ್ಯಾವಹಾರಿಕ ಅಂಶಗಳ ಪ್ರಕಾರ ಕರ್ನಾಟಕ ದಲ್ಲಿ ಮಕ್ಕಳಿಗೆ ಕನಿಷ್ಠ ೧೨ ವರ್ಷಗಳಾಗುವವರೆಗೆ, ಅಂದರೆ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಕನ್ನಡ ಭಾಷೆ ಮಾತ್ರ ಯೋಗ್ಯವಾದುದು. ಪ್ರಾಥಮಿಕ ಶಿಕ್ಷಣಕ್ಕಂತೂ ಇಂಗ್ಲಿಷ್ ಸರ್ವಥಾ ಯೋಗ್ಯವಲ್ಲ. ಇದು ಇಂಗ್ಲಿಷ್ ಮಾತೃಭಾಷೆಯ ಮಕ್ಕಳಿಗೂ ಅನ್ವಯಿಸುತ್ತದೆ. ಇಂಗ್ಲಿಷ್ ಮಾತೃಭಾಷೆಯಾಗಿದ್ದರೂ, ಪರದೇಶದ ಬಹುಸಂಖ್ಯೆಯ ಮಕ್ಕಳು, ವಿಜ್ಞಾನಿಗಳು ಇಂಜಿನಿಯರುಗಳು ಮುಂತಾದವರು ನಿಜವಾದ ಬುದ್ಧಿವಂತಿಕೆಯಲ್ಲಿ ನಮ್ಮವರಿಗಿಂತ ಹಿಂದುಳಿದಿದ್ದಾರೆ, ಎಂಬುದು ಎಲ್ಲರಿಗೂ ತಿಳಿದಿರುವ ವಾಸ್ತವ ಸಂಗತಿ. ಇದಕ್ಕೆ ಗೊಂದಲಮಯ ಇಂಗ್ಲಿಷ್ ಭಾಷೆಯೇ ಕಾರಣ ಎಂದು ವಿಶ್ವಾದ್ಯಂತ ಎಲ್ಲ ಪ್ರಾಜ್ಞರೂ ಹೇಳುತ್ತಾರೆ. ಅಮೆರಿಕಾದವರ ಬುದ್ಧಿವಂತಿಕೆಯ ಮಟ್ಟ (ಐ.ಕ್ಯೂ.) ಭಾರತೀಯರಿಗಿಂತಲೂ ಕಡಿಮೆ ಎಂಬುದನ್ನು ಇತ್ತೀಚೆಗೆ ಅಮೆರಿಕಾದ ಅಧ್ಯಕ್ಷ ಒಬಾಮಾ ಅವರೂ ಹೇಳಿದ್ದಾರೆ. ಇಂಗ್ಲಿಷ್ ಭಾಷೆಯ ಗೊಂದಲಮಯ ವಿಚಾರಗಳನ್ನೂ, ಅವುಗಳಿಂದ ಬ್ರಿಟನ್, ಅಮೆರಿಕ ಮುಂತಾದ ದೇಶಗಳಲ್ಲಿನ ಮಕ್ಕಳೂ ಸಹ ಗೊಂದಲಕ್ಕೆ ಒಳಗಾಗುತ್ತಿದ್ದು, ಅಲ್ಲಿನ ಮಕ್ಕಳ ಬೌದ್ಧಿಕ ಬೆಳವಣಿಗೆಗೆ ಅಪಾಯ ಉಂಟಾಗುತ್ತಿರುವುದರ ಬಗ್ಗೆ ತಿಳಿಸಿಕೊಡುತ್ತಿರುವುದನ್ನು ಆ ದೇಶದವರದೇ ಆದ ಅಂತರ್ಜಾಲ ತಾಣಗಳಲ್ಲಿ ನೋಡಬಹುದು. ಈ ದೃಷ್ಟಿಯಿಂದ ಶಿಕ್ಷಣದ ಭಾಷೆ ಮತ್ತು ಬುದ್ಧಿವಂತಿಕೆಯ ವಿಚಾರಕ್ಕೆ ಸಂಬಂಧಿಸಿದ ನೈಜ, ತಾತ್ವಿಕ ಹಾಗೂ ವೈಜ್ಞಾನಿಕ ಅಂಶಗಳ ಬಗ್ಗೆ ಎಲ್ಲರೂ ಯೋಚಿಸಬೇಕಾಗಿದೆ.

ಒಟ್ಟಿನಲ್ಲಿ ಕರ್ನಾಟಕದಲ್ಲಂತೂ ಕನಿಷ್ಠ ಪ್ರಾಥಮಿಕ ಶಿಕ್ಷಣವು ಕನ್ನಡದಲ್ಲೇ ಇರಬೇಕು. ಅದು ಬುದ್ಧಿಶಕ್ತಿಯ ಇತರ ಚಟುವಟಿಕೆಗಳಿಗೆ ಅಡ್ಡಿಯಾಗುವುದಿಲ್ಲ; ಮಕ್ಕಳು ಕೇವಲ ಉರುಹೊಡೆಯುವ ಯಂತ್ರಗಳಾಗುವುದಿಲ್ಲ; ವಿಷಯಗ್ರಹಣೆಯ ಪ್ರವೃತ್ತಿ ಅವರಲ್ಲಿ ಚೆನ್ನಾಗಿ ಬೆಳೆಯುತ್ತದೆ. ಅವರ ಬೌದ್ಧಿಕ ಬೆಳವಣಿಗೆ, ತಾರ್ಕಿಕಶಕ್ತಿ ಮುಂತಾದವುಗಳು ಹೆಚ್ಚಾಗಿ ಮುಂದೆ ಶಿಕ್ಷಣದಲ್ಲಿ ವಿಜ್ಞಾನ ಸೇರಿದಂತೆ ಯಾವುದೇ ವಿಷಯಗಳನ್ನಾದರೂ ಸರಿಯಾಗಿ ಅರ್ಥೈಸಿಕೊಳ್ಳುವ ಹಾಗೂ ಅವುಗಳ ಬಗ್ಗೆ ಚಿಂತಿಸುವ ಬುದ್ಧಿ ಮತ್ತು ಪ್ರವೃತ್ತಿಗಳು ಹೆಚ್ಚಾಗುತ್ತವೆ. ಕನಿಷ್ಠ ೫ನೆಯ ತರಗತಿಯಿಂದ ಇಂಗ್ಲಿಷ್ ಅನ್ನು ಒಂದು ಭಾಷೆಯಾಗಿ ಹೇಳಿಕೊಡಬಹುದು. ಈ ವೈಜ್ಞಾನಿಕ ವಿಧಾನಗಳನ್ನು ಅನುಸರಿಸಿದರೆ ಕರ್ನಾಟಕದ ಮುಂದಿನ ಪೀಳಿಗೆಯವರ ಬುದ್ಧಿಶಕ್ತಿಯ ಮಟ್ಟ ಖಂಡಿತವಾಗಿಯೂ ಹೆಚ್ಚಾಗುತ್ತದೆ.

ಮುಂದುವರೆದು, ಭಾರತಾದ್ಯಂತ/ಕರ್ನಾಟಕಾದ್ಯಂತ ಎಲ್ಲಾ ಸಾಮಾಜಿಕ, ಸಾಂಸ್ಕೃತಿಕ ಧಾರ್ಮಿಕ ಹಾಗೂ ಲೌಕಿಕ ವ್ಯವಹಾರಗಳನ್ನೂ ಇಂಗ್ಲಿಷ್ ಭಾಷೆಯಲ್ಲೇ ಮಾಡಲು ಸಾಧ್ಯವೇ ಎಂದು ನಾವು ಗಂಭೀರವಾಗಿ ಯೋಚಿಸಬೇಕಾಗಿದೆ. ಎಲ್ಲ ಕನ್ನಡಿಗರೂ ತಮ್ಮ ಎಲ್ಲ ವ್ಯವಹಾರಗಳಲ್ಲೂ, ಇಂಗ್ಲಿಷ್ ಭಾಷೆಯನ್ನೇ ಬಳಸುವುದಾದರೆ ಆಗ ಕರ್ನಾಟಕದ ಸ್ವರೂಪವೇನು?

ಭಾರತದ ಮಹತ್ತಮವೂ ಮೌಲ್ಯಯುತವೂ ಆದ ಬೌದ್ಧಿಕತೆ, ಪರಂಪರೆ ಆಲೋಚನೆಗಳು, ಜೀವನ ವಿಧಾನಗಳು, ಹಾಗೂ ಜೀವನ ಸಂಹಿತೆಗಳು, ಜೀವನ ಮೌಲ್ಯಗಳು, ಸಾಹಿತ್ಯ, ಕಲೆ ಮುಂತಾದ ಎಲ್ಲ ಬಗೆಯ ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿನ ಪಾರಂಪರಿಕ ವಿಚಾರಗಳು ಕನ್ನಡ ಭಾಷೆಯಲ್ಲಿ ಸಮರ್ಥ ವಾಗಿಯೂ, ಅರ್ಥಪೂರ್ಣವಾಗಿಯೂ ಪ್ರತಿಪಾದಿತವಾಗಿವೆ. ಇಂಗ್ಲಿಷ್ ಭಾಷೆಯಲ್ಲಿ ಇವುಗಳನ್ನು ಅಷ್ಟೇ ಅರ್ಥಪೂರ್ಣವಾಗಿಯೂ, ಸರಳವಾಗಿಯೂ, ಪರಿಣಾಮಕಾರಿ ಯಾಗಿಯೂ ಪ್ರತಿಪಾದಿಸಲು ಸಾಧ್ಯವೇ ಇಲ್ಲ. ಆದ್ದರಿಂದ ಕರ್ನಾಟಕದಲ್ಲೆಲ್ಲಾ ಎಲ್ಲ ವ್ಯವಹಾರಗಳಲ್ಲೂ ಇಂಗ್ಲಿಷ್ ಭಾಷೆ ಮಾತ್ರ ವಿಜೃಂಭಿಸುವಂತಾದರೆ, ಈಗ ಅತ್ಯಂತ ಪರಿಣಾಮಕಾರಿಯಾಗಿ ಬಳಕೆ/ಪ್ರಸಾರ ಆಗುತ್ತಿರುವ ಮೇಲ್ಕಂಡ ಕ್ಷೇತ್ರಗಳಿಗೆ ಸಂಬಂಧಿಸಿದ ಮಾಹಿತಿಗಳ/ಕ್ರಿಯೆಗಳ ಭವಿಷ್ಯ ವಿನಾಶದತ್ತ ಸಾಗುತ್ತದೆ. ಕನ್ನಡಭಾಷೆ, ಕನ್ನಡನಾಡಿನ ಸಂಸ್ಕೃತಿ, ಸಾಹಿತ್ಯ, ಕಲೆಗಳು ಮುಂತಾದವುಗಳೆಲ್ಲಾ ನಾಶವಾಗಿಬಿಡುತ್ತವೆ. ಭಾರತೀಯ ಸಮಾಜದ ಕೂಡಿಬಾಳುವ ಆಚರಣೆಗಳು, ಧರ್ಮ, ಸಂಸ್ಕೃತಿ ಎಲ್ಲವೂ ಅವನತಿಯ ದಾರಿ ಹಿಡಿಯುತ್ತವೆ. ಆದ್ದರಿಂದ ಕರ್ನಾಟಕಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಗಂಭೀರ ನಡೆಗಳು ಅತ್ಯಂತ ತುರ್ತಾಗಿ ಅಗತ್ಯವಾಗಿವೆ.

- ಬಹುಮುಖ್ಯವಾಗಿ ಜನತೆಗೆ ಭಾರತೀಯ ಧರ್ಮ, ಸಂಸ್ಕೃತಿ ಇವುಗಳ ಮಹತ್ವದ ತಿಳಿವನ್ನು ನೀಡುತ್ತಾ, ಭಾರತೀಯರ ನಿಜವಾದ ಸೌಖ್ಯಮಯ ಜೀವನಕ್ಕೆ ಅತ್ಯಂತ ಮೌಲಿಕವಾದ, ದಾರಿತೋರುತ್ತಿರುವ, ಅವುಗಳ ಉಳಿವಿಗೆ ಶ್ರಮಿಸುತ್ತಿರುವ

ಕರ್ನಾಟಕದಲ್ಲಿರುವ, ಮಹಾನ್ ಧಾರ್ಮಿಕವರೇಣ್ಯರು ಹಾಗೂ ಧಾರ್ಮಿಕ ಸಂಸ್ಥೆಗಳು, ತಾವು ಸ್ಥಾಪಿಸಿ ನಡೆಸುತ್ತಿರುವ, ತಮ್ಮ ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿನ ಪ್ರಾಥಮಿಕ ಶಿಕ್ಷಣ ವಿಭಾಗಗಳು ಪೂರ್ಣವಾಗಿ ಕನ್ನಡ ಮಾಧ್ಯಮದಲ್ಲೇ ಇರುವಂತೆ ಸೂಕ್ತ ನಿರ್ಧಾರಗಳನ್ನು ಕೈಗೊಳ್ಳುವುದು ಮಹತ್ತಮ ಕಾರ್ಯವಾಗುತ್ತದೆ.

- ಇಂಗ್ಲಿಷ್, ಉರ್ದು ಮುಂತಾದ ಇತರ ವಿವಿಧ ಮಾತೃಭಾಷಾ ಸಮುದಾಯ ದವರೂ ಸಹ ತಮ್ಮ ಶಿಕ್ಷಣ ಸಂಸ್ಥೆಗಳನ್ನು ಕನ್ನಡಭಾಷಾ ಮಾಧ್ಯಮ ಶಾಲೆಗಳನ್ನಾಗಿ ಪರಿವರ್ತಿಸುವುದರಿಂದ, ಅವರ ಮುಂದಿನ ಪೀಳಿಗೆಯವರೂ ಸಹ ಬೌದ್ಧಿಕವಾಗಿ ಉನ್ನತ ಮಟ್ಟವನ್ನು ತಲುಪಲು ಸಾಧ್ಯವಾಗುತ್ತದೆ.
- ಒಟ್ಟಿನಲ್ಲಿ ಕರ್ನಾಟಕಾದ್ಯಂತ ಖಾಸಗಿ ಶಾಲೆಗಳನ್ನು ನಡೆಸುವವರೆಲ್ಲರೂ ಭಾಷೆ ಜಾತಿ, ಮತ ವ್ಯತ್ಯಾಸಗಳ ಪರಿಗಣನೆ ಇಲ್ಲದೆ, ಈ ಬಗ್ಗೆ ನ್ಯಾಯಯುತವಾಗಿ ಮತ್ತು ವೈಜ್ಞಾನಿಕವಾಗಿ ಚಿಂತಿಸಿ (ಪೂರ್ಣ ವಿಷಯಾಧಾರಿತವಾಗಿ ಮತ್ತು ಯಾವುದೇ ರೀತಿಯ ಪೂರ್ವಾಗ್ರಹಗಳಿಲ್ಲದೆ), ತಮ್ಮ ಪ್ರಾಥಮಿಕ ಶಾಲೆಗಳನ್ನು/ಪ್ರೌಢಶಾಲೆಗಳನ್ನು ಕೂಡಲೇ ಕನ್ನಡ ಮಾಧ್ಯಮ ಶಾಲೆಗಳನ್ನಾಗಿ ಬದಲಿಸಲೇಬೇಕು. ಖಾಸಗಿ ಶಾಲೆಗಳವರು ಈ ವಿಧಾನವನ್ನು ಅನುಸರಿಸಿದರೆ ಮಾತ್ರ, ನಮ್ಮ ಮುಂದಿನ ಪೀಳಿಗೆಯವರಿಗೆ ಕರ್ನಾಟಕಕ್ಕೆ, ಕನ್ನಡಿಗರಿಗೆ, ನಮ್ಮ ದೇಶಕ್ಕೆ ಅವರ ಕೊಡುಗೆ ಬಹು ಅಮೂಲ್ಯವಾಗಿರುತ್ತದೆ. ಇತ್ತೀಚೆಗೆ ಕೇವಲ ಇಂಗ್ಲಿಷ್ ಪರವಾಗಿಯೇ ಯೋಚಿಸು ತ್ತಿರುವ ಪೋಷಕರ, ಶಾಲಾ ವಿದ್ಯಾರ್ಥಿಗಳ ಹಾಗೂ ಜನತೆಯ ಭಯ, ಅನುಮಾನ ತಪ್ಪು ಅಭಿಪ್ರಾಯಗಳು ಇಲ್ಲವಾಗುತ್ತವೆ.
- ಇದಕ್ಕಾಗಿ ಸಾಹಿತಿಗಳು, ವಿಜ್ಞಾನಿಗಳು, ಬೌದ್ಧಿಕ ಮಾನ್ಯರು/ರಾಜಕೀಯ ಮಾನ್ಯರು ಕನ್ನಡ ಕುರಿತ ಚಿಂತಕರು, ಕನ್ನಡ ಹೋರಾಟಗಾರರು ಮುಂತಾದವರೆಲ್ಲರೂ ಹಮ್ಮಿಕೊಳ್ಳಬೇಕಾದ, ತಮಗೆ ಸೂಕ್ತವೆನಿಸಿದ ಕಾರ್ಯಕ್ರಮಗಳು:
  - ಕನ್ನಡ ಮಾಧ್ಯಮ ಶಾಲೆಗಳನ್ನು ಸಂಪರ್ಕಿಸಿ ಆ ಶಾಲೆಗಳನ್ನು ನಡೆಸುವವರಿಗೆ ಅಲ್ಲಿನ ಅಧ್ಯಾಪಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಈ ವಿಷಯಗಳನ್ನು ಅರ್ಥ ಮಾಡಿಕೊಡುವುದು, ತನ್ಮೂಲಕ ಆತ್ಮಸ್ಥೈರ್ಯವನ್ನು ತುಂಬುವುದು.
  - ಕನ್ನಡ ಮಾಧ್ಯಮ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುವ ಮಕ್ಕಳ ಪೋಷಕರ ಸಭೆಗಳಲ್ಲಿ ಪೋಷಕರಿಗೆ ಕನ್ನಡ ಮಾಧ್ಯಮದ ಅಗತ್ಯ, ಉಪಯುಕ್ತತೆ ಇವುಗಳನ್ನು ಮನದಟ್ಟು ಮಾಡಿಕೊಡುವುದು.
  - ಇಂಗ್ಲಿಷ್ ಶಾಲೆಗಳು, ಕನ್ನಡ ಮಾಧ್ಯಮ ಶಾಲೆಗಳಾಗುವಂತೆ ಆ ಶಾಲೆಗಳನ್ನು ನಡೆಸುವವರ ಮನಃಪರಿವರ್ತನೆ ಮಾಡುವುದು; ಇದಕ್ಕೆ ಒಪ್ಪದ ಶಾಲೆಗಳ ವಿರುದ್ಧ ಪ್ರತಿಭಟನೆ, ಚಳವಳಿ, ಪ್ರಚಾರ ಮಾಡುವುದು.
- ಕನ್ನಡ ಮಾಧ್ಯಮ ಶಾಲೆಗಳನ್ನು ನಡೆಸುತ್ತಿರುವವರೆಲ್ಲರೂ ಸಂಘಟಿತರಾಗಿ, ತಮ್ಮ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುವ ಮಕ್ಕಳು ಹೆಚ್ಚು ಬುದ್ಧಿವಂತಿಕೆಯ ಲಕ್ಷಣಗಳನ್ನು ಬೆಳೆಸಿಕೊಂಡಿದ್ದಾರೆ, ಎಂಬುದನ್ನು ಜನತೆಗೆ ತಿಳಿಸಿಕೊಡುವ ಅಮೂಲ್ಯ


ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಎಲ್ಲ ಕನ್ನಡ ಸಂಘಸಂಸ್ಥೆಗಳೂ ಈ ಬಗ್ಗೆ ಅವರಿಗೆ ಸೂಕ್ತ ಸಲಹೆ, ಸಹಕಾರ, ಪ್ರೋತ್ಸಾಹಗಳನ್ನು ನೀಡಬೇಕು.

- ಶಿಕ್ಷಣದ ಬಗ್ಗೆ ಸರ್ಕಾರದ ಮಟ್ಟದಲ್ಲಿ ನೀತಿ ನಿರ್ಧಾರಗಳನ್ನು ತೆಗೆದುಕೊಳ್ಳುವವರು ಶಿಕ್ಷಣ ಇಲಾಖೆಯ ಎಲ್ಲ ಅಧಿಕಾರಿಗಳು ಹಾಗೂ ಶಾಲೆಗಳನ್ನು ನಡೆಸುವವರು, ಈ ವಿಷಯಗಳನ್ನು ಗಮನಕ್ಕೆ ತೆಗೆದುಕೊಂಡು, ಕರ್ನಾಟಕ ರಾಜ್ಯಾದ್ಯಂತ ಎಲ್ಲ ಸರ್ಕಾರಿ ಖಾಸಗಿ(ಅನುದಾನಿತ/ಅನುದಾನರಹಿತ/ಸ್ವತಂತ್ರ) ಶಾಲೆಗಳಲ್ಲೂ ಕನಿಷ್ಠ ಪ್ರೌಢಶಾಲೆಯ ವರೆಗೆ ಶಿಕ್ಷಣವು ಕನ್ನಡ ಮಾಧ್ಯಮದಲ್ಲೇ ಇರುವಂತೆ, ಅಗತ್ಯವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು.
- ಒಟ್ಟಿನಲ್ಲಿ ಕೆಳಕಂಡ ವಿಚಾರಗಳನ್ನು ತಿಳಿಸಿಕೊಡಲು ಹಾಗೂ ಯಾರಿಗೇ ಆಗಲೀ ಈ ಬಗ್ಗೆ ಇರಬಹುದಾದ ಅನುಮಾನಗಳನ್ನು ನಿವಾರಿಸಲು ಎಲ್ಲರೂ ಸೂಕ್ತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.
  - ಕನಿಷ್ಠ ಪ್ರಾಥಮಿಕ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮದ ಶಿಕ್ಷಣದ ಅಗತ್ಯವಿಲ್ಲ; ಅದು ಬುದ್ಧಿಯ ಬೆಳವಣಿಗೆಗೆ ಮಾರಕ.
  - ಇಂದಿನ ಜೀವನಕ್ಕೆ ಅಗತ್ಯ ಉಪಕರಣವಾದ ಇಂಗ್ಲಿಷ್ ಭಾಷೆಯನ್ನು, ಐದನೆಯ ತರಗತಿಯ ಅನಂತರ ಚೆನ್ನಾಗಿಯೇ ಕಲಿಸಿಕೊಡಬಹುದು. ಆಗ ಮಕ್ಕಳು ಇಂಗ್ಲಿಷನ್ನು ಚೆನ್ನಾಗಿಯೇ ಕಲಿಯುತ್ತಾರೆ.
  - ಪ್ರಾಥಮಿಕ ಶಿಕ್ಷಣದ ನಂತರ ಇಂಗ್ಲಿಷ್/ಇಂಗ್ಲಿಷ್ ಮಾಧ್ಯಮದಲ್ಲಿನ ಕಲಿಕೆಯು ಮಕ್ಕಳ ಬುದ್ಧಿವಂತಿಕೆಗೆ ಅಪಾಯ ಉಂಟುಮಾಡುವುದಿಲ್ಲ; ಬದಲಿಗೆ ಆ ಮಕ್ಕಳು ಹೆಚ್ಚು ಬುದ್ಧಿವಂತರಾಗಿರುತ್ತಾರೆ.

ಮುಖ್ಯವಾಗಿ ಕರ್ನಾಟಕ ಸರ್ಕಾರ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಸಾಹಿತ್ಯ ಪರಿಷತ್ತು ಮುಂತಾದವುಗಳಿಂದ ಯಾವುದೇ ರೀತಿಯ ಪ್ರತಿಫಲಾಪೇಕ್ಷೆಯನ್ನೂ ನಿರೀಕ್ಷಿಸದ ನಮ್ಮೆಲ್ಲರ ಅತ್ಯಂತ ಪ್ರೀತಿ, ವಿಶ್ವಾಸಗಳಿಗೆ ಪಾತ್ರರಾದ ಆತ್ಮೀಯ ರಾ.ನಂ.ಚಂದ್ರಶೇಖರ ಮುಂತಾದ ಉತ್ಸಾಹಿ ಕನ್ನಡಿಗರಿಂದ ಸ್ಥಾಪಿತವಾಗಿ ಅಮೂಲ್ಯ ಚಟುವಟಿಕೆಗಳನ್ನು ನಡೆಸುತ್ತಾ ಕನ್ನಡ-ಕನ್ನಡಿಗ-ಕರ್ನಾಟಕದ ಉತ್ತಮ ಬೆಳವಣಿಗೆ ಹಾಗೂ ಬಾಳ್ವಿಕೆಗೆ ಶ್ರಮಿಸುತ್ತಿರುವ ಕನ್ನಡ ಗೆಳೆಯರ ಬಳಗ ಮುಂತಾದ ಎಲ್ಲ ಕನ್ನಡಪರ ಸಂಘಸಂಸ್ಥೆಗಳಲ್ಲಿನ ಪ್ರಾಜ್ಞರೂ, ಕಾರ್ಯಕರ್ತರೂ ತೀವ್ರವಾಗಿ ಪ್ರಯತ್ನಿಸಬೇಕು.

ಕರ್ನಾಟಕಕ್ಕೆ ಬರುವ ಎಲ್ಲ ಭಾರತೀಯ ಭಾಷಾ ಬಾಂಧವರು, ನಾವೆಲ್ಲರೂ ಒಂದೇ ದೇಶದವರು, ನಮ್ಮ ಭಾಷೆಗಳೆಲ್ಲವೂ ಸೋದರ ಭಾಷೆಗಳು, ನಾವು ಯಾವ ರಾಜ್ಯದಲ್ಲಿರುತ್ತೇವೆಯೋ ಆ ರಾಜ್ಯದ ಭಾಷೆಯನ್ನು ಕಲಿಯಬೇಕು, ಇದರಿಂದ ನಮ್ಮ ಜ್ಞಾನದ ಬೆಳವಣಿಗೆಯಾಗುತ್ತದೆ ಮತ್ತು ನಮಗೆ ಒಳ್ಳೆಯದು ಎಂಬ ಅತ್ಯಂತ ವಾಸ್ತವ ಭಾವನೆಗಳನ್ನು ಬೆಳೆಸಿಕೊಂಡು, ಕನ್ನಡವನ್ನು ಕಲಿಯಲೇಬೇಕಾದ ವಾತಾರಣವನ್ನು ನಾವು ಮೂಡಿಸಬೇಕು. ಭಾರತೀಯ ಭಾಷೆಗಳಲ್ಲಿ ಪೂರ್ಣ ಭಾಷಾಸಾಮರಸ್ಯ


ಇರುವುದರಿಂದ ವ್ಯವಹಾರದಲ್ಲಾಗಲೀ, ಶಿಕ್ಷಣದಲ್ಲಾಗಲೀ ಕರ್ನಾಟಕಕ್ಕೆ ಬರುವ ಇತರ ಭಾರತೀಯ ಭಾಷೆಯವರಿಗೆ, ಕನ್ನಡದ ವಾತಾವರಣ ಯಾವ ತೊಂದರೆಯನ್ನೂ ಉಂಟು ಮಾಡುವುದಿಲ್ಲ. ಅವರು ಅತ್ಯಲ್ಪ ಕಾಲದಲ್ಲಿ ಕನ್ನಡವನ್ನು ತಮ್ಮ ಮಾತೃಭಾಷೆಯಷ್ಟೇ ಸಲೀಸಾಗಿ ಕಲಿಯಬಹುದು. ಹೀಗೆ ಕರ್ನಾಟಕದಲ್ಲಿ ಎಲ್ಲೆಲ್ಲೂ ಕನ್ನಡವೇ ಶೋಭಿಸುವಂತಾದರೆ ಮಾತ್ರ, ಎಲ್ಲ ಕ್ಷೇತ್ರಗಳಲ್ಲೂ ಕನ್ನಡ-ಕನ್ನಡಿಗ-ಕರ್ನಾಟಕದ (ತನ್ಮೂಲಕ ಭಾರತದ), ಏಕತೆ, ಉತ್ತಮ ಅಭಿವೃದ್ಧಿ, ಬೌದ್ಧಿಕ ಶಕ್ತಿ ಮುಂತಾದವುಗಳಲ್ಲಿ ಮಹತ್ತರ ಬೆಳವಣಿಗೆಯನ್ನು ಸಾಧಿಸಬಹುದು.



ಕನ್ನಡ... ಕನ್ನಡ... ಕನ್ನಡ

■ **ಡಾ. ಕೆ.ಆರ್. ಸಂಧ್ಯಾ ರೆಡ್ಡಿ**

ನಾನು ಕೆಲಸ ಮಾಡುತ್ತಿದ್ದ ಸಂಸ್ಥೆಯಲ್ಲಿ ಕನ್ನಡವೆಂದರೆ ಕುಣಿದಾಡುವುದೆನ್ನೆದೆ ಎನ್ನುವಂಥ ಮಂದಿ ಶೇ. ೧೦ ಇದ್ದರೆ ಕನ್ನಡವೆಂದರೆ ಮುಖ ಸಿಂಡರಿಸುವ ಮಂದಿ ಶೇ. ೯೦. ಇವರಿಗೆ ಇಂಗ್ಲಿಷ್ ಬಗ್ಗೆ ಕುರುಡು ಅಭಿಮಾನ. ಇಂಗ್ಲಿಷ್‌ನಲ್ಲಿ ಸಹಿ ಮಾಡುವುದೊಂದನ್ನು ಬಿಟ್ಟು ಬೇರೆ ಒಂದು ಅಕ್ಷರವೂ ಇಂಗ್ಲಿಷ್ ಗೊತ್ತಿರದ ಮಂದಿಯಿಂದ ಹಿಡಿದು, ವೃತ್ತಿ ಜೀವನದಾದ್ಯಂತವೂ ಇಂಗ್ಲಿಷ್‌ನಲ್ಲಿ ವ್ಯವಹಾರ ಮಾಡುತ್ತಿದ್ದರೂ, ಅದರಲ್ಲಿ ನೂರಾರು ತಪ್ಪುಗಳನ್ನು ಮಾಡುತ್ತಿದ್ದ ಉನ್ನತ ಅಧಿಕಾರಿಗಳೆಲ್ಲರೂ ಈ ಗುಂಪಿಗೇ ಸೇರಿದವರು. ಮೊನ್ನೆ ಸಿಟಿಬಸ್‌ನಲ್ಲಿ ಬರುತ್ತಿದ್ದಾಗ ಹಳೆಯ ಸಹೋದ್ಯೋಗಿಯೊಬ್ಬರು ಸಿಕ್ಕರು. ನಿಂತುಕೊಂಡೇ ನಾವು ಅದು–ಇದು ಮಾತನಾಡುತ್ತ, ಮಾತು ಕನ್ನಡದತ್ತ ಹೊರಳಿತು. ಆತ ಕನ್ನಡದ ಪ್ರೇಮಿಯಾದರೂ ವಾದಿಸುವುದು ಅವರಿಗೊಂದು ಚಟ. “ಅದೇನು ಕನ್ನಡ ಕನ್ನಡ ಅಂತಾರೋ, ಈಗ ಇಷ್ಟು ಸಂಪಾದನೆ ಮಾಡ್ತಿರೋದು ಕನ್ನಡದಿಂದಾನಾ ಅಂತ ಕೇಳ್ತಾರೆ ನನ್ನ ಮಕ್ಕಳು. ನೋಡಿ, ನನ್ನ ಮಗ ಏಳೆಂಟು ಸಲನಾದ್ರೂ ಅಮೆರಿಕಕ್ಕೆ ಹೋಗಿ ಬರ್ತಾನೆ. ಕನ್ನಡ ಓದಿದ್ರೆ ಇದು ಸಾಧ್ಯವಿತ್ತೆ? ಕನ್ನಡದಿಂದ ಯಾರು ಉದ್ಧಾರ ಆಗಿದ್ದಾರೆ ಹೇಳಿ?” ಎಂದು ಪ್ರಶ್ನೆ ಎಸೆದರು. ಕನ್ನಡಕ್ಕೂ ಅಮೆರಿಕಕ್ಕೆ ಹೋಗುವುದಕ್ಕೂ ಏನು ಸಂಬಂಧ? ಅಂತ ನಾನು ತಡಬಡಾಯಿಸುತ್ತಿರುವಾಗಲೇ ಪಕ್ಕದಲ್ಲಿ ಸೀಟೊಂದು ಖಾಲಿಯಾಯಿತು. “ನೀವು ಕೂತ್ಕೊಳೀ. ಆ ಪಕ್ಕದಲ್ಲಿ ಕೂತಿರೋರು ನನ್ನ ಸೋದರ ಮಾವನೇ” ಎಂದರು ಆ ಸಹೋದ್ಯೋಗಿ. ನನಗಿಂತ



ವಯಸ್ಸಿನಲ್ಲಿ ಹಿರಿಯರಾದ ಸಹೋದ್ಯೋಗಿಯನ್ನು ನಿಲ್ಲಿಸಿ, ನಾನು ಕೂರಲು ಸಂಕೋಚವಾದರೂ, ಅವರ ಬಲವಂತಕ್ಕೆ ಕೂರಬೇಕಾಯಿತು. ಪಕ್ಕದಲ್ಲಿದ್ದ ವೃದ್ಧರು ಸಂಪ್ರದಾಯಸ್ಥರು ಎಂಬುದನ್ನು ಅವರ ಹುಬ್ಬಿನ ಮಧ್ಯದ ಕುಂಕುಮ, ಬಿಳಿಯ ಪಂಚೆ, ತುಂಬು ತೋಳಿನ ಬಿಳಿ ಅಂಗಿ ಹೇಳುತ್ತಿದ್ದರೆ, ಅವರ ತಲೆಯ ಮೇಲಿನ ಕುಲಾಪಿ, ಕೈಯಲ್ಲಿದ್ದ ಛತ್ರಿ, ಉಣ್ಣೆಯ ಕಾಲುಚೀಲ ಶಿಸ್ತು, ಆರೋಗ್ಯದ ಕಾಳಜಿಯನ್ನು ಸೂಚಿಸುತ್ತಿದ್ದವು. "ಇವರು ಕನ್ನಡ ವಿಭಾಗದಲ್ಲಿದ್ದರು; ತುಂಬ ಬರೀತಾರೆ" ಎಂದು ಸಹೋದ್ಯೋಗಿ ನನ್ನ ಪರಿಚಯ ಹೇಳಿದರು. ನಾನು ತಲೆ ಆಡಿಸುತ್ತಾ "ನೋಡಿ, ಇಷ್ಟು ಹೊತ್ತು ನಿಮ್ಮ ಬಂಧುಗಳು ಕನ್ನಡದಿಂದ ಯಾರು ಉದ್ಧಾರ ಆಗಿದ್ದಾರೆ ಅಂತ ವಾದ ಮಾಡ್ತಾ ಇದ್ದರು" ಅಂದೆ. ಹಾಗಂದ ಕೂಡಲೇ ಅವರು ತಲೆಎತ್ತಿ ನೋಡಿ "ಉದ್ಧಾರ! ಹಾಗಂದ್ರೆ ಏನು? ಅಂತ ಮೊದಲು ಸ್ಪಷ್ಟಪಡಿಸಿಕೊಳ್ಳಬೇಕಮ್ಮ" ಅಂದರು. ಆ ಒಂದು ಮಾತಿನಿಂದ ನನಗೆ ಶ್ರದ್ಧೆ ಕುತೂಹಲ ಮೂಡಿತು. ಆ ನಂತರ ನಡೆದ ಮಾತುಕಥೆಯೆಲ್ಲಾ ಕನ್ನಡಕ್ಕೆ ಮೀಸಲಾಗಿತ್ತು. ಅವರು ಹೇಳುತ್ತಿದ್ದರು, "ನೋಡಮ್ಮಾ, ಸಂಸ್ಕೃತಕ್ಕಿಂತ ಕನ್ನಡ ಶ್ರೇಷ್ಠ ಭಾಷೆ. ಕನ್ನಡ ತ್ರಿಶುದ್ಧಿಯ ಭಾಷೆ. ನಾವು ಹೇಗೆ ಉಚ್ಚರಿಸುತ್ತೇವೋ ಹಾಗೇ ಬರೀತೇವೆ, ಹಾಗೇ ಓದುತ್ತೇವೆ. ಇಂಗ್ಲಿಷ್‌ನಲ್ಲಿ ಇದು ಸಾಧ್ಯವಾ? ಅಲ್ಲಿ 'ಡ' ಗೂ–'ದ'ಗೂ, 'ಳ'ಗೂ– 'ಲ'ಗೂ ವ್ಯತ್ಯಾಸವಿಲ್ಲ. ಆರ್.ಎ.ಎಂ.ಎ. ಅಂತ ಸ್ಪೆಲಿಂಗ್ ಬರೆದರೆ 'ರಾಮ' ಅಂತಲೂ ಓದಬಹುದು 'ರಮಾ' ಅಂತಲೂ ಓದಬಹುದು. ಇದನ್ನು ಹೇಗೆ ಅರ್ಥ ಮಾಡಿಕೊಳ್ಳೋದು? ವರ್ಗೀಯ ವ್ಯಂಜನಗಳ ವಿಚಾರಕ್ಕೆ ಬಂದರೆ ಕವರ್ಗ ಕಂಠ್ಯದಿಂದ, 'ಚ'ವರ್ಗ ತಾಲವ್ಯದಿಂದ ಉಚ್ಚಾರವಾಗುತ್ತದೆ. "ತಮಿಳಿನಲ್ಲಿ ವೆಂಕಟೇಶ ಬರೆಯಲು ಸಾಧ್ಯವಿಲ್ಲ, ಉಚ್ಚರಿಸಲೂ ಸಾಧ್ಯವಿಲ್ಲ. ವೆಂಗಟೇಸ ಅಥವಾ ವೆಂಗಡೇಸ ಆಗುತ್ತೆ. ಕನ್ನಡದಲ್ಲಿ ಈ ಎರಡೂ ಸಾಧ್ಯ. ನಮ್ಮ ಭಾಷೆಗೆ ಅಗತ್ಯವಾದ ಎಲ್ಲವನ್ನೂ ನಾವು ಉಳಿಸಿಕೊಂಡಿದ್ದೇವೆ. ವರ್ಣಮಾಲೆಯಲ್ಲಿ 'ಋ'ಕಾರ ಬಿಡುವ ಅಗತ್ಯವಿಲ್ಲ" ಎಂದು ವಿವರಿಸತೊಡಗಿದರು. ಬಹುಶಃ ಮೊದಲ ಬಾರಿಗೆ ಕನ್ನಡವನ್ನು ಕುರಿತು ಬಸ್‌ನಲ್ಲಿದ್ದ ಜನ ಕೇಳುತ್ತಿದ್ದರು. ನಿಂತುಕೊಂಡಿದ್ದವರಿಗೆ ತಾವು ನಿಂತಿದ್ದೇವೆ ಎಂಬ ಕಿರಿಕಿರಿ ಮಾಯವಾಗಿ ಕಿವಿ ಇತ್ತ ಕಡೆಯೇ ಇತ್ತು.

ಕನ್ನಡದ ಸೊಬಗು, ಸಿರಿವಂತಿಕೆಯನ್ನು ನನ್ನ ಮನಸ್ಸು ಮೆಲುಕು ಹಾಕತೊಡಗಿತು. ಧಾರವಾಡ ಕನ್ನಡ, ಬಿಜಾಪುರ ಕನ್ನಡ, ಮಂಡ್ಯದ ಕನ್ನಡ, ಹವ್ಯಕ ಕನ್ನಡ, ಕೊಡವ ಕನ್ನಡ ದಕ್ಷಿಣ ಕನ್ನಡ, ಮೈಸೂರು ಕನ್ನಡ... ಅದೆಷ್ಟೊಂದು ಪ್ರಾದೇಶಿಕ ವೈವಿಧ್ಯಗಳಿವೆ. ಕನ್ನಡಕ್ಕೆ ಇದಿಷ್ಟೂ ವೈವಿಧ್ಯಗಳನ್ನು ಪ್ರತಿಬಿಂಬಿಸುವ ಸಾಹಿತ್ಯ ಇಲ್ಲಿ ಸೃಷ್ಟಿಯಾಗಿದೆ. ಉದಾತ್ತ ವಿಚಾರಗಳನ್ನು ಪ್ರತಿಪಾದಿಸುವ ಪಂಪ, ರನ್ನ, ವಚನಕಾರರ ಅನುಭವ ಹಾಗೂ ವೈಚಾರಿಕತೆ ಅಕ್ಕಮಹಾದೇವಿಯ ದಿಟ್ಟತನ, ಕುಮಾರವ್ಯಾಸನ ಜೀವನ ದರ್ಶನ, ದಾಸ ಸಾಹಿತ್ಯದ ವೈವಿಧ್ಯ, ಕುವೆಂಪು ಸಾಹಿತ್ಯದ ಮಲೆನಾಡ ವೈಭವ, ಬೇಂದ್ರೆಯವರ ಧಾರವಾಡದ ಸೊಗಡು, ನಿನ್ನೆಯೇ ಬರೆದರೇನೋ ಎಂಬಂತಹ ಕೈಲಾಸಂ ಭಾಷೆ, ರತ್ನನ ಪದಗಳ ವಿಶಿಷ್ಟ ಭಾವನೆಗಳು, ಕೆಎಸ್‌ನ ಗೀತೆಗಳಲ್ಲಿ ಸುಳಿದಾಡುವ ಪ್ರೇಮ, ಕನ್ನಡಕ್ಕಾಗಿ ಮಿಡಿದ

ಬಿಎಂಶ್ರೀ, ಡಿವಿಜಿ, ಮಾಸ್ತಿ, ಗೋಕಾಕ್, ದೇಜಗೌ, ಹಾಮಾನಾ... ಇವರೆಲ್ಲರ ಕೊಡುಗೆಗಳನ್ನು ನೋಡುತ್ತ ಹೋದರೆ ಇಂಥ ವೈವಿಧ್ಯ, ಸಿರಿವಂತಿಕೆ, ಈ ಕೊಡುಗೆಯ ಹಿಂದಿನ ಸಂಸ್ಕೃತಿ, ಪರಂಪರೆಯ ಔನ್ನತ್ಯವೆಂಥದ್ದು; ಇಂಥ ವೈಶಾಲ್ಯವನ್ನು ಅರ್ಥಮಾಡಿಕೊಂಡು ಬೇರೆಯವರು ಕನ್ನಡಿಗರಂತಾಗಬೇಕೇ ವಿನಾ ಕನ್ನಡಿಗರು ಬೇರೆಯವರಂತಾಗುವ ಅಗತ್ಯವಿಲ್ಲ. ಕನ್ನಡವನ್ನು ಹೀಯ್ಯಾಳಿಸುವವರಿಗೆ ತಾವೇನು ಮಾಡುತ್ತಿದ್ದೇವೆ ಎಂಬುದು ಗೊತ್ತಿಲ್ಲ; ಅಷ್ಟೆ.

ಕನ್ನಡವನ್ನು ಉಳಿಸುವುದಕ್ಕಾಗಿ ಎಷ್ಟೊಂದು ಸರ್ಕಾರಿ ಸಂಸ್ಥೆಗಳಿವೆ. ಖಾಸಗಿ ಸಂಘ ಸಂಸ್ಥೆಗಳಿವೆ. ಅದೆಷ್ಟು ಹೋರಾಟಗಾರರಿದ್ದಾರೆ. ಬಹುಶಃ ಭಾರತದ ಯಾವ ರಾಜ್ಯದಲ್ಲೂ ಅದರದೇ ಭಾಷೆ–ಸಂಸ್ಕೃತಿಯನ್ನು ಉಳಿಸುವುದಕ್ಕಾಗಿ ಈ ಮಟ್ಟದ ಪ್ರಯತ್ನಗಳು ಹೋರಾಟ, ಗಲಾಟೆಗಳು ನಡೆದಂತಿಲ್ಲ. ಆದರೂ, ಅಲ್ಲೆಲ್ಲ ಭಾಷೆ–ಸಂಸ್ಕೃತಿಗಳನ್ನು ಎಲ್ಲೆಲ್ಲಿ ಉಳಿಸಬೇಕೋ ಹಾಗೆ ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಆದರೆ ಕನ್ನಡದ್ದು ಮಾತ್ರ ವಿಚಿತ್ರ ಸ್ಥಿತಿ. ಇಷ್ಟೆಲ್ಲ ಮಾಡಿಯೂ ಕನ್ನಡವನ್ನು ದುರ್ಬೀನು ಹಾಕಿ ಹುಡುಕಬೇಕಾದ ದುಃಸ್ಥಿತಿ ಯಾಕೆ? ಮೊದಲನೆಯದಾಗಿ ನಮ್ಮ ಹೋರಾಟಗಳಿಗೆ ನಿಶ್ಚಿತ ಗುರಿ, ನಿಶ್ಚಿತ ಕಾಲಮಿತಿ ಮತ್ತು ನಿಶ್ಚಿತ ಮಾರ್ಗ ಇಲ್ಲ. ಯಾರೋ, ಯಾವಾಗಲೋ ಒಂದು ಸಲ ಹಬ್ಬಿಸಿದ ಕೂಗು ಕ್ರಮೇಣ ತಣ್ಣಗಾಗಿಬಿಡುತ್ತದೆ. ಒಂದು ಹೋರಾಟವನ್ನು ಆರಂಭಿಸುವಾಗ ಇರುವ ಉತ್ಸಾಹ, ಅನಂತರ ಕಾಣೆಯಾಗಿ ಬಿಡುತ್ತದೆ. ಬೇಡಿಕೆಗಳನ್ನು ಈಡೇರಿಸಿಕೊಂಡರೆ ಸಾಲದು. ಈಡೇರಿದ ನಂತರ ಅದನ್ನು ಕಾಯ್ದುಕೊಂಡು ಹೋಗುವುದರ ಕಡೆಗೂ ಗಮನವಿರಬೇಕು. ಮೊದಲಿಗಿಂತ ಅನಂತರವೇ ಹೆಚ್ಚು ಜವಾಬ್ದಾರಿಯಿಂದ ವರ್ತಿಸಬೇಕಾಗುತ್ತದೆ. ನಮ್ಮ ಹೋರಾಟ ವಿಧಾನಗಳ ಕುರಿತು ಆತ್ಮವಿಮರ್ಶೆ ಆಗಾಗ ನಡೆಯುತ್ತಿರಬೇಕು ಮತ್ತು ಸದಾಕಾಲವೂ ಕನ್ನಡದ ಆಗು ಹೋಗುಗಳ ಬಗ್ಗೆ ಕಣ್ಣಾಗವಲಿರಬೇಕು. ನಮ್ಮ ಬಹುತೇಕ ಸಂಘಟನೆಗಳು, ತಾವು ಮಾಡಿದ್ದೇ ಸರಿ ಎಂಬ ಧೋರಣೆ ಹೊಂದಿವೆ. ಹೀಗಾಗಿ ಸಂಘಟನೆಗಳಿದ್ದೂ ಶೂನ್ಯವಾಗುವ ಸಂಭವವೇ ಹೆಚ್ಚು. ಉದಾಹರಣೆಗೆ ನಾಮಫಲಕಗಳ ವಿಷಯವನ್ನೇ ನೋಡಿ. ಯಾವುದಾದರೂ ರಸ್ತೆಗೆ ಬಡಾವಣೆಗೆ ಕನ್ನಡದ ಹೆಸರುಗಳನ್ನಿಡಲು ಸಾಕಷ್ಟು ಹೋರಾಟಗಳು ನಡೆದಿವೆ. ನಮ್ಮ ನಾಡು–ನುಡಿಗಾಗಿ ದುಡಿದವರ ಹೆಸರುಗಳನ್ನು ಉಳಿಸಬೇಕು, ಅವರ ಬಗ್ಗೆ ಮುಂದಿನ ಪೀಳಿಗೆಯವರೂ ತಿಳಿಯುವಂತಾಗಬೇಕು ಎಂಬ ಉದ್ದೇಶದಿಂದ ಇಂಗ್ಲಿಷರ ಹೆಸರು ತೆಗೆಸಿ, ಕನ್ನಡದವರ ಹೆಸರುಗಳನ್ನು ಇಡಲಾಗಿದೆ. ಆದರೆ ಯಾವ ಉದ್ದೇಶಕ್ಕಾಗಿ ಈ ಕಾರ್ಯ ಮಾಡಿದೆವೋ ಅದು ಜಾರಿಗೆ ಬರದಿದ್ದರೆ ಪ್ರಯೋಜನವೇನು? ಬೆಂಗಳೂರಿನಲ್ಲಿ ರಿಚ್‌ಮಂಡ್ ರೋಡಿಗೆ ಜನರಲ್ ತಿಮ್ಮಯ್ಯ ರಸ್ತೆ, ರೆಸಿಡೆನ್ಸಿ ರೋಡಿಗೆ ಫೀಲ್ಡ್‌ಮಾರ್ಷಲ್ ಕಾರ್ಯಪ್ಪ ರಸ್ತೆ, ಮಿಷನ್ ರೋಡಿಗೆ ಕಾಳಿಂಗರಾವ್ ರಸ್ತೆ, ರೇಸ್ ಕೋರ್ಸ್ ರೋಡಿಗೆ ಡಿ. ದೇವರಾಜ ಅರಸ್ ರಸ್ತೆ, ಫ್ರೇಜರ್ ಟೌನಿಗೆ ಪುಲಿಕೇಶಿನಗರ, ಹಳೆಸೆಂಟ್ರಲ್ ಜೈಲ್ ಪಕ್ಕದ ರಸ್ತೆಗೆ ಕನಕದಾಸ ರಸ್ತೆ, ಹೀಗೆ ಹಳೆಯ ಹೆಸರುಗಳನ್ನು ಬದಲಿಸಿ ಹೊಸದಾಗಿ ನಾಮಕರಣ ಮಾಡಲಾಗಿದೆ. ಆದರೆ ಎಷ್ಟರಮಟ್ಟಿಗೆ ಈ ಬದಲಾವಣೆಗಳು ಜಾರಿಯಾಗಿವೆ?

ಹೋಗಲಿ ಎಷ್ಟು ಮಂದಿಗೆ ಈ ಹೆಸರುಗಳು ಬದಲಾಗಿರುವ ಬಗ್ಗೆ ಗೊತ್ತಿದೆ. ಇದಕ್ಕೆ ಕಾರಣವಿಷ್ಟೆ: ಹೆಸರುಗಳನ್ನು ಬದಲಾಯಿಸುವಾಗ ಇದ್ದ ಉತ್ಸಾಹ, ಅನಂತರ ಇಲ್ಲ. ಹೊಸ ಹೆಸರುಗಳು ಎಲ್ಲರಿಗೂ ತಿಳಿಯುವಂತಾಗಲು ಬಳಕೆಗೆ ಬರುವಂತಾಗಲೂ ಕೂಡ ನಿಶ್ಚಿತ ಕಾರ್ಯಕ್ರಮ ರೂಪಿಸಿಕೊಳ್ಳಬೇಕು. ಅಂಚೆ ವಿಳಾಸ, ಕಛೇರಿಗಳ ಲೆಟರ್-ಹೆಡ್, ರಬ್ಬರ್ ಸ್ಟಾಂಪ್‌ಗಳು, ಆಯಾ ರಸ್ತೆಯ ಅಂಗಡಿಗಳ ಬಿಲ್ ಪುಸ್ತಕಗಳು ಮತ್ತು ನಾಮಫಲಕಗಳಲ್ಲಿ ಈ ಬದಲಾವಣೆ ಅಳವಡಿಕೆಯಾಗುವಂತೆ ನೋಡಿಕೊಳ್ಳಬೇಕು. ಬದಲಾವಣೆ ಮಾಡದಿದ್ದರೆ ಒತ್ತಡ ಹೇರಬೇಕು. ಬೇಕಿದ್ದರೆ ಸ್ವಲ್ಪ ಕಾಲ ಮಾತ್ರ ಹಳೆ ಹೆಸರುಗಳನ್ನು ಬ್ರಾಕೆಟ್‌ಗಳಲ್ಲಿ ಹಾಕಬಹುದು. ಕಾಳಿಂಗ ರಾವ್ ರಸ್ತೆ, ಕನಕದಾಸ ರಸ್ತೆ ಹೀಗೆ ಇಂಗ್ಲಿಷ್ ಅಕ್ಷರಗಳಲ್ಲಿ ಬರೆಸಬೇಕು. ಆಗ ಮಾತ್ರವೇ ಅನ್ಯಭಾಷೆಯವರು ಅವುಗಳನ್ನು ಓದಲು ಸಾಧ್ಯ ಮತ್ತು ನಮ್ಮವರ ಹೆಸರುಗಳು ಅವರಿಗೆ ಪರಿಚಯವಾಗಲು ಸಾಧ್ಯ. ಈ ವಿಷಯದಲ್ಲಿ ಎಲ್ಲವೂ ಕನ್ನಡದಲ್ಲಿ ಇರಬೇಕು ಎಂದು ಪಟ್ಟು ಹಿಡಿದರೆ ದುರಭಿಮಾನವಾಗುತ್ತದೆ.


ಅಭಿವ್ಯಕ್ತಿ ಮಾಧ್ಯಮವಾಗಿ ಇಂಗ್ಲಿಷ್‌ನ ಪಾತ್ರ ಬಹಳ ದೊಡ್ಡದಿದೆ. ಆದರೆ ಈ ಭಾಷೆಯಿಂದ ನಾವು ಗಳಿಸುವ ಎಲ್ಲ ಪರಿಣತಿಯನ್ನು ಕನ್ನಡಕ್ಕೆ ಅನ್ವಯಿಸಿದಾಗ ಮಾತ್ರ ಈ ಕಲಿಕೆ ಅರ್ಥಪೂರ್ಣವಾಗುತ್ತದೆ. ಪ್ರಾಥಮಿಕ ಶಾಲಾ ಮಟ್ಟದಲ್ಲಿ ಕನ್ನಡದ ಕಲಿಕೆಯನ್ನು ಕಡ್ಡಾಯಗೊಳಿಸುವುದು ಇನ್ನೂ ಸಾಧ್ಯವಾಗಿಲ್ಲ. ಅನ್ಯಭಾಷಿಕರಿಗೆ ಕಷ್ಟವಾಗುತ್ತದೆ ಎಂಬುದೇ ಇದಕ್ಕೆ ಮುಖ್ಯ ಕಾರಣವಾದಂತಿದೆ. ಇಂತಹ ನೀತಿಯಿಂದ ಕನ್ನಡದ ಮಕ್ಕಳು ಕನ್ನಡದಿಂದ ದೂರವಾಗುವಂತಹ ಪರಿಸ್ಥಿತಿ ನಿರ್ಮಾಣವಾಗಿರುವುದು ಶೋಚನೀಯ. ಗ್ರಾಮಾಂತರ ಪ್ರದೇಶದ ಮಕ್ಕಳು ಇಂಗ್ಲಿಷ್ ಕಲಿಕೆಯ ಕೊರತೆಯಿಂದ ನಗರದವರಿಗೆ ಸರಿಸಮಾನರಾಗಿ ಸ್ಪರ್ಧಿಸದಂಥ ಪರಿಸ್ಥಿತಿಯೊದಗಿದೆ. ಈ ಕಾರಣಕ್ಕಾಗಿಯೇ ಗ್ರಾಮಾಂತರ ಪ್ರದೇಶ ಗಳಲ್ಲಿಯೂ ಇಂಗ್ಲಿಷ್ ಕಲಿಕೆಯ ಹಂಬಲ ಹೆಚ್ಚಾಗತೊಡಗಿದೆ. ಸರ್ಕಾರಿ ಶಾಲೆಗಳನ್ನು ಏನೇನೋ ನೆಪಗಳಿಂದ ಮುಚ್ಚುತ್ತಾ, ಇಂಗ್ಲಿಷ್ ಮಾಧ್ಯಮದ ಶಾಲೆಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡಲಾಗುತ್ತಿದೆ. ನಗರ ಪ್ರದೇಶದ ಮಕ್ಕಳು ಕನ್ನಡದಿಂದ ದೂರವಾಗುವುದರ ಜೊತೆಗೆ, ಕನ್ನಡ ಸಂಸ್ಕೃತಿಯಿಂದಲೂ ದೂರವಾಗುತ್ತಿದ್ದಾರೆ. ಈ ಎಲ್ಲದರ ಅಂತಿಮ ಪರಿಣಾಮವಾಗಿ ಕನ್ನಡಕ್ಕೆ ದೊಡ್ಡ ಆತಂಕ ತಲೆದೋರಿದೆ. ಧೀಮಂತ ಲೇಖಕ ಲಂಕೇಶ್ ಅವರು ಈ ಬಗ್ಗೆ ಒಂದು ಕಿವಿಮಾತು ಹೇಳುತ್ತಿದ್ದರು; "ನಗರದ ಮಕ್ಕಳಿಗೆ ಕನ್ನಡವನ್ನು ಚೆನ್ನಾಗಿ ಕಲಿಸಿ. ಯಾಕೆಂದರೆ, ಅವರಿಗೆ ಇಂಗ್ಲಿಷ್ ಸಹಜವಾಗೇ ಬರುತ್ತದೆ. ಇದರಂತೆಯೇ ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಇಂಗ್ಲಿಷನ್ನು ಚೆನ್ನಾಗಿ ಕಲಿಸಿ, ಅವರಿಗೆ ಕನ್ನಡದ ವಾತಾವರಣ ಸಹಜವಾಗಿಯೇ ಲಭಿಸಿರುತ್ತದೆ." ಇಂಥ ಒಂದು ಸರಳ ಮಾರ್ಗವನ್ನು ನಾವ್ಯಾಕೆ ಅನುಸರಿಸಬಾರದು? ಕನ್ನಡದ ವಿದ್ವಾಂಸರು, ಹೋರಾಟಗಾರರು, ಸಾಹಿತಿಗಳು ಸರ್ಕಾರ ಎಲ್ಲರೂ ಒಂದಾಗಿ ಕನ್ನಡದ ಬಗ್ಗೆ ನಿಶ್ಚಿತ ಕಾರ್ಯಕ್ರಮವನ್ನು ರೂಪಿಸುವಂಥ ದಿನಗಳು ಬೇಗ ಬರಲಿ; ಕನ್ನಡಕ್ಕೆ ಒದಗಿರುವ ಆತಂಕ ಬೇಗನೆ ನಿವಾರಣೆಯಾಗಲಿ ಎಂದು ಹಾರೈಸೋಣ.

❐

ಕನ್ನಡಕ್ಕೆ ಅಪಾಯವಿದ್ದರೆ ಅದು ಆಂತರಿಕವಾದುದು

■ ಕೆ.ಎಸ್. ಪಾರ್ಥಸಾರಥಿ

ಗೆಳೆಯ ರಾ.ನಂ. ಚಂದ್ರಶೇಖರ ಅವರದು ಒಂದು ಸಮತೂಕದ ವ್ಯಕ್ತಿತ್ವ. ಅವರಲ್ಲಿ ಅತಿರೇಕವಿಲ್ಲ. ಕರ್ನಾಟಕದ ಭಾಷೆ, ಸಂಸ್ಕೃತಿಗಳ ಬಗ್ಗೆ ಅವರ ನಿಲುವು ಸುಸಂಸ್ಕೃತವಾದದ್ದು. ಕನ್ನಡ, ಕನ್ನಡಿಗ ಕನ್ನಡತನಗಳು ಅವರಿಗೆ ಸಾಮಾನ್ಯ ಜ್ಞಾನದ ವಿಷಯವೇ ವಿನಃ ಭಾವುಕ ಮರೀಚಿಕೆಯದಲ್ಲ. ಹಾಗಾಗಿ ಅವರಿಗೆ ಯಾರೂ ವಿರೋಧಿಗಳೇ ಇಲ್ಲ. ಸಾಹಿತ್ಯ, ಕಲೆಗಳಿಗೆ ಒತ್ತುಕೊಡುತ್ತಲೇ, ಅವರು ನೆಲ, ಜಲ, ಆರ್ಥಿಕತೆಗಳ ಬಗ್ಗೆ ಆಳವಾದ ತಿಳಿವನ್ನು ಪ್ರಕಟಿಸಿ ಸಾಮಾನ್ಯರಂತೆಯೇ, ಚಿಂತಕರಿಂದಲೂ ಮೆಚ್ಚುಗೆ ಪಡೆಯುತ್ತಾರೆ. ಅವರಿಗೆ ಸರಿ ಅನ್ನಿಸಿದ್ದನ್ನು ಮಾಡುವಾಗ, ಯಾರ ಒಪ್ಪಿಗೆಗೂ ಕಾಯುವುದಿಲ್ಲ; ಆದರೆ ಅದಕ್ಕೂ ಜನರ ಒಪ್ಪಿಗೆ ಪಡೆದುಕೊಳ್ಳಲು ಸಜ್ಜನಿಕೆಯ ಪ್ರಯತ್ನಮಾಡುತ್ತಾರೆ. ನಾನು ಅವರ ಒಬ್ಬ ಅಭಿಮಾನಿ ಗೆಳೆಯ. ಅವರಿಗೆ ಅರವತ್ತು ತುಂಬುವ ಈ ಸಂಭ್ರಮವನ್ನು ನಾನೂ ಹಂಚಿಕೊಳ್ಳುತ್ತೇನೆ. ಅವರು ತಮ್ಮ ಸಂಪೂರ್ಣ ಸಮಯವನ್ನು ಕನ್ನಡಕ್ಕೆ ಮೀಸಲಿಡುತ್ತಾರಾಗಿ, ಅವರಿಂದ ಇತ್ಯೋಪ್ಯತಿಶಯವಾದ ಕೊಡುಗೆ ಗಳನ್ನು ನಿರೀಕ್ಷಿಸಬಹುದು. ನಾವೆಲ್ಲಾ ಅವರೊಡನೆ ಇದ್ದು ಅವರ ಬಲವರ್ಧನೆ ಮಾಡೋಣ. ಅದು ನಾಡು-ನುಡಿಗೆ ಅಗತ್ಯ; ಒಳಿತು.



ಇತರ ಭಾಷಾ ಬಂಧುಗಳೊಡನೆ ಸಂವಹಿಸುವಾಗ, ನಾನು ಕನ್ನಡದ ಬಗ್ಗೆ ಭಾವುಕತೆಯಿಂದ ವರ್ತಿಸುತ್ತೇನೆ. ನಮ್ಮ ಸಾಹಿತ್ಯ ಸಂಸ್ಕೃತಿಯ ಹಿರಿಮೆಯನ್ನು ಮೆರೆಯುತ್ತೇನೆ. ಆದರೆ ವಾಸ್ತವದ ನೆಲೆಗೆ ಬಂದಾಗ, ನಮ್ಮ ನಾಡಿನ ಬಗ್ಗೆ ನಮ್ಮ ರಾಷ್ಟ್ರದ ಬಗ್ಗೆ

ಚಿಂತೆಗೊಳಗಾಗುತ್ತೇನೆ. ಕ್ಷುಲ್ಲಕ ರಾಜಕೀಯವೋ, ಸ್ವಾರ್ಥದ ಆರ್ಥಿಕ ವಿಷಯಗಳೋ ಆ ಜಾತಿ ಈ ಜಾತಿಯ ಚಿಂತೆಗಳೋ, ನಮ್ಮ ಮೂಲ ಪ್ರಶ್ನೆಯನ್ನು ಬದಿಗೊತ್ತಿ ಪ್ರಮಾದವಾಗುತ್ತದೆ. ಇದು ಇತ್ತೀಚೆಗೆ ಆತಂಕವೆನಿಸುವಷ್ಟು ಹೆಚ್ಚಿದೆ. ಮೊದಲಿಗೆ ನಮ್ಮ ಇಂದಿನ ಭೌಗೋಳಿಕ ಭಾರತದ ಐಕಮತ್ಯದ ವಿಷಯ. ನಾವು ಯಾವಾಗ ಎಲ್ಲಿ ಏನೇ ಮಾಡಲಿ ಈ ಐಕಮತ್ಯದ ಸ್ವರೂಪಕ್ಕೆ ಬಲ ನೀಡುವಂತಿರಬೇಕೇ ವಿನಃ ಅದನ್ನು ಶಿಥಿಲಗೊಳಿಸುವಂತೆ ಇರಬಾರದು. ನಮ್ಮದೇ ಭಾಷೆ–ಸಂಸ್ಕೃತಿಯ ವಿಷಯ ಚರ್ಚಿಸುವಾಗಲೂ ಈ ಮೂಲ ವಿಷಯವನ್ನು ಮರೆಯಬಾರದು. ಈ ವಿಷಯದಲ್ಲಿ ನನಗೆ ಕಳವಳವಿದೆ. ಹಾಗೆಯೇ ನಮ್ಮ ಜನರ ಬಹುದಿನದ ಕನಸಾದ, ಹಲವಾರು ಹೋರಾಟಗಳಿಂದ ಶ್ರಮಿಸಿ ಸಾಧಿಸಿಕೊಂಡಿರುವ, ಕರ್ನಾಟಕವೆಂಬ ಏಕೀಕೃತ ಕಲ್ಪನೆಗೆ ಧಕ್ಕೆ ಬರುವ ಯಾವುದೇ ಕೆಲಸವೂ ಕನ್ನಡಿಗನಿಂದ, ಕರ್ನಾಟಕದಲ್ಲಿ ವಾಸಿಸುವವರಿಂದ ಆಗಬಾರದು. ಈ ಕಲ್ಪನೆಗೂ, ರಾಷ್ಟ್ರೀಯ ಐಕ್ಯತೆಗೂ ಪರಸ್ಪರ ವಿರೋಧವಿಲ್ಲ. ಅವು ಒಂದನ್ನು ಇನ್ನೊಂದು ಬಲಪಡಿಸುವ ಸ್ವರೂಪದವು ಎಂದು ನಾನು ನಂಬಿದ್ದೇನೆ. ರಾಷ್ಟ್ರದ ಐಕ್ಯತೆಯ ವಿಷಯವನ್ನು ಎಲ್ಲರೂ ಸ್ವೀಕರಿಸಿರುವ, ಒಪ್ಪಿರುವ ವಿಷಯವೆಂದು, ಅದನ್ನು ಕುರಿತು ಇಲ್ಲಿ ಚರ್ಚಿಸುವುದಿಲ್ಲ. ಕರ್ನಾಟಕದ ಮಟ್ಟಿಗೆ ಸೀಮಿತ ಈ ಲೇಖನ. ಕರ್ನಾಟಕದಲ್ಲಿ ವಾಸಿಸುವ ಎಲ್ಲರೂ ಕನ್ನಡಿಗರೆ–ಅವರಿಗೆ ಕನ್ನಡ ಬರದಿದ್ದರೂ. 'ಕನ್ನಡಿಗ' ಎಂದರೆ ಅದು ಕೇವಲ ಭಾಷಿಕ ಸಂಕುಚಿತ ಪದವಲ್ಲ.

ಸಾಹಿತಿಗಳೂ, ಕಲಾವಿದರೂ, ಚಿಂತಕರೂ ಒಂದು ನೂರು ವರ್ಷಗಳ ಪ್ರಯತ್ನದಿಂದ ಈ ಪ್ರದೇಶದ ಜನರ ಮನವನ್ನು ಕರ್ನಾಟಕದ ಸ್ಥಾಪನೆಗೆ ಸಿದ್ಧಪಡಿಸಿದ್ದರು. ಅದರಿಂದ ಪ್ರಭಾವಿತವಾದ ಅಂದಿನ ರಾಜಕೀಯ ನಾಯಕತ್ವ – ಆ ಕಾರಣ, ರಾಜಕೀಯ ಐಕ್ಯತೆಯನ್ನು ಸಾಧಿಸಲು ಕರ್ನಾಟಕ ರಾಜ್ಯ ಸ್ಥಾಪಿಸಲು ಸಮರ್ಥವಾಯಿತು. ಈ ಎರಡೂ ಬಣದ ಕೊಡುಗೆಯೂ ಸ್ಮರಣೀಯ. ಅಲ್ಲಿಗೆ ನಮ್ಮ ಕೆಲಸ ಮುಗಿಯಿತು ಎಂದು ಸಂಬಂಧ ಪಟ್ಟವರೆಲ್ಲಾ ವಿರಮಿಸಿದರೆ? ಇಂದಿನ ಕರ್ನಾಟಕದ ಹಲವು ಹತ್ತು ಸಮಸ್ಯೆಗಳನ್ನು ಗಮನಿಸಿದಾಗ ಹಾಗೆನ್ನಿಸುತ್ತದೆ. ರಾಜಕೀಯ ನಾಯಕತ್ವದ ಮೇಲೆ ಚಿಂತನಶೀಲರ ಅಂಕುಶವಿಲ್ಲದಿದ್ದರೆ, ಅದು ತಾನು ಕಟ್ಟಿದ್ದನ್ನು ತಾನೇ ಕೆಡವುವಷ್ಟು ಅವಿವೇಕಿಯಾಗ ಬಹುದು. ಅಲ್ಲಿ ಮುತ್ಸದ್ದಿಗಳು ಅಪರೂಪ, ಸ್ವಾರ್ಥಿಗಳೇ, ಸಮೀಪದೃಷ್ಟಿಯವರೇ ಹೆಚ್ಚು. ನಮ್ಮ ನಾಡಿನ ಉತ್ತರ–ಪಶ್ಚಿಮಗಳಲ್ಲಿ ಪ್ರತ್ಯೇಕತೆಯ ಸೊಲ್ಲು ಕೇಳಿಬರುತ್ತಿರುವುದಕ್ಕೆ ರಾಜಕೀಯದವರ ಸ್ವಾರ್ಥವೇ ಕಾರಣ. ವಾಸ್ತವವೆಂಬತೆ ಕರ್ನಾಟಕದ ಹಾಗೂ ಭಾರತದ ಐಕ್ಯತೆ ಎಂಬುದನ್ನು ಇನ್ನೂ ಸ್ಥಾಪಿಸಬೇಕಾಗಿದೆ. ಅದು ಕ್ರಮಕ್ರಮವಾಗಿ ಆಗುವಂಥದು. ಅದೊಂದು ಜೈವಿಕ ಪ್ರಕ್ರಿಯೆ; ಯಾಂತ್ರಿಕವಲ್ಲ. ಅದಕ್ಕೆ ಬೇಕಾದ ಪ್ರಯತ್ನವನ್ನು ನವಿರಾಗಿ ನಿರ್ವಹಿಸಬೇಕು. ಹಾಗಿಲ್ಲದಿದ್ದರೆ ಅದು ಉಳಿಯದೆಯೂ ಹೋಗಬಹುದು. ೧೭೭೬ರಲ್ಲಿ ಸ್ವತಂತ್ರ ಒಕ್ಕೂಟವಾದ ಅಮೆರಿಕ ಸಂಯುಕ್ತ ಸಂಸ್ಥಾನಗಳು ನೂರು ವರ್ಷವಾದರೂ ಪ್ರತ್ಯೇಕವಾದಿಗಳನ್ನು ಅಡಗಿಸುವ ಅಂತರ್ಯುದ್ಧ ಮಾಡಿತು. ಎಲ್ಲರಿಗೂ ಲಿಂಕನ್ನರಂಥ

ನಾಯಕತ್ವ ದೊರೆಯುವುದಿಲ್ಲವಲ್ಲ! ಅಂದರೆ ನಾಡಿನ, ರಾಷ್ಟ್ರದ ಐಕ್ಯತೆಯನ್ನು ಕಾಯ್ದುಕೊಳ್ಳುವಲ್ಲಿ ವಿರಮಿಸುವಂತಿಲ್ಲ. ಈಲಂ ಕನಸುಗಾರರು ಇದ್ದೇ ಇರುತ್ತಾರೆ. ಈಲಂ ಅಂದರೆ ಅದೊಂದು ಅನ್ವರ್ಥ ಪದ. ಯಾವುದೋ ದೇಶದಲ್ಲಿ ನೆಲಿಸುವುದು ನಂತರ ತಾವು ನೆಲಸಿದ ನೆಲ, ತನ್ನ ತವರೂರಿಗೆ ಸೇರಿದ್ದು ಎಂದು ಕ್ಯಾತೆ ತೆಗೆಯುವುದು. ಇವನ್ನು ಕನಿಕರವಿಲ್ಲದೆ ಚಿವುಟಿ ಹಾಕಬೇಕು.

ಸಾಹಿತ್ಯ ಸಾಂಸ್ಕೃತಿಕ ರಂಗದಲ್ಲಿ ನಿರಂತರ ಕೃಷಿ ಆಗುತ್ತಲೇ ಇದೆ. ಕನ್ನಡಕ್ಕೆ ಆಪತ್ತು ಎನ್ನುವ ಕೂಗು ವಾಸ್ತವದಲ್ಲಿ ರಾಜಕೀಯ ಕ್ಷೇತ್ರದ ಸೊಲ್ಲು. ನಮ್ಮ ರಾಜ್ಯ ಭೌಗೋಳಿಕವಾಗಿ ಹಲವು ಭಾಷೆ, ಸಂಸ್ಕೃತಿಗಳಿಂದ ಸುತ್ತುವರಿದಿರುವುದು ವಾಸ್ತವ. ಇದರೊಂದಿಗೆ ಹೊಂದಿಕೊಂಡ ಅರಿವು ಮುಖ್ಯ. ಹಾಗೆಯೇ 'ಭಾರತ ಒಂದು' ಎಂದಾಗ ಎಲ್ಲ ರಾಜ್ಯಗಳೂ ಆರ್ಥಿಕವಾಗಿ ಪರಸ್ಪರ ಅವಲಂಬಿಗಳಾಗಿ, ಪರಸ್ಪರ ಬಲ ನೀಡುವಂತೆ ವೃದ್ಧಿಯಾಗಬೇಕು. ಕೈಗಾದ ಅಥವಾ ಕೂಡಾಂಗುಲಂ ಅಥವಾ ನೈವೇಲಿಯ ವಿದ್ಯುತ್ ಘಟಕಗಳು ತಮ್ಮ ಉತ್ಪಾದನೆಯನ್ನು ಸಾಮಾನ್ಯ ವಿತರಣ ಜಾಲಕ್ಕೆ ಸೇರಿಸುತ್ತವೆ. ಅವೆಲ್ಲ ರಾಷ್ಟ್ರೀಯ ಮೂಲತತ್ವದವು. ಅದರ ಹಂಚಿಕೆಗೆ ಸೂತ್ರವಿದೆ. ಅದನ್ನು ಗೌರವಿಸದೆ ಹೋದರೆ ಅಪಾಯ. ಒಟ್ಟಾಗಿ ಚಿಂತಿಸಿ, ಒಟ್ಟು ಸಂಪನ್ಮೂಲಗಳನ್ನು ಬಳಸುವುದರಿಂದ ಮಾತ್ರ ಅಂಥ ಘಟಕಗಳ ಸ್ಥಾಪನೆ ಸಾಧ್ಯ. ಆಂಧ್ರದಲ್ಲಿ ಭತ್ತ ಬೆಳೆದರೆ ಅದು ರಾಷ್ಟ್ರಕ್ಕೆಲ್ಲ ಒಳ್ಳೆಯದು. ಕರ್ನಾಟಕದ ಹತ್ತಿ ಕೊಯಮುತ್ತೂರಿನ ಬಟ್ಟೆಗಿರಣಿಗಳಿಗೆ ಬೇಕು. ಈ ಹಿಂದೆ ಇಂಥ ಸಹಕಾರ ಸಾಧ್ಯವಾಗದಿದ್ದ ಕಾಲದಲ್ಲಿ, ಬಿಡಿಬಿಡಿ ಬಲಹೀನ ರಾಜ್ಯಗಳಿಂದ ತುಂಬಿದ್ದ ಈ ಭೂಖಂಡವನ್ನು ಪರಕೀಯರು ಸುಲಭವಾಗಿ ಬಡಿದು, ಗೆದ್ದುಕೊಂಡರು. ಈ ಪರಸ್ಪರ ಅವಲಂಬನೆಯೇ ಬಲವೆಂಬ ತಿಳುವಳಿಕೆ ೧೮೫೭ರ ಕ್ರಾಂತಿಕಾಲದಿಂದ ಗಟ್ಟಿಗೊಂಡು, ಭೂಖಂಡದಾದ್ಯಂತ ಒಗ್ಗಟ್ಟಿನ ಸ್ವಾತಂತ್ರ್ಯ ಚಳುವಳಿ ಸಾಧ್ಯವಾದ್ದರಿಂದ ಪರಕೀಯರಿಗೆ ನಮ್ಮನ್ನು ಇನ್ನು ಆಳುವುದು ದುಸ್ತರವಾಗಿ ಬಿಟ್ಟುಹೋಗಬೇಕಾಯ್ತು. ಆದರೆ ಈ ಚಾರಿತ್ರಿಕ ಬೆಳವಣಿಗೆಯನ್ನೆಲ್ಲಾ ಮರೆತಂತೆ, ಇಂದಿನ ಪೀಳಿಗೆಯ ಕೆಲವು ಕ್ಷುದ್ರ ಹಿತಾಸಕ್ತಿಗಳು ಪ್ರತ್ಯೇಕತೆಯ ನೆಲೆಯಲ್ಲಿ ಕ್ಯಾತೆ ತೆಗೆದರೆ, ಅವುಗಳನ್ನು ಹತ್ತಿಕ್ಕಬೇಕೆ ವಿನಃ ಸೈರಿಸಿಕೊಳ್ಳಬಾರದು. ಇಂಥ ಕ್ಷುದ್ರರು ರಾಷ್ಟ್ರದಾದ್ಯಂತ ಇದ್ದಾರೆ, ನಮ್ಮಲ್ಲೂ ಇದ್ದಾರೆ. ಕರ್ನಾಟಕದ ಐಕ್ಯತೆಯನ್ನು ಪ್ರಶ್ನಿಸುವವರೂ ಅಂಥವರೆ. ನಮ್ಮ ಕೊಡಗು ನಮ್ಮೊಡನೆ ಸಂತೋಷದಿಂದ ಇರುವಂತೆ ಆಳಲಾರದವರಿಗೆ ಕಾಸರಗೋಡಿನ ಚಿಂತೆ ಯಾಕೆ? ಈಶಾನ್ಯ ಭಾರತದ, ಕಾಶ್ಮೀರದ ಗಡಿಯ ಜನ ನಮ್ಮೊಡನೆ ಇರಬೇಕೆಂದು ಬಯಸುವಂತೆ ಆಡಳಿತ ನೀಡಬೇಕು, ಕೇವಲ ಸೇನೆಯ ನೆಲೆಯಲ್ಲ ಅವು.

ಕರ್ನಾಟಕ ಬರೀ ಕನ್ನಡ ಮಾತನಾಡುವವರದ್ದಲ್ಲ. ಇದೊಂದು ಚಾರಿತ್ರಿಕ ವಾಸ್ತವ ಆ ವಾಸ್ತವದೊಳಗೆ ನಾವು ಕನ್ನಡದ ಬಗ್ಗೆ ಹೇಗೆ ನಡೆದುಕೊಳ್ಳಬೇಕು ಎನ್ನುವುದು ವಿಷಯ. ಕರ್ನಾಟಕದಲ್ಲಿ ಇಂದಿನ ಮಟ್ಟಿಗೆ ಕನ್ನಡಿಗರು ಬಹುಸಂಖ್ಯಾತರು. ಕರ್ನಾಟಕ ಏಕೀಕರಣಕ್ಕೆ ಮುಂಚೆಯೂ, ನಾವು ನಮ್ಮ ಸಾಹಿತ್ಯ ಸಮ್ಮೇಳನವನ್ನು ಮುಂಬಯಿ

ಹೈದರಾಬಾದ್, ಚೆನ್ನೈ ಇಲ್ಲೆಲ್ಲಾ ನಡೆಸಿದ್ದೇವೆ ಯಾವ ಆತಂಕವೂ ಇಲ್ಲದೆ. ಇತ್ತೀಚೆಗೆ ಬಿಹಾರ ಮೂಲದವರು ಮುಂಬಯಿಯಲ್ಲೂ, ಒಡಿಶಾ ಮೂಲದವರು ಚೆನ್ನೈನಲ್ಲೂ ತಮ್ಮ ತಮ್ಮ ರಾಜ್ಯ ದಿವಸಗಳನ್ನು ಆಚರಿಸಿಕೊಂಡರು. ಇವುಗಳಿಂದ ಮರಾಠಿಯ ಅಥವಾ ತಮಿಳಿನ ಹೆಗ್ಗಳಿಕೆಗೇನೂ ಧಕ್ಕೆ ಉಂಟಾಗಿಲ್ಲ. ಬೆಂಗಳೂರು ಮಲಯಾಳಿ ಬಂಧುಗಳು ಕನ್ನಡ ರಾಜ್ಯೋತ್ಸವ ನಡೆಸಿ, ನನ್ನನ್ನು ಅತಿಥಿಯಾಗಿ ಆಹ್ವಾನಿಸಿದ್ದರು.

ನಮ್ಮ ಹಿರಿಯ ಸಾಹಿತಿಗಳು ಉಭಯಭಾಷಾ ಪ್ರವೀಣರಾಗಿ ಕನ್ನಡವಲ್ಲದೆ, ತಮಿಳು ತೆಲುಗು, ಮರಾಠಿ, ಮಲಯಾಳಂ ಭಾಷಣದಿಂದ ಮಾನ್ಯತೆ ಪಡೆದಿದ್ದಾರೆ. ಆ ಭಾಷಿಕರ ಉತ್ತಮ ಸಾಹಿತ್ಯ, ಸಂಗೀತ, ಕುಶಲ ಕಲೆಗಳನ್ನು ನಮ್ಮ ನಾಡಿಗೆ ಪರಿಚಯಿಸಿದಾಗ ನಮ್ಮದೂ ಶ್ರೀಮಂತವಾಗುವುದು ಸಾಧ್ಯ. ನಮ್ಮಲ್ಲಿ ಉದ್ಯೋಗ ಅರಸಿ ಅಂದರೆ ಜೀವನ ಅರಸಿ ಬಂದ ಇತರ ಭಾಷಿಕರು ನಮ್ಮ ಭಾಷೆಗೆ, ತಮ್ಮ ಭಾಷೆಯ ಉತ್ತಮ ವಿಷಯಗಳನ್ನು ಹಾಗೆಯೇ ತಮ್ಮ ಭಾಷೆಗೆ ನಮ್ಮದನ್ನು ಆದಾನ-ಪ್ರದಾನ ಮಾಡಿ, ಪರಸ್ಪರ ನಂಟು ಬೆಸೆಯುವುದು ಸಾಧ್ಯ. ನಾವೇ ಈ ಬಗ್ಗೆ ಮೊದಲ ಹೆಜ್ಜೆಯಿಟ್ಟರೂ ತಪ್ಪಿಲ್ಲ. ನಮ್ಮ ಹಿರಿಮೆಯ ಬಗ್ಗೆ ನಮಗೆ ವಿಶ್ವಾಸವಿರಲಿ. ಉತ್ತಮವಾದುದು ಎಲ್ಲೆಡೆಯಿಂದ ಬರಲಿ. ವಾಸ್ತವದಲ್ಲಿ ಈ ಭಾಷಿಕ-ಸಾಂಸ್ಕೃತಿಕ ಸಮಸ್ಯೆ ಸಮಸ್ಯೆಯೇ ಅಲ್ಲ. ನಮ್ಮ ಆತಂಕವಿರುವುದು, ನಮ್ಮ ಶಿಥಿಲಗೊಳ್ಳುತ್ತಿರುವ ಆರ್ಥಿಕ ಪರಿಸ್ಥಿತಿ ಮತ್ತು ಅರಾಜಕೀಯ ಸ್ವರೂಪದ ರಾಜಕೀಯದ ಬಗ್ಗೆ.

ಕಳೆದ ಇಪ್ಪತ್ತು ವರ್ಷಗಳಿಂದ ಈ ರಾಜ್ಯದಲ್ಲಿ ಯಾವುದೇ ಸ್ಥಿರ ಆಡಳಿತ ನೀಡುವಲ್ಲಿ ಎಲ್ಲ ಪಕ್ಷಗಳೂ ವಿಫಲವಾಗಿವೆ. ಜಾತಿಯ ರಾಜಕೀಯ ಹದಗೆಟ್ಟಿದೆ. ವೇದಿಕೆಯ ಮೇಲೆ ಹಲವು ಕಾವಿ ಉಟ್ಟವರ ದೃಶ್ಯ, ಅವರ ಕಾಲು ಮುಟ್ಟುವುದೇ ರಾಜಕೀಯ ವೆಂದೆನಿಸಿರುವ ಅಸಹ್ಯ ವಾತಾವರಣ ಉಂಟಾಗಿದೆ. ನಮ್ಮ ಮಠದ ಕೃಪೆ ಇಲ್ಲದೆ ಅದ್ಯಾರು, ಹ್ಯಾಗೆ ಆಳ್ತಾರೆ ಅಂತ ವೇದಿಕೆಯಿಂದ ಸ್ವಾಮಿಗಳು ಗುಡುಗುವುದು, ಅವರಿಗೂ ನಮ್ಮ ಪ್ರಜಾಪ್ರಭುತ್ವಕ್ಕೂ ಶೋಭೆಯಲ್ಲ. ಈ ಪರಿಸ್ಥಿತಿ ಬೇರೆ ಯಾವ ರಾಜ್ಯದಲ್ಲೂ ಇಷ್ಟು ತೀವ್ರವಾಗಿ ಕಂಡುಬಂದಿಲ್ಲ. ಅಭಿವೃದ್ಧಿ ಕ್ಷೇತ್ರ ಸೊರಗಿ, ಕರ್ನಾಟಕದ ಬಡತನ ಹೆಚ್ಚಿದೆ. ಉತ್ತರ ಭಾರತದ, ಒಮ್ಮೆ ಹಿಂದುಳಿದಿದ್ದ ರಾಜ್ಯಗಳೂ ಈಗ ಬಹಳ ಮುಂದುವರಿದಿವೆ. ಬಿಹಾರ ಒಡಿಸಾ, ಉತ್ತರ ಪ್ರದೇಶ, ಮಧ್ಯಪ್ರದೇಶ ಇಲ್ಲೆಲ್ಲಾ ರಸ್ತೆಗಳು, ಶಾಲೆಗಳು, ಆಸ್ಪತ್ರೆಗಳು ಉತ್ತಮಗೊಂಡಿರುವುದನ್ನು ನಾನು ಕಂಡಿದ್ದೇನೆ. ಗುಲ್ಬರ್ಗಾ ಒಂದು ಜಿಲ್ಲೆಯಲ್ಲೇ ಅಷ್ಟೊಂದು ಜನನಾಯಕರು ಇರುವೆಡೆ, ಹಲವಾರು ರಾಜ್ಯ ರಸ್ತೆಗಳಿಗೆ ಹಲವಾರು ಬಾರಿ ದೊಡ್ಡ ಮೊತ್ತದ ಹಣ ವ್ಯಯವಾಗಿದ್ದರೂ, ಅಲ್ಲಿ ರಸ್ತೆಗಳೆಲ್ಲಾ ಹದಗೆಟ್ಟಿವೆ. ಈ ನಾಯಕರೆಲ್ಲಾ ರಾಜಧಾನಿಯನ್ನೇ ತಮ್ಮ ಮನೆ ಮಾಡಿಕೊಂಡಿದ್ದಾರೆ. ಈ ನಗರದ ಸುತ್ತ ದೊಡ್ಡ ದೊಡ್ಡ ಆಸ್ತಿ ಮಾಡಿಕೊಂಡಿದ್ದಾರೆ.

ಇತ್ತೀಚೆಗೆ ಕೆಲವು ಗ್ರಾಮ ಪಂಚಾಯ್ತಿಗಳ "ಗುಣಮಟ್ಟ ಸಮೀಕ್ಷೆ" ನಡೆಸುವ ಅವಕಾಶ ನನಗೆ ದೊರಕಿತ್ತು. ಆರಿಸಿದ ೧೨೦೦ ಗ್ರಾಮ ಪಂಚಾಯ್ತಿಗಳಲ್ಲಿ ವಿಶ್ವ ಬ್ಯಾಂಕ್

ನೆರವಿನಿಂದ ಕಳೆದ ಐದು ವರ್ಷಗಳಲ್ಲಿ ೬೦೦ ಕೋಟಿ ರೂಪಾಯಿಗಳನ್ನು ಸರ್ಕಾರದ ವತಿಯಿಂದ ವೆಚ್ಚ ಮಾಡಲಾಗಿದೆ. ಈ ಗ್ರಾಮ ಪಂಚಾಯ್ತಿಗಳನ್ನು, ನಂಜುಂಡಪ್ಪ ವರದಿಯಲ್ಲಿ ಪಟ್ಟಿ ಮಾಡಿದ್ದ ಹಿಂದುಳಿದ ಕ್ಷೇತ್ರಗಳಲ್ಲೇ ಆರಿಸಲಾಗಿದೆ. ಇಲ್ಲೆಲ್ಲಾ ಸಾಕಷ್ಟು ಸಮಾಧಾನಕರ ಅಭಿವೃದ್ಧಿಯಾಗಿರುವುದನ್ನು ಗಮನಿಸಿದ್ದೇವೆ. ಅಲ್ಲಿಯ ಗ್ರಾಮ ಪಂಚಾಯ್ತಿಗಳೂ ಬಹುತೇಕ ಸಮರ್ಪಕ ಆಡಳಿತ ನೀಡಿವೆ. ಶಾಲೆ, ಶಿಕ್ಷಣ, ಆರೋಗ್ಯ ಕುಡಿಯುವ ನೀರು, ಇಂಟರ್‌ನೆಟ್ ಸಂಪರ್ಕ, ರಸ್ತೆ ಇವೆಲ್ಲ ಚೆನ್ನಾಗಿದ್ದು ಸಂತೋಷ ವಾಯಿತು. ನಮ್ಮ ರಾಜ್ಯದಲ್ಲಿ ಸುಮಾರು ೫೯೦೦ ಪಂಚಾಯ್ತಿಗಳಿವೆ. ಪ್ರತಿ ಪಂಚಾಯ್ತಿಯಲ್ಲಿ ಸುಮಾರು ೪೦-೬೦ ಲಕ್ಷ ರೂ.ಗಳನ್ನು ಐದು ವರ್ಷಗಳಲ್ಲಿ ಪ್ರಾಮಾಣಿಕವಾಗಿ ವೆಚ್ಚ ಮಾಡಿದರೆ ಸಾಕು ಇವೆಲ್ಲ ಸಾಮಾಜಿಕವಾಗಿ, ರಾಜಕೀಯವಾಗಿ ಗರಿಗೆದರಿಕೊಂಡು ಎದ್ದುನಿಲ್ಲಬಲ್ಲವು. ಇಲ್ಲಿಯ ನಾಯಕರು, ನಮ್ಮ ನಗರವಾಸಿ ನಾಯಕರುಗಳಿಗಿಂತ ಉತ್ತಮರು. ಈ ಮಟ್ಟದಲ್ಲಿ ರಾಜಕೀಯಕ್ಕೆ ಚಿಕಿತ್ಸೆ ನೀಡುವುದು ಸುಲಭ ಸಾಧ್ಯ. ಇಲ್ಲಿಯ ಪರಿವರ್ತನೆ ಜಿಲ್ಲಾ, ರಾಜ್ಯ ಮಟ್ಟದಲ್ಲಿ ಮಹತ್ತರ ಪ್ರಜಾಪ್ರಭುತ್ವಾತ್ಮಕ ಪರಿಣಾಮ ಉಂಟುಮಾಡುತ್ತದೆ. ಕನ್ನಡ ಪರ ಹೋರಾಟವೆಂದರೆ, ಈ ಹೋರಾಟಗಾರರು ಗ್ರಾಮೀಣ ಪ್ರದೇಶದಲ್ಲಿ ಪಂಚಾಯ್ತಿಗಳು ಚೆನ್ನಾಗಿ ಕೆಲಸ ನಿರ್ವಹಿಸುವಂತೆ ಅವರೊಡನೆ ಬೆರೆತು. ಅದನ್ನು ಚಳವಳಿಯಾಗಿಸಬಾರದೇಕೆ? ಗ್ರಾಮ ಪಂಚಾಯ್ತಿಗಳು ಚೆನ್ನಾಗಿ ಕೆಲಸ ಮಾಡಿದರೆ. ಅಲ್ಲಿಂದ ನಗರಕ್ಕೆ ವಲಸೆ ಹೋಗುವುದು ನಿಲ್ಲುತ್ತದೆ. ನಗರದ ಕೊಳಚೆ ಪ್ರದೇಶಗಳು ರಿಪೇರಿಯಾಗುತ್ತವೆ, ಅದರ ಇನ್ನೊಂದು ಪರಿಣಾಮ ಕೂಲಿಕಾರರಿಗೆ ಉತ್ತಮ ಕೂಲಿ ದೊರೆಯುತ್ತದೆ. ಗ್ರಾಮ ಪಂಚಾಯ್ತಿಗಳು ಆ ಪ್ರದೇಶದ ಮಿನಿ ವಿಧಾನ ಸಭೆಗಳು. ಅವು ನಮ್ಮ ಕೆಳಮಟ್ಟದ ಪ್ರಜಾಪ್ರಭುತ್ವ ಸಂಸ್ಥೆ. ಈ ಕ್ಷೇತ್ರದಲ್ಲಿ ಕೆಲಸ ಮಾಡುವುದೂ ಕನ್ನಡದ ಕೆಲಸವೆ. ಅದನ್ನು ಅಧಿಕಾರ ಹಿಡಿಯುವ ರಾಜಕೀಯವೆಂದು ಗಣಿಸದೆ ಕೆಲಸ ಮಾಡಿದರೆ ಕನ್ನಡದ ಸೇವೆಯಾಗುತ್ತದೆ.

ಈಗ ಹೈದರಾಬಾದ್ ಕರ್ನಾಟಕಕ್ಕೆ ಕೇಂದ್ರದಿಂದ ಹೆಚ್ಚುವರಿ ಧನಸಹಾಯ ಬರುತ್ತದೆ. ಆದರೆ ಅಷ್ಟರಿಂದಲೇ ಎಲ್ಲಾ ಸರಿಹೋಗುವುದಿಲ್ಲ. ಈ ಹಿಂದೆಯೂ ಅಲ್ಲಿಗೆ ಹೆಚ್ಚಿನ ಹಣ ನೀಡಲಾಗಿದೆ. ಆದರೆ ಅಲ್ಲಿಯ ರಾಜಕೀಯ ನಾಯಕತ್ವ ವಿಫಲವಾಗಿದೆ. ಅಲ್ಲಿಯ ಕನ್ನಡಪರ ಚಳುವಳಿಗಳು ಹೊಸ ಪೀಳಿಗೆಯ ನಾಯಕರನ್ನು ಗುರುತಿಸುವಲ್ಲಿ ನೆರವಾಗಬೇಕು. ಅಲ್ಲಿಯ ಜನ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದವರು; ಸಮರ್ಥರು. ಅಭಿವೃದ್ಧಿ ಕೆಲಸಗಳನ್ನೆಲ್ಲಾ ಪಂಚಾಯ್ತಿಗಳ ಸಹಕಾರದಿಂದಲೇ ನಡೆಸಿದಾಗ ಪಾರದರ್ಶಕತೆ ಉಂಟಾಗಿ, ಸೋರಿಕೆ, ಭ್ರಷ್ಟಾಚಾರ ಕಡಿಮೆಯಾದೀತು. ಮಠಾಧಿಪತಿಗಳು ಈ ಜನಜಾಗೃತಿಯನ್ನು ಉಂಟುಮಾಡುವುದು ಅಸಾಧ್ಯ; ಪಕ್ಷ ರಾಜಕೀಯದಿಂದ, ಜಾತಿ ರಾಜಕೀಯದಿಂದ ಅವರು ಹೊರಗುಳಿಯಬೇಕು. ಶ್ರೀ ತೋಂಟದಾರ್ಯರು ಅಂಥ ನಾಯಕತ್ವ ನೀಡಿದ್ದಾರೆ ಹಲವಾರು ಬಾರಿ. ಪೋಸ್ಕೋ ವಿರುದ್ಧ ಚಳುವಳಿಗೆ ಇತ್ತೀಚೆಗೆ ಅವರು ಬೆಂಬಲ ನೀಡಿದ್ದರು.

ನಮ್ಮಲ್ಲಿ ಹತ್ತಾರು ಕನ್ನಡ ಪರ ಹೋರಾಟ ನಡೆಸುವ ಸಂಘಟನೆಗಳಿವೆ. ಕೆಲವು ಸಾಂಸ್ಕೃತಿಕ, ಭಾಷಾ, ಸಾಮಾಜಿಕ ಕ್ಷೇತ್ರಗಳಲ್ಲಿ ಸದ್ದಿಲ್ಲದೆ ಪ್ರಭಾವಯುತ ಕೆಲಸ ನಡೆಸುತ್ತಿವೆ. ಕೆಲವು ನೆಲ-ಜಲ ವಿಷಯಗಳ ಬಗ್ಗೆ ರಚನಾತ್ಮಕವಾದ ಪ್ರತಿಭಟನೆ ಹೋರಾಟ ನಡೆಸುತ್ತಿವೆ. ಗಡಿ ವಿವಾದಗಳಂಥ ಆವೇಶ ಹುಟ್ಟಿಸಬಲ್ಲ ಚಳವಳಿಗಳಿಗೆ ಎಲ್ಲಿಂದಲೋ ತಕ್ಷಣ ಅವತರಿಸಿ, ಒಂದಿಷ್ಟು ಗಲಾಟೆ ಎಬ್ಬಿಸಿ, ಮಾಯವಾಗುವುವೂ ಇವೆ. ರಾಜಕೀಯ ಪಕ್ಷಗಳಿಗೆ ಅಗತ್ಯ ಬಿದ್ದಾಗ, ಅವರು ಬಯಸುವ ಗಲಾಟೆ ಎಬ್ಬಿಸುವ ಸಂಘಟನೆಗಳೂ ಇವೆ. ಹಲವು ಒಳ್ಳೆಯ ಆಶಯಗಳನ್ನು ಹೊಂದಿದ್ದು, ಉತ್ತಮ ನೇತೃತ್ವಕ್ಕಾಗಿ ಹಂಬಲಿಸುತ್ತಿವೆ. ಇಂಥವೆಲ್ಲಾ ಆಗಾಗ್ಗೆ ಒಂದುಕಡೆ ಸಭೆ ಸೇರಿ ವಿಚಾರ ವಿನಿಮಯ ಮಾಡಿಕೊಳ್ಳಬಹುದು. ಅಗತ್ಯ ಬಿದ್ದಾಗ ಒಟ್ಟಾರೆ ಕೂಡಿ ಚಳವಳಿ ನಡೆಸಲು ಒಂದು ಸಂರಚನೆಯನ್ನು ಮಾಡಿಕೊಳ್ಳಬಹುದು. ಹಾಗೆಯೇ ರಚನಾತ್ಮಕ ಕಾರ್ಯಕ್ರಮ ಗಳನ್ನು ಗುರುತಿಸಿ, ಅವಕ್ಕೆ ಕಾರ್ಯವಿಧಾನ ರೂಪಿಸಿಕೊಳ್ಳಬಹುದು. ಹೀಗಾದಾಗ ಕನ್ನಡಪರ ಚಳವಳಿಗಳು ರಾಜಕೀಯ ಪಕ್ಷಗಳ ಸ್ವಾರ್ಥದ ಬಾಲಂಗೋಚಿಯಾಗದೆ ಆದರೂ ನಮಗೆ ಅಗತ್ಯವಾಗಿರುವ ಉತ್ತಮ ರಾಜಕೀಯ ಪ್ರಕ್ರಿಯೆ ಉಂಟುಮಾಡಲು ಸಾಧ್ಯ. ಈ ಚಳವಳಿಗಳ ಸಂಘಟನೆಗಳು ಜನರಿಗೆ ಹತ್ತಿರವಾದಷ್ಟು ರಾಜಕೀಯ ಪಕ್ಷಗಳು ಅವುಗಳನ್ನು ಹುಡುಕಿಕೊಂಡು ಬರುವಂತಾಗುತ್ತದೆ. ಸೃಜನಶೀಲವಾಗಿಯೂ ಗುಣಾತ್ಮಕವಾಗಿಯೂ ನಮ್ಮ ಚಳವಳಿಗಳು ಬದಲಾಗುವುದು ಇಂದಿನ ತುರ್ತು. ಅನೇಕ ಸಂಘಟನೆಗಳು, ಅನಗತ್ಯವಾದುವು. ಅವುಗಳನ್ನು ಜರಡಿ ಆಡಿಸಿ, ಜಳ್ಳುಗಳು ತೂರಿ ಹೋಗುವ ಕೆಲಸವೂ ಆಗಬೇಕಾಗಿದೆ. ಅಂಥ ಚಳವಳಿಗಳು ತಂತಾವೇ ಆಗುತ್ತಿರುತ್ತವೆ ಎನ್ನುವುದು ನಿಜ. ಆದರೆ ಆ ಪ್ರಕ್ರಿಯೆ ಉದ್ದೇಶಪೂರ್ವಕವಾಗಿ ಆದರೆ ಅವುಗಳು ತಾತ್ಕಾಲಿಕವಾಗಿ ಉಂಟುಮಾಡುವ ಕಷ್ಟನಷ್ಟಗಳಿಂದ ಜನತೆ ತಪ್ಪಿಸಿಕೊಳ್ಳಬಹುದು. ಹಿಟ್ಲರನು ಕಟ್ಟಿದ ಬೀದಿ ಬೀದಿಯಲ್ಲಿ ರಂಪ ಎಬ್ಬಿಸುವ ಪೋಲಿಪಟಾಲಂ ಪಡೆಗಳು ನಮಗೆ ಅಗತ್ಯವಿಲ್ಲ.

ಪಕ್ಷ ರಾಜಕೀಯದಲ್ಲಿ ಭಾಗವಹಿಸದೆ, ಆದರೂ ಅವುಗಳ ರಾಜಕೀಯ ಆಶಯ ಗಳನ್ನು ಗುಣಾತ್ಮಕವಾಗಿ ಪ್ರಭಾವಿಸುವ ಹೊರಗಿನ ಚಳವಳಿಗಳು ನಮಗೆ ಅಗತ್ಯ. ಅಂಥವು ಸೇವೆ ಎನಿಸಿಕೊಳ್ಳಬಲ್ಲುವು. ವೈಚಾರಿಕರು ವಿಚಾರ ನೀಡಬಲ್ಲರು. ಅವರೇ ಚಳುವಳಿ ಕಟ್ಟಲಾರರು. ವಾಸ್ತವವೆಂದರೆ ಇಂದು ಸಾಹಿತ್ಯ ಪರಿಷತ್ತಿನ ಚುನಾವಣೆಯೂ ರಾಜಕೀಯ ವಾಗಿರುವ ದುರಂತ. ಸಾಹಿತ್ಯ ಸಮ್ಮೇಳನದಲ್ಲಿ ಠರಾವುಗಳನ್ನು ಸ್ವೀಕರಿಸುವುದು ಅತಿ ಸುಲಭದ ಕೆಲಸ. ಅವುಗಳನ್ನು ಕಾರ್ಯಗತಗೊಳಿಸುವ ಒತ್ತಾಯ ಮಾಡುವ ಚಳವಳಿಗಳೆಲ್ಲಿ? ಕಾವೇರಿ ನೀರಿನ ಹೆಸರಿನಲ್ಲಿ ರಾದ್ಧಾಂತ ಎಬ್ಬಿಸುವುದು ಸುಲಭದ ಕೆಲಸ. ಯಾರೋ ಹೊರಗಿನ ಶತ್ರುಗಳನ್ನು ತೋರಿಸಬಹುದು ಅಲ್ಲಿ. ಆದರೆ ಪಶ್ಚಿಮಘಟ್ಟದ ಪರಿಸರ ನಾಶ ಅಥವಾ ಬಳ್ಳಾರಿಯ ಖನಿಜದ ಸೂರೆ ನಡೆಯುವಾಗ ಅವೂ ನೀರಿನಷ್ಟೇ ಮೌಲ್ಯಯುತವಾದ ನಮ್ಮ ಸಂಪತ್ತು ನಾಶವಾಗುವಾಗ, ಕನ್ನಡ ಕಾರ್ಯಕರ್ತರೇಕೆ

ಮೌನವಾಚರಿಸುತ್ತಾರೆ? ಸಿಕ್ಕಿದಷ್ಟು ಕೃಷ್ಣಾ ನದಿ ನೀರನ್ನು ಬಳಸಲು ಬೇಕಾದ ಅಣೆಕಟ್ಟು ಕಟ್ಟದ ನಾಲಾಯಕ್ಕುಗಳ ವಿರುದ್ಧ ದನಿ ಏರುವುದಿಲ್ಲ ಏಕೆ? ಇಂಥ ಹಲವನ್ನು ಪಟ್ಟಿ ಮಾಡಬಹುದು. ವಿಷಯವೆಂದರೆ ಯಾವುದು ಭಾವುಕ ಆವೇಶವನ್ನು ಉಂಟುಮಾಡಿ ಕ್ಷಣಕಾಲ ಹೋರಾಟದ ಮೋಜು ತರುತ್ತದೋ, ಅವುಗಳ ಬೆನ್ನುಬಿದ್ದವರೇ ನಮ್ಮ ಚಳವಳಿಗಳಲ್ಲಿ ಕಂಡುಬರುತ್ತಿದ್ದಾರೆ. ನಾಡಿನ ನಿರ್ಮಾಣವೆಂದರೆ ಇವಲ್ಲ. ಸಾಮಾಜಿಕ ಆರ್ಥಿಕ ಸಮೃದ್ಧಿಯನ್ನು ಸಾಧಿಸಿದಾಗ, ಈ ಭಾವುಕ ವಿಷಯಗಳ ಕಾರಣಗಳು ತಂತಾವೇ ಪರಿಹಾರ ಕಾಣುತ್ತವೆ. ಇಲ್ಲದಿದ್ದರೆ ನಮ್ಮ ಚಳವಳಿಗಳು ಅವಕಾಶವಾದಿ ರಾಜಕೀಯದ ಕೈಗೊಂಬೆಗಳಾಗುತ್ತವೆ. ಅಂಥ ಚಳವಳಿಗಳನ್ನು ಕಟ್ಟಿ ರಾಜ್ಯವನ್ನು ಸಮೃದ್ಧಿಗೊಳಿಸಿರುವ ಕೇರಳ ಶಾಸ್ತ್ರ ಪರಿಷತ್ತು ನಮಗೆ ಮಾರ್ಗದರ್ಶಕವಾಗಬಹುದು. ನೂರಕ್ಕೆ ನೂರು ಸಾಕ್ಷರತೆಯನ್ನು ಸಾಧಿಸಿದ ಈ ಚಳವಳಿ, ಸಾಮಾನ್ಯ ಜನರಲ್ಲಿ ವೈಜ್ಞಾನಿಕ ಚಿಂತನಾ ಕ್ರಮವನ್ನು ಬೆಳೆಸಲು, ಅವರು ತಮ್ಮ ಪ್ರಕೃತಿ–ಪರಿಸರ ರಕ್ಷಿಸಿಕೊಳ್ಳಲು ಮುಂದಾಗಲು ಹೋರಾಟ ರಚಿಸಿ, ಜಯಗಳಿಸಿದೆ. ನಮ್ಮ ನಾಡಿನಲ್ಲಿ ಅಂಥದೇ ಚಳವಳಿ ಆಗಬೇಕು.

ಚಳವಳಿಗಳು ಸೃಜನಶೀಲವಾಗಿ ರೂಪುಗೊಳ್ಳಬೇಕು. ಕರ್ನಾಟಕದ್ದು, ಅಖಿಲ ಭಾರತದಂತೆಯೇ, ವಿಶಿಷ್ಟ ಸಮಸ್ಯೆ. ಜನ ರಾಜ್ಯದಿಂದ ರಾಜ್ಯಕ್ಕೆ ವಲಸೆ ಹೋಗುವುದನ್ನು ತಪ್ಪೆಂದು ಹೇಳಲು, ತಡೆಯಲು ಆಗುವುದಿಲ್ಲ. ಇತ್ತೀಚೆಗೆ ಕನ್ನಡಿಗರೂ ಹೆಚ್ಚು ವಲಸೆ ಹೋಗುತ್ತಿದ್ದಾರೆ. ಬರುವ ದಿನಗಳಲ್ಲಿ ಜನ ತಾವು ನೆಲಸುವ ಸ್ಥಳದ ಭಾಷಾ ಸಂಸ್ಕೃತಿಯ ಬಗ್ಗೆ ಪ್ರೀತಿ ತೋರುತ್ತಾರೆ. ತಮ್ಮದೇ ಭಾಷಾ ಸಂಸ್ಕೃತಿಯ ಒಳ್ಳೆಯ ವಿಷಯಗಳನ್ನು ಅವರಿಗೆ ನೀಡಿ, ಅವರದ್ದನ್ನು ಕಲಿತು, ಪ್ರೀತಿ ಸಂಪಾದಿಸುತ್ತಾರೆ. ಕನ್ನಡ ಚಳವಳಿಯೆಂದರೆ ಆಗೊಮ್ಮೆ ಈಗೊಮ್ಮೆ ಬೆಳಗಾವಿಯಲ್ಲಿ ಗಲಾಟೆ ಮಾಡುವುದಲ್ಲ. "ಭಾರತ ಜನನಿಯ ತನುಜಾತೆ" ಎಂದರೆ ಅದೇ ಅರ್ಥ.

ನಾವು ಬೇರೆ ಯಾರ ಮೇಲೋ ಕೋಪಿಸಿಕೊಂಡು ಹೊಡೆದಾಟಕ್ಕೆ ಇಳಿಯುವ ಮೊದಲು, ನಾವು ಮಾಡಬೇಕಾದ್ದನ್ನೆಲ್ಲ ಮಾಡಿದ್ದೇವೆಯೆ ಎಂದು ಪ್ರಶ್ನಿಸಿಕೊಳ್ಳಬೇಕು. ಲೋಕಸಭೆಯಲ್ಲಿ ಯಾವ ಭಾಷೆಯಲ್ಲಿ ಮಾತನಾಡಿದರೂ ಭಾಷಾಂತರ ಲಭ್ಯವಿದ್ದು ಅರ್ಥಗ್ರಹಿಕೆಗೆ ಏನೂ ತೊಂದರೆಯಿಲ್ಲ. ಅದರೆ ನಮ್ಮ ಪ್ರತಿನಿಧಿಗಳು ತಪ್ಪು ತಪ್ಪಾಗಿ ಇಂಗ್ಲಿಷಿನಲ್ಲಾದರೂ ಮಾತನಾಡುತ್ತಾರೆ, ಕನ್ನಡದಲ್ಲಲ್ಲ. ತಮಿಳರಿಂದ ಈ ಬಗ್ಗೆ ಬಹಳಷ್ಟು ಕಲಿಯಬಹುದಲ್ಲ? ಕನ್ನಡದಲ್ಲೇ ಸರ್ಕಾರದ ಪತ್ರಗಳನ್ನು ಕೇಂದ್ರ/ರಾಜ್ಯ ಎರಡು ಕಡೆಯೂ ಬರೆಯಬಹುದಲ್ಲ? ಕೈಗಾರಿಕೋದ್ಯಮಿಗಳ ಸಭೆಯಲ್ಲಿ ಕನ್ನಡಿಗರ ಉಡುಪು ತೊಟ್ಟು, ಕನ್ನಡದಲ್ಲಿ ಮಾತನಾಡಬಹುದಲ್ಲ? ಸರ್ಕಾರಿ ಶಾಲೆಗೇ ನಮ್ಮ ಮಕ್ಕಳನ್ನು ಸೇರಿಸಿ ಕನ್ನಡ ಮಾಧ್ಯಮಕ್ಕೆ ಗೌರವ ತರಬಹುದಲ್ಲ? ವಾಣಿಜ್ಯವೂ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಅಗತ್ಯವಿರುವ ಇಂಗ್ಲಿಷನ್ನು ಪ್ರೈಮರಿ ಶಾಲೆಯಲ್ಲಿ ಕಲಿಸುತ್ತಲೇ, ಕನ್ನಡ ಮಾಧ್ಯಮವನ್ನು ಉಳಿಸುವುದು ಸಾಧ್ಯ. ಕನ್ನಡ ಮಾಧ್ಯಮದಲ್ಲಿ ಇಂಗ್ಲಿಷನ್ನು ಕಲಿಸಿದರೆ ಮಕ್ಕಳು ಇನ್ನೂ ಚೆನ್ನಾಗಿ ಕಲಿಯಬಲ್ಲರು. ಹಾಗೂ ಮಕ್ಕಳಿಗೆ ಏಕಕಾಲದಲ್ಲಿ ೨–೩ ಭಾಷೆಗಳನ್ನು

ಕಲಿಯುವ ಸಾಮರ್ಥ್ಯವಿದೆ. ಆದರೆ ಅವೆಲ್ಲವನ್ನೂ, ವಿಜ್ಞಾನ ವಿಷಯವನ್ನೂ ಕನ್ನಡದಲ್ಲಿ ಕಲಿಸಿದಾಗ ಚೆನ್ನಾಗಿ ಕಲಿಯಬಲ್ಲರು. ಒಟ್ಟಿನಲ್ಲಿ ಕನ್ನಡದ ವಿಷಯವನ್ನು ಎಲ್ಲೂ ಯಾವುದೇ ತತ್ವಾಂಧತೆಯ ಆವೇಶದಲ್ಲಿ ಹೇಳುವ ಅಗತ್ಯವಿಲ್ಲ. ಕನ್ನಡ ಒಂದು ಭಾಷೆಯಾಗಿ ಯಾರೂ ತಿರಸ್ಕರಿಸಲಾರದಷ್ಟು ಹಿರಿಮೆಯನ್ನು ಪಡೆದಿದೆ. ಗಟ್ಟಿ ನೆಲೆ ಹೊಂದಿದೆ. ಕನ್ನಡದ ಸಂಸ್ಕೃತಿಯೂ ಅಷ್ಟೇ ಶ್ರೀಮಂತವಾಗಿದೆ. ಈ ವಿಷಯದಲ್ಲಿ ಕೀಳರಿಮೆಗೆ ಅವಕಾಶವೇ ಇಲ್ಲ. ಈಗ ಆಗಬೇಕಾಗಿರುವುದು ಒಳ್ಳೆಯ ರಾಜಕೀಯ, ಆರ್ಥಿಕ ಪ್ರಗತಿ, ಬಡತನ ನಿವಾರಣೆ. ಈ ಕ್ಷೇತ್ರದಲ್ಲಿ ಒಳ್ಳೆಯ ಬೆಳವಣಿಗೆಯಾಗದೆ ಕನ್ನಡಕ್ಕೆ ರಕ್ಷೆ ಇಲ್ಲ. ನಮ್ಮ ಎಲ್ಲಾ ಚಳವಳಿಗಳ ಶಕ್ತಿಯೂ ಈ ಕ್ಷೇತ್ರಗಳಿಗೆ ಮೀಸಲಾಗಬೇಕಾದ ತಿರುವಿನ ಸಂದರ್ಭದಲ್ಲಿ ನಾವಿದ್ದೇವೆ. ದುಷ್ಟ-ಭ್ರಷ್ಟರಿಂದ ನಮ್ಮ ವಿಧಾನಸೌಧವನ್ನು ರಕ್ಷಿಸದೆ ಕನ್ನಡದ ರಕ್ಷೆ ಯಾಗುವುದಿಲ್ಲ. ರಾಜ್ಯದ ಒಟ್ಟಾರೆ ಹಿತದ ವಿಷಯದಲ್ಲೂ, ಒಕ್ಕೊರಲಿನಿಂದ ಮಾತನಾಡಲಾರದ ನಮ್ಮ ಛಿದ್ರ-ಕ್ಷುದ್ರ ರಾಜಕೀಯಕ್ಕೆ ಧಿಕ್ಕಾರವಿರಲಿ!



ಕನ್ನಡ ಭಾಷಾ ಬೆಳವಣಿಗೆ – ಪ್ರಸ್ತುತ ಸವಾಲುಗಳು

■ ಡಾ. ಬಸವರಾಜ ಸಬರದ

ಭಾರತದ ಪ್ರಮುಖ ಭಾಷೆಗಳಲ್ಲಿ ಕನ್ನಡಕ್ಕೆ ವಿಶಿಷ್ಟವಾದ ಸ್ಥಾನವಿದೆ. ಪಂಚದ್ರಾವಿಡ ಭಾಷೆಗಳಲ್ಲಿ ತಮಿಳಿಗೆ ಸರಿಸಮವಾಗಿ ಕನ್ನಡವೂ ಪ್ರಾಚೀನ ಭಾಷೆಯಾಗಿದೆ. ಕನ್ನಡ ಕೇವಲ ಪ್ರಾಚೀನ ಭಾಷೆಯಷ್ಟೇ ಅಲ್ಲ; ಅದು ಪ್ರಬುದ್ಧವಾದ ಭಾಷೆ ಕೂಡ. ಕನ್ನಡಿಗರ ಸಾಂಸ್ಕೃತಿಕ ಸ್ಮೃತಿಗಳನ್ನು ಕಟ್ಟಿಕೊಟ್ಟ ಭಾಷೆ. ಕರ್ನಾಟಕದ ಹಿರಿಮೆಯನ್ನು ಎತ್ತಿಹಿಡಿದ ಭಾಷೆ. ಅನೇಕ ವಿಷಯಗಳಲ್ಲಿ ಮೂಢ ನಂಬಿಕೆಗಳಿರುವಂತೆ ಭಾಷೆಯ ವಿಷಯದಲ್ಲಿಯೂ ಕೆಲವು ಮೂಢ ನಂಬಿಕೆಗಳಿವೆ. ಭಾರತದಲ್ಲಿ ಹಿಂದಿ ರಾಷ್ಟ್ರಭಾಷೆಯೆಂದು ಕೆಲವರು ನಂಬಿದ್ದಾರೆ. ಭಾರತದಲ್ಲಿ ಸಂವಿಧಾನದ ಪ್ರಕಾರ ಹದಿನೆಂಟು ಭಾಷೆಗಳಿಗೆ ರಾಷ್ಟ್ರಮಾನ್ಯತೆಯಿದೆ. ಹೀಗಾಗಿ ಈ ಹದಿನೆಂಟೂ ಭಾಷೆಗಳು ಭಾರತದ ರಾಷ್ಟ್ರಭಾಷೆಗಳಾಗಿವೆ. ಭಾರತದ ವಿವಿಧ ರಾಜ್ಯಗಳ ರಾಜ್ಯಭಾಷೆಯಂತೆ, ಹಿಂದಿ ಕೂಡ ಒಂದು ರಾಜ್ಯದ ರಾಜ್ಯಭಾಷೆಯಾಗಿದೆಯಷ್ಟೆ. ಉತ್ತರ ಭಾರತದ ಕೆಲವು ರಾಜ್ಯ ಭಾಷೆಗಳಿಗೆ ಹಿಂದಿ ಭಾಷೆ ಪ್ರೇರಣೆ ನೀಡಿರುವುದರಿಂದ ಭಾರತದ ಇತರ ರಾಜ್ಯಭಾಷೆಗಳನ್ನಾಡುವ ಜನರಿಗಿಂತ, ಹಿಂದಿ ಭಾಷೆ ಯನ್ನಾಡುವ ಜನ ಹೆಚ್ಚಾಗಿದ್ದಾರೆ. ಹೀಗಾಗಿ ಹಿಂದಿ ಭಾಷೆ ಈ ದೇಶದ ಸಂಪರ್ಕಭಾಷೆಯಾಗುತ್ತದೆಯೇ ಹೊರತು ಅದು ರಾಷ್ಟ್ರಭಾಷೆಯಾಗಲಾರದು. ಅದೇ ರೀತಿ ಇಂಗ್ಲಿಷ್ ಅಂತರರಾಷ್ಟ್ರೀಯ ಸಂಪರ್ಕ ಭಾಷೆಯಾಗುತ್ತದೆಯೇ ಹೊರತು ಅದು ಅಂತರರಾಷ್ಟ್ರೀಯ ಭಾಷೆಯಾಗಲಾರದು. ಬಹು ಭಾಷೆಗಳ, ಬಹು ಸಮುದಾಯಗಳ ಬಹುಮುಖೀ ಚಿಂತನೆಗಳ ದೇಶ ಭಾರತ. ಹೀಗಾಗಿ ಇಲ್ಲಿ ಅನೇಕ



ಜಾತಿ-ಧರ್ಮಗಳಿರುವಂತೆ, ಬಹು ಸಮುದಾಯಗಳಿರುವಂತೆ ಬಹು ಭಾಷೆಗಳಿವೆ. ಅವೆಲ್ಲ ರಾಷ್ಟ್ರಭಾಷೆಗಳೇ ಆಗಿವೆ.

ಭಾಷಾ ರಾಜಕೀಯ

ನೆಲ-ಜಲದ ರಾಜಕೀಯವಿರುವಂತೆ ಭಾಷೆಯ ಬಗೆಗೂ ರಾಜಕೀಯವಿದೆ. ಭಾಷಾವಾರು ರಾಜ್ಯಗಳು ರಚನೆಯಾಗಿ ಅರ್ಧಶತಮಾನ ಕಳೆದರೂ ಕೇಂದ್ರಕ್ಕೆ ಹಿಂದಿಯೊಂದನ್ನು ಬಿಟ್ಟು, ಭಾರತದ ಇತರ ಭಾಷೆಗಳಾವುವೂ ಕಣ್ಣಿಗೆ ಕಾಣಿಸಿಯೇ ಇಲ್ಲ. ಹಿಂದಿಯೇತರ ರಾಜ್ಯಗಳ ಮೇಲೆ ಹಿಂದಿಯನ್ನು ಹೇರುವದೆಂದರೆ ಪ್ರಜಾಪ್ರಭುತ್ವವನ್ನೇ ಕಟ್ಟಿ ಹಾಕಿದಂತಾಗುತ್ತದೆ. ಪ್ರಜಾಪ್ರಭುತ್ವದಿಂದ ವಿಕೇಂದ್ರೀಕರಣ ಪ್ರಕ್ರಿಯೆ ನಡೆದರೆ ಅಧಿಕಾರಶಾಹಿಯಿಂದ ಕೇಂದ್ರೀಕರಣದ ವಿಚಾರ ಜಾರಿಗೆ ಬರುತ್ತದೆ. ಬಹು ಭಾಷೆಗಳಲ್ಲಿ ಬಹು ಸಂಸ್ಕೃತಿಗಳಲ್ಲಿ, ಬಹು ಸಮುದಾಯಗಳಲ್ಲಿಯೇ ಭಾರತದ ಶಕ್ತಿಯಡಗಿದೆ. ಅಂತಹ ವೈವಿಧ್ಯತೆಯೇ ಬದುಕಿನ ಕುತೂಹಲವಾಗಿದೆ. ಕೇಂದ್ರೀಕರಣಗೊಳಿಸುವುದರಿಂದ ಬಹುಸಂಖ್ಯಾತ ಭಾಷೆಗಳು, ಜನಸಮುದಾಯಗಳು ತಿರಸ್ಕರಿಸಲ್ಪಡುತ್ತವೆ. ಕೇಂದ್ರ ಸರಕಾರ ಹಿಂದಿ ರಾಜಕೀಯವನ್ನು ಕೈಬಿಟ್ಟು, ಪ್ರಾದೇಶಿಕ ಭಾಷೆಗಳನ್ನು ಬೆಳೆಸುವಲ್ಲಿ ಯೋಜನೆಗಳನ್ನು ರೂಪಿಸಿಕೊಳ್ಳಬೇಕಾಗಿದೆ.

ರಾಷ್ಟ್ರೀಯ ಜಲನೀತಿ ಹೇಗೆ ಗೊಂದಲಕ್ಕೊಳಗಾಗಿದೆಯೋ, ಹಾಗೆ ಭಾಷಾ ನೀತಿಯೂ ಸ್ಪಷ್ಟವಾಗಿಲ್ಲ. ಕೃಷ್ಣೆ, ಕಾವೇರಿಯರ ಸಮಸ್ಯೆಗಳಂತೆ; ಗಡಿ, ಭಾಷೆಯ ಸಮಸ್ಯೆ ಕೂಡಾ ತೀವ್ರವಾಗಿದೆ. ಮಹಾಜನ ವರದಿಯನ್ನು ಮಹಾರಾಷ್ಟ್ರ ಹೊರತುಪಡಿಸಿ ಉಳಿದ ರಾಜ್ಯಗಳು ಒಪ್ಪಿಕೊಂಡು ಬಂದಿದ್ದರೂ, ಮತ್ತೆ ಮತ್ತೆ ಗಡಿಪ್ರದೇಶಗಳು ಸಮಸ್ಯೆಗಳ ಸುಳಿಯಲ್ಲಿ ಸಿಕ್ಕಿಕೊಂಡು ನರಳುತ್ತಲಿವೆ. ಕನ್ನಡ, ಕೇವಲ ಕರ್ನಾಟಕದಲ್ಲಿ ಮಾತ್ರವಲ್ಲದೆ ಅದು ಹೊರ ರಾಜ್ಯಗಳಲ್ಲಿದೆ, ಹೊರ ದೇಶಗಳಲ್ಲಿಯೂ ಇದೆ. ಈ ಮಾತು ಭಾರತದ ಇತರ ಭಾಷೆಗಳಿಗೂ ಅನ್ವಯಿಸುತ್ತದೆ. ಹೀಗಾಗಿ ಕನ್ನಡವೂ ಕೂಡ ವಿಶ್ವಭಾಷೆಯಾಗಿದೆ. ಕರ್ನಾಟಕದ ಕನ್ನಡಿಗರ ಜತೆಗೆ, ಗಡಿನಾಡ ಕನ್ನಡಿಗರು, ಹೊರನಾಡ ಕನ್ನಡಿಗರು ಹೊರದೇಶಗಳ ಕನ್ನಡಿಗರೂ ಇದ್ದಾರೆ. ಕನ್ನಡದಂತಹ ಕೆಲವು ಶಕ್ತಿಶಾಲಿ ಭಾಷೆಗಳು ರಾಷ್ಟ್ರಭಾಷೆಗಳಾಗಿರುವಂತೆ ವಿಶ್ವಭಾಷೆಗಳೂ ಆಗಿವೆ.

ಮಾಧ್ಯಮದ ಸಮಸ್ಯೆ

ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಯಾವುದೇ ವ್ಯಕ್ತಿ, ಯಾವುದೇ ರಾಜ್ಯದಲ್ಲಿ ವಾಸಿಸುವ ಹಕ್ಕು ಪಡೆದಿದ್ದಾನೆ. ಹೀಗೆ ಹಕ್ಕು ಹೊಂದಿದ ವ್ಯಕ್ತಿ ಆ ರಾಜ್ಯದ ನೆಲ-ಜಲ-ಭಾಷೆಯನ್ನು ಬಳಸಬೇಕಾದದ್ದು ಅವನ ಕರ್ತವ್ಯವಾಗುತ್ತದೆ. ನಾವು ನಮ್ಮ ಹಕ್ಕುಗಳನ್ನು ಮಾತ್ರ ಪ್ರತಿಪಾದಿಸುತ್ತೇವೆಯೇ ಹೊರತು, ನಮ್ಮ ಕರ್ತವ್ಯಗಳನ್ನಲ್ಲ. ಹೀಗಾಗಿಯೇ ಸಮಸ್ಯೆಗಳು ಬೆಳೆದುನಿಂತಿವೆ. ನಮ್ಮ ದೇಶದ ವಿವಿಧ ರಾಜ್ಯ ಭಾಷೆಗಳು ಉಳಿಯಬೇಕಾದರೆ, ಬೆಳೆಯಬೇಕಾದರೆ ಸರಕಾರಗಳು ಕೆಲವು ನಿರ್ಣಯಗಳನ್ನು ತೆಗೆದುಕೊಳ್ಳಲೇಬೇಕಾಗುತ್ತದೆ. ಈ ದೇಶದ ಯಾವುದೇ ಪ್ರಾಂತದಲ್ಲಿ ಜನಿಸಿದ ವ್ಯಕ್ತಿ, ಮತ್ತಾವುದೇ ಪ್ರಾಂತಕ್ಕೆ ಹೋಗಿ ವಾಸಿಸುವ ಹಕ್ಕನ್ನು ಪಡೆದುಕೊಂಡಿದ್ದಾನೆ. ಯಾರು ಒಂದು ಪ್ರಾಂತ್ಯದಲ್ಲಿ, ಒಂದು

ರಾಜ್ಯದಲ್ಲಿ ವಾಸಿಸುತ್ತಾರೋ, ಆ ರಾಜ್ಯದ ರಾಜ್ಯಭಾಷೆಯೇ ಅವರೆಲ್ಲರ ಭಾಷೆ ಆಗಿರುತ್ತದೆ. ಹೀಗಾಗಿ ಅವರ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸುವಾಗ ಕನಿಷ್ಠ ಹೈಸ್ಕೂಲ್‌ವರೆಗಾದರೂ ಆ ರಾಜ್ಯಭಾಷೆಯಲ್ಲಿಯೇ ಶಿಕ್ಷಣ ನೀಡುವಂತಾಗಬೇಕು. ಶಿಕ್ಷಣ ಮಾಧ್ಯಮದ ಭಾಷೆ, ಆಯಾ ರಾಜ್ಯದ ಭಾಷೆಯಾಗಬೇಕೇ ಹೊರತು, ಮಾತೃಭಾಷೆಯಲ್ಲ. ಮಾತೃಭಾಷೆಯೆಂದಾಕ್ಷಣ ಅನೇಕ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಬೆಂಗಳೂರಿನಂತಹ ಕರ್ನಾಟಕದ ರಾಜಧಾನಿಯಲ್ಲಿ ಕನ್ನಡ ಮಾತೃಭಾಷಿಕರೇ ಅಲ್ಪಸಂಖ್ಯಾತರಾಗಿದ್ದಾರೆ. ಆದುದರಿಂದ ಶಿಕ್ಷಣದ ಮಾಧ್ಯಮ ಭಾಷೆ, ಕನಿಷ್ಠ ಹೈಸ್ಕೂಲ್‌ವರೆಗೆ ಕನ್ನಡದಲ್ಲೇ ಆಗಬೇಕೆಂಬ ಭಾಷಾನೀತಿ ಜಾರಿಗೆ ಬಂದರೆ ಸಮಸ್ಯೆಗಳೇ ಇರುವುದಿಲ್ಲ. ಕರ್ನಾಟಕದಲ್ಲಿ ವಾಸಿಸುವವರು ಯಾರೇ ಇರಲಿ ಅವರೆಲ್ಲ ಕನ್ನಡಿಗರು. ಅಂತಹ ಕನ್ನಡಿಗರಾದವರು ಕನ್ನಡ ಭಾಷೆಯ ಮಾಧ್ಯಮದಲ್ಲಿ ಶಿಕ್ಷಣ ಪಡೆಯುವುದು ಅವರ ಹಕ್ಕು ಮತ್ತು ಕರ್ತವ್ಯ ಕೂಡ.

ಹೈಸ್ಕೂಲ್‌ವರಗೆ ಕನ್ನಡ ಮಾಧ್ಯಮದಲ್ಲಿ ಓದಿದವರಿಗೆ ಮಾತ್ರ ಸರಕಾರಿ ನೌಕರಿಗಳಲ್ಲಿ ಪ್ರಾಧಾನ್ಯತೆ ನೀಡಲಾಗುವುದೆಂದು ಸರಕಾರ ಆದೇಶ ಹೊರಡಿಸಲಿ, ಆಗ ಇಂಗ್ಲಿಷ್ ಶಾಲೆಗಳು ತಾವಾಗಿಯೇ ಮುಚ್ಚುತ್ತವೆ. ಒಂದು ಭಾಷೆ ಆ ರಾಜ್ಯದ ಹಿರಿಮೆಯ ಸಂಕೇತವಾಗಬೇಕಾದರೆ, ಅದು ಅನ್ನ ಕೊಡುವ ಶಕ್ತಿಯನ್ನು ಪಡೆದಿರಬೇಕು. ಕನ್ನಡಕ್ಕೆ ಆ ಶಕ್ತಿ ಇದೆ. ಆದ್ದರಿಂದ ಅದು ಕನ್ನಡಿಗರಿಗೆ ಅನ್ನಕೊಡುವ ಭಾಷೆಯಾಗಬೇಕು. ಆಗ ಕರ್ನಾಟಕದಲ್ಲಿಯೇ ವಾಸಿಸಲಿಚ್ಛಿಸುವವರು, ಸರಕಾರಿ ನೌಕರಿ ಬೇಕೆನ್ನುವವರು ಕನ್ನಡವನ್ನು ಕಡ್ಡಾಯವಾಗಿ ಕಲಿಯಲೇಬೇಕಾಗುತ್ತದೆ. ಹೀಗೆ ಭಾಷಾನೀತಿಯನ್ನು ಕೇಂದ್ರ ಮತ್ತು ರಾಜ್ಯಸರಕಾರಗಳು ಕೂಡಿಕೊಂಡು ಚರ್ಚಿಸಿ, ರೂಪಿಸಿ ಜಾರಿಗೆ ತಂದರೆ ಮಾತ್ರ ಭಾರತದ ಬಹು ಭಾಷೆಗಳು ಬೆಳೆಯಲು ಸಾಧ್ಯ, ಉಳಿಯಲು ಸಾಧ್ಯ. ಇಲ್ಲದೆ ಹೋದರೆ ಬಹು ಭಾಷೆಗಳ ಭಾರತ, ಇಂಗ್ಲಿಷ್ ಭಾಷೆಯ ಗುಲಾಮಿತನದಲ್ಲಿ ಬದುಕಬೇಕಾಗುತ್ತದೆ. ಬಹು ಸಂಸ್ಕೃತಿಗಳ ಹಿರಿಮೆ ಕಳೆದುಹೋಗಿ, ಪಾಶ್ಚಾತ್ಯ ಸಂಸ್ಕೃತಿಯೊಂದೇ ನಮ್ಮನ್ನಾವರಿಸಿ ಬಿಡುತ್ತದೆ.

ಉದ್ಯೋಗವನ್ನು ಸೃಷ್ಟಿಸಲಾರದ ಭಾಷೆ, ಸಂಸ್ಕೃತಿಯನ್ನು ಬೆಳೆಸದ ಭಾಷೆ ಬಹು ದಿನಗಳವರೆಗೆ ಉಳಿಯಲಾರದು. ಕರ್ನಾಟಕದಲ್ಲಿ ಕನ್ನಡ ಹೇಗೆ ಉಳಿಯಬೇಕೋ ಹಾಗೆಯೇ ಇತರ ರಾಜ್ಯಗಳಲ್ಲಿಯೂ ಆಯಾ ರಾಜ್ಯಗಳ ರಾಜ್ಯಭಾಷೆಗಳು ಉಳಿಯಬೇಕು ಬೆಳೆಯಬೇಕು. ಹೀಗೆ ಈ ರಾಷ್ಟ್ರೀಯ ಭಾಷೆಗಳು ಉಳಿದು–ಬೆಳೆಯಬೇಕಾದರೆ ರಾಷ್ಟ್ರೀಯ ಭಾಷಾನೀತಿಯನ್ನು ಜಾರಿಗೆ ತರಲೇಬೇಕಾಗುತ್ತದೆ.

ಹೀಗೆಂದಾಕ್ಷಣ ಆಯಾರಾಜ್ಯದ ಮಕ್ಕಳು ಇತರ ಭಾಷೆಗಳನ್ನು ಓದಬಾರ ದೆಂದರ್ಥವಲ್ಲ. ತನ್ನ ರಾಜ್ಯಭಾಷಾ ಮಾಧ್ಯಮದಲ್ಲಿ ಶಿಕ್ಷಣ ಪಡೆಯುವ ವಿದ್ಯಾರ್ಥಿ, ಅದೇ ಸಂದರ್ಭದಲ್ಲಿ ಭಾರತದ ಸಂಪರ್ಕ ಭಾಷೆ ಹಿಂದಿಯನ್ನು, ಅಂತರರಾಷ್ಟ್ರೀಯ ಸಂಪರ್ಕ ಭಾಷೆ ಇಂಗ್ಲಿಷನ್ನು ಓದಬೇಕು. ಈ ತ್ರಿಭಾಷಾ ಸೂತ್ರದಲ್ಲಿ ಇಂದು ಕನ್ನಡವೇ ಕರಗಿಹೋಗಿದೆ, ಎಲ್ಲೆಲ್ಲೂ ಇಂಗ್ಲಿಷ್ ಭಾಷೆಯ ಭ್ರಮೆ ಹೆಚ್ಚಾಗಿದೆ. ಇಂತಹ ಭ್ರಮೆಗಳಿಂದ ಬಿಡಿಸಿಕೊಳ್ಳಬೇಕಾದರೆ ನಮ್ಮ ಭಾಷಾನೀತಿ ಸ್ಪಷ್ಟವಾಗಿರಬೇಕಾಗುತ್ತದೆ. ಕನ್ನಡಿಗರು ಇತರ

ಭಾಷೆಗಳನ್ನು ಕನ್ನಡದ ಕೇಂದ್ರದಲ್ಲಿ ಕಲಿಯಬೇಕೇ ಹೊರತು, ಕನ್ನಡವನ್ನು ಬಿಟ್ಟು ಅಲ್ಲವೆಂಬ ಸತ್ಯ ತಿಳಿಯಬೇಕಾಗಿದೆ.

ಕನ್ನಡ ಉಳಿದಿರುವುದೆಲ್ಲಿ?

ಈ ರಾಜ್ಯದಲ್ಲಿ ಕನ್ನಡವನ್ನು ಉಳಿಸುತ್ತಿರುವವರು, ಬೆಳೆಸುತ್ತಿರುವವರು ನಮ್ಮ ಗ್ರಾಮೀಣ ಜನರು. ಕನ್ನಡ ಭಾಷೆ, ದೇಸಿ ಸಂಸ್ಕೃತಿ, ಉಳಿದಿರುವುದು ಅವರಿಂದ. ಭಾಷಾ ಪಂಡಿತರಿಂದ, ಉನ್ನತ ಶಿಕ್ಷಣ ಪಡೆದವರಿಂದ ಕನ್ನಡದ ಉಳಿವು ಸಾಧ್ಯವಿಲ್ಲವೆನ್ನುವಷ್ಟರ ಮಟ್ಟಿಗೆ ಕಂದಕಗಳು ನಿರ್ಮಾಣಗೊಂಡಿವೆ.

ನಮ್ಮ ಗ್ರಾಮೀಣ ಜನರು, ಏಕಕಾಲಕ್ಕೆ ಎರಡು ಪ್ರಕ್ರಿಯೆಗಳ ಮೂಲಕ ಕನ್ನಡವನ್ನು ಉಳಿಸುವ, ಬೆಳೆಸುವ ಕಾರ್ಯದಲ್ಲಿರುತ್ತಾರೆ. ಅವರು ಅಚ್ಚಗನ್ನಡ ಪದಗಳನ್ನು ದಿನನಿತ್ಯ ಬಳಸುತ್ತ, ಅವುಗಳ ಬೆಳವಣಿಗೆಗೆ ಕಾರಣರಾಗುತ್ತಾರೆ. ಅಪ್ಪ, ಅವ್ವ, ಅಕ್ಕ, ಅಣ್ಣ, ತಮ್ಮ ಇವೆಲ್ಲ ಅಚ್ಚಗನ್ನಡ ಪದಗಳು. ಇಲ್ಲಿ 'ಪ' ಕ್ಕೆ 'ಪ್' ಒತ್ತು, 'ಕ' ಕ್ಕೆ 'ಕ್' ಒತ್ತು ಬಂದಿವೆ. ಅಂದರೆ ಕನ್ನಡ ಸುಲಿದ ಬಾಳೆಯ ಹಣ್ಣಿನಂತಿದೆ. ಅತ್ಯಂತ ಸುಲಭ–ಸರಳ ಹಾಗೂ ಹೃದ್ಯವಾಗಿದೆ. ಈ ಮೌಖಿಕ ಪರಂಪರೆ ಇಂದು ಹಳ್ಳಿಗಳಲ್ಲಿ ಉಳಿದುಕೊಂಡಿದೆ. ಅದೇ ನಗರಗಳಲ್ಲಿ, ಉನ್ನತ ಶಿಕ್ಷಣ ಪಡೆದವರಲ್ಲಿ ಅಚ್ಚಗನ್ನಡದ ಪದಗಳು ಮರೆಯಾಗಿ ಅವುಗಳ ಬದಲು ಇಂಗ್ಲಿಷ್ ಪದಗಳು ಜಾರಿಗೆ ಬಂದಿವೆ. ಅಪ್ಪ ಪದದ ಬದಲು 'ಡ್ಯಾಡಿ', 'ಅವ್ವ' ಪದದ ಬದಲು 'ಮಮ್ಮಿ' ಗಂಟಲುಗಳನ್ನಾಕ್ರಮಿಸಿಕೊಂಡಿವೆ. ಕಾನ್ವೆಂಟ್ ಸ್ಕೂಲಿನ ಮಕ್ಕಳಿಂದ ಹಾಗೂ ಅವರ ಪಾಲಕರುಗಳಿಂದ ಈ ರೀತಿಯ ಇಂಗ್ಲಿಷ್ ಪದಗಳು ಹೇರಳವಾಗಿ ಸೇರಿಕೊಂಡು, ಅಚ್ಚಗನ್ನಡ ಪದಗಳು ಮಾಯವಾಗುತ್ತಿವೆ.

ಅಚ್ಚಗನ್ನಡ ಪದಗಳನ್ನು ಉಳಿಸಿಕೊಂಡೇ ನಮ್ಮ ಗ್ರಾಮೀಣರು ಎರವಲು ಪದಗಳನ್ನು ಬಳಸಿ, ಭಾಷೆಯನ್ನು ಶ್ರೀಮಂತಗೊಳಿಸುತ್ತಾರೆ. ನಮ್ಮಲ್ಲಿ ಬ್ಯಾಂಕ್, ಪೊಲೀಸ್ ಇಂಜಿನಿಯರ್, ಪದಗಳಿಲ್ಲ. ಅವರು ಈ ಇಂಗ್ಲಿಷ್ ಪದಗಳನ್ನು ಬ್ಯಾಂಕು, ಪೋಲೀಸು ಇಂಜಿನಿಯರು ಎಂದು ತದ್ಭವಗಳನ್ನಾಗಿ ಮಾಡಿಕೊಂಡು ತಮ್ಮ ನಾಲಿಗೆಗೆ ಒಗ್ಗಿಸಿಕೊಂಡು ಹೊಸ ಪದಗಳ ಬೆಳವಣಿಗೆಗೆ ಕಾರಣರಾಗುತ್ತಾರೆ. ಆದರೆ ನಮ್ಮ ಭಾಷಾ ಪಂಡಿತರು ಇಂತಹ ಇಂಗ್ಲಿಷ್ ಪದಗಳನ್ನು ಸಂಸ್ಕೃತೀಕರಣಗೊಳಿಸಿ, ಯಾರೂ ಬಳಸದಂತೆ ಕಗ್ಗಂಟು ಮಾಡುತ್ತಾರೆ. 'ಪೊಲೀಸ್' ಪದಕ್ಕೆ 'ಆರಕ್ಷಕ' ಎಂದು, 'ಇಂಜಿನಿಯರ್' ಪದಕ್ಕೆ 'ಅಭಿಯಂತರ' ಎಂದು ಸಂಸ್ಕೃತೀಕರಣಗೊಳಿಸಿ, ಜನಸಾಮಾನ್ಯರು ಈ ಪದಗಳನ್ನು ಉಚ್ಚರಿಸದಂತೆ ಕಠಿಣಗೊಳಿಸುತ್ತಾರೆ. ಗ್ರಾಮೀಣ ಜನರು ಅಚ್ಚಗನ್ನಡ ಪದಗಳನ್ನು ಉಳಿಸಿದರೆ, ಕಾನ್ವೆಂಟ್ ಭ್ರಮೆಯ ಜನರು ಅಚ್ಚಗನ್ನಡ ಪದಗಳನ್ನು ಕೈಬಿಟ್ಟು ಇಂಗ್ಲಿಷ್ ಪದಗಳನ್ನು ಬಳಸುತ್ತಾರೆ. ಕನ್ನಡದಲ್ಲಿಲ್ಲದ ಇಂಗ್ಲಿಷ್ ಪದಗಳನ್ನು ತದ್ಭವಗೊಳಿಸಿಕೊಂಡು ಗ್ರಾಮೀಣ ಜನರು ಭಾಷಾ ಶ್ರೀಮಂತಿಕೆಯನ್ನು ಹೆಚ್ಚಿಸಿದರೆ, ಭಾಷಾಪಂಡಿತರು ಅಂತಹ ಪದಗಳಿಗೆ ಸಂಸ್ಕೃತದ ಭೂತವನ್ನಂಟಿಸಿ, ಆ ಪದಗಳು ಜನರ ನಾಲಿಗೆಗೆ ಸಮೀಪಿಸದಂತೆ ಮಾಡುತ್ತಾರೆ.

ಕನ್ನಡದಲ್ಲಿಲ್ಲದ ಪದಗಳನ್ನು ತದ್ಭವ ಮಾಡಿಕೊಳ್ಳಬೇಕು ಅಥವಾ ಎರವಲು ಪಡೆಯಬೇಕು. ಅಪ್ಪ, ಅವ್ವದಂತಹ ಪದಗಳು ಕನ್ನಡದಲ್ಲಿದ್ದಾಗಲೂ ಅವನ್ನು ಬಳಸವೇ

ಅನ್ಯಭಾಷೆಯ ಪದಗಳನ್ನು ಬಳಸುವುದು ಭಾಷೆಯ ಬೆಳವಣಿಗೆಗೆ ಕಂಟಕವಾಗುತ್ತದೆ. ಇನ್ನು ಕನ್ನಡದಲ್ಲಿಲ್ಲದ ಪದಗಳನ್ನು ಯಥಾವತ್ತಾಗಿ ಅಥವಾ ಕನ್ನಡದ ಜಾಯಮಾನಕ್ಕೆ ಒಗ್ಗಿಸಿಕೊಂಡು ಎರವಲು ಪಡೆಯುವುದು ಭಾಷಾ ಶ್ರೀಮಂತಿಕೆಗೆ ಕಾರಣವಾದರೆ, ಅಂತಹ ಪದಗಳನ್ನು ಸಂಸ್ಕೃತೀಕರಣಗೊಳಿಸುವುದು ಅಪಾಯಕಾರಿಯಾಗಿ ಕಾಣಿಸುತ್ತದೆ. ಹೀಗಾಗಿ ಗ್ರಾಮೀಣ ಜನತೆ, ದುಡಿವ ವರ್ಗದ ಜನರು ಕನ್ನಡವನ್ನು ಎರಡು ಹಂತಗಳಲ್ಲಿ ಬೆಳೆಸಿದರೆ ನಗರದ ಜನರು ಮತ್ತು ಕಾನ್ವೆಂಟ್ ವ್ಯಾಮೋಹಿಗಳು ಈ ಎರಡೂ ಹಂತಗಳಲ್ಲಿ ಕನ್ನಡವನ್ನು ಮೂಲೆಗುಂಪು ಮಾಡುತ್ತಿರುತ್ತಾರೆ. ಕನ್ನಡ ಉಳಿಯಬೇಕಾದರೆ ನಮ್ಮ ಹಳ್ಳಿಗಳು ಉಳಿಯಬೇಕು. ಹಳ್ಳಿಗಳು ಉಳಿಯಬೇಕಾದರೆ ಅಲ್ಲಿ ಸರಕಾರ ಸೌಲಭ್ಯಗಳನ್ನು ಕಲ್ಪಿಸಬೇಕು.

ಸ್ಟ್ಯಾಂಡರ್ಡ್ ಎಂಬ ಭ್ರಮಾಲೋಕ

ಜಾಗತೀಕರಣದ ಬೆಳವಣಿಗೆಯಲ್ಲಿ ಇತ್ತೀಚೆಗೆ 'ಸ್ಟ್ಯಾಂಡರ್ಡ್' ಎಂಬ ಭ್ರಮೆ ಎಲ್ಲರನ್ನೂ ಆವರಿಸತೊಡಗಿದೆ. 'ಸ್ಟ್ಯಾಂಡರ್ಡ್ ಲೈಫ್', 'ಸ್ಟ್ಯಾಂಡರ್ಡ್ ಸ್ಕೂಲ್' 'ಸ್ಟ್ಯಾಂಡರ್ಡ್ ಕಾಲನಿ', 'ಸ್ಟ್ಯಾಂಡರ್ಡ್ ಭಾಷೆ' ಹೀಗೆ ಈ ಪಟ್ಟಿ ಬೆಳೆಯುತ್ತ ಹೋಗುತ್ತದೆ. ನಮ್ಮ ಸಂಸ್ಕೃತಿಯಲ್ಲಿ ಯಾವುದೇ ಒಂದು ಮಾತ್ರ ಸ್ಟ್ಯಾಂಡರ್ಡ್ ಆಗಿರಲಿಲ್ಲ. ಇಲ್ಲಿ ಹಲವು ಸಂಗತಿಗಳು ಸ್ಟ್ಯಾಂಡರ್ಡ್ ಆಗಿದ್ದವು. ಆದರೆ ಇಂದು ಸ್ಟ್ಯಾಂಡರ್ಡ್ ಎಂಬ ಭೂತ ಎಲ್ಲರ ತಲೆಯನ್ನೂ ಹೊಕ್ಕಿದೆ. ಸ್ಟ್ಯಾಂಡರ್ಡ್ ಲೈಫ್ ಎಂದರೆ 'ಸಿಟಿಲೈಫ್' ಎಂದು ತಿಳಿದುಕೊಳ್ಳಲಾಗಿದೆ. ಸ್ಟ್ಯಾಂಡರ್ಡ್ ಸ್ಕೂಲ್ ಎಂದರೆ ಕಾನ್ವೆಂಟ್ ಸ್ಕೂಲೆಂಬ ನಂಬಿಕೆ ಹುಟ್ಟಿಕೊಂಡಿದೆ. ಸ್ಟ್ಯಾಂಡರ್ಡ್ ಕಾಲನಿಯೆಂದರೆ ಅದು ಡಾಲರ್ಸ್ ಕಾಲನಿಯೇ ಆಗಿರುತ್ತದೆ. ಇನ್ನು ಸ್ಟ್ಯಾಂಡರ್ಡ್ ಭಾಷೆಯೆಂದರೆ ಅದು ಇಂಗ್ಲಿಷ್ ಭಾಷೆಯೇ ಆಗಿದೆ. ಈ ರೀತಿಯ ಸ್ಟ್ಯಾಂಡರ್ಡೆಂಬ ಮಾಯಾಮೃಗವನ್ನು ಹಿಡಿಯಲು ಜನತೆ ಮೃಗಜಲದ ಬೆನ್ನುಹತ್ತಿದ್ದಾರೆ. ಸರಕಾರಗಳೂ ಕೂಡ ಇಂತಹ ಸ್ಟ್ಯಾಂಡರ್ಡ್ ಭ್ರಮೆಗಳಿಗೆ ಒಳಗಾಗಿವೆ. ಹೀಗಾಗಿ ಇಂದು ಹಳ್ಳಿಗರು ನಗರದತ್ತ ವಲಸೆ ಬರತೊಡಗಿದ್ದಾರೆ. ಕನ್ನಡ ಶಾಲೆಗಳು ಮುಚ್ಚುವ ಸ್ಥಿತಿಯಲ್ಲಿವೆ. ಕೃಷಿ ನಾಶದ ಅಂಚಿನಲ್ಲಿದೆ, ರೈತರ ಆತ್ಮಹತ್ಯೆ ಸಹಜವೆಂಬಂತೆ ನಡೆಯತೊಡಗಿದೆ.


ಬದುಕಿನಲ್ಲಿ ಯಾವುದೇ ಒಂದೇ ಒಂದು ಸ್ಟ್ಯಾಂಡರ್ಡ್ ಆಗಲಾರದು. ನಮ್ಮದು ಬಹುಮುಖೀ ಸಂಸ್ಕೃತಿಯ ದೇಶ. ಬಹು ಸಮುದಾಯಗಳು ಕೂಡಿ ಬದುಕುವ ನಾಡು. ಇಲ್ಲಿ ಯಾವುದೇ ಒಂದೇ ಒಂದು ಭಾಷೆಯನ್ನು ಸ್ಟ್ಯಾಂಡರ್ಡೆಂದು ಕರೆಯುವುದು ನಗರ ಜೀವನವೇ ಶ್ರೇಷ್ಠವೆಂಬ ನಂಬಿಕೆ ಬರುವಂತೆ ಮಾತನಾಡುವುದು ಹೆಚ್ಚು ಅಪಾಯಕಾರಿ. ಕನ್ನಡದಲ್ಲಿಯೇ ಅನೇಕ ಪ್ರಾದೇಶಿಕ ವೈಶಿಷ್ಟ್ಯತೆಗಳಿವೆ. ಕನ್ನಡ ಒಂದಲ್ಲ, ಅದಕ್ಕೆ ಹಲವು ಮುಖಗಳಿವೆ. ಭಾಷೆಯ ಈ ಪ್ರಾದೇಶಿಕ ವೈಶಿಷ್ಟ್ಯವನ್ನು ಉಳಿಸಿಕೊಳ್ಳದಿದ್ದರೆ ಸ್ಟ್ಯಾಂಡರ್ಡ್ ಭಾಷೆಯ ಹೆಸರಿನಲ್ಲಿ ನಾವು ಎಲ್ಲವನ್ನೂ ಕಳೆದುಕೊಳ್ಳಬೇಕಾಗುತ್ತದೆ.

ಸಮಾರೋಪ

ಜಾಗತೀಕರಣ ಇಂದು ಸ್ಥಳೀಯವಾದುದನ್ನು ತುಚ್ಛೀಕರಿಸುತ್ತ ನಡೆದಿದೆ. ಸ್ಥಳೀಯ ಗುಡಿಕೈಗಾರಿಕೆಗಳು, ಸ್ಥಳೀಯ ಉತ್ಪನ್ನಗಳು, ಸ್ಥಳೀಯ ಭಾಷೆ-ಸಂಸ್ಕೃತಿ ಇವೆಲ್ಲ

ತುಚ್ಛೀಕರಣಕ್ಕೆ ಒಳಗಾಗತೊಡಗಿವೆ. ಜಾಗತೀಕರಣ ಕೇವಲ ಇಂಗ್ಲಿಷನ್ನು ಮಾತ್ರ ಹೇರುವುದಿಲ್ಲ; ತಾನು ಉತ್ಪಾದಿಸಿದ ಸರಕುಗಳನ್ನು ಕೂಡ ಒತ್ತಾಯದಿಂದ ನಮ್ಮ ಮೇಲೆ ಹೇರುತ್ತದೆ. ಆಗ ಸ್ಥಳೀಯ ಸಂಸ್ಕೃತಿಗೆ ಬದಲಾಗಿ ಸರಕು ಸಂಸ್ಕೃತಿ ಹುಟ್ಟಿಕೊಳ್ಳುತ್ತದೆ. ಎಸ್.ಇ.ಝಡ್. ಹೆಸರಿನಲ್ಲಿ ರೈತರ ಫಲವತ್ತಾದ ಭೂಮಿ ಎಂ.ಎನ್.ಸಿ. ಕಂಪನಿಗಳ ಪಾಲಾಗುತ್ತಿದೆ. ಇದಕ್ಕೆ ಸರಕಾರ ಏಜೆಂಟ್‌ನಂತೆ ವರ್ತಿಸುತ್ತಿದೆ. ಬಹುರಾಷ್ಟ್ರೀಯ ಕಂಪನಿಗಳಿಗೆ ಮಣೆ ಹಾಕುವುದರ ಮೂಲಕ ಸ್ವಾಭಿಮಾನವನ್ನು ಬಿಟ್ಟುಕೊಟ್ಟು, ಹಲ್ಲು ಗಿಂಜುವ ಗುಲಾಮಿ ಸಂಸ್ಕೃತಿ ವ್ಯಾಪಿಸತೊಡಗಿದೆ. ಇದು ಯುದ್ಧದಿಂದುಂಟಾಗುವ ನಾಶಕ್ಕಿಂತಲೂ ಹೆಚ್ಚು ಅಪಾಯಕಾರಿಯಾದುದು. ಈ ದಿಸೆಯಲ್ಲಿ ಎಲ್ಲ ಪ್ರಗತಿಪರರೂ ಚಿಂತಿಸಬೇಕಾಗಿದೆ. ದೇಸೀ ಚಳವಳಿಗಳನ್ನು ಹುಟ್ಟುಹಾಕಬೇಕಾಗಿದೆ.

ಭಾಷೆಯೆಂಬುದು ಇಂದು ಕೇವಲ ಒಂದು ಅಭಿವ್ಯಕ್ತಿ ಕ್ರಿಯೆಯಲ್ಲ. ಭಾಷೆಯೆಂದರೆ ಅದು ಬದುಕು. ನೆಲ–ಜಲ–ಕೃಷಿ–ಕೈಗಾರಿಕೆ–ಉದ್ಯೋಗ ಸೃಷ್ಟಿ ಈ ಎಲ್ಲವೂ ಅದರೊಳಗಡೆ ಸೇರಿರುತ್ತವೆ. ಕರ್ನಾಟಕದಲ್ಲಿ ಕೃಷಿಗೆ, ಗುಡಿಕೈಗಾರಿಕೆಗಳಿಗೆ ಉತ್ತೇಜನ ನೀಡುವುದರ ಮೂಲಕ ಸರಕಾರವು ಇಂತಹ ಅಪಾಯಕಾರಿ ಬೆಳವಣಿಗೆಗಳನ್ನು ತಡೆಯಬಹುದಾಗಿದೆ. ಹಳ್ಳಿಗರು ನಗರಗಳಿಗೆ ವಲಸೆ ಬರುವುದನ್ನು ತಡೆಯಲು ಹಳ್ಳಿಗಳಲ್ಲಿ ಉದ್ಯೋಗ ಸೃಷ್ಟಿಯಾಗಬೇಕಾಗುತ್ತದೆ. ಇಂದು ಕುಡಿಯಲು ಶುದ್ಧನೀರು ಸಿಗುತ್ತಿಲ್ಲ. ಶುದ್ಧ ಗಾಳಿ ಸಿಗುತ್ತಿಲ್ಲ. ರಸ್ತೆಗಳಿಲ್ಲ, ಮೂಲಭೂತ ಸೌಕರ್ಯಗಳಿಲ್ಲ. ಈ ಎಲ್ಲ ಇಲ್ಲಗಳನ್ನಿಟ್ಟುಕೊಂಡು ಕೇವಲ ಸಂಭ್ರಮಗಳ ಕಡೆಗೆ ನಡೆದಿರುವ ಸರಕಾರ ಕನ್ನಡಿಗರ ಸಂಕಟಗಳನ್ನು ಅರ್ಥೈಸಿಕೊಳ್ಳಬೇಕಾಗಿದೆ.



ಅಂತರ್ಜಾಲ ಮತ್ತು ಕನ್ನಡದ ಭವಿಷ್ಯ

■ ಎನ್. ಶಂಕರಪ್ಪ ತೋರಣಗಲ್ಲು

ನಮ್ಮ ಸ್ಥಾನ ಯಾವುದು?

'ಇಂಟರ್ ನೆಟ್ ವರ್ಲ್ಡ್ ಸ್ಟ್ಯಾಟ್ಸ್' (http://www.internetworldstats.com/stats7.htm) ಎಂಬ ಸಂಸ್ಥೆ/ಜಾಲತಾಣ, ಈ ವರ್ಷದ (೨೦೧೨) ಆರಂಭದಲ್ಲಿ ಅಂತರ್ಜಾಲದ ಬಳಕೆ ಮತ್ತು ಭಾಷೆಗಳನ್ನು ಕುರಿತಾಗಿ ಈ ಮುಂದಿನ ಮಾಹಿತಿ ಪ್ರಕಟಿಸಿದೆ. ಅಂತರ್ಜಾಲ ಅಧ್ಯಯನ ನಡೆಸುತ್ತಿರುವ ಇದರಂತಹ ಇತರ ಸಂಸ್ಥೆಗಳೂ ಸಹ ಇಂತಹುದೇ ಮಾಹಿತಿ ನೀಡಿವೆ.*

ಜನಸಂಖ್ಯೆಯ ಆಧಾರದ ಮೇಲೆ ಜಗತ್ತಿನ ಮೊದಲ ೧೦ ಭಾಷೆಗಳಲ್ಲಿ ಭಾರತೀಯ ಭಾಷೆಗಳಾದ ಹಿಂದಿ (೨೪ ಕೋಟಿ) ಬಂಗಾಳಿ (೧೮.೧ ಕೋಟಿ), ಪಂಜಾಬಿ ಮತ್ತು ಉಪಭಾಷೆಗಳು (೧೦.೯ ಕೋಟಿ) ಸೇರುತ್ತವೆ. ಜನಸಂಖ್ಯೆಯ ದೃಷ್ಟಿಯಲ್ಲಿ ಇವು ಸ್ಪ್ಯಾನಿಷ್ ಮತ್ತು ಪೋರ್ಚುಗೀಸ್ ಭಾಷೆಗಳೊಂದಿಗೆ ಸ್ಪರ್ಧೆಯಲ್ಲಿವೆ. ೩ ರಿಂದ ೮ ಕೋಟಿ ಜನರ ಮಾತೃ ಭಾಷೆಯಾಗಿ ಮರಾಠಿ (೭.೫ ಕೋಟಿ), ಗುಜರಾತಿ (೪.೬ ಕೋಟಿ), ತಮಿಳು (೬.೬ ಕೋಟಿ), ತೆಲುಗು (೭.೫ ಕೋಟಿ), ಕನ್ನಡ (೩.೬ ಕೋಟಿ) ಮಲೆಯಾಳಂ (೩.೫ ಕೋಟಿ), ಒರಿಯಾ (೩.೨ ಕೋಟಿ) ಭಾಷೆಗಳು ಅಸ್ತಿತ್ವದಲ್ಲಿವೆ. ಜಪಾನಿ, ಪೋರ್ಚುಗೀಸ್, ಜರ್ಮನ್ ಅರೇಬಿಕ್, ಫ್ರೆಂಚ್, ರಷ್ಯನ್ ಭಾಷೆಗಳು ಜನಸಂಖ್ಯೆಯ ಲೆಕ್ಕದಲ್ಲಿ ಮರಾಠಿ, ತೆಲುಗು, ತಮಿಳುಗಳಿಗೆ ಹೋಲಿಕೆಯಾದರೆ; ಕೊರಿಯನ್ ಭಾಷೆ ಕನ್ನಡ, ಮಲೆಯಾಳಂ, ಗುಜರಾತಿಗಳಿಗೆ ಸಮನಾಗಿರುವುದು ಕಂಡುಬರುತ್ತದೆ. ಕನ್ನಡ, ತೆಲುಗು, ತಮಿಳು ಜಗತ್ತಿನ ಏಳು ಜೀವಂತ



* ಅಂತರ್ಜಾಲದ ಮೊದಲ ೧೦ ಭಾಷೆಗಳು

(ಭಾಷಾವಾರು ಅಂತರ್ಜಾಲದ ಬಳಕೆ)

ಅಂತರ್ಜಾಲದ ಮೊದಲ ೧೦ ಭಾಷೆಗಳು	ಭಾಷಾವಾರು ಅಂತರ್ಜಾಲ ಬಳಕೆದಾರರು	ಭಾಷಾ ಬಳಕೆ (ಶೇಕಡ)	ಅಂತರ್ಜಾಲ ಹೆಚ್ಚಳ (೨೦೦೦–೧೧ರ ಅವಧಿ) (ಶೇಕಡ)	ಒಟ್ಟು ಬಳಕೆದಾರ ಪ್ರಮಾಣ (ಶೇಕಡ)	ಭಾಷಾವಾರು ಜನಸಂಖ್ಯೆ (೨೦೧೧ರ ಅಂದಾಜು)
ಇಂಗ್ಲಿಷ್	೫೬೫,೦೦೪,೧೨೬	೪೩.೪	೩೦೧.೪	೨೬.೮	೧,೩೦೨,೨೭೫,೬೭೦
ಚೀನಿ (ಮ್ಯಾಂಡರಿನ್)	೫೦೯,೯೬೫,೦೧೩	೩೭.೨	೧,೪೭೮.೭	೨೪.೨	೧,೩೭೨,೨೨೬,೦೪೨
ಸ್ಪ್ಯಾನಿಷ್	೧೬೪,೯೬೮,೭೪೨	೩೯.೦	೮೦೭.೪	೭.೮	೪೨೩,೦೮೫,೮೦೬
ಜಪಾನಿ	೯೯,೧೮೨,೦೦೦	೭೮.೪	೧೧೦.೬	೪.೭	೧೨೬,೪೭೫,೬೬೪
ಪೋರ್ಚುಗೀಸ್	೮೨, ೫೮೬,೬೦೦	೩೨.೫	೯೯೦.೧	೩.೯	೨೫೩,೯೪೭,೫೯೪
ಜರ್ಮನ್	೭೫,೪೨೨,೬೭೪	೭೯.೫	೧೭೪.೧	೩.೬	೯೪,೮೪೨,೬೫೬
ಅರೇಬಿಕ್	೬೫,೩೬೫,೪೦೦	೧೮.೮	೨,೫೦೧.೨	೩.೩	೩೪೭,೦೦೨,೯೯೧
ಫ್ರೆಂಚ್	೫೯,೭೭೯,೫೨೫	೧೭.೨	೩೯೮.೨	೩.೦	೩೪೭,೯೩೨,೩೦೫
ರಷ್ಯನ್	೫೯,೭೦೦,೦೦೦	೪೨.೮	೧,೮೨೫.೮	೩.೦	೧೩೯,೩೯೦,೨೦೫
ಕೊರಿಯನ್	೩೯,೪೪೦,೦೦೦	೫೫.೨	೧೦೭.೧	೨.೦	೭೧,೩೯೩,೩೪೩
ಮೊದಲ ೧೦ ಭಾಷೆಗಳು	೧,೬೧೫,೯೪೮,೩೩೩	೩೬.೪	೪೨೧.೨	೮೨.೨	೪,೪೪೨,೦೫೬,೦೬೯
ಉಳಿದ ಭಾಷೆಗಳು	೩೫೦,೫೫೭,೪೮೩	೧೪.೬	೫೮೮.೫	೧೭.೮	೨,೪೦೩,೫೫೩,೮೯೧
ಜಾಗತಿಕ ಒಟ್ಟು ಮೊತ್ತ	೧,೯೬೬,೫೧೪,೮೧೬	೨೮.೭	೪೪೪.೮	೧೦೦.೦	೬,೮೪೫,೬೦೯,೯೬೦

ಪ್ರಾಚೀನ ಭಾಷೆಗಳ ಪಟ್ಟಿಗೆ ಸೇರುತ್ತವೆ. (ಇತರ ಜೀವಂತ ಪ್ರಾಚೀನ ಭಾಷೆಗಳು– ಮ್ಯಾಂಡರಿನ್, ಗ್ರೀಕ್, ಪರ್ಷಿಯನ್ / ಅರೇಬಿಕ್, ತುಳು). ಆದರೆ ಅಂತರ್ಜಾಲದ ಬಳಕೆಯ ಲೆಕ್ಕದಲ್ಲಿ ಯಾವ ಭಾರತೀಯ ಭಾಷೆಗೂ ಗಣ್ಯ ಸ್ಥಾನ ದಕ್ಕದೆ ಇತರ ಪುಡಿ ಭಾಷೆಗಳೊಂದಿಗೆ ಬೆರೆತುಹೋಗಿವೆ.

ಕನ್ನಡ ಸೇರಿದಂತೆ ಎಲ್ಲ ಭಾರತೀಯ ಭಾಷೆಗಳೂ ಅಂತರ್ಜಾಲದಲ್ಲಿ ಗಣನೀಯ ಸಾಧನೆ ಮಾಡುವಲ್ಲಿ ಅಥವಾ ಗಮನಾರ್ಹ ಸ್ಥಾನ ಗಿಟ್ಟಿಸುವಲ್ಲಿ ವಿಫಲವಾಗಿವೆಯೆಂದೇ ಹೇಳಬಹುದು. ಇದು ಏತಕ್ಕೆ ಹೀಗಾಯಿತೆಂದು ನೋಡೋಣ. ಎಲ್ಲರೂ ಒಪ್ಪುವಂತೆ ತಂತ್ರಜ್ಞಾನ ಅತ್ಯದ್ಭುತವಾದುದು. ಅದಕ್ಕೆ ದೇಶ ಭಾಷೆಗಳ ಹಂಗಿಲ್ಲ. ತಂತ್ರಜ್ಞಾನದ ಅರಿವಿನ ಕೊರತೆಯೂ ಸಹ ನಮ್ಮನ್ನು ಕಾಡುತ್ತಿಲ್ಲ. ಕನ್ನಡ ಅಥವಾ ಯಾವುದೇ ಭಾರತೀಯ ಭಾಷೆಯನ್ನು ಅಂತರ್ಜಾಲದಲ್ಲಿ ವ್ಯಾಪಕವಾಗಿ ಬಳಸುವಂತೆ ಮಾಡಲು ಪರದೇಶಗಳಿಂದ ಯಾವುದೇ ರಹಸ್ಯ/ಗಹನ, ಅತ್ಯುನ್ನತ ತಂತ್ರಜ್ಞಾನವನ್ನು ಆಮದು ಮಾಡಿಕೊಳ್ಳುವ ಅವಶ್ಯಕತೆಯಿಲ್ಲ. ಆದರೂ ದೇಶಭಾಷೆಗಳು ಅಂತರ್ಜಾಲದಲ್ಲಿ ಪ್ರಕಾಶಮಾನವಾಗಿ ಮಿನುಗಲು ಏಕೆ ಸಾಧ್ಯವಾಗುತ್ತಿಲ್ಲ? ಭಾರತೀಯ ಭಾಷೆಗಳನ್ನು ಆಧುನಿಕ ತಂತ್ರಜ್ಞಾನಕ್ಕೆ ಒಗ್ಗಿಸಿ, ಅಂತರ್ಜಾಲದಲ್ಲಿ ಸರಾಗವಾಗಿ ಹರಿದಾಡುವಂತೆ ಮಾಡಲು ಏಕೆ ಆಗಿಲ್ಲ ಎನ್ನುವ ಸಮಸ್ಯೆಯನ್ನು ಕೆದಕತೊಡಗಿದರೆ, ಅದರ ಹಿಂದೆ ತಂತ್ರಜ್ಞಾನಕ್ಕಿಂತಲೂ ವ್ಯಾವಹಾರಿಕ/ ಇಚ್ಛಾಶಕ್ತಿಯ ಕೊರತೆಯ ಕಾರಣಗಳು ಎದ್ದು ಕಾಣುತ್ತವೆ. ಭಾರತೀಯ ಭಾಷೆಗಳು ಅಂತರ್ಜಾಲದಲ್ಲಿ ಹಿಂದುಳಿಯಲು ಮೂರು ಮುಖ್ಯ ಕಾರಣಗಳನ್ನು ಮುಂದೊಡ್ಡ ಲಾಗುತ್ತಿದೆ. ಭಾರತದಲ್ಲಿ ಇಂಗ್ಲಿಷ್ ಹೊರತಾಗಿ ದೇಶ ಭಾಷೆಗಳಿಗೆ ಹೆಚ್ಚಿನ ಅವಕಾಶಗಳಿಲ್ಲ ಎಂದು ವಾದಿಸುವವರು ಗುರುತಿಸಿರುವ ಈ ಮೂರು ಅಂಶಗಳು ಇಂತಿವೆ:

೨.೦ ತೊಡಕುಗಳು

ಬರಹ, ಕ್ವಿಲ್ ಪ್ಯಾಡ್, ಗೂಗಲ್ ಐ.ಎಂ.ಇ. ಅಥವಾ ಅದರಂತಹ ತಂತ್ರಾಂಶ ಗಳನ್ನು ಬಳಸಿ ಇಂಗ್ಲಿಷ್ ಭಾಷೆಯಲ್ಲಿ ಬೆರಳಚ್ಚಿಸಿದಾಗ ನಮ್ಮ ಲಿಪಿಗಳಲ್ಲಿ ಅದು ಮೂಡಿದಾಗ ಕೆಲಕಾಲ ರೋಮಾಂಚನವಾದಂತಾಗುತ್ತದೆ. ಆದರೆ ಇಲ್ಲೊಂದು ಸಣ್ಣ ತೊಡರು. ನೀವು ಇಲ್ಲಿ ಕನ್ನಡ ಬಳಸಬೇಕೆಂದರೆ ನಿಮಗೆ ಇಂಗ್ಲಿಷ್ ಗೊತ್ತಿರಲೇಬೇಕು. ಸದ್ಯದ ಸ್ಥಿತಿಯಲ್ಲಿ ಕನ್ನಡದಲ್ಲೇ ನೀವು ಗಣಕದೊಂದಿಗೆ ಸಂವಹಿಸುವ ಶಪಥ ಮಾಡಿದರೂ ಅದು ಸಾಧ್ಯವಿಲ್ಲ. ಗಣಕದ ಕಾರ್ಯಾಚರಣೆ ವ್ಯವಸ್ಥೆ (ಕಾ–ವ್ಯ= ಕಾರ್ಯಾಚರಣ ವ್ಯವಸ್ಥೆ Opereating System-OS) ಇಂಗ್ಲಿಷ್‌ನಲ್ಲಿ ಇರುವುದರಿಂದ ಅದರಲ್ಲೇ ಗಣಕದ ಅನುಭವ ಪಡೆಯುವ ಅನಿವಾರ್ಯತೆ ಎದುರಾಗಿದೆ.

ಆದರೆ ಯಾವುದೇ ವಿಶೇಷ ಪ್ರಯತ್ನ ಪಡದೆ ಸಹಜವಾಗಿ ನಮ್ಮ ಭಾಷೆಗಳಲ್ಲಿ ಬರೆಯುವಂತೆ, ವ್ಯವಹರಿಸುವಂತೆ ಎಂದಾದರೂ ನಾವು ಸರಾಗವಾಗಿ ಅಂತರ್ಜಾಲದಲ್ಲಿ ವಿಹರಿಸಿದ್ದೇವೆಯೇ, ಸಂವಹಿಸಿದ್ದೇವೆಯೇ, ವಿದ್ಯುನ್ಮಾನ ಅಂಚೆಯೊಂದನ್ನು ಕಳಿಸಿದ್ದೇವೆಯೇ ಎಂದಾಗ ಬಹುತೇಕ ಇಲ್ಲ ಎನ್ನುವ ಉತ್ತರವೇ ಎದುರಾಗುತ್ತದೆ. ಕನ್ನಡ ಭಾಷೆಯ ಬಗ್ಗೆ ಅಪಾರ ಅಭಿಮಾನ ಇರುವ, ಕನ್ನಡಪರ ಚಳವಳಿಗಳಲ್ಲಿ ಸಕ್ರಿಯವಾಗಿ ಮೂರು

ದಶಕಗಳಿಗೂ ಅಧಿಕ ಕಾಲ ಭಾಗಿಯಾಗಿರುವ, ವೃತ್ತಿಯಲ್ಲಿ ಮೆಕ್ಯಾನಿಕಲ್ ಇಂಜಿನಿಯರ್ ಆಗಿರುವ ನನ್ನ ಹಿರಿಯ ಸ್ನೇಹಿತರು ಕನ್ನಡದಲ್ಲಿ ನನಗೆ ಮಿಂಚಂಚೆಯೊಂದನ್ನು (ಇ-ಮೇಲ್) ಕಳಿಸಲು ತಿಣುಕಾಡಬೇಕಾಯಿತು. ಬೆರಳಚ್ಚಿಸಿ 'ಣ-ನ' ಶಬ್ದಗಳ ನಡುವೆ ವೈವಿಧ್ಯತೆ ತರುವುದು, ತಂತ್ರವನ್ನು 'ತಮ್ತ್ರ' ಎಂದು ಬರದಂತೆ ತಪ್ಪಿಸುವುದು, ಮುಂತಾದ ಎಚ್ಚರಿಕೆ ವಹಿಸುವುದರಲ್ಲಿಯೇ ಬಹುತೇಕ ಶ್ರಮ ವೆಚ್ಚವಾಯಿತು. ಕನ್ನಡವನ್ನು ಅಂತರ್ಜಾಲದಲ್ಲಿ ನೋಡಲೇಬೇಕೆಂಬ ಹಠ ತೊಟ್ಟ ಕೆಲಸಾವಿರ ಮಂದಿಯ ಹೊರತಾಗಿ ಕನ್ನಡದ ಬಗ್ಗೆ ಅಭಿಮಾನವಿದ್ದೂ, ಅದನ್ನು ಬಳಸಬೇಕೆಂಬ ತುಡಿತವಿರುವ ಲಕ್ಷಾಂತರ ಜನರಿಗೆ ಇಂತಹ ತೊಡಕುಗಳು ಅಡ್ಡಿ ಬಂದು, ಸಹಜ ಹಾಗೂ ವೇಗವಾಗಿ ದಕ್ಕುವ ಇಂಗ್ಲಿಷ್‌ಗೆ ಮೊರೆ ಹೋಗುತ್ತಾರೆ. ಇಂಜಿನಿಯರ್ ಆಗಿರುವ ತಮಿಳು ಮಾತೃಭಾಷೆಯ ಸ್ನೇಹಿತರೊಬ್ಬರು ಇದೇ ಸಮಸ್ಯೆ ತಮಿಳಿನಲ್ಲಿಯೂ ಇರುವುದೆಂದು ನನ್ನಲ್ಲಿ ಅಲವತ್ತುಕೊಂಡರು.

ಭಾರತದಲ್ಲಿ ಈಗ ೧೦ ಕೋಟಿಗೂ ಅಧಿಕ ಜನ ಅಂತರ್ಜಾಲದ ಬಳಕೆದಾರರು ಇರುವರೆಂದು, ಮುಂದಿನ ೫-೮ ವರ್ಷಗಳಲ್ಲಿ ಇದು ೫೦ ಕೋಟಿಯ ಸಮೀಪ ಬರಬಹುದೆಂದು ಅಂದಾಜಿಸಲಾಗಿದೆ. ಸರ್ಕಾರಗಳು ಇ-ಆಡಳಿತಕ್ಕೆ ಮೊರೆ ಹೋಗಿರುವುದು ಖಾಸಗಿ ಕಂಪನಿಗಳು ತೀವ್ರ ವೇಗದಲ್ಲಿ ಆಧುನಿಕ ಸಂಪರ್ಕ ಕ್ರಾಂತಿಯನ್ನು ಅಳವಡಿಸಿ ಕೊಳ್ಳುತ್ತಿರುವುದರಿಂದ ಎಲ್ಲ ಬಗೆಯ ಸಂಪರ್ಕ, ಸಂವಹನಗಳಿಗೆ ಅಂತರ್ಜಾಲ ಅನಿವಾರ್ಯವಾಗುತ್ತಿದೆ. ಆದರೆ ಅಂತರ್ಜಾಲದಲ್ಲಿ ಭಾರತೀಯ ಭಾಷೆಗಳ ಬಳಕೆಯೂ ಸಹ ಇದೇ ಮಟ್ಟದಲ್ಲಿ ಏರುವುದೇ ಎಂದಾಗ ನಿರಾಶೆಯೇ ಎದುರಾಗುತ್ತದೆ. ಇದು ಏಕೆಂದು ಕೆಲ ಉದಾಹರಣೆಗಳ ಮೂಲಕ ನೋಡಬಹುದು.

ರೀಡಿಫ್‌ಮೇಲ್ ನವರು ಹಲವು ಭಾರತೀಯ ಭಾಷೆಗಳಲ್ಲಿ ಸಂವಹಿಸುವ ಅವಕಾಶವನ್ನು ಹಲವು ವರ್ಷಗಳ ಹಿಂದೆಯೇ ಜಾರಿಗೆ ತಂದರು. ಆದರೆ ಒಂದು ವರದಿಯ ಪ್ರಕಾರ, ಇಲ್ಲಿ ಭಾರತೀಯ ಭಾಷೆಗಳ ಬಳಕೆ ಶೇಕಡಾ ೧ (೧%)ನ್ನು ಸಹ ದಾಟಲಿಲ್ಲ. ಉಳಿದಿದ್ದೆಲ್ಲವೂ ಜರುಗಿದ್ದು ಇಂಗ್ಲಿಷ್‌ನಲ್ಲಿ. ಮೈಕ್ರೋಸಾಫ್ಟ್ ಕಂಪನಿಯವರು ಕಾರ್ಯಾಚರಣೆ ವ್ಯವಸ್ಥೆ (Opereating System) ಹಾಗೂ ಕಚೇರಿ ಕಟ್ಟನ್ನು (MS Office Suite Products) ಕಳೆದ ಕೆಲವರ್ಷಗಳಿಂದ ಭಾರತೀಯ ಭಾಷೆಗಳಲ್ಲಿ ಒದಗಿಸ ತೊಡಗಿದರು. ಆದರೆ ಇದನ್ನು ಎಷ್ಟು ಜನ ಬಳಸಿಕೊಂಡಿರಬಹುದು ಎನ್ನುವುದು ಯಕ್ಷಪ್ರಶ್ನೆಯಾಗಿಯೇ ಉಳಿದಿದೆ. ಒಂದು ಅಂದಾಜಿನಂತೆ ಇದು ಶೇಕಡಾ ೦.೫ಕ್ಕಿಂತ ಹೆಚ್ಚಿದ್ದರೆ ಪವಾಡವೆಂದೇ ಭಾವಿಸಬೇಕು.

ಬೇಕಾದಂತೆ ಬಳಸಬಲ್ಲ, ವಿವಿಧ ಬಗೆಯ ಕೀಲಿಮಣೆಗಳು, ಅಕ್ಷರಿಕೆಗಳು (Fonts) ಲಭ್ಯ. ಮೊಬೈಲ್ ಫೋನ್‌ಗಳಲ್ಲಿ ಭಾರತೀಯ ಭಾಷೆಗಳ ಅಳವಡಿಕೆ, ದೇಶ ಭಾಷೆಗಳ ಬಳಕೆಯಲ್ಲಿ ಭಾರೀ ಬದಲಾವಣೆ ತರುವುದೆಂದು ಭಾವಿಸಲಾಯಿತು. ಇದರೊಂದಿಗೆ ಭಾರತೀಯ ಭಾಷೆಗಳನ್ನು ಮೊಬೈಲ್‌ಗಳಲ್ಲಿ ಬಳಸಬಹುದಾದ ಸಾಧ್ಯತೆಗಳನ್ನು ಮರುವಿಮರ್ಶಿಸಿ, ವಿಭಿನ್ನ ದೃಷ್ಟಿಯಲ್ಲಿ ನೋಡಿ, ಬದಲಾಗುತ್ತಿರುವ ತಂತ್ರಜ್ಞಾನಕ್ಕೆ

ಸರಿಹೊಂದಿಸುವ ಯತ್ನಗಳು ಸದ್ದಿಲ್ಲದೇ ಸಾಗಿದವು. ಇಂತಹ ಪ್ರಯತ್ನಗಳಿಗೆ ಮನ್ನಣೆ ಪ್ರಶಂಸೆಗಳು ಸಹ ದಕ್ಕಿದವು. ಆದರೆ ಅಂತಿಮವಾಗಿ ಅವುಗಳನ್ನು ಶೇಕಡಾ ೧ರಷ್ಟು ಜನ ಸಹ ಅಳವಡಿಸಿಕೊಳ್ಳಲಿಲ್ಲ. ಹಾಗಾದರೆ ಭಾರತೀಯ ಭಾಷೆಗಳು ಎಂದಿಗೂ ಅಂತರ್ಜಾಲ ಜಗತ್ತಿನಲ್ಲಿ ಮಿನುಗಲಾರವೆ? ದೂರದರ್ಶನ, ದೂರವಾಣಿ, ಸಂಗೀತ, ಸಿನೆಮಾ ಮುಂತಾದ ಕಡೆ ಆಧುನಿಕ ತಂತ್ರಜ್ಞಾನವನ್ನು ದೇಶಭಾಷೆಗಳ ಸೇವೆಗೆ ಯಶಸ್ವಿಯಾಗಿ ಬಳಸಿಕೊಂಡಂತೆ ಅಂತರ್ಜಾಲದಲ್ಲಿ ಬಳಸಿಕೊಳ್ಳಲು ಎದುರಾಗುತ್ತಿರುವ ಅಡಚಣೆಗಳೇನು, ಅವುಗಳನ್ನು ಹೇಗೆ ದಾಟಬೇಕೆಂದು ಸ್ಥೂಲವಾಗಿ ನೋಡಬಹುದು.

೨.೧ **ವೈವಿಧ್ಯತೆ :** ಭಾರತೀಯರ ಧರ್ಮ, ಭಾಷಾ ವೈವಿಧ್ಯತೆಯ ಬಗ್ಗೆ ಜಗತ್ತೇ ಮೆಚ್ಚುಗೆ ವ್ಯಕ್ತಪಡಿಸುತ್ತಿದೆ. ಈ ವೈವಿಧ್ಯವೇ ಅಂತರ್ಜಾಲದಲ್ಲಿ ದೇಶಭಾಷೆಗಳು ಭದ್ರವಾಗಿ ನೆಲೆಯೂರಲು ತೊಡಕಾಗಿದೆ. ಬ್ರೆಜಿಲ್‌ನ ಜನ ಸಂಖ್ಯೆಯಲ್ಲಿ ೯೯% ಜನ ಪೋರ್ಚುಗೀಸ್ ಭಾಷಿಕರು. ಅರ್ಜೆಂಟೈನಾ, ವೆನಿಜುಯೇಲಾ, ಪೆರು ಜನಸಂಖ್ಯೆಯಲ್ಲಿ ೯೦%ಗೂ ಅಧಿಕ ಜನರ ಭಾಷೆ ಸ್ಪ್ಯಾನಿಷ್. ಭಾರತದಲ್ಲಿ ಹಿಂದಿಯನ್ನು ಆಧುನಿಕ ಸಂಪರ್ಕ ಭಾಷೆಯೆಂದು ಕೇಂದ್ರ ಸರ್ಕಾರ ಪರಿಗಣಿಸುತ್ತದೆ. ಆದರೆ ಇತರ ಭಾಷಿಕರು ಅದನ್ನು ಹೇರಿಕೆಯಂತೆ ಭಾವಿಸುತ್ತಾರೆ. ಭಾರತೀಯ ಮೂಲದ ಹಿಂದಿಗಿಂತಲೂ, ಅಂತರಾಷ್ಟ್ರೀಯ ಬಣದ ಇಂಗ್ಲಿಷನ್ನು ಎಲ್ಲ ಭಾರತೀಯ ಭಾಷಿಕರೂ ತಮ್ಮ ಆಶೋತ್ತರಗಳ ಭಾಷೆಯಾಗಿ ಪರಿಗಣಿಸುತ್ತಿದ್ದಾರೆ. ಅವರಿಗೆ ಅದು ಮುಕ್ತಿಯ ಮಾರ್ಗವಾಗಿ ಗೋಚರಿಸುತ್ತಿದೆ. ಇಂಗ್ಲಿಷ್ ಭಾಷೆ ಭಾರತೀಯ ಸಂಪರ್ಕ ಭಾಷೆಯಾಗಿ ಭದ್ರವಾಗಿ ತಳವೂರಿದೆ.

ಚೀನಾದಲ್ಲಿ ಅಂತರ್ಜಾಲದ ಕ್ರಾಂತಿ ಬಂದಾಗ ಭಾರತದಲ್ಲಿ ಇಂಗ್ಲಿಷ್ ಇರುವಂತೆ ಚೀನೀ ಭಾಷೆಗೆ ಸವಾಲೆಸೆಯುವಂತಹ, ಬಹು ಜನರಿಗೆ ಅರ್ಥವಾಗಬಲ್ಲ ಬೇರೆ ಯಾವುದೇ ಇನ್ನೊಂದು ಭಾಷೆ ಇರಲಿಲ್ಲ. ಇದು ಅವರು ತಮ್ಮ ಎಲ್ಲ ಅಂತರ್ಜಾಲದ ಚಟುವಟಿಕೆಗಳನ್ನು ಚೀನೀ ಭಾಷೆಯಲ್ಲೇ ನಿರ್ವಹಿಸಬೇಕಾದ ಅನಿವಾರ್ಯತೆಯನ್ನು ತಂದಿತು. ಈ ಅನಿವಾರ್ಯತೆಯನ್ನು/ಸವಾಲನ್ನು ಅದರ ಮುಖಂಡರು ಸಮರ್ಪಕವಾಗಿ ಬಳಸಿಕೊಂಡು ಅಂತರ್ಜಾಲದಲ್ಲಿ ಚೀನೀ ಭಾಷೆಗೆ ಅಗ್ರಸ್ಥಾನ ಕಲ್ಪಿಸಿದರು. ಭಾರತದಲ್ಲಿ ಅಂತಹ ಕನಸನ್ನು ಕಾಣಬಲ್ಲ ಮುಖಂಡರು ಕಾಣಿಸಿಕೊಳ್ಳಲಿಲ್ಲ. ಇರಬಹುದಾದ ಬೆರಳಣಿಕೆಯ ಕೆಲವರು ಹಿಂದಿ ಜಗತ್ತಿನಾಚೆಗೆ ಏನನ್ನೂ ಕಾಣಲಿಲ್ಲ. ನಮಗೆ ನಮ್ಮ ಮಾತೃಭಾಷೆಯೊಂದಿಗೆ ಇಂಗ್ಲಿಷ್ ಸಹ ಗೊತ್ತಿರುವುದೇ ನಮ್ಮ ಭಾಷೆಗಳು ಅಂತರ್ಜಾಲದಲ್ಲಿ ಬೆಳೆಯಲು ಅಡ್ಡಿಯಾಗಿದೆ. ಕನ್ನಡದಲ್ಲಿ ಮಿಂಚಂಚೆ ಕಳಿಸಲು ಸ್ವಲ್ಪ ಶ್ರಮ ಪಡಬೇಕು. ಯಾವ ಶ್ರಮವನ್ನೂ ಬೇಡದ ಇಂಗ್ಲಿಷ್‌ನತ್ತ ನಾವು ತಕ್ಷಣ ಸರಿಯುತ್ತೇವೆ. ಇಂಗ್ಲಿಷ್ ಭಾಷೆಯನ್ನು ಅರಿಯಬಲ್ಲ, ಓದಬಲ್ಲ, ಬರೆಯಬಲ್ಲ ಜನಸಂಖ್ಯೆ ಮುಂದಿನ ದಶಕದ ವೇಳೆಗೆ ಗಣನೀಯವಾಗಿ ಏರಲಿದೆ. ಇಂಗ್ಲಿಷ್ ಭಾಷೆಯ ಅರಿವೆಂದರೆ ಅಂತರ್ಜಾಲದಲ್ಲಿ ದೇಶ ಭಾಷೆಗಳ ಉಚ್ಚಾಟನೆ ಎಂದೇ ಅರ್ಥ. ಮುಂದೊಂದು ದಿನ ಸರ್ಕಾರವು ತನ್ನ ಎಲ್ಲ ವ್ಯವಹಾರಗಳನ್ನೂ ಇಂಗ್ಲಿಷ್ ಭಾಷೆಯಲ್ಲಿ ಮಾತ್ರ ನಡೆಸಿದರೂ, ಅದನ್ನು ಪ್ರಶ್ನಿಸುವವರು ಯಾರೂ ಇರುವುದಿಲ್ಲ.

೨೨. ಲಿಪಿ ಜಟಿಲತೆ : ಭಾರತೀಯ ಭಾಷೆಗಳ ಲಿಪಿ ಬಹು ಜಟಿಲ. ಈಗಿರುವ ತಂತ್ರಜ್ಞಾನದ ಸಲಕರಣೆಗಳಿಂದ ಅಂತರ್ಜಾಲದಲ್ಲಿ ಮಾತೃಭಾಷೆಯನ್ನು ವೇಗವಾಗಿ ಬಳಸಲು ವಿಶೇಷ ಪ್ರಯತ್ನ ಮಾಡಬೇಕಾಗಿದೆ. ನೀವು ಕನ್ನಡವನ್ನು ಬಳಸಲೇಬೇಕೆಂದು ಬಯಸಿ, ನಿಮ್ಮ ಮೊಬೈಲ್ ಫೋನಿನಲ್ಲಿ ಯೂನಿಕೋಡ್ ಬಳಕೆಯ ಹಲವು ತಂತ್ರಾಂಶಗಳನ್ನು ಇಳಿಸಿಕೊಂಡಿರಬಹುದು. ಆದರೆ ಅದರಲ್ಲಿರುವ ಕೀಲಿಮಣೆಯ ವಿನ್ಯಾಸದಲ್ಲಿ ಗುಣಿತಾಕ್ಷರ, ಒತ್ತಕ್ಷರಗಳನ್ನು ಹುಡುಕಿ ಒತ್ತುವ ವೇಳೆಗೆ ಸಮಯ ಹಾಗೂ ಶ್ರಮ ವ್ಯಯವಾಗಿ, ಮುಂದಿನ ಕೆಲವೇ ನಿಮಿಷಗಳಲ್ಲಿ ಮರಳಿ ಇಂಗ್ಲಿಷ್ ತೆಕ್ಕೆಗೆ ಬೀಳುತ್ತೀರಿ. ಇದನ್ನು ತಪ್ಪಿಸಲು ಎಷ್ಟೋ ಜನ ಕನ್ನಡ ಭಾಷೆಗೆ ರೋಮನ್ ಲಿಪಿ ಬಳಸುವ ಪರಿಹಾರ ಕಂಡುಕೊಂಡಿದ್ದಾರೆ. ಇದರ ದೊಡ್ಡ ಅಪಾಯವೆಂದರೆ ಭಾಷೆ ಕನ್ನಡವಾಗಿದ್ದರೂ, ಲಿಪಿ ರೋಮನ್ ಆಗಿರುವುದರಿಂದ ಕನ್ನಡ ಭಾಷೆ ಸಮರ್ಪಕವಾಗಿ ಒಡಮೂಡಿರುವುದಿಲ್ಲ. ಲಿಪ್ಯಂತರ ಮಾಡಿದಾಗ ಭಾಷೆ ಮತ್ತು ಬರವಣಿಗೆಗಳ ನಡುವೆ ತಾಳಮೇಳವಿರುವುದಿಲ್ಲ ಮತ್ತು ಕಾಲಾನುಕ್ರಮದಲ್ಲಿ ಇದು ಕನ್ನಡ ಮಾಹಿತಿ ವಲಯದಲ್ಲಿರುವುದಿಲ್ಲ.

ಭಾರತೀಯ ಲಿಪಿ ಮತ್ತು ಭಾಷೆಗಳು, ರೋಮನ್ ಲಿಪಿ ಮತ್ತು ಇಂಗ್ಲಿಷ್ ಭಾಷೆಗಿಂತ ಹೆಚ್ಚು ತಾರ್ಕಿಕ ಮತ್ತು ವೈಜ್ಞಾನಿಕವಾಗಿದ್ದರೂ, ಅವುಗಳನ್ನು ಸಂಕ್ಷಿಪ್ತಗೊಳಿಸಿ ಇಂಗ್ಲಿಷ್‌ನಲ್ಲಿ SMS ಕಳಿಸುವಂತೆ ಕಳಿಸಲು ಸಾಧ್ಯವಿಲ್ಲ. ರೋಮನ್ ಲಿಪಿಯ ಕೊರತೆ ಇಂಗ್ಲಿಷ್ ಭಾಷೆಯ ಸಡಿಲ ವ್ಯಾಕರಣಗಳೇ ಈಗಿನ ಲಭ್ಯ ತಂತ್ರಜ್ಞಾನದ ದೃಷ್ಟಿಯಲ್ಲಿ ಹೆಗ್ಗಳಿಕೆ ಗಳಾಗಿವೆ. ಅಂತರ್ಜಾಲದಲ್ಲಿ ಸ್ಥಾನ ಗಿಟ್ಟಿಸಿರುವ ಫ್ರೆಂಚ್, ಸ್ಪ್ಯಾನಿಶ್ ಪೋರ್ಚುಗೀಸ್ ಮುಂತಾದ ಭಾಷೆಗಳ ಲಿಪಿಗಳು ಇಂಗ್ಲಿಷ್‌ನಂತೆಯೇ ರೋಮನ್ ಲಿಪಿಯ ರೂಪಗಳು. ಆದ್ದರಿಂದ ಗಣಕದಲ್ಲಿ ಲಿಪಿ ಕುರಿತಾದಂತೆ ಲಭ್ಯವಿರುವ ಎಲ್ಲ ಅನುಕೂಲಗಳು ಅವುಗಳಿಗೆ ಯಾವುದೇ ಪ್ರಯತ್ನವಿಲ್ಲದೆ ಸಿಗುತ್ತವೆ.

೨.೩ ಬಳಕೆಯ ವ್ಯಾಪ್ತಿ : ಯಾವುದೇ ಭಾಷೆ ಬಳಕೆಯಿಂದಲೇ ಹರಡುತ್ತದೆ ಹರಿಯುತ್ತದೆ ಮತ್ತು ಬೆಳೆಯುತ್ತದೆ. ಕನ್ನಡ/ಭಾರತೀಯ ಭಾಷೆಗಳು ತಮ್ಮ ಪ್ರಭಾವದ ವ್ಯಾಪ್ತಿಯಲ್ಲಿನ ಎಲ್ಲ ಚಟುವಟಿಕೆಗಳನ್ನು ತಮ್ಮ ಭಾಷಾ ವಲಯದೊಳಕ್ಕೆ ತರದಿರುವುದೇ ಬಹುತೇಕ ಸಮಸ್ಯೆಗಳಿಗೆ ಕಾರಣ. ಸರ್ಕಾರದ ಸುತ್ತೋಲೆಗಳು, ಬ್ಯಾಂಕಿನ ವಹಿವಾಟುಗಳು, ಖಾಸಗಿ ಕಂಪೆನಿಗಳ ಎಲ್ಲ ವ್ಯವಹಾರಗಳು, ಜಾಹಿರಾತುಗಳು ಇಂಗ್ಲಿಷ್‌ಗೆ ಮೊರೆ ಹೋಗಿವೆ. ದೇಶಭಾಷೆಗಳ ಬಳಕೆಯ ವೇಗ ಮತ್ತು ವ್ಯಾಪ್ತಿ ಹೆಚ್ಚದಿದ್ದಲ್ಲಿ, ಅವುಗಳ ಜಾಗದಲ್ಲಿ ಇಂಗ್ಲಿಷ್ ಇರುತ್ತದೆ. ಇಂಗ್ಲಿಷ್ ಇರುವವರೆಗೆ ದೇಶಭಾಷೆಗಳಿಗೆ ಎದುರಾಗಿರುವ ಬಳಕೆಯ ಅಡಚಣೆಗಳನ್ನು ದೂರಮಾಡುವ ಗಂಭೀರ ಯತ್ನಗಳು ನಡೆಯುವುದಿಲ್ಲ. ಇಂತಹ ವಿಷವರ್ತುಲದಿಂದ ಹೊರಬರುವುದೆಂದರೆ ನಮ್ಮ ಭಾಷೆಗಳನ್ನು ಎಲ್ಲ ರಂಗದಲ್ಲಿಯೂ ಬಳಸುವುದು. ಒಂದು ಭಾಷೆ ಸಾಕಷ್ಟು ಬಳಕೆಯಾಗುವುದು ತಿಳಿದರೆ ಖಾಸಗಿ ಕಂಪೆನಿಗಳು ಗ್ರಾಹಕರ ಹುಡುಕಾಟದ ಮೂಲಕ ಆ ಭಾಷೆಯ ಸಮಸ್ಯೆಗಳನ್ನು ಪರಿಹರಿಸಿ ಉತ್ತಮ ತಂತ್ರಜ್ಞಾನ ನೀಡಲು ಪ್ರಯತ್ನಿಸುತ್ತವೆ. ಉದಾಹರಣೆಗೆ ಗೂಗಲ್ ಕಂಪೆನಿ, ಕನ್ನಡವೂ ಸೇರಿದಂತೆ ಹಲವು ಭಾಷೆಗಳಿಗೆ ಅನುವಾದ ಸೌಲಭ್ಯ ಹೊರತಂದಿದೆ.

ಇದನ್ನು ಕನ್ನಡಿಗರು ಹೆಚ್ಚು ಬಳಸಿದರೆ, ಇಲ್ಲಿ ಒಂದು ಗ್ರಾಹಕ ವರ್ಗ ಇರುವುದು ಖಚಿತವಾಗಿ ಅದರ ಸುಧಾರಣೆಯತ್ತ ಗಮನ ಹರಿಸುತ್ತದೆ. ಸದ್ಯದ ಸ್ಥಿತಿಯಲ್ಲಿ ಭಾರತೀಯ ಭಾಷೆಗಳು ಅಂತರ್ಜಾಲದ ಬಳಕೆಯ ಬಹುದೊಡ್ಡ ಸಮುದಾಯ ಗಳಾದರೂ, ಅಂತರ್ಜಾಲಕ್ಕೆ ಅವುಗಳ ಕೊಡುಗೆ ನಗಣ್ಯ.

೩.೦ ಪರಿಹಾರಗಳು

೩.೧ ಬರಹ-ಮಾತು (ಪಠ್ಯ-ಧ್ವನಿ)/ಮಾತು-ಬರಹ(ಧ್ವನಿ-ಪಠ್ಯ) ರೂಪಾಂತರ: ಲಿಪಿ ಜಟಿಲತೆ ನಿಜವಾಗಿಯೂ ಕನ್ನಡ ಅಂತರ್ಜಾಲದಲ್ಲಿ ವ್ಯಾಪಕವಾಗಿ ಬಳಕೆಯಾಗಲು ಅಡ್ಡಿಯಾಗಿದೆ ಎನ್ನುವುದರಲ್ಲಿ ಎಷ್ಟು ಸತ್ಯವಿದೆ? ಲಿಪಿಯ ಜಟಿಲತೆಯ ಅಡಚಣೆಯನ್ನು ತಂತ್ರಜ್ಞಾನದ ನೆರವಿನಿಂದ ಹೇಗೆ ಪರಿಹರಿಸಿಕೊಳ್ಳಬಹುದು ಎನ್ನುವುದರ ಸ್ಥೂಲ ಚಿತ್ರಣವನ್ನಿಲ್ಲಿ ನೋಡಬಹುದು.

ಕನ್ನಡ/ಭಾರತೀಯ ಲಿಪಿ ಜಟಿಲ ಎಂದು ಯಾರೋ ಹೇಳಿದ ಮಾತ್ರಕ್ಕೆ ನಾವು ಹತಾಶರಾಗಬೇಕಿಲ್ಲ. ಈಗ ಅಂತರ್ಜಾಲದಲ್ಲಿ ಅಗ್ರಸ್ಥಾನದಲ್ಲಿರುವ ಮ್ಯಾಂಡರಿನ್ (ಚೀನಿ) ಜಪಾನಿ, ಅರೇಬಿಕ್ ಮತ್ತು ಕೊರಿಯನ್ ಭಾಷೆಗಳಿಗೆ ಲಿಪಿ ಕುರಿತಾದಂತೆ ಕನ್ನಡದ ಹಲವು ಪಟ್ಟಿನ, ಹಲವು ಸ್ತರಗಳ ಸಮಸ್ಯೆಗಳಿವೆ. ಮ್ಯಾಂಡರಿನ್ ಭಾಷೆ ಚಿತ್ರಲಿಪಿಯನ್ನು ಬಳಸುತ್ತದೆ. ಅದರಲ್ಲಿ ೫೦೦೦ಕ್ಕೂ ಅಧಿಕ ಮೂಲ ಚಿತ್ರಗಳಿವೆ. ಚೀನಾದಲ್ಲಿ ಒಬ್ಬ ಶಾಲಾ ಬಾಲಕ ಮೊದಲ ಐದು ವರ್ಷಗಳವರೆಗೆ ಇಂತಹ ಚಿತ್ರಲಿಪಿಯನ್ನು ಕಲಿಯಬೇಕಾಗುತ್ತದೆ. ಆಧುನಿಕ ಜಪಾನಿ ಲಿಪಿ ಕಾಂಜಿ (ಚೀನಾದ ಚಿತ್ರ ಭಾವಲಿಪಿ), ಹಿರಗನ ಮತ್ತು ಕಟಗನ ಎನ್ನುವ ಧ್ವನಿಮಾ (syllables) ಲಿಪಿಗಳ ಮಿಶ್ರಣ. ಕಾಂಜಿಯಲ್ಲಿ ಎರಡು ಸಾವಿರದಷ್ಟು ಚಿತ್ರಗಳಿದ್ದರೆ, ಹಿರಗನ, ಕಟಗನದಲ್ಲಿ ತಲಾ ೪೬ ಅಕ್ಷರಗಳಿವೆ. ಇದು ಇಷ್ಟಕ್ಕೇ ನಿಲ್ಲದೆ ಹಿರಗನ, ಕಟಗನ ಅಕ್ಷರಗಳನ್ನು ಯಾವಾಗ ಎಲ್ಲಿ ಬಳಸಬೇಕೆಂಬ ಮಾರ್ಗದರ್ಶಿ ಸೂತ್ರಗಳಿವೆ. ಕಾಂಜಿಯಲ್ಲಿ ಬರೆದ ಚಿತ್ರವು ಸಂದರ್ಭಾನುಸಾರವಾಗಿ ಅರ್ಥಾಂತರ ಹೊಂದುತ್ತದೆ. ಇದಲ್ಲದೇ ಇವನ್ನು ಅಡ್ಡ ಅಥವಾ ನೀಳ ಸಾಲುಗಳಲ್ಲಿಯೂ ಬರೆಯಬಹುದು.

ಕೊರಿಯನ್ ಭಾಷೆಗೆ ಹಂಗುಲ್ ಲಿಪಿಯಿದೆ. ಕನ್ನಡದ ಲಿಪಿ ರಾಜ್ಯಾದ್ಯಂತ ಒಂದೇ ಇದ್ದರೆ, ಹಂಗುಲ್ ಲಿಪಿಯಲ್ಲಿ ಪ್ರಾದೇಶಿಕ ವ್ಯತ್ಯಾಸಗಳಿವೆ. ಇದರೊಂದಿಗೆ ಕೊರಿಯನ್ ಬರವಣಿಗೆಯಲ್ಲಿ ಚೀನಾ ಮೂಲದ ಚಿತ್ರ ಲಿಪಿಯ ಹಂಜಾ, ಲ್ಯಾಟಿನ್ ಲಿಪಿಯ ರೋಮಜ ಅಕ್ಷರಗಳು ಸಹ ಸೇರಿಕೊಂಡಿವೆ. ಉತ್ತರ ಮತ್ತು ದಕ್ಷಿಣ ಕೊರಿಯಾಗಳ ಈ ಅಕ್ಷರಗಳಲ್ಲೂ ವೈವಿಧ್ಯತೆಗಳಿವೆ. ಅರೇಬಿಕ್ ಲಿಪಿ ಬರೆಯಲು, ಓದಲು ಮತ್ತು ವಿನ್ಯಾಸಗೊಳಿಸಲು ಕನ್ನಡ ಲಿಪಿಗೆ ಹೋಲಿಸಿದಂತೆ ಬಹು ಜಟಿಲವಾಗಿದೆ. ಅರೇಬಿಕ್ ಲಿಪಿಯಲ್ಲಿ ಅಕ್ಷರಗಳು ಬಿಡಿಬಿಡಿಯಾಗಿರದೆ ಮಾಲೆಯಲ್ಲಿ ಪೋಣಿಸಿದಂತೆ ಕಂಡು ಬರುತ್ತವೆ. ಈ ಲಿಪಿಯಲ್ಲಿ ಕೇವಲ ೬ ಅಕ್ಷರಗಳು ಮಾತ್ರ ನಂತರ ಬರುವ ಅಕ್ಷರಗಳೊಂದಿಗೆ ಸೇರಿದರೆ, ಉಳಿದೆಲ್ಲ ಅಕ್ಷರಗಳು ಹಿಂದಿನ ಮತ್ತು ಮುಂದಿನ ಅಕ್ಷರಗಳೊಂದಿಗೆ ಬೆಸೆದುಕೊಳ್ಳುತ್ತವೆ. ಇದಲ್ಲದೆ ಈ ಅಕ್ಷರಗಳು ಪ್ರತ್ಯೇಕವಾಗಿದ್ದಾಗ ಪದದ

ಆರಂಭ, ಅಂತ್ಯ ಮತ್ತು ಮಧ್ಯದಲ್ಲಿರುವಾಗ ವಿವಿಧ ರೀತಿಯ ವಿಶೇಷವಾದ 'ಅಕ್ಷರ ಬಳ್ಳಿ'ಗಳನ್ನು ಪಡೆಯುತ್ತವೆ. ಅರೆಬಿಕ್ ಲಿಪಿಯ ಒಟ್ಟು ೨೮ ಅಕ್ಷರಗಳಲ್ಲಿ ೧೭ ಮೂಲ ಅಕ್ಷರಗಳಾದರೆ ಇವುಗಳಿಗೆ ಚುಕ್ಕಿ ಸೇರಿಸಿ, ಇನ್ನು ಉಳಿದ ಅಕ್ಷರಗಳನ್ನು ಪಡೆಯಲಾಗಿದೆ. ಬರವಣಿಗೆಯಲ್ಲಿ ವ್ಯಂಜನಗಳು ಮಾತ್ರವಿದ್ದು, ಅವುಗಳೊಂದಿಗೆ ಸೇರಬೇಕಾದ ಸ್ವರಗಳನ್ನು ಅಕ್ಷರಗಳ ಮೇಲೆ ಅಥವಾ ಕೆಳಗೆ ಎಳೆದ ವಿವಿಧ ರೀತಿಯ ಗೀಟುಗಳಿಂದ ಸೂಚಿಸಲಾಗುತ್ತದೆ. ಕೆಲ ಅರೇಬಿಕ್ ವಿದ್ವಾಂಸರು ಲಿಪಿಯ ಜಟಿಲತೆಯಿಂದಾಗಿ ಯುವ ಅರಬರು ಅರೇಬಿಕ್‌ನಿಂದ ದೂರ ಸರಿಯುತ್ತಿದ್ದಾರೆಂದು ದೂರಿದ್ದಾರೆ.

ಅಂತರ್ಜಾಲದಲ್ಲಿ ಮೊದಲ ೧೦ ಸ್ಥಾನಗಳಲ್ಲಿರುವ ೪ ಭಾಷೆಗಳಿಗೆ ಲಿಪಿ ಜಟಿಲತೆಯ ಸಮಸ್ಯೆಗಳು ಹಾಸುಹೊಕ್ಕಾಗಿವೆ. ಇವುಗಳಿಗೆ ಹೋಲಿಸಿದರೆ ಕನ್ನಡ (ಭಾರತೀಯ ಭಾಷೆಗಳು–ತಮಿಳನ್ನು ಹೊರತಾಗಿ) ಆರಂಭದಿಂದಲೂ, ಮುಂದುವರೆದ ಎಲ್ಲ ಬಗೆಯ ಉಚ್ಚಾರಗಳನ್ನು ಪ್ರತಿನಿಧಿಸಬಲ್ಲ, ಸಸ್ವರ ಅಕ್ಷರ ಲಿಪಿಯನ್ನು ಅಳವಡಿಸಿಕೊಂಡು ವೈಜ್ಞಾನಿಕವಾಗಿ ಹೆಚ್ಚು ಸ್ಫುಟವಾಗಿದೆ. ಈ ಲಿಪಿಗಳ ಮೂಲಕ ಜಗತ್ತಿನ ವಿವಿಧ ಭಾಷೆಗಳಲ್ಲಿರುವ ವೈವಿಧ್ಯಮಯ ಉಚ್ಚಾರಣೆಗಳನ್ನು ಸಾಕಷ್ಟು ಕರಾರುವಾಕ್ಕಾಗಿ ಪ್ರತಿನಿಧಿಸಲು ಸಾಧ್ಯ. ಆದ್ದರಿಂದ ಅಂತರ್ಜಾಲದಲ್ಲಿ ಕನ್ನಡ ಗಣನೀಯ ಸ್ಥಾನಕ್ಕೆ ಏರಲು ಅದರ ಲಿಪಿ ಅಡ್ಡಿಯಲ್ಲ ಎಂದು ವಿಶ್ವಾಸದಿಂದ ಹೇಳಬಹುದು.

೩.೧.೧ ಬರವಣಿಗೆ–ಮಾತು (ಪಠ್ಯ–ಧ್ವನಿ) : ಇದಾದ ನಂತರವೂ ನಿಮಗೆ ಅಂತರ್ಜಾಲದಲ್ಲಿ ಕನ್ನಡ ಲಿಪಿ ಬಳಸುವುದು ಕಷ್ಟ ಎನಿಸುತ್ತಿದ್ದರೆ, ಅದಕ್ಕೂ ತಂತ್ರಜ್ಞಾನದಲ್ಲಿ ಪರಿಹಾರಗಳಿವೆ. ಗಣಕದಲ್ಲಿ ಕನ್ನಡವನ್ನು ಬರೆಯಲು ಲಿಪಿಯೇ ಅಡ್ಡಿಯೆಂದರೆ ಬರೆಯುವುದನ್ನು ತಪ್ಪಿಸಿ, ಆ ಕೆಲಸವನ್ನು ಯಂತ್ರ/ತಂತ್ರಾಂಶದಿಂದಲೇ ಮಾಡಿಸುವ ಸಾಧ್ಯತೆಗಳು ದಟ್ಟವಾಗಿವೆ. ಕನ್ನಡದಲ್ಲಿ ಬರೆದುದನ್ನು ಓದುವ ಹಲವು ತಂತ್ರಾಂಶಗಳು ಈಗಾಗಲೇ ನಿಧಾನವಾಗಿ ಗಮನ ಸೆಳೆಯುತ್ತಿವೆ. ಇವುಗಳನ್ನು ಬರಹದಿಂದ ಮಾತಿಗೆ (ಬಮಾ ತಂತ್ರಾಂಶ) TTS (Text to Speech) ತಂತ್ರಾಂಶಗಳೆಂದು ಕರೆಯುತ್ತಾರೆ. ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಅಬಸಿ ಹಳ್ಳಿಯ ಟಿ.ಎಸ್. ಶ್ರೀಧರ್ ಎನ್ನುವ ಕುರುಡರೊಬ್ಬರು E-Speak ತಂತ್ರಜ್ಞಾನ ಬಳಸಿ ಕನ್ನಡವನ್ನು ಓದುವ ತಂತ್ರಾಂಶ ಹೊರತಂದಿದ್ದಾರೆ. ಕರ್ನಾಟಕ ಸರ್ಕಾರದ 'ಕಣಜ' ತಾಣದಲ್ಲಿ ಇದರಕೊಂಡಿ ಲಭ್ಯ. ಈ ತಂತ್ರಾಶದ ಸ್ಥೂಲ ಲಕ್ಷಣಗಳು ಹೀಗಿವೆ:

೧) ಜಾಲತಾಣದಿಂದ ಕೆಳಗಿಳಿಸಿ ಗಣಕದಲ್ಲಿ ಸ್ಥಾಪಿಸಿಕೊಳ್ಳಬಹುದು, ೨) ಓದಿಕೆಯ ವೇಗವನ್ನು ನಿಯಂತ್ರಿಸಬಹುದು, ೩) ಮುಕ್ತ/ತೆರೆದ ತಂತ್ರಾಂಶವಾಗಿದ್ದು (DLL Plugin) ಇತರ ತಂತ್ರಾಂಶಗಳೊಂದಿಗೆ ಸಮನ್ವಯಗೊಳಿಸುವ ಸಾಧ್ಯತೆ ಹೊಂದಿದೆ, ೪) ಧ್ವನಿಯ ಗುಣಮಟ್ಟವನ್ನು ಉತ್ತಮಗೊಳಿಸಲು ಬೇಕಾದ ಆಕರಗಳು http://espeak.sourceforge.net/phontab.html and http://espeak.sourceforge.net/languages.htmlನಲ್ಲಿ ಲಭ್ಯ ೫) ಓದಿದ ಕಡತವನ್ನು ಧ್ವನಿ ಕಡತವನ್ನಾಗಿ ಮಾಡುವ ಸೌಲಭ್ಯ, ೬) ಹೆಚ್ಚಿನ ವಿವರಗಳಿಗೆ ತಂತ್ರಾಂಶದ ಮೂಲ ಕೃತಿಕಾರನನ್ನು 'http://espeak.sourceforge.net' ತಾಣದಲ್ಲಿ

ಸಂಪರ್ಕಿಸಬಹುದಾದ ಸಾಧ್ಯತೆ, ೭) ಕನ್ನಡ, ಇಂಗ್ಲಿಷ್ ಭಾಷೆಗಳ ಕಲಬೆರಕೆಯನ್ನು ಒಪ್ಪುತ್ತದೆ, ೮) ಈ ತಂತ್ರಾಂಶದ ಧ್ವನಿ ತಳಹದಿ ಪಾಶ್ಚಾತ್ಯ ಮೂಲವಾಗಿದ್ದು ಭಾರತೀಯ ಉಚ್ಚಾರಣೆಯಿಂದ ಬಹುದೂರ ಉಳಿದಿದೆ, ಆದ್ದರಿಂದ ಪಠ್ಯವನ್ನು ನೋಡುತ್ತಿದ್ದರೆ ಓದಿಕೆ ಅರ್ಥವಾಗುತ್ತದೆ, ಇಲ್ಲದಿದ್ದರೆ ಯಾವುದೋ ಭಾಷೆಯನ್ನು ಕೇಳಿದಂತಾಗುತ್ತದೆ.

ಭಾರತೀಯ ವಿಜ್ಞಾನ ಮಂದಿರದವರು (Indian Institute of Science) ಕನ್ನಡ ತಮಿಳು ಭಾಷೆಗಳಿಗೆ ಪಠ್ಯ-ಧ್ವನಿ ರೂಪಾಂತರ ಮಾಡುವ ಪ್ರದರ್ಶಕ ತಂತ್ರಾಂಶವನ್ನು http://mile.ee.iisc.ernet.in:8080/tts demo ತಾಣದಲ್ಲಿ ನೀಡಿದ್ದಾರೆ. ಈ ತಂತ್ರಾಂಶದ ಸ್ಥೂಲ ಲಕ್ಷಣಗಳು ಹೀಗಿವೆ:

೧) ಗಣಕದಲ್ಲಿ ಸ್ಥಾಪಿಸಿಕೊಳ್ಳಲು ಸಾಧ್ಯವಿಲ್ಲ, ಪ್ರತಿಬಾರಿಯೂ ಅಂತರ್ಜಾಲಕ್ಕೆ ಲಗತ್ತಾಗಿರಬೇಕು. ೨) ಪಠ್ಯವನ್ನು ಧ್ವನಿಗೆ ಬದಲಾಯಿಸಿ, ನಂತರದ ಧ್ವನಿ ಕಡತವನ್ನು ಪ್ರತಿಬಾರಿ ಜಾಲತಾಣದಿಂದ ಇಳಿಸಿಕೊಳ್ಳಬೇಕು; ಈ ಕಡತದ ಗಾತ್ರ ಸಾಕಷ್ಟು ದೊಡ್ಡದಾಗಿರುತ್ತದೆ. ೩) ಕನ್ನಡ, ಇಂಗ್ಲಿಷ್ ಭಾಷೆಗಳು ಕಲಬೆರಕೆಯಾಗಿರುವಲ್ಲಿ ಮೌನವಾಗಿರುತ್ತದೆ. ೪) ಧ್ವನಿ ತಳಹದಿ ಭಾರತೀಯವಾಗಿದ್ದು ಉಚ್ಚಾರಣೆ ಕನ್ನಡಕ್ಕೆ ಸಹಜವಾಗಿದೆ.

ಗಣಕದಲ್ಲಿ ಸ್ಥಾಪಿಸಿಕೊಳ್ಳಲು ಅನುಕೂಲವಾಗುವಂತೆ ಪೂರ್ಣರೂಪದಲ್ಲಿ ಈ ತಂತ್ರಾಂಶವನ್ನು ಬಿಡುಗಡೆಗೊಳಿಸಿ ಮುಕ್ತ ವಲಯಕ್ಕೆ ತಂದರೆ ಇದನ್ನು ಬೇರೆ ತಂತ್ರಾಂಶ ಗಳೊಂದಿಗೆ ಬೆಸೆದು, ನೂರಾರು ಬಗೆಯ ಹೊಸ ಸಾಧ್ಯತೆಗಳಿಗೆ ಮಾರ್ಗ ಕಲ್ಪಿಸಬಹುದು.

ಭಾರತ ಸರ್ಕಾರದ ಮಾಹಿತಿ ತಂತ್ರಜ್ಞಾನ ಇಲಾಖೆಯ ಅಧೀನದ ಟೆಕ್ನಾಲಜಿ ಡೆವಲಪ್ಮೆಂಟ್ ಫಾರ್ ಇಂಡಿಯನ್ ಲಾಂಗ್ವೇಜಸ್ (ಟಿ.ಡಿ.ಐ.ಎಲ್.) ೨೦೧೧ರ ಸೆಪ್ಟೆಂಬರ್‌ನಲ್ಲಿ ಬರಹವನ್ನು ಮಾತಾಗಿ (ಪಠ್ಯವನ್ನು ಧ್ವನಿಯಾಗಿ) ಪರಿವರ್ತಿಸುವ ತಂತ್ರಾಂಶವನ್ನು ಹಿಂದಿ, ಮರಾಠಿ, ಬಂಗಾಳಿ, ತೆಲುಗು, ತಮಿಳು ಮತ್ತು ಮಲಯಾಳಂ ಭಾಷೆಗಳಿಗೆ, ಚಾಕ್ಷುಷ ಅಕ್ಷರ ಗುರುತಿಸಿಕೆ (OCR - Optical Character Recognition) ತಂತ್ರಾಂಶವನ್ನು ಹಿಂದಿ, ಪಂಜಾಬಿ ಭಾಷೆಗಳಲ್ಲಿ ಬಿಡುಗಡೆಮಾಡಿತು. ಅದರಲ್ಲಿ ಕನ್ನಡದ ಸುದ್ದಿಯಿರಲಿಲ್ಲ. ಪಠ್ಯವನ್ನು ಧ್ವನಿಯಾಗಿ ಪರಿವರ್ತಿಸುವ ತಂತ್ರಜ್ಞಾನದಿಂದ ಯಾವುದೇ ಭಾಷಿಕರು ಅಂತರ್ಜಾಲದಲ್ಲಿ ಬರೆದ ಪಠ್ಯವನ್ನು ಕೇಳುವ ಅನುಕೂಲ ದಕ್ಕುತ್ತದೆ. ಇದರಿಂದ ಬರೆದುದನ್ನು ಕೇಳುವಂತಾಗಿ ವಿಶಾಲ ಜನಸಮೂಹ ಅಲ್ಪ ಪರಿಶ್ರಮದಲ್ಲಿ ತಮ್ಮ ಭಾಷೆಯಲ್ಲಿರುವ ವಿಷಯಗಳನ್ನು ಓದಿಸಿ ಕೇಳಿದಂತಾಗುತ್ತದೆ.

ಮುಂದಿನ ದಿನಗಳಲ್ಲಿ ಈ ತಂತ್ರಜ್ಞಾನ ಸಂಪೂರ್ಣ ವಿಕಸಿಸಿದಾಗ, ಸಂಚಾರಿ ದೂರವಾಣಿಗಳಲ್ಲಿ ನೆಲೆ ಕಂಡಾಗ, ಬರೆದುದೆಲ್ಲವೂ ಓದುವ/ಕೇಳುವ ಎರಡೂ ಅನುಕೂಲಗಳನ್ನು ಜೊತೆ ಯಲ್ಲಿಯೇ ತರುತ್ತದೆ. ಆ ಮೂಲಕ ಒಂದು ಭಾಷೆ ಆಧುನಿಕ ತಂತ್ರಜ್ಞಾನಕ್ಕೆ ಮೈದೆರೆದು ಕೊಂಡು, ಜಾಗತೀಕರಣದ ಸವಾಲನ್ನು ಸಮರ್ಥವಾಗಿ ಎದುರಿಸಲು ಸಾಧ್ಯವಾಗುತ್ತದೆ. ತಂತ್ರಜ್ಞಾನದ ನೆರವಿನಿಂದಾಗಿ ಮುಂದಿನ ದಿನಗಳಲ್ಲಿ ಸ್ಥಳೀಯ ಭಾಷೆ, ಅಂತಾರಾಷ್ಟ್ರೀಯ ಭಾಷೆ ಎನ್ನುವ ಭೇದಗಳು ಮರೆಯಾಗುತ್ತವೆ.

ಧ್ವನಿ ಎನ್ನುವ ಮತ್ತೊಂದು ಪಠ್ಯ-ಧ್ವನಿ (ಪಮಾ) ತಂತ್ರಾಂಶವು ಸಹ ಲಭ್ಯವಿದೆ. ಈ ಎಲ್ಲ ತಂತ್ರಾಂಶಗಳು ಒಂದೇ ರೀತಿಯಲ್ಲಿ, ಒಂದೇ ಧ್ವನಿಯಲ್ಲಿ, ನಿರ್ದಿಷ್ಟ ವೇಗದಲ್ಲಿ ಓದುತ್ತವೆ. ಸಂದರ್ಭಕ್ಕೆ ಅನುಗುಣವಾಗಿ ಧ್ವನಿಯ ಏರಿಳಿತ, ಭಾವನೆಗಳ ತೋರ್ಪಡಿಕೆ ಮುಂತಾದವುಗಳನ್ನು ಒಳಗೊಳ್ಳುವಂತೆ ಇವುಗಳಲ್ಲಿ ಬದಲಾವಣೆ ತಂದರೆ ಕನ್ನಡ ಭಾಷೆಯ ಬಳಕೆಯಲ್ಲಿ ಕ್ರಾಂತಿಕಾರಕ ಬದಲಾವಣೆಗಳಾಗುತ್ತವೆ.

೩.೧.೨ ಮಾತು-ಬರಹ (ಧ್ವನಿ-ಪಠ್ಯ) : ಮುದ್ರಿತ ಅಥವಾ ಎಲೆಕ್ಟ್ರಾನಿಕ್ ಪಠ್ಯ ಯಾವಾಗಲೂ ನಿರ್ದಿಷ್ಟ ರೀತಿಯಲ್ಲಿ ಇರುವುದರಿಂದ ಪಠ್ಯದಿಂದ ಧ್ವನಿಗೆ ರೂಪಾಂತರ ಮಾಡುವ ತಂತ್ರಾಂಶಗಳನ್ನು ಅಭಿವೃದ್ಧಿ ಮಾಡುವುದು ಸುಲಭ. ಆದರೆ ಮಾತನ್ನು ಬರಹವಾಗಿ ಬದಲಾಯಿಸುವುದು ಬೇರೆಯದೇ ಬಗೆಯದಾದ ಪರಿಹಾರಗಳನ್ನು ಬಯಸುತ್ತದೆ. ಭಾಷೆ ಒಂದೇ ಆದರೂ ಪ್ರತಿಯೊಬ್ಬ ವ್ಯಕ್ತಿಯ ಧ್ವನಿ ಮತ್ತು ಆಡುರೂಪ ವಿಭಿನ್ನವಾಗಿರುತ್ತವೆ. ಆದ್ದರಿಂದ ಬಗೆಬಗೆಯ ಧ್ವನಿಗಳನ್ನು ಗುರುತಿಸಿ, ಅದನ್ನು ನಿರ್ದಿಷ್ಟ ಭಾಷೆಯ, ನಿರ್ದಿಷ್ಟ ಲಿಪಿಯ ಬರವಣಿಗೆಯಾಗಿ ಬದಲಾಯಿಸುವುದು ಸವಾಲಿನ ಕೆಲಸವಾದರೂ, ಈ ನಿಟ್ಟಿನಲ್ಲಿ ಸಾಕಷ್ಟು ಪ್ರಯತ್ನಗಳು ಜರುಗಿವೆ. ರಷ್ಯನ್, ಫ್ರೆಂಚ್, ಡಚ್ ಇಂಗ್ಲಿಷ್, ಸ್ಪ್ಯಾನಿಷ್ ಜರ್ಮನ್, ಮ್ಯಾಂಡರಿನ್ ಭಾಷೆಗಳಿಗೆ ಮಾತನ್ನು ಬರವಣಿಗೆ ಯಾಗಿಸುವ ತಂತ್ರಾಂಶಗಳು ಬಳಕೆಯಲ್ಲಿವೆ. ಇವುಗಳು ಹೇಳಿಕೊಳ್ಳುವಷ್ಟು ಸಮರ್ಪಕ ವಾಗಿಲ್ಲವಾದರೂ ಮುಂದಿನ ದಶಕದ ವೇಳೆಗೆ ವ್ಯಾಪಕವಾಗಿ, ವ್ಯಾವಹಾರಿಕ ಬಳಕೆಗೆ ಬರುವಷ್ಟು ಆಶಾದಾಯಕವಾಗಿವೆ. ೨೦೦೮ರಲ್ಲಿ ಲೈನಕ್ಸ್ ಕಾ-ವ್ಯದಲ್ಲಿ ಕಾರ್ಯ ನಿರ್ವಹಿಸಬಲ್ಲ ಹಿಂದಿ ಭಾಷೆಯ ಮಾತನ್ನು ಬರವಣಿಗೆಗೆ ಬದಲಾಯಿಸುವ ಮುಕ್ತ ವಲಯದ ಪ್ರದರ್ಶಕ ತಂತ್ರಾಂಶವೊಂದು ಬಿಡುಗಡೆಗೊಂಡಿದ್ದಿತು. ೨೦೦೬ರಲ್ಲಿ C-DOC (Centre for the Development of Advanced Computing) ಹಿಂದಿ ಮಾತನ್ನು ಬರವಣಿಗೆಗೆ ಬದಲಾಯಿಸುವ 'ಶ್ರುತ ಲೇಖನ್ – ರಾಜಭಾಷಾ' ಎನ್ನುವ ತಂತ್ರಾಂಶವನ್ನು ಬಿಡುಗಡೆಗೊಳಿಸಿದ್ದಿತು. ಇದರಂತೆ ಒಂದೆರಡು ಇತರ ಬಿಡಿ ಪ್ರಯತ್ನಗಳು ಸಹ ಹಿಂದಿಯಲ್ಲಿ ಸಾಗಿದ್ದವು. ಇವನ್ನು ಇತರ ಭಾರತೀಯ ಭಾಷೆಗಳಿಗೂ ವಿಸ್ತರಿಸ ಬಹುದೆಂದು ಭಾವಿಸಲಾಗಿದ್ದಿತು. ನಂತರದ ದಿನಗಳಲ್ಲಿ ಈ ದಿಶೆಯಲ್ಲಿ ಹೆಚ್ಚಿನ ಬೆಳವಣಿಗೆಗಳು ಆದಂತೆ ಕಂಡುಬರುವುದಿಲ್ಲ (http://hindiasr.sourceforge.net).

ಮಾತನ್ನು ಬರವಣಿಗೆಗೆ ಪರಿವರ್ತಿಸಲು ಕೆಲವು ತಂತ್ರಾಂಶಗಳು ಈಗ ಜಾಲತಾಣ ಗಳಲ್ಲಿ ಲಭ್ಯವಿವೆ. http:/cmusphinx.sourceforge.net ತಾಣದಲ್ಲಿ CMU Sphinx ಎನ್ನುವ ಮುಕ್ತ ಆಕರದ ತಂತ್ರಾಂಶ ಲಭ್ಯವಿದೆ. ಇದನ್ನು ಯಾವುದೇ ಭಾಷೆಗೆ ಅಳವಡಿಸಿಕೊಳ್ಳುವುದು ಸಾಧ್ಯವಿದೆ.

೩.೨ ಅನುವಾದ : ಭಾರತದಂತಹ ಹಲವು ಭಾಷೆಗಳ ದೇಶಗಳಲ್ಲಿ, ಭಾಷೆಗಳ ಅನುವಾದಕ್ಕೆ ಬಹು ಮಹತ್ವವಿದೆ. ಜಾಗತೀಕರಣದ ಪರಿಣಾಮವಾಗಿ ಜಗತ್ತಿನಾದ್ಯಂತ ವಿವಿಧ ಭಾಷಾ ಸಮುದಾಯಗಳ ನಡುವೆ ಹಿಂದೆಂದೂ ಊಹಿಸದಿದ್ದ ಸಂವಹನಗಳು ಜರುಗುತ್ತಿವೆ. ಈ ಸಂವಹನ ಈಗ ಬಹುತೇಕವಾಗಿ ಇಂಗ್ಲಿಷ್ ಮುಖಾಂತರ ಜರುಗುತ್ತಿದೆ.

ದೊಡ್ಡ ಪ್ರಮಾಣದ ಭಾಷಾ ಸಮುದಾಯಗಳು ಇಂಗ್ಲಿಷ್ ಹಂಗಿನಿಂದ ಹೊರಬಂದು ತಂತ್ರಜ್ಞಾನದ ನೆರವಿನಿಂದ ಭಾಷಾ ಕಂದಕವನ್ನು ದಾಟಲು ಪರಿಶ್ರಮಿಸುತ್ತಿವೆ. ಮುಂದಿನ ಒಂದೆರಡು ದಶಕಗಳಲ್ಲಿ ಯಾವುದೇ ಭಾಷೆಯನ್ನು, ಯಾವುದೇ ಇನ್ನೊಂದು ಭಾಷೆಗೆ ಅನುವಾದಗೊಳಿಸುವುದು ಸಾಧ್ಯವಾಗುತ್ತದೆ. ಅಂತಹ ಸಾಧ್ಯತೆಯಲ್ಲಿ ಭಾಗಿಯಾಗಲು ನಮ್ಮನ್ನು ನಾವು ಈಗಿನಿಂದಲೇ ಅಣಿಗೊಳಿಸಿಕೊಳ್ಳಬೇಕಾಗುತ್ತದೆ.

ಭಾರತದಲ್ಲಿ ಕೇಂದ್ರ ಸರ್ಕಾರ ಇಂಗ್ಲಿಷ್/ಹಿಂದಿ ಬಳಸುತ್ತಿದ್ದರೆ, ಪ್ರತಿಯೊಂದು ರಾಜ್ಯವೂ ತನ್ನ ಭಾಷೆಯನ್ನು ಬಳಸುತ್ತಿರುವುದರಿಂದ ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಅನುವಾದ ಮಾಡುವುದು ಭಾರಿ ಶ್ರಮದಾಯಕ ಕೆಲಸವಾಗಿದೆ. ಜಯಲಲಿತಾ ಆಸ್ತಿಪ್ರಕರಣದಲ್ಲಿ ತಮಿಳಿನಲ್ಲಿರುವ ನ್ಯಾಯಾಲಯದ ದಾಖಲೆಗಳನ್ನು ಇಂಗ್ಲಿಷ್‌ಗೆ ತರ್ಜುಮೆ ಮಾಡಲು ಪಟ್ಟಶ್ರಮ ನಮ್ಮ ಕಣ್ಣು ಮುಂದಿದೆ. ಮನುಷ್ಯರಿಂದ ನಡೆಯುವ ಅನುವಾದ ಬಹು ನಿಧಾನಗತಿಯದಾಗಿದ್ದು, ಅಪಾರ ವೆಚ್ಚದಾಯಕವಾದುದು. ಇದನ್ನು ತಪ್ಪಿಸಲು ಸರ್ಕಾರದ ದಾಖಲೆಗಳನ್ನು ಭಾರತದ ಒಂದು ಭಾಷೆಯಿಂದ, ಇನ್ನೊಂದು ಭಾಷೆಗೆ ಅನುವಾದ ಮಾಡಬಲ್ಲ ಯಾಂತ್ರಿಕ ವಿಧಾನಗಳನ್ನು ತಂತ್ರಜ್ಞಾನದಿಂದ ಅಭಿವೃದ್ಧಿ ಗೊಳಿಸುವುದು ಈಗ ಸಾಧ್ಯ. ಇದರಿಂದ ಸರ್ಕಾರದ ದಾಖಲೆಗಳು, ನಮೂನೆಗಳು ಸಂಸದೀಯ ನಡಾವಳಿಗಳು, ಸಾರ್ವಜನಿಕ ತಿಳುವಳಿಕೆ ಪತ್ರಗಳು, ನ್ಯಾಯಾಂಗದ ತೀರ್ಮಾನಗಳು ಜನಸಾಮಾನ್ಯರಿಗೆ ತಲುಪುವುದರೊಂದಿಗೆ ದೇಶಭಾಷೆಗಳ ಅಭಿವೃದ್ಧಿ ಯಾಗಿ, ಜನಸಾಮಾನ್ಯರಿಗೆ ಅವರ ಭಾಷೆಯಲ್ಲಿ ವಿಶ್ವದರ್ಶನ ಮಾಡಿಸಿದಂತಾಗುತ್ತದೆ. ಇದಕ್ಕಾಗಿ ಅನುವಾದಕ ತಂತ್ರಾಂಶಗಳನ್ನು ಸಿದ್ಧಗೊಳಿಸಬೇಕಾಗಿದೆ.

ಅಂತರರಾಷ್ಟ್ರೀಯ ಯಂತ್ರ ಅನುವಾದ ಸಂಘ (http:/International Association for Machine Translation) ಗಣಕದ ಮೂಲಕ ವಾಣಿಜ್ಯ ಮಟ್ಟದಲ್ಲಿ ವಿವಿಧ ಭಾಷೆಗಳ ನಡುವೆ ಭಾಷಾಂತರವನ್ನು ತರಲು ಶ್ರಮಿಸುತ್ತಿದೆ. ಅತ್ಯಂತ ಕುತೂಹಲಕರವಾದ ಸಂಗತಿಯೆಂದರೆ ಅಂತರ್ಜಾಲದ ಬಳಕೆಯಲ್ಲಿ ಮುಂಚೂಣಿ ಯಲ್ಲಿರುವ ಮೊದಲ ೧೦ ಭಾಷೆಗಳಿಗೆ ಮತ್ತು ಆ ಭಾಷೆಗಳಿಂದ ಅನುವಾದಿಸಲು ಹಲವಾರು ಮುಕ್ತ ಮತ್ತು ವಾಣಿಜ್ಯಕ ತಂತ್ರಾಂಶಗಳು ಲಭ್ಯವಿವೆ. ಮೊದಲ ಐದು ಭಾಷೆಗಳಿಗೆ ೧೦ಕ್ಕಿಂತಲೂ ಹೆಚ್ಚು ಅನುವಾದಕ ತಂತ್ರಾಂಶಗಳು ಲಭ್ಯವಿವೆ (http://www.city-star.org/index.php?url=trans:en). ಆದರೆ ಗೂಗಲ್ ಅನುವಾದಕ ಹೊರತು ಬೇರೆ ಯಾವ ತಂತ್ರಾಂಶಗಳೂ ಭಾರತೀಯ ಭಾಷೆಗಳಿಗೆ ಅಭಿವೃದ್ಧಿಗೊಂಡಿಲ್ಲ. ಅದರತ್ತ ಯಾರೂ ಸಹ ಗಮನಹರಿಸುತ್ತಿಲ್ಲ. ಇದರಿಂದ ಅಂತರ್ಜಾಲದಲ್ಲಿ ಒಂದು ಭಾಷೆಯ ಬಳಕೆ ಹೆಚ್ಚಿದಂತೆ, ಅದು ಹೆಚ್ಚು ಪ್ರಬಲವಾಗುತ್ತದೆ ಎನ್ನುವುದು ಸ್ಪಷ್ಟ.

ಇಂಗ್ಲಿಷ್‌ನಿಂದ ಭಾರತೀಯ ಭಾಷೆಗಳಿಗೆ ಹಾಗೂ ವಿವಿಧ ಭಾರತೀಯ ಭಾಷೆಗಳ ನಡುವೆ ಅನುವಾದ ಮಾಡಬಲ್ಲ ತಂತ್ರಾಂಶ ರೂಪಿಸಲು ಹಲವಾರು ಪ್ರಯತ್ನಗಳು ಭಾರತದಲ್ಲಿ ಸಾಗಿವೆ. ಅವುಗಳಲ್ಲಿ ಹೆಸರಿಸಬಹುದಾದಂತಹವು: ಆಂಗ್ಲ ಭಾರತಿ (೧೯೯೧ ೨೦೦೪: ಇಂಗ್ಲಿಷ್–ಭಾರತೀಯ ಭಾಷೆಗಳು); ಅನುಸಾರಕ (೧೯೯೫: ತೆಲುಗು–ಕನ್ನಡ–

ಬಂಗಾಳಿ–ಮರಾಠಿ–ಹಿಂದಿ), ಮಂತ್ರ (೧೯೯೯: ಇಂಗ್ಲಿಷ್–ಹಿಂದಿ) ವಾಸಾನುವಾದ (೨೦೦೨: ಬಂಗಾಳಿ–ಅಸ್ಸಾಮಿ), ಶಿವಶಕ್ತಿ (೨೦೦೪: ಇಂಗ್ಲಿಷ್–ಹಿಂದಿ–ಮರಾಠಿ–ತೆಲುಗು), ಅನುಬಾದ್ (ಇಂಗ್ಲಿಷ್–ಬಂಗಾಳಿ), ಇಂಗ್ಲಿಷ್–ಕನ್ನಡ (ಡಾ. ಕೆ. ನಾರಾಯಣ ಮೂರ್ತಿ), ಸಂಪರ್ಕ (೨೦೦೯ : ಪಂಜಾಬಿ–ಉರ್ದು–ತಮಿಳು–ಮರಾಠಿ). ಹೀಗೆ ನಡೆದ ಎಲ್ಲ ಪ್ರಯತ್ನಗಳೂ ಸರ್ಕಾರದ ಪ್ರಾಯೋಜಕತ್ವದಲ್ಲಿದ್ದವು. ಇವುಗಳಲ್ಲಿ ಯಾವುದೇ ಅನುವಾದ ತಂತ್ರಾಂಶವೂ ಸಫಲವಾಗಿಲ್ಲ, ಮಾತ್ರವಲ್ಲದೆ ಇಂತಹ ಪ್ರಯತ್ನಗಳು ಜರುಗಿರುವ ಬಗ್ಗೆ ಸಾರ್ವಜನಿಕರಿಗೆ ಮಾಹಿತಿಯೇ ಇಲ್ಲ. ಭಾರತದಲ್ಲಿ ಅಂತರ್ಜಾಲ ಕಾಲಿಡುವುದಕ್ಕೆ ಮೊದಲೇ ತಂತ್ರಾಂಶಗಳನ್ನು ಬಳಸಿ ಅನುವಾದ ಮಾಡುವ ಕನಸಿದ್ದಿತಾದರೂ, ದಿನಕಳೆದಂತೆ ಅದರ ಉತ್ಸಾಹ ಬತ್ತಿ ಮರೆಯಾಯಿತು. ಒಂದು ದಶಕದ ಹಿಂದೆ ಅಂತರ್ಜಾಲ ನಮ್ಮ ಮಲಗುವ ಮನೆಗಳನ್ನು ಪ್ರವೇಶಿಸುವ ಮೊದಲು ಎಚ್ಚೆತ್ತಿದ್ದರೆ, ಈಗ ಅಂತರ್ಜಾಲದ ಪ್ರಮುಖ ಭಾಷೆಗಳ ಪಟ್ಟಿಯಲ್ಲಿ ನಾವೂ ಸೇರಿರುತ್ತಿದ್ದೆವು. ಸರ್ಕಾರದ ಇಂಗ್ಲಿಷ್/ಕನ್ನಡ ಸುತ್ತೋಲೆಗಳನ್ನು ಅನುವಾದ ಮಾಡುವಂತಹ ತಂತ್ರಾಂಶ ರೂಪಿಸಲು ಹೈದರಾಬಾದ್ ವಿಶ್ವವಿದ್ಯಾಲಯದ ಭಾರತೀಯ ಭಾಷಾ ಪರಿಹಾರ ಸಂಪನ್ಮೂಲ ಕೇಂದ್ರದ ಡಾ. ನಾರಾಯಣಮೂರ್ತಿಯವರಿಗೆ ಕರ್ನಾಟಕ ಸರ್ಕಾರ ಧನ ಸಹಾಯ ಮಾಡಿತು. ಅವರು ಅಭಿವೃದ್ಧಿಪಡಿಸಿದ ತಂತ್ರಾಂಶ ಏನಾಯಿತು, ಅದನ್ನು ಎಂದಾದರೂ ಬಳಸಲಾಯಿತೇ, ಅದರ ಮೌಲ್ಯಮಾಪನ ಮಾಡಲಾಯಿತೇ ಎನ್ನುವ ಯಾವ ವಿವರಗಳೂ ಸಹ ಲಭ್ಯವಿಲ್ಲ.

ಭಾರತದ ಪ್ರಧಾನಿ ಮನಮೋಹನ್ ಸಿಂಗರ ಸಲಹೆಯಂತೆ ಭಾರತ ಸರ್ಕಾರದ ಜ್ಞಾನ ಆಯೋಗದ ಅಧ್ಯಕ್ಷ ಸ್ಯಾಮ್ ಪಿತ್ರೋದರ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಭಾಷಾಂತರ ಸಂದೇಶ (ಸಂಸ್ಥೆ)ವು ಕೇಂದ್ರ ಸರ್ಕಾರದ ಆಸರೆಯಲ್ಲಿ ಜನ್ಮತಾಳಿತು. (http:www.ntm.org.in/english/software.aspx) ಸರ್ಕಾರದ ಈ ಶೃಂಗ ಸಂಸ್ಥೆಯಿಂದ ಭಾರತೀಯ ಭಾಷೆಗಳ ಯಂತ್ರಾಧಾರಿತ ಅನುವಾದ ಕಾರ್ಯ ಯಾವ ಹಂತದಲ್ಲಿದೆ ಎನ್ನುವುದು ಸ್ಪಷ್ಟವಿಲ್ಲ.

ಆಯ್ದ ಭಾರತೀಯ ಭಾಷೆಗಳ ಅನುವಾದ ತಂತ್ರಾಂಶ ಗೂಗಲ್‌ನಲ್ಲಿ ಮಾತ್ರ ಲಭ್ಯ. ಗೂಗಲ್ ಈಗ ನೀಡುತ್ತಿರುವ ಅನುವಾದ ಅತ್ಯಂತ ಸೀಮಿತವಾಗಿದ್ದು, ಅದು ಸಮರ್ಪಕವಾಗುವವರೆಗೆ ಕಾಯಬೇಕಾಗುತ್ತದೆ. ಇದರ ಬದಲಿಗೆ ಆರಂಭಿಕ ಹಂತದಲ್ಲಿ ನಾವು ನಮ್ಮದೇ ಆದ ರೀತಿಯಲ್ಲಿ ಇದರ ಪರಿಹಾರಕ್ಕೆ ಯತ್ನಿಸಬಹುದು. ಭಾರತ ಪ್ರಧಾನವಾಗಿ ಇಂಡೋ–ಆರ್ಯನ್ ಮತ್ತು ದ್ರಾವಿಡ ಎಂಬ ಎರಡು ಭಾಷಾ ಗುಂಪು ಗಳಲ್ಲಿ ಗುರುತಿಸಲ್ಪಟ್ಟಿದೆ. ಕನ್ನಡ–ತೆಲುಗು–ತಮಿಳು–ಮಲೆಯಾಳಂ–ತುಳು–ಕೊಡವ ದ್ರಾವಿಡ ಭಾಷೆಗಳ ಒಟ್ಟು ಜನಸಂಖ್ಯೆ ೨೨ ಕೋಟಿಯನ್ನು ದಾಟುತ್ತದೆ. ಈ ಎಲ್ಲ ಭಾಷೆಗಳ ಮೂಲ ಸ್ವರೂಪ, ವ್ಯಾಕರಣದ ನಿಯಮಗಳು, ವಾಕ್ಯರಚನೆಯ ನಿಯಮಗಳು ಒಂದೇ ಆಗಿರುವುದರಿಂದ ಈ ಭಾಷೆಗಳ ನಡುವಿನ ಅನುವಾದ ನೇರ ಹಾಗೂ ಸರಳವಾಗಿರುತ್ತದೆ. ದ್ರಾವಿಡ ಭಾಷಾ ಒಕ್ಕೂಟವೊಂದನ್ನು ಸ್ಥಾಪಿಸಿಕೊಂಡು, ದ್ರಾವಿಡ ಭಾಷೆಗಳ ನಡುವಿನ

ಅನುವಾದ ತಂತ್ರಾಂಶ ರೂಪಿಸಿದರೆ, ಪ್ರತಿಯೊಂದು ಪಾಲುದಾರ ಭಾಷೆಯ ವ್ಯಾಪ್ತಿಯೂ ಹಲವು ಪಟ್ಟು ಹಿಗ್ಗುತ್ತದೆ. ಈ ಭಾಷೆಗಳ ನಡುವಿನ ಮಾಹಿತಿ ಸಾಹಿತ್ಯ ತೆರಪಿಲ್ಲದಂತೆ ಪೋಣಿಸಲ್ಪಡುತ್ತದೆ. ಒಂದು ದ್ರಾವಿಡ ಭಾಷೆಯ ಖ್ಯಾತ ಬರಹಗಾರ, ಉಳಿದ ದ್ರಾವಿಡ ಭಾಷಾ ಸಮುದಾಯವನ್ನು ನಿರಾಯಾಸವಾಗಿ ತಲುಪು ವಂತಾಗುತ್ತದೆ. ಜಗತ್ತಿನಲ್ಲಿ ಇಂತಹ ಪ್ರಯತ್ನವನ್ನು ಯಾವ ನಿರ್ದಿಷ್ಟ ಭಾಷಾ ಸಮುದಾಯವೂ ಮಾಡಿಲ್ಲ. ಅಂತಹ ಪ್ರಯತ್ನ ದ್ರಾವಿಡ ಭಾಷೆಗಳಿಂದಲೇ ಪ್ರಾರಂಭವಾಗ ಬಹುದು.

ಮ್ಯಾಂಡರಿನ್, ಸ್ಪ್ಯಾನಿಷ್, ಅರೇಬಿಕ್ ಮುಂತಾದ ಭಾಷೆಗಳಲ್ಲಿ ಸಹಸ್ರಾರು ತಾಣಗಳ ಮೂಲಕ ವಿಪುಲ ಪ್ರಮಾಣದ ಭಾಷಾ ಆಕರ ಇರುವುದರಿಂದ ಆ ಭಾಷೆಗಳ ಅನುವಾದವನ್ನು ಸಂಖ್ಯಾಕಲನೀಯ ಯಂತ್ರ ಅನುವಾದ ತಂತ್ರದ (SMT-Statistical Machine Translation) ಮೂಲಕ ಸಾಕಷ್ಟು ಕರಾರುವಾಕ್ಕಾಗಿ ಪಡೆಯಲು ಸಾಧ್ಯ. ಅಂತರ್ಜಾಲದಲ್ಲಿ ಕನ್ನಡ/ಭಾರತೀಯ ಭಾಷಾ ಆಕರಗಳು ಅಲ್ಪವಾಗಿರುವುದರಿಂದ ಅನುವಾದದ ನಿಖರತೆ ಕಷ್ಟ ಎಂದು ಗೂಗಲ್ ತಿಳಿಸಿದೆ. ಇದರ ಅರ್ಥವೆಂದರೆ ಜಗತ್ತನ್ನು ನಾವು ನಮ್ಮ ಭಾಷೆಯ ಮೂಲಕ ನೋಡಬೇಕೆಂದರೆ, ಅದನ್ನು ನೋಡುವ ಅರ್ಹತೆಯನ್ನು ನಾವು ಗಳಿಸಿಕೊಳ್ಳಬೇಕು. ಅದಕ್ಕಾಗಿ ಕನ್ನಡ ಬಳಸುವ ತಾಣಗಳು, ಕನ್ನಡ ಬಳಕೆ ಅಂತರ್ಜಾಲದಲ್ಲಿ ವಿಪುಲವಾಗಿರಬೇಕು. ಎಂದರೆ ನಮ್ಮ ಕೊರತೆಗಳನ್ನು ನಿವಾರಿಸಿಕೊಳ್ಳುವ ದಾರಿಗಳು ನಮ್ಮ ಬಳಿಯೇ ಇವೆ; ಅವು ಇನ್ನೆಲ್ಲಿಯೋ ಇಲ್ಲ. ಭಾಷಾ ಅನುವಾದ ಮಾಡಬಲ್ಲ ಒಂದು ಸಮರ್ಪಕ ತಂತ್ರಾಂಶದಿಂದ ಒಮ್ಮೆಲೆ ನಾವು ಅಂತರರಾಷ್ಟ್ರೀಯ ಮಟ್ಟಕ್ಕೆ ಏರಲು ಸಾಧ್ಯ. ನಿಮ್ಮದೇ ಆದ ಕನ್ನಡದ ಕೃತಿ, ನೆರೆಯ ತಮಿಳಿನಂತೆ ಇಂಗ್ಲಿಷ್ ಭಾಷೆಯಲ್ಲೂ ಬರಬಲ್ಲದು. ಅದರಂತೆ ಶ್ರೇಷ್ಠವಾದ ಆಫ್ರಿಕನ್ ಸಾಹಿತ್ಯ ಕನ್ನಡದ್ದಾಗಬಹುದು. ತಂತ್ರಜ್ಞಾನದಲ್ಲಿ ಇವೆಲ್ಲ ಸಾಧ್ಯತೆಗಳು ಈಗಾಗಲೇ ವಿಶ್ವರೂಪ ತಳೆಯುವ ಹಂತದಲ್ಲಿವೆ.

೩.೩ ಚಾಕ್ಷುಷ ಅಕ್ಷರ ಗುರುತಿಸಿಕೆ (OCR-Optical Character Recognition) ತಂತ್ರಜ್ಞಾನದಿಂದ ಮುದ್ರಿತ ದಾಖಲೆಗಳನ್ನು ಎಲೆಕ್ಟ್ರಾನಿಕ್ ರೂಪಕ್ಕೆ ಬದಲಾಯಿಸಬಹುದು. ಇದರಿಂದ ಪುಸ್ತಕ, ದಾಖಲೆಗಳನ್ನು ಅಂತರ್ಜಾಲದಲ್ಲಿ ಎಲೆಕ್ಟ್ರಾನಿಕ್ ರೂಪದಲ್ಲಿ ಪ್ರಕಟಿಸಬಹುದು. ಇದರಿಂದ ಹೆಚ್ಚಿನ ವೆಚ್ಚವಿಲ್ಲದೆ ಒಂದೇ ಬಾರಿಗೆ ವಿಶಾಲವಾದ ಜನಸಮುದಾಯವನ್ನು ತಲುಪಿದಂತಾಗಿ, ದೇಶಭಾಷೆಗಳು ವ್ಯಾಪಕ ಬಳಕೆಗೆ ಬಂದಂತಾಗುತ್ತವೆ. ಇದರೊಂದಿಗೆ ಒಂದು ಭಾಷೆಯಲ್ಲಿ ಲಭ್ಯವಾಗುವ ಎಲೆಕ್ಟ್ರಾನಿಕ್ ಮಾಹಿತಿಯನ್ನು ಸುಲಭವಾಗಿ, ಸಹಸ್ರಾರು ಪಟ್ಟು ಹೆಚ್ಚಿಸಬಹುದು. ಕನ್ನಡದ ಹೊಸ ಹಳೆಯ ವಿಶ್ವಕೋಶ, ಹಕ್ಕುಸ್ವಾಮ್ಯವಿರದ ಕೃತಿಗಳನ್ನು ಅಂತರ್ಜಾಲದಲ್ಲಿ ತುಂಬಬಹುದು. ಕರ್ನಾಟಕ ಸರ್ಕಾರದ 'ಕಣಜ' ಜಾಲ ತಾಣವನ್ನು ಒಮ್ಮೆಲೇ ಅತ್ಯಂತ ಸಮೃದ್ಧಿಯ ಜಾಗವಾಗಿಸಬಹುದು. ಅಂತರ್ಜಾಲದಲ್ಲಿ ಕನ್ನಡದ ಬಳಕೆ ಹೆಚ್ಚಿದಂತೆ, ಕನ್ನಡ ಭಾಷಾ ಬಳಕೆಯ ವೈವಿಧ್ಯತೆ ತಾನಾಗಿಯೇ ಅಂತರ್ಜಾಲದಲ್ಲಿ ಲಭ್ಯವಿರುತ್ತದೆ. ಇದನ್ನು ಬಳಸಿಕೊಂಡು ಪರಭಾಷೆಗಳಿಂದ ಕನ್ನಡಕ್ಕೆ, ಕನ್ನಡದಿಂದ ಪರಭಾಷೆಗಳ ನಡುವಿನ

ಅನುವಾದ ಹೆಚ್ಚು ಸಮರ್ಪಕವಾಗುತ್ತದೆ. ಜಗತ್ತಿನ ವಿವಿಧ ಭಾಷೆಗಳ ಅಪರೂಪದ ವೈವಿಧ್ಯಮಯ ಮಾಹಿತಿ, ಸಾಹಿತ್ಯ ನೇರವಾಗಿ ನಮ್ಮ ಭಾಷೆಯಲ್ಲಿಯೇ ದಕ್ಕುತ್ತದೆ. ಅಂತರ್ಜಾಲದ ಮೊದಲ ಸಾಲಿನಲ್ಲಿರುವ ಮ್ಯಾಂಡರಿನ್, ಜಪಾನಿ ಮತ್ತು ಕೊರಿಯಾ ಭಾಷೆಗಳಲ್ಲಿ ಅತ್ಯಂತ ಯಶಸ್ವಿಯಾದ ಹಲವಾರು ಚಾಕ್ಷುಷ ಅಕ್ಷರ ಗುರುತಿಸಿಕೆ ತಂತ್ರಾಂಶಗಳು ಲಭ್ಯವಿವೆ. ಇಂತಹ ಸೌಕರ್ಯ ಕನ್ನಡಕ್ಕೂ ಬರಬೇಕು.

೪.೦ ಕನ್ನಡದಲ್ಲಿ ಆಗಬೇಕಾಗಿರುವುದು

ತಂತ್ರಜ್ಞಾನದ ನೆರವಿನಿಂದ (೧) ಪಠ್ಯ–ಧ್ವನಿ (೨) ಧ್ವನಿ–ಪಠ್ಯ (೩) ಭಾಷಾನುವಾದ (೪) ಚಾಕ್ಷುಷ ಅಕ್ಷರ ಗುರುತಿಸಿಕೆ ಸೇರಿದರೆ ಒಂದು ಭಾಷೆಯ ಎಲ್ಲ ಚಟುವಟಿಕೆಗಳನ್ನೂ ಒಂದೇ ಕಟ್ಟಿನಲ್ಲಿ ಬಿಗಿದಂತಾಗುತ್ತದೆ. ಚರಿತ್ರೆಯಲ್ಲಿ ಈ ಹಿಂದೆ ಎಂದೂ ಮಾತು ಅಕ್ಷರವಾಗುವುದು, ಅಕ್ಷರ ಮಾತಾಗುವುದು ಮುದ್ರಿತವಾದದ್ದು ಅಕ್ಷರವಾಗಿ ಮಾತಾಗುವುದು ಒಂದು ಭಾಷೆ ಮತ್ತೊಂದು ಭಾಷೆಯಾಗಿ ಬದಲಾಗುವುದು ಸಾಧ್ಯವಿರಲಿಲ್ಲ. ಆಧುನಿಕ ತಂತ್ರಜ್ಞಾನ ಇಂತಹ ಎಲ್ಲ ಅನೂಹ್ಯ ಸಾಧ್ಯತೆಗಳನ್ನು ನಮ್ಮ ಮುಂದಿರಿಸಿದೆ. ಇದರಿಂದಾಗಿ ಮಾತು–ಬರವಣಿಗೆ–ಮುದ್ರಣಗಳು ತೆರಪಿಲ್ಲದಂತೆ ಬೆಸೆಯಲ್ಪಡುತ್ತವೆ.

ಇಂತಹ ತಂತ್ರಜ್ಞಾನದ ಪರಿಪೂರ್ಣತೆಗೆ ಶ್ರಮಿಸಿ ಅದನ್ನು ನಮ್ಮ ಭಾಷೆಯ ಸರ್ವಾಂಗೀಣ ಬೆಳವಣಿಗೆಗೆ ಬಳಸಿಕೊಳ್ಳುವುದು ನಮ್ಮ ಕೈಯಲ್ಲಿದೆ. ಇದಕ್ಕೆ ನಾವು ಅನುಸರಿಸಬೇಕಾದ ಮಾರ್ಗಗಳು ವೈಯಕ್ತಿಕ ಮತ್ತು ಸಾರ್ವಜನಿಕ ಎಂದು ಎರಡು ನಿಟ್ಟಿನಲ್ಲಿ ಗುರುತಿಸಬಹುದು. ನೀವು ನಿಮ್ಮ ಭಾಷೆಯ ಬಗ್ಗೆ ಅಭಿಮಾನ ತಾಳಿದ್ದೀರಾ? ಹಾಗಾದರೆ ನೀವೆಷ್ಟು ಬಾರಿ ನಿಮ್ಮದೇ ಭಾಷೆಯ ನಿಮ್ಮ ಸ್ನೇಹಿತನಿಗೆ ಕನ್ನಡದಲ್ಲಿ ಮಿಂಚಂಚೆ ಕಳಿಸಿದ್ದೀರಿ? ಯಾವುದಾದರೂ ಕಂಪೆನಿ ಅಂತರ್ಜಾಲದಲ್ಲಿ ನೀಡಿದ ಜಾಹಿರಾತನ್ನು ನಿಮ್ಮ ಭಾಷೆಯಲ್ಲಿ ನೀಡುವಂತೆ ಕೇಳಿದ್ದೀರಿ? ಸಾರ್ವಜನಿಕ ಸರ್ಕಾರಿ ಸಂಸ್ಥೆಗಳು ಅಂತರ್ಜಾಲದ ಮೂಲಕ ನೀಡುವ ಮಾಹಿತಿ ದಾಖಲೆಗಳನ್ನು ಕನ್ನಡದಲ್ಲಿ ಕಳಿಸುವಂತೆ ಮನವಿ ಸಲ್ಲಿಸಿದ್ದೀರಿ? ಅಂತರ್ಜಾಲದ ಮೂಲಕ ದಕ್ಕುವ ನಮೂನೆಗಳು ಕನ್ನಡದಲ್ಲಿ ಬೇಕೆಂದು ಒತ್ತಾಯಿಸಿದ್ದೀರಿ? ಹಾಗೆ ಒತ್ತಾಯಿಸಿ ಕನ್ನಡದಲ್ಲಿ ಇ–ಮೇಲ್ ಕಳಿಸಿದ ನೆನಪಿದೆಯೇ? ಉದಾಹರಣೆಗೆ ವಿದೇಶಿ ಮೂಲದ ಬ್ಯಾಂಕ್ ಒಂದಕ್ಕೆ ಇಂಗ್ಲಿಷ್‌ನೊಂದಿಗೆ ಕನ್ನಡವನ್ನು ಆದ್ಯತೆಯ ಭಾಷೆಯಾಗಿ ಪರಿಗಣಿಸುವಂತೆ, ಕನ್ನಡದಲ್ಲಿ ಸಂವಹಿಸುವಂತೆ ಬೆಂಗಳೂರಿನ ಕನ್ನಡಿಗರು ಸಾವಿರಾರು ಇ–ಮೇಲ್ ಕಳಿಸಿದರೆ ಉಂಟಾಗುವ ಪರಿಣಾಮ ಏನಾಗಿರಬಹುದೆಂದು ಯೋಚಿಸಿದ್ದೀರಾ? ಅಂತರ್ಜಾಲದಲ್ಲಿ ಕನ್ನಡ ಲಿಪಿ ಬಳಸುವುದು, ಬರೆಯುವುದು ತುಂಬಾ ಕಷ್ಟ ಎನ್ನುವ ನೆಪವನ್ನು ಬದಿಗಿರಿಸೋಣ. ನಾವು ಈಗಾಗಲೇ ತಿಳಿದಿರುವಂತೆ ಕನ್ನಡಕ್ಕಿಂತಲೂ ಹಲವು ಪಟ್ಟು ಹೆಚ್ಚು ಸಮಸ್ಯೆಗಳನ್ನು ಎದುರಿಸುತ್ತಿರುವ ಜಟಿಲವಾದ ಭಾಷೆಗಳು ಅಂತರ್ಜಾಲದಲ್ಲಿ ಮೊದಲ ಸಾಲಿನಲ್ಲಿವೆ ಎನ್ನುವುದು ನೆನಪಿನಲ್ಲಿರಲಿ.

ಕರ್ನಾಟಕ ಸರ್ಕಾರಕ್ಕೆ ಕನ್ನಡ ಅಂತರ್ಜಾಲದ ಭಾಷೆಯಾಗಿ ಸಂಪೂರ್ಣವಾಗಿ ಸಿದ್ಧವಾಗುವಂತೆ ಮಾಡುವ ಬಗ್ಗೆ ಯಾವ ಸ್ಪಷ್ಟ ಗೊತ್ತು ಗುರಿಗಳೂ, ಇಚ್ಛಾಶಕ್ತಿಯೂ

ಇರುವಂತೆ ತೋರುತ್ತಿಲ್ಲ. ಭಾರತದ ಬಹುತೇಕ ಎಲ್ಲ ರಾಜ್ಯಗಳೂ ತಮ್ಮ ಭಾಷೆಯ ಲಿಪಿಗಳಿಗೆ 'ಯೂನಿಕೋಡ್' ಅಳವಡಿಸಿಕೊಂಡಿವೆ. ಯೂನಿಕೋಡ್ ಅಳವಡಿಸಿ ಕೊಳ್ಳಬೇಕೇ ಬೇಡವೇ ಎಂದು ಮೀನ ಮೇಷ ಎಣಿಸುವುದರಲ್ಲಿ ಕಾಲ ಕಳೆದುಹೋಗಿದೆ. ಇದಕ್ಕಾಗಿ ವಿಧಿಸಿದ್ದ ೩೦-೦೪-೨೦೧೨ರ ಕಾಲದ ಗಡುವು ಎಂದೋ ಮುಗಿದು ಹೋಗಿದೆ. ಕರ್ನಾಟಕ ಸರ್ಕಾರ ಕನ್ನಡ ಭಾಷೆಯ ಅತಿದೊಡ್ಡ ವಾಹಕ. ಆದ್ದರಿಂದಲೇ ಸೇವೆ ಒದಗಿಸುವ ಕಂಪನಿಗಳಿಗೆ ಅತಿ ದೊಡ್ಡ ಗ್ರಾಹಕ. ಆದರೆ ಈ ಗ್ರಾಹಕನಿಗೆ ತನಗೆ ಬೇಕಾದುದನ್ನು ಹಕ್ಕೊತ್ತಾಯದಂತೆ ಪಡೆಯುವ ಶಕ್ತಿ ಎಂದೋ ಕುಂದಿಹೋಗಿದೆ. ಬೆಂಗಳೂರಿನ ಸಂಚಾರಿ ಪೋಲಿಸರ ಕೈಯಲ್ಲಿರುವ ಬ್ಲಾಕ್ ಬೆರ್ರಿಗಳು ಇಂಗ್ಲಿಷ್ ಬಿಟ್ಟು ಕನ್ನಡದಲ್ಲಿ ವ್ಯವಹರಿಸುವಂತೆ ಒಂದು ಸಣ್ಣ ಕರಾರನ್ನು ಆ ಕಂಪೆನಿಗೆ ಹಾಕುವ ಛಾತಿಯನ್ನು ಸಹ ಸರ್ಕಾರ ತೋರಿಸಿಲ್ಲ. ಕನ್ನಡ ಅಂತರ್ಜಾಲದ ಭಾಷೆಯಾಗಿ ಮೆರೆಯಬೇಕೆಂದರೆ, ಮುಂದಿನ ಶತಮಾನದಲ್ಲೂ ತಲೆ ಎತ್ತಿ ನಿಲ್ಲಬೇಕೆಂದರೆ, ಭಾಷೆಯನ್ನು ಕಟ್ಟುವ ೧) ಪಠ್ಯ-ಧ್ವನಿ ೨) ಧ್ವನಿ-ಪಠ್ಯ ೩) ಭಾಷಾನುವಾದ ೪) ಚಾಕ್ಷುಷ ಅಕ್ಷರ ಗುರುತಿಸಿಕೆಯ ಎಲೆಕ್ಟ್ರಾನಿಕ್ ಚಟುವಟಿಕೆಗಳಲ್ಲಿ ಸದಾ ಸರ್ವಸನ್ನದ್ಧರಾಗಿರಬೇಕು. ಕನ್ನಡ ಇವೆಲ್ಲವುಗಳ ನೆರವಿನಿಂದ ಶಕ್ತಿಶಾಲಿಯಾಗಿರಬೇಕು. ನಿಮ್ಮ ಮೊಬೈಲ್ ಫೋನ್ ಹಿಡಿದು ನೀವು ಕನ್ನಡದಲ್ಲಿ ಆಡಿದ ಮಾತು ನಿಮಗೆ ಬೇಕಾದ ಭಾಷೆಗೆ ಭಾಷಾಂತರವಾಗಿ, ಆ ಮೂಲಕ ಪಠ್ಯವಾಗಿ ಮುದ್ರಣಕ್ಕೆ ಸಿದ್ಧವಾಗುವ ಕ್ಷಣವನ್ನು ಊಹಿಸಿಕೊಳ್ಳಿರಿ. ಆಗ ಕನ್ನಡ ಅಂತರ್ಜಾಲದ ಭಾಷೆಯಾಗಿದೆಯೆಂದೇ ಅರ್ಥ. ಅಂತಹ ಸನ್ನಿವೇಶದಲ್ಲಿ ಕನ್ನಡವೂ ಸಹ ಜಾಗತಿಕ ಭಾಷೆಯಾಗಿರುತ್ತದೆ. ಇಂತಹ ಸುವರ್ಣ ಕ್ಷಣಕ್ಕಾಗಿ ನಾವು ತಾಂತ್ರಿಕ ಜಗತ್ತಿನಲ್ಲಿ ಹೊಸ ಬಗೆಯ ಚಳವಳಿಗಳನ್ನು ನಡೆಸಬೇಕಾಗುತ್ತದೆ. ಸರ್ಕಾರ, ಸಂಸ್ಥೆಗಳನ್ನು ಮಣಿಸಬೇಕಾಗುತ್ತದೆ. ವೈಯಕ್ತಿಕವಾಗಿಯೂ, ಸಾಮೂಹಿಕವಾಗಿಯೂ ಪರಿಶ್ರಮಿಸ ಬೇಕಾಗುತ್ತದೆ.

❐



ಕನ್ನಡ ಪರಿಸರ ನಿರ್ಮಾಣ – ಸಾಧ್ಯತೆಗಳು ಹಾಗೂ ಸವಾಲುಗಳು

(ಬೆಳಗಾವಿಯಲ್ಲಿ ಜರುಗಿದ ವಿಶ್ವ ಕನ್ನಡ ಸಮ್ಮೇಳನದಲ್ಲಿ ೧೨ ಮಾರ್ಚ್ ೨೦೧೧ರಂದು ಮಂಡಿಸಲಾದ ಪ್ರಬಂಧ)


■ **ಬಿ. ಸುರೇಶ**

ಈ ವಿಷಯವನ್ನು ಈಗಾಗಲೇ ಅನೇಕರು, ಅನೇಕ ಕಡೆಗಳಲ್ಲಿ ಚರ್ಚಿಸಿದ್ದಾರೆ, ಬರೆದಿದ್ದಾರೆ. ಅವೆಲ್ಲವುಗಳಲ್ಲಿ ನನ್ನ ಕಿವಿಗೆ ತಾಗಿದ ಮತ್ತು ಕಣ್ಣಿಗೆ ಒದಗಿದ ವಿವರಗಳು ಅತ್ಯಲ್ಪ. ಹೀಗಾಗಿ ನನ್ನ ಅರಿವಿನ ಪರಿಧಿಗೆ ದಕ್ಕಿದ ವಿವರಗಳನ್ನು ಇಟ್ಟುಕೊಂಡು ಈ ಪ್ರಬಂಧ ಸಿದ್ಧಪಡಿಸಿದ್ದೇನೆ.

ಪ್ರವೇಶ

ಪರಿಸರವನ್ನು ಕಾಪಾಡುವುದೇ ಬೃಹತ್ ಕಷ್ಟವಾಗಿದೆ ಎಂದು ಇಡೀ ಜಗತ್ತು ಮಾತಾಡುತ್ತಾ ಇರುವ ಕಾಲಘಟ್ಟದಲ್ಲಿ, ನಾವು ಕನ್ನಡ ಪರಿಸರ ನಿರ್ಮಾಣವನ್ನು ಕುರಿತು ಮಾತಾಡುವುದು ಸುಲಭ ವೇನಲ್ಲ. ಈ ಸಂದರ್ಭದಲ್ಲಿ ಪರಿಸರ ಎಂದರೆ ಏನೆಂಬ ಪ್ರಶ್ನೆಗೆ ಉತ್ತರ ಹುಡುಕಿ, ಅಲ್ಲಿ ಕನ್ನಡ ಪರಿಸರ ಹೇಗಿರಬೇಕೆಂದು ನಾವು ಸ್ಪಷ್ಟಪಡಿಸಿಕೊಳ್ಳಬೇಕಾಗಿದೆ.

'ಪರಿ' ಎಂದರೆ ಕ್ರಮ, ರೀತಿ, ವಿಧಾನ. ಕನ್ನಡ ಪರಿಸರವೆಂದರೆ ಕನ್ನಡಿಗರು ಬಾಳಿ–ಬದುಕುವ ಕ್ರಮ, ಕನ್ನಡದ್ದೇ ಆದ ವೈಶಿಷ್ಟ್ಯಗಳೊಂದಿಗಿನ ಜೀವನ ವಿಧಾನ. ಹಾಗಾದರೆ ಕನ್ನಡದ ಪರಿಸರವನ್ನು ಗುರುತಿಸುವುದು ಹೇಗೆ? ೧೯೫೬ರಲ್ಲಿ ಆದ ಭಾಷಾವಾರು ಪ್ರಾಂತ್ಯ ವಿಂಗಡಣೆ ಎಂಬುದು ಭಾರತದ ಉದ್ದಗಲಕ್ಕೂ ರಂಗೋಲಿಯಂತೆ ಗಡಿಗಳನ್ನು ಬರೆದಿದೆ. ಅದು ಕರ್ನಾಟಕ ಎಂಬ ರಾಜ್ಯಕ್ಕೂ ಗಡಿರೇಖೆ ಬರೆದಿದೆ. ಆದರೆ "ಕನ್ನಡ ಪರಿಸರ ಎಂದರೆ ಕರ್ನಾಟಕದ ಗಡಿಯ ಒಳಗಿನ ವಿವರ ಮಾತ್ರ" ಎಂದರೆ ಅದು ಬೃಹತ್ ಸುಳ್ಳಾಗುತ್ತದೆ.



ಕನ್ನಡಿಗರು ಕೇವಲ ಕರ್ನಾಟಕದಲ್ಲಿ ಮಾತ್ರವಲ್ಲದೆ ವಿಶ್ವದಾದ್ಯಂತ ಹರಡಿಕೊಂಡಿದ್ದಾರೆ. ರೆಕ್ಕೆ ಬಲಿತ ಹಕ್ಕಿಗೆ ಗಡಿಗಳ ಹಂಗಿಲ್ಲ. ಅದು ಹಾರುತ್ತಲೇ ತನ್ನ ವಿಸ್ತಾರವನ್ನು ಹೆಚ್ಚಿಸಿ ಕೊಳ್ಳುತ್ತದೆ. ಕನ್ನಡದಂತಹ ಎರಡು ಸಾವಿರ ವರ್ಷಗಳಿಗೂ ಹೆಚ್ಚಿನ ಇತಿಹಾಸ ಇರುವ ಭಾಷಿಕ ಜನಾಂಗವೂ ಹಾಗೆಯೇ. ಅದರ ವಿಸ್ತಾರ ಜಗತ್ತಿನ ಎಲ್ಲ ಮಗ್ಗುಲುಗಳಲ್ಲಿ ವಿಕಸಿತಗೊಂಡಿದೆ. ಹೀಗಾಗಿ ಕನ್ನಡ ಮಾತಾಡುವ ಯಾವುದೇ ಎರಡು ಜೀವಗಳು ಅದೆಲ್ಲಿಯೇ ಇದ್ದರೂ, ಅದು ಕನ್ನಡದ ಪರಿಸರ ಎನ್ನಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿಯೇ ಕನ್ನಡಿಗನ ವಿಶ್ವವನ್ನು ನಾವು ನೋಡಬೇಕಾಗಿದೆ. ಕನ್ನಡಿಗ ಕಟ್ಟಿಕೊಂಡಿರುವ ಪರಿಸರವನ್ನು ಗಮನಿಸಬೇಕಿದೆ.

ಕನ್ನಡ–ಕನ್ನಡಿಗ ಎಂಬ ಪರಿಸರವನ್ನು ಸ್ಥೂಲವಾಗಿ ಹೀಗೆ ಗುರುತಿಸಬಹುದು.

೧. ಕರ್ನಾಟಕದ ಗಡಿಯ ಒಳನಾಡು
೨. ಕರ್ನಾಟಕದ ಗಡಿನಾಡು
೩. ಕರ್ನಾಟಕದ ಗಡಿಯಾಚೆಗಿನ ಕನ್ನಡಿಗನ ನಾಡು
೪. ಈ ದೇಶದ ಗಡಿಯ ಒಳಗೆ ಅನೇಕ ಕಡೆ ಕಲಾಸಿಗಳನ್ನೂರಿದ ಕನ್ನಡಿಗನ ನಾಡು
೫. ದೇಶದಾಚೆಗಿನ ಕನ್ನಡಿಗನ ನಾಡು

ಈ ಎಲ್ಲಾ ನಾಡುಗಳನ್ನೂ ಪ್ರತ್ಯೇಕವಾಗಿ ಗಮನಿಸುತ್ತಾ, ಕನ್ನಡ ಪರಿಸರಕ್ಕೆ ಸದ್ಯದ ಸಮಕಾಲೀನ ಎಂದು ಗುರುತಿಸಲಾಗುವ ಕಾಲಘಟ್ಟದಲ್ಲಿ ಇರುವ ಸಮಸ್ಯೆಗಳು, ಬಿಕ್ಕಟ್ಟುಗಳು ಮತ್ತು ಅವುಗಳ ಪರಿಹಾರಕ್ಕೆ ಇರುವ ಮಾರ್ಗೋಪಾಯಗಳನ್ನು ಗುರುತಿಸುವ ಪ್ರಯತ್ನ ಮಾಡಬೇಕಿದೆ.

ಈ ವಿವರಗಳಲ್ಲದೆ, ಕನ್ನಡ ಎಂಬ ನುಡಿಗಟ್ಟು ಸ್ವತಃ ಅನೇಕ ಆವರಣಗಳಲ್ಲಿ ಸುಳಿದು ಅನೇಕ ಸೊಗಡಾಗಿ ನಮ್ಮ ಎದುರಿಗಿದೆ. ಈ ಸೊಗಡುಗಳಿಗೆ ಕಾರಣವಾದದ್ದು ಕನ್ನಡದ ಸೋದರ ಭಾಷೆಗಳು. ಈ ಕೊಡು–ಕೊಳುವಿಕೆಯಿಂದಲೇ ಕನ್ನಡಕ್ಕೆ ಜೀವಂತಿಕೆ. ಈ ಹಿನ್ನೆಲೆಯಲ್ಲಿ ನಮ್ಮ ಸೋದರ ಭಾಷೆಗಳ ಪರಿಸರವನ್ನೂ ಗಮನಿಸುವುದು ಅಗತ್ಯ.

ಇವುಗಳ ಜೊತೆಗೆ ಆಳುವ ಅಥವಾ ಅಧಿಕಾರದ ಅಥವಾ ಯಜಮಾನ ಭಾಷೆಗಳು ಸಹ ಕನ್ನಡದ ಮೇಲೆ ಕಾಲದಿಂದ ಕಾಲಕ್ಕೆ ಸವಾರಿ ಮಾಡುತ್ತಲೇ ಇವೆ. ಈ ಭಾಷೆಗಳಿಂದ ಕನ್ನಡಕ್ಕೆ ಆಗಿರುವ ಆಮದುಗಳಿಂದಾಗಿಯೂ ಕನ್ನಡದ ಪರಿಸರದಲ್ಲಿ ಅನೇಕ ಮಾರ್ಪಾಡುಗಳಾಗಿವೆ. ಇವುಗಳನ್ನೂ ನಮ್ಮ ಕನ್ನಡ ಪರಿಸರ ನಿರ್ಮಾಣದ ಸಂದರ್ಭದಲ್ಲಿ ಗುರುತಿಸ ಬೇಕಿದೆ. ಇವೆಲ್ಲವುಗಳ ಜೊತೆಗೆ ಸದ್ಯದ ಕಾಲಘಟ್ಟದಲ್ಲಿ ನಮ್ಮೆದುರಿಗೆ ಆಧುನಿಕ ತಂತ್ರಜ್ಞಾನ ಮತ್ತು ಅದರ ಅವಲಂಬಿತ ಬದುಕು ಅನೇಕ ಹೊಸ ಸವಾಲುಗಳನ್ನು ತಂದಿಟ್ಟಿವೆ. ಇದರಿಂದಾಗಿಯೂ ಕನ್ನಡದ ಪರಿಸರದಲ್ಲಿ ತವಕ–ತಲ್ಲಣಗಳು ಹುಟ್ಟಿಕೊಂಡಿವೆ. ಅವುಗಳನ್ನೂ ಸಹ ನಾವು ಗುರುತಿಸಿ, ಆ ತಲ್ಲಣಗಳನ್ನು ತಪ್ಪಿಸುವತ್ತ ಯೋಚಿಸಬೇಕಿದೆ.

ಈ ವರ್ಗೀಕರಣಗಳ ಆಚೆಗೆ ನಮ್ಮ ಬರಹದ ಭಾಷೆ ಮತ್ತು ಮಾತು ಕಟ್ಟುವ ಭಾಷೆಯ ನಡುವೆ ಅನೇಕ ಅಂತರಗಳು ಕಳೆದ ಕೆಲವು ದಶಕಗಳಲ್ಲಿ ಆಗಿವೆ. ಇದಕ್ಕೆ ಕಾರಣಗಳು ಭಿನ್ನ. ಆ ಕಾರಣಗಳನ್ನು ಗಮನಿಸುತ್ತಾ ಆಧುನಿಕ ಕಾಲಘಟ್ಟಕ್ಕೆ ಹೊಂದುವ

ಭಾಷಾ ಅಧ್ಯಯನದತ್ತಲೂ ನೋಡಬೇಕಿದೆ. ಈ ಎಲ್ಲಾ ವರ್ಗೀಕರಣಗೊಂಡ ಜಗತ್ತನ್ನು ಪ್ರತ್ಯೇಕವಾಗಿ ನೋಡುತ್ತಾ 'ಕನ್ನಡ ಪರಿಸರ'ವನ್ನು ತಿಳಿಯುವ ಪ್ರಯತ್ನ ಮಾಡೋಣ.

ವಿದೇಶಿ ಕನ್ನಡಿಗರು

ಕರ್ನಾಟಕದಲ್ಲಿ ಕನ್ನಡಿಗರ ಜನಸಂಖ್ಯೆ ಎಷ್ಟಿದೆಯೋ ಅಷ್ಟೇ ಅಥವಾ ಅದಕ್ಕಿಂತ ಹೆಚ್ಚು ಜನ ಕರ್ನಾಟಕದಿಂದಾಚೆಗೆ ಕನ್ನಡವನ್ನು ಕೊಂಡೊಯ್ದಿದ್ದಾರೆ. ಅನ್ನದ ಅಗತ್ಯ ಈ ನಮ್ಮ ಕನ್ನಡ ಬಂಧುಗಳನ್ನು ಗಡಿ ದಾಟಲು ಪ್ರೇರೇಪಿಸಿದೆ ಎಂಬುದು ಸತ್ಯವಾದರೂ, ಈ ಬಂಧುಗಳು ತಾವಿರುವ ಜಗತ್ತಿನಲ್ಲಿ ಕನ್ನಡವನ್ನು ಉಳಿಸಿಕೊಳ್ಳಲು ಅತೀವ ಆಸಕ್ತಿ ತೋರುತ್ತಿದ್ದಾರೆ.

ಇದಕ್ಕೆ ಕನ್ನಡದ ಅಸ್ಮಿತೆಯೊಂದೇ ಕಾರಣವಲ್ಲ. ಕನ್ನಡ ಸಂಸ್ಕೃತಿಗೆ ಇರುವ ಶಕ್ತಿಯನ್ನು ಅವರು ಸ್ವತಃ ಅರಿತವರು. ಹೀಗಾಗಿ ಅದೇ ಸಂಸ್ಕೃತಿಯ ಧಾರೆ ತಮ್ಮ ಮುಂದಿನ ತಲೆಮಾರಿಗೆ ಸಾಗಬೇಕು ಎಂಬುದು ಅವರ ಆಶಯ. ಇದಕ್ಕಾಗಿಯೇ ಮಧ್ಯಪ್ರಾಚ್ಯವೋ, ಅಮೆರಿಕ ಖಂಡವೋ, ಯುರೋಪಿನ ಯಾವುದೋ ಮೂಲೆ ಯಲ್ಲಿರುವ ಕನ್ನಡಿಗರು ಸುತ್ತ ಇರುವ ತಮ್ಮ 'ಸೊಲ್ಲರಿಮೆ'ಗಳನ್ನು (ಕನ್ನಡ ಬಾಂಧವರನ್ನು) ಸೇರಿಸಿಕೊಂಡು ಸಂಘ ಕಟ್ಟಿಕೊಳ್ಳುತ್ತಾರೆ.

ಆ ಸಂಘಟನೆಗಳಲ್ಲಿ ಕೆಲವೇ ಗಂಟೆಗಳಾದರೂ ಕೇಳುವ ತಮ್ಮ ಭಾಷೆಯನ್ನು ಆನಂದಿಸುವ ಅವರಿಗೆ, ಈ ಕನ್ನಡ ಪರಿಸರವನ್ನು ನಿರಂತರವಾಗಿ ಕಾಯ್ದುಕೊಳ್ಳುವ ಅವಸರವಿದೆ; ಅದಕ್ಕಾಗಿ ಹಲವು ದೇಶಗಳಲ್ಲಿರುವ ಕನ್ನಡಿಗರು ತಾವು ಕಟ್ಟಿಕೊಂಡ ಸಂಘಗಳ ನೆರವು ಪಡೆದು ತಮ್ಮ ಮುಂದಿನ ತಲೆಮಾರಿಗೆ ಕನ್ನಡವನ್ನು ಕಲಿಸುವ ಪ್ರಯತ್ನ ಮಾಡುತ್ತಿದ್ದಾರೆ. ಈ ಚಟುವಟಿಕೆ ಪ್ರತಿ ದೇಶದಲ್ಲಿಯೂ ವಿಭಿನ್ನವಾಗಿ ಆಗುತ್ತಿದೆ. ಇದರಿಂದಾಗಿ ಅಲ್ಲಿನ ಹೊಸ ತಲೆಮಾರಿಗೆ ಕನ್ನಡದ ಪರಿಚಯ ಆಗುತ್ತಿದೆಯಾದರೂ ಕನ್ನಡವು ಒಂದು ಭಾಷೆಯಾಗಿ ಹಾಗೂ ಸಂಸ್ಕೃತಿಯಾಗಿ ತಲುಪುತ್ತಿಲ್ಲ.

ಇದು ಅಲ್ಲಿನ 'ಕನ್ನಡಿಗ'ರಿಗೆ ಆತಂಕವನ್ನು ಹುಟ್ಟಿಸುತ್ತಿದೆ. ತಮ್ಮ ಮುಂದಿನ ತಲೆಮಾರು ಮತ್ತ್ಯಾವುದೋ ಸಂಸ್ಕೃತಿಯಲ್ಲಿ ಕಳೆದು ಹೋದರೆ, ಪರಂಪರೆಯ ಮುಂದುವರಿಕೆ ನಿಲ್ಲುತ್ತದೆ ಎಂಬ ಆತಂಕ ಅವರನ್ನು ಕಾಡುತ್ತದೆ. ಹೀಗಾಗಿಯೇ ತಮ್ಮ ಮುಂದಿನ ತಲೆಮಾರಿಗೂ ಕನ್ನಡವು ಹರಿಯಲಿ ಎಂದು ಬಯಸುತ್ತಾರೆ. ಇಂತಲ್ಲಿ, ಇರುವ ಸಮಸ್ಯೆಗಳನ್ನು ಸರಳವಾಗಿ ಹೀಗೆ ಕ್ರೋಡೀಕರಿಸಬಹುದು:

೧. ಕನ್ನಡಿಗರು ಒಂದೆಡೆ ಸೇರುವುದಕ್ಕೆ ಬೇಕಾದ ಆವರಣದ ಕೊರತೆ.
೨. ಮುಂದಿನ ತಲೆಮಾರಿಗೆ ಕನ್ನಡ ಕಲಿಸುವುದಕ್ಕೆ ಬೇಕಾದ ಪಠ್ಯದ ಮತ್ತು ಶಿಕ್ಷಕರ ಕೊರತೆ.
೩. ಕನ್ನಡ ಮಾತು ಬಲ್ಲ ಮಕ್ಕಳಿಗೆ ಕನ್ನಡ ಶಿಕ್ಷಣ ಕ್ರಮ ಮತ್ತು ಕನ್ನಡ ಮಾತು ಬಾರದ ಮಕ್ಕಳಿಗೆ ಕನ್ನಡ ಕಲಿಸಲು ಬಳಸಬೇಕಾದ ಪಠ್ಯಕ್ರಮದ ವಿನ್ಯಾಸ.
೪. ಕನ್ನಡವನ್ನು ಕಲಿತ ಮಕ್ಕಳಿಗೆ ಕನ್ನಡ ಶಿಕ್ಷಣ ಮುಂದುವರೆಸಲು ಇರುವ ಸೌಲಭ್ಯಗಳ ಕೊರತೆ.

ಪರಿಹಾರ ಅಥವಾ ಮಾರ್ಗೋಪಾಯಗಳು

೧. ಕನ್ನಡಿಗರು ಮತ್ತು ಕರ್ನಾಟಕ ಸರ್ಕಾರವು ವಿದೇಶಗಳಲ್ಲಿರುವ ಕನ್ನಡಿಗರಿಗೆ ಧನಸಹಾಯದ ಮೂಲಕ ಕನ್ನಡ ಭವನಗಳನ್ನು ಕಟ್ಟಲು ನೆರವಾಗಬೇಕು. ಇದಕ್ಕಾಗಿ ಕರ್ನಾಟಕದಲ್ಲಿ ಈಗಾಗಲೇ ನೋಂದಣಿ ಆಗಿರುವ ವಿದೇಶಿ ಕನ್ನಡ ಸಂಘಗಳನ್ನು ಮತ್ತು ಆಯಾ ದೇಶದ ಶಿಕ್ಷಣ ಸಂಸ್ಥೆಗಳನ್ನು ಸೇರಿಸಿ ಉತ್ತರದಾಯಿತ್ವ ಇರುವ ಸಂಸ್ಥೆಗಳಿಗೆ ಹಣದ ನಿರ್ವಹಣೆಯ ಜವಾಬ್ದಾರಿ ವಹಿಸಬೇಕು.

೨. ವಿದೇಶಿ ನೆಲದಲ್ಲಿರುವ ಕನ್ನಡಿಗರ ಮುಂದಿನ ತಲೆಮಾರುಗಳಿಗೆ ಕನ್ನಡ ಕಲಿಸಲು ಪ್ರತ್ಯೇಕ ಪಠ್ಯವನ್ನು ರಚಿಸಬೇಕು. ಇಲ್ಲಿ ಪ್ರಾಥಮಿಕ ಹಂತದ ಶಿಕ್ಷಣದ ಅಗತ್ಯಗಳನ್ನು ಪೂರೈಸುವ ಪಠ್ಯ ಮತ್ತು ಪ್ರೌಢರಾದವರಿಗೆ ಕನ್ನಡ ಕಲಿಸುವುದಕ್ಕೆ ಪ್ರತ್ಯೇಕ ಪಠ್ಯ ರಚನೆ ಆಗಬೇಕಿದೆ.

೩. ಈಗಾಗಲೇ ಕನ್ನಡ ಕಲಿತಿರುವ ಮಕ್ಕಳು ತಮ್ಮ ಕನ್ನಡ ಕಲಿಕೆಯನ್ನು ಮುಂದುವರಿಸಲು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಇರುವಂತೆ ಜಾಣ, ಕಾವ, ರತ್ನ ಮುಂತಾದ ಹಂತಗಳ ಪರೀಕ್ಷೆಯನ್ನು ವಿದೇಶದಲ್ಲಿ ಇರುವ ಮಕ್ಕಳಿಗೂ ಮಾಡಲು ಇರಬಹುದಾದ ಸಾಧ್ಯತೆಗಳನ್ನು ಕುರಿತು ಆಲೋಚಿಸಬೇಕಿದೆ.

೪. ಈ ಮಕ್ಕಳಿಗೆ ಕನ್ನಡ ಕಲಿಸಲು 'ಸರಿಯಾದ' ಸಂಪನ್ಮೂಲ ವ್ಯಕ್ತಿಗಳನ್ನು ಸಿದ್ಧಪಡಿಸುವುದು ಅಗತ್ಯ. ವಿದೇಶಿ ನೆಲದಲ್ಲಿ ವಾರಾಂತ್ಯದಲ್ಲಿ ಒಂದೋ ಎರಡೋ ತರಗತಿಗಳ ಮೂಲಕ ಪಠ್ಯವನ್ನು ಬೋಧಿಸಿ, ಮಕ್ಕಳನ್ನು ಕನ್ನಡ ಪರಿಸರಕ್ಕೆ ತರುವ ಉಪಾಧ್ಯಾಯರಿಗೆ ಇರಬೇಕಾದ ಸಿದ್ಧತೆಯೇ ಬೇರೆ. ಅಂತಹ ಸಿದ್ಧ ಉಪನ್ಯಾಸಕರನ್ನು ಒದಗಿಸಿ, ಕನ್ನಡಿಗರ ಅಗತ್ಯ ಪೂರೈಸುವುದು ಕನ್ನಡ ಸರ್ಕಾರದ ಆದ್ಯತೆಯ ಕೆಲಸ ಆಗಬೇಕಿದೆ.

ದೇಶದೊಳಗೆ ವಿಭಿನ್ನ ರಾಜ್ಯಗಳಲ್ಲಿ ನೆಲೆಯೂರಿದ ಕನ್ನಡಿಗರು

ಈ ಕನ್ನಡಿಗರ ಅಗತ್ಯಗಳು ವಿದೇಶದಲ್ಲಿರುವ ಕನ್ನಡಿಗರ ಅಗತ್ಯಕ್ಕಿಂತ ಕೊಂಚ ಭಿನ್ನ. ಇಲ್ಲಿನ ಕನ್ನಡಿಗರನ್ನು ಚೆನ್ನೈ ಕನ್ನಡಿಗರು, ಮುಂಬೈ ಕನ್ನಡಿಗರು, ಹೈದರಾಬಾದಿ ಕನ್ನಡಿಗರು ದೆಹಲಿ ಕನ್ನಡಿಗರು ಇತ್ಯಾದಿ ಈಗಾಗಲೇ ಗುರುತಿಸುತ್ತಾ ಇದ್ದೇವೆ. ಇವರುಗಳು ತಮ್ಮ ಊರುಗಳಲ್ಲಿ ಕನ್ನಡ ಶಾಲೆಗಳನ್ನು ಅನೇಕ ವರ್ಷಗಳಿಂದ ನಡೆಸಿಕೊಂಡು ಬರುತ್ತಿರುವವರು. ಆದರೆ ಆಧುನಿಕ ಕಾಲಘಟ್ಟದಲ್ಲಿ ಒಳನಾಡಿನಂತೆಯೇ ಇಲ್ಲಿನ ಕನ್ನಡ ಶಾಲೆಗಳಿಗೂ ಒಳಹರಿವು ಕಡಿಮೆಯಾಗಿದೆ. ಇದು ಆಯಾ ವ್ಯಕ್ತಿಯ ಬದುಕಿನ ಅಗತ್ಯಗಳನ್ನು ಆಧರಿಸಿ ಬದಲಾಗಿದೆ.

ಈ ಹಿನ್ನೆಲೆಯಲ್ಲಿ ಅಲ್ಲಿನ ಕನ್ನಡಿಗರು ತಮ್ಮ ಮುಂದಿನ ತಲೆಮಾರಿಗೆ ಕನ್ನಡವನ್ನು ಕಲಿಸಲು ವಾರಾಂತ್ಯಗಳನ್ನೇ ಅವಲಂಬಿಸಬೇಕಾದ ಅನಿವಾರ್ಯತೆ ಒದಗಿ ಬಂದಿದೆ. ಅವರ ಅಗತ್ಯಗಳನ್ನು ಪೂರೈಸಲು ಈಗಾಗಲೇ ವಿದೇಶದ ಕನ್ನಡಿಗರಿಗೆ ಎಂದು ಗುರುತಿಸಿದ ಮಾರ್ಗೋಪಾಯಗಳನ್ನು ಬಳಸಬೇಕಾಗುತ್ತದೆ.

ಉದಾಹರಣೆ: ತೀರಾ ಇತ್ತೀಚೆಗೆ ರಾಜಸ್ಥಾನದ ನಗರವೊಂದರಲ್ಲಿ ಇರುವ ಕನ್ನಡಿಗರು "ನಮ್ಮಲ್ಲಿರುವ ಕನ್ನಡ ಕುಟುಂಬಗಳ ಸಂಖ್ಯೆ ನೂರನ್ನು ಮೀರುತ್ತಿದೆ. ಈ ಕುಟುಂಬಗಳಲ್ಲಿನ ಮಕ್ಕಳಿಗೆ ಕನ್ನಡ ಕಲಿಸಲು ದಾರಿ ಹುಡುಕಿಕೊಡಿ" ಎಂದು ಕೇಳಿದ್ದಾರೆ. ಇಂತಹುದೇ ಬೇಡಿಕೆ ಚಂಡೀಗಢದಿಂದ, ಕೋಲ್ಕತ್ತಾದಿಂದ, ಸೇಲಂನಿಂದ ಎರ್ನಾಕುಲಂನಿಂದ ಬಂದಿದೆ. ಈ ಬೇಡಿಕೆಗಳನ್ನು ಪೂರೈಸಲು ನಾವು ಸಿದ್ಧರಾಗಬೇಕಿದೆ. ಇದೇ ಬಗೆಯಲ್ಲಿ ಈಗಾಗಲೇ ಕನ್ನಡ ಶಾಲೆಗಳನ್ನು ನಡೆಸುತ್ತಿರುವವರಿಗೆ, ತಗ್ಗಿರುವ ಒಳಹರಿವನ್ನು ಹೆಚ್ಚಿಸಲು ಮತ್ತು ಅಲ್ಲಿರುವ ಕನ್ನಡಿಗರ ಮುಂದಿನ ತಲೆಮಾರು ಕನ್ನಡದಲ್ಲಿ ಉಳಿಯುವಂತೆ ಮಾಡಲು, ಪ್ರತಿ ಮಹಾನಗರದ ಅಗತ್ಯವನ್ನು ಪ್ರತ್ಯೇಕವಾಗಿ ಗಮನಿಸಿ ಮಾರ್ಗೋಪಾಯ ಕಂಡುಕೊಳ್ಳಬೇಕಿದೆ. ಈ ನಿಟ್ಟಿನಲ್ಲಿ ನಮ್ಮ ಶಿಕ್ಷಣ ತಜ್ಞರುಗಳನ್ನು ಹುರಿಗೊಳಿಸಿ, ಆಲೋಚನೆಗೆ ಹಚ್ಚಬೇಕಾದ ತುರ್ತು ಇಂದು ಬಂದಿದೆ.

ಗಡಿಯಾಚೆಗಿನ ಅಥವಾ 'ನೆರೆಮನೆ'ಯ ಕನ್ನಡಿಗರು

ಭಾಷಾವಾರು ಪ್ರಾಂತ್ಯವಿಂಗಡಣೆಯು ಎಷ್ಟು ಸರಿ, ಎಷ್ಟು ತಪ್ಪು ಎಂಬ ಪ್ರಶ್ನೆ ಬೇರೆಯದು. ಆದರೆ ಈ ವಿಂಗಡಣೆಯಲ್ಲಿ ಅನೇಕ ಶುದ್ಧ ಕನ್ನಡಿಗರು ಕರ್ನಾಟಕದ ಗಡಿಯಾಚೆಗೆ ಉಳಿದಿದ್ದಾರೆ. ರಾಜ್ಯವೊಂದರ ಗಡಿಯಾಚೆಗೆ ರಾಜಕೀಯ ಕಾರಣಕ್ಕೆ ಉಳಿದಿದ್ದರೂ, ಈ ಕನ್ನಡಿಗರು ತಮ್ಮ ಪರಿಸರವನ್ನು ಕನ್ನಡದ್ದಾಗಿಯೇ ಉಳಿಸಿಕೊಳ್ಳುವುದಕ್ಕೆ ಹರಸಾಹಸ ಮಾಡುತ್ತಿದ್ದಾರೆ. ಈ ಗಡಿ ಭಾಗಗಳನ್ನು ಮಹಾರಾಷ್ಟ್ರದ ಗಡಿ, ಆಂಧ್ರದ ಗಡಿ ತಮಿಳುನಾಡಿನ ಗಡಿ ಕೇರಳದ ಗಡಿ, ಗೋವಾದ ಗಡಿ ಎಂದು ಸರಳವಾಗಿ ಗುರುತಿಸಬಹುದಾದರೂ ಇಲ್ಲಿರುವ ಪ್ರತಿ ಹಳ್ಳಿ ಮತ್ತು ಕನ್ನಡದ ಕೇರಿಯ ಸಮಸ್ಯೆ ಭಿನ್ನವಾದುದು.

ತಮಿಳುನಾಡಿನ ಗಡಿಭಾಗದಲ್ಲಿ ಹೊಸೂರಿನಿಂದ ಸೇಲಂವರೆವಿಗೂ ಕನ್ನಡಿಗರು ಬಹುಸಂಖ್ಯೆಯಲ್ಲಿ ವಾಸವಿದ್ದಾರೆ. ಅದರಲ್ಲಿಯೂ ಹೊಸೂರಿನ ಈಗಿನ ಶಾಸಕರೇ ಕನ್ನಡಿಗರು. ಇವರು ತಮಿಳುನಾಡಿನ ವಿಧಾನಸಭೆಯಲ್ಲಿ ಕನ್ನಡದಲ್ಲಿಯೇ ಮಾತಾಡಿ ತಮ್ಮ ಸಮಸ್ಯೆಗಳತ್ತ ಗಮನ ಸೆಳೆದಿದ್ದಾರೆ. ಇಲ್ಲಿರುವ ಜನ ಭಾಷೆಗಳು ಅನೇಕ ಸೊಲ್ಲುಗಳ ಸಂಗಾಟದಿಂದ ತಮ್ಮದೇ ಬನಿ ಪಡೆದಿವೆ. ಅದು ಕನ್ನಡದ ಮತ್ತೊಂದು ಸೊಗಡು ಎಂಬಷ್ಟು ಭಿನ್ನವೂ ಹೌದು. ಇಂತಹ ಕನ್ನಡಿಗರನ್ನು ಕನ್ನಡ ಪರಿಸರದ ಒಳಗಡೆ ಉಳಿಸಲು ಅನೇಕ ಕೆಲಸಗಳನ್ನು ಮಾಡಬೇಕಿದೆ.

ಆಂಧ್ರದ ಗಡಿ ಭಾಗದಲ್ಲಿರುವ ಕನ್ನಡದ ಬಹುಭಾಷಿಕರು ಡಂಕಣಿಕೋಟ ಹಿಂದೂಪುರ, ಮೆಹಬೂಬ್‌ನಗರ ಪ್ರದೇಶಗಳಲ್ಲಿ ಇದ್ದಾರೆ. ಇವರ ಕನ್ನಡದ ಬನಿಗೂ ತನ್ನದೇ ಆದ ಛಾಪು ಇದೆ. ಇವರ ಬದುಕು ಆಂಧ್ರದಲ್ಲಾದರೂ, ವ್ಯಾಪಾರ-ವಹಿವಾಟು ಕರ್ನಾಟಕದಲ್ಲಿ. ಇಲ್ಲಿನ ರೈತರು ಬೀಜ ಕೊಳ್ಳುವುದು, ಸಾಲ ತೆಗೆದುಕೊಳ್ಳುವುದು ಕರ್ನಾಟಕದಲ್ಲಿ. ಇವರ ಭೂಮಿ ಇರುವುದು ಆಂಧ್ರದಲ್ಲಿ. ಇವರ ಬೆಳೆಗೆ ಗ್ರಾಹಕರು ಇರುವುದು ಕರ್ನಾಟಕದಲ್ಲಿ. ಇಂತಹ ರೈತರು ತಮ್ಮ ಬೆಳೆಯನ್ನು ರಾಜ್ಯದಿಂದ ರಾಜ್ಯಕ್ಕೆ ಸಾಗಿಸುವುದೇ ದೊಡ್ಡ ಕಷ್ಟವಾಗಿದೆ. ಇಲ್ಲಿನ ರೈತರು ಸ್ಥಳೀಯ ಸರ್ಕಾರಗಳ ಸಹಾಯವೂ

ಇಲ್ಲದೆ, ಕರ್ನಾಟಕ ಸರ್ಕಾರದವರು ಆ ಜನರನ್ನು ಹೊರನಾಡಿನವರು ಎಂದು ಗುರುತಿಸುವುದರಿಂದಾಗಿ ಅಸಡ್ಡೆಗೆ ಒಳಗಾದವರಾಗಿದ್ದಾರೆ. ಇಂತಹವರ ಸಮಸ್ಯೆಯನ್ನು ಪರಿಹರಿಸಿ, ಇವರನ್ನು ಕನ್ನಡದ ಪರಿಸರದ ಒಳಗಡೆ ಉಳಿಸಬೇಕಾಗಿದೆ.

ಇನ್ನು ಮಹಾರಾಷ್ಟ್ರದ ಗಡಿಭಾಗಗಳಲ್ಲಿ ಪ್ರಮುಖವಾದುದು ಸೊಲ್ಲಾಪುರ ಜಿಲ್ಲೆ. ಇಲ್ಲಿನ ನಾಲ್ಕು ತಾಲ್ಲೂಕುಗಳಲ್ಲಿ ಬಹುಸಂಖ್ಯೆಯಲ್ಲಿ ಕನ್ನಡಿಗರಿದ್ದಾರೆ. ಸೊಲ್ಲಾಪುರ ಮೈಂದರ್ಗಿ, ಜತ್, ಅಕ್ಕಲಕೋಟ ಮುಂತಾದ ಕಡೆಗಳಲ್ಲಿ ಇರುವ ಬಹುತೇಕರು ಕನ್ನಡಿಗರೇ. ಇಲ್ಲಿ ನಾನೂರಕ್ಕೂ ಹೆಚ್ಚು ಕನ್ನಡ ಶಾಲೆಗಳು ಮತ್ತು ಬಾಲವಾಡಿಗಳು ಇವೆ. ಇವರ ಸಮಸ್ಯೆಗಳೇ ಭಿನ್ನ. ಇದನ್ನು ನಾವು ಪರಿಹರಿಸಲು ಹುಡುಕಬೇಕಾದ ಮಾರ್ಗಗಳೂ ಭಿನ್ನ. ಈ ಮಕ್ಕಳಿಗಾಗಿ ಮಹಾರಾಷ್ಟ್ರವು ಪಠ್ಯಗಳನ್ನು ನೀಡಿದೆ. ಆದರೆ ಅವು ಸಕಾಲದಲ್ಲಿ ದೊರೆಯುವುದಿಲ್ಲ. ವಿಶೇಷವಾಗಿ ಚರಿತ್ರೆ, ವಿಜ್ಞಾನ, ಗಣಿತ ಪಠ್ಯಗಳು ಮತ್ತು ಪಠ್ಯ ಕಲಿಕೆಗೆ ಪೂರಕವಾದ ಗೈಡ್‌ಗಳು ಕನ್ನಡದಲ್ಲಿ ದೊರೆಯುವುದಿಲ್ಲ. ಹೀಗಾಗಿ ಇಲ್ಲಿನ ಕನ್ನಡ ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳು ಅತಂತ್ರರಾಗುತ್ತಾರೆ. ಇದೇ ಕಾರಣಕ್ಕಾಗಿ ಇಲ್ಲಿನ ಹೊಸ ತಲೆಮಾರು ತಮಗೆ ಸುಲಭವಾಗಿ ಲಭ್ಯವಿರುವ ಇತರ ಭಾಷೆಗಳ ಕಡೆಗೆ ವಾಲುತ್ತಾ ಇರುವುದನ್ನು ಕಾಣುತ್ತಿದ್ದೇವೆ. ಈ ಭಾಗದಲ್ಲಿರುವ ಕನ್ನಡ ಮಕ್ಕಳ ಸಮಸ್ಯೆಯನ್ನು ಅರಿಯುವುದಕ್ಕೆ ಮತ್ತು ಪರಿಹರಿಸುವುದಕ್ಕೆ ಪ್ರತ್ಯೇಕ ಕ್ರಮಗಳನ್ನು ತೆಗೆದುಕೊಳ್ಳಬೇಕಿದೆ.

ಇನ್ನು ಕೇರಳದ ಗಡಿ ಭಾಗದ ಕಾಸರಗೋಡು ಜಿಲ್ಲೆಯಲ್ಲಿ ಶೇಕಡ ೯೦ಕ್ಕಿಂತ ಹೆಚ್ಚು ಕನ್ನಡ ಕುಟುಂಬಗಳಿವೆ. ಅವರೆಲ್ಲರೂ ಕನ್ನಡ ಶಾಲೆಗಳನ್ನು ನಡೆಸುತ್ತಿದ್ದಾರೆ. ಆದರೆ ಈ ಶಾಲೆಗಳಿಗೂ ಒಳಹರಿವು ಕಡಿಮೆಯಾಗುತ್ತಿದೆ. ಇಲ್ಲಿರುವ ಮಕ್ಕಳೂ ಸಹ ಕನ್ನಡದಿಂದ ದೂರ ಸರಿದು ಇಂಗ್ಲೀಷ್ ಅಥವಾ ಸ್ಥಳೀಯ ರಾಜಭಾಷೆಯ ಕಡೆಗೆ ವಾಲುತ್ತಿದ್ದಾರೆ.

ಕನ್ನಡದ ಹೊಸ ತಲೆಮಾರು ಹೊಸ ಭಾಷೆಗಳಿಗೆ ಹೋಗುತ್ತಿರುವುದಕ್ಕೆ ಪ್ರಧಾನ ಕಾರಣ, ಹೊರನಾಡಿನಲ್ಲಿ ಕನ್ನಡ ಮಾಧ್ಯಮದಲ್ಲಿ ಕಲಿತವರನ್ನು ನಮ್ಮಲ್ಲಿ ಮುಂದುವರಿದ ಶಿಕ್ಷಣ ಅವಕಾಶಗಳಿಗೆ ವಿಶೇಷ ಮೀಸಲಾತಿ ನೀಡಿ ತೆಗೆದುಕೊಳ್ಳದೇ ಇರುವುದು ಹಾಗೂ ಹೊರರಾಜ್ಯದ ಯಾವ ವರ್ಗದ ಪ್ರಮಾಣ ಪತ್ರವಿದ್ದರೂ ಅವರನ್ನು ನಮ್ಮಲ್ಲಿ ಆದರದಿಂದ ಗಮನಿಸದೆ ಇರುವುದೇ ಆಗಿದೆ. ಇದರಿಂದಾಗಿ ಅನ್ನದ ಕಾರಣಕ್ಕಾಗಿಯೇ ಅನೇಕರು ಇತರ ಭಾಷೆಗಳಿಗೆ ವಲಸೆ ಹೋಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವು ಗಡಿಭಾಗದ ಕನ್ನಡಿಗರನ್ನು, ಕನ್ನಡ ಪರಿಸರದ ಒಳಗಡೆ ಉಳಿಸುವ ಸಲುವಾಗಿ ಈ ಕೆಳಗಿನ ಎಚ್ಚರಗಳನ್ನು ಮತ್ತು ಕೆಲಸಗಳನ್ನು ಆದ್ಯತೆಯ ಮೇರೆಗೆ ಮಾಡಬೇಕಿದೆ.

ಮಾರ್ಗೋಪಾಯಗಳು

೧. ಗಡಿಯಾಚೆಗಿನ ನಾಡಿನಲ್ಲಿ ಕನ್ನಡ ಮಾಧ್ಯಮದಲ್ಲಿ ಕಲಿತ ವಿದ್ಯಾರ್ಥಿಗಳು ಕರ್ನಾಟಕದಲ್ಲಿ ಶಿಕ್ಷಣ ಮುಂದುವರಿಸಬಯಸಿದರೆ, ವಿಶೇಷ ಮೀಸಲಾತಿ ಒದಗಿಸ ಬೇಕು. (ಈ ಬಗ್ಗೆ ಈಚೆಗೆ ಸರ್ಕಾರೀ ಆದೇಶವಾಗಿದೆ. ಇದಕ್ಕಾಗಿ ಶೇಕಡ ೫ ಮೀಸಲಾತಿ ನೀಡಲಾಗಿದೆ. ಆದರೆ ಈ ಮೀಸಲಾತಿಯು ಕೇವಲ ತಾಂತ್ರಿಕ ಶಿಕ್ಷಣದಲ್ಲಿ ಮಾತ್ರ ಆಗಿದೆ. ಇದು ಶಿಕ್ಷಣದ ಎಲ್ಲಾ ವಿಭಾಗಕ್ಕೂ ಹಾಗೂ ಉದ್ಯೋಗಕ್ಕೂ ಮುಂದುವರೆಯಬೇಕು.)

೨. ಗಡಿಯಾಚೆಯಿಂದ ನಮ್ಮ ರಾಜ್ಯಕ್ಕೆ ಓಡಾಡುವ ವಿದ್ಯಾರ್ಥಿಗಳಿಗೆ ಬಸ್ಸುಗಳಲ್ಲಿ ರಹದಾರಿ ಪತ್ರವನ್ನು ನೀಡುವಾಗ ವಿಶೇಷ ರಿಯಾಯಿತಿಗಳನ್ನು ನೀಡಬೇಕು.
೩. ಗಡಿಯಾಚೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಓದುವ ಮಕ್ಕಳಿಗೆ ವಿಶೇಷ ಪ್ರೋತ್ಸಾಹಗಳನ್ನು (ನಮ್ಮಲ್ಲಿ ಯಾವ ರೀತಿಯ ಪ್ರೋತ್ಸಾಹಗಳನ್ನು ನೀಡುತ್ತಿರುವೆವೋ ಅವೆಲ್ಲವೂ ಆ ಮಕ್ಕಳಿಗೂ ದೊರೆಯುವಂತೆ) ನೀಡಬೇಕು.
೪. ಗಡಿಯಾಚೆಯ ಮಕ್ಕಳಿಗೆ ಕನ್ನಡದಲ್ಲಿಯೇ ಎಲ್ಲಾ ಪಠ್ಯಗಳೂ ಸಿಗುವಂತಾಗಲು ವಿಶೇಷ ಅನುದಾನಗಳಷ್ಟೇ ಅಲ್ಲದೆ ಆಯಾ ಪಠ್ಯಗಳನ್ನು ಮುದ್ರಿಸಲು ಪ್ರಕಾಶಕರಿಗೆ/ ಮುದ್ರಕರಿಗೆ ವಿಶೇಷ ಅನುದಾನಗಳನ್ನು ಒದಗಿಸಬೇಕು.
೫. ಗಡಿಯಾಚೆಯ ಕನ್ನಡ ಶಾಲೆಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದಲ್ಲದೆ, ಅಂತಹ ಕನ್ನಡ ಶಾಲೆಗಳನ್ನು, ಅಂಗನವಾಡಿಗಳನ್ನು ಕನ್ನಡಿಗರು, ಕನ್ನಡ ಉದ್ಯಮಪತಿಗಳು ದತ್ತಕ ತೆಗೆದುಕೊಳ್ಳುವಂತೆ ಕರ್ನಾಟಕ ಸರ್ಕಾರ ಪ್ರೋತ್ಸಾಹ ಹಾಗೂ ಒತ್ತಾಯಗಳನ್ನು ಪ್ರತೀ ಉದ್ಯಮಿಗೂ (ಒಪ್ಪಂದ ಪತ್ರದ ಹಂತದಲ್ಲಿಯೇ) ಹೇರಬೇಕು. 'ಕಾರ್ಪೋರೇಟ್ ಸಾಮಾಜಿಕ ಜವಾಬ್ದಾರಿ' ಎನ್ನುವ ಹೆಸರಿನಲ್ಲಿ ಇದು ಈಗ ವ್ಯಾಪಕವಾಗಿ ಹರಡುತ್ತಿದೆ.
೬. ಗಡಿಯಾಚೆಯ ಊರುಗಳಲ್ಲಿ ಕನ್ನಡ ಮಾಧ್ಯಮದಲ್ಲಿ ಕಲಿಯುತ್ತಿರುವ ಬಹುತೇಕ ಮಕ್ಕಳು ಕೂಲಿ ಕಾರ್ಮಿಕರ ಮತ್ತು ರೈತಾಪಿ ವರ್ಗದವರ ಮಕ್ಕಳಾಗಿರುತ್ತಾರೆ. ಇಂತಹ ಮಕ್ಕಳ ವಿದ್ಯಾಭ್ಯಾಸಕ್ಕಾಗಿಯೇ ವಿಶೇಷ ಆರ್ಥಿಕ ಸವಲತ್ತುಗಳನ್ನು ಒದಗಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ನಾಡಿನ ಎಲ್ಲಾ ಕನ್ನಡಿಗರು ಹಾಗೂ ಕರ್ನಾಟಕ ಸರ್ಕಾರ ಯೋಚಿಸಬೇಕು ಮತ್ತು ಇದಕ್ಕಾಗಿ ಪ್ರತ್ಯೇಕ ಆರ್ಥಿಕ ಸಹಾಯದ ಯೋಜನೆಗಳನ್ನು ರೂಪಿಸಬೇಕು. ಇಂತಹ ಆರ್ಥಿಕ ಸಹಾಯ ಮಾಡಲು ಮುಂದೆ ಬರುವ ವ್ಯಕ್ತಿ ಹಾಗೂ ಸಂಸ್ಥೆಗಳಿಗೆ ಕರ್ನಾಟಕ ಸರ್ಕಾರವು ವಿಶೇಷ ಆರ್ಥಿಕ ರಿಯಾಯಿತಿಯನ್ನು ಸಹ ನೀಡುವಂತಾಗಬೇಕು.
೭. ಇದಲ್ಲದೆ ಗಡಿಯಾಚೆಯ ಕನ್ನಡ ಜನರಿಗೆ ಉದ್ಯೋಗಾವಕಾಶಗಳನ್ನು ನೀಡಲು ನಮ್ಮ ಸರ್ಕಾರ ವಿಶೇಷ ಮೀಸಲಾತಿಗಳನ್ನು ನೀಡಬೇಕು. ಅದರಲ್ಲಿಯೂ ಮಹಾರಾಷ್ಟ್ರದ ಗಡಿಜಿಲ್ಲೆಗಳಲ್ಲಿ ಇರುವ ಕನ್ನಡಿಗರಿಗೆ ಮತ್ತು ಆಂಧ್ರದ ಗಡಿ ಜಿಲ್ಲೆಗಳಾದ ಬೀದರ್, ಗುಲ್ಬರ್ಗಾದ ಆಸುಪಾಸಿನಲ್ಲಿರುವ ಗಡಿಜಿಲ್ಲೆಗಳ ಜನರಿಗೆ ವಿಶೇಷ ಒಳ ಮೀಸಲಾತಿಯನ್ನು ಸರ್ಕಾರ ಘೋಷಿಸಬೇಕು.
೮. ಗಡಿ ಭಾಗದಲ್ಲಿನ ಕನ್ನಡ ರೈತಾಪಿ ವರ್ಗಕ್ಕೆ ಮತ್ತು ಉದ್ಯಮಿಗಳಿಗೆ ನಮ್ಮ ರಾಜ್ಯದ ಒಳಗಡೆ ವ್ಯಾಪಾರ-ವಹಿವಾಟು ಮಾಡುವುದಕ್ಕೆ ಸಹ ಅನೇಕ ಆರ್ಥಿಕ ಸವಲತ್ತುಗಳನ್ನು ಒದಗಿಸಬೇಕು. ಈ ಮೂಲಕ ಆ ಜನ ಬೇರೆಯ ಭಾಷೆಗಳಿಗೆ ವಲಸೆ ಹೋಗದಂತೆ ತಡೆಯುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

ಗಡಿನಾಡಿನ ಕನ್ನಡಿಗರು

ಕರ್ನಾಟಕದ ಗಡಿ ತಾಲ್ಲೂಕುಗಳು ೫೪. ಅವುಗಳಲ್ಲಿ ೪೮ ತಾಲ್ಲೂಕುಗಳು ತಮ್ಮ

ಗಡಿಗಳನ್ನು ಇತರ ಭಾಷೆಯ ಜನಾಂಗಗಳ ಜೊತೆಗೆ ಹಂಚಿಕೊಂಡಿವೆ. ಈ ಜನರ ಬದುಕು ನಡೆಯುವುದೇ ಬಹುಭಾಷಾ ವ್ಯವಸ್ಥೆಯಲ್ಲಿ. ಏಕಕಾಲಕ್ಕೆ ಕನ್ನಡವನ್ನಲ್ಲದೆ ಇತರ ಐದಾರು ಭಾಷೆಗಳನ್ನು ಇಲ್ಲಿನ ಜನ ಆಡುತ್ತಾರೆ. ಕಾಸರಗೋಡಿನ ಆಸುಪಾಸಿನಲ್ಲಂತೂ ಕನ್ನಡ ತುಳು, ಬ್ಯಾರೀ, ಮಲೆಯಾಳ ಮತ್ತು ಇಂಗ್ಲಿಷನ್ನು ಸಣ್ಣ ವಯಸ್ಸಿನವರೂ ಕಲಿತಿರುವುದನ್ನು ಕಾಣುತ್ತಿದ್ದೇವೆ. ಇನ್ನು ಬೀದರ್, ಗುಲ್ಬರ್ಗಾ, ಬೆಳಗಾವಿ, ಬಿಜಾಪುರ, ರಾಯಚೂರಿನಂತಹ ಜಿಲ್ಲೆಗಳಲ್ಲಿ ಉರ್ದು, ತೆಲುಗು, ಮರಾಠಿ, ಕನ್ನಡ, ಲಮಾಣಿ, ಇಂಗ್ಲಿಷುಗಳಲ್ಲದೆ ಆಯಾ ಜನಾಂಗದವರ ಪ್ರತ್ಯೇಕ ಉಪಭಾಷೆಯನ್ನು ಒಂದೇ ವಾಕ್ಯದಲ್ಲಿ ಬೆರೆಸಿ ಮಾತಾಡುವ ಜನರನ್ನು ಕಂಡಿದ್ದೇವೆ. ಬದುಕಿನ ಅಗತ್ಯಗಳೇ ಈ ಜನರಿಗೆ ಇಷ್ಟೆಲ್ಲಾ ಭಾಷೆಗಳನ್ನು ಕಲಿಸುತ್ತವೆ. ಸಂವಹನ ಆಧುನಿಕ ಬದುಕಿನ ಪ್ರಧಾನ ಅಗತ್ಯವಾಗಿದೆ. ಇದಕ್ಕಾಗಿ ಅನೇಕ ಭಾಷೆಗಳನ್ನು ಗಡಿ ಭಾಗದ ಜನ ಕಲಿತಿರುತ್ತಾರೆ.

ಆದರೆ ಈ ಗಡಿನಾಡಿನಲ್ಲಿನ ಕನ್ನಡ ಪರಿಸರಕ್ಕೆ ಭಾರೀ ತೊಂದರೆಗಳು ಆಗಿವೆ. (ಈ ವಿಷಯವಾಗಿ ಈಗಾಗಲೇ ಕನ್ನಡ ಅಭಿವೃದ್ಧಿ ಪ್ರಾಧಿಕಾರವು ನೀಡಿರುವ ಎರಡು ವರದಿಗಳು ಸರ್ಕಾರದ ಕಡತಗಳ ಮೂಟೆಗಳ ಜೊತೆ ಸೇರಿದೆ ಎಂಬುದನ್ನು ಇಲ್ಲಿ ನೆನೆಯಲೇಬೇಕು. "ಕನ್ನಡ ನುಡಿ-ಕನ್ನಡ ಗಡಿ ಜಾಗೃತಿ ಜಾಥಾ ವರದಿ" ಹಾಗೂ "ಜೋಯಿಡಾ – ಗಡಿನಾಡ ಕನ್ನಡಿಗರ ಸಮಾವೇಶದ ವರದಿ." ಈ ಎರಡೂ ವರದಿಗಳ ತಯಾರಿಕೆಯಲ್ಲಿ ನನ್ನದೂ ಅಳಿಲು ಸೇವೆ ಇತ್ತಾದ್ದರಿಂದ ಈ ಬಗ್ಗೆ ಅಧಿಕೃತವಾಗಿ ಮಾತಾಡಬಹುದು.) ಮೊದಲಿಗೆ ಈ ಗಡಿಭಾಗದಲ್ಲಿ ಮೂಲಭೂತ ಸೌಕರ್ಯಗಳದ್ದೇ ದೊಡ್ಡ ಕೊರತೆ. ರಸ್ತೆಗಳಿಲ್ಲ, ದವಾಖಾನೆಗಳಿಲ್ಲ, ಪ್ರಾಥಮಿಕ ಆರೋಗ್ಯ ಕೇಂದ್ರಗಳಿಲ್ಲ. ಹೀಗಾಗಿ ಗಡಿಭಾಗದ ಜನ ತಮ್ಮ ಸಣ್ಣ ಅಗತ್ಯ ಪೂರೈಕೆಗೂ ನೆರೆಯ ರಾಜ್ಯದ ಮುಖ್ಯ ಪಟ್ಟಣಗಳಿಗೆ ಹೋಗಬೇಕಾಗುತ್ತದೆ. ಇದರಿಂದಾಗಿ ಅವರ ಕನ್ನಡತನ ನಿಧಾನವಾಗಿ ಕಮರಿಹೋಗುತ್ತಿದೆ. ಇನ್ನು ಇಲ್ಲಿನ ಪ್ರಾಥಮಿಕ ಶಾಲೆಗಳಂತೂ ಕೊಟ್ಟಿಗೆಗಳ ಹಾಗಿವೆ. ಕೆಲವೆಡೆ ಮಠ – ಮಾನ್ಯಗಳ ಜನ ಸ್ವಂತ ಆಸಕ್ತಿಯಿಂದ ಒಂದಷ್ಟು ಕೆಲಸ ಮಾಡುತ್ತಾ ಕನ್ನಡಿಗರಿಗೆ ಕಿಂಚಿತ್ ಸಹಾಯ ನೀಡಿದ್ದಾರೆ. ಆದರೆ ಇದು ಸಾಲದು. ಇಲ್ಲಿನ ಬಹುತೇಕ ಶಾಲೆಗಳಲ್ಲಿ ಸರಿಯಾದ ಉಪಾಧ್ಯಾಯರಿಲ್ಲ. ಸರ್ಕಾರೀ ಶಾಲೆಗಳಲ್ಲಿನ ಪರಿಸ್ಥಿತಿಯನ್ನಂತೂ ನೀವು ಊಹಿಸಲೂ ಸಾಧ್ಯವಿಲ್ಲ. ಹಲವೆಡೆಗಳಲ್ಲಿ ಸೂರು ಎಂದು ಬೀಳುವುದೋ ಎಂಬಂತಿದೆ. ಇನ್ನು ಅಲ್ಲಿ ಕಲಿಯುವ ವಿದ್ಯಾರ್ಥಿಗಳು ಈ ನಾಡಿನ ಪ್ರಧಾನ ವಾಹಿನಿಗೆ ಬರಬೇಕು ಎಂದು ಬಯಸುವುದಾದರೂ ಹೇಗೆ? ಭಾಷಾವಾರು ಪ್ರಾಂತ್ಯ ವಿಂಗಡಣೆ ಯಾಗಿ ಇಂದಿನವರೆಗಿನ ಯಾದಿ ಹಿಡಿದರೆ ಐದು ದಶಕಗಳಿಗೂ ಹೆಚ್ಚಾಗುತ್ತದೆ. ಇಷ್ಟೂ ಕಾಲ ಈ ಗಡಿ ಭಾಗಗಳಿಂದ ಆರಿಸಿ ಬಂದ ಜನಪ್ರತಿನಿಧಿಗಳು ಏನು ಮಾಡಿದ್ದಾರೆ ಎಂಬ ಅನುಮಾನ ಹುಟ್ಟುತ್ತದೆ.

ಕಾರವಾರ ಜಿಲ್ಲೆಯ ಜೋಯಿಡಾದಂತಹ ತಾಲ್ಲೂಕುಗಳಲ್ಲಿ ಕನ್ನಡ ಪರಿಸರ ನಿರ್ಮಿಸಲು ಕನ್ನಡಿಗರಿಗೆ ಮೂಲಭೂತ ಸೌಲಭ್ಯಗಳನ್ನು ಆದ್ಯತೆಯ ಮೇರೆಗೆ ನೀಡಬೇಕಿದೆ. ಅಲ್ಲಿ ಕಾಳಿ ಯೋಜನೆ ನಡೆದಿದೆ, ಕೈಗಾ ಅಣುಸ್ಥಾವರ ಇದೆ, ನೌಕಾನೆಲೆ

ಸೀಬರ್ಡ್ ಇದೆ. ಇಷ್ಟೆಲ್ಲಾ ಯೋಜನೆಗಳು ಒಂದು ಜಿಲ್ಲೆಗೆ ಬಂದಿದ್ದರೂ ಅಲ್ಲಿನ ಬಡ ರೈತನ ಮನೆಗೆ ವಿದ್ಯುತ್ ಇನ್ನೂ ಬಂದಿಲ್ಲ ಎಂಬುದು ದೊಡ್ಡ ವಿಪರ್ಯಾಸ. ಬೀದರ್ ಜಿಲ್ಲೆಯ ಗಡಿಭಾಗದಲ್ಲಿಯೂ ಇದೇ ಪರಿಸ್ಥಿತಿ. ಅಲ್ಲಿನ ಬಹುತೇಕ ಸರ್ಕಾರೀ ಶಾಲೆಗಳಲ್ಲಿ ಓದುತ್ತಾ ಇರುವ ಮಕ್ಕಳು ಬಡವರು. ಅಲ್ಲಿನ ಶ್ರೀಮಂತರು ತಮ್ಮ ಮಕ್ಕಳನ್ನು ದೂರದ ಊರುಗಳಲ್ಲಿ ರೆಸಿಡೆನ್ಶಿಯಲ್ ಶಾಲೆಗಳಿಗೆ ಕಳಿಸುತ್ತಾರೆ. ಹೀಗಾಗಿ ಈ ಬಡಮಕ್ಕಳ ವಿದ್ಯಾಭ್ಯಾಸದ ಕಡೆಗೆ ಗಮನ ಹರಿಸುವಷ್ಟು ಸಮಯ ಅಲ್ಲಿನ ಆಳುವ ವರ್ಗಕ್ಕೆ ಇಲ್ಲವೇ ಇಲ್ಲ. ಬೆಳಗಾವಿಯ ಗಡಿಭಾಗವಾದ ನಂದಗಡದಂತಹ ಊರಿನಲ್ಲಿನ ಮಕ್ಕಳಲ್ಲಿ ಬಹುಮಂದಿಗೆ ಕನ್ನಡ ಮಾತಾಡಲು ಬರುತ್ತದೆ. ಆದರೆ ಅವರೆಲ್ಲರೂ ಸೇರಿರುವುದು ಮರಾಠಿ ಶಾಲೆಗಳಿಗೆ. ಹೀಗಾಗಿ ಅಲ್ಲಿನ ಕನ್ನಡ ಪರಿಸರ ಎಂಬುದು ಕೇವಲ ಸಂಗೊಳ್ಳಿ ರಾಯಣ್ಣನ ಹೆಸರಿಗೆ ಸೀಮಿತವಾಗಿಬಿಟ್ಟಿದೆ. ಇನ್ನು ಸವದತ್ತಿಯಂತಹ ಸ್ವಚ್ಛ ಕನ್ನಡ ಊರುಗಳಲ್ಲಿ ಇರುವ ಬಹುಸಂಖ್ಯಾತರು ಕನ್ನಡಿಗರು. ಆದರೆ ಅಲ್ಲಿನ ಮಕ್ಕಳಲ್ಲಿ ಕನ್ನಡ ಶಾಲೆಗೆ ಹೋಗುತ್ತಿರುವ ಮಕ್ಕಳ ಸಂಖ್ಯೆ ಅತ್ಯಲ್ಪ. ಹೀಗಾಗಿ ಅಲ್ಲಿನ ಪ್ರಾಥಮಿಕ ಶಾಲೆಯ ಮಕ್ಕಳಲ್ಲಿ, ನಾನೇ ನಡೆಸಿದ ಸಮೀಕ್ಷೆಯಂತೆ ಹತ್ತರಲ್ಲಿ ಏಳು ಮಂದಿಗೆ ಕನ್ನಡ ಓದಲು ಸಹ ಬರುವುದಿಲ್ಲ. ಅವರೆಲ್ಲರೂ ಆಂಗ್ಲ ಮತ್ತು ಮರಾಠಿಯ ಕಡೆಗೆ ವಾಲಿಕೊಂಡಿದ್ದಾರೆ. ಇನ್ನು ಕೋಲಾರದ ಭಾಗಕ್ಕೆ ಬಂದರೆ ನಮಗೆ ಕಾಣುವುದು ಇದಕ್ಕಿಂತ ಭಿನ್ನ ನೋಟವೇನಲ್ಲ.

ಈ ಗಡಿನಾಡಿನಲ್ಲಿನ ಕನ್ನಡ ಪರಿಸರಕ್ಕೆ ಇರುವ ಸಮಸ್ಯೆಗಳನ್ನು ಹೀಗೆ ಪಟ್ಟಿ ಮಾಡಬಹುದು.

೧. ಇಲ್ಲಿನ ಬಹುತೇಕ ರಸ್ತೆಗಳು ಯಾವುದೇ ವಾಹನ ಸಂಚಾರಕ್ಕೆ ಯೋಗ್ಯವಾಗಿಲ್ಲ.

೨. ಪ್ರಾಥಮಿಕ ವೈದ್ಯಕೀಯ ಕೇಂದ್ರಗಳಲ್ಲಿ ಯೋಗ್ಯ ವೈದ್ಯರಿಲ್ಲ. ವೈದ್ಯರಿರುವಲ್ಲಿ ಔಷಧಿಗಳ ಸರಬರಾಜು ಸರಿಯಾಗಿ ಆಗುತ್ತಿಲ್ಲ.

೩. ಈ ಭಾಗದ ಅಂಗನವಾಡಿಗಳಲ್ಲಿನ ಕೆಲಸಗಾರರಿಗೆ ಕೆಲವೆಡೆ ಮೂರು ವರ್ಷದಿಂದ ಸಂಬಳ ಸಿಗದೆ ಕೆಲಸ ಮಾಡುತ್ತಾ ಇರುವವರು ಇದ್ದಾರೆ.

೪. ಇಲ್ಲಿ ಬಹುತೇಕ ಹಳ್ಳಿಗಳಲ್ಲಿ ನ್ಯಾಯಬೆಲೆ ಅಂಗಡಿ ಎಂಬುದೇ ಒಂದು ಮಹತ್ತರ ಹಾಸ್ಯದ ಸಂಗತಿಯಾಗಿದೆ.

೫. ಇಲ್ಲಿನ ಜನರಿಗೆ ಬಿಪಿಎಲ್ ಕಾರ್ಡ್‌ಗಳಾಗಲೀ, ಹಸಿರು ಕಾರ್ಡ್‌ಗಳಾಗಲೀ ಭಾಗ್ಯಲಕ್ಷ್ಮಿ ಯೋಜನೆಯ ಕಾರ್ಡ್‌ಗಳಾಗಲೀ ಸರಿಯಾಗಿ ವಿತರಣೆ ಆಗಿಲ್ಲ.
(ಇದೇ ಸಂದರ್ಭದಲ್ಲಿ ಯೂನಿಕ್ ಐಡೆಂಟಿಫಿಕೇಷನ್ ನಂಬರ್ ಪಡೆದ ಕಾರವಾರ ಜಿಲ್ಲೆಯ ಕುಗ್ರಾಮದ ಹೆಣ್ಣು ಮಗಳೊಬ್ಬಳು, ಆಡಿದ ಮಾತನ್ನು ನೆನಪಿಸಿಕೊಳ್ಳಬೇಕು. 'ತಿನ್ನೋಕ್ಕೆ ಎರಡು ರೂಪಾಯಿಗೆ ಅಕ್ಕಿ ಕೊಡ್ತೀವಿ ಅಂದೋರು ಈಗ ಇದ್ಯಾವ್ದೋ ನಂಬರ್ ಕೊಟ್ಟಿದಾರಲ್ಲಾ? ಇದನ್ನ ಇಟ್ಟುಕೊಂಡು ಏನು ಮಾಡಲಿ?' ಎಂದು ಆ ಹೆಂಗಸು ಗೊಣಗಿದ್ದು ಪ್ರಾಯಶಃ ಈ ದೇಶದ ಕೇಳಬೇಕಾದ ವರ್ಗಕ್ಕೆ ಕೇಳಿಸಿತೋ ಇಲ್ಲವೋ ನಾನರಿಯೆ)

೬. ಸರ್ಕಾರೀ ಪ್ರಾಥಮಿಕ ಶಾಲೆಗಳ ಪರಿಸ್ಥಿತಿ ಹದಗೆಟ್ಟಿದೆ. ಬಹುತೇಕ ಕಟ್ಟಡಗಳು ಕುಸಿಯುವ ಹಂತದಲ್ಲಿವೆ. ಈ ಶಾಲೆಗಳಲ್ಲಿ ಇರುವ ಬೋಧನಾ ಸಲಕರಣೆಗಳೂ ಶಿಥಿಲಗೊಂಡಿವೆ.

೭. ಇಲ್ಲಿನ ರೈತಾಪಿಗಳಿಗೆ ತಮ್ಮ ಬೆಳೆಯನ್ನು ಮಾರಲು, ಹೊಸ ಬೀಜ ಕೊಳ್ಳಲು ಹತ್ತಿರದ ಮಾರುಕಟ್ಟೆಗಳಿರುವುದು ನೆರೆಯ ರಾಜ್ಯಗಳಲ್ಲಿ. ಹೀಗಾಗಿ ಇವರೆಲ್ಲರೂ ಆ ಮಾರುಕಟ್ಟೆಯ ಕಡೆಗೆ ಮುಖ ಮಾಡಿ ನಿಂತಿರುತ್ತಾರೆ.

೮. ಈ ಗಡಿ ಭಾಗದಲ್ಲಿ ನಮ್ಮ ರೇಡಿಯೋಗಳು ಸಹ ಸರಿಯಾಗಿ ಬರುವುದಿಲ್ಲ. ಹೀಗಾಗಿ ಇಲ್ಲಿ ರೇಡಿಯೋ ಹೊಂದಿದವರು ನೆರೆಯ ರಾಜ್ಯದ ಭಾಷೆಗಳಲ್ಲಿ ಪ್ರಸಾರವಾಗುವ ಕಾರ್ಯಕ್ರಮಗಳನ್ನೇ ಕೇಳುತ್ತಿರುತ್ತಾರೆ.

೯. ಕೋಲಾರದ ಮತ್ತು ತುಮಕೂರಿನ ಗಡಿ ಭಾಗಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಅಗಾಧವಾದುದು. ಇದನ್ನು ಈ ಪ್ರದೇಶದ ವಿಶಿಷ್ಟ ಸಮಸ್ಯೆ ಎಂದು ಗುರುತಿಸಿ ಪರಿಹಾರ ಹುಡುಕಬೇಕಿದೆ.

ಹೀಗೆ ದಾಖಲಿಸುತ್ತಾ ಹೋದರೆ ಕರ್ನಾಟಕದ ಗಡಿಭಾಗದ ಸಮಸ್ಯೆಗಳ ಪಟ್ಟಿಯೇ ಬೃಹದಾಕಾರವಾಗಿಬಿಡಬಹುದು. ಇದನ್ನು ಪರಿಹರಿಸುವ ಹಿನ್ನೆಲೆಯಲ್ಲಿಯೇ ಗಡಿ ಅಭಿವೃದ್ಧಿ ಪ್ರಾಧಿಕಾರ ಎಂಬುದೊಂದನ್ನು ಸ್ಥಾಪಿಸಲಾಗಿದೆಯಾದರೂ, ಆ ಪ್ರಾಧಿಕಾರ ಈ ನಿಟ್ಟಿನಲ್ಲಿ ಏನಾದರೂ ಮಾಡುತ್ತಿದೆಯೇ ಎಂಬುದು ಕಳೆದ ಮೂರು ವರ್ಷಗಳಿಂದ ಪ್ರಶ್ನೆಯಾಗಿಯೇ ಉಳಿದಿದೆ.

ಇಲ್ಲಿ ಪಟ್ಟಿ ಮಾಡಿರುವ ವಿವರವಲ್ಲದೆ ಇನ್ನೂ ಅನೇಕ ಸಮಸ್ಯೆಗಳನ್ನು ಕರ್ನಾಟಕದ ಗಡಿಭಾಗದ ಕನ್ನಡಿಗ ಎದುರಿಸುತ್ತಿದ್ದಾನೆ. ಈ ಭಾಗಗಳಲ್ಲಿ ಕನ್ನಡಿಗನ ಬದುಕು ಸುಧಾರಿಸದೆ ಕನ್ನಡ ಪರಿಸರವನ್ನು ಕಾಪಾಡುವುದು ಅಸಾಧ್ಯ.

(ಈ ಲೇಖನ ಪ್ರಕಟವಾಗುವ ಹೊತ್ತಿಗೆ ಕರ್ನಾಟಕ ಸರ್ಕಾರವು ಗಡಿಭಾಗದ ಜನರಿಗಾಗಿ ವಿಶೇಷ ಆರ್ಥಿಕ ಪ್ಯಾಕೇಜ್‌ಗಳನ್ನು ಘೋಷಿಸಿದೆ. ಗಡಿ ಅಭಿವೃದ್ಧಿಗಾಗಿಯೇ ವಿಶೇಷ ಪ್ರಾಧಿಕಾರ ರಚಿಸಿದೆ. ಇವೆಲ್ಲವೂ "ಸರಿಯಾಗಿ" ಕೆಲಸ ಮಾಡಿದರೆ ಹಲವು ಸಮಸ್ಯೆಗಳಿಗೆ ಕಾಲಾಂತರದಲ್ಲಿ ಪರಿಹಾರ ಒದಗಬಹುದು)

ಒಳನಾಡಿನ ಕನ್ನಡಿಗರು

ಈ ನಮ್ಮ ಒಳನಾಡಿನ ಕನ್ನಡ ಪರಿಸರವನ್ನು ನೋಡಲು ವಿದ್ಯೆ, ಉದ್ಯೋಗ ಮತ್ತು ಬದುಕು ಎಂಬ ಮೂರು ವಿವರಗಳನ್ನು ಇಟ್ಟುಕೊಂಡು ಗಮನಿಸಬೇಕಿದೆ.

ವಿದ್ಯೆ: ನಮ್ಮ ವಿದ್ಯಾಭ್ಯಾಸ ಕ್ರಮಗಳ ಆಯ್ಕೆಯು ನಾವು ಕಲಿತ ಭಾಷೆಯಿಂದ ನಮಗೆ ಅನ್ನ ಹುಟ್ಟುತ್ತದೆಯೇ ಎಂದು ಗಮನಿಸಿಯೇ ನಿರ್ಧರಿಸುವ ಪರಿಸ್ಥಿತಿಗೆ ನಾವು ಬಂದಿದ್ದೇವೆ. ಮಾರುಕಟ್ಟೆ ಅರ್ಥಶಾಸ್ತ್ರವು ನಾವು ಆಯ್ಕೆ ಮಾಡುವ ವಿಧಾನವನ್ನೇ ಬದಲಿಸಿದೆ. ಇಂದು ವ್ಯಕ್ತಿಯೊಬ್ಬನ ಜ್ಞಾನ ಸಂಪಾದನೆಯನ್ನು ಅಳೆಯುವ ಮಾನದಂಡವೇ ಆತನಿಗೆ ಸಿಗುವ ಕೆಲಸದಿಂದ ಬರುವ ಆದಾಯವನ್ನು ಆಧರಿಸಿದೆ. ಇಂದು ಕನ್ನಡವನ್ನು ಕಲಿತು ಯಾವುದೋ ಶಾಲೆಯಲ್ಲಿಯೋ, ಕಾಲೇಜಿನಲ್ಲಿಯೋ ಮೇಷ್ಟರಾಗುವುದಕ್ಕಿಂತ ದೊಡ್ಡ ಕೆಲಸ ಸಿಗುವ ಅವಕಾಶ ಕಡಿಮೆ. ಅಕಸ್ಮಾತ್ ಇಂತಹ ಕೆಲಸ ಸಿಕ್ಕರೂ ಅದು ಖಾಯಂ ಕೆಲಸ ಆಗುವ ಸಾಧ್ಯತೆಯೂ ಕಡಿಮೆ. ಹೀಗಾಗಿ ಅಪ್ರಸ್ತುತ ವಿದ್ಯಾಭ್ಯಾಸ ಕ್ರಮಕ್ಕೆ ಬಲಿಬಿದ್ದಿರುವ ಒಳನಾಡಿಗರು ಕನ್ನಡದ ಮುಂದಿನ ತಲೆಮಾರನ್ನು ಆಂಗ್ಲ ವಿದ್ಯಾಭ್ಯಾಸಕ್ಕೆ

ದೂಡಿದ್ದಾರೆ. ಇದಕ್ಕೆ ಅಂಬೇಡ್ಕರ್ ಪ್ರಣೀತ ನಗರಮುಖಿ ಸಾಮಾಜಿಕ ನ್ಯಾಯದ ಹುಡುಕಾಟವೂ ಒಂದು ಕಾರಣವಾದರೆ, ಈ ನಾಡಿನ ಪ್ರತಿಷ್ಠಿತರು ಸಹ ಆಂಗ್ಲ ಕಲಿತವನಿಗೆ ಮಾತ್ರ ಬದುಕಲು ಸಾಧ್ಯ ಎಂಬ ಭ್ರಮೆಯನ್ನು ಹುಟ್ಟಿಸಿರುವುದು ಮತ್ತೊಂದು ಕಾರಣ. ಹೀಗಾಗಿ ಇಂದು ಕನ್ನಡವನ್ನು ಪ್ರಧಾನ ಭಾಷೆಯಾಗಿ ಕಲಿಯುತ್ತಿರುವವರ ಸಂಖ್ಯೆ ಪ್ರಾಥಮಿಕ ಹಂತದಿಂದಲೇ ಇಳಿಮುಖವಾಗಿದೆ.

(ಈ ಲೇಖನ ಪ್ರಕಟವಾಗುವ ಹೊತ್ತಿಗೆ ಕನ್ನಡವನ್ನು ಪ್ರಾಥಮಿಕ ಹಂತದಲ್ಲಿ ಕಲಿಯುತ್ತಾ ಇರುವವರ ಸಂಖ್ಯೆ ಕಳೆದ ಮೂರು ವರ್ಷಗಳಲ್ಲಿ ಕೊಂಚ ಹೆಚ್ಚಾಗಿದೆ ಎಂಬ ವರದಿ ಬಂದಿದೆ. ಅಂಕಿ-ಅಂಶಗಳ ವಿಶ್ಲೇಷಣೆಯಿಂದ ಮಾತ್ರ ಇದರ ಸತ್ಯಾಸತ್ಯತೆ ತಿಳಿಯಬೇಕಾಗಿದೆ.)

ಇನ್ನು ಕನ್ನಡವನ್ನು ಸ್ನಾತಕೋತ್ತರವಾಗಿ ಹಾಗೂ ಸಂಶೋಧಕರಾಗಿ ಕಲಿಯುವವರ ಸಂಖ್ಯೆಯ ಬಗ್ಗೆ ಹೇಳಲೇ ಬೇಕಿಲ್ಲ. ಅನೇಕ ಕಾಲೇಜುಗಳಲ್ಲಿ ಕನ್ನಡ ವಿಭಾಗಕ್ಕೆ ವಿದ್ಯಾರ್ಥಿಗಳಿಲ್ಲ ಎಂದು ಅವುಗಳನ್ನು ಮುಚ್ಚುವ ಸ್ಥಿತಿ ಬಂದಿದೆ. ಇನ್ಯಾವ ವೃತ್ತಿಪರ ಶಿಕ್ಷಣದಲ್ಲಿಯೂ ಪ್ರವೇಶ ಸಿಗದೆ ಇದ್ದವರು ಮಾತ್ರ ಈ ಕಡೆಗೆ ಬರುತ್ತಾರೆ ಎಂಬ ಪರಿಸ್ಥಿತಿ ಉಂಟಾಗಿದೆ.

(ಬೆಂಗಳೂರು ವಿಶ್ವವಿದ್ಯಾಲಯದಲ್ಲಿಯೇ ಭಾಷಾವಿಜ್ಞಾನ ಕಲಿಯಲು ವಿದ್ಯಾರ್ಥಿಗಳಿಲ್ಲ. ಆ ಪಾಠವನ್ನು ಕಲಿಸುವ ಉಪನ್ಯಾಸಕರ ಸಂಖ್ಯೆಯಂತೂ ಬೆರಳೆಣಿಕೆಯದು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಪ್ರಯತ್ನಗಳ ಫಲವಾಗಿ ಹೊರನಾಡ ವಿಶ್ವವಿದ್ಯಾಲಯಗಳ ಕನ್ನಡ ಪೀಠಗಳಲ್ಲಿ ಓದುವ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ ಎಂಬುದು ಗಮನಿಸಬೇಕಾದ ಸಂಗತಿ. ಇದಕ್ಕಾಗಿ ಆ ವಿದ್ಯಾರ್ಥಿಗಳಿಗೆ ತಿಂಗಳಿಗೆ ಎರಡು ಸಾವಿರ ರೂಪಾಯಿಗಳ ವಿದ್ಯಾರ್ಥಿವೇತನ ಕಳೆದ ಮೂರು ವರ್ಷಗಳಿಂದ ಕನ್ನಡ ಅಭಿವೃದ್ಧಿ ಪ್ರಾಧಿಕಾರ ನೀಡುತ್ತಿದೆ. ಇದು ಪ್ರಶಂಸನೀಯ ಕ್ರಮ.)

ವೃತ್ತಿಪರ ಶಿಕ್ಷಣ ಪಡೆಯುವವರಿಗೆ ಭಾಷೆಯನ್ನು ಕಲಿಯಲೇಬೇಕೆಂಬ ಒತ್ತಾಯವಿಲ್ಲ. ಹೀಗಾಗಿ ಅಲ್ಲಿಯೂ ಕನ್ನಡ ಕಲಿತವರು ಸಿಗುವುದು ವಿರಳ. ವೃತ್ತಿ ಶಿಕ್ಷಣದಲ್ಲಿ ಭಾಷೆಯನ್ನು ಕಲಿಸಲಿಕ್ಕಾಗಿಯೇ ಸಿದ್ಧಪಡಿಸಿರುವ ಪಠ್ಯವೊಂದಿದೆ. ಅದನ್ನು ಕಲಿಯುವುದಕ್ಕೂ ಕಲಿಸುವುದಕ್ಕೂ ಇರುವ ತೊಡಕುಗಳು ಅನೇಕ. ಎಲ್ಲಿ ಪ್ರೀತಿ ಇಲ್ಲವೋ ಅಲ್ಲಿ ಕಾನೂನಿನ ಒತ್ತಡ ತರಬಹುದು. ಆದರೆ ಅಂತಹ ಒತ್ತಡಗಳ ಹೇರಿಕೆಯಿಂದ ಭಾಷೆ ಕಲಿಯಲು ಬರುವವರ ಮನಸ್ಥಿತಿ ಬದಲಾಗುತ್ತದೆ ಎಂದೆನಿಸದು.

ಇನ್ನು ನಮ್ಮ ಮಾಧ್ಯಮಗಳಲ್ಲಿ, ವಿಶೇಷವಾಗಿ ರೇಡಿಯೋ ಮತ್ತು ಟೆಲಿವಿಷನ್ ಮಾಧ್ಯಮಗಳಲ್ಲಿ ಬಳಕೆಯಲ್ಲಿರುವ ಕನ್ನಡ ಎಂತಹದು ಎಂಬುದು ಎಲ್ಲರಿಗೂ ತಿಳಿದಿದೆ. ಇವೆಲ್ಲಾ ಕಾರಣಗಳಿಂದಾಗಿ ಇಂದು ಕನ್ನಡ ಪರಿಸರ ಅನೇಕ ಸಮಸ್ಯೆಗಳಿಂದ ಬಳಲುತ್ತಿದೆ.

ಉದ್ಯೋಗ: ಕನ್ನಡ ಕಲಿತವನಿಗೆ ಇರುವ ಉದ್ಯೋಗಾವಕಾಶಗಳು ಕ್ಷೀಣಿಸುತ್ತಿವೆ. ಈ ನಾಡಿನಲ್ಲಿ ಆಗಾಗ ಸೃಷ್ಟಿಯಾಗುವ ಉದ್ಯೋಗಗಳಿಗೆ ಕನ್ನಡವನ್ನು ಕಲಿಯಲೇಬೇಕೆಂಬ ಒತ್ತಡವೇನೂ ಇಲ್ಲ. ಹೀಗಾಗಿ ಕನ್ನಡಿಗರಲ್ಲದವರೂ, ಕರ್ನಾಟಕದವರಲ್ಲದವರೂ ಉದ್ಯೋಗ ಪಡೆಯುತ್ತಲೇ ಇದ್ದಾರೆ. ಇನ್ನು ಕನ್ನಡಿಗರಂತೂ ಕನ್ನಡವನ್ನು ಬಿಟ್ಟು ಇಂಗ್ಲಿಷ್‌ನ ಮೊರೆ ಹೋಗಿ ಬಿಪಿಒಗಳಿಗೆ ಸೇರುತ್ತಿದ್ದಾರೆ. ಈ ಆಯ್ಕೆಯಲ್ಲಿ ಒಂದು ಬಣ

ವೃತ್ತಿಶಿಕ್ಷಣವನ್ನು ಆಯ್ದುಕೊಂಡರೆ ಮತ್ತೊಂದು ಬಣ ಯಾವ ಶಿಕ್ಷಣದ ಕಡೆಗೂ ಹೋಗದೆ, ಕೇವಲ ಇಂಗ್ಲಿಷ್ ಮಾತಾಡುವುದನ್ನು ಕಲಿಸುವ ಶಿಬಿರಗಳಿಗೆ ಸೇರುತ್ತಿರುವುದನ್ನು ಕಾಣುತ್ತಿದ್ದೇವೆ.

ನಮ್ಮ ಹೋರಾಟಗಾರರು ಕನ್ನಡಿಗರಿಗೆ ಉದ್ಯೋಗ ದೊರೆಯಬೇಕು ಎಂದು ಹೇಳುವ ಬದಲಿಗೆ, ಸ್ಥಳೀಯರಿಗೆ ಉದ್ಯೋಗ ದೊರೆಯಬೇಕು ಎಂದು ಹೋರಾಡುತ್ತಿದ್ದಾರೆ. ಈ ಸ್ಥಳೀಯರಲ್ಲಿ ಅನೇಕರು ಎರಡು ಮೂರು ದಶಕಗಳಿಂದ ಕರ್ನಾಟಕದಲ್ಲಿಯೇ ಇದ್ದರೂ ಕನ್ನಡವನ್ನು ಕಲಿಯದೆಯೇ ಬದುಕುತ್ತಿದ್ದಾರೆ ಎಂಬುದು ಮತ್ತೊಂದು ಖೇದದ ಸಂಗತಿ. ಹೀಗಾಗಿ ಇಂತಹ 'ಬದುಕಬಲ್ಲ ಜಾಣ'ರುಗಳ ನಡುವೆ 'ಕನ್ನಡಿಗ' ಹತಾಶನಾಗುತ್ತಿದ್ದಾನೆ.

ಜೀವನ: ಒಳನಾಡಿಗರ ಜೀವನ ಕ್ರಮದಲ್ಲಿ ಕಳೆದ ಎರಡು ದಶಕಗಳಲ್ಲಿ ಬೃಹತ್ ಬದಲಾವಣೆಗಳಾಗಿವೆ. ಕಳೆದ ಹತ್ತು ವರ್ಷಗಳಲ್ಲಂತೂ ಆ ಬದಲಾವಣೆ ಮಹತ್ತರವಾದುದು. ಸರಕು ಸಂಸ್ಕೃತಿಯು ಜನಪ್ರಿಯವಾದಂತೆ, ವ್ಯಕ್ತಿಗಿಂತ ವ್ಯಕ್ತಿಯ ಆವರಣಕ್ಕೆ ಪ್ರಾಮುಖ್ಯತೆ ಬಂದಿದೆ. ಹೀಗಾಗಿ ನಿಮ್ಮೆದುರಿಗೆ ನಿಂತವನ ಭಾಷೆ, ವ್ಯಕ್ತಿತ್ವಕ್ಕಿಂತ ಆತನ ಹೊರ ಆವರಣದಲ್ಲಿನ ವಿವರಗಳು ಮಾತ್ರ ಮುಖ್ಯವಾಗುತ್ತಿವೆ. ಚಾರಿತ್ರ್ಯಕ್ಕಿಂತ ಚಿತ್ರ ಮುಖ್ಯವಾದಾಗ ಆಗಬಹುದಾದ ತಲ್ಲಣಗಳಲ್ಲಿ ಮೊದಲಿನದು ಸಂಸ್ಕೃತಿ ವಿಹೀನ ಸ್ಥಿತಿ. ಇಲ್ಲಿ ಕಣ್ಣಿಗೆ ಕಾಣುವುದು ಮಾತ್ರ ಮುಖ್ಯ. ಇದರಿಂದಾಗಿ ನಮ್ಮ ನಡುವಿನ ಜೀವನ ಕ್ರಮದಲ್ಲಿ ದುಡ್ಡು ಇರುವವರ ಮತ್ತು ಇಲ್ಲದವರ ಬದುಕಿನ ಕ್ರಮಗಳಲ್ಲದೆ, ಅರೆಬರೆ ದುಡ್ಡುಳ್ಳವರ ಜೀವನ ಕ್ರಮವೊಂದು ತೆರೆದು ನಿಂತಿದೆ. ಈ ಮೂರೂ ಜೀವನ ಕ್ರಮಗಳಲ್ಲಿ ಭಾಷೆ–ಸಂಸ್ಕೃತಿಗೆ ಜಾಗ ಇಲ್ಲದಂತಹ ಪರಿಸ್ಥಿತಿ ಉಂಟಾಗಿದೆ. ಇದರೊಂದಿಗೆ ಮಹಾನಗರಗಳಲ್ಲಿ ಆರಂಭವಾಗಿರುವ ಮಾಲ್ ಸಂಸ್ಕೃತಿಯು ನಮ್ಮನ್ನು ಮತ್ತಷ್ಟು ಭಾಷಾವಿಹೀನರನ್ನಾಗಿ ಮಾಡಿದೆ. ನಮ್ಮ ಕನ್ನಡವಿರಲಿ, ಇಂಗ್ಲಿಷು ಅಥವಾ ಇನ್ನಾವುದೇ ಭಾಷೆಯೂ ಸ್ವಚ್ಛವಾಗಿ ಉಳಿದಿಲ್ಲ. ಎಲ್ಲವೂ ಎಲ್ಲಾ ಭಾಷೆಗಳ ಕಲಬೆರಕೆಯಾಗಿದೆ.

ಇದು ಉದಾರವಾದಿ ಆರ್ಥಿಕ ನೀತಿ ಮತ್ತು ಮಾರುಕಟ್ಟೆ ಪ್ರಣೀತ ಅರ್ಥ ಶಾಸ್ತ್ರದ ನೇರ ಪರಿಣಾಮ. ಇದನ್ನು ನಾವು ಒಂದೇ ಏಟಿಗೆ ದೂರ ಮಾಡುತ್ತೇವೆ ಎಂದೆನ್ನಲಾಗದಷ್ಟು ದೂರಕ್ಕೆ ಬಂದಿದ್ದೇವೆ. ಹಾಗಾಗಿಯೇ ಇಂದು ಉತ್ಸವಗಳು ಮತ್ತು ಜಾತ್ರೆಗಳು ಚಾಲ್ತಿಗೆ ಬಂದಿವೆ. ನಮ್ಮ ಸಮಕಾಲೀನ ಜನರನ್ನು ಸದ್ದು ಮಾಡಿಯೇ ಒಂದೆಡೆ ಸೇರಿಸುತ್ತಾ ಇದ್ದೇವೆ. ಹೀಗೆ ಸೇರಿದ ಜನರ ಜೊತೆಗೆ ಭಾಷೆ–ಸಂಸ್ಕೃತಿಯನ್ನು ಕುರಿತು ಮಾತಾಡುವುದಕ್ಕಿಂತ ಅಸಡ್ಡಾಳ ಹಾಸ್ಯವನ್ನು ಉಣಬಡಿಸುವ ಅಥವಾ ಭಾಷೆಯ ಸ್ವರೂಪವನ್ನೇ ಮರೆತ ಶಬ್ದಸಂಗೀತಕ್ಕೆ ಕುಣಿಯುವಂತಹ ವಾತಾವರಣ ಮಾತ್ರ ಸೃಷ್ಟಿ ಆಗುತ್ತಿದೆ.

ಕನ್ನಡ ಪರಿಸರದ ಉಳಿವಿಗೆ ಕೆಲವು ಮಾರ್ಗೋಪಾಯಗಳು

ಹಾಗಾದರೆ ಹತಾಶೆಯೊಂದೇ ಉತ್ತರವೇ? ಖಂಡಿತಾ ಇಲ್ಲ. ಒಳನಾಡಿಗರನ್ನು ಕನ್ನಡದ ಪರಿಸರದೊಳಗೆ ಉಳಿಸಿಕೊಳ್ಳಲು ಇನ್ನುಳಿದ ಎಲ್ಲಾ ನಾಡಿಗರಿಗೆ ತೆಗೆದುಕೊಳ್ಳುವ

ಎಚ್ಚರಗಳಿಗಿಂತ ಹೆಚ್ಚು ಕಾಳಜಿ ವಹಿಸ ಬೇಕಿದೆ. ಈ ನಿಟ್ಟಿನಲ್ಲಿ ಇರುವ ಮಾರ್ಗೋಪಾಯ ಗಳನ್ನು ಹೀಗೆ ಪಟ್ಟಿ ಮಾಡಬಹುದು.

೧. ನಮ್ಮ ವಿದ್ಯಾಭ್ಯಾಸ ಕ್ರಮದಲ್ಲಿ, ಯಾರೂ ಯಾವುದೇ ಭಾಷೆಯನ್ನು ಕಲಿಯಲಿ ಕನ್ನಡವನ್ನು ಕಡ್ಡಾಯವಾಗಿ ಮೊದಲ ಭಾಷೆಯಾಗಿ ಕಲಿಯಲೇ ಬೇಕು ಎಂಬ ಶಿಕ್ಷಣ ನೀತಿ ಜಾರಿಗೆ ಬರಬೇಕು.

೨. ವೃತ್ತಿ ಶಿಕ್ಷಣದಲ್ಲಿ ಕನ್ನಡ ಕಲಿಕೆಯನ್ನು ಕಡ್ಡಾಯಗೊಳಿಸಬೇಕು.

೩. ಕನ್ನಡ ಕಲಿತ ಮಕ್ಕಳನ್ನು ಕನ್ನಡದ ಪರಿಸರದ ಒಳಗೆ ಉಳಿಸಲು ಹಳಗನ್ನಡ ಕಾವ್ಯವಾಚನದಿಂದ ಹಿಡಿದು, ಸುಗಮ ಸಂಗೀತದವರೆಗಿನ ಎಲ್ಲಾ ಕಾವ್ಯಗಳ ಅನುಸಂಧಾನವಾಗುವ ಮಾರ್ಗದಿಂದ ಕನ್ನಡ ಸಂಸ್ಕೃತಿಯ ಒಳಗೆ ಉಳಿಸಲು ನಿರಂತರ ಕ್ರಿಯಾಶೀಲತೆಯಿಂದ ತೊಡಗಬೇಕು.

೪. ಉದ್ಯೋಗದಲ್ಲಿ ಸ್ಥಳೀಯರಿಗೆ ಆದ್ಯತೆ ಎನ್ನುವ ಬದಲಿಗೆ ಕನ್ನಡಿಗರಿಗೆ ಆದ್ಯತೆ ಎಂಬ ಕಾನೂನು ಅಥವಾ ಸುಗ್ರೀವಾಜ್ಞೆ ತರಬೇಕು. ಸರ್ಕಾರದ್ದಾಗಲೀ, ಖಾಸಗಿ ಯದ್ದಾಗಲೀ ಯಾವುದೇ ಕೆಲಸಕ್ಕೆ ಸೇರುವವರಿಗೆ ಕನಿಷ್ಠ ಏಳನೆಯ ತರಗತಿಯ ಕನ್ನಡ ಪಠ್ಯವನ್ನು ಕಡ್ಡಾಯವಾಗಿ ಕಲಿತಿರಲೇಬೇಕು ಎಂದು ತಾಕೀತು ಮಾಡಬೇಕು.

೫. ನಮ್ಮ ನಡುವೆ ಇರುವ ಕನ್ನಡೇತರರನ್ನು ಕನ್ನಡದ ಪರಿಸರದ ಒಳಗೆ ತರಲು ಅನುವಾಗುವಂತೆ, ಎಲ್ಲಾ ಬಡಾವಣೆಗಳಲ್ಲಿ ಹಾಗೂ ವಸತಿ ಸಮುಚ್ಚಯಗಳಲ್ಲಿ ಕನ್ನಡ ಕಲಿಕಾ ಕೇಂದ್ರಗಳನ್ನು ಆರಂಭಿಸಬೇಕು. ಇಲ್ಲಿ ಕನ್ನಡ ಕಲಿಸಲು ಕನ್ನಡ ಅಧ್ಯಾಪಕರನ್ನು ಅಣಿಗೊಳಿಸಬೇಕು.

೬. ಪ್ರಾಥಮಿಕ ಹಂತದ ಶಿಕ್ಷಣದಲ್ಲಿ ಕನ್ನಡ ಪಾಠ ಮಾಡುವ ಎಲ್ಲಾ ಉಪಾಧ್ಯಾಯರಿಗೆ ವರ್ಷಕ್ಕೊಮ್ಮೆ ಬದಲಾಗುತ್ತಿರುವ ಕಾಲಮಾನದಲ್ಲಿ ಕನ್ನಡ ಕಲಿಸುವ ಬಗೆಗಳನ್ನು ಕುರಿತು ಕಮ್ಮಟಗಳನ್ನು ನಿರಂತರವಾಗಿ ನಡೆಸಬೇಕು.

೭. ನಮ್ಮ ಎಲ್ಲಾ ಮಾಧ್ಯಮಗಳಲ್ಲಿ ದುಡಿಯುತ್ತಿರುವ 'ಕನ್ನಡ' ಬಂಧುಗಳಿಗೆ ಕನ್ನಡ ಸಂಸ್ಕೃತಿ ಶಿಬಿರವನ್ನು ನಡೆಸುವ ಮೂಲಕ, ಅವರು ಆಡುವ ಭಾಷೆಯನ್ನಷ್ಟೇ ಅಲ್ಲದೆ ಅವರ ಜ್ಞಾನಕೋಶಕ್ಕೂ, ಕನ್ನಡದ ಚರಿತ್ರೆಯನ್ನು ಮತ್ತು ಆಧುನಿಕ ತಂತ್ರಜ್ಞಾನೀಯ ಯುಗದಲ್ಲಿ ಕನ್ನಡವನ್ನು ಬಳಸಬೇಕಾದ ಕ್ರಮ ಕುರಿತು ಶಿಬಿರ–ಕಮ್ಮಟಗಳನ್ನು ನಿಯಮಿತವಾಗಿ ನಡೆಸಬೇಕು. ಇದು ವಿಶೇಷವಾಗಿ ಆಕಾಶವಾಣಿ ಮತ್ತು ದೂರದರ್ಶನದಂತಹ ಮಾಧ್ಯಮಗಳಲ್ಲಿ ಕೆಲಸ ಮಾಡುತ್ತಿರುವ ನಿರೂಪಕ ವರ್ಗ ಮತ್ತು ಕಾರ್ಯಕ್ರಮ ತಯಾರಿಕಾ ವರ್ಗಕ್ಕೆ ತುರ್ತಾಗಿ ಆಗಬೇಕಾದ ಕೆಲಸ.

೮. ಈಗಾಗಲೇ ಕನ್ನಡವನ್ನು ಆಯ್ಕೆ ಮಾಡಿಕೊಂಡು ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಆತ್ಮವಿಶ್ವಾಸ ಹೆಚ್ಚಿಸುವ ಕೆಲಸ ಮತ್ತು ಅವರನ್ನು ಹೊಸ ಕಾಲಘಟ್ಟದ ಅಗತ್ಯಗಳಿಗೆ ಹೊಂದುವಂತಹ ಸಂಶೋಧನೆಗಳಲ್ಲಿ ತೊಡಗಿಸಲು ಕಮ್ಮಟಗಳನ್ನು–ಶಿಬಿರಗಳನ್ನು ನಡೆಸಬೇಕು.

೯. ನಮ್ಮ ನಾಡಿನ ಒಳಗೆ ಇರುವ ಎಲ್ಲಾ ಉದ್ಯಮಗಳಲ್ಲಿ ಕನ್ನಡಿಗರಿಗೆ ಆದ್ಯತೆ ದೊರೆಯುವಂತಹ 'ಉದ್ಯೋಗ ನೀತಿ'ಯೊಂದನ್ನು ಜಾರಿಗೆ ತರುವ ಪ್ರಯತ್ನಗಳಾಗುವಾಗಲೇ, ಆ ಉದ್ಯಮಗಳಲ್ಲಿ ಇರುವ ಪ್ರತಿಯೊಬ್ಬ ಅಧಿಕಾರಿ ಮತ್ತು ಕಾರ್ಮಿಕನು ಇಂತಿಷ್ಟು ವರ್ಷಗಳಲ್ಲಿ 'ಕನಿಷ್ಠ ಏಳನೆಯ ತರಗತಿಯ ಕನ್ನಡ ಪಠ್ಯವನ್ನು ಪರೀಕ್ಷೆಯಲ್ಲಿ ಪಾಸು ಮಾಡಿದಾಗ ಮಾತ್ರ, ಮುಂದಿನ ಬಡ್ತಿ' ಎಂಬಂತಹ ಸ್ಥಿತಿಯನ್ನು ಖಾಸಗಿ ಉದ್ಯಮಗಳಲ್ಲಿ ಮಾತ್ರವೇ ಅಲ್ಲದೆ ಕೇಂದ್ರ ಸ್ವಾಮ್ಯದ ಉದ್ಯಮ ಮತ್ತು ಕಛೇರಿಗಳಲ್ಲಿ ತರಬೇಕು.

೧೦. ಮಹಾನಗರದ ಎಲ್ಲಾ ಮಾಲ್‌ಗಳೂ ಇಂದು ಕೇವಲ ವ್ಯಾಪಾರೀ ಕೇಂದ್ರ ಗಳಾಗಿವೆ. ಇಲ್ಲಿ ಅಂಗಡಿ-ಮುಂಗಟ್ಟುಗಳ ಜೊತೆಗೆ ಸಿನಿಮಾ ಪ್ರದರ್ಶನ ಮಂದಿರಗಳನ್ನೂ ಕಟ್ಟುತ್ತಿದ್ದಾರೆ. ಇನ್ನು ಮುಂದೆ ಇಂತಹ ಪ್ರತಿ ಮಾಲ್‌ಗಳಲ್ಲಿ ಸಿನಿಮಾ ಮಂದಿರದ ಹಾಗೆ ರಂಗಮಂದಿರ, ಸಂಗೀತ ಸಭೆ ನಡೆಸುವ ಸ್ಥಳ, ಚಿತ್ರ ಪ್ರದರ್ಶನ ಸ್ಥಳವೂ ಕಡ್ಡಾಯವಾಗಿ ಇರಲೇಬೇಕು ಎಂಬಂತಹ ಕಾನೂನನ್ನು ಪರವಾನಗಿ ನೀಡುವಾಗಲೇ ಜಾರಿಗೊಳಿಸಬೇಕು. ಇಂತಹ ಮಂದಿರಗಳಲ್ಲಿ ಪ್ರತಿದಿನ ಕನ್ನಡ ಸಂಸ್ಕೃತಿಯನ್ನು ಪ್ರಕಟಪಡಿಸುವ ಅವಕಾಶಗಳು ಕಲಾವಿದರಿಗೆ ಸಿಗಬೇಕು. ಈ ಮಾಲ್‌ಗಳ ಮಾಲೀಕರೇ ಇಂತಹ ಎಲ್ಲಾ ಚಟುವಟಿಕೆಗಳನ್ನು ನಡೆಸುವವರಿಗೆ ಗೌರವಧನ ಅಥವಾ ಸಂಬಳವನ್ನು ನೀಡುವಂತಾಗಬೇಕು. ಸರಕು ಮಾರುವ ಅಂಗಡಿಯಲ್ಲಿ ಕನ್ನಡವನ್ನೇ ಸರಕಾಗಿಸುವ ಮಾರ್ಗ ಇದು. ಈ ಮೂಲಕ ಹೊಸ ತಲೆಮಾರನ್ನು ಕನ್ನಡದ ಪರಿಸರದ ಒಳಗೆ ತರುವುದಕ್ಕೆ ಹೊಸ ಮಾರ್ಗಗಳು ತೆರೆದುಕೊಳ್ಳಬಹುದು.

೧೧. ನಮ್ಮ ಎಲ್ಲಾ ಸಾರಿಗೆಗಳಲ್ಲಿ ಕನ್ನಡವು ಪ್ರಧಾನ ಭಾಷೆಯಾಗಿ ಬಳಕೆಯಾಗಬೇಕು. ಆ ಕನ್ನಡವು "ಶುದ್ಧ" ಕನ್ನಡವೂ ಆಗಿರುವಂತೆ ಎಚ್ಚರ ವಹಿಸಬೇಕು. ಈ ಶುದ್ಧ ಎನ್ನುವ ಪದಕ್ಕೂ ಕಾಲಾಂತರದಲ್ಲಿ ಅನೇಕ ವಾದ-ವಿವಾದಗಳು ಸೇರಿಕೊಂಡಿವೆ. ಹಾಗಾಗಿ "ಶುದ್ಧ" ಎಂಬುದು ಯಾವ ಬಗೆಯ ಶುದ್ಧತೆ ಎಂಬುದನ್ನು ಸಹ ಈಗ ನಿಗದಿ ಪಡಿಸಿಕೊಳ್ಳಬೇಕಾದ ಅನಿವಾರ್ಯತೆಯಿದೆ. ಕನ್ನಡವು ಅತೀ ಸಂಸ್ಕೃತ ವ್ಯಾಮೋಹಕ್ಕೆ ಒಳಗಾಗುವುದು ಹೇಗೆ ಅಪಾಯವೋ ಹಾಗೆಯೇ ಅತಿ-ಅಭಿಮಾನದಿಂದ ಸಂಪೂರ್ಣ ಕನ್ನಡಗೊಳಿಸಲು ಪ್ರಯತ್ನಿಸಿ, ಹೊಸ ತಲೆಮಾರನ್ನು ಕನ್ನಡದಿಂದ ದೂರಾಗುವಂತೆ ಮಾಡುವುದು ಸಹ ಅಪಾಯವೇ ಎಂಬುದು ಗಮನದಲ್ಲಿರಬೇಕು.

ಇಂಜಿನಿಯರ್ ಎಂಬ ಆಂಗ್ಲ ಪದಕ್ಕೆ ಅಭಿಯಂತರ ಎಂಬ ಸಂಸ್ಕೃತ-ಕನ್ನಡ ಹೇಗೆ ತಪ್ಪೋ ಹಾಗೆಯೇ ಬಿಣಿಗೆಯರಿಗ ಎಂದು (ಶಂಕರಭಟ್ ನಿಘಂಟು) ಅಪ್ಪಟ ಕನ್ನಡ ಬಳಸುವುದು ಸಹ ಕನ್ನಡಿಗರನ್ನು ಕನ್ನಡದಿಂದ ದೂರ ಮಾಡಿದಂತೆಯೇ ಆಗುತ್ತದೆ ಎಂಬುದು ಪದಗಳನ್ನು ಬಳಸುವವರಿಗೆ / ಬಳಕೆಗೆ ತರುವವರಿಗೆ ಸದಾ ನೆನಪಿರಬೇಕು.

೧೨. ರಸ್ತೆ ಬದಿಗಳ ಎಲ್ಲಾ ಜಾಹೀರಾತು ಫಲಕಗಳಲ್ಲಿ ಕನ್ನಡವನ್ನು ಕಡ್ಡಾಯ ಗೊಳಿಸಬೇಕು. ಕನ್ನಡ ಬಳಸದ ಜಾಹೀರಾತು ಫಲಕಗಳಿಗೆ ಪರವಾನಗಿ ನೀಡಬಾರದು.

ಈ ಕೆಲವು ವಿವರಗಳಲ್ಲದೆ, ಇನ್ನೂ ಅನೇಕ ಮಾರ್ಗೋಪಾಯಗಳಿವೆ. ಅವುಗಳನ್ನು ಚರ್ಚೆಯಲ್ಲಿ ವಿಸ್ತರಿಸಬಹುದು. ಕಾಲಕಾಲಕ್ಕೆ ಮಾರ್ಗೋಪಾಯಗಳ ಪಟ್ಟಿಯನ್ನು ನವೀಕರಿಸುತ್ತಿರಬೇಕು.

ಗಣಕ ಮತ್ತು ಆಂಕಿಕ ಲೋಕದಲ್ಲಿ ಕನ್ನಡ

ಆಧುನಿಕ ಸಮಾಜವು ಆಂಕಿಕ(ಡಿಜಿಟಲ್) ಜಗತ್ತನ್ನು ಸಂಪೂರ್ಣವಾಗಿ ತನ್ನದಾಗಿಸಿ ಕೊಂಡಿದೆ. ಇಂದು ಈ ನಾಡಿನ ಪ್ರತಿಯೊಬ್ಬನ ಕೈಯಲ್ಲಿಯೂ ಸಂಚಾರಿ ದೂರವಾಣಿ ಬಂದಿದೆ. ಪ್ರತಿ ಮನೆಯಲ್ಲೂ ಟೆಲಿವಿಷನ್ ಬಂದಿದೆ. ಪ್ರತಿ ಸಣ್ಣ ಹುಡುಗನಿಗೂ ಗಣಕಯಂತ್ರ ನಡೆಸುವುದು ಬರುತ್ತದೆ. ಆದರೆ ಈ ಗಣಕ ಯಂತ್ರ ಲೋಕದಲ್ಲಿ ಕನ್ನಡದ ಪರಿಸರ ಸರಿಯಾಗಿಲ್ಲ. ಕರ್ನಾಟಕ ಸರ್ಕಾರವಂತೂ ಆಡಳಿತವನ್ನು ಗಣಕೀಕರಣಗೊಳಿಸಲು ದಾಪುಗಾಲಿಡುತ್ತಿದೆ. ಆದರೆ ಒಂದು ಗಣಕ ಯಂತ್ರದಲ್ಲಿ ಬರುವ ಕನ್ನಡವು ಮತ್ತೊಂದು ಗಣಕ ಯಂತ್ರದಲ್ಲಿ ಕಾಣುವುದೇ ಇಲ್ಲ ಎಂಬಂತಹ ಪರಿಸ್ಥಿತಿ ಇದೆ. ಇನ್ನು ಹೀಗೆ ಬಳಸುವ ದಾಖಲೆಗೆ ಎಂದು ಯಾವ ವೈರಸ್ ಬಡಿಯುತ್ತದೋ ಎಂಬ ಆತಂಕ ಬೇರೆ! ಇದಕ್ಕೆ ನಾವು ವಿಂಡೋಸ್ ಎಂಬ ತಂತ್ರಾಂಶವನ್ನು ಬಳಸುತ್ತಿರುವುದು ಪ್ರಧಾನ ಕಾರಣ. ಪ್ರಾಯಶಃ ಉತ್ತರ ಪ್ರದೇಶ ಸರ್ಕಾರದಂತೆ ಆಡಳಿತ ಯಂತ್ರಕ್ಕೆ ಲಿನಕ್ಸ್‌ನಂತಹ ಪುಕ್ಕಟೆಯಾಗಿ ದೊರೆಯುವ ತಂತ್ರಾಂಶ ಬಳಸುವುದು ಮತ್ತು ತಮಿಳುನಾಡು ಸರ್ಕಾರದಂತೆ ಯೂನಿಕೋಡ್ ವ್ಯವಸ್ಥೆಯ ಭಾಷೆಯ ಬಳಕೆಯನ್ನು ಸಾರ್ವತ್ರೀಕರಣಗೊಳಿಸುವುದು ಇಂದು ಸರಿಯಾದ ಮಾರ್ಗ. ಆ ನಿಟ್ಟಿನಲ್ಲಿ ಅನೇಕ ವರದಿಗಳು ಸರ್ಕಾರಕ್ಕೆ ತಲುಪಿವೆ. ಆದರೆ ಆಗಿರುವ ಕೆಲಸಗಳು ತೀರಾ ಕಡಿಮೆ. (ಈಚೆಗೆ ಕರ್ನಾಟಕ ಸರ್ಕಾರವು ಯೂನಿಕೋಡ್ ಕನ್ನಡ ಬಳಕೆಯನ್ನು ಆದೇಶದ ಮೂಲಕ ಸಾರ್ವತ್ರೀಕರಣಗೊಳಿಸಲು ಸಿದ್ಧವಾಗಿದೆ. ಆದರೆ ಆ ತಂತ್ರಾಂಶದಲ್ಲಿಯೇ ಇರುವ ಅನೇಕ ಅರೆಕೊರೆಗಳನ್ನು ತಿದ್ದುವವರೆಗೆ ಈ ಆದೇಶದ ಸಂಪೂರ್ಣ ಲಾಭ ದೊರೆಯದು.)

ಗಣಕಲೋಕದಲ್ಲಿ ಕನ್ನಡದ ಏಕೀಕರಣವಾಗುವಾಗಲೇ, ಸಂಚಾರಿ ದೂರವಾಣಿ ಗಳಲ್ಲೂ ಕನ್ನಡವನ್ನೇ ಬಳಸುವಂತೆ ಎಲ್ಲಾ ಖಾಸಗಿ ಸಂಚಾರಿ ದೂರವಾಣಿ ನಿರ್ವಹಣಾ ಸಂಸ್ಥೆಗಳಿಗೆ ಮತ್ತು ಸಂಚಾರಿ ದೂರವಾಣಿ ತಯಾರಕರಿಗೆ ಸರ್ಕಾರವೇ ಒತ್ತಡ ಹೇರಬೇಕಾಗಿದೆ. ಬ್ಲಾಕ್‌ಬೆರ್‍ರಿಯಂತಹ ಸಂಚಾರಿ ದೂರವಾಣಿಯ ಮೂಲಕ ನಮ್ಮ ಪೋಲೀಸ್ ಇಲಾಖೆಯು ಕೆಲಸ ಮಾಡುತ್ತಿದೆ. ಆದರೆ ಈ ಬ್ಲಾಕ್‌ಬೆರ್‍ರಿಯಲ್ಲಿ ಕನ್ನಡವೇ ಬಾರದು. ಹೀಗಾಗಿ ನಮ್ಮ ಪೋಲೀಸರು ಕನ್ನಡಕ್ಕೆ ಬದಲಾಗಿ ಇಂಗ್ಲಿಷ್ ಭಾಷೆಯನ್ನೇ ಬಳಸುತ್ತಿರುವುದನ್ನು ಬೆಂಗಳೂರಿನಂತಹ ನಗರಿಯಲ್ಲಿ ಕಾಣಬಹುದು. ಇದನ್ನು ಸರಳವಾಗಿ ತಪ್ಪಿಸಬಹುದು. ನಮ್ಮ ಅಧಿಕಾರ ವರ್ಗವು ಕನ್ನಡವಿಲ್ಲದ ಸಂಚಾರಿ ದೂರವಾಣಿಗಳನ್ನು ಬಳಸಲಾಗದು ಎಂಬ ಒಂದು ಆದೇಶ ಕೊಟ್ಟರೆ, ತಮ್ಮ ಆದಾಯ

ತಪ್ಪುತ್ತದೆ ಎಂಬ ಹೆದರಿಕೆಯಿಂದಲೇ ಈ ಎಲ್ಲಾ ಸಂಚಾರಿ ದೂರವಾಣಿಗಳ ತಯಾರಕರು ಮಣಿಯುತ್ತಾರೆ ಮತ್ತು ಕನ್ನಡ ತಂತ್ರಾಂಶಗಳನ್ನೊಳಗೊಂಡ ಸಂಚಾರಿ ದೂರವಾಣಿಗಳು ಬರುತ್ತವೆ. ಮುಂದುವರಿದಂತೆ, ಯೂನಿಕೋಡ್‌ನಲ್ಲಿ ಕನ್ನಡದ ಬಳಕೆಗೆ ಅನೇಕ ತೊಂದರೆ ಗಳಿವೆ. ಅವುಗಳೆಲ್ಲವನ್ನೂ ಈಗಾಗಲೇ ಅನೇಕರು ಪಟ್ಟಿಮಾಡಿ ನೀಡಿದ್ದಾರೆ. ಆ ಲೋಪ ದೋಷಗಳನ್ನು ತಿದ್ದುವ ಕೆಲಸ ಕೂಡಲೇ ಆಗಬೇಕು. ಅದರೊಂದಿಗೆ ಕಾಮನ್ ಪ್ಲಾಟ್‌ಫಾರಂ ಕನ್‌ವರ್ಷನ್ ಸಾಫ್ಟ್‌ವೇರ್ ಎಂದು ಕರೆಯಲಾಗುವ, ಯಾವ ತಂತ್ರಾಂಶ ಬಳಸಿದರೂ ಯೂನಿಕೋಡ್‌ನಲ್ಲಿ ಬರೆದದ್ದು ಅಷ್ಟೇ ಸರಳವಾಗಿ ಮತ್ತೊಂದು ಗಣಕ ಯಂತ್ರದಲ್ಲಿ ಕಾಣುವಂತಾಗುವ ತಂತ್ರಾಂಶ ಅಭಿವೃದ್ಧಿಯ ಕೆಲಸ ಆಗಬೇಕು.

ಇವುಗಳು ಆಗುವಾಗಲೇ ಕನ್ನಡದ ಸ್ಪೆಲ್ ಚೆಕ್ಕರ್‌ಗಳು ಮತ್ತು ವ್ಯಾಕರಣ ಪರೀಕ್ಷಕ ತಂತ್ರಾಂಶಗಳನ್ನು ಸಹ ಆಧುನಿಕ ಕಾಲಕ್ಕೆ ಹೊಂದುವಂತೆ ಅಭಿವೃದ್ಧಿಪಡಿಸಬೇಕಾಗುತ್ತದೆ. ಹೀಗೆ ಮಾಡುವಾಗ, ಗಣಕಗಳಲ್ಲಿ ತಂತ್ರಾಂಶದ ಜೊತೆಗೆ ಅಡಕವಾಗಿರುವಂತೆ ಕನ್ನಡ ನುಡಿಕೋಶಗಳು ಲಭ್ಯವಿರಬೇಕು. ಇದಕ್ಕಾಗಿ ಯಾವ ನುಡಿಕೋಶವನ್ನು ಬಳಸಬೇಕು ಮತ್ತು ಆ ನುಡಿಕೋಶವು ಆಧುನಿಕ ಕಾಲಘಟ್ಟಕ್ಕೆ ಹೊಂದುವಂತೆ ಮಾಡಲು ಏನೆಲ್ಲಾ ಎಚ್ಚರಿಕೆಗಳನ್ನು ತೆಗೆದುಕೊಳ್ಳಬೇಕು ಎಂಬುದನ್ನು ತಜ್ಞರಿಂದ ಪರೀಕ್ಷಿಸಿ ಸಿದ್ಧಪಡಿಸಬೇಕು.

ಇವುಗಳ ಜೊತೆಗೆ ಕನ್ನಡದ ಎಲ್ಲಾ ಕೃತಿಗಳ, ಶಾಸನಗಳ, ಲಿಪಿ ಮಾದರಿಗಳ ಕಾರ್ಪಸ್ ಸಹ ಆಂಕಿಕ ಪದ್ಧತಿಯಲ್ಲಿ ದೊರೆಯುವಂತೆ ಆಗಬೇಕು. ಇದು ಕನ್ನಡ ಪರಿಸರವನ್ನು ಗಣಕಲೋಕದಲ್ಲಿ ಗಟ್ಟಿಗೊಳಿಸಲು ಸಹಾಯಕವಾಗುತ್ತದೆ. ಜೊತೆ ಜೊತೆಯಲ್ಲೇ ಕನ್ನಡವನ್ನು ಗಣಕದಲ್ಲಿ ಬಳಸಲು ಆಡಳಿತ ಸಿಬ್ಬಂದಿಗೆ ಮಾತ್ರವೇ ಅಲ್ಲದೆ ಪ್ರಾಥಮಿಕ ಶಾಲೆಯಲ್ಲಿಯೇ ಕನ್ನಡದ ಬಳಕೆಯನ್ನು ಮಕ್ಕಳಿಗೆ ಅಭ್ಯಾಸ ಮಾಡಿಸುವಂತಹ ಚಟುವಟಿಕೆಗಳು ಮೊದಲಾಗಬೇಕು.

ಇವೆಲ್ಲವೂ ನಮ್ಮೆದುರಿಗೆ ಇರುವ ಅಗತ್ಯಗಳು. ಇವುಗಳೆಲ್ಲವನ್ನೂ ಪೂರೈಸಲು ಸಮರೋಪಾದಿಯಲ್ಲಿ ಕನ್ನಡಿಗರು ಕೆಲಸ ಮಾಡಬೇಕಿದೆ. ಪ್ರಾಯಶಃ ತಂತ್ರಾಂಶ ಅಭಿವೃದ್ಧಿ ಯಲ್ಲಿ ಜಾಗತಿಕವಾಗಿ ಹೆಸರು ಮಾಡಿರುವ ಕರ್ನಾಟಕದ ಅನೇಕ ಉದ್ದಿಮೆಗಳನ್ನು ಈ ನಿಟ್ಟಿನಲ್ಲಿ ತೊಡಗಿಸಿದರೆ ಗಣಕಲೋಕದ ಕನ್ನಡದಲ್ಲಿಯೂ ಏಕೀಕರಣ ಆಗುವುದು ಸಾಧ್ಯ.

ನಮ್ಮ ಶಿಕ್ಷಣ ಪದ್ಧತಿ ಮತ್ತು ಕನ್ನಡದ ಪರಿಸರ

ಇಂದು ನಮ್ಮ ಸ್ನಾತಕೋತ್ತರ ಶಿಕ್ಷಣದಲ್ಲಿ ಅನೇಕ ಹೊಸ ಆಲೋಚನೆಗಳ ಪ್ರವೇಶವಾಗಿದೆ. ಅದರಲ್ಲಿಯೂ ಭಾಷೆಯ ಅಧ್ಯಯನದಲ್ಲಿ ಹೊಸ ಸಂಶೋಧನೆಗಳು ಆಗುತ್ತಿವೆ. ಆದರೆ ಪ್ರಾಥಮಿಕ ಶಿಕ್ಷಣ ಲೋಕದಲ್ಲಿ ಕನ್ನಡ ಕಲಿಸುತ್ತಿರುವವರಿಗೆ ಇವುಗಳ ಅರಿವಿಲ್ಲ. ಈ ನಿಟ್ಟಿನಲ್ಲಿ ನಮ್ಮ ಪ್ರಾಥಮಿಕ ಹಂತದ ಕನ್ನಡ ಶಿಕ್ಷಣ ಕ್ರಮವನ್ನು ಆಧುನಿಕ ಕಾಲಘಟ್ಟಕ್ಕೆ ಹೊಂದುವಂತೆ ಮಾರ್ಪಡಿಸುವುದು ನಮ್ಮೆದುರಿಗೆ ಇರುವ ದೊಡ್ಡ ಸವಾಲು. ಇದಕ್ಕಾಗಿ ಪ್ರತೀ ವರ್ಷವೂ ಹಿರಿಯ ಕನ್ನಡ ವಿದ್ವಾಂಸರಿಂದ ನಮ್ಮ ಪ್ರಾಥಮಿಕ ಶಿಕ್ಷಣದ ಕನ್ನಡ ಉಪಾಧ್ಯಾಯರಿಗೆ ಬೇಸಿಗೆ ಶಿಬಿರಗಳನ್ನು ನಡೆಸಬೇಕು. ಆ ಮೂಲಕ ನಮ್ಮ ಶಿಕ್ಷಕರು ಕನ್ನಡವನ್ನು ಭಾಷೆಯಾಗಿ ಅರಿಯುವ ಕ್ರಮಗಳನ್ನು ಆಧುನಿಕ ವಿಜ್ಞಾನದ

ಜೊತೆಗೆ ಕಲಿಯುವುದು ಸಾಧ್ಯವಾಗಬೇಕು. ಆಗ ನಮ್ಮ ಮುಂದಿನ ತಲೆಮಾರುಗಳು ಶಾಲೆಯಲ್ಲಿಯೇ ಹೊಸ ಕಾಲಘಟ್ಟವನ್ನು ತಮ್ಮ ಭಾಷೆಯ ಮೂಲಕ ಎದುರಿಸುವುದು ಸಾಧ್ಯವಾಗುತ್ತದೆ. ಇದಕ್ಕೆ ಭಾಷೆಯನ್ನು ಪಾರಂಪರಿಕ ಕ್ರಮದಲ್ಲಿ ಮಾತ್ರ ನೋಡುವ ಕಲಿಸುವ ಅಭ್ಯಾಸವನ್ನು ಬಿಟ್ಟುಕೊಟ್ಟು, ಆಧುನಿಕ ಜ್ಞಾನ ಶಿಸ್ತುಗಳ ಮೂಲಕ ಕನ್ನಡ ಲೋಕಕ್ಕೆ ನಮ್ಮ ಶಿಕ್ಷಕರನ್ನು ಕರೆದೊಯ್ಯಬೇಕಿದೆ. ಇದು ಎಷ್ಟು ಶೀಘ್ರವಾಗಿ ಸಾಧ್ಯ ವಾಗುವುದೋ, ಅಷ್ಟೂ ಬೇಗ ನಮ್ಮ ಮುಂದಿನ ತಲೆಮಾರು ಆಧುನಿಕ ಯುಗದ ಸ್ಪರ್ಧಾತ್ಮಕ ಜಗತ್ತಿನಲ್ಲಿ ಕನ್ನಡದ ಜೊತೆಗೆ ಬದುಕುವುದು ಸಾಧ್ಯವಾಗುತ್ತದೆ.

ಇದೇ ಸಂದರ್ಭದಲ್ಲಿ ನಮ್ಮ ಮಕ್ಕಳು ಯಾವುದೇ ಭಾಷೆಯನ್ನು, ಯಾವುದೇ ಶಾಲೆಯಲ್ಲಿ ಕಲಿಯುತ್ತಿರಲಿ, ಆದರೆ ಅವರು ಆಡುವಾಗ ಬಳಸುವ ಭಾಷೆಯನ್ನು ಕನ್ನಡವಾಗಿಯೇ ಉಳಿಸಬೇಕಾದ್ದು ಮುಖ್ಯವಾಗಿದೆ. ಭಾಷೆಯೊಂದು ಪ್ರತೀ ವ್ಯಕ್ತಿಯೊಡನೆ ಅವನ ಬಾಲ್ಯಕಾಲದ ಆಟದ ಮೂಲಕವೇ ಅರಳುತ್ತದೆ. ಈ ನಿಟ್ಟನಲ್ಲಿ ಇಂಗ್ಲಿಷ್ ಮಾಧ್ಯಮದಲ್ಲಿ ಬದುಕಿನ ಅಗತ್ಯಕ್ಕಾಗಿ ಕಲಿಯುತ್ತಿರುವ ಮಕ್ಕಳಿಗೂ ಆಟೋಟಗಳು ಕನ್ನಡದಲ್ಲಿ ಇರುವಂತಹ ವಾತಾವರಣ ಮೂಡಿಸಬೇಕಿದೆ. ನಮ್ಮ ಮಕ್ಕಳು ಜಗತ್ತಿನ ಎಲ್ಲಾ ಭಾಷೆಗಳನ್ನೂ ಕಲಿಯಲಿ. ಆದರೆ ಕನ್ನಡದಲ್ಲಿ ಆಡಲಿ, ಕನ್ನಡದಲ್ಲಿ ಬದುಕಲಿ ಎಂಬುದು ನಮ್ಮ ಶಿಕ್ಷಣ ವ್ಯವಸ್ಥೆಯ ಧ್ಯೇಯ ವಾಕ್ಯವಾಗುವಂತೆ, ಈ ನಾಡಿನ ಎಲ್ಲಾ ಪೋಷಕರು ಒತ್ತಾಯ ತರಬೇಕಾಗಿದೆ.

ಕನ್ನಡ ಮತ್ತು ಆಧುನಿಕ ವಿಜ್ಞಾನ

ಯಾವುದೇ ಭಾಷೆಯನ್ನು ಆಧುನಿಕ ವಿಜ್ಞಾನಕ್ಕೆ ಒಗ್ಗಿಸಿಕೊಳ್ಳದೇ ಹೋದಾಗ ವಿಭಿನ್ನ ಜ್ಞಾನ ಶಿಸ್ತುಗಳಿಗೆ ಆ ಭಾಷೆ ಹೊಂದಿಕೊಳ್ಳುವುದಿಲ್ಲ. ಇಲ್ಲಿ ನಮ್ಮ ಪರಂಪರೆ ಹಾಗಿತ್ತು–ಹೀಗಿತ್ತು ಎಂದು ಕೊಂಡಾಡುತ್ತಾ ಕೂರುವ ಮಡಿವಂತ ಸ್ಥಿತಿಗಿಂತ, ನಾವು ಭಾಷೆಯನ್ನು ಬಳಸುವ ಕ್ರಮವನ್ನು ಮುಕ್ತಗೊಳಿಸಬೇಕಿದೆ. ಕನ್ನಡವನ್ನು ಸಂಸ್ಕೃತದ ಮರಿ ಮಾಡುವು ದಕ್ಕಿಂತ ಕನ್ನಡಕ್ಕಿರುವ ಸ್ವಾಯತ್ತತೆಯನ್ನು, ಹೊಸ ದೃಷ್ಟಿಕೋನದಿಂದ ನೋಡಬೇಕಿದೆ. ಆಗ ಆಧುನಿಕ ವಿಜ್ಞಾನವನ್ನು ಕಲಿಯಲು ಬೇಕಾದ ಹಾಗೆ ನಮ್ಮ ಕನ್ನಡವನ್ನು ಬಾಗಿಸಲು ಸಾಧ್ಯವಾಗುತ್ತದೆ. ಇದಕ್ಕೆ ಅನ್ಯ ಜ್ಞಾನ ಶಿಸ್ತುಗಳಲ್ಲಿ ದುಡಿಯುತ್ತಿರುವ ಕನ್ನಡಿಗರು ಅವರ ಜ್ಞಾನವನ್ನು ಕನ್ನಡದ ಮೂಲಕವೇ ಪ್ರಚುರ ಪಡಿಸಲು ಅನುವಾಗುವಂತೆ ಪ್ರೇರೇಪಿಸ ಬೇಕಿದೆ. ಅಟಾಮಿಕ್ ಫಿಸಿಕ್ಸ್‌ನಲ್ಲಿ ಸಂಶೋಧನೆ ಮಾಡುತ್ತಿರುವವರು, ತಮ್ಮ ಸಂಶೋಧನೆ ಗಳನ್ನು ಕನ್ನಡದಲ್ಲಿಯೇ ಪ್ರಕಟಸಲು ಅನುವಾಗುವಂತೆ, ಭಾಷೆಯನ್ನು ಒಗ್ಗಿಸುವ ಪ್ರಯತ್ನ ಆಗಬೇಕಿದೆ. ಕೆಲವು ಸಣ್ಣ ಪ್ರಯತ್ನಗಳು ಆಗಿವೆ. ಅವುಗಳು ವಿಸ್ತಾರಗೊಂಡು ಜಗತ್ತಿನ ಎಲ್ಲಾ ಜ್ಞಾನಗಳೂ ಕನ್ನಡದಲ್ಲಿಯೇ ದೊರೆಯುವಂತೆ ಆದಾಗ ಮಾತ್ರ ಆಧುನಿಕ ವಿಜ್ಞಾನದ ಹೊಸ ಗಾಳಿಗೆ ಕನ್ನಡವೂ, ಕನ್ನಡದ ಪರಿಸರವೂ ವಿಸ್ತರಿಸಿಕೊಳ್ಳುವುದು ಸಾಧ್ಯ.

ಕನ್ನಡದ ಉಪಭಾಷೆಗಳು ಮತ್ತು ಕನ್ನಡ ಪರಿಸರ

ಕನ್ನಡಕ್ಕೆ ಅನೇಕ ಉಪಭಾಷೆಗಳಿವೆ. ಕರ್ನಾಟಕ ಸರ್ಕಾರವೇ ಗುರುತಿಸಿರುವ ಅನೇಕ ಸೋದರ ಭಾಷೆಗಳು ಕನ್ನಡದಷ್ಟೇ ಪ್ರಾಚೀನವಾದವು ಈ ಎಲ್ಲಾ ಉಪಭಾಷೆಗಳು ಮತ್ತು

ಸೋದರ ಭಾಷೆಗಳ ಪರಿಸರವನ್ನು ಕಾಪಾಡುವುದು ಸಹ ಕನ್ನಡಿಗರ ಮುಖ್ಯ ಕರ್ತವ್ಯಗಳಲ್ಲಿ ಒಂದಾಗಿದೆ. ನಾವು ನಮ್ಮ ಸೋದರ ಭಾಷೆಗಳನ್ನು ಪ್ರೀತಿಯಿಂದ ಗೌರವಿಸದೆ ಉಳಿದಾಗ, ಕನ್ನಡಕ್ಕೆ ಆತುಕೊಳ್ಳುವ ಗೊಡೆಗಳಿಲ್ಲದಂತಹ ಪರಿಸ್ಥಿತಿ ಒದಗಬಹುದು. ಈ ಹಿನ್ನೆಲೆಯಲ್ಲಿ ನಮ್ಮ ನಾಡಿನಲ್ಲಿ ಇನ್ನೂ ಜೀವಂತವಾಗಿರುವ ಕೊಡವ, ತುಳು, ಬ್ಯಾರಿ ಕೊಂಕಣಿ, ಉರ್ದು ಭಾಷೆಗಳಲ್ಲದೆ ಇರವ, ಹಾಲಕ್ಕಿ, ಕೊರಗ, ಹಕ್ಕಿಪಿಕ್ಕಿ, ಲಮಾಣಿ ಮುಂತಾದ ಉಪಭಾಷೆಗಳನ್ನು ಸಹ ಕನ್ನಡಿಗರು ಪೊರೆಯಬೇಕಿದೆ. ಕನ್ನಡದ ಜೀವಂತಿಕೆಗೆ ಈ ಎಲ್ಲಾ ಭಾಷೆಗಳೂ ಕಾರಣ ಎಂಬುದನ್ನು ಮರೆಯದೆ ಮುಂದುವರಿಯಬೇಕಾಗಿದೆ. ಇವುಗಳಲ್ಲಿ ಲಿಪಿ ರಹಿತ ಭಾಷೆಗಳಿಗೆ ಕನ್ನಡ ಲಿಪಿಯನ್ನು ಬಳಸಲು ಪ್ರೇರೇಪಿಸುವ ಮೂಲಕ ಕನ್ನಡದ ಪರಿಸರವನ್ನು ವಿಸ್ತರಿಸಿಕೊಳ್ಳಬೇಕಿದೆ. ಈ ಎಲ್ಲಾ ಸೋದರ ಭಾಷೆಗಳು ಹಾಗೂ ಉಪಭಾಷೆಗಳನ್ನು ಕನ್ನಡ ಕುಟುಂಬದ ಒಳಗಡೆಯೇ ಉಳಿಸಿಕೊಳ್ಳುವ ಮೂಲಕ ಅವುಗಳಲ್ಲಿ ನಿರ್ಜೀವವಾಗುತ್ತಿರುವ ಭಾಷೆಗಳಿಗೆ ಹೊಸ ಜೀವ ಕೊಡಬೇಕಿದೆ.

ಒಟ್ಟಂದದ ನೋಟ

ಕನ್ನಡವೂ ಜಗತ್ತಿನ ಅತ್ಯಂತ ಪ್ರಾಚೀನ ಭಾಷೆಗಳಲ್ಲೊಂದು ಎಂಬ ಭ್ರಮೆಯಲ್ಲಿ ಉಳಿಯುವುದು ಆಧುನಿಕ ಕಾಲಮಾನದಲ್ಲಿ ಅಪಾಯಕಾರಿ ಆಗಬಹುದು. ಈ ಭಾಷೆಯ ಪ್ರಾಚೀನತೆಯನ್ನು ಸಾಬೀತು ಪಡಿಸುವ ಕೆಲಸಗಳ ಜೊತೆಗೆ, ಆಧುನಿಕ ಕಾಲಕ್ಕೆ ಈ ಭಾಷೆಯನ್ನು, ಭಾಷಿಕರನ್ನು ಶ್ರುತಿಗೊಳಿಸುವುದು ಸದ್ಯದ ಪ್ರಧಾನ ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ನಮ್ಮ ಎದುರಿಗೆ ಇರುವ ಎಲ್ಲಾ ಸವಾಲುಗಳನ್ನು ಪರಿಹರಿಸುವ ಇಚ್ಛಾಶಕ್ತಿಯನ್ನು ಎಲ್ಲಾ ಕನ್ನಡಿಗರೂ ಬೆಳೆಸಿಕೊಳ್ಳಬೇಕಿದೆ. ಆ ಮೂಲಕ ಸರ್ಕಾರ ಆಲಸಿಯಾದಾಗ ಎಚ್ಚರಿಸಿ, ಕನ್ನಡದ ಕೆಲಸಗಳು ತ್ವರಿತವಾಗಿ ಆಗುವಂತೆ ಮಾಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಇಲ್ಲವಾದಲ್ಲಿ, ಈಗಾಗಲೇ ವಿಶ್ವಸಂಸ್ಥೆಯು ಹೊರಡಿಸಿರುವ ಸಾಯುತ್ತಿರುವ ಭಾಷೆಗಳ ಪಟ್ಟಿಗೆ ಕನ್ನಡ ಮತ್ತು ಕನ್ನಡದ ಪರಿಸರವೂ ಸೇರಿಹೋಗುತ್ತದೆ ಎಂಬುದನ್ನು ನಾವು ಮರೆಯಬಾರದು.

ಇದಿಷ್ಟೂ ಸದ್ಯಕ್ಕೆ ನನ್ನ ಅರಿವಿನ ಪರಿಧಿಗೆ ನಿಲುಕಿರುವ ವಿವರ. ಇದಲ್ಲದೆಯೂ ಕನ್ನಡದ ಪರಿಸರ ನಿರ್ಮಾಣಕ್ಕೆ ಇನ್ನೂ ಅನೇಕ ತೊಡಕುಗಳಿವೆ. ಅವುಗಳನ್ನು ಈ ನಾಡಿನ ಪ್ರತಿಯೊಬ್ಬ ಕನ್ನಡಿಗನೂ ಸೇರಿಸುತ್ತಾ, ಅವುಗಳ ಪರಿಹಾರಕ್ಕೆ ಮಾರ್ಗೋಪಾಯಗಳನ್ನು ಸಹ ಕಂಡುಕೊಳ್ಳಬೇಕಿದೆ.

ಆಕರಗಳು:

೧. ಕನ್ನಡ ನುಡಿ-ಗಡಿ ಜಾಗೃತಿ ಜಾಥಾದ ವರದಿ.

೨. ಜೋಯಿಡಾ ಗಡಿ ಕನ್ನಡಿಗರ ಸಮಾವೇಶದ ವರದಿ.

೩. ಅರುಹು-ಕುರುಹು ತ್ರೈಮಾಸಿಕದ ಅಕ್ಟೋಬರ್-ಡಿಸೆಂಬರ್ ೨೦೧೦ ಸಂಚಿಕೆ ಹಾಗೂ ಜನವರಿ-ಮಾರ್ಚ್ ೨೦೧೧ ಸಂಚಿಕೆ.

೪. ಪ್ರಜಾವಾಣಿ ದೈನಿಕದ ೬ ಮಾರ್ಚ್ ೨೦೧೧ರ ವಿಶೇಷ ಸಾಪ್ತಾಹಿಕ ಪುರವಣಿ.

೫. ಸಾಧನಾ ಪತ್ರಿಕೆಯ ೨೭ ಮತ್ತು ೩೨ನೇ ಸಂಚಿಕೆಯಲ್ಲಿನ ಲೇಖನಗಳು. ❐

ಸಾಂಸ್ಕೃತಿಕ ಬೃಹತ್ ಕರ್ನಾಟಕ

■ ಡಾ. ಆರ್. ಶೇಷಶಾಸ್ತ್ರಿ

ನಮ್ಮ ದೇಶ ಭರತವರ್ಷ, ಭರತಖಂಡ ಎಂಬ ಅಭಿಧಾನವನ್ನು ಬಹಳ ಮೊದಲಿನಿಂದ ಪಡೆದಿದ್ದರೂ, ಆ ಭೌಗೋಳಿಕ ಪ್ರದೇಶವು ಒಂದು ಆಡಳಿತ ವ್ಯವಸ್ಥೆಗೆ, ಒಂದು ಸಾಂಸ್ಕೃತಿಕ, ಸಾಮಾಜಿಕ ವ್ಯವಸ್ಥೆಗೆ ಒಳಗಾಗಿರಲಿಲ್ಲ ಎಂಬುದು ಸತ್ಯ. ಒಂದೇ ಪ್ರದೇಶ ವಿಭಿನ್ನ ಕಾಲಗಳಲ್ಲಿ, ವಿಭಿನ್ನ ಅರಸು ಮನೆತನಗಳ ಅಧೀನಕ್ಕೆ ಒಳಪಟ್ಟಿತ್ತು. ಅದು ಆಳ್ವಿಕೆಗೆ ಸಂಬಂಧಪಟ್ಟತ್ತೇ ಹೊರತು. ಭಾಷೆ ಮತ್ತು ಸಂಸ್ಕೃತಿಗೆ ಸಂಬಂಧಪಟ್ಟಿದ್ದಲ್ಲ. ಆಳಿದ ಅರಸು ಮನೆತನಗಳು ತಮ್ಮ 'ಅಧಿಕಾರಶಾಹಿ' ವ್ಯವಸ್ಥೆಯ ಮೇಲೆ ನಿಗಾ ವಹಿಸಿದ್ದವೇ ಹೊರತು ಪ್ರಾದೇಶಿಕ ಭಾಷೆ ಮತ್ತು ಸಂಸ್ಕೃತಿಯ ಮೇಲೆ ತಮ್ಮ ಯಾಜಮಾನ್ಯವನ್ನು ತೋರಲಿಲ್ಲ ಎಂಬುದನ್ನು ಗಮನಿಸಬೇಕು. ವಿವಿಧ ಅರಸು ಮನೆತನಗಳು ಬೇರೆ ಬೇರೆ ಧರ್ಮದವರಿಗೆ ಆಶ್ರಯವನ್ನು ಪ್ರೋತ್ಸಾಹವನ್ನು ನೀಡಿದ್ದರೂ, ಆಯಾ ಧರ್ಮಗಳು ಸಾಮಾನ್ಯ ಜನರನ್ನು ಆಕರ್ಷಿಸಿದ್ದರಿಂದ ಪ್ರಚಾರಗೊಂಡವೇ ಹೊರತು ಯಾವ ಅರಸುಮನೆತನದ ಬಲವಂತ ಮಾಘಸ್ನಾನದಿಂದಲೂ (ಇಸ್ಲಾಂ ಧರ್ಮವನ್ನು ಹೊರತುಪಡಿಸಿ) ಅಲ್ಲ. ಇದೇ ರೀತಿ ಯಾವ ಅರಸು ಮನೆತನವೂ (ಟಿಪ್ಪುವನ್ನು ಹೊರತುಪಡಿಸಿ) ಭಾಷೆಯನ್ನು ಜನರ ಮೇಲೆ ಹೇರಲಿಲ್ಲ ಅಥವಾ ಯಾವ ಒಂದು ಭಾಷೆಯನ್ನೂ ತುಳಿಯುವ ಪ್ರಯತ್ನವನ್ನೂ ಮಾಡಲಿಲ್ಲ. ಸಂಸ್ಕೃತ ಭಾಷೆಯನ್ನು ರಾಜರ ಆಸ್ಥಾನಗಳಲ್ಲಿ ಬಳಸಿದರೂ, ಗ್ರಾಮಾಂತರ ಪ್ರದೇಶಗಳಲ್ಲಿ ಶಾಸನಗಳನ್ನು ಹಾಕಿಸುವಾಗ ಆಯಾ ಪ್ರದೇಶದ ಪ್ರಾದೇಶಿಕ ಭಾಷೆಯನ್ನೇ ಉಪಯೋಗಿಸಿದ್ದಾರೆ.



ಇದು ಗಮನಾರ್ಹ. ಈ ದೃಷ್ಟಿಯಿಂದ ನಾವು ಕವಿರಾಜಮಾರ್ಗಕಾರನು ಹೇಳುವ ಕಾವೇರಿಯಿಂದ ಗೋದಾವರಿಯವರೆಗೆ ಕನ್ನಡ ನಾಡು ಇತ್ತು ಎಂಬುದನ್ನು ಪರಿಶೀಲಿಸ ಬೇಕು. ಗೋದಾವರಿಯಿಂದ ಕಾವೇರಿಯವರೆಗೆ ಇದ್ದ ಪ್ರದೇಶದಲ್ಲಿ ಕೇವಲ ಕನ್ನಡ ಭಾಷೆಯೊಂದೇ ಇತ್ತು ಎಂಬುದು ಕವಿರಾಜಮಾರ್ಗಕಾರನ ಅಭಿಪ್ರಾಯವಲ್ಲವೆಂದು ತೋರುತ್ತದೆ. ಅವನ ಪ್ರಕಾರ ಆ ಪ್ರದೇಶದಲ್ಲಿ ಕನ್ನಡ ಭಾಷೆಯನ್ನಾಡುವ ಜನರಿದ್ದರು ಎಂಬುದಾಗಿ ಭಾವಿಸುವುದು ಸಮಂಜಸವೆಂದು ತೋರುತ್ತದೆ. ಇದೇ ಸಂದರ್ಭದಲ್ಲಿ 'ತಿರುಳ್ಗನ್ನಡ' ಪ್ರದೇಶವೊಂದಿದ್ದರೆ, ಕನ್ನಡದ ಹಲವಾರು ಉಪ ಅಥವಾ ಪ್ರಾದೇಶಿಕ ವೈಶಿಷ್ಟ್ಯವುಳ್ಳ ಪ್ರದೇಶಗಳಿದ್ದವು ಎಂಬ ಕವಿರಾಜಮಾರ್ಗಕಾರನ ಅಭಿಪ್ರಾಯವನ್ನು ಕುರಿತು ವಿವರವಾದ ಅಧ್ಯಯನ ನಡೆಯಬೇಕಾಗಿದೆ.

ಎಂ.ಚಿದಾನಂದಮೂರ್ತಿಯವರು ಬೃಹತ್ ಕರ್ನಾಟಕದ ಬಗ್ಗೆ ತುಂಬಾ ವಿವರವಾಗಿ ಮತ್ತು ಅಧಿಕೃತ ದಾಖಲೆಗಳ ಹಿನ್ನೆಲೆಯಲ್ಲಿ ತುಂಬಾ ಸಮರ್ಥವಾಗಿ ವಿಶ್ಲೇಷಿಸಿ ನಿರೂಪಿಸಿದ್ದಾರೆ. ಆದ್ದರಿಂದ ಆ ಬಗ್ಗೆ ಏನು ಹೇಳಿದರೂ ಚರ್ವಿತಚರ್ವಣವೇ ಆಗುತ್ತದೆ. ಈ ಬಗ್ಗೆ ವಿವರಿಸುತ್ತಾ, ಗ್ರಿಯರ್ಸನ್‌ನ ಲಿಂಗ್ವಿಸ್ಟಿಕ್ ಸರ್ವೆ ಆಫ್ ಇಂಡಿಯಾ ಪ್ರಕಾರ ಕನ್ನಡ ಭಾಷೆಯನ್ನಾಡುವ ಪ್ರದೇಶಗಳ ಒಂದು ಸ್ವರೂಪವನ್ನು ನೀಡಿದ್ದಾರೆ. ಅದಕ್ಕಿಂತಲೂ ಹಿಂದೆ ಬ್ರಿಟಿಷರು ೧೮೫೦–೬೦ರ ಸುಮಾರಿನಲ್ಲಿ ಮುಂಬೈ ಪ್ರಾಂತ್ಯದ ಶಾಲಾ ಪಠ್ಯ ಪುಸ್ತಕಗಳಿಗಾಗಿ ತಯಾರುಮಾಡಿದ ನಕಾಶೆಯನ್ನು ನೀಡಿದ್ದಾರೆ. ಆ ಬಗ್ಗೆ ಅವರು ಬರೆಯುತ್ತಾ, "ಬ್ರಿಟಿಷರು ಆ ನಕಾಶೆಯನ್ನು ತೀವ್ರ ಎಚ್ಚರಿಕೆಯಿಂದ ತಯಾರಿಸಿದ್ದರು ಎಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲವಾದರೂ, ವಸ್ತುನಿಷ್ಠ ದೃಷ್ಟಿಯಿಂದ ಲಭ್ಯ ಭಾಷಿಕ ಸಾಮಗ್ರಿಯನ್ನು, ವರದಿಗಳನ್ನು ಪರಿಶೀಲಿಸಿ ತಯಾರಿಸಿದ ಭೂಪಟ ಅದು ಎಂಬುದು ಸ್ಪಷ್ಟ. ಅಂದಿನ (೧೯೦೦) ಕನ್ನಡ ಮಾತನಾಡುವ ಪ್ರದೇಶದ ಒಟ್ಟಾರೆ ಎಂಟು ಜಿಲ್ಲೆಗಳನ್ನು ಇಂದಿನ ಕರ್ನಾಟಕವು ಕಳೆದುಕೊಂಡಿದೆ ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಇದು ಅತ್ಯಂತ ನಿರ್ವಿವಾದ ವಿಷಯ ಮತ್ತು ಶಾಸನ ಇತ್ಯಾದಿ ಎಲ್ಲ ಆಧಾರಗಳೂ ಅದನ್ನು ಸಾಬೀತುಪಡಿಸುತ್ತವೆ" ಎಂಬುದಾಗಿ ಸ್ಪಷ್ಟವಾದ ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಾರೆ. ಈ ರೀತಿ ಕರ್ನಾಟಕವು ಕಳೆದುಕೊಂಡು, ಇಂದು ಆಂಧ್ರದಲ್ಲಿರುವ ಪ್ರಾಂತ್ಯಗಳೆಂದರೆ ಕರ್ನೂಲು, ಅನಂತಪುರ ಮುಂತಾದವು.

ಭಾಷಾವಾರು ಪ್ರಾಂತ್ಯಗಳಾಗಿ ವಿಂಗಡಣೆಯಾಗುವ ಸಂದರ್ಭದಲ್ಲಿ ಕರ್ನಾಟಕ ದವರಿಗೆ ಮೂಡಿದ್ದ 'ಕರ್ನಾಟಕ'ದ ಪರಿಕಲ್ಪನೆಗೆ ಅನುಗುಣವಾಗಿ ನಾವು ಕಳೆದು ಕೊಂಡಿದ್ದೇವೆ ಎಂಬ ಅಭಿಪ್ರಾಯ ಅದು. ಇದೇ ರೀತಿ ತೆಲುಗರು ಮತ್ತು ತಮಿಳರೂ ಸಹ ತಮ್ಮ ಕೆಲವು ಪ್ರದೇಶಗಳು ಬೇರೆಯ ರಾಜ್ಯಗಳಿಗೆ ಹೋಗಿವೆ ಎಂಬುದಾಗಿ ಅಭಿಪ್ರಾಯ ತಳೆದಿರುವುದುಂಟು. ಕನ್ನಡಿಗರಾಗಲೀ, ತೆಲುಗರಾಗಲೀ, ತಮಿಳರಾಗಲೀ, ಮಲೆಯಾಳಿ ಗಳಾಗಲೀ, ಮರಾಠಿಗರಾಗಲೀ ತಾವು ಕಳೆದುಕೊಂಡೆವು ಎಂಬುದಾಗಿ ಅಭಿಪ್ರಾಯಪಟ್ಟು ಗುರುತಿಸುವ ಪ್ರದೇಶಗಳು ಬಹುಮಟ್ಟಿಗೆ ದ್ವಿಭಾಷಾ ಪ್ರದೇಶಗಳಾಗಿವೆ ಎಂಬುದನ್ನು ನಾವು ಗಮನಿಸಬೇಕು. ಈ ಪ್ರದೇಶಗಳಲ್ಲಿನ ಎರಡೂ ಭಾಷೆಯನ್ನಾಡುವ ಜನರ ರಾಜಕೀಯ

ಆರ್ಥಿಕ ಪ್ರಾಬಲ್ಯ ಮತ್ತು ಇತರೆ ಸಾಮಾಜಿಕ ಅಂಶಗಳು ಅವರನ್ನು ಯಾವ ಭಾಷಾವಾರು ಪ್ರಾಂತ್ಯಗಳಲ್ಲಿ ಸೇರಿಸಬೇಕು ಎಂದು ನಿರ್ಧರಿಸಲಾಗಿದೆಯೇ ಹೊರತು, ಕೇವಲ ಅಲ್ಲಿನ ಭಾಷಿಕರ ಸಂಖ್ಯಾದೃಷ್ಟಿಯಿಂದ ವಿಂಗಡಣೆ ಆಗಿಲ್ಲ.

ಸ್ವಲ್ಪ ವಿಷಯಾಂತರವಾದರೂ, ಒಂದು ವಿಷಯವನ್ನು ಓದುಗರ ಗಮನಕ್ಕೆ ತರಬಯಸುತ್ತೇನೆ. ಆಂಧ್ರದ ಕಮ್ಯುನಿಸ್ಟ್ ಹೋರಾಟಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದ ರಾಮಭಟ್ಲ ಕೃಷ್ಣಮೂರ್ತಿಯವರು ತಮ್ಮ 'ಸೊಂತಕಥ' ಎಂಬ ಆತ್ಮಚರಿತ್ರೆಯಲ್ಲಿ ಭಾಷಾವಾರು ಪ್ರಾಂತ್ಯಗಳ ವಿಂಗಡಣೆಯ ಸಂದರ್ಭದಲ್ಲಿ ನಡೆದ ಘಟನೆಯೊಂದನ್ನು ದಾಖಲಿಸಿದ್ದಾರೆ. ಕಮ್ಯುನಿಸ್ಟ್ ಪಕ್ಷ ಆಂಧ್ರದಲ್ಲಿ ಒಂದು ತೆಲುಗು ಪತ್ರಿಕೆಯನ್ನು ಪ್ರಕಟಿಸಲು ನಿರ್ಧರಿಸಿ ಅದಕ್ಕೆ 'ವಿಶಾಲಾಂಧ್ರ' ಎಂಬ ಹೆಸರನ್ನಿಟ್ಟು, ಅದರ ಮೊದಲ ಪುಟದ ಮೇಲೆ ವಿಶಾಲಾಂಧ್ರದ ಭೂಪಟವನ್ನು ಹಾಕಲು ನಿರ್ಧರಿಸಿತು. ಭಾಷಾವಾರು ಪ್ರಾಂತ್ಯಗಳನ್ನು ಆ ಹೊತ್ತಿಗೆ ಇನ್ನೂ ಖಚಿತವಾಗಿ ನಿರ್ಧರಿಸಿರಲಿಲ್ಲ. ಪ್ರತಿಯೊಂದು ಭಾಷೆಯ ಜನರೂ ತಮ್ಮ ಸಾಮ್ರಾಜ್ಯವನ್ನು ವಿಸ್ತಾರವಾಗಿಸಲು ಬಯಸಿದರು. ಸ್ವಾತಂತ್ರ್ಯ ಬಂದ ಹೊಸದು; ಭಾಷಾಪರವಾಗಿ ಒಂದಾದರೆ ಒಂದು ಉನ್ನತವಾದ ಸಂಸ್ಕೃತಿಯನ್ನು ಸಾಧಿಸಬಹುದೆಂಬ ಕನಸು ಕಂಡರು. ಆ ಕನಸಿನ ಹಿಂದೆ ಉತ್ಸಾಹವಿತ್ತು, ಪ್ರಾಮಾಣಿಕತೆ ಇತ್ತು. ಆದರೆ ಸಾಕಷ್ಟು ಚಿಂತನೆ, ಚರ್ಚೆಗಳಿರಲಿಲ್ಲ. ಆ ಸಂದರ್ಭದಲ್ಲಿ ತಾವು ರಚಿಸಿದ ವಿಶಾಲಾಂಧ್ರ ಭೂಪಟದ ತಯಾರಿಯ ಬಗ್ಗೆ ಅವರು ಈ ರೀತಿ ಬರೆಯುತ್ತಾರೆ. "ವಿಶಾಲಾಂಧ್ರದ ಬಗ್ಗೆ ಅಧಿಕಾರಯುತವಾಗಿ ಮಾತಾಡಬಲ್ಲವರು ಪುಚ್ಚಲಪಲ್ಲಿ ಸುಂದರಯ್ಯನವರು ಮಾತ್ರ. ಒಂದು ಕೊಠಡಿಯಲ್ಲಿ ಭಾರತ ದೇಶದ ಭೂಪಟ ಗೋಡೆಗೆ ಇಳಿಬಿದ್ದಿತ್ತು. ಪೆನ್ಸಿಲು, ಕಾಗದ ತೆಗೆದುಕೊಂಡು ನಾನು, ಸುಂದರಯ್ಯನವರು ಆ ಕೊಠಡಿಗೆ ಹೋದೆವು. ವಿಶಾಲಾಂಧ್ರದ ವ್ಯಾಪ್ತಿಗೆ ಯಾವ ಯಾವ ಭಾಗಗಳು ಸೇರುತ್ತವೆ ಎಂಬುದಾಗಿ ಹೇಳುತ್ತಾ ಹೋದರು. ನಾನು ಎಲ್ಲವನ್ನು ಗುರುತುಹಾಕಿಕೊಳ್ಳುತ್ತಿದ್ದೆ. ಈಗ ತಮಿಳುನಾಡಿನಲ್ಲಿರುವ ಆಂಧ್ರದ ಜಿಲ್ಲೆಗಳು, ಒರಿಸ್ಸಾದ ಗಂಜಾಂ, ಬುರಾಂಪುರ, ಕೋಲಾಪಟ್ಟಿ ಜಿಲ್ಲೆಗಳು, ಮಧ್ಯಪ್ರದೇಶದ ಬಸ್ತಾರು, ಚಾಂದಾ ಜಿಲ್ಲೆಗಳು, ಕರ್ನಾಟಕದ ತುಮಕೂರು, ಸಿರುಗುಪ್ಪ, ರಾಯಚೂರು ಪ್ರದೇಶಗಳು, ಹೈದರಾಬಾದ್ ರಾಜ್ಯದೊಳಗಿನ ತೆಲಂಗಾಣ ಜಿಲ್ಲೆಗಳು, ಎಲ್ಲವನ್ನೂ ಸೇರಿಸಿದರೆ ಅದು ವಿಶಾಲಾಂಧ್ರವಾಗುತ್ತದೆ. ಆ ರೀತಿಯಲ್ಲಿ ಭೂಪಟವನ್ನು ತಯಾರು ಮಾಡಯ್ಯ" ಎಂದು, 'ಅರ್ಥವಾಯಿತೇ' ಎಂಬಂತೆ ನನ್ನತ್ತ ನೋಡಿದರು. ನಮ್ಮದು ರಾಷ್ಟ್ರೀಯ ಪಕ್ಷವಲ್ಲವೆ? "ಒರಿಸ್ಸಾ ಮತ್ತು ಕರ್ನಾಟಕದ ಕಾಮ್ರೇಡ್‌ಗಳೊಂದಿಗೆ ಚರ್ಚಿಸಿದಿರಾ?" ಎಂದೆ. "ಅದೆಲ್ಲಾ ನಿನಗೆ ಅನಗತ್ಯ. ನಾನು ಹೇಳಿದಂತೆ ಭೂಪಟವನ್ನು ತಯಾರಿಸು" ಎಂದರು. ಆಗ "ನಾನು ಕಮ್ಯೂನಿಸ್ಟ್. ನಾನು ಮಾಡಲಿರುವ ಕೆಲಸದ ವಿವರವನ್ನು ತಿಳಿದುಕೊಳ್ಳುವ ಹಕ್ಕು ನನಗಿದೆ. ಹಾಗಿಲ್ಲದಿದ್ದರೆ ನಿಮ್ಮ ಭೂಪಟವನ್ನು ನೀವೇ ಬರೆದುಕೊಳ್ಳಿರಿ" ಎಂದು ಪೆನ್ಸಿಲ್ ಮತ್ತು ರಬ್ಬರನ್ನು ಬಿಸಾಡಿದೆ. ಸುಂದರಯ್ಯನವರು ಕೂಡಾ ಸಿಟ್ಟುಮಾಡಿಕೊಂಡು ಬಿರುಸಾಗಿ ನಾಲ್ಕು ಹೆಜ್ಜೆ ಮುಂದಿಟ್ಟರು. ಮತ್ತೆ ಅಲ್ಲಿಂದ ನಗುತ್ತಾ ಹಿಂದಿರುಗಿದರು. ನಾನು ಬಿಸಾಡಿದ್ದ ಪೆನ್ಸಿಲ್ ಮತ್ತು ರಬ್ಬರನ್ನು ನನ್ನ ಕೈಗೆತ್ತಿಕೊಟ್ಟು

"ಕಾಮ್ರೇಡ್, ಅದನ್ನು ನಾನು ನೋಡಿಕೊಳ್ಳುತ್ತೇನೆ" ಎಂದು ನಗುತ್ತಾ ನನಗೆ ಹೇಳಿದರು. ನಾನೂ ನಗುತ್ತಾ "ಹಾಗಾದರೆ ಎರಡು, ಮೂರು ಭೂಪಟಗಳನ್ನು ನಾನು ಮತ್ತೆ ಬರೆಯುತ್ತೇನೆ ಬಿಡಿ" ಎಂದೆ.

ಕಮ್ಯುನಿಸ್ಟ್ ನಾಯಕರು ನಗುವುದಿಲ್ಲ. ನಗಬಾರದು. ಅವರು ಎದುರುಗಡೆ ನಗುವುದಿಲ್ಲ. ಹಾಗೇನಾದರೂ ನಗುತ್ತಾ ಮಾತನಾಡಿದರೆ ಅದು ಸುದ್ದಿಯಾಗುತ್ತದೆ. ಅಂದಿನ ನಮ್ಮ ಸಂಭಾಷಣೆ ಸುದ್ದಿಯೇ ಮತ್ತೆ. ಆದರೆ ಅದೆಲ್ಲೂ ಪ್ರಕಟವಾಗಲಿಲ್ಲ; ಅಷ್ಟೇ ವ್ಯತ್ಯಾಸ. ಮುಂದಿನ ವಾರ ಸುಂದರಯ್ಯನವರು ದೆಹಲಿಗೆ ಹೋದರು; ಬಂದರು. ನನ್ನನ್ನು ಕರೆದು ಒರಿಸ್ಸಾದ ಮೂರು ಜಿಲ್ಲೆಗಳನ್ನು ವಿಶಾಲಾಂಧ್ರ ಭೂಪಟದಿಂದ ತೆಗೆದುಹಾಕಿ ಹೊಸ ಭೂಪಟ ಬರೆಯುವಂತೆ ಸೂಚಿಸಿದರು. ಅದರಂತೆ ಭೂಪಟ ಸಿದ್ಧಪಡಿಸಿದೆ. ಆ ಭೂಪಟವನ್ನು ಅವರಿಗೆ ನೀಡುತ್ತಾ, "ಮುಂದಿನ ವಾರ ಇನ್ನೊಂದನ್ನು ಬರೆಯುತ್ತೇನೆ ಬಿಡಿ" ಎಂದು ನಗುತ್ತಾ ಹೇಳಿದೆ. ಅವರು ಮತ್ತೆ ದೆಹಲಿಗೆ ಹೋದರು. ಕರ್ನಾಟಕದ ಮೂರು ಜಿಲ್ಲೆಗಳೊಂದಿಗೆ ಬಳ್ಳಾರಿ ಕೂಡಾ ಹೋಯಿತು. ಬಸ್ತಾರು ಮತ್ತು ಚಾಂದಾಗಳೂ ಹೋದವು.

ಮೂರು ವಾರಗಳು, ಮೂರು ವಿಭಿನ್ನ ರೂಪಗಳಲ್ಲಿ ಮೂರು ವಿಶಾಲಾಂಧ್ರ ಭೂಪಟಗಳು ಮುದ್ರಣಗೊಂಡವು. ಮೇಲಿನ ನಿದರ್ಶನವು ನಮ್ಮ ಭಾಷಾವಾರು ರಾಜ್ಯಗಳ ವಿಂಗಡಣೆಯು ಎಷ್ಟು ಅವ್ಯವಸ್ಥಿತ ರೀತಿಯಲ್ಲಿ ರೂಪುಗೊಂಡಿತು ಎಂಬುದನ್ನು ಪ್ರತಿನಿಧಿಸುವಂತೆ ನನಗೆ ತೋರುತ್ತದೆ. ಈ ಹಿಂದೆ ನಾನು ಹೇಳಿದಂತೆ ಎರಡು ರಾಜ್ಯಗಳ ನಡುವಿನ ವಿವಾದಕ್ಕೆ ಒಳಗಾಗಿರುವ ಪ್ರದೇಶಗಳು ನಿಸ್ಸಂಶಯವಾಗಿ ದ್ವಿಭಾಷಾ, ಇಲ್ಲವೆ ತ್ರಿಭಾಷಾ ಪ್ರದೇಶಗಳೇ ಆಗಿವೆ.

ತೆಲುಗು ಕವಿ ಗುರುಜಾಡ ಅಪ್ಪಾರಾವ್ "ದೇಶವೆಂದರೆ ಮಣ್ಣದಲ್ಲ. ದೇಶವೆಂದರೆ ಜನಗಳೆಲ್ಲಾ" ಎಂಬುದಾಗಿ ಹೇಳುತ್ತಾರೆ. ಈ ಹಿನ್ನೆಲೆಯಲ್ಲಿ ಎಂ.ಚಿದಾನಂದಮೂರ್ತಿ ಅವರು ರಚಿಸಿರುವ 'ಬೃಹತ್ ಕರ್ನಾಟಕ'ವನ್ನು ನಾವು ಬದಲಾದ ಈ ರಾಜಕೀಯ ಆಡಳಿತಾತ್ಮಕ ವ್ಯವಸ್ಥೆಯಲ್ಲಿ ಹೇಗೆ ಉಳಿಸಿಕೊಳ್ಳಬೇಕು ಎಂಬುದರತ್ತ ಗಮನ ಹರಿಸುವುದು ಉತ್ತಮ. ಅದೂ ಈಗಾಗಲೇ ಒಂದಾಗಿರುವ ಭಾಷಾವಾರು ಪ್ರಾಂತ್ಯಗಳನ್ನು ಅಧಿಕಾರದ ಆಮಿಷಕ್ಕಾಗಿ ಒಡೆಯುವ ಸಂದರ್ಭದಲ್ಲಿಯಾದರೂ ವಿವೇಚನೆ ನಡೆಸಬೇಕಾಗಿದೆ. ನನ್ನ ಅನುಭವಕ್ಕೆ ಬಂದ ಒಂದು ಕಠಿಣ ಸತ್ಯವೆಂದರೆ ಇಂದೂ ಮುಂದೂ ಕನ್ನಡ ಉಳಿದಿರುವುದು, ಉಳಿಯುವುದೂ ಕೇವಲ ಗ್ರಾಮೀಣ ಪ್ರದೇಶ ಗಳಲ್ಲಿರುವ ಜನಗಳಿಂದಲೇ ಎಂಬುದು.

ಭಾಷೆಯೆಂಬುದು ಒಂದು ಮತದಂತೆ, ಒಂದು ಧರ್ಮದಂತೆ; ನಾವು ಅದರಿಂದ ಸಂಪೂರ್ಣವಾಗಿ ಬೇರೆಯಾಗಲಾರೆವು. ಸುಧಾರಣೆಗಳನ್ನು ತರಬಹುದು. ಕೆಲವೊಮ್ಮೆ ಮತಾಂತರಗೊಂಡಂತೆ ನಿಷ್ಠೆಯನ್ನು ಬದಲಾಯಿಸಬಹುದು. ಆದರೆ ಶತಶತಮಾನ ಗಳಿಂದ ಬಳಸುತ್ತಾ ಬಂದ, ಅನುಸರಿಸುತ್ತಾ ಬಂದ ಭಾಷೆ ಮತ್ತು ಧರ್ಮಗಳ ಕೆಲವಾರು ಅಂಶಗಳು ನಮ್ಮನ್ನು ಬಿಟ್ಟುಹೋಗುವುದಿಲ್ಲ.

ಆಂಧ್ರಪ್ರದೇಶಕ್ಕೆ ಸೇರಿಹೋದ ಮಾತ್ರಕ್ಕೆ ಆಂಧ್ರದಲ್ಲಿರುವ ಕನ್ನಡ ಮಾತೃಭಾಷೆಯ ಜನ ತಮ್ಮ ಕನ್ನಡ ಭಾಷೆಯನ್ನು ಮರೆತಿಲ್ಲ. ವ್ಯವಹಾರ ದೃಷ್ಟಿಯಿಂದ, ವ್ಯವಹಾರದ ಅನುಕೂಲಕ್ಕಾಗಿ ತೆಲುಗು ಭಾಷೆಯನ್ನು ಕಲಿತಿರಬಹುದೇ ಹೊರತು, ಅವರು ತಮ್ಮ ಮಾತೃಭಾಷೆಯನ್ನು ಸಂಪೂರ್ಣವಾಗಿ ಬಿಟ್ಟುಕೊಟ್ಟಿಲ್ಲ.

ಒಂದು ನಿದರ್ಶನದಿಂದ ಮೇಲಿನ ಅಂಶವನ್ನು ಸ್ಪಷ್ಟಪಡಿಸುತ್ತೇನೆ. ಅನಂತಪುರದ ಮಡಕಶಿರಾ ತಾಲ್ಲೂಕಿನಲ್ಲಿ ಶೇಕಡ ತೊಂಭತ್ತರಷ್ಟು ಜನ ಕನ್ನಡ ಮಾತೃಭಾಷೆಯವರು. ಅವರು ಚುನಾವಣೆಯ ಸಂದರ್ಭದಲ್ಲಿ ಹೊರಡಿಸುವ ಕರಪತ್ರಗಳು ತೆಲುಗು ಲಿಪಿಯಲ್ಲಿ ಕನ್ನಡ ಭಾಷೆಯಲ್ಲಿರುತ್ತವೆ. ಈ ಪ್ರದೇಶದ ಮಾಧ್ವರು ಮತ್ತು ವೀರಶೈವರು ತೆಲುಗು ಲಿಪಿಯಲ್ಲಿ ಕನ್ನಡ ಭಾಷೆಯಲ್ಲಿಯೇ ಮದುವೆಯ ಕರೆಯೋಲೆಗಳನ್ನು ಮುದ್ರಿಸುತ್ತಾರೆ. ಇದೇ ರೀತಿಯ ನಿದರ್ಶನಗಳನ್ನು ನಾವು ಯಾವುದೇ ದ್ವಿಭಾಷಾ ಪ್ರದೇಶಗಳಲ್ಲಿ ಕಾಣಬಹುದು. ದಾಸ ಸಾಹಿತ್ಯದ ಭಾಷೆ ಕನ್ನಡವೇ ಆಗಿರುವುದರಿಂದ ಆಂಧ್ರದಲ್ಲಿ ಕರ್ನಾಟಕಕ್ಕಿಂತಲೂ ಜೀವಂತವಾಗಿ ದಾಸ ಸಾಹಿತ್ಯ ಪ್ರಚಲಿತದಲ್ಲಿದೆ. ಬಹುಪಾಲು ಆಂಧ್ರದಲ್ಲಿ ಈ ದಾಸ ಸಾಹಿತ್ಯವನ್ನು ಮಾಧ್ವಮತದವರು ಇಂದಿಗೂ ಹಾಡುತ್ತಾರೆ. ತಿರುಪತಿ ತಿರುಮಲ ದೇವಾಲಯದ ದಾಸ ಸಾಹಿತ್ಯ ಪ್ರಾಜೆಕ್ಟ್‌ನವರ ಪ್ರೋತ್ಸಾಹದಿಂದಾಗಿ ಇಡೀ ಆಂಧ್ರದಲ್ಲಿ ಕುಲ, ಮತ ಬೇಧವಿಲ್ಲದೆ ಹರಿದಾಸರ ಸಂಕೀರ್ತನೆಗಳನ್ನು ಮೈದುಂಬಿ ಹಾಡಿ ತಾದಾತ್ಮ್ಯ ಪಡೆಯುತ್ತಾರೆ. ಕನ್ನಡ ಮಾತೃಭಾಷೆಯಲ್ಲದಿದ್ದರೂ, ಇಂದಿಗೂ ಮನೆಗಳಲ್ಲಿ ಮಾತ್ರ ಕನ್ನಡ ಮಾತನಾಡುವ ಆಂಧ್ರದ ಕುರುಬ ಜನಾಂಗದವರು ಕನಕದಾಸರನ್ನು ತಮ್ಮ ಸಾಂಸ್ಕೃತಿಕ ನಾಯಕನನ್ನಾಗಿ ಸ್ವೀಕರಿಸಿ ಹಲವಾರು ಕಡೆ ಕನಕದಾಸರ ವಿಗ್ರಹಗಳನ್ನು ಸ್ಥಾಪಿಸಿದ್ದಾರೆ. ಕನಕದಾಸರ ಸಂಕೀರ್ತನೆಗಳು ಇವರ ನಾಲಿಗೆಯ ಮೇಲೆ ನರ್ತಿಸುತ್ತವೆ. ಅವು ತಮಗೆ ಅರ್ಥವಾಗಬೇಕು ಮತ್ತು ತಮ್ಮೊಂದಿಗಿನ ಇತರ ಸಮಾಜದವರಿಗೂ ಅರ್ಥವಾಗಬೇಕು ಎಂಬ ಉದ್ದೇಶದಿಂದ ಕನಕದಾಸರ ಜೀವನ ಚರಿತ್ರೆಯನ್ನು, ಅವರ ಸಂಕೀರ್ತನೆಗಳ ತೆಲುಗು ಅನುವಾದವನ್ನು ಪ್ರಕಟಿಸಲು ಯಾವುದೇ ಸರ್ಕಾರೀ ಸಂಸ್ಥೆ ಪ್ರಾರಂಭಿಸುವ ಮುನ್ನ ಅನಂತಪುರದ ಶ್ರೀ ಚೆರುವು ನಾರಾಯಣ ರೆಡ್ಡಿಯವರು ಪ್ರಕಟಿಸುವ, ಹಾಡುಗಳನ್ನು ಹಾಡಿಸಿ ಜನಪ್ರಿಯಗೊಳಿಸುವ ಪ್ರಯತ್ನವನ್ನು ಮಾಡಿದ್ದಾರೆ. ಆಂಧ್ರದ ಹಲವಾರು ಕಡೆಗಳಲ್ಲಿ ಬೀರಪ್ಪನನ್ನು ಆರಾಧಿಸುವ ಕುರುಬ ಜನಾಂಗದವರಲ್ಲಿ ಕೆಲವರಿಗೆ ಕನ್ನಡ ಭಾಷೆಯೇ ಬಾರದೇ ಹೋದರೂ ಅವರು ಹಾಡುವ ಬೀರೇದೇವರ ಪದಗಳು ಕನ್ನಡದಲ್ಲಿಯೇ ಇವೆ ಎಂಬುದು ಗಮನಾರ್ಹ.

ವೀರಶೈವರಿಗೆ, ಆರಾಧ್ಯ ಬ್ರಾಹ್ಮಣರನ್ನು ಸ್ವಲ್ಪಮಟ್ಟಿಗೆ ಹೊರತುಪಡಿಸಿ, ಕನ್ನಡವೇ ಮಾತೃಭಾಷೆಯಾಗಿದ್ದು, ಹೊರಗಡೆ ತೆಲುಗನ್ನು ವ್ಯವಹಾರಭಾಷೆಯಾಗಿ ಉಪಯೋಗಿಸು ತ್ತಿದ್ದಾರೆ. ಆಂಧ್ರಪ್ರದೇಶದ ಒಳಗಡೆ ಇರುವ ಕನ್ನಡ ಜಾನಪದ ಸಂಗ್ರಹ ಎಷ್ಟು ಮಾತ್ರವೂ ನಡೆದಿಲ್ಲ. ನನ್ನ ವಿದ್ಯಾರ್ಥಿಯೊಬ್ಬರು ಕೇವಲ ಆದೋನಿ ಪ್ರಾಂತ್ಯದ ಮಾಧ್ವ ಮಹಿಳೆಯರ ಸಂಪ್ರದಾಯದ ಹಾಡುಗಳನ್ನು ಸುಮಾರು ಒಂದು ಸಾವಿರಕ್ಕೂ ಮಿಗಿಲಾಗಿ ಸಂಗ್ರಹಿಸಿ ವಿಶ್ಲೇಷಿಸಿದ್ದಾರೆ. ಹಾಗೆಯೇ ಮಡಕಶಿರಾ, ಉರುವಕೊಂಡ, ಕಲ್ಯಾಣದುರ್ಗಗಳಲ್ಲಿನ

ಜಾನಪದ ಕಲಾರೂಪಗಳ ಬಗ್ಗೆ ಸಿ.ಶಿವಣ್ಣ ಎಂಬುವವರು ಅಪಾರವಾದ ಕೆಲಸ ಮಾಡಿದ್ದಾರೆ. ಈ ದಿಸೆಯಲ್ಲಿ ಆಗಬೇಕಾದ ಕೆಲಸ ಇನ್ನೂ ಇದೆ. ಇಲ್ಲಿಯ ಜಾನಪದದ ಒಂದು ವೈಶಿಷ್ಟ್ಯವೆಂದರೆ ಒಂದೇ ಹಾಡು ತೆಲುಗು ಮತ್ತು ಕನ್ನಡ ಭಾಷೆಗಳಲ್ಲಿರುವುದು. ಪ್ರಸಿದ್ಧವಾದ ಕನ್ನಡದ ಗೋವಿನ ಹಾಡು ಕಲ್ಯಾಣದುರ್ಗ ಪ್ರಾಂತ್ಯದಲ್ಲಿ ಅದೇ ಛಂದೋರೂಪದಲ್ಲಿ ತೆಲುಗಿನಲ್ಲಿರುವುದು ವಿಶೇಷ. ಆಂಧ್ರದೇಶದಲ್ಲಿದ್ದರೂ, ಕನ್ನಡದ ಜನ ಹಲವಾರು ಜಾನಪದ ಹಬ್ಬಗಳನ್ನೂ, ಅಡಿಗೆಗಳನ್ನೂ ಉಳಿಸಿಕೊಂಡಿದ್ದಾರೆ.

ಭಾಷಾ ದೃಷ್ಟಿಯಿಂದಲೂ ಆಂಧ್ರದಲ್ಲಿರುವ ಕನ್ನಡಿಗರ ಉಪಭಾಷೆಗಳು ಅಧ್ಯಯನಾರ್ಹವಾಗಿವೆ. ಹಲವು ಕಡೆ ಕನ್ನಡ ಭಾಷೆ ತೆಲುಗಿನ ಮೇಲೆ ಪ್ರಭಾವವನ್ನು ಬೀರಿದೆ. ಹಾಗೆಯೇ ತೆಲುಗಿನ ಪ್ರಭಾವವನ್ನು ಹೊಂದಿರುವ ಕನ್ನಡ ಉಪಭಾಷೆಗಳನ್ನೂ ಗುರುತಿಸಬಹುದು. ನಿಜಾಮಾಬಾದ್‌ನಂತಹ ಪ್ರದೇಶದಲ್ಲಿ ತೆಲುಗು-ಕನ್ನಡ-ಮರಾಠಿ, ಈ ಮೂರೂ ಭಾಷೆಗಳನ್ನು ಮಾತನಾಡುವ ಜನರಿದ್ದಾರೆ. ಈ ಮೂರೂ ಭಾಷೆಗಳ ಮೇಲೆ ಉರ್ದು ಭಾಷೆ ತನ್ನ ದಟ್ಟವಾದ ಪ್ರಭಾವವನ್ನು ಬೀರಿದ್ದರೂ. ಆ ಮೂರೂ ಭಾಷೆಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು, ಜನರ ನಾಲಿಗೆಯ ಮೇಲೆ ಇಂದಿಗೂ ನಲಿಯುತ್ತಿವೆ.

ಕರ್ನಾಟಕ ಸರ್ಕಾರ, ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕದ ವಿವಿಧ ಅಕಾದೆಮಿಗಳು ವಿಶ್ವವಿದ್ಯಾಲಯಗಳು ತಮ್ಮ ಕನ್ನಡ ಕ್ಷೇತ್ರವನ್ನು ಕೇವಲ ಇಂದಿನ ಭೌಗೋಳಿಕ ಕರ್ನಾಟಕಕ್ಕೆ ಸೀಮಿತಗೊಳಿಸಿಕೊಳ್ಳುವುದಕ್ಕಿಂತಲೂ, ಬೃಹತ್ ಕರ್ನಾಟಕದ ವ್ಯಾಪ್ತಿಗೆ ತಂದರೆ ಹೊರನಾಡಿನಲ್ಲಿ ಕನ್ನಡ, ಕನ್ನಡ ಸಂಸ್ಕೃತಿ ಉಳಿಯುತ್ತದೆ. ಆದೋನಿ, ಮಡಕಶಿರಾ ಮುಂತಾದ ದ್ವಿಭಾಷಾ ಪ್ರದೇಶಗಳಲ್ಲಿರುವ ಜಾನಪದ ಕಲಾವಿದರನ್ನು ಗುರುತಿಸುವ ಮತ್ತು ಗೌರವಿಸುವ ಕೆಲಸ ಆಗಬೇಕಾಗಿದೆ.

ತಮಿಳುನಾಡಿನ ಹೊಸೂರು ಮತ್ತು ಕೃಷ್ಣಗಿರಿ ತಾಲ್ಲೂಕುಗಳಲ್ಲಿ ಇಂದಿಗೂ ತೆಲುಗು ಕನ್ನಡ ಮಾತೃಭಾಷೆಯ ಜನರೇ ಇದ್ದಾರೆ. ಇತ್ತೀಚೆಗೆ ಆ ಪ್ರದೇಶದ ತೆಲುಗರು ತಮ್ಮ ಉಪಭಾಷೆಯಲ್ಲಿ ಸಾಹಿತ್ಯ ರಚನೆ ಮಾಡುತ್ತಾ, ತಮ್ಮ ತೆಲುಗನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ. ಸ್ವಾರಸ್ಯದ ಸಂಗತಿಯೆಂದರೆ, ಈ ತೆಲುಗಿನಲ್ಲಿ ಕನ್ನಡ ಭಾಷೆಯ ದಟ್ಟವಾದ ಪ್ರಭಾವವನ್ನು ಕಾಣಬಹುದೇ ಹೊರತು, ತಮಿಳು ಭಾಷೆಯ ಪ್ರಭಾವ ಎಳ್ಳಷ್ಟೂ ಇಲ್ಲ. ಆ ಪ್ರದೇಶದ ತೆಲುಗು ಲೇಖಕರೆಲ್ಲಾ ವೃತ್ತಿಯಿಂದ ರೈತರು. ಕೆಲವರು ಮಾತ್ರ ಪ್ರಾಥಮಿಕ ಶಾಲೆಯ ಅಧ್ಯಾಪಕರು. ಇವರಲ್ಲಿ ತುಂಬಾ ಪ್ರಸಿದ್ಧನಾದ ಲೇಖಕ ಒಂದು ಹೋಟೆಲ್‌ನಲ್ಲಿ ರೂಂಬಾಯ್. ಅವರ ಪ್ರಯತ್ನವನ್ನು ತೆಲುಗು ಪತ್ರಿಕೆಗಳು ಪ್ರೋತ್ಸಾಹಿಸಿವೆ. ಅವರ ಬಹುಪಾಲು ಕಥೆಗಳು ಜನಪ್ರಿಯವೂ ಆಗಿವೆ. ಅವುಗಳ ಭಾಷೆಯನ್ನು ಗಮನಿಸಿದ ಮೇಲೆ ನನಗೆ ಆಸಕ್ತಿ ಮೂಡಿ ಅವರೊಂದಿಗೆ ಸ್ನೇಹ ಬೆಳೆಸಿದೆ. ಅವರ ಮಾತೃಭಾಷೆ ಕನ್ನಡವಲ್ಲ; ಕನ್ನಡ ಮಾತೃಭಾಷೆಯಲ್ಲದವರ ಭಾಷೆಯಲ್ಲಿ ಶೇಕಡ ಇಪ್ಪತ್ತೈದರಷ್ಟು ಕನ್ನಡ ಪದಗಳಿವೆ. ಅವರಿಗೆ ಅದು ಕನ್ನಡ ಪದ ಎಂಬುದರ ಅರಿವೇ ಇಲ್ಲ.

ಈ ಸಂದರ್ಭದಲ್ಲಿ ಕನ್ನಡದ ಕುಂ.ವೀ. ಅವರನ್ನು ಸ್ಮರಿಸಬೇಕು. ಹಟಕ್ಕೆ ಬಿದ್ದು ಆಂಧ್ರದ ಕನ್ನಡ ಪ್ರದೇಶಗಳಲ್ಲಿ ಪ್ರಾಥಮಿಕ ಶಾಲೆಯ ಅಧ್ಯಾಪಕರಾಗಿ ಒಳ್ಳೆಯ ಹೆಸರನ್ನು

ಪಡೆದುದಲ್ಲದೆ, ಅಲ್ಲಿನ ಜನಭಾಷೆಯಲ್ಲಿಯೇ ಆ ಜನರ ಜೀವನವನ್ನು ನಿರೂಪಿಸಿ ಕನ್ನಡದ ಶ್ರೇಷ್ಠ ಲೇಖಕರಾಗಿದ್ದಾರೆ.


ಹೊಸೂರು ಪ್ರದೇಶದ ತೆಲುಗು ಲೇಖಕರು ಮೂಡಿ ಬಂದಂತೆ, ಆ ಪ್ರದೇಶದಿಂದ ಅಂತಹ ಬೃಹತ್ ಭಾಷಿಕ ಕರ್ನಾಟಕದ ವಿವಿಧ ಭಾಗಗಳಿಂದ ಕನ್ನಡ ಲೇಖಕರು ಮೂಡಿಬಂದರೆ ಕನ್ನಡ ಭಾಷೆಯ ವಿಶ್ವದರ್ಶನವಾಗುತ್ತದೆ.

ಈಗಾಗಲೇ ವ್ಯಾವಹಾರಿಕ ಕಾರಣಗಳಿಂದ, ಕ್ರಮೇಣ ಇಲ್ಲಿ ಕನ್ನಡ ಕರಗುತ್ತಾ ಬಂದಿದ್ದು, ಜನಪದರಲ್ಲಿ ತನ್ನ ಬಲವಾದ ಅಸ್ತಿತ್ವವನ್ನು ಉಳಿಸಿಕೊಂಡು ಉಸಿರಾಡುತ್ತಿದೆ. ಉದ್ಯೋಗವನ್ನರಸಿ ಹೊರ ರಾಜ್ಯಗಳಿಗೆ ಹೋಗಿ ನೆಲೆಸಿದ ಕನ್ನಡಿಗರು ತಮ್ಮ ಸಂಘಟನಾ ಶಕ್ತಿಯಿಂದ ಕನ್ನಡತನವನ್ನು ಮೆರೆಸುವುದು, ಬೆಳೆಸುವುದು, ಉಳಿಸುವುದು ಬೇರೆ. ನೆಲಮಕ್ಕಳಾಗಿ ಶತಶತಮಾನಗಳಿಂದ ಕನ್ನಡ ಭಾಷೆ, ಸಂಸ್ಕೃತಿಗಳನ್ನು ತಮ್ಮ ಜೀವನದ ಅವಿಭಾಜ್ಯ ಅಂಶವನ್ನಾಗಿಸಿಕೊಂಡಿರುವ ಕನ್ನಡಿಗರು ಬೇರೆ. ರಾಜ್ಯಭಾಷೆಯೊಂದಿಗೆ ರಾಜಿಯಾಗುತ್ತಾ, ಅದರಲ್ಲಿಯೂ ನೈಪುಣ್ಯವನ್ನು ಸಾಧಿಸುತ್ತಾ, ತಮ್ಮ ಸ್ವಂತಿಕೆಯನ್ನು ಮೆರೆಯುವ ಜನರಿರುವ ಬೃಹತ್ ಕರ್ನಾಟಕದ ಕಲ್ಪನೆ ಮೂಡಬೇಕಾಗಿದೆ. ಅಂಥ ಸಾಂಸ್ಕೃತಿಕ ಕರ್ನಾಟಕವನ್ನು ಯಾರೂ ಅಲುಗಾಡಿಸಲಾರರು. ಅಂಥ ಕರ್ನಾಟಕವು ಭಾರತೀಯ ಸಮಾಜದಲ್ಲಿ ಒಂದು ಸೌಹಾರ್ದಯುತ ವಾತಾವರಣವನ್ನು ನಿರ್ಮಿಸುತ್ತದೆ. ಸ್ಥಾವರಕ್ಕಳಿವುಂಟು; ಜಂಗಮಕ್ಕಳಿವಿಲ್ಲ.

ಆಕರ ಗ್ರಂಥಗಳು:

೧. ಡಾ. ಎಂ.ಚಿದಾನಂದಮೂರ್ತಿ, ಭಾಷಿಕ ಬೃಹತ್ ಕರ್ನಾಟಕ, ಸಪ್ನಾ ಬುಕ್ ಹೌಸ್ ಬೆಂಗಳೂರು, ೨೦೦೭

೨. ರಾಮಭಟ್ಲ ಕೃಷ್ಣಮೂರ್ತಿ, ಸೊಂತ ಕಥ, ಮೇದಿ ಹೌಸ್ ಪಬ್ಲಿಕೇಷನ್ಸ್, ಹೈದರಾಬಾದ್.




ಸ್ಥಳೀಯರಿಗೆ ಉದ್ಯೋಗ : ರಾಷ್ಟ್ರೀಯ ನೀತಿ

■ ಡಾ. ಮುಖ್ಯಮಂತ್ರಿ ಚಂದ್ರು

ಬಹುಭಾಷೆ, ಬಹುಸಂಸ್ಕೃತಿ, ಬಹುವಿಧಾನಗಳ ಜೀವನ ಪದ್ಧತಿಯಿಂದ ಹಾಗೂ ಅಲ್ಲಲ್ಲಿನ ಭೌಗೋಳಿಕ ಮತ್ತು ಪ್ರಾಕೃತಿಕ ಸನ್ನಿವೇಶಗಳಿಂದ ಪ್ರಪಂಚದಾದ್ಯಂತ ವಿವಿಧ ಜನವರ್ಗಗಳು ಸೃಷ್ಟಿಯಾಗಿವೆ. ಆಯಾ ಪ್ರಾಂತ್ಯ ಭೇದಗಳಿಂದ ಜನಾಂಗ ಭೇದಗಳುಂಟಾಗಿವೆ. ಹಾಗಾಗಿ ಪ್ರತಿಯೊಂದು ಜನಾಂಗಗಳೂ ತಮ್ಮದೇ ಆದ ವಿಶಿಷ್ಟ ಗುಣಲಕ್ಷಣ, ಚಹರೆಗಳನ್ನು ಹೊಂದಿವೆ. ಹೀಗೆ ಭೌತಿಕ ಮತ್ತು ಸಾಂಸ್ಕೃತಿಕ ಗುಣಲಕ್ಷಣಗಳನ್ನು ಉಳ್ಳಂತಹ ಜನಾಂಗಗಳು ತಮ್ಮದೇ ಆದ ವಾಸಸ್ಥಾನಗಳನ್ನು ರೂಢಿಸಿಕೊಂಡು ತಮ್ಮ ಬದುಕು ಸಾಗಿಸುತ್ತವೆ. ತಾವು ವಾಸಿಸುವ ಪ್ರದೇಶ, ಬೆಟ್ಟ, ಗುಡ್ಡ, ನದಿ ಸಮುದ್ರಗಳನ್ನೇ ತಮ್ಮ ಬದುಕಿನ ಸಂಪನ್ಮೂಲಗಳನ್ನಾಗಿ ಮಾಡಿಕೊಂಡು ಹೊಟ್ಟೆ ಹೊರೆಯುತ್ತವೆ.

ಭಾರತವು ವಿಭಿನ್ನ ಗುಣಲಕ್ಷಣಗಳಿರುವ ಒಂದು ದೇಶ. ಇದರ ಒಳಗೆ ಹಲವಾರು ಜಾತಿ, ಭಾಷೆ, ಸಂಸ್ಕೃತಿ ಉತ್ಪಾದನೆಗಳಿಂದ ಆವೃತವಾದ ಸಣ್ಣ ಸಣ್ಣ ಭೂಪ್ರದೇಶಗಳಿವೆ. ಇವು ಹಿಂದೆ ರಾಜರ ಆಳ್ವಿಕೆಯ ಪ್ರದೇಶಗಳಾಗಿದ್ದು, ಈಗ ಭಾಷಾ ಪ್ರಧಾನವಾದ ರಾಜ್ಯಗಳಾಗಿ ವಿಂಗಡಿಸಲ್ಪಟ್ಟಿವೆ. ಈ ಭಾಷಾವಾರು ಪ್ರಾಂತ್ಯ ರಚನೆಗಾಗಿಯೇ ಆಂಧ್ರಪ್ರದೇಶದ ಪೊಟ್ಟಿ ಶ್ರೀರಾಮುಲು ಎಂಬುವವರು ಪ್ರಾಣಾರ್ಪಣೆ ಮಾಡಬೇಕಾಯಿತು.



ಒಂದು ಭಾಷೆಯನ್ನು ಪ್ರಧಾನವಾಗಿ ಮಾತನಾಡುವವರನ್ನು ಆ ಭಾಷೆಯ ಹೆಸರಿನಲ್ಲಿಯೇ ಗುರುತಿಸುವ ಮೂಲಕ ಆಡಳಿತ ಮಾಡಲು ಅವಕಾಶ ಮಾಡಿಕೊಡಲಾಯಿತು. ಇದರಿಂದ ಆ ಭಾಷಾ

ಗುಂಪಿನ ಜನರ ಸರ್ವತೋಮುಖ ಅಭಿವೃದ್ಧಿಯ ಕನಸನ್ನು ಹಿಂದಿನವರು ಕಂಡಿದ್ದರು. ಸ್ವಾತಂತ್ರ್ಯಾನಂತರ ಭಾಷೆಯ ಮಾನದಂಡವನ್ನು ಹೊರತುಪಡಿಸಿದರೆ ಇನ್ಯಾವ ಅಂಶಗಳಿಂದಲೂ ರಾಜ್ಯಗಳ ವಿಂಗಡಣೆಯನ್ನು ಇಷ್ಟು ವೈಜ್ಞಾನಿಕವಾಗಿ ಮಾಡಲು ಆಗುತ್ತಿರಲಿಲ್ಲ. ಜಾತಿ, ಸಂಸ್ಕೃತಿ, ಆಚಾರ-ವಿಚಾರ, ಜೀವನ ಪದ್ಧತಿಗಳು ಹತ್ತು ಕಿಲೋ-ಮೀಟರಿಗೊಮ್ಮೊಮ್ಮೆ ಬದಲಾಗುತ್ತಿರುತ್ತವೆ. ಆದ್ದರಿಂದ ಭಾಷೆಯನ್ನು ಪ್ರಧಾನ ಮಾನದಂಡವನ್ನಾಗಿ ಮಾಡಿಕೊಂಡು ಭಾಷಾವಾರು ರಾಜ್ಯಗಳ ವಿಂಗಡಣೆ ಮೂಲಕ ಭಾರತವನ್ನು ರಾಜ್ಯಗಳ ಒಕ್ಕೂಟ ರಾಷ್ಟ್ರವನ್ನಾಗಿ ಅಸ್ತಿತ್ವಕ್ಕೆ ತರಲಾಗಿದೆ.

ಈಗ ಭಾರತದಲ್ಲಿ ಹಿಂದಿ, ತಮಿಳು, ಮಲಯಾಳಂ, ಕನ್ನಡ, ತೆಲುಗು, ಮರಾಠಿ ಪಂಜಾಬಿ, ಒರಿಯಾ, ಬಿಹಾರಿ, ಗುಜರಾತಿ, ರಾಜಾಸ್ಥಾನಿ, ಕಾಶ್ಮೀರಿ, ಬಂಗಾಳಿ, ಅಸ್ಸಾಮಿ ಮುಂತಾದ ಪ್ರಧಾನ ಭಾಷೆಗಳ ಹೆಸರಿನಲ್ಲಿ ರಾಜ್ಯಗಳಿವೆ. ಈ ರಾಜ್ಯಗಳಿಗೆ ಅಲ್ಲಿನ ಒಂದು ರಾಜಧಾನಿ ಪ್ರದೇಶದಲ್ಲಿ ಆಡಳಿತ ಕೇಂದ್ರವಿದೆ. ಇಂಥ ಹತ್ತಾರು ಆಡಳಿತ ಕೇಂದ್ರಗಳನ್ನು ಕ್ರೋಡೀಕರಿಸಿಕೊಂಡು ಒಂದು ಕೇಂದ್ರ ಆಡಳಿತ ವ್ಯವಸ್ಥೆಯಿದೆ. ಈ ಕೇಂದ್ರ ಆಡಳಿತ ವ್ಯವಸ್ಥೆಗೆ ಎಲ್ಲಾ ರಾಜ್ಯಗಳ, ಆಯಾ ಜನಸಂಖ್ಯೆಗನುಗುಣವಾಗಿ ಸಂಸತ್ ಸದಸ್ಯರನ್ನು ಚುನಾವಣೆ ಮೂಲಕ ಆಯ್ಕೆ ಮಾಡುವ ಪದ್ಧತಿಯಿದೆ. ಚುನಾವಣೆ ಇರುವುದರಿಂದ ಪಕ್ಷಗಳಿವೆ. ಪಕ್ಷಪದ್ಧತಿಯ ರಾಜಕಾರಣ ಕೇಂದ್ರ ಮತ್ತು ರಾಜ್ಯಗಳಲ್ಲಿ ಇದುವರೆಗೂ ನಡೆದುಕೊಂಡು ಬಂದಿದೆ. ಪಕ್ಷಗಳಲ್ಲಿ ರಾಷ್ಟ್ರೀಯ ಪಕ್ಷಗಳು ಮತ್ತು ಪ್ರಾದೇಶಿಕ ಪಕ್ಷಗಳು ಎಂಬ ವ್ಯವಸ್ಥೆಯಿದೆ. ತಮಿಳುನಾಡು ಬಿಟ್ಟರೆ ಪ್ರಾದೇಶಿಕ ಪಕ್ಷಗಳು ಬೇರೆ ಭಾಷೆಯ ರಾಜ್ಯಗಳಲ್ಲಿ ಮೊದಲಿಗೆ ಅಸ್ತಿತ್ವದಲ್ಲಿರಲಿಲ್ಲ. ರಾಷ್ಟ್ರೀಯ ಪಕ್ಷಗಳೇ ಕೇಂದ್ರ ಮತ್ತು ರಾಜ್ಯಗಳೆರಡರಲ್ಲೂ ಆಡಳಿತ ನಡೆಸುತ್ತಿದ್ದವು. ನೀರು ಮತ್ತು ಗಡಿ ಸಮಸ್ಯೆಗಳಿಗೆ ಸಂಬಂಧಿಸಿದಂತೆ ವಿವಾದಗಳು ಹುಟ್ಟಿಕೊಂಡಾಗ ರಾಷ್ಟ್ರೀಯ ಪಕ್ಷಗಳು ವಿವಾದಗಳನ್ನು ಬಗೆಹರಿಸದೆ ಮುಂದೂಡುತ್ತಾ ಬಂದವು. ತಮಿಳುನಾಡು ಸರ್ಕಾರ ತನ್ನ ಪ್ರಾದೇಶಿಕ ಹಿತಾಸಕ್ತಿಯ ಮೂಲಕ ಕೇಂದ್ರದಲ್ಲಿ ಯಾವ ಪಕ್ಷದ/ಪಕ್ಷಕೂಟಗಳ ಸರ್ಕಾರವಿದ್ದರೂ, ಒತ್ತಡ ತಂತ್ರವನ್ನು ಅನುಸರಿಸುತ್ತ ಅಭಿವೃದ್ಧಿಯ ಅನುಕೂಲಗಳನ್ನು ಪಡೆಯುವುದನ್ನು ಕಂಡು ಬೇರೆ ರಾಜ್ಯಗಳೂ ಅಲ್ಲಿನ ಸ್ಥಿತಿಗತಿಗನುಗುಣವಾಗಿ ಪ್ರಾದೇಶಿಕ ಪಕ್ಷಗಳನ್ನು ಕಟ್ಟಿಕೊಂಡವು.

ಅಭಿವೃದ್ಧಿಯ ವಿಷಯ ಬಂದಾಗ ಉದ್ಯೋಗದ ವಿಷಯ ಬಂದೇಬರುತ್ತದೆ. ಪ್ರಭುತ್ವಗಳೇ ಜನಗಳ ಅನುಕೂಲಕ್ಕೋಸ್ಕರ ರಸ್ತೆ, ಕೆರೆ-ಕಾಲುವೆ, ಸ್ಕೂಲು, ಆಸ್ಪತ್ರೆ, ನೀರು-ನೈರ್ಮಲ್ಯ ಮುಂತಾದುವನ್ನು ಸಾಮೂಹಿಕ ನೆಲೆಯಲ್ಲಿ ಮಾಡಿದರೆ, ಪ್ರಜೆಗಳು ತಮ್ಮ ವೈಯಕ್ತಿಕ ನೆಲೆಯಲ್ಲಿ ಸಂತೃಪ್ತ ಜೀವನ ನಡೆಲು ಉದ್ಯೋಗಗಳನ್ನು ದೊರಕಿಸಿಕೊಳ್ಳಬೇಕಾಗುತ್ತದೆ. "ಉದ್ಯೋಗಂ ಪುರುಷ ಲಕ್ಷಣಂ" ಎಂಬ ಹಳೆಯ ಮಾತನ್ನು ಈಗ ಬದಲಾಯಿಸಿ "ಉದ್ಯೋಗಂ ಜೀವಲಕ್ಷಣಂ" ಎಂದು ಲಿಂಗಸಮಾನತೆಯ ಹಿನ್ನೆಲೆಯಲ್ಲಿ ಹೇಳಬೇಕಾಗಿದೆ. ಈ ಆಧುನಿಕ ಕಾಲಮಾನದಲ್ಲಿ ಸ್ತ್ರೀ-ಪುರುಷರಿಬ್ಬರೂ ದುಡಿಯಬೇಕಾದ ಅನಿವಾರ್ಯತೆಯಿದೆ. ಸಕಲಜೀವರಿಗೆ ಲೇಸನೇ ಬಯಸುವುದು ಇಂದಿನ ಪ್ರಭುತ್ವಗಳ ಕರ್ತವ್ಯವಾಗಿದೆ.

ಯಾವುದೇ ವ್ಯಕ್ತಿ ತಾನು ವಾಸಿಸುತ್ತಿರುವ ಸ್ಥಳದಲ್ಲೇ ಉದ್ಯೋಗ ಮಾಡಲು ಅಲ್ಲಿನ ಭೂಮಿ, ನೀರು, ನೈಸರ್ಗಿಕ ಸಂಪನ್ಮೂಲಗಳನ್ನು ಪ್ರಾಥಮಿಕ ಪರಿಕರಗಳನ್ನಾಗಿ ಬಳಸುತ್ತಿರುತ್ತಾನೆ. ಭಾರತದ ತುಂಬಾ ಕೃಷಿ ಚಟುವಟಿಕೆಯು ಎಲ್ಲಾ ಭಾಷಿಕ ರಾಜ್ಯಗಳ ಪ್ರಧಾನ ಕಸುಬಾಗಿದೆ. ಉಳಿದ ಕುಶಲಕಲೆಗಳು, ಇನ್ನಿತರ ಕೌಶಲ್ಯಗಳು ಈ ಕೃಷಿಗೆ ಪೂರಕ ಚಟುವಟಿಕೆಗಳಾಗಿಯೇ ರೂಪುಗೊಂಡಿವೆ. ಅಂದರೆ ಸ್ಥಳವಂದಿಗನೊಬ್ಬ ತನ್ನ ಉದ್ಯೋಗಕ್ಕೆ ಸಂಬಂಧಿಸಿದ ಪ್ರತಿ ವಸ್ತು-ಪರಿಕರಗಳನ್ನು ಪ್ರೀತಿಸುತ್ತಾನೆ. ಅವುಗಳಿಗೆ ಭಾವನಾತ್ಮಕವಾಗಿ ಸ್ಪಂದಿಸುತ್ತಾನೆ. ಆ ವಸ್ತು-ಪರಿಕರಗಳು ಅವನಿಗೆ ಯಾಂತ್ರಿಕವಾಗಿ ಕಾಣಿಸುವುದಿಲ್ಲ. ತನ್ನ ಕುಟುಂಬದ ಭಾಗವಾಗಿ ಪರಿಗಣಿಸಿ ಅವುಗಳಿಗೆ ಮಹತ್ವ ನೀಡುತ್ತಾನೆ. ಆದ್ದರಿಂದಲೇ ಭೂಮಿಯನ್ನು ಭೂಮಿತಾಯಿ ಎಂದೂ, ನೀರನ್ನು ಗಂಗಾಮಾತೆಯೆಂದೂ ಬೆಟ್ಟ-ಗುಡ್ಡ ದನಕರುಗಳನ್ನು ದೇವರೆಂದೂ ಭಾವಿಸುತ್ತಾನೆ, ಪೂಜಿಸುತ್ತಾನೆ.

೧೯/೨೦ನೇ ಶತಮಾನದ ವೈಜ್ಞಾನಿಕ ಆವಿಷ್ಕಾರಗಳ ಪರಿಣಾಮವಾಗಿ ಉದ್ಯೋಗಗಳ ಸ್ವರೂಪ ಬದಲಾಗಿ ಕೃಷಿಗೆ ಪ್ರಾಧಾನ್ಯತೆ ಕಡಿಮೆಯಾಯಿತು. ಕೃಷಿಯ ಜಾಗದಲ್ಲಿ ವಾಣಿಜ್ಯ ಸರಕುಗಳು, ವ್ಯಾಪಾರ ವಹಿವಾಟುಗಳು, ಸಂಪರ್ಕ ಸಾಧನಗಳು, ಕೊಳ್ಳುವ - ಮಾರುವ ನಡುವಿನ ಮಧ್ಯವರ್ತಿ ಸಂಬಂಧಗಳು ತಲೆಎತ್ತಿದವು. ಇದರ ಜೊತೆಗೆ ಕೈಗಾರಿಕಾ ಉದ್ಯಮಗಳು, ಸರ್ಕಾರಿ ಉದ್ಯೋಗಗಳು ಮುನ್ನೆಲೆಗೆ ಬಂದವು. ವ್ಯಕ್ತಿಗಳ ಸಾರ್ವಜನಿಕ ಬದುಕು ವಿಸ್ತರಿಸತೊಡಗಿತು. ತನ್ನ ಪ್ರತಿಭೆ, ಸ್ಥಳೀಯವಾಗಿ ಅವಕಾಶಗಳ ಕೊರತೆ ಜನಸಂಖ್ಯೆಯ ಅಸಮತೋಲನದಿಂದಾಗಿ ಉತ್ತಮ ಬದುಕಿಗಾಗಿ ತಾನಿರುವ ಸ್ಥಳದಿಂದ ನಾಲ್ಕೂ ದಿಕ್ಕುಗಳ ಕಡೆಗೆ ದೃಷ್ಟಿ ಹಾಯಿಸಬೇಕಾಯಿತು. ಅಂತಹ ಸಂದರ್ಭದಲ್ಲಿ ವಲಸೆ ಪ್ರಾರಂಭವಾಯಿತು.

ಈ ವಲಸೆಯ ಹೆಚ್ಚಳದಿಂದ ಸ್ಥಳೀಯರಿಗೆ ಉದ್ಯೋಗ ಸಮಸ್ಯೆಗಳು ಎದುರಾದವು. ಪಾರಂಪರಿಕವಾದ ಉದ್ಯೋಗಗಳು ಅಪ್ರಸ್ತುತವಾಗಿರುವಾಗ, ಪ್ರತಿಯೊಂದು ರಾಜ್ಯದ ಪ್ರತಿಪ್ರಜೆಯೂ ಆಧುನಿಕ ಜೀವನ ವಿಧಾನದ ಉದ್ಯೋಗ ಹಿಡಿಯಲು ಬಯಸುತ್ತಾನೆ. ತಾನಿರುವ ರಾಜ್ಯದಲ್ಲಿ ಅದಕ್ಕೆ ಅವಕಾಶ ದೊರೆಯದಿದ್ದಾಗ ಇನ್ನೊಂದು ರಾಜ್ಯಕ್ಕೆ ಹೋಗುತ್ತಾನೆ. ಅಂತಹ ಸಂದರ್ಭದಲ್ಲಿ ಅಲ್ಲಿನ ಸ್ಥಳೀಕನೊಬ್ಬನಿಗೆ ಪಕ್ಕದ ರಾಜ್ಯದಿಂದ ಬಂದವನು ಪ್ರತಿಸ್ಪರ್ಧಿಯಾಗುತ್ತಾನೆ. ಆಗ ಘರ್ಷಣೆಗಳು ಆರಂಭವಾಗುತ್ತವೆ.

ಭಾರತದ ಒಕ್ಕೂಟ ವ್ಯವಸ್ಥೆಯ ಸಂವಿಧಾನವು ಯಾವುದೇ ಪ್ರಜೆಯು ದೇಶದ ಯಾವುದೇ ಮೂಲೆಯಲ್ಲಿ ಬೇಕಾದರೂ ನೆಲೆಸುವ, ತನ್ನ ವೃತ್ತಿಯನ್ನು ಮಾಡುವ ಅವಕಾಶ ನೀಡಿದೆ. ಪ್ರಜಾಪ್ರಭುತ್ವದ ಹಿನ್ನಲೆಯಲ್ಲಿ ಇದು ಶ್ರೇಷ್ಠ ನಿಲುವು. ಇದೇ ರೀತಿಯಲ್ಲಿಯೇ, ಯಾವುದೇ ವ್ಯಕ್ತಿಯ, ಯಾವುದೇ ಉದ್ಯೋಗದಿಂದ ಅಲ್ಲಿನ ಸ್ಥಳೀಯರ ಬದುಕುವ ಹಕ್ಕುಗಳಿಗೆ ಚ್ಯುತಿ ತರಬಾರದು, ಎಂಬ ರಾಷ್ಟ್ರೀಯ ನೀತಿಯನ್ನು ಅಂದೇ ಸಂವಿಧಾನದಲ್ಲಿ ಅಳವಡಿಸಿದ್ದರೆ, ಇಂದು ರಾಜ್ಯ-ರಾಜ್ಯಗಳ ಮಧ್ಯೆ, ಜನಾಂಗ-ಜನಾಂಗಗಳ ಮಧ್ಯೆ ಕಾಣುತ್ತಿರುವ ಜಗಳ, ಘರ್ಷಣೆಗಳು ಉಂಟಾಗುತ್ತಿರಲಿಲ್ಲ. ಯಾವಾಗ 'ಮಣ್ಣಿನ ಮಕ್ಕಳಿಗೆ ಅನ್ಯಾಯ,' 'ಸ್ಥಳೀಕರಿಗೆ ವಂಚನೆ' ಇತ್ಯಾದಿ ಅಸಹನೆ, ಹೋರಾಟಗಳು

ಚಾಲ್ತಿಗೆ ಬಂದವ್ರೋ, ಆಗ ಕೇಂದ್ರ ಸರ್ಕಾರ ಎಚ್ಚೆತ್ತುಕೊಂಡು ಶ್ರೀ ಗೋರೆ ಅವರ ಅಧ್ಯಕ್ಷತೆಯಲ್ಲಿ 'ನ್ಯಾಷನಲ್ ಇಂಟಗ್ರಿಟಿ ಕೌನ್ಸಿಲ್'ಅನ್ನು ರಚನೆಮಾಡಿತು. ೧೯೬೮ರ ಜೂನ್ ೨೨ರಂದು ಶ್ರೀ ನಗರದಲ್ಲಿ ನಡೆದ ಸಭೆಯ ವರದಿಯ ಒಂದು ಉಲ್ಲೇಖ ಹೀಗಿದೆ:

The committee in this connection, takes note of the existence of discontent in the states arising from the inadequate share of the local people in employment opportunities in both private and public sectors. The constitution recognises one common citiznship and it is vital for Indian unity that this should be respected and preserved. At the same time in order that adequate employment opportunities are available to local people and they do not suffer from a sense of injustice, where qualified local persons are available from among the people of the state, they should be given a major share of the employment and employers should be requested to give effect to this objective, as a matter of policy.

ಗೋರೆಯವರ ಶಿಫಾರಸ್ಸನ್ನು ಕೇಂದ್ರ ಸರಕಾರವು ೧೯೬೮ರಲ್ಲಿಯೇ ಅಂಗೀಕರಿಸಿದ್ದರೂ, ಅದನ್ನು ಒಂದು ರಾಷ್ಟ್ರೀಯ ನೀತಿಯಾಗಿಸುವ ಕಾನೂನನ್ನು ಮಾತ್ರ ಮಾಡಲಿಲ್ಲ.

ಇದರಿಂದ ಆದ ಅನಾಹುತವೆಂದರೆ 'ಮಣ್ಣಿನ ಮಕ್ಕಳಿಗೇ ಉದ್ಯೋಗ', 'ಆಯಾ ರಾಜ್ಯಗಳ ಸಂಪನ್ಮೂಲಗಳು ಆಯಾ ರಾಜ್ಯದ ಮಕ್ಕಳಿಗೇ', 'ಬೇರೆ ಭಾಷೆಯವರನ್ನು, ರಾಜ್ಯದವರನ್ನು ಹೊಡೆದೋಡಿಸಿ' ಇತ್ಯಾದಿ ಸಂಘರ್ಷಗಳು ತೀವ್ರಗೊಂಡವು. ಇದು ಭಾರತಕ್ಕೆ ಸಂಬಂಧಿಸಿದ ಪ್ರಶ್ನೆಯಾಗಿ ಮಾತ್ರ ಉಳಿದಿಲ್ಲ, ಜಾಗತಿಕ ಸಮಸ್ಯೆಯಾಗಿದೆ. ಈ ಹಿನ್ನೆಲೆಯಲ್ಲಿಯೇ ಅಮೆರಿಕ ಸಂಯುಕ್ತ ಸಂಸ್ಥಾನಗಳ ಅಧ್ಯಕ್ಷರಾದ ಶ್ರೀ ಬರಾಕ್ ಒಬಾಮ ಅವರೂ ಕೂಡ, ಹೊರಗುತ್ತಿಗೆಯ ರೂಪದಲ್ಲಿ ಹೊರದೇಶಗಳಿಗೆ ಹೋಗುತ್ತಿರುವ ಉದ್ಯೋಗಗಳನ್ನು ಸ್ಥಳೀಯರಿಗೇ ನೀಡಬೇಕು ಎಂದು ಮತ್ತೆ ಮತ್ತೆ ಹೇಳಿದ್ದಾರೆ.

ಇದಿಷ್ಟೇ ಅಲ್ಲದೆ ಭಾರತದೊಳಗಿರುವ ಅನೇಕ ರಾಜ್ಯ ಸರಕಾರಗಳು ನ್ಯಾಯಾಲಯಗಳು ಈ ವಿಷಯದಲ್ಲಿ ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ತಿಳಿಸಿವೆ. ಪಶ್ಚಿಮ ಬಂಗಾಳ ಸರಕಾರವು ೧೯೯೯ರಲ್ಲೇ ಒಂದು ಅಧಿಸೂಚನೆ ಹೊರಡಿಸಿ, ಸರ್ಕಾರಿ ಸ್ವಾಮ್ಯದ ಎಲ್ಲಾ ಹುದ್ದೆಗಳನ್ನೂ ಸ್ಥಳೀಯ ಉದ್ಯೋಗ ವಿನಿಮಯ ಕೇಂದ್ರಗಳಿಂದ ಪಟ್ಟಿ ಪಡೆಯುವ ಮೂಲಕ ಭರ್ತಿ ಮಾಡುವ ಪ್ರಕ್ರಿಯೆಯನ್ನು ಅನುಸರಿಸುತ್ತಿದೆ. ಸರ್ಕಾರ ವಾಗಲೀ, ಸಾರ್ವಜನಿಕ ಉದ್ದಿಮೆಗಳಾಗಲೀ ಬಂಗಾಳದಲ್ಲಿ ಸ್ಥಳೀಯರಿಗೆ ಉದ್ಯೋಗ ನೀಡುವುದು ಕಡ್ಡಾಯವಾಗಿದೆ. ಹಾಗೆಯೇ ಒರಿಸ್ಸಾ ಉಚ್ಚ ನ್ಯಾಯಾಲಯ "No person shall be eligible for direct recruitment to the Senior Branch of the service unless he is able to speak, read and write oriya and has passed a test equivalent to the M-F-Standard" ಎಂದು ತನ್ನ ಒಂದು ತೀರ್ಪಿನಲ್ಲಿ ತಿಳಿಸಿದೆ.

ಇದರ ಪ್ರಕಾರ ಬೇರೆ ರಾಜ್ಯದ ಅರ್ಹ ವ್ಯಕ್ತಿ ಒರಿಯಾ ಭಾಷೆಯನ್ನು ಓದಲು, ಬರೆಯಲು ಮತ್ತು ಮಾತನಾಡಲು ಬಾರದಿದ್ದರೆ ಅಲ್ಲಿ ಉದ್ಯೋಗ ಹಿಡಿಯುವಂತಿಲ್ಲ. ಆಗ ಸಹಜವಾಗಿ ಸ್ಥಳೀಯ ಅರ್ಹವ್ಯಕ್ತಿಗೆ ಹೊರರಾಜ್ಯದ ಅರ್ಹವ್ಯಕ್ತಿ ಸ್ಪರ್ಧಿಯಾಗಲಾರ.

ಇದೇ ಒರಿಸ್ಸಾದಲ್ಲಿ ಶೇ. ತೊಂಬತ್ತರಷ್ಟು ಕೌಶಲ್ಯ ರಹಿತ ಹುದ್ದೆಗಳನ್ನು ಸ್ಥಳೀಯರಿಗೆ ಮೀಸಲಿಡಬೇಕು ಎಂದೂ, ಆಂಧ್ರದಲ್ಲಿ ಶೇ. ಎಂಬತ್ತರಷ್ಟು ಹುದ್ದೆಗಳನ್ನು ತೆಲಂಗಾಣ ಸ್ಥಳೀಯರಿಗೆ ಮೀಸಲಿಡಬೇಕೆಂದೂ, ಮಹಾರಾಷ್ಟ್ರದಲ್ಲಿ ಅಶೋಕ್‌ಚವಾಣ್ ಮುಖ್ಯಮಂತ್ರಿಯಾಗಿದ್ದಾಗ ಸ್ಥಳೀಯರಿಗೆ ಅತಿಹೆಚ್ಚು ಪ್ರಾಮುಖ್ಯತೆಯನ್ನು ಕೊಡಬೇಕೆಂದೂ ಹೋರಾಟಗಳನ್ನು ನಡೆಸಿದ್ದಾರೆ. ಹಾಗೆಯೇ ಹಿಮಾಚಲಪ್ರದೇಶದ ಮುಖ್ಯಮಂತ್ರಿ ಪ್ರೇಮ್‌ಕುಮಾರ್ ಧಮಾಲ್, ಆಂಧ್ರ ವಿಧಾನಸಭೆಯಲ್ಲಿ ಶಾಸಕರು, ಎಲ್ಲೆಲ್ಲಿ ವೇದಿಕೆಗಳು ಸಿಗುತ್ತವೆಯೋ ಅಲ್ಲೆಲ್ಲ, ಸ್ಥಳೀಯರಿಗೆ ಉದ್ಯೋಗ ಮೀಸಲಿಡಬೇಕೆಂಬ ಹೋರಾಟಗಳು ನಡೆದಿವೆ. ತಮಿಳುನಾಡಿನಲ್ಲಂತೂ ಯಾರೇ ಬರಲಿ, ಎಲ್ಲಿಂದಲೇ ಬರಲಿ ತಮಿಳು ಕಲಿಯದಿದ್ದರೆ ಆತನಿಗೆ ಊಟವೂ ಇಲ್ಲ, ಉದ್ಯೋಗವೂ ಇಲ್ಲ ಎಂಬಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದ್ದಾರೆ. ಅವರು ಸ್ವಾತಂತ್ರ್ಯ ಪೂರ್ವದಿಂದಲೇ ದ್ರಾವಿಡ ಚಿಂತನೆಯನ್ನು ಮೈಗೂಡಿಸಿಕೊಂಡು, ತಮ್ಮದೇ ಪ್ರಾದೇಶಿಕ ಪಕ್ಷ ಕಟ್ಟಿಕೊಂಡು ರಾಜಕೀಯ ಲಾಭಗಳನ್ನು ಪಡೆಯುತ್ತಿದ್ದಾರೆ. ಕೇರಳ ರಾಜ್ಯದವರೂ ತಮ್ಮ ಭಾಷೆಯಾದ ಮಲಯಾಳಂನ ಮೂಲಕವಾಗಿಯೇ ಮುನ್ನಡೆ ಸಾಧಿಸಿದ್ದಾರೆ. ಆಂಧ್ರಪ್ರದೇಶ, ತಮಿಳುನಾಡು, ಕೇರಳಗಳಲ್ಲಿ ಸಾಧ್ಯವಾಗಿರುವ 'ನೇಟಿವಿಟಿ' ಕರ್ನಾಟಕದಲ್ಲಿ ಯಾಕೆ ಸಾಧ್ಯವಾಗಿಲ್ಲ ಎಂಬುದನ್ನು ನಾವೆಲ್ಲ ಪೂರ್ವಾಗ್ರಹ ರಹಿತರಾಗಿ ಆಲೋಚನೆ ಮಾಡಬೇಕಾಗಿದೆ.

ಕೇಂದ್ರ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಲ್ಲಿ, ಸಾರ್ವಜನಿಕ ಉದ್ದಿಮೆಗಳಲ್ಲಿ, ಸರ್ಕಾರದ ಸೌಲಭ್ಯ ಪಡೆಯುವ ಖಾಸಗಿ ಮತ್ತು ಅರೆ ಸರ್ಕಾರಿ ಸಂಸ್ಥೆಗಳಲ್ಲಿ ಹಾಗೂ ಖಾಸಗಿ ವಲಯದ ಎಲ್ಲಾ ಉದ್ದಿಮೆಗಳಲ್ಲಿ 'ಸಿ' ಮತ್ತು 'ಡಿ' ವರ್ಗದ ಹುದ್ದೆಗಳು ಯಥೇಚ್ಛವಾಗಿರುತ್ತವೆ. ಇವುಗಳಿಗೆ ಅಂತಹ ಕೌಶಲ್ಯಾಧಾರಿತ ತಾಂತ್ರಿಕ ಪರಿಣತಿ ಬೇಕಿರುವುದಿಲ್ಲ. ಇಂತಹ ಹುದ್ದೆಗಳನ್ನು ಸ್ಥಳೀಯರಿಗೆ ಮೀಸಲಿರಿಸಿ 'ಎ' ಮತ್ತು 'ಬಿ' ವರ್ಗದ ಹುದ್ದೆಗಳಿಗೆ ಮುಕ್ತ ಸ್ಪರ್ಧೆಯನ್ನಿಡಬಹುದು.

ಕೇಂದ್ರ ಸರ್ಕಾರದ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೆಲಸ ಮಾಡುವವರೂ ಸ್ಥಳೀಯರೇ ಆಗಿರಬೇಕೆಂಬ ನಿಯಮವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸದಿದ್ದರೆ, ಅಂತಹ ನೆಲಸಂಬಂಧೀ ಕೆಲಸಗಳೂ ಕೂಡ ಪರಭಾಷಿಕರ ಸ್ವತ್ತಾಗುವ ಅಪಾಯವಿದೆ. ದ್ವಿಭಾಷಿಕ ಪ್ರದೇಶಗಳಿರುವ ಗಡಿಭಾಗದಲ್ಲಿ ಇಂತಹ ಅಪಾಯಗಳು ಜಾಸ್ತಿ.

ಕೇಂದ್ರ ಸರ್ಕಾರ ರೈಲ್ವೆ ಇಲಾಖೆಯ 'ಸಿ' ಮತ್ತು 'ಡಿ' ವರ್ಗದ ಹುದ್ದೆಗಳಿಗೆ ಪರೀಕ್ಷೆ ನಡೆಸುವಾಗ, ಆಯಾ ರಾಜ್ಯಗಳಲ್ಲಿ, ಆಯಾ ರಾಜ್ಯಭಾಷೆಯ ಮಾಧ್ಯಮದಲ್ಲೇ ಉತ್ತರ ಬರೆಯುವಂತಹ ವ್ಯವಸ್ಥೆ ಮಾಡಬೇಕು. ಕಾರ್ಮಿಕ ಇಲಾಖೆಯೂ ಕೂಡ ಸ್ಥಳೀಯರಿಗೆ ಅನುಕೂಲವಾಗುವ ಇಂತಹ ವ್ಯವಸ್ಥೆಯನ್ನು ಜಾರಿಗೆ ತರಬೇಕು. ಕನ್ನಡ ಅಭಿವೃದ್ಧಿ ಪ್ರಾಧಿಕಾರ ನನ್ನ ಅಧ್ಯಕ್ಷತೆಯ ಅವಧಿಯಲ್ಲಿ ಈ ಎರಡು ವಿಷಯಗಳೂ ಸೇರಿದಂತೆ

ಇನ್ನಿತರ ಬೇಡಿಕೆಗಳನ್ನು ಇಟ್ಟುಕೊಂಡು ದೆಹಲಿಗೆ ಎರಡು ಬಾರಿ ನಿಯೋಗ ಹೋಗಿದ್ದು ಹಲವಾರು ಬೇಡಿಕೆಗಳು ಈಡೇರಿವೆ. ಸ್ಥಳೀಯ ರಾಜ್ಯಭಾಷೆಯಲ್ಲಿ ಪರೀಕ್ಷೆ ನಡೆಸುವಂತಹ ವಿಧಾನವನ್ನು ರೈಲ್ವೆ ಇಲಾಖೆ ಜಾರಿಗೆ ತಂದಿದೆ.

ಕಳೆದ ನಲವತ್ತು ವರ್ಷಗಳಲ್ಲಿ ದೇಶದಾದ್ಯಂತ ವಲಸೆಗಳು ಹೆಚ್ಚಾಗಿವೆ. ಹೀಗೆ ವಲಸೆ ಹೋದವರು ಅಲ್ಲಿಯ ಸ್ಥಳೀಯ ಭಾಷೆಯನ್ನು ಕಲಿಯಲೇಬೇಕೆಂಬ ಅನಿವಾರ್ಯತೆಯನ್ನು ಶಿಕ್ಷಣ ಕ್ರಮದಲ್ಲಿ ರೂಪಿಸಲಾಗಿಲ್ಲ. ಇದರಿಂದಾಗಿ ಭಾಷೆಯ ಬೆಳವಣಿಗೆಗೆ ತೊಡಕಾಗುವುದಲ್ಲದೆ, ಕೇಂದ್ರ ಸ್ವಾಮ್ಯದ ಉದ್ಯಮಗಳಲ್ಲಿ ಸ್ಥಳೀಯರಿಗೆ ಉದ್ಯೋಗ ನೀಡುತ್ತಿದ್ದೇವೆ ಎಂಬ ಹೆಸರಿನಲ್ಲಿಯೇ, ಸ್ಥಳೀಯ ಭಾಷೆಯನ್ನು ಕಡೆಗಣಿಸುತ್ತಾ ಬರಲಾಗಿದೆ. ಈ ಹಿನ್ನೆಲೆಯಲ್ಲಿ ಖಾಸಗಿ ಅಥವಾ ಸರ್ಕಾರಿ ಸಂಸ್ಥೆಗಳ ಯಾವುದೇ ಉದ್ಯೋಗವನ್ನು ಭರ್ತಿಮಾಡಿಕೊಳ್ಳುವ ಪರೀಕ್ಷೆಯಲ್ಲಿ, ಸ್ಥಳೀಯ ಭಾಷೆಯನ್ನು ಅಭ್ಯರ್ಥಿಗಳು ಅರಿತಿದ್ದಾರೆಯೇ, ಇಲ್ಲವೇ ಎಂಬುದನ್ನು ತಿಳಿದುಕೊಳ್ಳಲು ಅನುವಾಗುವಂತಹ ಪರೀಕ್ಷೆ ನಡೆಸುವುದು ಸಹ ಭಾಷೆಯನ್ನು ಉಳಿಸುವ, ಬೆಳೆಸುವ ಹಿನ್ನೆಲೆಯಲ್ಲಿ ಮುಖ್ಯವಾಗುತ್ತದೆ. ಇಂತಹ ವಿವರಗಳನ್ನು "ರಾಷ್ಟ್ರೀಯ ಉದ್ಯೋಗ ನೀತಿ"ಯಲ್ಲಿ ಸೇರಿಸಿ ಜಾರಿಗೊಳಿಸಬೇಕಾದುದು ಸಹ ಭಾಷಾವಾರು ಪ್ರಾಂತ್ಯವಿಂಗಡಣೆಯ ಮೂಲೋದ್ದೇಶ ಸಾಧನೆಯ ದೃಷ್ಟಿಯಿಂದ ಅಗತ್ಯವಾಗಿದೆ.

❐




ರಾಷ್ಟ್ರೀಯ ಜಲನೀತಿ ಮತ್ತು ನದಿಗಳ ಜೋಡಣೆ : ಕರ್ನಾಟಕದ ಮೇಲಾಗುವ ಪರಿಣಾಮಗಳು

■ **ಆರ್. ಹೃಷಿಕೇಶ್**

ಪ್ರಸ್ತಾವನೆ

ಈಗ್ಗೆ ಒಂದು ತಿಂಗಳ ಹಿಂದೆ ರಾ.ನಂ. ಅವರನ್ನು ಮಾತನಾಡಿಸಿ ಕೃಷ್ಣಾ ಜಲವಿವಾದದ ಎರಡನೆಯ ನ್ಯಾಯಾಧಿಕರಣದ ಐತೀರ್ಪಿಗೆ ಕಾವೇರಿ ಐತೀರ್ಪಿನ ಬಗ್ಗೆ ಬಂದ ಪ್ರತಿಕ್ರಿಯೆ ಏಕೆ ಬರಲಿಲ್ಲ ಎಂದು ಪ್ರಶ್ನಿಸಿದೆ. ಈ ಹಿಂದೆ ಅವರು ಬಚಾವತ್ ಆಯೋಗದ ವರದಿಯ ಪ್ರತಿ ಕೇಳಿದ್ದರು. ಪೂರ್ಣ ಪ್ರತಿ ದೊರಕದಿದ್ದುದರಿಂದ, ಕೇವಲ ಆದೇಶದ ಪ್ರತಿಕೊಟ್ಟು ಸದ್ಯದಲ್ಲಿಯೇ ಎರಡನೆಯ ನ್ಯಾಯಾಧಿಕರಣದ ಆದೇಶ ಹೊರಬರುವುದರಿಂದ ಪೂರ್ಣ ವಿವರ ಸಿಗುವುದೆಂದು ಹೇಳಿದ್ದೆ. ಐತೀರ್ಪು ಬಂದು ಒಂದು ವರ್ಷದ ಮೇಲಾದರೂ ಅವರು ನನ್ನ ಬಳಿ ಮಾತನಾಡಿರಲಿಲ್ಲ. ಆಗ ಅವರು ಇವೆಲ್ಲವನ್ನೂ ಸೇರಿಸಿ ಒಂದು ವಿಚಾರ ಸಂಕಿರಣ ಮಾಡೋಣವೆಂದು ಹೇಳಿದರು. ಅನಂತರ ಒಂದು ಸಂಕಿರಣ ಏರ್ಪಾಟಾಯಿತು.



ಕೃಷ್ಣಾ ಜಲವಿವಾದದ ಬಗ್ಗೆ ಬಚಾವತ್ ಆಯೋಗದ ವರದಿಯ ಪ್ರಕಾರ ಕರ್ನಾಟಕವು ಕೃಷ್ಣಾಕೊಳ್ಳದಲ್ಲಿ ೭೩೪ ಟಿಎಂಸಿ ನೀರು ಬಳಸಿಕೊಳ್ಳಬಹುದಾಗಿತ್ತು. ೨೦೦೦ದ ಇಸವಿಯಲ್ಲಿ ಈ ವರದಿ ಪುನರ್ವಿಮರ್ಶೆಗೆ ಒಳಪಡುತ್ತಿತ್ತು. ಈ ಮಧ್ಯೆ ಆಂಧ್ರ ಕರ್ನಾಟಕ, ಮಹಾರಾಷ್ಟ್ರ ರಾಜ್ಯಗಳು ಆಲಮಟ್ಟಿ ಜಲಾಶಯದ ನೀರಿನಮಟ್ಟದ ಬಗ್ಗೆ ಸುಪ್ರೀಂಕೋರ್ಟಿನ ಮೆಟ್ಟಿಲೇರಿದವು. ೨೦೦೦ದ ಸುಪ್ರೀಂ ಕೋರ್ಟಿನ ತೀರ್ಮಾನದಂತೆ ಆಲಮಟ್ಟಿ, ನಾರಾಯಣಪುರ ಜಲಾಶಯಗಳಿಂದ ೧೭೩ ಟಿ.ಎಂ.ಸಿ. ನೀರು ಬಳಸಿಕೊಳ್ಳಲು ಅನುಮತಿ ಸಿಕ್ಕಿತು. ಇನ್ನೂ ಅನೇಕ ನೀರಾವರಿ ಯೋಜನೆಗಳ ಬಗ್ಗೆ

ವಿವಾದಗಳಿದ್ದುದರಿಂದ ಮೂರು ರಾಜ್ಯಗಳೂ ಮತ್ತೊಂದು ನ್ಯಾಯಾಧಿಕರಣ ಸ್ಥಾಪನೆಗೆ ಕೇಳಿಕೊಂಡವು. ಬ್ರಿಜೇಶ್‌ಕುಮಾರ್ ನೇತೃತ್ವದ ಈ ನ್ಯಾಯಾಧಿಕರಣವು ೩೦-೧೨-೨೦೧೦ದಂದು ನೀಡಿದ ನಿರ್ಣಯದಂತೆ ಕೃಷ್ಣಾ ಕೊಳ್ಳದಲ್ಲಿ ಲಭ್ಯವಿರುವ ನೀರು ಮತ್ತು ಕರ್ನಾಟಕದ ಪಾಲನ್ನು ಕೆಳಕಂಡಂತೆ ತೀರ್ಮಾನಿಸಿದೆ.

	ಕೃಷ್ಣಾ ಕೊಳ್ಳ	ಕರ್ನಾಟಕಕ್ಕೆ
	(ಟಿಎಂಸಿ)	
೧) ಶೇ. ೭೫ರ ಅವಲಂಬನೆಯಂತೆ	೨೧೭೩	೭೩೪
೨) ಶೇ. ೬೫ರ ಅವಲಂಬನೆಯಂತೆ	೨೨೯೩	೭೯೯
೩) ಸರಾಸರಿ ಲಭ್ಯತೆ	೨೫೭೮	೯೦೪
೪) ಪರಿಸರ ರಕ್ಷಣೆಗೆ (ಶೇ. ೬೫ರ ಅವಲಂಬನೆ)		೭
ಒಟ್ಟು	(೩ + ೪) =	೯೧೧

ಹೆಚ್ಚುವರಿಯಾಗಿ ಸಿಕ್ಕಿರುವ ೧೭೦ ಟಿಎಂಸಿಯಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಗೆ ೧೩೦ ಟಿಎಂಸಿ, ಭದ್ರಾ ಮೇಲ್ದಂಡೆ, ಸಿಂಗಟಾಲೂರು ಏತ ನೀರಾವರಿ, ತುಂಗಾ ಮೇಲ್ದಂಡೆ ಯೋಜನೆ ಸೇರಿ ೪೦ ಟಿಎಂಸಿ ನೀರು ಲಭ್ಯವಾಗಿದೆ. ಕಾರಣಾಂತರಗಳಿಂದ ಈ ಯೋಜನೆಗಳು ಇನ್ನೂ ಕುಂಟುತ್ತಾ ಸಾಗುತ್ತಿದ್ದು ನಿರೀಕ್ಷಿತ ಪ್ರಗತಿ ಕಂಡುಬರುತ್ತಿಲ್ಲ.

ಕೃಷ್ಣಾಕೊಳ್ಳ ಕರ್ನಾಟಕದ ಶೇ. ೬೦ ಭಾಗವನ್ನು ಹೊಂದಿದ್ದು, ಕರ್ನಾಟಕಕ್ಕೆ ಲಭ್ಯವಾಗುವ ನೀರು ಇಡೀ ಕಾವೇರಿಕೊಳ್ಳದಲ್ಲಿ ಸಿಗುವ ನೀರಿಗಿಂತ ಹೆಚ್ಚಿನದು. ಕಾವೇರಿ ಹೊಂದಿರುವ ಭಾವನಾತ್ಮಕ ಬಾಂಧವ್ಯ ಕೃಷ್ಣಾಕ್ಕಿಲ್ಲವೇನೋ ಎನಿಸುತ್ತಿದೆ. ಹಿಂದೆ ಉಪಮುಖ್ಯ ಮಂತ್ರಿಗಳಾಗಿದ್ದ ಎಂ.ಪಿ. ಪ್ರಕಾಶ್‌ರವರು "ಕಾವೇರಿಗಿಂತ ಕೃಷ್ಣಾ ದೊಡ್ಡದಾಗಿದ್ದರೂ ಅನೇಕ ಪುಣ್ಯಕ್ಷೇತ್ರಗಳಿದ್ದರೂ ಸಪ್ತನದಿಗಳಲ್ಲಿ 'ಕೃಷ್ಣಾ' ಹೆಸರಿಲ್ಲವಲ್ಲಾ" ಎಂದು ವಿಷಾದಿಸಿದ್ದರು. ಕಾವೇರಿಕೊಳ್ಳದಲ್ಲಿನ ಮುಖ್ಯ ಜಲಾಶಯಗಳ ಸಂಗ್ರಹಣಾ ಸಾಮರ್ಥ್ಯ ೧೧೪.೫ ಟಿಎಂಸಿಯಷ್ಟಿದ್ದರೆ, ಕೃಷ್ಣಾಕೊಳ್ಳದಲ್ಲಿ ಇದರ ಮೂರು ಪಟ್ಟಿದೆ.

ಕಾವೇರಿ ನದಿಯಿಂದ ಬೆಂಗಳೂರಿಗೆ ನೀರು ಸರಬರಾಜು ನಮ್ಮ ಲೆಕ್ಕದಲ್ಲಿ ಆಗುತ್ತದೆ. ಹೆಚ್ಚಿಗೆ ಅಥವಾ ವ್ಯರ್ಥವಾದ ನೀರು ಬೆಳ್ಳಂದೂರು, ವರ್ತೂರು ಕೆರೆಗಳ ಮೂಲಕ ದಕ್ಷಿಣ ಪಿನಾಕಿನಿ ಸೇರಿ ತಮಿಳುನಾಡಿಗೆ ಹೋಗುತ್ತದೆ. ಈಗ ತಮಿಳುನಾಡಿನವರು ಅದಕ್ಕೆ ಒಂದು ಬ್ಯಾರೇಜ್‌ಕಟ್ಟಿ, ೧೫೦೦೦ ಎಕರೆ ನೀರಾವರಿಗೆ ಉಪಯೋಗಿಸುತ್ತಾರೆ. ಈಗ್ಗೆ ಕೆಲವು ದಿನಗಳ ಹಿಂದೆ ತಮಿಳುನಾಡಿನ ಸಂಸದರೊಬ್ಬರು ಈ ನೀರು ಕಡಿಮೆಯಾಗಿ ತಮ್ಮ ನೀರಾವರಿಗೆ ಧಕ್ಕೆಯಾಯಿತೆಂದು ಸಂಸತ್ತಿನಲ್ಲಿ ಬೊಬ್ಬೆ ಹಾಕಿದರು. ನಮ್ಮ ನೀರಿಗೆ ಅವರ ಬೊಬ್ಬೆ?

ಈಗ ಪೆನ್ನಾರ್ ಕಣಿವೆಯ ಕೆರೆಗಳ ಬಗ್ಗೆ ಸುಪ್ರೀಂಕೋರ್ಟಿನಲ್ಲಿ ವಿಚಾರಣೆ ನಡೆಯುತ್ತಿದೆ. ನನ್ನ ಮಿತ್ರ ಶ್ರೀರಾಮಯ್ಯನವರು ಪರಿಣತ ಸಾಕ್ಷಿದಾರರಾಗಿ ಕರ್ನಾಟಕದ ವಾದವನ್ನು ಸಮರ್ಥವಾಗಿ ಮಂಡಿಸಿದ್ದಾರೆ.

ರಾಷ್ಟ್ರೀಯ ಜಲನೀತಿ

೧೯೮೬ರಲ್ಲಿ ಕಾವೇರಿ ಮಾತುಕತೆಗಳು ಮುರಿದುಬಿದ್ದ ಮೇಲೆ ತಮಿಳುನಾಡು ಸರ್ಕಾರ ಕಾವೇರಿ ನ್ಯಾಯಾಧಿಕರಣ ಸ್ಥಾಪನೆಗೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿತು. ಅದೇಕೋ ನಮ್ಮ ಸರ್ಕಾರಕ್ಕೆ, ರಾಜಕಾರಣಿಗಳಿಗೆ ನ್ಯಾಯಾಧಿಕರಣ ಸ್ಥಾಪನೆಯಿಂದ ನ್ಯಾಯ ಸಿಗುವುದೋ, ಇಲ್ಲವೋ ಎಂಬ ಸಂದೇಹ. ಆದಷ್ಟು ಅದನ್ನು ಮುಂದೂಡುವ ಪ್ರಯತ್ನ ಮಾಡಿದರು. ನ್ಯಾಯಾಧಿಕರಣಕ್ಕೆ ಯಾವುದೇ ಮಾರ್ಗಸೂಚಿಗಳಿಲ್ಲ. ಆದ್ದರಿಂದ ಮಾರ್ಗಸೂಚಿಗಳನ್ನೊಳಗೊಂಡ ರಾಷ್ಟ್ರೀಯ ಜಲನೀತಿ ಆಗಬೇಕು ಎಂದು ಒತ್ತಾಯ ಮಾಡುತ್ತಾ ಬಂದೆವು. ೧೯೮೭ರಲ್ಲಿ ಬಂದ ರಾಷ್ಟ್ರೀಯ ಜಲನೀತಿಯಲ್ಲಿ ಇದರ ಬಗ್ಗೆ ಯಾವುದೇ ಪ್ರಸ್ತಾಪವಿರಲಿಲ್ಲ. ಆಗ ರಾಮಕೃಷ್ಣ ಹೆಗಡೆಯವರು ರಾಜೀವ್ ಗಾಂಧಿಯವರಿಗೆ ಪತ್ರಬರೆದು ಮಾರ್ಗಸೂಚಿಗಳನ್ನು ಸೇರಿಸುವಂತೆ ಒತ್ತಾಯಿಸಿದರು. ಆದರೆ ಅದು ಕಾರ್ಯಗತವಾಗಲೇ ಇಲ್ಲ. ೨೦೦೨ರ ಎರಡನೆಯ ಜಲನೀತಿಯಲ್ಲಿಯೂ ಮಾರ್ಗ ಸೂಚಿಗಳ ಅಗತ್ಯವಿರುವುದನ್ನು ಪ್ರತಿಪಾದಿಸಿತಷ್ಟೇ ಹೊರತು ರಾಜ್ಯಗಳ ಅಸಹಕಾರದಿಂದ ಮಾರ್ಗಸೂಚಿಗಳು ಮಂಡನೆಯಾಗಲಿಲ್ಲ. ಆದರೆ ನ್ಯಾಯಾಧಿಕರಣದ ತೀರ್ಪಿಗೆ ನಿರ್ದಿಷ್ಟ ಕಾಲಾವಧಿ ಸೂಚಿಸಿ, ೧೯೫೬ರ ಅಂತರರಾಜ್ಯ ಜಲವಿವಾದ ಕಾಯಿದೆಗೆ ತಿದ್ದುಪಡಿ ತರಲಾಯಿತು. ಇದರಿಂದ ಗಜಗರ್ಭದಲ್ಲಿದ್ದ ಕಾವೇರಿ ಐತೀರ್ಪು ೨೦೦೭ರಲ್ಲಿಯಾದರೂ ಬೆಳಕು ಕಂಡಿತು.

ಈಗ ೨೦೧೨ರಲ್ಲಿಯೂ ಮತ್ತೊಂದು ಕರಡು ರಾಷ್ಟ್ರೀಯ ಜಲನೀತಿ ಸಿದ್ಧವಾಗಿದೆ. ಇದಕ್ಕೆ ರಾಜ್ಯಗಳು ಸಹಮತ ತೋರಿದಲ್ಲಿ, ರಾಷ್ಟ್ರೀಯ ಜಲಸಂಪನ್ಮೂಲ ಪರಿಷತ್ತಿನ ಮತ್ತೊಂದು ಸಭೆ ಕರೆಯಲು, ನಮ್ಮ ಪ್ರಧಾನಮಂತ್ರಿ ಮತ್ತು ಸದಸ್ಯರುಗಳಿಗೆ ವ್ಯವಧಾನ ಸಿಕ್ಕಿದರೆ, ಪರಿಷ್ಕೃತ ಜಲನೀತಿ ಸಿದ್ಧವಾಗಬಹುದು.

ಕರಡು ಜಲನೀತಿ ೨೦೧೨ರ ಪ್ರಮುಖ ಬದಲಾವಣೆಗಳು

೧.೨ (v) ಅಂತರ್ಜಲ, ಜಲಚಕ್ರದ ಭಾಗವಾಗಿದ್ದರೂ, ಎಲ್ಲರಿಗೂ ಸೇರಿದ್ದರೂ ವೈಯಕ್ತಿಕ ಆಸ್ತಿ ಎಂದು ಪರಿಗಣಿಸಿ ದುರ್ಬಳಕೆಗೆ ಕಾರಣವಾಗಿದೆ. (ಇದಕ್ಕೆ ಪ್ರಾಯಶಃ ಅನೇಕ ರಾಜ್ಯಗಳು ವಿರೋಧ ವ್ಯಕ್ತಪಡಿಸಬಹುದು)

೧.೩ (ii) ಸಮಾನತೆಯ ಸೂತ್ರ, ಸಾಮಾಜಿಕ ನ್ಯಾಯ, ನೀರಿನ ಬಳಕೆ ಮತ್ತು ಹಂಚಿಕೆಯಲ್ಲಿ ಪ್ರಮುಖವಾಗಿರಬೇಕು.

(iii) ಸಂಬಂಧಪಟ್ಟವರೊಂದಿಗೆ ಮಾತನಾಡಿ, ಉತ್ತಮ ಆಡಳಿತ ಕೊಡುವುದರಿಂದ ಸಮಾನತೆ, ಸಾಮಾಜಿಕ ನ್ಯಾಯ, ದೀರ್ಘಕಾಲದ ಪರಿಹಾರಗಳಿಗೆ ಸಹಾಯವಾಗುತ್ತದೆ.

(iv) ನೀರಿನ ಅವಶ್ಯಕತೆಗಳನ್ನು ಸಾಮಾಜಿಕ ಸಂಪತ್ತೆಂದು ನಿರ್ವಹಿಸಿ ರಾಜ್ಯವು ಸಮಾಜದ ಒಳಿತಿಗಾಗಿ ಆಹಾರ ಸ್ವಾವಲಂಬನೆ, ಜೀವನ ನಿರ್ವಹಣೆ, ಸಮಾನತೆ ಮತ್ತು ದೀರ್ಘಕಾಲದ ಅಭಿವೃದ್ಧಿಗೆ ನೀರು ಎಲ್ಲರಿಗೂ ಸಿಗುವಂತೆ ಮಾಡಬೇಕು.

೨.೩ ಅಂತರರಾಜ್ಯ ನದಿಗಳ ಸರ್ವತೋಮುಖ ಅಭಿವೃದ್ಧಿಗೆ ಸೂಕ್ತ, ಸಂಪೂರ್ಣ ರಾಜ್ಯಾಂಗ ತಿದ್ದುಪಡಿ ಆಗಬೇಕು. (ಈ ಅಂಶವು ನದಿಗಳ ಮೇಲಿನ ರಾಜ್ಯದ ಹಕ್ಕನ್ನು ಪೂರ್ಣವಾಗಿ ಕಸಿದುಕೊಳ್ಳುವ ಅಪಾಯವಿದೆ.)

೩.೧ ಕೇಂದ್ರ ಮತ್ತು ರಾಜ್ಯಗಳು, ಸರ್ಕಾರಿ ಸಂಸ್ಥೆಗಳು ಪ್ರತಿಯೊಬ್ಬರಿಗೂ ಅಗತ್ಯ ಕುಡಿಯುವ ನೀರನ್ನು ಅವರ ಮನೆಯ ಬಳಿಯಲ್ಲಿಯೇ ಒದಗಿಸಿಕೊಡಬೇಕು.

೫.೫ ನದಿ ಜೋಡಣೆಗಳು ಕೇವಲ ಆಹಾರ ಸಂಗ್ರಹಣಾ ಸಾಮರ್ಥ್ಯದ ಹೆಚ್ಚಳವಷ್ಟೇ ಅಲ್ಲದೆ ಮೂಲಭೂತ ಸೌಕರ್ಯಗಳು, ಸಮಾನತೆ ಮತ್ತು ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡಬೇಕು.

೯.೧ ಜಲಸಂಪನ್ಮೂಲ ಯೋಜನೆಗಳನ್ನು ರೂಪಿಸುವಾಗ ಸಾಮಾಜಿಕ, ಪರಿಸರದ ಮೇಲಾಗುವ ಪರಿಣಾಮಗಳನ್ನು ಯೋಜನೆಗಳಿಂದ ಸಂಕಷ್ಟಕ್ಕೊಳಗಾಗುವ ಮತ್ತು ಅಭಿವೃದ್ಧಿಗೊಳ್ಳುವ ಕುಟುಂಬಗಳೊಂದಿಗೆ ಚರ್ಚಿಸಿ, ತಾಂತ್ರಿಕ ಮತ್ತು ಆರ್ಥಿಕ ಸಮಸ್ಯೆಗಳನ್ನು ಪರಿಗಣಿಸಬೇಕು.

೧೦.೧ ಯೋಜನೆಗಳಿಂದ ಸಂಕಷ್ಟಕ್ಕೆ ಒಳಗಾಗುವ ಕುಟುಂಬಗಳಿಗೆ ಅಗತ್ಯ ಅನುಕೂಲತೆಗಳನ್ನು ಮಾಡಿಕೊಡಲು ಯೋಜನೆಯ ಪ್ರಾರಂಭದಲ್ಲಿಯೇ ಅನುವು ಮಾಡಿಕೊಡಬೇಕು.

೧೨.೧ ಕುಡಿಯುವ ನೀರಿನ ಲಭ್ಯತೆಯಲ್ಲಿ ಈಗಿರುವ ಹಳ್ಳಿಗಳು ಮತ್ತು ನಗರ ಪ್ರದೇಶಗಳ ನಡುವಣ ಅಂತರವನ್ನು ಕಡಿಮೆ ಮಾಡಬೇಕು. ಹಳ್ಳಿಗಳ ಜನರಿಗೂ ಒಳಚರಂಡಿ ಒದಗಿಸಿ, ನೀರಿನ ಲಭ್ಯತೆಯನ್ನು ಹೆಚ್ಚು ಮಾಡಬೇಕು.

೧೬.೪ ಜಲನೀತಿಯ ಸಂಶೋಧನೆಗೆಂದು ಒಂದು ಸ್ವಾಯತ್ತ ಸಂಸ್ಥೆಯನ್ನು ಸ್ಥಾಪಿಸಿ ಜಲನೀತಿಯ ಕಾರ್ಯ ವೈಖರಿಯ ಬಗ್ಗೆ ನಿರಂತರ ಸಂಶೋಧನೆ ನಡೆಯಬೇಕು. ಈ ಸಂಶೋಧನೆಗಳ ಆಧಾರದ ಮೇಲೆ ಜಲಸಂಪನ್ಮೂಲ ಅಭಿವೃದ್ಧಿಯ ಬಗ್ಗೆ ಸೂಕ್ತ ಮಾರ್ಪಾಡು ತರಬೇಕು.

ಈ ಕರಡು ಜಲನೀತಿ ಪ್ರಕಟವಾಗುವ ಹೊತ್ತಿಗೆ ಎಷ್ಟು ಬದಲಾವಣೆಗಳಾಗುತ್ತವೋ ಗೊತ್ತಿಲ್ಲ. ಆದರೂ ೨೦೦೨ರ ಜಲನೀತಿಗಿಂತಲೂ ಉತ್ತಮ ಎಂದು ಹೇಳಬಹುದು.

ನದಿಗಳ ಜೋಡಣೆ

ಬರಪೀಡಿತ ರಾಜ್ಯಗಳ ಒಳಿತಿಗಾಗಿ ಹೆಚ್ಚಿನ ನೀರು ಹರಿಯುವ ನದಿಗಳ ನೀರನ್ನು ಹರಿಸುವ ಯೋಜನೆಗಳು ಬಹಳ ಹಿಂದಿನಿಂದಲೂ ಕಾರ್ಯರೂಪದಲ್ಲಿವೆ. ಬರಪೀಡಿತ ಶಿಂಷಾ ನದಿ ಬಯಲಿಗೆ, ಕಾವೇರಿ ಬಯಲಿನಿಂದ ಹುಲಿಕಲ್ ಬಳಿ ಸುರಂಗ ತೋಡಿ ಸುಮಾರು ೯೦ ವರ್ಷಗಳ ಹಿಂದೆಯೇ ನೀರು ಹರಿಸಲಾಗಿದೆ. ಬ್ರಿಟಿಷ್ ಇಂಜಿನಿಯರುಗಳು ಹೆಚ್ಚಿನ ಪ್ರದೇಶವನ್ನು ನೀರಾವರಿಗೆ ಒಳಪಡಿಸಿ, ಕಂದಾಯ ಹೆಚ್ಚಿಸಿಕೊಳ್ಳಲು ಕೃಷ್ಣಾ–ಕಡಪಾ ಕಾಲುವೆ, ಮೆಟ್ಟೂರು ಜಲಾಶಯದಿಂದ ಹೆಚ್ಚಿನ ನೀರಾವರಿ ಮುಂತಾದ ಯೋಜನೆಗಳನ್ನು ಕಾರ್ಯಗತಗೊಳಿಸಿದರು. ಈ ಕಾಲುವೆಗಳು ಕೆಳಗಣ ಪ್ರದೇಶಗಳಲ್ಲಿದ್ದುದರಿಂದ ಮೇಲಣ ರಾಜ್ಯಸರ್ಕಾರಗಳ ಮೇಲೆ ಒತ್ತಡ ತಂದು ಯೋಜನೆಗಳನ್ನು ಪೂರ್ಣಗೊಳಿಸಿದರು.

೧೯೭೨ರ ಆಗಿನ ನೀರಾವರಿ ಮಂತ್ರಿಗಳಾದ ಕೆ.ಎಲ್.ರಾವ್ ಅವರು ಗಂಗಾ-ಕಾವೇರಿ ಜೋಡಣೆಯ ಬಗ್ಗೆ ಒಂದು ಸ್ಥೂಲ ವರದಿ ತಯಾರಿಸಿದರು. ೧೯೮೦ರಲ್ಲಿ ಕೇಂದ್ರ ಸರ್ಕಾರವು ರಾಷ್ಟ್ರೀಯ ಯೋಜನೆಯನ್ನು ತಯಾರಿಸಿ, ಹಿಮಾಲಯದ ನದಿಗಳ ಜೋಡಣೆ, ಪರ್ಯಾಯದ್ವೀಪದ ನದಿಗಳ ಜೋಡಣೆ, ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳ ಜೋಡಣೆ ಎಂದು ಪ್ರತ್ಯೇಕವಾಗಿ ವಿಭಾಗಿಸಿತು. ಇದರಲ್ಲಿನ ಪರ್ಯಾಯ ದ್ವೀಪದ ನದಿಗಳ ಜೋಡಣೆಯಿಂದ ಅಂದರೆ, ಮಹಾನದಿಯಿಂದ ವೈಗೈ ನದಿಯವರೆಗೆ ಜೋಡಣೆ ಮಾಡಿ, ಕರ್ನಾಟಕಕ್ಕೆ ೨೮೩ ಟಿಎಂಸಿ, ಆಂಧ್ರಕ್ಕೆ ೧೦೪೫ ಟಿಎಂಸಿ, ತಮಿಳುನಾಡಿಗೆ ೫೨೩ ಟಿಎಂಸಿ, ಮಹಾರಾಷ್ಟ್ರಕ್ಕೆ ೨೮೩ ಟಿಎಂಸಿ ಸಿಗಬಹುದೆಂದು ಅಂದಾಜು ಮಾಡಿತು. ಕರ್ನಾಟಕ ಮತ್ತು ಮಹಾರಾಷ್ಟ್ರಗಳಿಗೆ ನೇರವಾಗಿ ನೀರು ಸಿಗುವುದಿಲ್ಲವಾದ್ದರಿಂದ, ಕರ್ನಾಟಕ ಕಾವೇರಿಕೊಳ್ಳದಲ್ಲಿ ೮೭ ಟಿಎಂಸಿ ಮತ್ತು ಕೃಷ್ಣಾಕೊಳ್ಳದಲ್ಲಿ ೧೯೬ ಟಿಎಂಸಿ ನೀರನ್ನು ತಮಿಳುನಾಡು ಮತ್ತು ಆಂಧ್ರಪ್ರದೇಶಗಳಿಗೆ ಕೊಡುವ ನೀರಿನಲ್ಲಿ ಕಡಿತಮಾಡಿಕೊಂಡು ತನ್ನ ಪ್ರದೇಶಗಳಲ್ಲಿ ಬಳಸಿಕೊಳ್ಳಬಹುದೆಂದು ಸೂಚಿಸಲಾಗಿತ್ತು.

ಜುಲೈ ೧೯೮೨ರಲ್ಲಿ ಕೇಂದ್ರ ಜಲಸಂಪನ್ಮೂಲ ಇಲಾಖೆಯ ಅಡಿಯಲ್ಲಿ NWDA ರಾಷ್ಟ್ರೀಯ ಜಲಾಭಿವೃದ್ಧಿ ಸಂಸ್ಥೆ ಎಂಬ ಸೊಸೈಟಿಯನ್ನು ಹುಟ್ಟುಹಾಕಿ, ೨೦೫೦ ವರ್ಷದವರೆಗಿನ ಅಭಿವೃದ್ಧಿಯನ್ನು ಗುರಿಯಾಗಿಟ್ಟುಕೊಂಡು, ಯೋಜನಾವರದಿಗಳನ್ನು ತಯಾರಿಸಲು ಸೂಚಿಸಿತು. ಈ ಸಂಸ್ಥೆಯ ತಾಂತ್ರಿಕ ಸಲಹಾ ಸಮಿತಿಯು ಅನೇಕ ಸಭೆಗಳನ್ನು ನಡೆಸಿ, ಸಂಬಂಧಪಟ್ಟ ರಾಜ್ಯಗಳೊಂದಿಗೆ ಪ್ರಾಥಮಿಕ ವರದಿಗಳನ್ನು ಚರ್ಚಿಸಿತು.

೧೯೯೮ರಲ್ಲಿ ನಡೆದ ತಾಂತ್ರಿಕ ಸಲಹಾ ಸಮಿತಿಯ ಸಭೆಯಲ್ಲಿ ತಮಿಳುನಾಡಿನ ಕಾವೇರಿಕೊಳ್ಳದ ಅವಶ್ಯಕತೆಯನ್ನು ೮೭ ಟಿಎಂಸಿಯಿಂದ ೧೩೬ ಟಿಎಂಸಿಗೆ ಹೆಚ್ಚಿಸಲಾಗಿದೆ. ಆದರೆ ಕರ್ನಾಟಕದ ಪಾಲನ್ನು ತೋರಿಸಲಾಗಿಲ್ಲ. ಕರ್ನಾಟಕಕ್ಕೆ ಸಿಗುವ ಹೆಚ್ಚಿನ ನೀರು ಕಾವೇರಿ ನ್ಯಾಯಾಧಿಕರಣದಿಂದ ಸಿಗುವ ನೀರಿಗಿಂತ ಹೆಚ್ಚಿಗೆ ಇರಬೇಕು ಎಂದು ಕರ್ನಾಟಕವು ಪ್ರತಿಪಾದಿಸಿತು. ರಾಷ್ಟ್ರೀಯ ಜಲಾಭಿವೃದ್ಧಿ ಸಂಸ್ಥೆ ಸ್ಪಷ್ಟೀಕರಣ ನೀಡಿ "ಹಿಂದಿನ ಅಂದಾಜು ಸರಿಯಾಗಿರಲಿಲ್ಲ. ತಮಿಳುನಾಡಿನ ಅವಶ್ಯಕತೆಗಳಿಗನುಗುಣವಾಗಿ ನೀರನ್ನು ಹಂಚಲಾಗಿದೆ" ಎಂದು ತಿಳಿಸಿತು. ೧೯೯೮ರ ಅಂದಾಜಿನಂತೆ ಕರ್ನಾಟಕಕ್ಕೆ ಒಟ್ಟು ೧೬೪ ಟಿಎಂಸಿ ನೀರು ಬರಬಹುದೆಂದು ಲೆಕ್ಕಹಾಕಲಾಗಿತ್ತು.

೧೯೯೯ರ NWDA ಸ್ಪಷ್ಟೀಕರಣದಂತೆ ಗೋದಾವರಿ ಕೊಳ್ಳದಲ್ಲಿ ಹೆಚ್ಚುವರಿ ನೀರು ಕೆಳಗಣ ಪ್ರದೇಶದಲ್ಲಿ ಮಾತ್ರ ಸಿಗುತ್ತದೆ. ಏತ ನೀರಾವರಿಯನ್ನು ೧೨೦ ಮೀಟರ್‌ಗೆ ಮಿತಿಗೊಳಿಸಿರುವುದರಿಂದ, ಕರ್ನಾಟಕಕ್ಕೆ ನೇರವಾಗಿ ನೀರನ್ನು ಕೊಡಲಾಗುವುದಿಲ್ಲ. ಸಾಧ್ಯವಾದ ಕಡೆ ಕರ್ನಾಟಕವು ಕೆಳರಾಜ್ಯಗಳಿಗೆ ಕೊಡುವ ನೀರಿನಲ್ಲಿ ಕಡಿತ ಮಾಡಿಕೊಂಡು ನೀರಿನ ಬಳಕೆ ಮಾಡಿಕೊಳ್ಳಬೇಕೆಂದು ಸೂಚಿಸಿತು.

ಈ ವರದಿಗಳನ್ನೊಳಗೊಂಡ ಸಂಕ್ಷಿಪ್ತ ವರದಿಯನ್ನು ೯-೦೫-೨೦೦೨ರ ಪತ್ರದಂತೆ ಹಿಂದಕ್ಕೆ ಪಡೆಯಲಾಯಿತು.

ರಾಷ್ಟ್ರಪತಿ ಅಬ್ದುಲ್ ಕಲಾಂ ೧೪-೮-೨೦೦೨ರ ಭಾಷಣದಲ್ಲಿ ನದಿಗಳ ಜೋಡಣೆ ಬಗ್ಗೆ ಪ್ರಸ್ತಾಪಿಸಿ ,ಆದಷ್ಟು ಬೇಗ ಈ ಕಾರ್ಯದ ಅಗತ್ಯವನ್ನು ಒತ್ತಿ ಹೇಳಿದರು.

ರಾಷ್ಟ್ರಾಧ್ಯಕ್ಷರ ಭಾಷಣವನ್ನು ಆಧರಿಸಿ ಸುಪ್ರೀಂಕೋರ್ಟ್‌ನ ಹಿರಿಯ ವಕೀಲ ರಂಜಿತ್‌ಕುಮಾರ್ ಅವರು ಸುಪ್ರೀಂಕೋರ್ಟಿಗೆ ಒಂದು ಅರ್ಜಿ ಸಲ್ಲಿಸಿ, ನದಿಗಳ ಜೋಡಣೆ ಬಗ್ಗೆ ಉನ್ನತ ಸಮಿತಿಯನ್ನು ರಚಿಸುವಂತೆ ನಿರ್ದೇಶನ ನೀಡಲು ಕೋರಿದರು.

ಕೇಂದ್ರ ಸರ್ಕಾರವು ೨೫-೧೦-೨೦೦೨ರಂದು ಪ್ರಮಾಣಪತ್ರ ಸಲ್ಲಿಸಿ ನದಿಗಳ ಜೋಡಣೆಯ ಬಗ್ಗೆ ಯೋಜನೆ ತಯಾರಿಸಲಾಗಿದೆಯೆಂದೂ, ಸಂಬಂಧಪಟ್ಟ ರಾಜ್ಯಗಳ ನಡುವೆ ಈ ಬಗ್ಗೆ ಒಮ್ಮತ ಮೂಡಿಸಲು ಒಂದು ಕಾರ್ಯಪಡೆಯನ್ನು ರಚಿಸಲಾಗುತ್ತದೆ ಯೆಂದೂ ತಿಳಿಸಿತು. ೧೩-೧೨-೨೦೦೨ರಂದು ಮಾಜಿ ಕೇಂದ್ರಮಂತ್ರಿ ಸುರೇಶ್ ಪ್ರಭು ಅವರ ಅಧ್ಯಕ್ಷತೆಯಲ್ಲಿ ಕೇಂದ್ರ ಸರ್ಕಾರ ಕಾರ್ಯಪಡೆಯನ್ನು ರಚಿಸಿತು. ಈ ಕಾರ್ಯಪಡೆ ತನ್ನ ವರದಿಯನ್ನು ಡಿಸೆಂಬರ್ ೨೦೦೪ರಲ್ಲಿ ಕೇಂದ್ರಕ್ಕೆ ಸಲ್ಲಿಸಿತು.

ಪ್ರಧಾನಮಂತ್ರಿಗಳ ನಿರ್ದೇಶನದಂತೆ ಜಲಸಂಪನ್ಮೂಲ ಸಚಿವಾಲಯವು ಅಂತರನದಿ ಜೋಡಣೆಗಳ ಎಲ್ಲಾ ವಿಷಯಗಳನ್ನು ಅಧ್ಯಯನ ಮಾಡಿ ವರದಿ ಸಲ್ಲಿಸಲು ಪರಿಸರವಾದಿಗಳು, ಸಮಾಜ ವಿಜ್ಞಾನಿಗಳು ಮತ್ತು ಇತರ ಪರಿಣತರನ್ನೊಳಗೊಂಡ ಸಮಿತಿಯನ್ನು ರಚಿಸಿತು.

ಕರ್ನಾಟಕವು NWDAಗೆ ೬-೯-೨೦೦೫ರಲ್ಲಿ ಪತ್ರ ಬರೆದು ತಮಿಳುನಾಡಿನ ಕಾವೇರಿಕೊಳ್ಳದಲ್ಲಿ ಮೊದಲು ಅಂದಾಜು ಮಾಡಲಾಗಿದ್ದ ೮೭ ಟಿಎಂಸಿ ನೀರನ್ನು ೧೯೧.೫ ಟಿಎಂಸಿಗೆ ಹೆಚ್ಚಿಸಿ, ಕರ್ನಾಟಕಕ್ಕೆ ಯಾವ ನೀರನ್ನೂ ಕೊಡಲಾಗಿಲ್ಲವೆಂದೂ ಕರ್ನಾಟಕಕ್ಕೆ ತನ್ನ ಪಾಲಿನ ನೀರನ್ನು ನೀಡಲೇಬೇಕು ಎಂದೂ ಒತ್ತಾಯಿಸಿತು.

೨೦೦೯ರಲ್ಲಿ NWDA ತಮಿಳುನಾಡಿನೊಂದಿಗೆ ಏಕಪಕ್ಷೀಯವಾಗಿ ಪೆನ್ನಾರ್-ಪಾಲಾರ್-ಕಾವೇರಿ ನದಿಜೋಡಣೆಯ ಬಗ್ಗೆ ಪರ್ಯಾಯ ಯೋಜನೆಯನ್ನು ತಯಾರಿಸಿ, ೨೨-೦೧-೨೦೧೦ರಂದು ಇದರ ಪ್ರತಿಯನ್ನು ಕರ್ನಾಟಕಕ್ಕೆ ಕೊಟ್ಟಿತು.

೨೩-೦೭-೨೦೧೦ರಂದು ನಡೆದ ಸಾಮರಸ್ಯ ಸಭೆಯಲ್ಲಿ NWDA ತೋರಿಸಿದ ಮಹಾನದಿ-ಗೋದಾವರಿ-ಕೃಷ್ಣಾ, ಪೆನ್ನಾರ್-ಕಾವೇರಿ-ವೈಗೈ ಜೋಡಣೆಯಲ್ಲಿ ಕರ್ನಾಟಕಕ್ಕೆ ಕೇವಲ ೧೩.೬೬ ಟಿಎಂಸಿ ನೀರು ಕೊಡಲಾಗಿತ್ತು. ಈ ಸಭೆಯಲ್ಲಿ ಅಧ್ಯಕ್ಷರು ಎಲ್ಲಾ ರಾಜ್ಯಗಳೂ ತಮ್ಮ ವೈಯಕ್ತಿಕ ಸಮಸ್ಯೆಗಳನ್ನು ಬದಿಗೊತ್ತಿ, ರಾಷ್ಟ್ರೀಯ ದೃಷ್ಟಿಯಿಂದ ಎಲ್ಲರಿಗೂ ಒಳಿತಾಗುವ ಮನೋಭಾವ ತಾಳಬೇಕೆಂದು ಉಪದೇಶಿಸಿದರು. ೩-೦೮-೨೦೧೦ರಂದು ಕರ್ನಾಟಕದ ನೀರಾವರಿ ಮಂತ್ರಿಗಳು, ಕೇಂದ್ರ ನೀರಾವರಿ ಮಂತ್ರಿಗಳಿಗೆ ಪತ್ರಬರೆದು ಈ ವಿಷಯದಲ್ಲಿ ನೀರು ಹಂಚಿಕೆ ಮಾಡಲು ಪರಿಣತರ ಸಮಿತಿಯನ್ನು ರಚಿಸಬೇಕೆಂದು ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿದ NWDA ಮುಂದೊಡ್ಡುವ ಕೆಲವು ಕಾರಣಗಳು:

೧) ನದಿ ಜೋಡಣೆಯನ್ನು ನೀರಿನ ಲಭ್ಯತೆ, ತಾಂತ್ರಿಕ ಮತ್ತು ಆರ್ಥಿಕ ಸಾಧ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ತಯಾರಿಸಲಾಗಿದೆ.

೨) ನದಿಕೊಳ್ಳ ಅಥವಾ ಉಪನದಿ ಕೊಳ್ಳಗಳನ್ನು ಪರಿಗಣಿಸಲಾಗಿದೆಯೇ ಹೊರತು ರಾಜ್ಯಗಳ ಪಾಲನ್ನು ಪರಿಗಣಿಸಲಾಗಿಲ್ಲ.

೩) ಏತನೀರಾವರಿಯ ಮಿತಿಯಿಂದ ಮೇಲಣ ಪ್ರದೇಶಗಳಿಗೆ ನೀರು ಒದಗಿಸಲಾಗಿಲ್ಲ.

ಮೊದಲಿನಿಂದಲೂ ಕರ್ನಾಟಕ ಮತ್ತು ಮಹಾರಾಷ್ಟ್ರವು, ಆಂಧ್ರಪ್ರದೇಶ ಮತ್ತು ತಮಿಳುನಾಡಿಗೆ ಬಿಡಬಹುದಾದ ನೀರನ್ನು ಕಡಿತಮಾಡಿ ಮೇಲಣ ಪ್ರದೇಶಗಳಿಗೆ ನೀರು ಕೊಡಬಹುದೆಂದು ೨೦೧೦ರವರೆಗೂ ಪ್ರತಿಪಾದಿಸುತ್ತಾ ಬಂದಿದ್ದ ಕೇಂದ್ರಸರ್ಕಾರವು ಕರ್ನಾಟಕಕ್ಕೆ ದ್ರೋಹ ಬಗೆದು, ಆಂಧ್ರಪ್ರದೇಶ ಮತ್ತು ತಮಿಳುನಾಡಿಗೆ ಸಹಾಯ ಮಾಡುತ್ತಿದೆ. ಈ ಬಗ್ಗೆ ನಮ್ಮ ಜನ ಎಚ್ಚೆತ್ತುಕೊಂಡು ಹೋರಾಟ ಮಾಡಬೇಕು. ಇಲ್ಲದಿದ್ದಲ್ಲಿ ಮುಂದಿನ ಜನಾಂಗವು ನಮ್ಮನ್ನು ದೂಷಿಸುವುದರಲ್ಲಿ ಅನುಮಾನವಿಲ್ಲ.

೨೭-೦೨-೨೦೧೨ರಲ್ಲಿ ಸುಪ್ರೀಂಕೋರ್ಟ್ ತನ್ನ ನಿರ್ಧಾರವನ್ನು ಪ್ರಕಟಿಸಿ, ನದಿ ಜೋಡಣೆಯ ಬಗ್ಗೆ ವಿಶೇಷ ಸಮಿತಿಯನ್ನು ರಚಿಸುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ವನ್ನು ಕೊಟ್ಟಿದೆ. ಈ ಬಗ್ಗೆ ಕೇಂದ್ರ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳದಿದ್ದಲ್ಲಿ ನ್ಯಾಯಾಂಗ ನಿಂದನಾಮೊಕದ್ದಮೆ ಹೂಡಲು ಅನುಮತಿ ನೀಡಿದೆ. ಕರ್ನಾಟಕವು ಮತ್ತೆ ಸುಪ್ರೀಂಕೋರ್ಟ್‌ನಲ್ಲಿ ಈ ಬಗ್ಗೆ ಹೋರಾಡಬೇಕಾಗಬಹುದು.

❐



ಸುದ್ದಿ ಮಾಧ್ಯಮಗಳು ನಿಜಕ್ಕೂ ಕನ್ನಡ ಪರವೇ?

■ **ಬಿ.ಎಸ್. ಜಯಪ್ರಕಾಶ ನಾರಾಯಣ**

ನಮ್ಮ ಕನ್ನಡಪರ ಹೋರಾಟಗಾರರಲ್ಲೂ, ಕನ್ನಡದ ಮೇಲೆ ಅಂತಃಕರಣದ ಮಮಕಾರವುಳ್ಳವರಲ್ಲೂ ಒಂದು ಭಾವನೆ ಇದೆ ಅದೇನೆಂದರೆ, ನಮ್ಮ ಸಮೂಹ ಮಾಧ್ಯಮಗಳೆಲ್ಲವೂ ಯಾವತ್ತಿದ್ದರೂ ಕನ್ನಡದ ಪರವಾಗಿಯೇ ಇರುತ್ತವೆ ಎನ್ನುವುದು. ಹೀಗಾಗಿಯೇ ಅವರೆಲ್ಲ, ಕನ್ನಡದ ವಿಷಯವಾಗಿ ಯಾವುದಾದರೂ ಬಿಕ್ಕಟ್ಟು ಎದುರಾದಾಗ, ಈ ಸುದ್ದಿ ಮಾಧ್ಯಮಗಳೆಲ್ಲ ಇರುವುದರಿಂದ ವ್ಯವಸ್ಥೆಯ ಮೇಲೆ ಒಂದು ಒತ್ತಡ ಹೇರಿ, ಕನ್ನಡದ ಪರವಾಗಿಯೇ ತೀರ್ಮಾನವೋ, ಫಲಿತಾಂಶವೋ, ರಾಜಕೀಯವಾದ ನಿರ್ಣಯವೋ ಬರುವಂತೆ ನೋಡಿಕೊಳ್ಳಬಹುದು ಎಂಬ ಒಂದು ಕಟ್ಟಕಡೆಯ ಆಶಾವಾದವನ್ನು ಇಟ್ಟುಕೊಂಡಿರುತ್ತಾರೆ. ಕನ್ನಡಕ್ಕಾಗಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿರುವ ಕೆಲವರನ್ನಾದರೂ ೧೦–೧೫ ವರ್ಷಗಳಿಂದ ನಿಕಟವಾಗಿಯೂ, ಆತ್ಮೀಯವಾಗಿಯೂ ಬಲ್ಲ ನಾನು ಗಮನಿಸಿರುವ ಅಂಶವಿದು. ಕನ್ನಡಕ್ಕಾಗಿ ಹೀಗೆ ಪ್ರಾಂಜಲವಾಗಿ ದುಡಿಯುತ್ತಿರುವವರ, ಇಂಥ ಅನುಮಾನವಿಲ್ಲದ ಗ್ರಹಿಕೆಗಳನ್ನು ನೋಡಿದಾಗಲೆಲ್ಲ ನನ್ನ ಆಂತರ್ಯದಲ್ಲಿ ಆಗುವ ವಿಷಾದ ಅಷ್ಟಿಷ್ಟಲ್ಲ. ಏಕೆಂದರೆ, ಕಸುಬಿನಿಂದ ಪೂರ್ಣಪ್ರಮಾಣದ ಒಬ್ಬ ಪತ್ರಕರ್ತನೇ ಆಗಿರುವ ನನಗೆ, ಪತ್ರಿಕೋದ್ಯಮದ ಒಳಗಿನವನಾಗಿ ಗೊತ್ತಿರುವ ಸತ್ಯಗಳು ತುಂಬಾ ಅಪ್ರಿಯವಾಗಿವೆ. ಕನ್ನಡ ಹೋರಾಟಗಾರರಿಗೆ ಮಾಧ್ಯಮಗಳ ಒಳಗಿನ ಇಂಥ ಮುಖಗಳೂ ಗೊತ್ತಾಗಬೇಕು ಮತ್ತು ಇಂಥವನ್ನೆಲ್ಲ ಅರಿತುಕೊಳ್ಳಲು ನಮ್ಮ ಕನ್ನಡಪರ ಜನರು ಪ್ರಯತ್ನಿಸಬೇಕು ಎನ್ನುವುದು ನನ್ನ ಬಯಕೆ.



ನಾನು ಕೂಡ ಒಂದು ಕಾಲದಲ್ಲಿ ಹೀಗೆಯೇ ಪತ್ರಿಕೆಗಳಲ್ಲಿ ಬರುವುದೆಲ್ಲವೂ ಅವುಗಳದೇ ಆದ, ಅತ್ಯಂತ ಪ್ರಾಮಾಣಿಕವಾದ ನಿಲುವು ಎಂದು ನಂಬಿಕೊಂಡಿದ್ದೆ. ಆದರೆ ನಾನೇ ಸ್ವತಃ ಪತ್ರಕರ್ತನಾಗಿ ದೊಡ್ಡದೊಡ್ಡ ಪತ್ರಿಕಾ ಸಂಸ್ಥೆಗಳ ಸ್ವಭಾವಗಳನ್ನೂ, ಅವುಗಳ ಆದ್ಯತೆಗಳನ್ನೂ ನೋಡಿದ ಮೇಲೆ, ಆ ನನ್ನ ಮುಗ್ಧ ಗ್ರಹಿಕೆಗಳೆಲ್ಲ ಭಗ್ನಗೊಳ್ಳಲು ಹೆಚ್ಚು ದಿನಗಳೇನೂ ಬೇಕಾಗಲಿಲ್ಲ. ಇದನ್ನೆಲ್ಲ ನೋಡಿದ ಮೇಲೆ ನನಗೆ ಭ್ರಮನಿರಸನವಾಗಿದ್ದು ಸುಳ್ಳಲ್ಲ. ಆ ಬೇಸರವನ್ನು ನಾನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತೇನೆ. ಹೀಗಾಗಿಯೇ ಇವತ್ತು ನಾವು ಮಾಧ್ಯಮ ಗಳನ್ನು ತರತಮ ಪ್ರಜ್ಞೆ ಇಲ್ಲದೆಯೇ ಆರಾಧಿಸುವುದನ್ನು ಬಿಟ್ಟು ಅವುಗಳನ್ನು ಕ್ರಿಟಿಕಲ್ ಇನ್‌ಸೈಡರ್ಸ್ ಥರ ನೋಡಲೇಬೇಕಾಗಿದೆ. ಒಬ್ಬ ಪತ್ರಕರ್ತನಾಗಿಯೇ ಹೇಳುವುದಾದರೆ ಇದು ನಮ್ಮ ಕಾಲಘಟ್ಟದಲ್ಲಿ ಎದುರಾಗಿರುವ ಚಾರಿತ್ರಿಕ ಅನಿವಾರ್ಯತೆ. ಇಷ್ಟು ವರ್ಷ ವಿಮರ್ಶೆಯ ನಿಷ್ಠುರತೆಯಿಂದ ಪಾರಾಗಿ, ಜನಸಮೂಹದ ಸಹಾನುಭೂತಿಗೆ ಪಾತ್ರವಾಗಿದ್ದ ಮಾಧ್ಯಮಗಳು ಕೂಡ ಸಮಾಜದಿಂದ ಎದುರಾಗುವ ಟೀಕೆ-ಟಿಪ್ಪಣಿಗಳಿಗೆ ಅವು ತಮ್ಮನ್ನು ಒಡ್ಡಿಕೊಳ್ಳಲೇಬೇಕಾಗಿದೆ. ಅಂಥ ಅಗ್ನಿದಿವ್ಯವನ್ನು ಅವು ಎದುರಿಸದಿದ್ದರೆ ಅವೂ ಬೆಳೆಯಲಾರವು, ಸಮಾಜಕ್ಕೂ ಒಳ್ಳೆಯದಾಗದು.

ಸಾಮಾನ್ಯವಾಗಿ ಕನ್ನಡದ ಸುದ್ದಿ ಮಾಧ್ಯಮಗಳೆಲ್ಲವೂ, ತಾವು ಕನ್ನಡದ ಪರ ಎಂದೇ ಡಂಗುರ ಹೊಡೆದುಕೊಳ್ಳುತ್ತವೆ. ಯಾವ್ಯಾವುದೋ ಸಂದರ್ಭದಲ್ಲಿ, ಮುಖಪುಟದಲ್ಲೇ ಸಂಪಾದಕೀಯ ಬರೆದುಕೊಳ್ಳುವಾಗ, ಅವು 'ನಾಡು-ನುಡಿಗೆ ನಾವು ಕಟಿಬದ್ಧ...' ಎಂಬ ಧಾಟಿಯ ಒಕ್ಕಣೆಯನ್ನೇ ಬರೆದುಕೊಳ್ಳುತ್ತವೆ ಅಥವಾ ಪ್ರಸಾರ ಮಾಡುತ್ತಿರುತ್ತವೆ. ಆದರೆ ಇದೊಂದು ಛದ್ಮವೇಷಧಾರಿಕೆ. ಈ ದೇಶದಲ್ಲೂ, ರಾಜ್ಯದಲ್ಲೂ ರಾಜಕಾರಣಿಗಳು ತುಂಬಾ ಕಾಲ ಹೀಗೆಯೇ, ಎಲ್ಲದಕ್ಕೂ ಸಮಾಜಸೇವೆಯ ಛದ್ಮವೇಷವನ್ನು ಹಾಕಿಕೊಂಡೇ ಹಾಯಾಗಿದ್ದರು. ಆದರೆ, ಈಗ ಅವರ ಮುಖವಾಡ ಕಳಚಿಬಿದ್ದಿದೆ. ಬಹುಶಃ, ಈಗಿನ ಸರದಿ ಸುದ್ದಿ ಮಾಧ್ಯಮಗಳದೇ ಆಗಿದೆ. ನಾನು ೧೯೭೭-೭೮ರಲ್ಲಿ ಪತ್ರಿಕೋದ್ಯಮಕ್ಕೆ ಕಾಲಿಡುವಾಗ 'ಕನ್ನಡಪ್ರಭ'ದಲ್ಲಿದ್ದ ಹಿರಿಯ ಪತ್ರಕರ್ತ ಕೆ.ಸತ್ಯನಾರಾಯಣ ಅವರನ್ನೊಮ್ಮೆ ಸಂದರ್ಶಿಸಿದ್ದೆ. ಆಗ ನಾನು ಅವರಿಗೆ, 'ಪತ್ರಿಕೆಗಳು ನಿಜಕ್ಕೂ ನಾಡು-ನುಡಿ-ಸಮಾಜ-ಜನಹಿತ ಇವೆಲ್ಲವನ್ನೂ ಚಿಂತಿಸುತ್ತವೆಯೇ? ಇವುಗಳ ಪರವಾದ ಕಾಳಜಿ ನಿಜಕ್ಕೂ ಪತ್ರಿಕೆಗಳಿಗೆ ಇರುತ್ತದಾ?' ಎಂಬ ಒಂದು ನಿಷ್ಠುರವಾದ ಪ್ರಶ್ನೆಯನ್ನು, ನನ್ನ ಪ್ರಾಯದ ದಿನಗಳ ಪುಟಿವ ಉತ್ಸಾಹದಲ್ಲಿ ನೇರವಾಗಿ ಕೇಳಿದ್ದೆ. ಅಷ್ಟು ಹೊತ್ತಿಗಾಗಲೇ 'ಕನ್ನಡ ಪ್ರಭ' ಕಚೇರಿಯಲ್ಲೇ ೨೫-೩೦ ವರ್ಷ ಕಳೆದಿದ್ದ ಸತ್ಯನಾರಾಯಣ ಅವರು ಐದಾರು ಸೆಕೆಂಡುಗಳ ಕಾಲ ತಡೆದು, 'ಪತ್ರಿಕೆಗಳಿಗೆ ಅಂಥ ಕಾಳಜಿಗಳು ಈಗಿನ ಕಾಲದಲ್ಲಿ ಇದೆ ಎನ್ನುವುದು ಸುಳ್ಳು. ಯಾರಾದರೂ ಇದೆ ಎಂದು ಹೇಳಿದರೆ ಅದನ್ನು ನಂಬಬೇಡಿ. ನಮ್ಮ ದೇಶದಲ್ಲಿ ಮೊದಲೆಲ್ಲ ಗಾಂಧೀಜಿ, ತಿಲಕರಂಥ ಸ್ವಾತಂತ್ರ್ಯ ಹೋರಾಟಗಾರರೇ ಪತ್ರಿಕೆಗಳನ್ನು ಆರಂಭಿಸಿ, ಅವರೇ ಸಂಪಾದಕರಾಗಿದ್ದರಿಂದ ಅಂಥ ಕಳಕಳಿಗಳು ಇದ್ದುದು ನಿಜ. ಆದರೆ ಪತ್ರಿಕೋದ್ಯಮ ಈಗ ಅದನ್ನೆಲ್ಲ ಮರೆತು, ಬಹಳ ದೂರ ಬಂದಿದೆ' ಎಂದರು. ಅವರ ಪ್ರಾಮಾಣಿಕವಾದ ಉತ್ತರವನ್ನು ಸ್ವಲ್ಪ ಕಾಲ ಅರಗಿಸಿಕೊಳ್ಳಲು ಆಗಲೇ ಇಲ್ಲ!

ಆದರೆ, ದಿನ ಕಳೆದಂತೆ ಅವರು ಅಂದು ಆಡಿದ ಮಾತುಗಳು ಎಷ್ಟೊಂದು ಸತ್ಯ ಎನ್ನುವುದು ನನ್ನ ಅನುಭವಕ್ಕೆ ಬಂದಿದೆ.

ಕನ್ನಡದ ಸಾರ್ವಭೌಮತೆಯ ಪ್ರಶ್ನೆ ಬಂದಾಗಲೆಲ್ಲ, ಸಾಮಾನ್ಯವಾಗಿ ಗೋಕಾಕ್ ಚಳವಳಿಯ ಪ್ರಸ್ತಾಪ ಮಾಡುತ್ತೇವಲ್ಲವೇ? ಆಗ 'ಪ್ರಜಾವಾಣಿ'ಯಂಥ ಪತ್ರಿಕೆಯೇ ಅದನ್ನು ಬೆಂಬಲಿಸಲಿಲ್ಲ ಎನ್ನುವುದು ಚರಿತ್ರೆಯಲ್ಲಿ ದಾಖಲಾಗಿರುವ ವಿಷಯ. ಇನ್ನು 'ಕನ್ನಡಪ್ರಭ' ಕರ್ನಾಟಕದಲ್ಲಿ ಹೇಗೆ ಶುರುವಾಯಿತು ಎನ್ನುವುದನ್ನು ತಿಳಿದುಕೊಳ್ಳೋಣ. ಇದು ಮೂಲತಃ ಇಂಗ್ಲಿಷ್ ಪತ್ರಿಕೆಯಾದ 'ಇಂಡಿಯನ್ ಎಕ್ಸ್‌ಪ್ರೆಸ್' ಸಮೂಹದ ಇನ್ನೊಂದು ಪತ್ರಿಕೆ. ಆ ಸಮೂಹದವರು ಬೆಂಗಳೂರಿನಲ್ಲಿ 'ಎಕ್ಸ್‌ಪ್ರೆಸ್' ಅನ್ನು ಶುರು ಮಾಡಲು ತಕ್ಕ ಜಾಗ ಕೇಳಿಕೊಂಡು ಆಗಿನ ಮುಖ್ಯಮಂತ್ರಿಯಾಗಿದ್ದ ಎಸ್.ನಿಜಲಿಂಗಪ್ಪನವರ ಬಳಿ ಹೋದರು. ಆಗ ನಿಜಲಿಂಗಪ್ಪನವರು, 'ನಾನು ಜಾಗ ಕೊಡಲು ಸಿದ್ಧ. ಆದರೆ ನನ್ನದೊಂದು ಷರತ್ತು. ನೀವು ಕರ್ನಾಟಕಕ್ಕೆ ಬರಬೇಕಾದರೆ ಒಂದು ಕನ್ನಡ ಪತ್ರಿಕೆಯನ್ನು ಆರಂಭಿಸಲೇಬೇಕು. ಇದಕ್ಕೆ ಒಪ್ಪಿಕೊಂಡರಷ್ಟೇ ಮುಂದಿನ ತೀರ್ಮಾನ ಸಾಧ್ಯ' ಎಂದರು. ನಿಜಲಿಂಗಪ್ಪನವರು ಅವತ್ತು ಹೀಗೆ ಷರತ್ತು ಹಾಕದಿದ್ದರೆ ಆ ಪತ್ರಿಕೆಯೇ ಹುಟ್ಟಿಕೊಳ್ಳುತ್ತಿರಲಿಲ್ಲವೇನೋ? ಇಂಥ ಉದಾಹರಣೆಗಳನ್ನು ಹೆಚ್ಚು ಬೆಳೆಸಬೇಕಾಗಿಲ್ಲ. ಏಕೆಂದರೆ ಮಿಕ್ಕಿದ್ದು ಯಾರ ಊಹೆಗಾದರೂ ಸುಲಭವಾಗಿ ನಿಲುಕುತ್ತದೆ.

ಸುದ್ದಿ ಮಾಧ್ಯಮಗಳಲ್ಲಿ ಕನ್ನಡ ಪರವಾದ ನಿಲುವು ಇರಬೇಕೆಂದು ಅಪೇಕ್ಷಿಸುವುದರಲ್ಲಿ ತಪ್ಪೇನೂ ಇಲ್ಲ. ಆದರೆ, ಮಾಧ್ಯಮಗಳು ಈ ನಿರೀಕ್ಷೆಗೆ ತಕ್ಕಂತಿವೆಯೇ ಎನ್ನುವುದೇ ಪ್ರಶ್ನೆ. ಉದಾಹರಣೆಗೆ, ಕಾವೇರಿ ನದಿ ನೀರಿನ ಹಂಚಿಕೆಯ ಸಮಸ್ಯೆಯನ್ನೇ ತೆಗೆದುಕೊಳ್ಳೋಣ. ಇದರಲ್ಲಿ ಈ ವಿವಾದವನ್ನು ಕುರಿತು ನ್ಯಾಯ ಮಂಡಳಿಯೋ ಇನ್ನೊಂದು ಪ್ರಾಧಿಕಾರವೋ ಕರ್ನಾಟಕದ ಹಿತಕ್ಕೆ ಪ್ರತಿಕೂಲವಾದ ಒಂದು ತೀರ್ಪನ್ನು ಕೊಟ್ಟಿತು ಎಂದು ಇಟ್ಟುಕೊಳ್ಳೋಣ. ಆಗ ನಮ್ಮ ನೆಲದ ಮಾಧ್ಯಮಗಳು–ಇದರಲ್ಲಿ ಪತ್ರಿಕೆಗಳು, ಟಿ.ವಿ. ಚಾನೆಲ್ಲುಗಳೆಲ್ಲ ಸೇರುತ್ತವೆ–ಕರ್ನಾಟಕದ ಪರವಾಗಿಯೇ ನಿಲ್ಲಬೇಕು ಎಂದುಕೊಳ್ಳುತ್ತಾರೆ ಜನ. ಆದರೆ, ಇವತ್ತಿನ ಸುದ್ದಿ ಮಾಧ್ಯಮ ಸಂಸ್ಥೆಗಳಿಗೆ ಇದೊಂದು ಸೇವೆಯಲ್ಲ. ಅದು, ಒಂದು ಪಕ್ಕಾ ವ್ಯಾಪಾರ ಅಷ್ಟೆ. ಜನರು ಸೇವೆಯ ಸಂಕೇತವೆಂದು ಗ್ರಹಿಸಿಕೊಂಡಿರುವ ಪತ್ರಿಕೆಗಳು, ಚಾನೆಲ್ಲುಗಳೆಲ್ಲ ಮಾಲೀಕರ ಕಣ್ಣಲ್ಲಿ ಒಂದು ಉತ್ಪನ್ನ ಅಷ್ಟೆ. ಏಕೆಂದರೆ, ಸುದ್ದಿ ಮಾಧ್ಯಮಗಳನ್ನು ನಡೆಸುತ್ತಿರುವ ಹೆಚ್ಚಿನ ಸಂಸ್ಥೆಗಳಿಗೂ ಇದೇ ಪ್ರಧಾನ ಉದ್ಯಮವಲ್ಲ. ತಮ್ಮ ಇನ್ನಿತರ ದೊಡ್ಡದೊಡ್ಡ ಉದ್ಯಮಗಳ ಹಿತಾಸಕ್ತಿ ಕಾಯ್ದುಕೊಳ್ಳಲು, ಅವುಗಳ ಪರವಾದ ಒಂದು ನೀತಿ–ನಿಯಮಗಳು ಬರುವಂತೆ ಒತ್ತಡ ಹೇರುವ ಸಲುವಾಗಿ ಈ ಮಾಧ್ಯಮಗಳ ಸೃಷ್ಟಿಯಾಗಿರುತ್ತದಷ್ಟೆ. ಇದರ ಜೊತೆಗೆ, ಇಂದು ಬಹುತೇಕ ಎಲ್ಲ ಮಾಧ್ಯಮಗಳೂ ಒಂದಕ್ಕಿಂತ ಹೆಚ್ಚಿನ ರಾಜ್ಯಗಳಲ್ಲಿ ನೆಲೆ ನಿಂತಿರುತ್ತವೆ. ಒಂದು ಟಿವಿ ಸಂಸ್ಥೆಯು ನಾಲ್ಕೈದು ರಾಜ್ಯಗಳಲ್ಲಿ, ಅಲ್ಲಲ್ಲಿಯ ಪ್ರಾದೇಶಿಕ ಭಾಷೆಗಳ ಚಾನೆಲ್ ಹೊಂದಿರುತ್ತದೆ; ಪತ್ರಿಕೆಗಳ ಕತೆಯೂ ಹೀಗೆಯೇ. ಹೀಗಾಗಿಯೇ ಕಾವೇರಿ ನದಿಯ ವಿಚಾರಕ್ಕೆ ಬಂದರೆ, ಕರ್ನಾಟಕವಲ್ಲಿರುವ ತಮ್ಮದೇ ಚಾನೆಲ್‌ನಲ್ಲಿ ಇಲ್ಲಿಯ ಪರ

ನಿಂತು, ತಮಿಳುನಾಡಿನಲ್ಲಿರುವ ಅದೇ ಸಂಸ್ಥೆಯ ಇನ್ನೊಂದು ಚಾನೆಲ್‌ನಲ್ಲಿ ಅಲ್ಲಿಯ ಪರ ನಿಲ್ಲಬೇಕಾಗುತ್ತದಲ್ಲವೇ? ಉಳಿದ ವಿಚಾರಗಳಿಗೂ ಇದೇ ಮಾತು ಒಪ್ಪುತ್ತದೆ.

ಇವತ್ತು ಸುದ್ದಿ ಮಾಧ್ಯಮಗಳು ಕೂಡ ದೊಡ್ಡ ದೊಡ್ಡ ಕಾರ್ಪೊರೇಟ್ ಕಂಪನಿಗಳಂತೆ ಆಗಿವೆ. ಹೀಗಾಗಿ ಇವು ಕನ್ನಡ ವರ್ಸಸ್ ಇಂಗ್ಲಿಷ್‌ನ ವಿಷಯಕ್ಕೆ ಬಂದರೆ ಆಳದಲ್ಲಿ ಇಂಗ್ಲಿಷಿನ ಪರವಾಗಿಯೇ ಇರುತ್ತವೆ! ಸ್ಥಳೀಯರ ಹಿತ ಮತ್ತು ವಲಸೆಗಾರರ ಉಪಟಳದ ವಿಚಾರ ಬಂದಾಗ ಪ್ರಜಾಸತ್ತೆ, ಸಾಂವಿಧಾನಿಕ ತತ್ವ ಮುಂತಾದ ಪ್ರಸ್ತಾಪಗಳನ್ನು ಮಾಡಿ ಸ್ಥಳೀಯರನ್ನು ಮರೆಯುತ್ತವೆ ಅಥವಾ ಅವರ ವಾದಗಳೆಲ್ಲ ಹಿಂದಕ್ಕೆ ಸರಿಯುವಂತೆ ನೋಡಿಕೊಳ್ಳುತ್ತವೆ. ಇದಕ್ಕೆ ಉದಾಹರಣೆಯಾಗಿ ಶಿಕ್ಷಣದಲ್ಲಿ ಕನ್ನಡ ಮಾಧ್ಯಮವನ್ನು ತರುವ ಒಂದು ವಿಚಾರವನ್ನೇ ನೋಡಬಹುದು. ನಮ್ಮ ಪ್ರಾಥಮಿಕ ಶಿಕ್ಷಣ ಕನ್ನಡ ಮಾಧ್ಯಮದಲ್ಲಿ ಇರಬೇಕೋ, ಇಂಗ್ಲಿಷ್ ಮಾಧ್ಯಮಕ್ಕೂ ಅವಕಾಶ ಇರಬೇಕೋ ಎಂಬ ವಿವಾದ ತಾರಕಕ್ಕೇರಿದಾಗ, ಈ ಸಂಬಂಧವಾಗಿ ನಮ್ಮ ರಾಜ್ಯದ ಯಾವ ಒಂದೇ ಒಂದು ಪತ್ರಿಕೆಯೂ ತುಂಬಾ ವಿವರವಾದ ಒಂದು ಲೇಖನವನ್ನು ಪ್ರಕಟಿಸಲಿಲ್ಲ. ಈ ಒಂದು ಉದಾಹರಣೆಯೇ ಪತ್ರಿಕೆಗಳ ಧೋರಣೆ ಏನೆನ್ನುವುದನ್ನು ಹೇಳುತ್ತದೆ. ಇದನ್ನು ತಾಟಸ್ಥ್ಯದ ಹೆಸರಿನಲ್ಲಿ ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲ. ನಮ್ಮ ಹೆಚ್ಚಿನ ಮಾಧ್ಯಮಗಳು ಯಾವುದೋ ಒಂದು ಜುಲುಮೆಗೆ ಕನ್ನಡದ ಪರವಾಗಿರುವಂತೆ ಅಭಿನಯಿಸುತ್ತ, ಆಂತರ್ಯದಲ್ಲಿ ಅದಕ್ಕೆ ತದ್ವಿರುದ್ಧವಾದ ಒಲವು ಹೊಂದಿರುವುದೇ ಇಂಥದಕ್ಕೆಲ್ಲ ಕಾರಣ.

ಒಂದು ಕಾಲದಲ್ಲಿ ಪತ್ರಕರ್ತರ ಜಗತ್ತಿನಲ್ಲಿ ಡಿವಿಜಿ, ತಿ.ತಾ. ಶರ್ಮ, ಸಿದ್ದವನಹಳ್ಳಿ ಕೃಷ್ಣಶರ್ಮ, ಖಾದ್ರಿ ಶಾಮಣ್ಣ, ವೈಎಸ್‌ಕೆ ಮುಂತಾದ ಧೀಮಂತರಿದ್ದರು. ಅವರು, ತಮ್ಮ ನಿಲುವುಗಳಿಂದ ಕನ್ನಡ ಜನ ಸಮುದಾಯದ ಹಿತವನ್ನು ಕಾಯುತ್ತಿದ್ದರಲ್ಲದೆ, ಅಂಥ ಪರಂಪರೆಯ ಅಗತ್ಯ ಎಷ್ಟೊಂದಿದೆ ಎಂಬುದನ್ನು ಮನಗಂಡವರಾಗಿದ್ದರು. ಇವತ್ತು ಪತ್ರಿಕಾ ಕಚೇರಿಗಳಲ್ಲಿ ಭೂತಗನ್ನಡಿ ಹಾಕಿಕೊಂಡು ಹುಡುಕಿದರೂ ಅಂಥ ಒಬ್ಬ ಘನವಾದ ಪತ್ರಕರ್ತ ಸಿಗುವುದಿಲ್ಲ. ಪತ್ರಿಕಾಲಯಗಳಲ್ಲಿ ಈಗ ಸಾಮುದಾಯಿಕ ಹಿತಾಸಕ್ತಿಗಳು ಮೂಲೆಗುಂಪಾಗಿ, ಗಿಲೀಟು ಮಾತಿನ ವ್ಯಾಪಾರಿ ಹಿತಾಸಕ್ತಿಗಳು ಮೇಲುಗೈ ಸಾಧಿಸಿವೆ. ಬೆಂಗಳೂರಿನಲ್ಲಿ ಬರುವ ಯಾವುದೋ ಒಂದು ಐಷಾರಾಮಿ ಮಾಲ್ ಅನ್ನು ಹೊಗಳಿ ಅಟ್ಟಕ್ಕೇರಿಸಿ, ಅದರ ಬಗ್ಗೆ ವರ್ಣನಾತ್ಮಕ ಭಾಷೆಯಲ್ಲಿ ಪುಟಗಟ್ಟಲೆ ಬರೆಯುವ ಪತ್ರಿಕೆಗಳು ಕೇಂದ್ರ ಸರಕಾರಿ ಸ್ವಾಮ್ಯದ ಇಲಾಖೆ/ಕಾರ್ಖಾನೆಗಳಲ್ಲಿ ಕನ್ನಡಿಗರನ್ನು ಕಡೆಗಣಿಸಲಾಗುತ್ತಿದೆ ಎಂಬ ವಿಷಯದ ಬಗ್ಗೆ ಎರಡು ಸಾಲನ್ನೂ ಬರೆಯುತ್ತಿಲ್ಲ. ಇನ್ನೂ ಕೆಲವು ಕಡೆಗಳಲ್ಲಿ ಪತ್ರಿಕೆಗಳ ಚುಕ್ಕಾಣಿ ಹಿಡಿದಿರುವವರಿಗೆ ಕರ್ನಾಟಕದ ಸಂವೇದನೆಗಳ ಬಗ್ಗೆ, ಅಗತ್ಯಗಳ ಬಗ್ಗೆ, ಒಂದು ಸಮಗ್ರ ಗ್ರಹಿಕೆಯೇ ಇಲ್ಲ. ಹೀಗಾಗಿ, ಕನ್ನಡದ ಹೆಚ್ಚಿನ ಪತ್ರಿಕೆಗಳು ಒಂದೋ ಇಂಗ್ಲಿಷ್ ಪತ್ರಿಕೆಗಳಲ್ಲಿ ಆಕರ್ಷಕವಾಗಿ ಕಂಡಿದ್ದನ್ನು ಎರವಲು ತರುತ್ತಿವೆ ಅಥವಾ ಇಂಟರ್‌ನೆಟ್‌ನಲ್ಲಿ ಜಾಲಾಡಿ, ಅಲ್ಲಿಂದ ಏನನ್ನೋ ಸಂತೆಯ ಹೊತ್ತಿಗೆ ಮೂರು ಮೊಳ ಎನ್ನುವಂತೆ ಎರವಲು ತರುತ್ತಿವೆ; ತಪ್ಪಿದರೆ, ನೇರವಾಗಿ ಎಂಜಲು ಪತ್ರಿಕೆಗಳಾಗುತ್ತಿವೆ.

ಕನ್ನಡ–ಕನ್ನಡಿಗ–ಕರ್ನಾಟಕಗಳ ಹಿರಿಮೆ, ಅಗಾಧತೆಯ ಕಲ್ಪನೆ ಪತ್ರಕರ್ತರಿಗೆ ಇಲ್ಲದಿರುವುದರಿಂದ ಆಗುತ್ತಿರುವುದರ ಅಪಾಯವಿದು. ಪ್ರಾಮಾಣಿಕವಾಗಿದ್ದಾಗ ಮಾತ್ರ ಇಂಥ ಕಲ್ಪನೆಗಳು ಬರಲು ಸಾಧ್ಯ ಎನ್ನುವುದರಲ್ಲಿ ಅನುಮಾನವಿಲ್ಲ. ಆದರೆ, ಇವತ್ತು ಪತ್ರಕರ್ತರಲ್ಲೂ ದುಡ್ಡುಕಾಸು ಮಾಡಿಕೊಳ್ಳಲು ಸಿಗುವ ಒಂದು 'ಚಾನ್ಸ್' ಅನ್ನು ನೋಡುತ್ತಿರುವವರು ಹೆಚ್ಚಾಗುತ್ತಿದ್ದಾರೆಯೇ ವಿನಃ ಸುತ್ತಲಿನ ಸಮಾಜಕ್ಕಾಗಿ ಮಿಡಿಯುವವರಲ್ಲ.

ಇಂದು ಹೆಚ್ಚಿನ ರಾಜಕಾರಣಿಗಳು ಸುದ್ದಿ ಮಾಧ್ಯಮ ಕ್ಷೇತ್ರಕ್ಕೆ ಕಾಲಿಡುತ್ತಿದ್ದು ಪತ್ರಿಕೆಯನ್ನೋ, ಟಿವಿ ಚಾನೆಲ್ಲನ್ನೋ ಹುಟ್ಟುಹಾಕುತ್ತಿದ್ದಾರೆ. ಇವು ತಮ್ಮ 'ಸ್ವಾಮಿನಿಷ್ಠೆ'ಯನ್ನು ಬಹಳ ಢಾಳಾಗಿಯೇ ಪ್ರದರ್ಶಿಸುತ್ತಿವೆ. ಇನ್ನೊಂದೆಡೆಯಿಂದ ಮಾಧ್ಯಮಗಳು ಉಳ್ಳವರ ಬೇಕು–ಬೇಡಗಳಿಗಷ್ಟೇ ಸ್ಪಂದಿಸುತ್ತಿವೆ. ಅವಕ್ಕೆ ಭಾಷೆ, ಸಂಸ್ಕೃತಿ, ಉದ್ಯೋಗ ಮತ್ತು ಸ್ಥಳೀಯತೆಯ ಅನನ್ಯತೆಗಿಂತ ಹೆಚ್ಚಾಗಿ ಮೈಸೋಪು, ನಟಿಯ ವಯ್ಯಾರ, ಕ್ರಿಕೆಟಿಗನ ಪ್ರಣಯ, ರಾಜಕಾರಣಿಯೊಬ್ಬನ ವಾಮಾಚಾರ, ಇನ್ಯಾರೋ ಮುಖಕ್ಕೆ ಹಚ್ಚಿಕೊಳ್ಳುವ ಕ್ರೀಮು – ಇವೇ ಬಹಳ ಮುಖ್ಯವಾಗಿವೆ. ಘನವಾದುದನ್ನು ಅರಿಯುವ ಸಾಮರ್ಥ್ಯ ಕಣ್ಮರೆಯಾದಾಗ ಧುತ್ತನೆ ಪ್ರತ್ಯಕ್ಷವಾಗುವ ಮಾರುವೇಷದ ತಂತ್ರಗಾರಿಕೆ ಇದು. ನಮ್ಮ ಕನ್ನಡ ಪತ್ರಿಕಾರಂಗ ಈಗ ಇಂಥ ಸ್ಥಿತಿಯಲ್ಲಿದೆ. ಇನ್ನು ಬರೀ ಅಪರಾಧ ಚಟುವಟಿಕೆಗಳ ಹಿಂದೆ ಬಿದ್ದಿರುವ ಟಿವಿ ಚಾನೆಲ್ಲುಗಳ ಬಗ್ಗೆ ಹೇಳುವುದೇ ಬೇಡ! ಅವಕ್ಕೆ ಸ್ಥಳೀಯ ಸಂಸ್ಕೃತಿಯ ಪರವಾದ ಮಿಡಿತಗಳೇ ಇಲ್ಲ. ಎಲ್ಲವನ್ನೂ ದೊಡ್ಡ ಗಂಟಲಿನ ಬೊಬ್ಬೆಯಲ್ಲಿ ಅರಚಿಕೊಳ್ಳುವ ವಿಕಾರ ಅವುಗಳದು.

ಕೇವಲ ಹದಿನೈದು ವರ್ಷಗಳ ಹಿಂದೆ ನಮ್ಮ ಸುದ್ದಿ ಮಾಧ್ಯಮಗಳು ಇಷ್ಟೊಂದು ಹದಗೆಟ್ಟಿರಲಿಲ್ಲ. ಅಂದರೆ ಸಮಾಜದ ಉಳಿದ ರಂಗಗಳಲ್ಲಿ ಕಾಣಿಸಿಕೊಂಡಿರುವ ಅವಸಾನದ ಪ್ರವೃತ್ತಿ, ಸುದ್ದಿ ಮಾಧ್ಯಮಗಳಲ್ಲೂ ಕಾಣಿಸಿಕೊಂಡಿದೆ. ಜನ ಸಮುದಾಯಕ್ಕೆ ಯಾವುದು ಹಿತ ಎಂದು ಯೋಚಿಸುವಂಥ ಅಂತಃಸತ್ವವುಳ್ಳವರು ಸುದ್ದಿ ಮಾಧ್ಯಮಗಳ ಒಳಗಿನಿಂದ ಕ್ಷಿಪ್ರಗತಿಯಲ್ಲಿ ಕಣ್ಮರೆಯಾಗುತ್ತಿದ್ದಾರೆ. ಕನ್ನಡದಲ್ಲಿ ಒಂದು ವಾಕ್ಯವನ್ನು ಕೂಡ ಸರಿಯಾಗಿ ಬರೆಯಲು ಬಾರದ ಪತ್ರಕರ್ತರ ಸಂತತಿಯೇ ಹೆಚ್ಚಾಗುತ್ತಿರುವ ದಿನಗಳಿವು. ಇಂಥವರಿಂದ ಕನ್ನಡದ ಪರವಾದ ನಿಲುವುಗಳನ್ನು ನಿರೀಕ್ಷಿಸುವುದು ದುಬಾರಿಯೇ ಸರಿ. ಸುದ್ದಿ ಮಾಧ್ಯಮಗಳಿಂದಲೇ ಕನ್ನಡ ಉಳಿಯುತ್ತಿದೆ ಎನ್ನುವುದು ಆ ಮಾಧ್ಯಮಗಳ ಒಳಗಿನ ಮರ್ಮ ಗೊತ್ತಿಲ್ಲದೆ ಇರುವ ಹೊರಗಿನವರ ಗ್ರಹಿಕೆಯಷ್ಟೆ. ಕನ್ನಡವಿರಲಿ ಇಂಗ್ಲಿಷ್ ಇರಲಿ ಅಥವಾ ಬೇರಾವುದೇ ವಿಚಾರವಿರಲಿ– ದುಡ್ಡು ಬರುತ್ತದೆ ಎಂದರೆ ಮಾತ್ರ ಅಲ್ಲಿ ಮಾಧ್ಯಮಗಳು ಪ್ರತ್ಯಕ್ಷವಾಗುತ್ತವಷ್ಟೆ ಎನ್ನುವುದು ಜನರಿಗೆ ಗೊತ್ತಾಗಬೇಕಾದ ಸಂಗತಿ. ಎಲ್ಲವನ್ನೂ ರೋಚಕವಾಗಿ ಬಿಂಬಿಸಲು ಹೆಣಗಾಡುವ ಮಾಧ್ಯಮಗಳಿಗೆ ಭಾಷೆ–ಸಂಸ್ಕೃತಿಯ ವಿಚಾರ ಅಷ್ಟೊಂದು ರೋಚಕವಾಗುವುದಾದರೂ ಹೇಗೆ? ಬಹುಶಃ ಮಾಧ್ಯಮಗಳ ಶುದ್ಧೀಕರಣ ಯಾವುದಾದರೂ ಒಂದು ರೂಪದಲ್ಲಿ–ಒಳಗಿನ ಅವಲೋಕನದಿಂದಾದರೂ ಸರಿ, ಹೊರಗಿನ ಒತ್ತಡದಿಂದಾದರೂ ಸರಿ – ಆದ ಮೇಲಷ್ಟೇ ಅವು ಮತ್ತೆ ಜನರ ಆಶೋತ್ತರಗಳಿಗೆ ಮಿಡಿಯುವುದು ಸಾಧ್ಯ ಎನಿಸುತ್ತದೆ. ⌐


ಪತ್ರಿಕೆಗಳಲ್ಲಿ ಕನ್ನಡ ಪದಗಳು

■ **ಈಶ್ವರ ದೈತೋಟ**

ನಾನು ಬಜೆಟ್ ವರದಿ ಮಾಡಲು ಪ್ರಾರಂಭಿಸಿದಾಗಿನಿಂದಲೂ ಅನೇಕರು ಪ್ರಶ್ನೆಯೊಂದನ್ನು ಮತ್ತೆ ಮತ್ತೆ ಕೇಳುತ್ತಿರುವುದನ್ನು ಗಮನಿಸಿದ್ದೇನೆ. ಅದೇನೆಂದರೆ, ಇಂಗ್ಲಿಷ್ ಪತ್ರಿಕೆಗಳಲ್ಲಿ 'ಫೈನಾನ್ಸ್ ಮಿನಿಸ್ಟರ್ ಪ್ರೆಸೆಂಟ್ಸ್ ಬಜೆಟ್' ಎಂದು ಬರೆದಿರುತ್ತಾರೆ. ಎಷ್ಟು ಚೆನ್ನಾಗಿದೆ ಆ 'ಬಜೆಟ್' ಎಂಬ ಪದ. ಕನ್ನಡದವರು ಅದನ್ನು 'ಆಯ–ವ್ಯಯ ಪ್ರಸ್ತಾವನೆಗಳು' ಎಂದು ಭಾಷಾಂತರ ಮಾಡಿ ಯಾರಿಗೂ ಸುಲಭಕ್ಕೆ ಅರ್ಥವಾಗದ ಹಾಗೆ ಮಾಡಿಬಿಡುತ್ತಾರೆ. 'ಆಯ–ವ್ಯಯ' ಎಂಬ ಪದರಚನೆಯೂ ಅಷ್ಟೇನೂ ಪಸಂದಾಗಿಲ್ಲ ಎಂದೂ ಟೀಕಿಸುತ್ತಲಿರುತ್ತಾರೆ. ಪಾರ್ಲಿಮೆಂಟ್ ಎಂಬುದಕ್ಕೇನೋ ಸುಂದರವಾದ, ಪುಟ್ಟಪದ ಇದೆ ಸಂಸತ್ತು ಎಂದು. ಅದಾದರೆ ಪರವಾಗಿಲ್ಲ ಎಂದು ಒಂದಿಷ್ಟು ಸಮಾಧಾನವನ್ನೂ ಮಾಡಿದವರಿದ್ದಾರೆ.

ನನಗೆ ಕಾಡುವ ಒಂದು ಅನುಮಾನವೆಂದರೆ ಇಂಗ್ಲಿಷಿನ ಬಜೆಟ್ ಎಂಬ ಬಳಕೆಯನ್ನು ಕನ್ನಡದಲ್ಲಿ ಅರ್ಥಶಃ ಅಂದರೆ ಅರ್ಥಪೂರ್ಣವಾಗುವಂತೆ ಬರೆದರೆ ಅದನ್ನು ಓದುಗರು ಒಪ್ಪಿಯಾರೇ ಎಂದು. ಹೀಗೆ ಹೇಳಬಹುದು, ಆರ್ಥಿಕ ಸಚಿವರು ಸಂಸತ್ತಿನಲ್ಲಿಂದು ತಮ್ಮ ಹಡಪ ಇಟ್ಟರು. ಹಡಪ ಎಂದರೆ ನೆನಪಾಗುವುದೇ ತಲೆಕ್ಷೌರ–ಬೋಳಿಸುವಿಕೆ. ಬಜೆಟ್ಟಿನ ಕರ ಭಾರಗಳನ್ನು ಗಮನಿಸಿದರೆ ಈ ಪದವೇ ಸೂಕ್ತ ಎಂದೂ ವರ್ಣಿಸಬಹುದು.

ಮೈಸೂರಿನಲ್ಲಿ ಕನ್ನಡ ಅಧ್ಯಯನ ಸಂಸ್ಥೆಗೆ ಹಾ.ಮಾ. ನಾಯಕರು ನಿರ್ದೇಶಕರಾಗಿದ್ದರು. ಒಮ್ಮೆ ಪತ್ರಿಕೋದ್ಯಮ ವಿದ್ಯಾರ್ಥಿಗಳನ್ನು



ಉದ್ದೇಶಿಸಿ ಮಾತನಾಡುತ್ತಾ, ಕನ್ನಡ ನಿಘಂಟಿಗೆ ಟ್ಯೂಬ್‌ಲೈಟ್ ಎಂಬ ಇಂಗ್ಲಿಷ್ ಪ್ರಯೋಗಕ್ಕೆ ಸಮಾನಾರ್ಥ ಕೊಡುವ ಕನ್ನಡ ಪದಕ್ಕಾಗಿ ಪಂಡಿತರುಗಳೆಲ್ಲರೂ ಪರದಾಡುತ್ತಿದ್ದಾಗ, ದಿನವೂ ಬೆಳಗಿನಲ್ಲಿ ಸೈಕಲ್‌ನಲ್ಲಿ ಬಂದು, ಮನೆಗೆ ಹಾಲು ಹಾಕಿ ಹೋಗುವ ಬೋರನ ಪದ ಒಪ್ಪಿಗೆ ಹೇಗಾಯಿತು ಎಂಬ ಕಥೆ ಹೇಳಿದ್ದರು. ಮತ್ತೊಬ್ಬ ಪ್ರೊಫೆಸರ್ ಮನೆಗೆ ದಿನವೂ ಹಾಲು ಹಾಕಬೇಕೆಂದು ಅವರ ವಿಳಾಸ ಹೇಳಿದಾಗ ಬೋರಣ್ಣ ಕೇಳಿದನಂತೆ, 'ಅದೇ ಅಂಡೆದೀಪ ಹಾಕಿದ್ದಾರಲ್ಲಾ ಆ ಮನೇನಾ ಬುದ್ಧಿ' ಎಂದು. ಆ ಮನೇ ಮುಂದೆ ಟ್ಯೂಬ್‌ಲೈಟ್ ಇದ್ದುದು ನಾಯಕರಿಗೆ ನೆನಪಾಯಿತು. ಹೌದು ಅದೇ ಮನೆ. ಪ್ರೊಫೆಸರ್ ಮನೆಗೆ ಹಾಲು ವರ್ತನೆ ಅವತ್ತಿನಿಂದಲೇ ಶುರುವಾಯಿತು. ಟ್ಯೂಬ್‌ಲೈಟಿಗೊಂದು ಒಗ್ಗಿಕೊಳ್ಳುವ ಅಂದರೆ ಸೂಕ್ತ ಕನ್ನಡ ಜನ ಪದವೂ ವ್ಯುತ್ಪತ್ತಿಯಾಯಿತು.

ಬಜೆಟ್ ಪದವನ್ನು ಅರ್ಥೈಸಿಕೊಳ್ಳುವುದಕ್ಕೆ ಸುಲಭ ದಾರಿಯೆಂದರೆ ಆ ಪದ ಹೇಗೆ ಸೃಷ್ಟಿ ಆಯಿತೆಂಬ ರಹಸ್ಯ. ಬಜೆಟ್ ಎಂಬ ಶಬ್ದದ ಬಳಕೆ ಹೇಗಾಯಿತು ಗೊತ್ತೇನು? ಮದರ್ ಆಫ್ ಆಲ್ ಪಾರ್ಲಿಮೆಂಟ್ಸ್ ಅಂದರೆ ಬ್ರಿಟನ್ನಿನ ಸಂಸತ್ತು. ಅಲ್ಲಿನ ಫೈನಾನ್ಸ್ ಮಿನಿಸ್ಟರ್ ವರ್ಷಕ್ಕೊಮ್ಮೆ ಬಜೆಟ್ ಮಂಡಿಸಿ ಬರಲು ತೊಡಗಿದಾಗ, ಅದಕ್ಕೆ ಬಜೆಟ್ ಎಂದು ನಾಮಕರಣವಾಗಿರಲಿಲ್ಲ. 'ಹಣಕಾಸಿನ ಅಥವಾ ತೆರಿಗೆಗಳ ಪ್ರಸ್ತಾವನೆಗಳು' ಎಂದೇ ಹೇಳಲಾಗುತ್ತಿತ್ತು. ಅಂದರೆ, 'ಆಯ-ವ್ಯಯ ಮಂಡನೆ'ಯೇ ಆಯಿತಲ್ಲ. ಸಂಸತ್ತಿನ ಈ ಕಲಾಪದಲ್ಲಿ ಮಾಧ್ಯಮದವರಿಗೆ ಅತಿಯಾದ ಆಸಕ್ತಿ; ಏಕೆಂದರೆ, ಜನಸಮುದಾಯ ಗಳಿಗೆ ಅದರಲ್ಲಿ ಅತೀವ ಕುತೂಹಲ ಇರುತ್ತದೆ. ಮುಂದಿನ ವರ್ಷದಿಂದ ಜೋಬಿನಿಂದ ಎಷ್ಟು ಕನ್ನಹಾಕಿ ತೆಗೆಯುತ್ತಾರಪ್ಪಾ ಎಂಬ ಭೀತಿಯಾಧಾರಿತ ಕುತೂಹಲ, ಇಲ್ಲವೇ ನಮಗೇನಾದರೂ ಉಳಿತಾಯವಾಗುವ ನಿರೀಕ್ಷೆ ಮಡಗಬಹುದಾ ಅಂತ ಆಸೆ.

ಈ ಪ್ರಸ್ತಾವನೆ ಅತ್ಯಂತ ರಹಸ್ಯ ಮಾಹಿತಿ. ಎಲ್ಲಾದರೂ ಮಂಡನೆಗೆ ಮೊದಲೇ ಬಹಿರಂಗಗೊಂಡರೆ, ಸರಕಾರದ ಮಂಡೆಯೇ ಉರುಳಿ ಹೋಗುವ ಅಪಾಯವಿದ್ದೇ ಇದೆ. ಅದಕ್ಕಾಗಿ, ಮೊದಮೊದಲು ಅರ್ಥಸಚಿವರು ಬಜೆಟ್ ಭಾಷಣ ಓದಿ ಮುಗಿಸುವವರೆಗೂ ಅದರ ಪ್ರತಿಗಳನ್ನು ಯಾರಿಗೂ ಹಂಚುವ ಕ್ರಮ ಇರಲಿಲ್ಲ. ಕ್ರಮೇಣ ಸದಸ್ಯರೆಲ್ಲರಿಗೂ ವಿಶ್ಲೇಷಣೆ ಮಾಡಿಕೊಳ್ಳಲು ಅನುಕೂಲವಾಗಲಿ ಎಂದು ಸಚಿವರು ಭಾಷಣಕ್ಕೆ ತೊಡಗಿದ ಕೂಡಲೇ ಮುದ್ರಿತ ಪ್ರತಿಗಳನ್ನು ವಿತರಿಸುವ ಪದ್ಧತಿ ಬಂತು. ಸದನದೊಳಗೆ ಕಲಾಪ ವರದಿ ಮಾಡುವ ಪತ್ರಕರ್ತರುಗಳಿಗೂ ಈ ಪ್ರತಿ ಸಿಗಲು ಕಾಯಬೇಕಾದ ಪರಿಸ್ಥಿತಿಯಿದೆ.

ಇಷ್ಟೊಂದು ಕಟ್ಟುನಿಟ್ಟಾದ ನಿಯಮಾವಳಿ ಇರುವಾಗ, ಅದನ್ನು ಗೌರವಿಸುವ ಪದ್ಧತಿಯೂ ಇತ್ತು. ಬ್ರಿಟಿಷ್ ಫೈನಾನ್ಸ್ ಮಿನಿಸ್ಟರ್ ಪ್ರಸ್ತಾವಗಳೇನಿರುತ್ತವೆ ಎಂಬ ಕುತೂಹಲ, ಆಗಿನ ಕಾಲದಲ್ಲಿ ಎಲ್ಲೆಲ್ಲಿ ಬ್ರಿಟಿಷ್ ಸಾಮ್ರಾಜ್ಯ ವಿಸ್ತರಿಸಿತ್ತೋ ಅಲ್ಲೆಲ್ಲ ಇತ್ತು. ಸಹಜವಾಗಿಯೇ ಅಲ್ಲಿನ ಸ್ಥಳೀಯ ಮತ್ತು ವಿದೇಶಿ ಪತ್ರಿಕೆಗಳಿಗೆ ದೊಡ್ಡ ಸುದ್ದಿಯೇ ಸೈ. ಜೊತೆಗೆ ಮಂಡನೆ ಮುಹೂರ್ತದವರೆಗೂ ತೆರಿಗೆ ರಹಸ್ಯ ಕಾಯ್ದುಕೊಳ್ಳಬೇಕಲ್ಲ. ಅರ್ಥಸಚಿವರ ಕೈಚಳಕದ ಸುಳಿವೂ ಕೂಡಾ ಸಿಗಬಾರದೆಂದು, ಅದನ್ನು ಅವರೇ

ಸಿದ್ಧಪಡಿಸಿ, ಚರ್ಮದ ಚೀಲವೊಂದರಲ್ಲಿ ಭದ್ರವಾಗಿ ಹಾಕಿ, ಅದನ್ನು ಕೈಯಲ್ಲಿ ಹಿಡಿದು ಕೊಂಡು ಅವರು ಸಂಸತ್ತು ಪ್ರವೇಶಿಸುವುದೊಂದು ಮೈಪುಳಕದ ಕ್ಷಣವಾಗಿತ್ತು. ಫೈನಾನ್ಸ್ ಮಿನಿಸ್ಟರ್ ಕೈನಲ್ಲಿನ ಮೂರು ಮಡಿಕೆಗಳ ಕೋಣಚರ್ಮದ ಆ 'ಲೆದರ್ ಬ್ಯಾಗಿ'ನ ಹೆಸರು 'ಬಜೆಟ್'. ನಮ್ಮೂರಿನ ಹಳೆ ಆರ್.ಎಂ.ಪಿ. ವೈದ್ಯರುಗಳು ಹಾಗೂ ಕೆಲವು ಆಡಿಟರುಗಳು ಇಂತಹುದೇ ಬ್ಯಾಗ್‌ಗಳನ್ನು ಹಿಡಿದುಕೊಂಡು ಓಡಾಡುವುದನ್ನು ಹಳಬರು ಇವತ್ತೂ ನೆನಪು ಮಾಡಿಕೊಳ್ಳಬಹುದು. ಡಾಕ್ಟರ್ ಹೌಸ್ ವಿಸಿಟ್ ಮಾಡಲು ಬರುವಾಗ ಮತ್ತು ಹಿಂತಿರುಗುವಾಗ, ಅವರನ್ನು ಕರೆತಂದ ವ್ಯಕ್ತಿ ಅಮೃತವೇ ಇದೆಯೇನೋ ಎಂಬಷ್ಟು ಭದ್ರವಾಗಿ ಬ್ಯಾಗನ್ನು ಹಿಡಿದಿಟ್ಟುಕೊಂಡಿರಬೇಕಾಗಿತ್ತು. ಒಟ್ಟಿನಲ್ಲಿ ಕ್ಷೌರಿಕ ಹಿಡಿದು ಕೊಳ್ಳುತ್ತಿದ್ದಂತಹುದೇ ಪೆಟ್ಟಿಗೆ. ಅದರ ಹೆಸರೇ ಕ್ಷೌರಪೆಟ್ಟಿಗೆ ಅಥವಾ ಹಡಪ ಅಥವಾ ಬಜೆಟ್.

ಬ್ರಿಟಿಷ್ ಅರ್ಥಸಚಿವರು ಬಜೆಟ್ ಅಥವಾ ದಪ್ಪನೆಯ ಲೆದರ್ ಬ್ಯಾಗನ್ನು ಹಿಡಿದು ಕೊಂಡು ಪಾರ್ಲಿಮೆಂಟಿನೊಳಬರುವಾಗ 'ಲುಕ್, ಹಿ ಹ್ಯಾಸ್ ಗಾಟ್ ದಿ ಬಜೆಟ್ ದೇರ್' ಅಂತ ಜನ ಎಕ್ಸೈಟ್ ಆಗಿ ನುಡಿಯುತ್ತಿದ್ದರು. ಅಂದರೆ 'ಹಿ ಹ್ಯಾಸ್ ಗಾಟ್ ದಿ ಟ್ಯಾಕ್ಸೇಶನ್ ಪ್ರಪೋಸಲ್ಸ್ ಕೆಪ್ಟ್ ಇನ್‌ಸೈಡ್ ಹಿಸ್ ಲೆದರ್ ಬ್ಯಾಗ್' ಎಂಬುದು ಪೂರ್ತಿ ಅದರ ಅರ್ಥವಾಗಿತ್ತು. ಈಗ ಹೇಳಿ, ಕನ್ನಡ ಪತ್ರಿಕೆಗಳು 'ಅರ್ಥಸಚಿವರು ತಮ್ಮ ಹಡಪವನ್ನು ಮಂಡಿಸಿದರು' ಎಂದು ಬರೆದರೆ ಏನು ಘನಂದಾರಿ ಪ್ರಯೋಗವಾಗಿ ಬಿಡುತ್ತಿತ್ತು! 'ಹಡಪವನ್ನು ಮೇಜಿನ ಮೇಲೆ ಕುಕ್ಕಿದ ಅರ್ಥಸಚಿವರು' ಎಂದರೆ ಇನ್ನೂ ಮಜಾ!

ಕನ್ನಡದಲ್ಲಿ, ಇಂಗ್ಲಿಷ್ ಅಥವಾ ಇತರ ಭಾಷೆಗಳ ಪದಗಳಿಗೆ ಸಮಾನಾರ್ಥ ಕೊಡುವ ಪದ ಹುಡುಕುವಾಗ, ಎಚ್ಚರವಿರಬೇಕೆನ್ನುವುದು ಇದೇ ಕಾರಣದಿಂದ. ಡಿಮ್ಯಾಂಡ್ ಅನ್ನೋ ಪದಕ್ಕೆ ಬೇಡಿಕೆ ಎಂಬ ಶಬ್ದ ಬಳಕೆಯಲ್ಲಿತ್ತು. ಏಕೆಂದರೆ, ಬ್ರಿಟಿಷ್ ಸರ್ಕಾರದ ಮುಂದೆ ಮಂಡಿಯೂರಿ ಬೇಡಿ (ಭಿಕ್ಷುಕರು ಮಾಡುವಂತೆ ಅಂಗಲಾಚಿ), ನಮ್ಮ ಸಾರ್ವಜನಿಕ ಕೆಲಸ ಮಾಡಿಸಿಕೊಂಡ ಅಭ್ಯಾಸಬಲದ ಪದ ಇದಾಗಿತ್ತು. ಎರಡು ದಶಕಗಳ ಹಿಂದೆ ಎಂ. ಚಿದಾನಂದಮೂರ್ತಿಯವರು 'ಡಿಮ್ಯಾಂಡ್ ಅನ್ನೋ ಪದಕ್ಕೆ ಬೇಡಿಕೆ ಎಂಬ ಪದ ಸರಿಯಲ್ಲ, ಹಕ್ಕೊತ್ತಾಯ ಎಂದು ಮಾಡಬೇಕಾಗಿದೆ'ಯೆಂದು ಸಮಾರಂಭ ವೊಂದರಲ್ಲಿ ಪ್ರಸ್ತಾಪಿಸಿದ್ದರು. ಆಗ ಅವರನ್ನು ಪ್ರಶ್ನಿಸಿದ್ದೆ, 'ಪದ ಯಾವುದಾದರೇನಂತೆ?' ಎಂದು. ನಮ್ಮ ಹಕ್ಕಿನದನ್ನು ಬೇಡುವಾಗ ದಯನೀಯತೆ ಯಾಕೆ? ಅದು ಅಧಿಕಾರವಾಣಿಯಿಂದ ಬರಬೇಕಲ್ಲವೇ? ಎಂದು. ಯೋಗ್ಯ ಪದಾರ್ಥ ಬಳಸಿ ಅಡುಗೆ ಮಾಡಬೇಕಾದ ಮಹತ್ವವನ್ನು ಅವರು ವರ್ಣಿಸಿದ್ದು ಇವತ್ತಿಗೂ ಜ್ಞಾಪಕವಿದೆ.

೩ನೆಯ ಮತ್ತು ೪ನೆಯ ಬಾರಿಗೆ ಕನ್ನಡ ಸಾಹಿತಿ ಗಣ್ಯರಿಗೆ ಜ್ಞಾನಪೀಠ ಪ್ರಶಸ್ತಿ ಲಭ್ಯವಾದಾಗ, ಕನ್ನಡಕ್ಕೆ ೩ನೆಯ ಕೋಡು, ೪ನೆಯ ಕೋಡು ಎಂದು ಒಂದೆರಡು ಪತ್ರಿಕೆಗಳು ತಲೆಬರಹ ಮೂಡಿಸಿದ್ದವು, 'ಫೆದರ್ ಇನ್ ದಿ ಕ್ಯಾಪ್' ಲೆಕ್ಕಾಚಾರದಲ್ಲಿ. ಒಂದು ಕೊಂಬಿನ ಪ್ರಾಣಿಯಿದೆ – ಯೂನಿಕಾರ್ನ್, ಶಾರ್ದೂಲ. ಎರಡು ಕೊಂಬಿನವು ಅಥವಾ ಕೊಂಬೇ ಇಲ್ಲದವು ಸಹಜ ಪ್ರಾಣಿಗಳು. ಹಾಗಿರುವಾಗ ಮೂರು, ನಾಲ್ಕು ಕೋಡುಗಳು

ಬಂದರೆ ಅಸಹಜ, ಅನ್ಯಾಚುರಲ್, ರಾಕ್ಷಸ ಸೃಷ್ಟಿ ಅಲ್ಲವೇನು? ಪ್ರಶಸ್ತಿ ಹೆಚ್ಚು ಸಿಗುವುದು ಪ್ರತಿಭೆಗೆ ಸಹಜವಲ್ಲವೇ!

ಹಾಗೆಯೇ, ಟೆಸ್ಟ್‌ಟ್ಯೂಬ್ ಬೇಬಿ ಹುಟ್ಟಿದಾಗ ಅಯೋನಿಜೆಯೆಂದು ಹೆಸರಿಸಲಾಗಿತ್ತು. ಸಂಯೋಗವಾದುದು ಪ್ರಯೋಗಾಲಯದ ನಳಿಕೆಯಲ್ಲಿ. ಆದರೆ ಮಗು ಬೆಳೆದುದು ಹುಟ್ಟಿದುದು ತಾಯಿ ಹೊಟ್ಟೆಯಿಂದ ಆಗಿರುವಾಗ ಇದೆಂತಹ ಪ್ರಯೋಗ? ಎಮರ್ಜೆನ್ಸಿ ಆಪರೇಶನ್ ಮಾಡಿ, ಅಂದರೆ ಸಿಸೇರಿಯನ್ ಮೂಲಕ ಹೊಟ್ಟೆ ಕತ್ತರಿಸಿ ಮಗುವನ್ನು ಹೊರತೆಗೆದರೆ, ಆ ಮಗುವಿಗಾದರೆ ಅಯೋನಿಜ ಎಂದು ನಾಮಕರಣ ಮಾಡಬಹುದಿತ್ತು.

❐




ಕರ್ನಾಟಕ–ಮಹಾರಾಷ್ಟ್ರ–ಕೇರಳ ಗಡಿ ವಿವಾದ : ಒಂದು ಚರ್ಚೆ

■ ಕೆ.ಎನ್. ಬೆಂಗೇರಿ

ಕರ್ನಾಟಕ ಏಕೀಕರಣದ ಆಂದೋಲನ ಬಹಳ ಹಳೆಯದು. ಆಂಧ್ರದ ಜನ ೧೯೧೩–೧೪ರಲ್ಲಿ ಪ್ರಥಮ ಸಲ ತಮಗೆ ತಮ್ಮದೇ ಆದ ಒಂದು ಭಾಷಾ ಪ್ರಾಂತ ಬೇಕೆಂದು ಕೇಳಿದ್ದುಂಟು. ೧೯೦೮ರಲ್ಲಿ ಬಿಹಾರಕ್ಕೆ ಕಾಂಗ್ರೆಸ್ ಪ್ರಾಂತವೆಂದು ಮತ್ತು ಅಖಿಲ ಭಾರತ ಕಾಂಗ್ರೆಸ್ ಸಮಿತಿಯು 'ಆಂಧ್ರ' ಮತ್ತು 'ಸಿಂಧ' ಪ್ರಾಂತಕ್ಕೆ 'ಕಾಂಗ್ರೆಸ್ ಪ್ರಾಂತವೆಂದು' ಹೇಳಿತು. ೧೯೨೦ರ ನಾಗಪುರ ಕಾಂಗ್ರೆಸ್ ಅಧಿವೇಶನದಲ್ಲಿ "ಭಾಷಾವಾರು" ತತ್ವವನ್ನು ಆಧರಿಸಿ, ಅಖಿಲ ಭಾರತ ತಳಹದಿಯ ಮೇಲೆ ಪ್ರಾಂತ ರಚಿಸಲು ನಿರ್ಧರಿಸಿತು.

ಅಖಿಲ ಭಾರತ ಕಾಂಗ್ರೆಸ್ ೧೯೨೭ರಲ್ಲಿ ಒಂದು ತೀರ್ಮಾನ ತೆಗೆದುಕೊಂಡು "ಭಾಷಾವಾರು ಪ್ರಾಂತ ಮಾಡಲು ಈಗ ಸಮಯ ಬಂದಿದೆ" ಎಂದೂ, ಅದರ ಅನ್ವಯ "ಆಂಧ್ರ, ಉತ್ಕಲ, ಸಿಂಧ ಮತ್ತು ಕರ್ನಾಟಕ" ಎಂದು ಬೇರೆ ಬೇರೆ ಪ್ರಾಂತಗಳನ್ನು ಮಾಡಬೇಕೆಂದೂ ಸಲಹೆ ಮಾಡಿತು. ಅದೇ ವೇಳೆಗೆ ಮದ್ರಾಸ್ ಕಾಂಗ್ರೆಸ್‌ನಲ್ಲಿ ಎಲ್ಲಾ ಪಕ್ಷಗಳನ್ನು ಒಳಗೊಂಡ ಒಂದು ಸಮಿತಿಯನ್ನು (೧೯೨೮ರಲ್ಲಿ) ನೇಮಿಸಿ, ಭಾರತಕ್ಕೆ ಒಂದು 'ಸಂವಿಧಾನ' ರಚನೆ ಮಾಡಲು ಮೋತಿಲಾಲ್ ನೆಹರುರವರನ್ನು ಅಧ್ಯಕ್ಷರನ್ನಾಗಿ ನೇಮಿಸಿತು. ಇದನ್ನು "ನೆಹರು ಕಮಿಟಿ" ಎಂದು ಕರೆಯಲಾಯಿತು. ಈ ಕಮಿಟಿಯು ಭಾಷಾವಾರು ಪ್ರಾಂತ ರಚನೆಗೆ ಜನರ ಅಭಿಪ್ರಾಯ, ಭಾಷೆ, ಆರ್ಥಿಕ ಮತ್ತು ಆಡಳಿತ ಇತ್ಯಾದಿಗಳನ್ನು ಲಕ್ಷ್ಯಕ್ಕೆ ತೆಗೆದುಕೊಂಡು ತೀರ್ಮಾನ ತೆಗೆದುಕೊಳ್ಳಬೇಕೆಂದು ಅಭಿಪ್ರಾಯಪಟ್ಟಿತು.



ಅಖಿಲ ಭಾರತ ಕಾಂಗ್ರೆಸ್ ೧೯೩೭ರ ಕಲ್ಕತ್ತ ಅಧಿವೇಶನದಲ್ಲಿ ಆಂಧ್ರ ಮತ್ತು ಕರ್ನಾಟಕ ಪ್ರಾಂತ ರಚಿಸಬೇಕೆಂದು ಆಗ್ರಹ ಮಾಡಿತು. ೧೯೩೮ರ ಜುಲೈನಲ್ಲಿ ಜರುಗಿದ ಕಾಂಗ್ರೆಸ್ (ಏಕೀಕರಣ ಸಮಿತಿ) ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕ ಮೇಲೆ ಭಾಷಾವಾರು ಪ್ರಾಂತ ರಚಿಸಲಾಗುವುದೆಂದು ವಚನ ಕೊಟ್ಟಿತು.

೧೯೪೫-೪೬ರಲ್ಲಿ 'ಸಾಧ್ಯವಾದ ಮಟ್ಟಗೆ' ಭಾಷಾವಾರು ಪ್ರಾಂತ ಎಂದು ಮೊದಲು ಕಾಂಗ್ರೆಸ್ ಪಕ್ಷ ತನ್ನ ನಿಲುವನ್ನು ಪುನರುಚ್ಚರಿಸಿತು. ಅಂದರೆ, ತನ್ನ ನಿಲುಪಿನಲ್ಲಿ ಸ್ವಲ್ಪ ಬದಲಾವಣೆಯನ್ನು ಮಾಡಿ, 'ಸಾಧ್ಯವಾದ ಮಟ್ಟಗೆ' ಎಂಬ ಶಬ್ದ ಪ್ರಯೋಗಮಾಡಿತು. ಸ್ವಾತಂತ್ರ್ಯಾನಂತರ ೨೭-೧೧-೧೯೪೭ರ ಸಂವಿಧಾನ ಸಭೆಯಲ್ಲಿ ಭಾಷಣ ಮಾಡುವಾಗ ಪ್ರಧಾನಿಗಳಾದ ಪಂ. ಜವಹರಲಾಲ್ ನೆಹರುರವರು, ಭಾಷಾವಾರು ಪ್ರಾಂತ ಮಾಡಲು ಒಪ್ಪಿದರೂ ಕೂಡ, 'ಪ್ರಥಮವಾಗಿ ಭಾರತಕ್ಕೆ ಬೇಕಾಗಿರುವುದು ಭದ್ರತೆ' ಎಂದು ಹೇಳಿದರು. ಕರಡು ಸಂವಿಧಾನ ಆ ಸಭೆಯಲ್ಲಿ ಚರ್ಚೆಗೆ ಬಂದಾಗ ಭಾಷಾವಾರು ಪ್ರಾಂತದ ಬೇಡಿಕೆಯನ್ನು ಪುನರುಚ್ಚರಿಸಲಾಯಿತು. ಆಂಧ್ರಪ್ರದೇಶ ಬೇಕೆಂದು ಹಠ ಹಿಡಿದು, ಅದನ್ನು ಸಂವಿಧಾನದ ಅನುಸೂಚಿಯಲ್ಲಿ ಸೇರಿಸಬೇಕೆಂದು ಕೇಳಿಕೊಂಡರು. ಆ ವೇಳೆಗೆ ಸಂವಿಧಾನಸಭೆಯು 'ಧರ್ ಕಮಿಷನ್'ಅನ್ನು ನೇಮಿಸಿ, ಅವರಿಗೆ ಆದೇಶ ನೀಡುವಾಗ "ಆಂಧ್ರ, ಕರ್ನಾಟಕ, ಕೇರಳ ಮತ್ತು ಮಹಾರಾಷ್ಟ್ರ" ರಚನೆಗೆ ಬೇಕಾಗುವ ಎಲ್ಲ ವಿಚಾರಗಳನ್ನೂ, ಮುಖ್ಯವಾಗಿ ಆಡಳಿತ, ಅಧಿಕಾರ ವಿಚಾರಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ವರದಿ ಸಲ್ಲಿಸಬೇಕೆಂದು ಕೇಳಿಕೊಂಡಿತು. ಅದು ಸಂವಿಧಾನ ಸಭೆಗೆ ತನ್ನ ವರದಿಯನ್ನು ೧೦-೧೨-೧೯೪೮ರಂದು ಸಲ್ಲಿಸಿತು. ಆದರೆ ಭಾಷಾವಾರು ಪ್ರಾಂತ ರಚನೆಗೆ ಆಗ ಅದು ತಕ್ಕ ಸಮಯ ಅಲ್ಲವೆಂದು ಸಲಹೆ ಮಾಡಿತು. ಅದೇ ವರ್ಷ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಜವಹರಲಾಲ್ ನೆಹರು, ವಲ್ಲಭಭಾಯಿ ಪಟೇಲ ಮತ್ತು ಪಟ್ಟಾಭಿರಾಮಯ್ಯ ನವರನ್ನೊಳಗೊಂಡ ಸಮಿತಿಯನ್ನು ರಚಿಸಿತು. ಈ ಸಮಿತಿಯು ೦೧-೦೪-೧೯೪೯ ರಂದು ತನ್ನ ವರದಿಯನ್ನು ಕೊಟ್ಟು, ತನ್ನ ಮೊದಲಿನ ಹೇಳಿಕೆಯನ್ನು, ಅಂದರೆ ಸ್ವಾತಂತ್ರ್ಯದ ನಂತರ ಭಾಷಾವಾರು ಪ್ರಾಂತ ರಚನೆ ಮಾಡುವ ಭರವಸೆಯನ್ನು ಲಕ್ಷ್ಯಕ್ಕೆ ತಂದುಕೊಂಡು, ಈ ರಚನೆಯನ್ನು ಮುಂದೂಡಲು ನಿರ್ಧರಿಸಿತು.

೧೯೫೩ರಲ್ಲಿ ಆಂಧ್ರ ಪ್ರಾಂತದ ರಚನೆಯಾಯಿತು. ೨೯-೧೨-೧೯೫೩ರಂದು ರಾಜ್ಯ ಪುನರ್ವಿಂಗಡಣಾ ಆಯೋಗ (ಎಸ್.ಆರ್.ಸಿ.) ರಚನೆಯಾಯ್ತು. ಅದು ೩೦-೦೯-೧೯೫೫ರಲ್ಲಿ ತನ್ನ ವರದಿಯನ್ನು ಒಪ್ಪಿಸಿತು. ಇದರ ಅನ್ವಯ ಕರ್ನಾಟಕವು 'ಮೈಸೂರು' ಎಂಬ ನಾಮಧೇಯದಲ್ಲಿ ೦೧-೧೧-೧೯೫೬ರಂದು ರಚನೆಯಾಯ್ತು.

೨೫-೦೬-೧೯೫೭ರಂದು ಅಂದಿನ ಮುಂಬೈ ಸರಕಾರವು (ಹಳ್ಳಿಗಳ) ಬೆಳಗಾವಿ ಕಾರವಾರ, ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಯಲ್ಲಿ ಇರುವ ೮೧೪ ಹಳ್ಳಿಗಳು ತಮಗೆ ಸೇರಬೇಕೆಂಬ ಅರ್ಜಿಯನ್ನು ವಲಯ ಸಮಿತಿಯ ಮುಂದೆ ಮಂಡಿಸಿತು. ಈ ಹಳ್ಳಿಗಳು ಹೀಗಿವೆ – ಬೆಳಗಾವಿ ತಾಲ್ಲೂಕಿನ ೮೪, ಖಾನಾಪುರ ತಾಲ್ಲೂಕಿನ ೨೦೬, ಅಥಣಿ ತಾಲ್ಲೂಕಿನ ೧೦, ಚಿಕ್ಕೋಡಿ ತಾಲ್ಲೂಕಿನ ೪೧, ಹುಕ್ಕೇರಿ ತಾಲ್ಲೂಕಿನ ೧೮, ಕಾರವಾರ ಜಿಲ್ಲೆ

ಹಳಿಯಾಳ ಮತ್ತು ಸೂಪಾ ತಾಲ್ಲೂಕಿನ ೩೦೧ ಮತ್ತು ಬೀದರ್ ಮತ್ತು ಗುಲಬರ್ಗಾ ಜಿಲ್ಲೆಗಳಲ್ಲಿನ ೧೫೪ ಹಳ್ಳಿಗಳು – ಹೀಗೆ ಒಟ್ಟು ೮೧೪ ಹಳ್ಳಿಗಳು ತಮಗೆ ಸೇರಬೇಕೆಂದು ಕೇಳಿಕೊಂಡಿತು.

೧೯೬೦ರಲ್ಲಿ ಭಾರತ ಸರ್ಕಾರವು ಒತ್ತಡ ಹೇರಿ, ಮುಂಬೈ ಸರ್ಕಾರ ಮತ್ತು ಮೈಸೂರು ಸರ್ಕಾರಗಳು ಈ ಬಗ್ಗೆ ಒಪ್ಪಂದಕ್ಕೆ ಬರಬೇಕು ಎಂದು ಹೇಳಿತು. ವಿಶಾಲ ಮೈಸೂರಿನ ಬಿ.ಡಿ. ಜತ್ತಿ ಸರ್ಕಾರವು ನ್ಯಾಯಮೂರ್ತಿ ಎಸ್.ಎಸ್. ಮಳಿಮಠ ಮತ್ತು ಎಸ್. ಚೆನ್ನಯ್ಯನವರನ್ನೊಳಗೊಂಡ ಸಮಿತಿಯನ್ನು ಕರ್ನಾಟಕದ ಪರವಾಗಿ ರಚಿಸಿತು. ಮುಂಬೈ ಸರ್ಕಾರದ ಪರವಾಗಿ ಎಂ.ಡಿ.ಭಟ್ ಮತ್ತು ಎನ್.ವಿ. ಪಾಟಸ್ಕರ್ ಎಂಬೀರ್ವರ ಸಮಿತಿಯನ್ನು ರಚಿಸಿತು. ಆದರೆ, ಎರಡೂ ಸಮಿತಿಗಳು ಯಾವ ಒಪ್ಪಂದಕ್ಕೂ ಬರಲಿಲ್ಲ. ಕರ್ನಾಟಕ ಸರಕಾರದ ಸದಸ್ಯರು ತಮ್ಮ ವರದಿಯನ್ನು ೧೯೬೦ರಲ್ಲಿ ಸರ್ಕಾರಕ್ಕೆ ಒಪ್ಪಿಸಿದರು. ಮಹಾರಾಷ್ಟ್ರ ಸರಕಾರ ಏನು ಮಾಡಿತೋ ಗೊತ್ತಿಲ್ಲ.

ಭಾರತ ಸರಕಾರವು ೨೫–೧೦–೧೯೬೬ರಂದು ಒಂದು ಸಮಿತಿಯನ್ನು ರಚಿಸಿ, ಈ ವಿವಾದವನ್ನು ಬಗೆಹರಿಸುವ ಸಲಹೆಗಾಗಿ ಅವರಿಗೆ ಬಿಟ್ಟುಕೊಟ್ಟಿತು. ಅದರ ಅಧ್ಯಕ್ಷರಾಗಿ ಭಾರತ ಉಚ್ಚನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಂ.ಸಿ. ಮಹಾಜನರನ್ನು ನೇಮಿಸಿತು. ಈ ಸಮಿತಿಗೆ ಕೇವಲ ಮಹಾರಾಷ್ಟ್ರ ವಿವಾದವನ್ನೇ ಅಲ್ಲದೆ ಈಗ ಕೇರಳದಲ್ಲಿರುವ ಕಾಸರಗೋಡು ತಾಲ್ಲೂಕನ್ನೂ ಸೇರಿಸಿತು.

ಮಹಾಜನ ಸಮಿತಿಯು ವರದಿಯನ್ನು ಭಾರತ ಸರ್ಕಾರಕ್ಕೆ ಆಗಸ್ಟ್ ೧೯೬೭ರಲ್ಲಿ ಸಲ್ಲಿಸಿ, ಕೇವಲ ೨೬೪ ಹಳ್ಳಿಗಳನ್ನು ಮಹಾರಾಷ್ಟ್ರಕ್ಕೆ ಕೊಡಲು ಹೇಳಿತು. ಆದರೆ ಮುಖ್ಯವಾದ ಬೆಳಗಾವಿ ಶಹರವು ಕರ್ನಾಟಕದಲ್ಲಿಯೇ ಉಳಿಯಿತು. ಈ ವರದಿಯು ಮಹಾರಾಷ್ಟ್ರಕ್ಕೆ ಸರಿಹೋಗಲಿಲ್ಲ. ಮಹಾಜನ ಆಯೋಗ ರಚಿಸಿದಾಗ, ಅದರ ನಿರ್ಣಯವನ್ನು ಒಪ್ಪುವುದಾಗಿ ಮಹಾರಾಷ್ಟ್ರದ ಮುಖಂಡರು ಹೇಳಿದ್ದರು. ವರದಿಯು ಹೊರಬಂದಾಗ ತಮ್ಮ ನಿಲುವನ್ನು ಬದಲಾಯಿಸಿದರು. ಮಹಾರಾಷ್ಟ್ರ ಸರಕಾರವು ೨೦೦೪ರಲ್ಲಿ ಭಾರತ ಸರಕಾರದ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಸಂವಿಧಾನದ ೧೩೧ರ ಕಲಂ ಅನ್ವಯ ದಾವೆಯನ್ನು ಹೂಡಲಾಗಿದೆ. ಈ ಕಲಂನ ಪ್ರಕಾರ ದಾವೆಯು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ವ್ಯಾಜ್ಯಕ್ಕೆ ಅನ್ವಯಿಸುತ್ತದೆ. ಆದರೆ ಸಂವಿಧಾನದ ಕಲಂ ೨ ಮತ್ತು ೩ರ ಪ್ರಕಾರ ಯಾವುದೇ ರಾಜ್ಯದ ಭೂ ರೇಖೆಯನ್ನು ಬದಲಿಸಬೇಕಾದರೆ ಅಥವಾ ರಾಜ್ಯ ಸರ್ಕಾರದ ಭಾಗಗಳನ್ನು ಬೇರೆ ರಾಜ್ಯಕ್ಕೆ ಸೇರಿಸುವ ಅಧಿಕಾರ ಕೇವಲ ಪಾರ್ಲಿಮೆಂಟಿಗೆ ಇದೆ. ಅಂದ ಮೇಲೆ ಉಚ್ಚನ್ಯಾಯಾಲಯಕ್ಕೆ ಈ ಅಧಿಕಾರ ಇಲ್ಲವೆಂಬುದು ಕರ್ನಾಟಕದ ನಿಲುವು.

ಮಹಾರಾಷ್ಟ್ರ ಸರ್ಕಾರವು ತನ್ನ ದಾವೆಯನ್ನು ತಿದ್ದುಪಡಿ ಮಾಡಲು ೨ ಸಲ ನ್ಯಾಯಾಲಯವನ್ನು ಬೇಡಿಕೊಂಡಿತ್ತು. ತನ್ನದೇ ವಿವಾದಕ್ಕೆ ಒಳಪಟ್ಟ ಸ್ಥಳಗಳಲ್ಲಿ ರಾಷ್ಟ್ರಪತಿ ಆಡಳಿತ ತರಬೇಕು ಎಂದು ಪ್ರಾರ್ಥನೆ ಮಾಡಿತು. ಆದರೆ ನ್ಯಾಯಾಲಯ ಇದನ್ನು ತಳ್ಳಿಹಾಕಿತು.

ಇನ್ನು ಅಲ್ಪಭಾಷಿಕರ ವಿಚಾರ. ೧೯೬೧ರ ಒಪ್ಪಂದದ ಪ್ರಕಾರ ಎಲ್ಲಿ ೧೫% ಅಲ್ಪ ಭಾಷಿಕರು ಇರುವರೋ ಅಲ್ಲಿ, ಅವರಿಗೆ ಅವರ ಮಾತೃಭಾಷೆಯಲ್ಲಿ ವಿದ್ಯೆ ಕೊಡಬೇಕು ಪಠ್ಯ ಪುಸ್ತಕ ಒದಗಿಸಬೇಕು, ಅವರಿಗೆ ಬೇಕಾಗುವ ಕಾಗದ ಪತ್ರಗಳನ್ನು ಅವರ ಭಾಷೆಯಲ್ಲಿ ಒದಗಿಸಬೇಕು ಎಂದು ಹೇಳಲಾಗಿದೆ. ಇದು ಸರಿಯಾಗಿ ನಡೆದಿದೆಯೆ ಎಂದು ನೋಡಲು ಭಾರತ ಸರ್ಕಾರವು ಭಾಷಾ ಅಲ್ಪಸಂಖ್ಯಾತ ಆಯೋಗ ಎಂಬ ಸಂಸ್ಥೆಯನ್ನು ಸ್ಥಾಪಿಸಿದ್ದು ಇಲ್ಲಿಯವರೆಗೂ ಈ ಸಂಸ್ಥೆ ೪೪ ವರದಿಗಳನ್ನು ಸಂಸತ್ತಿಗೆ ಸಲ್ಲಿಸಿದೆ. ಅದರಲ್ಲಿ ಕರ್ನಾಟಕದ ವಿಚಾರದಲ್ಲಿ ತೀಕ್ಷ್ಣವಾದ ಯಾವ ಅಕ್ಷೇಪಣೆಯನ್ನೂ ಬರೆದಿಲ್ಲ. ತದ್ವಿರುದ್ಧವಾಗಿ ಮಹಾರಾಷ್ಟ್ರಕ್ಕೆ ಹಲವು ಸಲ ಛೀಮಾರಿ ಹಾಕಿದೆ.

ಕಾಸರಗೋಡು

೧೯೬೬ರಲ್ಲಿ ಮಹಾಜನ ಆಯೋಗ ರಚನೆಯಾದಾಗ, ಅದಕ್ಕೆ ಮಹಾರಾಷ್ಟ್ರ ಮತ್ತು ಕರ್ನಾಟಕದ ಗಡಿ ವಿವಾದವನ್ನು ಸೇರಿಸಿದ್ದಲ್ಲದೆ, ಕೇರಳದಲ್ಲಿ ಸೇರಿಸಿರುವ ಕಾಸರಗೋಡನ್ನೂ ಆಯೋಗದ ವ್ಯಾಪ್ತಿಗೆ ಸೇರಿಸಬೇಕೆಂದು, ಮುಂಬೈಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಕಮಿಟಿ ೧೯೬೫ರ ಸಭೆಯಲ್ಲಿ ರಾಮಕೃಷ್ಣ ಹೆಗಡೆ ಅವರು ಹಠ ಹಿಡಿದಿದ್ದರಿಂದ, ಇದನ್ನು ವಿವಾದವೆಂದು ಪರಿಗಣಿಸಿ ಆಯೋಗದ ಸಲಹೆಗಾಗಿ ಕೇಳಿ ಕೊಂಡಿತು. ಕರ್ನಾಟಕ ಸರಕಾರವು ಈ ಆಯೋಗಕ್ಕೆ ಮನವಿಯನ್ನು ಸಲ್ಲಿಸಲು ಒಂದು ಸಮಿತಿಯನ್ನು ರಚಿಸಿತು. ಅದರ ಅಧ್ಯಕ್ಷರಾಗಿ ನ್ಯಾಯಮೂರ್ತಿ ಎಸ್.ಎಸ್. ಮಳೀಮಠ ಅವರನ್ನು ನೇಮಿಸಲಾಯಿತು. ಆಗ ೨ ಸಮಿತಿಗಳು ಆದವು. ಒಂದು ಮಹಾರಾಷ್ಟ್ರಕ್ಕೆ ಇನ್ನೊಂದು ಕೇರಳಕ್ಕೆ. ಕೇರಳಕ್ಕೆ ರಚಿಸಿದ ಸಮಿತಿಯಲ್ಲಿ ಮಹಾಬಲ ಭಂಡಾರಿ, ಕಕ್ಕಿಲಾಯ ಹಂಡೆ ಮತ್ತು ಕಯ್ಯಾರ ಕಿಞ್ಞಣ್ಣ ರೈ ಅವರು ಸದಸ್ಯರಾದರು.

ದಕ್ಷಿಣ ಕನ್ನಡದ ಜನರಲ್ಲಿ ಒಂದು ಸಂಶಯ ಮೂಡಿಬಂತು. ಬೆಳಗಾವಿಯ ಸಲುವಾಗಿ ಕಾಸರಗೋಡನ್ನು ಕೈಬಿಡುವರು ಎಂಬ ಒಂದು ಅಭಿಪ್ರಾಯವಾಯ್ತು. ಆದರೂ ಮಳೀಮಠರವರು ತಮಗೆ ಕೊಟ್ಟ ಕೆಲಸದಲ್ಲಿ ಯಾವ ಭಿನ್ನತೆಯನ್ನೂ ತೋರಿಸಲಿಲ್ಲ. ಕಾಸರಗೋಡು ತಾಲ್ಲೂಕು ಮೊದಲಿನಿಂದಲೂ ದಕ್ಷಿಣ ಕನ್ನಡ ಜಿಲ್ಲೆಯ ಭಾಗವಾಗಿತ್ತು. ಆದರೆ ಫಜಲ್ ಆಲಿಯ ವರದಿ ಪ್ರಕಾರ ಅದನ್ನು ಕೇರಳಕ್ಕೆ ವರ್ಗಾಯಿಸಿದರು.

೧೯೬೭ರಲ್ಲಿ ಕರ್ನಾಟಕ ಸರಕಾರವು ಮಹಾಜನ ಆಯೋಗದ ಮುಂದೆ ಕಾಸರಗೋಡು ತಾಲ್ಲೂಕನ್ನು ಮರಳಿ ಕರ್ನಾಟಕದಲ್ಲಿಯೇ ಸೇರಿಸಬೇಕೆಂದು ಒಂದು ಮನವಿಯನ್ನು ಸಲ್ಲಿಸಿತು. ಕಾಸರಗೋಡು ತಾಲ್ಲೂಕಿನ ೫ ಫಿರ್ಕಾಗಳು ಮಂಜೇಶ್ವರ ಕುಂಬಳ, ಕಾಸರಗೋಡ, ಹೊಸದುರ್ಗ ಮತ್ತು ನೀಲೇಶ್ವರ. ಚಂದ್ರಗಿರಿ ನದಿಯ ದಕ್ಷಿಣಕ್ಕೆ ಹೊಸದುರ್ಗ ಮತ್ತು ನೀಲೇಶ್ವರ ಇದ್ದು ಅವುಗಳನ್ನು ಸಬ್ ತಾಲ್ಲೂಕು ಎಂದು ಕರೆಯಲಾಗಿದೆ.

ಆಡಳಿತ ಕಾರಣಕ್ಕಾಗಿ ಹೊಸದುರ್ಗ ಸಬ್ ತಾಲ್ಲೂಕು ಒಂದು ತಾಲ್ಲೂಕು ಎಂದು ಕರೆಯಲ್ಪಟ್ಟಿತು. ೧೯೫೧ರ ಜನಗಣತಿಯ ಪ್ರಕಾರ ಈ ಸಬ್ ತಾಲ್ಲೂಕಿನ ಜನಸಂಖ್ಯೆ ೧,೭೧,೭೧೧ ಇತ್ತು. ಇಲ್ಲಿ ಮಲಯಾಳ ಭಾಷೆ ಮಾತನಾಡುವ ಜನಸಂಖ್ಯೆ ಹೆಚ್ಚು ಇತ್ತು.

ಚಂದ್ರಗಿರಿ ಉತ್ತರಕ್ಕೆ ಇರುವ ೩ ಫಿರ್ಕಾಗಳು ಅಂದರೆ ಕಾಸರಗೋಡು, ಕುಂಬಳ ಮತ್ತು ಮಂಜೇಶ್ವರವನ್ನು ಕರ್ನಾಟಕಕ್ಕೆ ಸೇರಿಸಲು ೩ ಫಿರ್ಕಾಗಳಲ್ಲಿ ಕೇವಲ ೭೯ ಹಳ್ಳಿಗಳು ಇವೆ. ಕರ್ನಾಟಕ ಸರಕಾರ ಕೇವಲ ೭೧ ಹಳ್ಳಿಗಳನ್ನು ಕೇಳಿತು. ಉಳಿದ ಹಳ್ಳಿಗಳು ನದಿಯ ದಕ್ಷಿಣಕ್ಕೆ ಇರುವುದರಿಂದ ಅವುಗಳನ್ನು ಕೇಳಲಿಲ್ಲ.

ಕಾಸರಗೋಡು ತಾಲ್ಲೂಕು ಕರ್ನಾಟಕಕ್ಕೆ ಸೇರಬೇಕೆಂದು ವಿವಾದದಲ್ಲಿ ಎಲ್ಲ ಇತಿಹಾಸ ಪುರಾವೆಗಳನ್ನು ಮಂಡಿಸಿತು. ಆಗಿನ ಮದ್ರಾಸ್ ಸರಕಾರದಲ್ಲಿನ ಹಣಕಾಸಿನ ಮಂತ್ರಿ ಸಿ.ಸುಬ್ರಮಣ್ಯಂ ಅಂದಿನ ಮದ್ರಾಸ್ ಶಾಸನಸಭೆಯಲ್ಲಿ ಮಾತನಾಡುತ್ತಾ ಕಾಸರಗೋಡು ಕರ್ನಾಟಕದ್ದು ಎಂದು ಎಲ್ಲಾ ಅಂಕಿ ಅಂಶಗಳನ್ನು ಕೊಟ್ಟು ಹೇಳಿದ್ದಾರೆ. ಈ ಎಲ್ಲಾ ಕಾರಣಗಳಿಂದ ಮೊದಲಿದ್ದಂತೆ ಕಾಸರಗೋಡನ್ನು ಕರ್ನಾಟಕಕ್ಕೆ ಸೇರಿಸ ಬೇಕೆಂದು ಮನವಿ ಮಾಡಿದರು. ಮಹಾಜನ ಆಯೋಗ ೧೫, ೧೬, ೧೭ರ ಮೇ ೧೯೬೭ರಂದು ಮಂಗಳೂರಿಗೂ ಮತ್ತು ಕಾಸರಗೋಡಿಗೂ ಭೇಟಿಕೊಟ್ಟು ಜನರ ಅಭಿಪ್ರಾಯ ಸಂಗ್ರಹಿಸಿತು. ಉದಕಮಂಡಲದಲ್ಲಿ ನಡೆದ ಕೊನೆಯ ಹಂತದ ಸಭೆಯಲ್ಲಿ ಆಗಿನ ಅಡ್ವೊಕೇಟ್ ಜನರಲ್ ಟಿ. ಕೃಷ್ಣರಾವ್ ಕರ್ನಾಟಕದ ವತಿಯಿಂದ ವಾದ ಮಾಡಿದರು. ಮಹಾಜನ ವರದಿಯ ಪ್ರಕಾರ ಕಾಸರಗೋಡನ್ನು ಕರ್ನಾಟಕಕ್ಕೆ ಸೇರಿಸಬೇಕೆಂದು ಹೇಳಿದರು.

ಮಹಾರಾಷ್ಟ್ರದಲ್ಲಿರುವ ಕನ್ನಡ ಪ್ರದೇಶಗಳು

ಮಹಾಜನ ಆಯೋಗದ ಮುಂದೆ ಕರ್ನಾಟಕವು ಕೇಳಿದ್ದ ೫೧೬ ಗ್ರಾಮಗಳ ಪೈಕಿ ಸೊಲ್ಲಾಪುರ ಜಿಲ್ಲೆಯ ಇಡೀ ಅಕ್ಕಲಕೋಟೆ ತಾಲ್ಲೂಕು, ದಕ್ಷಿಣ ಸೊಲ್ಲಾಪುರ ತಾಲ್ಲೂಕಿನ ೬೫ ಗ್ರಾಮಗಳು, ಸಾಂಗ್ಲಿ ಜಿಲ್ಲೆಯ ಜತ್ ತಾಲ್ಲೂಕಿನ ೪೪ ಗ್ರಾಮಗಳು, ಕೊಲ್ಲಾಪುರ ಜಿಲ್ಲೆಯ ಗಡಹಿಂಗ್ಲಜ್ ತಾಲ್ಲೂಕಿನ ೧೫ ಗ್ರಾಮಗಳನ್ನು ವರ್ಗಾಯಿಸಲು ಒಪ್ಪಿ ಸೊಲ್ಲಾಪುರ ಜಿಲ್ಲೆಯ ಮಂಗಳವೇಡೆ ಮತ್ತು ಶಿರೋಳ ತಾಲ್ಲೂಕಿನ ೧೩ ಗ್ರಾಮಗಳ ವರ್ಗಾವಣೆಗೆ ಆಯೋಗವು ಒಪ್ಪಲಿಲ್ಲ. ಮಹಾರಾಷ್ಟ್ರವು ತನಗೆ ಸೇರಬೇಕೆಂದು ಕೇಳಿದ್ದ ೮೧೪ ಗ್ರಾಮಗಳ ಪೈಕಿ ೨೬೪ ಗ್ರಾಮಗಳನ್ನು–ಖಾನಾಪುರ ತಾಲ್ಲೂಕಿನ ಪಶ್ಚಿಮದಲ್ಲಿರುವ ೧೫೨ ಗ್ರಾಮಗಳು, ಬೆಳಗಾವಿ ತಾಲ್ಲೂಕಿನ ಪಶ್ಚಿಮದ ೪೨ ಗ್ರಾಮಗಳು (ಬೆಳಗಾವಿ ನಗರ ಬಿಟ್ಟು) ಚಿಕ್ಕೋಡಿ ತಾಲ್ಲೂಕಿನ ನಿಪ್ಪಾಣಿ ಸೇರಿ ೩೨ ಗ್ರಾಮಗಳಿಗೆ ಒಪ್ಪಿ, ಹುಕ್ಕೇರಿ ತಾಲ್ಲೂಕಿನ ೧೮ ಗ್ರಾಮಗಳು ಹಾಗೂ ಉತ್ತರ ಕನ್ನಡ ಜಿಲ್ಲೆ, ಬೀದರ್ ಜಿಲ್ಲೆಯ ೧೪೬ ಗ್ರಾಮಗಳು ಗುಲ್ಬರ್ಗಾ ಜಿಲ್ಲೆಯ ಅಳಂದ ತಾಲ್ಲೂಕಿನ ೮ ಗ್ರಾಮಗಳ ಹಕ್ಕನ್ನು ತಿರಸ್ಕರಿಸಿತು. ಅಥಣಿ ತಾಲ್ಲೂಕಿನ ೧೦ ಗ್ರಾಮಗಳ ಬೇಡಿಕೆಯನ್ನೂ ತಿರಸ್ಕರಿಸಿತು.

ಗಡಿ ಸಮಸ್ಯೆ : ಇರುವುದೆಲ್ಲ ಮರಾಠಿಗರ ಕಿರಿಕಿರಿ ಮಾತ್ರ

■ **ರಾಘವೇಂದ್ರ ಜೋಶಿ**

"ಮಳೆ ನಿಂತರೂ ಹನಿ ಉದುರುವದು ನಿಲ್ಲಲಿಲ್ಲ" –ಎಂಬಂತೆ ಕರ್ನಾಟಕ–ಮಹಾರಾಷ್ಟ್ರ ಗಡಿಸಮಸ್ಯೆ ಎಂದೋ ಬಗೆಹರಿದು ಹೋದರೂ ಮರಾಠಿಗರ ಧಾಂಧಲೆ ಮಾತ್ರ ಇನ್ನೂ ನಿಂತಿಲ್ಲ.

ಮಹಾಜನ ವರದಿ ಬರುವವರೆಗೆ ಬೆಳಗಾವಿಯು ತಮಗೆ ನಿಶ್ಚಿತವಾಗಿ ದೊರೆಯುತ್ತದೆ–ಎಂಬ ಭಾವನೆ ಬಹುತೇಕ ಎಲ್ಲ ಮರಾಠಿಗರಲ್ಲಿ ಇತ್ತು. ಬೆಳಗಾವಿಯಲ್ಲಿ ಎಲ್ಲಿ ನೋಡಿದರಲ್ಲಿ ಮರಾಠಿ ಬಳಕೆಯಲ್ಲಿದೆ. ನಗರ ಸಭೆಯ ಮೇಲೆ ಮರಾಠಿ ಧ್ವಜ ಹಾರಾಡುತ್ತಿದೆ. ಗಡಿಭಾಗದಿಂದ ಪಂಚಾಯತಿ, ನಗರಸಭೆ, ಹಾಗೂ ವಿಧಾನಸಭೆಗಳಿಗೆ ಮಹಾರಾಷ್ಟ್ರ ಏಕೀಕರಣ ಸಮಿತಿಯೇ ಆರಿಸಿಬರುತ್ತಿದೆ. ಹೀಗಿರುವಾಗ ಮಹಾಜನರು ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಕೊಟ್ಟೇಕೊಡುತ್ತಾರೆ–ಎಂದು ಆಗಿನ ಕೇಂದ್ರ ಗೃಹಸಚಿವ ಯಶವಂತರಾವ ಚವ್ಹಾಣ, ಮಹಾರಾಷ್ಟ್ರದ ಮುಖ್ಯಮಂತ್ರಿ ವ್ಹಿ.ಪಿ. ನಾಯಕ ಅವರನ್ನೊಳಗೊಂಡು ಮಹಾರಾಷ್ಟ್ರದ ಎಲ್ಲ ಧುರೀಣರು ವಿಶ್ವಾಸದಿಂದಿದ್ದರು. ಮಹಾಜನ ವರದಿ ಏನೇ ಬಂದರೂ ಅದನ್ನು ಒಪ್ಪಿಕೊಳ್ಳುತ್ತೇವೆ–ಎಂದು ಈ ಧೈರ್ಯದಿಂದಲೇ ಅವರು ಹೇಳಿಕೆಗಳನ್ನು ನೀಡುತ್ತಿದ್ದರು.



ಮಹಾಜನ ಆಯೋಗದ ವರದಿಯೂ ಮಹಾರಾಷ್ಟ್ರದ ವಿರುದ್ಧ ಹೋದಾಗ ಬೆಳಗಾವಿ ತಮಗೆ ಇನ್ನೆಂದೂ ದಕ್ಕುವುದಿಲ್ಲ–ಎಂಬ ವಾಸ್ತವ ಮರಾಠಿ ಮುಖಂಡರಿಗೆ ಆಗತೊಡಗಿತು. ಮುಂಚೂಣಿಯಲ್ಲಿ ಇದ್ದು ಹೋರಾಡುತ್ತಿದ್ದವರು ಸಾವಕಾಶವಾಗಿ ಹಿಂದೆ ಸರಿಯತೊಡಗಿದರು.

ಮುಂಬಯಿಯಿಂದ ಕೆಳಗಡೆಯ ದಕ್ಷಿಣ ಮಹಾರಾಷ್ಟ್ರದಲ್ಲಿ ಈ ಗಡಿ ಸಮಸ್ಯೆಯು ಭಾವನಾತ್ಮಕ ವಿಷಯವಾಗಿ ಬೆಳೆದು ಬಂದಿದೆ. ಪೇಶ್ವೆ ಕಾಲದಿಂದ ಬೆಳಗಾವಿ, ಧಾರವಾಡ ವಿಜಾಪುರ ಜಿಲ್ಹೆಗಳೊಂದಿಗೆ ಈ ಭಾಗದ ಜನರು ಸಾಂಸ್ಕೃತಿಕ, ಶೈಕ್ಷಣಿಕ, ರಕ್ತ ಸಂಬಂಧಗಳನ್ನು ಹೊಂದಿದ್ದು ಇಡೀ ಪ್ರದೇಶವೆಲ್ಲ ಒಂದೇ ಎಂಬ ಭಾವನೆ ಬೆಳೆದು ಬಂದಿದೆ. ಧಾರವಾಡ, ವಿಜಾಪುರ ಜಿಲ್ಹೆಗಳು ಮರಾಠಿ ಪ್ರಭಾವದಿಂದ ಬೇಗನೆ ಮುಕ್ತವಾದರೂ ಬೆಳಗಾವಿ ಮಾತ್ರ ಗೋವೆಯ ಸಾಮೀಪ್ಯ, ಮರಾಠಿ ಲಘುಪದಾತಿದಳ ಹೀಗೆ ಬೇರೆ ಬೇರೆ ಕಾರಣಗಳಿಂದಾಗಿ ಮರಾಠಿ ಪ್ರಭಾವದಿಂದ ದಾಟಿ ಹೊರಬರಲಿಲ್ಲ. ಮಹಾರಾಷ್ಟ್ರದೊಂದಿಗಿನ ಭಾವನಾತ್ಮಕ ಸಂಬಂಧಗಳು ಮೊದಲಿನಂತೆಯೇ ಉಳಿದವು.

ಐತಿಹಾಸಿಕವಾಗಿ ಬೆಳಗಾವಿಯು ಕರ್ನಾಟಕದ ಭಾಗ. ೧೯೨೪ರಲ್ಲಿ ಕಾಂಗ್ರೆಸ್ ಅಧಿವೇಶನ ನಡೆದಿದ್ದೂ ಬೆಳಗಾವಿಯಲ್ಲಿಯೇ. ಮಹಾರಾಷ್ಟ್ರದ ಮುಖಂಡರಾದ ಎನ್.ಸಿ.ಕೇಳ್ಕರ್ ಅವರ ನೇತೃತ್ವದಲ್ಲಿಯ ಸಮಿತಿಯೂ ಬೆಳಗಾವಿಯನ್ನು ಕರ್ನಾಟಕದ ಭಾಗವೆಂದು ಗುರುತಿಸಿತು. ಧಾರ್ ಆಯೋಗ, ಜವಾಹರಲಾಲ, ವಲ್ಲಭಭಾಯಿ-ಪಟ್ಟಾಭಿ ಅವರ ಜೆ.ವ್ಹಿ.ಪಿ. ಆಯೋಗವೂ ಬೆಳಗಾವಿಯನ್ನು ಕರ್ನಾಟಕದ್ದೆಂದೇ ಹೇಳಿದವು. ಕೊನೆಗೆ ರಾಜ್ಯ ಪುನರ್‌ರಚನಾ ಆಯೋಗವೂ ಬೆಳಗಾವಿಯನ್ನು ಕರ್ನಾಟಕಕ್ಕೆ ನೀಡಿತು. ಈ ಎಲ್ಲ ವಾಸ್ತವಾಂಶಗಳನ್ನು ಭಾವುಕ ಮರಾಠಿಗರು ಮರೆತುಬಿಟ್ಟರು.

ಜನರ ಭಾವನೆಗಳನ್ನು ತಮ್ಮ ಅನುಕೂಲಕ್ಕಾಗಿ ಹೇಗೆ ಬಳಸಿಕೊಳ್ಳಬಹುದೆಂಬುದನ್ನು ರಾಜಕಾರಣಿಗಳಿಗೆ ಹೇಳಿಕೊಡುವುದೇ ಬೇಡ. ಮಹಾರಾಷ್ಟ್ರದ ರಾಜಕೀಯದಲ್ಲಿ ಮಿಂಚಲು ನಾಥ ಪೈ, ಮಧು ದಂಡವತೆ, ಎನ್.ಜಿ.ಗೋರೆ, ಬಾಳಠಾಕ್ರೆ, ಎಸ್.ಎಂ.ಜೋಶಿ ಶರದ್ ಪವಾರ್ ಮೊದಲಾದವರು ಗಡಿ ಸಮಸ್ಯೆಯನ್ನು ಯಥೇಚ್ಚವಾಗಿ ಬಳಸಿಕೊಂಡರು.

ಶ್ರೀಮತಿ ಗಾಂಧಿಯವರೂ ಒಂದಿಷ್ಟು ಮಹಾರಾಷ್ಟ್ರದ ಪಕ್ಷಪಾತಿಯಾಗಿದ್ದರು. ಹೀಗಾಗಿ ಮರಾಠಿಗರ ಒತ್ತಡಕ್ಕೆ ಮಣಿದಂತೆ ಮಾಡಿ ಮಹಾಜನ ಆಯೋಗವನ್ನು ನೇಮಿಸಿದ್ದರು. ಆದರೆ ಈ ಆಯೋಗವೂ ಬೆಳಗಾವಿಯನ್ನು ಕರ್ನಾಟಕದಲ್ಲಿಯೇ ಉಳಿಸಿದಾಗ, ಅವರೂ ಈ ಸಮಸ್ಯೆಯಿಂದ ಕೈ ತೊಳೆದುಕೊಂಡು ಬಿಟ್ಟರು. ಆದರೆ ಕಾಂಗ್ರೆಸ್ ಇಬ್ಭಾಗವಾಗಿ ವೀರೇಂದ್ರ ಪಾಟೀಲರು ನಿಜಲಿಂಗಪ್ಪ ನೇತೃತ್ವದ ಸಂಸ್ಥಾ ಕಾಂಗ್ರೆಸ್ಸಿಗೆ ಹೋದಾಗ, ಅವರನ್ನು ತೊಂದರೆಗೀಡು ಮಾಡಲೆಂದೇ ಬೆಳಗಾವಿಯನ್ನು ಇಬ್ಭಾಗ ಮಾಡುವ, ವಿಶಾಲ ಗೋಮಾಂತಕ, ಹೀಗೆ ಬೇರೆ ಬೇರೆ ಪರಿಹಾರ ಸೂತ್ರಗಳನ್ನು ಹರಿಯಬಿಟ್ಟರು! ಆಮೇಲೆ ತಮ್ಮ ಪಕ್ಷದವರೇ ಆದ ದೇವರಾಜ ಅರಸು ಮುಖ್ಯಮಂತ್ರಿ ಯಾದ ನಂತರ ಎಲ್ಲವೂ ಒಮ್ಮಿಂದೊಮ್ಮೆಲೆ ತಣ್ಣಗಾಯಿತು!

ಮಹಾಜನ ಆಯೋಗದ ನೇಮಕದ ನಂತರ ಕೇಂದ್ರ ಸರಕಾರವು ಈ ವಿಷಯದಲ್ಲಿ ಹಸ್ತಕ್ಷೇಪ ಮಾಡಿಯೇ ಇಲ್ಲ. ಮಹಾರಾಷ್ಟ್ರ ಸರಕಾರವೂ ಮತ್ತೆ ಈ ಪ್ರಶ್ನೆಯನ್ನು ಎಂದೂ ಗಂಭೀರವಾಗಿ ಕೆದಕಿಲ್ಲ.

ಬೆಳಗಾವಿಯಲ್ಲಿಯ ಮಹಾರಾಷ್ಟ್ರ ಏಕೀಕರಣ ಸಮಿತಿಯ ಮುಖಂಡರು ಮಾತ್ರ ತಮ್ಮ ರಾಜಕೀಯ ಉಳಿವಿಗಾಗಿ ಈ ಸಮಸ್ಯೆಯನ್ನು ಉಳಿಸಿಕೊಂಡು ಬಂದಿದ್ದಾರೆ.

೧೯೮೬ರಲ್ಲಿ "ಸೀಮಾಲಢಾ" ಚಳವಳಿ ದೊಡ್ಡ ಪ್ರಮಾಣದಲ್ಲಿ ನಡೆಯಿತು. ಶರದ್ ಪವಾರ್ ಆಗ ರಾಜಕೀಯ ರಂಗದಲ್ಲಿ ನೆಲೆಕಳೆದುಕೊಂಡಿದ್ದರು. ಕಾಂಗ್ರೆಸ್ ಸೇರಲು ಆ ಪಕ್ಷದ ಹೊಸ್ತಿಲಲ್ಲಿ, ನಿಂತಿದ್ದರು. ಆದರೆ ಅವರಿಗೆ ಪ್ರವೇಶ ದೊರೆತಿರಲಿಲ್ಲ. ತಮ್ಮ ಸಾಮರ್ಥ್ಯ ಪ್ರದರ್ಶಿಸಲು ಅವರು ಒಂದು ಅವಕಾಶಕ್ಕಾಗಿ ಕಾಯುತ್ತಿದ್ದರು. ಈ ಸೀಮಾಲಢಾ ಅವರಿಗೆ ಅನುಕೂಲ ಸಾಧನವಾಯಿತು. ಇದರ ನೇತೃತ್ವ ವಹಿಸಿಕೊಂಡರು. ಸುಮಾರು ಒಂದು ತಿಂಗಳು ಕಾಲ ಬೆಳಗಾವಿ, ಖಾನಾಪುರ, ನಿಪ್ಪಾಣಿ ಈ ಗಡಿಭಾಗದಲ್ಲೆಲ್ಲ ತೀವ್ರ ಚಳವಳಿ ನಡೆಯಿತು. ಒಂಭತ್ತು ಜನರು ಪ್ರಾಣ ಕಳೆದುಕೊಂಡರು. ಕರ್ನಾಟಕ ಸರಕಾರದ, ಕನ್ನಡಿಗರ ಆಸ್ತಿಗೆ ಅಪಾರ ಹಾನಿಯಾಯಿತು. ಚಳವಳಿಯಿಂದ ಮರಾಠಿಗರಿಗೆ ಏನೂ ಲಾಭವಾಗಲಿಲ್ಲ. ಆದರೆ ಶರದ್ ಪವಾರ್‌ರಿಗೆ ಮಾತ್ರ ರಾಜಕೀಯ ಮನ್ನಣೆ ದೊರೆತು ಅವರಿಗೆ ಕಾಂಗ್ರೆಸ್ಸಿನಲ್ಲಿ ಪ್ರವೇಶ ಸಿಕ್ಕಿತು!

೧೯೮೬ರ ಸೀಮಾಲಢಾ ಚಳವಳಿಯ ನಂತರ ಈ ೨೬ ವರ್ಷಗಳಲ್ಲಿ ಬೆಳಗಾವಿಯಲ್ಲಿ ಯಾವ ದೊಡ್ಡ ಚಳವಳಿಯೂ ನಡೆದಿಲ್ಲ. ಕೇವಲ ಸಣ್ಣಪುಟ್ಟ ಘಟನೆಗಳು ಮಾತ್ರ ಆಗೀಗ ನಡೆಯುತ್ತಿವೆ. ಈಗ ಪತ್ರಿಕೆ ಹಾಗೂ ಟಿವ್ಹಿ ಚ್ಯಾನೆಲ್‌ಗಳ ಸಂಖ್ಯೆ ಹೆಚ್ಚಾಗಿದ್ದರಿಂದ ಈ ಚಿಕ್ಕಪುಟ್ಟ ಘಟನೆಗಳಿಗೂ ದೊಡ್ಡ ಪ್ರಚಾರ ಸಿಗುತ್ತಿದೆ. ಆದರೆ ಬೆಳಗಾವಿ ಸಂಪೂರ್ಣವಾಗಿ ಶಾಂತವಿದೆ. ಸಾಮಾನ್ಯ ಮರಾಠಿಗರೂ ಈಗ ಕರ್ನಾಟಕದ ಆಡಳಿತದೊಂದಿಗೆ, ಕನ್ನಡಿಗರೊಂದಿಗೆ ಹೊಂದಿಕೊಂಡು ಬಿಟ್ಟದ್ದಾರೆ. ಬೆಳಗಾವಿಯು ಮಹಾರಾಷ್ಟ್ರಕ್ಕೆ ಹೋಗುವುದಿಲ್ಲ ಎಂಬ ವಾಸ್ತವವನ್ನು ಅರ್ಥ ಮಾಡಿಕೊಂಡಿದ್ದಾರೆ. ಮಹಾರಾಷ್ಟ್ರ ಏಕೀಕರಣ ಸಮಿತಿಯನ್ನು ಬಿಟ್ಟು ರಾಷ್ಟ್ರೀಯ ಪಕ್ಷಗಳನ್ನು ಸೇರಿಕೊಳ್ಳತೊಡಗಿದ್ದಾರೆ. ಬೆಳಗಾವಿ ಭಾಗದಿಂದ ಕರ್ನಾಟಕ ವಿಧಾನಸಭೆಗೆ ಈ ಹಿಂದೆ ಐವರು ಮ.ಏ.ಸಮಿತಿಯ ಪರವಾಗಿ ಆರಿಸಿಬರುತ್ತಿದ್ದರು. ಬೆಳಗಾವಿ ಮಹಾನಗರ ಸಭೆಯ ಮೇಲೆ ಮ.ಏ.ಸಮಿತಿಯದೇ ಪ್ರಭುತ್ವವಿತ್ತು. ಆದರೆ ೧೯೯೯ ರಲ್ಲಿ ಗಡಿಭಾಗದಲ್ಲಿಯ ಎಲ್ಲ ಐದೂ ಕ್ಷೇತ್ರಗಳಲ್ಲಿ ಮ.ಏ.ಸಮಿತಿಯ ಅಭ್ಯರ್ಥಿಗಳು ದಯನೀಯವಾಗಿ ಸೋಲನ್ನಪ್ಪಿದರು. ಈವರೆಗೆ ಚೇತರಿಸಿಕೊಳ್ಳವುದಕ್ಕೆ ಆಗಿಲ್ಲ.

ಮಹಾನಗರಸಭೆಯ ಚುನಾವಣೆಗಳಲ್ಲಿಯೂ ಮ.ಏ.ಸಮಿತಿ ಹಾಗೂ ಶಿವಸೇನೆಗಳು ಸೋಲನ್ನು ಅನುಭವಿಸಿವೆ. ಕನ್ನಡಿಗರು, ಮರಾಠಿಗರು ಹಾಗೂ ಉರ್ದುಭಾಷಿಕರು ಸೇರಿ ಸರ್ವ ಭಾಷಿಕ ಸಮಾನ ವಿಚಾರದ ವೇದಿಕೆ ಎಂದೆಲ್ಲ ಗುಂಪು ಮಾಡಿಕೊಂಡು ಆರಿಸಿ ಬರುತ್ತಿದ್ದಾರೆ. ಕನ್ನಡಿಗರು ಹಾಗೂ ಈ ಗುಂಪಿನಿಂದಲೇ ಆರಿಸಿಬಂದ ಮರಾಠಿಗರು ಮಹಾಪೌರರಾಗಿದ್ದಾರೆ. ಮರಾಠಿ ಗುಂಪಿನಿಂದ ಪಕ್ಷಾಂತರಗೊಂಡು ಸರ್ವಭಾಷಿಕರ ಗುಂಪು ಸೇರಿದವರೂ ಮಹಾಪೌರ, ಉಪಮಹಾಪೌರರಾಗಿದ್ದಾರೆ. ಹೀಗಾಗಿ ಮಹಾನಗರಸಭೆಯಲ್ಲಿಯೂ ಭಾಷಾ ವಿವಾದವಿಲ್ಲ. ಅಲ್ಲಿ ಕೇವಲ ಹಣ ಹಾಗೂ ಅಧಿಕಾರದ ರಾಜಕಾರಣವಿದೆ. ಹಣ ಹಾಗೂ ಅಧಿಕಾರದ ಹೊಂದಾಣಿಕೆಯಾಗದೇ ಇದ್ದಾಗ ಎಲ್ಲರೂ ಭಾಷೆ, ತತ್ವ, ಸಿದ್ಧಾಂತ ಎಂದೆಲ್ಲ ಮಾತನಾಡಿ ದೊಡ್ಡಸ್ತಿಕೆ ಪಡೆಯಲು ಯತ್ನಿಸುತ್ತಾರೆ!

ಮಹಾರಾಷ್ಟ್ರ ಏಕೀಕರಣ ಸಮಿತಿಯ ಪರಿಸ್ಥಿತಿ ಎಷ್ಟೊಂದು ದಯನೀಯವಾಗಿದೆಯೆಂದರೆ ಗಡಿ ಚಳವಳಿಗೆ ಬೆಂಬಲ ನೀಡಿ-ಎಂದು ಮಿರಜ, ಕೊಲ್ಹಾಪುರ ಪುಣೆಗಳಲ್ಲೆಲ್ಲ ಜಾಗೃತಿ ಜಾಥಾಗಳನ್ನು ಹೊರಡಿಸಿದ್ದಾರೆ! ಮಹಾರಾಷ್ಟ್ರದ ಶಾಸಕರು ರಾಜಕೀಯ ಪಕ್ಷಗಳು ತಮಗೆ ಸೂಕ್ತವಾಗಿ ಬೆಂಬಲ ನೀಡುತ್ತಿಲ್ಲವೆಂದು ಸಮಿತಿಯ ಕಾರ್ಯಕರ್ತರು ಮುಂಬಯಿ ವಿಧಾನಸಭೆಯ ಎದುರು ಧರಣಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು! ಈ ರೀತಿಯ ಜಾಥಾ, ನಿಯೋಗಗಳು ಹೋದಾಗ ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂಬ ಗೊತ್ತುವಳಿಯೊಂದನ್ನು ವಿಧಾನ ಸಭೆಯು ಸ್ವೀಕರಿಸುತ್ತದೆ. ಅಲ್ಲಿಗೆ ಆ ವಿಷಯವನ್ನು ಎಲ್ಲರೂ ಮರೆತು ಬಿಡುತ್ತಾರೆ.

ಮ.ಏ.ಸಮಿತಿಯ ಒತ್ತಡವನ್ನು ತಪ್ಪಿಸಿಕೊಳ್ಳುವದಕ್ಕಾಗಿ ಗಡಿ ಸಮಸ್ಯೆಯನ್ನು ಮಹಾರಾಷ್ಟ್ರವು ಸರ್ವೋಚ್ಚ ನ್ಯಾಯಾಲಯಕ್ಕೆ ಒಯ್ದಿದೆ. ೨೦೦೨ರಲ್ಲಿ ಈ ಪ್ರಕರಣ ದಾಖಲಾಗಿದೆ. ಈವರೆಗೆ ಅದು ಏಳು ತಿದ್ದುಪಡಿಗಳನ್ನು ಮಾಡಿದೆ. ಕೇಂದ್ರ ಸರಕಾರವು ಈ ಪ್ರಕರಣದಲ್ಲಿ ಮೊದಲನೆಯ ಪ್ರತಿವಾದಿಯಾಗಿದ್ದು, ಕರ್ನಾಟಕವು ಎರಡನೆಯ ಪ್ರತಿವಾದಿಯಾಗಿದೆ. ಮಹಾರಾಷ್ಟ್ರವು ಮಂಡಿಸಿರುವ ವಾದಕ್ಕೆ ಪ್ರತಿಯಾಗಿ ಕೇಂದ್ರ ಸರಕಾರವು ೨೦೦೬ರಲ್ಲಿ ತನ್ನ ನಿಲುವನ್ನು ನ್ಯಾಯಾಲಯಕ್ಕೆ ಅಫಿಡಾವಿಟ್ ಮೂಲಕ ಸಲ್ಲಿಸಿತು. ಕೇಂದ್ರದ ನಿಲುವಿಗೆ ತನ್ನ ಪ್ರತಿಕ್ರಿಯೆ ವ್ಯಕ್ತಪಡಿಸಲು ಮಹಾರಾಷ್ಟ್ರ ಸರಕಾರ ತೆಗೆದುಕೊಂಡ ಸಮಯ ಎಷ್ಟು ಗೊತ್ತೇ? ಬರೋಬ್ಬರಿ ಆರು ವರ್ಷ! ಎಂದರೆ ಮಹಾರಾಷ್ಟ್ರವು ಈ ಗಡಿ ಸಮಸ್ಯೆಯನ್ನು ಎಷ್ಟೊಂದು ಗಂಭೀರವಾಗಿ ತೆಗೆದುಕೊಂಡಿದೆಯೆಂಬುದರ ಕಲ್ಪನೆ ಬಂದೀತು!

ಬೆಳಗಾವಿಯಲ್ಲಿ ಈಗ ಸುವರ್ಣಸೌಧ ನಿರ್ಮಾಣವಾಗಿದೆ. ರಾಷ್ಟ್ರಪತಿಗಳು ಅದರ ಉದ್ಘಾಟನೆಯನ್ನೂ ನೆರವೇರಿಸಿದ್ದಾರೆ. ಚಳಿಗಾಲ ಅಧಿವೇಶನವೂ ಇಲ್ಲಿ ನಡೆದಿದೆ. ಇಷ್ಟೊಂದು ಭದ್ರವಾಗಿ ಬೆಳಗಾವಿಯು ಕರ್ನಾಟಕದಲ್ಲಿ ನೆಲೆಯೂರಿರುವಾಗ ಇದನ್ನು ಯಾವ ಶಕ್ತಿಯೂ ಬೇರ್ಪಡಿಸುವದು ಸಾಧ್ಯವಿಲ್ಲವೆನ್ನುವದು ಸ್ಪಷ್ಟವಿದೆ.

ಬೆಳಗಾವಿಯಲ್ಲಿ ಈಗ ಕನ್ನಡಿಗರ ಸಂಖ್ಯೆ ಹೆಚ್ಚಾಗಿದೆ. ಕನ್ನಡ ಸಂಘಟನೆಗಳ ಸಂಖ್ಯೆ ಹೆಚ್ಚಾಗಿದೆ. ಕನ್ನಡ ಅಧಿಕಾರಿಗಳೂ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಆದರೆ ಕನ್ನಡಾಭಿಮಾನ ಮಾತ್ರ ತೀರ ಕಡಿಮೆ. ಬೆಳಗಾವಿಯು ಕರ್ನಾಟಕದಲ್ಲಿದ್ದರೂ ಬೆಳಗಾವಿಯಲ್ಲಿ ಮರಾಠಿ ವಾತಾವರಣವಿದೆಯೆಂಬುದನ್ನು ಯಾರಾದರೂ ಒಪ್ಪಿಕೊಳ್ಳಲೇ ಬೇಕು.

ಮಹಾರಾಷ್ಟ್ರ ಸರಕಾರವು ಗಡಿಸಮಸ್ಯೆಯ ಬಗ್ಗೆ ಹೆಚ್ಚಿಗೆ ತಲೆ ಕೆಡಿಸಿಕೊಳ್ಳದೇ ಇದ್ದರೂ ಬೆಳಗಾವಿಯಲ್ಲಿ ಮರಾಠಿ ವಾತಾವರಣ ನಿರ್ಮಿಸುವದಕ್ಕೆ ಕೋಟಿ ಕೋಟಿ ಹಣವನ್ನು ಖರ್ಚು ಮಾಡುತ್ತಿದೆ. ಮರಾಠಿ ಚಳವಳಿಯಲ್ಲಿ ಹಾನಿಗೀಡಾದವರಿಗೆ ಸಾವಿಗೀಡಾದವರ ಕುಟುಂಬಗಳಿಗೆ ಮಾಸಾಶನ ನೀಡುತ್ತಿದೆ. ಮರಾಠಿ ಅಸ್ಮಿತೆಯನ್ನು ಉಳಿಸಿಕೊಳ್ಳುವದಾಗಿ ಹೇಳುವ ಪ್ರತಿಯೊಂದು ಸಂಘಟನೆಗೆ ಲಕ್ಷ ಲಕ್ಷ ಸಹಾಯಾರ್ಥ ನೀಡುತ್ತಿದೆ. ಕಳೆದ ವರ್ಷ ೫೩ ಸಂಸ್ಥೆಗಳಿಗೆ ಒಂದು ಕೋಟಿಯಷ್ಟು ನೆರವನ್ನು ನೀಡಿದೆಯಾದರೆ ಮುಂದಿನ ವರ್ಷ ಮೂರು ಕೋಟಿ ಕೊಡುವದಾಗಿ ಘೋಷಿಸಿದೆ.

ಇದಕ್ಕೆ ಪ್ರತಿಯಾಗಿ ಕನ್ನಡ ವಾತಾವರಣ ನಿರ್ಮಿಸುವ ಕೆಲಸದಲ್ಲಿ ಕರ್ನಾಟಕ ಸರಕಾರ ಸಂಪೂರ್ಣ ವಿಫಲಗೊಂಡಿದೆ. ಈಗ ಬಿಜೆಪಿ. ಸರಕಾರ ಬಂದ ಮೇಲಂತೂ ಮರಾಠಿ ಮತಗಳಿಕೆಗಾಗಿ ಮರಾಠಿಗರನ್ನು ಓಲೈಸುವ ಕೆಲಸಗಳೇ ನಡೆಯುತ್ತಿವೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರವಂತೂ ಸಮಾವೇಶ ನಡೆಸಿ ಫೋಟೋ ತೆಗೆಸಿಕೊಳ್ಳುವದಕ್ಕಷ್ಟೇ ಅದರ ಕೆಲಸವು ಸೀಮಿತವಾಗಿದೆ.

ಈಗ ಆಗಬೇಕಾದದ್ದೇನು?

೧) ಮಹಾರಾಷ್ಟ್ರ ಏಕೀಕರಣ ಸಮಿತಿಯು ಕೇವಲ ಪ್ರಚಾರದ ಬಲದ ಮೇಲೆಯೇ ಜೀವಂತವಾಗಿ ಉಳಿದಿದೆ. ಸದಾ ಒಂದಿಲ್ಲೊಂದು ರೀತಿಯ ಪ್ರಚಾರ ಅದಕ್ಕೆ ಬೇಕು. ಸದಾ ಅದು ಸುದ್ದಿಯಲ್ಲಿ ಇರಬಯಸುತ್ತದೆ. ಅದು ಸಂಪೂರ್ಣವಾಗಿ ಸತ್ತು ಹೋಗಿದೆಯೆನ್ನುತ್ತಿರುವಾಗಲೇ ಮಹಾಪೌರ ವಿಜಯ ಮೋರೆ ಅವರ ಮುಖಕ್ಕೆ ಮಸಿ ಬಳಿಯುವ ಘಟನೆ ಸಂಭವಿಸಿತು. ಇದು ಸಾಮಾನ್ಯ ಮರಾಠಿಗನ ಭಾವನೆಗಳನ್ನೂ ಕೆರಳಿಸಿತು. ಸತ್ತು ಹೋಗಿದ್ದ ಸಮಿತಿ ಮತ್ತೆ ಎದ್ದು ಕೂತಿತು. ಮ.ಏ.ಸಮಿತಿ ನಡೆಸಬಯಸುವ ಸಭೆ, ಸಮಾವೇಶ, ನಾಯಕರ ಹೇಳಿಕೆಗಳನ್ನೆಲ್ಲ ನಾವು ಕನ್ನಡಿಗರು ನಿರ್ಲಕ್ಷಿಸಬೇಕು. ಪ್ರತಿಯೊಂದಕ್ಕೂ ಅವರನ್ನು ವಿರೋಧಿಸುವ ಪ್ರಕ್ರಿಯೆಯಿಂದ ಅವರು ಮತ್ತೆ ಮತ್ತೆ ಸಂಘಟಿತರಾಗುವದಕ್ಕೆ ಅವಕಾಶ ಕಲ್ಪಿಸಿಕೊಟ್ಟಂತಾಗುತ್ತದೆ. ನಮ್ಮಲ್ಲಿ ಪ್ರಚಾರಕ್ಕಾಗಿ ಪ್ರತಿಭಟನೆ ನಡಸುವ ಸಂಘಟನೆಗಳು ಹೆಚ್ಚಾಗಿವೆ. ಕನ್ನಡಿಗರು ಕನ್ನಡ ಸಂಘಟನೆಗಳು, ವಿವೇಚನೆಯಿಂದ ಹಾಗೂ ತಾಳ್ಮೆಯಿಂದ ಕನ್ನಡಾಭಿಮಾನವನ್ನು ಪ್ರದರ್ಶಿಸಬೇಕು.

೨) ಬೆಳಗಾವಿಗೆ ಕನ್ನಡ ಅಭಿಮಾನವಿರುವಂತಹ ಅಧಿಕಾರಿಗಳನ್ನೇ ನೇಮಕ ಮಾಡಬೇಕು. ವಿಶೇಷವಾಗಿ ಜಿಲ್ಹಾಧಿಕಾರಿ, ಜಿಲ್ಹಾ ಪೋಲೀಸ್ ಅಧಿಕಾರಿ, ಮಹಾನಗರಸಭೆ ಆಯುಕ್ತರು ಹಾಗೂ ಕಾರ್ಮಿಕ ಇಲಾಖೆ ಅಧಿಕಾರಿಗಳು, ಜಿಲ್ಹಾ ಶಿಕ್ಷಣಾಧಿಕಾರಿ ಕನ್ನಡಪರ ಇರುವಂತೆ ನೋಡಿಕೊಳ್ಳಬೇಕು.

೩) ಕರ್ನಾಟಕದ ಬಹುತೇಕ ಎಲ್ಲ ಜಿಲ್ಹೆಗಳು ನೆರೆಯ ರಾಜ್ಯಗಳೊಂದಿಗೆ ಹೊಂದಿಕೊಂಡಿವೆ. ಉಳಿದ ಕಡೆಗಿನ ಗಡಿಗಳಿಗೂ ಬೆಳಗಾವಿ ಗಡಿಗೂ ವ್ಯತ್ಯಾಸವಿದೆ ಯೆಂಬುದನ್ನು ಅಧಿಕಾರಿಗಳು ಹಾಗೂ ಆಳುವವರು ಅರ್ಥಮಾಡಿಕೊಳ್ಳಬೇಕು. ಉಳಿದ ಗಡಿಗಳಲ್ಲಿ ಸಾಂಸ್ಕೃತಿಕ, ಶೈಕ್ಷಣಿಕ, ಸಮಸ್ಯೆಗಳಿರಬಹುದು. ಆದರೆ ಇಲ್ಲಿ ನಮ್ಮ ನೆಲವನ್ನೇ ನುಂಗುವವರು ಹೊಸ್ತಿಲಲ್ಲಿ ನಿಂತಿದ್ದಾರೆ. ಆದ್ದರಿಂದ ಬೆಳಗಾವಿ ಗಡಿಯಲ್ಲಿ ಮರಾಠಿ ದಾಳಿಯನ್ನು ಸಮರ್ಥವಾಗಿ ಎದುರಿಸಿ ಕನ್ನಡವನ್ನು, ಕನ್ನಡ ಸಂಸ್ಕೃತಿಯನ್ನು ಉಳಿಸಿಕೊಳ್ಳುವದಕ್ಕಾಗಿ ಪ್ರತ್ಯೇಕ ಗಡಿ ರಕ್ಷಣಾ ಸಮಿತಿಯನ್ನು ರಚಿಸಬೇಕು.

೪) ಉತ್ತರ ಕರ್ನಾಟಕವೆಂದರೆ ಧಾರವಾಡ, ಹುಬ್ಬಳ್ಳಿ ಎಂದೇ ಬೆಂಗಳೂರಿನಲ್ಲಿರುವವರು ಅರ್ಥೈಸುತ್ತಾರೆ. ದುರ್ದೈವದಿಂದ ಬೆಳಗಾವಿಯ ರಾಜಕಾರಣಿಗಳು ಅಷ್ಟೊಂದು ಪ್ರಭಾವಶಾಲಿ ಇಲ್ಲದ್ದರಿಂದ ಎಲ್ಲ ವಿಷಯಗಳಲ್ಲಿ ಬೆಳಗಾವಿಯನ್ನು ನಿರ್ಲಕ್ಷಿಸ

ಲಾಗುತ್ತದೆ. ಸರಕಾರಿ ಕಚೇರಿಗಳ, ಉದ್ದಿಮೆಗಳ ಸ್ಥಾಪನೆ, ವಿವಿಧ ನಿಗಮ ಮಂಡಗಳಿಗೆ ನೇಮಕಗಳಲ್ಲಿ ಬೆಳಗಾವಿಗೆ ಸೂಕ್ತ ಪ್ರಾತಿನಿಧ್ಯ ದೊರಕು ವಂತಾಗಬೇಕು.

ಕೊನೆಯದಾಗಿ ಇಲ್ಲಿ ಶರದ್ ಪವಾರರ ಒಂದು ಹೇಳಿಕೆಯನ್ನು ಇಲ್ಲಿ ನೆನಪಿಸಿಕೊಡ ಬಯಸುತ್ತೇನೆ.

೧೯೯೬ರಲ್ಲಿ ಬೆಳಗಾವಿಯ ಮರಾಠಾ ಬ್ಯಾಂಕಿನ ಬೆಳ್ಳಿಹಬ್ಬದ ಸಮಾರಂಭಕ್ಕಾಗಿ ಬಂದಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡುತ್ತ "ಈ ಗಡಿ ಸಮಸ್ಯೆ ಬಗೆ ಹರಿಯುವದು ಕೆಲವರಿಗೆ ಬೇಕಾಗಿಲ್ಲ. ಅವರು ಅಂಗಡಿಯನ್ನು ತೆರೆದುಕೊಂಡು ಕುಳಿತಿದ್ದಾರೆ. ಈ ಸಮಸ್ಯೆ ಬಗೆ ಹರಿದು ಹೋದರೆ ಅವರು ಅಂಗಡಿಗಳನ್ನು ಮುಚ್ಚಬೇಕಾಗುತ್ತದೆ" – ಎಂದು ಬೆಳಗಾವಿಯ ತರುಣಭಾರತ ಪತ್ರಿಕೆಯ ಹೆಸರನ್ನು ಹೇಳದೇ ಆ ಪತ್ರಿಕೆಯ ರಾಜಕಾರಣವನ್ನು ಕಟುವಾಗಿ ಟೀಕಿಸಿದ್ದರು!

ಈಗ ಬೆಳಗಾವಿಯಲ್ಲಿ ಸಣ್ಣ ಪುಟ್ಟ ಘಟನೆಗಳು ನಡೆಯುತ್ತಿರುವುದೂ ಈ ತರುಣಭಾರತ ಪತ್ರಿಕೆಯ ಪ್ರಚೋದನೆಯಿಂದಲೇ. ಗಡಿ ಸಮಸ್ಯೆ ಯಾವಾಗಲೋ ಮುಗಿದು ಹೋಗಿದ್ದು ಈ ಪತ್ರಿಕೆಯಿಂದಾಗಿ ಮರಾಠಿ ಸಮಸ್ಯೆ ಮಾತ್ರ ಉಳಿಯು ವಂತಾಗಿದೆ. ಕನ್ನಡಿಗರು ವಿವೇಚನೆಯಿಂದ ವರ್ತಿಸಿದರೆ ನಾಲ್ಕಾರು ವರ್ಷಗಳಲ್ಲಿ ಈ ಸಮಸ್ಯೆಯೂ ಸತ್ತುಹೋಗುತ್ತದೆ.



ಪ್ರತ್ಯೇಕತೆ – ಒಂದು ಒಳಸುಳಿ

■ ಡಾ. ಡಿ.ಬಿ. ರಾಮಚಂದ್ರಾಚಾರ್

ಭೌಗೋಳಿಕವಾಗಿ, ಭಾಷಿಕವಾಗಿ, ಸಾಂಸ್ಕೃತಿಕವಾಗಿ ವಿಶಿಷ್ಟ ವಾಗಿರುವ ಭೂಪ್ರದೇಶದ ಜನ, ತನ್ನ ಪಕ್ಕದ ಮತ್ತೊಂದು ಪ್ರದೇಶ ದೊಡನೆ ವಿಲೀನಗೊಳ್ಳಲು ಇಚ್ಛಿಸುವುದಿಲ್ಲ. ಕಾರಣ ದೊಡ್ಡ ಪ್ರದೇಶ ದೊಡನೆ ವಿಲೀನಗೊಳ್ಳುವ ಚಿಕ್ಕ ಭೂಪ್ರದೇಶ ತನ್ನ ಪಾರಂಪರಿಕ ವೈಶಿಷ್ಟ್ಯವನ್ನು ಕಳೆದುಕೊಳ್ಳುವುದರ ಮೂಲಕ 'ತನ್ನತನ'ವನ್ನೇ ಕಳೆದುಕೊಳ್ಳುತ್ತದೆ. ಆದರೆ ವಿದ್ಯಾಭ್ಯಾಸ, ವೈದ್ಯಕೀಯ, ಸಾರಿಗೆ ಬೆಳೆಯುವ ಪ್ರಜಾಸಂಖ್ಯೆಗೆ ವೃತ್ತಿಗಳು, ಸೌಲಭ್ಯಗಳು ಚಿಕ್ಕಪ್ರದೇಶ ದಲ್ಲಿ ದೊರೆಯುವ ಸಾಧ್ಯತೆ ಬಲು ವಿರಳ.

ಇಪ್ಪತ್ತೊಂದನೆಯ ಶತಮಾನದಲ್ಲಿ ಕೈಗಾರಿಕೆ, ವಿದ್ಯಾಭ್ಯಾಸ ವೈದ್ಯಕೀಯ ಸೌಲಭ್ಯಗಳ ಕೇಂದ್ರಗಳಾಗಿ ನಗರಗಳು ವಿಸ್ತಾರಗೊಳ್ಳು ತ್ತಿರುವುದರ ಜೊತೆಗೆ ವೃತ್ತಿಜೀವನ, ಆ ಮೂಲಕ ವ್ಯಕ್ತಿಯ ತಲಾ ಆದಾಯದಲ್ಲಿ ಹೊಸಕ್ರಾಂತಿಯನ್ನೇ ಉಂಟುಮಾಡುತ್ತಿರುವ ಸಾಫ್ಟ್‌ವೇರ್, ಬಯೋಟೆಕ್ನಾಲಜಿ ಹಾಗೂ ಇನ್ನಿತರ ವೈಜ್ಞಾನಿಕ ಸಂಶೋಧನಾ ಕೇಂದ್ರಗಳು ಮತ್ತು ಹೊರದೇಶದವರು ಕೋಟ್ಯಾಂತರ ರೂ.ಗಳ ಬಂಡವಾಳದಲ್ಲಿ ತೆರೆಯುತ್ತಿರುವ ಉತ್ಪಾದನಾ ಸಂಸ್ಥೆ ಗಳಿಂದ ನಗರವೆಂಬ ಚಟುವಟಿಕೆಯ ತಾಣ, ಸುತ್ತಲಿನ ಹಾಗೂ ದೂರದ ಶಕ್ತರನ್ನೆಲ್ಲಾ ತನ್ನತ್ತ ಆಕರ್ಷಿಸುತ್ತಾ, ಹಳ್ಳಿಗಳನ್ನೆಲ್ಲಾ ತನ್ನ ತೆಕ್ಕೆಯಲ್ಲಿ ಹಿಡಿಯುತ್ತಾ, ಅವುಗಳನ್ನು ನಗರದ ಭಾಗಗಳನ್ನಾಗಿಸು ತ್ತಿರುವ ಈ ಹೊತ್ತಿನಲ್ಲಿ ೩೦ x ೪೦ ಚ. ಮೈಲಿಗಳ ವಿಸ್ತೀರ್ಣದ ಗುಡ್ಡಗಾಡು ಪ್ರದೇಶವೊಂದು ತಾನು ಸ್ವತಂತ್ರ ರಾಜ್ಯ ವಾಗುವ ಕನಸು ಕಾಣುತ್ತಿರುವುದು ಚೋದ್ಯವಾಗಿ ಕಾಣಬಹುದು. ಆದರೆ ಇದು ಸತ್ಯ.



ಈ ಕನಸು ಆ ಪ್ರದೇಶದ ಎಲ್ಲ ಜನರ ಕನಸಲ್ಲ; ತಲೆತಲಾಂತರದಿಂದ ಜಮೀನ್ದಾರಿ ಪದ್ಧತಿಯನ್ನು ರಕ್ತಗತಗೊಳಿಸಿಕೊಂಡಿರುವ, ಇನ್ನೂ ಜಮ್ಮಾ-ಬಾಣೆಗಳ ಹೆಸರಿನಲ್ಲಿ ಭೂಮಿಯ ಮೇಲಿನ ಹಕ್ಕನ್ನು ಅನುಭವಿಸುತ್ತಾ, ಹೊಲೆಯ, ಕುರುಬ, ಎರವ ಮುಂತಾದವರನ್ನು ಜೀತದವರಂತೆ ನಡೆಸಿಕೊಳ್ಳುತ್ತಿರುವ, ಸುಮಾರು ಎರಡು ಲಕ್ಷ ಸಂಖ್ಯೆಯ ಜನ ಸಮುದಾಯ ಕಾಣುತ್ತಿರುವ ಹಗಲು ಕನಸು.

ಈ ಕನಸು ಪ್ರಾರಂಭವಾದುದು ೧೯೩೨ರಲ್ಲಿ. ಕೊಡಗು ಪುಟ್ಟರಾಜ್ಯ, ಬೇರೆಡೆ ಪಾಳೇಗಾರನೆಂದು ಕರೆಯಲ್ಪಡುತ್ತಿದ್ದ ಸ್ಥಾನಮಾನದ ವ್ಯಕ್ತಿ ಇಲ್ಲಿ ರಾಜನೆಂದು ಕರೆಸಿಕೊಳ್ಳುತ್ತಿದ್ದ. ಬ್ರಿಟಿಷರು ಆ ರಾಜನನ್ನು ಸೆರೆ ಹಿಡಿದು ಗಡಿಪಾರುಗೊಳಿಸಿ, ಕಾಶಿಗೆ ಸಾಗಿಸಿ ಅಲ್ಲಿಂದ ಇಂಗ್ಲೆಂಡಿಗೆ ರವಾನಿಸಿದರು. ಆತ ಅಲ್ಲೇ ಅಂತ್ಯ ಕಂಡ.

ಬ್ರಿಟಿಷರು ಈ ಪ್ರದೇಶದ ಆಡಳಿತವನ್ನು ಕೈಗೆ ತೆಗೆದುಕೊಂಡಾಗ, ಜನಾಂಗದ 'ಕೆನೆಪದರ'ದವರು, ಬ್ರಿಟಿಷರನ್ನು ಚಾಚೂ ತಪ್ಪದೆ ಅನುಕರಿಸಿ, ಅಭಿನವ ಬ್ರಿಟಿಷರೇ ಆದರು.

೧೯೪೭ರಲ್ಲಿ ಸ್ವಾತಂತ್ರ್ಯ ಸಿಕ್ಕಿದಾಗ ಮೂರು ಬಗೆಯ ಆಡಳಿತ ಚಾಲ್ತಿಯಲ್ಲಿತ್ತು: ೧) ಗೌರ್ನರ್ ಜನರಲ್‌ರ ನೇರ ಆಡಳಿತದಲ್ಲಿದ್ದ ಪ್ರದೇಶಗಳು–'ಎ'ಸ್ಟೇಟ್ಸ್, ೨) ದೇಶೀಯ ರಾಜರ ಮೂಲಕ ಬ್ರಿಟಿಷರ ಆಡಳಿತ ಇದ್ದ ಪ್ರದೇಶಗಳು – 'ಬಿ' ಸ್ಟೇಟ್ಸ್, ೩) ಬ್ರಿಟಿಷ್ ಕಮೀಷನರ್‌ಗಳ ಆಡಳಿತವಿದ್ದ ಪ್ರದೇಶಗಳು – 'ಸಿ' ಸ್ಟೇಟ್ಸ್.

ಕೊಡಗನ್ನು 'ಸಿ' ಸ್ಟೇಟ್ಸ್ ಗುಂಪಿಗೆ ಸೇರಿಸಿ, ಮೈಸೂರಿನ ಆಡಳಿತದಿಂದ ಬೇರೆಯಾಗಿ ಇಟ್ಟಾಗ, 'ಕೆನೆಪದರ'ದವರು ತಮ್ಮ ಕೈ ಮೇಲಾಗಿ ಬದುಕುವ ಅವಕಾಶ ದೊರೆತುದಕ್ಕೆ ಹಿಗ್ಗಿದರು. ಆದರೆ ಅವರ ಬಯಕೆಯ ಬಲೂನ್ ಮೇಲೇರಲಿಲ್ಲ.

೧೯೫೨ರಲ್ಲಿ 'ರಾಜ್ಯ ವ್ಯವಸ್ಥಾ ಸಭೆ' ತನ್ನ ಕಾರ್ಯ ಪ್ರಾರಂಭಿಸುವವರೆಗೆ, ದೆಹಲಿ ಹಿಮಾಚಲ ಪ್ರದೇಶ, ಭೂಪಾಲ್, ವಿಂಧ್ಯ ಪ್ರದೇಶ, ಅಜ್ಮೀರ್, ಕೊಡಗು ಪ್ರದೇಶಗಳು ಕೇಂದ್ರಾಡಳಿತ ಪ್ರದೇಶಗಳೆಂದು ಪರಿಗಣಿಸಲ್ಪಟ್ಟಿದ್ದವು.

ಈ ಪ್ರದೇಶಗಳ ವ್ಯವಸ್ಥೆಗಾಗಿ ಉಪಸಮಿತಿಯೊಂದು ರಚನೆಯಾಗಿ, ಸರ್ವಶ್ರೀ ಸಿ.ಎಂ. ಪೂರ್ಣಚ್ಚ, ಶಂಕರದಯಾಳ್ ಶರ್ಮ, ದೇಶಬಂಧು ಗುಪ್ತ, ಹರಿಬಾವ್ ಉಪಾಧ್ಯಾಯ ಅದರ ಸದಸ್ಯರಾಗಿದ್ದರು.

ಈ ಕೇಂದ್ರಾಡಳಿತ ಪ್ರದೇಶಗಳಿಗೆ ಸ್ವಯಂ ಆಡಳಿತವನ್ನು ವಹಿಸಿಕೊಡುವ ಉದ್ದೇಶದಿಂದ, ೧೯೫೨ ಜನವರಿ ೨೬ರಂದು ಹೊಸ ರಾಜ್ಯ ವ್ಯವಸ್ಥೆ ಅನುಷ್ಠಾನಕ್ಕೆ ಬಂದು, ಅದರ ಪ್ರಕಾರ ಕೊಡಗು ಚುನಾವಣೆಗೆ ಸಿದ್ಧವಾಯಿತು.

ಈ ಸಂದರ್ಭದಲ್ಲಿ ಕೊಡಗಿನ ಕಾಂಗ್ರೆಸ್ ವಲಯದಲ್ಲಿ ತೀವ್ರವಾದ ಭಿನ್ನಾಭಿಪ್ರಾಯ ತಲೆಎತ್ತಿತು. "ಕೊಡಗನ್ನು ಕ್ರಮೇಣ ವಿಶಾಲ ಮೈಸೂರಿನ ಭಾಗವಾಗಿಸುತ್ತಾರೆ" ಎಂಬ ವದಂತಿ ಬಲವಾಯಿತು. "ಕೊಡಗು ಮೈಸೂರಿನ ಭಾಗವಾದರೆ ಅದರ ವೈಶಿಷ್ಟ್ಯಕ್ಕೆ ಧಕ್ಕೆ ಯೊದಗುತ್ತದೆ. ಆದ್ದರಿಂದ ವಿಲೀನ ಕೂಡದು, ಕೊಡಗು ಪ್ರತ್ಯೇಕವಾಗಿ 'ಸಿ' ಸ್ಟೇಟ್ ಆಗಿಯೇ ಉಳಿಯತಕ್ಕದ್ದು" ಇದು ಒಂದು ಗುಂಪಿನವಾದ. ಇವರೇ ಮುಂದೆ ಪ್ರಸಿದ್ಧರಾದ

ಪ್ರತ್ಯೇಕತಾವಾದಿಗಳು. ಇದಕ್ಕೆ ಕೊಡವ ಜನಾಂಗದ ಪೂರ್ಣಬೆಂಬಲ. "ಕೊಡಗು ಮೈಸೂರಿನ ಜತೆ ವಿಲೀನವಾದರೆ ಏನು? ಇದರಿಂದ ನಮ್ಮ ಮಕ್ಕಳ ವಿದ್ಯಾಭ್ಯಾಸ ಉದ್ಯೋಗಗಳಿಗೆ ಹೆಚ್ಚಿನ ಅವಕಾಶ ದೊರೆಯುತ್ತದೆ. ಕಾಂಗ್ರೆಸ್‌ನ ಕೇಂದ್ರ ಸಮಿತಿಯ ನಿರ್ಧಾರದಂತೆ ನಡೆದು, ವಿಶಾಲಭಾರತದ ಸಂವಿಧಾನಕ್ಕೆ ಬದ್ಧರಾಗಿರುವುದೇ ಸರಿ". ಇದು ಇನ್ನೊಂದು ಗುಂಪಿನ ನಿಲುವು. ಇದಕ್ಕೆ ಕೊಡವ ಜನಾಂಗವನ್ನುಳಿದು ಕೊಡಗಿನ ಸಮಸ್ತರ ಬೆಂಬಲ.

ಹೀಗೆ ಕೊಡಗಿನ ಕಾಂಗ್ರೆಸ್‌ನಲ್ಲಿ ಪ್ರತ್ಯೇಕತಾವಾದಿಗಳ–ವಿಲೀನವಾದಿಗಳ ಎರಡು ಗುಂಪುಗಳಾದವು. ಪ್ರತ್ಯೇಕತಾವಾದಿಗಳ ನಾಯಕರು ಪಿ. ಬೆಳ್ಳಿಯಪ್ಪನವರು. ಅವರು ತಮ್ಮ ನಿಲುವನ್ನು ನೆಹರು ಅವರಿಗೆ ಪತ್ರದ ಮೂಲಕ ತಿಳಿಸಿದರು. ನೆಹರು ಅವರು 'ಕಾಂಗ್ರೆಸ್‌ನ ಶಿಸ್ತನ್ನು ಭಂಗಪಡಿಸಿದಂತೆ ಆಗುತ್ತದೆ ನಿಮ್ಮ ನಿಲುವು' ಎಂದು ಮಾರುತ್ತರ ನೀಡಿದರು. ಪ್ರತ್ಯೇಕತಾವಾದಿಗಳು ಕಾಂಗ್ರೆಸ್‌ನಿಂದ ಹೊರ ಬಂದರು. ಚುನಾವಣೆ ನಡೆಯಿತು. ಪಿ.ಬೆಳ್ಳಿಯಪ್ಪ, ಪಿ.ಸಿ.ಉತ್ತಪ್ಪ, ಕೆ.ಪಿ. ಕರುಂಬಯ್ಯ, ಕೆ.ಕೆ. ಗಣಪತಿ ಮುಂತಾದ ಪ್ರತ್ಯೇಕತಾವಾದಿಗಳು ಗೆದ್ದರು. ಕಾಂಗ್ರೆಸ್ ಬಹುಮತ ಪಡೆದ ಹಿನ್ನೆಲೆಯಲ್ಲಿ ಮಂತ್ರಿ ಮಂಡಲ ರಚಿಸಿತು. ಕೊಡಗು, ಮೈಸೂರಿನಲ್ಲಿ ವಿಲೀನ ಗೊಳ್ಳುವವರೆಗೆ, ಅಂದರೆ ೪೧/೨ ವರುಷ ಈ ಸರ್ಕಾರ ಅಧಿಕಾರದಲ್ಲಿತ್ತು. ಸಿ.ಎಂ. ಪೂಣಚ್ಚ ಮುಖ್ಯಮಂತ್ರಿಗಳಾಗಿದ್ದರು.

ಅಖಿಲ ಭಾರತದ ಮುಖ್ಯಮಂತ್ರಿಗಳ ಸಭೆಯು "ಹಿಮಾಚಲ ಪ್ರದೇಶವನ್ನುಳಿದು ಉಳಿದ ಕೇಂದ್ರಾಡಳಿತದ 'ಸಿ' ಸ್ಟೇಟ್‌ಗಳು, ಭಾಷೆ, ಸಂಸ್ಕೃತಿಗಳಿಗೆ ಹೊಂದಾಣಿಕೆಯಾಗುವ ತಮ್ಮ ತಮ್ಮ ನೆರೆಯ ಪ್ರಾಂತಗಳಲ್ಲಿ ವಿಲೀನಗೊಳ್ಳತಕ್ಕದ್ದು" ಎಂದು ತೀರ್ಮಾನಿಸಿತು.

ವಿಲೀನಕಾರ್ಯ ಸಾಂಗವಾಗಲು ಕೊಡಗಿನ ಶಾಸನಸಭೆಯ ಅಭಿಪ್ರಾಯವನ್ನು ಸ್ಟೇಟ್ ರೀ ಆರ್ಗನೈಜೇಷನ್ ಕಮೀಷನ್ ಕೇಳಿತು. ಆಗ ಕೊಡಗಿನ ಶಾಸನಸಭೆಯ ಅಧಿವೇಶನವನ್ನು ಕರೆದು, ಸಭೆಯ ಅಭಿಪ್ರಾಯವನ್ನು ಕೇಳಲಾಯಿತು.

ಪ್ರತ್ಯೇಕತಾವಾದಿ ಏಳು ಜನ ಸದಸ್ಯರಲ್ಲಿ ಕೆ.ಪಿ. ಕರುಂಬಯ್ಯ, ಪಿ.ಸಿ. ಉತ್ತಪ್ಪನವರನ್ನುಳಿದು ಉಳಿದು ಐವರು, ಮುಖ್ಯವಾಗಿ ಪ್ರತ್ಯೇಕತಾವಾದಿ ಗುಂಪಿನ ನಾಯಕರಾಗಿದ್ದ ಪಿ. ಬೆಳ್ಳಿಯಪ್ಪನವರು ವಿಲೀನದ ಪರವಾಗಿ ಮತ ಚಲಾಯಿಸಿದರು. ಆದರೂ ವಿಲೀನಕ್ಕೆ ಸಿ.ಎಂ. ಪೂಣಚ್ಚನವರೇ ಕಾರಣ ಎಂಬ ಸುಳ್ಳನ್ನು ಕೊಡವ ಜನಾಂಗ ೧೯೯೦ರ ವರೆಗೆ ಅಚಲವಾಗಿ ನಂಬಿತ್ತು.

ಇದು ಕೊಡಗು ಮೈಸೂರಿನಲ್ಲಿ ವಿಲೀನವಾದುದರ ಬಲು ಸಂಕ್ಷಿಪ್ತ ವರದಿ. ವಿಲೀನವಾದ ಮೇಲೂ ಪ್ರತ್ಯೇಕ ರಾಜ್ಯದ ಕೂಗು ನಿಲ್ಲಲಿಲ್ಲ. ೧೯೫೬ರಿಂದ ೨೦೧೨ರ ವರೆಗೂ ಅಂದರೆ ಅರವತ್ತು ವರುಷಗಳಷ್ಟು ದೀರ್ಘಕಾಲ – ಘೂರ್ಕಾಲ್ಯಾಂಡ್ ಆದಂತೆ ಕೊಡವಲ್ಯಾಂಡ್ ಆಗಬಹುದೆಂಬ ಆಸೆಯನ್ನು ಕೊಡವ ಜನಾಂಗ ಜತನದಿಂದ ಕಾಪಾಡಿಕೊಂಡು ಬಂದಿದೆ.

ಆ ಆಸೆಯ ದೀಪ ಆರದಂತೆ, ಅದನ್ನು ಪೋಷಿಸಿಕೊಂಡು ಬರುತ್ತಿರುವ ಪ್ರಯತ್ನಗಳ ಸಂಕ್ಷಿಪ್ತ ಪರಿಚಯ ಮುಂದಿನ ಭಾಗದಲ್ಲಿ ಅವಶ್ಯಕ.

೧. ವಿಲೀನಗೊಂಡ ತರುವಾಯ ಕೊಡಗಿಗೆ ಸಾಕಷ್ಟು ಪ್ರಾಮುಖ್ಯತೆ ಸಿಗುತ್ತಿಲ್ಲವೆಂಬ ಅಸಮಾಧಾನದ ಹಿನ್ನೆಲೆಯಲ್ಲಿ ಪಿ. ಚಂಗಪ್ಪ, ಕೆ. ಚಿನ್ನಪ್ಪ, ಗುಂಡು ಕುಟ್ಟಿ ಮಂಜುನಾಥಯ್ಯ ಮುಂತಾದವರು ೧೯೫೮ರಲ್ಲಿ ಕೊಡಗು ಮತದಾರರ ವೇದಿಕೆಯನ್ನು ಹುಟ್ಟುಹಾಕಿದರು. ಮುಂದೆ ಮಂಜುನಾಥಯ್ಯನವರು ಶಾಸಕರಾದರು.

೨. ಕೆ. ಗೋಪಿ ಅಪ್ಪಯ್ಯನವರು "ಹೊರಗಿನವರು ಕೊಡಗಿನಲ್ಲಿ ನೆಲೆಸಬಾರದು. (ಹೊರಗಿನವರು=ಕೊಡಗಿನವರನ್ನುಳಿದು ಬೇರೆ ಸಮಸ್ತ ಕನ್ನಡಿಗರು ಮಲೆಯಾಳಿಗಳು, ತಮಿಳರು ಇತ್ಯಾದಿ) ಹಾಗೂ ಸ್ಥಳೀಯರು ಹೊರಗಿನವರೊಡನೆ ಸ್ನೇಹ-ಸಂಬಂಧ ಬೆಳೆಸಬಾರದು. 'ಕೂರ್ಗ್‌ಫಾರ್ ಕೂರ್ಗೀಸ್' ಎಂಬ ವಿಚಾರವನ್ನು ಮುಂದೆ ಮಾಡಿ ೧೯೭೦ರಲ್ಲಿ ಕಾವೇರಿ ಸೇನೆಯನ್ನು ಸ್ಥಾಪಿಸಿದರು.

೩. ಬಿ.ಡಿ. ಗಣಪತಿಯವರು ಕಂಬದಕಡ ಯೋಜನೆಯನ್ನು ವಿರೋಧಿಸಿ ೧೯೭೦ರಲ್ಲಿ ಕೊಡಗು ಮೂಲ ನಿವಾಸಿಗಳ ಸಂಘವನ್ನು ಸ್ಥಾಪಿಸಿ ಕಾವೇರಿ ಸೇನೆಯ ಉದ್ದೇಶವನ್ನು ಸಂಘದ ಗೊತ್ತುವಳಿಯನ್ನಾಗಿ ಸ್ವೀಕರಿಸಿದರು.

೪. ಸಿ.ಎಮ್. ಪೆಮ್ಮಯ್ಯ, ಬಿ.ಎ. ನಾಣಯ್ಯ ಮುಂತಾದವರು ೧೯೯೦ರಲ್ಲಿ ಕೊಡಗು ಕಾಫಿ ಬೆಳೆಗಾರರ ಸಂಘವನ್ನು ಸ್ಥಾಪಿಸಿ, ಕೊಡಗಿಗೆ ಅನ್ಯಾಯವಾಗುತ್ತಿದೆ ಎಂದು ಪ್ರಚಾರಮಾಡಿದರು.

೫. ಸಿ.ಕೆ. ಪೂಣಚ್ಚ ಅವರು ೧೯೮೦ರಲ್ಲಿ ಬರಪೊಳೆ ಯೋಜನೆ ವಿರುದ್ಧ ಸಂಘಟನೆಯನ್ನು ಬಹು ಸಮರ್ಪಕವಾಗಿ ಸಂಘಟಿಸಿದ್ದರು.

೬. ತಮ್ಮು ಪೂವಯ್ಯನವರು ೧೯೯೦ರಲ್ಲಿ ಕೊಡಗು ಏಕೀಕರಣ ರಂಗವನ್ನು-ಮಾತಂಡ ಪೊನ್ನಪ್ಪನವರು ಅಖಿಲ ಕೊಡವ ಸಮಾಜವನ್ನು ಸ್ಥಾಪಿಸಿ, ಕೊಡಗಿನ ವಿವಿಧ ಕಛೇರಿಗಳಲ್ಲಿ, ವಿದ್ಯಾಸಂಸ್ಥೆಗಳಲ್ಲಿ ಕೆಲಸ ಮಾಡುವ ಹೊರಗಿನವರಿಗೆ ವ್ಯವಸ್ಥಿತವಾಗಿ ಕಿರುಕುಳ ಕೊಡುವ ವ್ಯವಸ್ಥೆಯನ್ನು ರೂಪಿಸಿ, ಜಯಶೀಲರಾಗಿದ್ದಾರೆ, ಆಗುತ್ತಿದ್ದಾರೆ.

೭. ಎಂ. ಬಿದ್ದಪ್ಪ ಎಂಬ ಯುವ ವಕೀಲರ ನೇತೃತ್ವದಲ್ಲಿ "ಮೈಸೂರಿನಲ್ಲಿ ವಾಸಿಸುತ್ತಿರುವ ಕೊಡಗು ನಿವಾಸಿಗಳ ಸಂಘ" ಪ್ರತ್ಯೇಕ ಕೊಡಗು ರಾಜ್ಯಕ್ಕಾಗಿ ೧೯೯೦ರಲ್ಲಿ ಮನವಿಯೊಂದನ್ನು ಸಿದ್ಧಪಡಿಸಿ, ಅದಕ್ಕೆ ಫೀಲ್ಡ್ ಮಾರ್ಷಲ್ ಕಾರಿಯಪ್ಪನವರ ಸಹಿಹಾಕಿಸಿ, ಕೇಂದ್ರ ಗೃಹಮಂತ್ರಿಗಳಿಗೆ ಅರ್ಪಿಸಿದರು.

("In the 1990's a section of the Kodava residents of Mysore under the leadership of Mandetira Biddappa, an advocate prepared a memorandum demanding statewood for Kodagu and got it signed by the aging field Marshal K.M. Carriappa" - Rise and call of the Coorg State by P. T. Bopanna, p.72)

೮. ಎ.ಸಿ. ಸುಬ್ಬಯ್ಯನವರು ೧೯೯೦ರಲ್ಲಿ ಕೊಡಗು ಯುವಜನ ಸಂಘ, ಪಶ್ಚಿಮಘಟ್ಟ ರಕ್ಷಣೆ ಎಂಬುದನ್ನು, ರವಿಚಂಗಪ್ಪನವರು ಕಾವೇರಿ ಸೇನೆಯನ್ನು ಸ್ಥಾಪಿಸಿ

ಸರ್ಕಾರದ ಎಲ್ಲಾ ಪ್ರಗತಿಪರ ಯೋಜನೆಗಳಿಗೂ 'ಸಂಸ್ಕೃತಿ'ಯ ಹೆಸರಿನಲ್ಲಿ ಅಡೆ-ತಡೆಗಳನ್ನು ಒಡ್ಡುತ್ತಲೇ ಬಂದಿದ್ದಾರೆ.

೯. ಮೇಲಿನ ಎಲ್ಲಾ ಸಂಸ್ಥೆಗಳಿಗೂ ಸಡ್ಡು ಹೊಡೆಯುವಂತೆ ಮತ್ತು ಈ ಎಲ್ಲಾ ಸಂಸ್ಥೆಗಳನ್ನು ತನ್ನ ಕಾರ್ಯವ್ಯಾಪ್ತಿಯಲ್ಲಿ ಒಳಗೊಳ್ಳುವಂತೆ ವಕೀಲರಾಗಿದ್ದ ಎನ್.ಯು. ನಾಚಪ್ಪನವರು ೧೯೯೧ರಲ್ಲಿ Liberation Warriors of Kodagu ಎಂಬುದನ್ನು ಸ್ಥಾಪಿಸಿದರು. LIWAK ಬಹುಬೇಗನೆ ಕೊಡವ ಜನಾಂಗವನ್ನು, ಅದರಲ್ಲೂ ಯುವಕರನ್ನು, ಆಕರ್ಷಿಸಿತು. ಈ ಸಂಸ್ಥೆಯ ಹೆಸರಿನಲ್ಲಿರುವ ಎರಡು ಪದಗಳು Liberation ಮತ್ತು Warriors ಎಂಬುವು ಜನಾಂಗವನ್ನು ಬುಡಮಟ್ಟ ಪ್ರಚೋದಿಸಿದವು.

"ಕೊಡಗು ಎಂಬ ಕಾವೇರಿ ಇಗ್ಗುತಪ್ಪರ ಪರಮ ಪವಿತ್ರನಾಡು ಇಂದು ಕರ್ನಾಟಕದ ಕಪಿಮುಷ್ಟಿಯಲ್ಲಿ ಸಿಕ್ಕಿ ಬಿದ್ದಿದೆ. ಓ, ಕೊಡಗಿನ ಧೀರ ಯೋಧರೇ ಏಳಿ! ಪವಿತ್ರ ನಾಡನ್ನು ಪಾರತಂತ್ರ್ಯದಿಂದ ಬಿಡಿಸಿ, ಪ್ರತ್ಯೇಕ ರಾಜ್ಯವನ್ನು ಸ್ಥಾಪಿಸುವಲ್ಲಿ ನಿಮ್ಮ ತನು-ಮನ-ಧನಗಳನ್ನು ನೀಡಿ." ಸುಮಾರಾಗಿ ಈ ಅರ್ಥ ಬರುವ ಕರಪತ್ರಗಳು ಕೊಡಗಿನ ಎಲ್ಲೆಡೆ ಹಾಗೂ ವಿವಿಧೆಡೆ ನೆಲೆಸಿರುವ ಕೊಡವ ಜನಾಂಗದವರಲ್ಲಿ ಹರಡಿದವು. ಬೃಹತ್ ಮೆರವಣಿಗೆಗಳು ಕೊಡಗಿನಲ್ಲಿ ಬೆಂಗಳೂರಿನಲ್ಲಿ, ದೆಹಲಿಯಲ್ಲಿ ನಡೆದವು. ಕೊಡವರಲ್ಲಿ ವಿದ್ಯುತ್ ಸಂಚಾರ ವಾಯಿತು. ಇನ್ನೇನು ಕೊಡಗು ರಾಜ್ಯ ಸ್ಥಾಪನೆ ಆಗಿ ಹೋಗುತ್ತದೆ ಎಂದು ಎಲ್ಲರೂ ಭ್ರಮಿಸಿದರು.

ಆದರೆ LIWAKನ್ನು ಸರ್ಕಾರ ನಿಷೇಧಿಸುತ್ತದೆ, ನಾಚಪ್ಪನವರನ್ನು ಬಂಧಿಸುತ್ತಾರೆ ಎಂಬ ದಟ್ಟವಾದ ವದಂತಿಯ ಹಿನ್ನೆಲೆಯಲ್ಲಿ ನಾಚಪ್ಪನವರು ಭೂಗತರಾದರು. ಒಂದೆರಡು ವರುಷಗಳು ಉರುಳಿದವು. ಮತ್ತೆ ನಾಚಪ್ಪನವರು ಕಾಣಿಸಿಕೊಂಡರು. LIWAK ಮರೆಯಾಯಿತು.

೧೦. ಕೊಡಗು ರಾಜ್ಯ ಮುಕ್ತಿ ಮೋರ್ಚಾ ಉದಯವಾಯಿತು. ಬೋಡೋ ಚಳವಳಿಯಂತೆ ನಮ್ಮದು ಎಂದು ಹೇಳಿಕೊಂಡರು. ಮತ್ತೆ ಎಲ್ಲೆಲ್ಲೂ ಮೆರವಣಿಗೆ ಭಾಷಣಗಳು. ಮತ್ತೆ ಉದ್ರಿಕ್ತ ಪರಿಸ್ಥಿತಿ. ಕೊಡವ ಪೊಲೀಸ್ ಅಧಿಕಾರಿಗಳ, ನಿವೃತ್ತ ಸೈನಿಕ ಅಧಿಕಾರಿಗಳ ತುಂಬು ಬೆಂಬಲ. ಮತ್ತೆ ಸರ್ಕಾರದ ಕೆಂಗಣ್ಣು, ಮತ್ತೆ ನಾಚಪ್ಪನವರು ತಲೆ ಮರೆಸಿಕೊಂಡರು.

೧೧. ಮತ್ತೆ ಒಂದೆರಡು ವರುಷಗಳ ವಿಶ್ರಾಂತಿ. ಮತ್ತೆ ನಾಚಪ್ಪನವರು ಪ್ರತ್ಯಕ್ಷರಾದರು. ಮೋರ್ಚಾ ಮರೆಯಾಯಿತು. ಕೊಡವ ನ್ಯಾಷನಲ್ ಕೌನ್ಸಿಲ್ (Coorg National Council) ಚಾಲ್ತಿಗೆ ಬಂತು.

ಈಗ ಚಳವಳಿ ಸುವ್ಯವಸ್ಥಿತವಾಗಿ, ವ್ಯವಸ್ಥಿತ ಕಾರ್ಯಕ್ರಮಗಳೊಡನೆ ನಡೆಯುತ್ತಿದೆ.

ಎಂಟನೆ ಪರಿಚ್ಛೇದದಲ್ಲಿ ಕೊಡವ ಭಾಷೆಯ ಸೇರ್ಪಡೆ, ರಾಜರಿಂದ ಕೊಡಲ್ಪಟ್ಟ ಜಮ್ಮಾ ಭೂಮಿಯ ರಕ್ಷಣೆ, ಕೊಡವ ರಾಜ್ಯದ ಸ್ಥಾಪನೆಯ ಬಗ್ಗೆ ಕೇಂದ್ರದ ಮೇಲೆ ಒತ್ತಡ

ಕೊಡವರು ಎಲ್ಲೇ ಇರಲಿ ತಮ್ಮ ಸಾಂಸ್ಕೃತಿಕ ಪ್ರತ್ಯೇಕತೆಯನ್ನು ಉಳಿಸಿಕೊಳ್ಳತಕ್ಕದ್ದು. ಸಾಂಪ್ರದಾಯಿಕ ಉಡುಗೆ-ತೊಡುಗೆಗಳಲ್ಲಿಯೇ ಕಾಣತಕ್ಕದ್ದು.

ಈ ಉದ್ದೇಶಗಳಿಗಾಗಿ ಆಗಾಗ್ಗೆ ಸಮ್ಮೇಳನ, ಮೇಳ, ಮೆರವಣಿಗೆ. ಬೆಂಗಳೂರು ದೆಹಲಿಗಳಲ್ಲಿ ಕೊಡವ ಸಾಂಸ್ಕೃತಿಕ ಪ್ರದರ್ಶನ. ಸಾರ್ವಜನಿಕವಾಗಿ ಕೈಲ್‌ಪೊಳ್ದು, ಹುತ್ತರಿ ಹಬ್ಬಗಳ ಆಚರಣೆಗಳು, ನಿವೃತ್ತ ಪೊಲೀಸ್, ಸೈನ್ಯ ಹಾಗೂ ಇತರ ಅಧಿಕಾರಿಗಳಿಂದ ಎನ್.ಆರ್.ಐ. ಕೊಡವರು ಪ್ಲಾಂಟರುಗಳಿಂದ ನಿರಂತರ ಹಣದ ಸಹಾಯ. ವಿರಾಜಪೇಟೆ ಮತ್ತು ಮಡಕೇರಿಯಿಂದ ಪ್ರಕಟವಾಗುತ್ತಿರುವ ಎರಡು ಕೊಡವ ಪತ್ರಿಕೆಗಳು, ಕೊಡವ ಸಾಹಿತ್ಯ ಅಕಾಡೆಮಿ ಈ ಚಳವಳಿಗೆ ಪರೋಕ್ಷ ಬೆಂಬಲ ಶಕ್ತಿಗಳು.

ಕೊಡಗಿನ ರಾಜಕಾರಣಿಗಳು ಹಿಂದೆ ನಾಚಪ್ಪನವರಿಗೆ ಪರೋಕ್ಷ ಬೆಂಬಲ ಸೂಚಿಸುತ್ತಿದ್ದವರು ಇಂದು ಪ್ರತ್ಯಕ್ಷವಾಗಿಯೇ ಬೆಂಬಲಿಸುತ್ತಿದ್ದಾರೆ. "Interestingly Madikeri MLA Appachu Ranjan of the B.J.P. and M.C. Nanaiah M.L.C. belonging to the Janata Dal (Secular) have both expresed their support to state hood for Kodagu" ಎಂದು ಪಿ.ಟಿ. ಬೋಪಣ್ಣನವರು ದಾಖಲಿಸಿದ್ದಾರೆ.

ಹೀಗೆ ಕೊಡಗು ರಾಜ್ಯದ ನಿರ್ಮಾಣಕ್ಕಾಗಿ ಹೋರಾಟ ಜೀವಂತವಾಗಿದೆ. ಸುಳಿ ಸುತ್ತುತ್ತಲೇ ಇದೆ.

❐



ಕೊಡಗು : ಕರ್ನಾಟಕದ ಅವಿಭಾಜ್ಯ ಅಂಗ

■ ಎನ್.ಎಸ್. ದೇವಿಪ್ರಸಾದ್

ಕಳೆದ ಸಹಸ್ರಮಾನದ ಕೊನೆಯ ದಶಕದ ಪ್ರತಿವರ್ಷಗಳೂ ಕೊಡಗಿನ ಪಾಲಿಗೆ ಕರಾಳ ದಿನಗಳಿಂದ ಕೂಡಿದ್ದವು. ಇಲ್ಲಿನ ಪತ್ರಿಕಾ ಮಾಧ್ಯಮವು ಒಂದು ಭ್ರಮಾಲೋಕವನ್ನೇ ಸೃಷ್ಟಿಸಿತ್ತು. ಅದರ ಪ್ರಕಾರ ಕೊಡಗಿನ ಸಮಸ್ತ ಪ್ರಜೆಗಳ ಬೇಡಿಕೆ ಪ್ರತ್ಯೇಕ ರಾಜ್ಯ! ಇಲ್ಲಿನ ಪ್ರತಿಯೊಬ್ಬನೂ ಕರ್ನಾಟಕದಿಂದ ಹೊರಬರಬೇಕೆಂದು ಆಶಿಸುತ್ತಾನೆ! ಕೆ.ಆರ್.ಎಂ.ಎಂ.ಗೆ ಪ್ರಚಂಡ ಜನಬೆಂಬಲ ಇದೆ, ಇತ್ಯಾದಿ ಪ್ರಚಾರಗಳನ್ನು ಕರ್ನಾಟಕದಾದ್ಯಂತ ಹರಿಯಬಿಟ್ಟಿದ್ದರು. ಬೆಂಗಳೂರಿನ ಪ್ರಮುಖ ಪತ್ರಿಕೆಗಳಲ್ಲೂ ಇದೇ ಬಿಂಬಿಸಲ್ಪಟ್ಟಿತ್ತು. ಆದರೆ ನೈಜ ಪರಿಸ್ಥಿತಿ ಬೇರೆಯೇ ಇತ್ತು.

ಅದೊಂದು ಕೇವಲ ಬೆರಳೆಣಿಕೆಯಷ್ಟು ನಿರುದ್ಯೋಗಿಗಳ ಗುಂಪು. ಬಾಡಿಗೆ ಮನೆ ಖಾಲಿ ಮಾಡಿಸುವ ದಂಧೆಯ ಹುಡುಗರು ಚಿಲ್ಲರೆ ಪೊಲೀಸ್‌ಗಳನ್ನು ಬುಕ್ ಮಾಡಿಕೊಂಡು ದಾಂಧಲೆ ನಡೆಸುತ್ತಿದ್ದರು. ಅವರನ್ನು ವಿರೋಧಿಸಿದವರನ್ನು ಜೀಪಿನೊಳಗೆ ಎತ್ತಿಹಾಕಿಕೊಂಡು ಹೋಗಿ ಹಿಂಸಿಸುತ್ತಿದ್ದರು. ಇದು ಎಲ್ಲಿಯ ತನಕ ಮುಟ್ಟಿತ್ತೆಂದರೆ ಚಲಿಸುವ ವಾಹನದಿಂದಲೇ 'ಷಣ್ಮುಗಂ' ಎಂಬಾತನ ಮೇಲೆ ಗುಂಡು ಹಾರಿಸಿ ಕೊಂದು ಹಾಕಿದರು. ಪ್ರತ್ಯೇಕ ರಾಜ್ಯದ ಬೇಡಿಕೆಯಿಂದ ರಾಜ್ಯ ಸರಕಾರವನ್ನು ಬ್ಲ್ಯಾಕ್‌ಮೇಲ್ ಮಾಡಿ ಕೊಡಗಿಗೆ ಹಣದ ಹೊಳೆ ಹರಿಸಬಹುದೆಂಬ ರಾಜಕಾರಣಿಗಳ ತಪ್ಪು ಗ್ರಹಿಕೆಯಿಂದಾಗಿ, ಕೊಡಗಿನಲ್ಲಿ ಕರಾಳ ದಿನಗಳು ವಿಜೃಂಭಿಸುತ್ತಿದ್ದವು. ಇವರಿಗಿದ್ದ ರಾಜಕೀಯ ಬೆಂಬಲದಿಂದ ಜನ ಸಾಮಾನ್ಯರು ಭಯಗ್ರಸ್ಥರಾಗಿದ್ದರು.



ಇಂತಹ ಸಂದರ್ಭದಲ್ಲಿ ಸರ್ಕಾರವು "ಕೊಡವ ಭಾಷಾ ಸಾಹಿತ್ಯ ಅಕಾಡೆಮಿ"ಯನ್ನು ಘೋಷಿಸಿತು. ಅದರಲ್ಲಿ ಕೊಡವ ಭಾಷೆ ಮಾತಾಡುವ ಇತರ ೧೮ ಜಾತಿಗಳನ್ನು ಕಡೆಗಣಿಸಲಾಗಿತ್ತು. ಇದು ಇತರ ಪ್ರಬಲ ಕೊಡವ ಜಾತಿಗಳಾದ ಹೆಗ್ಗಡೆ, ಐರಿ ಮತ್ತು ಅಮ್ಮ ಕೊಡವ ಅಧ್ಯಕ್ಷರು ಒಂದಾಗಿ ಹೇಳಿಕೆ ಕೊಡುವ ಸನ್ನಿವೇಶವನ್ನು ನಿರ್ಮಿಸಿತು. ಕೊಡಗು ಮೂಲ ನಿವಾಸಿಗಳ ಸಂಘ ಸ್ಥಾಪಿಸಿಕೊಂಡು, ಕೊಡಗು ಪ್ರತ್ಯೇಕ ರಾಜ್ಯವಾಗಬಾರದೆಂಬ ಹೇಳಿಕೆ ಅವರಿಂದ ಬಂದಿತು. ಆದರೆ ಅದಕ್ಕೆ ಯಾವುದೇ ಪ್ರತಿಕ್ರಿಯೆ ನೀಡದೆ ಕೆ.ಆರ್.ಎಂ.ಎಂ. ಅದನ್ನು ನಿರ್ಲಕ್ಷಿಸಿತು.

ಆಗ ಈ ಲೇಖಕರ ಸಂಚಾಲಕತ್ವದ "ಕೊಡಗು ಕನ್ನಡಿಗರು" ಎಂಬ ಸಂಘಟನೆಯ ಮೂಲಕ ನೀಡಿದ ಪತ್ರಿಕಾ ಹೇಳಿಕೆ ಹೀಗಿದೆ:

"೧೯೫೨ರಲ್ಲಿ ಪ್ರತ್ಯೇಕತೆಗಾಗಿಯೇ ಹುಟ್ಟಿಕೊಂಡಿದ್ದ ಪಕ್ಷವನ್ನು ಹೀನಾಯವಾಗಿ ಸೋಲಿಸುವ ಮೂಲಕ ಕೊಡಗಿನ ಜನತೆಯು ಪ್ರತ್ಯೇಕ ಕೊಡಗು ರಾಜ್ಯ ಬೇಡ ಎಂಬುದಾಗಿ ಆಗಲೇ ತೀರ್ಪು ನೀಡಿದೆ. ಬ್ರಿಟಿಷರನ್ನು ಬೆಂಬಲಿಸುವ ಜನ, ಶೋಷಣೆಯಲ್ಲಿ ಅವರಿಗೆ ಸಹಾಯಕರಾಗಿದ್ದ ಜನ, ಅವರು ಹೋದಾಗ ದುಃಖಿಸಿದ ಜನ, ಕೊಡಗಿನಲ್ಲಿ ಒಂದಷ್ಟು ಮಂದಿ ಈಗಲೂ ಇದ್ದಾರೆ. ಇಂತಹ ಜನರು 'ಪ್ರತ್ಯೇಕ ರಾಜ್ಯ'ವು ಬ್ರಿಟಿಷರು ದೇಶಬಿಟ್ಟು ಹೋಗುವಾಗ ಕೊಟ್ಟ 'ನೆನಪಿನ ಕಾಣಿಕೆ' ಎಂಬ ಅಭಿಪ್ರಾಯದಲ್ಲಿದ್ದಾರೆ.

"ಹಿಂದೆ ಮುಖ್ಯಮಂತ್ರಿಗಳಾಗಿದ್ದ ಸಿ.ಎಂ. ಪೂಣಚ್ಚ ಹಾಗೂ ಗೃಹಸಚಿವ ಕೆ. ಮಲ್ಲಪ್ಪ ಇವರು ಮುಂಚೂಣಿಯಲ್ಲಿದ್ದರು. ಆಗಿನ ಲೋಕಸಭಾ ಸದಸ್ಯ ನಿಡ್ಯಮಲೆ ಸೋಮಣ್ಣ ಸ್ಪೀಕರ್ ಬಿ.ಎಸ್.ಕುಶಾಲಪ್ಪ, ಕೆ.ಎಂ.ದೇವಯ್ಯ, ಎಸ್.ಎಸ್.ರಾಮಮೂರ್ತಿ ಮೊದಲಾದ ಗಣ್ಯರು ಇವರನ್ನು ಬೆಂಬಲಿಸಿದ್ದರು. ಕೊಡಗು ಕರ್ನಾಟಕದೊಡನೆ ವಿಲೀನವಾಗಿ ಜಿಲ್ಲೆಯಾಯಿತು. ಜನ ಸಾಮಾನ್ಯರಿಗೆ ನೆಮ್ಮದಿಯ ಜೀವನ ಲಭ್ಯವಾಯಿತು. ಆಗ ವಿಲೀನಕ್ಕೆ ಹೋರಾಡಿದವರ ಬೆಂಬಲಿಗರೆಲ್ಲ ಈಗ ಏಕೆ ಮೌನವಾಗಿದ್ದಾರೆ? ಕೊಡಗು ರಾಜ್ಯವಾಗಿದ್ದಾಗ, ಹಿಂಸಾಚಾರಕ್ಕೆ ಬಲಿಯಾದವರು, ಅವರ ಬಂಧು ಬಳಗದವರು ಏಕೆ ಸುಮ್ಮನಿದ್ದಾರೆ? ಅವರು ಅಂದು ಅನುಭವಿಸಿದ ಅವಮಾನ, ಪಕ್ಷಪಾತ, ನೋವು ಸಂಕಷ್ಟಗಳನ್ನು ಇಂದಿನ ಯುವಜನಾಂಗಕ್ಕೆ ಮನದಟ್ಟಾಗುವಂತೆ ತಿಳಿಸಬೇಕಾಗಿದೆ.

"ಗಾಳಿಬೀಡಿನಲ್ಲಿ ಟೀ ಬೆಳೆಸಬಾರದು, ಶುಂಠಿ ಬೆಳೆ ನಿಷೇಧಿಸಬೇಕು ಎಂಬುದಾಗಿ ವಿರೋಧಿಸುವುದೇಕೆ? ಇತರರು ಸ್ಥಿತಿವಂತರಾಗಬಾರದೆಂಬ ದುರ್ಬುದ್ಧಿಯೇ? ಇಂತಹ ಹೇಳಿಕೆಗಳನ್ನು ನೀಡಿ ಕೆಆರ್ಎಂಎಂ ನಂತಹ ಚಿಕ್ಕಗುಂಪು ಪ್ರಚಾರಗಳಿಸಿ ದೊಡ್ಡದೆನಿಸಿ ಕೊಂಡಿದೆ. ಆದರೂ ಈ ಜನರ ವಿರೋಧ ಏಕೆ ಕಟ್ಟಿಕೊಳ್ಳಬೇಕು ಎಂಬ ಉದ್ದೇಶದಿಂದ ಕೊಡಗು ಪ್ರತ್ಯೇಕತೆಯನ್ನು ವಿರೋಧಿಸುವ ಮಂದಿ ಮುಂದೆ ಬರುತ್ತಿಲ್ಲ. ಒಂದು ರೀತಿಯ ಭಯದಿಂದ ಈ ಮೌನವಿದ್ದರೂ ಇರಬಹುದು! ಈ ಮೌನವನ್ನು ಸಮ್ಮತಿ ಎಂದೇ ಈ ಜನರು ಭಾವಿಸಿರುವಂತಿದೆ. ಈ ಪ್ರವೃತ್ತಿಗೆ ರಾಜಕಾರಣಿಗಳಲ್ಲಿ ಕೆಲವರ ಕುಮ್ಮಕ್ಕು ಇದ್ದರೂ ಇರಬಹುದು".

('ಆಂದೋಲನ' ಪ್ರಜಾವಾಣಿ ೨೨-೧೧-೯೫)

ಇದಕ್ಕೆ ಮರುದಿನವೇ ಪ್ರತಿಕ್ರಿಯಿಸಿದ ನಾಚಪ್ಪ, "ಕಳೆದ ನಾಲ್ಕು ವರ್ಷಗಳಲ್ಲಿ ಇಂತಹ ಅನೇಕ ಲೆಟರ್‌ಹೆಡ್ ಸಂಸ್ಥೆಗಳು ಹುಟ್ಟಿ, ಸತ್ತಿವೆ. ಜನ ಸಮುದಾಯವನ್ನು ನಮ್ಮ ಎದುರಿಗೆ ಪರಿವರ್ತಿಸಲು ದೇವಿಪ್ರಸಾದ್ ಏನು ದೇವಮಾನವನೇ?

"ಈತ ಒಬ್ಬ ಗೌಡ. ಜಾತಿವಾದಿ ವ್ಯಾಧಿಗ್ರಸ್ತ ಮನಸ್ಥಿತಿಯ ಕ್ರಿಮಿನಲ್, ಕೊಡವ ವಿರೋದಿ, ಕೆ.ಆರ್.ಎಂ.ಎಂ. ಕೊಡವರ ಸ್ವತ್ತೂ ಅಲ್ಲ, ಗೌಡರದ್ದೂ ಅಲ್ಲ. ಇದು ಭಪಿಷ್ಠದ ಧರ್ಮವಾಗಿ ಹುಟ್ಟಿಕೊಂಡಿದೆ" ಇತ್ಯಾದಿಯಾಗಿ ನನ್ನನ್ನು ತೆಗಳುವ ಪ್ರಯತ್ನ ನಡೆಯಿತು. ಹೀಗೆ ಪ್ರತ್ಯೇಕ ಕೊಡಗು ವಿರೋಧಿಸುವ ನಾವೆಲ್ಲ ಒಂದಾಗುವ ಸಂದರ್ಭ ಬಂದಿತು. ೧೯೯೭ರ ನವೆಂಬರ್ ೨೦ರಂದು ಈ ಲೇಖಕರ ಸಂಚಾಲಕತ್ವದಲ್ಲಿ ಪ್ರಾರಂಭವಾದ "ಕೊಡಗು ಪ್ರಜಾವೇದಿಕೆ" ಬೆಂಗಳೂರಿನ ಪ್ರೆಸ್ ಕ್ಲಬ್‌ನಲ್ಲಿ ಪತ್ರಿಕಾ ಗೋಷ್ಠಿ ನಡೆಸಿತು. ಅದರಲ್ಲಿ ಬಿಡುಗಡೆಗೊಳಿಸಿದ್ದ ವಿವರ ಈ ಕೆಳಗಿನಂತಿದೆ:

'ಕೊಡಗು ಪ್ರಜಾವೇದಿಕೆ', ಮಡಿಕೇರಿ

"ಕೊಡಗಿನ ಬಹುಸಂಖ್ಯಾತರ ಹಿತಾಸಕ್ತಿಗೆ ವ್ಯತಿರಿಕ್ತವಾದ ಪರ್ಯಾಯ ಆಡಳಿತ ಯಂತ್ರವೊಂದು ಈ ದಿನಗಳಲ್ಲಿ ಕೊಡಗಿನಾದ್ಯಂತ ಕಾರ್ಯ ನಿರ್ವಹಿಸತೊಡಗಿದೆ. ಮೇಲ್ನೋಟಕ್ಕೆ ಪ್ರತ್ಯೇಕ ರಾಜ್ಯವನ್ನು ಸ್ಥಾಪಿಸುವ ಉದ್ದೇಶದಿಂದ ಕೈಜೋಡಿಸಿರುವಂತೆ ಕಾಣಿಸುವ ಕೆಲವು ಹತಾಶ ನಿರುದ್ಯೋಗಿಗಳು ಹುಟ್ಟು ಹಾಕಿರುವ, ನ್ಯಾಯ ಸಮ್ಮತವಲ್ಲದ ಸಂಘಟನೆಗಳು, ಇಂದು ಇದೇ ಜಿಲ್ಲೆಯ ನಾಗರಿಕರನ್ನು ಸುಲಿಗೆ ಮಾಡುವ ಕೆಲಸವನ್ನು ತಮ್ಮ ಹಕ್ಕು ಎಂಬಂತೆ ಚಲಾಯಿಸುತ್ತಿವೆ. ಜಿಲ್ಲೆಯ ಬೆಳೆಗಾರರು, ಆಟೋಚಾಲಕರು ವಾಹನ ಮಾಲೀಕರು ಇತ್ಯಾದಿ ಅಸಂಖ್ಯ ಜನರನ್ನು ಬಲಾತ್ಕಾರ ಹಾಗೂ ಬ್ಲಾಕ್‌ಮೈಲ್ ತಂತ್ರಗಳ ಮೂಲಕ ಬಲಿಪಶುಗಳನ್ನಾಗಿಸಿ, ತಮ್ಮ ಸುಲಿಗೆಗೆ ಸುಗಮದಾರಿ ಮಾಡಿಕೊಂಡಿವೆ. ಈ ತಂತ್ರಗಳ ಮುಖಾಂತರ, ಹಲವಾರು ಬೈಕ್‌ಗಳು ಮತ್ತು ಜೀಪುಗಳು ಸೇರಿದಂತೆ ಅಂದಾಜು ಎರಡು ಕೋಟಿ ರೂಪಾಯಿಗಳನ್ನು ಸಮಾವೇಶಗಳ ಹೆಸರಿನಲ್ಲಿ ಜಮಾಯಿಸ ಲಾಗಿದೆ. ಸರ್ಕಾರಿ ಬಸ್ಸು ಮತ್ತು ಕಛೇರಿಗಳ ಗೋಡೆಗೆ ಬಣ್ಣದಲ್ಲಿ ಬರೆದಿರುವ ಘೋಷಣೆಗೆ ಖರ್ಚಾಗಿರುವ ಹಣ ಬಿಟ್ಟರೆ, ಉಳಿದೆಲ್ಲವೂ ಈ ತಂಡಗಳ ನೇತಾರರ ಮನೆ ಸೇರಿರುವುದು ಈಗ ಒಂದು ಇತಿಹಾಸ.

"ಕೊಲೆ ಮೊಕದ್ದಮೆ ಹಾಗೂ ಕ್ರಿಮಿನಲ್ ಚಟುವಟಿಕೆಗಳಿಗಾಗಿ ನ್ಯಾಯಾಂಗ ವಿಚಾರಣೆಗಳನ್ನು ಎದುರಿಸುತ್ತಿರುವ ಕೆ.ಆರ್.ಎಂ.ಎಂ. ಎಂಬ ಇಂತಹದೊಂದು ಸಂಸ್ಥೆಯ ಸಂಚಾಲಕರೆನಿಸಿಕೊಂಡ ವ್ಯಕ್ತಿಯ ವಿಷಯದಲ್ಲಿ ಕರ್ನಾಟಕದ ಇಂದಿನ ಸರಕಾರ ತೋರುವ ಮೆದು ಧೋರಣೆ ಆತಂಕಕಾರಿ ಹಾಗೂ ಅಚ್ಚರಿಗೆ ಕಾರಣವಾಗುವ ವಿಷಯವಾಗಿದೆ. ಸರಕಾರಿ ಅಧಿಕಾರಿಗಳು ಈ ವ್ಯಕ್ತಿಗೆ ಸಹಕರಿಸುತ್ತಿರುವುದು, ಈತ ಆಡಳಿತಶಾಹಿಯೊಳಕ್ಕೆ ಹೇಗೆ ಸಮರ್ಥವಾಗಿ ನುಗ್ಗಬಲ್ಲನೆಂಬುದಕ್ಕೆ ನಿದರ್ಶನ. ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ನೂರಾರು ಬಸ್‌ಗಳಲ್ಲಿ ಎನಾಮೆಲ್ ಪೈಂಟ್ ಬಳಸಿ ಈಗ ಬರೆಸಿದ ಉದ್ಧಟತನದ ರಾಜ್ಯ ವಿರೋಧಿ ಮತ್ತು ಅಖಂಡತಾ, ಐಕ್ಯತಾ ವಿರೋಧಿ ಘೋಷಣೆ ಗಳನ್ನು ಈ ಅಧಿಕಾರಿಗಳು, ರಾಜಕಾರಣಿಗಳು ಕಣ್ಣು ಮುಚ್ಚಿ ಸಹಿಸಿಕೊಂಡಿದ್ದಾರೆ ಅಥವಾ

ಪ್ರೋತ್ಸಾಹಿಸಿದ್ದಾರೆ. ಅಲ್ಲದೆ ಪತ್ರ ಚಳವಳಿಯ ಹೆಸರಿನಲ್ಲಿ ಅಂಚೆ ಇಲಾಖೆಗೆ ಲಕ್ಷಾಂತರ ರೂಪಾಯಿ ವಂಚಿಸಿರುವುದನ್ನು ಸರ್ಕಾರಕ್ಕೆ ಸಂಬಂಧಿಸಿದ ಯಾರೂ ಗಮನಿಸಿದಂತಿಲ್ಲ. ಕೊಡಗನ್ನು ಪ್ರತ್ಯೇಕ ರಾಜ್ಯವನ್ನಾಗಿಸಬೇಕೆನ್ನುವ ಕೆ.ಆರ್.ಎಂ.ಎಂ. ಎಂಬ ಸಂಘಟನೆ ಏಕವ್ಯಕ್ತಿ ಕೇಂದ್ರಿತವಾಗಿದ್ದು ಅಸಾಂವಿಧಾನಿಕವಾಗಿ ರಚನೆಗೊಂಡಿದೆ. ಇದು ಕರ್ನಾಟಕ ರಾಜ್ಯ ವಿರೋಧಿ ಘೋಷಣೆಗಳನ್ನು ಕೂಗುತ್ತಾ ದೇಶದ್ರೋಹಿ ಹಾಗೂ ಸಮಾಜದ್ರೋಹಿ ಚಟುವಟಿಕೆಗಳಲ್ಲಿ ತೊಡಗಿದೆ. ಇಲ್ಲಿಯ ತನಕ ಈ ಸಂಸ್ಥೆ ಯಾವುದೇ ಲೆಕ್ಕಪತ್ರಗಳನ್ನು ತೋರಿಸದೆ, ಆದಾಯ ತೆರಿಗೆ ಸಲ್ಲಿಸದೆ, ಇಡೀ ನಾಡಿಗೆ ಮೋಸ ಮಾಡುತ್ತಿದೆ. ತನ್ನ ಅವಿಭಾಜ್ಯ ಅಂಗವಾದ ಕೊಡಗನ್ನು ಈ ಶೋಷಕರ ಕೈಯಿಂದ ಮುಕ್ತಿಗೊಳಿಸಲು, ಎಲ್ಲಾ ಅಕ್ರಮ ಹಾಗೂ ಹಗರಣಗಳ ಬಗ್ಗೆ ಕರ್ನಾಟಕ ಸರಕಾರ ನ್ಯಾಯಾಂಗ ತನಿಖೆ ನಡೆಸಬೇಕೆಂದು ಆಗ್ರಹಪಡಿಸುತ್ತಿದ್ದೇವೆ. ಮುಂಬರುವ ದಿನಗಳಲ್ಲಿ ಸರ್ಕಾರವು ಈ ದೇಶದ್ರೋಹಿ ಶಕ್ತಿಗಳನ್ನು ನಿಗ್ರಹಿಸಲು ವಿಫಲವಾದಲ್ಲಿ ಬಹುಸಂಖ್ಯಾತ ಕೊಡಗಿನ ಜನರ ಬೆಂಬಲದಿಂದ ಪ್ರತ್ಯೇಕತಾ ಪರ ಸಂಘಟನೆಗಳ ವಿರುದ್ಧ ಜನಾಂದೋಲನವನ್ನು ರೂಪಿಸಲಿದ್ದೇವೆ. ಈ ದಿಸೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಅಭಿವೃದ್ಧಿ ಪ್ರಾಧಿಕಾರ ವಿವಿಧ ಕನ್ನಡ ಮತ್ತು ಸಾಂಸ್ಕೃತಿಕ ಸಂಘಟನೆಗಳು, ರಾಜಕೀಯ ಪಕ್ಷಗಳು, ನಾಡಿನ ಬುದ್ಧಿಜೀವಿಗಳು, ಪ್ರಗತಿಪರ ಚಿಂತಕರು, ಪತ್ರಕರ್ತರು ಮತ್ತು ಸಮಸ್ತ ಕನ್ನಡಿಗರ ಸಹಕಾರ ಹಾಗೂ ಬೆಂಬಲವನ್ನು ಈ ಮೂಲಕ ಅತ್ಯಂತ ಪ್ರೀತಿಯಿಂದ ನಿರೀಕ್ಷಿಸುತ್ತೇವೆ."

ಮಾಧ್ಯಮದ ಪ್ರತಿನಿಧಿಗಳು ನಮ್ಮ ಪ್ರಜಾವೇದಿಕೆಯ ಸಾಮರ್ಥ್ಯ ಕಡೆಗಣಿಸಿದಾಗ ನಮ್ಮ ಪರ ಬಹುಸಂಖ್ಯಾತರ ಬೆಂಬಲ ಇದೆ ಎಂಬುದು ಮುಂದಿನ ದಿನಗಳಲ್ಲಿ ಎಲ್ಲರಿಗೂ ಗೊತ್ತಾಗಲಿದೆ ಎಂಬುದಾಗಿ ವಾದಿಸಿದೆವು. ಮಡಿಕೇರಿಯಲ್ಲಿ ಮರುದಿನ ಪೂರ್ವ ಯೋಜನೆಯಂತೆ ನಡೆದ ಕೆ.ಆರ್.ಎಂ.ಎಂ. ಸಮಾವೇಶದಲ್ಲಿ ಹತ್ತು ಸಾವಿರ ಜನ ಸೇರಿದ್ದು, ಅವರೆದುರು ನಮ್ಮನ್ನು, 'ಹತ್ತು ಜನರನ್ನು ಕೂಡ ಸೇರಿಸಲಾರದ ಪುಂಡರು ಕೊಡಗಿನಲ್ಲಿ ನಡೆಸಲು ಹೆದರಿ, ಬೆಂಗಳೂರಲ್ಲಿ ಪತ್ರಿಕಾಗೋಷ್ಠಿ ನಡೆಸಿದ್ದಾರೆ. ಇವರಿಗೆ ಮರಗಳ್ಳರು ಮತ್ತು ಭೂಗತ ಪಾತಕಿಗಳ ನೆರವು ಇದೆ' ಇತ್ಯಾದಿ ಹೀಗಳೆಯಲಾಯಿತು. ಮುಂದೊಂದು ದಿನ ಕೇಂದ್ರಮಂತ್ರಿ ವಿ.ಕೆ. ರಾಮಸ್ವಾಮಿ ಹಾಗೂ ಪ್ರಧಾನ ಮಂತ್ರಿಗಳಿಗೆ ೦೬-೦೭-೧೯೯೮ರಂದು ಪ್ರತ್ಯೇಕ ರಾಜ್ಯದ ವಿರುದ್ಧ ಪತ್ರ ಬರೆಯುವ ಮೂಲಕ ಬೆಂಗಳೂರಿನ "ಕನ್ನಡ ಶಕ್ತಿ ಕೇಂದ್ರ"ವು ನಮ್ಮ ನೆರವಿಗೆ ಧಾವಿಸಿತು. ಆಮೇಲೆ ನಮ್ಮ ಬೆಳವಣಿಗೆ ಪ್ರಬಲವಾಯಿತು.

ಸೋಮವಾರಪೇಟೆಯಲ್ಲಿ, ನಂತರ ಮಡಿಕೇರಿಯಲ್ಲಿ, ಹೀಗೆ ಎರಡು ಸಲ ನಾವೂ ಕೂಡಾ ಹತ್ತು ಸಾವಿರಕ್ಕೂ ಮೇಲ್ಪಟ್ಟ ಜನಸ್ತೋಮದ ಸಮಾವೇಶ ನಡೆಸಿದೆವು. ಅಲ್ಲಿ ಆಗಿನ ಸಚಿವರೊಬ್ಬರು ಕೆ.ಆರ್.ಎಂ.ಎಂ.ಅನ್ನು ಗೌಪ್ಯವಾಗಿ ಬೆಂಬಲಿಸುತ್ತಿರುವ ವಿಷಯವನ್ನು ಬಹಿರಂಗಪಡಿಸಲಾಯಿತು.

ನಂತರ ಕೆ.ಆರ್.ಎಂ.ಎಂ. ಮತ್ತೊಮ್ಮೆ ಸಿ.ಎನ್.ಸಿ. ಎಂಬುದಾಗಿ ಹೆಸರು ಬದಲಾಯಿಸಿಕೊಂಡಿತು. ಮುಂದೆ ತನ್ನ ಬಲಪ್ರದರ್ಶನಕ್ಕಾಗಿ 'ದೆಹಲಿಚಲೋ'

ಕೈಗೆತ್ತಿಕೊಂಡು ಕೊಡಗಿನ ಜನತೆಯಿಂದ ಕೋಟ್ಯಾಂತರ ರೂಪಾಯಿ ಸಂಗ್ರಹಿಸಿ ದೆಹಲಿಯ ಬೀದಿ, ಬೀದಿಗಳಲ್ಲಿ ಪ್ರದರ್ಶನ ನಡೆಸಿ, ಕೊಡಗಿನ ಸಮುವಸ್ತ್ರಕ್ಕೆ ಅವಮಾನ ಉಂಟುಮಾಡಿದ ನಂತರ, ವೆಂಕಟಾಚಲಯ್ಯ ಆಯೋಗಕ್ಕೆ ಅವರ ಮನವಿ ಒಪ್ಪಿಸಿದರು. ಕೆಲವು ದಿನಗಳ ನಂತರ ಈ ಲೇಖಕರು ದೆಹಲಿಗೆ ಹೋಗಿ, ಸ್ನೇಹಿತರೊಬ್ಬರ ಸಹಕಾರದಿಂದ ಜಸ್ಟಿಸ್ ಎಂ.ಎನ್. ವೆಂಕಟಾಲಯ್ಯನವರಿಗೆ ಪ್ರಜಾವೇದಿಕೆಯ ಪರವಾಗಿ ಮನವಿ ಸಲ್ಲಿಸಿದರು. ಅದರಲ್ಲಿರುವ ಮುಖ್ಯಾಂಶ ಈ ಕೆಳಗಿನಂತಿದೆ:

ಜಸ್ಟಿಸ್ ಎಂ.ಎನ್. ವೆಂಕಟಾಚಲಯ್ಯ
ಅಧ್ಯಕ್ಷರು,
ನ್ಯಾಶನಲ್ ಕಮಿಷನ್ ಟು ರಿವ್ಯೂ ವರ್ಕಿಂಗ್ ಆಫ್ ಕಾನ್ಸ್‌ಟಿಟ್ಯೂಷನ್

ಸನ್ಮಾನ್ಯರೆ,

ಸತ್ಯಾಂಶಕ್ಕೆ ವ್ಯತಿರಿಕ್ತವಾದಂತಹ ಕೊಡಗಿನ ಬಗೆಗಿನ ಅಭಿಪ್ರಾಯವನ್ನು ಹುಟ್ಟು ಹಾಕಲು ಬೆರಳೆಣಿಕೆಯ ಜನ ಪ್ರಯತ್ನಿಸುತ್ತಿದ್ದಾರೆ. ಕೊಡಗಿನ ಪ್ರಜಾವೇದಿಕೆ ಈ ಕೆಳಗಿನ ಸ್ಪಷ್ಟನೆಯನ್ನು ನೀಡಲು ಇಚ್ಛಿಸುತ್ತದೆ:

ಪ್ರತ್ಯೇಕತಾವಾದಿಗಳು ಕೊಡಗು ಬಂದ್ ಆಚರಣೆಗೆ ಕರೆ ನೀಡಿದಾಗ ಅದು ಸೋಮವಾರಪೇಟೆ ತಾಲ್ಲೂಕಿನಲ್ಲಿ ಸಂಪೂರ್ಣವಾಗಿ ವಿಫಲವಾಯಿತು. ಮಡಿಕೇರಿ ತಾಲ್ಲೂಕಿನಲ್ಲಿ ಮಿಶ್ರ ಪ್ರತಿಕ್ರಿಯೆ ಇದ್ದರೂ ಕೂಡ, ಮಡಿಕೇರಿ ತಾಲ್ಲೂಕು ಸಮಿತಿಯ ಸದಸ್ಯರು ಸರ್ವಾನುಮತದಿಂದ ಕೊಡಗು ಕರ್ನಾಟಕದೊಂದಿಗೆ ಮುಂದುವರೆಯಬೇಕು. ಇದು ಪ್ರತ್ಯೇಕ ರಾಜ್ಯವಾಗಬಾರದು ಎಂಬ ತೀರ್ಮಾನವನ್ನು ತೆಗೆದುಕೊಂಡರು. ಎಲ್ಲಾ ಪ್ರಜಾಪ್ರತಿನಿಧಿಗಳೂ ಇದಕ್ಕೆ ತಮ್ಮ ಸಹಮತವನ್ನು ಜಾಹೀರುಪಡಿಸಿದರು.

ಪ್ರತ್ಯೇಕತಾವಾದಿಗಳ ಪ್ರಾಬಲ್ಯ ಹೆಚ್ಚಾಗಿದೆ ಎನ್ನಲಾದ ವಿರಾಜಪೇಟೆ ತಾಲ್ಲೂಕಿನ ಪರಿಸ್ಥಿತಿಯೇ ವಿಭಿನ್ನ. ಬಂದ್ ಆಚರಣೆ ಅಲ್ಲಿ ಯಶಸ್ವಿಯೆನ್ನಲಾಗಿದ್ದರೂ, ಅದು ಹಣದಿಂದ ಪ್ರಭಾವಗೊಂಡಿತ್ತು ಹಾಗೂ ಜನರ ಮನಃಪೂರ್ವಕ ಭಾಗವಹಿಸುವಿಕೆ ಆಗಿರಲಿಲ್ಲ. ಈ ತಾಲ್ಲೂಕಿನ ಜಾತಿವಾರು ತಖ್ತೆಯನ್ನು ಪರಿಶೀಲಿಸಿದಾಗ ಇದು ಅರ್ಥ ವಾಗುತ್ತದೆ. ೨೭,೧೦೧ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, ೩೨,೦೭೯ ಒಕ್ಕಲಿಗ ಲಿಂಗಾಯಿತ, ಕ್ರೈಸ್ತರು ಮತ್ತು ಮುಸ್ಲಿಮರು. ೨೪,೧೭೮ ಮಲಯಾಳಿ ಮತ್ತು ತಮಿಳರು. ಮೇಲ್ಕಾಣಿಸಿದ ಈ ಎಲ್ಲಾ ಪಂಗಡದವರೂ ಪ್ರತ್ಯೇಕ ರಾಜ್ಯವನ್ನು ವಿರೋಧಿಸಿದವ ರಾಗಿದ್ದರು. ೩೩,೯೧೦ ಜನ ಕೊಡವ ಭಾಷೆ ಮಾತನ್ನಾಡುವ ಎಲ್ಲರೂ ಪ್ರತ್ಯೇಕ ರಾಜ್ಯವನ್ನು ಕೇಳುವವರಲ್ಲ.

ಇವರ ಪೈಕಿ ಮೂರನೇ ಒಂದಂಶದಷ್ಟಿರುವ ಹೆಗ್ಗಡೆ ಐರಿ ಮತ್ತು ಅಮ್ಮ ಕೊಡವ ಜನಾಂಗದವರು ಪ್ರಜಾವೇದಿಕೆಯೊಂದಿಗೆ ಗುರುತಿಸಿ ಕೊಂಡಿದ್ದಾರೆ. ೭,೩೨೫ ಜನ ಬ್ರಾಹ್ಮಣರು, ಬಂಟರು, ಬಿಲ್ಲವ ಇತ್ಯಾದಿ ಜನಾಂಗದವರು ಕೂಡಾ ಪ್ರತ್ಯೇಕ ರಾಜ್ಯವನ್ನು

ಕೇಳುತ್ತಿಲ್ಲ. ಉಳಿದಕೊಡವರಲ್ಲಿಯೂ ಸಿ.ಎಂ.ಪೂಣಚ್ಚನವರ ಅಭಿಮಾನಿಗಳು, ಬಂಧು ಬಳಗದವರು ಪ್ರತ್ಯೇಕತಾವಾದಿಗಳೊಂದಿಗೆ ಗುರುತಿಸಿಕೊಂಡಿಲ್ಲ.

೧೮೩೪ರಲ್ಲಿ ಬ್ರಿಟಿಷ್ ಆಡಳಿತದ ಅನುಕೂಲತೆಗಾಗಿ ತಯಾರಿಸಲ್ಪಟ್ಟ ಇಂದಿನ ಕೊಡಗು, ಇವತ್ತಿಗೂ ಒಂದು ಸಾಂಸ್ಕೃತಿಕ ಘಟಕವಾಗಿ ರೂಪುಗೊಂಡಿಲ್ಲ. ಬ್ರಿಟಿಷರ ಬೆಂಬಲಕ್ಕಾಗಿ ದೊಡ್ಡ ವೀರರಾಜನೊಂದಿಗೆ ಒಂದು ಗುಂಪು ಸ್ಥಾಪಿತವಾಯಿತು. ೧೭೯೨ರ ಮೈಸೂರು ಒಪ್ಪಂದದಲ್ಲಿ ಸಿಕ್ಕಿದ ದಟ್ಟ ಅರಣ್ಯದಲ್ಲಿ ವಿರಾಜಪೇಟೆಯನ್ನು ತಕ್ಷಣವೇ ನಿರ್ಮಿಸಲಾಯಿತು. ೧೭೯೫ರಲ್ಲಿ ನಾಲ್ಕುನಾಡು ಅರಮನೆಯನ್ನು ಕಟ್ಟಿಸ ಲಾಯಿತು. ಅತ್ಯಂತ ಪ್ರಮುಖವಾದ ವಿಚಾರವೆಂದರೆ ಅದಕ್ಕಿಂತ ಹಿಂದಿನ ಯಾವುದೇ ಅರಮನೆಗಳಾಗಲೀ, ಕೋಟೆ ಕೊತ್ತಲಗಳ ಕುರುಹುಗಳಾಗಲೀ. ಕೊಡಗಿನ ಅರಸರ ಬಗ್ಗೆ ಎಲ್ಲಿಯೂ ಕಾಣಿಸಿಕೊಳ್ಳುವುದಿಲ್ಲ. ಅಮರಸುಳ್ಯ ಮತ್ತು ಏಳುಸಾವಿರ ಸೀಮೆಗಳು ಟಿಪ್ಪುಸುಲ್ತಾನನ ಆಳ್ವಿಕೆಯಲ್ಲಿ ಇದ್ದು, ಅವನ್ನು ಆತನ ಮರಣದ ನಂತರ ಕೊಡಗಿಗೆ ಸೇರಿಸಿಕೊಳ್ಳಲಾಯಿತು. ಇಲ್ಲಿಯವರೆಗೆ ಕೊಡಗಿನೊಂದಿಗೆ ಯಾವುದೇ ರೀತಿಯ ಭಾವನಾತ್ಮಕ ಸಂಬಂಧ ಬೆಳೆಯದೆ ಇರುವುದು "ಬಂದ್ ಕರೆಗೆ" ಅವರು ನೀಡಿದ ನಿರುತ್ಸಾಹ ಪ್ರಕ್ರಿಯೆಯಿಂದ ಅರ್ಥವಾಗುತ್ತದೆ.

ಕೊಡಗಿನ ಶನಿವಾರಸಂತೆಯ ಗಡಿಪ್ರದೇಶದಲ್ಲಿನ ಜನರು ಹಾಸನ ಜಿಲ್ಲೆಗೆ ಸೇರಲು ಆಸಕ್ತರಾಗಿದ್ದಾರೆ. ಅದೇ ರೀತಿ ಸಂಪಾಜೆ, ಪೇರಾಜೆ ಗಡಿಪ್ರದೇಶದವರು ದಕ್ಷಿಣಕನ್ನಡ ಜಿಲ್ಲೆಯೊಂದಿಗೆ ಸೇರ್ಪಡೆಗೆ ಇಚ್ಛಿಸುತ್ತಾರೆ. ವಿವಿಧ ಸಾಂಸ್ಕೃತಿಕ ಹಿನ್ನಲೆಯು ಕೊಡಗು ಜಿಲ್ಲೆಯ ವೈಶಿಷ್ಟ್ಯವಾಗಿದೆ. ಬಯಲು ಸೀಮೆಯ ಮತ್ತು ಕರಾವಳಿಯ ಸಂಸ್ಕೃತಿಯು ಕಳೆದುಹೋಗುವ ಸಾಧ್ಯತೆಯಿದೆ. ಆದ ಕಾರಣ ಪ್ರಜಾವೇದಿಕೆಯು ಜಿಲ್ಲೆಯಲ್ಲಿ ವಿವಿಧ ಸಂಸ್ಕೃತಿಯು ಉಳಿಯಬೇಕೆನ್ನುವ ಉದ್ದೇಶವನ್ನು ಹೊಂದಿದೆ.

ಕೊಡಗಿಗೆ ಸಿಗಬೇಕಾದಂತಹ ಪ್ರಾಮುಖ್ಯತೆ ಸಿಕ್ಕುತ್ತಿಲ್ಲ ಎನ್ನುವ ಕಾರಣಕ್ಕಾಗಿ ಸರ್ಕಾರಕ್ಕೆ ಕಂದಾಯ ಸಲ್ಲಿಸಬಾರದೆಂದು ಕರೆ ನೀಡಿದಾಗ ಇದು ಸಂಪೂರ್ಣವಾಗಿ ವಿಫಲವಾಯಿತು. ಇದನ್ನು ಬೆಂಬಲಿಸಿದ ಎಲ್ಲಾ ರಾಜಕಾರಣಿಗಳು ನಿರಂತರವಾಗಿ ಸೋಲನ್ನುಂಡರು. ಕೊಡಗಿನಿಂದ ಹೊರಗೆ ವಾಸಿಸುವ ಕೊಡವರಿಗೆ ಇದರ ದುಷ್ಪರಿಣಾಮದ ಅರಿವುಂಟಾಗತೊಡಗಿತು.

೧೯೯೯ರ ವಿಧಾನಸಭಾ ಚುನಾವಣೆಯಲ್ಲಿ ಪ್ರತ್ಯೇಕತಾವಾದಿಗಳಿಗೆ ತಮ್ಮ ಅಭ್ಯರ್ಥಿಯನ್ನು ಚುನಾವಣಾ ಕಣಕ್ಕೆ ಇಳಿಸಲು ಸಾಧ್ಯವಾಗಲಿಲ್ಲ. ಆಶ್ಚರ್ಯವೆಂದರೆ ಪತ್ರಿಕಾ ಮಾಧ್ಯಮದವರು ವಿಧಾನಸಭಾ ಕ್ಷೇತ್ರದ ಅಭ್ಯರ್ಥಿಗಳನ್ನು ಸಂದರ್ಶನದಲ್ಲಿ ಪ್ರಶ್ನಿಸಿದಾಗ, ಎಲ್ಲರೂ ಕೊಡಗು ಪ್ರತ್ಯೇಕ ರಾಜ್ಯವಾಗಬಾರದೆಂದೇ ಹೇಳಿದರು. ಪ್ರತ್ಯೇಕ ವಾಗಬೇಕೆಂಬ ಹೇಳಿಕೆಯನ್ನು ನೀಡಿದ ಒಬ್ಬ ಅಭ್ಯರ್ಥಿಯು ಠೇವಣಿಯನ್ನು ಕಳೆದುಕೊಂಡರು. ಈ ಪತ್ರದೊಂದಿಗೆ ಸಂಬಂಧಪಟ್ಟ ಎಲ್ಲಾ ಪತ್ರಿಕೆಗಳನ್ನು ಸಮರ್ಥನೆಗಾಗಿ ಜೋಡಿಸಲಾಗಿದೆ. ಪ್ರಜಾವೇದಿಕೆಯ ಪರವಾಗಿ ಹಾಗೂ ಸಮಸ್ತ ಕೊಡಗಿನ ಜನತೆಯ ಪರವಾಗಿ ಕೊಡಗನ್ನು ಕರ್ನಾಟಕ ರಾಜ್ಯದ ಒಂದು ಜಿಲ್ಲೆಯಾಗಿಯೇ, ಇಂದಿನಂತೆಯೇ

ಮುಂದುವರೆಸಬೇಕು. ತಮ್ಮದೇ ಆದ ವೈಯಕ್ತಿಕ ಅಭಿಪ್ರಾಯಗಳನ್ನು ಇಟ್ಟುಕೊಂಡಿರುವ ಪ್ರತ್ಯೇಕತಾವಾದಿಗಳ ಅಭಿಪ್ರಾಯವನ್ನು ಕಡೆಗಣಿಸಬೇಕು.

ತಾರೀಖು : ೨೮-೧೨-೨೦೦೦ **ಎನ್.ಎಸ್. ದೇವಿಪ್ರಸಾದ್**

ಗೌರವಾಧ್ಯಕ್ಷರು, ಕೊಡಗು ಪ್ರಜಾವೇದಿಕೆ

ಜೋಡಣೆಗಳು :

೧. ಕರ್ನಾಟಕದ ಅಖಂಡತೆಗೆ ಕೊಡಗಿನಲ್ಲಿ ಸಜ್ಜು (ಜಾಣಗೆರೆ ಪತ್ರಿಕೆ ೨-೧೨-೧೯೯೮)
೨. ಪ್ರಜಾವೇದಿಕೆ ಭಾರೀ ಸಮಾವೇಶ (ಆಂದೋಲನ ೨೪-೧೧-೯೮)
೩. ಕೊಡಗು ಕರ್ನಾಟಕದ ಅವಿಭಾಜ್ಯ ಅಂಗ (ಶಕ್ತಿ ೨೪-೧೧-೧೯೯೮)
೪. ಕೊಡಗಿನಲ್ಲಿ ಕೆ.ಆರ್.ಎಂ.ಎಂ. ಪ್ರಜಾವೇದಿಕೆ ನೇರ ಸಂಘರ್ಷ (ಜಾಣಗೆರೆ ಪತ್ರಿಕೆ ೨೫-೧೧-೧೯೯೮)
೫. ಪ್ರತ್ಯೇಕತಾ ಧೋರಣೆಯನ್ನು ಮರೆತು ಕರ್ನಾಟಕದೊಂದಿಗೆ ಕೊಡಗಿನ ಸಮಗ್ರತೆಗೆ ಹೋರಾಟ (ಶಕ್ತಿ ೨೨-೦೫-೧೯೯೯)
೬. ಮತದಾರ ವೇದಿಕೆ ಮುಖಾ-ಮುಖಿ (ಶಕ್ತಿ ೩೦-೮-೧೯೯೯)
೭. ಪ್ರತ್ಯೇಕತೆಗೆ ಪ್ರಬಲ ವಿರೋಧ ವ್ಯಕ್ತಪಡಿಸಿದ ಅಭ್ಯರ್ಥಿಗಳು (ಶಕ್ತಿ ೩೧-೮-೧೯೯೯)
೮. ಪ್ರತಿಧ್ವನಿಗೊಂಡ ಪ್ರತ್ಯೇಕತೆಯ ಚರ್ಚೆ (ಶಕ್ತಿ ೧-೦೯-೧೯೯೯)

ಸಂವಿಧಾನ ಪುನರ್ ಪರಿಶೀಲನಾ ರಾಷ್ಟ್ರೀಯ ಆಯೋಗದ ಅಧ್ಯಕ್ಷರಾಗಿದ್ದ ಜಸ್ಟಿಸ್ ಎಂ.ಎನ್. ವೆಂಕಟಾಚಲಯ್ಯನವರಿಗೆ ಮನವಿಯನ್ನು ಸಮರ್ಪಿಸಿದಾಗ, ಸುಮಾರು ಅರ್ಧ ತಾಸಿನಷ್ಟು ಕಾಲ ಪ್ರಶ್ನಿಸಿ, ಅವರಿಗೆ ಉಂಟಾದ ಅನುಮಾನಗಳನ್ನು ಪರಿಹರಿಸಿ ಕೊಂಡು, ಅಭಿಪ್ರಾಯಗಳನ್ನು ಸಂಗ್ರಹಿಸಿಕೊಂಡರು. ಮುಂದೆ ೨೦೦೨ನೇ ಇಸವಿ ಜನವರಿ ತಿಂಗಳಿನಲ್ಲಿ ನಡೆದ ಆಯೋಗದ ೧೫ನೇ ಸಭೆಯಲ್ಲಿ ಕೂರ್ಗ್ ಆರ್ಗನೈಜೇಷನ್ಸ್ (Coorg Organizations) S.No XI to XII ಪ್ರಕಾರ ಈ ಕೆಳಗಿನ ತೀರ್ಮಾನವನ್ನು ಪ್ರಕಟಿಸಿದರು:

"ಆಯೋಗವು ಕೊಡಗು ನ್ಯಾಶನಲ್ ಕೌನ್ಸಿಲ್ ಪರವಾಗಿ ಎನ್.ಯು. ನಾಚಪ್ಪ ಮತ್ತು ಕೊಡಗು ಪ್ರಜಾವೇದಿಕೆಯ ಪರವಾಗಿ ಎನ್.ಎಸ್. ದೇವಿಪ್ರಸಾದ್ ಸಲ್ಲಿಸಿದ ಮನವಿಗಳನ್ನು ಪರಿಶೀಲಿಸಲಾಗಿ, ಆಯೋಗವು ಪ್ರತ್ಯೇಕ ರಾಜ್ಯದ ಬೇಡಿಕೆಗೆ ಅಥವಾ ಯೂನಿಯನ್ ಟೆರಿಟರಿ ಸ್ಥಾನ ನೀಡುವುದಕ್ಕೆ ಅಸಮ್ಮತಿಯನ್ನು ವ್ಯಕ್ತಪಡಿಸಿದೆ."

ನಿರೂಪಕರ ನುಡಿಯಲ್ಲಿ ಕಮನೀಯತೆ ಕಳೆದುಕೊಳ್ಳುತ್ತಿರುವ ಕನ್ನಡ

■ ಜಿ.ಪಿ.ರಾಮಣ್ಣ

ಗೋಖಲೆ ಸಾರ್ವಜನಿಕ ಸಂಸ್ಥೆಯ ಸಭಾಂಗಣದಲ್ಲಿ ನಡೆದ ಸಮಾರಂಭವದು. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರ ಪುಸ್ತಕ ಬಿಡುಗಡೆಯ ಸಂದರ್ಭಕ್ಕಾಗಿ ಸಾಹಿತ್ಯ ವಲಯದ ಅಸಾಮಾನ್ಯರು ಎನ್ಎಸ್ಎಲ್ ಅಭಿಮಾನಿಗಳು, ಗೆಳೆಯರು ಅಲ್ಲಿ ಸೇರಿದ್ದರು. ಬಿಡುಗಡೆಗಾಗಿ ನಿಘಂಟು ತಜ್ಞ ಪ್ರೊ. ಜಿ. ವೆಂಕಟಸುಬ್ಬಯ್ಯ ಬಂದಿದ್ದರು. ನಾನು ಕಾರ್ಯಕ್ರಮದ ನಿರೂಪಣೆಯ ಜವಾಬ್ದಾರಿ ವಹಿಸಿಕೊಂಡಿದ್ದೆ. ಕಾರ್ಯಕ್ರಮ ಮುಗಿದ ಬಳಿಕ ನಾನು ಹೊರಬಂದಾಗ, ಗಾಯಕ–ಸ್ವರ ಸಂಯೋಜಕ ಸಿ. ಅಶ್ವತ್ಥ್ ಹೊರಗೆ ಯಾರೊಂದಿಗೋ ಮಾತಿನಲ್ಲಿ ತೊಡಗಿದ್ದವರು, ನನ್ನನ್ನು ನೋಡಿದವರೇ ಹತ್ತಿರಕ್ಕೆ ಕರೆದರು. ಕಾರ್ಯಕ್ರಮದ ನಡುವೆ ನಾನು ಬಳಸಿದ ಪದವೊಂದು, ಅವರು ನನ್ನನ್ನು ಮಾತಿಗೆಳೆಯಲು ಪ್ರೇರೇಪಿಸಿತ್ತು. "ನೀವು 'ಮಜಲು' ಅನ್ನುವ ಪದ ಬಳಸಿದಿರಿ. ಆ ಪದದ ಅರ್ಥ ಏನು? ಆ ಪದ ಬಳಕೆ ಸರಿಯೇ?" ಎಂದು ಪ್ರಶ್ನಿಸಿದರು. 'ನಿಮ್ಮನ್ನು ಕಾರ್ಯಕ್ರಮದ ಮುಂದಿನ ಘಟ್ಟಕ್ಕೆ ಅಥವಾ ಹಂತಕ್ಕೆ ಕರೆದೊಯ್ಯುತ್ತಿದ್ದೇನೆ ಎಂದು ಸಭಿಕರಿಗೆ ತಿಳಿಸುವ ಸಲುವಾಗಿ ನಾನು ಮಜಲು ಪದ ಬಳಸಿದೆ ಸಾರ್' ಎಂದೆ. ನನ್ನ ಉತ್ತರ ಅವರಿಗೆ ಸಮಾಧಾನ ತಂದಂತೆ ಕಾಣಲಿಲ್ಲ. ಸನಿಹದಲ್ಲೇ ನನಗೂ ಪರಿಚಿತರಿದ್ದ ಹಿರಿಯ ಸಂಸ್ಕೃತ ವಿದ್ವಾಂಸರಾದ ಶ್ರೀರಾಮ್ ಅವರನ್ನು ಕರೆದು "ಇವ್ರೇ, ರಾಮಣ್ಣ ಬಳಸಿದ 'ಮಜಲು' ಅನ್ನುವ ಪದಬಳಕೆ ಸರಿಯೆ?" ಎಂದು ಕೇಳಿದರು. ಅದಕ್ಕೆ "ಅಶ್ವತ್ಥ್ ನಿಮಗೂ ಗೊತ್ತು, ನನಗೂ ಗೊತ್ತು. ರಾಮಣ್ಣ ವೇದಿಕೆಯಲ್ಲಿ



ಯಾವುದೇ ಪದವನ್ನು ಎಚ್ಚರದಿಂದ ಮತ್ತು ಪ್ರಜ್ಞಾಪೂರ್ವಕವಾಗಿ ಬಳಸುತ್ತಾರೆ. ಅವರ 'ಮಜಲು' ಪದ ಬಳಕೆ ಸರಿ ಇದೆ. ಸಂದೇಹ ಬೇಡ" ಎಂದರು ಶ್ರೀರಾಮ್.

ಇನ್ನೊಂದು ಸಮಾರಂಭವದು. ರವೀಂದ್ರ ಕಲಾಕ್ಷೇತ್ರದ ಸಭಾಂಗಣ. ಶಿವಮೊಗ್ಗ ಸುಬ್ಬಣ್ಣ ಅವರ ದನಿಸಾಂದ್ರಿಕೆಯೊಂದರ ಬಿಡುಗಡೆ ಸಮಾರಂಭ. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಮಾಜಿ ನಿರ್ದೇಶಕರೂ, ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಅಧ್ಯಕ್ಷರೂ, ಖ್ಯಾತ ಗಾಯಕರೂ ಆದ ವೈ.ಕೆ.ಮುದ್ದುಕೃಷ್ಣ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ದಲಿತ ಕವಿ ಸಿದ್ಧಲಿಂಗಯ್ಯ ಮೊದಲಾದವರು ವೇದಿಕೆಯಲ್ಲಿದ್ದರು. ನಾನೇ ಕಾರ್ಯಕ್ರಮ ನಿರೂಪಿಸುತ್ತಿದ್ದೆ. ಮಾತಿನ ಮಧ್ಯೆ ನಾನು ಸಿದ್ಧಲಿಂಗಯ್ಯ ಅವರನ್ನು 'ದಲಿತ ಕವಿ' ಎಂದು ಸಂಬೋಧಿಸಿದ್ದನ್ನು ಕುರಿತು ವೈ.ಕೆ.ಮುದ್ದುಕೃಷ್ಣ ತಮ್ಮ ಮಾತಿನ ಸರದಿ ಬಂದಾಗ "ರಾಮಣ್ಣ ಅವರು ಸಿದ್ಧಲಿಂಗಯ್ಯ ಅವರನ್ನು 'ದಲಿತ ಕವಿ' ಎಂದು ಸಂಬೋಧಿಸಿದ್ದು ಸರಿಯಲ್ಲ" ಎಂದು ಆಕ್ಷೇಪಿಸಿ, ಆ ರೀತಿ ಸಂಬೋಧಿಸಿ ನಾನು ಅಪಚಾರವೆಸಗಿದೆ ಎಂದು ಧ್ವನಿಸುವಂತೆ ಮಾತಾಡಿದರು. ಅವರ ಮಾತು ಮುಗಿದ ಬಳಿಕ ನಿರೂಪಕನಾಗಿದ್ದ ನಾನು "ಸಿದ್ಧಲಿಂಗಯ್ಯ ಅವರು ತಮ್ಮ ಕವಿತೆ ಮತ್ತು ಬರಹಗಳ ಮೂಲಕ ಸಮಾಜದ ದಲಿತವರ್ಗ ಮತ್ತು ಶೋಷಿತ ವರ್ಗಕ್ಕೆ ದನಿ ನೀಡಿದ ಕವಿಯಾದ್ದರಿಂದ, ಇಡೀ ನಾಡು ಅವರನ್ನು ಕೊಂಡಾಡಿ, 'ದಲಿತ ಕವಿ' ಎಂದು ಅಕ್ಕರೆಯಿಂದ ಕರೆದಿದೆ. ಹಾಗಾಗಿ, ನಾಡಿನಾದ್ಯಂತ ಅವರು ದಲಿತಕವಿ ಎಂದೇ ಪ್ರಸಿದ್ಧರಾಗಿದ್ದಾರೆ. ಸಿದ್ಧಲಿಂಗಯ್ಯ ಅವರೂ ಅದನ್ನು ಸ್ವೀಕರಿಸಿದ್ದಾರೆ. ಈ ಹಿನ್ನೆಲೆಯಲ್ಲಿ ನಾನವರನ್ನು 'ದಲಿತ ಕವಿ' ಎಂದು ಸಂಬೋಧಿಸಿದ್ದು ಸಮಂಜಸವೇ ಆಗಿದೆ ಎಂದು ನಮ್ರವಾಗಿ ತಿಳಿಸಬಯಸುತ್ತೇನೆ" ಎಂದೆ. ಸಭೆಯಲ್ಲಿ ಹೊರಹೊಮ್ಮಿದ ಭಾರಿ ಕರತಾಡನ ನನ್ನ ಮಾತನ್ನು ಅನುಮೋದಿಸುವಂತಿತ್ತು. ಸಿದ್ಧಲಿಂಗಯ್ಯ ಅವರ ಮುಖದಲ್ಲೂ ನಗು ಅರಳಿತ್ತು.

ಪ್ರೇಕ್ಷಕರಾಗಲೀ, ಕೇಳುಗರಾಗಲೀ ತಮ್ಮ ಲಕ್ಷ್ಯವನ್ನು ನಿರೂಪಕರ ಮೇಲೆಯೇ ಇಟ್ಟಿರುತ್ತಾರೆ. ನಿರೂಪಕರ ಮಾತುಗಳನ್ನು ಮೌನವಾಗಿ ಏಕಚಿತ್ತದಿಂದ ಮತ್ತು ಎಚ್ಚರದಿಂದ ಆಲಿಸುತ್ತಿರುತ್ತಾರೆ. ನಿರೂಪಕರು ಆಡುವ ಒಂದೊಂದು ಮಾತನ್ನೂ ತೂಗಿ ಅಳೆಯುತ್ತಾರೆ ಎಂಬುದನ್ನು ಸ್ಪಷ್ಟಪಡಿಸಲು ಈ ಎರಡು ಪ್ರಸಂಗಗಳನ್ನು ಇಲ್ಲಿ ಉದಾಹರಿಸಬೇಕಾಯಿತು. ನಾಲಿಗೆಗೆ ತೋಚಿದ್ದು ಮಾತಾಗುವುದನ್ನು ಯಾವುದೇ ಸಭೆ ಒಪ್ಪದು, ಸಭಾಸದರು ಮೆಚ್ಚರು. ನಿರೂಪಕನಾದವನು ತಾನು ಬಳಸುವ ಪದ ಹಾಗೂ ಭಾಷಾ ಪ್ರಯೋಗದ ಮೇಲೆ ಹಿಡಿತ ಹೊಂದಿದ್ದರೆ ಮಾತ್ರ ಸಭಿಕರನ್ನು ಸಂತೃಪ್ತಿಪಡಿಸಲು ಸಾಧ್ಯ ಎಂಬುದನ್ನು ಈ ಪ್ರಸಂಗಗಳು ವಿಶದಪಡಿಸುತ್ತವೆ ಎಂದುಕೊಳ್ಳುತ್ತೇನೆ.

ನಿರೂಪಕರೆಂದರೆ ಪರಿಚಾರಕರು ಎಂಬುದು ನನ್ನ ಅಭಿಮತ. ಸಾಹಿತ್ಯ ಪರಿಚಾರಕರು ರಂಗಪರಿಚಾರಕರು ಇರುವಂತೆ ನಿರೂಪಕರು ಸಾಂಸ್ಕೃತಿಕ ಪರಿಚಾರಿಕೆಯನ್ನು ಮಾಡುತ್ತಾರೆ ಎನ್ನಬಹುದು. ಶಿಸ್ತು, ಸಮಚಿತ್ತತೆ, ನುಡಿಜಾಣ್ಮೆ, ಅಭಿವ್ಯಕ್ತಿ ಸಾಮರ್ಥ್ಯ, ಸಾಹಿತ್ಯ ಪ್ರೀತಿ ಹಾಗೂ ಭಾಷಾ ಪ್ರೌಢಿಮೆಯಿಂದ ಕಾರ್ಯಕ್ರಮವನ್ನು ಸಿಂಗರಿಸುವಷ್ಟು ನಿರೂಪಕರು

ಶಕ್ತರಾಗಿರಬೇಕು ಎಂದು ಸಭಿಕರು ಬಯಸುತ್ತಾರೆ. ತಮ್ಮ ಸತ್ವಯುತ ನಿರೂಪಣೆ ಸಂವಹನಶೀಲತೆ, ಸಮನ್ವಯಶೀಲತೆ ಹಾಗೂ ಧ್ವನಿಶಕ್ತಿಯಿಂದ ಕಾರ್ಯಕ್ರಮದ ಒಟ್ಟಂದವನ್ನು ಬದಲಿಸಬಲ್ಲ, ಕದಲಿಸಬಲ್ಲ ಜಾಣ್ಮೆಯನ್ನು ನಿರೂಪಕರು ಹೊಂದಿರ ಬೇಕಾಗುತ್ತದೆ. ಪ್ರಸನ್ನತೆ, ಉಚಿತ ಉಡುಪು ಹೇಗೆ ನಿರೂಪಕರಿಗೆ ಬಾಹ್ಯಭೂಷಣ ತರುತ್ತದೋ, ಹಾಗೆಯೇ ಭಾಷಾಪ್ರಯೋಗವೂ ಅವರಿಗೆ ಭೂಷಣಪ್ರಾಯ ಎಂಬುದನ್ನು ಮರೆಯುವಂತಿಲ್ಲ. ನಿರೂಪಕರ ಭಾಷೆಯು ಅಮ್ಮನ ಜೋಗುಳ ದಂತಿರಬೇಕು, ಅಪ್ಪನ ಬುದ್ಧಿ ಮಾತಿನಂತಿರಬೇಕು, ಅಜ್ಜಿ ಹೇಳುವ ಕಥೆಯಂತಿರಬೇಕು ಕೆಲವೊಮ್ಮೆ ಗೆಳತಿಯ ಪಿಸುಮಾತಿನ ಹಾಗೂ ಇರಬೇಕು. ಗೆಳೆಯನೊಬ್ಬ ಹೆಗಲ ಮೇಲೆ ಕೈ ಹಾಕಿದಾಗ ಆವರಿಸಿಕೊಳ್ಳುವ ಆಪ್ತ ಭಾವ ನಿರೂಪಕರ ಮಾತು ಕೇಳಿದಾಗ ಸಭಿಕರಿಗೆ ಆಗಬೇಕು. ಆ ಮಾತಿನ ಹಿಂದೆ ಸ್ವಲ್ಪ ತಮಾಷೆ, ಸ್ವಲ್ಪ ಕಿಚಾಯಿಸುವಿಕೆ, ಸ್ವಲ್ಪ ವಿನಂತಿ, ಸ್ವಲ್ಪ ಗಾಂಭೀರ್ಯ ಹೀಗೆ ಎಲ್ಲವೂ ಇರಬೇಕು. ಅಂದರೆ, ಒಂದು ಕಾರ್ಯಕ್ರಮಕ್ಕೆ ಸುವರ್ಣ ಚೌಕಟ್ಟು ತೊಡಿಸಬಹುದಾದ ಕಲೆಗಾರಿಕೆಯನ್ನು ನಿರೂಪಕರು ರೂಢಿಸಿಕೊಂಡಿರ ಬೇಕಾಗುತ್ತದೆ. ಪ್ರೊ. ಜಿ. ವೆಂಕಟಸುಬ್ಬಯ್ಯನವರ ಪ್ರಕಾರ 'ನಿರೂಪಕನ ಭಾಷೆ ಕೇಳುಗರ ಕಿವಿಗಳಿಗೆ ತಾಕುವಂತಿರಬೇಕು. ಮಾತು ಸೌಷ್ಠವದಿಂದ ಕೂಡಿರಬೇಕು. ಸ್ಪಷ್ಟ ಉಚ್ಚಾರ, ವಾಕ್ಯಗಳ ಅಂತರಾರ್ಥವನ್ನು ಎತ್ತಿಹಿಡಿಯುವಂತಹ ಧ್ವನಿಯ ಕಾಕುಗಳಿರಬೇಕು. ಅಲ್ಪಪ್ರಾಣ ಮಹಾಪ್ರಾಣಗಳ ಭಿನ್ನತೆ ಅರಿತಿರಬೇಕು. ಹ್ರಸ್ವ, ದೀರ್ಘಗಳ ವಿವರ ಮತ್ತು ಒತ್ತಕ್ಷರಗಳ ವಿರಳತೆ ಸಮೀಚೀನವಾಗಿರಬೇಕು.'

ಇವಿಷ್ಟನ್ನು ಗಮನದಲ್ಲಿಟ್ಟುಕೊಂಡು ಇಂದಿನ ಕಾರ್ಯಕ್ರಮ ನಿರೂಪಣೆ ಮಾಡುವವರನ್ನೂ, ಅವರು ಕಾರ್ಯಕ್ರಮ ನಿರೂಪಣೆ ಮಾಡುವ ವಿಧಾನವನ್ನೂ ಅವರು ಕಾರ್ಯಕ್ರಮಗಳಲ್ಲಿ ಕನ್ನಡ ಭಾಷೆಯನ್ನು ಬಳಸುವ ಬಗೆಯನ್ನೂ ಕಂಡಾಗ ನಿರಾಸೆ ಮೂಡುತ್ತದೆ. ಎರಡು ದಶಕಗಳ ಹಿಂದೆ ಕಾರ್ಯಕ್ರಮಗಳ ಸಂಖ್ಯೆ ಕಡಿಮೆ ಇತ್ತು. ಕಾರ್ಯಕ್ರಮಗಳೂ ಶಿಸ್ತು ಬದ್ಧವಾಗಿರುತ್ತಿದ್ದವು. ಬೆರಳೆಣಿಕೆಯ ನಿರೂಪಕರಿದ್ದರು. ಕಾರ್ಯಕ್ರಮಕ್ಕೆ ಬರುತ್ತಿದ್ದ ಅತಿಥಿಗಳೂ ಖ್ಯಾತನಾಮರೇ ಆಗಿರುತ್ತಿದ್ದರು. ಆ ಕಾರಣಕ್ಕೆ ಕಾಯಕ್ರಮ ನಿರೂಪಕರೂ ಶ್ರದ್ಧಾಭಕ್ತಿಯಿಂದ ಪೂರ್ವತಯಾರಿ ಮಾಡಿಕೊಂಡೇ ಹೋಗುತ್ತಿದ್ದರು. ನೆನಪಿಟ್ಟುಕೊಳ್ಳುವಂತಹ ರೀತಿಯಲ್ಲಿ ಕಾರ್ಯಕ್ರಮ ನಿರೂಪಿಸಿ ಬರುತ್ತಿದ್ದರು. ಆದರೆ ಇಂದು ಪರಿಸ್ಥಿತಿ ಬದಲಾಗಿದೆ. ನಿರೂಪಕರು ಸುಂದರವಾಗಿದ್ದರೆ ಸಾಕು. ಅಂತಹವರನ್ನೇ ಕಾರ್ಯಕ್ರಮ ಸಂಘಟಕರು ದುಂಬಾಲು ಬಿದ್ದು ಕರೆಸುತ್ತಾರೆ. ಹಾಗೆ ಮೇಕಪ್ ಮಾಡಿಕೊಂಡು ನಿರೂಪಕರೆಂದು ಬರುವವರಿಗೆ ಸ್ಪಷ್ಟವಾದ ಕನ್ನಡ ಬರುತ್ತದೆಯೇ ಎಂಬುದನ್ನು ಅವರು ಗಮನಿಸುವುದೇ ಇಲ್ಲ ಮತ್ತು ಒಳ್ಳೆಯ ಭಾಷೆ ಬರಬೇಕು ಅನ್ನುವುದು ಅವರಿಗೆ ಬೇಕಾಗಿಯೂ ಇರುವುದಿಲ್ಲ. ಒಮ್ಮೆ ಚಪ್ಪಾಳೆ ಸಿಕ್ಕರಾಯಿತು. ಅವತ್ತಿನಿಂದ ಅವರು ತಾವೇ ದೊಡ್ಡ ನಿರೂಪಕ/ನಿರೂಪಕಿ ಎಂದುಕೊಳ್ಳುತ್ತಾರೆ. ನಿರೂಪಕರಾಗಿ ತಾವು ಕಲಿಯಬೇಕಾಗಿರುವ ಸಂಗತಿಗಳನ್ನು ಯಾರೂ ಅವರಿಗೆ ತಿಳಿಹೇಳುವುದಿಲ್ಲ. ಹಾಗಾಗಿ ತಾವು ಕಲಿಯಬೇಕಾದ್ದು ಏನೋ ಇದೆ

ಎಂದು ಅವರಿಗೂ ಅನಿಸುವುದಿಲ್ಲ. ನಿರೂಪಕರಿಗಿರಬೇಕಾದ ಹಲವು ಅರ್ಹತೆಗಳಲ್ಲಿ ಚಂದದ ಕನ್ನಡವನ್ನು ಇನ್ನಷ್ಟು ಅಂದಗೊಳಿಸುವುದು ಪ್ರಧಾನ ಅರ್ಹತೆ ಎಂಬುದನ್ನು ಕಾರ್ಯಕ್ರಮ ಆಯೋಜಕರಾಗಲಿ ಅಥವಾ ಕಾರ್ಯಕ್ರಮ ನಿರೂಪಕರಾಗಲಿ ಗಂಭೀರ ವಾಗಿ ಪರಿಗಣಿಸಿಲ್ಲ ಎಂಬುದು ಇದರಿಂದ ವೇದ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ನಿರೂಪಕರ ಕೈಯಲ್ಲಿ, ಅಲ್ಲಲ್ಲ ಬಾಯಲ್ಲಿ ಸಿಲುಕಿ ಇವತ್ತು ಕನ್ನಡ ಭಾಷೆ ಸೊರಗುತ್ತಿದೆ ಎನ್ನುವ ಹಲವರ ಅಹವಾಲನ್ನು ಒಪ್ಪಲೇಬೇಕಾಗುತ್ತದೆ. ಅವರ ಅಹವಾಲಿಗೆ ಪುಷ್ಟಿ ನೀಡುವ ಅನೇಕ ಉದಾಹರಣೆಗಳನ್ನೂ ಅವರು ಕೊಡುತ್ತಾರೆ. ಹೆಚ್ಚುತ್ತಿರುವ ಕಾರ್ಯಕ್ರಮಗಳು, ಸಿದ್ಧತೆ ಇಲ್ಲದೆ ಬರುವ ನಿರೂಪಕರು, ಸಾಹಿತ್ಯದ ಗಂಧ–ಗಾಳಿ ಇಲ್ಲದ, ಸಂಸ್ಕೃತಿ ಪರಿಚಯ ಇಲ್ಲದ ಮತ್ತು ಬದ್ಧತೆ ಇಲ್ಲದ ಕಾರ್ಯಕ್ರಮ ಆಯೋಜಕರು... ಹೀಗೆ ಎಲ್ಲವೂ ಕಾರಣ ಅನ್ನಬಹುದು. ಯಾರಿಗೂ ಚೊಕ್ಕ ನಿರೂಪಣೆಯ ಅಗತ್ಯ ಕಾಣುತ್ತಿಲ್ಲ, ಹಾಗೆಯೇ ಕಮನೀಯ ಕನ್ನಡವೂ ಬೇಕಾಗಿಲ್ಲ. ಯಾರೋ ಒಬ್ಬರು ಧ್ವನಿವರ್ಧಕದ ಮುಂದೆ ನಿಂತು ನಾಲ್ಕು ಮಾತುಗಳನ್ನು ಹೇಗೆ ಹೇಳಿದರೂ ನಡೆಯುತ್ತದೆ ಎನ್ನುವ ಧೋರಣೆ ಹೆಚ್ಚುತ್ತಿದೆ. ಇದು ಭಾಷೆಯನ್ನು ಬಳಸುವಲ್ಲಿರುವ ಬದ್ಧತೆಯ ಕೊರತೆಯನ್ನು ತೋರಿಸುತ್ತದೆ.

ಅದು ವೇದಿಕೆ ಇರಲಿ, ಬಾನುಲಿ ಇರಲಿ, ಕಿರುತೆರೆಯಾಗಲಿ, ಅಲ್ಲೆಲ್ಲಾ ಒಂದು ಸಂವಹನ ಕ್ರಿಯೆ ಜಾರಿಯಲ್ಲಿರುತ್ತದೆ. ಈ ಸಂವಹನ ಕ್ರಿಯೆಯ ಮೂಲ ದ್ರವ್ಯವೇ ಮಾತು. ಈರ್ವರ ನಡುವೆ ಮಾತು ಸೇತುವೆ ಕಟ್ಟುತ್ತದೆ, ಸಂಬಂಧ ನಿರ್ಮಿಸುತ್ತದೆ. ವೇದಿಕೆಯಲ್ಲಾದರೆ, ಅಲ್ಲಿರುವವರು ಮತ್ತು ಸಭಿಕರ ನಡುವೆ ನೇರ ಸಂವಾದ ಸಾಧ್ಯವಾಗುತ್ತದೆ. ಕ್ರಿಯೆಗೊಂದು ನೇರಪ್ರತಿಕ್ರಿಯೆ ದೊರೆಯುತ್ತದೆ. ವಾತಾವರಣದಲ್ಲಿ ಜೀವಂತಿಕೆ ಮೈದಳೆಯುತ್ತದೆ. ವೇದಿಕೆ ಮತ್ತು ಸಭಾಂಗಣದ ನಡುವೆ ಅವ್ಯಕ್ತ ಸಂಬಂಧವೊಂದು ರೂಪುಗೊಳ್ಳುತ್ತದೆ. ವೇದಿಕೆ ಮತ್ತು ಸಭಾಂಗಣದ ನಡುವೆ ಕೊಂಡಿಯಂತಿರುವ ನಿರೂಪಕರು ಈ ಸಂಬಂಧದ ಮೂಲ ಬಿಂದುವಾಗುತ್ತಾರೆ. ಪ್ರೇಕ್ಷಕಾಂಗಣದಲ್ಲಿರುವವರನ್ನು ವೇದಿಕೆಯ ತೆಕ್ಕೆಗೆ ತೆಗೆದುಕೊಳ್ಳುವ ಜಾಣ್ಮೆ ಅವರಲ್ಲಿರ ಬೇಕಾಗುತ್ತದೆ. ಅದಕ್ಕೆ ನೆರವಾಗುವ ಏಕೈಕ ಸಾಧನವೆಂದರೆ ಮಾತು; ಮಾತಿಗಾಗಿ ಅವರು ಬಳಸುವ ಭಾಷೆ ಮತ್ತು ಭಾಷೆಯನ್ನು ಬಳಸುವ ಬಗೆ.

ಬಾನುಲಿ ಮತ್ತು ಕಿರುತೆರೆ ಮಾಧ್ಯಮಗಳು ಕೇವಲ ಏಕಮುಖ ಸಂಚಾರವುಳ್ಳ ಮಾಧ್ಯಮಗಳು. ಅಲ್ಲಿ ಕೇಳುಗರಿಗೆ ಕೇಳಲಷ್ಟೇ ಸಾಧ್ಯ. ನೋಡುಗರಿಗೆ ನೋಡಲಷ್ಟೇ ಸಾಧ್ಯ. ವೇದಿಕೆ ಕಾರ್ಯಕ್ರಮಗಳಲ್ಲಿದ್ದಂತೆ ನೇರಪ್ರತಿಕ್ರಿಯೆಗಳಿಗೆ ಇಲ್ಲಿ ಅವಕಾಶವಿಲ್ಲ. ನೇರ ಸಂವಾದಕ್ಕೆ ಅವಕಾಶವಿಲ್ಲದಿದ್ದರೂ ಈ ಮಾಧ್ಯಮಗಳು ಕೇಳುಗರ ಮತ್ತು ನೋಡುಗರ ಮೇಲೆ ಅಪಾರ ಪ್ರಭಾವ ಬೀರಬಲ್ಲ, ಪ್ರಬಲ ಪರಿಣಾಮ ಉಂಟುಮಾಡಬಲ್ಲ ಶಕ್ತ ಮಾಧ್ಯಮಗಳು. ವೇದಿಕೆ ಕಾರ್ಯಕ್ರಮಗಳಲ್ಲಿ ನಾವು ಪ್ರತ್ಯಕ್ಷ ಪರಿಣಾಮಗಳನ್ನು ಕಂಡರೆ ದೃಶ್ಯ ಮತ್ತು ಶ್ರವ್ಯ ಮಾಧ್ಯಮಗಳ ಕಾರ್ಯಕ್ರಮಗಳು ಪರೋಕ್ಷ ಪರಿಣಾಮಗಳನ್ನು ಉಂಟು ಮಾಡುವುದನ್ನು ಕಾಣುತ್ತೇವೆ. ಅಂಥಾ ಪರಿಣಾಮ ಉಂಟುಮಾಡುವ ಅಂಶಗಳ ಪೈಕಿ ಭಾಷಾ ಬಳಕೆ, ಸಾಹಿತ್ಯ, ಸಂಸ್ಕೃತಿ ಮತ್ತು ಪರಂಪರೆಗಳನ್ನು ಬಿಂಬಿಸುವ ಬಗೆಯೂ

ಒಂದು. 'ಮಾತಿಗೂ, ಸಂಸ್ಕೃತಿಗೂ ಹತ್ತಿರದ ಸಂಬಂಧವಿದೆ. ಸಂಸ್ಕೃತಿ ಮಾತನ್ನು ರೂಪಿಸುತ್ತದೆ. ಮಾತು ಸಂಸ್ಕೃತಿಯನ್ನು ಹೇಳುತ್ತದೆ' ಎನ್ನುವ ಮಾತನ್ನು ಒಪ್ಪುವುದಾದರೆ ಈ ಮಾಧ್ಯಮಗಳು ವಿಚಾರಗಳನ್ನು ದಾಟಿಸುತ್ತವೆ. ಮಾತಿನ ಮೂಲಕ ಒಬ್ಬ ವ್ಯಕ್ತಿ ಏಕಕಾಲಕ್ಕೆ ಹಲವು ಮಂದಿಯನ್ನು ತಲುಪುತ್ತಾನೆ ಎಂಬುದನ್ನು ಅರಿತುಕೊಳ್ಳಬೇಕು. ಭಾಷೆಯ ಉಪಯೋಗದಲ್ಲಿ ನಿಖರತೆಯನ್ನು ಸಾಧಿಸಿ, ಸಾಧ್ಯವಾದಷ್ಟೂ ತಪ್ಪುಗಳನ್ನು ಮಾಡದೆ, 'ಕಿರಿದರೊಳ್ ಪಿರಿದರ್ಥವಂ' ಹೇಳಲು ಪ್ರಯತ್ನಿಸಬೇಕು. ಭಾಷೆಯೇ ನಿರೂಪಣೆಯ ಮೂಲದ್ರವ್ಯವಾದ್ದರಿಂದ ತಮ್ಮ ಶಬ್ದಸಂಪತ್ತನ್ನು ಹೆಚ್ಚಿಸಿಕೊಳ್ಳಬೇಕು. ಹೊಸ ಹೊಸ ಪದಗಳನ್ನು ಟಂಕಿಸಿ, ಪದಸಾಮ್ರಾಜ್ಯವನ್ನು ವಿಸ್ತರಿಸಿಕೊಳ್ಳಬೇಕು. ಸಾಕಷ್ಟು ಓದಿಕೊಳ್ಳಬೇಕು ಮತ್ತು ಕೇಳಿಸಿಕೊಳ್ಳಬೇಕು. ವರ್ಣೋಚ್ಚಾರಣೆ ಕಡೆಗೂ ಗಮನ ಕೊಡಬೇಕು. ಭಾಷೆಯ ಘನತೆ ಹೆಚ್ಚುವಂತಹ ರೀತಿಯಲ್ಲಿ ಮಾತಾಡಬೇಕು. ಭಾಷಾ ಪ್ರೌಢಿಮೆ, ಸಾಹಿತ್ಯ–ಸಂಸ್ಕೃತಿ–ಪರಂಪರೆಗಳ ಪರಿಚಯ, ಪದಸಾಮರ್ಥ್ಯ, ಪದಬಳಕೆಯಲ್ಲಿ ಪ್ರಭುತ್ವವನ್ನು ಸಾಧಿಸಿ, ಭಾಷೆ–ಸಂಸ್ಕೃತಿ–ಪರಂಪರೆಗಳ ವಾಹಕರಾಗಿ ಕಾರ್ಯ ನಿರ್ವಹಿಸಬೇಕು. ತಾವು ಕೇವಲ ಮಾಹಿತಿದಾರರಲ್ಲ; ಭಾಷಾ ರಾಯಭಾರಿಗಳು ಎಂಬುದನ್ನು ನಿರೂಪಕರು ನೆನಪಿನಲ್ಲಿಡಬೇಕು.



ಭಾಗ ೨
ಸಂಪನ್ನ ಸಂಸ್ಕೃತಿಯ ತಂಗಾಳಿ

‘ಕನ್ನಡಂಗಳ್’

■ ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರೀ

ಕವಿರಾಜಮಾರ್ಗದ ಪ್ರಥಮ ಪರಿಚ್ಛೇದದಲ್ಲಿ (ಪ.೪೬)

ದೋಸಮಿನಿತೆಂದು ಬಗೆದು
ದ್ಭಾಸಿ(ಸೆ) ತಜಿಸಂದು ಕನ್ನಡಂಗಳೊಳೆಂದುಂ
ವಾಸುಗಿಯುಮಜಿಯಲಾಜಿದೆ
ಬೇಸಜಿಪಗುಂ ದೇ(ಸಿ) ಬೇಜಿ³ವೇಜಿಪ್ಪುದಜಿಂ ॥

ಎಂಬ ಪದ್ಯವೊಂದಿದ್ದು, ‘ಕನ್ನಡಂಗಳ್’ ಎಂಬ ಮಾತು ಇಲ್ಲಿ ಮೊದಲ ಸಲ ಕಾಣಿಸಿಕೊಂಡಿರುವಂತೆ ತೋರುತ್ತದೆ.

ಅದೇ ಪರಿಚ್ಛೇದದಲ್ಲಿ (ಪ. ೫೭)

ನೆಗಟ್ದಿರ್ದ ಕನ್ನಡಂಗಳೊ
ಳಗಣಿತಗುಣವಿದಿತಸಂಸ್ಕೃತೋ(ಕ್ತಿ)ಕ್ರಮಮಂ
ಬಗೆದೊಂದುಮಾಡಿ ಪೇಟಿಲ್ದೊಡೆ
ಸೊಗಯಿಸುಗುಂ ಕಾವ್ಯಬಂಧಮೆಂದುಮನಿಂದ್ಯಂ ॥

ಎಂಬ ಇನ್ನೊಂದು ಪದ್ಯದಲ್ಲಿಯೂ ಆ ಮಾತು ಮತ್ತೆ ಬಂದಿದೆ.



ದೇಶವಾಚಕವಾಗಿಯೂ, ಭಾಷಾವಾಚಕವಾಗಿಯೂ ‘ಕನ್ನಡ’ ಎಂಬ ಏಕವಚನದ ರೂಪ ಕವಿರಾಜಮಾರ್ಗದಲ್ಲಿಯೂ, ಅನ್ಯತ್ರವೂ ಸಾಮಾನ್ಯವಾಗಿ ಬಳಕೆಯಾಗಿರುವಾಗ ಈ ಬಹುವಚನ ರೂಪದ ವಿಶೇಷತೆಯೇನು ಎಂಬ ಪ್ರಶ್ನೆಯೇಳುತ್ತದೆ. ಮುಳಿಯ ತಿಮ್ಮಪ್ಪಯ್ಯನವರೂ, ಎಂ.ವಿ. ಸೀತಾರಾಮಯ್ಯನವರೂ ಪಠ್ಯವಿಮರ್ಶೆಯ ಸಂದರ್ಭದಲ್ಲಿ ಇದನ್ನು ಸ್ವಲ್ಪಮಟ್ಟಿಗೆ ಚರ್ಚಿಸಿದ್ದು, ‘ಕನ್ನಡಂಗಳ್’ ಎಂಬ ಮಾತು ಪ್ರಾದೇಶಿಕ ಅಥವಾ ಪ್ರಾಂತಭೇದಗಳನ್ನು ಹೇಳುತ್ತದೆಯೆಂದು ಸೀತಾರಾಮಯ್ಯನವರು ಊಹಿಸಿರುವುದು ಬಹುಶಃ ಸರಿಯಾಗಿಯೇ ಇದೆ.

ಕನ್ನಡವೆಂಬ ಪ್ರಾದೇಶಿಕ ಭಾಷೆ ಮುಖ್ಯ ಲಕ್ಷಣದಲ್ಲಿ ಒಂದೇ ಆಗಿದ್ದರೂ ಅದನ್ನು ಬೇರೆ ಬೇರೆ ಸ್ಥಳಗಳಲ್ಲಿ, ಬೇರೆ ಬೇರೆಯಾಗಿ ನುಡಿಯುವ ರೂಢಿ ಕಾರಣವಾಗಿ ಆ ಒಂದೊಂದು ಭಾಷಾ ರೂಢಿಯೇ ದೇಸಿ (ಆಯಾ ದೇಶಭಾಗಕ್ಕೆ ವಿಶಿಷ್ಟವಾದ್ದು ಸೀಮಿತವಾದ್ದು) ಎನ್ನಿಸಿ 'ಕನ್ನಡಂಗಳ್' ಎಂಬ ಮಾತು ಹುಟ್ಟುವಂತಾಗಿರುವುದು ಸಾಧ್ಯ. ಅದು ಆಡುಭಾಷೆಯ ವರಸೆ, ಅದರ ವಿಶೇಷತೆಯನ್ನು ಗುರುತು ಮಾಡಿ, ಲಕ್ಷಣ ಹೇಳುವುದು ಕಷ್ಟ ಎನ್ನುವುದು ಕವಿರಾಜಮಾರ್ಗಕಾರನ ಅಭಿಪ್ರಾಯವಿರುವಂತಿದೆ.

ನಂತರ ಆಂಡಯ್ಯನು (ಸು. ೧೨೩೫) ತನ್ನ 'ಕಬ್ಬಿಗರ ಕಾವ' ಎಂಬ ಕೃತಿಯಲ್ಲಿ 'ಕನ್ನಡಂಗಳ್' ಎಂಬ ಬಹುವಚನದ ರೂಪವನ್ನು ಈ ಗ್ರಂಥಾಂತ್ಯದ ಪದ್ಯದಲ್ಲಿ (ಪ. ೩೪೮) ತಂದಿದ್ದಾನೆ (೧೮೯೬ರ ಮುದ್ರಣ).

ದೋಸದ ಮಾತು ಪೊರ್ದದೆನೆ ಬಲ್ಲವರಗ್ಗದ ಕನ್ನಡಂಗಳಿಂ
ಬಾಸಣಮಾಗೆ ಪೇಟ್ದಿನೊಲವಿಂ ನೆಱೆ ಕಬ್ಬಿಗರೊಪ್ಪೆ ನಾಡೆಯುಂ
ಗೋಸಣೆ ಮೀಱುವನ್ನು ಮಿದು ರಾಯನ ನಾಟ್ಕಿಳೊಳ್ಕೆ ನಿಚ್ಚಮುಂ
ದೇಸೆಯ ಗೊತ್ತು ಜಾಣ್ನುಡಿಯ ತಾಯ್ವನೆ ನುಣ್ಬುರುಳೇಟಿಗ್ಗೆಯೆಂಬಿನಂ ॥

ಈ ಉತ್ಪಲಮಾಲಾವೃತ್ತದ ೨ನೆಯ ಪಾದದಲ್ಲಿ 'ಬಾಸಣ' ಎಂಬುದಕ್ಕೆ ಪ್ರತ್ಯಂತರದಲ್ಲಿ 'ದೂಸರ' ಎಂಬ ಪಾಠವಿದೆ. ಇದು ಸುಂದರ, ಅತಿಶಯ ಎಂಬರ್ಥದ 'ಮಾಸದ' ಎಂಬ ಶಬ್ದದ ಅಪಲಿಖಿತವಿರಬೇಕು. ಅಲ್ಲದೆ ಕವಿಪಾಠ 'ಮಾಸರಮಾಗೆ' ಎಂದೇ ಇದ್ದಿರಬೇಕು. ಈ ಪದ್ಯವನ್ನು ಬರೆಯುವಾಗ ಆಂಡಯ್ಯನು ಕವಿರಾಜಮಾರ್ಗದ ೧-೪೬ರ ಪೂರ್ವೋಕ್ತಪದ್ಯವನ್ನು ನೆನಪು ಮಾಡಿಕೊಂಡಿರುವುದು ಕೂಡ ಸಾಧ್ಯ. 'ಕನ್ನಡಂಗಳ್' ಎಂಬುದರ ಆಶಯವೂ ಅಲ್ಲಿರುವಂತೆಯೇ ಎಂದು ತೋರುತ್ತದೆ. ಹಾಗಲ್ಲವಾದರೆ ದೇಶ್ಯ, ತದ್ಭವ (ಅಂಗೀಕೃತ) ಮತ್ತು ತದ್ಭವ (ಸ್ವಕಲ್ಪಿತ) ಎಂದೂ ಇರಬಹುದು. ಜೊತೆಗೆ ತಾನೇ ಹೊಸದಾಗಿ ರೂಢಿಸಿದ ಸಮಾಸಗಳೂ ಇರಬಹುದು.

ಇಲ್ಲಿಂದ ಮುನ್ನಡೆದರೆ ಈಶ್ವರ ಕವಿಯ (ಸು. ೧೫೦೦) ಕವಿಜಿಹ್ವಾಬಂಧನದ 'ಕನ್ನಡಗಳು' ಮಾತು ನಮ್ಮ ಗಮನ ಸೆಳೆಯುತ್ತದೆ. ಚತುರ್ಥಾಶ್ವಾಸದ ಮೊದಲ ನಾಲ್ಕು ಪದ್ಯಗಳು ಈ ವಿಷಯವನ್ನು ಹೇಳುತ್ತವೆ. ಅದು ಹೀಗೆ:

ಕನ್ನಡಗಳ ಬಗೆ ಸಾಸಿರ
ದಿನ್ನೂಱುಂ ಭೇದಮಕ್ಕುಮತ್ತವಱೊಳಗಂ
ಸನ್ನಿಧಿಯಾಗಯ್ದುಮನಱೆ
ಸನ್ನುತತರ ಕವಿತೆ ಪೇಳ್ವೆನೆಂಬರ್ ಜಗದೊಳ್ ॥

ಒಳುಗನ್ನಡ ಬೆಳುಗನ್ನಡ
ಪಳಗನ್ನಡ ದೇಶೀಯಂಗಳಾ ಕನ್ನಡಮುಂ
ತಿಳಿ ಸಕ್ಕಜಗನ್ನಡಮುಮ
ನಿಳೆಯೊಳ್ ಕವಿತಾಮಹಾತ್ಮೆಯಂ ಮೆಱೆವ್ವೆನರಂ ॥

ಸಂದರ್ಭಂ ಮೃದುಗನ್ನಡಂ ಱಟಿ ಕುಳಂ ತಾನೀಕ್ಷಿಸಲ್ ತೋರ್ಪನಿಸ್ಸಂದೇಹ ಕ್ಷಳ ಮಿ(ಶ್ರ) ಮೇಕಮನುಕೂಲಂ ಕಾರ್ಶ ಕಾಠಿಣ್ಯಮುಂ ನಿಂದಾ ಸಂಸ್ತುತಿ ಹಾಸ್ಯ (ರೋ)ಷ ಲಲಿತಾಪಭ್ರಂಶಭಾವಂ ರಸಂ ಸಂವಿರ್ದಾ ಬಹುಭೇದ ಕನ್ನಡಗಳಂ ಬಲ್ಲಂ ಕವೀಶಂ ದಿಟಂ

ಪಳೆಯೊಳುಗನ್ನಡಂ ವಿಶದ ತದ್ಭವ ತತ್ಸಮಮಚ್ಚಗನ್ನಡಂ
ಬೆಳುನುಡಿ ದೇಶಿ ಗ್ರಾಮ್ಯವಿನಿಗನ್ನಡಮಾ ಸೊಬಗುಂ ವಿಶಾಲ ಮುಂ
ತಿಳಿಯತಿ ಗೂಢ ಗನ್ನಡವನಾ ಮಱೆಗನ್ನಡ ಸಾರಗನ್ನಡಂ
ಗಳು ಮೊದಲಾದ ಸಾಸಿರದ ಮೇಲೆರಳ್ನೂಱುಮಿವಾದಿಯಾದವಂ ॥

ಈ ಗ್ರಂಥದ ಮೂರು ಮುದ್ರಣಗಳಲ್ಲಿ, ಎರಡರಲ್ಲಿ ಈ ಪದ್ಯಗಳಿದ್ದು, ಇವುಗಳ ವಿಮರ್ಶೆ ಅನುಪಯುಕ್ತವೇನೂ ಅಲ್ಲವೆಂದು ಇಲ್ಲಿ ತಿಳಿದು, ಈಗ ಅವುಗಳ ಆಶಯವನ್ನು ಗಮನಿಸಬಹುದಾಗಿದೆ.

ಕನ್ನಡಗಳ ಬಗೆ ೧೨೦೦, ಅವುಗಳಲ್ಲಿ ಒಳ್ಳೆಯ ನಿಧಿಯಾಗಿ ಒಳ್ಗನ್ನಡ, ಬೆಳ್ಗನ್ನಡ ಪಳಗನ್ನಡ, ದೇಶಿಕನ್ನಡ ಮತ್ತು ಸಂಸ್ಕೃತ ಕನ್ನಡ ಎಂಬ ಐದನ್ನು ಒಳ್ಳೆಯ ಕವಿತೆ ಬರೆಯಬೇಕೆನ್ನುವ ಕವಿ ಅವಶ್ಯವಾಗಿ ತಿಳಿಯಬೇಕು. ಇವುಗಳ ಸ್ವರೂಪವೇನು? ಅದನ್ನು ಊಹಿಸಿ ತಿಳಿಯಬೇಕಷ್ಟೆ. ಒಳ್ಗನ್ನಡವೆಂಬ ಮಾತು ಈಚೆಗೆ ಕವಿ ಕಂಠಹಾರವೆಂಬ (ಸು.ಕ್ರಿ.ಶ. ೧೬೪೦) ಕೋಶದಲ್ಲಿಯೂ (ಪ. ೧೨) ಬಂದಿದೆ.

೧. **ಒಳ್ಗನ್ನಡ** : ಪದ ಪ್ರಯೋಗ ವಾಕ್ಯರಚನೆಗಳಲ್ಲಿ ತಪ್ಪುನೆಪ್ಪುಗಳ ವಿವೇಚನೆಯ ವ್ಯಾಕರಣ ಶುದ್ಧವಾದ ಕನ್ನಡ.
೨. **ಬೆಳ್ಗನ್ನಡ** : ಶಬ್ದಾರ್ಥಾಲಂಕಾರಗಳ ಪ್ರೌಢಿಮೆಗೆ ಅವಕಾಶ ಕೊಡದೆ ಸರಳವೂ ಸಹಜವೂ ಆಗಿ ಬಳಸುವ ಆಡುಮಾತಿನ ಕನ್ನಡ.
೩. **ಪಳಗನ್ನಡ** : ಪಂಪ, ರನ್ನ ಮೊದಲಾದ ಪ್ರಾಚೀನ ಕವಿಗಳು ತಮ್ಮ ಕೃತಿಗಳ ರಚನೆಗೆ ಬಳಸಿದ ಹಳೆಯ ವ್ಯಾಕರಣ ರೂಢಿಯ ಕನ್ನಡ.
೪. **ದೇಸಿ ಕನ್ನಡ:** ಆಯಾ ಸ್ಥಳ ಭೇದದ ದೇಸಿಗೆ ಅನುಸಾರವಾಗಿ ಆಡುವ ಅಚ್ಚಕನ್ನಡ. ಇದು ಕನ್ನಡದ ಸ್ವಂತ ಶಬ್ದಗಳಿರಬಹುದು; ಬಹುಶಃ ತದ್ಭವ ಗಳಾಗಿಯೂ ಇರಬಹುದು.
೫. **ಸಂಸ್ಕೃತ ಕನ್ನಡ:** ಸಂಸ್ಕೃತದ ಶಬ್ದಗಳನ್ನು ಕನ್ನಡ ಭಾಷೆಯ ಸ್ವತಂತ್ರವಾದ ಲಕ್ಷಣಗಳಿಗೆ ಅನುಸಾರವಾಗಿ ಪರಿವರ್ತಿಸಿದ, ಬಹುಪ್ರಚುರವಾದ ಸಮಸಂಸ್ಕೃತ ವೆಂಬ ರೂಪದ ಕನ್ನಡ.

ಹಾಗೆ ನೋಡಿದರೆ, ಈ ಐದು ಬಗೆಯ ಕನ್ನಡ ಪದ ಪ್ರಯೋಗವೂ, ವಾಕ್ಯರಚನೆಯು ಕನ್ನಡ ಭಾಷೆಗೆ ಕೈವೊಕ್ಕ ನಿಧಿಯೆಂದೇ ಹೇಳಬೇಕು. ಇಲ್ಲಿಂದ ಮುಂದೆ ಬರುವ ಶಾರ್ದೂಲ ವಿಕ್ರೀಡಿತ ವೃತ್ತದಲ್ಲಿ ರಸ, ರೀತಿ, ಛಂದಸ್ಸುಗಳ ನೆಲೆಯಲ್ಲಿ ಕನ್ನಡದ ಬಗೆಗಳನ್ನು ಗುರುತಿಸುವ ಪ್ರಯತ್ನವಿದೆ. ದಿಟವಾಗಿ ಇದು ವ್ಯಾಕರಣದ ಅಕ್ಷಕೇಂದ್ರದಿಂದ ಸರಿದು ಅಲಂಕಾರ ಶಾಸ್ತ್ರದ ಪರಿಧಿಯಲ್ಲಿ ಮಾಡಿದ ವಿಚಾರವಾಗಿದೆ.

ಪಂಪ ತನ್ನ 'ಆದಿಪುರಾಣ' 'ಮೃದುಸಂದರ್ಭ'ವುಳ್ಳದು (೧–೨೬) ಎಂದಿರುವುದನ್ನು ನೋಡಿ ಊಹಿಸಬಹುದಾದರೆ, ಕಾವ್ಯದ ಸಂದರ್ಭಗಳನ್ನು ಮೃದುವಾಗಿ ಮನವರಿಕೆ ಮಾಡಿಕೊಡುವುದು ಮೃದುಗನ್ನಡ ಎನ್ನಬಹುದು. ಱಕಾರ–ಕುಳ–ಕ್ಷಳಗಳನ್ನು ಅಮಿಶ್ರವಾಗಿ ಮಿಶ್ರವಾಗಿ ಬಳಸುವ ಔಚಿತ್ಯವಿರುವುದು, ಸರಳವಾದುದು ಮತ್ತು ಪ್ರೌಢವಾದುದು ಎಂಬ ಪ್ರಯೋಗದ ತಿಳಿವಳಿಕೆಯಿರುವುದು, ನಿಂದೆ ಮತ್ತು ಸ್ತುತಿಯ ಮಾತುಗಾರಿಕೆ, ಹಾಸ್ಯ, ರೌದ್ರ ಶೃಂಗಾರ ಇವುಗಳ ಭಾವ ರಸಗಳ ನಿಷ್ಪತ್ತಿಗೆ ಅನುಗುಣವಾದ ಭಾಷೆ ಇವೆಲ್ಲ ಬಹು ಭೇದದ ಕನ್ನಡಕ್ಕೆ ಅವಕಾಶ ಮಾಡುವುದು. ಇನ್ನು ಮಾದರಿಯಾದ, ಶುದ್ಧವಾದ ಹಳಗನ್ನಡ, ತದ್ಭವ ತತ್ಸಮ, ಅಚ್ಚಗನ್ನಡ, ಸ್ವಾಭಾವಿಕವಾದ ಮಾತು, ದೇಸಿ, ಗ್ರಾಮ್ಯ, ಮಧುರವಾದ ಮಾತು ಸಾಲಂಕೃತವೂ ಸುಂದರವೂ ಆದ ಮಾತು, ದೀರ್ಘಸಮಾಸಗಳ ವಾಗ್ರೂಢಿ, ಸುಲಭವಾಗಿ ಅರ್ಥವಾಗದಿರುವ ಪದಪುಂಜಗಳಿಂದ ಕೂಡಿರುವ ಗೂಢಗನ್ನಡ, ವರ್ಣಚಿತ್ರ, ಬಂಧಚಿತ್ರ ಪ್ರಹೇಳಿಕಾದಿ ಚಿತ್ರಕಾವ್ಯ ಪ್ರಭೇದಗಳಿಂದ ವ್ಯಕ್ತಾರ್ಥವನ್ನು ಮರೆಮಾಡಿ, ಬರವಣಿಗೆ ಮಾಡುವ ಮರೆಗನ್ನಡ, ಸಾರಾಂಶವಾಗಿ, ಎಂದರೆ ತಿರುಳು ತೆಗೆದಿಟ್ಟಂತೆ ಬರವಣಿಗೆ ಮಾಡುವ ಸಾರಗನ್ನಡ – ಈ ಮೊದಲಾದವುಗಳಿಂದ ಕನ್ನಡ ೧೨೦೦ ಬಗೆಗಳಲ್ಲಿವೆ ಎನ್ನುವುದು ಈಶ್ವರ ಕವಿಯ ಗ್ರಹಿಕೆ. ಆ ಮೂಲಕ ಕನ್ನಡ ಭಾಷೆಯ ವಾಗ್ರೂಢಿಗಳ ಕಾವ್ಯಶೈಲಿಯ ಅತಿಶಯತೆಯನ್ನೇ ಆತನು ಹೇಳಲು ಹೊರಟಿದ್ದಾನೆ; ಕನ್ನಡದ ಪ್ರಾದೇಶಿಕ ಭೇದಗಳಾಗಲಿ, ಉಪಭಾಷೆಗಳಾಗಲಿ ಆತನ ವಿವಕ್ಷೆಯಲ್ಲಿ ಇಲ್ಲ.

ಹಳೆಯ ಪ್ರಯೋಗಗಳಲ್ಲಿ 'ಮಱೆಗನ್ನಡ' ಎಂಬ ಮಾತು ಕುಮಾರವ್ಯಾಸ ಭಾರತದ ಉದ್ಯೋಗ ಪರ್ವದಲ್ಲಿದೆ (೮–೩೮). ಪಂಪ ಕವಿಯ 'ತಿರುಳ ಕನ್ನಡ' (ಪಂಪಭಾರತ ೧೪–೫೮) ರನ್ನನಲ್ಲಿ ಕೂಡ (ಗದಾಯುದ್ಧ ೧–೪೨) ಕಂಡುಬರುತ್ತಿದ್ದು, ಅದು 'ಸಾರಗನ್ನಡ' ಎಂಬ ಮಾತನ್ನು ನೆನಪಿಗೆ ತರುತ್ತದೆ. ಚಿಕುಪಾಧ್ಯಾಯ ಕವಿ ತನ್ನ 'ಚಿತ್ರಶತಕ ಸಾಂಗತ್ಯ'ದಲ್ಲಿ ಕನ್ನಡ ಮಾತಿನ ವಿವಿಧಾರ್ಥಗಳಿಂದ ಉಂಟಾಗುವ ಚಮತ್ಕಾರಗಳನ್ನು ಕುತೂಹಲಕರವಾಗಿ ನಿರೂಪಿಸಿದ್ದಾನೆ. ಇದನ್ನು 'ಚಿತ್ರಗನ್ನಡ'ವೆನ್ನಬಹುದೇನೋ!


ಈಗ ಕನ್ನಡ ಅವಸ್ಥಾಭೇದಗಳನ್ನಾಗಿ ಹಳಗನ್ನಡ, ನಡುಗನ್ನಡ (ಮಧ್ಯಕಾಲೀನ ಕನ್ನಡ) ಮತ್ತು ಹೊಸಗನ್ನಡ ಎಂಬ ಶಬ್ದಗಳನ್ನು ತಿಳಿಯುತ್ತಿದ್ದರೂ, ಪ್ರಾಚೀನ ಕವಿ ಪ್ರಯೋಗಗಳಲ್ಲಿ ನಡುಗನ್ನಡ ಎಂಬುದರ ಬಳಕೆಯಿಲ್ಲ. ಹಳಗನ್ನಡ ಮತ್ತು ಹೊಸಗನ್ನಡ ಎಂಬವು ಪೞಗನ್ನಡ, ಪೊಸಗನ್ನಡ ಎಂಬ ರೂಪಗಳಲ್ಲಿ ಕವಿರಾಜಮಾರ್ಗದ ಕಾಲದಿಂದಲೂ ಬಳಕೆಯಲ್ಲಿದ್ದು, ಅವುಗಳ ಅರ್ಥಗಳನ್ನು–ಅರ್ಥಾಂತರಗಳನ್ನು ಕುರಿತು ಸಾಕಷ್ಟು ಚರ್ಚೆಗಳು ನಡೆದಿವೆ. ಅಂದಂದಿನ ಕನ್ನಡ ಭಾಷೆ ಹೊಸಗನ್ನಡವೆಂದೂ, ಅದಕ್ಕೆ ಹಳೆಯದು ಹಳಗನ್ನಡವೆಂದೂ ತಿಳಿಯುವ ಹಾಗೆ ನಮ್ಮ ಪ್ರಾಚೀನ ಕವಿಗಳ ಪ್ರಯೋಗಗಳಿವೆ.

ಈಗ ಪ್ರಚಾರದಲ್ಲಿ ತಿಳಿಗನ್ನಡ, ಸಿರಿಗನ್ನಡ, ಸವಿಗನ್ನಡ ಎಂಬ ತೆರನ ಮಾತುಗಳು ಸ್ಪಷ್ಟವಾದ ಅರ್ಥಗಳೊಂದಿಗೆ ಕಾಣುತ್ತಿವೆ. ಹೀಗೆಯೇ ಮುದುಗನ್ನಡ (ರೂಢಿ ತಪ್ಪಿದ ಕನ್ನಡ), ಎಳಗನ್ನಡ (ಬಾಲಿಶವಾದ ಬರಹದ ಕನ್ನಡ), ಚೆಲುಗನ್ನಡ (ಇನಿಗನ್ನಡ

ಎಂಬಂತೆಯೇ), ನೆಲೆಗನ್ನಡ (ಸ್ಥಿರವಾಗಿ ನೆಲಸಿದ ಕನ್ನಡ), ಬೆಳೆಗನ್ನಡ (ವರ್ಧಿಷ್ಣುವಾದ ಶೈಲಿಯ ಕನ್ನಡ), ಕೊಳೆಗನ್ನಡ (ಶೀಲಾಶ್ಲೀಲ ವಿವೇಚನೆಯಿಲ್ಲದೆ ಬಳಸುವ ಅಸಭ್ಯವಾದ ಮಾತಿನ ಕನ್ನಡ), ಗಟ್ಟಿಕನ್ನಡ (ಪ್ರೌಢವಾದ, ಬಿಕ್ಕಟ್ಟಾದ ಬಂಧದ ಕನ್ನಡ), ತಪ್ಪುಗನ್ನಡ (ವ್ಯಾಕರಣ ಶುದ್ಧವಲ್ಲದ ಕನ್ನಡ) ಇಂತಹ ಮಾತುಗಳನ್ನು ಟಂಕಿಸಲು ಅವಕಾಶವಿದೆ.

ಗಟ್ಟಿಗನ್ನಡವೆಂಬ ಮಾತಿಗೆ ಪ್ರತಿಯಾಗಿ ತೆಳುಗನ್ನಡ (ಸಡಿಲವಾದ ಬಂಧದ ಕನ್ನಡ) ಎಂಬ ಮಾತನ್ನು ಕಲ್ಪಿಸಬಹುದು. ತಪ್ಪುಗನ್ನಡ ಎಂಬ ಮಾತಿಗೆ ಪ್ರತಿಯಾಗಿ ಈ ಹಿಂದೆಯೇ ನಯಸೇನನು ಶುದ್ಧವಾದ ಕನ್ನಡ ಎಂಬ ಮಾತನ್ನು 'ಸುದ್ದಗನ್ನಡ' ಎಂಬ ರೂಪದಲ್ಲಿ ಬಳಸಿಯೇ ಇದ್ದಾನೆ. ಇಲ್ಲಿ ಈ ಮಾತಿಗೆ ದೇಶ್ಯ ತದ್ಭವಗಳ ಅಚ್ಚಕನ್ನಡವೆಂಬ ಅಭಿಪ್ರಾಯವಿರುವಂತಿದೆ. ಕೇಶಿರಾಜನು ಶಬ್ದಮಣಿ ದರ್ಪಣದ 'ಅಪಭ್ರಂಶ ಪ್ರಕರಣ'ದಲ್ಲಿ ಬಳಸಿರುವ 'ಅಚ್ಚಗನ್ನಡ'ವೆಂಬ ಮಾತಿನಲ್ಲಿ (ಸೂತ್ರ ೩೧೪) ಇದೇ ಆಶಯವನ್ನಿಟ್ಟಿದ್ದಾನೆ; ಅವನು ಪ್ರತ್ಯೇಕವಾಗಿ ಹೇಳುವ ೨೧ ತತ್ಸಮ ಶಬ್ದಗಳೆಂಬವು, ಬಹುಶಃ ಹೆಚ್ಚಿನವು ದೇಶ್ಯಗಳೆಂದೇ ತಿಳಿಯಲವಕಾಶವಿದೆ.

ಹೀಗೆಯೇ ಮುದುಗನ್ನಡವೆಂಬುದರ ಎದುರಿಗೆ ನಿಲ್ಲುವಂತೆ 'ಮೈಸೂರು ಮೈಸಿರಿ' (ಟಿ. ಶ್ರೀನಿವಾಸ ರಂಗಾಚಾರ್ಯ, ೧೯೩೩) ಕೃತಿ ಕರ್ತೃ 'ಬಳಕೆಗನ್ನಡ' ಎಂಬ ಮಾತನ್ನು ಬಳಸಿರುವುದನ್ನು (೧-೯) ನೆನೆಯಬಹುದಾಗಿದೆ.



'ಎಡೆ' ಎಂಬ ಶಬ್ದಾರ್ಥ

■ **ಡಾ. ದೇವರ ಕೊಂಡಾರೆಡ್ಡಿ**

ಕರ್ನಾಟಕದ ಗ್ರಾಮಗಳ ಹೆಸರುಗಳನ್ನು ಪರಿಶೀಲಿಸಿದಾಗ ಯಡೆಹಳ್ಳಿ, ಯಡಹಳ್ಳಿ, ಯಡಗುಡ್ಡೆ, ಯಡಕುಮರಿ, ಎಡೂರು ಯಡಗೌಡನಹಳ್ಳಿ, ಯಡೆಯಾಪುರ, ಎಡವನಾಡು, ಯಡಗಾನಹಳ್ಳಿ ಯಡಕೊಳ, ಯಡೆಯೂರು, ಯಡವನಹಳ್ಳಿ ಮುಂತಾದ ಗ್ರಾಮನಾಮ ವಾಚಿಗಳು ನಮ್ಮ ಗಮನ ಸೆಳೆಯುತ್ತವೆ. ಇವುಗಳ ಅರ್ಥವನ್ನು ತಿಳಿದುಕೊಳ್ಳುವ ಪ್ರಯತ್ನ ಈ ಲೇಖನದ ಉದ್ದೇಶ. ಕರ್ನಾಟಕದಾದ್ಯಂತ ಕಂಡು ಬರುವ ಈ ಗ್ರಾಮವಾಚಿಗಳು ನೀಡುವ ಅರ್ಥವೇನು ಎಂಬ ಕುತೂಹಲ ಬಹು ಹಿಂದಿನಿಂದ ಕಾಡುತ್ತಿತ್ತು. ಸಿದ್ಧವಾಗಿರುವ ನಿಘಂಟುಗಳನ್ನು ತೆಗೆದು ನೋಡಿದಾಗ ಎಡ, ಎಡೆ ಎಂಬ ಶಬ್ದಗಳು ವಾಕ್ಯಗಳಲ್ಲಿ ಪ್ರಯೋಗವಾಗಿರುವ ಹಿನ್ನೆಲೆಯಲ್ಲಿ ನೋಡಿದಾಗ ಎಡ=ವಾಮಭಾಗ, ಮರಿ; ಎಡಗ=ಸಲ್ಲದವನು ಕೆಲಸಕ್ಕೆ ಬಾರದವನು; ಎಡರ್ಗೇಡಿ=ವಿನಾಯಕ; ಎಡವ=ಗೋವಳ ಗೋಪಾಲ; ಎಡವ=ನಾಡಾಡಿ; ಎಡಹುಗುಳಿ=ಎಡವುದನ್ನೇ ಕಾಯಕ ವನ್ನಾಗಿ ಉಳ್ಳವನು; ಎಡೆಹೊತ್ತು=ಸಮಯವಲ್ಲದ ಸಮಯ; ಎಡೆಗಂಡಿಕೆ=ಮಂತ್ರವಾದಿ; ಎಡೆಗೈ=ಊಟಕ್ಕೆ ಬಡಿಸು ಎಂಬ ಅರ್ಥಗಳಿದ್ದರೆ ಡ್ರವಿಡಿಯನ್ ಎಟಿಮಾಲಜಿ ಡಿಕ್ಷನರಿಯಲ್ಲಿ ಎಡೆ=proximity=ಸಾಮಾನ್ಯ, ಸಾನಿಧ್ಯ; ಎಡ=ಇಡಂ(ತ) ಎಡಭಾಗ; ಇಡೈ(ತ)=the herdsmen caste, ಇಡೈಯರ್=men of herdsmen caste inhabiting the mullai comunity; ಇಡಂ(ತ) = place, room, spot, opportunity; ಇಡಂ(ತ)=wide space, auspicious time; ಎಡೆ(ಕೊಡ)=the company or proximity of a person ಎಂಬರ್ಥಗಳಿವೆ.



ಈ ಮೇಲಿನ ನಿಘಂಟಿನ ಅರ್ಥಗಳನ್ನು ಗಮನಿಸಿದಾಗ ಇವುಗಳಿಂದ ಈ ಶಬ್ದಕ್ಕೆ ಸ್ಥಳ, ಹೊತ್ತು, ಎಡಭಾಗ ಮುಂತಾದ ಅರ್ಥಗಳನ್ನು ನೀಡಿದ್ದಾರೆಯೇ ಹೊರತು ಇನ್ನೂ ಇದ್ದಿರಬೇಕಾದ ಅರ್ಥಗಳನ್ನು ನೀಡಲಿಲ್ಲವೆಂದೇ ನನ್ನ ಭಾವನೆ. ಎಡಶಬ್ದದ 'ಡ'ಕಾರವು 'ಳ'ಕಾರದಿಂದ ನಿಷ್ಪನ್ನವಾಗಿದೆಯೆಂದು ಯೋಚಿಸಿದಲ್ಲಿ ಇದಕ್ಕೆ ಮರಿ ಎಂಬ ಅರ್ಥವೂ ಹೊಮ್ಮುತ್ತದೆ. ಶಾಸನಗಳನ್ನು ಪರಿಶೀಲಿಸಿದಾಗ ಕ್ರಿ.ಶ. ೮ನೆಯ ಶತಮಾನದಿಂದಲೇ ಈ ಶಬ್ದ, ಶಾಸನಗಳಲ್ಲಿ ಕಾಣಬರುತ್ತದೆ. ನಂಜನಗೂಡು ತಾಲ್ಲೂಕಿನ ಶಾಸನಗಳನ್ನು ಗಮನಿಸಿದಾಗ 'ಎಡೆನಾಡು' ಎಂಬ ಶಬ್ದವೇ ಪ್ರಾಚೀನವಾದದ್ದು. ಎಡೆಯೂರು ಎಂಬ ಶಬ್ದವೂ ಕ್ರಿ.ಶ. ೯೮೭ರ ಶಾಸನದಲ್ಲಿ ಕಂಡು ಬಂದಿದೆ (ECXI(2)ಮೊ ೪೦) ವ್ಯಕ್ತಿಗತ ವಾಗಿ ಎಡಯ್ಯ, ಎಡವಯ್ಯ ಎಂಬ ಹೆಸರುಗಳು ಕ್ರಿ.ಶ. ೧೦೦೦ಕ್ಕೆ ಹಿಂದೆಯೇ (ECXII ಶಿರಾ. ೪೩) ದೊರೆಯುತ್ತವೆ.

ಮೇಲೆ ತಿಳಿಸಿರುವ ಉದಾಹರಣೆಗಳಲ್ಲದೆ ಯಡೆಯೂರು ಮತ್ತು ಕೆಳದಿ ಅರಸರಿಗಿದ್ದ 'ಎಡವ ಮುರಾರಿ' ಎಂಬ ಬಿರುದಿನ ಕಡೆಗೆ ವಿದ್ವಾಂಸರ ಗಮನ ಸೆಳೆಯುತ್ತೇನೆ. ಯಡೆಯೂರಿಗೆ ಸಿದ್ಧಲಿಂಗೇಶ್ವರರು ಬರುವುದಕ್ಕೆ ಮೊದಲು ಕಗ್ಗಲ್ಲು ಎಂಬ ಹೆಸರಿತ್ತೆಂದು ಶಾಸನದಿಂದ ತಿಳಿದು ಬರುವ ವಿಷಯ. ಹಾಗೆಯೇ ಆನೇಕಲ್ ತಾಲ್ಲೂಕಿನ ಎಡವನಹಳ್ಳಿ ಎಂಬಲ್ಲಿಯೂ ಒಂದು ಶಿವದೇವಾಲಯವಿದ್ದು, ಅದರ ನಾಲ್ಕು ಮೂಲೆಗಳಲ್ಲಿ ಲಿಂಗಮುದ್ರೆ ಕಲ್ಲುಗಳನ್ನು ಸ್ಥಾಪಿಸಲಾಗಿದೆ. ಈ ಊರಿನಲ್ಲಿ ವೀರಶೈವ ಜಂಗಮರ ಮನೆಗಳಿವೆ. ಎಡೂರು (ಅಥಣಿ ತಾಲ್ಲೂಕು) ಸಹ ವಿರೂಪಾಕ್ಷ ದೇವಾಲಯ ಹೊಂದಿದೆ. ಈ ಉದಾಹರಣೆಗಳನ್ನು ಗಮನಿಸಿದಾಗ ಈ ಗುಂಪಿಗೆ ಎಡತೊರೆ ಎಡೆನಾಡು, ನಾಡವಾಚೆಗಳನ್ನು ಸೇರಿಸುವುದಿಲ್ಲ. ಈ ಉದಾಹರಣೆಗಳಲ್ಲಿ ಬಂದಿರುವ ಆರಂಭದ ಸ್ವರವು ಅರೆಸ್ವರವಾದ ಯಕಾರವಾಗಿಯೂ ಪರಿವರ್ತಿತವಾಗಿರುತ್ತದೆ.

ಹಿಂದೊಮ್ಮೆ ಕ್ಷೇತ್ರ ಕಾರ್ಯಕ್ಕೆ ಹೋದಾಗ ಕೊಡಗಿನಲ್ಲಿ ಯಡವನಾಡು ಎಂಬ ಹೆಸರಿನ ವಿಭಾಗವೊಂದಿದ್ದುದು ನನ್ನ ಗಮನಕ್ಕೆ ಬಂತು. ಕುತೂಹಲದಿಂದ ವಿಚಾರಿಸ ಹತ್ತಿದಾಗ ಕೊಡವರಲ್ಲಿ ಎಡೆಕೊಡವ ಎಂಬ ಉಪಪಂಗಡವೊಂದು ಇರುವುದಾಗಿ ತಿಳಿಯಿತು. ಈ ಶಬ್ದದ ಅರ್ಥದ ಬಗ್ಗೆ ಅಲ್ಲಿನ ಹಳಬರನ್ನು ವಿಚಾರಿಸಿದಾಗ ಅವರು ನೀಡಿದ ಉತ್ತರದಿಂದ ನನ್ನ ಕುತೂಹಲ ಇನ್ನೂ ಕೆರಳಿತು. ಏಕೆಂದರೆ 'ಎಡೆಕೊಡವ' ಎಂದರೆ ವೀರಶೈವ ಮತದ ಪ್ರಭಾವಕ್ಕೆ ಬಿದ್ದವರಂತೆ. ಇದಕ್ಕೆ ಪುಷ್ಟಿ ನೀಡುವಂತೆ ಎಡವನಾಡು ಸೋಮವಾರ ಪೇಟೆಯ ಭಾಗವಾಗಿರುವುದರಿಂದ ಈ ಪ್ರದೇಶದಲ್ಲಿ ವೀರಶೈವರ ಸಂಖ್ಯೆಯೂ ಜಾಸ್ತಿ. ಹಾಗೆಯೇ ಕೆಳದಿ ಅರಸರು ವೀರಶೈವರಾಗಿದ್ದು ಅವರಿಗಿದ್ದ 'ಎಡವ ಮುರಾರಿ' ಎಂಬ ಶಬ್ದವೂ ಸಹ 'ವೀರಶೈವರನ್ನು ಉದ್ಧಾರ ಮಾಡುವ ವಿಷ್ಣು' ಎಂದು ಅರ್ಥವಾಗುತ್ತದೆ. ಈ ಹಿನ್ನೆಲೆಯಲ್ಲಿ ಎಡೆಯೂರು ಎಂಬ ಶಬ್ದವೂ ವೀರಶೈವ ಸಿದ್ಧಾಂತಿ ಸಿದ್ಧಲಿಂಗೇಶ್ವರರು ಅಂತಿಮವಾಗಿ ನೆಲೆಸಿದ ಕಗ್ಗಲ್ಲು, ಎಡೆಯೂರು ಎಂಬ ಹೆಸರನ್ನು ಪಡೆದದ್ದು, ಅಥಣಿ ತಾಲೂಕಿನ ವೀರಶೈವ ಕ್ಷೇತ್ರವು ಎಡೂರು ಆಗಿದ್ದು ಈ ಹಿನ್ನೆಲೆಯಲ್ಲಿಯೇ. ಈ ಹಿನ್ನೆಲೆಯಲ್ಲಿ ಯೋಚಿಸಿದಾಗ 'ವೀರಶೈವ' ಶಬ್ದಕ್ಕೆ


ಪರ್ಯಾಯವಾಗಿ 'ಎಡೆ' ಎಂಬ ಶಬ್ದವನ್ನೂ ಬಳಸಿರುವಂತೆ ಕಾಣುತ್ತದೆ. ಕೆಳದಿ ನೃಪವಿಜಯದಲ್ಲಿ 'ಎಡವ ಸಿದ್ದಪ್ಪ' ಎಂಬ ವ್ಯಕ್ತಿಯ ಉಲ್ಲೇಖವೂ ಬಂದಿದೆ. (ಆ. ೧೦-೨೨ ವಚನ...) ಹೀಗಾಗಿ ಎಡೆ, ಎಡೆಯೂರು, ಎಡವ ಈ ಶಬ್ದಗಳು ವೀರಶೈವ ಎಂಬ ಅರ್ಥವನ್ನು ನೀಡುತ್ತವೆ.

ಕ್ರಿ.ಶ. ೧೬ನೆಯ ಶತಮಾನದ ನಂತರ ಸ್ಥಾಪಿತವಾದ ಅನೇಕ ಗ್ರಾಮಗಳು 'ಎಡೆ' ಎಂಬ ಹೆಸರಿನಿಂದ ಆರಂಭವಾಗಿದ್ದು, ಇದು ವೀರಶೈವರು ವಾಸಿಸುವ ಅಥವಾ ವೀರಶೈವ ಬಾಹುಳ್ಯದ ಹಳ್ಳಿ ಎಂಬ ಅರ್ಥದಲ್ಲಿ ಬಳಕೆಯಾಗಿದೆ. ಹೀಗಾಗಿ ವೀರಶೈವರು ಶಬ್ದಕ್ಕೆ ಪರ್ಯಾಯವಾಗಿ 'ಎಡೆ' ಎಂಬ ಶಬ್ದದ ಬಳಕೆಯಾಗಿದೆ.

ಈ 'ಎಡೆ' ಎಂಬ ಶಬ್ದವು ವೀರಶೈವರಿಗೆ ಬರಲು ಕಾರಣಗಳನ್ನು ಈ ಕೆಳಗಿನಂತೆ ಊಹಿಸಬಹುದು.

೧. ಇಷ್ಟಲಿಂಗ ಶಿವಪೂಜೆ ಸಮಯದಲ್ಲಿ ಎಡಗೈಲಿ ಇಷ್ಟಲಿಂಗವನ್ನು ಹಿಡಿದು ಕೊಳ್ಳುವುದರಿಂದ ಈ ಹೆಸರು ಬಂದಿರಬಹುದು.
೨. ಇವರ ತತ್ವಗಳಲ್ಲಿ ದಾಸೋಹವು ಮುಖ್ಯವಾಗಿರುವುದರಿಂದ (ಎಡೆ ನೀಡುವುದು) ಈ ಹೆಸರು ಬಂದಿರಬಹುದು.

ಒಟ್ಟಿನಲ್ಲಿ ಎಡೆ, ಎಡವ ಈ ಶಬ್ದಗಳು ವೀರಶೈವಕ್ಕೆ ಪರ್ಯಾಯವಾಗಿ ಬಳಕೆಯಾಗಿವೆ ಎಂಬುದು ಶಾಸನ ಸಾಹಿತ್ಯ, ಈಗ ಅಸ್ತಿತ್ವದಲ್ಲಿರುವ ಗ್ರಾಮ-ನಾಮ ವಾಚಿ, ಸಾಹಿತ್ಯಾಧಾರ ಗಳಿಂದ ತಿಳಿಯಬಹುದು.




ಕನ್ನಡ ಕಾವ್ಯಮೀಮಾಂಸೆ

■ ಡಾ. ಜಿ.ಎಂ. ಹೆಗಡೆ

ಪ್ರಾಚೀನ ಪರಂಪರೆಯಲ್ಲಿ ಬೆಳೆದುಬಂದ ಕಾವ್ಯಮೀಮಾಂಸೆ ಕಾವ್ಯಾರ್ಥ ಚಿಂತನಕ್ಕೆ ತಾತ್ತ್ವಿಕ ನೆಲೆಯನ್ನು ಒದಗಿಸಿದೆ. ಕಾವ್ಯದ ಸೃಷ್ಟಿವಿಧಾನದಿಂದ ಕವಿಕಾವ್ಯ ಪ್ರಯೋಜನದವರೆಗಿನ ಕಾವ್ಯತತ್ತ್ವ ವಿವೇಚನೆಯೇ ವಿಶಾಲವಾದ ಅರ್ಥದಲ್ಲಿ ಕಾವ್ಯಮೀಮಾಂಸೆಯಾಗಿದೆ.[1] ಪಾಶ್ಚಾತ್ಯರಲ್ಲಿ ಕಾವ್ಯಮೀಮಾಂಸೆಯ ಜೊತೆಗೆ ಕಾವ್ಯವಿಮರ್ಶೆಯೂ ಬೆಳೆದುಬಂದಿದೆ. ಭಾರತೀಯ ಕಾವ್ಯಮೀಮಾಂಸೆಯ ಜೊತೆಗೆ ಕಾವ್ಯವಿಮರ್ಶೆಯ ಪರಂಪರೆ ರೂಪುಗೊಳ್ಳದಿರುವುದಕ್ಕೆ ಪ್ರಾಚೀನ ಭಾರತೀಯ ತತ್ತ್ವಶಾಸ್ತ್ರದ ದೃಷ್ಟಿಕೋನವೇ ಮುಖ್ಯ ಕಾರಣವಾಗಿದೆ. ಭಾರತೀಯ ಸಂದರ್ಭದಲ್ಲಿ ಅಲಂಕಾರಶಾಸ್ತ್ರವೆಂದು ಪ್ರಚಾರದಲ್ಲಿದ್ದ ಕಾವ್ಯಶಾಸ್ತ್ರವು ಮುಂದೆ ಕಾವ್ಯಮೀಮಾಂಸೆಯಾಗಿ ಜನಪ್ರಿಯವಾಗಿದೆ.

ಕಾವ್ಯಮೀಮಾಂಸೆ ಶಾಸ್ತ್ರವಾದರೂ ಮುಖ್ಯವಾದ ಶಾಸ್ತ್ರಗಳ ಸಾಲಿನಲ್ಲಿ ಸೇರುವುದಿಲ್ಲ. ಶ್ರುತಿ, ಸ್ಮೃತಿ, ಇತಿಹಾಸಗಳ ಪಟ್ಟಿಯಲ್ಲಾಗಲೀ, ವೇದದ ಷಡಂಗಗಳಾದ ಶಿಕ್ಷಾ, ವ್ಯಾಕರಣ ಛಂದಸ್ಸು, ನಿರುಕ್ತ, ಜ್ಯೋತಿಷ, ಕಲ್ಪಗಳಲ್ಲಾಗಲೀ ನ್ಯಾಯ, ವೈಶೇಷಿಕ ಸಾಂಖ್ಯ, ಯೋಗ, ಪೂರ್ವಮೀಮಾಂಸೆ, ಉತ್ತರಮೀಮಾಂಸೆಗಳೆಂಬ ಆರು ದರ್ಶನಗಳಲ್ಲಾಗಲೀ ಕಾವ್ಯಮೀಮಾಂಸೆ ಸೇರಿಲ್ಲ. ಆದರೂ ಇವುಗಳಲ್ಲಿ ಕಾವ್ಯಮೀಮಾಂಸೆ ಅಂತಸ್ಥವಾಗಿದೆ. ಇತಿಹಾಸಕಾವ್ಯವಾದ ಮಹಾಭಾರತ ಶಾಂತರಸ ಪ್ರತಿಪಾದನೆಯ ಮೂಲವೆಂದು ಶಾಸ್ತ್ರಕಾರರು ಒಪ್ಪಿಕೊಂಡಿರುವುದನ್ನು ಷಡ್‌ದರ್ಶನಗಳಲ್ಲೊಂದಾದ ಉತ್ತರಮೀಮಾಂಸೆ ಅಥವಾ



ವೇದಾಂತ ದರ್ಶನದಲ್ಲಿ ಬ್ರಹ್ಮಾನಂದವೇ ಪರಮ ಲಕ್ಷ್ಯವಾಗಿದ್ದು, ರಸವನ್ನು ಇದರೊಂದಿಗೆ ಕಾವ್ಯಮೀಮಾಂಸಕರು ಸಮೀಕರಿಸುವುದರಿಂದ, ಕಾವ್ಯಮೀಮಾಂಸೆ ಇವುಗಳಲ್ಲಿ ಅಂತರ್ಗತವಾಗಿರುವದನ್ನು ಕಾಣಬಹುದು.

ಕಾವ್ಯಮೀಮಾಂಸೆಯಲ್ಲಿ ಶಬ್ದ, ಅರ್ಥ, ಗುಣ, ಅಲಂಕಾರ, ರೀತಿ, ವೃತ್ತಿ, ರಸ, ಧ್ವನಿ ವಿಚಾರಗಳೇ ಮುಖ್ಯ ವಿಷಯಗಳಾಗಿವೆ. ಭಾರತೀಯರು ಶಬ್ದ-ಅರ್ಥಗಳನ್ನು ದೇಹಕ್ಕೂ ರಸ-ಧ್ವನಿಗಳನ್ನು ಆತ್ಮಕ್ಕೂ ಹೋಲಿಸುತ್ತ ಬಂದಿದ್ದಾರೆ. ಕಾವ್ಯದ ಮುಖ್ಯ ಪ್ರಭೇದವಾದ ದೃಶ್ಯ-ಶ್ರವ್ಯಗಳೆರಡರಲ್ಲೂ ಕಾವ್ಯಮೀಮಾಂಸೆ ಅಂತಸ್ಥವಾಗಿದೆ. ಭಾರತೀಯರಿಗೆ ಜೀವನಾದರ್ಶವೇ ಕಾವ್ಯಾದರ್ಶವಾದುದರಿಂದ ಕಾವ್ಯದ ಪರಮಗುರಿಯಾದ ಪುರುಷಾರ್ಥ ಸಾಧನೆಗೆ ಸಂಬಂಧಿಸಿದ ಎಲ್ಲ ಶಾಸ್ತ್ರಗಳೂ ಕಾವ್ಯಮೀಮಾಂಸೆಗೆ ಪೂರಕಗಳೇ.[2] 'ಸದ್ಯಃ ಪರನಿರ್ವೃತಿ'ಯೊಡನೆ 'ಶಿವೇತರಕ್ಷತಿ'ಯನ್ನೂ ಕಾವ್ಯಪ್ರಯೋಜನದಲ್ಲಿ ಹೇಳಿರುವುದೂ, ಪ್ರತಿಭೆ ಜನ್ಮಜನ್ಮಾಂತರದ ಸಂಸ್ಕಾರಫಲವೆಂದು ಹೇಳುವುದೂ ಭಾರತೀಯ ಜೀವನದೃಷ್ಟಿ ಕಾವ್ಯಮೀಮಾಂಸೆಯಲ್ಲಿ ವ್ಯಕ್ತವಾದುದಕ್ಕೆ ನಿದರ್ಶನವಾಗಿದೆ. ಇದೇ ರೀತಿಯಲ್ಲಿ ಪಾಶ್ಚಾತ್ಯ ಕಾವ್ಯಮೀಮಾಂಸೆಯೂ ಪಾಶ್ಚಾತ್ಯರ ಲೌಕಿಕ ಜೀವನದೃಷ್ಟಿಯ ಪ್ರತೀಕವಾಗಿ ಪ್ರಕಟವಾಗಿರುವುದನ್ನು ನಾವು ನೋಡಬಹುದು.

ಭಾರತೀಯ ಕಾವ್ಯಮೀಮಾಂಸೆಯ ಆದ್ಯ ಗ್ರಂಥವಾದ ಭರತಮುನಿಯ ನಾಟ್ಯಶಾಸ್ತ್ರ ಮತ್ತು ಪಾಶ್ಚಾತ್ಯ ಕಾವ್ಯಮೀಮಾಂಸೆಯ ಅಡಿಗಲ್ಲಾದ ಅರಿಸ್ಟಾಟಲನ Poetics ದೃಶ್ಯಕಾವ್ಯ ಮೀಮಾಂಸೆಯ ಮುಖ್ಯ ಕೃತಿಗಳಾಗಿದ್ದರೂ, ಶ್ರವ್ಯಕಾವ್ಯ ಮೀಮಾಂಸೆಯನ್ನು ಅವು ನಿರೂಪಿಸುತ್ತವೆ. ಭರತಮುನಿ ಹೇಳಿದ 'ಅವಸ್ಥಾನುಕೃತಿರ್ನಾಟ್ಯಂ' ಹಾಗೂ ಅರಿಸ್ಟಾಟಲನು ಹೇಳಿದ ರುದ್ರನಾಟಕವು 'ಗಂಭೀರವಾದ - ಸ್ವಲ್ಪ ವಿಶಾಲವಾದ ಕಾರ್ಯವೊಂದರ ಅನುಕರಣ' ಎಂಬ ಮಾತೂ ಕಾವ್ಯಮೀಮಾಂಸೆಯ ವಿವೇಚನೆಯಲ್ಲಿ ಮುಖ್ಯವಾದದ್ದು. ಭರತನ ರಸತತ್ತ್ವವೂ, ಅರಿಸ್ಟಾಟಲನ ಭಾವವಿರೇಚನ (Catharsis) ಸಿದ್ಧಾಂತವೂ ಮುಂದಿನ ಕಾವ್ಯಮೀಮಾಂಸೆಗೆ ತಳಹದಿಯಾಗಿವೆ. 'ಅಪಾರೇ ಕಾವ್ಯ ಸಂಸಾರೇ ಕವಿರೇವಃ ಪ್ರಜಾಪತಿಃ' ಎಂದು ಹೇಳಿದ ಭಾರತೀಯರು ಕಾವ್ಯಸೃಷ್ಟಿಯು ಬ್ರಹ್ಮಸೃಷ್ಟಿಗಿಂತ ಮಿಗಿಲಾದದ್ದು ಎಂದು ಹೇಳಿದರು.

ಭಾರತೀಯ ಕಾವ್ಯಮೀಮಾಂಸೆ ಮುಖ್ಯವಾಗಿ ಸಿದ್ಧಾಂತ ಪ್ರಧಾನವಾದದ್ದು. ಭರತನ ನಂತರದ ಆಲಂಕಾರಿಕರಾದ ಭಾಮಹ, ದಂಡಿ ವಾಮನ, ರುದ್ರಟ ಇವರು ಶಬ್ದಾರ್ಥಾಧಾರಿತ ಗುಣಾಲಂಕಾರಗಳಿಗೆ ಮಹತ್ತ್ವ ನೀಡಿ, ಶ್ರವ್ಯಕಾವ್ಯ ಮೀಮಾಂಸೆಯನ್ನು ಬೆಳೆಸಿದ್ದಾರೆ. ಆನಂದವರ್ಧನನು ಆತ್ಮತತ್ತ್ವವಾದ ರಸಕ್ಕೂ ದೇಹತತ್ತ್ವವಾದ ಶಬ್ದ-ಅರ್ಥಗಳಿಗೂ ಧ್ವನಿ ಎಂಬ ಕೊಂಡಿಯನ್ನು ಕಲ್ಪಿಸಿ ಶ್ರವ್ಯ-ದೃಶ್ಯಗಳೆರಡರ ಮೇಲೂ ಸಮಾನಾವಧಾರಣೆ ಸಾಧಿಸಿದ್ದಾನೆ. ಭರತ-ಆನಂದವರ್ಧನರ ಮೇಲೆ ವ್ಯಾಖ್ಯಾನ ರಚಿಸಿದುದೇ ಅಭಿನವಗುಪ್ತನ ಅನನ್ಯತೆಯಾಗಿದೆ.[3] ಮಮ್ಮಟ, ಜಗನ್ನಾಥಪಂಡಿತರೂ ಕಾವ್ಯಶಾಸ್ತ್ರದ ವಿವೇಚನೆಯನ್ನು ತಮ್ಮ ತಮ್ಮ ನೆಲೆಯಲ್ಲಿ ಮಾಡಿದ್ದಾರೆ. ಕುಂತಕನ ವಕ್ರೋಕ್ತಿವಾದ ಅಲಂಕಾರತತ್ತ್ವದಲ್ಲಿ ಹೊಸ ಆಯಾಮ ಪಡೆದುಕೊಂಡಿದ್ದು ಒಟ್ಟಿನಲ್ಲಿ

ಭಾರತೀಯ ಕಾವ್ಯಮೀಮಾಂಸೆ ರಸ, ಧ್ವನಿ, ಔಚಿತ್ಯವೆಂಬ ಕಾವ್ಯಗಾಯತ್ರಿಯ ಮೂಲಕ ಜಾಗತಿಕ ಕಾವ್ಯಮೀಮಾಂಸೆಗೆ ಮಹತ್ತ್ವದ ಕಾಣಿಕೆ ನೀಡಿದೆ.

ಕನ್ನಡ ಕಾವ್ಯಮೀಮಾಂಸೆಗೆ ಪ್ರಾಚೀನವಾದ ಪರಂಪರೆಯಿದೆ. ವಾಸ್ತವಿಕವಾಗಿ ಭಾರತೀಯ ಕಾವ್ಯಮೀಮಾಂಸೆಯ ತಾತ್ತ್ವಿಕ ವಿಚಾರಗಳು ಕನ್ನಡ ಕಾವ್ಯಮೀಮಾಂಸೆಗೆ ಭದ್ರವಾದ ನೆಲಗಟ್ಟನ್ನು ಒದಗಿಸಿವೆ. ಕನ್ನಡದ ಜನಕೆ ಕನ್ನಡಿಯುಂ, ಕೈದೀವಿಗೆಯುಂ ಆದ ಶ್ರೀವಿಜಯರ ಕವಿರಾಜಮಾರ್ಗವು (ಕ್ರಿ.ಶ. ೯ನೆಯ ಶತಮಾನ) ಕನ್ನಡದ ಆದ್ಯ ಲಕ್ಷಣಗ್ರಂಥವಾಗಿದೆ. ಅದರಲ್ಲಿ ಪ್ರಕಟವಾದ ಕಾವ್ಯಮೀಮಾಂಸೆಯ ವಿಚಾರಗಳು ಕವಿಗಳಿಗೆ ರಾಜಮಾರ್ಗವಾಗಿ ಪರಿಣಮಿಸಿದ್ದವೆಂಬುದನ್ನು ಎಂ.ಎಂ. ಕಲಬುರ್ಗಿ ಅವರು 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಮಹಾಪ್ರಬಂಧದಲ್ಲಿ ವಿವೇಚಿಸಿದ್ದಾರೆ. 'ಕವಿರಾಜಮಾರ್ಗದ ಪ್ರಥಮ ಪರಿಚ್ಛೇದ: ದೋಷದೋಷಾನುವರ್ಣನ ನಿರ್ಣಯಂ, ದ್ವಿತೀಯ ಪರಿಚ್ಛೇದ : ಅರ್ಥಾಲಂಕಾರ ಪ್ರಕರಣಂಗಳಲ್ಲಿ ದಂಡಿಯ ಕಾವ್ಯಾದರ್ಶ ಹಾಗೂ ಭಾಮಹನ ಶಬ್ದಾಲಂಕಾರ ವರ್ಣನನಿರ್ಣಯಂ, ತೃತೀಯ ಪರಿಚ್ಛೇದ : ಕಾವ್ಯಾಲಂಕಾರವೂ ಆಕರಗ್ರಂಥವಾಗಿ ಪ್ರಭಾವ ಬೀರಿದ್ದನ್ನು ನಾವು ಗುರುತಿಸಬಹುದು.[೪] ಕವಿರಾಜಮಾರ್ಗವು ಕಾವ್ಯಮೀಮಾಂಸೆಯ ದೃಷ್ಟಿಯಿಂದ ಅನೇಕ ಮೌಲಿಕ ವಿಚಾರಗಳನ್ನು ಮಂಡಿಸಿದೆ. ಕಾವ್ಯದ ಕಾರ್ಯ, ಕಾವ್ಯದಿಂದ ದೊರಕುವ ಸತ್ಪ್ರೇರಣೆ ಮತ್ತು ಆತ್ಮಸಂಸ್ಕಾರ ಕುರಿತು–

ಪಾಪವಿದು ಪುಣ್ಯವಿದು ಹಿತ।
ರೂಪಮಿದಹಿತ ಪ್ರಕಾರಮಿದು ಸುಖಮಿದು ದುಃ।
ಖೋಪಾತ್ತಮಿದೆಂದಜೆಪುಗು।
ಮಾ ಪರಮಕವಿಪ್ರಧಾನರಾಕಾವ್ಯಂಗಳ್'[೫]

ಎಂಬ ಹೃದಯಂಗಮ ನಿರೂಪಣೆ ದಂಡಿ ಭಾಮಹಾದಿಗಳಲ್ಲಿ ಕಂಡುಬರುವುದಿಲ್ಲ.[೬] ಹಾಗೆಯೇ, 'ಧ್ವನಿಯೆಂಬುದಲಂಕಾರಂ', ಶಾಂತರಸ ವಿಚಾರಗಳಲ್ಲಿಯೂ ಚತ್ತಾಣ–ಬೆದಂಡೆ ಲಕ್ಷಣ ಹೇಳುವಲ್ಲೂ ಮಾರ್ಗಕಾರನ ಸ್ವಂತಿಕೆ, ನೂತನ ದೃಷ್ಟಿಯಿದೆ. ಕವಿರಾಜಮಾರ್ಗವು ಕನ್ನಡದಲ್ಲಿದ್ದರೂ, ಕನ್ನಡ ಕಾವ್ಯರಚನೆಗೆ ಸಂಬಂಧಿಸಿದ್ದರೂ ಸಮಗ್ರ ಭಾರತೀಯ (ಸಂಸ್ಕೃತ) ಕಾವ್ಯಮೀಮಾಂಸೆಗೆ ಒಂದು ಬೆಲೆಯುಳ್ಳ ಕಾಣಿಕೆಯಾಗಿದೆ.[೭]

ಕವಿರಾಜಮಾರ್ಗದ ಕಾವ್ಯಮೀಮಾಂಸೆಯ ವಿಚಾರಗಳನ್ನು ತೀ.ನಂ.ಶ್ರೀ. ಮುಳಿಯ ತಿಮ್ಮಪ್ಪಯ್ಯ, ಕೆ.ಕೃಷ್ಣಮೂರ್ತಿ, ಎಂ.ಎಂ.ಕಲಬುರ್ಗಿ, ಎಂ.ವಿ.ಸೀತಾರಾಮಯ್ಯ ಸಿ.ಪಿ.ಕೆ., ಭೀಮರಾವ್ ಚಿಟಗುಪ್ಪಿ ಮೊದಲಾದ ವಿದ್ವಾಂಸರು ತಮ್ಮ ಗ್ರಂಥಗಳಲ್ಲಿ ಲೇಖನಗಳಲ್ಲಿ ಚರ್ಚಿಸಿದ್ದನ್ನು ನಾವು ಕಾಣುತ್ತೇವೆ.

ಕವಿರಾಜಮಾರ್ಗದ ಮಾರ್ಗದಲ್ಲಿ ಕಾವ್ಯಮೀಮಾಂಸೆಯ ಅನೇಕ ಲಕ್ಷಣ ಗ್ರಂಥಗಳು ಕನ್ನಡದಲ್ಲಿ ರಚಿತವಾದದ್ದು ಈ ಶಾಸ್ತ್ರವಿಕಾಸದ ಹಿನ್ನೆಲೆಯಲ್ಲಿ ಮುಖ್ಯವಾಗಿದೆ. ಒಂದನೆಯ ನಾಗವರ್ಮನ **ಛಂದೋಂಬುಧಿ** (ಕ್ರಿ.ಶ. ೧೦–೧೧ನೇ ಶತಮಾನದ.) ಛಂದಸ್ಸಿನ ಗ್ರಂಥವಾಗಿದ್ದರೂ, **ಕಾವ್ಯಾವಲೋಕನ** (ಕ್ರಿ.ಶ. ೧೧ನೇ ಶತಮಾನ)

ಕಾವ್ಯಮೀಮಾಂಸೆಯು ಪ್ರಮುಖವಾದ ಕೃತಿ. ಇದರಲ್ಲಿ ವಾಮನ, ಉದ್ಭಟ ರುದ್ರಟ ರಾಜಶೇಖರರ ಕಾವ್ಯಮೀಮಾಂಸೆಯ ವಿಚಾರಗಳ ಕ್ರೋಡೀಕರಣವು ಪಂಪಾದಿ ಕವಿಗಳ ಲಕ್ಷ್ಯಪದ್ಯಗಳ ಮೂಲಕ ಯಶಸ್ವಿಯಾಗಿ ನೆರವೇರಿದೆ. ಉದಯಾದಿತ್ಯನ **ಉದಯಾದಿತ್ಯಾಲಂಕಾರ** (ಕ್ರಿ.ಶ. ೧೨ನೇ ಶತಮಾನ), ಕವಿಕಾಮನ **ಶೃಂಗಾರರತ್ನಾಕರ** (ಕ್ರಿ.ಶ. ೧೨೦೦), ಮಾಧವನ **ಮಾಧವಾಲಂಕಾರ** (ಕ್ರಿ.ಶ. ೧೫೦೦), ಸಾಳ್ವನ **ರಸರತ್ನಾಕರ** ಮತ್ತು **ಶಾರದಾವಿಳಾಸ** (ಕ್ರಿ.ಶ. ೧೫೦೦), ತಿಮ್ಮನ **ಅಲಂಕಾರ ರಸ ಸಂಗ್ರಹ** (ಕ್ರಿ.ಶ. ೧೬೦೦), ತಿರುಮಲಾರ್ಯನ **ಅಪ್ರತಿಮ ವೀರಚರಿತ** (ಕ್ರಿ.ಶ. ೧೬೫೦), ಜಯೇಂದ್ರನ **ಕರ್ನಾಟಕ ಕುವಲಯಾನಂದ** (ಕ್ರಿ.ಶ. ೧೮ನೇ ಶತಮಾನ), ಅಳಿಯಲಿಂಗರಾಜನ **ನರಪತಿಚರಿತ** (ಕ್ರಿ.ಶ. ೧೯ನೇ ಶತಮಾನ), ವಿದ್ಯಾನಾಥ, ಅಪ್ಪಯ್ಯ ದೀಕ್ಷಿತರ ಸಂಕಲನ ಗ್ರಂಥಗಳ ಮೂಲಕ ಪ್ರಾಚೀನ ಕನ್ನಡ ಕಾವ್ಯಮೀಮಾಂಸೆಯು ಕಾವ್ಯದ ಶಬ್ದ, ಅರ್ಥ ಗುಣ–ದೋಷ, ರೀತಿ, ಧ್ವನಿ, ರಸ, ವಿವೇಚನೆಯ ಜೊತೆಗೆ ವಿವಿಧ ಅಲಂಕಾರಗಳ ಲಕ್ಷಣ ಮೀಮಾಂಸೆಯನ್ನು ವಿದಿತಪಡಿಸುತ್ತದೆ.[೮]

ಕನ್ನಡ ನವೋದಯದೊಂದಿಗೆ ಕನ್ನಡ ಕಾವ್ಯಮೀಮಾಂಸೆಯ ಶಾಸ್ತ್ರವೂ ವಿಕಾಸ ಹೊಂದಿತು. ಎ. ಆರ್. ಕೃಷ್ಣಶಾಸ್ತ್ರಿ, ವರದಾಚಾರ್ಯರು ಸಿದ್ಧಪಡಿಸಿದ ಕನ್ನಡ ಕೈಪಿಡಿಯ (೧೯೨೭) 'ಅಲಂಕಾರಶಾಸ್ತ್ರ', 'ಕಾವ್ಯಮೀಮಾಂಸೆ'ಯ ಭಾಗ ಈ ನಿಟ್ಟಿನಲ್ಲಿ ಆರಂಭದ ಪ್ರಯತ್ನವಾಗಿದೆ. ಹಿರಿಯ ಸಂಶೋಧಕರಾದ ಕೆ.ಜಿ. ಕುಂದಣಗಾರರು 'ಜಿನವಿಜಯ' ಪತ್ರಿಕೆಯಲ್ಲಿ 'ಕಾವ್ಯವೂ ತತ್ತ್ವಜ್ಞಾನವೂ' ಎಂಬ ವಿಸ್ತಾರ ಲೇಖನ ಬರೆದು ಈ ಚಿಂತನಧಾರೆಯನ್ನು ಆರಂಭಿಸಿದ ವಿಷಯ ಇತ್ತೀಚೆಗೆ ಸಿಕ್ಕ ಆಕರದಿಂದ ತಿಳಿಯುತ್ತದೆ. ಕನ್ನಡ ಕಾವ್ಯಮೀಮಾಂಸೆಯ ಪರಂಪರೆಯಲ್ಲಿ ತೀ.ನಂ.ಶ್ರೀ.ಯವರ **ಭಾರತೀಯ ಕಾವ್ಯಮೀಮಾಂಸೆ** ರಾಷ್ಟ್ರಕವಿ ಕುವೆಂಪು ಹೇಳಿದಂತೆ ಒಂದು ಆಚಾರ್ಯಕೃತಿಯಾಗಿದೆ.[೯] ೧೯೪೭ರಲ್ಲಿ ರಚಿತವಾಗಿ ೧೯೫೩ರಲ್ಲಿ ಪ್ರಕಟವಾದ **ಭಾರತೀಯ ಕಾವ್ಯಮೀಮಾಂಸೆ** ಸಂಸ್ಕೃತ ಕನ್ನಡ ಆಲಂಕಾರಿಕರ ಸಮಗ್ರವಾದ ಕಾವ್ಯವಿಚಾರಧಾರೆಯನ್ನು ಅಲಂಕಾರ ಶಾಸ್ತ್ರದ ಬೆಳವಣಿಗೆ, ಕವಿಕಾವ್ಯ, ಸಹೃದಯ ವಿಚಾರ, ರಸಧ್ವನಿಗಳೆಂಬ ಮೂರು ಮುಖ್ಯ ಭಾಗಗಳಲ್ಲಿ ವಿವೇಚಿಸುತ್ತದೆ. ತೀ.ನಂ.ಶ್ರೀ.ಯವರ ಅಗಾಧವಾದ ವಿದ್ವತ್ತು, ಸೂಕ್ಷ್ಮ ಸಂವೇದನಾಶೀಲವಾದ ಕವಿಹೃದಯ, ಸತ್ಯಪಕ್ಷಪಾತಿಯಾದ ವಿಮರ್ಶನದೃಷ್ಟಿ ಅಕೃತಕವಾದ ನಿರೂಪಣಾಸಾಮರ್ಥ್ಯ ಇವುಗಳಿಗೆ ಈ ಗ್ರಂಥ ಸಾಕ್ಷಿಯಾಗಿದೆ. ವಿಷಯ ವಿಂಗಡಣೆ, ವಿಷಯ ಪ್ರತಿಪಾದನೆ, ಮೂಲದಲ್ಲಿ ಸೂಚನೆಯ ರೂಪದಲ್ಲಿರುವ ಸಂಗತಿ ಗಳನ್ನು ಸ್ಫುಟವಾಗಿ ವಿವರಿಸುವ ಸೊಗಸು, ಮೂಲ ಲಾಕ್ಷಣಿಕರ ಮತ ತಮಗೆ ಒಪ್ಪಿಗೆ ಯಾಗದೆ ಇದ್ದಲ್ಲಿ ತಾವು ಎತ್ತಿಕೊಳ್ಳುವ ದೃಷ್ಟಾಂತ, ಕಾವ್ಯಭಾಗಗಳ ಆಯ್ಕೆಯಲ್ಲಿ ಕಂಡುಬರುವ ಅಭಿರುಚಿ ಮತ್ತು ರಸಿಕತೆ, ಸಂಸ್ಕೃತ ಕಾವ್ಯಲಕ್ಷಣಗಳನ್ನೂ, ಕವಿಸೂಕ್ತಿ ಗಳನ್ನೂ ಕನ್ನಡಿಸುವ ಸಾಮರ್ಥ್ಯ (ಇಲ್ಲಿ ಅವರು ದೃಷ್ಟಾಂತಕ್ಕೆಂದು ಪ್ರಾಕೃತ ಹಾಗೂ ಸಂಸ್ಕೃತ ಕವಿಗಳಿಂದ ಅನುವಾದ ಮಾಡಿರುವ ಕಾವ್ಯಭಾಗಗಳನ್ನು ಪ್ರತ್ಯೇಕಿಸಿ ಪ್ರಕಟಿಸಿದರೆ ಸೊಗಸಾದ ಕವನ ಸಂಗ್ರಹವಾಗುತ್ತದೆ.) ಭಾರತೀಯ ಕಾವ್ಯ ಮೀಮಾಂಸೆಯೊಂದಿಗೆ

ಸಂವಾದಿಯಾಗಬಹುದಾದ ಪಾಶ್ಚಾತ್ಯ ತತ್ತ್ವಗಳನ್ನು ಸೂಕ್ಷ್ಮವಾಗಿ ಸೂಚಿಸುವ ವಿಧಾನ ಪಂಪನಿಂದ ಹಿಡಿದು ಜನಪದ ಸಾಹಿತ್ಯದ ತನಕ ಕನ್ನಡ ಕಾವ್ಯಗಳಿಂದಲೂ ನಿದರ್ಶನಗಳನ್ನು ಕೊಟ್ಟು ವಿಷಯದೊಂದಿಗೆ ಆತ್ಮೀಯತೆಯನ್ನು ಹೆಚ್ಚಿಸುವ ವಿಧಾನ, ಅತ್ಯಂತ ಗಹನವಾದ ತತ್ತ್ವಾಂಶಗಳನ್ನು ಸಂದೇಹಕ್ಕೆಡೆಯಿಲ್ಲದಂತೆ ರಮ್ಯವಾಗಿ ತಿಳಿಯಪಡಿಸುವ ಜಾಣ್ಮೆ, ಇವುಗಳಿಂದ ಈ ವಿದ್ವತ್ ಕೃತಿ ಓದುವವರ ಮನಸ್ಸಿಗೆ ಆಯಾಸವಾಗದೆ ಬುದ್ಧಿ-ಮನಸ್ಸುಗಳ ವಿಕಾಸೋಲ್ಲಾಸಗಳನ್ನು ಸಾಧಿಸುತ್ತದೆ.... "ಇಷ್ಟು ಸಮಗ್ರವಾಗಿ ಭಾರತೀಯ ಕಾವ್ಯಮೀಮಾಂಸೆಯನ್ನು ಹೃದ್ಯವಾಗಿ ಪರಿಚಯಮಾಡಿಕೊಡುವ ಗ್ರಂಥ ಬಹುಶಃ ಇತರ ಯಾವ ಭಾರತೀಯ ಭಾಷೆಗಳಲ್ಲಿಯೂ ಬಂದಿರಲಾರದು; ಇಂಗ್ಲಿಷ್‌ನಲ್ಲಂತೂ ಬಂದಿಲ್ಲವೆಂದರೆ ತಪ್ಪಾಗಲಾರದು".[೧೦]

ಭಾರತೀಯ ಕಾವ್ಯಮೀಮಾಂಸೆಯಲ್ಲಿ ಮೌಲಿಕವಾದ ಅನೇಕ ವಿಚಾರಗಳು ಸಂಗಮಿಸಿವೆ. "ಪಾಶ್ಚಾತ್ಯರಲ್ಲಿ ಅಲಂಕಾರಶಾಸ್ತ್ರ (Rhetoric), ಕಾವ್ಯಮೀಮಾಂಸೆ (Poetics) ಮತ್ತು ಸೌಂದರ್ಯಮೀಮಾಂಸೆ (Aesthetics) ಇವು ಪ್ರತ್ಯೇಕವಾಗಿ ಬೆಳೆದರೆ ನಮ್ಮಲ್ಲಿ ಅಲಂಕಾರ ವಿಭಜನೆ, ಕಾವ್ಯಮೀಮಾಂಸೆ, ಸೌಂದರ್ಯದರ್ಶನ ಈ ಮೂರನ್ನು ಬೇರೆ ಬೇರೆ ಶಾಸ್ತ್ರಗಳೆಂದು ಭಾವಿಸಿ, ವಿಂಗಡವಾಗಿ ನಿರೂಪಿಸುವ ಪದ್ಧತಿ ಬೆಳೆದು ಬರಲಿಲ್ಲ" ಎಂದು ಹೇಳಿದ ತೀ. ನಂ. ಶ್ರೀ.ಯವರು, "ಪಾಶ್ಚಾತ್ಯ ಸೌಂದರ್ಯ ಮೀಮಾಂಸೆಯಲ್ಲಿ ಇತ್ತೀಚೆಗೆ ಕಾಣಿಸಿಕೊಂಡಿರುವ Psychic distance ಎಂಬ ತತ್ತ್ವ ನಮ್ಮವರ ಸಾಧರಣೀಕರಣ ತತ್ತ್ವವನ್ನು ಆಶ್ಚರ್ಯಕರವಾದ ರೀತಿಯಲ್ಲಿ ಹೋಲುತ್ತದೆ"[೧೧] ಎಂಬ ತೌಲನಿಕ ಕಾವ್ಯಮೀಮಾಂಸೆಯ ವಿಚಾರವನ್ನು ಮಂಡಿಸಿದ್ದಾರೆ.

"ಕಾವ್ಯದ ಆತ್ಮವು ರಸ; ಅದನ್ನು ಕಾವ್ಯಶರೀರವು ಅಭಿವ್ಯಕ್ತಿಪಡಿಸುವ ಮಾರ್ಗ ಧ್ವನಿ; ಆತ್ಮ, ಶರೀರಗಳ ಹೊಂದಿಕೆಯೇ ಔಚಿತ್ಯ. ರಸ, ಧ್ವನಿ, ಔಚಿತ್ಯ ಇದೇ ಕಾವ್ಯಗಾಯತ್ರಿ."[೧೨] ರಸ, ಧ್ವನಿ, ಔಚಿತ್ಯಗಳ ವಿವೇಚನೆಯನ್ನು ತೀ.ನಂ.ಶ್ರೀ.ಯವರು ವಿಭಿನ್ನ ನೆಲೆಗಳಿಂದ ವಿಸ್ತಾರವಾಗಿ ಮಾಡಿರುವುದು ಭಾರತೀಯ ಕಾವ್ಯಮೀಮಾಂಸೆಯ ವಿಶಿಷ್ಟತೆಯಾಗಿದೆ. ಭಾರತೀಯ ಕಾವ್ಯಶಾಸ್ತ್ರಕಾರರ ವಿವಿಧ ಪ್ರಸ್ಥಾನಗಳನ್ನೂ, ಕಾವ್ಯತತ್ತ್ವ ವಿಚಾರಗಳನ್ನೂ ತುಂಬ ಸಹೃದಯತೆಯಿಂದ, ಕನ್ನಡ ಕವಿಕಾವ್ಯ ಲಕ್ಷ್ಯವಿಚಾರಗಳಿಂದ ತೀ.ನಂ.ಶ್ರೀ.ಯವರು ವಿದಿತಪಡಿಸಿದ ರೀತಿ ಒಂದು ವಿದ್ವತ್ ಸಾಹಸವೆಂದು ವಿದ್ವಾಂಸರ ಪ್ರಶಂಸೆಗೆ ಪಾತ್ರವಾಗಿದೆ.

ಕೆ. ಕೃಷ್ಣಮೂರ್ತಿಯವರು ಸಂಸ್ಕೃತದಲ್ಲಿರುವ ಭಾರತೀಯ ಕಾವ್ಯಮೀಮಾಂಸೆಯ ಶಾಸ್ತ್ರ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸುವುದರ ಮೂಲಕ ಮತ್ತು ತಮ್ಮ ಸ್ವತಂತ್ರ ಕೃತಿಗಳ ಮೂಲಕ ಕನ್ನಡ ಕಾವ್ಯಮೀಮಾಂಸೆಗೆ ಭದ್ರವಾದ ನೆಲೆಯನ್ನೊದಗಿಸಿದ್ದಾರೆ. ಅವರ ಆನಂದವರ್ಧನನ **ಕಾವ್ಯಮೀಮಾಂಸೆ** ಮತ್ತು **ಕನ್ನಡ ಧ್ವನ್ಯಾಲೋಕ** (೧೯೫೧) ಭಾಮಹನ **ಕನ್ನಡ ಕಾವ್ಯಾಲಂಕಾರ** (೧೯೫೫), ಕ್ಷೇಮೇಂದ್ರನ **ಕನ್ನಡ ಔಚಿತ್ಯ ವಿಚಾರ ಚರ್ಚೆ** (೧೯೬೧), ವಾಮನನ **ಕಾವ್ಯಾಲಂಕಾರಸೂತ್ರವೃತ್ತಿ** (೧೯೬೬), ಮಮ್ಮಟನ **ಕನ್ನಡ ಕಾವ್ಯಪ್ರಕಾಶ** (೧೯೬೭), ರಾಜಶೇಖರನ **ಕನ್ನಡ ಕಾವ್ಯಮೀಮಾಂಸೆ** (೧೯೬೯), ದಂಡಿಯ

ಕನ್ನಡ ಕಾವ್ಯಾದರ್ಶ (೧೯೭೫), ಈ ಅಮೂಲ್ಯ ಕೃತಿಗಳು ಸಂಸ್ಕೃತ ಕಾವ್ಯಮೀಮಾಂಸೆಯನ್ನು ಕನ್ನಡ ಲೋಕ ಅರಿಯುವಂತೆ ಮಾಡಿವೆ. ಭಾರತೀಯ ಕಾವ್ಯಮೀಮಾಂಸೆಯ ದಿಗ್ಗಜರಾದ ಕೆ. ಕೃಷ್ಣಮೂರ್ತಿಯವರು ತಮ್ಮ ಅಪೂರ್ವ ಪ್ರತಿಭೆ, ಪಾಂಡಿತ್ಯದ ಮೂಲಕ ಕನ್ನಡ ಕಾವ್ಯಮೀಮಾಂಸೆಯ ಕ್ಷೇತ್ರದಲ್ಲಿ ಶಾಸ್ತ್ರ ವಿದ್ವತ್ತೆಯನ್ನು ಬೆಳೆಸಿದ್ದಾರೆ. ಅವರ **ರಸೋಲ್ಲಾಸ** (೧೯೫೮) ಮತ್ತು **ಕನ್ನಡದಲ್ಲಿ ಕಾವ್ಯತತ್ತ್ವ** (೧೯೬೫) ಕೃತಿಗಳಲ್ಲಿ ಕ್ರಮವಾಗಿ ರಸತತ್ತ್ವ ವಿವೇಚನೆ ಹಾಗೂ ಸಂಸ್ಕೃತದ ಹಿನ್ನೆಲೆಯಲ್ಲಿ ಕನ್ನಡ ಕಾವ್ಯಮೀಮಾಂಸೆ ಬೆಳೆದುಬಂದುದರ ಸಮಾಲೋಚನೆಯನ್ನು ನಾವು ಕಾಣುತ್ತೇವೆ. ಕೆ ಕೃಷ್ಣಮೂರ್ತಿಯವರ ಗ್ರಂಥಗಳು, ಲೇಖನಗಳು ಭಾರತೀಯ ಮತ್ತು ಕನ್ನಡ ಕಾವ್ಯಮೀಮಾಂಸೆಯ ಪ್ರಪಂಚವನ್ನು ವಿಸ್ತರಿಸಿ ಪ್ರಾಚೀನ ಪರಂಪರೆಯನ್ನು ಪರಿಚಯಿಸಿರುವುದು ಅನನ್ಯವಾದ ಸಾಧನೆಯಾಗಿದೆ. ಕನ್ನಡದ ಕಾವ್ಯಮೀಮಾಂಸೆಯಲ್ಲಿ ವಿಶೇಷವಾದ ಪಾಂಡಿತ್ಯ ಹೊಂದಿದ್ದ ಕೆ. ಕೃಷ್ಣಮೂರ್ತಿಯವರು ಕವಿರಾಜಮಾರ್ಗವನ್ನು ೧೯೭೩ರಲ್ಲಿ ಸಂಪಾದಿಸಿ, ಅದರ ಪ್ರಸ್ತಾವನೆಯಲ್ಲಿ ಕಾವ್ಯಮೀಮಾಂಸೆಯ ವಿಚಾರವನ್ನು ವಿಸ್ತಾರವಾಗಿ ಚರ್ಚಿಸಿದ್ದಾರೆ. ಇವರ **ಬಸವಣ್ಣನವರ ವಚನಗಳ ಕಾವ್ಯಮೀಮಾಂಸೆ** ಎಂಬ ಕೃತಿ, ಆಧುನಿಕ ಕನ್ನಡ ಕವಿಗಳ ಕಾವ್ಯಮೀಮಾಂಸೆಯ ಕುರಿತಾದ ಲೇಖನಗಳೂ ಆಲೋಚನೀಯವಾಗಿವೆ.[೧೩] ಇದೇ ಸಂದರ್ಭದಲ್ಲಿ ಕೆ.ವಿ. ಸುಬ್ಬಣ್ಣನವರು ಅನುವಾದಿಸಿದ ಧನಂಜಯನ **ದಶರೂಪಕ** ಶ್ರೀರಂಗರು ಅನುವಾದಿಸಿದ ಭರತಮುನಿಯ **ನಾಟ್ಯಶಾಸ್ತ್ರ** ದೃಶ್ಯಕಾವ್ಯಮೀಮಾಂಸೆಯನ್ನು ನೀಡುವಲ್ಲಿ ಯಶಸ್ವಿಯಾದದ್ದನ್ನು ಇಲ್ಲಿ ಉಲ್ಲೇಖಿಸಬೇಕು. ಜಿ.ಕೆ. ಶಿವರಾಮಯ್ಯನವರ **ಅಲಂಕಾರಶಾಸ್ತ್ರವು** ಸಂಸ್ಕೃತ ಶಾಸ್ತ್ರಕಾರರ ವಿಚಾರಗಳನ್ನು ವಿದಿತಪಡಿಸುತ್ತದೆ.

ಕನ್ನಡ ಕಾವ್ಯಮೀಮಾಂಸೆಗೆ ಕುವೆಂಪು ಕೊಡುಗೆ ಬಹುಮುಖವಾದದ್ದು. ಭಾರತೀಯ ಹಾಗೂ ಪಾಶ್ಚಾತ್ಯ ಕಾವ್ಯಮೀಮಾಂಸೆಯನ್ನು ಆಳವಾಗಿ ಅಧ್ಯಯನ ಮಾಡಿದ ಕುವೆಂಪು ಅವರು ಕವಿಕಾವ್ಯಪ್ರಯೋಜನದ ವಿಚಾರದಲ್ಲಿ, ಹಾಗೆಯೇ ಕಾವ್ಯಮೀಮಾಂಸೆಯ ಸಮಸ್ಯೆಗಳ ನೂತನ ವ್ಯಾಖ್ಯಾನಗಳಲ್ಲಿ ತಮ್ಮ ಚಿಂತನಶೀಲತೆಯನ್ನು ಪ್ರಕಟಿಸಿದ್ದಾರೆ. ಕವಿಯಲ್ಲಿ ವಿಭೂತಿ, ಕವಿಯ ಜೀವನದೃಷ್ಟಿ, ಮತ್ತು ಕಾವ್ಯಸೃಷ್ಟಿಗಳಲ್ಲಿ ಕವಿಪ್ರತಿಭೆಯ ಅನನ್ಯತೆಯನ್ನು ಗುರುತಿಸುತ್ತ ಪೂರ್ಣದೃಷ್ಟಿ ಮಹಾದರ್ಶನ–ಪ್ರತಿಮೆಯ ವಿಚಾರವನ್ನು ಪ್ರಕಟಿಸಿದ್ದಾರೆ. **ರಸೋ ವೈ ಸಃ**ದಲ್ಲಿ ಬರುವ 'ಕವಿನಿರ್ಮಿತಿಯಲ್ಲಿ ನಿಯತಿಕೃತ ನಿಯಮರಾಹಿತ್ಯ', 'ರಸಾನುಭವದ ಅಲೌಕಿಕತೆ' 'ರಸೋ ವೈ ಸಃ' ಲೇಖನಗಳಲ್ಲಿ ರಸತತ್ತ್ವದ ನೂತನ ವ್ಯಾಖ್ಯಾನವಿದೆ. ಕುವೆಂಪು ಅವರು ಸೌಂದರ್ಯಾನುಭವದ, ರಸಾನುಭವಗಳ ಅರ್ಥಭೇದ ಕಲ್ಪಿಸುವುದನ್ನು ತಪ್ಪಿಸಿ ಅವೆರಡೂ ಒಂದೇ ಎಂಬುದನ್ನು ವಿವರಿಸಿದ್ದಾರೆ. ಅದೇ ರೀತಿಯಲ್ಲಿ, ಅಭೇದ್ಯವಾದ ಭಾರತೀಯ ರಸತತ್ತ್ವದ ವೇದಿಕೆಯ ಮೇಲೆ ನಿಂತು ಐ.ಎ. ರಿಚರ್ಡ್ಸ್ ಅವರ ಆಧುನಿಕ ನಿರ್ಣಯಗಳು ಅಪೂರ್ಣವೆಂದು ಸಾಧಿಸಿರುವುದು ಕುವೆಂಪು ಅವರ ಮಹಾಸಾಧನೆಯೆನ್ನಬೇಕು.[೧೪] 'ಪ್ರತಿಮಾ ಮತ್ತು ಪ್ರತಿಕೃತಿ' (**ತಪೋನಂದನ**, ಪುಟ ೨೩) ಹಾಗೂ 'ಕಾವ್ಯದಲ್ಲಿ ಪ್ರತಿಮಾ' (**ರಸೋವೈಸಃ**, ಪುಟ ೩೩)ಗಳಲ್ಲಿ ಪಾಶ್ಚಾತ್ಯರ Poetic imageನ

ವಿಶ್ಲೇಷಣೆಯಿದೆ. ಹಾಗೆಯೇ, 'ಭೂಮಾನುಭೂತಿ ಮತ್ತು ಭವ್ಯತಾ ಅನುಭವದ ಮೀಮಾಂಸೆ'ಯ ಪ್ರಬಂಧದ ಮೂಲಕ ಪಾಶ್ಚಾತ್ಯರ Sublime ಅಥವಾ ಮಹೋನ್ನತಿ ತತ್ತ್ವವನ್ನು ಕುವೆಂಪು ವಿವೇಚಿಸಿದ್ದಲ್ಲದೆ 'ಪಂಪನಲ್ಲಿ ಭವ್ಯತೆ' ಲೇಖನದಲ್ಲಿ ಅದರ ವ್ಯಾಖ್ಯಾನ ಮಾಡಿದ್ದನ್ನು ಕಾಣಬಹುದು. ಹೀಗೆ, ಭಾರತೀಯ ಮತ್ತು ಪಾಶ್ಚಾತ್ಯ ಕಾವ್ಯಮೀಮಾಂಸೆಯ ಸಮನ್ವಯ ವಿಚಾರ, ವ್ಯಾಖ್ಯಾನಗಳಿಂದ ಕುವೆಂಪು ಕಾವ್ಯಮೀಮಾಂಸೆ ಗಂಭೀರಶೈಲಿಯಲ್ಲಿ ವಿಷಯ ಪ್ರತಿಪಾದನೆ ಮಾಡಿರುವುದನ್ನು ನಾವು ಕಾಣುತ್ತೇವೆ. ಭವ್ಯತೆ, ಮಹೋಪಮೆ, ಪ್ರತಿಮೆ, ಪ್ರತಿಕೃತಿ, ದರ್ಶನಧ್ವನಿ ಮೊದಲಾದ ಪದಗಳ ಮೂಲಕ ಹೊಸ ಪರಿಭಾಷೆಯನ್ನು ಕನ್ನಡ ಕಾವ್ಯಮೀಮಾಂಸೆಗೆ ಕುವೆಂಪು ನೀಡಿದರೆಂಬ ಅಭಿಮತ ವ್ಯಕ್ತವಾಗಿದೆ.[೧೫] ಇವರ ಕಾವ್ಯಮೀಮಾಂಸೆಯ ಚಿಂತನೆಗಳನ್ನು ಕುರಿತು **'ಕಾವ್ಯಮೀಮಾಂಸೆಗೆ ಕುವೆಂಪು ಕೊಡುಗೆ'** ಎಂಬ ಪಿಎಚ್.ಡಿ. ಮಹಾಪ್ರಬಂಧ (ಎನ್.ಜಯಂತಿ) ಮೈಸೂರು ವಿಶ್ವವಿದ್ಯಾಲಯದಿಂದ ಹೊರಬಂದುದು ಗಮನಾರ್ಹವೆನಿಸಿದೆ.

ವರಕವಿ ಬೇಂದ್ರೆಯವರ **ಸಾಹಿತ್ಯದ ವಿರಾಟ್ ಸ್ವರೂಪ** (೧೯೭೪) ಬೃಹತ್ ಗ್ರಂಥದಲ್ಲಿ ಅದಮ್ಯ ಪ್ರತಿಭೆಯ ಬೇಂದ್ರೆ ಕಾವ್ಯಚಿಂತನಧಾರೆಯನ್ನು ನಾವು ಕಾಣುತ್ತೇವೆ. ಕಾವ್ಯಯೋಗದ ವಿವೇಚನೆ ಮಾಡಿದ ಬೇಂದ್ರೆಯವರು ಕವಿ ಚತುರ್ಮುಖ, ಕವಿಸೃಷ್ಟಿ ಕಾವ್ಯದ ಪ್ರಯೋಜನ, ಕಾವ್ಯಾನುಭವ ಮತ್ತು ಮಾತೃಭಾವದ ವಿಚಾರಗಳನ್ನು ವ್ಯಾಖ್ಯಾನಿಸಿದ್ದಾರೆ. ನವರಸ ವಿಚಾರದ ಜೊತೆಗೆ ಭಕ್ತಿರಸದ ಸ್ವರೂಪವನ್ನು ಬೇಂದ್ರೆಯವರು ಸಮರ್ಥಿಸಿದ್ದಾರೆ. ಬೇಂದ್ರೆ ಕಾವ್ಯಮೀಮಾಂಸೆ ಭಾರತೀಯ ಹಾಗೂ ಪಾಶ್ಚಾತ್ಯ ಕಾವ್ಯಮೀಮಾಂಸೆ ಜೊತೆಗೆ, ದೇಶೀಯ ಕಾವ್ಯ ಪರಂಪರೆಯ ಚಿಂತನ ಭೂಮಿಕೆಯನ್ನೂ ಪಡೆದುಕೊಂಡಿರುವುದು ಮಹತ್ತ್ವಪೂರ್ಣವಾದದ್ದು. 'ಕಾವ್ಯಾನುಭವವನ್ನು ಕುರಿತಂತೆ ಸಂಸ್ಕೃತ ಕಾವ್ಯಮೀಮಾಂಸೆ ಮಂಡಿಸುವ ರಸತತ್ತ್ವವನ್ನು ಬೇಂದ್ರೆಯವರು ಆಧುನಿಕ ಸಂದರ್ಭದಲ್ಲೂ ಪ್ರಸ್ತುತವೆಂದು ಒಪ್ಪುತ್ತಾರೆ. ಪ್ರಾಚೀನ ಸಾಹಿತ್ಯದಿಂದ ಮಾತ್ರವಲ್ಲದೆ ಸಮಕಾಲೀನ ಸಾಹಿತ್ಯಕೃತಿಗಳಿಂದ ದೊರಕುವ ಅನುಭವವನ್ನು ರಸತತ್ತ್ವವನ್ನು ಬಳಸಿ ವಿವರಿಸಲು ಸಾಧ್ಯ ಎಂಬ ನಿಲುವಿಗೆ ಅವರು ಬದ್ಧರು. ಇನ್ನೂ ಮುಂದುವರಿದು ರಸತತ್ತ್ವವನ್ನು ಆಧುನಿಕ ಪರಿಸರಕ್ಕೆ ಹೊಂದುವಂತೆ ಮರುವ್ಯಾಖ್ಯಾನಿಸಿ ತಕ್ಕ ಪರಿಭಾಷೆಯನ್ನು ರೂಪಿಸಲು ಕೂಡ ಅವರು ಸಿದ್ಧರು. ಕವಿಗೂ ಕಾವ್ಯಕ್ಕೂ ಇರುವ ಸಂಬಂಧದ ವ್ಯಾಖ್ಯೆಯಲ್ಲಿ ಬೇಂದ್ರೆಯವರು ದೇಶೀಯ ಕಾವ್ಯಪರಂಪರೆ ಪಡೆದಿರುವ ವೈಶಿಷ್ಟ್ಯದಿಂದ ಪ್ರಭಾವಿತರಾಗಿದ್ದಾರೆ. ಕಾವ್ಯದಿಂದ ಕವಿ ಹೊರಗುಳಿಯುವ ಮಾದರಿಗಿಂತ, ಅದರೊಳಗೆ ಸೇರಿಹೋಗುವ ಅಥವಾ ಕಾವ್ಯವು ಕವಿಯ ಜೀವನದ ಒಂದು ಹೊರಚಾಚು ಆಗಿರುವ ಮಾದರಿಗೆ ಮನ್ನಣೆ ನೀಡುವ ಅವರ ವೈಚಾರಿಕ ನೆಲೆಯಿಂದಾಗಿ, ಅವರು ಅಪ್ಪಟ ದೇಶೀಯ ಕಾವ್ಯಪರಂಪರೆಯತ್ತ ಸಮರ್ಥನೆ ಬಯಸಿ ಮುಖ ಮಾಡುತ್ತಾರೆ'.[೧೬] ಸೃಜನಸಾಹಿತ್ಯದ ಜೊತೆಗೆ ಕಾವ್ಯಮೀಮಾಂಸೆಯ ವಿಚಾರಧಾರೆಯನ್ನು ನಿರಂತರವಾಗಿ ಪ್ರಕಟಿಸಿದ ಬೇಂದ್ರೆಯವರು ಕವಿ–ಕೃತಿ–ಸಹೃದಯ

ವನ್ನು ಕೇಂದ್ರವಾಗಿಟ್ಟುಕೊಂಡು ತತ್ತ್ವಮೀಮಾಂಸೆಯನ್ನು ವಿದಿತಪಡಿಸಿದ್ದಾರೆ. ತಮ್ಮ ಆತ್ಮಚರಿತ್ರೆಯಾದ **ಕಾವ್ಯೋದ್ಯೋಗ** ಬೇಂದ್ರೆ ಕವಿಪ್ರತಿಭೆಯ ವಾಗಿಂದ್ರಜಾಲದ ಅದ್ಭುತ ಸ್ವರೂಪದ ವಿಕಾಸೋನ್ನತಿಯನ್ನು ಸಾರುವುದರ ಜೊತೆಗೆ, ಸ್ವತಃ ಕವಿಯೇ ತನ್ನ ಕವಿವ್ಯಕ್ತಿತ್ವವನ್ನು ಪರಾಮರ್ಶಿಸಿ ನೋಡಿದ ರೀತಿ ಕಾವ್ಯಮೀಮಾಂಸೆಯ ಸಂದರ್ಭದಲ್ಲಿ ಮಹತ್ತ್ವಪೂರ್ಣವಾದದ್ದು. ಜಿ. ಎಸ್. ಶಿವರುದ್ರಪ್ಪನವರ 'ಕಾವ್ಯಸೃಷ್ಟಿ, ಬೇಂದ್ರೆಯವರ ದೃಷ್ಟಿ' ಲೇಖನ, ಶಂಕರ ಮೊಕಾಶಿ ಪುಣೇಕರರ **'ಬೇಂದ್ರೆಯವರ ಕಾವ್ಯಮೀಮಾಂಸೆ'** ಕೆ.ವಿ. ನಾರಾಯಣರ **'ಸಾಹಿತ್ಯತತ್ತ್ವ ಬೇಂದ್ರೆ ದೃಷ್ಟಿ'**, ಜಿ.ಎಸ್. ಆಮೂರರ **ಭುವನದ ಭಾಗ್ಯ** ಗ್ರಂಥದಲ್ಲಿ ವರಕವಿಯ ಕಾವ್ಯಮೀಮಾಂಸೆಯ ವಿಚಾರ, ವಿಮರ್ಶೆ ಪ್ರಕಟವಾದದ್ದನ್ನು ನೋಡಬಹುದು.

ಕನ್ನಡ ನವೋದಯ ಸಾಹಿತ್ಯದ ಹಿರಿಯ ಕವಿಗಳಾದ ಪು.ತಿ.ನ. ಅವರ **ಕಾವ್ಯಕುತೂಹಲ** ಗಮನಾರ್ಹವಾದ ಕಾವ್ಯಮೀಮಾಂಸೆಯ ಚಿಂತನೆಯ ಗ್ರಂಥವಾಗಿದೆ. ಇದರಲ್ಲಿ ಕವಿಪ್ರತಿಭೆಯ ಸ್ವರೂಪ, ಕವಿಕರ್ಮ, ಕಾವ್ಯತತ್ತ್ವ, ರಸದ ವಿವರಣೆಯನ್ನು ಮಾಡುವುದರ ಜೊತೆಗೆ ಪು.ತಿ.ನ. ಅವರು ಕಾವ್ಯಮೀಮಾಂಸೆಯ ಹೊಸ ಚರ್ಚೆಯನ್ನೂ ನಡೆಸಿದ್ದಾರೆ. ಅಸಂಭಾವ್ಯತೆ, ಕಾವ್ಯಾಸ್ವಾದಕ್ಕೆ ತೊಡಕನ್ನುಂಟುಮಾಡುವುದೆಂದು ಭಾರತೀಯ ಕಾವ್ಯಮೀಮಾಂಸೆ ಹೇಳಿದರೆ, ಪು.ತಿ.ನ. ಅವರು ಅಸಂಭಾವ್ಯತೆಯಿಂದ ಕಾವ್ಯಕ್ಕೆ ಬರುವ ರಮ್ಯತೆಯನ್ನು ಸಮರ್ಥಿಸಿರುವುದು ರೋಚಕವಾಗಿದೆ.[೧೭]

"ಇದುವರೆಗೆ ಕನ್ನಡ ಸಾಹಿತ್ಯದಲ್ಲಿ ಮೂಡಿರುವ ಕಾವ್ಯಮೀಮಾಂಸೆ ಏನಿದ್ದರೂ ಅದೆಲ್ಲ ಸಂಸ್ಕೃತದ ಪಡಿನೆಳಲಿನಂತಿದೆ. ನಮ್ಮ ಮುಂದಿನ ಕಾವ್ಯಮೀಮಾಂಸೆ ಮತ್ತು ಸಾಹಿತ್ಯ ವಿಮರ್ಶೆಗಳು ಪಾಶ್ಚಾತ್ಯ ಮತ್ತು ಭಾರತೀಯ ಕಾವ್ಯಮೀಮಾಂಸೆಗಳಿಂದ ಮಾತ್ರವಲ್ಲದೆ ತತ್ತ್ವಶಾಸ್ತ್ರ, ಯೋಗವಿಜ್ಞಾನ, ಸೌಂದರ್ಯಮೀಮಾಂಸೆ ಮತ್ತು ಮನಶ್ಶಾಸ್ತ್ರ ಇವುಗಳಿಂದಲೂ ಬೆಳಕು ಪಡೆದು ಧೀರವಾಗಿ, ಸ್ವತಂತ್ರವಾಗಿ ಪೂರ್ಣ ದೃಷ್ಟಿಯ ಕಡೆಗೆ ಮುನ್ನಡೆಯಬೇಕಾಗುತ್ತದೆ"[೧೮] ಎಂದು ಕುವೆಂಪು ಹೇಳಿರುವ ಮಾತು ತುಂಬಾ ಅರ್ಥಪೂರ್ಣವಾದದ್ದು. ಕನ್ನಡ ಕಾವ್ಯಮೀಮಾಂಸೆಯ ಜೊತೆಗೆ ಸೌಂದರ್ಯ ಮೀಮಾಂಸೆಯ ಚಿಂತನಧಾರೆಯು ವ್ಯವಸ್ಥಿತ ಅಧ್ಯಯನದ ಮೂಲಕ ಬೆಳವಣಿಗೆ ಹೊಂದಿರುವುದು ತುಂಬ ಮಹತ್ತ್ವದ ವಿಷಯವಾಗಿದೆ. ಜಿ.ಎಸ್. ಶಿವರುದ್ರಪ್ಪನವರು ತಮ್ಮ **ಸೌಂದರ್ಯ ಸಮೀಕ್ಷೆ** ಮಹಾಪ್ರಬಂಧದಲ್ಲಿ ಭಾರತೀಯ ಮತ್ತು ಪಾಶ್ಚಾತ್ಯ ಸೌಂದರ್ಯ ಮೀಮಾಂಸೆಯನ್ನೂ, ಪ್ರಾಚೀನ ಹಾಗೂ ನವೋದಯ ಕವಿಗಳ ಸೌಂದರ್ಯಾನುಭವವನ್ನೂ ವಿಸ್ತಾರವಾಗಿ ವಿವೇಚಿಸುವುದರ ಜೊತೆಗೆ ಭವ್ಯತೆ ಹಾಗೂ ಸತ್ಯಂ, ಶಿವಂ, ಸುಂದರಂ ದರ್ಶನವನ್ನು ಒದಗಿಸಿರುವುದು ಅವರ ಆಳವಾದ ಅಧ್ಯಯನಶೀಲತೆಗೆ ಸಾಕ್ಷಿಯಾಗಿದೆ. ಗೋಕಾಕರು ತಮ್ಮ **ಸೌಂದರ್ಯಮೀಮಾಂಸೆ** ಗ್ರಂಥದಲ್ಲಿ ಭಾರತೀಯ ಮತ್ತು ಪಾಶ್ಚಾತ್ಯ ಸೌಂದರ್ಯಶಾಸ್ತ್ರಗಳ ಅಧ್ಯಯನದ ಮೂಲಕ ರೂಪುಗೊಂಡ ಸಮನ್ವಯದ ವಿಚಾರಧಾರೆಯನ್ನು ಪ್ರಕಟಿಸುವುದರ ಜೊತೆಗೆ **'ಕವಿಕಾವ್ಯ ಮಹೋನ್ನತಿ'**ಯ ಆಶಯಗಳನ್ನು ಪ್ರತ್ಯೇಕ ಗ್ರಂಥದಲ್ಲಿ ವಿದಿತಪಡಿಸಿದ್ದಾರೆ.

ಜಿ.ಎಸ್. ಶಿವರುದ್ರಪ್ಪನವರು ಸೃಜನ ಹಾಗೂ ವಿಮರ್ಶನ ಪರಂಪರೆಯಲ್ಲಿ ತಮ್ಮ ಪ್ರತಿಭೆ, ಪಾಂಡಿತ್ಯವನ್ನು ಕ್ರಿಯಾಶೀಲಗೊಳಿಸುತ್ತ ಬಂದಿದ್ದು, ಅವರ ಅಧ್ಯಯನವು ಭಾರತೀಯ ಮತ್ತು ಪಾಶ್ಚಾತ್ಯ ಸಾಹಿತ್ಯ, ಕಾವ್ಯಮೀಮಾಂಸೆಯ ಆಳವಾದ ಪರಿಶೀಲನೆಯ ಫಲವಾಗಿದೆ. ಅವರ **'ಮಹಾಕಾವ್ಯ ಸ್ವರೂಪ'** ಮೀಮಾಂಸೆಯಲ್ಲಿ ಈ ಬಗೆಯ ವಿಚಾರಧಾರೆಯನ್ನು ನಾವು ಕಾಣುತ್ತೇವೆ. ಆದರೆ ಟಿ.ವಿ. ವೆಂಕಟಾಚಲಶಾಸ್ತ್ರಿಯವರ **ಮಹಾಕಾವ್ಯಲಕ್ಷಣ** ಭಾರತೀಯ ಶಾಸ್ತ್ರಪರಂಪರೆಯನ್ನು ವಿದಿತಪಡಿಸುತ್ತದೆಂಬುದನ್ನು ನಾವು ಗಮನಿಸಬಹುದು. ತೌಲನಿಕ ಕಾವ್ಯಮೀಮಾಂಸೆಯ ಚಿಂತನ ಭೂಮಿಕೆ ಕುವೆಂಪು ಅವರಲ್ಲಿ ಆರಂಭವಾದರೂ ಅದು ಜಿ.ಎಸ್. ಶಿವರುದ್ರಪ್ಪನವರ **ಕಾವ್ಯಾರ್ಥಚಿಂತನ** (೧೯೮೩)ದಲ್ಲಿ ಅಗ್ರಮಾನ್ಯ ಮಹತ್ತ್ವವನ್ನು ಪಡೆದಿದೆ.

ಕಾವ್ಯಾರ್ಥಚಿಂತನದ ಹದಿಮೂರು ಲೇಖನಗಳೂ ತೌಲನಿಕ ಕಾವ್ಯಮೀಮಾಂಸೆಯ ಬೇರೆ ಬೇರೆ ವಿಚಾರಗಳನ್ನು ಮಂಡಿಸುತ್ತವೆ. ಪ್ರತಿಭೆ, ಸ್ಫೂರ್ತಿ, ವ್ಯುತ್ಪತ್ತಿ ಒಂದು ಪರಿಕಲ್ಪನೆ ಉಪಮೆ–ರೂಪಕ–ಪ್ರತಿಮೆ, ರೀತಿಯ ಸ್ವರೂಪ–ಶೈಲಿಯ ಸಮಸ್ಯೆ, ಕವಿಸಮಯ ವಾಸ್ತವವಾದ ಮತ್ತು ನೈತಿಕನಿಲುವು, ಅಸಂಭಾವ್ಯತೆ–ನಿಯತಿಕೃತಿ, ನಿಯತಿರಾಹಿತ್ಯ ಕಾವ್ಯಸ್ವರೂಪ, ಭಾರತೀಯ ಕಾವ್ಯಮೀಮಾಂಸೆಯಲ್ಲಿ ಸಾಹಿತ್ಯವಿಮರ್ಶೆ ಈ ವಿಷಯಗಳ ಚಿಂತನದಲ್ಲಿ ಜಿ.ಎಸ್. ಶಿವರುದ್ರಪ್ಪನವರು ಭಾರತೀಯ ಕಾವ್ಯತತ್ತ್ವಗಳ ಹಿರಿಮೆಯನ್ನು ಪಾಶ್ಚಾತ್ಯ ತತ್ತ್ವಗಳ ಹಿನ್ನೆಲೆಯಲ್ಲಿ ವ್ಯಕ್ತಪಡಿಸಿದ್ದಾರೆ. 'ಸ್ಫೂರ್ತಿ' ಎನ್ನುವ ಪದ ನಮ್ಮಲ್ಲಿ ಹೊಳಹು, ಸ್ಪಂದನ, ಅಭಿವ್ಯಕ್ತಿ ಎನ್ನುವ ಅರ್ಥಗಳಲ್ಲಿ ಬಳಕೆಯಲ್ಲಿದ್ದರೂ, ಭಾರತೀಯ ಕಾವ್ಯಮೀಮಾಂಸೆಯಲ್ಲಿ ಅದು ಪ್ರತಿಭಾ ವ್ಯಾಪಾರಕ್ಕೆ ಸಂಬಂಧಿಸಿದ ಒಂದು ಪಾರಿಭಾಷಿಕ ಪದವಾಗಿ ಬಳಸಲ್ಪಟ್ಟಿಲ್ಲ.[೧೯]

ರೀತಿ, ಶೈಲಿಯ ವಿಚಾರದಲ್ಲಿ ಶೈಲಿಗಳು ಎಷ್ಟು ಎಂದು ಲೆಕ್ಕಹಾಕುವುದಾಗಲೀ ಪ್ರಾಚೀನ ಭಾರತೀಯ ಹಾಗೂ ಪಾಶ್ಚಾತ್ಯ ಅಲಂಕಾರಿಕರಂತೆ ಅವು ಎರಡು ಅಥವಾ ಮೂರು ಎಂದು ಹೇಳುವುದಾಗಲೀ ಸಮರ್ಪಕವಾದುದೆಂದು ತೋರುವುದಿಲ್ಲ. ಯಾಕೆಂದರೆ, ಎಷ್ಟು ಬಗೆಯ ಸಮರ್ಥಕರಾದ ಕವಿಗಳಿದ್ದಾರೋ ಅಷ್ಟೂ ಶೈಲಿಗಳಿರಲೂ ಸಾಧ್ಯ[೨೦] ಎಂಬುದನ್ನು ನಾವು ಗುರುತಿಸಿಕೊಳ್ಳಬೇಕಾಗುತ್ತದೆ ಎಂದೂ ಅವರು ಸೂಚಿಸಿದ್ದಾರೆ. ಭಾರತೀಯ ಕಾವ್ಯಮೀಮಾಂಸೆಯ ಬಹುಮಟ್ಟಿನ ತತ್ತ್ವಗಳು ವಿಮರ್ಶೆಯ ಕ್ರಿಯೆಗೆ ಅಷ್ಟೇನೂ ಸಹಾಯಕವಾಗುವಂತೆ ತೋರುವುದಿಲ್ಲ.... ಭಾರತೀಯ ಕಾವ್ಯಮೀಮಾಂಸೆಯ ಬಹುತೇಕ ಪರಿಕಲ್ಪನೆಗಳು ಬಿಡಿಬಿಡಿಯಾದ ಕಾವ್ಯ ಭಾಗಗಳ ಸ್ವಾರಸ್ಯವನ್ನು ಗುರುತಿಸಲು ಸಹಾಯಕವಾಗುತ್ತವೆಯೇ ಹೊರತು, ಇಡಿಯಾಗಿ ಕೃತಿಯೊಂದನ್ನು ಅರ್ಥಮಾಡಿಕೊಡುವ ಮೌಲ್ಯಮಾಪನಮೂಲವಾದ ವಿಮರ್ಶೆಯಾಗ ಲಾರವು[೨೧] ಎಂಬ ಜಿ.ಎಸ್. ಶಿವರುದ್ರಪ್ಪನವರ ಅಭಿಮತವನ್ನು ವಿಮರ್ಶಕರಾದ ಜಿ.ಎಸ್. ಆಮೂರ[೨೨] ಮತ್ತು ಗಿರಡ್ಡಿ ಗೋವಿಂದರಾಜರು[೨೩] ಸಮ್ಮತಿಸಿರುವರಲ್ಲದೆ ನಮ್ಮ ಸಮಕಾಲೀನ ವಿಮರ್ಶೆ ಭಾರತೀಯ ಕಾವ್ಯಮೀಮಾಂಸೆಯ ತಾತ್ತ್ವಿಕ ನೆಲೆಯನ್ನು ಪಡೆದುಕೊಳ್ಳುತ್ತಿಲ್ಲವೆಂದೂ ಹೇಳಿದ್ದಾರೆ. 'ಸಹೃದಯನಿಗೆ ಅತ್ಯಂತ ಮುಖ್ಯವಾದ

ಸ್ಥಾನವನ್ನು ಕೊಟ್ಟ ಮತ್ತು ಕಾವ್ಯದ ಸಾರವಾದ ರಸದ ಚರ್ಚೆಯನ್ನು ಸಹೃದಯಾನುಭವವನ್ನೇ ಕೇಂದ್ರವಾಗಿರಿಸಿಕೊಂಡು ನಡೆಯಿಸಿದ ಭಾರತೀಯ ಕಾವ್ಯಮೀಮಾಂಸೆ ತನ್ನ ಕಾವ್ಯಚರ್ಚೆಯನ್ನು ಕವಿಗಳಿಗಾಗಿ ಉದ್ದೇಶಿಸಿತೆ ಹೊರತು ಸಹೃದಯರಿಗಲ್ಲ'[೨೪] ಎಂದು ಹೇಳುವಲ್ಲಿ ಜಿ.ಎಸ್. ಶಿವರುದ್ರಪ್ಪನವರ ಒಳನೋಟವನ್ನು ನಾವು ಕಾಣುತ್ತೇವೆ. ಹೀಗೆ ತಮ್ಮ **ಕಾವ್ಯಾರ್ಥಚಿಂತನ**ದಲ್ಲಿ ಸೃಜನಸಾಹಿತ್ಯವನ್ನು ಹಿನ್ನೆಲೆಯಾಗಿಟ್ಟುಕೊಂಡು ತೌಲನಿಕ ಕಾವ್ಯಮೀಮಾಂಸೆಯ ಚಿಂತನಧಾರೆಯನ್ನು ಹರಿಸಿರುವ ಶಿವರುದ್ರಪ್ಪನವರು ತಮ್ಮ ವಿಶ್ಲೇಷಣಕೌಶಲ್ಯ, ಆಳವಾದ ಒಳನೋಟಗಳನ್ನು ಒದಗಿಸಿದ್ದಾರೆ. ನಿಶ್ಚಿತವಾಗಿಯೂ ಕನ್ನಡ ಕಾವ್ಯಮೀಮಾಂಸೆಯ ಚಿಂತನದಲ್ಲಿ ಕಾವ್ಯಮೀಮಾಂಸೆಯ ಪಾರಿಭಾಷಿಕ ಪದಗಳ ಚಾರಿತ್ರಿಕ ಹಿನ್ನೆಲೆ ಮತ್ತು ಸಾಹಿತ್ಯ ಸ್ವರೂಪ, ಚರ್ಚೆಯನ್ನು ಕನ್ನಡಿಗರಿಗೆ ಅರಿಯುವಂತೆ ಮಾಡಿದ ಜಿ.ಎಸ್. ಶಿವರುದ್ರಪ್ಪನವರು, ಕೆ. ವಿ. ನಾರಾಯಣರೊಂದಿಗೆ ಸಂಪಾದಿಸಿದ **ಕಾವ್ಯಾರ್ಥ ಪದಕೋಶ** (೧೯೮೦) ಈ ನಿಟ್ಟಿನಲ್ಲಿ ಉಲ್ಲೇಖನೀಯವಾದದ್ದು. **'ಕನ್ನಡ ಕವಿಗಳ ಕಾವ್ಯಕಲ್ಪನೆ'** ಎಂಬ ಗ್ರಂಥದಲ್ಲಿ ಜಿ.ಎಸ್. ಶಿವರುದ್ರಪ್ಪನವರು ಕನ್ನಡ ಕಾವ್ಯಪರಂಪರೆಯಲ್ಲಿ ಕಾವ್ಯಮೀಮಾಂಸೆಯ ವಿಚಾರಧಾರೆ ಹರಿದುಬಂದ ಬಗೆಯನ್ನು ಅರ್ಥಪೂರ್ಣವಾಗಿ ವಿವೇಚಿಸಿದ್ದಾರೆ.

ಭಾರತೀಯ ಮತ್ತು ಪಾಶ್ಚಾತ್ಯ ಕಾವ್ಯಮೀಮಾಂಸೆಗಳ ಎತ್ತರ–ಬಿತ್ತರ, ಸ್ವರೂಪ–ಸಾಧನೆ, ಇತಿ–ಮಿತಿಗಳನ್ನು ಅವುಗಳ ಐತಿಹಾಸಿಕ ಹಿನ್ನೆಲೆಯಲ್ಲಿಟ್ಟು ಜೊತೆ ಜೊತೆಯಲ್ಲಿಯೇ ಸಾದೃಶ್ಯ–ವೈದೃಶ್ಯಗಳನ್ನು ಗುರುತಿಸುವ ಪ್ರಾಮಾಣಿಕ ಪ್ರಯತ್ನದ ಫಲವೇ ಎಚ್. ತಿಪ್ಪೇರುದ್ರಸ್ವಾಮಿಗಳ **ತೌಲನಿಕ ಕಾವ್ಯಮೀಮಾಂಸೆ** (೧೯೮೫). ಭಾರತೀಯ ಮತ್ತು ಪಾಶ್ಚಾತ್ಯ ಕಾವ್ಯಮೀಮಾಂಸಕರನ್ನು ತೌಲನಿಕವಾಗಿ ಅಭ್ಯಸಿಸಲು ಸಾಧ್ಯವಾಗುವ ಅಂಶ ಭರತ – ಅರಿಸ್ಟಾಟಲ್, ವಾಮನ – ಹೊರೆಸ್, ಅಭಿನವಗುಪ್ತ –ಕ್ಯಾಂಟ್ ಇವರಲ್ಲಿ ಮುಖ್ಯವಾಗಿ ಕಂಡುಬರುವುದಾದರೂ ತಿಪ್ಪೇರುದ್ರಸ್ವಾಮಿಯವರು ಕಾವ್ಯತತ್ತ್ವದ ಪರಿಕಲ್ಪನೆಯನ್ನು ಗಮನದಲ್ಲಿಟ್ಟುಕೊಂಡು ಒಟ್ಟು ಕಾವ್ಯಮೀಮಾಂಸೆಯ ವಿಕಾಸದ ನೆಲೆಯಲ್ಲಿ ತೌಲನಿಕ ಸಮೀಕ್ಷೆ ನಡೆಸಿದ್ದಾರೆ. ಭಾರತೀಯರಲ್ಲಿ ಕಾವ್ಯಮೀಮಾಂಸೆ ರಸ–ಧ್ವನಿ–ಔಚಿತ್ಯದ ಸಿದ್ಧಾಂತಪ್ರಧಾನ ದೃಷ್ಟಿಯಾಗಿ ಬೆಳೆದುಬಂದರೆ, ಪಾಶ್ಚಾತ್ಯರಲ್ಲಿ ವಿಮರ್ಶಾದೃಷ್ಟಿ ಮುಖ್ಯವಾಗಿ ಬೆಳವಣಿಗೆ ಹೊಂದಿರುವುದಾದರೂ ಕವಿಕಾವ್ಯ ಕಲ್ಪನೆ ಮಹೋನ್ನತಿಯ ವಿಚಾರಗಳಲ್ಲಿ ಪರಸ್ಪರ ಚಿಂತನೆಯ ಎಳೆಗಳಿವೆ. ಕಾವ್ಯದ ಪರಿಕಲ್ಪನೆ ಸೌಂದರ್ಯಾನುಭವ–ಸಹೃದಯ, ಕವಿಮನೋವ್ಯಾಪಾರ, ವಕ್ರತೆ, ಕಾವ್ಯಪ್ರತಿಮೆ, ರೀತಿ–ಮಾರ್ಗ–ಶೈಲಿ, ಧ್ವನಿಪ್ರಪಂಚ, ರಸಸೂತ್ರ–ಮಾನಸಿಕ ದೂರ, ಔಚಿತ್ಯವಿವೇಕ ಸಿದ್ಧಾಂತಗಳಲ್ಲದೆ ಕಾವ್ಯ ಮತ್ತು ಜೀವನಮೌಲ್ಯಗಳ ಕುರಿತಾದ ಕಾವ್ಯಮಾನಂದಾಯ ಮೌಲ್ಯಮಾಪನಸಿದ್ಧಾಂತ, ವ್ಯಕ್ತಿನಿರಸನವಾದದ ಕುರಿತಾದ ದೃಷ್ಟಿಕೋನವನ್ನು ತಿಪ್ಪೇರುದ್ರಸ್ವಾಮಿಯವರು ಅತ್ಯಂತ ವಿಸ್ತಾರವಾಗಿ ವಿವೇಚಿಸಿದ್ದು ತೌಲನಿಕ ಕಾವ್ಯಮೀಮಾಂಸೆಗೆ ಭದ್ರವಾದ ನೆಲೆ ಒದಗಿಸಿಕೊಟ್ಟಂತಾಗಿದೆ. ಜಿ.ಎಚ್. ಶ್ರೀಧರರ **ಕಾವ್ಯಸೂತ್ರವು** ತೌಲನಿಕ ಕಾವ್ಯಶಾಸ್ತ್ರ ವಿಚಾರವನ್ನು ವಿಶಿಷ್ಟವಾದ ರೀತಿಯಲ್ಲಿ ನೀಡುತ್ತದೆ.

ಪಾಶ್ಚಾತ್ಯ ಕಾವ್ಯಮೀಮಾಂಸೆಯ ವಿಚಾರಧಾರೆ ಅನುವಾದ ಮತ್ತು ಸ್ವತಂತ್ರ ಕೃತಿಗಳ ಮೂಲಕ ಕನ್ನಡಕ್ಕೆ ಬಂದುದು ಕನ್ನಡ ಕಾವ್ಯಮೀಮಾಂಸೆಯ ದೃಷ್ಟಿಯಿಂದ ಮಹತ್ತ್ವಪೂರ್ಣವಾದದ್ದು. ಬಹು ಹಿಂದೆಯೇ ಪ್ರಕಟವಾದ ಎನ್. ಬಾಲಸುಬ್ರಹ್ಮಣ್ಯ ಅವರ **ಅರಿಸ್ಟಾಟಲನ ಕಾವ್ಯಮೀಮಾಂಸೆ** ಗ್ರಂಥವು ಅರಿಸ್ಟಾಟಲನ ಅನುಕರಣ ಸಿದ್ಧಾಂತವನ್ನೂ, ರುದ್ರನಾಟಕ ಮೀಮಾಂಸೆಯನ್ನೂ ವಿವೇಚಿಸುತ್ತದೆ. ಸಿ.ಪಿ.ಕೆ.ಯವರ **ಸಾಹಿತ್ಯಪ್ರವೇಶ, ಪಾಶ್ಚಾತ್ಯ ಕಾವ್ಯಚಿಂತನ, ಎಲಿಯಟ್ಟನ ಮೂರು ಉಪನ್ಯಾಸಗಳು ಆ್ಯಬರ್‌ಕ್ರಾಂಬಿಯ ಸಾಹಿತ್ಯ ವಿಮರ್ಶೆಯ ಮೂಲತತ್ತ್ವಗಳು,** ಕೆ. ವೆಂಕಟರಾಮಪ್ಪನವರ **ಪ್ಲೇಟೋನ ರಿಪಬ್ಲಿಕ್** ಪಾಶ್ಚಾತ್ಯ ಕಾವ್ಯ ಸಾಹಿತ್ಯ ಚಿಂತನವನ್ನು ನಮಗೆ ನೀಡುತ್ತವೆ. ಇದೇ ಸಂದರ್ಭದಲ್ಲಿ ಬಿ.ಬಿ. ಹೆಂಡಿಯವರ **ಪಾಶ್ಚಾತ್ಯ ಕಾವ್ಯಮೀಮಾಂಸೆ** ಎಂಬ ಚಿಕ್ಕ ಗ್ರಂಥವನ್ನೂ ಹೆಸರಿಸಬೇಕು.

ವಿ.ಎಂ. ಇನಾಮದಾರರ **ಪಾಶ್ಚಾತ್ಯ ಕಾವ್ಯಮೀಮಾಂಸೆ** ಅವರ ಬಹುಕಾಲದ ಅಧ್ಯಯನದ ಫಲವಾಗಿದೆ. ಗ್ರೀಕ್‌ನಲ್ಲಿ ಆರಂಭವಾದ ಪಾಶ್ಚಾತ್ಯ ಕಾವ್ಯಮೀಮಾಂಸೆ ಇಂಗ್ಲಿಷ್ ಸಾಹಿತ್ಯದಲ್ಲಿ ವ್ಯಾಪಕವಾಗಿ ಬೆಳೆದುಬಂದ ಬಗೆಯನ್ನು ಇನಾಮದಾರ ಅವರು ಪ್ರಕಟಿಸಿದ್ದಾರೆ. ಇದರಿಂದ ಪಾಶ್ಚಾತ್ಯ ಕಾವ್ಯಮೀಮಾಂಸೆಯ ಚಾರಿತ್ರಿಕ ಬೆಳವಣಿಗೆಯ ವಿಸ್ತಾರದರ್ಶನ ನಮಗೆ ಉಪಲಬ್ಧವಾಗಿದೆ. ಪಾಶ್ಚಾತ್ಯ ಕಾವ್ಯಮೀಮಾಂಸೆಯಲ್ಲಿ ವಿಮರ್ಶನ ತತ್ತ್ವ, ಪರಂಪರೆ ಬೆಳೆದುಬಂದ ಬಗೆಯನ್ನು ನೋಡುವಾಗ ಸಾಹಿತ್ಯ ಸ್ವರೂಪ, ಪ್ರಯೋಜನ, ಅದು ನೀಡುವ ಸಂಸ್ಕಾರ, ಮಾನವ ಜೀವನದ ಮೇಲೆ ಬೀರುವ ಪ್ರಭಾವ, ಕೃತಿವಿಮರ್ಶೆಯ ತತ್ತ್ವಚಿಂತನೆಯತ್ತ ಪಾಶ್ಚಾತ್ಯರು ನೀಡಿದ ಮಹತ್ತ್ವವನ್ನು ಇನಾಮದಾರರು ಇಲ್ಲಿ ವ್ಯಕ್ತಪಡಿಸಿದ್ದಾರೆ.

ಜಿ.ಎಸ್. ಆಮೂರ ಅವರು ಎಲಿಯಟ್ಟನ ಕಾವ್ಯಮೀಮಾಂಸೆಯ ವಿಚಾರಗಳನ್ನು **(ವ್ಯವಸಾಯ,** ಪುಟ ೨೨೨-೨೪೬) ಕನ್ನಡಕ್ಕೆ ನೀಡಿದ್ದಾರೆ. ಪಾಶ್ಚಾತ್ಯ ಸಾಹಿತ್ಯದ ಪ್ರೇರಣೆಯಿಂದ ಆಧುನಿಕ ಕನ್ನಡ ಸಾಹಿತ್ಯವು ಹೊಸ ರೂಪ, ಗುಣ, ವಿಧಾನಗಳನ್ನೂ ತತ್ತ್ವಮೀಮಾಂಸೆಯನ್ನೂ ಪಡೆದುಕೊಂಡು ಬೆಳೆದಿದೆ. ನವೋದಯ ಸಾಹಿತಿಗಳು ಸೃಜನಸಾಹಿತ್ಯದ ಜೊತೆಗೆ ವಿಮರ್ಶೆಯ ವ್ಯವಸಾಯವನ್ನೂ, ಸಾಹಿತ್ಯಮೀಮಾಂಸೆಯ ಕೃತಿಗಳನ್ನೂ ರಚಿಸಿ ಆಧುನಿಕ ಸಾಹಿತ್ಯದ ಬೆಳವಣಿಗೆಗೆ ಕಾರಣರಾದರು. ಹೊಸಗನ್ನಡ ಸಾಹಿತಿಗಳ ಸಾಹಿತ್ಯವಿಮರ್ಶೆಯ ಗ್ರಂಥಗಳಲ್ಲಿ ಕಾವ್ಯಮೀಮಾಂಸೆಯ ವಿಚಾರಗಳೂ ಬೆರೆತುಕೊಂಡಿದ್ದು, ಅದನ್ನು ಬೇರ್ಪಡಿಸಿಕೊಂಡು ನಾವು ಪರಿಶೀಲಿಸಬೇಕಾಗುತ್ತದೆ. ನವೋದಯ ಸಾಹಿತ್ಯದ ಮೇಲೆ ಆಂಗ್ಲ ರೊಮ್ಯಾಂಟಿಕ್ ಕವಿಗಳ ಪ್ರಭಾವ ತೀವ್ರವಾಗಿ ಆದದ್ದರಿಂದ ಕನ್ನಡದಲ್ಲಿ ಹೊಸ ಸಾಹಿತ್ಯಮೀಮಾಂಸೆ ಬೆಳೆಯಿತು. ಶ್ರೀಯವರು ಹಾಗೂ ಅವರ ಶಿಷ್ಯವರ್ಗದವರ ಮೇಲೆ ವರ್ಡ್ಸ್‌ವರ್ಥ್ ಕವಿಯ ಕಾವ್ಯಸಿದ್ಧಾಂತದ ಪ್ರಭಾವ ತೀವ್ರವಾಗಿತ್ತು.[೨೫] ನವೋದಯ ಸಾಹಿತ್ಯಸಿದ್ಧಾಂತವನ್ನು ಮೊದಲು ಪ್ರತಿಪಾದಿಸುವ ಮಾಸ್ತಿಯವರ **ಸಾಹಿತ್ಯ** (೧೯೨೪) ಗ್ರಂಥ ಸಾಹಿತ್ಯದ ಉದ್ದೇಶ, ಕಾವ್ಯದ ಪದ್ಧತಿಗಳು ಸಾಹಿತ್ಯ ಮಾರ್ಗಗಳು (Classicism and Romanticism) ಬುದ್ಧಿ-ರಾಗಗಳ ಚರ್ಚೆ

ಕೀಟ್ಸ್ ಕವಿಯ ಸೂತ್ರ, ಕಲಾಪಕ್ಷ ಮತ್ತು ನೀತಿಪಕ್ಷಗಳ ಕುರಿತಾದ ವಾದ ಇವೇ ಮೊದಲಾದ ವಿಷಯಗಳನ್ನು ಸಾಹಿತ್ಯ, ಸಾಹಿತಿ, ಪಾಠಕ ಈ ಮೂವರ ದೃಷ್ಟಿಕೋನದಿಂದ ಪರಿಶೀಲಿಸಿ ವಿವೇಚಿಸಿದೆ.[೨೬]

ಡಿ.ವಿ.ಜಿ. ಅವರು **ಸಾಹಿತ್ಯಶಕ್ತಿ, ಜೀವನ ಸೌಂದರ್ಯ** ಮತ್ತು **ಸಾಹಿತ್ಯ** ಗ್ರಂಥಗಳಲ್ಲಿ ಭಾರತೀಯ ಕಾವ್ಯಮೀಮಾಂಸೆಯನ್ನು ತತ್ತ್ವಶಾಸ್ತ್ರದ ವಿಚಾರಗಳೊಂದಿಗೆ ವಿವೇಚಿಸಿದ್ದಾರೆ. ವಿ. ಸೀತಾರಾಮಯ್ಯನವರ **ಕವಿಕಾವ್ಯದೃಷ್ಟಿ** ಮತ್ತು ಸಾಹಿತ್ಯವಿಮರ್ಶೆಯಲ್ಲಿ ಅರ್ಥ ಮತ್ತು ಮೌಲ್ಯಗಳಲ್ಲಿ ಮನಶ್ಶಾಸ್ತ್ರೀಯ ದೃಷ್ಟಿಯೂ, ಕಲಾಮೀಮಾಂಸೆಯೂ ಬೆರೆತಿರುವುದನ್ನು ನಾವು ಕಾಣುತ್ತೇವೆ. ಗೋಕಾಕರು **ಸಾಹಿತ್ಯದಲ್ಲಿ ಪ್ರಗತಿ, ಇಂದಿನ ಕನ್ನಡ ಕಾವ್ಯದ ಗೊತ್ತುಗುರಿಗಳು, ನವ್ಯತೆ ಹಾಗೂ ಕಾವ್ಯಜೀವನ, ವಿಮರ್ಶೆಯ ತತ್ತ್ವಗಳು ಮತ್ತು ಪ್ರಾಯೋಗಿಕವಿಮರ್ಶೆ** ಮೊದಲಾದ ಗ್ರಂಥಗಳಲ್ಲಿ ಭಾರತೀಯ ಮತ್ತು ಪಾಶ್ಚಾತ್ಯ ಕಾವ್ಯಮೀಮಾಂಸೆಯಿಂದ ಸಂಪನ್ನವಾದ, ಪರಂಪರೆ ಮತ್ತು ಪ್ರಯೋಗಶೀಲತೆಯ ವಿಚಾರಗಳ ನಿಲುವುಗಳನ್ನು ವಿಶ್ವಮಾನವತಾವಾದದ ನೆಲೆಗಳಿಂದ ತಮ್ಮ ಚಿಂತನಶೀಲತೆಯನ್ನು ಪ್ರಕಟಪಡಿಸಿದ್ದಾರೆ. ನವ್ಯತೆಯಲ್ಲಿ ನವ್ಯಕಾವ್ಯದ ಮೀಮಾಂಸೆಯನ್ನು ಗೋಕಾಕರು ನೀಡಿದ್ದಾರೆ. ರಂ. ಶ್ರೀ. ಮುಗಳಿ ಅವರು **ಸಾಹಿತ್ಯೋಪಾಸನೆ, ವಾಙ್ಮಯ ತಪಸ್ಸು ಮಾತೆಂಬುದು ಜ್ಯೋತಿರ್ಲಿಂಗ, ಕನ್ನಡ ಸಾಹಿತ್ಯದಲ್ಲಿ ಸರಸ್ವತಿಯ ದರ್ಶನ, ಮಹಾಕೃತಿ** ಗ್ರಂಥದಲ್ಲಿ ಕಾವ್ಯದ ಉತ್ಪತ್ತಿ, ಕಲೆಗಾಗಿ ಕಲೆ ಹಾಗೂ ಕನ್ನಡ ಕವಿಗಳ ಕಾವ್ಯಮೀಮಾಂಸೆ ಕಾವ್ಯಸ್ವರೂಪ, ಮಹಾಕೃತಿಯ ಲಕ್ಷಣಗಳನ್ನು ವಿವೇಚಿಸಿದ್ದಾರೆ. ರಾಳ್ಳಪಳ್ಳಿ ಅನಂತಕೃಷ್ಣ ಶರ್ಮರ **ಸಾಹಿತ್ಯ ಮತ್ತು ಜೀವನಕಲೆ**ಯು ಸಾಹಿತ್ಯ ಕಲಾವಿವೇಚನೆಯನ್ನು ನೀಡುತ್ತದೆ.

ಎಸ್.ಎಲ್. ಭೈರಪ್ಪನವರ **ಸಾಹಿತ್ಯದಲ್ಲಿ ಪ್ರತೀಕ, ಸತ್ಯ ಮತ್ತು ಸೌಂದರ್ಯ** ಗ್ರಂಥಗಳಲ್ಲಿ ತತ್ತ್ವಶಾಸ್ತ್ರದ ವಿಚಾರಗಳ ದೃಷ್ಟಿಕೋನ ಪ್ರಾಮುಖ್ಯತೆ ಪಡೆದದ್ದನ್ನು ನಾವು ಕಾಣುತ್ತೇವೆ. ಪ್ರಭುಶಂಕರ ಅವರ **ಕನ್ನಡದಲ್ಲಿ ಭಾವಗೀತೆ** ನವೋದಯ ಕಾವ್ಯದ ಪ್ರಮುಖ ಭಾಗವಾದ ಭಾವಗೀತೆಯ ಸ್ವರೂಪ, ಲಕ್ಷಣ, ಮೀಮಾಂಸೆ ಹಾಗೂ ಕನ್ನಡ ಭಾವಗೀತೆಗಳ ವಿಶಿಷ್ಟತೆಯನ್ನು ವಿವೇಚಿಸುತ್ತದೆ.

ಕನ್ನಡ ನವೋದಯ ಕಾವ್ಯಪರಂಪರೆಯ ಮೇಲೆ ಆಂಗ್ಲ ರೊಮ್ಯಾಂಟಿಕ್ ಕಾವ್ಯಪರಂಪರೆಯ ಪ್ರಭಾವವಾದದ್ದನ್ನು ನಾವು ಗಮನಿಸುವಾಗ Romanticism ಅಥವಾ ರಮ್ಯವಾದದ ಮುಖ್ಯ ಲಕ್ಷಣಗಳನ್ನು ಈ ರೀತಿ ವಿದಿತಪಡಿಸಬಹುದು. ೧] ಭಾವನೆ ಕಲ್ಪನೆಗಳಲ್ಲಿ ನಂಬಿಕೆ, ೨] ಪ್ರಾಕೃತಿಕ ಹಾಗೂ ಮಧ್ಯಯುಗೀನ ಜೀವನದ ಹಾಗೂ ಗ್ರಾಮೀಣ ಪ್ರಶಾಂತತೆಯಲ್ಲಿ ಆಸ್ಥೆ, ೩] ವೈಯಕ್ತಿಕ ಅನುಭವ ನಿರೂಪಣೆಗಳಲ್ಲಿ ಆಸಕ್ತಿ ೪] ಸ್ವಕಲ್ಪಿತ ಸ್ವೋಪಜ್ಞ ಅಭಿವ್ಯಕ್ತಿ, ೫] ಸೌಂದರ್ಯಾನುಭೂತಿ, ಆತ್ಮಿಕ ಮೌಲ್ಯ ಪ್ರಕೃತಿರಹಸ್ಯದ ಶೋಧನೆ, ೬] ಆಡುಮಾತಿನ ಭಾಷೆ, ಪ್ರತಿಮೆ, ಸಂಕೇತಗಳ ಬಳಕೆ. ಆದರ್ಶವಾದ, ರಾಷ್ಟ್ರೀಯ ಭಾವನೆಯ ಅಭೀಪ್ಸೆ, ವ್ಯಕ್ತಿನಿಷ್ಠವಾದ ಅನುಭವಗಳಿಂದ ಕೂಡಿದ ನವೋದಯ ಕಾವ್ಯ ಆಧುನಿಕ ಕನ್ನಡ ಕಾವ್ಯದಲ್ಲಿ ಹೊಸಮಾರ್ಗವನ್ನು ತೆರೆದಿದೆ. ಕನ್ನಡ ನವೋದಯ ಕಾವ್ಯದ ಉತ್ಕರ್ಷಕ್ಕೆ ಕವಿಗಳ ಸೃಜನಶೀಲತೆ ಕಾರಣವಾಗಿರು

ವಂತೆಯೇ ಕಾವ್ಯಮೀಮಾಂಸೆಯ ತಾತ್ತ್ವಿಕನೆಲೆಯೂ ತಳಹದಿಯಾಗಿದೆ. ಹೊಸ ಕಾವ್ಯದ ಪುನರುಜ್ಜೀವನಕ್ಕೆ ಕಾರಣರಾದ ಕವಿಗಳು ಕಾವ್ಯದ ಸ್ವರೂಪ, ಅದರ ಸೃಷ್ಟಿಕಾರ್ಯದ ಬಗೆಗೆ ತಾಳಿದ ಒಲವು-ನಿಲುವುಗಳು ಅವರ ಕಾವ್ಯಮೀಮಾಂಸೆಯ ವಿಚಾರಗಳಲ್ಲಿ ಕಾಣುವಂತೆಯೇ ಕವಿತೆಗಳಲ್ಲೂ ಮೈಯ್ದಾಳಿದ ಬಗೆಯನ್ನು ನಾವು ಗುರುತಿಸಬಹುದು. ಕಾವ್ಯದ ಸೃಷ್ಟಿವಿಧಾನ, ಕಾವ್ಯಕ್ಕೂ ಸಹೃದಯನಿಗೂ ಇರುವ ಸಂಬಂಧ, ಕವಿಕರ್ಮ ಕಾವ್ಯಪ್ರಯೋಜನ ಹೀಗೆ ಕಾವ್ಯಮೀಮಾಂಸೆಗೆ ಸಂಬಂಧಿಸಿದ ಗಂಭೀರವಾದ ಆಲೋಚನೆಯನ್ನು ಕವಿತೆಗಳ ಮೂಲಕ ಅಭಿವ್ಯಕ್ತಿಸಿದ ವಿಶಿಷ್ಟ ಪರಂಪರೆ ಕನ್ನಡ ನವೋದಯ ಕವಿಗಳ ಕವಿತೆಗಳಲ್ಲಿ ಅಂತಸ್ಥವಾಗಿದೆ.

ಕವಿತೆಗಳಲ್ಲಿ ಕಾವ್ಯಮೀಮಾಂಸೆ ಎನ್ನುವುದು ಒಂದು ರೀತಿಯಲ್ಲಿ 'ಸೀಮೋಲ್ಲಂಘನ' ಎನ್ನಬಹುದು. ಕವಿ ತಾನೇ ಕವಿತೆಗಳನ್ನು ಬರೆದು ಅದರ ಸೃಷ್ಟಿವಿಧಾನದ ಬಗೆಗೆ ತನ್ನ ಕಾವ್ಯಚರ್ಚೆಯನ್ನು, ಮನಸ್ಸಿನ ಮಂಥನವನ್ನು ಪುನಃ ಕವಿತೆಗಳ ಮೂಲಕವೇ ಪ್ರಕಟಿಸುವುದು ಕಾವ್ಯಪ್ರಪಂಚದಲ್ಲಿ ಮಹತ್ತ್ವಪೂರ್ಣವಾಗುತ್ತದೆ. ಇಂಥ ಕಾವ್ಯ ಮೀಮಾಂಸೆಯ ಕವಿತೆಗಳನ್ನು ಪರಿಭಾವಿಸಿದಾಗ ಆ ಕವಿಯ ಕಾವ್ಯಧೋರಣೆಯನ್ನು ಕಾವ್ಯತತ್ತ್ವ ಪರಂಪರೆಯ ಪ್ರಜ್ಞೆಯನ್ನು ಅರ್ಥೈಸಲು ಸಾಧ್ಯವಾಗುತ್ತದೆ. ಕಾವ್ಯಸೃಷ್ಟಿ ಕವಿಗೆ ಅರ್ಥಪೂರ್ಣ ಕ್ರಿಯೆಯಾಗಿರುವುದರಿಂದ ಅವನ ಕವಿತೆ ಹಾಗೂ ಕಾವ್ಯಮೀಮಾಂಸೆಯ ವಿಚಾರದ ಸಂಬಂಧವನ್ನು, ಕ್ರಿಯೆ, ಪ್ರತಿಕ್ರಿಯೆಗಳ ನಡುವಿನ ವ್ಯತ್ಯಾಸವನ್ನು ಅರಿಯಲು ಸಾಧ್ಯವಾಗುತ್ತದೆ. ಕನ್ನಡದ ನವೋದಯ ಕವಿಗಳಲ್ಲಿ ಮುಖ್ಯವಾಗಿ ಡಿ.ವಿ.ಜಿ., ಮಾಸ್ತಿ ಕುವೆಂಪು, ಬೇಂದ್ರೆ, ಪು.ತಿ.ನ., ಜಿ.ಎಸ್. ಶಿವರುದ್ರಪ್ಪ, ಕಣವಿ ಮೊದಲಾದ ಕವಿಗಳ ಕಾವ್ಯಮೀಮಾಂಸೆಯ ಕವಿತೆಗಳು ಅಧ್ಯಯನೀಯವಾಗಿದ್ದು ಈ ಹಿನ್ನೆಲೆಯಲ್ಲಿ ವಿದ್ವಾಂಸರು ಗ್ರಂಥಗಳನ್ನೂ, ಲೇಖನಗಳನ್ನೂ ಪ್ರಕಟಿಸಿದ್ದಾರೆ.[೨] ನವೋದಯ ಕವಿಗಳು ಭಾರತೀಯ ಮತ್ತು ಪಾಶ್ಚಾತ್ಯ ಕಾವ್ಯತತ್ತ್ವ ವಿಚಾರಗಳ ಸಮನ್ವಯವನ್ನು ಸಾಧಿಸುವಲ್ಲಿ ದಿಟ್ಟ ಹೆಜ್ಜೆ ಇಟ್ಟಿದ್ದಾರೆ. ಅವರು ಭಾರತೀಯ ಕಾವ್ಯಮೀಮಾಂಸೆಯ ತಿರುಳಾದ ರಸೋನ್ನತಿಯ ವಿಚಾರವನ್ನು ಅರ್ಥಪೂರ್ಣವಾಗಿ ಪ್ರತಿಪಾದಿಸಿದ್ದಾರೆ. ಈ ರಸಸಂಪ್ರದಾಯವು ನವೋದಯ ಕಾವ್ಯಪರಂಪರೆಯ ಪ್ರಮುಖ ಲಕ್ಷಣವಾಗಿರುವುದನ್ನು ನಾವು ಗುರುತಿಸಬಹುದು. ಬೇಂದ್ರೆಯವರು ಹೇಳಿದಂತೆ-

ನೂರು ಮರ ನೂರು ಸ್ವರ
ಒಂದೊಂದೂ ಅತಿಮಧುರ
ಬಂಧವಿರದ ಬಂಧುರ
ಸ್ವಚ್ಛಂದ ಸುಂದರ

ನವೋದಯ ಕಾವ್ಯ ನಿರ್ಬಂಧದಿಂದ ಸ್ವಚ್ಛಂದತೆಯತ್ತ ಹರಿದದ್ದನ್ನು ನಾವು ಕಾಣುತ್ತೇವೆ. ಭಾವಲೋಕದ ವಿಹಾರಯಾತ್ರೆ ಕೈಕೊಂಡ ಕವಿಯು ಸೌಂದರ್ಯ ದರ್ಶನ ಪಡೆದುಕೊಂಡದ್ದರಿಂದ ಕಾವ್ಯಮೀಮಾಂಸೆಯಲ್ಲಿ ಸೌಂದರ್ಯ ಮೀಮಾಂಸೆಯೂ ಸೇರಿ ವಿಶಿಷ್ಟತೆ ಪಡೆದುಕೊಂಡಿದೆ. ಕಾವ್ಯಕ್ಕೂ ಸಹೃದಯನಿಗೂ ಇರುವ ಸಂಬಂಧವನ್ನು

ನವೋದಯ ಕವಿಗಳು ಮತ್ತೆ ಮತ್ತೆ ಸ್ಥಿರಪಡಿಸುವ ವಿಚಾರವನ್ನು ವ್ಯಕ್ತಪಡಿಸಿದ್ದಾರೆ. ಕಾವ್ಯಭಾಷೆ ಭಾವೋಪಯೋಗಿಯಾಗಿರುವಂತೆ, ಲೋಕೋಪಯೋಗಿಯಾಗಬೇಕೆಂದು ಹೇಳಿದ್ದಾರೆ.

ನವೋದಯ ಕಾವ್ಯ ಜನಜೀವನದ ಅನುಭವಕ್ಕೆ, ಮೂಕವೇದನೆಗೆ ಶ್ರುತಿಯಾಗಬೇಕೆಂಬ ಲವಲವಿಕೆಯ ಮಾತು ಕಾವ್ಯಮೀಮಾಂಸೆಯ ಕವಿತೆಗಳಲ್ಲಿದೆ. ಭಾರತೀಯ ದರ್ಶನಸಾರವಾದ ಸತ್ಯಂ, ಶಿವಂ, ಸುಂದರಂಗಳನ್ನು ಸಾಕಾರಗೊಳಿಸುವುದು ನವೋದಯ ಕವಿಗಳ ಧ್ಯೇಯವಾಗಿತ್ತೆಂಬ ಪ್ರಮುಖ ಅಂಶ ಗಮನಾರ್ಹವಾದುದು.

ನವೋದಯ ಕಾವ್ಯಮಾರ್ಗ ಹೊಸಗನ್ನಡದಲ್ಲಿ ಕಾವ್ಯಪರಂಪರೆಯನ್ನು ನಿರ್ಮಿಸಿ ಪರಿವರ್ತನೆಯತ್ತ ಸಾಗಿತು. ೧೯೫೦ರ ಮುಂಬೈ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯ ಅಧ್ಯಕ್ಷ ಭಾಷಣದಲ್ಲಿ, ಕನ್ನಡಕಾವ್ಯವು ನವ್ಯತೆಯ ಮಾರ್ಗದತ್ತ ಸಾಗಬೇಕೆಂದು ಗೋಕಾಕರು ಕರೆಯಿತ್ತರು. ಇದರಿಂದ ಕನ್ನಡ ಕಾವ್ಯತತ್ತ್ವ ವಿಚಾರದಲ್ಲೂ ಪರಿವರ್ತನೆ ಆದದ್ದನ್ನು ನಾವು ಕಾಣುತ್ತೇವೆ. ಎಜ್ರಾ ಪೌಂಡ್, ಎಲಿಯಟ್ ಹಾಗೂ ಯೇಟ್ಸ್ ಆಂಗ್ಲ ರೊಮ್ಯಾಂಟಿಕ್ ಕಾವ್ಯವನ್ನು ಬದಲಿಸಿ, ಅದನ್ನು ನವ್ಯಮಾರ್ಗದತ್ತ ಕೊಂಡೊಯ್ದರು. ಅದರ ಹಿನ್ನೆಲೆಯಲ್ಲಿ ಕನ್ನಡ ನವ್ಯಕಾವ್ಯದ ಎಂಟು ಲಕ್ಷಣಗಳನ್ನು ಗೋಕಾಕರು ಹೀಗೆ ಹೇಳಿದ್ದಾರೆ : ಬಳಕೆಮಾತು, ಛಂದಸ್ಸಿನಲ್ಲಿಯ ನವೀನಪ್ರಯೋಗ, ಪ್ರತಿಮಾ ಪ್ರಧಾನತೆ ವಾಸ್ತವಿಕ ಚಿತ್ರಸೃಷ್ಟಿ, ಪಾರಿಭಾಷಿಕಶೈಲಿ, ವಸ್ತುವಿನ ಆಯ್ಕೆಯಲ್ಲಿಯ ಸ್ವಾತಂತ್ರ್ಯ ಬುದ್ಧಿಪ್ರಧಾನತೆ, ವ್ಯಕ್ತ್ಯಾತೀತಮೌಲ್ಯ,[೨೮] ಇವುಗಳಲ್ಲಿ ಕಾಣುವ ನವ್ಯಪ್ರಜ್ಞೆ, ಕನ್ನಡ ಕಾವ್ಯದಲ್ಲಿ ಅಭಿವ್ಯಕ್ತವಾಯಿತು. ಗೋಪಾಲಕೃಷ್ಣ ಅಡಿಗರು (**ಮಣ್ಣಿನವಾಸನೆ**), ರಾಮಚಂದ್ರ ಶರ್ಮ (**ಏಳುಸುತ್ತಿನ ಕೋಟೆ**), ಕುರ್ತಕೋಟಿ (**ನವ್ಯಕಾವ್ಯ ಪ್ರಯೋಗ**), ಪಿ. ಲಂಕೇಶ (**ಅಕ್ಷರ ಹೊಸಕಾವ್ಯ**, ಪ್ರಸ್ತಾವನೆ), ಹಿಂಗಮಿರೆ (**ಹೊಸ ಕಾವ್ಯ, ಹೊಸ ದಿಕ್ಕು**), ಶಾಂತಿನಾಥ ದೇಸಾಯಿ (**ನವ್ಯಸಾಹಿತ್ಯ ದರ್ಶನ**), ಹೇಮಂತ ಕುಲಕರ್ಣಿ (**ಕಾವ್ಯದಲ್ಲಿ ನವ್ಯತೆ**), ನರಹಳ್ಳಿ ಬಾಲಸುಬ್ರಮಣ್ಯ (**ನವ್ಯತೆ**) ಮೊದಲಾದವರು ನವ್ಯಕಾವ್ಯ ತತ್ತ್ವ ವಿಚಾರಗಳನ್ನು ವಿಸ್ತಾರವಾಗಿ ಚರ್ಚಿಸಿ, ಅದರ ಪ್ರಸ್ತುತತೆ ಹಾಗೂ ಪ್ರಯೋಗವನ್ನು ವಿವೇಚಿಸಿದ್ದಾರೆ. ಕಾವ್ಯಮೀಮಾಂಸೆಯ ದೃಷ್ಟಿಯಿಂದ ನವೋದಯ ಮತ್ತು ನವ್ಯಕಾವ್ಯದ ಹಿನ್ನೆಲೆಯಲ್ಲಿ ವ್ಯಕ್ತವಾಗುವ ಪ್ರಮುಖಾಂಶಗಳು ಹೀಗಿವೆ: 'ಸ್ಫೂರ್ತಿ' ತತ್ತ್ವವು ಕಾವ್ಯನಿರ್ಮಿತಿಗೆ ಕಾರಣವಾಗುವುದೆಂದು ನವೋದಯದವರು ಹೇಳಿದರೆ, ಸ್ವಾನುಭವದಿಂದ ಕಾವ್ಯ ಹುಟ್ಟುತ್ತದೆಂದು ನವ್ಯರು ಹೇಳುತ್ತಾರೆ. ನಮ್ಮ ಸಂಸ್ಕೃತಿ, ಪರಂಪರೆಯನ್ನು ಕೀರ್ತಿಸಿ ವೈಭವೀಕರಣವನ್ನು ನವೋದಯದವರು ಮಾಡಿದರೆ, ಅದನ್ನು ನವ್ಯರು ವಿರೋಧಿಸಿದ್ದನ್ನು ಕಾಣಬಹುದು. ವ್ಯಕ್ತಿಸ್ವಾತಂತ್ರ್ಯ ಸಮಾನತೆಯ ಪ್ರಜಾಪ್ರಭುತ್ವ ಮೌಲ್ಯಗಳ ಸ್ವೀಕಾರ ವಾಸ್ತವವಾದದಲ್ಲಿ ನಂಬಿಕೆ, ಸಾಮಾಜಿಕಪ್ರಜ್ಞೆ, ವಸ್ತುನಿಷ್ಠೆಯಲ್ಲಿ ಆಸ್ಥೆ, ಮಣ್ಣಿನ ವಾಸನೆ ಪ್ರತಿಮೆ–ಸಂಕೇತಗಳ ಮೂಲಕ ಆಡುಮಾತಿನ ಭಾಷಾಪ್ರಯೋಗಗಳಿಂದ ನವ್ಯಕಾವ್ಯವು ತಾತ್ತ್ವಿಕ ನೆಲೆ ಪಡೆದುಕೊಂಡರೂ, ಅಭಿವ್ಯಕ್ತಿಯ ಕ್ಲಿಷ್ಟತೆಯಿಂದಾಗಿ ಕಾವ್ಯಸಂವಹನದಲ್ಲಿ ತೊಡಕನ್ನು ಎದುರಿಸಿತೆಂದೇ ಹೇಳಬೇಕು. ಮಾರ್ಕ್ಸ್, ಲೋಹಿಯಾರ ದಲಿತ–ಬಂಡಾಯದ

ಸಾಮಾಜಿಕ ಪ್ರಜ್ಞೆಯನ್ನು ಅದು ಕಾವ್ಯಾಭಿವ್ಯಕ್ತಿಗೊಳಿಸಿತು. ಪುರುಷೋತ್ತಮ ಬಿಳಿಮಲೆ ಅವರ ಬಂಡಾಯ–ದಲಿತ ಸಾಹಿತ್ಯ ಗ್ರಂಥ, ಹಾಗೂ ದಲಿತ–ಬಂಡಾಯ ಸಾಹಿತ್ಯ ತತ್ತ್ವಗಳಿಗೆ ಸಂಬಂಧಿಸಿದ ಇನ್ನಿತರ ಗ್ರಂಥ, ಲೇಖನಗಳು ಈ ನಿಟ್ಟಿನಲ್ಲಿ ಆಲೋಚನೀಯವಾಗುತ್ತವೆ.

ಕನ್ನಡ ಜಾನಪದವು ಸಮೃದ್ಧವಾಗಿದ್ದು ಭಾರತೀಯ ಜನಪದ ಸಾಹಿತ್ಯದಲ್ಲಿ ಮಹತ್ತರ ಸ್ಥಾನ ಪಡೆದಿದೆ. ಜನಪದ ಕಾವ್ಯಮೀಮಾಂಸೆಯ ಅಧ್ಯಯನವನ್ನು ವೀರಣ್ಣ ದಂಡೆಯವರು ನಡೆಸಿದ್ದಾರೆ. ಕನ್ನಡ ಜನಪದ ಸಾಹಿತ್ಯದಲ್ಲಿ ಕಾವ್ಯಮೀಮಾಂಸೆ ಬೆಳೆದು ಬಂದ ವಿಚಾರವನ್ನು ಅವರು ತುಂಬ ಸಮರ್ಥವಾಗಿ ನೀಡಿದುದು ಉಲ್ಲೇಖನೀಯ. ಇದರಿಂದ ಕನ್ನಡ ಕಾವ್ಯಮೀಮಾಂಸೆಗೆ ದೇಶೀಯ ನೆಲೆ, ಪರಂಪರೆ ಪ್ರಾಪ್ತ ವಾದಂತಾಗಿದೆ.[೨೯]

ಕನ್ನಡ ಕಾವ್ಯಮೀಮಾಂಸೆಯ ಅಧ್ಯಯನ ನಿರಂತರವಾಗಿ ನಡೆಯುತ್ತಲಿದ್ದು ಹೊಸದೃಷ್ಟಿಯ ಚಿಂತನೆಗಳು ಪ್ರಕಟವಾಗುತ್ತಲಿವೆ. ಬಹುಹಿಂದೆಯೇ ಪ್ರಕಟವಾದ ಗುರುರಾಜ ಭೀ. ಜೋಶಿ ಅವರ **ಭಾರತೀಯ ಶಬ್ದವ್ಯುತ್ಪತ್ತಿಯಲ್ಲಿ ಸ್ಫೋಟವಾದ** ಪರಂಪರೆಯ ವಿಶಿಷ್ಟ ಅಧ್ಯಯನವಾಗಿದೆ. ಹಾಗೆಯೇ, ಇತ್ತೀಚೆಗೆ ಅಕ್ಷರ ಚಿಂತನ ಮಾಲೆಯಲ್ಲಿ ಬಂದ ಪಾದೆಕಲ್ಲು ನರಸಿಂಹ ಭಟ್ಟರ **ಅಭಿನವಗುಪ್ತ** ಪ್ರಮುಖವಾದದ್ದು. ಪ್ರೊ. ಕಾರ್ಲೋಸ್‌ರ **ತಮಿಳು ಕಾವ್ಯಮೀಮಾಂಸೆಯ** ಅನುವಾದವೂ ಕನ್ನಡಕ್ಕೆ ಬಂದಿದೆ. ಆರ್. ಲಕ್ಷ್ಮೀನಾರಾಯಣ ಅವರ **'ಕುಂತಕನ ವಕ್ರೋಕ್ತಿಜೀವಿತ – ಒಂದು ಅಧ್ಯಯನ'**, ಚಂದ್ರಿಕಾ ಹೆಗಡೆ ಅವರ **'ಕನ್ನಡ ನವೋದಯ ಕವಿಗಳ ಕಾವ್ಯಮೀಮಾಂಸೆ'** ಮತ್ತು ಸಿ.ಎಚ್. ಶಾಸ್ತ್ರಿ ಅವರ **'ಭಾರತೀಯ ಕಾವ್ಯಮೀಮಾಂಸೆಗೆ ಕೆ. ಕೃಷ್ಣಮೂರ್ತಿ ಅವರ ಕೊಡುಗೆ'** ಮಹಾಪ್ರಬಂಧಗಳು ಇತ್ತೀಚೆಗೆ ಪ್ರಕಟವಾಗಿದ್ದು, ಕನ್ನಡ ಕಾವ್ಯಮೀಮಾಂಸೆಯ ಅಧ್ಯಯನ ಕ್ಷೇತ್ರಕ್ಕೆ ಇವು ಮೌಲಿಕ ಕೊಡುಗೆಗಳಾಗಿವೆ. ಕಾವ್ಯಮೀಮಾಂಸೆಗೆ ಸಂಬಂಧಿಸಿದ ಲೇಖನಗಳೂ ವಿಪುಲವಾಗಿ ಪ್ರಕಟವಾಗಿದ್ದು ಅವೆಲ್ಲವುಗಳ ವಿವೇಚನೆ ಈ ಲೇಖನದ ಮಿತಿಯಲ್ಲಿ ಸಾಧ್ಯವಾಗಿಲ್ಲ.

ಒಟ್ಟಿನಲ್ಲಿ, ಕನ್ನಡ ಕಾವ್ಯಮೀಮಾಂಸೆ ಈ ಶತಮಾನದಲ್ಲಿ ವ್ಯಾಪಕವಾಗಿ ಬಹುಮುಖೀ ನೆಲೆಯಲ್ಲಿ ಬೆಳೆದಿದೆ. ಭಾರತೀಯ ಮತ್ತು ಪಾಶ್ಚಾತ್ಯ ಕಾವ್ಯಮೀಮಾಂಸೆಯ ಚಿಂತನಧಾರೆ, ಸೌಂದರ್ಯಶಾಸ್ತ್ರ, ತತ್ತ್ವಶಾಸ್ತ್ರ, ವಿಭಿನ್ನ ವಿಚಾರಧಾರೆಯ ಜೊತೆಗೆ ಜಾನಪದ ಅಥವಾ ದೇಶೀಯ ಪರಂಪರೆಯ ಆಯಾಮವನ್ನು ಅದು ಪಡೆದುಕೊಂಡಿದೆ. ಸೃಜನಶೀಲ ಸಾಹಿತ್ಯನಿರ್ಮಿತಿಯ ಜೊತೆಗೆ ಕನ್ನಡ ಕವಿಗಳು ಕಾವ್ಯದ ಮೂಲಕ ಕಾವ್ಯಮೀಮಾಂಸೆಯ ಚಿಂತನ–ಮಂಥನಗಳನ್ನು ಪ್ರಕಟಿಸಿದ್ದಾರೆ. ಪಾಶ್ಚಾತ್ಯ ಕಾವ್ಯ ಮೀಮಾಂಸೆಯ ಜೊತೆಗೆ ಸಾಹಿತ್ಯ ವಿಮರ್ಶೆಯ ಸಾಹಿತ್ಯತತ್ತ್ವವೂ ಬೆಳೆದಂತೆ ಆಧುನಿಕ ಕನ್ನಡ ಕಾವ್ಯಮೀಮಾಂಸೆಯ ಜೊತೆಗೆ ವಿಮರ್ಶೆಯ ತತ್ತ್ವಗಳ ವಿಕಾಸವೂ ಆದದ್ದು ಮಹತ್ತ್ವಪೂರ್ಣವಾದ ಅಂಶವಾಗಿದೆ.

ಭಾರತೀಯ ಮತ್ತು ಪಾಶ್ಚಾತ್ಯ ಕಾವ್ಯಮೀಮಾಂಸೆಗಳ ಅನುವಾದ, ಅಧ್ಯಯನ ತೌಲನಿಕ ವಿವೇಚನೆಯ ಮೂಲಕ ಕನ್ನಡ ಕಾವ್ಯಮೀಮಾಂಸೆ ಬೆಳೆದಿದೆ. ಈ ಶಾಸ್ತ್ರ ವಿದ್ವತ್ತಿನ

ಕ್ಷಿತಿಜವನ್ನು ವಿಸ್ತರಿಸಲು ಕನ್ನಡ ವಿದ್ವತ್‌ಲೋಕ ಬಹುವಾಗಿ ಶ್ರಮಿಸಿದೆ. ತಮ್ಮ ಪ್ರತಿಭೆ-ಪಾಂಡಿತ್ಯ, ಅನ್ವೇಷಕ ಮನಸ್ಸನ್ನು ಕ್ರಿಯಾಶೀಲಗೊಳಿಸಿದೆ.

೧. 'ಕಾವ್ಯಮೀಮಾಂಸೆ' ಎಂದರೆ ಕಾವ್ಯವನ್ನು ಕುರಿತ ಚರ್ಚೆ ಎಂದು ಅರ್ಥ. ಕಾವ್ಯವೆಂದರೇನು? ಅದು ಏಕೆ ನಿರ್ಮಿತವಾಗುತ್ತದೆ? ಹೇಗೆ ನಿರ್ಮಿತವಾಗುತ್ತದೆ? ಅದರ ಉದ್ದೇಶ, ವ್ಯಾಪ್ತಿ ಪ್ರಯೋಜನಗಳೇನು? ಎನ್ನುವ ಸಂಗತಿಗಳನ್ನು ಕುರಿತ ಚರ್ಚೆಯೇ ಕಾವ್ಯಮೀಮಾಂಸೆ. ಕಾವ್ಯನಿರ್ಮಿತಿಯ ಅನಂತರ ಅದನ್ನು ಆಸ್ವಾದಿಸುವ ಸಹೃದಯನ ರುಚಿ, ಸಾಮರ್ಥ್ಯಗಳನ್ನು ಕುರಿತ ವಿಚಾರ, ಕೃತಿಯನ್ನು ಕುರಿತ ಅಭಿಪ್ರಾಯ, ಟೀಕೆ, ಚರ್ಚೆ, ಗುಣಾವಗುಣ ವಿವೇಚನೆ ಮೌಲ್ಯನಿರ್ಧಾರ ಇವುಗಳೂ ಕಾವ್ಯಮೀಮಾಂಸೆಯ ವಲಯಕ್ಕೆ ಸೇರುತ್ತವೆ.
– ಜಿ. ಎಸ್. ಶಿವರುದ್ರಪ್ಪ; ಗತಿಬಿಂಬ, ಪುಟ ೧೧೩

೨. ಪಾದೇಕಲ್ಲು ನರಸಿಂಹ ಭಟ್ಟ; ಅಭಿನವಗುಪ್ತ, ಪುಟ ೩೭–೩೮

೩. ಪೂರ್ವೋಕ್ತ; ಪುಟ ೪೩–೪೪

೪. ಸಂಸ್ಕೃತ ಅಲಂಕಾರಶಾಸ್ತ್ರದ ಅನುಕರಣ ಇಲ್ಲವೆ ಅನುವಾದರೂಪದ ಕಾವ್ಯಶಾಸ್ತ್ರ ಪರಂಪರೆಯಲ್ಲಿ ಹುಟ್ಟಿದ ಕವಿರಾಜಮಾರ್ಗದಲ್ಲಿ ಕಾಶ್ಮೀರ ದೇಶದ ಭಾಮಹನಿಗಿಂತ ದ್ರಾವಿಡ ದೇಶದ ದಂಡಿಯತ್ತ ಮಾರ್ಗಕಾರನ ಒಲವು ಹೆಚ್ಚೆಂಬುದನ್ನು ವಿವೇಚಿಸುತ್ತ ಎಂ.ಎಂ.ಕಲಬುರ್ಗಿ ಅವರು ತುಲನಾತ್ಮಕ ಸಮೀಕ್ಷೆ ನಡೆಸಿದ್ದಾರೆ. ವಿವರಗಳಿಗೆ ನೋಡಿ, ಎಂ.ಎಂ.ಕಲಬುರ್ಗಿ ಕವಿರಾಜಮಾರ್ಗ ಪರಿಸರದ ಕನ್ನಡಸಾಹಿತ್ಯ, ಪುಟ ೧೧೨–೧೨೪

೫. ಕವಿರಾಜಮಾರ್ಗ; i–೧೮

೬. ಎಂ. ವಿ. ಸೀತಾರಾಮಯ್ಯ; ಕವಿರಾಜಮಾರ್ಗದಲ್ಲಿ ಕಾವ್ಯಮೀಮಾಂಸೆ, ಕವಿರಾಜಮಾರ್ಗ ವಿವಕ್ಷೆ, ಪುಟ ೧೬೯

೭. ಭೀಮರಾವ್ ಚಿಟಗುಪ್ಪಿ; ಕವಿರಾಜಮಾರ್ಗ ಪ್ರಶಸ್ತಿ, ನಿವೇದನೆ, ಪುಟ ೧೦. ಕವಿರಾಜಮಾರ್ಗದಿಂದ ಸಂಸ್ಕೃತ ಆಲಂಕಾರಿಕನಾದ ರಾಜಶೇಖರನು ತನ್ನ ಕಾವ್ಯಮೀಮಾಂಸೆಗೆ ಸ್ಫೂರ್ತಿಪಡೆದಿರಬಹುದಾದ ವಿಚಾರಗಳನ್ನು ಎಂ.ವಿ. ಸೀತಾರಾಮಯ್ಯನವರು ವಿದಿತಪಡಿಸಿದ್ದಾರೆ. ನೋಡಿ ಎಂ.ವಿ.ಸೀ. 'ಕವಿರಾಜಮಾರ್ಗದ ಹೆಸರು, ಒಂದು ಟಿಪ್ಪಣಿ', ಪ್ರಬುದ್ಧ ಕರ್ನಾಟಕ, ೫೩–೧

೮. ವಿವರಗಳಿಗೆ ನೋಡಿ; ಕೆ. ಕೃಷ್ಣಮೂರ್ತಿ: ಕನ್ನಡದಲ್ಲಿ ಕಾವ್ಯಮೀಮಾಂಸೆ, ಕನ್ನಡ ವಿಶ್ವಕೋಶ ಸಂ. ೩, ಪುಟ ೩೧೬–೧೭

೯. ಕುವೆಂಪು, ತೀ.ನಂ. ಶ್ರೀಯವರ ಭಾರತೀಯ ಕಾವ್ಯಮೀಮಾಂಸೆಯ ಮುನ್ನುಡಿ, ಪುಟ ix

೧೦. ಜಿ.ಎಸ್. ಶಿವರುದ್ರಪ್ಪ: ಪ್ರಬುದ್ಧ ಕರ್ನಾಟಕ, ಚಿನ್ನದ ಸಂಚಿಕೆ, ಪುಟ ೩೦೬ ಹಾಗೂ 'ಭಾರತೀಯ ಕಾವ್ಯಮೀಮಾಂಸೆ : ಒಂದು ಆಚಾರ್ಯ ಕೃತಿ', ಶ್ರೀಕಂಠತೀರ್ಥ, ಪುಟ ೮೫

೧೧. ತೀ. ನಂ. ಶ್ರೀಕಂಠಯ್ಯ: ಭಾರತೀಯ ಕಾವ್ಯಮೀಮಾಂಸೆ, ಪುಟ ೭–೮ ಹಾಗೂ ಪುಟ ೩೧೬

೧೨. ಪೂರ್ವೋಕ್ತ; ಪುಟ ೫೫

೧೩. i. ಕುವೆಂಪು ಅವರ ಕಾವ್ಯಮೀಮಾಂಸೆ; ಗಂಗೋತ್ರಿ (೧೯೬೮), ಕುವೆಂಪು ಅಭಿನಂದನ ಗ್ರಂಥ, ಮೈಸೂರು.
ii. ವಿನಾಯಕರ ಕಾವ್ಯಮೀಮಾಂಸೆ; ವಿ.ಕೃ. ಗೋಕಾಕ ಷಷ್ಟ್ಯಬ್ದಿ ಮಹೋತ್ಸವ ಗ್ರಂಥ (೧೯೬೯), ಮೈಸೂರು.
iii. ಶ್ರೀ ಅರವಿಂದರ ಕಾವ್ಯಮೀಮಾಂಸೆ; ಅರವಿಂದೋ ಜನ್ಮಶತಾಬ್ದಿ ಸಂಚಿಕೆ, (೧೯೭೨) ಬೆಂಗಳೂರು.

iv. ಭಾರತೀಯ ಕಾವ್ಯಮೀಮಾಂಸೆ; ಕುವೆಂಪು ಕೊಡುಗೆ, ಸಹ್ಯಾದ್ರಿ, (೧೯೭೫), ಕುವೆಂಪು ಅಭಿನಂದನ ಗ್ರಂಥ ಇವುಗಳಲ್ಲದೆ ಕಾವ್ಯಮೀಮಾಂಸೆಯನ್ನು ಕುರಿತು ಕೆ. ಕೃಷ್ಣಮೂರ್ತಿ ಯವರ ಈ ಕೆಲವು ಲೇಖನಗಳೂ ಗಮನಾರ್ಹವಾಗಿವೆ.

i. ಕಾವ್ಯದಲ್ಲಿ ಶಬ್ದ ಮತ್ತು ಅರ್ಥ; ಶ್ರೀಕಂಠತೀರ್ಥ, ತೀ.ನಂ.ಶ್ರೀ. ಅಭಿನಂದನ ಗ್ರಂಥ. (೧೯೭೬), ಬೆಂಗಳೂರು

ii. ಸಂಸ್ಕೃತ ಕಾವ್ಯಮೀಮಾಂಸೆಯಲ್ಲಿ ಅಭಿವ್ಯಂಜಕತೆ; ಅಧ್ಯಯನ, ಶಂಬಾ ಅಭಿನಂದನ ಗ್ರಂಥ (೧೯೮೦), ಬೆಂಗಳೂರು.

iii. ಭಾರತೀಯ ಕಾವ್ಯಮೀಮಾಂಸೆಗೆ ಹಿನ್ನೆಲೆಯಾದ ಭಾರತೀಯ ತತ್ತ್ವಶಾಸ್ತ್ರ, ಕಾವ್ಯಾನಂದ ಸಿದ್ಧಯ್ಯ ಪುರಾಣಿಕ ಅಭಿನಂದನ ಗ್ರಂಥ (೧೯೮೧), ಬೆಂಗಳೂರು.

iv. 'ಲಾಂಜೈನಸ್ ಪ್ರತಿಪಾದಿಸುವ Sublime ಮತ್ತು ಭಾರತೀಯ ಕಾವ್ಯಮೀಮಾಂಸಕರ ಧ್ವನಿ' ಆನಂದಕಂದ ಅಭಿನಂದನ ಗ್ರಂಥ (೧೯೮೪), ರಾಯಭಾಗ.

v. ಕಾವ್ಯಾರ್ಥ ಚಿಂತನ, ರುಜುವಾತು (೧೯೮೪),ಮೈಸೂರು.

vi. ತೌಲನಿಕ ಕಾವ್ಯಮೀಮಾಂಸೆ, ಶಿವಚಿಂತನ, ತಿಪ್ಪೇರುದ್ರಸ್ವಾಮಿ ಅಭಿನಂದನ ಗ್ರಂಥ (೧೯೮೮), ಮೈಸೂರು.

೧೪. ವಿವರಗಳಿಗೆ ನೋಡಿ : ಕೆ. ಕೃಷ್ಣಮೂರ್ತಿ; ಕುವೆಂಪು ಅವರ ಕಾವ್ಯಮೀಮಾಂಸೆ, ಗಂಗೋತ್ರಿ ಪುಟ ೫೨೫.

೧೫. ಜಿ. ಎಸ್. ಶಿವರುದ್ರಪ್ಪ; ಪೂರ್ವೋಕ್ತ, ಪುಟ ೩೧೪–೩೧೫

೧೬. ಕೆ. ವಿ. ನಾರಾಯಣ; ಸಾಹಿತ್ಯ ತತ್ತ್ವ : ಬೇಂದ್ರೆ ದೃಷ್ಟಿ, ಪುಟ ೬

೧೭. ನೋಡಿ; ಪು.ತಿ.ನ., ಕಾವ್ಯಕುತೂಹಲ, ಪುಟ ೭೩

೧೮. ಕುವೆಂಪು, ತೀ.ನಂ.ಶ್ರೀ. ಅವರ ಭಾರತೀಯ ಕಾವ್ಯಮೀಮಾಂಸೆಗೆ ಬರೆದ ಮುನ್ನುಡಿ, ಪುಟ ix

೧೯. ಜಿ. ಎಸ್. ಶಿವರುದ್ರಪ್ಪ; ಕಾವ್ಯಾರ್ಥಚಿಂತನ, ಪುಟ ೬೬

೨೦. ಜಿ. ಎಸ್. ಶಿವರುದ್ರಪ್ಪ; ಪೂರ್ವೋಕ್ತ, ಪುಟ ೧೪೭

೨೧. ಜಿ. ಎಸ್. ಶಿವರುದ್ರಪ್ಪ; ಪೂರ್ವೋಕ್ತ, ಪುಟ ೨೪೭–೨೪೮

೨೨. "ತೀ.ನಂ. ಶ್ರೀಕಂಠಯ್ಯನವರು ಮತ್ತು ಕೆ. ಕೃಷ್ಣಮೂರ್ತಿಯವರು ಮಹತ್ತ್ವದ ಅಲಂಕಾರ ಶಾಸ್ತ್ರಗಳನ್ನೆಲ್ಲ ನಮ್ಮ ಕೈಗೆಟಕುವಂತೆ ಮಾಡಿದ್ದಾರೆ. ಆದ್ಯ ರಂಗಾಚಾರ್ಯರು ತಮ್ಮ ಕೊನೆಯ ದಿನಗಳಲ್ಲಿ ಭರತನ ನಾಟ್ಯಶಾಸ್ತ್ರವನ್ನು ಅನುವಾದಿಸಿದರು. ಆದರೆ ಇವೆಲ್ಲ ಮಾಹಿತಿಯ ಸಂಗ್ರಹ ಗಳಾಗಿ ಉಳಿದಿವೆಯೇ ಹೊರತು ಪ್ರತ್ಯಕ್ಷ ಪರಿಣಾಮ ಬೀರಿಲ್ಲ. ಸಂಸ್ಕೃತವನ್ನು ಅಲಕ್ಷಿಸಿದ ಸದ್ಯದ ತಲೆಮಾರಿರಲಿ, ಸಂಸ್ಕೃತ ನಾಟಕಗಳ ಬಗೆಗೆ ವಿಸ್ತೃತವಾದ ಗ್ರಂಥ ಬರೆದ ಎ.ಆರ್. ಕೃಷ್ಣಶಾಸ್ತ್ರಿ ಯವರಂಥವರೇ ಆಗಿರಲಿ, ಭಾರತೀಯ ಕಾವ್ಯಮೀಮಾಂಸೆಯನ್ನು ಅವಲಂಬಿಸಲಿಲ್ಲ. ಆಗಾಗ ನಾವು ರಸ, ಧ್ವನಿ, ಅಲಂಕಾರಗಳ ಪ್ರಸ್ತಾಪ ಮಾಡುತ್ತೇವೆಯಾದರೂ ಭಾರತೀಯ ಕಾವ್ಯಮೀಮಾಂಸೆ ನಮ್ಮ ವ್ಯವಸಾಯದ ಹೊರಗೆಯೇ ಉಳಿದುಕೊಂಡಿದೆ. ಹನ್ನೆರಡನೆಯ ಶತಮಾನದಲ್ಲಿಯೇ ಕನ್ನಡಸಾಹಿತ್ಯ ಸಂಸ್ಕೃತ ಸಾಹಿತ್ಯಕ್ಕಿಂತ ಭಿನ್ನವಾದ ಸ್ವರೂಪ ಪಡೆದರೂ ಕಾವ್ಯಮೀಮಾಂಸೆ ಮಾತ್ರ ಬರಲಿಲ್ಲ." ವಿವರಗಳಿಗೆ ನೋಡಿರಿ: ಜಿ. ಎಸ್. ಆಮೂರ: ಯಾವ ಹಾಡು ಹಾಡಲಿ? ತುಷಾರ, ಏಪ್ರಿಲ್ ವಿಶೇಷಾಂಕ, ೧೯೯೩ ಪುಟ ೧೧೬–೧೧೭

೨೩. 'ಸೃಜನಶೀಲ ಸಾಹಿತ್ಯವನ್ನು ಅನುಸರಿಸಿ ನಮ್ಮ ಸಾಹಿತ್ಯ ವಿಮರ್ಶೆಯೂ ಸಂಪೂರ್ಣವಾಗಿ ಪಶ್ಚಿಮದ ಹಾದಿಯನ್ನೇ ಹಿಡಿದಿದೆ. ಭಾರತೀಯ ಸಾಹಿತ್ಯತತ್ತ್ವಗಳನ್ನು ಬಿಟ್ಟುಕೊಟ್ಟು ಪೂರ್ತಿಯಾಗಿ ಪಶ್ಚಿಮಕ್ಕೆ ಶರಣಾಗುವುದು ಆತಂಕಕಾರಿಯಾದ ಬೆಳವಣಿಗೆಯಾಗಿದೆ. ಭಾರತೀಯ ಸಾಹಿತ್ಯ ಮೀಮಾಂಸೆಯಲ್ಲಿ ಸಾಹಿತ್ಯವಿಮರ್ಶೆಗೆ ಬೇಕಾದ ಮಾನದಂಡಗಳೇ

ಇಲ್ಲವೆಂಬ ಕಾರಣವನ್ನು ಕೊಡಲಾಗುತ್ತಿದೆ. ರಸ, ಧ್ವನಿ, ಅಲಂಕಾರಾದಿಗಳ ಅಭ್ಯಾಸ ಕಾವ್ಯಸ್ವರೂಪವನ್ನು ಮತ್ತು ಕಾವ್ಯ ಸಹೃದಯರ ಮೇಲೆ ಉಂಟುಮಾಡುವ ಪರಿಣಾಮವನ್ನು ಅರ್ಥಮಾಡಿಕೊಳ್ಳಲು ಉಪಯುಕ್ತವಾಗಿದೆಯೇ ಹೊರತು ಅವುಗಳಿಂದ ಸಾಹಿತ್ಯ ಕೃತಿಗಳ ಬೆಲೆಗಟ್ಟಲು ಆಗುವುದಿಲ್ಲ ಎಂಬ ವಾದವಿದೆ. ಒಂದು ಕೃತಿಯಲ್ಲಿ ಯಾವ್ಯಾವ ರಸಗಳಿವೆ, ಎಲ್ಲೆಲ್ಲಿ ಧ್ವನಿ ಇದೆ, ಎಂಥೆಂಥ ಅಲಂಕಾರಗಳನ್ನು ಉಪಯೋಗಿಸಲಾಗಿದೆ ಎಂಬುದನ್ನು ಗುರುತಿಸಲು ಇದರಿಂದ ಉಪಯೋಗವಾಗಬಹುದು. ಆದರಿಂದಾಗಿ ಒಂದು ಕೃತಿ ಒಳ್ಳೆಯದೆ, ಕೆಟ್ಟದೆ ಎಂಬುದನ್ನು ನಿರ್ಧರಿಸಲಿಕ್ಕಾಗುವುದಿಲ್ಲ ಎಂಬುದು ಕೆಲಮಟ್ಟಿಗೆ ನಿಜ. ಆದರೆ ಭಾರತೀಯ ಕಾವ್ಯಮೀಮಾಂಸೆಯಲ್ಲಿ ಔಚಿತ್ಯ, ಗುಣ-ದೋಷ, ರೀತಿ ಮುಂತಾದ ತತ್ತ್ವಗಳೂ ಇವೆಯೆಂಬುದನ್ನು ಮರೆಯುವಂತಿಲ್ಲ' ಎಂದು ಗಿರಡ್ಡಿಯವರು 'ರಸ, ಧ್ವನಿಸಿದ್ಧಾಂತ : ಭಾರತೀಯ ಸಾಹಿತ್ಯ ಕೆಲವು ಅಧ್ಯಯನಗಳು'ದಲ್ಲಿ ಪ್ರತಿಪಾದಿಸಿದ್ದು ರಸ, ಧ್ವನಿ ಮತ್ತು ಔಚಿತ್ಯತತ್ತ್ವಗಳನ್ನು ಇಂಗ್ಲಿಷ್ ಪದ್ಯವೊಂದರ ಅಭ್ಯಾಸಕ್ಕೆ ಅನ್ವಯಿಸಿ ನೋಡಿದ್ದನ್ನು ಇಲ್ಲಿ ಗಮನಿಸಬಹುದಾಗಿದೆ.

೨೪. ಜಿ.ಎಸ್. ಶಿವರುದ್ರಪ್ಪ, ಕಾವ್ಯಾರ್ಥ ಚಿಂತನ, ಪುಟ ೨೪೭–೨೪೮


೨೫. ಎಸ್. ಅನಂತನಾರಾಯಣ; ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ ಪುಟ ೪೩೮

೨೬. ವಿವರಗಳಿಗೆ ನೋಡಿ : ಜಿ.ಎಂ. ಹೆಗಡೆ, ಮಾಸ್ತಿಯವರ ವಿಮರ್ಶೆ – ಒಂದು ಅಧ್ಯಯನ ಪುಟ ೧೭–೧೮

೨೭. ಇದಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಗ್ರಂಥ, ಲೇಖನಗಳನ್ನು ಪರಿಶೀಲಿಸಬಹುದು.
ಸಿ.ಪಿ.ಕೆ., ಕುವೆಂಪು ಕಾವ್ಯಮೀಮಾಂಸೆ.
ಸಿ.ಪಿ.ಕೆ., ಪು.ತಿ.ನ. ಕಾವ್ಯಮೀಮಾಂಸೆ.
ಶಂಕರ ಮೊಕಾಶಿ ಪುಣೇಕರ, ಬೇಂದ್ರೆಯವರ ಕಾವ್ಯಮೀಮಾಂಸೆ.
ಜಿ.ಎಂ. ಹೆಗಡೆ, ನವೋದಯ ಕವಿತೆಗಳಲ್ಲಿ ಕಾವ್ಯಮೀಮಾಂಸೆ, ಅಭಿಜ್ಞಾನ, ಕೆ. ಕೃಷ್ಣಮೂರ್ತಿ ಅಭಿನಂದನ ಗ್ರಂಥ, ಪುಟ ೩೪೮–೩೫೮
ಜಿ.ಎಂ. ಹೆಗಡೆ, ಶಿವರುದ್ರಪ್ಪನವರ ಕವಿತೆಗಳಲ್ಲಿ ಕಾವ್ಯಮೀಮಾಂಸೆ, ಸಾಹಿತ್ಯ ಮತ್ತು ಸಹೃದಯತೆ, ಪುಟ ೨೫೨–೨೬೦

೨೮. ವಿ. ಕೃ. ಗೋಕಾಕ; ನವ್ಯತೆ ಹಾಗೂ ಕಾವ್ಯಜೀವನ, ಪುಟ ೪೫–೪೭

೨೯. 'ಕನ್ನಡ ಕಾವ್ಯಮೀಮಾಂಸೆ' ಎಂಬ ಎಸ್.ಎಂ.ಹಿರೇಮಠ ಅವರ ಗ್ರಂಥವೂ ಪ್ರಕಟವಾಗಿದೆ.



ಅಲಕ್ಷಿತ ಕವಿಗಳ ಕನ್ನಡ ಪ್ರೇಮ

■ ಡಾ. ಎಸ್.ಎಸ್. ತಾರಾನಾಥ

ಕವಿರಾಜಮಾರ್ಗದ ಕಾಲದಿಂದ ಇಂದಿನವರೆಗೆ ಹಲವಾರು ಕವಿಗಳು ಕನ್ನಡನಾಡು–ನುಡಿಗಳ ಬಗ್ಗೆ ಪ್ರಸ್ತಾಪಿಸಿದ್ದಾರೆ. ಪ್ರಾಚೀನ ಕವಿಗಳ ಇಂಥ ಪ್ರಸ್ತಾಪ ವಾಕ್ಯಗಳ ಸ್ಮರಣೆ ಆಧುನಿಕರಿಂದ ಬೇರೆ ಬೇರೆ ಸಂದರ್ಭಗಳಲ್ಲಿ ಆಗಿದೆ. ಇವು ಕನ್ನಡಾಭಿಮಾನದ ವಾಕ್ಯ ಮಾಣಿಕ್ಯಗಳಾಗಿ ಪ್ರಸಿದ್ಧವಾಗಿವೆ. 'ಕಾವೇರಿಯಿಂದಮಾ ಗೋದಾವರಿವರೆಗಮಿರ್ಪ ನಾಡದಾ ಕನ್ನಡದೊಳ್' (ಕವಿರಾ ೧–೩೬), 'ಕುಜಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್' (ಕವಿರಾ., ೧–೩೮) 'ಆರಂಕುಸವಿಟ್ಟೊಡಂ ನೆನೆವುದೆನ್ನ ಮನಂ ವನವಾಸಿ ದೇಶಮಂ' (ಪಂಪಭಾ., ೪–೩೦) 'ಪಲವುಂ ನಾಲಗೆಯುಳ್ಳವಂ ಬಗೆವೊಡೆಂದುಂ ಬಣ್ಣಿಸಲ್ಕಾಜಿನ್' (ಕಬ್ಬಿಕಾ ೧೮) 'ಕನ್ನಡಮೆನಿಪ್ಪಾ ನಾಡು ಚೆಲ್ವಾಯ್ತು'(ಕಬ್ಬಿಕಾ., ೧೮) 'ನಾನಾ ಮಹಿಮೆಯೊಳೆಸುಗುಂ ಚಾರು ಕರ್ಣಾಟದೇಶಂ' (ಕುಪ್ಪಟೂರು ಶಾಸನ) ಈ ವಾಕ್ಯಗಳು ನಾಡಿನ ವ್ಯಾಪ್ತಿ, ನುಡಿಯ ಹಿರಿಮೆ, ಪ್ರದೇಶದ ಪ್ರಾಕೃತಿಕ ಸೌಂದರ್ಯ ಕುರಿತು ಹೇಳುತ್ತವೆ. ಇವು ಮೇಲಿಂದ ಮೇಲೆ ಉಲ್ಲೇಖಗೊಂಡಿವೆ, ವಿಶ್ಲೇಷಣೆಗೊಂಡಿವೆ. ಇವೇ ಅಲ್ಲದೆ ಇತರ ಕನ್ನಡ ಕವಿಗಳ ಎಷ್ಟೋ ಉಲ್ಲೇಖಗಳಿವೆ; ಅವುಗಳಲ್ಲಿ ಕೂಡ ಆಯಾ ಕವಿಗಳ ಪ್ರೀತಿ–ಅಭಿಮಾನಗಳು ವ್ಯಕ್ತಗೊಂಡಿವೆ. ಆದರೆ ಆ ಕವಿಗಳು ಅವರ ಆ ಮಾತುಗಳು ಅಲಕ್ಷಿತವಾಗಿವೆ; ಭಾಷಾಭಿಮಾನಿಗಳ ವಲಯದಲ್ಲಿ ಅಪರಿಚಿತವಾಗಿವೆ. ಸ್ವರವಚನಕಾರರು, ಷಟ್ಪದೀಕವಿಗಳು ಹರಿದಾಸರು ಈ ಅಲಕ್ಷಿತರ ಗುಂಪಿನಲ್ಲಿದ್ದಾರೆ. "ನೋಡಿರೆ ಕನ್ನಡವ ನುಡಿಸಿರೆ ಕನ್ನಡವ, ತಲೆಯೊಲೆವುತ ಬಂದು ಕುಣಿಯುವ



ಕನ್ನಡವ" ಎಂಬುದು ಹೆಸರು ಗೊತ್ತಿಲ್ಲದ ಸ್ವರವಚನಕಾರನ ಪಲ್ಲವಿ; "...ಬರಿಯ ಕನ್ನಡ ಭಾಷೆಯೆಂದೆನಲಾಗದು ಇಳೆಗಿದು ಲೇಸೆನಿಪ ವೇದ ಪ್ರಮಾಣವೆನಿಪ್ಪದು" ಎಂಬುದು (ಬಸವಪು.,) ಭೀಮಕವಿಯ ಉತ್ಕಟ ಕನ್ನಡ ಪ್ರಮಾಣದ ಸಾಲುಗಳು; "ವಿಸ್ತರಿಸುವೆನು ಕನ್ನಡದಲಾ ಕನ್ನಡಿಯ ದರ್ಪಣವಿರುವದಲ್ಲದೆ ಭೇದವಿಲ್ಲದ ತೆರದಲಾನಿದನು" ಎಂಬುದು ನಿರಂಜನಾವಧೂತನ **ಗಗನ ತಾರಾವಳಿಯ** ಮಾತು; "ಸುಲಿದ ರಂಭಾಫಲವ ನೊಲ್ಲದೆ! ಜಡರು ಮೆಲುವರೆ ಲೋಹಗಡಲೆಯ । ಸುಲಭವಹ ಸತ್ಕಥೆಯ ಕೇಳದ ಮಹಿಮೆ ಮೂಢಜನ ॥ ತಿಳಿವರೇ ಗೂಢಾರ್ಥ" (ಬತ್ತಲೇ-ರಾಮಾ ೧-೬) ಎಂಬುದು ಒಬ್ಬ ರಾಮಾಯಣ ಕರ್ತೃವಿನ ಪ್ರಶ್ನೆ. ಈ ಎಲ್ಲವೂ ನಡುಗನ್ನಡ ಕಾಲದ ದನಿಗಳು. ಕನ್ನಡದಲ್ಲಿ ದೇಶೀ ಪ್ರವಾಹ ಬಂದ ನಂತರ ಕೇಳಿಬಂದ ಕನ್ನಡದ ಮೊರೆ, ಮೊರೆತ. ತಾಳ್ಮೆಯಿಂದ ಹುಡುಕಿದರೆ ಇಂಥವು ಇನ್ನೂ ಹಲವು ದೊರೆತಾವು. ಮೂರ್ನಾಲ್ಕು ಕವಿಗಳ ಇಂಥ ಉಲ್ಲೇಖಗಳನ್ನು ಪರಿಚಯಿಸಿ ವಿಶ್ಲೇಷಿಸುವುದು ಈ ಪುಟ್ಟ ಲೇಖನದ ಉದ್ದೇಶ.

೨

ಮಧ್ಯಕಾಲೀನ ಕನ್ನಡ ಷಟ್ಪದೀ ಕವಿಗಳು ರಾಮಾಯಣ, ಮಹಾಭಾರತಗಳಂತೆ ಭಾಗವತವನ್ನೂ ರಚಿಸಿದ್ದಾರೆ. ಸು.ಕ್ರಿ.ಶ. ೧೫೦೦-೧೫೫೦ರಲ್ಲಿದ್ದು ನಿತ್ಯಾತ್ಮಶುಕ ಎಂದು ತನ್ನನ್ನು ಕರೆದುಕೊಂಡಿರುವ ಸದಾನಂದಯೋಗಿ **ಕನ್ನಡ ಭಾಗವತದ** ಕರ್ತೃ, ಭಾಗವತ ಪುರಾಣತಿಲಕ; ಅಷ್ಟೇ ಅಲ್ಲ ಬೃಹದ್ಗ್ರಂಥ ಸಂಸ್ಕೃತದ ಭಾಗವತವನ್ನು ಕನ್ನಡದಲ್ಲಿ ನಿರೂಪಿಸುವುದು ಕವಿಯ ಉದ್ದೇಶ. ಆ ಕಾಲದಲ್ಲಿ ಸಂಸ್ಕೃತದ ರಾಮಾಯಣ ಭಾಗವತಗಳ ಪಠನ, ಪಾರಾಯಣ, ಪ್ರವಚನ ಹೆಚ್ಚಾಗಿತ್ತು. ಕವಿಗೆ ಈ ಭಾಗವತ ಭವರೋಗಹರ. ಇದನ್ನು ಸಂಗ್ರಹವಾಗಿ ಹೇಳಿ ಸಾಮಾನ್ಯರನ್ನು ತಲುಪುವುದು ಕವಿಯ ಉದ್ದೇಶವಾಗಿತ್ತು. ಹೀಗಾಗಿ ಆತ ಕನ್ನಡದಲ್ಲಿ ಬರೆದ; ಕನ್ನಡವನ್ನು ಎತ್ತಿಹಿಡಿದ. ಈ ಸಂಬಂಧದ ಅವನ ಪದ್ಯ ಹೀಗಿದೆ:

ಕನ್ನಡದ ಕೃತಿಯೆಂದವಜ್ಞಾ
ಪನ್ನರಾಗದಿರಕಟ ದರ್ಪಣ
ಕನ್ನಡಿಯಿದೆಂದೆಂಬಡಾವುದು ಕೊಱತೆ ನೋಡುವಡೆ
ತನ್ನ ಮುಖದರುಶನವಲಾ ಪ್ರತಿ
ಪನ್ನಫಲ ಹರಿಗುಣದ ಮಹಿಮೆಯ
ವರ್ಣನೆಗೆ ಕುಂದೇನು ಭಾಷಾಭೇದದಲಿ ಕೃತಿಯ ॥ (೧-೧-೮)

ಕನ್ನಡದ ಕೃತಿಯೆಂದು ಇದನ್ನು ಅಸಡ್ಡೆ ಮಾಡಬೇಡಿ; ದರ್ಪಣ ಎಂದರೂ ಒಂದೇ ಕನ್ನಡಿ ಎಂದರೂ ಒಂದೇ. ಎರಡೂ ಪದಗಳು ಸೂಚಿಸುವುದು ಒಂದೇ ವಸ್ತುವನ್ನು; ಮುಖ ನೋಡಿಕೊಂಡಾಗ ಅದರ ಪ್ರತಿಫಲನ ಗುಣದಲ್ಲಿ ಯಾವುದೇ ವ್ಯತ್ಯಾಸವಿರುವುದಿಲ್ಲ. ಹರಿಗುಣದ ಮಹಿಮೆಯ ವರ್ಣನೆಗೆ ಭಾಷಾಭೇದವಿಲ್ಲ. ಕನ್ನಡದಲ್ಲಿ ನಿರೂಪಿಸಿದರೆ ಅದಕ್ಕೆ ಕುಂದಿಲ್ಲ. ಭಗವಂತನ ಕಥೆಯನ್ನು ಕನ್ನಡದಲ್ಲಿ ನಿರೂಪಿಸುವುದರಿಂದ ಅದರ ಮಹಿಮೆ ತಗ್ಗದು-ಎಂಬುದು ಕವಿಯ ಕಳಕಳಿಯ ನಿವೇದನೆ. ಇದು ಅಕ್ಷರವಂತ

ಸಮಾಜ ಆ ಕಾಲದಲ್ಲಿ ಕನ್ನಡದ ಬಗ್ಗೆ ಹೊಂದಿದ್ದ ಉಪೇಕ್ಷೆಗೆ ತೋರಿದ ವಿರೋಧವಾಗಿದೆ. "ಕನ್ನಡದ ಕೃತಿಯೆಂದು ಅವಜ್ಞಾಪನ್ನರಾಗದಿರಿ" ಎಂಬುದೂ, "ಹರಿಗುಣದ ಮಹಿಮೆಯ ವರ್ಣನೆಗೆ ಭಾಷಾಭೇದದಲಿ ಕುಂದೇನು" ಎಂಬುದೂ ಕವಿಯ ಕನ್ನಡ ಪ್ರೇಮದ ಮಾರ್ಗದರ್ಶಕ ಸೂತ್ರಗಳು. ಇದೇ ಕೃತಿಯ ಹನ್ನೊಂದನೆಯ ಸ್ಕಂಧದಲ್ಲಿ "ಭಾಷೆ ಕನ್ನಡವಾದರೇನದು ಕಾಸುವೀಸದ ಕುಂದದುಂಟೇ" ವಾಸುದೇವನ ಕಥಾಸಾಗರದ ಸಾರಗುಣವರಿಯಲು (೧೧-೧-೭) ಎಂದಿದೆ. ಮೇಲಿನ ಮನೋಧರ್ಮಕ್ಕೆ ಇದು ಪೂರಕವಾಗಿಯೇ ಇದೆ. (ಇದು ಹಾಗೂ ಇತರ ಕೆಲವು ಸ್ಕಂಧಗಳು ಅನ್ಯಕರ್ತೃಕ ಎಂಬ ಅಭಿಪ್ರಾಯವೂ ಇದೆ)

೩

ಸು. ಕ್ರಿ.ಶ. ೧೬೭೫ರಲ್ಲಿದ್ದ ಮಹಲಿಂಗರಂಗ ಅಥವಾ ರಂಗನಾಥ, ಬಳ್ಳಾರಿ ಭಾಗದ ಉಚ್ಚಂಗಿ ಪ್ರಾಂತದ ಕವಿ. ಈತನ ಕೃತಿ **ಅನುಭವಾಮೃತ**. ಧಾರ್ಮಿಕ ಹಾಗೂ ಆನುಭಾವಿಕ ವಲಯದಲ್ಲಿ ಇದು ಹೆಚ್ಚು ಜನಪ್ರಿಯ. ಇದರ ತಾಳೆಯೋಲೆಯ, ಕೈಬರಹದ, ಕಲ್ಲಚ್ಚಿನ ಹತ್ತು ಹಲವು ಪ್ರತಿಗಳು ದೊರೆತಿವೆ. ಇದು ಮತ್ತೆ ಮತ್ತೆ ಮುದ್ರಣಗೊಂಡಿದೆ. ಈ ಕೃತಿಯು ವೇದವ್ಯಾಸರು ಶುಕನಿಗೆ ಉಪದೇಶಿಸಿದ ಅಖಿಳ ವೇದಾಂತಾರ್ಥಗಳ ಸಂಗ್ರಹದ ಕನ್ನಡ ರೂಪ. ಸಂಸ್ಕೃತದಲ್ಲಿರುವ ತ್ವಂಪದ, ತತ್ಪದ, ಅಸಿಪದ, ಪರಮಾತ್ಮಪದ, ಮಾಯಾಮಿಥ್ಯಾತ್ವ ಜೀವತ್ರಯ, ಜೀವನ್ಮುಕ್ತಿ, ನಿರ್ಗುಣಾರಾಧನೆಗಳಂಥ ಗಹನ ವಿಷಯಗಳನ್ನು ಇಲ್ಲಿ ಕನ್ನಡೀಕರಿಸಿದೆ. ಕನ್ನಡದಲ್ಲಿ ಬರೆದುದರ ಬಗ್ಗೆ ಕವಿ ಹೇಳುವ ಪದ್ಯವಿದು:

ಕನ್ನಡದ ನುಡಿಯೆಂದುಪೇಕ್ಷಿಸ
(ದಿ)ನ್ನು ಹಿರಿಯರಿಗಂಜಿ ನುಡಿವೆನು
ಕನ್ನಡಿಯೆ ದರ್ಪಣವದಲ್ಲದೆ ಭೇದವೇನಿದಕೆ?
ಮುನ್ನಲುಪನಿಷದರ್ಥವನು ಸಂ
ಪನ್ನ ಮತಿಗಳು ಪೇಳ್ದುದನೆ ನಾ
ಕನ್ನಡಿಸಿದೆನು ಕೊರತೆಯಿರ್ದೊಡೆ ಮನ್ನಿಸುವರೊಲಿದು ॥

ಸುಲಿದ ಬಾಳೆಯ ಹಣ್ಣಿನಂದದಿ
ಕಳೆದ ಸಿಗುರಿನ ಕಬ್ಬಿನಂದದಿ
ಲಳಿಸಿದುಷ್ಣದ ಹಾಲಿನಂದದಿ ಸುಲಭವಾಗಿರ್ಪ
ಲಲಿತವಹ ಕನ್ನಡದ ನುಡಿಯಲಿ
ತಿಳಿದು ತನ್ನೊಳು ತನ್ನ ಮೋಕ್ಷವ
ಗಳಿಸಿಕೊಂಡರೆ ಸಾಲದೇ? ಸಂಸ್ಕೃತದಲಿನ್ನೇನು? ॥

ಈ ಹಿಂದೆಯೇ ನೋಡಿದಂತೆ ಕನ್ನಡದ ನುಡಿಯೆಂದು ಉಪೇಕ್ಷಿಸದಿರಿ; ಕನ್ನಡಿ-ದರ್ಪಣ ಎರಡೂ ಒಂದೇ-ಅದರಲ್ಲಿ ಭೇದವಿಲ್ಲ; ಉಪನಿಷತ್ತಿನ ಅರ್ಥವನ್ನು ಕನ್ನಡದಲ್ಲಿ ಹೇಳಿದ ಮಾತ್ರಕ್ಕೆ ಯಾವ ಕೊರತೆಯೂ ಇಲ್ಲ; ಏನಾದರೂ ಕುಂದಿದ್ದರೆ ಮನ್ನಿಸಿ-ಇದು

ಮೊದಲ ಪದ್ಯದ ಭಾವ. ಸಿಪ್ಪೆಯನ್ನು ಸುಲಿದ ರಸಬಾಳೆಯಂತೆ, ಗಿಣ್ಣು-ಸಿವುರು-ಸಿಪ್ಪೆ ಸುಲಿದ ಕಬ್ಬಿನಂತೆ, ಕಾಯಿಸಿ ಆರಿಸಿದ ಹಾಲಿನಂತೆ ಕನ್ನಡ ಭಾಷೆ ಸುಲಭ, ರುಚಿಕರ. ಇಂಥ ಲಲಿತವಾದ ಕನ್ನಡದ ಮೂಲಕ ಆತ್ಮಜ್ಞಾನ ಅರಿಯುವುದು, ಮೋಕ್ಷಗಳಿಸುವುದು ಸಲೀಸು. ಸಂಸ್ಕೃತದಿಂದ ಆಗುವುದಾದರೂ ಮತ್ತೇನು-ಇದು ಎರಡನೆಯ ಪದ್ಯದ ಭಾವ. ಮೊದಲ ಪದ್ಯದ "ಕನ್ನಡದ ನುಡಿಯೆಂದುಪೇಕ್ಷಿಸದಿರಿ" ಎಂಬುದೂ, "ಕನ್ನಡಿ ದರ್ಪಣವದಲ್ಲದೆ ಭೇದವೇನಿದಕೆ" ಎಂಬುದೂ ಈ ಹಿಂದೆ ಕನ್ನಡ ಭಾಗವತಕಾರ ಹೇಳಿದ "ಕನ್ನಡದ ಕೃತಿಯೆಂದು ಅವಜ್ಞಾಪನ್ನರಾಗದಿರಿ", "ದರ್ಪಣ ಕನ್ನಡಿಯಿದೆಂದೆಂಬಡಾವುದು ಕೊಱತೆ" ಎಂಬ ವಾಕ್ಯಗಳಿಗೆ ಸಮಾನವಾಗಿವೆ. ಎರಡರ ಪದಸರಣಿ, ಅರ್ಥಭರಣಿ ಒಂದೇ. ಎರಡನೆಯ ಪದ್ಯದಲ್ಲಿ ಸಿಪ್ಪೆಸುಲಿದ ಬಾಳೆಹಣ್ಣು ಕನ್ನಡ ನುಡಿಯ ರಸವಂತಿಕೆ-ಪಕ್ವತೆಗಳನ್ನೂ, ಗಿಣ್ಣು ತೆಗೆದ ಕಬ್ಬು ಕನ್ನಡದ ಲಾಲಿತ್ಯ ಹಾಗೂ ಸಿಹಿಸವಿಗಳನ್ನು, ಕಾಯಿಸಿ ಆರಿಸಿದ ಹಾಲು ಆಬಾಲವೃದ್ಧರವರೆಗೆ ಎಲ್ಲರೂ ಬಳಸುವ ಕನ್ನಡದ ಸಾರ್ವಜನೀನತೆ-ಪೌಷ್ಠಿಕತೆಗಳನ್ನು ಧ್ವನಿಸುತ್ತದೆ. ಸಿಪ್ಪೆ-ಸಿವುರು ಗಡಸು-ಪೆಡಸು ಕಳೆದುಕೊಂಡ ಸರಳ, ಸುಲಭ, ಸವಿಯಾದ ಧವಳಗನ್ನಡವನ್ನು ಕವಿ ಎತ್ತಿ ಹಿಡಿದಿದ್ದಾನೆ. ಈ ಕೃತಿಯ ಸರಳತೆಗೆ ಮಾರುಹೋಗಿ ಶ್ರೀಮತ್ಪರಮಹಂಸ ಬಾಲಕೃಷ್ಣ ಬ್ರಹ್ಮಾನಂದ ರಾಜಯೋಗಿಗಳು ಇದನ್ನು ಸಂಸ್ಕೃತಕ್ಕೆ ಅನುವಾದಿಸಿರುವುದು ಒಂದು ಸ್ವಾರಸ್ಯದ ಸಂಗತಿ. "ತಿಳಿದು ತನ್ನೊಳು ತನ್ನ ಕನ್ನಡದ ನುಡಿಯಲಿ ಮೋಕ್ಷವ ಗಳಿಸಿಕೊಂಡರೆ ಸಾಲದೇ?..." ಎಂಬ ಮಾತಂತೂ ಕವಿಯ ಕನ್ನಡ ಪ್ರೇಮದ ಪರಮನಿಷ್ಠೆ ಯಾಗಿದೆ. ಸದಾನಂದ ಶಿವಯೋಗಿ ಬರೆದದ್ದು ಭಾಗವತದ ಕಥೆ; ಮಹಲಿಂಗ ರಂಗ ಹೇಳಿದ್ದು ಭಾಗವತ ತತ್ತ್ವ. ಎರಡಕ್ಕೂ ಕನ್ನಡಭಾಷೆ ಸಮರ್ಥ ವಾಹಕವಾಗಿದೆ.

೪

ಕ್ರಿ.ಶ. ೧೭೭೭ರಲ್ಲಿದ್ದ ಕವಿ ಪರಮದೇವ. ಶಿವಮೊಗ್ಗದ ಹೊಸನಗರ ತಾಲ್ಲೂಕಿನ ಸುಳಿಗೋಡು ಇವನ ಊರು. ವ್ಯಾಸಭಾರತದ ಸಂಗ್ರಹ ಆವೃತ್ತಿಯಾದರೂ **ತುರಂಗಭಾರತ**ವೆಂಬ ಹೆಸರಿನಿಂದಲೇ ಇವನ ಕೃತಿ ಪ್ರಸಿದ್ಧ. ೧೭ ಪರ್ವ, ೯೪ ಸಂಧಿ ೪೮೦೩ ಪದ್ಯಗಳ ದೀರ್ಘವ್ಯಾಪ್ತಿಯದು ಇವನ ಕಾವ್ಯ. ಕೃತಿಯ ಛಂದೋರೂಪ ವಾರ್ಧಕ ಷಟ್ಪದಿ. ತನಗೆ ಅಮರ ಕಾವ್ಯಗಳ ಹೊಲಬು ಗೊತ್ತಿಲ್ಲ; ಗ್ರಂಥದ ಅರ್ಥ, ಶಾಸ್ತ್ರ ಅರಿಯೆ; ಸಂಸ್ಕೃತಂಗಳ ಕನ್ನಡದ ನೆಲೆಯರಿಯೆ, ಕೃಷ್ಣದೇವನು ಹೃದಯವನ್ನು ಹೊಕ್ಕು ನುಡಿಸಿದಷ್ಟನ್ನು ಹೇಳುತ್ತೇನೆ-ಎನ್ನುತ್ತಾನೆ. ಬರಬರುತ್ತ ಜನ ಜಡಮತಿಗಳೂ ಅಲ್ಪಾಯುಷಿಗಳೂ ಆಗುತ್ತಿದ್ದಾರೆ. "ಮುನ್ನ ಸಂಸ್ಕೃತಂಗಳಂ ನುಡಿಯಲರಿಯರು ಜಡರು। ಕನ್ನಡದ ಕೃತಿಯಾದಡೆ ಅರಿದಪರು" (೧-೧-೧೬) - ಹೀಗಾಗಿ ಕನ್ನಡದಲ್ಲಿ ಕೃತಿ ರಚನೆಗೆ ಕವಿ ತೊಡಗಿದ್ದಾನೆ. ಆತನ ಕನ್ನಡ ಪ್ರೀತಿಯ ಪದ್ಯ ಹೀಗಿದೆ:

> **ಸುಲಿದ ಬಾಳೆಯ ಹಣ್ಣಿನಂತಿಹುದು ಭಾರತದ**
> **ಜಲಧಿಯೊಳು ಪೇಳ್ದ ವೃತ್ತಾಂತವನೆ ಸಂತೋಷ**
> **ದೊಳಗೆ ವಿಸ್ತರಿಸುವೆನು ತಿಳಿವಂತೆ ಸತ್ಕವಿಗಳಿಂಗೆರಗಿ ಬೇಡಿಕೊಂಡು**

ನಳಿನನಾಭನ ಪುಣ್ಯಚರಿತವಂ ತನ್ನೊಳಗೆ
ತಿಳಿದು ಮೋಕ್ಷಂಗಳಂ ಗಳಿಸಿಕೊಂಡರೆ ಜನ್ಮ
ಫಲವಲಾ ಸಂಸ್ಕೃತದಲಿನ್ನೇನು? ಕನ್ನಡದ ನುಡಿ ಸಾಕು ಸಜ್ಜನರಿಗೆ ॥

ಹಿಂದಿನ ಸತ್ಕವಿಗಳಿಗೆ ನಮಸ್ಕರಿಸಿ, ಅವರನ್ನು ಬೇಡಿಕೊಂಡು ಭಾರತಸಾಗರದಲ್ಲಿ ಹೇಳಿದ ವೃತ್ತಾಂತವನ್ನು ಸಂಕ್ಷೇಪದಲ್ಲಿ ನಿರೂಪಿಸುತ್ತೇನೆ. ಇದು ಸಿಪ್ಪೆ ತೆಗೆದ ಬಾಳೆಯ ಹಣ್ಣಿನಷ್ಟೇ ಸುಲಭವೂ, ರಸಭರಿತವೂ ಆಗಿರುತ್ತದೆ; ಈ ಕನ್ನಡ ಕೃತಿಯಿಂದ ಪದ್ಮನಾಭನ ಪುಣ್ಯ ಚರಿತವನ್ನು ತನ್ನಲ್ಲಿ ತಾನು ತಿಳಿದು ಮೋಕ್ಷವನ್ನು ಗಳಿಸಿಕೊಳ್ಳಬಹುದು; ಇದು ಜನ್ಮಫಲ; ಸಂಸ್ಕೃತದಲ್ಲಿ ಏನಿದೆ? ಸಜ್ಜನರಿಗೆ ಕನ್ನಡದ ನುಡಿಯೇ ಸಾಕು–ಎಂಬುದು ಈ ಪದ್ಯದ ಭಾವಾರ್ಥ. "ಸುಲಿದ ಬಾಳೆಯ ಹಣ್ಣಿನಂತಿಹುದು" ಎಂಬುದು, "ತನ್ನೊಳಗೆ ತಿಳಿದು ಮೋಕ್ಷಗಳಂ ಗಳಿಸಿಕೊಂಡರೆ ಜನ್ಮಫಲ" ಎಂಬುದು, "ಸಂಸ್ಕೃತದಲಿನ್ನೇನು" ಎಂಬುದು, ಮೇಲೆ ನೋಡಿದ ಮಹಲಿಂಗರಂಗನ "ಸುಲಿದ ಬಾಳೆಯ ಹಣ್ಣಿನಂದದಿ" "ತಿಳಿದು ತನ್ನೊಳು ತನ್ನ ಮೋಕ್ಷವ ಗಳಿಸಿಕೊಂಡರೆ ಸಾಲದೇ?" "ಸಂಸ್ಕೃತದಲಿನ್ನೇನು" ಎಂಬ ವಾಕ್ಯಗಳೇ ಆಗಿವೆ. ಎರಡಕ್ಕೂ ಇರುವ ನಿಕಟ ಸಾದೃಶ್ಯ ಗಮನಾರ್ಹ. ಮುಂದುವರಿದು ಪರಮದೇವ ಭವಶರಧಿ ದಾಟಲು ತನ್ನ ಕೃತಿ ನಾವೆ, ಕಿವಿಗಿದು ಸೊಗಸು ಹೇಳಲು–ಕೇಳಲು ಸರ್ವಜನಕ್ಕೂ ಇದು ಸುಲಭ ಎನ್ನುತ್ತಾನೆ. "ಭಾಷೆ ಕನ್ನಡವಾದರೇನಿದಂ ಭಕ್ತಿ ವಿಶ್ವಾಸದಿಂ ಸುಜನರಾಗಿದ್ದವರು ಮುಕ್ತಿಯಭಿಲಾಷೆಯಿಂ ಪೊಗಳುವರು" (೧–೧–೧೫) ಎಂಬುದು ಪರಮದೇವನ ದೃಢ ನಂಬುಗೆ. ಇದು ಅವನ ಕನ್ನಡ ಪ್ರೀತಿ, ಗೌರವಗಳ ಸೂಚಕ. "ಸಂಸ್ಕೃತದಲಿನ್ನೇನು? ಕನ್ನಡದ ನುಡಿ ಸಾಕು ಸಜ್ಜನರಿಗೆ" ಎಂಬ ಅವನ ಪರಮವಾಣಿ ಶ್ರೀಸಾಮಾನ್ಯನ ಆಡುಗನ್ನಡದ ಅಗತ್ಯವರಿತುದರ ದ್ಯೋತಕ. "ಸಂಸ್ಕೃತಂಗಳಂ ನುಡಿಯಲರಿಯರು ಜಡರು । ಕನ್ನಡದ ಕೃತಿಯಾದಡೆ ಅರಿದಪರು" ಎಂಬ ಅವನ ಮಾತಂತೂ ವಸ್ತುಸ್ಥಿತಿಯರಿತ ಕವಿ ವಿವೇಕ.

೫

ಸಹ್ಯಾದ್ರಿ ಖಂಡ ಎಂಬೊಂದು ವಿಶಿಷ್ಟ ಕನ್ನಡ ಕೃತಿಯಿದೆ. ಇದನ್ನು ವೈ.ಸಿ.ಭಾನುಮತಿ ಅವರು ಸಂಪಾದಿಸಿ, ಕನ್ನಡ ಅಧ್ಯಯನ ಸಂಸ್ಥೆಯಿಂದ ೧೯೮೮ರಲ್ಲಿ ಪ್ರಕಟಿಸಿದ್ದಾರೆ. ಇದರ ಕರ್ತೃ ಯಾರೋ ಗೊತ್ತಿಲ್ಲ. ಇದರ ಊಹಿತ ಕಾಲ ಸು. ಕ್ರಿ.ಶ. ೧೭೮೦. ಉತ್ತರಕನ್ನಡ ಜಿಲ್ಲೆಗೆ ಸೇರಿದ್ದ ಹಿಂದಿನ ತುಳುನಾಡು ಈತನ ಸ್ಥಳ. ಈ ಕೃತಿಯಲ್ಲಿ ಬನವಾಸಿ, ಸೋದೆ, ಯಾಣ ಗೋಕರ್ಣ, ಬ್ರಹ್ಮಾವರ, ಕೊಲ್ಲೂರು, ಶಂಕರನಾರಾಯಣ ಬಸರೂರು, ತೀರ್ಥಹಳ್ಳಿ ಸುಬ್ರಹ್ಮಣ್ಯ, ಭಾಗಮಂಡಲ ಮುಂತಾದ ಪ್ರದೇಶಗಳ ಸ್ಥಳಪುರಾಣ, ದೇವಾಲಯಗಳು ವೈಶಿಷ್ಟ್ಯ ಹೇಳಿದೆ. ಜೊತೆಗೆ ಗೋದಾವರಿ, ಭೀಮರಥಿ ಕೃಷ್ಣವೇಣಿ, ವರದಾ, ಅಘನಾಶಿನಿ ಶರಾವತಿ, ತುಂಗಭದ್ರಾ, ಕುಮಾರಧಾರಾ, ಪಯಸ್ವಿನಿ ಮುಂತಾದ ನದಿಗಳ ಪುರಾಣ ಐತಿಹ್ಯ, ಪವಿತ್ರ ವೃತ್ತಾಂತಗಳು ಸೇರಿವೆ. ಒಟ್ಟಿನಲ್ಲಿ ಇದು ಮಲೆನಾಡಿನ ಭೂಗೋಳದ ಒಂದು ಸಾಹಿತ್ಯಿಕ ದಾಖಲೆ. ಈ ಕೃತಿಯು ಸಂಸ್ಕೃತದ ಸಹ್ಯಾದ್ರಿ ಖಂಡ, ತುಂಗಭದ್ರಾ ಮಾಹಾತ್ಮ್ಯ, ಸುಬ್ರಹ್ಮಣ್ಯ ಮಾಹಾತ್ಮ್ಯ ಮುಂತಾದ ನದಿ ಹಾಗೂ ಕ್ಷೇತ್ರ ಚರಿತ್ರೆಗಳ

ಕನ್ನಡರೂಪ. ಈ ಕನ್ನಡೀಕರಣದ ಬಗ್ಗೆ ಗ್ರಂಥದ ಆರಂಭದಲ್ಲಿ ಕವಿ ಹೇಳಿರುವ ಪದ್ಯಗಳಿವು:

ಬಾಲಕರು ಕನ್ನಡಿಯ ಪಿಡಿದರೆ
ಬಾಲಭಾಸ್ಕರನಲ್ಲಿ ಹೊಳೆವಂ
ತೀ ಲಲಿತ ಶಾಸ್ತ್ರವನು ಕನ್ನಡದಲ್ಲಿ ವಿವರಿಸುವೆ
ಪೇಳಿದೀ ಪದದರ್ಥವೆಲ್ಲವು
ಮೂಲಕಾವ್ಯದಲ್ಲಿದ್ದ ತೆರದಲಿ
ಲಾಲಿಪರ ಮನ ಸೌಖ್ಯವಾಗಲಿ ಗುರುಕಟಾಕ್ಷದಲಿ ॥

ಕನ್ನಡದ ಕೃತಿಯಲ್ಲಿ ಶಾಸ್ತ್ರವ
ವರ್ಣಿಸುವುದೆಂತೆನೆಲು ಪೇಳುವೆ
ಕಣ್ಣರೋಗಿಗೆ ಬೆಳಕು ಫಲಿಸದ ತೆರದಿ ಋಷಿಕೃತದ
ನಿರ್ಣಯದ ಶಾಸ್ತ್ರಗಳು ಲೋಕದಿ
ಮುನ್ನ ತಾನೇ ಬೆಳಗುತಿರ್ಪುದು
ತನ್ನ ಹೋಲುವೆಯಿಂದ ಸೂರ್ಯನ ಜಲಧಿ ಕಂಡಂತೆ" (೧–೮,೯)

'ಹುಡುಗರು ಕನ್ನಡಿಯನ್ನು ಹಿಡಿದುಕೊಂಡರೂ ಎಳೆಯಸೂರ್ಯ ಅದರಲ್ಲಿ ಪ್ರತಿಫಲಿಸುವಂತೆ, ನಾನು ಈ ಲಲಿತಶಾಸ್ತ್ರವನ್ನು ಕನ್ನಡದಲ್ಲಿ ನಿರೂಪಿಸುತ್ತೇನೆ; ಮೂಲಕೃತಿಯಲ್ಲಿ ಇದ್ದಂತೆಯೇ ಪದದ ಅರ್ಥ ನುಡಿಯುತ್ತೇನೆ; ಇದರಿಂದ ಕೇಳುವವರ ಮನಸ್ಸಿಗೆ ಸುಖವುಂಟಾಗಲಿ' ಇದು ಮೊದಲ ಪದ್ಯದ ಭಾವ. ಎರಡನೆಯದು ಸಂಸ್ಕೃತದಲ್ಲಿರುವ ಸಾಹಿತ್ಯ ಕುರಿತು. ಋಷಿಗಳಿಂದ ರಚಿತವಾದ ಶಾಸ್ತ್ರಗಳು ಸಂಸ್ಕೃತದಲ್ಲಿವೆ; ಬೆಳ್ಳಂಬೆಳಗುತ್ತಲೂ ಇವೆ; ಆದರೆ ಸಂಸ್ಕೃತ ಜ್ಞಾನಚಕ್ಷುವಿಲ್ಲದೆ ಶ್ರೀಸಾಮಾನ್ಯ ನೇತ್ರ ರೋಗಿಯಾಗಿದ್ದಾನೆ; ಅವನಿಗೆ ಸಂಸ್ಕೃತ ಬಾರದ್ದರಿಂದ ಆ ಜ್ಞಾನದೀಪ್ತಿ ಕಾಣದು. "ತನ್ನ ಹೋಲುವೆಯಿಂದ ಸೂರ್ಯನ ಜಲಧಿ ಕಂಡಂತೆ" ಎಂಬುದು ಕೊನೆಯ ಸಾಲು. "ತನ್ನ ಹೋಲುವೆಯಿಂದ ಸೂರ್ಯನ ಜಲಧಿ ಕಂಡಂತೆ ಕನ್ನಡದ ಕೃತಿಯಲ್ಲಿ ಶಾಸ್ತ್ರವ ವರ್ಣಿಸುವುದು" ಎಂಬ ಅನ್ವಯ ಇಲ್ಲಿ ಸೂಕ್ತ. ಉರಿ, ಕಿರಣ ಪ್ರಖರತೆ, ಬಿಸುಪಿನ ಸೂರ್ಯನನ್ನು ನೇರವಾಗಿ ನೋಡಲಾಗದು; ಅದರ ಬಿಂಬ ಕಡಲಲ್ಲಿ ಹೊಳೆದರೆ ನೋಡಬಹುದು.

ಸಂಸ್ಕೃತ ಸೂರ್ಯನನ್ನು ನೋಡಲಾಗದು; ಕನ್ನಡದ ಕಡಲಲ್ಲಿ ಅವನು ಪ್ರತಿಫಲಿಸಿದರೆ ಚೆನ್ನು ಹಾಗೂ ಆಹ್ಲಾದಕರ ಎಂಬುದು ಇಲ್ಲಿಯ ಭಾವ. ಈ ಕವಿ ಬಳಸಿರುವ ಕನ್ನಡಿ ಬಾಲಭಾಸ್ಕರನ ಪ್ರತಿಫಲನ, ಲಲಿತಶಾಸ್ತ್ರ ಎಂಬುವು ಕನ್ನಡ ಭಾಗವತಕಾರ ಹಾಗೂ ಮಹಲಿಂಗರಂಗರ ಇವೇ ಮಾತು–ಭಾವಗಳನ್ನು ನೆನಪಿಸುತ್ತವೆ. "ತನ್ನ ಹೋಲುವೆಯಿಂದ ಸೂರ್ಯನ ಜಲಧಿ ಕಂಡಂತೆ ಕನ್ನಡದ ಕೃತಿಯಲ್ಲಿ ಶಾಸ್ತ್ರವ ವರ್ಣಿಸುವುದು" ಎಂಬ ವಾಕ್ಯ ಮನನೀಯ.

೬

ಮೇಲೆ ನೋಡಿದ ಕನ್ನಡ ಭಾಗವತಕಾರ, ಮಹಲಿಂಗರಂಗ, ಪರಮದೇವ ಸಹ್ಯಾದ್ರಿಖಂಡದ ಕರ್ತೃ ೧೬, ೧೭ನೆಯ ಶತಮಾನದ ಕವಿಗಳು. ಈ ಎಲ್ಲರೂ ಷಟ್ಪದೀ ಕವಿಗಳು; ಬ್ರಾಹ್ಮಣ ಕವಿಗಳು; ಮಹಲಿಂಗರಂಗನನ್ನು ಹೊರತುಪಡಿಸಿ ಉಳಿದೆಲ್ಲರೂ ಶಿವಮೊಗ್ಗ ಹಾಗೂ ಉತ್ತರಕನ್ನಡ ಜಿಲ್ಲೆಯ ಪರಿಸರದ ಸಾಹಿತಿಗಳು; ವೈದಿಕ ಸಂಪ್ರದಾಯದ ಭಾರತ, ಭಾಗವತ, ವೇದಾಂತಾರ್ಥ ಕನ್ನಡಿಸಿದವರು. ಅವರೆಲ್ಲರಿಗೂ ಸಂಸ್ಕೃತದ ಪರಿಚಯ, ಪಾಂಡಿತ್ಯ ತಕ್ಕಮಟ್ಟಿಗೆ ಚೆನ್ನಾಗಿಯೇ ಇತ್ತು. ಮೂಲ ಸಂಸ್ಕೃತ ಕೃತಿಗಳು ಜನಸಾಮಾನ್ಯರಿಗೆ ದುರವಗಾಹ್ಯವೆಂಬುದು ಅವರಿಗೆ ತಿಳಿದಿತ್ತು. ಆದ್ದರಿಂದಲೇ "ಭಾಷಾಭೇದದಲಿ ಕುಂದೇನು", "ಸಂಸ್ಕೃತದಲಿನ್ನೇನು" ಎಂದು ಪ್ರಶ್ನಿಸಿದರು. ಅಷ್ಟೇ ಅಲ್ಲದೆ "ಕನ್ನಡದ ಕೃತಿಯೆಂದು ಅವಜ್ಞಾಪನ್ನರಾಗದಿರಿ", "ಕನ್ನಡದ ನುಡಿಯೆಂದು ಉಪೇಕ್ಷಿಸದಿರಿ", "ಕನ್ನಡದ ನುಡಿಯಲಿ ತಿಳಿದು ತನ್ನೊಳು ತನ್ನ ಮೋಕ್ಷವ ಗಳಿಸಿಕೊಂಡರೆ ಸಾಲದೇ?", "ಕನ್ನಡದ ನುಡಿ ಸಾಕು ಸಜ್ಜನರಿಗೆ" ಎಂದು ಘೋಷಿಸಿದರು, ಎಚ್ಚರಿಸಿದರು. ಈ ಎಲ್ಲರೂ ವೈದಿಕ ನೆಲೆಗಟ್ಟಿನ, ಹೆಚ್ಚು ಕಡಿಮೆ ಘಟ್ಟಪ್ರದೇಶದ ಸ್ಥಳಗಟ್ಟಿನ, ಒಂದೇ ಕಾಲಘಟ್ಟದ ಕವಿಗಳಾದ್ದರಿಂದ, ಇವರ ಮೇಲ್ಕಂಡ ಪದ್ಯಗಳಲ್ಲಿ ದಟ್ಟ ಹೋಲಿಕೆಯಿದೆ. ಬ್ರಾಹ್ಮಣ ಕವಿಗಳು ಕನ್ನಡದಿಂದ ಪೂರ್ಣವಾಗಿ ವಿಮುಖರಾಗಿರಲಿಲ್ಲ ಎಂಬುದಕ್ಕೆ ಈ ಮೇಲಿನ ಪದ್ಯಗಳು ನಿದರ್ಶನ.

❐



ಕನ್ನಡ ನುಡಿ ಸೇವಕ – ವಿದ್ವಾನ್ 'ಬಾಲ ಸರಸ್ವತಿ'

■ **ಪ್ರೊ. ಜಿ. ಅಶ್ವತ್ಥನಾರಾಯಣ**

ಇಪ್ಪತ್ತನೆಯ ಶತಮಾನದ ಪ್ರಾರಂಭದ ಎರಡನೇ ದಶಕ ಎಂದರೆ ೧೯೨೦ಕ್ಕೆ ಮುಂಚೆ. ಬೆಂಗಳೂರಿನ ಕೋಟೆ ಹೈಸ್ಕೂಲ್ ಅನ್ನು ಆಗತಾನೆ ಸೆಂಟ್ರಲ್ ಕಾಲೇಜ್ ಕಟ್ಟಡದಿಂದ ಈಗಿನ ಕಟ್ಟಡಕ್ಕೆ ವರ್ಗಾಯಿಸಿತ್ತು. ಅಲ್ಲಿ ಒಬ್ಬ ಡ್ರಾಯಿಂಗ್ ಟೀಚರ್ ಇದ್ದರು. ಅವರ ಬಗ್ಗೆ ಕನ್ನಡದ ಹಿರಿಯರಲ್ಲಿ ಒಬ್ಬರಾದ ಡಿ.ವಿ.ಜಿ.ಯವರು ಹೀಗೆ ಬರೆದಿದ್ದಾರೆ: "ಆಳು ಗಿಡ್ಡೆಂದೇ ಹೇಳಬೇಕು, ದಪ್ಪವೂ ಅಲ್ಲ, ಬಣ್ಣ ಎಣ್ಣೆಗೆಂಪು ಸೊಗಸಾಗಿ ಬಾಚಿ ಪೋದಿ ಮಾಡಿದ ಗಡ್ಡ. ತಲೆಯ ತುಂಬಾ ಕೂದಲು. ಬೈತಲೆ ತೀಡಿಹಾಕಿದ ಎಣೆ ಗಂಟು. ಹಣೆಯಲ್ಲಿ ದಮ್ಮಡಿ ಅಗಲದ ಕುಂಕುಮದ ಬೊಟ್ಟು."

ಆ ಡ್ರಾಯಿಂಗ್ ಮಾಸ್ಟರರು ಶಾಲೆಯಲ್ಲಿ (ಕೇವಲ) ಪಾಠ ಮಾಡುವ ಉಪಾಧ್ಯಾಯರಾಗಿರಲಿಲ್ಲ. ಕನ್ನಡ, ಸಂಸ್ಕೃತ, ತೆಲುಗು ಇಂಗ್ಲಿಷ್, ಬಂಗಾಳಿ ಭಾಷೆಗಳಲ್ಲಿ ಪ್ರಚಂಡ ಪಂಡಿತರಾಗಿದ್ದರು. ಪ್ರಸಿದ್ಧ ವಾಗ್ಮಿಗಳಾಗಿದ್ದರು. ಪತ್ತೆದಾರಿ ಕಥೆಗಳನ್ನು, ಕಾದಂಬರಿಗಳನ್ನು ಬರೆದು ಪ್ರಸಿದ್ಧರಾಗಿದ್ದರು.



ಆ ಡ್ರಾಯಿಂಗ್ ಮಾಸ್ಟರ್ ಬೀದಿಯಲ್ಲಿ ಹೋಗುತ್ತಿದ್ದರೆ ವಿದ್ಯಾರ್ಥಿಗಳು, "...ಲೋ, 'ಗುರುತು ಕಂಡ ಕಳ್ಳ' ಬಂದರಪ್ಪ." ಎನ್ನುತ್ತಿದ್ದರು. ಏಕೆ ಗೊತ್ತೇ? ಅವರ ಅನೇಕ ಕೃತಿಗಳ ಪೈಕಿ ಒಂದು ಪತ್ತೇದಾರಿ ಕಾದಂಬರಿಯ ಹೆಸರು – ಗುರುತು ಕಂಡ ಕಳ್ಳ! ಆ ಪುಸ್ತಕದಲ್ಲಿ ಮುಖ್ಯ ಚಿತ್ರದ ಕೆಳಗೆ ಆ ಡ್ರಾಯಿಂಗ್ ಮಾಸ್ಟರ್ ಅರ್ಥಾತ್ ವಿದ್ವಾನ್ ಬಾಲಸರಸ್ವತಿ ಅವರ ಚಿತ್ರ ಪ್ರಕಟವಾಗಿತ್ತು. ಅದಕ್ಕೇ ವಿದ್ಯಾರ್ಥಿಗಳು ಹಾಗೆನ್ನುತ್ತಿದ್ದರು.

ಪ್ರಸಿದ್ಧ ವಾಗ್ಗೇಯಕಾರ ವಾಸುದೇವಾಚಾರ್ಯರ ಮೊಮ್ಮಗ ಎಸ್. ಕೃಷ್ಣಮೂರ್ತಿಗಳು ತಮ್ಮ ಬಾಲ್ಯದ ವಿದ್ಯಾರ್ಥಿ ಜೀವನದ ನೆನಪುಗಳಲ್ಲಿ ಹೇಳಿದ ಮಾತುಗಳಿವು: "ನಮ್ಮ ತಂದೆಯವರು ಬಾಲ ಸರಸ್ವತಿಯವರನ್ನು ಚೆನ್ನಾಗಿ ಬಲ್ಲವರಾಗಿದ್ದರು. ಸಂಜೆ ಹೊತ್ತು ಮೈಸೂರಿನ ಅಗ್ರಹಾರದಲ್ಲಿದ್ದ ಆಯುರ್ವೇದ ಪಂಡಿತ ಮುದ್ಗಲ್ ರಾಮಚಂದ್ರಾಚಾರ್ಯರ ಅಂಗಡಿಯಲ್ಲಿ ಮಿತ್ರಕೂಟ ಸೇರುತ್ತಿತ್ತು. ಅಲ್ಲಿ ಬಾಲ ಸರಸ್ವತಿಯವರೂ, ನಮ್ಮ ತಂದೆಯವರೂ ಇರುತ್ತಿದ್ದರು. ಇಬ್ಬರ ಪರಿಚಯ ಎಷ್ಟು ನಿಕಟವಾಗಿತ್ತು ಎಂದರೆ ಬಾಲಸರಸ್ವತಿಯವರು, ತಾವು ಬರೆದ ಪತ್ತೇದಾರಿ ಕಾದಂಬರಿಗಳ ಹಸ್ತಪ್ರತಿಗಳನ್ನೇ ಓದಲು ನಮ್ಮ ತಂದೆಯವರಿಗೆ ಕೊಡುತ್ತಿದ್ದರು. ನಮ್ಮ ತಾಯಿಗಂತೂ ಬಾಲಸರಸ್ವತಿಯವರ ಎಲ್ಲ ಕಾದಂಬರಿಗಳೂ ಕಂಠಸ್ಥವಾಗಿದ್ದವು. 'ಕಂಠಾಭರಣ', 'ಪಿಶಾಚ ಪರಿವಾರ' 'ಕಮಲಾಕಾಂತನ ಉಯಿಲು', 'ದುಷ್ಟಚತುಷ್ಟಯ', 'ದೇವೀ ಚೌದು(ಧು) ರಾಣಿ' 'ಹೆಂಗಸು ಎಂದರೆ ಹೆಂಗಸು' ಈ ಎಲ್ಲ ಕಾದಂಬರಿಗಳ ಕತೆಗಳನ್ನು ರಾತ್ರಿಯ ಹೊತ್ತು ಕೈ ತುತ್ತು ಹಾಕುತ್ತಾ ತುಂಬಾ ಸ್ವಾರಸ್ಯವಾಗಿ ಹೇಳುತ್ತಿದ್ದರು.

ಹೀಗೆ ವಿದ್ಯಾರ್ಥಿಗಳಿಗೆ, ಹಿರಿಯರಿಗೆ ಎಲ್ಲರಿಗೂ ಪ್ರಿಯರಾಗಿದ್ದವರು ವಿದ್ವಾನ್ ಬಾಲಸರಸ್ವತಿಯವರು.

'ವಿದ್ವಾನ್ ಬಾಲಸರಸ್ವತಿ' ಕಾವ್ಯನಾಮ, ಅವರ ಪಾಂಡಿತ್ಯಕ್ಕೆ ಬಂದ ಪ್ರಶಸ್ತಿ. ಅವರ ನಿಜವಾದ ಹೆಸರು ನರಹರಿ ಆಚಾರ್ಯ. ಮಿತ್ರರ ಬಾಯಲ್ಲಿ ನರಹರಿ ರಾಯರು.

ವಿದ್ವಾನ್ ಬಾಲಸರಸ್ವತಿಯವರು ೧೮೮೦ರಲ್ಲಿ ಮೈಸೂರಿನ ರಮಾವಿಳಾಸ ಅಗ್ರಹಾರದಲ್ಲಿ ಪಂಡಿತ ಲಕ್ಷ್ಮೀನರಸಿಂಹಾಚಾರ್ಯರ ಪುತ್ರರಾಗಿ ಜನಿಸಿದರು. ಬೆಂಗಳೂರಿನ ಆಚಾರ್ಯ ಪಾಠಶಾಲೆಯ ಸ್ಥಾಪಕರಾದ ಅನಂತಾಚಾರ್ ಇವರ ಬಂಧುಗಳು. ಮಾಧ್ವ ಮನೆತನದವರು. ಬಾಲ್ಯದ ವಿದ್ಯಾಭ್ಯಾಸ ಮೈಸೂರಿನ ಸದ್ವಿದ್ಯಾ ಪಾಠಶಾಲೆಯಲ್ಲಿ ಆಯಿತು. ವ್ಯಾಕರಣ ಪಂಡಿತರಾದ ಪಂಡಿತ ಲಕ್ಷ್ಮೀನರಸಿಂಹಾಚಾರ್ಯರು ಇವರಿಗೆ ಸಂಸ್ಕೃತ ಬೋಧಿಸಿದರು. ವಿದ್ಯಾರ್ಥಿಯಾಗಿದ್ದಾಗಲೇ ಸಂಸ್ಕೃತದಲ್ಲಿ ಆಶುಕವಿತ್ವ ಮಾಡುವ ಸಾಮರ್ಥ್ಯ ಹೊಂದಿದ್ದ ಇವರ ಸಂಸ್ಕೃತ ಪಾಂಡಿತ್ಯ ಎಷ್ಟಿತ್ತು ಎಂದರೆ, ಮುಂದೆ ಸಂಸ್ಕೃತದ ಘನ ಪಂಡಿತರೊಡನೆ ದಿನವೆಲ್ಲಾ ಚರ್ಚೆ ಮಾಡುವಷ್ಟು. ಮಹಾಕವಿಗಳ ಕಾವ್ಯಗಳನ್ನು ಉದಾಹರಿಸುತ್ತಾ ಇವರು ತಮ್ಮ ಮಾತುಗಳನ್ನು ಹೇಳುತ್ತಿದ್ದರೆ, ಅವು ಇವರ ಮಾತೋ ಮಹಾಕವಿಯ ಮಾತೋ ಎಂಬುದೇ ತಿಳಿಯಲಾಗದಷ್ಟು ಅಗಾಧವಾದ ಸಂಸ್ಕೃತ ಪಾಂಡಿತ್ಯ ಇವರಿಗಿತ್ತು. ಇದ್ದಕ್ಕಿದ್ದಂತೆ ಸಂಸ್ಕೃತ ಕವಿತೆ ಇವರಿಂದ ಹೊರಹೊಮ್ಮುತ್ತಿತ್ತು. ಸ್ಫೂರ್ತಿ ಉಕ್ಕಿದಾಗ ನಡುರಾತ್ರಿ ಹಾಸಿಗೆಯಿಂದ ಎದ್ದು, ಗೋಡೆ ಮೇಲೆ ಕವನದ ಸಾಲುಗಳನ್ನು ಬರೆಯುತ್ತಿದ್ದರು. ಅದಕ್ಕಾಗಿ ಹಾಸಿಗೆಯ ಪಕ್ಕದಲ್ಲೇ ಸೀಮೆಸುಣ್ಣದ ಡಬ್ಬಿ ಇಟ್ಟುಕೊಂಡಿರುತ್ತಿದ್ದರು. ಸಂಸ್ಕೃತ ವಿದ್ಯಾಭ್ಯಾಸದ ಜೊತೆಗೆ ಹೈಸ್ಕೂಲ್ ವಿದ್ಯಾಭ್ಯಾಸವನ್ನು ಮಾಡಿ, ಮದ್ರಾಸ್ ವಿಶ್ವವಿದ್ಯಾಲಯ ನಡೆಸುತ್ತಿದ್ದ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಆಗಿನ್ನೂ ಎಸ್.ಎಸ್.ಎಲ್.ಸಿ. ಪರೀಕ್ಷಾ ಪದ್ಧತಿ ಜಾರಿಗೆ ಬಂದಿರಲಿಲ್ಲ. ಅನಂತರ ಜೆ.ವೀರ್ ಅವರು ಮುಖ್ಯೋಪಾಧ್ಯಾಯರಾಗಿದ್ದ ಮಹಾರಾಜಾ ಕಾಲೇಜಿನಲ್ಲಿ

ಎಫ್.ಎ. ಪರೀಕ್ಷೆ ಪಾಸ್ ಮಾಡಿದರು. ಇದೇ ಕಾಲದಲ್ಲಿ ಪ್ರಸಿದ್ಧ ಚಿತ್ರ ಕಲಾವಿದರಾದ ರಾಜಾ ರವಿವರ್ಮರಲ್ಲಿ ಇವರು ಚಿತ್ರಕಲೆಯನ್ನು ಕಲಿತರು. ಆಗ ರಾಜಾ ರವಿವರ್ಮರು ಕೇರಳದಿಂದ ಬಂದು ಮೈಸೂರು ಮಹಾರಾಜರ ಕೋರಿಕೆಯ ಮೇರೆಗೆ ಅರಮನೆಯಲ್ಲಿ ಚಿತ್ರನಿರ್ಮಾಣದಲ್ಲಿ ನಿರತರಾಗಿದ್ದರು. ಹಾಗಾಗಿ ಬಾಲಸರಸ್ವತಿಯವರಿಗೆ ಈ ಮಹಾನ್ ಕಲಾವಿದರಿಂದ ನೇರವಾಗಿ ಚಿತ್ರಕಲೆ ಕಲಿಯುವ ಅಪೂರ್ವ ಭಾಗ್ಯ ದೊರೆಯಿತು. ಇದಕ್ಕೆ ಜೆ. ವೀರರೇ ಕಾರಣರಾಗಿದ್ದರು. ಇವರ ಪಾಂಡಿತ್ಯವನ್ನು ಮೆಚ್ಚಿಕೊಂಡಿದ್ದ ವೀರ್ ಅವರೇ ಬಾಲಸರಸ್ವತಿಯವರಿಗೆ ಮೈಸೂರಿನ ಶಾಲೆಯೊಂದರಲ್ಲಿ ಪಂಡಿತ ಉದ್ಯೋಗವನ್ನು ದೊರಕಿಸಿಕೊಟ್ಟರು.

ಇವರು ಮೈಸೂರಿನ ಶಾಲೆಯಲ್ಲಿ ಪಂಡಿತರಾಗಿದ್ದಾಗ, ಆ ಶಾಲೆಯಲ್ಲಿ ಉರ್ದು ಪಂಡಿತರಾಗಿದ್ದ ಮೌಲ್ವಿಯೊಬ್ಬರ ಜೊತೆ ಮಾತನಾಡುತ್ತಾ, ಮಾತು ವಾಗ್ವಾದಕ್ಕೆ ಬಂದು ಸವಾಲಾಯಿತು. "ಉರ್ದು ಭಾಷಾ ಪಾಂಡಿತ್ಯ ನಿಮ್ಮಂತಹ ಸಂಸ್ಕೃತ ಪಂಡಿತರಿಗೆ ಬರಲು ಸಾಧ್ಯವಿಲ್ಲ. ಏಕೆಂದರೆ ನೀವು ಸಂಪ್ರದಾಯಸ್ಥರು. ಇದೆಲ್ಲಾ ಕಲಿಯಲು ಹೇಗೆ ಸಾಧ್ಯ? ಕಲಿತರೂ ಹರಕು ಮುರುಕು ಭಾಷೆ ಕಲಿಯಬಹುದಷ್ಟೆ. ಅದರಲ್ಲಿ ನಮ್ಮ ಹಾಗೆ ಮೌಲ್ವಿ ಪರೀಕ್ಷೆ ಮಾಡಲು (ಪಂಡಿತ ಪರೀಕ್ಷೆ ಇದ್ದಹಾಗೆ. ಆ ಕಾಲದಲ್ಲಿ ಉರ್ದು ಪರೀಕ್ಷೆ ಮೌಲ್ವಿ ಪರೀಕ್ಷೆಯಾಗಿತ್ತು) ನಿಮ್ಮಿಂದಾಗದು" ಎಂದು ಆ ಉರ್ದು ಪಂಡಿತರು ಬಾಲ ಸರಸ್ವತಿಯವರಿಗೆ ಸವಾಲು ಹಾಕಿದರು. "ಹಾಗೇನಿಲ್ಲ. ಆಸಕ್ತಿ ಇದ್ದರೆ ಶ್ರದ್ಧೆಯಿಂದ ಅಭ್ಯಾಸಮಾಡಿದರೆ ಯಾರೂ ಬೇಕಾದರೂ, ಯಾವ ವಿದ್ಯೆಯನ್ನಾಗಲೀ ಕಲಿಯಬಹುದು ತಿಳಿಯಿತೇ? ವಿದ್ಯೆ ಕಲಿಯಲು ಜಾತಿ, ಮತ, ವಯಸ್ಸು, ಲಿಂಗಬೇಧ ಏನೂ ಇಲ್ಲ" ಎಂದು ಹೇಳಿ, ಬಾಲಸರಸ್ವತಿಯವರು ಉರ್ದು ಮೌಲ್ವಿ ಪರೀಕ್ಷೆಗೆ ಕುಳಿತು ಉತ್ತೀರ್ಣರಾದರು. ಹೀಗೆ ಕಲಾವಿದರೂ, ಪಂಡಿತರೂ, ಬಹುಭಾಷಾ ವಿಶಾರದರೂ ಆಗಿದ್ದ ಬಾಲ ಸರಸ್ವತಿಯವರು, ಯಾವುದೋ ಕೌಟುಂಬಿಕ ಕಾರಣಗಳಿಂದ ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟು ಹೆಂಡತಿಯನ್ನು ತೌರಿಗೆ ಕಳುಹಿಸಿ ಕಲ್ಕತ್ತೆಗೆ ಹೊರಟುಹೋದರು. ಕಲ್ಕತ್ತೆಯಲ್ಲಿ ಈಶ್ವರಚಂದ್ರ ವಿದ್ಯಾಸಾಗರರ ಮಗ ಜೀವಾನಂದ ವಿದ್ಯಾಸಾಗರರ ಬಳಿ ಇದ್ದು, ಬಂಗಾಳಿ ಭಾಷೆ, ಸಾಹಿತ್ಯಾಭ್ಯಾಸ ಮಾಡಿದರು. ಬಂಗಾಳಿ ಭಾಷಾ ಪಾಂಡಿತ್ಯ ಗಳಿಸಿದರು. ವಿದ್ಯಾಸಾಗರರು ಇವರ ಪ್ರತಿಭೆಯನ್ನು ಕಂಡು ಬೆರಗಾಗಿ, ತಮ್ಮ ಮಗಳನ್ನು ಕೊಟ್ಟು ಇವರಿಗೆ ಮದುವೆ ಮಾಡಲು ಪ್ರಯತ್ನಿಸಿದರು. ಆಗ ತಮಗೆ ಮದುವೆ ಆದದ್ದನ್ನು ಹೇಳಿದರೆ ಅನ್ನದಾತರೂ, ವಿದ್ಯಾದಾತರೂ ಆದವರಿಗೆ ನಿರಾಸೆ ಆದೀತೆಂದು, ಮದುವೆ ವಿಚಾರ ಬಂದಕೂಡಲೆ ಬೇರೆ ನೆಪ ಹೇಳಿ ಕಲ್ಕತ್ತೆಯಿಂದ ಹೊರಟು ಪ್ರಯಾಗಕ್ಕೆ ಬಂದರು. ಪ್ರಯಾಗದಲ್ಲಿ ಕ್ರೈಸ್ತ ಸಂಘದವರು ಇವರ ಬಂಗಾಳಿ, ಸಂಸ್ಕೃತ ಪಾಂಡಿತ್ಯ ಕಂಡು ಇಂಗ್ಲಿಷಿನಲ್ಲಿದ್ದ ಕೆಲವು ಕ್ರೈಸ್ತ ಗ್ರಂಥಗಳನ್ನು ಸಂಸ್ಕೃತಕ್ಕೂ, ಬಂಗಾಳಿಗೂ ಅನುವಾದ ಮಾಡಿಸಿಕೊಂಡರು.

ಇವರ ಭಾಷಾಂತರಗಳನ್ನು ಕಂಡ ಆ ಕ್ರೈಸ್ತ ಸಂಘದವರು, ಇಂತಹ ಪಂಡಿತರು ತಮ್ಮವರಾಗಿ, ತಮ್ಮಲ್ಲೇ ಇದ್ದರೆ ಮತ ಪ್ರಚಾರಕ್ಕೆ ಅನುಕೂಲವಾಗುವುದೆಂದು ಭಾವಿಸಿ

ಅವರಿಗೆ ಕ್ರೈಸ್ತ ಕನ್ಯೆಯೊಡನೆ ವಿವಾಹ ಮಾಡಿಸಿ, ಮತಾಂತರ ಮಾಡಲು ಯತ್ನಿಸಿದರು. ಆದರೆ ಏಕಪತ್ನೀ ವ್ರತಸ್ಥರಾದ ಇವರು, ಸದ್ದಿಲ್ಲದೆ ಪ್ರಯಾಗವನ್ನು ತೊರೆದು ಬೆಂಗಳೂರಿಗೆ ಹಿಂದಿರುಗಿದರು.

ಆಗ ಬೆಂಗಳೂರಿನಲ್ಲಿದ್ದ ಹೆಚ್.ಜೆ.ಬಾಬಾ ಅವರಿಗೆ ಸಾಹಿತಿಗಳನ್ನೂ, ಪಂಡಿತರುಗಳನ್ನೂ ಕಂಡರೆ ಎಲ್ಲಿಲ್ಲದ ಪ್ರೀತಿ. ಅವರ ಶಿಫಾರಸ್ಸಿನಿಂದಾಗಿ ಬಾಲಸರಸ್ವತಿಯವರು ಕೋಟೆ ಹೈಸ್ಕೂಲಿನಲ್ಲಿ ಚಿತ್ರಕಲಾ ಅಧ್ಯಾಪಕರಾದರು. ಇವರ ಕಾಲದಲ್ಲಿ ವಿದ್ಯಾರ್ಥಿಯಾಗಿದ್ದವರೊಬ್ಬರು ಹೇಳಿದ ಪ್ರಸಂಗ ಹೀಗಿದೆ:

ಬೋರ್ಡಿನ ಮೇಲೆ ಚಿತ್ರ ಬರೆದು ಚಿತ್ರಕಲೆ ಕಲಿಸುತ್ತಿದ್ದರು. ಬಹಳ ಶಿಸ್ತಿನ ಅಧ್ಯಾಪಕರಾಗಿದ್ದರು. ವಿದ್ಯಾರ್ಥಿಗಳು ತಪ್ಪು ಮಾಡಿದರೆ ಬೆತ್ತದ ರುಚಿ ತೋರಿಸುತ್ತಿದ್ದರು. ಚಿತ್ರಕಲೆ ಪಾಠವನ್ನು ತುಂಬಾ ಸೊಗಸಾಗಿ, ಎಲ್ಲರಿಗೂ ಅರ್ಥವಾಗುವಂತೆ ಕಲಿಸುತ್ತಿದ್ದರು. ಒಮ್ಮೆ ಒಂದು ನೀರಿನ ಹೂಜಿ ಚಿತ್ರವನ್ನು ಹೇಗೆ ಬರೆಯಬೇಕೆಂದು ಬೋರ್ಡಿನ ಮೇಲೆ ಬರೆದು ತೋರಿಸಿದರು. ಅದರಂತೆ ಬರೆಯಲು ಹೇಳಿದರು. ಒಬ್ಬ ವಿದ್ಯಾರ್ಥಿ (ಆತ ಮುಂದೆ ಒಳ್ಳೆಯ ಚಿತ್ರಕಲಾವಿದ ಆದನಂತೆ) ಚಿತ್ರವನ್ನು ಬೋರ್ಡಿನ ಮೇಲೆ ಇದ್ದಂತೆಯೇ ಬರೆದನು. ಚಿತ್ರದಲ್ಲಿ ಹೂಜಿ ನಡುವೆ ಒಂದು ತಿರುಪಿನ ಮೊಳೆ (ಸ್ಕ್ರೂ) ಇದ್ದುದನ್ನು ಆತ ಚಿತ್ರಿಸಿದ್ದ. ತಾವು ಬರೆದದ್ದೇ ಒಂದು, ಇವನು ಬರೆದದ್ದೇ ಇನ್ನೊಂದು ಎಂದು ಬಾಲಸರಸ್ವತಿಯವರಿಗೆ ಕೋಪಬಂತು. 'ನಾನು ಬರೆದ ಹಾಗೆ ಚಿತ್ರ ಬರಿ ಅಂತ ಹೇಳಿದರೆ ಹೂಜಿ ಮೇಲೆ ಮೊಳೆ ಚಿತ್ರ ಬರಿಯಲು ನಿನಗೆ ಹೇಳಿದವರಾರು? ಅಧಿಕ ಪ್ರಸಂಗಿ!' ಎಂದು ಬೈದು ಬೆತ್ತದಿಂದ ಎರಡೇಟು ಬಿಗಿದರು. ವಿದ್ಯಾರ್ಥಿ ಅಳುತ್ತಾ, 'ನಾನು ಅಲ್ಲಿರೋದನ್ನೇ ಬರೆದಿರೋದು, ನೀವೇ ನೋಡಿ, ಹೂಜಿ ಮೇಲೆ ಮೊಳೆ ಚಿತ್ರ ಬರೆದಿದ್ದೀರಿ' ಎಂದ. 'ಎಲ್ಲಿ ಬರೆದಿದ್ದೇನೆ ತೋರಿಸು' ಎಂದು ಬೋರ್ಡ್ ಕಡೆ ತಿರುಗಿದರು. ಅಲ್ಲಿ ಬೋರ್ಡನ್ನು ಹಲಗೆಗೆ ಜೋಡಿಸುವಾಗ ಒಂದು ಬೋಲ್ಟನ್ನು ಜೋಡಿಸಿದ್ದರು. ಅದು ಹೂಜಿ ಚಿತ್ರದ ನಡುವೆ ಮೊಳೆ ಹೊಡೆದ ಹಾಗೆ ಕಾಣಿಸುತ್ತಿತ್ತು. ಚಿತ್ರ ಇದ್ದ ಹಾಗೆ ಬರೆದಿದ್ದ ವಿದ್ಯಾರ್ಥಿ ಮಕ್ಕಿ ಕಾ ಮಕ್ಕಿ ಮಾಡಿದ್ದ. ಗೋಡೆ ಮೊಳೆ ಹೂಜಿ ನಡುವೆ ಕಾಣಿಸುತ್ತಿದ್ದುದನ್ನು ಕಂಡು ವಿದ್ಯಾರ್ಥಿಗೆ "ನಾನು ನಿನ್ನನ್ನು ಹೊಡೆಯಬಾರದಾಗಿತ್ತು" ಎಂದರಂತೆ. ತಪ್ಪಾದಾಗ, ತಾವು ಮಾಡಿದ್ದು ಸರಿಯಲ್ಲ ಎನಿಸಿದಾಗ ವಿಷಾದ ವ್ಯಕ್ತಪಡಿಸುವುದು ಅವರ ಸ್ವಭಾವವಾಗಿತ್ತು. ಪಶ್ಚಾತ್ತಾಪವೇ ಪಾಪಕಾರ್ಯಕ್ಕೆ ಪ್ರಾಯಶ್ಚಿತ್ತ ಎಂಬುದು ಅವರ ನಿಲುವಾಗಿತ್ತು.

ಅವರು ಪತ್ತೇದಾರಿ ಕಾದಂಬರಿಗಳನ್ನು ಕನ್ನಡದಲ್ಲಿ ಮೊದಲಿಗೆ ಬರೆದವರಲ್ಲಿ ಒಬ್ಬರು. 'ತರಂಗಿಣಿ' ಎಂಬ ಮಾಸ ಪತ್ರಿಕೆಯಲ್ಲಿ ಪತ್ತೆದಾರಿ ಕಥೆಗಳನ್ನು ಪ್ರಕಟಿಸಲು ಸ್ವಂತ ಮುದ್ರಣಾಲಯವನ್ನೇ ಸ್ಥಾಪಿಸಿದರು. ಅದರಲ್ಲಿ "ಚಿತ್ರಗುಪ್ತನ ದಫ್ತರ" ಎಂಬ ಪತ್ತೇದಾರಿ ಕಥಾಮಾಲೆ ಪ್ರಾರಂಭಿಸಿ, ೨ ಆಣೆಗೆ ಒಂದು ಪುಸ್ತಕವನ್ನು ತಿಂಗಳಿಗೊಂದರಂತೆ ಕೊಡಲು ಯತ್ನಿಸಿದರು. ಮೊದಲ ವರ್ಷದಲ್ಲಿ ದುಷ್ಟ ಚತುಷ್ಟರು, ಗುರುತು ಕಂಡ ಕಳ್ಳ, ನರಬಲಿ ಮಾಯಾವಿನಿ, ವಿಷಮುಹೂರ್ತ, ನೀಲಾಂಬರಿ, ಚೋರಚಕ್ರವರ್ತಿ, ನರ ರಾಕ್ಷಸಿ ಶೋಣಿತ ದರ್ಪಣ ಎಂಬ ಒಂಬತ್ತು ಪುಸ್ತಕಗಳನ್ನು ಪ್ರಕಟಿಸಿದರು ಎಂದು

ದ.ಕೃ. ಭಾರದ್ವಾಜರು ಹೇಳಿದ್ದಾರೆ. (ಆದರೆ ೧೨ ಪುಸ್ತಕಗಳು ಪ್ರಕಟವಾಗಿವೆ). ೧೫ ವರ್ಷಗಳ ನಂತರ ತಿಂಗಳಿಗೊಂದು ಪುಸ್ತಕ ಕೊಡಲು ಯತ್ನಿಸಿ "ಚಿತ್ರಗುಪ್ತನ ದಫ್ತರ" ಎರಡನೆ ಮಾಲೆಯನ್ನು ಪ್ರಕಟಿಸಿದರು. ಅದರಲ್ಲಿ ಮೊದಲನೆ ಪುಸ್ತಕವಾಗಿ ೧೯೩೧ ಮಾರ್ಚ್ ೬ರಲ್ಲಿ "ಪಿಶಾಚ ಪರಿವಾರ" ಎಂಬ ಪತ್ತೇದಾರಿ ಪುಸ್ತಕ ಪ್ರಕಟಿಸಿದರು.

ಅದರಲ್ಲಿ ಹೇಳಿರುವ ಮಾತುಗಳು ಹೀಗಿವೆ:

"ಶ್ರೀಮತ್ಕರ್ನಾಟಕ ದೇಶ ಬಾಂಧವ ಮಹಾಶಯರಲ್ಲಿ ಬಾಲಸರಸ್ವತಿಯ ಸವಿನಯ ವಿಜ್ಞಾಪನೆ.

ಇಂದಿಗೆ ೧೫ ವರ್ಷಗಳ ಹಿಂದೆ ಚಿತ್ರಗುಪ್ತನ ಮೊದಲನೆಯ ದಫ್ತರವನ್ನು ಬಿಚ್ಚಿ ಅದರಲ್ಲಿ ೧೨ ಪುಸ್ತಕಗಳನ್ನು ಆರಿಸಿಕೊಂಡು, ನಮ್ಮ ಪ್ರಿಯ ಪಾಠಕರ ಮನೋವಿನೋದ ಕ್ಕಾಗಿ ತಿಂಗಳಿಗೆ ಒಂದರಂತೆ ೧೨ ಪುಸ್ತಕಗಳನ್ನು ಒಂದು ವರ್ಷದಲ್ಲಿ ಮುದ್ರಿಸಿ, ಕರ್ನಾಟಕ ಭಾಷಾ ಪ್ರಂಪಚದ ಸೇವೆಯನ್ನು ಯಥಾವತ್ತಾಗಿ ನೆರವೇರಿಸಿದೆನು. ಅಲ್ಲಿಂದ ಮುಂದೆ ನನ್ನಿಂದ ಭಾಷಾ ಸೇವೆಯು ನಡೆಯುವುದಕ್ಕೆ ಕುಂದು ಕೊರತೆಯುಂಟಾಗಿ ನಾನು ಕಾರ್ಯಾಂತರಗಳಲ್ಲಿ ಮಗ್ನನಾಗಿಬಿಟ್ಟೆನು. ಹೀಗೆಯೇ ನನ್ನ ಜೀವಮಾನದಲ್ಲಿ ೧೫ ವರ್ಷಗಳು ವ್ಯರ್ಥವಾಗಿ ಕಳೆದು ಹೋದುದಕ್ಕಾಗಿ ನಾನು ಬಹುವಾಗಿ ವಿಷಾದಿಸುವೆನು" ಎಂದಿದ್ದಾರೆ.

ಉತ್ತರ ಭಾರತಕ್ಕೆ ಹೋಗಿ ಬೆಂಗಳೂರಿಗೆ ವಾಪಸ್ ಬರುವವರೆಗೆ ೧೫ವರ್ಷಗಳ ಕಾಲ ಅವರು ಸಂಸ್ಕೃತ, ಬಂಗಾಳಿ ಭಾಷೆಗಳಲ್ಲಿ ಗ್ರಂಥ ರಚನೆ, ಅನುವಾದಗಳನ್ನು ಮಾಡಿದ್ದರೂ, ಸಾಹಿತ್ಯ ಸೇವೆ ನಡೆಸಿದ್ದರೂ, ಕನ್ನಡ ಭಾಷಾ ಸೇವೆ ಮಾಡಲಾಗಲಿಲ್ಲ ಎಂದು ವಿಷಾದ ವ್ಯಕ್ತಪಡಿಸಿದ್ದಾರೆ. ಅವರ ಕನ್ನಡಾಭಿಮಾನ ಅಪ್ಪರಮಟ್ಟಿಗಿತ್ತು. "ದೇಶಭಾಷಾ ಪ್ರಪಂಚದ ಸೇವೆಯನ್ನೇ ಜನ್ಮ ವ್ರತವನ್ನಾಗಿ ಕೈಗೊಂಡು ಕೆಲಸ ಮಾಡಬೇಕೆಂದು ಅನೇಕ ದೇಶಾಭಿಮಾನಿಗಳಾದ ಇತರ ಮಹೋದಯರು ಬಗೆಬಗೆ ಯಾಗಿ ಪ್ರೋತ್ಸಾಹಿಸುತ್ತಿರುವ ಕಾರಣ ನಾನು ಮಹಾ ಸಾರಸ್ವತ ದೀರ್ಘ ಸತ್ರದಲ್ಲಿ ದೀಕ್ಷೆಯನ್ನು ತಾಳಿ ಕಾರ್ಯಕ್ಷೇತ್ರದಲ್ಲಿ ಮುಂದುವರೆದು ಬಂದು ನಿಂದಿರುವೆನು" ಎಂದಿದ್ದಾರೆ ಆ ಪೀಠಿಕೆಯಲ್ಲಿ. ಬಾಲಸರಸ್ವತಿಯವರು ಅಪ್ರತಿಮ ವಾಗ್ಮಿಗಳಾಗಿದ್ದರು. ನಾನಾ ಸಾರ್ವಜನಿಕ ಸಾಹಿತ್ಯಿಕ ಕಾರ್ಯಕ್ರಮಗಳಲ್ಲಿ ಅದ್ಭುತ ಭಾಷಣ ಮಾಡುತ್ತಿದ್ದರು. ಅನೇಕರು 'ನೀವು ಇಷ್ಟು ಚೆನ್ನಾಗಿ ಮಾತನಾಡಬಲ್ಲಿರಿ. ನೀವು ಬರೆಯಬೇಕು' ಎಂದು ಒತ್ತಾಯಿಸುತ್ತಿದ್ದರು. ಅದರ ಫಲವಾಗಿ ನಿರಂತರ ಸಾಹಿತ್ಯ ಪ್ರಕಟಣೆಗೆ ತೊಡಗಿದರು.

"ಚಿತ್ರಗುಪ್ತನ ದಫ್ತರ" ಮಾಲೆಯಲ್ಲಿ, "ಬಾಲ ಕಥಾವಳಿಮಾಲೆ", "ಬೋಧಾವಳಿ ಗ್ರಂಥಮಾಲೆ", "ಅಡಗೂಲಜ್ಜಿ ಮಾಲೆ" ಎಂಬ ಮಾಲೆಗಳಲ್ಲಿ ಮತ್ತು ಇತರ ಪ್ರಕಟಣೆ ಗಳಲ್ಲಿ ೭೦ ಕ್ಕೂ ಹೆಚ್ಚಿನ ಗ್ರಂಥಗಳನ್ನು ಬರೆದಿದ್ದಾರೆ. ಅಧಿಕವಾಗಿ ಪತ್ತೇದಾರಿ ಕಥೆಗಳನ್ನು ಬರೆದಿರುವುದಲ್ಲದೆ ಬೇರೆ ವಿಷಯದ ಮೇಲೂ ಗ್ರಂಥಗಳನ್ನು ಬರೆದಿದ್ದಾರೆ.

ನಾಮ ರೂಪಾವಳೀ (ಸಂಸ್ಕೃತ ಶಬ್ದಾವಳಿ ಗ್ರಂಥ), ಯತೀಂದ್ರ ಶತಕಂ ಚಂದ್ರಶೇಖರ ಸಪ್ತಶತಿ, ಶ್ರೀ ಗುರುಸ್ತುತಿ ರತ್ನಮಾಲಾ, ಸಂಸ್ಕೃತ ನೀತಿಸಾರ ಭಾಗ ೧ ಮತ್ತು

ಭಾಗ ೨ ಎಂಬ ಸಂಸ್ಕೃತ ಗ್ರಂಥಗಳನ್ನು ಕಂಠಾಭರಣ, ದೇವಿ ಚೌದುರಾಣಿ ಕಮಲಾಕಾಂತನ ಉಯಿಲು, ಮಹಾರಾಜ ಸಿಂಹ, ಬ್ರಾಹ್ಮಣ ರಮಣಿ ಮುಂತಾದ ಬಂಗಾಳಿ ಕಾದಂಬರಿಗಳ ಅನುವಾದವನ್ನು ಮಾಡಿದ್ದಾರೆ. ಇವರ ಪಾಂಡಿತ್ಯವನ್ನು ಆ ಕಾಲದ ಸಂಸ್ಕೃತ ಕನ್ನಡ ವಿದ್ವಾಂಸರೆಲ್ಲ ಮೆಚ್ಚಿಕೊಂಡಿದ್ದರು. ಡಿ.ವಿ.ಜಿ., ದೊಡ್ಡಬೆಲೆ ನಾರಾಯಣಶಾಸ್ತ್ರಿ, ವೆಂಕಟಾಚಾರ್ಯರು, ವಿದ್ವಾನ್ ಗೋಪಾಲಯ್ಯನವರು ಮುಂತಾದ ಘನವಿದ್ವಾಂಸರ ನಿಕಟವರ್ತಿಗಳಾಗಿದ್ದರು. ಇವರೆಲ್ಲ ಒಂದು ಕಾಲದಲ್ಲಿ ಪ್ರತಿದಿನವೂ ಒಂದು ಘಂಟೆಯಾದರೂ ಒಂದೆಡೆ ಸೇರಿ ಹರಟುತ್ತಿದ್ದರು. ಅವರ ಹರಟೆ ವಿಷಯವನ್ನು ಡಿ.ವಿ.ಜಿ., ತಮ್ಮ 'ಜ್ಞಾಪಕ ಚಿತ್ರಶಾಲೆ'ಯಲ್ಲಿ ಪ್ರಸ್ತಾಪಿಸಿದ್ದಾರೆ. "ನಮ್ಮಗಳ ಮಾತುಕತೆಗೆ ಗೊತ್ತಾದ ವಿಷಯವೇನೂ ಇರಲಿಲ್ಲ. ಆಯಾ ಹೊತ್ತು ಏನೇನು ತೋರಿದರೆ ಅದದೇ ಮಾತು. ಬೇಳೆಹುಳಿಗೆ ಇರಬೇಕಾದ ತರತೀಪು ಏನು? ತರಕಾರಿಗಳ ಪರಿಶವಣೆ ಹೇಗೆ? ಜಿಲೇಬಿ ರುಚಿಯೇ? ಲಾಡು ಹೆಚ್ಚು ರುಚಿಯೇ? ಊದುಬತ್ತಿಯಲ್ಲಿ ಯಾವುದು ಚೆನ್ನ? ರಾಗ ಪ್ರಸ್ತಾರ ಹೇಗಿರಬೇಕು? ಮಾಪ್ಪ ಕವಿಯ ಪದಶಯ್ಯೆ – ಹೀಗೆ ಏನೆಂದರೆ ಅದು ರಾಜಕೀಯವೂ ಆಗಾಗ ಬರುತ್ತಿದ್ದುದುಂಟು.

ಹಿಂದಿನ ಕಾಲದ ಪಂಡಿತರ ಮಾತು ಕಥೆಯ ರೀತಿ, ಪಾಂಡಿತ್ಯ ಯಾವ ರೀತಿ ಇತ್ತು ಎಂಬುದನ್ನು ಈ ಮಾತುಗಳು ತಿಳಿಸುತ್ತವೆ. ಡಿ.ವಿ.ಜಿ., ವಿ.ಸೀ., ವೆಂಕಣ್ಣಯ್ಯ ಮೊದಲಾದ ವಿದ್ವಾಂಸರು ಎಷ್ಟು ಗಂಭೀರವಾಗಿ ಶಾಸ್ತ್ರ, ಸಾಹಿತ್ಯ ಚರ್ಚೆ ಮಾಡುತ್ತಿದ್ದರೋ, ಅಷ್ಟೇ ಲೋಕಾಭಿರಾಮವಾಗಿ, ಹಾಸ್ಯವಾಗಿ ಹರಟುತ್ತಿದ್ದರು. ಘನ ವಿದ್ವಾಂಸರು ಎಂದರೆ ಅವರ ಬಳಿ ಸಾಮಾನ್ಯರು ಸುಳಿಯುವಂತಿಲ್ಲ. ಅವರು ಚಿಕ್ಕ ಪುಟ್ಟವರೊಡನೆ ಸರಸವಾಗಿ ಸರಳವಾಗಿ ಮಾತನಾಡುವವರಲ್ಲ ಎಂಬ ಭಾವನೆ ಅನೇಕರಿಗಿದೆ. ಅದು ಸಾಕಷ್ಟು ನಿಜ ಸಂಗತಿಯೂ ಹೌದು. ಆದರೆ ಅನೇಕ ಘನ ವಿದ್ವಾಂಸರು ಹಾಗಿರಲಿಲ್ಲ.

ನಾನು ಕಂಡಂತೆ ಮೋಟಗಾನಹಳ್ಳಿ ಸುಬ್ರಹ್ಮಣ್ಯಶಾಸ್ತ್ರಿಯವರು ಹೀಗಿದ್ದವರು. ಅವರು ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆಯ ಸಂಪಾದಕರಾಗಿ ದಿನವೂ ಪರಿಷತ್ ಬಳಿ ಬಂದು, ಸಂಜೆ ಕೆ.ಎಸ್. ನರಸಿಂಹಸ್ವಾಮಿ, ವಿ.ಸೀ.ಯವರುಗಳ ಜೊತೆ ಹರಟುತ್ತಾ ಲಾಲ್ ಬಾಗಿಗೆ ವಾಕಿಂಗ್ ಹೋಗುತ್ತಿದ್ದರು. ವಾಪಸ್ ಬರುವಾಗ ಎಂ.ಟಿ.ಆರ್.ನಲ್ಲಿ ದೋಸೆ ತಿಂದು ಬರುವುದು, ಜೊತೆಯಲ್ಲಿದ್ದವರಿಗೆ ಕೊಡಿಸುವುದು ಪದ್ಧತಿಯಾಗಿತ್ತು. ದಾರಿಯಲ್ಲಿ ಅವರು ಚರ್ಚಿಸದ ವಿಷಯಗಳೇ ಇರಲಿಲ್ಲ. ಒಮ್ಮೊಮ್ಮೆ ಮೋಟಗಾನಹಳ್ಳಿಯವರು ಇಲ್ಲವೇ ನರಸಿಂಹಸ್ವಾಮಿಗಳು ಬಾರದೆ ಇದ್ದ ದಿನ ನಮ್ಮಂತಹ ಹುಡುಗರನ್ನೇ ವಿ.ಸೀ.ಯವರು ಲಾಲ್‌ಬಾಗಿಗೆ, ಎಂ.ಟಿ.ಆರ್.ಗೆ ಕರೆದುಕೊಂಡು ಹೋಗುತ್ತಿದ್ದರು. ದಾರಿಯಲ್ಲಿ ನಮಗೆ ಇಂಗ್ಲಿಷ್ ಸಾಹಿತ್ಯ, ಸಂಸ್ಕೃತಿ, ಹಿಂದಿನ ಕಾಲದ ವಿದ್ವಾಂಸರ ವಿಚಾರ ನಡುನಡುವೆ ಹಾಸ್ಯ ಪ್ರಸಂಗಗಳನ್ನು ಹೇಳುತ್ತಿದ್ದರು. ಮೋಟಗಾನಹಳ್ಳಿಯವರೂ ಅಷ್ಟೆ. ಪರಿಷತ್ತಿನ ಬಳಿ ಘನ ವಿದ್ವಾಂಸರೊಂದಿಗೆ ಗಂಭೀರ ಚರ್ಚೆ ಮಾಡುತ್ತಿದ್ದರು. ನಮ್ಮಂಥ ವಿದ್ಯಾರ್ಥಿ ಯುವಕರೊಂದಿಗೆ ತಮಾಷೆಯಾಗಿ ಮಾತನಾಡುತ್ತಿದ್ದರು. ಡಿ.ವಿ.ಜಿ. ಮೊದಲಾದವರು ಇದೇ ವರ್ಗದವರಾಗಿದ್ದರು.

ಬಾಲಸರಸ್ವತಿಯವರು ಬೆಂಗಳೂರಿನಲ್ಲಿ ಮುದ್ರಣಾಲಯ ಸ್ಥಾಪಿಸಿ, ಪತ್ತೇದಾರಿ ಪುಸ್ತಕಗಳನ್ನು ಪ್ರಕಟಿಸಿ, ಲೇಖಕರೂ, ಪ್ರಕಾಶಕರೂ, ಮುದ್ರಕರೂ ಆಗಿ ಕಾರ್ಯ ನಿರ್ವಹಿಸಿದ ಮೇಲೆ ವ್ಯವಹಾರದಲ್ಲಿ ನಷ್ಟವಾಗಿ, ಮೈಸೂರಿಗೆ ಹೋದರು. ಮೈಸೂರಿನಲ್ಲಿ ಶ್ರೇಷ್ಠ ಸಾಹಿತಿಗಳೂ, ರಾಜ ಮನೆತನದವರೂ ಆದ ಭಕ್ಷಿ ಲಿಂಗರಾಜ ಅರಸ್‌ರವರ ನೆರವಿನಿಂದ ಛತ್ರ ಒಂದರ ಮೇಲ್ವಿಚಾರಕರಾಗಿ ಉದ್ಯೋಗಿಗಳಾದರು. ಸಂಬಳ ಎಷ್ಟು ಗೊತ್ತೇ? ತಿಂಗಳಿಗೆ ಮೂರೂವರೆ ರೂಪಾಯಿ. ಆ ಕಾಲ ಹಾಗಿತ್ತು. ಆದರೆ ಅವರ ವಿದ್ವತ್ತು ಕಂಡ ಮಹಾರಾಜರು, ಜಯಚಾಮರಾಜ ಒಡೆಯರಿಗೆ ಶಿಕ್ಷಣ ಕೊಡಲು ನೇಮಿಸಿದರು.

ಬಾಲ ಸರಸ್ವತಿಗಳ ಸ್ವಭಾವವೆಂದರೆ ಒಂದು ಕಡೆ ಬಹುಕಾಲ ನಿಲ್ಲುತ್ತಿರಲಿಲ್ಲ, ಸರ್ಕಸ್ ಕಂಪನಿಯ ಹಾಗೆ ಮತ್ತು ಸ್ವತಂತ್ರ ಮನೋಭಾವದವರು. ಡಿ.ವಿ.ಜಿ., ದೇವುಡು ಅವರ ಹಾಗೆ ಇವರೂ ಸಹ ಇನ್ನೊಬ್ಬರ ಹಂಗಿನಲ್ಲಿರಲು ಇಷ್ಟಪಡುತ್ತಿರಲಿಲ್ಲ. 'ಹಂಗಿನರಮನೆಗಿಂತ ವಿಂಗಡದ ಗುಡಿ ಲೇಸು' ಎನ್ನುವ ಮನೋಧರ್ಮದವರು. ಹಾಗಾಗಿ ಅರಸು ಬೋರ್ಡಿಂಗ್ ಸ್ಕೂಲ್‌ನಲ್ಲಿ ಅಧ್ಯಾಪಕರಾದವರು, ಅದನ್ನು ಬಿಟ್ಟು ತಿರುಮಕೂಡಲು ನರಸೀಪುರಕ್ಕೆ ಹೋದರು. ತಿರು ಎಂದರೆ ಶ್ರೇಷ್ಠ, ಮುಕ್ಕೂಡಲು ಎಂದರೆ ಮೂರು ನದಿಗಳು ಸೇರುವ ಸ್ಥಳ ಎಂದರ್ಥ. ಬಲಗಡೆ ಕಪಿಲಾ, ಎಡಗಡೆ ಕಾವೇರಿ, ಮಧ್ಯೆ ಸ್ಫಟಿಕ ಸರೋವರ ಎಂಬ ಗುಪ್ತಗಾಮಿನಿ. ಮೂರೂ ಕೂಡುವ ಸ್ಥಳವಾದ್ದರಿಂದ ಈ ಕ್ಷೇತ್ರಕ್ಕೆ ತಿರುಮಕ್ಕೂಡಲು ಅರ್ಥಾತ್ ತಿರುಮಕೂಡಲು ಎಂಬ ಹೆಸರು ಬಂದಿದೆ. ಬಹಳ ಪ್ರಶಾಂತವಾದ ಜಾಗವಿದು. ಹೊಸಕೆರೆ ಚಿದಂಬರಯ್ಯನವರೂ ಸಹ ತಮ್ಮ ಜೀವನದ ಕೊನೆಗಾಲವನ್ನು ಇಲ್ಲಿಯೇ ಕಳೆದರು. ಇಲ್ಲಿಗೆ ಬಂದ ಬಾಲಸರಸ್ವತಿಯವರು ಪ್ರಾಚೀನ ಗುರುಕುಲ ಪದ್ಧತಿ ಪ್ರಕಾರ ಶಾಲೆ ನಡೆಸಲು ನಿರ್ಧರಿಸಿ 'ಸಚ್ಚಿದಾನಂದ ಪರದೇಶಿ ಪಾಠಶಾಲೆ'ಯನ್ನು ಸ್ಥಾಪಿಸಿ ನಡೆಸಿದರು. ಆದರೆ ಇದೂ ಬಹುಕಾಲ ನಡೆಯಲಿಲ್ಲ. ಆಗ ಮತ್ತೆ ಬೆಂಗಳೂರಿಗೆ ಹಿಂದಿರುಗಿದರು. ಬಸವನಗುಡಿಯಲ್ಲಿ ಬಾಂದಿನವರ ಬೀದಿ ಎರಡನೆ ಕ್ರಾಸ್‌ನಲ್ಲಿ "ಗುರುಕುಲ"ವೆಂಬ ಮಕ್ಕಳ ಶಾಲೆ ಪ್ರಾರಂಭಿಸಿದರು. ಬೆಂಗಳೂರಿನಲ್ಲಿ ಮಕ್ಕಳಿಗಾಗಿ ಶಿಶುವಿಹಾರ ಶಿಕ್ಷಣ (ಕಿಂಡರ್ ಗಾರ್ಟನ್ ಶಿಕ್ಷಣ), ಕೊಡಲು ಪ್ರಾರಂಭವಾದ ಮೊದಮೊದಲ ಶಾಲೆಗಳಲ್ಲಿ ಇದೂ ಒಂದಾಗಿತ್ತು. ಆ ಶಾಲೆಯನ್ನು ನಡೆಸುತ್ತಿದ್ದಾಗ "ಭಾರತಮಾತಾ ವಿದ್ಯಾಶಾಲೆ"ಯ ಸ್ಥಾಪಕರಾದ, ಆರ್. ಗೋಪಾಲಕೃಷ್ಣ ಐಯ್ಯಂಗಾರರನ್ನು, ಅವರ ಮಾವ, ಬಾಲಸರಸ್ವತಿಯವರ ಬಳಿ ಕರೆದುಕೊಂಡು ಹೋಗಿ "ಬಾಲಸರಸ್ವತಿಯವರೇ ಈ ನಮ್ಮ ಹುಡುಗ ಮೆಟ್ರಿಕ್ಯುಲೇಷನ್ ಪರೀಕ್ಷೆಪಾಸ್ ಮಾಡಿದ್ದಾನೆ. ಅವನಿಗೆ ಸ್ವಲ್ಪ ಸಂಸ್ಕೃತ ಕಲಿಸಿಕೊಡಿ. ನಿಮ್ಮ ಬಳಿ ಇದ್ದರೆ ಅವನಿಗೆ ಒಳ್ಳೆ ತಯಾರಿ ಸಿಗುತ್ತದೆ" ಎಂದು ಅವರಲ್ಲಿ ಬಿಟ್ಟರು. ಆಗ ಬಾಲಸರಸ್ವತಿಯವರು ಶಿಶುವಿಹಾರವನ್ನು ಹೇಗೆ ನಡೆಸುತ್ತಿದ್ದರು ಎಂಬುದನ್ನು ಆರ್.ಗೋಪಾಲಕೃಷ್ಣ ಐಯ್ಯಂಗಾರರು ಹೀಗೆ ವಿವರಿಸಿದ್ದಾರೆ: "ಚಿಕ್ಕಮಕ್ಕಳ ಶಿಕ್ಷಣ, ಅವರ ಅಂಗಪಟುತ್ವದಿಂದಲೇ ಆಗಬೇಕು. ಅಂದರೆ ಇಂದ್ರಿಯಗಳೇ ಜ್ಞಾನಕ್ಕೆ ಹೆದ್ದಾರಿಗಳು. ಇದಕ್ಕಾಗಿ ಬಣ್ಣಬಣ್ಣದ ವಿವಿಧಾಕೃತಿಗಳ ಶಿಕ್ಷಣ ಸಾಧನಗಳು (ಟೀಚಿಂಗ್ ಏಡ್ಸ್) ಮತ್ತು ವಿವಿಧ ಮಣಿಗಳು, ಕವಡೆ, ಗಜ್ಜುಗ

ಗೋಲಿ (ಮಕ್ಕಳು ಮೂಗಿನಲ್ಲಿ, ಕಿವಿಯಲ್ಲಿ ಹಾಕಿಕೊಳ್ಳಲಾರದಷ್ಟು ದಪ್ಪನಾದವು) ಮೊದಲಾದ ವಸ್ತುಗಳನ್ನು ಬಳಸಿ ಮಕ್ಕಳನ್ನು ಆಕರ್ಷಿಸಬೇಕು. ಮಕ್ಕಳು ಆಡುತ್ತಾ ಆಡುತ್ತಾ ಅಕ್ಷರ, ಕಾಗುಣಿತ, ಸಂಖ್ಯೆಗಳನ್ನು ಕಲಿಯಬೇಕು. ವಿವಿಧ ಆಕೃತಿಗಳನ್ನು ತಯಾರಿಸಿಕೊಂಡು ಅವುಗಳ ಮೂಲಕವೇ ಓದು, ಬರಹ, ಗಣಿತ ಕಲಿಯಬೇಕು. ಇದು ಶಿಶು ಶಿಕ್ಷಣ ತಜ್ಞರ ಶೈಕ್ಷಣಿಕ ಸಿದ್ಧಾಂತವಾಗಿತ್ತು. ಇದನ್ನು ಬಾಲಸರಸ್ವತಿಯವರು ಬುದ್ಧಿವಂತಿಕೆಯಿಂದ ತಮ್ಮ ಬದುಕುವ ಸನ್ನಿವೇಶಕ್ಕೆ ತಕ್ಕಂತೆ ಅಳವಡಿಸಿಕೊಂಡಿದ್ದರು. ಅದಕ್ಕೆ ಬೇಕಾದ ಮಾದರಿ ಆಟಿಕೆಗಳನ್ನು ತಯಾರಿಸಿದ್ದರು."

ಮಕ್ಕಳಿಗೆ ಪಾಠ ಹೇಳುವುದರಲ್ಲಿ ತಜ್ಞರಾಗಿದ್ದ ಅವರು ದೊಡ್ಡವರಿಗೆ ಪಾಠ ಹೇಳುವುದರಲ್ಲಿ, ಅದರ ರೀತಿ ನೀತಿಗಳೇ ಬೇರೆಯಾಗಿರುತ್ತಿದ್ದವು. ಅವರ ಬಳಿ ದೊಡ್ಡವರು ಪಾಠ ಹೇಳಿಸಿಕೊಳ್ಳುವುದು ಸುಲಭವಿರಲಿಲ್ಲ. ಇತಿಹಾಸತಜ್ಞ ಸೂರ್ಯನಾಥ ಕಾಮತರು ಒಮ್ಮೆ ಹೇಳಿದಂತೆ, ಪ್ರಸಿದ್ಧ ಇತಿಹಾಸ ಮತ್ತು ರಾಜ್ಯಶಾಸ್ತ್ರ ಪ್ರಾಧ್ಯಾಪಕರಾದ ಡಾ. ಎಂ.ವಿ. ಕೃಷ್ಣರಾಯರು ಬಾಲಸರಸ್ವತಿಯವರನ್ನು 'ನಿಮ್ಮಿಂದ ಸಂಸ್ಕೃತ ಕಲಿಯಲು ಅಪೇಕ್ಷೆಯಾಗಿದೆ. ಅದಕ್ಕಾಗಿ ತಮಗೇನು ಫೀ ಕೊಡಬೇಕು? ತಿಳಿಸಬೇಕು ದಯವಿಟ್ಟು' ಎಂದು ಕೇಳಿಕೊಂಡರು. ಆಗ ಬಾಲಸರಸ್ವತಿಯವರು 'ನಾನು ದಿನಾ ನಿಮ್ಮ ಮನೆಗೆ ಪಾಠಕ್ಕೆ ಬಂದಾಗ ಒಂದು ಲೋಟ ಹಾಲು ಕೊಟ್ಟರೆ ಸಾಕು' ಎಂದರಂತೆ.

ಡಿ.ವಿ.ಜಿ. ಯವರು ಬಾಲಸರಸ್ವತಿಯವರಲ್ಲಿ ಸಂಸ್ಕೃತ ವ್ಯಾಕರಣ ಹೇಳಿಸಿಕೊಳ್ಳಲು ಅಪೇಕ್ಷಿಸಿದಾಗ, "ಓಹೋ, ಅದಕ್ಕೇನು ಒಂದೊಂದಾಗಿ ಎಲ್ಲ ಪ್ರಕರಣ ಮಾಡೋಣ" ಎಂದರು. ಆದರೆ ಒಂದೆರಡು ವಾರಗಳ ನಂತರ ಡಿ.ವಿ.ಜಿ., ಪಾಠಕ್ಕೆ ಬರುವುದನ್ನು ಬಿಟ್ಟರು. ಏಕೆಂದರೆ ಪಾಠ ಪ್ರಾರಂಭಿಸಿದ ನಿಮಿಷಗಳಲ್ಲಿ ಬೇರೇನೋ ವಿಷಯ ಪ್ರಸ್ತಾಪಕ್ಕೆ ಬಂದು, ಅಂದಿನ ಪಾಠ ಅಲ್ಲಿಗೇ ನಿಲ್ಲುತ್ತಿತ್ತು. ಪ್ರತಿದಿನ ಹಾಗಾಗಿ ಪಾಠ ಸಾಗಲಿಲ್ಲ. ಡಿ.ವಿ.ಜಿ. ಕಲಿಯುವ ಆಸೆ ಬಿಟ್ಟರು. ಬೆಂಗಳೂರಿನಲ್ಲಿ ಗುರುಕುಲ ಸ್ಥಾಪಿಸಿದಾಗ ಅವರ ಮನೆ ಮುಂದೆ "ಸಚ್ಚಿದಾನಂದ ಪರದೇಶಿ" ಎಂಬ ನಾಮಫಲಕ ಹಾಕಿಕೊಂಡಿದ್ದರು. ಅದೇ ಹೆಸರಿನಲ್ಲಿ ತಿರುಮ ಕೂಡಲಿನಲ್ಲಿ ಶಾಲೆಯೊಂದನ್ನು ತೆರೆದಿದ್ದರು.

ವಿದ್ವಾನ್ ಬಾಲಸರಸ್ವತಿಯವರು ಆಚಾರ್ಯ ಪಾಠಶಾಲೆಯ ಸ್ಥಾಪನೆಗೆ ಕಾರಣಕರ್ತರಾದರು. ಹತ್ತಿರದ ನೆಂಟರಾದ ಅನಂತಾಚಾರ್, ಎಮ್.ಎ., ಮಾಡಿ ಖಾಯಂ ಕೆಲಸವಿಲ್ಲದೆ ಇದ್ದರು. ಆಗ ವಿದ್ಯಾಸಂಸ್ಥೆಯೊಂದನ್ನು ಸ್ಥಾಪಿಸಿ ಸಮಾಜ ಸೇವೆ ಶಿಕ್ಷಣ ಸೇವೆ ಸಲ್ಲಿಸಲು ಪ್ರೇರೇಪಿಸಿದವರೇ ಬಾಲಸರಸ್ವತಿಯವರು. "ಆಚಾರ್ಯ ಪಾಠಶಾಲಾ" ಎಂಬ ಹೆಸರಿಡಲು ಬಾಲಸರಸ್ವತಿಯವರೇ ಕಾರಣರು. ಅಷ್ಟೇ ಅಲ್ಲ, ಅಲ್ಲಿ ಶಿಶು, ಪ್ರಾಥಮಿಕ ಶಾಲೆಗಳಲ್ಲಿ ಪ್ರಾರಂಭದ ದಿನಗಳಲ್ಲಿ ಕೆಲವು ಕಾಲ ಪಾಠವನ್ನೂ ಹೇಳಿದ್ದಾರೆ.

ಲೌಕಿಕ ಜೀವನದಲ್ಲಿ ಒಂದು ರೀತಿಯಲ್ಲಿ ಅವಧೂತರಂತೆ ಇದ್ದರು ಬಾಲಸರಸ್ವತಿಯವರು. ವಾಗ್ಮಿಗಳಾಗಿ ಸೊಗಸಾಗಿ ಮಾತನಾಡುತ್ತಿದ್ದ ಅವರನ್ನು ಸಭೆಗಳಿಗೆ

ಎಲ್ಲ ಬಗೆಯ ಜನ ಕರೆದೊಯ್ಯುತ್ತಿದ್ದರು. ಸಭೆಗಳಿಗೆ ಹೋಗುವಾಗ ಒಳ್ಳೆಯ ಉಡುಪನ್ನು ಧರಿಸಿ ಹೋಗಲು ವಿಶೇಷ ಗಮನ ಕೊಡುತ್ತಿರಲಿಲ್ಲ. ಡಿ.ವಿ.ಜಿ.ಯವರು ಹೇಳುವಂತೆ "ಸ್ವಲ್ಪ ಮಾಸಿ, ನಲುಗಿದ ಬಟ್ಟೆಗಳನ್ನು ಧರಿಸುತ್ತಿದ್ದರು. ಅವರು ಬಟ್ಟೆಗಳನ್ನು ಒಗೆದುದನ್ನು ಮಾತ್ರ ನಾನು ಕಾಣೆ. ಎರಡು ತಿಂಗಳಿಗೋ, ಮೂರು ತಿಂಗಳಿಗೋ ಒಂದು ಸಾರಿ ಸುತ್ತಮುತ್ತ ಇದ್ದ ಮೂರೇ ಮಾಸಿದ ಬಟ್ಟೆಗಳನ್ನು ಅಗಸನಿಗೆ ಕೊಟ್ಟರೆ ಉಂಟು ಇಲ್ಲದಿದ್ದರೆ ಇಲ್ಲ." ಇನ್ನು ಅವರಿಗೆ ಬಟ್ಟೆಗಳೆಲ್ಲ ಕೊಳೆಯಾಗಿದೆ ಅನ್ನಿಸಿದಾಗ ಪೇಟೆಗೆ ಹೋಗಿ ಧೋತ್ರಗಳನ್ನು ಕೊಂಡು ತಂದು, ಇನ್ನು ಆರು ತಿಂಗಳು ಯೋಚನೆ ಇಲ್ಲ ಎನ್ನುತ್ತಿದ್ದರು. ಯಾವುದಾದರೂ ಸಭೆಗೋ, ದೊಡ್ಡ ಮನುಷ್ಯರನ್ನು ನೋಡಲೋ ಹೋಗುವಾಗ, ಉಟ್ಟು ಬದಲಿಸಿದ್ದ ಬಟ್ಟೆ ರಾಶಿಯಲ್ಲಿ ಕಡಿಮೆ ಕೊಳೆ ಆದದ್ದನ್ನು ಆರಿಸಿಕೊಂಡು ಉಟ್ಟುಕೊಂಡು ಹೋಗುತ್ತಿದ್ದರಂತೆ.

ಕನ್ನಡದಲ್ಲಿ ಆಧುನಿಕ ಪತ್ತೇದಾರಿ ಕಾದಂಬರಿಗಳ ರಚನೆ ಪ್ರಾರಂಭವಾದುದು ೨೦ನೇ ಶತಮಾನದ ಪ್ರಾರಂಭದಲ್ಲಿ. ಆಗ ಹಲವು ಪ್ರಸಿದ್ಧ ಸಾಹಿತಿಗಳಾದ ಗಳಗನಾಥ ಬಿ. ವೆಂಕಟಾಚಾರ್ಯ, ಶಿವರಾಮ ಕಾರಂತ, ದೇವುಡು, ವೆಂಕಟಾದ್ರಿಶಾಸ್ತ್ರಿ ಮೊದಲಾದವರ ಕೃತಿಗಳು ಬೆಳಕಿಗೆ ಬಂದಿದ್ದವು. ಆ ಪೈಕಿ ಬಾಲಸರಸ್ವತಿಯವರ ಪತ್ತೇದಾರಿ ಕಾದಂಬರಿಗಳು ಅತಿ ಜನಪ್ರಿಯವಾಗಿದ್ದವು. ಇವರ ಕಾದಂಬರಿಗಳನ್ನು ಕುರಿತು ಕೆ. ಕೃಷ್ಣಮೂರ್ತಿಗಳು ಹೇಳಿದಂತೆ ನೀತಿ ಪ್ರತಿಪಾದನೆ ಹಾಗೂ ಅದ್ಭುತ ರಮ್ಯ ವಾತಾವರಣ ಹಗಲು-ಕತ್ತಲು ಸ್ಪಷ್ಟ ವಿರೋಧ ಉಳ್ಳ ನಾಯಕ, ಖಳ ನಾಯಕರ ಕಲ್ಪನೆ, ಐತಿಹಾಸಿಕ, ಸಾಮಾಜಿಕ ಸಾಮಗ್ರಿಗಳ ಸಂಯೋಜನೆ ಅವರ ಕಾದಂಬರಿಗಳ ವೈಶಿಷ್ಟ್ಯಗಳಾಗಿದ್ದವು.

ಪ್ರತಿಭಾನ್ವಿತ ವ್ಯಕ್ತಿಯಾದರೂ ಸುಖ, ಕೀರ್ತಿಗಳು ದೊರಕಬೇಕಾದರೆ ವಿಧಿ ಲಲಾಟದಲಿ ಬರೆದಿರಬೇಕು. ವಿದ್ವಾನ್ ಬಾಲಸರಸ್ವತಿಯವರು ಜೀವನದುದ್ದಕ್ಕೂ ಸ್ವತಂತ್ರವಾಗಿ, ಸ್ವಾಭಿಮಾನಿಯಾಗಿ ಬದುಕಲು ಯತ್ನಿಸಿದವರು. ಅದಕ್ಕಾಗಿ ಅವರು ಊರು ದೇಶ ತಿರುಗಿದರು, ಸಂಸ್ಥೆಗಳನ್ನು ಸ್ಥಾಪಿಸಿದರು. ಸಾಹಿತ್ಯ ರಚನೆ ಮಾಡಿ, ತಾವೇ ಅಚ್ಚುಮಾಡಿ ಪ್ರಕಟಿಸಿದರು. ಅವರಂತೆ ಪ್ರಯತ್ನಶೀಲತೆಯ ಲೇಖಕರು ಆ ಕಾಲಕ್ಕೆ ಅಪರೂಪವೆನ್ನಬಹುದು. ಅಷ್ಟೆಲ್ಲಾ ಮಾಡಿದರೂ ಜೀವನದಲ್ಲಿ ಒಂದು ರೀತಿಯಲ್ಲಿ ಯಶಸ್ವಿಗಳಾಗಲಿಲ್ಲ.

ತಾವೇ ಪ್ರಕಾಶಕರಾಗಿ ಕೃತಿ ರಚಿಸಿ ಪ್ರಕಟಿಸುತ್ತಿದ್ದವರು, ಇತರರಿಗಾಗಿ ಕೃತಿ ರಚಿಸಿಕೊಡುವ ಸನ್ನಿವೇಶ ಅವರಿಗೆ ಬಂತು. ಜೀವನ ನಿರ್ವಹಣೆಗಾಗಿ ಪುಸ್ತಕಗಳನ್ನು ಬರೆದುಕೊಡುವ ಪರಿಸ್ಥಿತಿ ಅವರಿಗೆ ಬಂದದ್ದುಂಟು. ಜೀವನದ ಎಂಥ ಬಿಕ್ಕಟ್ಟಿನ ಪರಿಸ್ಥಿತಿಯಲ್ಲೂ ಅವರ ಬರವಣಿಗೆಯ ಶಕ್ತಿ ಕುಂದಲಿಲ್ಲ. ಬತ್ತದ ತೊರೆಯಾಗಿ ಸಾಹಿತ್ಯ ಅವರಲ್ಲಿ ಚಿಮ್ಮುತ್ತಿತ್ತು. ಒಂದು ಸಂದರ್ಭದಲ್ಲಿ, ಒಂದೇ ರಾತ್ರಿಯಲ್ಲಿ "ಸೌಭಾಗ್ಯ ಸಂಪತ್ಕುಮಾರ್" ಎಂಬ ೬೪ ಪುಟಗಳ ಕಥೆ ಪುಸ್ತಕವನ್ನು ಪ್ರಕಾಶಕರೊಬ್ಬರಿಗೆ ಬರೆದುಕೊಟ್ಟರು ಎಂದು ಡಿ.ಕೆ. ಭಾರಧ್ವಾಜ್ ಹೇಳಿದ್ದಾರೆ. ನಿಜವಾಗಿ ಹೇಳುವುದಾದರೆ ಅವರ ಪ್ರತಿಭೆ ಪಾಂಡಿತ್ಯಕ್ಕೆ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯಂತಹ ಗೌರವ

ದೊರೆಯಬೇಕಾಗಿತ್ತು. ಕೀರ್ತಿ ಗೌರವಗಳಿರಲಿ, ಕೆಲವೊಮ್ಮೆ ದುರದೃಷ್ಟ ಸಂಗತಿಗಳು ಅವರ ಹೆಗಲೇರುತ್ತಿದ್ದವು.

ಬಾಲಸರಸ್ವತಿಯವರ ಆಪ್ತ ಮಿತ್ರರಲ್ಲಿ ಒಬ್ಬರು ಹೇಳಿದ ಪ್ರಸಂಗವಿದು. ಜೀವನದಲ್ಲಿ ಅನೇಕ ಕ್ಲೇಶಗಳಿಗೆ ಬಾಲಸರಸ್ವತಿಯವರು ಒಳಗಾದರು. ಅದರಲ್ಲಿ ಒಂದು ಈ ಪ್ರಸಂಗ:

ಕನ್ನಡದಲ್ಲಿ ಬೌದ್ಧ ಧರ್ಮದ ಕೃತಿಗಳು ೧೯ನೇ ಶತಮಾನದಲ್ಲಿ ಮೊದಲಿಗೆ ಪ್ರಕಟವಾದವು. ಆ ಕಾಲದಲ್ಲಿ "ವಿದ್ಯಾದಾಯಿನಿ" ಪತ್ರಿಕೆಯಲ್ಲಿ ಸಾಹಿತಿಗಳೂ ಶಿಕ್ಷಣವೇತ್ತರೂ, ಚಾರಿತ್ರಿಕ ಗ್ರಂಥಗಳನ್ನು ರಚಿಸಿದವರೂ ಆದ ಎಂ. ಶಾಮರಾವ್ ಅವರು ಬೌದ್ಧಧರ್ಮ ಕುರಿತು ಬರೆದ ಲೇಖನಗಳು ಮೊದಲಿಗೆ ಬಂದವು. ಆದರೆ ಬಿದರೆ ಅಶ್ವತ್ಥನಾರಾಯಣಶಾಸ್ತ್ರಿ ಎಂಬ ವಿದ್ವಾಂಸರು (೧೯೦೮ರಲ್ಲಿ?) ರಚಿಸಿ ಪ್ರಕಟಿಸಿದ "ಧರ್ಮಪದ"ವೆಂಬ ಬುದ್ಧ ಗೀತೆಯು ಕನ್ನಡದಲ್ಲಿ "ಧರ್ಮಪದ" (ದಮ್ಮಪದ) ಗದ್ಯ ಅನುವಾದ ಮೊಟ್ಟಮೊದಲನೆಯ ಗ್ರಂಥವಾಗಿದೆ. ಅನಂತರ ಜಿ.ಪಿ. ರಾಜರತ್ನಂ ಮೊದಲಾದವರು "ಧರ್ಮಪದ" ಗ್ರಂಥವನ್ನು ಕನ್ನಡಕ್ಕೆ ತಂದಿದ್ದಾರೆ.

ಆದರೆ ಬಿದರೆ ಅಶ್ವತ್ಥನಾರಾಯಣರವರು ಪಾಂಡಿತ್ಯ ಪೂರ್ಣವಾಗಿ "ಧರ್ಮಪದ" ಗ್ರಂಥವನ್ನು ಕನ್ನಡಕ್ಕೆ ತಂದಹಾಗೆ ಇನ್ನೊಬ್ಬರು ತಂದಿಲ್ಲ ಎಂದರೆ ತಪ್ಪಾಗಲಾರದು. ಪಾಳಿ ಭಾಷೆಯಿಂದ ನೇರವಾಗಿ ಕನ್ನಡಕ್ಕೆ "ಧರ್ಮಪದ"ವನ್ನು ಅನುವಾದಿಸಿರುವುದಲ್ಲದೆ ಬುದ್ಧಗೀತೆಯ ಮಾತುಗಳಿಗೆ ಸಂವಾದಿಯಾಗಿ ಉಪನಿಷತ್ತು, ಪುರಾಣ, ಕಥಾಸರಿತ್ಸಾಗರ ಮನುಸ್ಮೃತಿ, ಶಂಕರರ ಸ್ತೋತ್ರಗಳು, ಭಗವದ್ಗೀತೆ ಇತ್ಯಾದಿ ಸಮಸ್ತ ವೈದಿಕ ವಾಙ್ಮಯದಲ್ಲಿರುವ ವೇದ, ವೇದಾಂತ ಮತ್ತು ಬೌದ್ಧಗ್ರಂಥಗಳಿಂದ ಸಮಂಜಸ ವಾಕ್ಯ ಗಳನ್ನು ಉದಾಹರಿಸಿದ್ದಾರೆ. ಇಡೀ ವೈದಿಕ ಸಾಹಿತ್ಯವನ್ನು ಇವರು ಅರೆದುಕುಡಿದಿದ್ದಾರೆ ಎಂಬುದಕ್ಕೆ ಇದು ಸಾಕ್ಷಿಯಾಗಿದೆ. ಇವರ ಇನ್ನೊಂದು ಗ್ರಂಥ ಬುದ್ಧನ ಜೀವನ ಉಪದೇಶಗಳನ್ನು ಒಳಗೊಂಡಿರುವ ಗ್ರಂಥ ಬೌದ್ಧಾವತಾರ. ಇವೆರಡೂ ಕನ್ನಡ ಬೌದ್ಧ ಸಾಹಿತ್ಯಕ್ಕೆ ವಿಶೇಷ ಕೊಡುಗೆಗಳಾಗಿವೆ.

ಈ ಬಿದರೆ ಅಶ್ವತ್ಥನಾರಾಯಣಶಾಸ್ತ್ರಿಯವರು, ಬಾಲಸರಸ್ವತಿಯವರ ಪರಮ ಸ್ನೇಹಿತರಲ್ಲಿ ಒಬ್ಬರಾಗಿದ್ದರು. ಅವರು ಸಂಸಾರ ತಾಪತ್ರಯಗಳಿಂದ ಬಳಲಿ ಆತ್ಮಹತ್ಯೆ ಮಾಡಿಕೊಂಡರು. ಸಾಯುವ ಮುನ್ನ ಪೊಲೀಸ್ ಇಲಾಖೆಗೆ ಒಂದು ಪತ್ರವನ್ನು ಬರೆದು "ಆತ್ಮಹತ್ಯೆಗೆ ನಾನೇ ಕಾರಣ. ವಿವರಗಳು ಬೇಕಿದ್ದಲ್ಲಿ ನನ್ನ ಗೆಳೆಯ ಬಾಲಸರಸ್ವತಿ ಯವರನ್ನು ವಿಚಾರಿಸಬಹುದು" ಎಂದು ತಿಳಿಸಿದ್ದರು. ಇದರ ಫಲವಾಗಿ ಪೊಲೀಸರ ವಿಚಾರಣೆಗೆ ಒಳಪಟ್ಟು, ನನಗೇನೂ ತಿಳಿಯದು ಎಂದು ಹೇಳಿದರೂ ಬಾಲಸರಸ್ವತಿ ಯವರನ್ನು ಪೊಲೀಸರು ಸಾಕಷ್ಟು ಗೋಳುಹೊಯ್ದುಕೊಂಡರು. "ಸಾಯುವವನು ಸತ್ತ ನನಗೇಕೆ ಈ ಶಿಕ್ಷೆಯನ್ನು ಕೊಟ್ಟ" ಎಂದು ಬಾಲಸರಸ್ವತಿಯವರು ಪರಿತಪಿಸಿದರು. ಇಂಥ ಅನೇಕ ಕ್ಲೇಶಗಳಿಂದ ಜರ್ಜರಿತರಾಗಿ ವ್ಯಾಧಿಗ್ರಸ್ತರೂ ಆದ ಅವರು, ಬೆಂಗಳೂರಿನಲ್ಲಿ ಗುರುಕುಲ ಶಾಲೆ ಪ್ರಾರಂಭವಾಗುವ ಕಾಲಕ್ಕೆ (೧೯೩೮) ಮಹೋದರ ವ್ಯಾಧಿಯಿಂದ ನರಳಿದಾಗ, ಅವರೊಂದಿಗೆ ಸಹಾಯೋಪಾಧ್ಯಾಯರಾಗಿದ್ದ ಎಂ. ನಾರಾಯಣಶಾಸ್ತ್ರಿಗಳು

ಔಷಧೋಪಚಾರ ಮಾಡಿದರೂ ಪಥ್ಯ ಪರಿಪಾಲಿಸಲಾಗದೆ ೧೯೩೮ ಮೇ ೨೮ನೇ ತಾರೀಖಿನಂದು ದೈವಾಧೀನರಾದರು.

ಸ್ವತಂತ್ರ ವೃತ್ತಿಯ ಸಾಹಿತಿ, ಮಕ್ಕಳ ಶಿಕ್ಷಕ, ಅನುವಾದಕ, ವಾಗ್ವಿಶಾರದ, ಸಂಸ್ಕೃತ ಪಂಡಿತವರೇಣ್ಯ, ೪೦ಕ್ಕೂ ಹೆಚ್ಚು ಪತ್ತೇದಾರಿ ಕೃತಿಗಳನ್ನು ರಚಿಸಿದ ಮಹಾನ್ ಸಾಹಿತಿ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಬಾಲಸರಸ್ವತಿಯವರು. ವನಸುಮವೊಂದು ಕಾಡಿನಲ್ಲಿ ಬೆಳೆದು ಅದರ ಹುಟ್ಟನ್ನೂ, ರೂಪನ್ನೂ ಯಾರೂ ನೋಡದಿದ್ದರೂ, ಅದು ಅರಳಿ ನಲಿದು, ಬಾಳಿ, ಬೇರೆಯವರಿಗೆ ತನ್ನ ಸುಗಂಧ ಬೀರಿ, ಬಾಡಿ, ಬತ್ತಿ ಬಿದ್ದುಹೋಗುವ ಹಾಗೆ ನಾಡು, ನುಡಿಗಳಿಗೆ ಸೇವೆಗೈದರು. ಕನ್ನಡಸಾಹಿತ್ಯ ಚರಿತ್ರೆಯಲ್ಲಿ ಪತ್ತೇದಾರಿ ಕಾದಂಬರಿಗಳ ಇತಿಹಾಸ ಸೃಷ್ಟಿಸಿ, ಬಂಗಾಳಿಯಿಂದ ಅನುವಾದಮಾಡಿ, ಕನ್ನಡ ಸಿರಿ ಹೆಚ್ಚಿಸಿ, ಸಂಸ್ಕೃತ ಸೌರಭವನ್ನು ಎಲ್ಲೆಡೆ ಬೀರಿ, ಕನ್ನಡದ ಓದುಗರಿಗೆ ತಮ್ಮ ಕೃತಿಗಳಿಂದ ಅಜರಾಮರರಾಗಿ ವಿದ್ವಾಂಸ ಬಾಲಸರಸ್ವತಿಯವರು ಇಂದಿಗೂ ಮರೆಯಲಾಗದ ಮರೆಯಬಾರದ ಸಾಹಿತಿ ವಿದ್ವಾಂಸರಾಗಿದ್ದಾರೆ.

ಲೇಖನ ಬರೆಯಲು ಆಕರಗಳು

೧. ಪಿಶಾಚ ಪರಿವಾರ (ಪ. ಕಾದಂಬರಿ) ವಿದ್ವಾನ್ ಬಾಲಸರಸ್ವತಿ ೧೯೮೧(೨) ಪತ್ತೇದಾರಿ ಪ್ರಕಟನಾಲಯ ಅರಳೆಪೇಟೆ, ಬೆಂಗಳೂರು (ಹೇಮಂತ ಸಾಹಿತ್ಯ)

೨. ವೈದಿಕ ಧರ್ಮಸಂಪ್ರದಾಯಸ್ಥರು ಡಿ.ವಿ.ಜಿ. (ಜ್ಞಾಪಕ ಚಿತ್ರಶಾಲೆ–೫) ಕಾವ್ಯಾಲಯ ಮೈಸೂರು ೧೯೭೨ "ತಮಾಷೆ ತಂಡ–ಬಾಲ ನಟ ಪ್ರವೀಣರು" ಪುಟ ೯೯–೧೧೦.

೩. ಚೋರ ಚಕ್ರವರ್ತಿ (ಪ.ಕಾದಂಬರಿ) ೧೯೧೪ ವಿದ್ವಾನ್ ಬಾಲಸರಸ್ವತಿ... ಬೆಂಗಳೂರು.

೪. ಧರ್ಮಪದವೆಂಬ ಬುದ್ಧಗೀತೆಯು: ಪ್ರಕಾಶಕರು: ಅಶ್ವತ್ಥನಾರಾಯಣ.

೫. ಮಾರ್ಗದರ್ಶಕ ಮಹನೀಯರು: ಟಿ.ವಿ. ವೆಂಕಟಾಚಾಲ ಶಾಸ್ತ್ರೀ ಪ್ರ. ೨೦೦೨.

೬. ಸಿರಿಗನ್ನಡ ಗ್ರಂಥಕರ್ತರು... ಭಾಗ ೧ ವೆಂಕಟೇಶ ಸಾಂಗ್ಲಿ, ಪ್ರ. ಉಷಾ ಸಾಹಿತ್ಯಮಾಲೆ ಮೈಸೂರು.

೭. ಹೃನ್ಮನ ದೀಪ್ತಿ (ನುಡಿ ಚಿತ್ರಗಳು) ಎಸ್. ಕೃಷ್ಣಮೂರ್ತಿ ೨೦೦೪, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು.


೮. ಕನ್ನಡನುಡಿ ಲೇಖನ: ಡಿ.ಕೆ. ಭಾರಧ್ವಾಜ್ (ಸಂಪುಟ ೨೩, ಸಂಚಿಕೆ ೪)

೯. ಎ.ಪಿ.ಎಸ್. ಕಾಲೇಜ್ ವಿಶೇಷ ಸಂಚಿಕೆ.

೧೦. ಸೂರ್ಯನಾಥ ಕಾಮತರವರು ನೀಡಿದ ವಿವರ

೧೧. ಹೆಚ್.ಎಸ್. ದೊರೆಸ್ವಾಮಿ ಅವರು ನೀಡಿದ ವಿವರ

೧೨. ಕನ್ನಡ ವಿಶ್ವಕೋಶ ಕೆ. ಕೃಷ್ಣಮೂರ್ತಿ ಅವರ ಲೇಖನ.




ಸಾಹಿತ್ಯ ವಲಯವಾಗಿ ಮುಂಬಯಿ

■ ಡಾ. ಜಿ.ಎನ್. ಉಪಾಧ್ಯ

ಭಾರತೀಯ ಭಾಷೆಗಳಲ್ಲಿ ಸಂಸ್ಕೃತ ಮತ್ತು ತಮಿಳನ್ನು ಬಿಟ್ಟರೆ ಕನ್ನಡವೇ ಅತ್ಯಂತ ಸಮೃದ್ಧ ಹಾಗೂ ಪ್ರಾಚೀನ ಭಾಷೆ. ಕನ್ನಡ ಸಾಹಿತ್ಯಕ್ಕೆ ಸುಮಾರು ಒಂದೂವರೆ ಸಾವಿರ ವರ್ಷಗಳ ಸುದೀರ್ಘವಾದ ಇತಿಹಾಸವಿದೆ. ಇಪ್ಪತ್ತನೆಯ ಶತಮಾನವನ್ನು ಕನ್ನಡ ಸಾಹಿತ್ಯದ ಸುವರ್ಣಯುಗ ಎಂದೇ ಕರೆಯಲಾಗುತ್ತದೆ. ಹೊಸಗನ್ನಡ ಸಾಹಿತ್ಯ, ನಾಡಿನ ಬೇರೆ ಬೇರೆ ವಲಯಗಳಲ್ಲಿ ಸೃಷ್ಟಿಯಾಗಿ ಜನಪ್ರಿಯವಾದುದು ಅಷ್ಟೇ ಸತ್ಯ. ಆಧುನಿಕ ಕನ್ನಡ ವಾಙ್ಮಯ ವಿಶೇಷವಾಗಿ ಧಾರವಾಡ, ಮಂಗಳೂರು, ಮೈಸೂರು ಕಾರವಾರ, ಬೆಂಗಳೂರು, ಗುಲಬರ್ಗಾ, ಶಿವಮೊಗ್ಗ ಹಾಗೂ ಮುಂಬೈ ವಲಯಗಳಲ್ಲಿ ರಚನೆಯಾದುದನ್ನು ಕಾಣಬಹುದಾಗಿದೆ.

ಕರ್ನಾಟಕದ ರಾಜಧಾನಿ ಬೆಂಗಳೂರನ್ನು ಬಿಟ್ಟರೆ ಅತಿಹೆಚ್ಚು ಕನ್ನಡಿಗರಿರುವ ಪ್ರದೇಶ ಮುಂಬೈ. ಸುಮಾರು ಹದಿನೆಂಟು–ಇಪ್ಪತ್ತು ಲಕ್ಷ ಕನ್ನಡಿಗರು ಇಲ್ಲಿ ನೆಲೆಸಿದ್ದಾರೆ. ಕನ್ನಡ ವಾಙ್ಮಯಕ್ಕೂ ಮುಂಬೈಗೂ ಅವಿನಾಭಾವ ಸಂಬಂಧವಿದೆ. ಕನ್ನಡ ಸಾಹಿತ್ಯ ಸಂಸ್ಕೃತಿಯ ಕುರಿತು ಮಾತನಾಡುವಾಗ, ಚಿಂತನ, ಮಂಥನ ನಡೆಸುವಾಗ ಇತಿಹಾಸಕಾರರು, ವಿಮರ್ಶಕರು ಮುಂಬೈ ಕಡೆ ಮುಖ ಮಾಡದಿರಲು ಸಾಧ್ಯವಿಲ್ಲ. ಕನ್ನಡ ವಾಙ್ಮಯಕ್ಕೆ ಮುಂಬೈ ಕೊಟ್ಟ ಕೊಡುಗೆ ಗಮನಾರ್ಹವಾದುದು. ಕನ್ನಡದ ಮೊದಲ ಸ್ವತಂತ್ರ ಸಾಮಾಜಿಕ ನಾಟಕ ಎಂಬ ಕೀರ್ತಿಗೆ ಪಾತ್ರವಾದ ಕರ್ಕಿ ವೆಂಕಟರಮಣ ಶಾಸ್ತ್ರಿಗಳ 'ಇಗ್ಗಪ್ಪ ಹೆಗಡೇ ವಿವಾಹ ಪ್ರಹಸನ ಅಥವಾ ಕನ್ಯಾ ವಿಕ್ರಯದ ಪರಿಣಾಮವು' (೧೮೮೭) ಪ್ರಕಟವಾದುದು



ಈ ಮಹಾನಗರದಲ್ಲಿಯೇ. ಇಲ್ಲಿ ವೃತ್ತಿಯಲ್ಲಿ ಇಂಜಿನಿಯರ್ ಆಗಿದ್ದ ಚುರಮುರಿ ಶೇಷಗಿರಿರಾಯರು (೧೮೭೯), ಮೊದಲ ಬಾರಿಗೆ ಕಾಳಿದಾಸನ ಶಾಕುಂತಲ ನಾಟಕವನ್ನು ಕನ್ನಡಕ್ಕೆ ರೂಪಾಂತರಗೊಳಿಸಿದರು. ಮರಾಠಿ ರಂಗಭೂಮಿಗೆ ಜನ್ಮಪಿತ್ತ ನಾಟಕವಿದು. ಹೊಸಗನ್ನಡದ ಮೊದಲ ಅನುವಾದಿತ ಕಾವ್ಯಕೃತಿ ಬಿ.ಎಂ.ಶ್ರೀ. ಅವರ 'ಇಂಗ್ಲಿಷ್ ಗೀತೆಗಳು' ಎಂಬ ಮಾತಿದೆ. ಇದು ಸರಿಯಲ್ಲ. ಮುಂಬೈ ಕನ್ನಡಿಗ ಹಟ್ಟಿಯಂಗಡಿ ನಾರಾಯಣರಾಯರ 'ಆಂಗ್ಲ ಕವಿತಾವಳಿ' ೧೯೧೯ರಲ್ಲಿ ಬೆಳಕು ಕಂಡದ್ದು ಚಾರಿತ್ರಿಕ ಸತ್ಯ. ಕನ್ನಡ ಕಾವ್ಯಾನುವಾದಕ್ಕೆ ನಾಂದಿಹಾಡಿದ ಕೀರ್ತಿ ಹಟ್ಟಿಯಂಗಡಿ ನಾರಾಯಣರಾಯರಿಗೆ ಸಲ್ಲುತ್ತದೆ. ಮುಂಬೈಯಲ್ಲಿ ಇಂಗ್ಲಿಷ್ ಪತ್ರಿಕೋದ್ಯಮದಲ್ಲಿ ಕೆಲಸ ಮಾಡುತ್ತಾ, ಹತ್ತಾರು ಕನ್ನಡ ಕೃತಿಗಳನ್ನು ರಚಿಸಿದ ಹಟ್ಟಿಯಂಗಡಿ ನಾರಾಯಣರಾಯರ ಸಾಧನೆ ಉಲ್ಲೇಖನೀಯವಾದುದು. ಹೀಗೆ ಮುಂಬೈ ಕನ್ನಡಿಗರ ಸಾಹಿತ್ಯಿಕ, ಸಾಂಸ್ಕೃತಿಕ ಸಾಧನೆಗೆ ಸುಮಾರು ಒಂದೂವರೆ ಶತಮಾನದ ಗಟ್ಟಿ ಇತಿಹಾಸವಿದೆ ಎಂಬುದು ಅಭಿಮಾನದ ಸಂಗತಿ.

ಮುಂಬೈ ಮಹಾನಗರವು ಕ್ರಿಯಾಶೀಲರಿಗೆ ಯಾವತ್ತೂ ಅವಕಾಶಗಳನ್ನು ಒದಗಿಸಿದ ತಾಣ. ಬ್ರಿಟಿಷರ ಕಾಲದಲ್ಲಿ ಆಧುನಿಕ ಶಿಕ್ಷಣ ಪಡೆದ ಅನೇಕ ಸುಧಾರಣಾವಾದಿಗಳು ಮುಂಬೈಯಲ್ಲಿ ಸಾಹಿತ್ಯ ನಿರ್ಮಾಣ ಕಾರ್ಯದಲ್ಲಿ ತೊಡಗಿಕೊಂಡದ್ದು ಮಹತ್ವದ ಸಂಗತಿ. ಚುರಮುರಿ ಶೇಷಗಿರಿರಾಯರು ಮುಂಬೈಯಲ್ಲಿ ಕನ್ನಡ ಸಾಹಿತ್ಯ ರಚನೆಗೆ ನಾಂದಿಹಾಡಿದ ಬಹುಭಾಷಾ ವಿದ್ವಾಂಸರು. ಕನ್ನಡ–ಮರಾಠಿಯಲ್ಲಿ ಸಾಹಿತ್ಯ ರಚಿಸಿದ ಹಿರಿಮೆ ಇವರದು. ಪ್ರಗತಿಪರ ಚಿಂತಕರಾಗಿದ್ದ ಶ್ಯಾಮರಾವ್ ವಿಠ್ಠಲ ಕೈಕಿಣಿ 'ಸಮುದ್ರಪರ್ಯಟನ', 'ವಿಧವಾ ವಿವಾಹ'ದಂಥ ಕೃತಿಗಳನ್ನು ರಚಿಸಿ ಹೊಸ ಸಮಾಜದ ಏಳಿಗೆಗೆ ಶ್ರಮಿಸಿದ್ದಾರೆ. ಕರ್ಕಿ ವೆಂಕಟರಮಣ ಶಾಸ್ತ್ರಿಗಳು ಮುಂಬೈಯಲ್ಲಿ ಮಾಡಿದ ಸಾಹಿತ್ಯ ಪರಿಚಾರಿಕೆ ಪ್ರಾತಃಸ್ಮರಣೀಯವಾಗಿದೆ. ಶಿವರಾಮ ಧಾರೇಶ್ವರರ 'ಕನ್ಯಾವಿಕ್ರಯ' ನಾಟಕ ಸಾಕಷ್ಟು ಪುರೋಗಾಮಿತನವನ್ನು ಒಳಗೊಂಡಿದೆ. "ಧೀರ ಪತ್ರಿಕೋದ್ಯಮಿ ಹಾಗೂ ಆದ್ಯ ಸಾಮಾಜಿಕ ನಾಟಕಕಾರ ಕರ್ಕಿ ವೆಂಕಟರಮಣ ಶಾಸ್ತ್ರಿ ಅವರ ಹೆಸರು ಹೊಸಗನ್ನಡ ಸಾಹಿತ್ಯದಲ್ಲಿ ಶಾಶ್ವತವಾಗಿ ನಿಲ್ಲತಕ್ಕದ್ದು"ಎಂಬುದಾಗಿ ಖ್ಯಾತ ಸಂಶೋಧಕ ಶ್ರೀನಿವಾಸ ಹಾವನೂರ ಅವರು ಅಭಿಪ್ರಾಯ ಪಟ್ಟಿದ್ದಾರೆ. ಮುಂಬೈ, ಪುಣೆ ಶಿಕ್ಷಣ ಕೇಂದ್ರಗಳಾಗಿ ಹೆಸರುವಾಸಿ ಯಾಗಿದ್ದ ಕಾರಣ, ಉತ್ತರ ಕರ್ನಾಟಕದ ಜನ ಸಹಜವಾಗಿ ಈ ನಗರಗಳಿಗೆ ಹೆಚ್ಚಿನ ಶಿಕ್ಷಣಕ್ಕಾಗಿ ಬಂದು–ಹೋಗ ತೊಡಗಿದರು. ಮುಂಬಯಿಯಲ್ಲಿ ಕನ್ನಡಿಗರು ತಮ್ಮದೇ ಆದ ಸಂಘ, ಸಂಸ್ಥೆಗಳನ್ನು ಕಟ್ಟಿ, ಬೆಳೆಸಿ, ಸಾಹಿತ್ಯ–ಸಂಸ್ಕೃತಿಯ ಉಪಾಸನೆಯಲ್ಲಿ ತೊಡಗಿಕೊಂಡರು.

೧೯೫೬ರಲ್ಲಿ ಭಾಷಾವಾರು ಪ್ರಾಂತ ನಿರ್ಮಾಣವಾಗಿ ಮುಂಬೈ ಹೊರನಾಡಾಗಿ ಪರಿಣಮಿಸಿದರೂ, ಇಲ್ಲಿನ ವಾಙ್ಮಯ ಸೇವೆಗೆ ಹಿನ್ನಡೆಯಾಗಲಿಲ್ಲ. ಕೃಷ್ಣಕುಮಾರ ಕಲ್ಲೂರ ದಿನಕರ ದೇಸಾಯಿ, ಸುಂದರ ನಾಡಕರ್ಣಿ, ಆರ್.ಡಿ. ಕಾಮತ್, ಎಂ.ವಿ. ಕಾಮತ್

ಚಿದಂಬರ ದೀಕ್ಷಿತ, ಶ್ರೀನಿವಾಸ ಹಾವನೂರು, ಬ್ಯಾತನಾಳ, ರಾಮಚಂದ್ರ ಉಚ್ಚಿಲ್ ಭೀಮರಾವ್ ಚಿಟಗುಪ್ಪಿ, ವಾಸಂತಿ ಪಡುಕೋಣೆ, ಡಿ.ಕೆ. ಮೆಂಡನ್, ವ್ಯಾಸರಾಯ ಬಲ್ಲಾಳ ಮೊದಲಾದವರು ಸ್ವಾತಂತ್ರ್ಯ ಪೂರ್ವದಲ್ಲೇ ಮುಂಬೈಯಲ್ಲಿ ಸಾಹಿತ್ಯ ಪರಿಚಾರಿಕೆಯಲ್ಲಿ ತಮ್ಮನ್ನು ಗಂಭೀರವಾಗಿ ತೊಡಗಿಸಿಕೊಂಡಿದ್ದರು. ೧೯೪೭-೪೮ರ ಹೊತ್ತಿಗೆ ಮುಂಬೈಯಿಂದ ಬೆಳಕು ಕಾಣುತ್ತಿದ್ದ 'ನುಡಿಪತ್ರಿಕೆ' ಹೊಸ ಲೇಖಕರನ್ನು ಲೋಕಮುಖಕ್ಕೆ ಪರಿಚಯಿಸುವಲ್ಲಿ ಯಶಸ್ವಿಯಾಯಿತು. ೧೯೫೦ರಲ್ಲಿ ಮುಂಬೈಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯಲ್ಲಿ ವಿ.ಕೃ. ಗೋಕಾಕರು ನವ್ಯಕಾವ್ಯವನ್ನು ಘೋಷಿಸಿದರು. ಇದಾದ ನಂತರ ಕನ್ನಡ ಕಾವ್ಯ ವಾಹಿನಿಯ ಗತಿಯೇ ಬದಲಾದುದು ಎಲ್ಲರಿಗೂ ಗೊತ್ತಿರುವ ಸಂಗತಿ.

ಬಹುಕಾಲ ಮುಂಬೈಯಲ್ಲಿ ನೆಲೆಸಿ, ವೈವಿಧ್ಯಮಯವಾದ ಸಾಹಿತ್ಯ ರಚಿಸಿ, ಕನ್ನಡ ವಾಙ್ಮಯಕ್ಕೆ ಹೊಸಮೆರಗು ನೀಡಿದ ವ್ಯಾಸರಾಯ ಬಲ್ಲಾಳ, ಯಶವಂತ ಚಿತ್ತಾಲ ಬಿ.ಎ. ಸನದಿ, ವ್ಯಾಸರಾವ್ ನಿಂಜೂರು, ಅರವಿಂದ ನಾಡಕರ್ಣಿ, ಜಯಂತ ಕಾಯ್ಕಿಣಿ ಮಿತ್ರಾ ವೆಂಕಟ್ರಾಜ್, ಬಿ.ಎಸ್. ಕುರ್ಕಾಲ್, ಜಿ.ವಿ. ಕುಲಕರ್ಣಿ, ಶ್ರೀನಿವಾಸ ಜೋಕಟ್ಟೆ ಮಂಜುನಾಥ ಮೊದಲಾದವರ ಸಾಧನೆ ಸಾಹಿತ್ಯ ಚರಿತ್ರೆಯ ಪುಟಗಳಲ್ಲಿ ದಾಖಲಾಗಿದೆ. ಕಳೆದ ೧೦-೧೫ ವರ್ಷಗಳಲ್ಲಿ ಮುಂಬಯಿನ ಕನ್ನಡ ಲೇಖಕರು, ಸಾವಿರಕ್ಕೂ ಹೆಚ್ಚು ಕನ್ನಡ ಕೃತಿಗಳನ್ನು ಹೊರತಂದಿರುವುದು ಇಂದಿಗೂ ಈ ಭಾಗದಲ್ಲಿ ನೂರಾರು ಕನ್ನಡ ಲೇಖಕರು, ವಾಙ್ಮಯ ಪರಿಚಾರಿಕೆಯಲ್ಲಿ ತೊಡಗಿಸಿಕೊಂಡಿರುವುದರಿಂದ ಸಾಹಿತ್ಯ ವಲಯವಾಗಿ ತನ್ನತನವನ್ನು ಉಳಿಸಿಕೊಳ್ಳುವಲ್ಲಿ ಮುಂಬಯಿ ಯಶಸ್ವಿಯಾಗಿದೆ. ಕನ್ನಡ ಸಾಹಿತ್ಯಕ್ಕೆ ಕಸುವು ತುಂಬಿದ, ಹೊಸನೀರು ಹಾಯಿಸಿದ ಕೀರ್ತಿ ಇಲ್ಲಿನ ಲೇಖಕರಿಗೆ ಸಲ್ಲುತ್ತದೆ. ಇಲ್ಲಿನ ಕಥೆ, ಕಾವ್ಯ, ಕಾದಂಬರಿ, ರಂಗಭೂಮಿ, ಸಾಂಘಿಕ ಚಟುವಟಿಕೆಗಳ ಬಗೆಗೆ ಈಗಾಗಲೇ ಕೆಲವು ಪಿಎಚ್.ಡಿ. ಸಂಶೋಧನ ಗ್ರಂಥಗಳು ರಚನೆಯಾಗಿವೆ. ಮುಂಬೈಯಲ್ಲಿ ನೆಲೆನಿಂತು, ಸಾಹಿತ್ಯ ಸೃಷ್ಟಿಸಿದ ಲೇಖಕರು ಭಿನ್ನಪರಿಯಲ್ಲಿ ಬರೆದು, ತಮ್ಮ ಅನನ್ಯತೆಯನ್ನು ಮೆರೆದಿದ್ದಾರೆ. ಈ ಮೂಲಕ ಒಳನಾಡಿನ ಲೇಖಕರನ್ನು, ಓದುಗರನ್ನು ಅಚ್ಚರಿಗೀಡುಮಾಡಿದ್ದಾರೆ.

ನಗರಪ್ರಜ್ಞೆ, ನಗರ ಜಾನಪದ, ಅನಾಥಪ್ರಜ್ಞೆ ಮೊದಲಾದ ಪರಿಕಲ್ಪನೆಗಳಿಗೆ ಜೀವತುಂಬಿದ ಶ್ರೇಯಸ್ಸು ಈ ಭಾಗದ ಲೇಖಕರದಾಗಿದೆ. ಮುಂಬೈಯಲ್ಲಿ ನೆಲೆನಿಂತು ಸಾಹಿತ್ಯ ಕೃಷಿ ಮಾಡಿದ ಹೆಚ್ಚಿನ ಲೇಖಕರು ವಿಜ್ಞಾನ ಕ್ಷೇತ್ರದವರು. ಹೀಗಾಗಿ ಅವರು ಮುಂಬೈ ಮಹಾನಗರದ ಜೀವನ ದರ್ಶನವನ್ನು ಭಿನ್ನಪರಿಯಲ್ಲಿ ದಾಖಲಿಸಿ ಹೆಸರುಮಾಡಿದರು. ಇಲ್ಲಿನ ಲೇಖಕರು ಬಹುಭಾಷಿಕ ಸಂವೇದನೆಯನ್ನು ಮೈಗೂಡಿಸಿ ಕೊಂಡವರು. ಮುಂಬೈ ಮಹಾನಗರದ ಸಂಕೀರ್ಣವೆನಿಸುವ ಬದುಕನ್ನು, ಅದು ಒಡ್ಡುವ ಸವಾಲುಗಳನ್ನು, ಅದು ತರುವ ಕುತೂಹಲಕಾರಿ ತಿರುವುಗಳನ್ನು, ಪರಿವರ್ತನೆಗಳನ್ನು ತಮ್ಮ ಕೃತಿಗಳಲ್ಲಿ ದಾಖಲಿಸಿ, ಹೊಸ ಅನುಭವ ಪ್ರಪಂಚವನ್ನು ಕನ್ನಡದೊಳಗೆ ತಂದು

ಹೊಸ ಸಂವಾದಕ್ಕೆ ಅನುವು, ಆಸ್ಪದ ಮಾಡಿಕೊಟ್ಟದ್ದು ಮುಂಬೈ ಲೇಖಕರ ಮಹತ್ವದ ಸಾಧನೆ. ಈ ವಾಣಿಜ್ಯ ಮಹಾನಗರಿಯಲ್ಲಿ ಕನ್ನಡದ ಬಾವುಟವನ್ನು ಪರಿಸಿ, ನಿಲ್ಲಿಸಲು ಇಲ್ಲಿನ ಲೇಖಕರು ಪರಿಶ್ರಮ ವಹಿಸುತ್ತಾ ಬಂದಿರುವುದು ಗಮನೀಯ ಅಂಶ.

ಮುಂಬೈ ಕನ್ನಡ ವಾಹಿನಿಯನ್ನು ದಾಖಲಿಸುವ, ವಿಶ್ಲೇಷಿಸುವ ಕಾರ್ಯ ತಕ್ಕಮಟ್ಟಿಗೆ ನಡೆದಿದೆ. ತುಳುವರ ಮುಂಬಯಿ ವಲಸೆ (ಕೆ.ಪಿ. ಕಾರ್ನಾಡ್), ಮುಂಬಯಿ ಮಿಡಿತ ಅವಲೋಕನ (ಸಂ: ಎಚ್.ಬಿ.ಎಲ್. ರಾವ್), ಮಹಾರಾಷ್ಟ್ರ ಕನ್ನಡ ವಾಹಿನಿ (ಸಂ: ಜಿ.ಎನ್.ಉಪಾಧ್ಯ), ಮುಂಬೈ ಕನ್ನಡ ರಂಗಭೂಮಿ (ಭರತ್ ಕುಮಾರ್ ಪೊಲಿಪು) ಮುಂಬಯಿ ಕನ್ನಡ ಕಥಾ ಸಾಹಿತ್ಯ (ಮಮತಾರಾವ್), ಮುಂಬಯಿ ಕನ್ನಡ ಕಾದಂಬರಿಗಳು (ರಾಜಶ್ರೀ ಇನಾಂದಾರ್), ಮುಂಬಯಿ ಕನ್ನಡ ಕಾವ್ಯ (ಮರಿಯಪ್ಪ ನಾಟೇಕರ್) ಮೊದಲಾದ ಶೋಧ ಗ್ರಂಥಗಳಲ್ಲಿ ಮುಂಬೈ ಲೇಖಕರ ಸಿದ್ಧಿ ಸಾಧನೆಯ ವಿಶ್ಲೇಷಣೆಯಿದೆ. ಬಹುಕಾಲ ಸಾಹಿತ್ಯವಲಯವಾಗಿ ಹೆಸರು ಮಾಡಿದ 'ಮುಂಬಯಿ ಕನ್ನಡ ಸಾಹಿತ್ಯ ಚರಿತ್ರೆ' ರಚನೆ ವರ್ತಮಾನದ ತುರ್ತೇ ಆಗಿದೆ.

❐



ಕರ್ನಾಟಕ ಸಂಗೀತಕ್ಕೆ ಕನ್ನಡಿಗರ ಕೊಡುಗೆ

■ ಡಾ. ಅಮೃತ ನಾರಾಯಣ

ಸಂಗೀತವನ್ನು ಸು–ಗೀತಂ, ಸಮ್ಯಕ್–ಗೀತಂ ಮತ್ತು ಸುಷ್ಠು–ಗೀತಂ ಎಂದು ವ್ಯಾಖ್ಯಾನಿಸಲಾಗಿದೆ. ಕಿವಿಗೆ ಇಂಪಾಗಿ ಕೇಳುವ ಮನರಂಜಿಸುವ ಮಧುರಗೀತೆಯೇ ಸಂಗೀತ. ಋಷಿ ಮೂಲ ಮತ್ತು ನದಿಮೂಲಗಳನ್ನು ಶೋಧಿಸಲು ಅಸಾಧ್ಯವೆಂದು ಹೇಗೆ ಭಾವಿಸಲಾಗಿದೆಯೋ ಹಾಗೆಯೇ ಸಂಗೀತದ ಮೂಲವನ್ನು ಶೋಧಿಸುವುದು ಕಷ್ಟಸಾಧ್ಯವೆಂದು ಭಾವಿಸಲಾಗಿದೆ. ಭೂಮಂಡಲದಲ್ಲಿ ಪ್ರಕೃತಿ ಮತ್ತು ಜೀವರಾಶಿಗಳ ಅಸ್ತಿತ್ವದೊಂದಿಗೇ ಸಂಗೀತದ ಉಗಮವೂ ಆಗಿರಬಹುದೆಂದು ಊಹಿಸಬಹುದು. ಭಾರತೀಯ ಸಂಗೀತವು ವೇದಜನಿತವಾದುದು. ಇದರ ಬುನಾದಿಯನ್ನು ನಿರ್ಮಿಸಿದವರು ಋಷಿಮುನಿಗಳು. ಕ್ರಿ.ಶ. ೧೩ನೆಯ ಶತಮಾನದವರೆಗೂ ಭರತಖಂಡದಲ್ಲಿ ಏಕಪ್ರಕಾರದ ಸಂಗೀತವು ಅಸ್ತಿತ್ವದಲ್ಲಿದ್ದಿತು. ಕ್ರಿ.ಶ. ೧೩ ಮತ್ತು ೧೪ನೇ ಶತಮಾನಗಳಲ್ಲಿ ಉತ್ತರ ಭಾರತವು ಮಹಮ್ಮದೀಯರ ಹಾಗೂ ಮುಘಲರ ಧಾಳಿ–ಆಳ್ವಿಕೆಗಳಿಗೆ ಬಲಿಯಾಗಿ ಆ ಭಾಗದ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ವಲಯಗಳಲ್ಲಿ ಮಹತ್ತರ ಬದಲಾವಣೆಗಳು ಉಂಟಾದವು. ಭಾರತೀಯ ಕಲಾ ಪ್ರಪಂಚವೂ ಇದಕ್ಕೆ ಹೊರತಾಗಲಿಲ್ಲ. ಉತ್ತರ ಭಾರತದಲ್ಲಿ ಹಿಂದೂ ಸಂಸ್ಕೃತಿಯು ಪರಕೀಯ ಸಂಸ್ಕೃತಿಯ ಪ್ರಭಾವಕ್ಕೆ ಮಣಿದು ಸಂಕರಗೊಂಡಂತೆಯೇ ವೇದಕಾಲೀನ ಸಂಗೀತವು ಅರೇಬಿಯನ್–ಪರ್ಷಿಯನ್ ಸಂಗೀತಗಳೊಡನೆ ಮಿಳಿತಗೊಂಡು ಮಿಶ್ರ ತಳಿಯಾಗಿ ಉತ್ತರಾದಿ ಸಂಗೀತವೆನಿಸಿತು. ದಕ್ಷಿಣ ಭಾರತವು ಅನ್ಯ ಸಂಸ್ಕೃತಿಯ



ಪ್ರಭಾವಕ್ಕೆ ಮಣಿಯದೆ ತನ್ನತನವನ್ನು ಕಾಪಾಡಿಕೊಂಡು ದಕ್ಷಿಣಾದಿ ಸಂಗೀತವಾಗಿ ಮುಂದುವರೆಯಿತು.

ಉತ್ತರಾದಿ ಹಾಗೂ ದಕ್ಷಿಣಾದಿ ಎಂಬ ಸಂಗೀತ ಪ್ರಭೇದಗಳು ಎಂದಿನಿಂದ? ಯಾರಿಂದ? ಹಿಂದೂಸ್ಥಾನಿ ಮತ್ತು ಕರ್ಣಾಟಕ ಸಂಗೀತ ಪ್ರಭೇದಗಳೆಂದು ಪ್ರಚಲಿತವಾಗಿವೆ ಎನ್ನುವುದನ್ನು ನಿಖರವಾಗಿ ಹೇಳಲಾಗದಿದ್ದರೂ 'ಸಂಗೀತ ಸುಧಾಕರ' ಎಂಬ ಸಂಗೀತ ಲಕ್ಷಣ ಗ್ರಂಥದಲ್ಲಿ ಈ ಪ್ರಭೇದಗಳ ಉಲ್ಲೇಖವನ್ನು ಕಾಣಬಹುದು. ಕ್ರಿ.ಶ. ೧೯೧೪ರಲ್ಲಿ ಕಾಶೀನಾಥ ಅಪಾತುಲಸಿಯವರಿಂದ ರಚಿತವಾದ ಈ ಗ್ರಂಥದಲ್ಲಿ ಕರ್ಣಾಟಕ ಹಾಗೂ ಹಿಂದೂಸ್ಥಾನಿ ಸಂಗೀತ ಪದ್ಧತಿಗಳ ಉಲ್ಲೇಖವು ಹೀಗಿದೆ,

ದೇಶೇ ದೇಶೇ ಪ್ರಚರಿತಂ ತತ್ಸರ್ವಂ ದೇಶಿ ಸಮ್ಮತಮ್ ।
ತದಪಿ ದ್ವಿವಿಧಂ ಜ್ಞೇಯಂ ದಕ್ಷಿಣೋತ್ತರ ಭೇದತಃ ॥

ಇದೇ ಬಗೆಯ ಪ್ರಭೇದಗಳ ಉಲ್ಲೇಖವು ಕ್ರಿ.ಶ. ೧೯೨೪ರಲ್ಲಿ ಬಾಲಚಂದ್ರ ಸೀತಾರಾಮ ಸುಕಥನಕರರು ಸಂಪಾದಿಸಿದ ಚತುರಪಂಡಿತ ವಿರಚಿತ 'ಶ್ರೀ ಮಲ್ಲಕ್ಷ್ಯ ಸಂಗೀತಂ' ಎಂಬ ಗ್ರಂಥದಲ್ಲಿ ಹೀಗೆ ಕಂಡುಬಂದಿದೆ.

ಪ್ರಣಾಲ್ಯೌತು ಪ್ರಸಿದ್ಧೇ ದ್ವೇ ಸಂಗೀತಸ್ಯ ವಿದಾಂ ಮತೇ ।
ಆದ್ಯ ಕರ್ಣಾಟಕೀ ಖ್ಯಾತಾ ಹಿಂದುಸ್ಥಾನಿ ತಥಾಪರಾ ॥

ಹೀಗೆ ದಕ್ಷಿಣ ಭಾರತದ ಶಾಸ್ತ್ರೀಯ ಸಂಗೀತಕ್ಕೆ ೨೦ನೆಯ ಶತಮಾನದಲ್ಲಿ ಕರ್ಣಾಟಕ ಶಾಸ್ತ್ರೀಯ ಸಂಗೀತವೆಂಬ ಹೆಸರು ಬಂದಿತು. ಕರ್ಣಾಟಕ ಸಂಗೀತದ ಲಕ್ಷ್ಯ–ಲಕ್ಷಣಗಳ ಸರ್ವೋನ್ನತ ಬೆಳವಣಿಗೆ ಕನ್ನಡಿಗರ ಅಸದೃಶ ಶ್ರಮ ಮತ್ತು ಸಾಧನೆಗಳ ಫಲವಾಗಿದೆ ಎಂದೇ ಈ ಸಂಗೀತವನ್ನು ಕರ್ಣಾಟಕ ಸಂಗೀತವೆಂದು ಕರೆಯಲಾಗಿದೆ. ಬಹುತೇಕ ತಮಿಳರ ಅಭಿಪ್ರಾಯದಲ್ಲಿ ಸಂಗೀತಕ್ಕೆ ಸಂಬಂಧಿಸಿದಂತೆ ಕರ್ಣಾಟಕ ಎಂಬ ಶಬ್ದಕ್ಕೆ ಭೌಗೋಳಿಕ ಅರ್ಥ ಗೌಣ. ಅವರು ಈ ಪದಕ್ಕೆ ಶುದ್ಧ ಹಾಗೂ ಸಂಪ್ರದಾಯನಿಷ್ಠ ಎಂಬ ವಿಶೇಷಾರ್ಥವನ್ನು ಕಲ್ಪಿಸಿ, ಕರ್ಣಾಟಕ ಸಂಗೀತವೆಂಬ ನಾಮಧೇಯವು ಕನ್ನಡಿಗರಿಗೂ ಹಾಗೂ ಕನ್ನಡ ನಾಡಿಗೂ ಸಂಬಂಧಿಸಿಲ್ಲವೆನ್ನುತ್ತಾರೆ. ಕರ್ಣಾಟಕ ಸಂಗೀತವೆಂಬ ತಲೆಬರಹದಲ್ಲಿ 'ಕರ್ಣಾಟಕ' ಶಬ್ದವನ್ನು ದಾಕ್ಷಿಣಾತ್ಯ ಎಂಬುದಾಗಿ ಬದಲಾಯಿಸಿ, ಅದನ್ನೇ ಬಳಕೆಯಲ್ಲಿ ತರಲು ಪ್ರಯತ್ನಿಸುತ್ತಿದ್ದಾರೆ. ಸಂಗೀತಕ್ಕೆ ಕನ್ನಡಿಗರಿತ್ತ ಕೊಡುಗೆ ಮತ್ತು ಸಾಧನೆಗಳನ್ನು ಮನಃಪೂರ್ವಕವಾಗಿ ಒಪ್ಪಿಕೊಳ್ಳಲು ಇಚ್ಛಿಸದ ಹೊಟ್ಟೆಕಿಚ್ಚಿನ ಕೆಲವರ ಈ ಪ್ರಯತ್ನದಿಂದ ವಾಸ್ತವಾಂಶವು ಸುಳ್ಳಾಗದು.

ಭಾರತೀಯ, ಕರ್ಣಾಟಕ ಸಂಗೀತ ಶಾಸ್ತ್ರಗ್ರಂಥಗಳ ರಚನೆಯಲ್ಲಿ ಅನೇಕ ಕನ್ನಡಿಗರ ಪ್ರಮುಖ ಪಾತ್ರವಿದೆ. ಬಹುತೇಕ ಗ್ರಂಥಗಳು ಸಂಸ್ಕೃತ ಭಾಷೆಯಲ್ಲಿವೆ ಮತ್ತು ಇವುಗಳ ರಚನೆಯಲ್ಲಿ ಸಿಂಹಪಾಲು ಕನ್ನಡಿಗರದಾಗಿದೆ. ಬಹುಮುಖ ಪ್ರತಿಭೆಯ ಮತಂಗ ಮುನಿಯ 'ಬೃಹದ್ದೇಶಿ' ಎಂಬ ಸಂಸ್ಕೃತ ಸಂಗೀತ ಶಾಸ್ತ್ರಗ್ರಂಥ ಭಾರತೀಯ ಸಂಗೀತ ಶಾಸ್ತ್ರದಲ್ಲಿ ಉಪಲಬ್ಧವಾಗಿರುವ ಪ್ರಥಮಗ್ರಂಥ. ಕನ್ನಡಿಗನಾದ ಈತನು ಕ್ರಿ.ಶ.ಸುಮಾರು ೫–೭ನೆಯ

ಶತಮಾನದಲ್ಲಿ ಜೀವಿಸಿದ್ದು, ಈ ಗ್ರಂಥವನ್ನು ಹಂಪಿಯಲ್ಲಿ ರಚಿಸಿರಬಹುದೆಂದು ನಂಬಲಾಗಿದೆ. ಈತನು ಕನ್ನಡಿಗನೇ? ಕರ್ನಾಟಕದಲ್ಲಿ ಈತನ ಗ್ರಂಥ ರಚಿತವಾಯಿತೇ? ಯಾವ ಶತಮಾನಕ್ಕೆ ಸಂದವನೀತ? ಎಂಬ ಸಂಗತಿಗಳು ಚರ್ಚೆಗೆ ಗ್ರಾಸವಾಗಿವೆ. ಕನ್ನಡಕ್ಕೇ ಮೀಸಲಾದ ವಿಶಿಷ್ಟ ರಚನೆಯಾದ ಗೇಯ ಪ್ರಬಂಧ 'ಕಂದ'ದ (ಕನ್ನಡ ಛಂದೋಬಂಧ) ಉಲ್ಲೇಖವು ಈತನ ಗ್ರಂಥದಲ್ಲಿ ಹೀಗೆ, "ಕಂದಾದಿ ಪ್ರಬಂಧಾ ಲಕ್ಷ್ಯತಃ ಪ್ರಸಿದ್ಧಾ ಏವ" ಎಂಬುದಾಗಿ ಕಂಡುಬಂದಿರುವುದರಿಂದ ಈತ ಕನ್ನಡಿಗ ಮತ್ತು ಕನ್ನಡ ಭಾಷೆಯನ್ನು ಬಲ್ಲವನೆಂದು ಊಹಿಸಬಹುದು. ಮತಂಗ ಮುನಿಯು ಬೃಹದ್ದೇಶಿ ಪ್ರಬಂಧಾಧ್ಯಾಯದಲ್ಲಿ ಹೇಳಿರುವ ೪೮ ಪ್ರಬಂಧಗಳಲ್ಲಿ (ಹಾಡು) ಹನ್ನೆರಡು ಪ್ರಬಂಧ ಗಳನ್ನು ಕನ್ನಡದಲ್ಲಿ ಹಾಡುವಂತಹವು ಎಂದಿದ್ದಾನೆ. ಆರು ಅಧ್ಯಾಯಗಳನ್ನುಳ್ಳ ಈ ಗ್ರಂಥವು ಸಂಗೀತ ಸಾರಸ್ವತ ಲೋಕದ ಕನ್ನಡಿಗರ ಹೆಮ್ಮೆಯ ಗ್ರಂಥವಾಗಿದೆ.

ಮಿಥಿಲೆಯಲ್ಲಿ ಕರ್ನಾಟ ರಾಜವಂಶವನ್ನು ಸ್ಥಾಪಿಸಿದ ಕನ್ನಡಿಗ ನಾನ್ಯದೇವ (ಕ್ರಿ.ಶ. ೧೦೯೭) 'ಸರಸ್ವತಿ ಹೃದಯಾಲಂಕಾರಹಾರ'ವೆಂಬ ಸಂಗೀತ ಲಕ್ಷಣ ಗ್ರಂಥವನ್ನು ಬರೆದಿದ್ದಾನೆ. ಈತನು ಈ ಗ್ರಂಥದಲ್ಲಿ ಕರ್ನಾಟ ಭಾಷಾ ದೇಶಿರಾಗಗಳನ್ನು ಪ್ರಸ್ತಾಪಿಸಿದ್ದಾನೆ. ಕಲ್ಯಾಣ ಚಾಲುಕ್ಯ ಚಕ್ರವರ್ತಿ ಸರ್ವಜ್ಞ ಸೋಮೇಶ್ವರನ 'ಮಾನಸೋಲ್ಲಾಸ' ಗ್ರಂಥವು ಪ್ರಾಚೀನ ಕರ್ನಾಟಕದ ಒಂದು ಸುಪ್ರಸಿದ್ಧ ವಿಶ್ವಕೋಶವೆನಿಸಿದೆ. ಈ ಗ್ರಂಥದಲ್ಲಿ ೫ ವಿಂಶತಿ ಗಳಿದ್ದು, ಪ್ರತಿ ವಿಂಶತಿಯಲ್ಲಿ ೨೦ ಅಧ್ಯಾಯಗಳಿದ್ದು, ಒಟ್ಟು ನೂರು ಅಧ್ಯಾಯಗಳಿವೆ. ೮೦೦೦ ಶ್ಲೋಕಗಳಿರುವ ಈ ಗ್ರಂಥವು ಅಂದಿನ ಕರ್ನಾಟಕದ ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳ ಅಗಾಧ ಮಾಹಿತಿಯನ್ನು ಕೊಡುತ್ತದೆ. ಮಾನಸೋಲ್ಲಾಸದ ಚತುರ್ವಿಂಶತಿ ಪ್ರಮೋದಕ ವಿನೋದ ಕಥನದಲ್ಲಿನ ೨೦ ಅಧ್ಯಾಯಗಳಲ್ಲಿ ಸಂಗೀತಕ್ಕೆ ಸಂಬಂಧಿಸಿದ ಅಧ್ಯಾಯಗಳಾದ ಗೀತವಿನೋದ ವಾದ್ಯವಿನೋದ ಮತ್ತು ನೃತ್ಯವಿನೋದ ಅಧ್ಯಾಯಗಳು ತೂರ್ಯ ತ್ರಿತಯ (ಗೀತ–ವಾದ್ಯ–ನೃತ್ಯ)ಗಳ ಬಗೆಗೆ ಬೆಳಕು ಚೆಲ್ಲುತ್ತವೆ. ಮತಂಗನ ಬೃಹದ್ದೇಶಿಯ ವಾದ್ಯಾಧ್ಯಾಯ ಉಪಲಬ್ಧವಿಲ್ಲದಿರುವುದರಿಂದ, ಭರತನ ನಂತರ ವಾದ್ಯಗಳ ವಿವರಣೆಯನ್ನು ವಿಶದವಾಗಿ ನಿರೂಪಿಸಿರುವ ಗ್ರಂಥ ಸೋಮೇಶ್ವರನ ಮಾನಸೋಲ್ಲಾಸ.

ಯಾದವರ ದೊರೆ ಸಿಂಘಣ ದೇವನ ಆಳ್ವಿಕೆಯಲ್ಲಿ ಅವನ ಕೋಶಾಧ್ಯಕ್ಷನಾಗಿದ್ದ ಶಾರ್ಙ್ಗದೇವನು ಸುಮಾರು ಕ್ರಿ.ಶ. ೧೨೩೦ರಲ್ಲಿ 'ಸಂಗೀತ ರತ್ನಾಕರ'ವೆಂಬ ಸಂಗೀತ ಶಾಸ್ತ್ರ ಗ್ರಂಥವನ್ನು ರಚಿಸಿದ್ದಾನೆ. ೧೩ನೆಯ ಶತಮಾನ ಕಂಡ ಅತ್ಯುತ್ಕೃಷ್ಟ ಸಂಗೀತ ಲಕ್ಷಣ ಗ್ರಂಥವಿದು. ಬಹುಮುಖ ಪ್ರತಿಭಾ ಸಂಪನ್ನನಾದ ಈತನು ಈ ಗ್ರಂಥದಲ್ಲಿ ಪೂರ್ವಾಚಾರ್ಯರ ಮತಗಳ ಸಾರವನ್ನು ಸಂಗ್ರಹವಾಗಿ ಕೊಟ್ಟಿದ್ದಾನೆ. ಸಂಗೀತ ರತ್ನಾಕರವು ಸ್ವರಗತ, ರಾಗವಿವೇಕ, ಪ್ರಕೀರ್ಣಕ, ಪ್ರಬಂಧ, ತಾಳ, ವಾದ್ಯ ಮತ್ತು ನರ್ತನವೆಂಬ ಏಳು ಅಧ್ಯಾಯಗಳನ್ನು ಒಳಗೊಂಡಿದೆ. ಶಾರ್ಙ್ಗದೇವನಿಗಿರುವ ಸಂಗೀತ ವಿಷಯದ ಪ್ರಗಲ್ಭ ಪಾಂಡಿತ್ಯ, ಖಚಿತತೆಗಳು ಆತನು ತನ್ನನ್ನು ತಾನೇ "ನಿಶ್ಯಂಕ"ನೆಂದು ಕರೆದುಕೊಳ್ಳಲು

ಅನುವು ಮಾಡಿದೆ. ಇಂತಹ ಗ್ರಂಥ ಸಂಗೀತ ಪ್ರಪಂಚದಲ್ಲಿ ಮತ್ತೊಂದಿಲ್ಲ. ಈತನು ಕರ್ಣಾಟಕದವನೇ? ಅಲ್ಲವೇ? ಎಂಬ ವಿಷಯದ ಬಗ್ಗೆ ಚರ್ಚೆ ಹೀಗೆ ಸಾಗಿದೆ.

"ದೇವಗಿರಿಯ ಯಾದವರು ಕರ್ಣಾಟಕದವರಲ್ಲ ಮತ್ತು ಸಂಗೀತ ರತ್ನಾಕರದ ಕರ್ತೃವೂ ಅಷ್ಟೆ. ಅವನೇ ಹೇಳಿಕೊಂಡಂತೆ ಶಾರ್ಙ್ಗದೇವನು ಕಾಶ್ಮೀರದವನು" ಎಂದು ಹೇಳಿರುವ ಮದ್ರಾಸಿನ ವಿ. ರಾಘವನ್‌ರವರ ಹೇಳಿಕೆಗೆ ಪ್ರತಿಕ್ರಿಯಿಸಿರುವ ಮಹಾ ಮಹೋಪಾಧ್ಯಾಯ ರಾ. ಸತ್ಯನಾರಾಯಣರವರು ಶಾರ್ಙ್ಗದೇವನು ಕನ್ನಡಿಗನೆಂದು ಹೀಗೆ ಪ್ರತಿಪಾದಿಸಿದ್ದಾರೆ. "ಶಾರ್ಙ್ಗದೇವನು ಕಾಶ್ಮೀರಿ, ಕನ್ನಡಿಗನಲ್ಲ ಎಂದು ಕೆಲವರು ಅರಿಯದೆ ಅಥವಾ ಅಸೂಯೆಯಿಂದ ಆಗಾಗ ಹೇಳುವುದುಂಟು. ಅವನ ಪಿತಾಮಹನು ಕಾಶ್ಮೀರದಿಂದ ವಲಸೆ ಬಂದು ದೇವಗಿರಿಯ ದೊರೆಗಳಲ್ಲಿ ಆಶ್ರಯಪಡೆದಿದ್ದು ನಿಜ. ಶಾರ್ಙ್ಗದೇವನು ತನ್ನ ವಂಶವು ಕಾಶ್ಮೀರದಲ್ಲಿದೆ ಎಂದಿರುವುದೂ ನಿಜ; ಇಷ್ಟರಿಂದಲೇ ಅವನು ಕಾಶ್ಮೀರಿ ಆಗಿಬಿಡುವುದಿಲ್ಲವಷ್ಟೇ. ಮೂರು ತಲೆಮಾರಿನಿಂದ ಕನ್ನಡನಾಡಿನಲ್ಲಿ ನೆಲೆಸಿದ ಜನ ಇವರು; ಶಾರ್ಙ್ಗದೇವನ ತಂದೆಯ ಹೆಸರು ಸೋಢಲವೆಂದು ಸಂಸ್ಕೃತೀಕರಣವಾದ ಸೊಡ್ಡಳ. ಅವನ ಹೆಸರೂ ಶಾರ್ಙ್ಗದೇವನೆಂದು ಸಂಸ್ಕೃತೀಕರಣವಾದ ಚಾಂಗದೇವ ಎಂದಿರಬಹುದು. ಅವನು ಹುಟ್ಟಿದುದು, ಬೆಳೆದುದು ಕನ್ನಡ ನಾಡಿನಲ್ಲಿ, ಕನ್ನಡಿಗ ದೊರೆಗಳ ಆಶ್ರಯದಲ್ಲಿ. ದೇವಗಿರಿಯ ಯಾದವರನ್ನು ಮಹಾರಾಷ್ಟ್ರದವರಿಗೆ ದತ್ತುಕೊಡುವ ಪ್ರಯತ್ನವು ಈಚೆಗೆ ಬಹುವಾಗಿ ನಡೆದರೂ ನಿಷ್ಕೃಷ್ಟ ಸಂಶೋಧನೆಯ ಫಲವಾಗಿ ಅವರು ಕನ್ನಡಿಗರೇ ಆಗಿ ಉಳಿದರು. ಶಾರ್ಙ್ಗದೇವನಾದರೂ ತನ್ನ ಸುಮಾರು ೫ ಸಾವಿರ ಶ್ಲೋಕಗಳ ಗ್ರಂಥದಲ್ಲಿ ಅಭಿನವಗುಪ್ತನನ್ನುಳಿದು ಬೇರೆ ಯಾವ ಕಾಶ್ಮೀರಿ ಶಾಸ್ತ್ರಕಾರನನ್ನಾಗಲೀ ಉದ್ಧರಿಸುವುದಿಲ್ಲ. ಅಷ್ಟೇಕೆ ಅಭಿನವಗುಪ್ತನ ಗುರುವಾದ ಭಟ್ಟ ತೌತನನ್ನೇ ಹೆಸರಿಸುವುದಿಲ್ಲ. ತನ್ನ ಇಡೀ ಸಂಗೀತ ಗ್ರಂಥದಲ್ಲಿ ಸಂಗೀತವಾಗಲೀ, ತತ್ವಜಿಜ್ಞಾಸೆಯಾಗಲೀ ಮತ್ತೊಂದಾಗಲೀ ಯಾವ ವಿಷಯದಲ್ಲೂ ಕಾಶ್ಮೀರಕ್ಕೇ ವಿಶಿಷ್ಟ ಎಂದು ಹೇಳಬಹುದಾದ ಯಾವ ಒಂದು ಸಂಗತಿಯನ್ನೂ ಉಲ್ಲೇಖಿಸುವುದು ಹಾಗಿರಲಿ, ಸೂಚಿಸುವುದೂ ಇಲ್ಲ. ಅದರ ಬದಲು ದಕ್ಷಿಣ ದೇಶದಲ್ಲಿ ವಿಶೇಷವಾಗಿ ಕನ್ನಡ ನಾಡಿನಲ್ಲಿ ಪ್ರಸಿದ್ಧವಾದ ವಿಷಯ, ಪ್ರಮೇಯ, ಪರಿಭಾಷೆ ಶಬ್ದಗಳನ್ನೇ ಬಳಸುತ್ತಾನೆ. ಅವನ ಮನೆ ಮಾತು ಏನಾಗಿತ್ತೋ ತಿಳಿಯದು. ಆದರೆ ಅವನು ಕನ್ನಡಿಗ ಎಂಬುದಂತೂ ಸಂದೇಹಾತೀತ."

ಸಂಗೀತ ರತ್ನಾಕರವು ಒಂದು ಸಂಗೀತದ ವಿಶ್ವಕೋಶ. ಈ ಗ್ರಂಥವು ಸೂತ್ರರೂಪ ದಲ್ಲಿದ್ದು, ವಿಶೇಷ ಅರ್ಥ ವಿನ್ಯಾಸಗಳನ್ನೊಳಗೊಂಡಿದೆ, ಈ ಗ್ರಂಥಕ್ಕೆ ಅನೇಕ ಲಾಕ್ಷಣಿಕರು ವ್ಯಾಖ್ಯಾನಗಳನ್ನು ಬರೆದಿದ್ದಾರೆ. ವ್ಯಾಖ್ಯಾನದ ಸಹಾಯವಿಲ್ಲದೆ ಈ ಗ್ರಂಥವನ್ನು ಗ್ರಹಿಸುವುದು ಕಷ್ಟಸಾಧ್ಯ. ಇಂತಹ ಅದ್ಭುತ ಗ್ರಂಥಕ್ಕೆ ಕನ್ನಡಿಗ ಕಲ್ಲಪ್ಪ ಅಥವಾ ಚತುರ ಕಲ್ಲಿನಾಥನು ಸಮರ್ಪಕ ವ್ಯಾಖ್ಯಾನವನ್ನು ಬರೆದಿದ್ದಾನೆ. ಕಲ್ಲಿನಾಥನ ಸಂಗೀತರತ್ನಾಕರದ ಕಲಾನಿಧಿ ವ್ಯಾಖ್ಯಾನವು ಸಂಗೀತಶಾಸ್ತ್ರ ಗ್ರಂಥಗಳ ವ್ಯಾಖ್ಯಾನಗಳಲ್ಲಿ ಉನ್ನತ ಸ್ಥಾನವನ್ನು

ಪಡೆದಿದೆ. ಮೂಲ ಗ್ರಂಥದ ಕ್ಲಿಷ್ಟ ಪದಗಳನ್ನು ಸರಳಗೊಳಿಸಿ, ಪ್ರಾಚೀನ ಸಂಸ್ಕೃತ ಪರಿಭಾಷಾ ಶಬ್ದಗಳಿಗೆ ಅಂದು ಪ್ರಚಲಿತದಲ್ಲಿದ್ದ ದೇಶಿ ಶಬ್ದಗಳನ್ನು ಬಳಸಿ, ನೇರ ಹೃದಯಸ್ಪರ್ಶಿ ಹಾಗೂ ವಿದ್ವತ್ಪೂರ್ಣ ವ್ಯಾಖ್ಯಾನದಿಂದ ಕಲ್ಲಿನಾಥನು ಕರ್ಣಾಟಕ ಸಂಗೀತ ಪ್ರಪಂಚಕ್ಕೆ ಅತ್ಯುನ್ನತ ಕೊಡುಗೆ ನೀಡಿದ್ದಾನೆ. ಸಂಗೀತ ರತ್ನಾಕರ ವ್ಯಾಖ್ಯಾನಕಾರರಲ್ಲಿ ಕಲ್ಲಿನಾಥನದು ಪ್ರಥಮ ಸ್ಥಾನವಾಗಿದೆ. ಈತನ ವ್ಯಾಖ್ಯಾನವು ಸಂಗೀತ ಇತಿಹಾಸ ಪರ್ವಕಾಲದ ಒಂದು ಅತಿ ಮುಖ್ಯ ಕೊಂಡಿಯಾಗಿದೆ.

ಕ್ರಿ.ಶ. ೧೪ನೆಯ ಶತಮಾನದಲ್ಲಿ ಕರ್ಣಾಟಕ ಸಾಮ್ರಾಜ್ಯವನ್ನು ಸ್ಥಾಪಿಸಿದ ವಿದ್ಯಾರಣ್ಯರು 'ಸಂಗೀತ ಸಾರ'ವೆಂಬ ಸಂಗೀತ ಲಕ್ಷಣ ಗ್ರಂಥವನ್ನು ಬರೆದಿರುವುದಾಗಿ ತಿಳಿದುಬಂದರೂ ಆ ಗ್ರಂಥವು ಈಗ ಉಪಲಬ್ಧವಿಲ್ಲ. ಇದು ಸಂಸ್ಕೃತ ಭಾಷೆಯಲ್ಲಿದೆ. ಗೋವಿಂದ ದೀಕ್ಷಿತನ 'ಸಂಗೀತ ಸುಧೆ' ಎಂಬ ಸಂಗೀತ ಲಕ್ಷಣ ಗ್ರಂಥದಲ್ಲಿ ಶ್ರೀ ವಿದ್ಯಾರಣ್ಯರ 'ಸಂಗೀತಸಾರ' ಗ್ರಂಥದ ವಿಷಯವನ್ನು ಹೀಗೆ ಪ್ರಸ್ತಾಪಿಸಿದ್ದಾನೆ:

೧) ಸಂಗೀತ ಸಾರಂ ಸಮವೇಕ್ಷ್ಯ ವಿದ್ಯಾರಣ್ಯಭಿದ ಶ್ರೀಚರಣ ಪ್ರಣೀತಂ
೨) ಕರ್ಣಾಟಕ ಸಿಂಹಾಸನಭಾಗ್ಯ ವಿದ್ಯಾರಣ್ಯಭಿದ ಶ್ರೀ ಚರಣಾಗ್ರಣೀಭ್ಯಃ

ಸಂಗೀತಸಾರದ ಕರ್ತೃ ವಿದ್ಯಾರಣ್ಯರೆಂಬ ಸಂಗತಿ ಮೊದಲನೆಯ ಉದ್ಧೃತಿಯಿಂದ ತಿಳಿದು ಬಂದರೆ, ಎರಡನೆಯ ಉದ್ಧೃತಿಯಲ್ಲಿ ಶ್ರೀ ವಿದ್ಯಾರಣ್ಯರು ವಿಜಯನಗರ ಸಾಮ್ರಾಜ್ಯದ (ಕರ್ಣಾಟಕ ಸಿಂಹಾಸನ) ಸಂಸ್ಥಾಪಕರೆಂದು ತಿಳಿದುಬರುತ್ತದೆ. ಸ್ವರ ಮೇಳ ರಾಗ ಮತ್ತು ಪ್ರಕೀರ್ಣಕವೆಂಬ ಪ್ರಕರಣಗಳು ಈ ಗ್ರಂಥದ ಪ್ರಮುಖ ವಿಭಾಗಗಳು. ಸಂಗೀತ ಸಾರದಲ್ಲಿ ೧೫ ಮೇಳಗಳ ಮತ್ತು ೫೦ ಜನ್ಯ ರಾಗಗಳ ಲಕ್ಷಣಗಳ ಉಲ್ಲೇಖವಿದೆ. ಮೇಳ-ಜನ್ಯ ರಾಗಗಳ ವೈಜ್ಞಾನಿಕ ವರ್ಗೀಕರಣವು ಮೊಟ್ಟಮೊದಲಿಗೆ ಕಂಡು ಬಂದಿರುವುದು ಈ ಗ್ರಂಥದಲ್ಲಿ. ಇಂದು ಬಳಕೆಯಲ್ಲಿರುವ, ಎಲ್ಲ ನಾಡಿನವರು ಸಮ್ಮತಿಸಿರುವ ೭೨ ಮೇಳಗಳ ವರ್ಗೀಕರಣಕ್ಕೆ ನಾಂದಿಯನ್ನು ಹಾಡಿದವರು ಕನ್ನಡಿಗರು.

ಕಲ್ಲಪ್ಪನ ಮಗಳ ಮಗ ರಾಮಾಮಾತ್ಯನು (ಕ್ರಿ.ಶ. ೧೫೫೦) ಸಂಗೀತ ಶಾಸ್ತ್ರದಲ್ಲಿ ಲಕ್ಷ್ಯ-ಲಕ್ಷಣಗಳನ್ನು ಸಾಧಿಸಿದ ಪ್ರತಿಭಾವಂತ. ಈತನ 'ಸ್ವರಮೇಳ ಕಲಾನಿಧಿ' ಗ್ರಂಥವು ಉಪೋದ್ಘಾತ, ಸ್ವರ, ವೀಣಾ, ಮೇಳ ಮತ್ತು ರಾಗ ಎಂಬ ೫ ಪ್ರಕರಣಗಳನ್ನೊಳ ಗೊಂಡಿದೆ. ಪೂರ್ವಾಚಾರ್ಯರುಗಳಾದ ಶ್ರೀ ಶಾರ್ಙ್ಗದೇವ, ಭರತಮುನಿ, ಶ್ರೀ ವಿದ್ಯಾರಣ್ಯ ಯತಿವರ್ಯ ಹಾಗೂ ಕಲ್ಲಿನಾಥರನ್ನು ತನ್ನ ಗ್ರಂಥದಲ್ಲಿ ಸ್ಮರಿಸಿ ನಮಿಸಿದ್ದಾನೆ. ಸಂಗೀತರತ್ನಾಕರ ಹಾಗೂ ಕಲಾನಿಧಿಯ ಸ್ವರ ಮತ್ತು ಮೇಳಗಳ ಭಾಗಕ್ಕೆ ತಾನು ವ್ಯಾಖ್ಯೆ ಬರೆದುದಾಗಿ ಈ ಗ್ರಂಥದಲ್ಲಿ ಹೇಳಿಕೊಂಡಿದ್ದಾನೆ. ಪ್ರಭು ಅಚ್ಯುತರಾಯನಿಗೆ ತಾನು ಆವಿಷ್ಕರಿಸಿದ ವೀಣೆಯನ್ನು 'ಅಚ್ಯುತೇಂದ್ರ ಮೇಲ ವೀಣಾ' ಎಂಬ ಹೆಸರಿನಲ್ಲಿ ಸಮರ್ಪಿಸಿದ್ದಾನೆ.

ಕರ್ಣಾಟಕ ಸಂಗೀತಕ್ಕೆ ಅಪಾರವಾದ ಸೇವೆಯನ್ನು ಸಲ್ಲಿಸಿರುವ ನಿಜಗುಣ ಶಿವಯೋಗಿಗಳು ೧೬ನೆಯ ಶತಮಾನದಲ್ಲಿ ಮೈಸೂರು ಜಿಲ್ಲೆಯ ಕೊಳ್ಳೆಗಾಲದ ಬಳಿಯ

ಶಂಭುಲಿಂಗನ ಬೆಟ್ಟದಲ್ಲಿ ವಾಸವಾಗಿದ್ದರೆಂದು ತಿಳಿದುಬರುತ್ತದೆ. ಶಿವಯೋಗಿಗಳು ಬರೆದಿರುವ ಗ್ರಂಥಗಳಲ್ಲಿ 'ವಿವೇಕ ಚಿಂತಾಮಣಿ'ಯು ಕರ್ಣಾಟಕ ಸಂಗೀತದ ಮುಖ್ಯ ಅಂಶಗಳನ್ನು ಒಳಗೊಂಡಿದೆ. "ಸ್ವಕಪೋಲಕಲ್ಪಿತಮಲ್ಲದ ಸಾರತರಮಾದ ಸತ್ಯಾರ್ಥಂಗಳನೇ ಸಂಗ್ರಹಿಸಿ, ಸ್ಮೃತಿ ಪುರಾಣೇತಿಹಾಸ ಪುರಾತನೋಕ್ತಿಗಳನ್ನು ಸಾರದಿಂದನು ಭವಿಗಳಹದೆನಿಪಂತೆ" ವಿವೇಕ ಚಿಂತಾಮಣಿ ಎಂಬ ಸಲ್ಲ ಪೆಸರನ್ನಿಟ್ಟು ನಿರ್ಮಿಸಿರುವು ದಾಗಿ ಶಿವಯೋಗಿಗಳು ಹೇಳಿಕೊಂಡಿದ್ದಾರೆ. ಈ ಗ್ರಂಥವು ೧೦ ಪ್ರಕರಣಗಳನ್ನೊಳ ಗೊಂಡಿದೆ. ವಿವೇಕ ಚಿಂತಾಮಣಿಯನ್ನು ಕನ್ನಡದ ಮೊದಲ ವಿಶ್ವಕೋಶವೆನ್ನಬಹುದು. ಈ ಅಮೂಲ್ಯ ಗ್ರಂಥವು ತಮಿಳು, ಮರಾಠಿ ಭಾಷೆಗಳಿಗೆ ಅನುವಾದಿತಗೊಂಡಿದೆ.

ಕರ್ಣಾಟಕ ಸಂಗೀತ, ಹಿಂದುಸ್ಥಾನಿ ಸಂಗೀತವೇ ಮೊದಲಾದ ವಿದ್ಯೆಗಳಲ್ಲಿ ಅಪಾರ ಪಾಂಡಿತ್ಯ ಪಡೆದಿದ್ದವನು ಸಾತನೂರಿನ ಕನ್ನಡಿಗ ಪುಂಡರೀಕವಿಠಲ. ಸದ್ರಾಗ ಚಂದ್ರೋದಯ, ರಾಗ ಮಾಲ, ರಾಗಮಂಜರಿ ಸಂಗೀತ ಲಕ್ಷಣ ಗ್ರಂಥಗಳಲ್ಲಿ, ಸಂಗೀತ ಹಾಗೂ ನೃತ್ಯಕ್ಕೆ ಸಂಬಂಧಿಸಿದ ಲಕ್ಷಣಗ್ರಂಥ ನರ್ತನನಿರ್ಣಯದಲ್ಲಿ ಈತನು ತನ್ನನ್ನು ಪದೇ ಪದೇ ಕರ್ಣಾಟ ಜಾತೀಯನೆಂದು ಸಮಾಪ್ತಿ ವಚನಗಳಲ್ಲಿ ಹೆಮ್ಮೆಯಿಂದ ಹೇಳಿಕೊಂಡಿದ್ದಾನೆ (ಇತಿ ಕರ್ಣಾಟ ಜಾತೀಯ ಪುಂಡರೀಕವಿಠಲ ವಿರಚಿತಾ ರಾಗಮಂಜರೀ ಸಮಾಪ್ತಾ), ಕ್ರಿ.ಶ. ಸುಮಾರು ೧೬ನೆಯ ಶತಮಾನಕ್ಕೆ ಸೇರಿದ ಈತನು ಪುರಂದರದಾಸರ ಸಮಕಾಲೀನ. ಈತನ ಸಂಗೀತ-ನೃತ್ಯಗಳ ಅಗಾಧ ಪಾಂಡಿತ್ಯವನ್ನು ಈ ರೀತಿ ಡಾ. ರಾ. ಸತ್ಯನಾರಾಯಣರವರು ಉದ್ಧರಿಸಿದ್ದಾರೆ : 'ಪುರಂದರದಾಸರನ್ನು ಕರ್ಣಾಟಕ ಸಂಗೀತ ಪಿತಾಮಹ ಎನ್ನುವುದಾದರೆ ಪುಂಡರೀಕವಿಠಲನನ್ನು ಕರ್ಣಾಟಕ ಸಂಗೀತ ನೃತ್ಯಗಳ ಲಕ್ಷಣಭಾಗದಲ್ಲಿ ಪಿತಾಮಹಾನೆನ್ನಲು ಅಡ್ಡಿಯಿಲ್ಲ...'

ಬುರಹಾನಖಾನನ ರಾಜಧಾನಿಯಾದ ಆನಂದವಲ್ಲೀ ನಗರದಲ್ಲಿ ಕರ್ಣಾಟಕ ಸಂಗೀತಕ್ಕೆ ಅನ್ವಯಿಸುವ ರಾಗ ಚಂದ್ರೋದಯವನ್ನು ರಚಿಸಿ, ಆತನಿಂದ ಸನ್ಮಾನಿತ ನಾದವನು ಪುಂಡರೀಕ ವಿಠಲ. ಈತನು ಅಕಬರನ ಸೇನಾನಿ ಮಾಧವ ಸಿಂಹನ ಆಸ್ಥಾನದಲ್ಲಿ ಕೆಲಕಾಲ ನೆಲೆಸಿ ಗ್ವಾಲಿಯರ್ ನಗರದಲ್ಲಿ ಹಿಂದುಸ್ಥಾನಿ ಸಂಗೀತಕ್ಕೆ ಅನ್ವಯಿಸುವ 'ರಾಗಮಂಜರಿ'ಯನ್ನು ರಚಿಸಿದ್ದಾನೆ. ಅಕಬರನ ಆಮಂತ್ರಣದ ಮೇರೆಗೆ ದೆಹಲಿಗೆ ತೆರಳಿ ರಾಗಮಾಲ ಎಂಬ ಲಕ್ಷಣ ಗ್ರಂಥವನ್ನು ಹಿಂದುಸ್ಥಾನಿ ಸಂಗೀತಕ್ಕೆ ಕೊಡುಗೆಯಾಗಿ ನೀಡಿದ್ದಾನೆ. ಪುಂಡರೀಕ ವಿಠಲನು ರಚಿಸಿದ ನಾಲ್ಕನೆಯ ಗ್ರಂಥ ನರ್ತನ ನಿರ್ಣಯ. ಈ ಗ್ರಂಥವು ಪ್ರಧಾನವಾಗಿ ನರ್ತನ ಶಾಸ್ತ್ರಕ್ಕೆ ಸಂಬಂಧಿಸಿದೆ.

ಕರ್ಣಾಟಕ ಶಾಸ್ತ್ರೀಯ ಶಿಕ್ಷಣಕ್ಕೆ ಅಡಿಗಲ್ಲು ಹಾಕಿದವರು ಹರಿದಾಸರು. ಕರ್ಣಾಟಕ ಸಂಗೀತವನ್ನು ಪ್ರಪಂಚದ ಯಾವ ಮೂಲೆಯಲ್ಲಿ ಕಲಿತರೂ ಪುರಂದರದಾಸರು ರಚಿಸಿದ ಪಿಳ್ಳಾರಿ ಗೀತೆಗಳನ್ನು ಎಲ್ಲರೂ ಕಡ್ಡಾಯವಾಗಿ ಕಲಿಯುತ್ತಾರೆ. ಪಿಳ್ಳೆ ಎಂದರೆ ಪುಟ್ಟದು ಸಣ್ಣದು ಎಂದು ಅರ್ಥ. ಪುಟ್ಟ ಗಣಪನಿಗೆ ಪಿಳ್ಳಾರಿ ಗಣಪನೆಂದೂ ಹೆಸರಿದೆ. ಗೇಯ ಪ್ರಬಂಧಗಳಲ್ಲಿ ಗಣಪತಿ ಸ್ತುತಿಯಿಂದ ಪ್ರಾರಂಭವಾಗುವ ಚಿಕ್ಕ ಖಂಡಗಳಿಂದ

ಜೋಡಿಸಲಾದ ಮಲಹರಿ ರಾಗದ ನಾಲ್ಕು ಗೀತೆಗಳೇ ಪಿಳ್ಳಾರಿ ಗೀತೆಗಳು. ಹರಿದಾಸರ ಕೀರ್ತನೆಗಳನ್ನು ಪದಗಳೆಂದೂ ಕರೆಯುವ ವಾಡಿಕೆ ಇದೆ. ಜಯದೇವನ ಕಾಲದಲ್ಲಿ ಕಂಡುಬಂದ ಪಲ್ಲವಿ-ಚರಣಗಳುಳ್ಳ ದ್ವಿಧಾತು ಪ್ರಬಂಧವಾದ ಅಷ್ಟಪದಿಗಳು ಮುಂದೆ ಹರಿದಾಸರ ಕಾಲಕ್ಕೆ ಮೊದಲ ಪಲ್ಲವಿ-ಚರಣದೊಂದಿಗೆ ಅನುಪಲ್ಲವಿ ಎಂಬ ಮತ್ತೊಂದು ಧಾತು ಸೇರ್ಪಡೆಗೊಂಡು ತ್ರಿಧಾತು ಪ್ರಬಂಧವಾಯಿತು. ಸಂಗೀತ ರಚನೆಗೆ ಪ್ರಬಂಧ ವೆಂದು ಹೆಸರು.

ಅನ್ನಮಾಚಾರ್ಯರು (೧೫-೧೬ನೇ ಶತಮಾನ) ಬಹುತೇಕ ಸಂಕೀರ್ತನೆಗಳನ್ನು ದ್ವಿಧಾತು ಶೈಲಿಯಲ್ಲಿ ರಚಿಸಿದ್ದಾರೆ. ಪಲ್ಲವಿಯೊಂದಿಗೆ ಅನುಪಲ್ಲವಿ ಯನ್ನೂ ಸಹ ಅಪರೂಪವಾಗಿ ಇವರ ರಚನೆಯಲ್ಲಿ ಕಾಣಬಹುದಾಗಿದೆ. ದಾಸರ ದೇವರ ನಾಮಗಳಲ್ಲಿ ಪಲ್ಲವಿ-ಅನುಪಲ್ಲವಿ ಮತ್ತು ಚರಣಗಳೆಂಬ ವಿಂಗಡಣೆಗಳಿವೆ. ನಿಜಗುಣ ಶಿವಯೋಗಿಗಳ ಕೆಲವು ಹಾಡುಗಳಲ್ಲಿಯೂ ಈ ಬಗೆಯ ವಿಂಗಡಣೆಗಳಿವೆ. ಹರಿದಾಸರ ತ್ರಿಧಾತು ಪ್ರಬಂಧಗಳು ಮುಂದಿನ ಪೀಳಿಗೆಯ ಪ್ರಸಿದ್ಧ ವಾಗ್ಗೇಯಕಾರರ ಕೃತಿ ರಚನೆಗಳಿಗೆ ಮಾರ್ಗಸೂಚಕಗಳಾಗಿರಬಹುದೆಂದು ಊಹಿಸಬಹುದು. ಏಕೆಂದರೆ ಮೊದಲು ರಚಿತವಾದ ಕೀರ್ತನೆ ಅಥವಾ ಪದಗಳಿಗೂ, ನಂತರದಲ್ಲಿ ಬಳಕೆಗೆ ಬಂದ ಕೃತಿಗಳಿಗೂ ಧಾತುವಿನ ದೃಷ್ಟಿಯಿಂದ ವ್ಯತ್ಯಾಸವಿಲ್ಲ. ಕನ್ನಡದ ವಿಶಿಷ್ಟ ಪ್ರಬಂಧಗಳಾದ ಗೀತ, ಠಾಯ, ಸುಳಾದಿ ವೃತ್ತನಾಮ, ಸೋಬಾನೆಪದ, ಉಗಾಭೋಗ ಇವೇ ಮೊದಲಾದವು ಸಂಗೀತ ಸಾರಸ್ವತ ಲೋಕಕ್ಕೆ ದಾಸರ ಅಮೂಲ್ಯ ಕೊಡುಗೆಗಳಾಗಿವೆ. ಕನಕದಾಸರ ಮುಂಡಿಗೆ ಎಂಬ ವಿಶಿಷ್ಟ ಅಪೂರ್ವ ಸಂಗೀತ ರಚನೆ ಇನ್ಯಾವ ಸಂಗೀತ ಪ್ರಕಾರದಲ್ಲಿಯೂ ಕಂಡು ಬರುವುದಿಲ್ಲ. ಇದು ಕನ್ನಡ ಭಾಷೆಗೇ ಸೀಮಿತ.

ಕರ್ಣಾಟಕ ಸಂಗೀತ ಪರಂಪರೆಯ ಇತಿಹಾಸದಲ್ಲಿ ಹರಿದಾಸ ವಾಙ್ಮಯವು ಮಹತ್ತಾದುದು. ದಾಸರ ಅನೇಕ ಕೀರ್ತನೆಗಳಲ್ಲಿ ಸಂಗೀತಶಾಸ್ತ್ರದ ಲಕ್ಷ್ಯ ಹಾಗೂ ಲಕ್ಷಣ ಗಳಿಗೆ ಸಂಬಂಧಿಸಿದ ಅನೇಕ ಹೇಳಿಕೆಗಳನ್ನು ಕಾಣಬಹುದು. ಉದಾಹರಣೆಗೆ,

ತಾಳಬೇಕು ತಕ್ಕ ಮೇಳಬೇಕು
ಗಳ ಶುದ್ಧಿ ಇರಬೇಕು ತಿಳಿದು ಹೇಳಲು ಬೇಕು
ಕಳವಳ ಬಿಡಬೇಕು ಕಳೆಮೊಗ ಇರಬೇಕು
ಯತಿ ಪ್ರಾಸ ಇರಬೇಕು ಗತಿಗೆ ನಿಲಿಸಬೇಕು
ರತಿಪತಿ ಪಿತನೊಳು ಅತಿಮೋಹವಿರಬೇಕು
ಹರಿದಾಸನಾಗಲು ಬೇಕು ಹರುಷ ಹೆಚ್ಚಲು ಬೇಕು
ಪುರಂದರ ವಿಠಲನಲ್ಲಿ ಸ್ಥಿರಚಿತ್ತವಿರಬೇಕು

ಸರಳಗನ್ನಡದ ಆಡುಭಾಷೆಯಲ್ಲಿ ಸುಲಭ ಧಾತುವಿನಿಂದ (ಸ್ವರ) ನಿಬದ್ಧವಾದ ಶ್ರೀ ಸಾಮಾನ್ಯನಿಗೆ ಬೋಧಪ್ರದವಾದ, ವೇದೋಪನಿಷತ್ತುಗಳ ತಿರುಳಿನಿಂದೊಡಗೂಡಿದ ಸಹಸ್ರಾರು ಕೀರ್ತನೆಗಳನ್ನು ರಚಿಸಿರುವ ದಾಸರು ಲೋಕಕ್ಕೆ ಧರ್ಮ-ನೀತಿಗಳ ಮಾರ್ಗದರ್ಶಕರಾಗಿದ್ದಾರೆ.

ವೆಂಕಟಮುಖಿ (೧೭ನೇ ಶತಮಾನ) ಎಂಬ ಲಕ್ಷ್ಯ-ಲಕ್ಷಣ ಪಂಡಿತನ ತಂದೆ ಗೋವಿಂದದೀಕ್ಷಿತ ಪ್ರತಿಭಾವಂತ ಹಾಗೂ ಕನ್ನಡಿಗ. ಈತ ರಘುನಾಥ ನಾಯಕನ ಮಂತ್ರಿಯಾಗಿದ್ದು ಆತನ ಹೆಸರಿನಲ್ಲಿ 'ಸಂಗೀತಸುಧಾ' ಎಂಬ ಲಕ್ಷಣ ಗ್ರಂಥವನ್ನು ಬರೆದಿದ್ದಾನೆ. ದೀಕ್ಷಿತರ ಮಗ ವೆಂಕಟೇಶ್ವರ ದೀಕ್ಷಿತ ಅಥವಾ ವೆಂಕಟಮುಖಿ 'ಚತುರ್ದಂಡಿ ಪ್ರಕಾಶಿಕೆ' ಎಂಬ ಸಂಗೀತ ಶಾಸ್ತ್ರಗ್ರಂಥದ ಕರ್ತೃ. ಈ ಗ್ರಂಥವನ್ನು ವೆಂಕಟಮುಖಿಯು ತಂಜಾವೂರಿನ ರಾಜ ವಿಜಯರಾಘವನ ಕೋರಿಕೆಯ ಮೇರೆಗೆ ರಚಿಸಿದುದಾಗಿ ಆ ಗ್ರಂಥದ ಪ್ರತಿಯೊಂದು ಪ್ರಕರಣದ ಸಮಾಪ್ತಿ ವಚನದಲ್ಲಿ ಹೇಳಿದ್ದಾನೆ. ರಾಗ ಸ್ವರೂಪದ ನಾಲ್ಕು ಮುಖ್ಯ ಮಾರ್ಗಗಳಾದ ಸ್ಥಾಯಿ, ಆರೋಹಿ, ಅವರೋಹಿ ಮತ್ತು ಸಂಚಾರಗಳನ್ನು ಪ್ರಚುರಪಡಿಸುವ ಚತುರ್ದಂಡಿ ಪ್ರಕಾಶಿಕೆ ಹತ್ತು ಅಧ್ಯಾಯಗಳನ್ನು ಹೊಂದಿದೆ. ಈ ಗ್ರಂಥವು ಲಕ್ಷ್ಯ ಸಂಗೀತದ ಮೇಲೆ ಬೆಳಕು ಚೀರುವ ಲಕ್ಷಣ ಗ್ರಂಥ. ಶುದ್ಧ ಮತ್ತು ವಿಕೃತ ಸ್ವರಗಳ ಆಧಾರದ ಮೇಲೆ ನಿರ್ಧರಿಸಲಾದ ೭೨ ಮೇಳ ಪದ್ಧತಿಯು ಎಂದೆಂದಿಗೂ ಲಕ್ಷ್ಯ ಮತ್ತು ಲಕ್ಷಣಭಾಗದಲ್ಲಿ ಶಾಶ್ವತವಾಗಿ ಇರುವಂತೆ ಮಾಡಿದ ವೆಂಕಟಮುಖಿಯ ಕಾರ್ಯಸಾಧನೆ ಸಂಗೀತ ಪ್ರಪಂಚಕ್ಕೆ ಒಂದು ಮೈಲುಗಲ್ಲಾಗಿದೆ.

ಸಂಗೀತ ಕಲೆಗೆ ಮೈಸೂರಿನ ಅರಸರು ನೀಡಿದ ಕೊಡುಗೆ ಹಾಗೂ ಕಲಾಪೋಷಣೆ ಚಿರಸ್ಮರಣೀಯವಾದುದು. ಮುಮ್ಮಡಿ ಕೃಷ್ಣರಾಜ ಒಡೆಯರು (೧೯ನೇ ಶತಮಾನ) ಸಂಗೀತ ಲಕ್ಷ್ಯ-ಲಕ್ಷಣಗಳೆರಡರಲ್ಲೂ ಸಿದ್ಧಹಸ್ತರು. ಇವರು ಸ್ವರ-ಚೂಡಾಮಣಿ ಶ್ರೀ ತತ್ವನಿಧಿ ಮತ್ತು ಸಾರ ಸಂಗ್ರಹ ಭರತ ಎಂಬ ಮೂರು ಗ್ರಂಥಗಳನ್ನು ರಚಿಸಿದ್ದಾರೆ. ಸ್ವರಚೂಡಾಮಣಿಯಲ್ಲಿ ಸಪ್ತ ಸ್ವರಗಳಿಗೆ ೩೨ ಲಕ್ಷಣಗಳನ್ನು ಹೇಳಲಾಗಿದೆ. ಶ್ರೀ ತತ್ವನಿಧಿಯಲ್ಲಿ ನವನಿಧಿಗಳಲ್ಲಿ ಒಂದಾದ ಬ್ರಹ್ಮನಿಧಿಯಲ್ಲಿ ಸಂಗೀತ ಮತ್ತು ನೃತ್ಯಕ್ಕೆ ಸಂಬಂಧಿಸಿದ ವಿಷಯಗಳಿವೆ. ಈ ಗ್ರಂಥದಲ್ಲಿ ಹೇಳಲಾದ ಎಲ್ಲ ರಾಗಗಳಿಗೂ ವರ್ಣಚಿತ್ರಗಳಿರುವುದೇ ಇದರ ವೈಶಿಷ್ಟ್ಯ. 'ಸಾರ ಸಂಗ್ರಹ ಭರತ'ವು ಭರತನಾಟ್ಯಕ್ಕೆ ಸಂಬಂಧಿಸಿದ ಗ್ರಂಥ. ಇದರಲ್ಲಿ ತಾಳಕ್ಕೆ ಸಂಬಂಧಿಸಿದ ವಿವರಣೆಗೆ ಪ್ರಥಮಸ್ಥಾನವನ್ನು ಕೊಡಲಾಗಿದೆ. ಶ್ರೀಜಯಚಾಮರಾಜ ಒಡೆಯರು ಕರ್ನಾಟಕದ ಶ್ರೇಷ್ಠ ವಾಗ್ಗೇಯಕಾರರು. ಇವರು ೯೪ ಕೃತಿಗಳನ್ನು ರಚಿಸಿದ್ದಾರೆ. ಇವರ ರಚನೆಗಳು ಸಂಸ್ಕೃತ ಭಾಷೆಯಲ್ಲಿವೆ. ಒಡೆಯರು ಪುರಾಣ ಪ್ರಸಂಗಗಳನ್ನೂ ಉಪನಿಷತ್ತಿಗೆ ಸಂಬಂಧಿಸಿದ ಅಂಶಗಳನ್ನೂ ತಮ್ಮ ಸಾಹಿತ್ಯದಲ್ಲಿ ಅಳವಡಿಸಿದ್ದಾರೆ.

೨೦-೨೧ನೇ ಶತಮಾನದ ವಿದ್ವನ್ಮಣಿಗಳ ಸಂಗೀತ ಶಾಸ್ತ್ರಗ್ರಂಥಗಳು ಪೂರ್ವಾಚಾರ್ಯರ ಹೇಳಿಕೆಗಳನ್ನೇ ಪುನರುಚ್ಚರಿಸುತ್ತವೆ. ಇದೇ ಶತಮಾನಕ್ಕೆ ಸೇರಿದ ಮೈಸೂರು ವಾಸುದೇವಾಚಾರ್ಯರು ನೂರಾರು ಸಂಗೀತ ಪ್ರಬಂಧಗಳನ್ನು ತೆಲುಗು ಭಾಷೆಯಲ್ಲಿ ರಚಿಸಿದ್ದಾರೆ. ಇಂದು ಪ್ರಸ್ತುತಪಡಿಸುವ ಬಹುತೇಕ ಸಂಗೀತ ಪ್ರಬಂಧ ಪ್ರಕಾರಗಳಾದ ವರ್ಣ, ಕೃತಿ, ಜಾವಳಿ, ತಿಲ್ಲಾನ ಇವೇ ಮೊದಲಾದುವುಗಳಲ್ಲಿ ವಾಸುದೇವಾಚಾರ್ಯರ ಅನೇಕ ರಚನೆಗಳನ್ನು ಕಾಣಬಹುದು. ತಮ್ಮ ಜೀವಿತಾವಧಿಯಲ್ಲಿಯೇ ತಮ್ಮ ರಚನೆಗಳನ್ನು ಗಾಯಕ ವಿದ್ವನ್ಮಣಿಗಳು ಪ್ರಸ್ತುತಪಡಿಸುತ್ತಿದ್ದುದನ್ನು ಕೇಳಿದ ಹೆಗ್ಗಳಿಕೆ ಇವರಿಗೆ ಸಲ್ಲುತ್ತದೆ.

ಸಂಪೂರ್ಣ ದಕ್ಷಿಣ ಭಾರತದ ಸಂಗೀತ ಪರಂಪರೆಯನ್ನು ಕರ್ಣಾಟಕ ಸಂಗೀತ ಎಂದು ಗುರುತಿಸುವುದರಲ್ಲಿ ಕನ್ನಡಿಗರ ಪಾತ್ರ ಹಿರಿದು. ಕ್ರಿ.ಶ. ಸುಮಾರು ೭ನೆಯ ಶತಮಾನದಿಂದ ಕ್ರಿ.ಶ. ೧೯ನೆಯ ಶತಮಾನದವರೆಗೂ ಓತಪ್ರೋತವಾಗಿ ಹರಿದು ಬಂದ ಕನ್ನಡಿಗರಿಂದ ರಚಿತವಾದ ಸಂಗೀತ ಲಕ್ಷ್ಯ-ಲಕ್ಷಣ ಗ್ರಂಥಗಳು ಸಂಗೀತ ಶರಧಿಯ ಎಂದಿಗೂ ಬತ್ತದ ನದಿಗಳು.

ಆಕರಗಳು

೧. **ಕರ್ಣಾಟಕ ಸಂಗೀತವಾಹಿನಿ:** ಡಾ. ರಾ. ಸತ್ಯನಾರಾಯಣ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು ೨೦೦೧.

೨. **ಮತಂಗಮುನಿ, ಬೃಹದ್ದೇಶಿ:** ಸಂಪಾದಕರು ಡಾ. ರಾ. ಸತ್ಯನಾರಾಯಣ ಕನ್ನಡ ವಿಶ್ವವಿದ್ಯಾಲಯ ಹಂಪಿ ೧೯೯೮.

೩. **ಗಾನಕಲಾ ಮಂಜರಿ:** ಸಂಪಾದಕರು ಶ್ರೀ ಜಿ.ವಿ.ಕೆ. ಶಾಸ್ತ್ರಿ, ಸಂಪುಟಗಳು ೧-೨, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ೧೯೯೫.

೪. **ಶಾರ್ಙ್ಗದೇವ, ಸಂಗೀತರತ್ನಾಕರ:** ಸಂಪಾದಕರು ಪಂಡಿತ. ಎಸ್. ಸುಬ್ರಹ್ಮಣ್ಯ ಶಾಸ್ತ್ರಿ, ಮದ್ರಾಸು ೧೯೪೩.

೫. **ರಾಮಾಮಾತ್ಯ, ಸ್ವರಮೇಳಕಲಾನಿಧಿ:** ಸಂಪಾದಕರು ಎಂ.ಎಸ್. ರಾಮಸ್ವಾಮಿ ಅಯ್ಯರ್ ಮದ್ರಾಸು ೧೯೩೨.

೬. **ನಿಜಗುಣ ಶಿವಯೋಗಿ, ವಿವೇಕ ಚಿಂತಾಮಣಿ:** ಸಂಪಾದಕರು ಪಂ. ನಾಗಭೂಷಣಶಾಸ್ತ್ರಿ ಬೆಂಗಳೂರು ೧೯೮೫.

೭. **ಪುಂಡರೀಕ ವಿಠ್ಠಲ. ಪುಂಡರೀಕಮೂಲ:** ಸಂಪಾದಕರು ಡಾ. ರಾ. ಸತ್ಯನಾರಾಯಣ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು ೧೯೮೬.

೮. **ವೆಂಕಟಮುಖಿ, ಚತುರ್ದಂಡಿ ಪ್ರಕಾಶಿಕೆ:** ಸಂಪಾದಕರು ಮ್ಯೂಸಿಕ್ ಅಕಾಡೆಮಿ, ಮದ್ರಾಸು ೧೯೮೬.

❐



ಬದಲಾಗುತ್ತಿರುವ ಕಲೆ

■ ಪ್ರೊ. ಎಂ.ಎಚ್. ಕೃಷ್ಣಯ್ಯ

ಆರೇಳು ವರ್ಷಗಳ ಹಿಂದೆ, ಕುವೆಂಪು ಶತಮಾನೋತ್ಸವ ಸಂದರ್ಭದಲ್ಲಿ ಒಂದು ವಿನೂತನ, ವಿಶಿಷ್ಟ ಪ್ರಯೋಗವೆಂದು ಕುವೆಂಪು ಸಾಹಿತ್ಯದಿಂದ ಆರಿಸಿದ ಭಾಗಗಳನ್ನು (ಕಥೆ, ಪ್ರಬಂಧ ಕಾದಂಬರಿ, ನಾಟಕ, ಕವನ, ಶ್ರೀರಾಮಾಯಣದರ್ಶನಂ ಮಹಾಕಾವ್ಯ) ನಲವತ್ತೈದು ಕಲಾವಿದರಿಗೆ ಇತ್ತು, ಸಾಹಿತ್ಯ-ಶಾಬ್ದಿಕ ಮಾಧ್ಯಮದ ಆ ರಚನೆಗಳಿಗೆ, ದೃಶ್ಯಮಾಧ್ಯಮದಲ್ಲಿ (ವರ್ಣಚಿತ್ರ) ಸೃಜನಶೀಲ ಪ್ರತಿಕ್ರಿಯೆ ವ್ಯಕ್ತಪಡಿಸಲು ಕೇಳಿಕೊಂಡಾಗ, ಅದರ ಫಲಿತ ಒಂದು ಅಪೂರ್ವ ಹೃದಯ ಸಂವಾದವಾಯಿತು. ವೈವಿಧ್ಯಪೂರ್ಣ ಶೈಲಿ, ದೃಷ್ಟಿಯ ರಚನೆಗಳು, ಪ್ರಸ್ತಾವನೆ ವರ್ಣಚಿತ್ರಗಳು, ಚಿತ್ರಟಿಪ್ಪಣಿ ಸಮೇತ ಪುಸ್ತಕ ಪ್ರಕಟವಾಯಿತು. ಅದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವಿಶಿಷ್ಟ ಕೊಡುಗೆಯಾಯಿತು. ನನ್ನ ಸಹೋದ್ಯೋಗಿ ಪ್ರಾಧ್ಯಾಪಕರಿಗೆ ಒಂದು ಪ್ರತಿ ಕೊಟ್ಟು ಅಲ್ಲಿನ ಚಿತ್ರಗಳನ್ನು ತೋರಿಸಿದಾಗ, ಕೆಲವು ಚಿತ್ರಗಳನ್ನು ನೋಡಿ, ಇದೇನು ಕಲೆಯೇ ಎಂದರು. ಅವರಿನ್ನೂ ರವಿವರ್ಮನ ಕಾಲದಲ್ಲಿಯೇ ಇದ್ದಂತೆ ತೋರಿತು. ಕೆಲವು ಚಿತ್ರಗಳ ಸ್ವಾರಸ್ಯ ಅಭಿವ್ಯಕ್ತಿ ವೈಶಿಷ್ಟ್ಯ ವಿವರಿಸಿದರೂ, ಅವರ ಮನಸ್ಸಿನ ಮುಚ್ಚಿದ ಬಾಗಿಲನ್ನು ತೆರೆಯಲಾಗಲಿಲ್ಲ. ಇಂದಿಗೂ ಬಹುಜನರಿಗೆ ಕಲೆ ಎಂದರೆ ಮನಮೋಹಕ, ಆಕರ್ಷಕ, ಆಪ್ಯಾಯಮಾನ ಚಿತ್ರಗಳೆಂದೇ ನಂಬಿಕೆ ಇದೆ.



ಇತ್ತೀಚೆಗೆ ಒಂದು ಮಿಂಚಂಚೆ(ಇ.ಮೇಲ್) ಬಂದಿತ್ತು. ನನ್ನ ಕಲಾವಿದ ಗೆಳೆಯರು ಮೈಸೂರಿನ ಕಲಾಪ್ರದರ್ಶನದಲ್ಲಿ ನಡೆದ

ಸಂಗತಿ ಬಗ್ಗೆ ಪ್ರಸ್ತಾಪಿಸಿ, ಒಂದು ಲೇಖನವನ್ನು ಜೊತೆಗೆ ಕಳಿಸಿದ್ದರು. ಅಲ್ಲಿ ಪ್ರದರ್ಶಿತವಾಗಿದ್ದ ಕಲಾಕೃತಿಗಳ ಅರ್ಥವೇನು, ಏನೂ ತಿಳಿಯುತ್ತಿಲ್ಲ ಎಂದು ಕಲಾವಿದರೊಬ್ಬರನ್ನು ಕೇಳಿದಾಗ, ಅವರಿಗೂ ಅದರ ಅರ್ಥ ವಿವರಿಸಲು ಆಗಲಿಲ್ಲ ಎಂದು ಬರೆದಿದ್ದರು. ಕನ್ನಡದಲ್ಲಿ ಕಲೆಯ ಬಗ್ಗೆ, ಪಂಥ, ಶೈಲಿ, ಬದಲಾದ ಕಲಾದೃಷ್ಟಿಗಳ ಬಗ್ಗೆ ಗ್ರಂಥಗಳು ಬರಬೇಕಿವೆ, ಅಂಥ ಪ್ರಯತ್ನ ಮಾಡಿ ಎಂದಿದ್ದರು. ರಾಜ್ಯ ಲಲಿತಕಲಾ ಅಕಾಡೆಮಿ ಕೆಲವು ಪುಸ್ತಕಗಳನ್ನು ಪ್ರಕಟಿಸಿದೆ. ಆದರೆ ಅವು ಸಾಲವು ಎನಿಸುತ್ತೆ. ಆದಿಮಾನವನ ಕಾಲದಿಂದಲೂ ಕಲೆ ಸಂಕೀರ್ಣವಾದದ್ದೇ. ಸಾಹಿತ್ಯ ಕೃತಿಗಳಲ್ಲಿ ಅರ್ಥ ಗ್ರಹಿಸುವಂತೆ ದೃಶ್ಯಕಲೆಯ ಅರ್ಥ ಅಲ್ಲ. ಸುಂದರ ಆಕೃತಿಯ ಚಿತ್ರಗಳು, ವ್ಯಕ್ತಿ ಚಿತ್ರಗಳು ನಿಸರ್ಗ ದೃಶ್ಯಗಳನ್ನು ನೋಡಿ ಮೆಚ್ಚುವುದಷ್ಟೆ ಕಲೆ ಎಂದು ಇಂದು ಭಾವಿಸುವಂತಿಲ್ಲ. ಒಂದು ಕಲಾರಚನೆ ಕಟ್ಟಿಕೊಡುವ ಸಮಗ್ರ ಅನುಭವ ಮುಖ್ಯವಾಗುತ್ತದೆ. ಮುಂದೆ ಕೆಲವು ವಿವರಣೆ ನೀಡಿದೆ. ಗೊಂಬ್ರಿಜ್ ಎನ್ನುವ ಕಲಾವಿಮರ್ಶಕರು ಹೇಳಿರುವ ಈ ಮಾತುಗಳು ಗಮನಾರ್ಹ. "Looking is to seeing what listening is to hearing... The eye is not a passive but an active instrument, serving a mind that must be selective if it is not to be swamped by flood of indigestible messages. Seeing is always looking for something, comparing, interpreting, probing and disregarding. Consequently, we cannot learn to see in the abstract. Perception as a skill will always involve the whole person and the whole mind." (Ideals and Idols. p. 199). ನೋಟ ಮತ್ತು ಗ್ರಹಿಕೆಯ ಈ ಸಂಕೀರ್ಣ ಪ್ರಕ್ರಿಯೆಯಿಂದಾಗಿಯೇ ಸಾಹಿತ್ಯದಂತೆ ಚಿತ್ರದಲ್ಲಿ ಅರ್ಥ ಹುಡುಕುವ ಪ್ರಯತ್ನ ವ್ಯರ್ಥವಾಗುತ್ತದೆ. ಇತ್ತೀಚೆಗೆ ಕಲಾವಿದರು ತಮ್ಮ ಕೃತಿಗಳಿಗೆ, ಪ್ರತಿಯೊಂದಕ್ಕೆ ಶೀರ್ಷಿಕೆ ನೀಡುವುದನ್ನು ಕೈಬಿಟ್ಟಿದ್ದಾರೆ. ಕಾರಣ ಪ್ರತಿಯೊಬ್ಬ ನೋಡುಗನೂ ತನ್ನ ಅನುಭವದ ಹಿನ್ನೆಲೆಯಲ್ಲಿ ಚಿತ್ರದಲ್ಲಿ ಅಭಿವ್ಯಕ್ತ ಅನುಭವವನ್ನು ವಿಭಿನ್ನವಾಗಿ ಗ್ರಹಿಸುವ ಸಾಧ್ಯತೆ ಇರುವುದು. ಈಗ ಜಾನ್ ಬರ್ಜರ್‌ನ ಪುಟ್ಟದಾದರೂ ಅಮೂಲ್ಯ ಚಿತ್ರ ಪಠ್ಯಗ್ರಂಥ ಕನ್ನಡದಲ್ಲಿ ಲಭ್ಯವಾಗಿದೆ. ಎಚ್.ಎ. ಅನಿಲ್‌ಕುಮಾರ್ ಅನುವಾದಿಸಿ, ಮೂಲದಷ್ಟೇ ಸುಂದರವಾಗಿ ಚಿತ್ರ ಸಮೇತ ಪ್ರಕಟಿಸಿದ್ದಾರೆ. ಗ್ರಂಥ: Ways of Seeing, ನೋಡುವ ಬಗೆ. ಚಿತ್ರವನ್ನು ಗ್ರಹಿಸುವ ಏಕೈಕ ಬಗೆಯಲ್ಲ, ವಿಭಿನ್ನ ಬಗೆಗಳು ನೋಡುವ ಮತ್ತು ಕಾಣುವ ಅಂಶವೂ ಸೇರಿದಂತೆ. ಸಾಹಿತ್ಯ ಓದಲು ಭಾಷೆ ಕಲಿಯಬೇಕಲ್ಲವೆ? ನೋಡಲು ಚಿತ್ರಭಾಷೆಯ, ದೃಶ್ಯಭಾಷೆಯ ಅಲ್ಪಸ್ವಲ್ಪ ಪೂರ್ವಸಿದ್ಧತೆ ಅರಿವೂ ಅಗತ್ಯವಾಗುತ್ತದೆ.

ಚಿತ್ರಕಲಾ ಪರಿಷತ್ತಿನಲ್ಲಿ ಮಾರ್ಚ್, ೨೦೦೬ರಲ್ಲಿ ನಡೆದ ಒಂದು ಕಲಾಪ್ರದರ್ಶನ ಕ್ಯಾಟಲಾಗ್‌ನಲ್ಲಿ ಒಂದು ಸ್ವಾರಸ್ಯಕರ ಸಂಭಾಷಣೆ. ಅದು ಯಥಾವತ್ತಾಗಿ ಹೀಗಿದೆ:

Q. Are you an artist?

A. Yes.

Q. Are you a sculptor, paintmaker or painter?

A. It is hard to categorise these days, I am an artist, that's it.

ಕುತೂಹಲಕಾರಿ ಸಂಭಾಷಣೆ, ಆದರೆ ಸಾಂಕೇತಿಕವೂ ಆಗಬಲ್ಲುದು. ಈ ಸಂಭಾಷಣೆ ಇಂದಿನ ಕಲೆಯ ಕ್ಷೇತ್ರದ ವಾಸ್ತವ ಸ್ಥಿತಿಯನ್ನು ತಿಳಿಸುತ್ತೆ. ಕೆಲವರಿಗೆ ಇದು ಗೊಂದಲಮಯ ಸ್ಥಿತಿ ಎನಿಸಬಹುದು. ಆದರೆ ವಾಸ್ತವ ಸ್ಥಿತಿಯನ್ನು ಬಿಂಬಿಸುತ್ತದೆ. 'ಕಲಾವಿದ' ಎಂಬ ಶಬ್ದಕ್ಕೆ ಇಂದು ಹೊಸ ಹೊಸ ಅರ್ಥ, ಸಾಹಚರ್ಯಗಳು ಬಂದಿವೆ. ಇಂದು ವರ್ಣಚಿತ್ರಕಾರರು ಕಿರುಚಲನಚಿತ್ರ ನಿರ್ಮಿಸುತ್ತಿದ್ದಾರೆ. ಶಿಲ್ಪಿಗಳು ವಾಸ್ತು ನಿರ್ಮಾಣಕ್ಕೂ ಎಡೆಹಾಯ್ದಿದ್ದಾರೆ, ಕಲಾಗ್ಯಾಲರಿಗಳ ಸ್ವರೂಪವೂ ಬದಲಾಗುತ್ತಿದೆ. ವಿಡಿಯೊ ಅಥವಾ ಡಿಜಿಟಲ್ ಕಲೆ, ಅಂತರಜಾಲ ಗ್ಯಾಲರಿಯಂತೆ ಮಾರ್ಪಟ್ಟಿದೆ, ಆ ಸ್ಥಾನ ಆಕ್ರಮಿಸುತ್ತಿದೆ.

ಇಂದು ಕಲೆಯ ಕ್ಷೇತ್ರದಲ್ಲಿ ಆಗಿರುವ, ಆಗುತ್ತಿರುವ ಬದಲಾವಣೆಗಳನ್ನು ಹೀಗೆ ಗುರುತಿಸಬಹುದು:

೧. ಶುದ್ಧ ಕಲೆ ಮತ್ತು ಕರಕುಶಲ ಕಲೆಗಳ ನಡುವಣ ವ್ಯತ್ಯಾಸ, ಅಂತರ ಮರೆಯಾಗಿದೆ. ಕಾಲಿಂಗ್‌ವುಡ್, 'ದಿ ಪ್ರಿನ್ಸಿಪಲ್ಸ್ ಆಫ್ ಆರ್ಟ್'ನಲ್ಲಿ ಪಟ್ಟಿ ಮಾಡಿದ ವ್ಯತ್ಯಾಸಗಳು ಇಂದು ಅರ್ಥ ಕಳೆದುಕೊಂಡಿವೆ.

೨. ಸೌಂದರ್ಯ ಪರಿಕಲ್ಪನೆಯಲ್ಲೆ ಬಹಳಷ್ಟು ದೃಷ್ಟಿ ಬದಲಾಗಿದೆ.

೩. ಚಿತ್ರಕಲೆ, ಶಿಲ್ಪಕಲೆ, ವಾಸ್ತು, ಮುಂತಾದ ಕಲಾಪ್ರಕಾರಗಳ ನಡುವಣ ಅಂತರ ಅಳಿಸಿಹೋಗಿದೆ. ಮೂಲಕೃತಿ ಮತ್ತು ಅನುಕೃತಿ ಎಂಬ ವ್ಯತ್ಯಾಸವೂ ಇಲ್ಲ. ಇದು ಬೇರೆಯೇ ಚಿಂತನೆಗೆ ಎಡೆಗೊಟ್ಟಿದೆ.

೪. ಕಲಾಸೃಷ್ಟಿ, ಕಲಾಪ್ರದರ್ಶನಗಳ ಪರಿಕಲ್ಪನೆಯೂ ಬದಲಾಗಿದೆ. ಉದಾ: ಸ್ಥಾಪನಾಕಲೆ, ಭೂಮಿಕಲೆ, ಸ್ಥಳ ನಿರ್ದಿಷ್ಟ ಕಲೆ (site specific art), ಸ್ವೀಕರಣ ಕಲೆ (Appropriation art), ಫಿಲ್ಮ್ ಮತ್ತು ವಿಡಿಯೊ ಕಲೆ, ಡಿಜಿಟಲ್ ಕಲೆ ಅಭಿನೀತ ಕಲೆ (performance art), ಸ್ಥಳಾಂತರ ಕಲೆ (displacement art) ಬಾಡಿ ಆರ್ಟ್ ಇತ್ಯಾದಿ.

ಈ ಮೇಲಿನ ಕಲಾಪ್ರಕಾರ ವೈವಿಧ್ಯವನ್ನು ಗಮನಿಸಿದಾಗ, ಆಂಥೊನಿ ಜೂಲಿಯಸ್ ತನ್ನ 'ಟ್ರಾನ್ಸ್‌ಗ್ರೆಸೆನ್ಸ್ – ದಿ ಅಫೆನ್ಸಸ್ ಆಫ್ ಆರ್ಟ್'ನಲ್ಲಿ ಹೇಳಿರುವ ಮಾತುಗಳು ಗಮನಾರ್ಹ ಎನಿಸುತ್ತದೆ. ಆತನ ಅಭಿಪ್ರಾಯ:

> "Circulating to-day in the artworld are a plurality of aesthetics. a multiplicity of art practices... There are no agreed principles by which art works may be made and judged; there is no umbrella-aesthetic under which works and their audiences may shelter. This is a consequence, in part, of the transgressive aesthetics itself. It is, in a sense, both an aesthetic and an anti aesthetic."

ಈ ಅಭಿಪ್ರಾಯವನ್ನು ಸಮರ್ಥಿಸುವವರೂ, ವಿರೋಧಿಸುವವರೂ ಇದ್ದಾರೆ. ಈ ಬಹುತ್ವ, ಅನೇಕತ್ವ ದೃಷ್ಟಿ ಮತ್ತು ಈ ವಿರೋಧೀ ಸೌಂದರ್ಯ ಮೀಮಾಂಸೆಯ

ಪರಿಕಲ್ಪನೆಗಳು ಎಲ್ಲಿಗೆ ಒಯ್ಯಬಲ್ಲವೆಂಬ ಸಂದೇಹ ಒಂದು ಕಡೆಯಾದರೆ, ಕೆಲವು ಧೈರ್ಯಶಾಲಿ ಕಲಾವಿದರು ಸಂಪ್ರದಾಯ, ಪರಂಪರೆಗಳನ್ನು ವಿಶ್ಲೇಷಿಸಿ, ಪರೀಕ್ಷಿಸಿ ನಿರಾಕರಿಸಿ, ಕಲೆಯ ಹೊಸ ಸಾಧ್ಯತೆಗಳನ್ನು ಅರಸುತ್ತಾರೆ ಎಂಬ ಸಮರ್ಥನೆಯೂ ಇದೆ. ಈ ಕಲಾವಿದರ ರಚನೆಗಳು–ನಮ್ಮ ಬಗೆಗಿನ ಸತ್ಯವನ್ನು, ನಮ್ಮ ಇಂದಿನ ಜಗತ್ತಿನ ವಾಸ್ತವವನ್ನು, ಕಲೆಯ ಬಗೆಗಿನ ದೃಷ್ಟಿಯನ್ನು ಅನಾವರಣಗೊಳಿಸುವ ಮೂಲಕವೇ ನಮ್ಮನ್ನು ಕಾಡುತ್ತವೆ. ಈಗ ಬಹುತ್ವ, ಬಹುಮಾರ್ಗ–ಶೈಲಿ, ಅನೇಕತೆ, ಅನೇಕ ದೃಷ್ಟಿ ಏಕಕಾಲದಲ್ಲಿ ಕಾಣಬರುತ್ತಿವೆ. ಇಂದಿನ ಅಭಿವ್ಯಕ್ತಿ ಸ್ವಾತಂತ್ರ್ಯ ನಿಯಂತ್ರಣ ರಹಿತವಾಗಿದೆ ಮುಕ್ತವಾಗಿದೆ. ಇದರ ಪರಿಣಾಮವಾಗಿ ಕೆಲವೊಮ್ಮೆ ಬದ್ಧದೃಷ್ಟಿಯವರಿಗೆ ಮುಜುಗರ ಉಂಟುಮಾಡಬಹುದು.

ಈ ಎಲ್ಲ ಬಹುತ್ವದ ಹಿಂದೆ ಮೂರು ತಾತ್ವಿಕ ಅಂಶಗಳನ್ನು ಗುರುತಿಸಬಹುದಾಗಿದೆ. ೧. ಪಾರಂಪರಿಕವಾಗಿ ಬಂದಿದ್ದ ಸೌಂದರ್ಯ ಪರಿಕಲ್ಪನೆ, ಕಲಾ ಸಿದ್ಧಾಂತಗಳ ವಿರೋಧ. ಇದೊಂದು ಬಗೆಯ ಪ್ರತಿಭಟನೆ. ೨: ಸ್ಥಳೀಯ ಜಾಗತಿಕ ವ್ಯವಸ್ಥೆಗಳ ವಿರುದ್ಧ, ಅನ್ಯಾಯ ಅಸಮಾನತೆಗಳ ವಿರುದ್ಧ ಎತ್ತಿದ ದನಿ. ಇದೊಂದು ಬಗೆಯ ಪ್ರತಿಭಟನೆ, ಬಂಡಾಯ ಧ್ವನಿ. ೩: ಶತಶತಮಾನಗಳಲ್ಲಿ ಆಗದಿದ್ದ ದೃಷ್ಟಿ ಪಲ್ಲಟ. ಕಲೆಯನ್ನು ರಸಗೋಪುರದಿಂದ ಸಾಮಾನ್ಯರೆಡೆಗೆ ಒಯ್ದು, ಅದನ್ನು ಸಮಾಜಮುಖಿಯಾಗಿಸಿದ್ದು ಇಪ್ಪತ್ತನೇ ಶತಮಾನದ ಉತ್ತರಾರ್ಧದ ವಿಶೇಷ, ಕರ್ನಾಟಕದಲ್ಲಿ. ಸಾಂಪ್ರದಾಯಿಕ, ನವೋದಯ ಕಾಲದ ದೃಷ್ಟಿ ಮತ್ತು ಕಲಾರಚನೆಗಳಿಗಿಂತ ಇದು ಭಿನ್ನ. ಈ ಮೂರೂ ಅಂಶಗಳು ಪ್ರತ್ಯೇಕ ಪ್ರತ್ಯೇಕವಾಗಿ ವ್ಯಕ್ತವಾಗುತ್ತವೆ ಎಂದಲ್ಲ, ಒಟ್ಟು ಕಲಾವಿದರ, ಕಲೆಯ ಒಲವು–ನಿಲುವುಗಳ ದೃಷ್ಟಿಯಿಂದ ಈ ವಿಂಗಡನೆ.

೨

ಒಂದು ಸ್ವಾರಸ್ಯಕರವಾದ ಘಟನೆ ನಡೆದು ತೊಂಬತ್ತು ವರ್ಷಗಳೇ ಕಳೆದಿವೆ. ಮಾರ್ಸೆಲ್ ಡುಷಾಂಪ್ ಎಂಬ ಕಲಾವಿದ ೧೯೧೭ರಲ್ಲಿ ಒಂದು ಕಲಾಪ್ರದರ್ಶನದಲ್ಲಿ ತ್ಯಾಜ್ಯಗಳ ಗುಪ್ಪೆಯಲ್ಲಿ ಬಿದ್ದಿದ್ದ ಒಂದು ಪುರುಷ ಮೂತ್ರಿಯನ್ನು (urinal) ತೆಗೆದುಕೊಂಡು ಸ್ವಚ್ಛಗೊಳಿಸಿ, ಅದನ್ನೇ ಒಂದು ಕಲಾಕೃತಿಯೆಂದು ಪ್ರದರ್ಶಿಸಿದ. ಅದಕ್ಕೆ ವ್ಯಂಗ್ಯಪೂರ್ವಕವಾದ ಶೀರ್ಷಿಕೆ ಇತ್ತು, 'fountain' ಎಂದು ಕರೆದ. ಅಂಥವನ್ನು found objects, ready mades ಎಂದ. ವಸ್ತುವಿನ ಸ್ಥಳಾಂತರವೂ ಕಲೆಯಾಯಿತು. (ನಮ್ಮಲ್ಲಿ ಕ್ಯಾಪ್ಟನ್ ರಾಜಾರಾಮ್ ಅವರು ಒಣಮರದ ಕಡ್ಡಿ, ರೆಂಬೆಗಳಿಂದ ದಾರುಶಿಲ್ಪ ಸೃಷ್ಟಿಮಾಡಿದರಲ್ಲವೆ. ಅದೂ ಸ್ಥಳಾಂತರವೆ, ಮುಂದೆ ಇದು ಸ್ಥಾಪನಾ ಕಲೆಗೂ ಕಾರಣವಾಯಿತು. ಕಲಾವಿಮರ್ಶಕರು ಮೆಚ್ಚಿ Fountain ಕೃತಿಯನ್ನು ಹೊಗಳಿದರು. ದಶಕಗಳ ನಂತರ ಡುಷಾಂಪ್ ತಾನು ಹಾಗೆ ಮಾಡಲು ಕಾರಣವೇನು ಎಂಬುದನ್ನು ವಿವರಿಸಿದ. "When I discovered ready mades, I thought to discourage aesthetics. I threw the battle-rack and urinal in their faces and now they admire them for their aesthetic beauty." "ಸ್ವಾರಸ್ಯವೆಂದರೆ ಈತನ urinalನ

ರೂಪವನ್ನು ಅನುಕರಿಸಿ, ಷೆರ್ರಿ ಲೆವೀನ್ ಎಂಬಾಕೆ, ಲೋಹದಲ್ಲಿ ಅದನ್ನು ತಯಾರಿಸಿ ಅದನ್ನು 'ಬುದ್ಧ' ಎಂದು ಶೀರ್ಷಿಕೆ ಕೊಟ್ಟು ಪ್ರದರ್ಶಿಸಿದಳು (೧೯೯೬). ಅದೂ ಪ್ರಸಿದ್ಧವಾಯಿತು. ಪುಷ್ಪಮಾಲಾ ಅವರು ಮರದ ಮೆಟ್ಟು ಜೋಡಿಸಿ, ಹೆಜ್ಜೆಯಾಗಿಟ್ಟು ಕುಂಕುಮ ಚೆಲ್ಲಿ ಪ್ರದರ್ಶಿಸಿದರು. ಶೀಲಾಗೌಡ ಬೆರಣಿಗಳನ್ನು ಒಂದರ ಮೇಲೊಂದು ಜೋಡಿಸಿಟ್ಟು, ಹಿಂದಿನ ಗೋಡೆಯ ಮೇಲೆ ಬೆರಣಿ ತಟ್ಟಿ ಪ್ರದರ್ಶಿಸಿದ್ದಾರೆ.

ಪರಂಪರೆಯಿಂದ ಬಂದ ಸೌಂದರ್ಯದ ಸಿದ್ಧಾಂತಗಳನ್ನೇ ನಿರಾಕರಿಸುವ ಹಲವು ಸೌಂದರ್ಯ ವಿರೋಧಿ (antiaesthetic) ಸಿದ್ಧಾಂತಗಳು ಬಂದಿವೆ. ಅವುಗಳಲ್ಲಿ ಪಾಲ್ ಜ಼ಿಫ್‌ನ ನಿಲುವು ಸ್ವಾರಸ್ಯಕರವಾಗಿದೆ. ಸೂರ್ಯಾಸ್ತವನ್ನು ನೋಡಿ ಸೌಂದರ್ಯಾನುಭವ ಪಡೆಯುತ್ತಾರೆ. ಡಾ ವಿಂಚಿಯ ಕೃತಿ ಕಲೆ ಎನ್ನುತ್ತಾರೆ. ನವಿಲು ಸುಂದರ ಎನ್ನುತ್ತಾರೆ. ಆದರೆ ಸೆಗಣಿಗುಪ್ಪೆ ಏಕೆ ಸುಂದರ ಅಲ್ಲ? ಮೊಸಳೆ ಏಕೆ ಸುಂದರ ಅಲ್ಲ? ಮರಗಿಡ ಸುಂದರ, ಕೊಳಕು ಬಟ್ಟೆ ರಾಶಿ, ಎಂಜಲು ತಟ್ಟೆಗಳು ಅನುಭವ ವಿಷಯವಲ್ಲವೆ ಎನ್ನುತ್ತಾನೆ. "Anything viewed makes demand" ಎಂಬುದು ಅವನ ಅಭಿಪ್ರಾಯ. "The antiaesthetic approach is to alter one's view to see the original litter not as litter, but an object for aesthetic attention: a manifestation of a fundamental factor: **entropy.** One can look upon the disorder of litter as a form of order, a beautiful randomness, a precise display of imprecision." "What is wanted is an harmonious relation between the person and the object." ಶೈಲೇಜ್ ಮುಖರ್ಜಿ ಟಾರು ರಸ್ತೆಯಲ್ಲಿ ಮಲಗಿದ್ದ ದನಗಳನ್ನು ನೋಡಿ, ವರ್ಣ ವೈರುಧ್ಯವನ್ನು ಗಮನಿಸಿ, ಒಂದು ಕಲಾಕೃತಿ ರಚಿಸಿದರು. ನೋಡುವ ದೃಷ್ಟಿಯಲ್ಲಿ ಬದಲಾವಣೆ ಅಗತ್ಯವಾಗುತ್ತದೆ. ನಲವತ್ತರ ದಶಕದಲ್ಲಿ, ನಿಸರ್ಗ ಸೌಂದರ್ಯೋಪಾಸನೆ ನವೋದಯ ಕಾವ್ಯದ ಒಂದು ಲಕ್ಷಣವಾಗಿದ್ದ ಕಾಲದಲ್ಲಿ ಕುವೆಂಪು 'ಗೊಬ್ಬರ' ಕವನ ಬರೆದರು.

"ಗೊಬ್ಬರದ ಮೇಲೆ ಬರೆವುದೆ ಕಬ್ಬಮಂ? ಹಾ
ಕಡುಕಷ್ಟ! ಕಲಿಕಾಲಕೇನೇನು ಬಂದಪುದೊ?
ಸಾಲದೇಂ ಪ್ರಲಯಕಿದೆ ಪೀಠಿಕೆ? ಇನ್ನೇನು
ಕಾರಣಂ ಬೇಕಯ್ಯ ನಿನಗೆ, ತಾಂಡವ ಮೂರ್ತಿ
ಕಲ್ಕ್ಯಾವತಾರವನೆತ್ತಿ ಬರೆ? ಇದಕಿಂತ
ಧರ್ಮವಧೆ ಬೇರುಂಟೆ? ನಿರ್ಮಲ ಸರಸ್ವತಿಯ
ವೀಣೆಯಂ ಶೂದ್ರಂ ಕಸಿದುಕೊಂಡು ಗೊಬ್ಬರದ
ಗುಂಡಿಯನ್ನಗೆಯೆ ಗುದ್ದಲಿಯ ಮಾಡಿಹವಲ್ಲ?
ಕವಿತೆ, ಭೂಪಾಲರರಮನೆಯಲ್ಲಿ ಕೈ ಕೆಸರು
ಮಾಡಿಕೊಳದೆಯೆ ಮೊಸರನುಣುತಿರ್ದ ಪಂಡಿತರ
ದಿವ್ಯ ಜಿಹ್ವಾ ಲಸದ್ರಂಗದಲಿ ಕುಣಿದಾಡಿ

ಸುಳಿದಾಡಿ ನಲಿದಾಡಿದಾ ನೀನು, ಹಾ! ಇಂದು
ಕೊಳೆತು ನಾರುವ ರೈತನೊಡಗೂಡಿ ಒದ್ದಾಡಿ,
ಗಂಧ ಪುನುಗು ಜವಾಜಿ ಕಸ್ತೂರಿಗಳನುಳಿದು
ಸೆಗಣಿಗಂಪಾಘ್ರಾಣಿಪಂತಾಯ್ತೆ...."

ಇಲ್ಲಿ ಕುವೆಂಪು ಬಳಸಿರುವ ಭಾಷೆಯೂ ಗಮನಾರ್ಹ; ಅದೂ ವ್ಯಂಗ್ಯವೇ. ಕಾವ್ಯದ ವಸ್ತು ವಿಷಯ, ಅಧಿಕಾರ, ಸಮಾಜ ವ್ಯವಸ್ಥೆ, ಬದುಕಿನ ಅಂತಃಸತ್ವ, ಕೊನೆಗೆ ಸೌಂದರ್ಯ ದೃಷ್ಟಿ ಎಲ್ಲವನ್ನೂ, ಪಾರಂಪರಿಕ ನಿಲುವನ್ನೂ, ಜಡ ಸಂಪ್ರದಾಯವನ್ನೂ ಪ್ರಶ್ನಿಸಿದ್ದಾರೆ. ಪರಂಪರೆಯಂತೆ ನಡೆಯುವ ಕಾಲದಲ್ಲೆ ಅದರ ವಿರೋಧೀ ನಿಲುವುಗಳೂ ಕಾಲದುದ್ದಕ್ಕೂ ಇದ್ದುದು ಕಲೆಯ, ಕಾವ್ಯದ ಇತಿಹಾಸದಿಂದ ಸ್ಪಷ್ಟ.

೧೯೬೦ರಷ್ಟು ಈಚೆಗೆ ಥಿಯೊಡೋರ್ ಅಡೋರ್ನೊ ಅಸೌಂದರ್ಯೀಕರಣವನ್ನು ವಿರೋಧಿಸಿ ಬರೆದು, ನಿಜವಾದ, ತಮ್ಮ ದೃಷ್ಟಿಯ, ಕಲಾಪರಿಭಾವನೆ ಎಂದರೇನು ಎಂಬುದನ್ನು ವಿವರಿಸಿದರು. ಅದು ಭಾರತೀಯ ರಸಾನುಭವ ಸಿದ್ಧಾಂತಕ್ಕೆ ಹತ್ತಿರದ್ದಾಗಿದೆ.

ನಮ್ಮಲ್ಲಿ ಆರ್.ಎಂ. ಹಡಪದ್ ಅವರು ಗ್ಯಾಲರಿ, ಮ್ಯೂಸಿಯಂ, ಅರಮನೆಗಳಿಂದ ಜನಮನೆಗೆ, ಬೀದಿಗೋಡೆಗೆ ಕಲೆಯನ್ನು ತಂದರು. ಸ್ವಭಾವ, ವ್ಯಕ್ತಿತ್ವ ಪ್ರಕಾಶನಕ್ಕೆ ಆಕೃತಿಗಳನ್ನು ವಿರೂಪಗೊಳಿಸಿ ರಚಿಸಿದರು. ಅನ್ಯಾಯ, ಅಸಮಾನತೆ, ಹಿಂಸೆ ಕ್ರೌರ್ಯಗಳ ವಿರುದ್ಧ ಹಲವು ಕಲಾಕೃತಿ ರಚಿಸಿದರು. ಕೆನ್ ಕಲಾಶಾಲೆಯಲ್ಲಿ ಶಿಷ್ಯರೊಡಗೂಡಿ ಮೂಡಿಸಿದ ಪ್ರಜ್ಞೆ, ಇಂದು ಹೊಸ ಕಾಲದ ಆವಿಷ್ಕಾರಗಳನ್ನು ಬಳಸಿಕೊಂಡು, ಹೊಸ ಸಾಧ್ಯತೆಗಳನ್ನು ತೋರಿದೆ. ಇಷ್ಟಾದರೂ, ಕೇವಲ ಹೊಸತಲ್ಲ ಕೇವಲ ಪ್ರಯೋಗವಲ್ಲ ಸಮಾಂತರವಾಗಿ ಸಾಂಪ್ರದಾಯಿಕ ಕಲೆ, ನವೋದಯ ಕಲೆ (ವ್ಯಕ್ತಿಚಿತ್ರ, ಸ್ಥಿರವಸ್ತು ಚಿತ್ರರಚನೆ ಕಡಮೆಯಾಗುತ್ತಿದ್ದರೂ) ಆಧುನಿಕ ಸಂಕೀರ್ಣ ಕಲಾಪ್ರಕಾರಗಳೊಡನೆ ರೂಢಿಯಲ್ಲಿ ಉಳಿದುಬರುತ್ತಿವೆ, ಉಳಿಯುತ್ತವೆ. ಯುವ ಕಲಾವಿದರು ಇಂದು ಕಲೆಯ ದಿಗಂತವನ್ನು ವಿಸ್ತರಿಸುತ್ತಿರುವುದು, ಕಲಾನುಭವ ಎಂಬುದಕ್ಕೆ ಹೊಸ ವ್ಯಾಖ್ಯಾನ ನೀಡಿರುವುದು ಗಮನ ಸೆಳೆಯುತ್ತಿದೆ. ಬದಲಾಗುತ್ತಿರುವ ಕಲೆಯ ಪ್ರಕಾರಗಳಲ್ಲಿ ಕೆಲವದರ ಕಿಂಚಿತ್ ಪರಿಚಯವನ್ನು ಕೆಲವು ನಿದರ್ಶನಗಳ ಮೂಲಕ ಮುಂದೆ ನೀಡಿದೆ.

೩

ಸಾವಿರಾರು ವರ್ಷಗಳಿಂದ ಚಿತ್ರಕಲೆ ಗುಹೆ, ದೇವಾಲಯ, ಚರ್ಚು, ಅರಮನೆಗಳ ಭಿತ್ತಿಗಳನ್ನು ಭಿತ್ತಿಚಿತ್ರವಾಗಿ, ಸುಂದರ ಚೌಕಟ್ಟಿನ ಕಲಾಕೃತಿಯಾಗಿ ಅಲಂಕರಿಸಿದೆ. ಉಬ್ಬುಶಿಲ್ಪ, ಶಿಲ್ಪಗಳು, ದೇವಾಲಯ, ಅರಮನೆ, ಶ್ರೀಮಂತ ಗೃಹಗಳನ್ನು ಸುಂದರಗೊಳಿಸುತ್ತ ಬಂದಿವೆ. ಇಂತಹ ಪ್ರತ್ಯೇಕಿತ ಸ್ಥಳ ಪವಿತ್ರ, ಗೌರವ ಭಾವನೆ ತರಬಹುದಾದರೂ ಎಲ್ಲೋ ಒಂದೆಡೆ ನಮ್ಮಿಂದ ದೂರ ಎನಿಸಿ ಕಲಾನುಭವಕ್ಕೆ ಧಕ್ಕೆ ತರಬಹುದು. ಇಂದು ಕಲೆ, ಕಲೆಯ ಸೀಮಾರೇಖೆ ಗ್ಯಾಲರಿಯ ಹೊರಕ್ಕೆ ದಾಟಿ ಬಂದಿದೆ. ಕಲೆ ಮತ್ತು ಜೀವನ ಸಂಬಂಧಿತ ಮರುಸಂಬಂಧಗಳ ಹೊಂದಾಣಿಕೆ ನಡೆಯುತ್ತಿದೆ. ಕಲೆ

ಮತ್ತು ಬದುಕು ಇವುಗಳ ಬೆಸುಗೆಯ ಪ್ರಯತ್ನವಾಗುತ್ತಿದೆ. ಹೀಗಾಗಿ ಕಲೆ, ಕಲಾರಚನೆ ವೈಯಕ್ತಿಕ ಸ್ಟುಡಿಯೋ ಪರಂಪರೆಯಿಂದ ಸಾರ್ವಜನಿಕ ಸ್ಥಳಕ್ಕೆ ಬಂದಿದೆ. ಎಲ್ಲರಿಗೂ ತೆರೆದುಕೊಂಡು ಇನ್ನಿಲ್ಲದ ಅನುಭವ, ಅವಕಾಶ ಒದಗಿಸಿದೆ. ವೈಯಕ್ತಿಕ ಮತ್ತು ಸಾಮುದಾಯಿಕ ಅನುಭವ, ಸ್ಥಾಪನಾಕಲೆ, ಸ್ಥಳ ನಿರ್ದಿಷ್ಟ ಕಲೆಯ ಪರಿಕಲ್ಪನೆಗೆ ಈ ದೃಷ್ಟಿ ಕಾರಣ. ಇದನ್ನು ಒಬ್ಬಾತ "the sense of space in active dialogue with the things and people it contains." ಎಂದಿದ್ದಾನೆ.

ಕಲಾವಿದ ಎಂ.ಎಸ್. ಉಮೇಶ್ ಅವರು ಬೆಂಗಳೂರು ನಗರದಿಂದ ಹೊರಗೆ ೨೧ ಕಿ.ಮೀ. ದೂರದ ಕೊಡಿಗೆಹಳ್ಳಿಯಲ್ಲಿ ರೈತರ ಒಪ್ಪಿಗೆಯಿಂದ ಜಮೀನನ್ನು ಪಡೆದು ಕಲಾತ್ಮಕವಾಗಿ ಉತ್ತು, ವಾಸ್ತವವಾಗಿ ಒಂದು ಬಗೆಯ ವಿಧಿಯಾಚರಣೆ, ರೈತನ ಹರಕೆ ಸಲ್ಲಿಕೆ ಎಂಬಂತೆ ಕಲಾರಚನೆ ಮಾಡಿದರು. ಜಮೀನನ್ನು ಮತ್ತೆ ರೈತನಿಗೆ ಹಿಂದಿರುಗಿಸಿದರು. ಆದರೆ, ನಗರೀಕರಣದಿಂದ ಮತ್ತೆ ಭೂಮಿಯತ್ತ, ನಿಸರ್ಗದತ್ತ ಹಿಂದಿರುಗುವಿಕೆ ಸಾಧ್ಯವೆ ಎಂದು ಪ್ರಶ್ನಿಸಿದರು. ನಗರವಾಸಿಗಳಿಗೆ ಕಣ್ಮರೆಯಾಗುತ್ತಿರುವ ರೈತ ವೃತ್ತಿಯ ನೆನಪಿಸುವಿಕೆ ಎನ್ನೋಣ. ಉಮೇಶರು ಇದನ್ನು 'ನೆಲಾಕೃತಿ' (earth work) ಎಂದು ಕರೆದರು. ಉಲ್ಕಾಪಾತವಾದಾಗ ಉಂಟಾಗುವ ಕುಳಿಗಳೊ ಎಂಬಂತಹ ಯಂತ್ರಗಳಿಂದ ಅಗೆದು ಸಿದ್ಧಪಡಿಸಿದ ಬಟ್ಟಲಿನಾಕಾರದ ಐದು ಬೃಹತ್ ಗುಂಡಿಗಳು ಹೂವು ಅರಳಿದಂತೆ ನೆಲದ ರೂಪ, ನಡುವೆ ನಡುವೆ ರಂಗೋಲಿ ಇತ್ಯಾದಿ ಅಲಂಕರಣ ಸುತ್ತ ಉತ್ತಿರುವುದು, ಉಳುಮೆ ಫಲವಂತಿಕೆಯ ಸಂಕೇತ. ಗ್ಯಾಲರಿಯಲ್ಲಿ ಕಲಾಕೃತಿ ನೋಡುವುದಕ್ಕಿಂತ ಭಿನ್ನ ಅನುಭವ. ಹೊರಗಿನಿಂದ ಆಗುವ ಅನುಭವವಲ್ಲ, ನೋಡುಗ ಕಲಾರಚನೆಯ ಭಾಗವಾದುದರಿಂದ ಒಳಗಿನಿಂದ ಮೂಡುವ ಅನುಭವ. ಏನೆಲ್ಲ ವಿಚಾರ ಲಹರಿಗಳು ಮೂಡುತ್ತವೆ. ಸರಕು ಸಂಸ್ಕೃತಿಯ ಆಕ್ರಮಣವನ್ನು ಸೂಚಿಸುತ್ತ ಜೀವನಾಧಾರ, ಅನ್ನಾವತಾರದ ನೆನಪು ಮೂಡಿಸುವ ಕಲಾಕೃತಿ ಎಂ.ಎಸ್. ಉಮೇಶರ ಈ 'ನೆಲಾಕೃತಿ.'

ಇಂಥದೇ ಇನ್ನೊಂದು ಸ್ಥಳ ನಿರ್ದಿಷ್ಟ ಕಲೆ ಶೀಲಾಗೌಡ ಅವರ 'ಸಾಕ್ಷಿಗುಡ್ಡ–ಸಾಕ್ಷಿ ಗೋಡೆ;' ಸ್ಥಳ ನಿರ್ದಿಷ್ಟ ಕಲೆಯ ಒಂದು ಮಹತ್ವವಾದ ಸೃಷ್ಟಿ ಮತ್ತು ವಿಸರ್ಜನೆಯ ಸಂಕೇತವೇ. ಎನ್.ಸಿ.ಸಿ. ತರಬೇತಿಯಲ್ಲಿ ಬಳಸುತ್ತಿದ್ದು, ಕೈಬಿಟ್ಟಿದ್ದ ಒಂದು ಷೂಟಿಂಗ್ ತರಬೇತಿ ಗೋಡೆ ಮತ್ತು ಗುಡ್ಡ. ಇದನ್ನು ಕಲಾವಿದೆ ಬಳಸಿಕೊಂಡರು. ಪ್ರವೇಶದ ಗೋಡೆಯಿಂದ ಸುರಂಗದಂತಹ ಮಾರ್ಗ, ಟ್ರೆಂಚ್, ಬಹು ಇಕ್ಕಟ್ಟಾದ ದಾರಿಯಲ್ಲಿ ಹೋಗಿ ಇನ್ನೊಂದೆಡೆ ಮೆಟ್ಟಿಲು ಹತ್ತಿ ಹೊರಬರುವುದು. ಗೋಡೆಗಳಲ್ಲಿ ನಾಟಿರುವ ಬುಲೆಟ್‌ಗಳು, ಸುಯ್ಯೆಂದು ತಟಕ್ಕನೆ ಗುಂಡುಹಾರಿಸುವ ಶಬ್ದ (ಧ್ವನಿಸುರುಳಿ ಬಳಕೆಯಿಂದ). ಯುದ್ಧದ ಭಯಾನಕ ಅನುಭವಗಳ ಪುನರ್‌ಸೃಷ್ಟಿ, ಹಾಗೇ ಸೈನಿಕರ ಜೀವ–ಸಾವಿನ ಹೋರಾಟದ ಆತಂಕದ ಕ್ಷಣಗಳ ಅನುಭವ. ಇಲ್ಲೂ ನೋಡುಗ ಕಲಾರಚನೆಯ ಭಾಗವಾಗಿ, ಪಾತ್ರಧಾರಿಯಾಗಿ ಒಳಗಿನಿಂದ ಅನುಭವ ಪಡೆಯುತ್ತಾನೆ. ಇಲ್ಲಿ ಎಷ್ಟೆಲ್ಲ, ಏನೆಲ್ಲ ಪ್ರಶ್ನೆಗಳು ಕಾಡುತ್ತವೆ. ಸ್ಥಳ ನಿರ್ದಿಷ್ಟ ಕಲೆಯಲ್ಲಿ ಅರ್ಥಚಲನೆಯ

ಸಾಧ್ಯತೆಗಳಿವೆ. ಜೀವಂತ ಅನುಭವ ಇದೆ. ಏಕೆಂದರೆ ಇಲ್ಲಿ ಸಂದರ್ಭವೇ (context) ಅದರ ತತ್ವ, ತಿರುಳು (content) ಆಗುತ್ತದೆ. ಜೂಲಿಯಾ ಕ್ರಿಸ್ಟೆವಾ ಹೇಳುವಂತೆ "It is a spectacle, but without a stage... a signifier but also signified. (ಅದು ಸೂಚಕ ಸಂಜ್ಞೆಯೂ ಅಹುದು, ಸೂಚಿತವೂ ಅಹುದು). It is thus both stage and life; discourse and spectacle." ಎಂತಹ ಒಳನೋಟದ ಮಾತುಗಳು, ನಮ್ಮ ಕಲಾವಿದರ ರಚನೆ, ಸೃಷ್ಟಿಗಳಿಗೂ ಅನ್ವಯಿಸುತ್ತದೆ.

ನನಗೆ ತುಂಬ ಇಷ್ಟವಾದ, ಮತ್ತೆ ಮತ್ತೆ ಮನಸ್ಸಿನಲ್ಲಿ ಕಾಡುವ ಇನ್ನೊಂದು ಕಲಾರಚನೆ, ಶೀಲಾಗೌಡ ಅವರದೇ ಆದ 'ಬ್ಲಾಂಕೆಟ್ ಅಂಡ್ ದಿ ಸ್ಕೈ', ಅವರ ಒಂದು ನಿಲುವು, ದೃಷ್ಟಿ, ಕಲಾಸಿದ್ಧಾಂತ ಎನ್ನೋಣ. ಅದೆಂದರೆ ಕಲಾರಚನೆಗೆ ಬಳಸುವ ಮಾಧ್ಯಮ ಸಾಮಗ್ರಿ, ಪರಿಕರವೂ ರಚನೆಯ ಆಂತರಿಕ ಸತ್ವವಾಗಿ ಅರ್ಥ ಮತ್ತು ಅನುಭವ ಸೃಷ್ಟಿಗೆ ಕಾರಣವಾಗುತ್ತವೆ. ಸೆಗಣಿ ಬೆರಣಿಗಳನ್ನು ಬಳಸಿದ್ದು ಆ ಕಾರಣವಾಗಿ. ತಮಿಳು ನಾಡಿನ ಸ್ಕೂಲಿಗೆ ಬೆಂಕಿ ಬಿದ್ದ ಘಟನೆ ಸಂದರ್ಭದಲ್ಲಿ, ಕಟ್ಟಿಗೆಗಳನ್ನು ಸುಟ್ಟು, ಕರಿಕಲು ತುಂಡುಗಳ ರಚನೆ ಮೂಲಕ ಸುಟ್ಟ ಪುಟಾಣಿಗಳ ಕರಿಕಲಾದ ದೇಹಗಳನ್ನು ನೆನಪಿಸಿದರು. ದುರಂತದ ಭಯಾನಕತೆಯ ಅನುಭವ. ಅವರ 'Blanket and the Sky' ಟಾರು ರಸ್ತೆ ನಿರ್ಮಿಸುವ ಕೂಲಿಕಾರರ ಬದುಕನ್ನು, ಅವರ ದಾರುಣ ಅನುಭವವನ್ನು ಕಟ್ಟಿ ಕೊಡುತ್ತದೆ ಈ ಸ್ಥಾಪನಾಕಲೆ (Installation). ಚಪ್ಪಟೆ ಮಾಡಿದ, ಕಪ್ಪಗೆ ಟಾರು ಅಂಟಿದ ಡ್ರಮ್ಮುಗಳಿಂದಲೇ ಎರಡಂತಸ್ತಿನ ಮನೆಯ ಗೂಡು. ನೆಲದಿಂದ ಒಳಕ್ಕೆ ನುಸುಳಲು ತಗ್ಗಾದ ಕಿಂಡಿ ಬಾಗಿಲು. ಒಳಗೆ ಚಿಂದಿಬಟ್ಟೆ, ಹರಿದ ಹಾಸು, ಹೊದಿಕೆ. ನುಸುಳಿ ಹೋದರೆ ಒಳಗೆ ಕತ್ತಲ ಬದುಕು. ಮೇಲಂತಸ್ತಿನ ಒಳಗೆ ನೋಡಲು ಕಿಂಡಿ. ಕೆಳ ಅಂತಸ್ತನ್ನು ಮುಚ್ಚಿದ ಮಾಳಿಗೆಯೂ ಚಪ್ಪಟೆ ಡ್ರಮ್ಮಿನದೆ. ಅಲ್ಲಿ ಆ ತಗಡನ್ನೇ ಅಲ್ಲಲ್ಲಿ, T ಆಕಾರಕ್ಕೆ ಕತ್ತರಿಸಿ ಮೇಲೆತ್ತಿ ನಿಲ್ಲಿಸಿದ ಆಕಾರಗಳು ಗುಡಿಸಲು ಅಥವಾ ಟಾರು ಡ್ರಮ್ಮಿನ ತಗಡುಗಳಿಂದಲೆ ನಿರ್ಮಿಸಿದ ಕೊಳೆಗೇರಿಗಳಂಥ ದೃಶ್ಯ. ಒಳಚಾಚಿದ ಕತ್ತನ್ನು ಮೇಲಕ್ಕೆ ತಿರುಗಿಸಿದರೆ ಮಾಡಿನಲ್ಲಿ, ರಂಧ್ರಗಳು ಹೊರ ಬೆಳಕಿನಲ್ಲಿ ನಕ್ಷತ್ರಗಳಂತೆ ಹೊಳೆಯುತ್ತವೆ. starry sky ಸಂಕೇತ. ಇದು ಈ ಕೂಲಿಕಾರರ ಬದುಕು. ಇಂದಿಲ್ಲಿ ನಾಳೆ ಇನ್ನೊಂದೆಡೆ. ದೂರದಿಂದ ಕೊಳೆಗೇರಿ ನೋಡುವುದಕ್ಕೂ, ಇಲ್ಲಿ ಒಳಗಿನಿಂದ ಅನುಭವ ಪಡೆಯುವುದಕ್ಕೂ ವ್ಯತ್ಯಾಸವಿದೆ. ಸ್ಮಶಾನ ಸದೃಶ ವಾಸ್ತವ ಬದುಕು, ಮುಕ್ತ ಆಕಾಶದ ಬೆಳಕಿನ ಚುಕ್ಕಿಗಳ ಕನಸಿನ ಆಶಾವಾದ, ಆ ಶ್ರಮಿಕರದು.

ಎಂ. ಶಾಂತಾಮಣಿಯವರು 'ಹಸ್ತ'ವನ್ನೇ ಕೇಂದ್ರವಾಗಿರಿಸಿ ಸರಣಿ ಚಿತ್ರಗಳನ್ನು ರಚಿಸಿದವರು. ಅವರೂ ಸ್ಥಾಪನಾ ಕಲೆಯ ಪ್ರದರ್ಶನವೊಂದನ್ನು ಏರ್ಪಡಿಸಿದ್ದರು ಶೀರ್ಷಿಕೆ 'ಫೀನಿಕ್ಸ್.' ಬೂದಿಯಿಂದ ಪುನರುದ್ಭವಿಸುವ ಹಕ್ಕಿ. ಹುಟ್ಟು, ಸಾವು ಸಾವಿನಿಂದಲೇ ಮರುಹುಟ್ಟು. ವಿಚಾರವನ್ನು ಮೀರಿದ ಅನುಭವವನ್ನು ಅವರ ರಚನೆಗಳು ನೀಡುತ್ತಿದ್ದುವು. ಒಂದೆಡೆ ಗೋಡೆ ಕಪಾಟಿನಲ್ಲಿ ಇದ್ದಲಿನಿಂದ ಮಾಡಿದ ಜಾಡಿಗಳು. ಒಳಗೂ ಇದ್ದಲ ತುಂಡುಗಳು. ಇನ್ನೊಂದು ಕೋಣೆ ವಿಭಾಗದಲ್ಲಿ ಅಳೆತ್ತರದ ನಗ್ನ

ಗರ್ಭಿಣಿ ಹೆಂಗಸು, ಇದ್ದಲಿನ ರಚನೆಯು, ಗೋಡೆಯಿಂದ ನೆಲಕ್ಕೆ ಇಳಿದಿರುವ ವೀರ್ಯಾಣುಗಳು. ಮತ್ತೊಂದು ಕತ್ತಲ ಪುಟ್ಟ ಕೋಣೆಯಲ್ಲಿ, ಕಪ್ಪುಬಣ್ಣದ ಗೋಡೆಗಳ ಚಾವಣಿಗೆ ಇದ್ದಲ ಮೋಡವನ್ನು ತೂಗು ಹಾಕಿದೆ. ಮೇಲು ಮೂಲೆಗಳಿಂದ ಲೈಟಿನ ಬೆಳಕು ಮೋಡದ ಮೇಲೆ. ಈ ಮೋಡ ಇದ್ದಲ ತುಂಡುಗಳನ್ನು ಅಂಟಿಸಿ ಮಾಡಿ ತೂಗು ಹಾಕಿರುವುದು. ಮರವನ್ನು ಸುಟ್ಟರೆ ಇದ್ದಲು ದೊರೆಯುತ್ತೆ. ಮರ, ಗಿಡ ಜೀವ, ಚೈತನ್ಯದ ಸಂಕೇತ. ಮರದ ಇದ್ದಲನ್ನು ಸುಟ್ಟರೆ ಬೂದಿಯಾಗುತ್ತೆ. ಹೀಗೆ ಇದ್ದಲು ಒಂದು ಸಂದಿಗ್ಧತೆಯನ್ನು, ನಡುವಿನ ಸ್ಥಿತಿಯನ್ನು ಸೂಚಿಸುತ್ತೆ. ಈ ಕಪ್ಪು ಮೋಡ ಮಳೆ ಸುರಿಸುವ ಜೀವಧಾರಣೆಗೆ ಆಧಾರವಾದ ಮೋಡವೋ? ಅಥವಾ ಅಣುಸ್ಫೋಟದ ಮೋಡವೋ ಜೀವನಾಶದ, ಭೂಮಿ ವಿನಾಶದ ಮೋಡವೋ? 'ಇದ್ದಲ' ಗುಣ, ಅಸ್ತಿತ್ವದಂತೆ ಇದೂ ಸಂದಿಗ್ಧ. ಮೂರನೆಯ ಮಹಾಯುದ್ಧ ಅಣುಬಾಂಬಿನ ಯುದ್ಧವಾದಲ್ಲಿ? ಆದರೆ ಭೂಮಿಗೆ ಕಾರ್ಮೋಡ, ಜಲಧಾರೆಯಿಂದ ಹಸಿರಾಗಿಸಿ, ಋತುಋತುಗಳಲ್ಲಿ ಹೊಸ ಚಿಗುರು, ಹುಟ್ಟಿಗೂ ಕಾರಣವಾಗಬಹುದು, ಅಲ್ಲವೆ? ಜಾಗತಿಕ ಮಟ್ಟದ ಈ ಆತಂಕವನ್ನು ಇದ್ದಲ ಮೋಡ ಸಂಕೇತಿಸುತ್ತಿದೆ.

ಚಿತ್ರಕಲೆಯಿಂದ ತುಂಬ ದೂರ ಬಂದಿದ್ದಾರೆ ಕಲಾವಿದೆ ಸುರೇಖಾ. ಕಿರುಚಿತ್ರಗಳನ್ನು ತಯಾರಿಸಿದ್ದಾರೆ. ವಿಡಿಯೊ ಚಿತ್ರ ನಿರ್ಮಿಸಿದ್ದಾರೆ. ಅವರ ಬಹುಪಾಲು ಕಲಾರಚನೆ ನಿರ್ಮಾಣಗಳೆಲ್ಲ ಸ್ತ್ರೀ ಸಂವೇದನೆಯ ಸೂಕ್ಷ್ಮ ಅಭಿವ್ಯಕ್ತಿಗಳು. ಕುವೆಂಪು ಅವರ ಶ್ರೀರಾಮಾಯಣದರ್ಶನದ 'ಅಗ್ನಿಚಿತೆ' ಭಾಗಕ್ಕೆ ಸೃಜನಶೀಲ ಪ್ರತಿಕ್ರಿಯೆಯಾಗಿ ರಚಿಸಿರುವ ಎರಡು ಚಿತ್ರಗಳು, ಸೀತೆಯ ಅಗ್ನಿ ಪರೀಕ್ಷಾ ಪ್ರಸಂಗದ ಈ ಶತಮಾನದ ಪುನರ್ ವ್ಯಾಖ್ಯಾನವಾಗುತ್ತದೆ, ಸಾವಿರಾರು ವರ್ಷಗಳ ಹೆಣ್ಣಿನ ಮೇಲಿನ ದೌರ್ಜನ್ಯದ ಸಂಕೇತವಾಗಿ.

ಏಕವಾಹಿನಿಯ (single channel) ವಿಡಿಯೊ ಕಲೆ ಬೇರೆ, ಬಹು ಬಗೆಯ ಪ್ರಕ್ಷೇಪಣದ (multimonitor) ವಿಡಿಯೊ ಸ್ಥಾಪನಾ ಕಲೆ ಬೇರೆ. ಕರ್ನಾಟಕದ ಅನೇಕ ಕಲಾವಿದರು ಏಕವಾಹಿನಿ ವಿಡಿಯೊ ಕಲೆ ನಿರ್ಮಿಸಿದ್ದಾರೆ. ಬಾಬು ಈಶ್ವರ ಪ್ರಸಾದ್ ಪ್ರಕಾಶ್ ಬಾಬು ಎಂ.ಎಸ್., ಉಮೇಶ್ ಮದ್ದನಹಳ್ಳಿ ಮುಂತಾದವರು. ಅವರ 'ಭಾಗೀರಥಿ' ವಿಡಿಯೊ ಚಿತ್ರ ಪ್ರಸಿದ್ಧ. 'ಕೆರೆಗೆ ಹಾರ' ಜನಪದ ಕಥೆ ಆಧಾರಿತ. ಆದರೆ ಆಧುನಿಕ ಸ್ನಾನದ ಟಬ್‌ನಲ್ಲಿನ ಹೆಣ್ಣಿನ ದೃಶ್ಯ, ತೇಲುತ್ತಿರುವ ಹೂಗಳ ನಡುವೆ. ಇದು ಕಥೆಯ ಆಧುನಿಕ ಅವತಾರ. ಜಾನಪದ ನಂಬಿಕೆ, ಆಚರಣೆ, ಆಧುನಿಕತೆ, ಗತಕಾಲ-ವರ್ತಮಾನ, ಅಂದು ಇಂದಿನ ಹೆಣ್ಣಿನ ಸಂವೇದನೆ, ಶೋಷಣೆಗಳು ಕಾಲ-ದೇಶ ಬೆಸೆದು ರೂಪಕವಾಗುತ್ತವೆ. ಬಹು ಪ್ರಕ್ಷೇಪಣೆಯ ಸ್ಥಾಪನಾ ಕಲೆ ಹಲವು ಮಾಧ್ಯಮಗಳನ್ನು ಬಳಸಿ ಸೃಜಿಸುವ ಕಲೆಯಾಗಿದೆ. ಬಹುಮಾಧ್ಯಮ ಸ್ಥಾಪನಾ ಕಲೆಯ ಕಲಾವಿದರಿಗೆ ಪ್ರದರ್ಶಕ ಘಟಕದ (ಮಾನಿಟರ್) ಹೊರಗಿನ ತೆರಪೂ (space), ಸ್ಥಳವೂ ಮುಖ್ಯವಾಯಿತು. ಪತ್ರ ಧ್ವನಿ, ಸಂಗೀತ, ಬಿಂಬ, ದೃಶ್ಯ, ಪ್ರದರ್ಶಕ ಘಟಕ, ತೆರೆ (screen), ಕೊನೆಗೆ ನೆಲ-ಎಲ್ಲವೂ ಕೂಡಿದ ವಿಡಿಯೊ ಸ್ಥಾಪನಾಕಲೆಯ ಅನುಭವ ವಿಶಿಷ್ಟ. 'ಕಮ್ಯೂನಿಂಗ್ ವಿತ್ ಅರ್ಬನ್

ಹಿರೋಯಿನ್ಸ್' ಎಂಬ ಸಂಸ್ಕೃತಿ ನಿರ್ದಿಷ್ಟ ದೃಶ್ಯ ಯೋಜನೆ, ಸುರೇಖಾ ಅವರ ಒಂದು ಬಹುಮಾಧ್ಯಮ ಸೃಷ್ಟಿ. ನಗರ, ಪಟ್ಟಣಗಳಲ್ಲಿ ಕಾಣುತ್ತಿರುವ ಹೆಣ್ಣಿನ ಅಸಹಜ ಸಾವುಗಳೇ ಪ್ರೇರಣೆ. ಪಂಚಭೂತಗಳನ್ನು ಜೀವ ಸೃಷ್ಟಿ, ಜೀವ ಪೋಷಣೆಯ ಮೂಲಗಳು ಎನ್ನುತ್ತೇವೆ. ಭೂಮಿ, ನೀರು, ಬೆಂಕಿ, ಗಾಳಿ, ಆಕಾಶ, ಜೀವಧಾರಣಕ್ಕೆ ಕಾರಣವಾದ ಇವೇ ಅಸಹಜ ಸಾವಿಗೂ ಕಾರಣವಾಗುವ ಅನುಭವ ಇಲ್ಲಿದೆ. ನೆಲ ಮತ್ತು ಆಕಾಶದ ತೆರೆಯ ದೃಶ್ಯವನ್ನು ಗಮನಿಸಿ. ಹಿಂದೆ 'ಕೆರೆಗೆ ಹಾರ'ದಲ್ಲಿ ಭಾಗೀರಥಿ ನೀರಿನ ಪಾಲಾಗುವುದರ ಜನಪದ ಕಥನ ಸೂಚನೆ ಇದೆ. ಇಲ್ಲಿ ಜಾನಕಿ, ನೆಲದಲ್ಲಿ ಕುಂಟು ಬಿಲ್ಲೆಯ ರೇಖೆಯ ಮನೆಗಳು ಮನೆಗಳಿಗೆ ನೆಗೆದು ಆಡುತ್ತಿರುವ ಹುಡುಗಿ, ಕಣ್ಮರೆಯಾಗುತ್ತಾಳೆ. ತಟ್ಟನೆ ಕುಂಟು ಬಿಲ್ಲೆಯ ಮನೆಗಳ ರೇಖೆಗಳು ಬೆಂಕಿಹೊತ್ತಿ ಉರಿಯುತ್ತಿರುವ ದೃಶ್ಯ. ಕತ್ತೆತ್ತಿದರೆ ಮುಂದೆ ಎತ್ತರದ ಸಿನೆಮಾ ತೆರೆ, ತೆಳುಮೋಡ ಚಲಿಸುತ್ತಿರುವ ಆಕಾಶ, ದೃಶ್ಯದಲ್ಲಿ ಉಯ್ಯಾಲೆಯಾಡುತ್ತಿರುವ ಜಾನಕಿ, ಕೆಲಕ್ಷಣದಲ್ಲಿ ಅಂತರ್ಧಾನವಾಗುತ್ತಾಳೆ. ಶೂನ್ಯ ಆಕಾಶ, ಮೇಲಿನಿಂದ ನೆಲಕ್ಕೆ ವಿಡಿಯೊ ಪ್ರಕ್ಷೇಪಿಸಿರುವ ಬಗೆ ನೆಲವೇ ಹೊತ್ತಿ ಉರಿಯುವ ಅನುಭವ. ಇಂತಹ ಜೀವಂತ ಅನುಭವಗಳು ಬಹುಮಾಧ್ಯಮ ಕಲೆಯಿಂದ ಮಾತ್ರ ಸಾಧ್ಯ.

ಡಿಜಿಟಲ್ ಕಲೆ ಒಂದು ಯಾಂತ್ರಿಕ ಮಾಧ್ಯಮ. ಗಣಕದ ಘರ್ಷಣೆ ಮತ್ತು ಗುರುತ್ವಾಕರ್ಷಣೆ ಮುಕ್ತ ಸ್ಮೃತಿ ಸ್ಥಳದಲ್ಲಿ ಬಿಂಬಗಳ (ಇಮೇಜಸ್), ವರ್ಣಶೋಧಕಗಳ (ಫಿಲ್ಟರ್ಸ್), ಬಣ್ಣಗಳ ಸ್ಥಳಾಂತರ, ಜೋಡಣೆ – ಸಂಯೋಜನೆ ಮೊದಲಾದವನ್ನು ಕಲಾವಿದರು ಮಾಡಬಹುದು. ಇಲ್ಲಿ ಕಲಾವಿದರಿಗೆ ಮುಕ್ತ ಸ್ವಾತಂತ್ರ್ಯ. ಇದು ಹೊಸ ಬಗೆಯ ಸೃಜನೆ, ಸೃಷ್ಟಿ. ಪ್ರತಿ ಅಥವಾ ನಕಲಲ್ಲ. ಗಣಕದಿಂದ ಸೃಷ್ಟಿಸುವ ಮಿಥ್ಯಾ ವಾಸ್ತವ (virtual reality) ಗಣಕತಂತ್ರಜ್ಞಾನದ ವಿಶಿಷ್ಟ ಕೊಡುಗೆ.

ನಮ್ಮಲ್ಲಿ ಹಿಂದೆ ಯೂಸುಫ್ ಅರಕ್ಕಲ್ ತಮ್ಮ ವರ್ಣಚಿತ್ರವನ್ನೇ ಡಿಜಿಟಲ್ ಪ್ರಿಂಟ್ ಆಗಿ ರೂಪಾಂತರಿಸಿದರು. ಚಂದ್ರನಾಥ ಆಚಾರ್ಯ ಅವರು ಮೃತ್ತಿಕೆ, ಮೇಣ, ಲೋಹಗಳಲ್ಲಿ ಶಿಲ್ಪ ಅಥವಾ ರೂಪಗಳನ್ನು ರಚಿಸಿ, ಕೆಲವೊಮ್ಮೆ ವರ್ಣಚಿತ್ರವನ್ನೂ ಬಳಸಿ, ಛಾಯಾಚಿತ್ರ ತೆಗೆದು ಸಂಯೋಜಿಸಿ ಗಣಕದ ಸೌಲಭ್ಯಗಳನ್ನು ಬಳಸಿ, ರಚನೆ ಪೂರ್ಣಗೊಳಿಸಿ, ಪ್ರಿಂಟ್ಸ್ ತೆಗೆಯುತ್ತಾರೆ.

'ಸ್ಟಿಚ್' ಚಿತ್ರಗಳಿಂದ ಪ್ರಸಿದ್ಧರಾದ ಸಿ. ಚಂದ್ರಶೇಖರ್ ಛಾಯಾಚಿತ್ರಗಳನ್ನು ಗಣಕದಲ್ಲಿ ಬಳಸಿ ಸಂಯೋಜನೆ ಮಾಡಿ, ಎಂದರೆ ಚಿತ್ರಭಾಗಗಳನ್ನು ಬಿಡುವ, ಸೇರಿಸುವ ಹಿನ್ನೆಲೆ–ಮುನ್ನೆಲೆಗಳನ್ನು ಬದಲಿಸುವ, ಕೆಲವನ್ನು ಗೌಣವಾಗಿಸುವ ಅಥವಾ ಪ್ರಧಾನ ವಾಗಿಸುವ ಬಣ್ಣಗಳನ್ನೂ ಉದ್ದೇಶಕ್ಕೆ ತಕ್ಕಂತೆ ನಿರ್ವಹಿಸಿ, ಅಂತಿಮವಾಗಿ ಪ್ರಿಂಟ್ ತೆಗೆಯುತ್ತಾರೆ.

'ಮತ್ತೆ ಚಿಗುರಿತು' ಒಂದು ಚಿತ್ರ. ಹಸಿರು ಹುಲ್ಲಿಗೆ ಸೂರ್ಯನ ಬೆಳಕು ಬೀಳದಂತೆ ಮಾಡಿದರೆ ಬಿಳಚಿಕೊಳ್ಳುತ್ತದೆ. ಬಿಸಿಲು ಅದರ ಜೀವ, ಚೈತನ್ಯಕ್ಕೆ ಕಾರಣ. ಹಸಿರು ಅದರ ಸೂಚಕ. ಬಿಳಿ ಹುಲ್ಲಿನ ಚಿಕ್ಕ ವರ್ತುಲದ ಸುತ್ತ ಹಸಿರುಹುಲ್ಲು. ಅದಕ್ಕೆ ಚಿಗುರಿದ ಕೊರಡಿನ ಜೋಡಣೆ. ಈ ಎರಡರ ಸಂಯೋಜನೆ ಸೌಂದರ್ಯಾತ್ಮಕವಾಗಿ ಮೂಡಿದೆ. ನಿಸರ್ಗ

ಮತ್ತು ಮನುಷ್ಯರ ಬದುಕುಗಳ ಸಂಕೇತವಾಗುತ್ತದೆ. ಎರಡು ಛಾಯಾಚಿತ್ರಗಳನ್ನು ಗಣಕದಲ್ಲಿ ನಿರ್ವಹಿಸಿರುವುದರಲ್ಲಿ ಕಲಾವಿದರ ಕಲ್ಪನೆ, ಅರ್ಥ ಸಂವಹನ ಉದ್ದೇಶವಿದೆ.

ಸ್ಮಾರಕ, ಪ್ರತಿಸ್ಮಾರಕ ಕಲೆ ಗ್ಯಾಲರಿ ಹೊರಗಿನ ಕಲಾಕೃತಿಗಳ ಒಂದು ಬಗೆ. ಬುದ್ಧ ವಿಹಾರಗಳ ತೋರಣ ದ್ವಾರಗಳು ಭಾರತೀಯರಿಗೆ ಹೊಸದಲ್ಲ. ಆಧುನಿಕ ಸ್ಮಾರಕ ರಚನೆಗಳ ಮೂರು-ನಾಲ್ಕು ದೃಷ್ಟಾಂತಗಳಿವೆ. ನಮ್ಮಲ್ಲಿ ಕೆ.ಟಿ. ಶಿವಪ್ರಸಾದರು ಕಲ್ಪಿಸಿ ಸೃಜಿಸಿ, ಸ್ಥಾಪಿಸಿರುವ ಕುಪ್ಪಳಿಯ ಕವಿಶೈಲದಲ್ಲಿರುವ ಕುವೆಂಪು ಸ್ಮಾರಕ, ಒಂದು ಅಪೂರ್ವ ಸೃಷ್ಟಿ. ಇಂಗ್ಲೆಂಡಿನ ಸ್ಟೋನ್ ಹಿಂಜಸ್‌ಅನ್ನು ನೆನಪಿಸುತ್ತದೆ. ಕುವೆಂಪು ಮಲೆಗಳಲ್ಲಿ ಮದುಮಗಳು ಕಾದಂಬರಿಯ ಪ್ರಾರಂಭದಲ್ಲಿ ಮುನ್ನುಡಿ ಶಾಸನದಂತೆ ಹೇಳಿರುವ ಮಾತುಗಳು: "ಇಲ್ಲಿ ಯಾವುದೂ ಮುಖ್ಯವಲ್ಲ, ಯಾವುದೂ ಅಮುಖ್ಯವೂ ಅಲ್ಲ. ಯಾವುದೂ ಪೂರ್ಣವೂ ಅಲ್ಲ, ಅಪೂರ್ಣವೂ ಅಲ್ಲ." ಸುತ್ತಲ ಕವಿಶೈಲದ ಬಂಡೆ ಗುಡ್ಡಗಳಿಗೆ ಹೊಂದುವ, ಬಂಡೆಕಲ್ಲಿನ ಒರಟೊರಟಾದ, ಅಲಂಕಾರ ಕೆತ್ತನೆ ಇಲ್ಲದ ಬೃಹತ್ ದ್ವಾರಕಂಬಗಳು. ಇವು ದೃಢತೆ, ಕಾಲಾತೀತತೆಯ ಸಂಕೇತವೂ ಆಗುತ್ತವೆ; ದೇಶಾತೀತ ಸಹ. ಏಕೆಂದರೆ ಕಲಾವಿದ ಯಾವುದೇ ಶಿಲ್ಪಶೈಲಿಯ ಕೆತ್ತನೆ ಮಾಡಿದ್ದರೆ ದೇಶ-ಕಾಲದ ಮುದ್ರೆ ಬೀಳುತ್ತಿತ್ತು. ಈಗಿರುವಂತೆ ಪೂರ್ಣವೂ ಅಲ್ಲ, ಅಪೂರ್ಣವೂ ಅಲ್ಲ. ನಿಸರ್ಗ-ಕಲೆ ಒಂದೆಡೆ ಕೈಜೋಡಿಸಿವೆ. ಕೆ.ಟಿ.ಶಿವಪ್ರಸಾದ್ ಪೂರ್ಣಚಂದ್ರ ತೇಜಸ್ವಿಯವರ ಗೆಳೆಯರಾಗಿ, ಕಾಡುಬೆಟ್ಟ ಕಂಡವರಾಗಿ, ರಸಋಷಿ ಕುವೆಂಪು ವಾಣಿಗೆ ಅನುಗುಣ ವಾಗಿಯೇ ಸ್ಮಾರಕ ಕಲ್ಪಿಸಿ, ಸ್ಥಾಪಿಸಿದ್ದಾರೆ.

ಕಳೆದ ಒಂದು ಶತಮಾನದಲ್ಲಿ ಕಲೆಯ ಕ್ಷೇತ್ರಗಳಲ್ಲಿ ಆಗಿರುವ ಬದಲಾವಣೆಗಳು ಶತಶತಮಾನಗಳಲ್ಲಿ ಆಗಿರಲಿಲ್ಲ. ಬದಲಾವಣೆ ಎಂದರೆ ಬೆಳವಣಿಗೆಯೇ. ಇಂದು ಅದು ಎಲ್ಲ ದಿಕ್ಕಿಗೂ ವಿಸ್ತರಿಸುತ್ತದೆ. ನೋಡುವ, ಕಾಣುವ, ಗ್ರಹಿಸುವ, ಅನುಭವಿಸಿ, ಆಸ್ವಾದಿಸುವ ಕಣ್ಣು, ಮನಸ್ಸು, ಹೃದಯ ಮುಖ್ಯವೆನಿಸುತ್ತದೆ.

(ಇಲ್ಲಿ ದೃಷ್ಟಾಂತವಾಗಿ ವಿವರಿಸಿರುವ ರಚನೆಗಳ ಛಾಯಾಚಿತ್ರಗಳನ್ನು, ನವಕರ್ನಾಟಕ ಪ್ರಕಾಶನದ 'ಕರ್ನಾಟಕ ಕಲಾದರ್ಶನ' ಸಂಪುಟ ಒಂದರಲ್ಲಿ ನೋಡಬಹುದು.)


❒



ಕರ್ನಾಟಕ ಜಾನಪದ ಪರಂಪರೆ : ಸಮೃದ್ಧಿ ಮತ್ತು ಶಕ್ತಿ

■ ಪ್ರೊ. ಡಿ. ಲಿಂಗಯ್ಯ

ಕರ್ನಾಟಕ ರಾಜ್ಯದಲ್ಲಿ ಉಜ್ವಲವಾದ ಜಾನಪದ ಪರಂಪರೆಯಿದೆ. ಅದು ಅನಾದಿ ಕಾಲದಿಂದ ಮೌಖಿಕ ಸಂಸ್ಕೃತಿಯ ಮಹಾಪ್ರವಾಹವಾಗಿ ಹರಿದುಬರುತ್ತಿದೆ. ಅದರ ಹೊರಹೊಮ್ಮುವಿಕೆಗೆ ನಿರ್ದಿಷ್ಟವಾದ ಕಾಲಮಾನವನ್ನು ಹೇಳಲಾಗುವುದಿಲ್ಲ. ಕರ್ನಾಟಕದ ಭೂಭಾಗದಲ್ಲಿ ಎಂದು ಮನುಕುಲ ಆವಿರ್ಭವಿಸಿತೋ, ಎಂದು ಮನುಷ್ಯ ಸಮೂಹ ನಿರ್ದಿಷ್ಟ ತಾವಿನಲ್ಲಿ ನೆಲೆನಿಂತಿತೋ, ಎಂದು ಜೀವನ ವಿಧಾನಗಳನ್ನು ಕಂಡುಕೊಂಡಿತೋ ಅಂದು ಮೌಖಿಕ ಅರಿವು ಪ್ರಾರಂಭವಾಯಿತು. ಮನುಷ್ಯನ ವಿಶೇಷ ತಿಳಿವಳಿಕೆಯ ಕಾಲವೇ ಮೌಖಿಕ ತಿಳಿವಳಿಕೆಯ ಕಾಲವೂ ಆಯಿತು. ಅಂದರೆ ಮನುಷ್ಯನಷ್ಟೇ ಪ್ರಾಚೀನ ಅವನ ಪ್ರತಿಭಾ ಜ್ಞಾನವಿಜ್ಞಾನ. ಆದಿಮಾನವನ ಕಾಲದಲ್ಲಿ ಜೀವನ ವಿಧಾನದ ಪ್ರತಿಯೊಂದು ಹೊಳಹೂ ಮೌಖಿಕವಾಗಿಯೇ ನಡೆಯುತ್ತಿತ್ತು. ಅಖಂಡ ಮನುಕುಲದ ಸಮಸ್ತ ಜೀವನ ವಿಧಾನದ ಮೌಖಿಕ ಜ್ಞಾನ ವಿಜ್ಞಾನವೇ ಜಾನಪದ. ಅದು ತಲೆಮಾರಿನಿಂದ ತಲೆಮಾರಿಗೆ ಮೌಖಿಕವಾಗಿ ಸಾಗಿತು. ಅದೇ ಪರಂಪರೆಯಾಯಿತು. ಅಧ್ಯಯನಕಾರರು ಅದನ್ನು ಮೌಖಿಕ ಪರಂಪರೆ ಅಥವಾ ಜಾನಪದ ಪರಂಪರೆ ಎಂದು ಕರೆದರು. ಎಲ್ಲೆಲ್ಲಿ ಜನಪದ ಸಮೂಹ ಇತ್ತೋ ಅಲ್ಲೆಲ್ಲಾ ಅದು ವಿಜೃಂಭಿಸಿತು. ಅಖಂಡ ಕರ್ನಾಟಕದ ಸಮಸ್ತ ಜನಪದರಲ್ಲಿ ಮೌಖಿಕ ಪರಂಪರೆ ಬದುಕಿನ ಅವಿಭಾಜ್ಯ ಅಂಗವಾಗಿ ಜೀವನದ ಉಸಿರಾಗಿ ಹಾಸುಹೊಕ್ಕಾಯಿತು. ಅಕ್ಷರ ಸಂಸ್ಕೃತಿ ಕಾಲಿಡುವವರೆಗೆ ಅದರದೇ ಸಾಮ್ರಾಜ್ಯ. ಅನಂತರವೂ ಅದರ



ಸಮೃದ್ಧಿ, ಶಕ್ತಿ ಕಡಿಮೆಯಾಗಲಿಲ್ಲ. ಈಗಲೂ ಅದರ ಪ್ರಭಾವಸ್ಪರ್ಶವಿಲ್ಲದೆ ಸಂಸ್ಕೃತಿ ಪರಿಕಲ್ಪನೆ ಪರಿಪೂರ್ಣವಾಗುವುದಿಲ್ಲ. ಸಂಸ್ಕೃತಿಯ ಎಲ್ಲಾ ಮಜಲುಗಳಲ್ಲೂ ಜನಪದ ಪರಂಪರೆಯ ಪ್ರವೇಶವಿದೆ.

ಕರ್ನಾಟಕದಲ್ಲಿ ಜಾನಪದ ಪರಂಪರೆ ದಟ್ಟವಾಗಿದೆ; ಸನಾತನ ಕಾಲದಿಂದ ಜನಮಾನಸದಲ್ಲಿ ಚಿರಸ್ಥಾಯಿಯಾಗಿದೆ; ಪ್ರಾಚೀನ ವಾಕ್ ಸಂಸ್ಕೃತಿಯ ಹೆಗ್ಗುರುತಾಗಿದೆ. ರಾಷ್ಟ್ರಮಟ್ಟದಲ್ಲಷ್ಟೇ ಅಲ್ಲ, ಅಂತರರಾಷ್ಟ್ರೀಯಮಟ್ಟದಲ್ಲೂ ಗಮನ ಸೆಳೆಯುವಷ್ಟು ಶ್ರೀಮಂತವಾಗಿದೆ. ಜಗತ್ತಿನ ಜಾನಪದದ ಎಲ್ಲಾ ಮಾದರಿಗಳೂ ಕರ್ನಾಟಕ ಜಾನಪದದಲ್ಲಿ ದೊರೆಯುತ್ತವೆ. ದೇಶ ವಿದೇಶಗಳಲ್ಲೆಲ್ಲಾ ಕರ್ನಾಟಕ ಜಾನಪದವು ವಿದ್ವಾಂಸರ ಸಂವಾದಕ್ಕೆ ಮುಖಾಮುಖಿಯಾಗುತ್ತಿದೆ. ಇದು ಕರ್ನಾಟಕದ ಮಟ್ಟಿಗೆ ಹೆಮ್ಮೆಯ ವಿಷಯ.

ಕನ್ನಡ ಭಾಷಿಕ ಜಾನಪದದಲ್ಲಿ ಜನಪದ ಆಡುಮಾತು, ನುಡಿ, ನುಡಿಗಟ್ಟು, ಗಾದೆ ಒಗಟು, ಐತಿಹ್ಯ ಪುರಾಣ ಮೊದಲಾದವುಗಳ ಸಾಹಿತ್ಯ ಹೇರಳವಾಗಿದೆ. ಕನ್ನಡದಲ್ಲಿ ಐವತ್ತು ಸಾವಿರ ಗಾದೆಗಳಿವೆಯೆಂದು ಅಂದಾಜು ಮಾಡಲಾಗಿದೆ. ಈವರೆಗೆ ಮೂವತ್ತು ಸಾವಿರ ಗಾದೆಗಳು ಸಂಗ್ರಹವಾಗಿವೆ. ಐದು ಸಾವಿರಕ್ಕೂ ಮೇಲ್ಪಟ್ಟು ಒಗಟುಗಳಿದ್ದು ಮೂರು ಸಾವಿರದಷ್ಟು ದಾಖಲಾಗಿವೆ. ಕರ್ನಾಟಕದಲ್ಲಿ ಲಭ್ಯವಿರುವ ಐತಿಹ್ಯ, ಪುರಾಣ ನಂಬಿಕೆ, ನಡಾವಳಿ ಮುಂತಾದವುಗಳಿಗೆ ಲೆಕ್ಕವಿಲ್ಲ.

ವಾಕ್ ಪರಂಪರೆ, ಬಾಯ್ದೆರೆ ಪರಂಪರೆ, ಮೌಖಿಕ ಪರಂಪರೆ, ತೋಂಡಿ ಪರಂಪರೆ ಜನಪದ ಪರಂಪರೆ ಎಂದು ನಾನಾ ರೀತಿಯಲ್ಲಿ ಹೆಸರಾಗಿರುವ ಜಾನಪದವೆಂಬ ಅಕ್ಷಯನಿಧಿ ಕರ್ನಾಟಕದ ಕನ್ನಡಿಗರ ಅಸ್ಮಿತೆಯ, ಅನನ್ಯತೆಯ ಹೆಗ್ಗುರುತಾಗಿದೆ. ಭಾಷಿಕ ಸಾಹಿತ್ಯಿಕ, ಕ್ರಿಯಾತ್ಮಕ, ವೈಜ್ಞಾನಿಕ ಮೊದಲಾದ ಜಾನಪದದ ಎಲ್ಲ ಆಯಾಮಗಳಲ್ಲೂ ಕರ್ನಾಟಕದ ಜಾನಪದ ಮೌಲಿಕವಾಗಿ ಹರಡಿದೆ; ಅಕ್ಷರ ಸಂಸ್ಕೃತಿಯ ಶಿಷ್ಟಪದರಿಗೂ ಶಿಷ್ಟಕೃತಿಗಳಿಗೂ ಧಾರಾಳವಾಗಿ ತನ್ನ ಕೊಡುಗೆಯನ್ನು ನೀಡಿದೆ. ಕನ್ನಡದ ಬಹುತೇಕ ಶಿಷ್ಟ ಮಹಾಕೃತಿಗಳೆಲ್ಲ ಆಂಶಿಕವಾಗಿಯೋ, ಪೂರ್ಣವಾಗಿಯೋ ಕನ್ನಡ ಜಾನಪದಕ್ಕೆ ಋಣಿಯಾಗಿವೆ. ಕನ್ನಡದ ಆದಿ ಮಹಾಕವಿ ಪಂಪ, ಕುಮಾರವ್ಯಾಸ, ರತ್ನಾಕರ, ಲಕ್ಷ್ಮೀಶ ದೇವಚಂದ್ರ, ಮುದ್ದಣ, ವಚನಕಾರರು, ಹರಿದಾಸರು ಮೊದಲಾದ ಹಳಗನ್ನಡ ನಡುಗನ್ನಡ ಕವಿಕೃತಿಗಳಲ್ಲೂ ಕುವೆಂಪು, ಬೇಂದ್ರೆ, ಬೆಟಗೇರಿ ಕೃಷ್ಣಶರ್ಮ, ಗಿರೀಶ ಕಾರ್ನಾಡ, ಚಂದ್ರಶೇಖರ ಕಂಬಾರ, ಎಚ್.ಎಸ್. ಶಿವಪ್ರಕಾಶ ಮುಂತಾದ ಆಧುನಿಕ ಲೇಖಕರ ಗ್ರಂಥಗಳಲ್ಲೂ ಜನಪದ ಅಂಶಗಳು ಬಳಕೆಯಾಗಿವೆ. ಶಿಷ್ಟ ಸಾಹಿತ್ಯಕ್ಕೆ ಪರ್ಯಾಯವಾಗಿ ಕನ್ನಡ ಜನಪದ ಸಾಹಿತ್ಯ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದೆ.

ಕನ್ನಡದಲ್ಲಿ ಲಕ್ಷಾಂತರ ಅಜ್ಜಿ ಕಥೆ ಅಥವಾ ಜನಪದ ಕಥೆಗಳಿವೆ. ನಮ್ಮ ಕೆಲವು ಕಥೆಗಳು ದೇಶ ವಿದೇಶಗಳಲ್ಲಿ ಪ್ರಚಾರದಲ್ಲಿವೆ. ಕನ್ನಡ ಜನಪದ ಹಾಡುಗಳು ಲೆಕ್ಕಕ್ಕೆ ಸಿಗಲಾರದಷ್ಟಿವೆ. ಕಥನ ಕಾವ್ಯ, ಲಾವಣಿ, ಗೀಗೀಪದ, ಕೋಲಾಟದ ಪದ, ಮದುವೆ ಸೋಬಾನೆಪದ ಮೊದಲಾದವು ದಂಡಿಯಾಗಿವೆ. ಹತ್ತಾರು ಜನಪದ ಮಹಾಕಾವ್ಯಗಳೂ

ಇವೆ. ಮಲೆಮಾದೇಶ್ವರ, ಮಂಟೆಸ್ವಾಮಿ, ಜುಂಜಪ್ಪ ಮೊದಲಾದ ಸಾಂಸ್ಕೃತಿಕ ವೀರರ ದೀರ್ಘ ಕಾವ್ಯಗಳು ಈ ಬಗೆಯವು. ಕನ್ನಡದಲ್ಲಿ ವೃತ್ತಿಗಾಯಕರ ದಂಡೇ ಇದೆ. ಆಧುನಿಕರಲ್ಲಿ ಪಿ. ಕಾಳಿಂಗರಾವ್, ಎಸ್. ಕೆ. ಕರೀಂಖಾನ್, ಬಾಳಪ್ಪ ಹುಕ್ಕೇರಿ ಕೆ.ಆರ್.ಲಿಂಗಪ್ಪ, ಎಲ್.ಜಿ.ಸೋದರಿಯರು, ಬಾನಂದೂರು ಕೆಂಪಯ್ಯ ಮೊದಲಾದವರು ಜನಪದ ಗೀತಗಾಯನದಲ್ಲಿ ಜನಪ್ರಿಯರಾಗಿದ್ದಾರೆ.

ಕನ್ನಡ ಕ್ರಿಯಾತ್ಮಕ ಜಾನಪದ ವಿಭಾಗ ವ್ಯಾಪಕವಾದದ್ದು. ಇದರಲ್ಲಿ ಆಚರಣೆ. ಆರಾಧನೆ, ನಾಟಕ, ಕಲೆ ಮೊದಲಾದವು ಅಡಕವಾಗಿವೆ. ಕರ್ನಾಟಕದಲ್ಲಿ ಐದು ಸಾವಿರಕ್ಕೂ ಮಿಕ್ಕಿ ಜನಪದ ಆಚರಣೆಗಳಿವೆ. ವೃಕ್ಷಾರಾಧನೆ, ಫಲವಂತಿಕೆ ಆರಾಧನೆ, ಕೃಷಿ ಆರಾಧನೆ, ಪ್ರಾಣಿಪಕ್ಷಿ ಆರಾಧನೆ ಪ್ರಸಿದ್ಧವಾಗಿವೆ. ಜನಪದ ಗ್ರಾಮದೇವತೆಗಳ ಆರಾಧನೆಯ ಹಿನ್ನೆಲೆಯಲ್ಲಿ ಇವೆಲ್ಲ ಹರಡಿಕೊಂಡಿವೆ. ಕರಾವಳಿಯ ಯಕ್ಷಗಾನ ಬಯಲು ಸೀಮೆಯ ಮೂಡಲಪಾಯ ಯಕ್ಷಗಾನ ಕಲಾಶಿಖರಗಳಾಗಿವೆ. ತೊಗಲು ಗೊಂಬೆಯಾಟ ಸೂತ್ರದ ಗೊಂಬೆಯಾಟ ದೇಶ ವಿದೇಶಗಳಲ್ಲೂ ಹೆಸರಾಗಿವೆ. ಕರ್ನಾಟಕದಲ್ಲಿ ಇನ್ನೂರಕ್ಕೂ ಹೆಚ್ಚು ಜನಪದ ಕಲೆಗಳು ಜೀವಂತವಾಗಿವೆ. ಒಂದಾದರೂ ಜನಪದ ಕಲೆಯಿಲ್ಲದ ಊರು ಕರ್ನಾಟಕದಲ್ಲಿಲ್ಲ. ಸುಗ್ಗಿ ಕುಣಿತ, ಡೊಳ್ಳು ಕುಣಿತ, ಕಂಸಾಳೆ ಕುಣಿತ, ವೀರಗಾಸೆ ಕುಣಿತ ಈರರ ಕುಣಿತ, ವೀರಭದ್ರ ಕುಣಿತ, ಸೋಮನ ಕುಣಿತ, ಪೂಜಾಕುಣಿತ, ಕೀಲು ಕುದುರೆ ಕುಣಿತ, ಉಮ್ಮತ್ತಾಟ್ ಮೊದಲಾದವು ರೂಢಿಯಲ್ಲಿವೆ. ವಾದ್ಯ ವಾದನಗಳೂ ಸಾಕಷ್ಟಿವೆ. ಕಂಸಾಳೆ, ತಂಬೂರಿ, ಕಿನ್ನರಿ, ಗಣೆ, ತಮಟೆ, ಸುಂದರಿ, ಕರಡಿ ಮಜಲು ವಿಶಿಷ್ಟವಾಗಿವೆ. ಹಾಡು, ಕುಣಿತ, ವೇಷಭೂಷಣ ಕನ್ನಡ ಜನಪದ ಕಲೆಗಳ ಜೀವಾಳವಾಗಿವೆ.

ಕರ್ನಾಟಕದ ವೈಜ್ಞಾನಿಕ ಜಾನಪದ ಪ್ರತ್ಯೇಕ ಉಲ್ಲೇಖಕ್ಕೆ ಅರ್ಹವಾಗಿದೆ. ಕನ್ನಡದ ಸ್ತ್ರೀಪುರುಷರು ಜನಪದ ವೈದ್ಯಕ್ಷೇತ್ರವನ್ನು ಸಮೃದ್ಧಗೊಳಿಸಿದ್ದಾರೆ. ಈ ವಿಭಾಗದ ಅರಿವು ಶುದ್ಧ ವಿಜ್ಞಾನವೂ ಆಶ್ಚರ್ಯಪಡುವಷ್ಟು ಅರ್ಥಗರ್ಭಿತವಾಗಿದೆ. ಕರ್ನಾಟಕದ ಹಲವು ಶಿಷ್ಟ ವೈದ್ಯಪದ್ಧತಿಗಳಿಗೆ ಜನಪದ ವೈದ್ಯಪದ್ಧತಿ ಸಹಾಯಕವಾಗಿದೆ. ಇದನ್ನು ಅಭಿವೃದ್ಧಿಪಡಿಸಿ ಬಳಕೆಗೆ ತಂದರೆ ಜನಸಮೂಹಕ್ಕೆ ಬಹಳ ಉಪಯೋಗವಾಗುತ್ತದೆ.

ಕರ್ನಾಟಕ ಜಾನಪದ ಪರಂಪರೆಯಲ್ಲಿ ಸ್ತ್ರೀಯರ ಹಾಗೂ ಪುರುಷರ ಪಾಲು ಸಮಸಮವಾಗಿದೆ. ಕಾಯಕದಿಂದ ಕಾವ್ಯ ಹುಟ್ಟಿದೆ; ನಂಬಿಕೆಯಿಂದ ಆಚರಣೆ ಹುಟ್ಟಿದೆ; ಸೃಜನ ಶೀಲತೆಯಿಂದ ಸಾಹಿತ್ಯ ಹುಟ್ಟಿದೆ; ಕಲ್ಪನೆಯಿಂದ ಕಲೆ ಹುಟ್ಟಿದೆ. ಒಟ್ಟನಲ್ಲಿ ಜನಪದ ಜೀವನ ವಿಧಾನದ ವಿದ್ಯಮಾನಗಳೆಲ್ಲಾ ಮೌಖಿಕ ಜಾನಪದದ ಹುಟ್ಟಿಗೆ ಕಾರಣವಾಗಿವೆ. ಕನ್ನಡ ಜನಸಮೂಹದ ನಡುವೆ. ಕನ್ನಡ ಜಾನಪದ ಬೇರುಬಿಟ್ಟಿದೆ. ಅಲ್ಪಸ್ವಲ್ಪ ವಲಸೆ ಸಂದರ್ಭದಲ್ಲಿ ಅದೂ ವಲಸೆಗೊಂಡಿದೆ. ಕರ್ನಾಟಕ ಜಾನಪದದಲ್ಲಿ ಕನ್ನಡಿಗರ ಅಶೋತ್ತರಗಳು, ಪ್ರತಿಭಾ ಹೊಳಹುಗಳು ಮುಕ್ತವಾಗಿ ಅನಾವರಣಗೊಂಡಿವೆ.

ಪ್ರಾಚೀನ ಕಾಲದಿಂದ ಕರ್ನಾಟಕದಲ್ಲಿ ಹೊರಹೊಮ್ಮಿದ ಜಾನಪದವೆಲ್ಲ ಈಗ ಲಭ್ಯವಿಲ್ಲ. ಹುಟ್ಟಿದುದರಲ್ಲಿ ಉಳಿದಿರುವುದು ಅಲ್ಪ; ಕಣ್ಮರೆಯಾಗಿರುವುದು ಕಲ್ಪ. ಕರ್ನಾಟಕದಲ್ಲಿ ಮೌಖಿಕ ಸಂಸ್ಕೃತಿಯನ್ನು ಅಕ್ಷರ ಸಂಸ್ಕೃತಿಯಲ್ಲಿ ದಾಖಲಿಸುವ ಪರಿಪಾಠ

ಇತ್ತೀಚೆಗೆ ವಿದೇಶಿಯರಿಂದ ಪ್ರಾರಂಭವಾಯಿತು. ನಮ್ಮ ಸುತ್ತ ಜಾನಪದ ಮುತ್ತಿಕೊಂಡಿದ್ದರೂ ಅದರ ದಾಖಲೀಕರಣದತ್ತ ನಮ್ಮ ಗಮನ ಹರಿದಿರಲಿಲ್ಲ.

ಬ್ರಿಟಿಷರು ನಮ್ಮನ್ನು ಆಳುವ ಸಲುವಾಗಿ, ನಮ್ಮ ಮನಃಸ್ಥಿತಿಯನ್ನು ಶೋಧಿಸುವ ಉದ್ದೇಶದಿಂದ, ನಮ್ಮ ಮೂಲ ಸಾಹಿತ್ಯ ಸಂಗ್ರಹಕ್ಕೆ ತೊಡಗಿದಾಗ, ಆಕಸ್ಮಿಕವಾಗಿ ಅಲ್ಪಸ್ವಲ್ಪ ಮೌಖಿಕ ಸಾಹಿತ್ಯ ಸಂಗ್ರಹವಾಯಿತು. ಕರ್ನಾಟಕ ಜಾನಪದ ಅಕ್ಷರ ರೂಪಕ್ಕಿಳಿಯಲು ವಿದೇಶಿಯರು ಕಾರಣರಾದರು. ಅವರ ಸಂಗ್ರಹದ ಉದ್ದೇಶ ಏನೇಯಿರಲಿ ಇಂದಿನ ವೈಜ್ಞಾನಿಕ ಅಧ್ಯಯನಕ್ಕೆ ಅವರು ನಾಂದಿ ಹಾಡಿದ್ದು ನಿಜ. ಭಾರತದ ಸ್ವಾತಂತ್ರ್ಯ ಪೂರ್ವದಲ್ಲಿ ಹಾಗೂ ಸ್ವಾತಂತ್ರ್ಯೋತ್ತರದಲ್ಲಿ ಕರ್ನಾಟಕ ಜಾನಪದ ಅಧ್ಯಯನದ ಹೆಜ್ಜೆ ಗುರುತುಗಳನ್ನು ಪರಿಗಣಿಸುವುದು ಚಾಲ್ತಿಯಲ್ಲಿದೆ.

ಹತ್ತೊಂಬತ್ತನೇ ಶತಮಾನದ ಪ್ರಾರಂಭದಲ್ಲಿ ಜಾನ್ ಲೇಡನ್ ಎಂಬ ವಿದೇಶಿಯನು ಟಿಪ್ಪುಸುಲ್ತಾನನನ್ನು ಕುರಿತ ಕೆಲವು ಲಾವಣಿಗಳನ್ನು ಸಂಗ್ರಹಿಸಿ, ಇಂಗ್ಲಿಷ್ ಭಾಷೆಗೆ ಅನುವಾದಿಸಿ ಪ್ರಕಟಿಸಿದ್ದಾನೆ. ಚಾರ್ಲ್ಸ್ ಇ. ಗೋವರ್ ಎಂಬಾತ ಕೆಲವು ಜನಪದ ಗೀತೆಗಳನ್ನು ಸಂಗ್ರಹಿಸಿದ್ದಾನೆ. ಜಾನ್ ಫೇತ್‌ಫುಲ್ ಫ್ಲೀಟ್ ಗಂಭೀರ ಚಾರಿತ್ರಿಕ ಲಾವಣಿಗಳನ್ನು ಸಂಗ್ರಹಿಸಿ ಅಚ್ಚಿಸಿದ್ದಾನೆ. ಡಾ. ರೆವಡೆಂಡ್ ಫರ್ಡಿನೆಂಡ್ ಕಿಟೆಲ್ ಕನ್ನಡ-ಇಂಗ್ಲಿಷ್ ನಿಘಂಟು ಸಿದ್ಧಪಡಿಸಿದ್ದಾನೆ. ಇದರಲ್ಲಿ ನಾಲ್ಕು ಸಾವಿರ ಕನ್ನಡ ಗಾದೆಗಳಿವೆ. ಮೇರಿ ಫ್ರಿರೇ ಎಂಬಾಕೆ ಕೆಲವು ಜನಪದ ಕಥೆಗಳನ್ನು ಸಂಗ್ರಹಿಸಿ ಇಂಗ್ಲಿಷ್ ಭಾಷೆಗೆ ಅನುವಾದಿಸಿದ್ದಾಳೆ. ಟಿಪ್ಪುಸುಲ್ತಾನನ ಕಾಲದ ಪ್ರವಾಸಿಗರು, ತಪ್ಪಿಸಿಕೊಂಡ ಖೈದಿಗಳು ಬರೆದಿರುವ ಕಥನಗಳಲ್ಲಿ ಕನ್ನಡ ಜನಪದ ವಿದ್ಯಮಾನಗಳಿವೆ. ಅಬೆ ಡು ಬಾಯಿಸನ 'ಹಿಂದು ಮ್ಯಾನರ್ಸ್, ಕಸ್ಟಮ್ಸ್ ಎಂಡ್ ಸೆರೆಮೊನೀಸ್' ಎಂಬ ಬೃಹತ್ ಗ್ರಂಥದಲ್ಲಿ ಕರ್ನಾಟಕ ಜಾನಪದಕ್ಕೆ ಸಂಬಂಧಿಸಿದ ಅಧಿಕ ಮಾಹಿತಿಗಳಿವೆ. ಇದು ಭಾರತ ಜಾನಪದದ ಮೊದಲ ಅಧ್ಯಯನ ಕೃತಿಯೆಂದು ಹೆಸರಾಗಿದೆ.

ಸ್ವಾತಂತ್ರ್ಯಪೂರ್ವದಲ್ಲಿ ಕರ್ನಾಟಕದ ವಿದ್ಯಾವಂತರು, ವಿದೇಶಿಯರ ಅನುಕರಣೆಯಿಂದಲೋ, ಸ್ವಂತ ಆಸಕ್ತಿಯಿಂದಲೋ ಜನಪದ ಸಾಹಿತ್ಯ ಸಂಗ್ರಹ, ಸಂಪಾದನೆಗೆ ತೊಡಗಿ ಕೆಲವು ಅಮೂಲ್ಯ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಕೊಡಗಿನ ನಡಕೇರಿಯಂಡ ಚಿಣ್ಣಪ್ಪ ಅವರ 'ಪಟ್ಟೋಲೆ ಪಳಮೆ', ಹಲಸಂಗಿ ಗೆಳೆಯರ 'ಗರತಿಯ ಹಾಡು' ಕಾಪಸೆ ರೇವಪ್ಪ ಅವರ 'ಮಲ್ಲಿಗೆದಂಡೆ', ಸಿಂಪಿ ಲಿಂಗಣ್ಣ ಮತ್ತು ಪಿ. ಧೂಲಾ ಸಾಹೇಬರ 'ಜೀವನ ಸಂಗೀತ,' ಅರ್ಚಕ ಬಿ. ರಂಗಸ್ವಾಮಿ ಅವರ 'ಹುಟ್ಟಿದಹಳ್ಳಿ-ಹಳ್ಳಿಯಬಾಳು' ಬಿ.ಎನ್.ರಂಗಸ್ವಾಮಿ ಅವರ 'ಹಳ್ಳಿಯ ಪದಗಳು', ಮತಿಘಟ್ಟ ಸೋದರರ 'ನಾಡಪದಗಳು' ದೇವುಡು ಅವರ 'ಕರ್ನಾಟಕ ಸಂಸ್ಕೃತಿ' ಮೊದಲಾದ ಗ್ರಂಥಗಳು ನಾನಾ ಕಾರಣಗಳಿಗಾಗಿ ಉಪಯುಕ್ತವಾಗಿವೆ. ಸ್ವಾತಂತ್ರ್ಯ ಪೂರ್ವದ ಜನಪದ ಕಾಯಕ ಮುಖ್ಯವಾಗಿ ಸಂಗ್ರಹ ಮತ್ತು ಪ್ರಕಟಣೆಗೆ ಮೀಸಲಾಗಿದೆ.

ಭಾರತದ ಸ್ವಾತಂತ್ರ್ಯೋತ್ತರ ಕಾಲದಲ್ಲಿ, ಕರ್ನಾಟಕ ಜಾನಪದದ ಸಂಗ್ರಹ ಸಂಪಾದನೆ, ಪ್ರಕಟಣೆ, ಅಧ್ಯಯನ, ವೈಜ್ಞಾನಿಕ ನೆಲೆಗಟ್ಟಿನಲ್ಲಿ ಮುಂದುವರಿಯಿತು.

ಬಿ.ಎಸ್. ಗದ್ದಗಿಮಠ, ಕರಾಕೃ, ಜೀ. ಶಂ. ಪರಮಶಿವಯ್ಯ, ಎಚ್.ಎಲ್. ನಾಗೇಗೌಡ ಎಚ್.ಜೆ. ಲಕ್ಕಪ್ಪ ಗೌಡ, ಡಿ. ಲಿಂಗಯ್ಯ, ಎಲ್.ಆರ್. ಹೆಗಡೆ, ಎನ್.ಆರ್. ನಾಯಕ ವೀರಣ್ಣ ದಂಡೆ, ಅಂಬಳಿಕೆ ಹಿರಿಯಣ್ಣ, ರಾಗೌ, ಕ್ಯಾತನಹಳ್ಳಿ ರಾಮಣ್ಣ ಹೀ.ಚಿ. ಬೋರಲಿಂಗಯ್ಯ, ಪಿ.ಕೆ. ರಾಜಶೇಖರ ಮೊದಲಾದವರು ವೈವಿಧ್ಯಮಯವಾದ ಜನಪದ ಸಾಹಿತ್ಯವನ್ನು ಸಂಗ್ರಹಿಸಿ, ಪ್ರಕಟಿಸಿದ್ದಾರೆ. ಕೆಲವರು ವಿಶ್ಲೇಷಣೆಯನ್ನು ಮಾಡಿದ್ದಾರೆ. ೧೯೬೬ರಲ್ಲಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಜಾನಪದವು ಅಧ್ಯಯನದ ವಿಷಯವಾಯಿತು. ಜಾನಪದ ಸಂಗ್ರಹ, ಸಂರಕ್ಷಣೆ, ಸಂವರ್ಧನೆ, ತರಬೇತಿಗಳಿಗಾಗಿ ಕೆಲವು ಸಂಸ್ಥೆಗಳು ತಲೆಯೆತ್ತಿದವು. ಅವುಗಳಲ್ಲಿ ಎಚ್.ಎಲ್. ನಾಗೇಗೌಡರು ಸ್ಥಾಪಿಸಿದ 'ಕರ್ನಾಟಕ ಜಾನಪದ ಪರಿಷತ್ತು,' ಕರ್ನಾಟಕ ರಾಜ್ಯ ಸರ್ಕಾರದ 'ಜಾನಪದ ಅಕಾಡೆಮಿ' ಮುಖ್ಯವಾಗಿವೆ.

ಇಪ್ಪತ್ತೊಂದನೆಯ ಶತಮಾನದ ಆದಿಯಲ್ಲಿ 'ಕರ್ನಾಟಕ ರಾಜ್ಯ ಜಾನಪದ ವಿಶ್ವವಿದ್ಯಾಲಯ' ಆರಂಭಗೊಂಡಿದೆ. ಇದು ವಿಶ್ವದಲ್ಲೇ ಮೊದಲನೆಯ ಜಾನಪದ ವಿಶ್ವವಿದ್ಯಾಲಯವಾಗಿದೆ. ಇದರ ಕಾರ್ಯಸಾಧನೆಯ ಬಗೆಗೆ ಕರ್ನಾಟಕ ರಾಜ್ಯ ಹಲವು ನಿರೀಕ್ಷೆಗಳನ್ನು ಇಟ್ಟುಕೊಂಡಿದೆ. ಇಪ್ಪತ್ತೊಂದನೆಯ ಶತಮಾನ ಮುಖ್ಯವಾಗಿ ಜಾನಪದದ ಸರ್ವತೋಮುಖ ಏಳಿಗೆಗೂ, ಸಂರಕ್ಷಣೆ, ಸಂವರ್ಧನೆಗೂ ಸಂಬಂಧಿಸಿದ್ದಾಗಿದೆ.

ಭಾರತದ ಯಾವ ರಾಜ್ಯದಲ್ಲೂ ಕಾಣದಷ್ಟು ಜಾನಪದ ಚಟುವಟಿಕೆಗಳು ಕರ್ನಾಟಕದಲ್ಲಿ ನಡೆದಿವೆ, ನಡೆಯುತ್ತಿವೆ. ಇತರ ರಾಜ್ಯಗಳಿಗಿಂತ ಕರ್ನಾಟಕದಲ್ಲಿ ಹೆಚ್ಚು ಜನ ಜಾನಪದ ವಿದ್ವಾಂಸರಿದ್ದಾರೆ. ಕನ್ನಡದಲ್ಲಿ ಐದು ಸಾವಿರಕ್ಕೂ ಮೀರಿ ಜಾನಪದ ಗ್ರಂಥಗಳು ಪ್ರಕಟವಾಗಿವೆ. ಇಷ್ಟಾದರೂ ಕನ್ನಡ ಜಾನಪದದ ಸಂಗ್ರಹ, ದಾಖಲೀಕರಣ ಅಧ್ಯಯನ ಮುಗಿಯಿತು ಎನ್ನುವಂತಿಲ್ಲ.

ಕರ್ನಾಟಕದ ನಿರ್ದಿಷ್ಟ ಜಾತಿ, ವೃತ್ತಿ, ಸಮುದಾಯದಲ್ಲಿ ಹೆಚ್ಚಾಗಿ ಸೃಷ್ಟಿಯಾಗಿರುವ ಜಾನಪದ ಇಂದು ಸರ್ವರ ಕಲಿಕೆಯ ಹಾಗೂ ಅಧ್ಯಯನದ ವಿಷಯವಾಗಿದೆ. 'ಕಲಿಯದವರಿಂದ ಕಲಿತವರಿಗೆ ಕಲಿಸುವ' ತರಬೇತಿ ಕೇಂದ್ರಗಳು ವಿಶೇಷವಾಗಿ ಕಾರ್ಯೋನ್ಮುಖವಾಗಿವೆ. ಸಮಾಜದ ಎಲ್ಲಾ ವರ್ಗದ ಆಸಕ್ತ ಯುವಕ ಯುವತಿಯರು ಕಲಿಕೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದಾರೆ. ಮುಂದೆ ಜನಪದ ಕುಣಿತ, ಸಂಗೀತ ಅಭಿನಯ, ಸೃಜನಶೀಲತೆ ಇಂಥವರ ಸ್ವತ್ತಾಗಲಿವೆ. ಈ ಎಲ್ಲದರ ಹಿನ್ನೆಲೆಯಲ್ಲಿ ಜಾನಪದವನ್ನು ಜೀವಂತವಾಗಿ ಉಳಿಸಿಕೊಳ್ಳುವ, ಬೆಳೆಸಿಕೊಳ್ಳುವ ಸದುದ್ದೇಶದ ಕಾಳಜಿಯಿದೆ.

ಜನಪದ ಆರಾಧನೆಯ ಹಿನ್ನೆಲೆಯಲ್ಲಿ ಸೃಷ್ಟಿಗೊಂಡ ಜನಪದ ಕಲೆಗಳು ಇಂದು ಮನೋರಂಜನೆಯ ಮಾಧ್ಯಮಗಳಾಗಿವೆ. ಕೇವಲ ಹಳ್ಳಿಗಳಲ್ಲಿ, ಹಳ್ಳಿಗರಲ್ಲಿ ಹಾಸುಹೊಕ್ಕಾಗಿದ್ದ ಇವು ಪಟ್ಟಣಗಳಲ್ಲೂ, ಪಟ್ಟಣಿಗರಲ್ಲೂ ಕುತೂಹಲ ಕೆರಳಿಸುತ್ತಿವೆ. ಬೆಂಗಳೂರಿನಂತಹ ಐಟಿ, ಬಿಟಿ ವೈಜ್ಞಾನಿಕ ನಗರದ ನಾಗರಿಕರ ಮೈ ಮನಗಳನ್ನು ಜನಪದ ಕಲೆಗಳು ರೋಮಾಂಚನಗೊಳಿಸುತ್ತಿವೆ. 'ಜಾನಪದ ಜಾತ್ರೆ' ಕಾರ್ಯಕ್ರಮದ

ಜನದಟ್ಟಣೆಯೇ ಇದಕ್ಕೆ ಸಾಕ್ಷಿಯಾಗಿದೆ. ಪಟ್ಟಣಿಗರಿಗೂ ಜಾನಪದದ ಅನಿವಾರ್ಯತೆ ಇದೆಯೆಂಬುದನ್ನು ಇದು ಸಾಬೀತುಪಡಿಸುತ್ತದೆ. ಜಾಗತಿಕ ಮಟ್ಟದ ಎಚ್ಚೆತ್ತ ನಾಗರಿಕರಂತೆ ಕನ್ನಡ ನಾಗರಿಕರೂ ಜಾನಪದದ ಉಳಿವಿಗೆ ಶ್ರಮಿಸುತ್ತಿರುವುದು ಎದ್ದು ಕಾಣುತ್ತಿದೆ. ನಾಗರಿಕರ ಬದುಕಿಗೆ, ನಾಗರಿಕರ ಸೃಜನಶೀಲತೆಗೆ ಜನಪದ ಸಂಜೀವಿನಿಯಂತೆ ಮರುಚೈತನ್ಯ ನೀಡುವುದು, ಜಾನಪದದ ಪ್ರಸ್ತುತತೆಗೆ ಕಾರಣವಾಗಿದೆ. ಮಾನವೀಯ ಮೌಲ್ಯಗಳು ಇಲ್ಲದಿದ್ದರೆ ಕರ್ನಾಟಕ ಜಾನಪದ, ಪರಂಪರೆಯಾಗಿ ರೂಪುಗೊಂಡು ನಿರಂತರವಾಗಿ ಮುಂದುವರಿಯುತ್ತಿರಲಿಲ್ಲ. ಒಟ್ಟಿನಲ್ಲಿ ಕರ್ನಾಟಕ ಜಾನಪದ ಜನಪರ ವಾದದ್ದು, ಜೀವಪರ ವಾದದ್ದು, ಸಮಾಜಮುಖಿಯಾದದ್ದು, ಸಮಷ್ಟಿ ಹಿತಾಕಾಂಕ್ಷಿ ಯಾದದ್ದು, ಸಾರ್ವಕಾಲಿಕ ವಾದದ್ದು, ಸರ್ವಮಾನ್ಯವಾದದ್ದು.

ಜೀವಪರವಾದ ಜಾನಪದವನ್ನು ಬಿಟ್ಟು ಯಾವ ಜನಾಂಗವೂ ಆರೋಗ್ಯ ಪೂರ್ಣವಾಗಿ ಬದುಕಲಾರದು. ಅದಕ್ಕೆ ಪೂರಕವಾಗಿ, ಜಾಗತೀಕರಣದ ಹೊಡೆತದಲ್ಲೂ ಕರ್ನಾಟಕ ಜಾನಪದ ಉಸಿರಾಗಿದೆ, ಹಸಿರಾಗಿದೆ. ಎಚ್ಚೆತ್ತ ಕನ್ನಡಿಗರ ಮುಂದಾಲೋಚನೆ ಯಿಂದ ಕರ್ನಾಟಕ ಜಾನಪದ ಪರಂಪರೆ ಹೆದ್ದಾರಿಯಲ್ಲಿ ಸಾಗುತ್ತಿದೆ; ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಮೇಲಾಗಿ ಮೆರೆಯುತ್ತದೆ.




ಕರ್ನಾಟಕದ ನೃತ್ಯಶಿಲ್ಪಗಳಲ್ಲಿಯ ವೈವಿಧ್ಯ

■ **ಡಾ. ಚೂಡಾಮಣಿ ನಂದಗೋಪಾಲ್**

ಕರ್ನಾಟಕದ ಕಲೆ, ಇತಿಹಾಸ ಮತ್ತು ಸಾಂಸ್ಕೃತಿಕ ಜಗತ್ತನ್ನು ಒಂದು ಸಣ್ಣ ಸಮೀಕ್ಷೆಗೆ ಒಳಪಡಿಸಿದಾಗ, ಕಂಡುಬರುವ ವಿಷಯ ವೇನೆಂದರೆ ಈಗ್ಗೆ ಮೂವತ್ತು ವರ್ಷಗಳಿಂದ ಈಚೆಗೆ ಕರ್ನಾಟಕದ ಶಿಲ್ಪ, ವಾಸ್ತುಶಿಲ್ಪ ಅದರಲ್ಲಿಯೂ ನೃತ್ಯಶಿಲ್ಪಗಳನ್ನು ಕುರಿತಾದ ಸಂಶೋಧನೆ, ಬರಹಗಳು ಹಾಗೂ ಗ್ರಂಥಪ್ರಕಟಣೆಗಳು ಹೊರ ಬರಲಾರಂಭಿಸಿದವು. ಅಂತರಶಿಸ್ತಿನ ಮತ್ತು ಬಹುಶಿಸ್ತಿನ ಅಧ್ಯಯನದ ವ್ಯಾಪ್ತಿಯಲ್ಲಿ ಸಾಂಸ್ಕೃತಿಕ ಸಂಶೋಧನೆ ಎಳೆಎಳೆಯಾಗಿ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ನೃತ್ಯ ಶಿಲ್ಪಗಳ ಅಧ್ಯಯನ ಇಂದು ವ್ಯಾಪಕವಾಗಿ ಬೆಳೆಯುತ್ತಿರುವ ಕ್ಷೇತ್ರ. ಇದಕ್ಕೆ ನಾಂದಿ ಹಾಡಿದ್ದು ಮೈಸೂರು ವಿಶ್ವವಿದ್ಯಾಲಯದಿಂದ ಹೊರಬಂದ ಸಂಶೋಧನೆ 'ಕರ್ನಾಟಕದ ವಾಸ್ತುಶಿಲ್ಪದಲ್ಲಿ ನೃತ್ಯ ಮತ್ತು ಸಂಗೀತ' (ಡಾ. ಚೂಡಾಮಣಿ ನಂದಗೋಪಾಲ್ ಅವರು ಪ್ರೊ. ಎ.ವಿ. ನರಸಿಂಹಮೂರ್ತಿಯವರ ಮಾರ್ಗದರ್ಶನದಲ್ಲಿ ೧೯೮೫ರಲ್ಲಿ ಬಹುಶಿಸ್ತಿನಡಿಯಲ್ಲಿ ಕೈಗೊಳ್ಳಲಾದ ಪಿಎಚ್.ಡಿ. ಸಂಶೋಧನೆ). ಅಂದಿನಷ್ಟೆ ಇಂದಿಗೂ ಈ ಕ್ಷೇತ್ರ ಹೊಚ್ಚಹೊಸ ವಿಷಯಗಳನ್ನು ಒಳಗೊಂಡು ಸಂಶೋಧನಾರ್ಥಿಗಳಿಗೆ ನಿರಂತರ ಸ್ಫೂರ್ತಿಯನ್ನು ನೀಡುತ್ತಾ ಇದೆ. ಇದಕ್ಕೆ ಮೂಲವಾದ ಕಾರಣವೆಂದರೆ ಕರ್ನಾಟಕದ ವೈವಿಧ್ಯಪೂರ್ಣ ನೃತ್ಯಶಿಲ್ಪಗಳು.

ನೃತ್ಯಶಿಲ್ಪಗಳು ಕರ್ನಾಟಕದಲ್ಲಿ ಶಾತವಾಹನರ ಕಾಲದಿಂದ ಆರಂಭವಾಗಿ ವಿಜಯನಗರ ಮತ್ತು ಆನಂತರ ಬಂದ ಪಾಳೆಯಗಾರರ ಕಾಲದಲ್ಲೂ ದೇವಾಲಯ ರಚನೆಯ



ಅವಕಾಶವೊದಗಿದಾಗಲೆಲ್ಲ ಪ್ರಯೋಗಗೊಂಡು ಸಮಾರು ಎರಡು ಸಾಪಿರ ವರ್ಷಗಳ ಬೆಳವಣಿಗೆಯನ್ನು ಸೂಚಿಸುತ್ತವೆ. ಶಾತವಾಹನರ ಕಾಲದಲ್ಲಿ ಬೌದ್ಧಧರ್ಮ ಪ್ರಚಾರಕ್ಕಾಗಿ ಯಕ್ಷಿಯರನ್ನು ನೃತ್ಯಭಂಗಿಗಳಲ್ಲಿ ಸೃಜಿಸಲಾಗಿದೆ. ನಂತರದ ಚಾಲುಕ್ಯ, ರಾಷ್ಟ್ರಕೂಟ ಸೇವುಣ, ಹೊಯ್ಸಳ ವಿಜಯನಗರ ಮತ್ತು ಪಾಳೇಗಾರರ ಆಳ್ವಿಕೆಯಲ್ಲಿ ನೃತ್ಯಶಿಲ್ಪಗಳು ಬೆಳೆದು ಬಂದ ರೀತಿ ಸೋಜಿಗವಾಗಿದೆ. ಈ ಕಾಲಘಟ್ಟದಲ್ಲಿ ಕರ್ನಾಟಕದಲ್ಲೇ ಪ್ರಯೋಗದಲ್ಲಿದ್ದ ಭರತನ ನಾಟ್ಯಶಾಸ್ತ್ರ ನೃತ್ಯಕಲೆ ಮತ್ತು ನೃತ್ಯ ಶಿಲ್ಪಗಳ ಬೆಳವಣಿಗೆಗೆ ಮೂಲ ಆಧಾರವಾಗಿದೆ ಎಂದರೆ ತಪ್ಪಾಗಲಾರದು.

ಕರ್ನಾಟಕದ ಶಿಲ್ಪಕಲಾ ಪರಂಪರೆಯನ್ನು ವಿವಿಧ ಕಾಲಘಟ್ಟದಲ್ಲೂ ಅಭ್ಯಸಿಸುವ ಅವಕಾಶದಿಂದ ಭಾರತೀಯ ನೃತ್ಯಕಲಾ ಪರಂಪರೆಯ ಮತ್ತು ನೃತ್ಯಶಿಲ್ಪಗಳ ಸಮಗ್ರ ಪರಿಚಯವೇ ಆಗುವುದೆಂಬುದನ್ನು ಇಲ್ಲಿ ಗಮನಿಸಬೇಕು. ಕರ್ನಾಟಕದ ಕಲಾರಚನೆಗಳು ಭಾರತೀಯ ಸೌಂದರ್ಯ ಮೀಮಾಂಸೆಯ ತತ್ತ್ವಗಳನ್ನು ಸಾರವತ್ತಾಗಿ ಪ್ರತಿಪಾದಿಸುವು ದರಿಂದ ಭಾರತೀಯ ಕಲೆ ಮತ್ತು ಸಂಸ್ಕೃತಿಯ ಅಧ್ಯಯನಕ್ಕೆ ಕರ್ನಾಟಕದ ಕೊಡುಗೆಯು ವೈಶಿಷ್ಟ್ಯ ಪೂರ್ಣವಾದುದಾಗಿದೆ. (ಚೂಡಾಮಣಿ–ಶಿಲೆ–ಕಲೆ–ಪು. ೧೬೧) ನೃತ್ಯವು ಶ್ರವ್ಯ ಮತ್ತು ದೃಶ್ಯಾತ್ಮಕ ರಂಗಕಲೆಯಾಗಿದ್ದರೆ, ಶಿಲ್ಪವು ಪೂರ್ಣಪ್ರಮಾಣದ ದೃಶ್ಯಕಲೆ. ಈ ಎರಡೂ ಕಲೆಗಳು ಭಿನ್ನ ಸ್ವರೂಪದವುಗಳಾಗಿದ್ದು, ಮಾನವನ ಭಾವನೆ ಮತ್ತು ಸೌಂದರ್ಯ ತತ್ತ್ವಪ್ರತಿಪಾದನೆಯನ್ನು ಮೆರೆವ ವಿಶಿಷ್ಟ ಕಲಾಪ್ರಕಾರಗಳು. ಭಾವ ಪ್ರತಿಪಾದನೆ ಹಾಗೂ ರಸಾನಂದ ಅನುಭವ ಈ ಎರಡೂ ಕಲೆಗಳ ಮೂಲಧ್ಯೇಯ. ಈ ಎರಡೂ ವಿಭಿನ್ನ ಕಲೆಗಳು ಒಂದೇ ಮಾಧ್ಯಮದಲ್ಲಿ ತಮ್ಮ ಸೊಬಗನ್ನು ಕಂಡುಕೊಂಡಿದ್ದು ನಮ್ಮ ಸಾಂಸ್ಕೃತಿಕ ಸಂಕೇತಗಳಂತೆ ಭಾರತದ ಉದ್ದಗಲಕ್ಕೂ ತಲೆಯೆತ್ತಿರುವ ದೇವಾಲಯಗಳ ನಿರ್ಮಾಣದಲ್ಲಿ. ಈ ಯುಗಳ ಕಲೆಗಳು ಒಂದು ವಾಹಿನಿಯಲ್ಲಿ ತಮ್ಮ ಸಾಧನೆಯ ಸಾರ್ಥಕತೆಯನ್ನು ಪಡೆಯಲು ಮೂಲಕಾರಣ ನೃತ್ಯಕಲೆಯ ಅನ್ವಯವು ದೇವಾಲಯ ಪ್ರಾಂಗಣದಲ್ಲಿ ಈ ರೀತಿ ಜೀವಂತಗೊಂಡಿದ್ದು. (ಶಿಲೆ–ಕಲೆ ಪು. ೧೫೯)

ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ ಮತ್ತು ವಿಜಯನಗರ ಅರಸರ ಕಾಲದಲ್ಲಿ ಕಟ್ಟಿಸಲಾದ ದೇವಾಲಯಗಳ ಪರಿಸರದಲ್ಲಿ ದೇವರ ಸೇವೆಗಾಗಿ ನರ್ತಿಸುತ್ತಿದ್ದ ನೃತ್ಯ ಕಲಾವಿದೆಯರ ಬಗ್ಗೆ ಬೆಳಕು ಚೆಲ್ಲುವ ಅನೇಕ ಶಾಸನಗಳು ದೇವಾಲಯ ಪರಿಸರದಲ್ಲಿ ನೃತ್ಯಕಲಾ ಪೋಷಣೆಯ ಬಗ್ಗೆ ಸಮರ್ಥಿಸುತ್ತವೆ. ಅದರೊಂದಿಗೆ ನಾಟ್ಯಾಚಾರ್ಯರು ಸಂಗೀತಗಾರರು, ವಾದ್ಯಗಾರರೆಲ್ಲರನ್ನೂ ದೇವಾಲಯ ವ್ಯವಸ್ಥೆಯಲ್ಲಿ ಸೇರಿಸಲಾಗಿದ್ದು ಒಂದು ಕಲಾತ್ಮಕ ಪರಿಸರವು ಅಲ್ಲಿ ಏರ್ಪಾಡಾಗಿರುತ್ತಿತ್ತು. ಈ ರಸದೌತಣವನ್ನು ರೂವಾರಿಗಳು, ಸ್ಥಪತಿಗಳು ಅನುಭವಿಸುವುದರೊಂದಿಗೆ ತಮ್ಮ ಕಲೆಗಳಲ್ಲಿಯೂ ಪ್ರಯೋಗಿಸ ತೊಡಗಿದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ನೃತ್ಯಶಿಲ್ಪಗಳು ಸ್ಥಾನವನ್ನು ಪಡೆದುಕೊಂಡವು.

ದೇವಾಲಯ ವಾಸ್ತುರಚನೆಯಲ್ಲಿ ಶಿಲ್ಪಕಲಾ ಪ್ರತಿಪಾದನೆಯು ಮಹತ್ವವೆನಿಸುತ್ತದೆ. ಅಲಂಕಾರಿಕ ವಿನ್ಯಾಸ ಮತ್ತು ಚಿತ್ತಾರಗಳಿಗಿಂತಲೂ ಮಾನವಾಕೃತಿಯ ಶಿಲ್ಪಗಳ ಸಂಖ್ಯೆ ಹೆಚ್ಚು ಬೆಳೆಯತೊಡಗಿತು. ದೇವತಾಮೂರ್ತಿಗಳನ್ನು ಶಿಲ್ಪಶಾಸ್ತ್ರ ಮತ್ತು ಆಗಮಶಾಸ್ತ್ರ

ಪುರಾಣಗಳ ಆಧಾರಗಳಿಂದ ರಚಿಸಿದರೆ, ನಾಟ್ಯಶಿಲ್ಪಗಳನ್ನು ನಾಟ್ಯಶಾಸ್ತ್ರದ ಆಧಾರದ ಮೇಲೆ ರಚಿಸುವ ಪರಿಪಾಠವಾಯಿತು. ಪ್ರಾರಂಭದಲ್ಲಿ ವಿಗ್ರಹಶಾಸ್ತ್ರದನ್ವಯ ಕೆಲವು ವ್ಯತ್ಯಾಸಗಳನ್ನು ಪರಿಚಯಿಸುತ್ತಾ ಒಂದೇ ರೀತಿಯ ದೇವತಾಮೂರ್ತಿಶಿಲ್ಪಗಳು ರಚನೆಗೊಂಡು ದೇವಾಲಯ ಪರಿಸರದಲ್ಲಿ ಸ್ಥಾನಪಡೆದವು. ಆದರೆ ಕ್ರಿ.ಶ. ೫೫೦ರ ಸುಮಾರಿಗೆ ಚಾಲುಕ್ಯರ ಕಾಲದಲ್ಲಿ ಒಂದು ಹೊಸ ಪರಿಕಲ್ಪನೆ ಗರಿಗೆದರಿತು. ಆಗ ನರ್ತಕ ನರ್ತಕಿಯರ, ನರ್ತಿಸುವ ದೇವತಾಮೂರ್ತಿಗಳ, ನರ್ತಿಸುವ ಗಂಧರ್ವರ, ಕಿನ್ನರರ ಗಣಗಳ, ವಾದ್ಯವೃಂದದವರ ಅಭಿವ್ಯಕ್ತಿ ಸೇರ್ಪಡೆಯಾಗಿ ಹೊಸಲೋಕವನ್ನೇ ಸೃಷ್ಟಿಸಿತು. ಶಿಲ್ಪಿಗಳ ಕಲಾತ್ಮಕ ಚೇತನ ಗರಿಗೆದರಿ ಹೆಚ್ಚು ಹೆಚ್ಚು ಚಲನಪೂರ್ಣ ಪರಿಕಲ್ಪನೆಗಳು ನೃತ್ಯರೂಪದಲ್ಲಿ ಒಡಮೂಡತೊಡಗಿದವು. ಒಂದೇ ಭಂಗಿ ಮತ್ತು ಸಂಯೋಜನೆಯ ದೇವತಾಮೂರ್ತಿಗಳ ಪುನರಾವರ್ತನೆಯ ಬದಲು ಅದೇ ಮೂರ್ತಿಗಳು ಸುಂದರ ಮತ್ತು ಲಾಲಿತ್ಯಭಂಗಿಗಳಲ್ಲಿ ರೂಪಗೊಂಡವು. ಹೀಗಾಗಿ ರೂವಾರಿಗಳು ಈ ಅವಕಾಶವನ್ನು ಬಳಸಿಕೊಂಡು ಬಾದಾಮಿ, ಪಟ್ಟದಕಲ್ಲಿನ ವಿರೂಪಾಕ್ಷ, ಲಕ್ಕುಂಡಿಯ ಕಾಶೀವಿಶ್ವೇಶ್ವರ, ಇಟ್ಟಗಿಯ ಮಹಾದೇವ, ಬೇಲೂರಿನ ಚೆನ್ನಕೇಶವ, ಹಳೇಬೀಡಿನ ಹೊಯ್ಸಳೇಶ್ವರ, ಹಂಪಿ ವಿಠ್ಠಲಸ್ವಾಮಿ, ಲೇಪಾಕ್ಷಿಯ ವೀರಭದ್ರ ದೇವಾಲಯಗಳಲ್ಲಿ ನೃತ್ಯಶಿಲ್ಪಗಳ ಭವ್ಯ ರಚನೆಗಳು ಅಸಂಖ್ಯವಾಗಿ ಮೂಡತೊಡಗಿದವು. ನೃತ್ಯಕಲೆಯ ದೃಷ್ಟಿಯಿಂದ ನೋಡಿದಾಗ ಈ ಶಿಲ್ಪ ರಚನೆಗಳಲ್ಲಿ ಮಾರ್ಗ ಅಥವಾ ಮಾರ್ಗೀ ಮತ್ತು ದೇಶೀ ಪದ್ಧತಿಗಳ ಪ್ರಯೋಗವಾಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

ಮಾರ್ಗಿ ಪದ್ಧತಿಯು ಮೂಲವಾಗಿ ಭರತನ ನಾಟ್ಯ ಸಂಪ್ರದಾಯವನ್ನೇ ಆಧಾರ ವಾಗಿರಿಸಿಕೊಂಡು ಬೆಳೆದುಬಂದಿದೆ. ಈ ರೀತಿ ಮಾರ್ಗಿ ಪದ್ಧತಿಯನ್ನೇ ಆಧರಿಸಿ ರಚಿತವಾದ ಶಿಲ್ಪಗಳು ಕರ್ನಾಟಕದಲ್ಲಿ ಬಾದಾಮಿ ಚಾಲುಕ್ಯರ ಕಾಲದಿಂದಲೇ ಕಂಡುಬರುತ್ತವೆ. ಬಾದಾಮಿಯ ನಾಟ್ಯಶಿವನ ರಚನೆಯು ಭರತಾಗಮ ಪದ್ಧತಿಯನ್ನೇ ಆಧರಿಸಿ ರಚಿತವಾದ ಪರಿಪೂರ್ಣಶಿಲ್ಪ. ಇದು ಕರ್ನಾಟಕಕ್ಕೆ ಅಲ್ಲದೆ ಇಡೀ ಭಾರತಕ್ಕೆ ನಾಟ್ಯಶಾಸ್ತ್ರದನ್ವಯ ರಚಿತವಾದ ನಾಟ್ಯಶಿವನ ಮೊದಲ ಶಿಲ್ಪ ಎಂಬ ಹೆಗ್ಗಳಿಕೆ ಪಡೆದಿದೆ. ಭರತನ ನಾಟ್ಯಶಾಸ್ತ್ರವು ಅಂದಿನ ಸಾಹಿತ್ಯ ಮತ್ತು ಕಲಾರಚನೆಗಳ ಮೇಲೆ ಸ್ವಾಮ್ಯವನ್ನು ಹೊಂದಿದ್ದ ಕಾಲ. ಭಾರತದಾದ್ಯಂತ ಹತ್ತನೇ ಶತಮಾನದವರೆಗೂ ಸಂಸ್ಕೃತ ಭಾಷೆಯು ತನ್ನ ಸ್ವಾಮ್ಯವನ್ನು ಹೊಂದಿದ್ದು ದೇವಭಾಷೆ ಎನಿಸಿಕೊಂಡು ಶಾಸ್ತ್ರೀಯತೆಯನ್ನು ಯಾವ ರೀತಿ ಮೆರೆಯಿತೋ, ಅದರಂತೆ ಮಾರ್ಗೀ ನೃತ್ಯಪದ್ಧತಿಯು ನೃತ್ಯಶಿಲ್ಪ ರಚನೆಯ ಮೇಲೂ ಪರಿಣಾಮಕಾರಿ ಪ್ರಭಾವ ಬೀರಿದ್ದಿತು.

ಕ್ರಿ.ಶ. ಹನ್ನೊಂದನೇ ಶತಮಾನದಿಂದ ಸುಮಾರು ಹದಿನೇಳನೇ ಶತಮಾನದ ಕೊನೆಯ ಹೊತ್ತಿಗೆ ಕಲಾತ್ಮಕ ದೇವಾಲಯಗಳ ರಚನೆ ಮೊದಲಿನ ಕಾಲಕ್ಕಿಂತಲೂ ದ್ವಿಗುಣಗೊಳ್ಳುತ್ತದೆ. ಆಗ ರಚನಾ ತಂತ್ರಗಳಲ್ಲಿ ಶಿಲ್ಪಗಳು ಹೆಚ್ಚು ಸಂಖ್ಯೆಯಲ್ಲಿ ಸೇರ್ಪಡೆ ಯಾದವು. ದೇವತಾಮೂರ್ತಿಗಳ ಸಂಖ್ಯೆಗಿಂತ ನೃತ್ಯಶಿಲ್ಪಗಳು ದೇವಾಲಯ ವಾಸ್ತುರಚನೆಯ ಸೌಂದರ್ಯವನ್ನು ಹೆಚ್ಚಿಸಿದವು. ಅಷ್ಟುಹೊತ್ತಿಗೆ ದೇವಾಲಯಗಳಲ್ಲಿ

ನರ್ತನಸೇವಾ ಪದ್ಧತಿಯು ಪ್ರಾಮುಖ್ಯತೆಯನ್ನು ಪಡೆದುಕೊಂಡಿದ್ದುದರಿಂದ ಶಿಲ್ಪಿಗಳಿಗೆ ನೃತ್ಯವನ್ನು ವೀಕ್ಷಿಸಿ, ಶಾಸ್ತ್ರವನ್ನು ಆಧರಿಸಿದ ಶಿಲ್ಪ ರಚಿಸುವ ಅಪೂರ್ವ ಅವಕಾಶ ದೊರೆಯಿತು. ವಿವಿಧ ಪ್ರಾಂತ್ಯಗಳಲ್ಲಿ ಅಂದರೆ ಪ್ರಾಂತೀಯ ಭಾಷೆ, ಸಾಹಿತ್ಯ, ಕಲೆಯ ಬೆಳವಣಿಗೆ ಹೆಚ್ಚಿನ ಆದ್ಯತೆ ಪಡೆದುಕೊಂಡಿತು. ಆಗ ದೇಸೀಪದ್ಧತಿಯನ್ನು ಮೌಲ್ಯ ವಾಗಿರಿಸಿ ಲಕ್ಷಣಗ್ರಂಥಗಳು ಕರ್ನಾಟಕದಲ್ಲೇ ರಚಿತವಾದವು. ಸೋಮೇಶ್ವರ ಚಕ್ರವರ್ತಿ ವಿರಚಿತ ಮಾನಸೋಲ್ಲಾಸ, ಶಾರ್ಙ್ಗದೇವ ರಚಿಸಿದ ಸಂಗೀತ ರತ್ನಾಕರ, ಪುಂಡರೀಕ ವಿಠ್ಠಲನ ನರ್ತನ ನಿರ್ಣಯ, ಸಿಂಹಭೂಪಾಲನ ಲಾಸ್ಯರಂಜನ ಎಂಬ ಗ್ರಂಥಗಳು ದೇಸೀಪದ್ಧತಿ ನೃತ್ಯ ಸಂಪ್ರದಾಯಗಳನ್ನು, ಅಂದಿನ ಕರ್ನಾಟಕದಲ್ಲಿ ಪ್ರಚಲಿತವಿದ್ದ ರೀತಿಯನ್ನು ವಿವರವಾಗಿ ತಿಳಿಸುತ್ತವೆ. ಅಂದು ಮಾರ್ಗಪದ್ಧತಿಯೊಂದಿಗೆ ದೇಸೀಪದ್ಧತಿ ನೃತ್ಯರಚನೆಗಳಾದ ಗೌಂಡಲೀ, ಪೇರಣೀ, ಪೆಕ್ಕಣ ಮತ್ತು ಸುಳಾದಿಗಳನ್ನು ಪ್ರಾಯಶಃ ದೇವಾಲಯಗಳಲ್ಲೂ ನರ್ತಿಸುವ ಪದ್ಧತಿಯಿರಬೇಕು. ಆದ್ದರಿಂದಲೇ ಕಲ್ಯಾಣ ಚಾಲುಕ್ಯ ಮತ್ತು ಹೊಯ್ಸಳ ಕಾಲದ ನೃತ್ಯಶಿಲ್ಪಗಳು ವೈವಿಧ್ಯತೆಯನ್ನು ತೋರುತ್ತವೆ.

ದೇಸೀಪದ್ಧತಿಯಾದ ಗೌಂಡಲೀ ನೃತ್ಯವನ್ನು ಸ್ತ್ರೀಯರೇ ಹಾಡುತ್ತಾ, ಮುರಜೆಯನ್ನು ಬಾರಿಸುತ್ತಾ ನರ್ತಿಸುವ ಪದ್ಧತಿಯಾಗಿತ್ತು. ಬೇಲೂರಿನ ಮದನಿಕಾ ಶಿಲ್ಪಗಳಲ್ಲಿ ಹಲವು ಗೌಂಡಲೀ ನೃತ್ಯವನ್ನು ಪ್ರತಿಪಾದಿಸುತ್ತವೆ. ಅದರಂತೆ ಪೇರಣೀ ಪದ್ಧತಿಯು ಪುರುಷ ಪ್ರಧಾನವಾಗಿದ್ದು ಮೈಗೆಲ್ಲಾ ವಿಭೂತಿ ಬಳಿದು ಮೊಣಕಾಲಿನವರೆಗೆ ಗೆಜ್ಜೆ ಅಂದರೆ ಗರ್ಗರವನ್ನು ಧರಿಸಿ ದೇಸೀಸ್ವರ, ಜತಿ, ಸಾಹಿತ್ಯವನ್ನು ಆಧರಿಸಿ ನರ್ತಿಸುವ ಶುದ್ಧ ದೇಸೀ ಪದ್ಧತಿ. ಮಾನಸೋಲ್ಲಾಸ ಮತ್ತು ಸಂಗೀತರತ್ನಾಕರ ಹಾಗೂ ಹಲವು ಕನ್ನಡ ಕಾವ್ಯಗಳಲ್ಲಿ ಪೇರಣೀ ನರ್ತಕನ ಹಾಗೂ ನೃತ್ಯಸಂಯೋಜನೆಯ ದೀರ್ಘವಿವರಣೆಗಳಿವೆ. ಹಳೇಬೀಡು ದೇವಾಲಯದಲ್ಲಿ ಹೆಚ್ಚಿನ ಸಂಖ್ಯೆಯ ಪಟ್ಟಿಕೆಗಳಲ್ಲಿ, ಜಿನನಾಥಪುರ ನುಗ್ಗೇಹಳ್ಳಿ ಮುಂತಾದ ದೇವಾಲಯಗಳ ಭಿತ್ತಿಯಲ್ಲಿ ಪೇರಣೀ ಶಿಲ್ಪಗಳಿವೆ.

ಮಧ್ಯಕಾಲೀನ ಕರ್ನಾಟಕದ ನೃತ್ಯಶಿಲ್ಪಗಳ ವೈವಿಧ್ಯತೆಯನ್ನು ವಿಶ್ಲೇಷಿಸಿದಾಗ ಕಂಡುಬರುವುದೇನೆಂದರೆ ದೇವತಾಮೂರ್ತಿಗಳನ್ನು ನರ್ತಿಸುವ ಭಂಗಿಯಲ್ಲಿ ತೋರಿಸು ವಾಗ ಅಂದರೆ ನಾಟ್ಯಶಿವನ ವಿವಿಧ ರೂಪಗಳು, ವಿಷ್ಣು, ಲಕ್ಷ್ಮೀ, ಸರಸ್ವತಿ, ನಾಟ್ಯಗಣಪತಿ ಪಾರ್ವತಿ, ಸಪ್ತಮಾತೃಕೆಯರು ಮುಂತಾದವರನ್ನು ಮಾರ್ಗಪದ್ಧತಿ ಅಂದರೆ ಭರತನು ಸೂಚಿಸಿರುವ ೧೦೮ ಕರಣಗಳಿಗೆ ಸಮ್ಮತವಾಗಿ ರಚಿಸಿದರೆ, ಸಾಲಭಂಜಿಕೆಯರು ಗಣಗಳು, ದೇವದಾಸಿಯರು, ಗೌಂಡಲೀ ನರ್ತಕಿಯರು ಮತ್ತು ಪೇರಣೀ ನರ್ತಕರನ್ನು ದೇಸೀಪದ್ಧತಿಯಲ್ಲೇ ಕಂಡರಿಸಲಾಗಿದೆ. ಇದರಿಂದಲೇ ನೃತ್ಯಶಿಲ್ಪಗಳಲ್ಲಿ ಹೆಚ್ಚಿನ ವೈವಿಧ್ಯತೆಯು ತಲೆದೋರಿದೆ. ದೇಸೀ ಸ್ಥಾನಕಗಳು, ದೇಸೀಚಾರಿಗಳು, ದೇಸೀಗತಿ ಭೇದಗಳು, ದೇಸೀ ಹಸ್ತಗಳು ಮತ್ತು ದೇಸೀಕರಣಗಳನ್ನು ಈ ನೃತ್ಯಶಿಲ್ಪಗಳಲ್ಲಿ ಗುರುತಿಸಲು ಸಾಧ್ಯವಾಗಿದೆ. ಅಲ್ಲದೇ ಇವುಗಳಿಗೆ ಸ್ಪಷ್ಟತೆಯನ್ನು ನೀಡಲು ಕರ್ನಾಟಕದಲ್ಲೇ ರಚಿಸಿದ ಕರ್ನಾಟಕದವರೇ ರಚಿಸಿದ ಗ್ರಂಥಗಳಾದ ಮಾನಸೋಲ್ಲಾಸ, ಸಂಗೀತ ರತ್ನಾಕರ, ನರ್ತನ ನಿರ್ಣಯ ಮತ್ತು ಲಾಸ್ಯರಂಜನಗಳು ಹೆಚ್ಚು ಸಹಾಯಕವಾಗುತ್ತವೆ. ನಮ್ಮ ನಾಡಿನ

ಸೊಗಡನ್ನು ಸತ್ವಯುತವಾಗಿ ಪ್ರತಿಪಾದಿಸುವ ಮತ್ತು ನಮ್ಮ ದೇಸೀಪದ್ಧತಿಗಳನ್ನು ಎತ್ತಿಹಿಡಿಯುವ ಈ ನೃತ್ಯಶಿಲ್ಪಗಳು ಮತ್ತು ಸಾಹಿತ್ಯಾಧಾರಗಳು ಕನ್ನಡತನದ ಸಾಧನೆಗೆ ಸಾಕ್ಷಿಗಳಾಗಿವೆ.

ಜಗತ್ತಿನಾದ್ಯಂತ ಹೊಸ ಹೊಸ ವಿಚಾರಗಳು, ಆವಿರ್ಭವಿಸಿದ ಕಾಲ ಹದಿನಾಲ್ಕು ಮತ್ತು ಹದಿನೈದನೇ ಶತಮಾನಗಳು, ದಕ್ಷಿಣ ಭಾರತದಲ್ಲಿ ಇತಿಹಾಸದ ಗತಿಯನ್ನು ಬದಲಿಸಿದಕಾಲ. ಅದು ವಿಜಯನಗರ ಸ್ಥಾಪನೆಯನ್ನು ಕಂಡ ಪರ್ವಕಾಲ. ಸಮಗ್ರ ದಕ್ಷಿಣಭಾರತ ವಿಜಯನಗರ ಸಾಮ್ರಾಜ್ಯದಲ್ಲಿ ಲೀನವಾದ ಕಾಲ. ಹೀಗಾಗಿ ಲಲಿತಕಲೆಗಳಲ್ಲೂ ವಿಭಿನ್ನತೆಯಲ್ಲಿ ಐಕ್ಯತೆಯನ್ನು ಕಂಡಕಾಲ. ಆದ್ದರಿಂದಲೇ ಹಿಂದೂಸಮಾಜದ ಆಶೋತ್ತರಗಳನ್ನು ದೇವಾಲಯ ಸಂಸ್ಕೃತಿಯ ಮೂಲಕ ಜನರಿಗೆ ಸರಿಯಾದ ಸ್ವರೂಪದಲ್ಲಿ ಪರಿಚಯಿಸಿ ಜನರನ್ನು ಧರ್ಮಕ್ಕಾಗಿ, ಧರ್ಮ ಮತ್ತು ಸಮಾಜವನ್ನು ರಕ್ಷಿಸುವುದಕ್ಕಾಗಿ ಒಂದುಗೂಡಿಸಿದ ಕಾಲ. ಈ ಎಲ್ಲಾ ಕಾರಣಗಳಿಂದ ವಿಜಯನಗರ ಆಳ್ವಿಕೆಯ ಕಾಲ ಭಾರತದೇಶದ ಇತಿಹಾಸದಲ್ಲಿ ಬಹುಮಹತ್ವದ ಸಂಧಿಕಾಲವಾಗುತ್ತದೆ. ಇಂತಹ ಸಮಯದಲ್ಲಿ ಧಾರ್ಮಿಕ ಚಟುವಟಿಕೆಗಳು ಆಡಳಿತ ಸೂತ್ರದಲ್ಲಿಯೂ ಮುಖ್ಯವಾಗಿದ್ದವು. ಕಲಾವಿದರೂ ಅಂದಿನ ಸಮಾಜದ ಮಹೋನ್ನತಿಗೆ ಸ್ಪಂದಿಸಿದರು. ಧರ್ಮರಕ್ಷಣಾ ತಂತ್ರಗಳನ್ನು ಕಥಾನಕ ರೂಪದಲ್ಲಿ, ಜಾನಪದ ನೃತ್ಯರೂಪದಲ್ಲಿ ಕೋಲಾಟವಾಡುತ್ತಾ, ಹಾಡಿನ ರೂಪದಲ್ಲಿ ಜೋಗ ಜೋಗಿಣಿಯರ ನೃತ್ಯವನ್ನು ಮಾಡುತ್ತಾ ಊರಿಂದ ಊರಿಗೆ ತಿರುಗುತ್ತಾ, ನೃತ್ಯ ಕಲಾವಿದರು ಸಾಮಾನ್ಯ ಜನರಿಗೆ ತಲುಪಿಸಿದರು. ಒಂದು ಸಂಸ್ಥಾನದಿಂದ ಇನ್ನೊಂದು ಸಂಸ್ಥಾನದಲ್ಲಿ ಪ್ರದರ್ಶನಗಳನ್ನು ನೀಡಿ ಜನರನ್ನು ಒಗ್ಗೂಡಿಸುವ ಪ್ರಯತ್ನಮಾಡಿದರು, ಉತ್ಸವಗಳಲ್ಲಿ ಬಹುಸಂಖ್ಯೆಯಲ್ಲಿ ನರ್ತಿಸುತ್ತಾ ಕರ್ನಾಟಕದ, ಇತರ ನೆರೆಪ್ರಾಂತ್ಯಗಳ ದೇಸೀಶಾಸ್ತ್ರೀಯ ಸಂಪ್ರದಾಯದ ನೃತ್ಯಗಳನ್ನು, ಜಾನಪದ ನೃತ್ಯಗಳನ್ನು ನರ್ತಿಸಿ ಜನರನ್ನು ರಂಜಿಸಿದರು. ಇವರೆಲ್ಲರ ಕೊಡುಗೆಯು ವಿಜಯನಗರದ ವಾಸ್ತುಶಿಲ್ಪರಚನೆಗಳಲ್ಲಿ ಭಿತ್ತಿಯ ಮೇಲೆ, ಕಂಭಗಳ ಮೇಲೆ, ಮೇಲ್ಛಾವಣಿಗಳಲ್ಲಿ, ಶಿಖರಗಳಲ್ಲಿ, ಜಾಲಂಧ್ರಗಳಲ್ಲಿ, ಅಧಿಷ್ಠಾನ ಪಟ್ಟಿಗಳ ಮೇಲೆ ಅಚ್ಚಳಿಯದೇ ಇಂದೂ ನಿಂತಿವೆ. ಇವುಗಳಲ್ಲಿ ಮುಖ್ಯವಾಗಿ ಕಿರಾತ ನೃತ್ಯವನ್ನು ಸೂಚಿಸುವ ಶಿಲ್ಪಗಳು ವಿಠ್ಠಲ ದೇವಾಲಯದ ಅಧಿಷ್ಠಾನ, ಪಟ್ಟಿಕೆಗಳು ಮತ್ತು ವಿರೂಪಾಕ್ಷ ದೇವಾಲಯದ ಕಂಭಗಳ ಮೇಲೆ ಸಾಕಷ್ಟಿವೆ. ವಸಂತೋತ್ಸವ ನೃತ್ಯಪ್ರಸಂಗವು ವಿಜಯನಗರ ಶಿಲ್ಪಿಗಳಿಗೆ ಬಹುಪ್ರಿಯವೆನಿಸುತ್ತದೆ. ಇಲ್ಲಿ ಸ್ತ್ರೀ ಮತ್ತು ಪುರುಷ ನರ್ತಕರು ಓಕುಳಿಯಾಡುವ ವಿವಿಧ ಪರಿಯನ್ನು ವಿಠ್ಠಲದೇವಾಲಯದ ಅಧಿಷ್ಠಾನ, ಭುವನೇಶ್ವರಿ ಮಹಾನವಮೀ ದಿಬ್ಬದ ಅಧಿಷ್ಠಾನ, ವಿರೂಪಾಕ್ಷದೇವಾಲಯದ ಮಂಟಪ ಹಾಗೂ ಆನೆಗೊಂದಿ ಮಠದ ಅರೆತೆರೆದ ಮಂಟಪಗಳಲ್ಲಿ ಕಾಣಬಹುದು.

ಪಂಪಾವತಿ ಮತ್ತು ವಿರೂಪಾಕ್ಷ ಸ್ವಾಮಿಯ ಕಲ್ಯಾಣೋತ್ಸವ ವಿಧಿಯನ್ನು ಸಾಂಗವಾಗಿ ವಿರೂಪಾಕ್ಷ ದೇವಾಲಯದಲ್ಲಿ ಆಚರಿಸಲಾಗುತ್ತದೆ. ಆ ಸಂದರ್ಭದಲ್ಲಿ ಓಕುಳಿಯ ಆಟವನ್ನು ವಸಂತೋತ್ಸವ ಸಂದರ್ಭದಲ್ಲಿ ಮಂಗಳಕರ ಸಂಕೇತದಂತೆ ಇಂದಿಗೂ

ನೆರವೇರಿಸಲಾಗುವುದು. ಈ ಎಲ್ಲಾ ದೃಶ್ಯಾದೃಷ್ಟಾಂತಗಳು ಮತ್ತು ಆಚರಣೆಯಲ್ಲಿರುವ ವಸಂತೋತ್ಸವ ಪೂಜಾ ಪದ್ಧತಿ ಮತ್ತು ಹಂಪಿಯಲ್ಲಿಯೇ ರಚಿತವಾದ 'ವಸಂತೋತ್ಸವ ವಿಲಾಸ ಚಂಪೂ' ಎಂಬ ಕಾವ್ಯ, ಮುಂತಾದವು ವಸಂತೋತ್ಸವ ಸಮಾರಂಭವು ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾದ ಹಂಪಿಯಲ್ಲಿ ಎಷ್ಟು ಮಹತ್ವವಾಗಿತ್ತೆಂಬುದನ್ನು ಬೆಳಕಿಗೆ ತರುತ್ತದೆ.

ಕೊರತಿ ಅಥವಾ ಕೊರವಂಜಿ ಎಂಬ ಜಾನಪದ ನೃತ್ಯಪ್ರಕಾರವು ದಕ್ಷಿಣಭಾರತದಲ್ಲಿ ಪ್ರಚಲಿತವಾಗಿದ್ದಿತು. ಭವಿಷ್ಯವನ್ನು ನುಡಿಯುವ ಕೊರತಿಯರು ಕೈಯಲ್ಲಿ ಒಂದು ಬಣ್ಣದ ಕೋಲು, ಕಂಕುಳಲ್ಲಿ ಒಂದು ಬಿದರಿನ ಬುಟ್ಟಿ ಹಿಡಿದು ಮನೆಯಿಂದ ಮನೆಗೆ ಹೋಗಿ ಮನರಂಜಿಸುವಂತೆ ಹಾಡಿ, ಕುಣಿದು ಬರುವ ಎಲ್ಲರಿಗೂ ಬೇಕಾದ ಹೆಂಗೆಳೆಯರು. ರಸವತ್ತಾಗಿ ಅಲ್ಲಲ್ಲಿ ಲೋಕೋಪಯೋಗಿ ನುಡಿಗಳನ್ನು, ಭವಿಷ್ಯದ ನುಡಿಗಳನ್ನು ಹೇಳುತ್ತಾ ಜನರ ಮನಗೆಲ್ಲುವ ಕೊರತಿಯರಲ್ಲಿ ಎರಡು ಪಂಗಡಗಳಿವೆ. ಒಂದು ಪಂಗಡವು ಕಾರ್ತಿಕೇಯ ಅಥವಾ ಮುರುಗನ ಮೂಲದಿಂದ ಅಲ್ಲಿಯ ಮಲೆಯ ಅಂದರೆ ಗುಡ್ಡುಗಾಡು ಪ್ರದೇಶಗಳಿಂದ ಬಂದಿದ್ದರೆ, ಇನ್ನೊಂದು ವೆಂಕಟಾದ್ರಿ ಬೆಟ್ಟಗಳಿಂದ ಬಂದು ವೆಂಕಟೇಶನನ್ನು ಹಾಡಿಹೊಗಳುತ್ತವೆ. ವೆಂಕಟೇಶ ಕಲ್ಯಾಣ ನಾಟಕದಲ್ಲಿ ಕೊರವಂಜಿಯು ಬಂದು ಪದ್ಮಾವತಿಯು ವೆಂಕಟೇಶನನ್ನೇ ಮದುವೆಯಾಗುವ ಬಗ್ಗೆ ವಿಶೇಷ ಭವಿಷ್ಯವನ್ನು ನುಡಿಯುತ್ತಾಳೆ. ಹೀಗೆ ಈ ಎರಡೂ ಪಂಗಡಗಳ ಕೊರತಿಯರು ಆಂಧ್ರ ಮತ್ತು ತಮಿಳುನಾಡು ಪ್ರದೇಶಗಳಿಂದ ಬಂದು ವಿಜಯನಗರ ಸಾಮ್ರಾಜ್ಯದ ಎಲ್ಲಾ ಉತ್ಸವ ಸಂದರ್ಭಗಳಲ್ಲಿ ವಿಶೇಷವಾಗಿ ಜನರನ್ನು ರಂಜಿಸುತ್ತಿದ್ದಿರಬೇಕು. ತಮಿಳುನಾಡಿನಲ್ಲಿ ಕುಟ್ರಾಲ ಕೊರವಂಜಿಯೆಂಬ ಒಂದು ನೃತ್ಯ ಸಂಪ್ರದಾಯವೇ ಇದೆ. ಹಂಪಿಯಲ್ಲಿಯೂ ಅಲ್ಲಲ್ಲಿ ಕೊರವಂಜಿಯ ಶಿಲ್ಪಗಳು ಕಾಣುತ್ತವೆ. ಈ ಶಿಲ್ಪಗಳಲ್ಲಿ ನರ್ತಕಿಯು ಶಾಸ್ತ್ರೀಯ ಸಂಪ್ರದಾಯದಂತೆಯೇ ವೇಷಭೂಷಣಗಳನ್ನು ತೊಟ್ಟಿದ್ದಾಳೆ. ಅವಳ ಪಾದಚಲನೆಯು ಅತಿಕ್ರಾಂತಚಾರಿಯಲ್ಲಿರುತ್ತದೆ. ಅವಳ ಮಣಿದ ಕಟಿಯು ವಿಶೇಷ ತ್ರಿಭಂಗ ಚಲನೆಯನ್ನು ನೀಡಿದೆ. ಅವಳ ಮುಖದಲ್ಲಿ ನಗೆಯು ಪಸರಿಸಿ ಸುತ್ತಲಿನವರನ್ನು ಸೆಳೆಯುವಂತೆ ಚಿತ್ರಿಸಲಾಗಿದೆ.

ಹೊಯ್ಸಳರ ಕಾಲದಲ್ಲಿ ಕಂಡು ಬಂದ ಪೇರಣೀ ನರ್ತಕರ ಶಿಲ್ಪಗಳು ವಿಜಯನಗರ ಕಾಲದಲ್ಲಿ ಕಾಣುವುದಿಲ್ಲ. ಬದಲಿಗೆ ವೀರಗಾಸೆ ನೃತ್ಯವನ್ನು ಪ್ರತಿಬಿಂಬಿಸುವ ಶಿಲ್ಪಗಳನ್ನು ಇಲ್ಲಿ ಗಮನಿಸಬಹುದು. ಆ ಕಾಲದಲ್ಲಿ ಪ್ರಾಯಶಃ ವೀರಭದ್ರನ ಆರಾಧನೆಯು ಹೆಚ್ಚು ಮಹತ್ವವನ್ನು ಪಡೆದಿರಬೇಕು. ವಿಜಯನಗರ ಸಾಮ್ರಾಜ್ಯ ಯೋಧರನ್ನು ಯುದ್ಧ ಸನ್ನದ್ಧರಾಗಿಸಲು, ಹುರಿದುಂಬಿಸಲು ವೀರಗಾಸೆ ನೃತ್ಯವು ಪ್ರಚಲಿತದಲ್ಲಿತ್ತೆನಿಸುತ್ತದೆ. ಈ ಹೊಣೆಗಾರಿಕೆಯೂ ವೀರಗಾಸೆ ನರ್ತಕರದೇ ಆಗಿತ್ತೆಂದು ತೋರಿಬರುತ್ತದೆ. ಕಂಭಗಳ ಪಟ್ಟಿಕೆಗಳಲ್ಲಿ ಕೈಯಲ್ಲಿ ಖಡ್ಗವನ್ನು ಝಳಪಿಸುತ್ತಾ ಭ್ರಮರೀ ಮತ್ತು ಉತ್ಪ್ಲಾವನ ಚಲನೆಗಳಲ್ಲಿ ಅತಿವೇಗ ಗತಿಯಲ್ಲಿ ದೇಶೀ ಸಂಪ್ರದಾಯಗಳಲ್ಲಿ ನರ್ತಿಸುವ ನರ್ತಕರ ಶಿಲ್ಪಗಳಿವೆ. ಈ ಶಿಲ್ಪಗಳಲ್ಲಿ ವೀರಾವೇಶದಿಂದ ನರ್ತಿಸುವ ಭಾವವು ಅಡಗಿರುತ್ತದೆ.

ಈ ವೀರರಸಭರಿತ ವೀರಗಾಸೆ ಸಂಪ್ರದಾಯವನ್ನು ನಾವು ಇಂದಿಗೂ ಕೆಲವು ದೇವಾಲಯ ಉತ್ಸವಗಳಲ್ಲಿ ಹಾಗೂ ವಿಶೇಷ ಮೆರವಣಿಗೆ ಸಂದರ್ಭಗಳಲ್ಲಿ ಕಾಣಬಹುದು. ವೀರಭದ್ರನನ್ನು ಕುಲದೇವತೆಯಾಗಿ ಹೊಂದಿರುವ ಇವರು ನಿಷ್ಠೆಯಿಂದ ನರ್ತಿಸುತ್ತಾರೆ. ಕರ್ನಾಟಕದ ಶಿವಮೊಗ್ಗ, ಚಿಕ್ಕಮಗಳೂರು, ದಾವಣಗೆರೆ ಮುಂತಾದ ಕಡೆಗಳಲ್ಲಿ ವೀರಗಾಸೆ ನರ್ತಕರ ತಂಡಗಳಿವೆ. ತಮಟೆ ಬಾರಿಸುತ್ತಾ ನರ್ತಿಸುವ ಅನೇಕ ಶಿಲ್ಪಗಳನ್ನು ಹಂಪಿಯ ಮಂಟಪಗಳಲ್ಲಿ ಕಾಣುತ್ತೇವೆ. ತಮಟೆ ಇಂದಿಗೂ ಜಾನಪದ ಸಂಪ್ರದಾಯಗಳಲ್ಲಿ ಪ್ರಮುಖ ವಾದ್ಯ ವಾಗಿರುತ್ತದೆ. ಪುರುಷ ನರ್ತಕರು ತಮಟೆ ಬಾರಿಸುತ್ತಾ, ಹಾಡುತ್ತಾ, ನೆಗೆಯುವ, ತಿರುಗು ಚಲನೆಗಳಲ್ಲಿ ನರ್ತಿಸುವ, ಚಿಕ್ಕದಾದ ಗಡ್ಡವಿರುವ, ಚಲ್ಲಣಗಳನ್ನು ತೊಟ್ಟಿರುವ ರೂಪವನ್ನು ನೋಡಬಹುದು.

ಇಲ್ಲಿಯವರೆಗೆ ಚರ್ಚಿಸಿದ ಅನೇಕ ನಿದರ್ಶನಗಳಿರುವ ಕರ್ನಾಟಕದ ದೇವಾಲಯ ಶಿಲ್ಪಗಳು ಬೇರೆಲ್ಲಾ ಪ್ರಾಂತ್ಯಗಳಿಗಿಂತಲೂ ವೈವಿಧ್ಯಪೂರ್ಣವಾಗಿದೆ ಎಂಬುದನ್ನು ಖಚಿತಪಡಿಸುತ್ತವೆ. ಆರನೇ ಶತಮಾನದ ಬಾದಾಮಿ ಚಾಲುಕ್ಯರ ಕಾಲದಲ್ಲಿ ಹೆಚ್ಚು ನಾಟ್ಯಶಾಸ್ತ್ರ ಸಂಪ್ರದಾಯದ ಮಾರ್ಗಿಪದ್ಧತಿಯನ್ನು ಆಧರಿಸಿದ ನೃತ್ಯಶಿಲ್ಪಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬಂದರೆ, ಮಧ್ಯಯುಗೀನ ಕಲ್ಯಾಣ ಚಾಲುಕ್ಯ ಮತ್ತು ಹೊಯ್ಸಳ ಶೈಲಿಯ ಶಿಲ್ಪಿಗಳಲ್ಲಿ ದೇಸೀ ಪದ್ಧತಿಯನ್ನೇ ಅನುಸರಿಸಿ ರಚಿಸಿರುವ ನೃತ್ಯಶಿಲ್ಪಗಳು ಮೇಲುಗೈಯಾಗಲು ತೊಡಗುತ್ತವೆ. ಆದರೆ ವಿಜಯನಗರ ಕಾಲದ ನೃತ್ಯಶಿಲ್ಪಗಳನ್ನು ಗಮನಿಸಿದಾಗ ಮಾರ್ಗ, ದೇಸೀ, ಲೋಕಪರಂಪರೆ ಮತ್ತು ಜಾನಪದ ಪರಂಪರೆಯ ಎಲ್ಲಾ ಪ್ರಕಾರಗಳ ಪ್ರಾತಿನಿಧ್ಯವನ್ನು ಪಡೆದಿರುತ್ತವೆ. ಈ ಕಾರಣದಿಂದಲೇ ಕರ್ನಾಟಕದ ನೃತ್ಯಶಿಲ್ಪಗಳು ಹೆಚ್ಚು ವೈವಿಧ್ಯವಾಗಿರುತ್ತವೆ ಮತ್ತು ಸಾಮಾಜಿಕ ಜೀವನದ ಒಂದು ಅವಿಭಾಜ್ಯ ಅಂಗವಾಗಿ ನೃತ್ಯಪರಂಪರೆಯೂ ವೈವಿಧ್ಯಪೂರ್ಣವಾಗಿ ಬೆಳೆದುಬರಲು ಸಾಧ್ಯವಾಯಿತೆಂಬುದನ್ನು ಈ ನೃತ್ಯಶಿಲ್ಪಗಳು ರುಜುವಾತುಗೊಳಿಸುತ್ತವೆ.

❐



ಕರ್ನಾಟಕದ ಕರಾವಳಿಯ ಸಾಂಸ್ಕೃತಿಕ ವೈಶಿಷ್ಟ್ಯ

■ ಡಾ. ಇಂದಿರಾ ಹೆಗ್ಗಡೆ

ಸಾಂಸ್ಕೃತಿಕ ಕರ್ನಾಟಕದೊಳಗೆ ಕಾಸರಗೋಡು ಸೇರುತ್ತದೆ. ರಾಜಕೀಯವಾಗಿ ಕಾಸರಗೋಡು ಕೇರಳಕ್ಕೆ ಸೇರ್ಪಡೆಯಾಗಿದ್ದರೂ ಸಾಂಸ್ಕೃತಿಕವಾಗಿ ಅದು ಕರ್ನಾಟಕದ ಭಾಗ. ಮಾತ್ರವಲ್ಲ ಕಾಸರಗೋಡು ಜನರ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಬಂಧಗಳು ಕರ್ನಾಟಕದೊಳಗೆ ಮುನ್ನಡೆಯುತ್ತಿವೆ. ಪ್ರಸ್ತುತ ಸಂದರ್ಭದಲ್ಲಿ ರಾಜಕೀಯವಾಗಿ ಕರ್ನಾಟಕದ ಕರಾವಳಿ ಭಾಗ ಮಂಗಳೂರು ತಾಲೂಕಿನಿಂದ ಕಾರವಾರದವರೆಗಿನ ಪ್ರದೇಶ. ಆದರೆ ಕಾಸರಗೋಡು, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳು ಸಾಂಸ್ಕೃತಿಕವಾಗಿ ಕರ್ನಾಟಕದ ಇತರ ಭಾಗಗಳಿಗಿಂತ ಬೇರೆಯಾದ ವೈಶಿಷ್ಟ್ಯವನ್ನು ಹೊಂದಿವೆ. ರಾಜಕೀಯವಾಗಿ ಇತಿಹಾಸ ಪೂರ್ವಯುಗದಿಂದಲೂ ಕರ್ನಾಟಕದ ಅರಸರ, ಸಾಮಂತರ ಆಳ್ವಿಕೆಯಲ್ಲಿ ಇದ್ದ ಈ ಭಾಗದಲ್ಲಿ ಕನ್ನಡ ರಾಜಕೀಯ ವ್ಯವಹಾರ ಭಾಷೆಯಾಗಿ, ರಾಜ್ಯ ಭಾಷೆಯಾಗಿ ಇದೆ. ತುಳುಭಾಷೆ ಇಲ್ಲಿಯ ಬಹು ಜನರ ಮಾತೃ ಭಾಷೆ, ಈ ಪ್ರದೇಶದ ನೆಲದ ಭಾಷೆ. ಆದ್ದರಿಂದ ಈ ಪ್ರದೇಶದ ಸಂಸ್ಕೃತಿಯನ್ನು ಕಟ್ಟುವ ಕೆಲಸವನ್ನೂ ಇಲ್ಲಿಯ ಭಾಷೆ ಮಾಡಿದೆ. ಸ್ಥಳೀಯ ಭಾಷೆಯು ಆ ಪ್ರದೇಶದ ಸಂಸ್ಕೃತಿಯ ಮೇಲೆ ಪ್ರಭಾವ ಬೀರುವುದನ್ನು ಉಡುಪಿ ತಾಲೂಕಿನ ಉತ್ತರಕ್ಕೆ ಇರುವ ಕೆಲವೊಂದು ಆಚರಣೆಗಳಲ್ಲಿ ಕಾಣಬಹುದು. ಈ ಭಾಗದ ಭೂತಾರಾಧನೆ, ಮನೆಯ ವಾಸ್ತು ಹಾಗೂ ಕೆಲವೊಂದು ಸಾಮಾಜಿಕ ಸಂಸ್ಕಾರಗಳಲ್ಲಿ ನಾವು ಈ ಸ್ಥಿತ್ಯಂತರವನ್ನು ಕಾಣಬಹುದು. ಈ ಭಾಗದಲ್ಲಿ ತುಳು ಮಿಶ್ರಿತ ಕನ್ನಡ ಇದೆ.



ಹಾಗೆಯೇ ಸಂಸ್ಕೃತಿಯಲ್ಲೂ ತುಳು-ಕನ್ನಡದ ಮಿಶ್ರಣ ಇದೆ. ಇಲ್ಲಿಯ ಅನೇಕಾನೇಕ ಶಾಸನಗಳು ತುಳುವಾಳುವ, ತುಳುವ ಹೆಗ್ಗಡಿತಿ, ತುಳುವೇಶ್ವರ, ತುಳುವ ವಂಶ, ತುಳು ರಾಜ್ಯ, ತುಳು ದೇಶ-ಎಂಬೆಲ್ಲ ಪದಗಳು ಈ ಭಾಗದಲ್ಲಿ ಇದ್ದ ತುಳು ಭಾಷೆಯ ಪ್ರಭಾವವನ್ನು ಮನಗಾಣಲು ನೆರವಾಗುತ್ತವೆ. ಇಲ್ಲಿಯ ಮೂಲ ನಿವಾಸಿಗಳು ಎಂದು ನಂಬಲಾದ ಕೊರಗರು ಈಗಲೂ ತುಳು ಭಾಷೆಯಲ್ಲಿ ಮಾತನಾಡುತ್ತಾರೆ. ಕೆಲವೊಂದು ದೈವಗಳು (ಮಾಧ್ಯಮರು) ತುಳು ಭಾಷೆಯಲ್ಲಿ ಮಾತನಾಡುತ್ತವೆ. ಹಾಗೆಯೇ ಮಂಗಳೂರು ತಾಲೂಕಿನಲ್ಲಿ ಬ್ಯಾರಿ ಭಾಷೆ ಇರುವುದರಿಂದ ಅಲ್ಲಿಯ ದೈವಗಳು, ಅದೇ ಭಾಷೆ ಮಾತನಾಡುತ್ತವೆ, ಪುತ್ತೂರು, ಸುಳ್ಯ ತಾಲೂಕು ಕಡೆ ವಿಷ್ಣುಮೂರ್ತಿ ದೈವವು ಮಲೆಯಾಳ ಭಾಷೆಯಲ್ಲಿ ಮಾತನಾಡುತ್ತದೆ. ಒಂದು ಜನಾಂಗದ ಭಾಷೆ, ಒಂದು ಪ್ರದೇಶದ ಭಾಷೆ, ಆ ಭಾಗದ ಸಂಸ್ಕೃತಿಯ ಮೇಲೆ ಬೀರುವ ಪ್ರಭಾವದ ಫಲವಾಗಿ ಈ ವೈಶಿಷ್ಟ್ಯ.

ಮಾತೃವಂಶೀಯತೆ -ಮಾತೃಪ್ರಧಾನತೆ : ತುಳುವರು ಆರ್ಯೇತರ ಮಾತೃ ಪ್ರಧಾನ ಬುಡಕಟ್ಟಿನವರು. ಮಾತೆಗೆ ಮಕ್ಕಳ ಮೇಲೆ ಪರಮಾಧಿಕಾರ. ಇದನ್ನೇ ಮಾತೃ ಪ್ರಧಾನತೆ ಎನ್ನುವುದು. ಆದರೆ ಸಮಾಜ ಪುರುಷ ಪ್ರಧಾನವಾಗಿದೆ. ಮಹಿಳೆ ಅಧಿಕೃತವಾಗಿ ಯಜಮಾನಿಯಾಗುವುದನ್ನು ತುಳು ಸಂಸ್ಕೃತಿ ಒಪ್ಪುವುದಿಲ್ಲ. ಆಕೆ ಮನೆಯೊಳಗೆ ಮಾತ್ರ ಯಜಮಾನಿ. ಯಜಮಾನ ಆಕೆಯ ಸೋದರ ಅಥವಾ ಸೋದರ ಸಂಬಂಧಿ. ಯಾವುದೇ ಬುಡಕಟ್ಟು ಸಂಪ್ರದಾಯಗಳು ವೇದಗಳಷ್ಟೇ ಅಥವಾ ಅದಕ್ಕಿಂತಲೂ ಪುರಾತನ ವಾದುದು. ಇದನ್ನು ತುಳುಸಂಸ್ಕೃತಿಯ ಮಾತೃಪ್ರಧಾನತೆಯಲ್ಲೂ ಕಾಣಬಹುದು. ತುಳುನಾಡಿನ ಜೀವಂತ ಪರಂಪರೆಯಾದ ಮಾತೃಪ್ರಧಾನತೆಯನ್ನು ಪೋಷಿಸಿಕೊಂಡು ಬಂದುದು ಬುಡಕಟ್ಟು ಸಂಸ್ಕೃತಿಯ ಭೂತಾರಾಧನೆ, (ಅರ್ಥಾತ್ ಶಕ್ತ್ಯಾರಾಧನೆ) ಹಾಗೂ ನಾಗ ಮೂಲ. ತುಳುವರು ನಾಗಮೂಲದವರು ಎನ್ನುವುದು ನಂಬಿಕೆ.

ಮಾತೃ ಮೂಲಿ ಕುಟುಂಬ : ತುಳುವರ ಕುಟುಂಬವು ತಾಯಿಯ ಮೂಲದಿಂದ ಹೊರಟು ಆಕೆಯ ಹೆಣ್ಣು ಮಕ್ಕಳ ಮೂಲಕ ಮುಂದುವರಿಯುತ್ತದೆ.

ತುಳು ಸಂಸ್ಕೃತಿಯಲ್ಲಿ ಮಹಿಳೆಯರಿಗೆ ಗೌರವ ಇದೆ. ಅವಳಿಗೆ ಆರ್ಥಿಕ ಭದ್ರತೆಯೂ ಇದೆ. ಮಾತೆಗೆ ಎತ್ತರದ ಸ್ಥಾನವೂ ಇದೆ. ವಿವಾಹಾನಂತರ ಹೆಣ್ಣು ತನ್ನ ಗಂಡನ ಸೊತ್ತಾಗುವುದಿಲ್ಲ. ಅವಳು ಗಂಡನ ವಂಶಕ್ಕೆ ಸೇರ್ಪಡೆಯಾಗುವುದಿಲ್ಲ. ಆಕೆ ಹೆತ್ತ ಮಕ್ಕಳೂ ತಮ್ಮ ತಂದೆಯ ವಂಶಕ್ಕೆ ಸೇರ್ಪಡೆಯಾಗುವುದಿಲ್ಲ. ಆಕೆಯ ವಂಶದಲ್ಲಿಯೇ ಗುರುತಿಸಿಕೊಳ್ಳುತ್ತಾರೆ.

ತುಳು ಸಂಸ್ಕೃತಿಯ ಪ್ರತಿ ಕುಟುಂಬವೂ ಮಾತೃಮೂಲದ ಆದಿ ಕ್ಷೇತ್ರದಲ್ಲಿ ತಮ್ಮ ಮೂಲವನ್ನು ಹೊಂದಿರುತ್ತದೆ ಎನ್ನುವ ನಂಬಿಕೆ ಮತ್ತು ಆಚರಣೆ ಇದೆ. ಈ ಮೂಲವು ಬಳ್ಳಿಯ ಮೂಲಕ ಗುರುತಿಸಿಕೊಳ್ಳುತ್ತದೆ. ತಮ್ಮ ಮೂಲ ಕುಟುಂಬವನ್ನು ಗುರುತಿಸ ಲಾಗದೆ ಹೋಗುವವರು ಮಾನಸಿಕ ಕ್ಲೇಶಕ್ಕೆ ಒಳಗಾಗುತ್ತಾರೆ. ಹೀಗಾಗಿ ಮೂಲದ ಕುಟುಂಬ ಮತ್ತು ನಾಗ ಮೂಲ ಹುಡುಕುವ ಕೆಲಸ ಈಗಲೂ ನಡೆಯುತ್ತಿದೆ. ಹೀಗೆ

ಬುಡಕಟ್ಟು ಸಂಸ್ಕೃತಿಯನ್ನು ಹೊಂದಿರುವ ಕರ್ನಾಟಕದ ಕರಾವಳಿಯ ಈ ಭಾಗ ಬುದ್ಧಿವಂತರ ನಾಡು ಎಂದೂ ಕರೆಸಿಕೊಂಡಿದೆ. ಸಂಸ್ಕೃತಿ, ಪರಂಪರೆಯನ್ನು ಮುಂದು ವರಿಸಿಕೊಂಡು ಹೋಗುವುದರಲ್ಲಿ ಇಲ್ಲಿಯ ವಿದ್ಯಾವಂತ ಜನರಿಗೂ ಹೆಚ್ಚು ಆಸಕ್ತಿ ಇರುವುದು ಇಲ್ಲಿಯ ವೈಶಿಷ್ಟ್ಯ.

ಮಾತೃ ಸಂಸ್ಕೃತಿಯ ಹೆಣ್ಣಿನ ನಿಯಂತ್ರಕ 'ತಮೆರಿ' : ಮಾತೃ ಪ್ರಧಾನ ಸಂಸ್ಕೃತಿಯ ತುಳುವರ ರೂಢಿಗತ ಸಮಾಜ ಪುರುಷ ಪ್ರಧಾನವಾಗಿದೆ. ಪುರುಷನನ್ನು ಮೀರಿ ನಡೆದ ಹೆಣ್ಣಿಗೆ ಸಮಾಜದಲ್ಲಿ ಗೌರವವಿಲ್ಲ. ಇಲ್ಲಿ ಆ ಪುರುಷ ಪಿತನಲ್ಲ, ಪತಿಯಲ್ಲ; ಆದರೆ ಸೋದರ ಅಥವಾ ಸೋದರ ಸಂಬಂಧಿ. 'ತಮೆರಿ ಮೀರಿ ಪೊಣ್ಣತ್ತ್ ಸಂಬರ ಮೀರಿ ಕಜಿಪತ್ತ್' ಅಂದರೆ ಮಾತೃ ಬಂಧು ಪುರುಷನನ್ನು ಮೀರಿ ನಡೆವ ಹೆಣ್ಣು ಹೆಣ್ಣಲ್ಲ, ಸಾಂಬಾರ ಹೆಚ್ಚಾದ ಪಲ್ಯ, ಪಲ್ಯ ಅಲ್ಲ–ಇದು ತುಳು ನುಡಿಗಟ್ಟು. ಸೋದರ ಸಂಬಂಧಿ ಪುರುಷನ ಅಂಕೆಯಲ್ಲಿ ಹೆಣ್ಣು ಇರಬೇಕು ಎನ್ನುವುದು ರೂಢಿಗತ ಸಮಾಜ ಪದ್ಧತಿ. ಹೆಣ್ಣಿನ ಜವಾಬ್ದಾರಿ ಹೊರುವ ತವರುಮನೆಯ ಪುರುಷನನ್ನು 'ತಮೆರಿ' ಎಂದು ಕರೆಯುತ್ತಾರೆ. ತುಳುನಾಡಿನ ಮಾತೃ ಸಂಸ್ಕೃತಿಯ ಸಮಾಜದಲ್ಲಿ 'ತಮೆರಿ'ಯ ಪಾತ್ರಕ್ಕೆ ಹೆಚ್ಚಿನ ಪ್ರಾಧಾನ್ಯತೆ ಇದೆ.

ಕನ್ಯಾದಾನ : ತುಳುವರಲ್ಲಿ ಕನ್ಯಾದಾನ ಇಲ್ಲ. ವೈದಿಕ ಆಚರಣೆಯ ಪ್ರಭಾವದಿಂದ ವಿವಾಹ ಪದ್ಧತಿಯಲ್ಲಿ ಕೆಲವೊಂದು ವಿಧಿಗಳನ್ನು (ಉದಾ: ಧಾರೆ, ಸಪ್ತ ಪದಿ ಇತ್ಯಾದಿ) ನಡೆಸಲಾಗುತ್ತದೆ. ಆದರೆ ಕನ್ಯಾದಾನದ ಆಚರಣೆ ನಡೆಸುವುದಿಲ್ಲ. ದಾನ ಸ್ವೀಕರಿಸುವ ಪದ್ಧತಿ ಅವೈದಿಕ ತುಳು ಸಂಸ್ಕತಿಯಲ್ಲಿ ಇಲ್ಲ. ಬಡತನದ ಕಾರಣಕ್ಕೆ ಕೊರಗರು (ದಲಿತರು) ಮತ್ತು ಅವರ ಸಮಾನ ಜಾತಿಯವರು ಮಾತ್ರ ಅನ್ನದಾನ ಮತ್ತು ಎಣ್ಣೆದಾನ ಸ್ವೀಕರಿಸುತ್ತಾರೆ.

ಮಂಗಳ ಸೂತ್ರ : ತುಳು ಸಂಸ್ಕೃತಿಯಲ್ಲಿ ಮಂಗಳ ಸೂತ್ರ ಎನ್ನುವುದಿಲ್ಲ. ಕರಿಮಣಿ ಇದೆ. ವಿವಾಹ ಸಂದರ್ಭದಲ್ಲಿ ವರನು ವಧುವಿಗೆ ಕರಿಮಣಿ ಕಟ್ಟುವ ಪದ್ಧತಿ ಇಲ್ಲ. ತವರು ಮನೆಯವರು, ಮನೆಯಲ್ಲಿ ಜರುಗುವ ಮುರ್ತ ಸಮಾರಂಭದಲ್ಲಿ ವಧುವಿಗೆ ಕರಿಮಣಿ ಹಾಕುವುದು ಪದ್ಧತಿ. ಮೂಗುಬೊಟ್ಟು ಕರಿಮಣಿಗಿಂತ ಹೆಚ್ಚು ಅಗತ್ಯ ಮತ್ತು ಆಕೆಯ ಪಾವಿತ್ರ್ಯ ಇರುವುದು ಮೂಗುಬೊಟ್ಟು ಮತ್ತು ವಂಕಿ ಉಂಗುರ ಧರಿಸುವುದರಲ್ಲಿ. ವಿವಾಹಕ್ಕೆ ಮೊದಲ ದಿನ ಮುರ್ತ ಸಮಾರಂಭದಲ್ಲಿ ವಧುವಿಗೆ ಕಾಲುಂಗುರ, ವಂಕಿ ಉಂಗುರ, ಕರಿಮಣಿ ತೊಡಿಸುವುದು ಪದ್ಧತಿ. ವರನಿಗೂ ವರನ ಮನೆಯಲ್ಲಿ ನಡೆಯುವ ಮುರ್ತ ಸಮಾರಂಭದಲ್ಲಿ ಕಾಲುಂಗುರ ತೊಡಿಸುತ್ತಾರೆ.

ಭಾರತದ ಅನೇಕ ಭಾಗಗಳಲ್ಲಿ ಕಪ್ಪು ವಸ್ತುಗಳು ಶುಭಕಾರ್ಯಗಳಲ್ಲಿ ನಿಷೇಧ. ಆದರೆ ತುಳು ಸಂಸ್ಕೃತಿಯಲ್ಲಿ ವಿವಾಹ ಸಂದರ್ಭದಲ್ಲಿ ವಧುವಿಗೆ ಎರಡೂ ಕೈಗಳಿಗೂ ತಲಾ ಐದು ಕರಿಬಳೆಗಳನ್ನು ತೊಡಿಸುವ ಪದ್ಧತಿ ಇದೆ.

ವಿಚ್ಛೇದನ : ತುಳು ಸಂಸ್ಕೃತಿಯಲ್ಲಿ ವಿವಾಹ ಸಂಬಂಧ ಎನ್ನುವುದು ಜನ್ಮ ಜನ್ಮದ ಅನುಬಂಧ ಅಲ್ಲ. ಅದು ಒಂದು ವ್ಯವಸ್ಥೆ. ಗಂಡನು ತನ್ನ ಮಡದಿಯ ಹಿತ ಕಾಯಲಾರದೆ ಹೋದಾಗ, ಅವಳಿಗೆ ಅವನಿಂದ ಬಿಡುಗಡೆ ಬೇಕಾದಲ್ಲಿ, ಅವಳು ಗಂಡನಿಂದ ಬೇರೆ

ಯಾಗುವುದನ್ನು ಇಲ್ಲಿಯ ಸಂಸ್ಕೃತಿ ಸಮ್ಮತಿಸುತ್ತದೆ. ವಿವಾಹ ಮುರಿದರೆ ಮದುವೆ ಸಂದರ್ಭದಲ್ಲಿ ನೀಡಿದ್ದ ವರದಕ್ಷಿಣೆಯನ್ನು ಗಂಡನ ಮನೆಯವರು ಮರಳಿ ನೀಡಬೇಕು. ಎಳೆಯದರಲ್ಲಿ ಆಕೆ ವಿಧವೆಯಾದರೂ ವರದಕ್ಷಿಣೆಯನ್ನು ಆಕೆಯ ಗಂಡನ ಮನೆಯವರು ಮರಳಿ ನೀಡಬೇಕು.

ಮುಂಡೆ ಕೊಟ್ಟು (ವಿಧವೆಯ ಮುಸುಕು) : ವಿಧವೆಯರನ್ನು ಕನ್ನಡದಂತೆ ಮುಂಡೆ ಎಂದು ತುಳು ಭಾಷೆಯಲ್ಲೂ ಕರೆಯುವ ರೂಢಿ ಇದೆ. ಕೊಟ್ಟು ಎಂದರೆ ಮುಸುಕು; ತಲೆಯ ಮೇಲೆ ಇರುವಂತಹದು. ಉತ್ತರ ಕರ್ನಾಟಕ ಮತ್ತು ಉತ್ತರ ಭಾರತದಲ್ಲಿ ಮಹಿಳೆಯರು ತಲೆಯ ಮೇಲೆ ಸೆರಗು ಹೊದ್ದುಕೊಳ್ಳುವುದು ಗೌರವದ ಸಂಕೇತವಾದರೆ ತುಳುವರಲ್ಲಿ ಅದು ವೈಧವ್ಯದ ಸಂಕೇತ. ಮಹಿಳೆಯ ತಲೆಯ ಮೇಲೆ ಎಳೆಯುವ ಸೆರಗಿನ ಮುಸುಕನ್ನು 'ಮುಂಡೆ ಕೊಟ್ಟು' ಎನ್ನುತ್ತಾರೆ. ಪಾಡ್ದನಗಳಲ್ಲಿ ಮುಂಡೆ ಕೊಟ್ಟು ಎನ್ನುವುದು ಸ್ಪಷ್ಟವಾಗಿ ಬಿಂಬಿತವಾಗಿದೆ. ಸಿರಿ ತನ್ನ ಗಂಡನಿಗೆ ಬರ ನೀಡಿ, ತೆರದ ಹಣ ಮರಳಿಸಿ ಗಂಡನ ಮನೆಯಂಗಳದ ಮೆಟ್ಟಲು ಇಳಿದು ಹೋಗುವಾಗ ಮುಂಡೆ ಕೊಟ್ಟು ಹಾಕಿ ಹೋಗುತ್ತಾಳೆ ಎನ್ನುವ ವಿವರ ಬರುತ್ತದೆ. ಈಗಲೂ ಈ ಭಾಗದಲ್ಲಿ ಮಹಿಳೆಯರು ತಲೆಯ ಮೇಲೆ ಸೆರಗಿನ ಮುಸುಕು ಹಾಕುವುದು ಅವಲಕ್ಷಣ. ಹೀಗಾಗಿ ಯಾರೂ ತಲೆಗೆ ಸೆರಗಿನ ಮುಸುಕು ಹಾಕುವುದಿಲ್ಲ.

ಉತ್ತರ ಭಾರತದಲ್ಲಿ ಕೆಂಪು ಸೀರೆ ವಿವಾಹ ಸಂದರ್ಭದಲ್ಲಿ ಅಗತ್ಯ. ಅದು ಶಕುನದ ಸೀರೆ. ಆದರೆ ತುಳು ಸಂಸ್ಕೃತಿಯಲ್ಲಿ ಅದು ಅಪಶಕುನ, ವೈಧವ್ಯದ ಸಂಕೇತ. ಗಂಡ ಸತ್ತ ಅನಂತರ ಅವನ ಹೆಸರಲ್ಲಿ ನಡೆಯುವ ಸಾವಿನ ಊಟ ಬಡಿಸುವಾಗ, ವಿಧವೆಯ ಮೈ ಮೇಲೆ ಕೆಂಪು ಸೀರೆ ಹಾಕುವ ಪದ್ಧತಿ ಈಗಲೂ ಉಳಿದು ಬಂದಿದೆ. ಇದನ್ನು ದುಃಖದ ಸೀರೆ ಎನ್ನುತ್ತಾರೆ.

ತಂದೆಯ ಮನೆಯ ಅಧಿಕಾರ : ಮಳೆ ನಿಂತ ಮೇಲೆ ಮರದಡಿ ನಿಲ್ಲಬಾರದು, ಅಪ್ಪ ಸತ್ತ ಮೇಲೆ ಮಕ್ಕಳು ಅಪ್ಪನ ಮನೆಯಲ್ಲಿ ಉಳಿಯಬಾರದು ಎಂಬ ನುಡಿಗಟ್ಟು ಇಲ್ಲಿಯ ಮಕ್ಕಳಿಗೆ ಅಪ್ಪನ ಮನೆಯಲ್ಲಿ ಇರಬಹುದಾದ ಹಕ್ಕನ್ನು ಸಂಕೇತಿಸುತ್ತದೆ. ಗಂಡ ಸತ್ತ ಮೇಲೆ ಗಂಡನ ಮಾತ್ರ ಕುಟುಂಬದ ಮನೆಯಲ್ಲಿ ಹೆಂಡತಿ ಮಕ್ಕಳು ಉಳಿದುಕೊಳ್ಳುವುದನ್ನು ತುಳು ಸಂಸ್ಕೃತಿ ಒಪ್ಪುವುದಿಲ್ಲ. ತುಳು ಸಂಸ್ಕೃತಿಯಲ್ಲಿ ಹೆಣ್ಣಿಗೆ ಆರ್ಥಿಕ ಭದ್ರತೆ ಇರುವುದರಿಂದ ಆಕೆ ತನ್ನ ಆಸ್ತಿ ಇರುವ ತವರಿನ ಕುಟುಂಬಕ್ಕೆ ಮರಳುತ್ತಾಳೆ. ಗಂಡನ ತಾಯಿಯ ಕಡೆಯಿಂದ ಬರುವ ಆಸ್ತಿ, ಮನೆ ಎಲ್ಲಾ ಆ ತಾಯಿಯ ಹೆಣ್ಣು ಮಕ್ಕಳಿಗೆ ಹೋಗಬೇಕೆಂಬ ಪದ್ಧತಿ ಇದು.

ಇತ್ತೀಚಿನ ಸಂದರ್ಭದಲ್ಲಿ ಗಂಡ ಸ್ವಯಾರ್ಜಿತವಾಗಿ ಬೇರೆ ಮನೆ ಮಾಡಿ ಹೆಂಡತಿ ಮಕ್ಕಳೊಂದಿಗೆ ಬದುಕುತ್ತಾನೆ. ಆ ಮನೆಯ ಸಂಪೂರ್ಣ ಅಧಿಕಾರ ಆತನ ಮಡದಿ ಮಕ್ಕಳಿಗೆ ಮಾತ್ರ. ಅಂತಹ ಸಂದರ್ಭದಲ್ಲಿಯೂ ಗಂಡ ಸತ್ತ ನಂತರ ಆತನ ವಿಧವೆಯು ಒಂದು ರಾತ್ರಿಗಾದರೂ ಗಂಡನಿಂದ ಬಂದ ಮನೆ ತೊರೆದು ತವರಿಗೆ ಹೋಗುವ ಪದ್ಧತಿ ಇದೆ. ಹೀಗೆ ತುಳು ಸಂಸ್ಕೃತಿ ಇಲ್ಲಿಯ ಜನರನ್ನು ಹಿಡಿದಿಟ್ಟಿದೆ.

ಪತ್ತನಾಜೆ ಎನ್ನುವ ವಿಶಿಷ್ಟ ಸಂಸ್ಕೃತಿ : ಕರ್ನಾಟಕದ ಇತರ ಭಾಗಕ್ಕೂ, ಅದರ ಕರಾವಳಿಗೂ ಇರುವ ಇನ್ನೊಂದು ಸಾಂಸ್ಕೃತಿಕ ವೈವಿಧ್ಯ ಪತ್ತನಾಜೆ. ಪತ್ತನಾಜೆ ಎನ್ನುವುದು ವೈಜ್ಞಾನಿಕವಾಗಿ ಒಪ್ಪಬಹುದಾದ ಆಚರಣೆ. ತುಳು ತಿಂಗಳು ಬೇಷ ಮಳೆಗಾಲವನ್ನು ತರುವ ತಿಂಗಳು. ತುಳು ಸಂಸ್ಕೃತಿಯಲ್ಲಿ ಸೌರಮಾನ ಯುಗಾದಿಯನ್ನು ಪಗ್ಗು ತಿಂಗಳ ಮೊದಲ ದಿನ (ಮೇಷ ತಿಂಗಳ) ಆಚರಿಸಲಾಗುತ್ತದೆ. ಅದು ಹೊಸ ವರ್ಷದ ಮೊದಲ ದಿನ. ಎರಡನೆಯ ತಿಂಗಳು ಬೇಷ (ವೃಷಭ). ಬೇಷ ತಿಂಗಳ ೧೦ನೆಯ ದಿನವನ್ನು ಪತ್ತನಾಜೆ ಎನ್ನುತ್ತಾರೆ. ಬೇಷದ ಈ ದಿನ ತುಳುನಾಡಿನಲ್ಲಿ ವಿಶಿಷ್ಟ ಆಚರಣೆ ಇದೆ. ಆ ದಿನ ಯಕ್ಷಗಾನ ಮೇಳಗಳು ಕೊನೆಯ ದಿನದ ಯಕ್ಷಗಾನ ಆಟವನ್ನು ತಮ್ಮ ಕ್ಷೇತ್ರದಲ್ಲಿ ಆಡಿ ನಲಿದು, ವೇಷ ಕಳಚಿ ಒಳಸೇರುತ್ತವೆ. ಮುಂದೆ ಆರಂಭವಾಗುವುದು ವಿಜಯದಶಮಿಗೆ. ವಿಜಯದಶಮಿಯಂದು ಯಕ್ಷಗಾನ ಮೇಳಗಳು ದೇವಸ್ಥಾನಗಳಿಂದ ಹೊರಬರುತ್ತವೆ. ದೇವಸ್ಥಾನ, ಭೂತಾರಾಧನೆಯ ಯಾವುದೇ ಆಚರಣೆಗಳು ಈ ಮಧ್ಯೆ ನಡೆಯುವುದಿಲ್ಲ. ಎಲ್ಲಾ ಉತ್ಸವ ಕಾರ್ಯಗಳಿಗೆ ಮಳೆಗಾಲದ, ಕೃಷಿ ಚಟುವಟಿಕೆಗಳ ಮೂರು ತಿಂಗಳು ರಜೆ. ಬೇಷ ತಿಂಗಳ ಹತ್ತನೆಯ ದಿನ ಹತ್ತು ಹನಿ ನೀರಾದರೂ ಮಳೆಯಾಗಿ ಭೂಮಿಗೆ ಬೀಳುತ್ತದೆ ಎಂಬ ನಂಬಿಕೆ ಇದೆ. "ಪತ್ತನಜೆಗೆ ಪತ್ತ್ ಪನಿ ಬರ್ಸ್ ಉಂಡು ಕೇಂಡನ ಪೂಜೆ ಬಲಿ ಪಿದಯಿಡ್ದ್ ಉಲಯಿ ಪೋಪುಂಡು ಮಾದಿರ" ಎನ್ನುವುದು ತುಳುನಾಡಿನ ಜನಪದ ಹೆಣ್ಣು ಮಾದಿರ ಗಾದೆ. ಆಷಾಢದ ಇಡೀ ತಿಂಗಳು ನಾಗ ಬ್ರಹ್ಮಸ್ಥಾನ, ಭೂತಸ್ಥಾನಗಳಲ್ಲಿ ಪೂಜೆ ನಿಷೇಧ. ಚಾವಡಿಯ ಉಯ್ಯಾಲೆಯಲ್ಲಿ ಇರುವ ಶಕ್ತಿಗಳಿಗೂ ಪೂಜೆ ಮಾಡುವಂತಿಲ್ಲ.

ದೇವರು ಮತ್ತು ಭೂತ : ತುಳು ಸಂಸ್ಕೃತಿಗೆ ವೈದಿಕ ಸಂಸ್ಕೃತಿಯ ಮುಖಾಮುಖಿ ಆಗಿದೆ. ತುಳು ಸಂಸ್ಕೃತಿಯಲ್ಲಿ ದೇವರುಗಳು ಭೂತಗಳಾಗುತ್ತಾರೆ, ಭೂತಗಳು ದೇವರಾಗುತ್ತಾರೆ. ವಿಷ್ಣುಮೂರ್ತಿ, ವೆಂಕಟರಮಣ, ಹನುಮಂತ, ಜಟಾಧಾರಿ, ಉಲ್ಲಾಲ್ತಿ ನಾಗಬ್ರಹ್ಮ – ಈ ದೇವರೆಲ್ಲ ದೇವರೂ ಆಗಿ, ಆಗಮ ಸಂಪ್ರದಾಯದ ಪೂಜೆಯನ್ನೂ ಪಡೆಯುತ್ತಾರೆ, ಭೂತಾರಾಧನೆಯ ಆಚರಣೆಯಂತೆ ಸ್ಥಳೀಯ ಪರಂಪರೆಯ ನರ್ತನ ಸೇವೆ, ಕೋಲದ ಉಪಾಸನೆಯನ್ನೂ ಪಡೆಯುತ್ತಾರೆ. ಇತರೆಡೆ ಜಟಾಧಾರಿ, ವೈದ್ಯನಾಥ ವೀರಭದ್ರ, ಭೈರವ ಇವರೆಲ್ಲ ವೈದಿಕರ ಶಿಷ್ಟ ದೇವರು. ತುಳುನಾಡ ಸಂಸ್ಕೃತಿಯಲ್ಲಿ ಅವು ಕೋಲ ಬಲಿ ಪಡೆಯುವ ಭೂತ. ನಾಗನಿಗೆ, ನಾಗ ಬ್ರಹ್ಮನಿಗೆ ಕೋಲ ನಡೆಯುತ್ತದೆ.

ಮೂಲತಾನ ಕ್ಷೇತ್ರಗಳು ವೈದಿಕ ಪರಂಪರೆ ಕ್ಷೇತ್ರಗಳಾಗಿ ಪರಿವರ್ತನೆಯಾದಾಗ ಭೂತಗಳ ನಡುವೆ ದೇವರು ಬಂದು ಸೇರಿ, ಮುಂದೆ ದೇವಸ್ಥಾನ ಆಗುತ್ತವೆ. ಹೀಗಾಗಿ ಆಗಮ ಸಂಪ್ರದಾಯದ ದೇವಸ್ಥಾನಗಳಲ್ಲಿ ಭೂತಗಳ ಗುಡಿಗಳನ್ನೂ ಕಾಣಬಹುದು. ಆದರೂ ಇಲ್ಲಿ ವೈದಿಕ ಮತ್ತು ನೆಲದ ಸಂಸ್ಕೃತಿಯ ಜಾನಪದ ಆಚರಣೆಗಳು ಜೊತೆ ಜೊತೆಯಾಗಿ ಸಾಗುತ್ತವೆ. ಉದಾ: ಪುತ್ತಿಗೆ ಸೋಮನಾಥೇಶ್ವರ, ಧರ್ಮಸ್ಥಳ ಮಂಜುನಾಥ ಕದ್ರಿ ಮಂಜುನಾಥ, ಪುತ್ತೂರು ಮಹಾಲಿಂಗೇಶ್ವರ, ನಂದಳಿಕೆ ಆಲಡೆ, ಕವತಾರು ಹಿರಿಯಟ್ಟ ವೀರಭದ್ರ ದೇವಸ್ಥಾನ ಹೀಗೆ ಅನೇಕಾನೇಕ ಕಡೆ ನಾವು ಕಾಣಬಹುದು. ಇನ್ನು

ಕೆಲವು ಕಡೆ ಕೆಲವು ಕ್ಷೇತ್ರಗಳ ಭೂತಮಾಧ್ಯಮನು ದೇವಸ್ಥಾನಕ್ಕೆ ಪರಿವಾರ ಸಮೇತ ಮೆರವಣಿಗೆಯಲ್ಲಿ ಹೋಗಿ, ವೈದಿಕ ದೇವರನ್ನು ಭೇಟಿ ಮಾಡಿ ಮರಳುವ ಉತ್ಸವ ನಡೆಯುತ್ತದೆ. ಬಂಟ್ವಾಳದ ನಂದಾವರ, ಕಟೀಲು, ಬಪ್ಪನಾಡು ಇತ್ಯಾದಿ ದೇವಸ್ಥಾನಗಳ ವಾರ್ಷಿಕ ಜಾತ್ರೆಗಳಲ್ಲಿ ಈ ಆಚರಣೆ ಇದೆ. ಆಗ ದೈವ ಮತ್ತು ಭೂತಗಳ ಮುಖಾಮುಖಿ ಭೇಟಿ ನಡೆಯುತ್ತದೆ.

ಭೂತಾರಾಧನೆಯ ಉದ್ದೇಶ ಆಡಳಿತಕ್ಕೆ ನೆರವಾಗುವುದು. ಹೀಗಾಗಿ ಭೂತಗಳಲ್ಲಿಯೂ ಶ್ರೇಣೀಕೃತ ವ್ಯವಸ್ಥೆ ಇದೆ. ಕುಟುಂಬ ಭೂತ, ಗ್ರಾಮ ಭೂತ, ಮಾಗಣೆ ಭೂತ ಸೀಮೆ ಭೂತ–ಹೀಗೆ ಆಡಳಿತದ ಹಂತಗಳಿಗೆ ಅನುಗುಣವಾಗಿ ಭೂತಗಳು ಕಾರ್ಯ ನಿರ್ವಹಿಸುತ್ತವೆ. ಅರಸು ದೈವ, ರಾಜನ್ ದೈವ, ಬಂಟ ದೈವ ಪರಿವಾರ ದೈವಗಳು ಎಂದು ಈ ಹಂತಗಳನ್ನು ಗುರುತಿಸುತ್ತಾರೆ. ಭೂತಾರಾಧನೆಗೆ ಮತಧರ್ಮ ಇಲ್ಲ. ಅದು ಎಲ್ಲಾ ಧರ್ಮದವರನ್ನೂ ತನ್ನ ಮಕ್ಕಳಂತೆ ಕಾಣುತ್ತದೆ. "ಹೆತ್ತ ತಾಯಿ ಮಕ್ಕಳನ್ನು ತನ್ನ ಮಡಿಲಲ್ಲಿ ಹಾಕಿ ಪೋಷಿಸಿ, ತನ್ನ ಎದೆಹಾಲನ್ನು ಮಾಯೆಯಲ್ಲಿ ಉಣಿಸಿ, ಅವರನ್ನು ಮಾಯೆಯ ಬೇಲಿಹಾಕಿ ಹೂವಿನ ಹಿತ್ತಲನ್ನು ಕಾಪಾಡುವಂತೆ ಕಾಪಾಡುತ್ತೇವೆ" ಎಂಬ ಅಭಯ ನುಡಿ ನೀಡುತ್ತವೆ. ಕುಟುಂಬಸೌಖ್ಯವನ್ನು, ಗ್ರಾಮ ಸೌಖ್ಯವನ್ನು, ಸೀಮೆಯ ಸೌಖ್ಯವನ್ನು ಕಾಪಾಡುವುದು ಇವುಗಳ ಕೆಲಸ. ಆದ್ದರಿಂದಲೇ ಒಂದು ಕುಟುಂಬದ ಜನರು ಇನ್ನೊಂದು ಕುಟುಂಬದ ದೈವಕ್ಕೆ, ಒಂದು ಗ್ರಾಮದ ಜನರು ಇನ್ನೊಂದು ಗ್ರಾಮದ ಭೂತಕ್ಕೆ, ಒಂದು ಸೀಮೆಯ ಜನರು ಇನ್ನೊಂದು ಸೀಮೆಯ ಭೂತಕ್ಕೆ ಭಕ್ತಿಯನ್ನು ತೋರಿಸುವುದಿಲ್ಲ. ಆದರೆ ಗೌರವ ನೀಡುತ್ತಾರೆ. ಆಯಾ ಕುಟುಂಬವನ್ನು ಗ್ರಾಮವನ್ನು ಸೀಮೆಯನ್ನು ರಕ್ಷಿಸಲು ಆಯಾ ದೈವಗಳು ಇವೆ ಎನ್ನುವ ನಂಬಿಕೆ ಇಲ್ಲಿದೆ. ಬೀಡು ಗುತ್ತುಗಳಲ್ಲಿ ಇರುವ ಪ್ರಮಾಣ ಕಲ್ಲುಗಳು ಅರೋಪಿಗಳಲ್ಲಿ ಈ ದೈವಗಳ ಭಯ ಉಂಟುಮಾಡಿ ಸತ್ಯನುಡಿಸುವ ಕೆಲಸವನ್ನು ಮಾಡುತ್ತವೆ. 'ಮಾತು ಬಿಡ ಅಣ್ಣಪ್ಪ, ಕಾಸು ಬಿಡ ತಿಮ್ಮಪ್ಪ' (ತುಳು "ಅಣ್ಣಪ್ಪೆ ಬಾಸೆ ಬುಡುಯೆ, ತಿಮ್ಮಪ್ಪೆ ಕಾಸ್ ಬುಡಯೆ") ಎನ್ನುವ ಗಾದೆ ಹುಟ್ಟಿದ್ದು, ಅದೀಗ 'ಮಾತು ಬಿಡ ಮಂಜುನಾಥ' ಆಗಿದ್ದು ನಂತರದ ಬದಲಾವಣೆ. ಈಗಲೂ ಇತರ ಭಾಗದ ದೈವಗಳ ಗುಡಿಗಟ್ಟು 'ಮಾತು ಬಿಡ ಅಣ್ಣಪ್ಪ' ಎನ್ನುತ್ತದೆ. ಅಣ್ಣಪ್ಪ ಧರ್ಮಸ್ಥಳ ಕೇತ್ರದ ನಾಲ್ಕು ಧರ್ಮ ದೇವತೆಗಳ ಬಂಟ ದೈವ. ತುಳುನಾಡಿನಲ್ಲಿ ಅರಸು ದೈವಗಳಿಗಿಂತ, ರಾಜನ್ ದೈವಗಳಿಗಿಂತ, ಬಂಟ ದೈವಗಳು ಹೆಚ್ಚು ಶಕ್ತಿಯನ್ನು ಪ್ರದರ್ಶಿಸುತ್ತವೆ. 'ಅರಸು ಮತ್ತು ರಾಜನ್ ದೈವಗಳಿಗೆ ಕುಳಿತು ಪಟ್ಟ; ಬಂಟ ದೈವಗಳಿಗೆ ತಿರುಗಿ ಪಟ್ಟ' ಎಂಬುದು ನಂಬಿಕೆ.

ಮರು ಜನ್ಮದ ಕಲ್ಪನೆ : ತುಳುವ ಸಂಸ್ಕೃತಿಯಲ್ಲಿ ಭೂತಗಳು ದುಷ್ಟರನ್ನು ಶಿಕ್ಷಿಸಿ ಶಿಷ್ಟರನ್ನು ರಕ್ಷಿಸುವ ಕೆಲಸ ಮಾಡುತ್ತವೆ. ಮಾನವನ ಒಳಿತು ಕೆಡುಕುಗಳಿಗೆ ಫಲಾಫಲಗಳನ್ನು, ಅವರು ನಂಬಿರುವ ದೈವಗಳು ಆಯಾ ವ್ಯಕ್ತಿ ಸಾಯುವ ಮೊದಲು ನೀಡುತ್ತವೆ. ಹಾಗಾಗಿ ಇರುವ ಒಂದೇ ಜನ್ಮದಲ್ಲಿ ಶಿಷ್ಟ ಜನರಿಗೆ ಸ್ವರ್ಗ, ದುಷ್ಟಜನರಿಗೆ ನರಕವನ್ನು ತೋರಿಸುತ್ತವೆ ಎಂಬುದು ನಂಬಿಕೆ. ಮರು ಜನ್ಮದ ಕಲ್ಪನೆ ಇಲ್ಲ. ಅವರು ನಡೆದುಕೊಂಡು

ಬರುತ್ತಿರುವ ಮೂಲತಾನ ಕ್ಷೇತ್ರಗಳ ನಾಗಬ್ರಹ್ಮ ಸಾನ್ನಿಧ್ಯವೇ ಅವರಿಗೆ ಸ್ವರ್ಗ. ಪ್ರತಿ ತುಳುವನೂ ಈ ಕ್ಷೇತ್ರದಲ್ಲಿ ಐಕ್ಯಗೊಳ್ಳಬೇಕೆನ್ನುವುದು ನೆಲದ ಸಂಸ್ಕೃತಿಯ ಪರಂಪರೆ. "ಬದುಕಿದರೆ ಇಲ್ಲಿ ಭೂಮಿಯಲ್ಲಿ, ಸತ್ತರೆ ಅಲ್ಲಿ ನಾಗಬ್ರಹ್ಮರ ಬಳಿ " ಎನ್ನುವುದು ತುಳು ರೂಢಿಮಾತು. ವರ್ಷಕ್ಕೊಮ್ಮೆ ನಾಗಬ್ರಹ್ಮರ ಈ ಮೂಲ ಕ್ಷೇತ್ರಗಳಲ್ಲಿ ಜಾತಿ ಭೇದ ಇಲ್ಲದೆ ತುಳುವರು ಸೇರಿ ಸಾಮೂಹಿಕ ಭೋಜನ ಮಾಡುವ ಆಚರಣೆ ಕೆಲವು ಕ್ಷೇತ್ರಗಳಲ್ಲಿ ಈಗಲೂ ಉಳಿದು ಬಂದಿದೆ. ಕಂಬುಲವು ಇಂತಹ ಮೂಲತಾನ ಕ್ಷೇತ್ರಗಳಲ್ಲಿ ನಡೆಯುವ ಕೃಷಿ ಸಂಸ್ಕೃತಿಯನ್ನು ಪೋಷಿಸುವ ನಾಗಬ್ರಹ್ಮ (ನಾಗ) ಮತ್ತು ಪರಿವಾರ ದೈವಗಳ ಉಪಾಸನೆ. ಇಂತಹ ಕಂಬುಲಗಳು ನಾಗಬ್ರಹ್ಮನ ಪರಿವಾರ ದೈವಗಳ ಹೆಸರಲ್ಲಿ ನಡೆಯುತ್ತವೆ. ಆದರೆ ಕೆಲವೊಂದು ಕಂಬುಲಗಳು ವೈದಿಕ ದೇವರ ಹೆಸರಿನಲ್ಲಿಯೂ ನಡೆಯುತ್ತವೆ. ಪುತ್ತೂರು ತಾಲೂಕಿನ ಹನುಮಂತ ದೇವರ ಹೆಸರಿನಲ್ಲಿ ನಡೆಯುವ ಕಂಬುಲ ಒಂದು ಉದಾಹರಣೆ. ಪರಂಪರೆಯ ಆಳುವ ಮನೆತನದ ಮನೆಯ ಪಟ್ಟಾಭಿಷಿಕ್ತನಿಗೆ ಪ್ರತಿ ವರ್ಷದ ಕಂಬುಲದಲ್ಲಿಯೂ ಪಟ್ಟ ಆಗುವ ಪದ್ಧತಿ ಮುಂದುವರಿದಿದೆ.

ಪರಂಪರೆಯ ಗ್ರಾಮಾಧಿಕಾರದ ಮುಂದುವರಿಕೆ : ಪ್ರಾಚೀನ ಕಾಲದಲ್ಲಿ ಗಣಪರಿವಾರದ ರೀತಿಯ ಆಡಳಿತ ವ್ಯವಸ್ಥೆ ತುಳುನಾಡಿನಲ್ಲಿ ಇತ್ತು. ಈ ಅಧಿಕಾರವು ಹಲವು ಸ್ಥಿತ್ಯಂತರಗಳನ್ನು ಪಡೆದಿರಬಹುದಾದರೂ, ಈಗಲೂ ಆ ವ್ಯವಸ್ಥೆಯ ಸಾಂಕೇತಿಕತೆಯ ಆಚರಣೆಯನ್ನು ಕಾಣಬಹುದು. ಇಲ್ಲಿಯ ಶಾಸನಗಳಲ್ಲಿ ಪಟ್ಟಕಟ್ಟುವ ಉಲ್ಲೇಖ ಬರುತ್ತದೆ. ಚಿತ್ರವಾಹನನ ೮ನೆಯ ಶತಮಾನದ ಶಾಸನ ಮಾಹಿತಿಯಲ್ಲಿ "ಕರಸಿ ನಾಯ್ಗನಿಗೆ ಪಟ್ಟ ಕಟ್ಟಿ" ಎಂಬ ಉಲ್ಲೇಖ ಬರುತ್ತದೆ. ಆದರೆ ನಾಯ್ಗ ಎನ್ನುವುದು ಈಗ 'ಗಡಿನಾಮ'. ಗಡಿ ಎಂಬ ಪದ ತುಳುನಾಡಿನಲ್ಲಿ ಮಾತ್ರ ಇದೆ. ಗುತ್ತುಗಳಲ್ಲಿ ಗಡಿ ಆಗುತ್ತದೆ. ಬೀಡುಗಳಲ್ಲಿ ಪಟ್ಟ ಆಗುತ್ತದೆ. ಬೀಡುಗಳ ಪಟ್ಟವನ್ನೂ ಗಡಿ ಎನ್ನುತ್ತಾರೆ. ಪಟ್ಟ ಮೇಲಿನ ಹಂತ, 'ಗಡಿ' ಎಂದರೆ ಕೆಳಗಿನ ಹಂತ. ಎರಡಕ್ಕೂ ಒಂದೇ ವಿಧಿ ನಿಷೇಧಗಳು. ಆದರೆ ಪಟ್ಟಾಭಿಷೇಕದ ಪದ್ಧತಿ ಮತ್ತು ಗಡಿಯ ಪದ್ಧತಿ ಬೇರೆ. ಅದು ಏನೇ ಇರಲಿ, ಈ ಆಚರಣೆ ಈಗಲೂ ಮುಂದುವರಿಯುತ್ತಿರುವುದು ವಿಶೇಷ. ಇದು ತುಳು ಸಂಸ್ಕೃತಿಯ ವೈಶಿಷ್ಟ್ಯ. ಗ್ರಾಮಾಧಿಕಾರ ಇದ್ದ ದಿನಗಳಲ್ಲಿ ಚಾವಡಿಗಳಲ್ಲಿ, ನಾಗಮೂಲ ಕ್ಷೇತ್ರಗಳಲ್ಲಿ ಇರುವ ಪಂಚ ದೈವಗಳ/ ಭೂತಗಳ ಉಪಾಸನೆಯ ಆಡಳಿತ ನಿರ್ವಾಹಕರಾಗಿ [ನಾಗಬ್ರಹ್ಮ, ರಕ್ತೇಶ್ವರಿ, ನಂದಿಗೋಣ (ಕೋಣ)] ಕ್ಷೇತ್ಪಾಲ, ನಾಗವೀ ಗುರಿಕಾರರು ಕೆಲಸ ಮಾಡುತ್ತಾರೆ. ಬಹುಶ: ಇದು ಎಲ್ಲೂ ಕಾಣಲಾರದ ವೈಶಿಷ್ಟ್ಯ. ಗಡಿಯ ಸಂದರ್ಭದಲ್ಲಿ ವಿಧಿವತ್ತಾದ ಆಚರಣೆಗಳಿವೆ. ಈ ಸಂದರ್ಭದಲ್ಲಿ ಪಟ್ಟ ಮತ್ತು ಗಡಿಗೆ ಆರಿಸಲ್ಪಡುವ ವ್ಯಕ್ತಿಯ ನಿಜನಾಮವನ್ನು ತೆಗೆದು ಹೊಸ ಹೆಸರು, ಆ ಗ್ರಾಮಾಧಿಕಾರದ ಪರಂಪರೆಯ ಹೆಸರು/ಉಪನಾಮ ನೀಡಲಾಗುತ್ತದೆ. ಈ ಉಪನಾಮವನ್ನು ಅವರ ಮಡದಿ ಮಕ್ಕಳು ತಮ್ಮ ಹೆಸರಿನ ಜೊತೆ ಸೇರಿಸಬಾರದೆಂಬುದು ಪದ್ಧತಿ. ಉದಾಹರಣೆಗೆ ಧರ್ಮಸ್ಥಳ ಹೆಗ್ಗಡೆ, ಮೂಡಬಿದಿರೆಯ ಚೌಟರು, ಮುಲ್ಕಿಯ ಸಾವಂತರು ಹಾಗೂ ಇನ್ನೂ ಅನೇಕ ಗುತ್ತು ಬೀಡುಗಳವರು.

ಮೇಲೆ ತಿಳಿಸಿದ ದೈವಗಳ ಶ್ರೇಣೀಕೃತ ವ್ಯವಸ್ಥೆಯಂತೆ ಆಡಳಿತಕ್ಕೂ ಹಂತಗಳಿವೆ. ಆಡಳಿತಕ್ಕೆ ನೆರವಾಗುವುದು ದೈವಗಳ ಕೆಲಸ. ಆದುದರಿಂದ ಆಡಳಿತ ಮತ್ತು ದೈವಗಳ ಶ್ರೇಣೀಕೃತ ವ್ಯವಸ್ಥೆಯಲ್ಲಿ ಅಂತರ್ ಸಂಬಂಧ ಇದೆ.

ಭೂತಾರಾಧನೆ ಮತ್ತು ಅನ್ಯ ಧರ್ಮ : ಭೂತಾರಾಧನೆ ಮತಧರ್ಮ ಹುಟ್ಟುವ ಮೊದಲೇ ಇದ್ದಿರಬಹುದಾದ ಉಪಾಸನಾ ಪರಂಪರೆ. ಆದ್ದರಿಂದಲೇ ಭೂತಾರಾಧನೆಗೆ ಮತಭೇದ ಇಲ್ಲ. ಇಲ್ಲಿಯ ಜೈನ ಧರ್ಮ ಭೂತಾರಾಧನೆಯನ್ನು ಸಂಪೂರ್ಣ ಸ್ವೀಕರಿಸಿದೆ. ವೀರಶೈವ ಮಠಗಳಲ್ಲಿಯೂ ಭೂತಾರಾಧನೆ ನಡೆಯುತ್ತಿದೆ. ಮಸೀದಿಗಳಿಗೆ ಭೂತಗಳು ಭೇಟಿ ನೀಡಿ ಮಾಯೆಯಲ್ಲಿ (ಅಲೌಕಿಕ) ಅಲ್ಲಾಹು ಜೊತೆ ಮಾತನಾಡುತ್ತವೆ. ವಿಶೇಷವೆಂದರೆ ಬ್ರಾಹ್ಮಣ ಭೂತವೂ ಇದೆ, ಬ್ಯಾರಿ ಭೂತವೂ ಇದೆ. ಸಿರಿ ಪಾಡ್ದನದಲ್ಲಿ ಕ್ರೈಸ್ತ ಮಹಿಳೆಯರೂ ಸಿರಿಯಿಂದ ವರ ಪಡೆಯುವ ಪ್ರಸಂಗ ಇದೆ.

ಬೊಬ್ಬರ್ಯಪಾಡ್ದನದಲ್ಲಿ 'ಪೊಂಜೊಳು ಕಿಲೆಪಿ' (ಹುಂಜ ಕೂಗುವ) ಹನ್ನೆರಡು (ಪದರಾಡ್) ಮಾಗಣೆಯ ಪ್ರಸ್ತಾಪ ಇದೆ. ಬೊಬ್ಬರ್ಯ ಕಟ್ಟುವ ಹಡಗಿಗೆ ಮರ ಕಡಿದು ತರುವಾಗ ಆದ ಅಡಚಣೆಗಳ ನಿವಾರಣೆಗಾಗಿ ಬೊಬ್ಬರ್ಯ ಪೊಂಜೊಳು ಕಿಲೆಪಿ (ಹುಂಜ ಕೂಗುವ) ಹನ್ನೆರಡು (ಪದರಾಡ್) ಮಾಗಣೆಯ (ವೇಣೂರು?) ಪೂಂಜನಿಗೆ ಪಟ್ಟ ಬೆರ್ಮೆ(ನಾಗ)ರಿಗೆ ಮಾಡ (ಮನೆಯಂಥ ಗುಡಿ ಧಮಸ್ಥಳ ಮಂಜುನಾಥನ ದೇವಸ್ಥಾನ ಮಾಡದ ಆಯದಲ್ಲಿದೆ) ಕಟ್ಟಿಸುತ್ತಾನೆ (ಐಗಳ್).

ಬೊಬ್ಬರ್ಯ ಎನ್ನುವ ಮುಸ್ಲಿಂ ಸೋದರರು ಹಡಗು ಕಟ್ಟಿ, ಕೊಚ್ಚಿಗೆ ವ್ಯಾಪಾರಕ್ಕೆ ಹೋಗಿ ಮರಳುವಾಗ ದಾರಿಯಲ್ಲಿ ಅವರ ಹಡಗು ಸಮುದ್ರ ಕಳ್ಳರ ಜೊತೆ ಜಲಧಿಯಲ್ಲಿ ನಡೆದ ಕಾಳಗದಲ್ಲಿ ಬ್ಯಾರಿಗಳ ಪಡಾವು (ಹಡಗು) ಒಡೆಯುತ್ತದೆ. ಬೊಬ್ಬರ್ಯ ಬೆರ್ಮೆರ ಬಳಿ ಮಾಯಾವಾಗುತ್ತಾನೆ. ಅಲ್ಲಿಯೇ ಉಪಾಸನೆ ಪಡೆಯುತ್ತಾನೆ (ಐಗಳು). ಹೀಗೆ ಕೆಲವು ಪಾಡ್ದನ ಕಥೆಗಳಲ್ಲಿ ಬ್ಯಾರಿ ಜನಾಂಗ ದೈವವಾದ, ದೈವಕ್ಕೆ ಗುಡಿ ಕಟ್ಟಿದ ಪ್ರಸಂಗವನ್ನು ವಿವರಿಸುತ್ತವೆ. ಕಾಲ ಇಲ್ಲದ ಬಾರ್ಕೂರು ಪಂಚಲಿಂಗೇಶ್ವರ ದೇವಸ್ಥಾನದ ಶಾಸನದಲ್ಲಿ ಅಂಜುಮಾನ್ ಸಂಘಟನೆ ಮುಖ್ಯಸ್ಥ ರಥೋತ್ಸವ ಸಂದರ್ಭದಲ್ಲಿ 'ಓಲಗದಲ್ಲಿ ಇದ್ದ' ಪ್ರಸ್ತಾಪ ಇದೆ. ಈಗಲೂ ಇದೇ ಕುಟುಂಬಕ್ಕೆ ಇಲ್ಲಿಯ ಓಕುಳಿ ಹೊಂಡದ ಓಲಗದ ಅಧಿಕಾರ ಮುಂದುವರಿದಿದೆ. ಹೀಗೆ ಕರ್ನಾಟಕ ಕರಾವಳಿ ಭಾಗದಲ್ಲಿ ಇರುವ ತುಳು ಸಂಸ್ಕೃತಿಯು ಅನನ್ಯವಾದುದು, ವಿಶಿಷ್ಟವಾದುದು.

❐



ಕನ್ನಡಿಗರ ಹೆಮ್ಮೆಯ ಸ್ಮಾರಕ – ಹಂಪಿಯ ಬಿಷ್ಟಪ್ಪಯ್ಯ ಗೋಪುರ

■ ಡಾ. ವಸುಂಧರಾ ದೇಸಾಯಿ

ಸಾವಿರಾರು ವರ್ಷಗಳ ಇತಿಹಾಸವಿರುವ ಕನ್ನಡನಾಡಿನ ಹಿರಿಮೆಯನ್ನು, ಕನ್ನಡ ನುಡಿಯ ಕಂಪನ್ನು ಈ ನೆಲವನ್ನಾಳಿದ ಹಲವು ರಾಜಮನೆತನಗಳು ಜಗತ್ತಿನಾದ್ಯಂತ ಪಸರಿಸಿವೆ. ಹಲವಾರು ಸಾಧುಸಂತರು, ಯೋಗಿಗಳು, ಶರಣರು, ದಾಸರು, ಕವಿಗಳು ಅಂಥ ಕಾರ್ಯಗಳಲ್ಲಿ ರಾಜರಿಗೆ ಹೆಗಲೆಣೆಯಾಗಿ ನಿಂತಿದ್ದಾರೆ. ಅಂಥ ಮಹನೀಯರಲ್ಲಿ ಗುರು ಬಿಷ್ಟಪ್ಪಯ್ಯನವರೂ ಒಬ್ಬರು.

ಹಂಪಿಯನ್ನು ಸಂದರ್ಶಿಸುವ ಪ್ರತಿಯೊಬ್ಬರೂ ಅಲ್ಲಿನ ಹಾಳು ಸ್ಮಾರಕಗಳ ಗತವೈಭವವನ್ನು ನೆನೆದು ವಿಷಾದಪಡುತ್ತಲೇ, ಹಾಳು–ಬೀಳಿನಲ್ಲೂ ಮುಕ್ಕಾಗದೇ ಮುಗಿಲೆಡೆಗೆ ಗೋಣು ಚಾಚಿ ನಿಂತ "ಬಿಷ್ಟಪ್ಪಯ್ಯ ಗೋಪುರದ" ವೈಭವವನ್ನೂ ಅಗಾಧತೆಯನ್ನೂ ಕಂಡು ಮೂಕವಿಸ್ಮಿತರಾಗುತ್ತಾರೆ.

ಆಗ ಎಲ್ಲರ ಮನದಲ್ಲಿ ಮೂಡುವ ಸಾಮಾನ್ಯ ಪ್ರಶ್ನೆ. ಯಾರು ಈ 'ಬಿಷ್ಟಪ್ಪಯ್ಯನವರು? ಅವರು ಈ ಗೋಪುರವನ್ನು ಯಾವಾಗ ನಿರ್ಮಿಸಿದರು?' ಇಲ್ಲಿದೆ ಕನ್ನಡನಾಡಿನ ಈ ಹೆಮ್ಮೆಯ ಸ್ಮಾರಕದ ನಿರ್ಮಾಣದ, ನಿರ್ಮಾಪಕರ ಸತ್ಯಕಥೆ.



ಗುರು ಬಿಷ್ಟಪ್ಪಯ್ಯನವರು ಬಳ್ಳಾರಿ ಜಿಲ್ಲೆಯ ಸೋಗಿ ಗ್ರಾಮದಲ್ಲಿ, ಕ್ರಿ.ಶ. ೧೬೦೮ರಲ್ಲಿ ಅಯ್ಯಂಭಟ್ಟರ ಮಗನಾಗಿ ಜನಿಸಿದರು. ಬಾಲ್ಯದಿಂದಲೇ ಆಧ್ಯಾತ್ಮದಲ್ಲಿ ಅಪಾರ ಆಸಕ್ತಿ ಹೊಂದಿದ್ದ ಬಾಲಕ, ಉಪನಯನವಾದ ಕೂಡಲೇ ಹನ್ನೆರಡು ವರ್ಷ ಕಠಿಣ ತಪಸ್ಸನ್ನು ಆಚರಿಸಿ, ಆತ್ಮಜ್ಞಾನ ಪಡೆದರು. ನಂತರದ ದಿನಗಳಲ್ಲಿ ಮುಸ್ಲಿಂ ದೊರೆಗಳ ಕ್ರೌರ್ಯ ಅಟ್ಟಹಾಸಗಳಿಂದ

ನಲುಗುತ್ತಿದ್ದ ಅಂದಿನ ಸಮಾಜಕ್ಕೆ ಭದ್ರತೆ ನೀಡುವತ್ತ ಗಮನ ಹರಿಸಿದ ಬಿಷ್ಟಪ್ಪಯ್ಯನವರು ಅದಕ್ಕಾಗಿ ಆಯ್ದುಕೊಂಡ ವಿಧಾನಗಳು ಹಲವಾರು. ಅವುಗಳಲ್ಲಿ ಮುಖ್ಯವಾದವು ಗಳೆಂದರೆ ಆಯುರ್ವೇದ (ರಸಶಾಸ್ತ್ರ), ವಾಸ್ತುಶಿಲ್ಪ, ಯೋಗ ಮತ್ತು ಆಧ್ಯಾತ್ಮ.

ಆರಂಭದ ದಿನಗಳಲ್ಲಿ ಗುರುವು ತಮ್ಮ ಪ್ರಥಮ ಆಸಕ್ತಿಯ ವಿಷಯವಾಗಿದ್ದ ರಸಶಾಸ್ತ್ರದ ಪ್ರಯೋಗಗಳಲ್ಲಿ ನಿರತರಾಗಿ, ಆ ದಿನಗಳಲ್ಲಿ ಅತಿ ಪ್ರತಿಷ್ಠೆಯ ಕುರುಹಾಗಿದ್ದ ರಸಲಿಂಗಗಳ ತಯಾರಿಯಲ್ಲಿ ಮಗ್ನರಾಗಿದ್ದರು. ಹಲವು ರಸಲಿಂಗಗಳನ್ನು ಭಕ್ತರಿಗೆ ದಾನ ನೀಡಿ, ಜನತೆ ಆ ಲಿಂಗಗಳನ್ನು ಗುಡಿಗಳಲ್ಲಿ ಸಾಮೂಹಿಕವಾಗಿ ಪೂಜಿಸುವಂತೆ ಉಪದೇಶಿಸುತ್ತ, ಪ್ರಜೆಗಳ ಧಾರ್ಮಿಕ, ಮಾನಸಿಕ ಭದ್ರತೆಯತ್ತ ಗಮನ ಹರಿಸಿದ್ದರು.

ನಂತರ ತಮ್ಮ ನಿತ್ಯಪೂಜೆಗೆಂದು ಅಪೂರ್ವವಾದ ರಸಲಿಂಗ ಮತ್ತು ಇತರ ಪರಿವಾರ ದೇವತೆಗಳನ್ನು ನಿರ್ಮಿಸಿಕೊಂಡಿದ್ದು, ಈ ರಸಲಿಂಗ ಕೂಡ ಬಿಷ್ಟಪ್ಪಯ್ಯನವರು ಸಮಾಜಕ್ಕೆ ನೀಡಿದ ಮತ್ತೊಂದು ದೊಡ್ಡ ಕೊಡುಗೆ ಎನಿಸಿದೆ.

ಲಭ್ಯವಿರುವ ರಸಲಿಂಗಗಳಲೆಲ್ಲ ಅತ್ಯಂತ ದೊಡ್ಡದು ಮತ್ತು ಲೋಹದ ಹೊದಿಕೆ ಯಿಂದ ಬಂಧಿತವಾಗಿ, ವಿಶಿಷ್ಟವಾದದ್ದು ಎಂಬ ಹೆಗ್ಗಳಿಕೆ ಹೊಂದಿರುವ ಸುಮಾರು ೨೦–೨೫ ಕಿ.ಗ್ರಾಂ ತೂಕದ ಈ ಲಿಂಗ, ಈಗ ಬಿಷ್ಟಪ್ಪಯ್ಯನವರಿಂದ ಹನ್ನೊಂದನೆಯ ತಲೆಮಾರಿನ ತಮ್ಮ ಸೋದರರಾದ ಶಿವಪ್ಪಯ್ಯ ಮಹಾಪುರುಷರ ಒಡೆತನದಲ್ಲಿದೆ. 'ಶ್ರೀಪಂಪಾ ವಿರೂಪಾಕ್ಷೇಶ್ವರ ಮಹಾಲಿಂಗೇಶ್ವರ' ಎಂಬ ಅಭಿಧಾನದಿಂದ ಪೂಜಿಸಲ್ಪಡು ತ್ತಿರುವ ಈ ಲಿಂಗವು, ಬಿಷ್ಟಪ್ಪಯ್ಯನವರು ರಸಶಾಸ್ತ್ರದಲ್ಲಿ ಹೊಂದಿದ್ದ ಉನ್ನತ ಪಾಂಡಿತ್ಯಕ್ಕೆ ಜ್ವಲಂತ ಸಾಕ್ಷಿಯಂತೆ ನಿಂತಿದೆ.

ಆಯುರ್ವೇದ ವೈದ್ಯರ ಅಭಿಪ್ರಾಯದಂತೆ, ಬಿಷ್ಟಪ್ಪಯ್ಯನವರು ಈ ಲಿಂಗವನ್ನು ಧಾರ್ಮಿಕ ದೃಷ್ಟಿಯಿಂದಷ್ಟೇ ಅಲ್ಲದೇ ವೈದ್ಯಕೀಯ ದೃಷ್ಟಿಯಿಂದಲೂ ನಿರ್ಮಿಸಿದ್ದಾರೆ. ಅದರಿಂದ ಆಗಾಗ ಸ್ರಾವವಾಗುವ ಪಾದರಸಕ್ಕೆ ಹಲವು ಕಾಯಿಲೆಗಳನ್ನು ಗುಣಪಡಿಸುವ ಶಕ್ತಿ ಇದೆ. ಪಾದರಸವನ್ನು ಘನೀಕರಿಸುವುದು ಬಹಳ ಕಷ್ಟಕರವಾದ ಕೆಲಸ. ಪಾದರಸ ದೊಡನೆ ಸಂಪರ್ಕಕ್ಕೆ ಬರುವ ಲೋಹಗಳು ತಕ್ಷಣ ತಮ್ಮ ಮೂಲ ಹೊಳಪು, ಬಣ್ಣವನ್ನು ಕಳೆದುಕೊಂಡು ಕಪ್ಪಾಗಿ ಬಿಡುತ್ತವೆ. ಆದರೆ ಹದಿನೆಂಟು ಸಂಸ್ಕಾರಗಳನ್ನು ಪಡೆದ ರಸದೊಡನೆ ಮಾತ್ರ ಲೋಹ ತನ್ನ ಮೂಲ ರೂಪ, ವರ್ಣದೊಡನೆ ಇರುತ್ತದೆ. ಈ ಎಲ್ಲ ದೃಷ್ಟಿಯಿಂದ ಬಂಗಾರದಂತೆ ಹೊಳೆಯುವ ಹೊದಿಕೆಯುಳ್ಳ ಈ ರಸಲಿಂಗದ ರಸದಲ್ಲಿ ಮಿಳಿತವಾದ ಇನ್ನಿತರ ರಸಗಳು, ಹೊದಿಕೆಯಲ್ಲಿ ಉಪಯೋಗಿಸಿದ ಲೋಹಗಳ ಬಗ್ಗೆ ತಿಳಿದುಬಂದಲ್ಲಿ, ನಶಿಸಿಹೋದ ರಸಶಾಸ್ತ್ರಕ್ಕೆ ಮರುಜೀವ ಕೊಡಬಹುದಾಗಿದೆ.

ತಮ್ಮ ಮಹತ್ವಾಕಾಂಕ್ಷೆಯ ರಸಲಿಂಗವನ್ನು ನಿರ್ಮಿಸಿದ ನಂತರ ಯೋಗಿಗಳು ಗಮನ ಹರಿಸಿದ್ದು ದಾಳಿಕೋರರಿಂದ ನಾಶವಾಗಿದ್ದ ಗುಡಿಗೋಪುರಗಳ ಪುನರ್‌ನಿರ್ಮಾಣ ಜೀರ್ಣೋದ್ಧಾರ, ಕೆರೆ–ಬಾವಿಗಳ ನಿರ್ಮಾಣದೆಡೆಗೆ. ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ತಾಲೂಕಿನಲ್ಲಿ ತುಂಗಭದ್ರಾ ನದಿಯ ತಟದ ಮೇಲಿರುವ ರಂಗಾಪುರ ಮತ್ತು ಅದರ ಆಚೆ ದಡದಲ್ಲಿರುವ ಬಿದಿರಹಳ್ಳಿ ಪರಿಸರದಲ್ಲಿ, ಹನ್ನೆರಡನೆಯ ಶತಮಾನದ ಹಲವಾರು

ಸುಂದರವಾದ ಗುಡಿಗಳಿದ್ದು, ಅವೆಲ್ಲದರಲ್ಲಿ ವಿಗ್ರಹಗಳು ಭಗ್ನವಾಗಿದ್ದವು. ಈ ಸ್ಥಳವನ್ನು ತಮ್ಮ ಕರ್ಮಭೂಮಿಯಾಗಿ ಆರಿಸಿಕೊಂಡ ಜಿಷ್ಟೇಶರು, ಆ ಎಲ್ಲ ಗುಡಿಗಳನ್ನು ಜೀರ್ಣೋದ್ಧಾರಗೊಳಿಸಿ, ಭಗ್ನ ವಿಗ್ರಹಗಳನ್ನು ತೆಗೆದು, ಹೊಸ ವಿಗ್ರಹಗಳನ್ನು ಪ್ರತಿಷ್ಠಾಪಿಸಿ, ನಿತ್ಯಪೂಜೆ, ಉತ್ಸವಗಳು ನಡೆಯುವಂತೆ ವ್ಯವಸ್ಥೆ ಮಾಡಿದರು. ಅದೇ ಪರಿಸರದಲ್ಲಿರುವ ಶಂಕರಲಿಂಗನ ಗಡ್ಡಿ ಎಂಬ ಪುಟ್ಟ ದ್ವೀಪವು ಯೋಗಿಯ ತಪಸ್ಸು ಆಧ್ಯಾತ್ಮ ಸಾಧನೆಗಳಿಗೆ ಪ್ರಶಸ್ತ ತಾಣವಾಗಿತ್ತು.

ಮಹಾಗೋಪುರ ನಿರ್ಮಾಣ

ಅತ್ತ ಹಂಪಿಯಲ್ಲಿ ಅನೇಕ ರಾಜಕೀಯ ಸ್ಥಿತ್ಯಂತರಗಳಾಗುತ್ತಿದ್ದವು. ಕ್ರಿ.ಶ. ೧೫೬೫ರ ರಕ್ಕಸತಂಗಡಿ ಯುದ್ಧದಲ್ಲಿ ಸೋತ ವಿಜಯನಗರದ ದೊರೆಗಳು ದೂರದ ಪೆನುಕೊಂಡೆ ಚಂದ್ರಗಿರಿಗಳಿಗೆ ರಾಜಧಾನಿಯನ್ನು ಬದಲಿಸಿಕೊಂಡಿದ್ದರು. ಮುಸ್ಲಿಮರ ದಾಳಿಗಳು ಪದೇ ಪದೇ ನಡೆಯುತ್ತಲೇ ಇದ್ದವು. ಅಳಿದುಳಿದ ಸಾಮ್ರಾಜ್ಯವೂ ಕ್ರಮೇಣ ನಶಿಸುತ್ತ ಸಾಗಿತ್ತು. ಕೊನೆಗೆ ದಾಳಿಗಳನ್ನು ಎದುರಿಸಲು ಸಾಮರ್ಥ್ಯವಿಲ್ಲದೆ, ಸಾಮ್ರಾಜ್ಯದ ಕೊನೆಯ ದೊರೆ ಶ್ರೀರಂಗರಾಯರು ಕ್ರಿ.ಶ. ೧೬೫೮ರಲ್ಲಿ ಕೆಳದಿ ದೊರೆಯ ಆಶ್ರಯ ಪಡೆದರು. ಹಂಪಿ ಅಕ್ಷರಶಃ ಅನಾಥವಾಗಿತ್ತು. ಸಾಮ್ರಾಜ್ಯವು ಅಸ್ತಿತ್ವದಲ್ಲಿರುವವರೆಗೆ ಇದ್ದ ಕುಟುಕು ಆಧಾರವೂ ತುಂಡಾಗಿತ್ತು.

ಅಂಥ ವಿಷಮ ಪರಿಸ್ಥಿತಿಯಲ್ಲಿ, ವಿದ್ಯಾರಣ್ಯ ಮಠದ ತತ್ಕಾಲೀನ ಗುರುವಿಗೆ ಆಶಾಕಿರಣವಾಗಿ ಗೋಚರಿಸಿದ್ದೇ, ಅದಾಗಲೇ ಹಲವಾರು ಗುಡಿ, ಗೋಪುರಗಳನ್ನು ಕಟ್ಟಿ ಆ ಭಾಗದ ದೊಡ್ಡ ಧಾರ್ಮಿಕ, ಸಾಮಾಜಿಕ ಮುಖಂಡರಾಗಿ ಮೊರಹೊಮ್ಮಿದ್ದ ಗುರು ಬಿಷ್ಟಪ್ಪಯ್ಯನವರು.

ಅವರು ತಮ್ಮ ಎಲ್ಲ ವಿದ್ಯೆಗಳನ್ನು ಕರಗತ ಮಾಡಿಕೊಂಡಿದ್ದೇ ವಿದ್ಯಾರಣ್ಯ ಮಠದಲ್ಲಿನ ಗ್ರಂಥಗಳ ಅಧ್ಯಯನದಿಂದ. ಹೀಗಾಗಿ, ವಿದ್ಯಾರಣ್ಯ ಮಠಕ್ಕೂ ಜಿಷ್ಟಪ್ಪಯ್ಯನವರಿಗೂ ಆಪ್ತತೆ ಇದ್ದೇ ಇತ್ತು. ಆ ಮಠದ ತತ್ಕಾಲೀನ ಗುರುಗಳಾಗಿದ್ದ ಶಂಕರಭಾರತಿ ಮತ್ತು ವಿದ್ಯಾಭಿನವ ಶಂಕರಭಾರತಿ ಸ್ವಾಮಿಗಳ ಕೋರಿಕೆಯಂತೆ ಘನಶಿಲ್ಪಿ ಜಿಷ್ಟಪ್ಪಯ್ಯನವರು ಹಂಪಿಯ ಪುನರುತ್ಥಾನ ಕಾರ್ಯವನ್ನು ಕೈಗೊಂಡರು.

ಪಂಪಾಪತಿಯ ರಕ್ಷಣಾರ್ಥವಾಗಿ, ಅಷ್ಟೇ ಅಲ್ಲದೇ ವಿಜಯನಗರ ಸಾಮ್ರಾಜ್ಯದ ಪ್ರತಿಷ್ಠೆಗೆ ಅನುಗುಣವಾಗಿ, ಹನ್ನೊಂದು ಅಂತಸ್ತುಗಳ ಗೋಪುರ ನಿರ್ಮಾಣದ ಯೋಜನೆ ಯೊಂದಿಗೆ ಅಡಿಪಾಯ ಸಿದ್ಧವಾಯಿತು. ಮೊದಲ ಅಂತಸ್ತು ನಿರ್ವಿಘ್ನವಾಗಿ ಮುಗಿಯಿತು. ಎರಡನೆಯ ಅಂತಸ್ತು ಕಟ್ಟಲು ಆರಂಭವಾಗಿ, ಹಗಲಿಡೀ ಕಟ್ಟಿದ ಭಾಗವು ಇರುಳಲ್ಲಿ ಕುಸಿಯಲಾರಂಭಿಸಿತು. ಮರುದಿನ ಕಟ್ಟಿದ ಭಾಗ ಮತ್ತೆ ರಾತ್ರಿ ಬಿದ್ದಿತು. ಮತ್ತೆ ಮತ್ತೆ ಹೀಗೆಯೇ ಆಗ ತೊಡಗಿದಾಗ ಯೋಗಿಗಳು ಚಿಂತಿತರಾದರು. ಬೀಳುತ್ತಿರುವ ಕಟ್ಟಡಕ್ಕೆ ಒಬ್ಬ ಸ್ತ್ರೀಯನ್ನು ಬಲಿನೀಡಿದರೆ ಅದು ಗಟ್ಟಿಯಾಗಿ ನಿಲ್ಲುತ್ತದೆ ಎಂಬ ಅಂದಿನ ನಂಬಿಕೆಯಂತೆ, ಜಿಷ್ಟಪ್ಪಯ್ಯನವರ ತುಂಬು ಗರ್ಭಿಣಿ ಪತ್ನಿ ಲಕ್ಷ್ಮಾಂಜೆಯವರು ಚಿತೆಯನ್ನು ಪ್ರವೇಶಿಸಿ ಆತ್ಮಾಹುತಿಯಾದರು. ನಂತರ ಕಟ್ಟಡ ನಿರ್ಮಾಣವು ನಿರ್ವಿಘ್ನವಾಗಿ ಸಾಗಿತು.

ಆಕೆಯ ಸ್ಮಾರಕವಾಗಿ ಎರಡನೆಯ ಅಂತಸ್ತಿನಲ್ಲಿಯೇ ಗರ್ಭಿಣಿ ಸ್ತ್ರೀಯೊಬ್ಬರು ಕೈಯಲ್ಲಿ ಎಣ್ಣೆಗಿಂಡಿ ಹಿಡಿದು, ಶಿವ ಪಾರ್ವತಿಯರ ಪಕ್ಕ ನಿಂತ ಶಿಲಾಶಾಸನವನ್ನು ಗೋಪುರ ನಿರ್ಮಿಸುವಾಗಲೇ ಗೋಡೆಯಲ್ಲಿ ಸ್ಥಾಪಿಸಿದ್ದು, ಆ ಶಿಲ್ಪವು 'ಗೋಪುರದಮ್ಮ' ಎಂಬ ಹೆಸರಿನಿಂದ ಅರ್ಚಿಸಲ್ಪಡುತ್ತಿದೆ.

ಗರ್ಭಿಣಿ ಸ್ತ್ರೀಯರ, ಪುಟ್ಟಮಕ್ಕಳ ಕಾಯಿಲೆ ಕಸಾಲೆಗಳಿಗೆ ಈ ಗೋಪುರದಮ್ಮನಿಗೆ ಹರಕೆ ಹೊತ್ತು ಪೂಜಿಸುವ ಸಂಪ್ರದಾಯ ಹಂಪಿಯ ಜನಪದರಲ್ಲಿ ಇದೆ. ಮಧ್ಯರಾತ್ರಿಯ ನೀರವ ಮೌನದಲ್ಲಿ ಮಗು ಅತ್ತಂತೆ, ತಾಯಿ ಜೋಗುಳ ಹಾಡಿದಂತೆ, ಗೋಪುರದಲ್ಲಿ ಕೇಳಿಸುತ್ತದೆ ಎಂಬ ಪ್ರತೀತಿ ಈಗಲೂ ಹಂಪಿಯಲ್ಲಿ ಹರಡಿದೆ.

ಮಹಾನ್ ಶಿವಭಕ್ತರಾಗಿದ್ದ ಬಿಷ್ಟಪ್ಪಯ್ಯನವರು ಏಕಾದಶ ರುದ್ರರ ಸಂಕೇತವಾಗಿ ಗೋಪುರವನ್ನು ಹನ್ನೊಂದು ಅಂತಸ್ತುಗಳಲ್ಲಿ ನಿರ್ಮಿಸಿದ್ದಾರೆಂದು ವಿದ್ವಾಂಸರ ಅಭಿಪ್ರಾಯ. ಗೋಪುರವನ್ನು ಕ್ರಿ.ಶ. ೧೬೬೦ರ ಸುಮಾರಿಗೆ ಕಟ್ಟಲು ಆರಂಭಿಸಿದರು. ಬಿಷ್ಟಪ್ಪಯ್ಯನವರು ಕ್ರಿ.ಶ. ೧೬೯೪ರಲ್ಲಿ ಸಂನ್ಯಾಸ ಸ್ವೀಕರಿಸಿದ್ದು, ಆ ಅವಧಿಯಲ್ಲಿಯೇ ಗೋಪುರದ ನಿರ್ಮಾಣವಾಗಿದೆ.

ಮತ್ತೆ ನಾಲ್ಕು ವರ್ಷ ಶಿಂಗಾಪುರದ ಸಮೀಪದ ಶಂಕರ ಲಿಂಗನ ಗಡ್ಡಿ ಎಂಬ ದ್ವೀಪದಲ್ಲಿ ಕಠಿಣ ತಪಸ್ಸು ಆಚರಿಸಿದ ಯೋಗಿಗಳು, ಕ್ರಿ.ಶ. ೧೬೯೮ರ ಭಾದ್ರಪದ ಶುಕ್ಲ ಬಿದಿಗೆಯಂದು, ತುಂಗಭದ್ರಾ ನದಿಯ ಮಧ್ಯದಲ್ಲಿದ್ದ ಬಂಡೆಗಲ್ಲಿನ ಮೇಲೆ ಕುಳಿತು ಹಾಗೇ ತೇಲುತ್ತ ಹೋಗಿ, ಜಲಸಮಾಧಿ ಹೊಂದಿದರು. ಆ ಸ್ಥಳದಲ್ಲಿ ಉದ್ಭವ ಎಂದು ಹೇಳಲಾಗುವ ಶಿವಲಿಂಗವಿದ್ದು, 'ಗುರುಬಿಷ್ಟೇಶರು' ಎಂದೇ ಪೂಜಿಸಲ್ಪಡುತ್ತಿದೆ.

ಕ್ರಿ.ಶ. ೧೭೦೧ರಲ್ಲಿ ಹುಟ್ಟಿದ ಬಿಷ್ಟಪ್ಪಯ್ಯರ ಮೊಮ್ಮಗ ಮಹಾದೇವಪ್ಪಯ್ಯನವರೂ ತಾತ ಸಿದ್ಧಿಸಿಕೊಂಡಿದ್ದ ಎಲ್ಲ ವಿದ್ಯೆಗಳನ್ನು ಕರಗತ ಮಾಡಿಕೊಂಡು, ತಾತನ ಜಾಡಿನಲ್ಲೇ ಸಾಗಿದ್ದರು. ಅವರು ಕ್ರಿ.ಶ. ೧೭೧೭ರಲ್ಲಿ ಹಂಪಿ ಮಹಾಗೋಪುರಕ್ಕೆ ಒಂದು ಲಕ್ಷ ಜನರ ಸಮ್ಮುಖದಲ್ಲಿ ಕಲಶ ಇಡಿಸಿದರು.

ಹಂಪಿಯ ಕನ್ನಡ ವಿಶ್ವವಿದ್ಯಾಲಯವು ಪ್ರಕಟಿಸಿದ ವಿರೂಪಾಕ್ಷ ವಸಂತೋತ್ಸವ ಚಂಪೂ ಗ್ರಂಥವು, ಸ್ವತಃ ಮಹಾದೇವಪ್ಪಯ್ಯನವರೇ ತಾವು ಆಯೋಜಿಸಿದ್ದ ಕಲಶ ಸಮಾರೋಹದ ನಂತರದ ಒಂದೆರಡು ಉತ್ಸವಗಳನ್ನು ನೆಪವಾಗಿರಿಸಿಕೊಂಡು ರಚಿಸಿದ ಕೃತಿಯಾಗಿದೆ.

ಮಹಾದೇವಪ್ಪಯ್ಯನವರಿಗೆ ತಾತನ ಕಾರ್ಯಗಳನ್ನೂ ಸೇರಿಸಿ ಎಲ್ಲ ಮಠ ಸಂಸ್ಥಾನಿಕರಿಂದ 'ಮಹಾಪುರುಷ' ಬಿರುದಿನೊಂದಿಗೆ ಹೇರಳವಾದ ಸನ್ಮಾನಗಳು ಸಂದಿವೆ.

ಒಟ್ಟಿನಲ್ಲಿ, ಇಡೀ ಹಿಂದೂಸ್ಥಾನದಲ್ಲಿ ತಮ್ಮ ಆಧಿಪತ್ಯ ಸ್ಥಾಪಿಸಬೇಕೆಂಬ ಮುಸ್ಲಿಂ ದೊರೆಗಳ ಮಹತ್ವಾಕಾಂಕ್ಷೆಗೆ ಸೆಡ್ಡು ಹೊಡೆದು, ಧರ್ಮರಕ್ಷಣೆಯ ಮುಖ್ಯ ಉದ್ದೇಶ ದೊಂದಿಗೆ ಸ್ಥಾಪಿಸಲ್ಪಟ್ಟ ವಿಜಯನಗರ ಸಾಮ್ರಾಜ್ಯವು ಸೋತರೂ, ಸಾಮ್ರಾಜ್ಯದ ಆದಿದೈವ ವಿರೂಪಾಕ್ಷನ ರಕ್ಷಣಾರ್ಥವಾಗಿ, ಸಾಮ್ರಾಜ್ಯದ ಪ್ರತಿಷ್ಠೆಗೆ ಅನುಗುಣವಾಗಿ ಹಿಂದೂ ಜನರ ಆತ್ಮಗೌರವದ ಸಂಕೇತವಾಗಿ, ಆಳಿದ ಹಂಪಿಯಲ್ಲಿ ಮತ್ತೆ ಮುಗಿಲೆತ್ತರಕ್ಕೆ

ತಲೆ ಎತ್ತಿದ ಮಹಾಗೋಪುರ ಇಂದೂ, ಶ್ರದ್ಧೆಯಿಂದ ಕೇಳುವ ಕಿವಿಗಳಿಗೆ, ಗತ ವೈಭವದ ಕಥೆ ಹೇಳುತ್ತ ನಿಂತಂತೆ ಭಾಸವಾಗುತ್ತದೆ.

ಮಹಾದಾರ್ಶನಿಕರಾಗಿದ್ದ ಜಿಷ್ಟಪ್ಪಯ್ಯನವರು, ಹಂಪಿ ಗೋಪುರ ಸೇರಿದಂತೆ, ತಾವು ಕಟ್ಟಿದ ಯಾವುದೇ ಗುಡಿಗಳಲ್ಲಾಗಲೀ, ತಾವು ಕೊಡುಗೆಯಾಗಿ ನೀಡಿದ ಪಂಪಾಪತಿಯ ಚಿನ್ನದ ಮುಖವಾಡ ಮತ್ತು ವಿದ್ಯಾರಣ್ಯ ಮಠದ ಶ್ರೀಗಳು ಧರಿಸುವ ರತ್ನ ಖಚಿತ ಕಿರೀಟವಾಗಲೀ, ತಮ್ಮ ವಿಶಿಷ್ಟ ರಸಲಿಂಗ ಮುಂತಾದ ತಮ್ಮ ಯಾವುದೇ ನಿರ್ಮಿತಿಗಳಲ್ಲಾಗಲೀ ಅಕ್ಷರರೂಪದ ಶಾಸನ ಬರೆಸಲಿಲ್ಲ. ಆದರೆ ತೆರೆದ ಮನಸ್ಸು ಕಣ್ಣುಗಳಿಂದ ಹುಡುಕುವವರಿಗೆ ತಿಳಿಯುವ ಹಾಗೆ, ಹೇರಳವಾದ ಸುಳಿವುಗಳನ್ನು ತಮ್ಮ ಎಲ್ಲ ನಿರ್ಮಿತಿಗಳಲ್ಲಿ ನೀಡಿದ್ದಾರೆ.

ಜಿಷ್ಟಪ್ಪಯ್ಯನವರಿಂದ ಹನ್ನೊಂದನೆಯ ತಲೆಮಾರಿನವಳಾದ ಈ ಲೇಖಕಿಯು ತಮ್ಮ ಮನೆಯಲ್ಲಿ ಸಿಕ್ಕ ಇಸ್ಸೂ ಹತ್ತು, ಹಲವು ಆಕರಗಳ ಮೂಲಕ ವಿಜಯನಗರೋತ್ತರ ಹಂಪಿಯ ಹಲವು ಅಂಶಗಳನ್ನು ಬೆಳಕಿಗೆ ತಂದಿದ್ದು, ಈ ಲೇಖನವು ಆ ಸಂಶೋಧನೆಯ ಸಾರಾಂಶವಾಗಿದೆ.

❐




ಹಂಪಿ ಪರಿಸರದ ಕೆಲವು ಸ್ಥಳಗಳು–ವ್ಯಕ್ತಿಗಳು

■ **ಪ್ರೊ. ಎಂ. ಧ್ರುವನಾರಾಯಣ್**

ಢಣಾಯಕನ ಕೆರೆ : ಕಣ್ಣೀರಾಂಬೆಯ ಕಥೆ

"ತ್ಯಾಗವೇ ಬದುಕು, ಸ್ವಾರ್ಥವೇ ಸಾವು" ಎಂಬುದನ್ನು ಪ್ರಸ್ತುತ ಪಡಿಸುವ ಕಣ್ಣೀರಾಂಬೆಯ ಕಥೆಯು ಒಂದು ಪುಟ್ಟ ಸಾಂಗತ್ಯ ಕೃತಿ. ಆದರೆ ಈ ಸಾಂಗತ್ಯವನ್ನು ಯಾರು ರಚಿಸಿದರು ಎಂಬುದು ಈ ಬರಹದಲ್ಲಿ ಕಂಡು ಬರುವುದಿಲ್ಲ. ನನಗೆ ದೊರೆತ ಈ ಹಸ್ತ ಲಿಖಿತ ಹೊತ್ತಿಗೆಯ ಮುಖಪುಟದ ಮೇಲೆ 'ಕನ್ನೀರಾಂಬೆಯ ಕಥೆ, ೧೯೩೧ರ ಜನವರಿ ತಿಂಗಳಲ್ಲಿ ತಯಾರಿಸಿದ್ದು, ಡಣಾಯಕನ ಕೆರೆ, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ', ಎಂದಷ್ಟೇ ಬರೆಯಲಾಗಿದೆ. ನಾನು ನನ್ನ 'ನಾರಾಯಣ ದೇವರಕೆರೆ' ಪುಸ್ತಕ ಬರೆಯುತ್ತಿದ್ದಾಗ ನನಗೆ ಮಿತ್ರ ಹೆಚ್. ಸರ್ವೇಶ ಇದನ್ನು ನೀಡಿದ. ಹಲವಾರು ವರ್ಷಗಳಾದ ಮೇಲೆ ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ ಇದನ್ನು ಪ್ರಕಟಿಸಲಾಗಿದೆ.



ಈ ಸಾಂಗತ್ಯದಲ್ಲಿ ಕನ್ನಿರಾಂಬೆ ಎಂಬ ಕನ್ಯೆಯ ಬಲಿದಾನ ಸುಪ್ರಸಿದ್ಧ ಜಲತಂತ್ರ ಜ್ಞಾನಿಯಾದ ಡಣನಾಯಕ ಮುದ್ದಣ್ಣ ಚೋಳರಾಯನ ದಂಡಯಾತ್ರೆ, ಅಚ್ಯುತ ದೇವರಾಯ ಕೃಷ್ಣದೇವರಾಯನ ಕಾಲದಲ್ಲಿ ನಿರ್ಮಾಣಗೊಂಡ ರಾಯರ ಕೆರೆ ಜಕ್ಕಪ್ಪಾಚಾರ್ಯ ಮುಂತಾದ ಹಲವಾರು ವಿಷಯಗಳಿವೆ.

ವಿಜಯನಗರದ ಆಡಳಿತದ ಅವಧಿಯಲ್ಲಿ ನಿರ್ಮಾಣಗೊಂಡ ಈ ಕೆರೆ ಇಂದಿಗೂ ಕಾರ್ಯಾಚರಣೆಯಲ್ಲಿದ್ದು, ಡಣನಾಯಕನ ಕೆರೆ ದೇವಾಪುರ, ಮರಿಯಮ್ಮನ ಹಳ್ಳಿ, ಢಣಾಪುರ ಹಾಗೂ ಗುಂಡಾ ಪ್ರದೇಶಗಳ ಭೂಮಿಗೆ ನೀರುಣಿಸುತ್ತಿದೆ. ಈ ಕೆರೆ ೪೭.೭೭ ಚ.ಮೈ.

ಜಲಾಯನ ಪ್ರದೇಶ ಹೊಂದಿದೆ. ಈ ಕೆರೆಯ ಆಯಕಟ್ಟಿನಲ್ಲಿ ೧೫೫೦೭.೫೦ ಎಕರೆ ಜಮೀನಿಗೆ ನೀರಾವರಿ ಇದೆ. ಮುದ್ದಪ್ಪ ನಾಯಕ ಕಟ್ಟಿಸಿದ ಕೆರೆಯಲ್ಲಿ ನೀರು ತುಂಬದಿದ್ದಾಗ ಏಳುವರ್ಷದ ಬ್ರಾಹ್ಮಣ ಕನ್ಯೆಯನ್ನು ಆಹುತಿಯಾಗಿ ನೀಡಿದ ಕರುಳು ಕರಗುವ ಕಥೆ ಇದು. ಈ ಸಾಂಗತ್ಯ ಒಂದು ಮಹತ್ವದ ಐತಿಹಾಸಿಕ ದಾಖಲೆಯಾಗಿದೆ. ಏಕೆಂದರೆ ಕರ್ನಾಟಕಾದ್ಯಂತ ಕಂಡುಬರುವ ರಸ್ತೆ, ದೇವಾಲಯಗಳು, ಕೆರೆ, ಕುಂಟೆಗಳು ಇವೆಲ್ಲವೂ ಕೇವಲ ರಾಜಮಹಾರಾಜರ ಕೊಡುಗೆಯಾಗಿರದೇ, ಅಧಿಕವಾಗಿ ಹಳ್ಳಿಯ ಸಾಮಂತರು ಹಾಗೂ ಶ್ರೀಮಂತರ ಕಾಣಿಕೆಯಾಗಿವೆ. ಇದು ಗ್ರಾಮೀಣ ಜನತೆಯ ಔದಾರ್ಯಶೀಲತೆ ಯನ್ನು ಬಿಂಬಿಸುತ್ತದೆ. ಮದಗದ ಕೆರೆ, ಸೂಳೆಕೆರೆ ಮುಂತಾದ ಕೆರೆಗಳ ನಿರ್ಮಾಣದಲ್ಲಿ ಸ್ತ್ರೀಯರ ತ್ಯಾಗಮಯಜೀವನದ ಹೊಳಹು ನಮಗೆ ಲಭ್ಯವಿದೆ. ಹೀಗೆ ಜನಪದಗಳ ಸಂಗಮದಿಂದ ಹುಟ್ಟಿದ ಕಾವ್ಯ ಈ ಕಥೆ.

ಕೌತುಕದ ವಿಷಯವೆಂದರೆ ಮುದ್ದಪ್ಪನಾಯಕನು, ಡಣಾಯಕನ ಕೆರೆಯ ಜಕ್ಕಪ್ಪಾಚಾರ್ಯರ ಆಶ್ರಯದಲ್ಲಿಯೇ ಬೆಳೆದು ಮುಂದೆ ಬಂದ ನಾಯಕ. ಆದರೆ ಅವನಿಂದ ನಿರ್ಮಿಸಲಾದ ಕೆರೆ ಬೇಡಿದ ಆಹುತಿ ಜಕ್ಕಪ್ಪಾಚಾರ್ಯರ ಮಗಳು. ಆ ಕನ್ಯೆ ಜನ ಕಲ್ಯಾಣಕ್ಕೆ ತಾನು ಬಲಿಯಾಗಲು ಸಿದ್ಧಳೆಂದೇ ಸಾರಿ ತನ್ನ ತ್ಯಾಗಮಯೀ ಜೀವನ ಬೀಗುತ್ತಾಳೆ. ಆಗ ಜನರು ಜಯಘೋಷದಿಂದ ಅವಳನ್ನು ಬಂಗಾರದ ಪಲ್ಲಕ್ಕಿಯಲ್ಲಿ ಮೆರವಣಿಗೆಯಲ್ಲಿ ಕರೆತಂದು, ಆಹುತಿ ನೀಡುವ ದೃಶ್ಯ ಜನಪದ ಜೀವಾಳವನ್ನೇ ಎತ್ತಿ ತೋರಿಸುತ್ತದೆ. (ಆಧಾರ: 'ಕನ್ನಿರಾಂಬೆಯ ಕಥೆ' ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.)

ನಾಣಿಕೆರೆ ನಾರಾಯಣ ದೇವರಕೆರೆ : ಇದು ತುಂಗಭದ್ರಾ ಜಲಾಶಯದಲ್ಲಿ ಮುಳುಗಿ ಹೋಗಿರುವ ಊರಿನ ಕಥೆ. ಈ ಊರು ತನ್ನದೇ ಆದ ಇತಿಹಾಸವನ್ನು ಹೊಂದಿತ್ತು. ಮಧ್ವಾಚಾರ್ಯರ ಶಿಷ್ಯರಾದ ನರಹರಿ ತೀರ್ಥರಿಂದ ಈ ಊರಿಗೆ ನಾರಾಯಣ ದೇವರಕೆರೆ ಎಂದೇ ನಾಮಕರಣ ಮಾಡಲಾಗಿದೆ. ಆದರೆ ನಾನು ಇಲ್ಲಿ ಊರಿನ ವಿವರಗಳನ್ನು ಹೇಳದೇ ಕೇವಲ ರಂಗರಸಿಕರು, ಕಲಾಕಾರರು ಹಾಗೂ ವಿದ್ವಾಂಸರ ಬಗೆಗೆ ಮಾತ್ರ ಪ್ರಸ್ತಾಪಿಸುವೆ. ನಾರಾಯಣದೇವರ ಕೆರೆ ಹಾಗೂ ಕೊಟ್ಟೂರು ಗ್ರಾಮಗಳು ಮೊದಲಿನಿಂದಲೂ ರಂಗಭೂಮಿಗೆ ತುಂಬಾ ಹೆಸರುವಾಸಿಯಾಗಿದ್ದವು. ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿಯೇ ಹವ್ಯಾಸಿ ನಾಟಕಮಂಡಳಿಯೊಂದು ಈ ಊರಲ್ಲಿ ತಲೆ ಎತ್ತಿದ್ದು ಹೆಮ್ಮೆಯ ವಿಷಯ. ಅಂದಿನ ರಂಗಸಜ್ಜಿಕೆಯ ಬಗೆಗೆ ಒಂದು ವಿಷಯ ಹೇಳಲೇಬೇಕು. ಏಕೆಂದರೆ ಅಂದಿನ ದಿನಗಳಲ್ಲಿ ಈಗಿನಂತೆ ಲೈಟುಗಳಾಗಲೀ ಮೈಕ್‌ಗಳಾಗಲಿ ಇರಲಿಲ್ಲ. ನಾಟಕದ ವಿವಿಧ ಪಾತ್ರಧಾರಿಗಳು ಪಂಜಿನ ಬೆಳಕಿನಲ್ಲಿಯೇ ಪ್ರದರ್ಶನ ನೀಡಬೇಕಾಗಿತ್ತು. ನಾಣಿಕೆರೆಯು ಮೂಡಲಪಾಯ ಬಯಲಾಟ ರಂಗಕ್ಕೆ ಹೆಸರುವಾಸಿಯಾಗಿತ್ತು. ಅಂದಿನ ಕಲಾವಿದರೆಂದರೆ ಬಳಿಗೇರ ದೊಡ್ಡವೀರಣ್ಣ, ಹೊಟ್ಟೆ ಹುಲಿಗೆವ್ವ ಹಾಗೂ ದಾದಮ್ಮನ ಮನೆಯವರು. ಕೌತುಕದ ವಿಷಯವೆಂದರೆ ಬಯಲಾಟದ ನಿರ್ದೇಶನವನ್ನು ಮಹಿಳೆಯರಾರೂ ಮಾಡಿರಲಿಲ್ಲ. ಆದರೆ ನಮ್ಮೂರಿನ ಹೊಟ್ಟೆ

ಹುಲಿಗೆವ್ವ ಈ ನಿರ್ದೇಶನ ಮಾಡಿ ಇಡೀ ಪ್ರಾಂತಕ್ಕೆ ಹೆಸರುವಾಸಿಯಾದಳು. ದಾದಮ್ಮನವರ ಮನೆತನದವರಾದ ಸಂಜೀವಮ್ಮ, ರಾಮಕ್ಕ ಮತ್ತು ಅಂಜಿನಾಬಾಯಿ ಅವರು ಗದುಗಿನ ವಾಮನರಾಯರ ಕಂಪನಿಯಲ್ಲಿ ತಮ್ಮ ಅಭಿನಯಕ್ಕೆ ಹೆಸರುವಾಸಿಯಾಗಿದ್ದರು. ರಾಣಿಪಾತ್ರಕ್ಕೆ ಸಂಜೀವಮ್ಮ, ಅಭಿಮನ್ಯುವಿನ ಪಾತ್ರಕ್ಕೆ ಹನುಮಂತಪ್ಪ ಉತ್ತರಾದಿ ಸಂಗೀತಕ್ಕೆ ಅಂಜಿನಾಬಾಯಿ ಹೆಸರಾಂತ ವ್ಯಕ್ತಿಗಳಾಗಿದ್ದರು. ದಾದಮ್ಮನವರ ಹುಲಿಗೆಪ್ಪನ ಮನೆತನಕ್ಕೆ ಸೇರಿದ ಶ್ರೀದುರ್ಗಾದಾಸರು ತಮ್ಮ ಆಂಜನೇಯನ ಪಾತ್ರಕ್ಕೆ ಸುಮಾರು ಐದು ದಶಕಗಳವರೆಗೂ ಪ್ರಸಿದ್ಧಿ ಪಡೆದವರು. ಇವರು ಕೇವಲ ಪಾತ್ರಧಾರಿಯಾಗಿರದೆ, ನಾಟಕಗಳನ್ನೂ ರಚಿಸಿದ್ದಾರೆ. ಎರಡನೇ ತಲೆಮಾರಿನಲ್ಲಿ ಈ ಊರಿನ ಮೇಘಾಟ್ ಕಂಪನಿ ಅಂದರೆ ಕೆಂಪು ನಿಶಾನಿಯವರು ಹಾಗೂ ಚಂದ್ರಘಾಟ್ ಅಂದರೆ ಬಿಳಿ ನಿಶಾನೆಯವರು ತಮ್ಮದೇ ಆದ ಕಂಪನಿಗಳನ್ನು ಹೊಂದಿ ನಾಟಕಗಳನ್ನು ನೀಡಿದ್ದಾರೆ. ಬಯಲಾಟದಲ್ಲಿ ಬಳಿಗೇರ ದೊಡ್ಡ ವೀರಣ್ಣ, ಹೊಟ್ಟೆ ಹುಲಿಗೆವ್ವ ವೀರಸಂಗಪ್ಪನವರ, ಬಸಪ್ಪ, ಸಂಗೀತದ ನಾಗಯ್ಯ, ವಸ್ತ್ರದ ಮರಿ ಸೋಮಯ್ಯ, ಕೊಟ್ರಪ್ಪ ಭುಜಂಗಪ್ಪ, ಬಳ್ಳಾರಿ ಸಿದ್ದಪ್ಪ, ಹಾರ್ಮೋನಿಯಂ ಅಗಸರ ಸಿದ್ದಪ್ಪ, ವೀರಭದ್ರಯ್ಯ ಮುಂತಾದವರು ಪ್ರಸಿದ್ಧಿ ಪಡೆದವರು. ನಾಟಕರಂಗದಲ್ಲಿ ಕೊಟಗಿ ಭೀಮಪ್ಪ, ಶರಣಪ್ಪ ಪತ್ತಾರ ದೇವೇಂದ್ರಪ್ಪ, ಮಣಿಗಾರ ಹನುಮಂತಪ್ಪ, ನಾಗರತ್ನ, ಸೋನುಬಾಯಿ, ಹಕಾರಿ ಹನುಮಂತ, ಆರ್ಷಿನರಸಣ್ಣ, ವಲ್ಲಭಾಪುರದ ಕೊಟ್ರಗೌಡರು ಮುಂತಾದವರು ಹೆಸರುವಾಸಿಯಾಗಿದ್ದರು.

ಕುಂಬಾರ ಲಿಂಗಪ್ಪ : ಮಡಕೆ ಮಾಡುವ ಕಾರ್ಯದಲ್ಲಿ ಮಹಾನಿಪುಣ, ಕೇವಲ ಹತ್ತು ತೊಲೆ ತೂಕದ ಮಣ್ಣಿನಲ್ಲಿ ಕೊಡ ಒಂದನ್ನು ನಿರ್ಮಿಸಿದ್ದ. ಈ ಕೊಡ ಮೂರು ಸೇರು ಮಂಡಾಳು (ಚುರುಮುರಿ) ಹಿಡಿಯುತ್ತಿತ್ತು. ೧೯೨೫ರಲ್ಲಿ ಬಳ್ಳಾರಿಯಲ್ಲಿ ಜರುಗಿದ ವಸ್ತು ಪ್ರದರ್ಶನದಲ್ಲಿ ಲಿಂಗಪ್ಪ ನಿರ್ಮಿಸಿದ ಮಣ್ಣಿನ ಆನೆಗೆ ಮೊದಲನೆಯ ಬಹುಮಾನ. ಆ ಆನೆಯ ಬಗೆಗೆ ಹೇಳಲೇಬೇಕು. ಆನೆ ತನ್ನ ಸೊಂಡಿಲಿನಿಂದ ನೀರನ್ನು ಎಳೆದುಕೊಂಡು ತನ್ನ ಉದರದ ಕೆಳಗಡೆ ಇರುವ ರಂಧ್ರದಿಂದ ಹೊರಬಿಡುತ್ತದೆ. ಅಂದರೆ ವೈಜ್ಞಾನಿಕವಾಗಿ 'ಸೈಫನ್' ಪದ್ಧತಿಯ ಮೇಲೆ ಈ ಆನೆ ನಿರ್ಮಾಣಗೊಂಡಿತ್ತು. ಆ ಕಾರ್ಯವನ್ನು ಮೆಚ್ಚಿದ ಗವರ್ನರ್ ವೆಲ್ಲಿಂಗ್‌ಡನ್ ಲಿಂಗಪ್ಪಗೆ ನಂದಿಬಂಡೆ ಗ್ರಾಮದ ಬಳಿ ೪೦ ಎಕ್ರೆ ಜಮೀನನ್ನು ಇನಾಮ ಹಾಕಿ ಕೊಟ್ಟದ್ದಲ್ಲದೆ, ಮಣ್ಣಿನ ಕೊಡವನ್ನು ಇಂಗ್ಲೆಂಡಿಗೆ ಕೊಂಡುಹೋದ. ಆದರೆ ಆನೆ ಹಾಗೂ ಲಿಂಗಪ್ಪ ಮಾಡಿದ ಮತ್ತೊಂದು ಮಣ್ಣಿನ ದೊಡ್ಡ ಕೊಡವನ್ನು ನಾವು ಈಗಲೂ ನಂದಿಬಂಡೆಯಲ್ಲಿ ನೋಡಬಹುದು.

ಕವಯಿತ್ರಿ ಭೀಮಾದೇವಿ : ಹರಪನ ಹಳ್ಳಿಯ ಹಾಡಿನ ಭೀಮಕ್ಕ : ಹರಪನ ಹಳ್ಳಿಯ ಹಾಡಿನ ಭೀಮಕ್ಕ ನಾಣಿಕೆರೆಯ ರಘುಪತಾಚಾರ್ಯರ ಮಗಳು. ಹರಪನಹಳ್ಳಿ ಪಾಳೆಗಾರರ ಸಂಸ್ಥಾನದಲ್ಲಿ ಮಂತ್ರಿಯಾಗಿದ್ದ ಶ್ರೀಮಂತ ಮಾನಪ್ಪಯ್ಯನವರ ಮನೆತನದ ಮುನಿಯಪ್ಪನೊಂದಿಗೆ ಈಕೆಯ ಮದುವೆಯಾಗಿತ್ತು. ಭೀಮಕ್ಕ ನಿರಕ್ಷರಕುಕ್ಷಿಯಾದರೂ ಪದಗಳನ್ನು ಭೀಮೇಶ ಕೃಷ್ಣನ ಅಂಕಿತದಲ್ಲಿ ರಚನೆ ಮಾಡಿದ ಮಹಾಸಾಧ್ವಿ, ಶ್ರಾವಣ

ಶುಕ್ರವಾರದ ಹಾಡುಗಳು, ಸುಭದ್ರಾಕಲ್ಯಾಣ, ನಳಚರಿತ್ರೆ ಮುಂತಾದ ಪದ್ಯಗಳನ್ನು ರಚಿಸಿದ್ದಾಳೆ. ನಾವು ಸ್ಮರಿಸಲೇಬೇಕಾದ ಸಂಗತಿ ಎಂದರೆ ಸರೋಜಿನಿ ಮಹಿಷಿಯವರು ಇವಳ ಬಗೆಗೆ ಬರೆದೇ ತಮ್ಮ ಪಿಹೆಚ್.ಡಿ. ಪದವಿಯನ್ನು ಪಡೆದಿದ್ದಾರೆ. ಇದೇ ಊರಿನ ಅಂಗಡಿ ದೇವಣ್ಣನವರ ಮನೆಯಲ್ಲಿ ದೊರೆತ ಓಲೆಗರಿಗಳಲ್ಲಿ ಮೋಹನ ತರಂಗಿಣಿ ತತ್ವಪದಗಳು, ವಿದುರನೀತಿ, ಧನಂಜಯ ನಿಘಂಟು, ಮೌದ್ಗಲ್ಯ ಪರ್ವಕಾವ್ಯ ಪ್ರಸಂಗ ಕೃತಿಗಳು ದೊರೆತಿದ್ದು ಅವನ್ನು ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ನೀಡಲಾಗಿದೆ.


ಕರ್ನಾಟಕ ನಾಟಕಭೂಷಣ ರಾವ್‌ಬಹದ್ದೂರ್ ಚಿತ್ತವಾಡಿಗೆ ಹನುಮಂತಗೌಡರು

ಚಿತ್ತವಾಡಿಗೆ ಗ್ರಾಮ ಇಂದು ಹೊಸಪೇಟೆಯ ನಗರಸಭೆಯ ಒಂದು ಭಾಗವಾಗಿದೆ. ಆದರೆ ಕುತೂಹಲದ ಸಂಗತಿ ಎಂದರೆ ಈ ಗ್ರಾಮ ಅಳಿಯರಾಮರಾಯನ ಕಾಲದಲ್ಲಿಯೇ ಇದ್ದು ಈ ಗ್ರಾಮವನ್ನು ಹನುಮಂತಗೌಡರ ವಂಶಸ್ಥರಿಗೆ ಅವರು ಸಲ್ಲಿಸಿದ ಸೇವೆಗಾಗಿ ರಾಮರಾಯ ಉಂಬಳಿ ಹಾಕಿಕೊಟ್ಟ. ಈ ಬಗ್ಗೆ ಅವರ ಮನೆಯಲ್ಲಿರುವ ತಾಮ್ರಪತ್ರವೇ ಸಾಕ್ಷಿಯಾಗಿದೆ. ಹನುಮಂತಗೌಡರು ಕ್ರಿ.ಶ. ೧೮೫೭ರಲ್ಲಿ ಹೊಸಪೇಟೆ ತಾಲೂಕಿನ ಅಂತಾಪುರ ಗ್ರಾಮದಲ್ಲಿ ಜನಿಸಿದರು. ಚಿತ್ತವಾಡಿಗೆಯಲ್ಲಿ ಬಾಲವಿದ್ಯಾಭ್ಯಾಸ ನಡೆಸಿ ನಂತರ ಬಳ್ಳಾರಿ ಹಾಗೂ ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ತಮ್ಮ ವಿದ್ಯಾಭ್ಯಾಸ ಮುಂದುವರಿಸಿದರು. ಎಫ್.ಎ. ಪರೀಕ್ಷೆಯಲ್ಲಿ ನಪಾಸಾದ ಗೌಡರು ಬಳ್ಳಾರಿಗೆ ಹಿಂದಿರುಗಿಬಂದರು. ಇವರಿಗೆ ಮೊದಲಿನಿಂದಲೂ ನಾಟಕದ ಗೀಳು. ಹೀಗಾಗಿ ಮರಳಿ ಬಂದ ಕೂಡಲೇ ನಾಟಕಗಳ ರಚನೆಗೆ ಕೈಹಾಕಿದರು. ಧರ್ಮಾವರಂ ಕೃಷ್ಣಮಾಚಾರ್ಯರೊಂದಿಗೆ ಕೂಡಿಕೊಂಡು ನಾಟಕಗಳನ್ನು ಪ್ರದರ್ಶಿಸಿದರು. ಕ್ರಿ.ಶ. ೧೮೮೮ರಲ್ಲಿ ಇವರು ಕೃಷ್ಣಮಾಚಾರ್ಯರೊಂದಿಗೆ ಸರಸವಿನೋದಿನಿಸಭಾ ನಾಟಕ ಮಂಡಳಿಯನ್ನು ಸ್ಥಾಪಿಸಿದರು. ಈ ಹೊತ್ತಿಗಾಗಲೇ ಗೌಡರು ಸಾರ್ವಜನಿಕ ಸೇವೆಗೆ ತಮ್ಮನ್ನು ಅರ್ಪಿಸಿಕೊಂಡಿದ್ದುದರಿಂದ ಇವರು ಇಲ್ಲಿ ತಾಲೂಕು ಬೋರ್ಡಿನ ಮೆಂಬರ್ ಆಗಿ ಹೊಸಪೇಟೆಯಲ್ಲಿ ಜಯಲಕ್ಷ್ಮಿ ಭಂಡಾರ ಎಂಬ ಸಹಕಾರ ಸಂಘ ಸ್ಥಾಪಿಸಿದರು. ಹಂಪಿ ದೇವಸ್ಥಾನದ ಆಡಳಿತ ಸಮಿತಿ ಸದಸ್ಯರಾಗಿದ್ದರು. ಕೃಷಿಯಲ್ಲಿ ಅಭಿರುಚಿ ಹೊಂದಿದ್ದ ಗೌಡರು ತಮ್ಮ ಜಯಲಕ್ಷ್ಮಿ ಭಂಡಾರದ ಮುಖಾಂತರ ಮದ್ರಾಸಿನಿಂದ ಕಬ್ಬಿಣದ ಗಾಣಗಳನ್ನು ತರಿಸಿ ರೈತರಿಗೆ ಹಂಚಿದರು. ಮುಂದುವರಿದು ೧೮೯೨ರಲ್ಲಿ ರೈತರಿಗೆಂದೇ ಅಗ್ರಿಕಲ್ಚರಲ್ ಬ್ಯಾಂಕ್ ಒಂದನ್ನು ಸ್ಥಾಪಿಸಿದರು. ಶ್ರೀಯುತರು ಮೈಸೂರು ಮಹಾರಾಜರ ಸ್ನೇಹಿತರಾಗಿದ್ದು ೧೮೯೩ರಲ್ಲಿ ದಸರಾ ದರ್ಬಾರಿಗೆ ಹೋಗಿದ್ದರು. ೧೮೯೫ರಲ್ಲಿ ಸೊಂಡೂರಿನ ನೀಲಾಸಾನಿಯ ಪರಿಚಯವಾಗಿ ಅವಳೊಂದಿಗೆ ದೇಹಸಂಪರ್ಕ ಹೊಂದವೆ, 'ಶಂತನು ದ್ವೀಪದ ಚಕ್ರವರ್ತಿ' ಎಂಬ ಕಾದಂಬರಿ ರಚಿಸಿದರು. ಮದ್ರಾಸ್ ಸರಕಾರ ಇವರ ಸೇವೆಯನ್ನು ಮೆಚ್ಚಿ ಇವರಿಗೆ ರಾವ್ ಬಹದ್ದೂರ್ ಬಿರುದು ದೊರಕುವಂತೆ ಮಾಡಿತು. ಹೀಗಾಗಿ ೧೯೦೩ರಲ್ಲಿ ನಡೆದ ದಿಲ್ಲಿ ದರ್ಬಾರಿನಲ್ಲಿ ರಾವ್‌ಬಹದ್ದೂರ್ ಪದಕ ಸ್ವೀಕರಿಸಿದರು. ಶ್ರೀಯುತರು ಸುಪ್ರಸಿದ್ಧ ನಟರಾಗಿದ್ದರಲ್ಲದೆ ಸುಮಾರು ೨೫ ನಾಟಕಗಳನ್ನೂ ರಚಿಸಿದ್ದಾರೆ. ಹಂಪಿಯ ಬಗೆಗೆ ವಿಶೇಷ ಆಸಕ್ತಿ ಹೊಂದಿದ್ದ ಗೌಡರು

ಲಾರ್ಡ್ ಇರ್ವಿನ್, ಕರ್ಜನ್, ಬರೋಡಾ ಮಹಾರಾಜ ಮುಂತಾದವರಿಗೆ ಹಂಪಿ ದರ್ಶನ ಮಾಡಿಸಿದ್ದಾರೆ. ಇವರು ಕನ್ನಡ ಸಾಹಿತ್ಯ ಪರಿಷತ್ತಿನ ಮೊದಲನೇ ಕಾರ್ಯಸಮಿತಿಯ ಸದಸ್ಯರಾಗಿದ್ದರು. ೧೯೨೦ರಲ್ಲಿ ಹೊಸಪೇಟೆಯಲ್ಲಿ ನಡೆದ ಆರನೇ ಸಾಹಿತ್ಯ ಸಮ್ಮೇಳನದ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ. ತೆಲುಗರ ದಬ್ಬಾಳಿಕೆಯನ್ನು ಪ್ರತಿಭಟಿಸಿ, ಕನ್ನಡ ಪ್ರಚಾರ ಮಾಡಿದ ಕೀರ್ತಿ ಇವರಿಗೆ ಸಲ್ಲುತ್ತದೆ.

ಗರಗ ನಾಗಲಾಪುರ : ಪಾರಂಪರಿಕ ಜನಪದ ಶೈಲಿ ಹಾಗೂ ಗುಡಿ ಕೈಗಾರಿಕೆಗಳು ಇಂದು ನಶಿಸಿ ಹೋಗುತ್ತಲಿವೆ. ಅವುಗಳ ಕಲೆ, ಸೊಗಸನ್ನು ಸವಿಯಲು ಅವು ಇಂದಿನ ಪೀಳಿಗೆಗೆ ಲಭ್ಯವಿಲ್ಲ. ಗರಗ ಇಂಥ ಹಳ್ಳಿ. ಈ ಹಳ್ಳಿಯಲ್ಲಿ ಮೇದಾರರು, ಕೊರಚರು ವಾಲ್ಮೀಕಿ ಜನಾಂಗದವರು, ಗೊಲ್ಲರು, ಜಾರಿಕೇರರು ಮುಂತಾದವರು ಸೌಹಾರ್ದದಿಂದ ಜೀವಿಸಿದ್ದರು. ಈ ಹಳ್ಳಿಯಲ್ಲಿ ದೊಂಬರ ಜನಾಂಗವು ಸೀರಿನ ಹಣಿಗೆ, ಅಂದರೆ ಬಾಚಣಿಗೆ ಅರ್ಥಾತ್ ಆಧುನಿಕ ಭಾಷೆಯಲ್ಲಿ ಹೇಳಬಹುದಾದರೆ 'ಡ್ರೆಸ್ಸಿಂಗ್ ಕೂಂಬ್' ತಯಾರಿಸುವಲ್ಲಿ ಪ್ರವೀಣರು. ಈ ಕುಸುರಿ ಕಾರ್ಯವನ್ನು ಅವರು ಕೆಲವು ಗಿಡದ ಬೇರಿನಿಂದ ತಯಾರಿಸುತ್ತಿದ್ದರು. ಬೇರನ್ನು ಅಗೆದು ಅದನ್ನು ನಾರಿನಂತೆ ಮಾರ್ಪಡಿಸಿ, ಆ ನಾರನ್ನು ತ್ರಿಕೋನದ ಆಕೃತಿಯಲ್ಲಿ ಗಟ್ಟಿಯಾಗಿ ಕಟ್ಟಿ, ಕೂದಲನ್ನು ಬಾಚಲು ಸಿದ್ಧಪಡಿಸುತ್ತಿದ್ದರು. ಈ ಹುಲ್ಲಿನಂತಿರುವ ಬಾಚಣಿಗೆಯನ್ನು ತಲೆಯಲ್ಲಿರುವ ಹೇನು, ಸೀರು ತೆಗೆಯಲು ಉಪಯೋಗಿಸುತ್ತಿದ್ದರು. ಈಗ ಈ ಕಲೆ ಇಲ್ಲ. ಇಂಥದೇ ಮತ್ತೊಂದು ಹಳ್ಳಿ ಹಲಗಾಪುರದ ಕೊರಚರಹಟ್ಟಿ. ಇಲ್ಲಿಯವರ ಮೂಲ ಕಸುಬು ದನದ ರಾಸುಗಳನ್ನು ಸಾಕುವುದು ಮತ್ತು ಮಾರಾಟ ಮಾಡುವುದು. ಇದರೊಂದಿಗೆ ದನಗಳಿಗೆ ಬೇಕಾದ ಮೂಗುದಾರ ಹಾಗೂ ಹಗ್ಗಗಳನ್ನು ನಾರಿನಿಂದ ಹದ ಮಾಡಿ ತಯಾರಿಸುವುದು. ದನಗಳ ಮೂಗುದಾರ ಕೊರಳುಪಟ್ಟಿಗಳನ್ನು ವಿವಿಧ ರಂಗಿನಲ್ಲಿ ತಯಾರಿಸುತ್ತಿದ್ದರು. ಕೌತುಕದ ಮತ್ತೊಂದು ವಿಷಯ ಎಂದರೆ ಕೊರಚರ ಸಮೂಹದ ಹೆಂಗಳೆಯರು ತಾಳೆಗರಿಗಳಿಂದ ಪೀಪಿ ಗಿಲಿಗಂಟೆ ಹಾಗೂ ಪುಟ್ಟಿಗಳನ್ನು ತಯಾರಿಸಿ ಮಾರುತ್ತಿದ್ದರು. ಈಗ ಇವು ಮಾಯವಾಗಿವೆ.

(ಈ ಲೇಖನಕ್ಕೆ ನಾರಾಯಣ ದೇವರಕೆರೆ ಲಲಿತ ಕಲಾರಂಗ, ಮರಿಯಮ್ಮನಹಳ್ಳಿ ಹಾಗೂ ಡಾ. ಅರ್ಚನಾ, ಕರುಣಾ ಕ್ಲಿನಿಕ್, ಮರಿಯಮ್ಮನಹಳ್ಳಿ ಅವರಿಂದ ದೊರೆತ ಮಾಹಿತಿ ಆಧಾರ)



ಭಾರತದ ಪ್ರಾಚೀನ ಗ್ರಂಥಾಲಯಗಳು

■ ಪ್ರೊ. ಪಿ. ಸದಾಶಿವಮೂರ್ತಿ

ಪೀಠಿಕೆ

ಭಾರತದ ನಾಗರೀಕತೆಯು ಪ್ರಪಂಚದಲ್ಲಿಯೇ ಅತ್ಯಂತ ಪ್ರಾಚೀನವಾದ ನಾಗರೀಕತೆಯಾಗಿದೆ. ಪ್ರಾಚೀನ ಕಾಲದಿಂದಲೂ ಭಾರತವು ಉನ್ನತ ವ್ಯಾಸಂಗ ಮತ್ತು ಗ್ರಂಥಾಲಯಗಳ ಕೇಂದ್ರವಾಗಿತ್ತು. ಐತಿಹಾಸಿಕವಾಗಿ ಗ್ರಂಥಾಲಯಗಳು ಸಿಂಧೂಕಣಿವೆಯ ಸಂಸ್ಕೃತಿಯ ಭಾಗವೇ ಆಗಿದ್ದವು. ಆ ಗ್ರಂಥಾಲಯಗಳನ್ನು ಪುಸ್ತಕಾಲಯಗಳೆಂದು ಕರೆಯಲಾಗುತ್ತಿತ್ತು. ಭಾರತೀಯ ಪುರಾತತ್ವ ಇಲಾಖೆಯ ಸಂಶೋಧನೆಯ ಪ್ರಕಾರ, ಪ್ರಾಚೀನ ಗ್ರಂಥಾಲಯಗಳ ಅಸ್ತಿತ್ವ ಕ್ರಿ.ಪೂ. ೨೫೦೦–೧೫೦೦ರಲ್ಲೇ ದೊರೆಯುತ್ತವೆ. ಇವುಗಳಿಂದ ನಮ್ಮ ಪುರಾತನ ಕಾಲದ ಕಲಿಕೆ ಮತ್ತು ಬೋಧನಾ ಕೌಶಲ್ಯ ಹೇಗಿದ್ದವು ಎಂಬುದರ ಬಗ್ಗೆ ಅರಿಯಬಹುದಾಗಿದೆ.

ಪ್ರಾಚೀನಕಾಲದ ಗ್ರಂಥಾಲಯಗಳು



ಭಾರತದ ಗ್ರಂಥಾಲಯಗಳ ಬೆಳವಣಿಗೆಯ ಇತಿಹಾಸವನ್ನು ಗಮನಿಸಿದಾಗ, ಅದು ಭಾರತದ ಶಿಕ್ಷಣದ ಇತಿಹಾಸವೇ ಆಗಿದೆ. (Ekbote-1987) ವೇದಕಾಲದಲ್ಲಿ ವಿದ್ಯಾರ್ಥಿಗಳು ಶಿಕ್ಷಣವನ್ನು ಪಡೆಯಲು ಗುರುಗೃಹಗಳಲ್ಲೇ ಅನೇಕ ವರ್ಷಗಳ ಕಾಲ ಇರುತ್ತಿದ್ದರು. ಪ್ರಾಚೀನ ಕಾಲದಿಂದಲೂ ಜ್ಞಾನ ಮತ್ತು ಅರಿವಿನ ಹುಡುಕಾಟದಲ್ಲಿ ಭಾರತವು ಬಹಳ ಖಚಿತವಾದ ಅಭಿಪ್ರಾಯ ಹೊಂದಿತ್ತು. ಮೊದಲಿಗೆ ಮಾನವರ ಮಧ್ಯೆ ಮೌಖಿಕ ಸಂವಹನ ನಡೆಯುತ್ತಿತ್ತು. ಆಗ ಬರವಣಿಗೆ ಇನ್ನೂ ರೂಢಿಯಾಗಿರಲಿಲ್ಲ. ಈವರೆಗೆ ಭಾರತದಲ್ಲಿ ದೊರಕಿರುವ ಪ್ರಾಚೀನ ಬರವಣಿಗೆಗಳ

ರೂಪಗಳೆಂದರೆ ಕ್ರಿಸ್ತಪೂರ್ವ ೨೫೦ರಲ್ಲಿದ್ದ ಅಶೋಕ ಚಕ್ರವರ್ತಿಯ ಶಿಲಾಶಾಸನಗಳು ಮತ್ತು ಸ್ತಂಭಶಾಸನಗಳೇ ಆಗಿವೆ. ಈ ಶಾಸನಗಳು ಭಾರತದ ಪ್ರಥಮ ಬಯಲು ಗ್ರಂಥಾಲಯಗಳೇ ಆಗಿವೆ (ಪಟೇಲ್ ಮತ್ತು ಕೃಷ್ಣಕುಮಾರ್-೨೦೦೪). ಕಾಲಾನಂತರ ಆಶ್ರಮಗಳು ಅಸ್ತಿತ್ವಕ್ಕೆ ಬಂದು, ಇಲ್ಲಿ ಕಲಿಯುವವರು ಉತ್ತಮ ಜ್ಞಾನಿಗಳಾದ ಶಿಕ್ಷಕರ ಮಾರ್ಗದರ್ಶನದಲ್ಲಿ ಶಿಕ್ಷಣ ಪಡೆಯುತ್ತಿದ್ದರು. ಇಲ್ಲಿನ ಶಿಕ್ಷಕರು/ಮತ್ತು ವಿದ್ಯಾರ್ಥಿಗಳು ತಮ್ಮ ಅಧ್ಯಯನದ ಮತ್ತು ಇತರೆ ಕೆಲಸಗಳಿಗಾಗಿ ಅನೇಕ ತಾಳೆಗರಿ ಗ್ರಂಥಗಳನ್ನು ಬಳಸುತ್ತಿದ್ದರು. ಅನೇಕ ವಿದ್ಯಾರ್ಥಿಗಳು ಹೆಚ್ಚು ಶಿಕ್ಷಕರು ಕಲಿಸುತ್ತಿದ್ದ ವಿದ್ಯಾಪೀಠವೆಂದು ಕರೆಸಿಕೊಳ್ಳುತ್ತಿದ್ದ ದೊಡ್ಡ ಆಶ್ರಮಗಳಿಗೆ ಸೇರುತ್ತಿದ್ದರು.

ಇಂತಹ ಶಿಕ್ಷಣ ಸಂಸ್ಥೆಗಳು ತಮ್ಮ ಶೈಕ್ಷಣಿಕ ಚಟುವಟಿಕೆಗಳಿಗೆ ಮತ್ತು ಕಲಿಸುವಿಕೆಗೆ ವಿವಿಧ ರೀತಿಯ ತಾಳೆಗರಿ ಗ್ರಂಥಗಳನ್ನು, ಇತರ ಪರಿಕರಗಳನ್ನು ಬಳಸುತ್ತಿದ್ದರು ಹಾಗೂ ಅವುಗಳನ್ನು ಬಹಳ ಜೋಪಾನವಾಗಿ ರಕ್ಷಿಸಿಡುತ್ತಿದ್ದರು. ಈ ಓದುವ ಸಾಮಗ್ರಿಗಳು ಶಿಕ್ಷಣ ಮತ್ತು ಸಂಸ್ಕೃತಿಯ ಅನೇಕ ಶಾಖೆಗಳ ಜ್ಞಾನವನ್ನು ವರ್ಗಾಯಿಸಲು ಆಕರ ವಸ್ತುಗಳಾದವು. ಅನೇಕ ವಿಷಯಗಳು ಈ ತಾಳೆಗರಿ ಗ್ರಂಥಗಳಲ್ಲಿ ಇರುತ್ತಿದ್ದವು. ಈ ರೀತಿಯ ಹಸ್ತಪ್ರತಿ ಸಂಗ್ರಹಗಳೇ ನಂತರ ಆಧುನಿಕ ಗ್ರಂಥಾಲಯಗಳ ರೂಪವನ್ನು ತಳೆದವು. ಇವುಗಳು ಬಹಳ ಜೋಪಾನವಾಗಿ ನಿರ್ವಹಣೆಗೊಂಡು, ವಿದ್ಯಾರ್ಥಿಗಳಿಂದ ಮತ್ತು ಶಿಕ್ಷಕರಿಂದ ಬಳಕೆಗೊಳಗಾಗುತ್ತಿದ್ದವು (Ekbote-1987). ಹೀಗೆ ಅನೇಕ ಆಶ್ರಮ ಅಥವಾ ವಿದ್ಯಾಪೀಠಗಳು ಹಸ್ತಪ್ರತಿಗಳನ್ನು ಮತ್ತು ಇತರೆ ಓದುವ ಸಾಮಗ್ರಿಗಳನ್ನು ಕಾಯ್ದಿರಿಸುತ್ತಿದ್ದರು. ಒಂದು ರೀತಿಯಲ್ಲಿ ಇವು ವಿದ್ಯಾರ್ಥಿಗಳಿಗೆ ಅಥವಾ ಸಮುದಾಯಗಳಿಗೆ ಮಾಹಿತಿ ಮತ್ತು ಜ್ಞಾನವನ್ನು ಹಂಚುವ ಕೇಂದ್ರಗಳಾಗಿದ್ದವು.

ಶರ್ಮಾ ಅವರು (೧೯೮೫) ಹೇಳುವಂತೆ "ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಗ್ರಂಥಾಲಯಗಳು ವಿವಿಧ ವಿಷಯಗಳನ್ನು ಕಲಿಯುವವರಿಗೆ, ಅರಿವನ್ನು ವಿಸ್ತರಿಸಿ ಕೊಳ್ಳುವವರಿಗೆ ದೀಪದ ಮನೆಗಳಂತೆ ಕೆಲಸ ನಿರ್ವಹಿಸುತ್ತಿದ್ದವು. ಇದಕ್ಕೆ ಸಾಕ್ಷಿಯಾಗಿ ದೊರೆಯುವ ಬಿಹಾರ ರಾಜ್ಯದ ನಾಲಂದಾ ವಿಶ್ವವಿದ್ಯಾಲಯವನ್ನೇ ನೋಡಬಹುದು. ಕ್ರಿ.ಶ. ೬೦೦ರಲ್ಲಿದ್ದ ಈ ವಿಶ್ವವಿದ್ಯಾಲಯವು ಬಹುಮಹಡಿಯ ಗ್ರಂಥಾಲಯವನ್ನು ಹೊಂದಿತ್ತು. ಈ ಗ್ರಂಥಾಲಯವು ೩ ಭಾಗಗಳನ್ನು ಹೊಂದಿದ್ದು ಪ್ರತಿಯೊಂದು ಭಾಗವೂ ೯ ಮಹಡಿಗಳನ್ನು ಮತ್ತು ೩೦೦ ಕೊಠಡಿಗಳನ್ನು ಹೊಂದಿತ್ತು. ಭಾರತದ ಚಕ್ರವರ್ತಿ ಧನಪಾಲನು ಈ ಗ್ರಂಥಾಲಯವನ್ನು ನಿರ್ಮಿಸಿದ್ದು, ಆಸಕ್ತರಾದ ಯಾರು ಬೇಕಾದರೂ ಈ ಗ್ರಂಥಾಲಯದಲ್ಲಿ ಓದಬಹುದಾಗಿತ್ತು. ವಿದ್ವಾಂಸರೊಂದಿಗೆ ಚರ್ಚೆ, ವಿಚಾರ ವಿನಿಮಯ ಅಷ್ಟೇ ಅಲ್ಲದೆ ಗ್ರಂಥಾಲಯದಲ್ಲಿರುವ ದಾಖಲೆಗಳ ನಕಲುಗಳನ್ನು ಪಡೆಯಬಹುದಾಗಿತ್ತು. ಕ್ರಿ.ಶ. ೭ನೇ ಶತಮಾನದಲ್ಲಿ ಚೀನಾದ ಪ್ರವಾಸಿ ಹ್ಯೂಯೆನ್‌ತ್ಸಾಂಗ್‌ನು ಈ ಗ್ರಂಥಾಲಯದ ಬಗ್ಗೆ ಕೇಳಿ ತಿಳಿದುಕೊಂಡು ಭೇಟಿಕೊಟ್ಟಿದ್ದನು. ಅಲ್ಲದೆ ಇಲ್ಲಿಂದ ನೂರಾರು ಗ್ರಂಥಗಳನ್ನು ಚೀನಾ ಮತ್ತು ಜಪಾನ್ ದೇಶಕ್ಕೆ ತೆಗೆದುಕೊಂಡು ಹೋದನು. ಆದರೆ ಕ್ರಿ.ಶ. ೧೨೦೫ರಲ್ಲಿ ಭಾರತದ ಮೇಲೆ ಧಾಳಿ ಮಾಡಿದ ಭಕ್ತಿಯಾರ್ ಖಿಲ್ಜಿಯು ಈ ಗ್ರಂಥಾಲಯವನ್ನು

ಸಂಪೂರ್ಣವಾಗಿ ನಾಶಮಾಡಿದನು. ಇದನ್ನು ಸುಟ್ಟು ಹಾಕಲಾಯಿತು. ಸುಮಾರು ಆರು ತಿಂಗಳುಗಳ ಕಾಲ ಈ ಗ್ರಂಥಾಲಯವು ಉರಿಯುತ್ತಲೇ ಇತ್ತಂತೆ (ಶರ್ಮ ೧೯೬೭).

ಪ್ರಾಚೀನ ಭಾರತದಲ್ಲಿ ಇದರಂತೆಯೇ ಅನೇಕ ಶಿಕ್ಷಣ ಕೇಂದ್ರಗಳಲ್ಲಿ ಉತ್ತಮ ಗ್ರಂಥಾಲಯಗಳಿದ್ದವು. ವಿಕ್ರಮಶಿಲ, ಆವಂತಿ ಮುಂತಾದುವು ಉತ್ತಮ ಗ್ರಂಥಾಲಯ ಗಳನ್ನು ಹೊಂದಿದ್ದವು. ಭಾರತದ ಪ್ರಸಿದ್ಧ ಪ್ರಾಚೀನ ವಿಶ್ವವಿದ್ಯಾಲಯಗಳಾದ ತಕ್ಷಶಿಲಾ ಮತ್ತು ನಾಲಂದ ವಿಶ್ವವಿದ್ಯಾಲಯಗಳು ಅಮೂಲ್ಯವಾದ ತಂತ್ರಗಳನ್ನು ಮತ್ತು ಹಸ್ತಪ್ರತಿಗಳನ್ನು ತಮ್ಮ ಗ್ರಂಥಾಲಯಗಳಲ್ಲಿ ಸಂಗ್ರಹಿಸಿದ್ದವು.

ವಿಶ್ವವಿದ್ಯಾಲಯಗಳು ಮತ್ತು ಕಲಿಕಾ ಕೇಂದ್ರಗಳು : ತಕ್ಷಶಿಲಾ ಮತ್ತು ನಾಲಂದ ವಿಶ್ವವಿದ್ಯಾಲಯ

ತಕ್ಷಶಿಲಾ ಒಂದು ಕಾಲಕ್ಕೆ ಬೌದ್ಧರ ಸಾಮ್ರಾಜ್ಯವಾದ ಗಾಂಧಾರ ದೇಶದ ರಾಜಧಾನಿ ಯಾಗಿದ್ದುದಲ್ಲದೆ ಪ್ರಸಿದ್ಧ ಶಿಕ್ಷಣ ಕೇಂದ್ರವೂ ಆಗಿತ್ತು. ಪರ್ಶಿಯಾ ರಾಜರ ಆಳ್ವಿಕೆಗೆ ಒಳಗಾದ ಈ ತಕ್ಷಶಿಲೆಯು ಕ್ರಿ.ಪೂ. ೩೨೬ರಲ್ಲಿ ಅಲೆಕ್ಸಾಂಡರನಿಗೆ ಶರಣಾಯಿತು. ಆನಂತರ ಈ ಸಾಮ್ರಾಜ್ಯವು ಬ್ಯಾಕ್ಟ್ರಿಯನ್ನರ ಮತ್ತು ಸಿಥಿಯನ್ನರ ಆಳ್ವಿಕೆಗು ಅಲ್ಲದೆ ಇತರ ಅನೇಕ ಚಕ್ರವರ್ತಿಗಳ ಆಳ್ವಿಕೆಗೂ ಒಳಪಟ್ಟಿತ್ತು. ತಕ್ಷಶಿಲಾ ನಗರವು ಕಾಲಾಂತರದಲ್ಲಿ ಕ್ರಿ.ಪೂ. ೨೫೦ರಲ್ಲಿ ಭಾರತದ ಪ್ರಸಿದ್ಧ ಚಕ್ರವರ್ತಿ ಅಶೋಕನ ಆಳ್ವಿಕೆಗೆ ಒಳಪಟ್ಟು ಬೌದ್ಧಧರ್ಮದ ಪ್ರಮುಖ ಕೇಂದ್ರವಾಗಿ ಬೆಳೆಯಿತು. ಪ್ರಸಿದ್ಧ ಯಾತ್ರಿ ಅಪೋಸ್ಟಲ್ ಥಾಮಸ್ ಕ್ರಿ.ಶ. ೧ನೇ ಶತಮಾನದಲ್ಲಿ ಈ ನಗರಕ್ಕೆ ಭೇಟಿ ನೀಡಿದ ದಾಖಲೆಯಿದೆ.

ತಕ್ಷಶಿಲೆಯು ಒಂದು ಪ್ರಾಚೀನ ವಿದ್ಯಾಕೇಂದ್ರವಾಗಿ ಕ್ರಿ.ಪೂ. ೫ನೇ ಶತಮಾನಕ್ಕೂ ಮುಂಚೆನಿಂದಲೇ ಹೆಸರುವಾಸಿಯಾಗಿತ್ತು. ಈ ನಗರವು ಧಾರ್ಮಿಕವಾಗಿಯೂ ಮತ್ತು ಐತಿಹಾಸಿಕವಾಗಿಯೂ ಹಿಂದೂ ಮತ್ತು ಬೌದ್ಧ ಧರ್ಮೀಯರಿಬ್ಬರಿಗೂ ಪವಿತ್ರವಾದ ಮತ್ತು ಪ್ರಮುಖವಾದ ಸ್ಥಳವಾಗಿತ್ತು. ಅಲ್ಲದೆ ತಕ್ಷಶಿಲೆಯು ವೇದಾಂತ ಅಧ್ಯಯನದ ಕೇಂದ್ರ ಸ್ಥಾನವೂ ಆಗಿತ್ತು. ಇಲ್ಲಿ ಮೌರ್ಯ ಸಾಮ್ರಾಜ್ಯ ಚಕ್ರವರ್ತಿ ಚಂದ್ರಗುಪ್ತನು ಹಿರಿಯ ಶಿಕ್ಷಕನಾಗಿಯೂ ಇದ್ದನು. ತಕ್ಷಶಿಲಾ ವಿಶ್ವವಿದ್ಯಾಲಯವು ಬೌದ್ಧಸಂಪ್ರದಾಯಗಳ ಪ್ರಮುಖ ಕೇಂದ್ರವಾಗಿದ್ದುದಲ್ಲದೆ, ಬೌದ್ಧಧರ್ಮದ ಪ್ರಮುಖ ಶಾಖೆಯಾದ ಮಹಾಯಾನ ಪಂಥವು ಇಲ್ಲಿಯೇ ರೂಪತಾಳಿತೆಂಬ ನಂಬಿಕೆಯೂ ಇದೆ. ನಾಲಂದ ವಿಶ್ವವಿದ್ಯಾಲಯವೂ ಕೂಡ ಭಾರತದ ಪ್ರಾಚೀನ ವಿಶ್ವವಿದ್ಯಾಲಯವಾಗಿದ್ದು, ಇದು ಈಗಿನ ಬಿಹಾರ ರಾಜ್ಯದಲ್ಲಿತ್ತು. ದಾಖಲಿತ ಇತಿಹಾಸದ ಮೊತ್ತಮೊದಲ ಶ್ರೇಷ್ಠ ವಿಶ್ವವಿದ್ಯಾಲಯವೆಂಬ ಕೀರ್ತಿಯೂ ಇದಕ್ಕಿದೆ.

ಆಶುರ್ಬನಿಪಾಲ್ ಗ್ರಂಥಾಲಯ

ಆಶುರ್ಬನಿಪಾಲನ ರಾಜಗ್ರಂಥಾಲಯವು ನಂತರ ಆಶುರ್ಬನಿಪಾಲ್ ಗ್ರಂಥಾಲಯವೆಂದೇ ಹೆಸರಾಯಿತು. ಹೊಸ ಅಸ್ಸೀರಿಯನ್ ಸಾಮ್ರಾಟನಾದ ಈ ಆಶುರ್ಬನಿಪಾಲನು ಕ್ರಿ.ಪೂ. ೭ನೇ ಶತಮಾನದ ಅವಧಿಯಿಂದಲೂ ಬರವಣಿಗೆಯುಳ್ಳ ಸಾವಿರಾರು ಮಣ್ಣಿನ ಫಲಕಗಳನ್ನು ಮತ್ತು ಅವಶೇಷಗಳನ್ನು ಸಂಗ್ರಹಿಸಿದ್ದನು. ಅನೇಕ ರೀತಿಯ ಬರಹಗಳು ಈ ಸಂಗ್ರಹದಲ್ಲಿದ್ದುವು. ಈ ಗ್ರಂಥಾಲಯದ ಶೋಧನೆಯ ಕೀರ್ತಿ

ಆಸ್ಟೆನ್ ಹೆನ್ರಿ ಲಯೊರ್ಡ್‌ನಿಗೆ ಸಲ್ಲುತ್ತದೆ. ಇವನು ಅಲ್ಲಿ ದೊರೆತ ಬರಹದ ದಾಖಲೆಗಳ ಬಹುಭಾಗವನ್ನು ತನ್ನ ಜೊತೆ ಇಂಗ್ಲೆಂಡಿಗೆ ತೆಗೆದುಕೊಂಡು ಹೋದನು. ಅವೆಲ್ಲ ಈಗ ಬ್ರಿಟಿಷ್ ವಸ್ತು ಸಂಗ್ರಹಾಲಯದಲ್ಲಿವೆ. ಕ್ರಿ.ಶ. ೧೮೪೯ರಲ್ಲೇ ಇವರ ಮೊದಲ ಶೋಧನೆ ನಡೆದಿದ್ದರೂ, ಆಗ ಈ ಕಟ್ಟಡವನ್ನು ವಾಯುವ್ಯ ಭಾಗದ ಅರಮನೆಯೆಂದು ಗುರುತಿಸಿದ್ದು, ಇದು ಕ್ರಿ.ಪೂ. ೭೦೫ ರಿಂದ ೬೮೧ರವರೆಗೆ ಆಳ್ವಿಕೆ ನಡೆಸಿದ ರಾಜ ಸೆಣ್ಣಚೆರಿಬ್‌ನಿಗೆ ಸೇರಿದ್ದಾಗಿತ್ತು.

ಈ ರಾಜಗ್ರಂಥಾಲಯದಲ್ಲಿ ದೊರೆತ ಅವಶೇಷಗಳಲ್ಲಿ ರಾಜ ಶಾಸನಗಳು ಘಟನಾವಳಿಗಳು, ವಂಶಾವಳಿಗಳು, ಧಾರ್ಮಿಕ ಮತ್ತು ಪೌರಾಣಿಕ ಕೃತಿಗಳು, ನಿಯಮಗಳು ರಾಜದತ್ತಿಗಳು ಮತ್ತು ತೀರ್ಪುಗಳು, ರಾಜಪತ್ರಗಳು, ಅನೇಕ ರೀತಿಯ ಆಡಳಿತ ದಾಖಲೆಗಳು ಇದ್ದವು. ಕೆಲವು ಬರಹಗಳು ಜ್ಯೋತಿಷ್ಯ, ಶಕುನಶಾಸ್ತ್ರ, ಮಾಂತ್ರಿಕಶಾಸ್ತ್ರ ದೇವತಾಸ್ತೋತ್ರಗಳು, ವೈದ್ಯಕೀಯ ಭವಿಷ್ಯ ಮತ್ತು ಸಾಹಿತ್ಯಗಳಿಗೆ ಸಂಬಂಧಿಸಿದ ಬರಹಗಳೂ ಇದ್ದವು.

ಸರಸ್ವತಿ ಮಹಲ್ ಗ್ರಂಥಾಲಯ

ತಂಜಾವೂರು ಸಂಸ್ಥಾನದ ಅರಸನಾದ ಸೆರ್ಫೋಜಿಯ ಕಾಲದ ಸರಸ್ವತಿ ಮಹಲ್ ಗ್ರಂಥಾಲಯವು, ವಿಶ್ವದಲ್ಲೇ ಬದುಕುಳಿದಿರುವ ಮಧ್ಯಕಾಲೀನ ಅವಧಿಯ ಗ್ರಂಥಾಲಯ ಗಳಲ್ಲಿ ಒಂದಾಗಿದೆ. ಸಮರ್ಥರಾದ ನಾಯಕರು ಮತ್ತು ಮರಾಠ ಅರಸರು ನಿರ್ಮಿಸಿದ ಈ ಗ್ರಂಥಾಲಯವು ಸರಿಸಾಟಿಯಿಲ್ಲದ ಗ್ರಂಥಾಲಯವಾಗಿದ್ದು, ಇದು ಸಂಸ್ಕೃತಿ ಮತ್ತು ಜ್ಞಾನಭಂಡಾರದ ಸಮರ್ಥನೆಗಾಗಿ ಪ್ರಖ್ಯಾತಿಯನ್ನು ಪಡೆದಿತ್ತು. ಇಲ್ಲಿ ಅಪರೂಪದ ಸಾವಿರಾರು ತಾಳೆಗರಿ ಗ್ರಂಥಗಳು, ಪುಸ್ತಕಗಳು, ನಕ್ಷೆಗಳು, ಚಿತ್ರಗಳು ಹೀಗೆ ಕಲೆ, ಸಂಸ್ಕೃತಿ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದ ದಾಖಲೆಗಳಿವೆ.

ಭಾರತದ ದೇವಾಲಯಗಳು

ನಮ್ಮ ಪ್ರಾಚೀನ ಭಾರತದಲ್ಲಿ ಸಾಮಾನ್ಯವಾಗಿ ಬಹುತೇಕ ದೇವಾಲಯಗಳು ಶಿಕ್ಷಣ ಕೇಂದ್ರಗಳಾಗಿದ್ದವು. ಬೋಧನೆ ಮತ್ತು ಕಲಿಕೆಯ ವಿಷಯದಲ್ಲಿ ದೇವಾಲಯಗಳು ಪವಿತ್ರವಾದ ಸ್ಥಳಗಳಾಗಿದ್ದವು. ನಾವು ಯಾವುದೇ ಪ್ರಾಚೀನ ದೇವಾಲಯವನ್ನು ಗಮನಿಸಿದರೂ ಅಲ್ಲಿ ಶಾಸನಗಳು ಅಥವಾ ಅದಕ್ಕೆ ಸಂಬಂಧಿಸಿದ ಪ್ರಾಚೀನ ಕೃತಿಗಳು ನಮಗೆ ಸಿಗುತ್ತವೆ. ಇವುಗಳು ಆ ದೇವಾಲಯಗಳ ಇತಿಹಾಸವನ್ನು ಮತ್ತು ಅಲ್ಲಿ ನಡೆಯುತ್ತಿದ್ದ ಚಟುವಟಿಕೆಗಳನ್ನು ತಿಳಿಸುತ್ತವೆ.


ಕರ್ನಾಟಕದಲ್ಲಿಯೂ ಕದಂಬ, ರಾಷ್ಟ್ರಕೂಟ, ಬಾದಾಮಿ ಚಾಲುಕ್ಯ, ಗಂಗ, ಕಲ್ಯಾಣ ಚಾಲುಕ್ಯ ಮತ್ತು ಹೊಯ್ಸಳರ ಅವಧಿಯ ಅನೇಕ ದೇವಾಲಯಗಳು, ಅದರಲ್ಲೂ ತ್ರಿಕೂಟ ದೇವಾಲಯಗಳು, ವಿದ್ಯಾಕೇಂದ್ರಗಳಾಗಿ ಪ್ರಸಿದ್ಧಿಯನ್ನು ಪಡೆದಿದ್ದವು. ಅವುಗಳಲ್ಲಿ ಸಾಲೊಟಗಿ, ನಾಗಾಯಿ, ಬಳ್ಳಿಗಾವಿಯ ಕೋಡಿಮಠ ಮೊದಲಾದವು ಬಹಳ ಪ್ರಸಿದ್ಧ ವಾಗಿದ್ದವೆಂದು ಶಾಸನಗಳು ತಿಳಿಸುತ್ತವೆ. ಈ ಸ್ಥಳಗಳಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿ ಮತ್ತು ಅಧ್ಯಾಪಕರ ಸಂಖ್ಯೆ, ಬೋಧಿಸುತ್ತಿದ್ದ ವಿಷಯಗಳು, ಅವರ ಊಟ-ವಸತಿಗಾಗಿ

ರಾಜರಿಂದ ಬರುತ್ತಿದ್ದ ದಾನಗಳು, ಅಲ್ಲಿದ್ದ ಗ್ರಂಥಾಲಯಗಳು ಮೊದಲಾದವುಗಳ ಬಗ್ಗೆ ಮಾಹಿತಿ ದೊರೆಯುತ್ತವೆ. ಸಾಲೊಟಗಿಯ ಗ್ರಂಥಾಲಯದಲ್ಲಿ ಪುಸ್ತಕಗಳನ್ನು ನೋಡಿ ಕೊಳ್ಳಲು ಸರಸ್ವತಿ ಭಂಡಾರಿಗ ಇದ್ದನೆಂದೂ, ಅವನಿಗೂ ಅರಸರು ದಾನವನ್ನು ನೀಡಿರುವರೆಂದು ಶಾಸನವೊಂದು ತಿಳಿಸುತ್ತದೆ. ಕಾಶಿ, ಬೋಧಗಯಾದ ಮಹಾಬೋಧಿ ದೇವಾಲಯ, ಲೇಪಾಕ್ಷಿ ದೇವಾಲಯ ಇಲ್ಲೆಲ್ಲ ಸಾಮಾನ್ಯ ಜ್ಞಾನದ, ಬದುಕಿನ ಇತರೆ ತತ್ತ್ವಗಳಿಗೆ ಸಂಬಂಧಿಸಿದ ವಿಷಯಗಳನ್ನು ತಿಳಿಸಿ ಕೊಡುತ್ತಿದ್ದರೆಂದು ಕಂಡು ಬಂದಿದೆ.

ಹೀಗೆ, ಗ್ರಂಥಾಲಯಗಳು ಮನುಷ್ಯನು ನಾಗರಿಕನಾಗುವತ್ತ ಹೆಜ್ಜೆ ಹಾಕಿದ ದಿನದಿಂದಲೂ, ಅವನ ಜೊತೆಗೆ ಸಾಗಿ ಬಂದು, ಅವನನ್ನು ಜ್ಞಾನಿಯನ್ನಾಗಿಸಲು ಉನ್ನತವಾಗಿ ಶ್ರಮಿಸಿವೆಯೆಂದು ಹೇಳಬಹುದಾಗಿದೆ.

ಆಧಾರ ಗ್ರಂಥಗಳು

೧. ಪ್ರಾಚೀನ ಭಾರತದ ಗ್ರಂಥಾಲಯಗಳು (೨೦೧೦)
೨. ಏಕಬೋಟೆ, ಗೋಪಾಲರಾವ್ (೧೯೮೭); ಸಾರ್ವಜನಿಕ ಗ್ರಂಥಾಲಯ ವ್ಯವಸ್ಥೆ ಹೈದರಾಬಾದ್
೩. ಐ.ಎಲ್.ಎ. (೨೦೦೪) ಭಾರತೀಯ ಗ್ರಂಥಾಲಯ ಸಂಸ್ಥೆ, ೬೩ನೇ ವಾರ್ಷಿಕ ವರದಿ
೪. ಭಾರತದಲ್ಲಿ ಸಾರ್ವಜನಿಕ ಗ್ರಂಥಾಲಯಗಳ ಪಾತ್ರ
೫. ಭಾರತದ ಸಾರ್ವಜನಿಕ ಗ್ರಂಥಾಲಯಗಳು, ದೆಹಲಿ, ಶರ್ಮ, ಪಾಂಡೆ ಎಸ್.ಕೆ. (೧೯೮೫)
೬. ಗ್ರಂಥಾಲಯಗಳು ಮತ್ತು ಸಮಾಜ (೧೯೮೭) ದೆಹಲಿ ಶರ್ಮಾ, ಪಾಂಡೆ ಎಸ್.ಕೆ. (೧೯೮೭)




ಲೇಖಕಿಯಾಗಿ ನನ್ನ ಅನುಭವಗಳು

■ ಪ್ರೇಮಾ ಭಟ್

ನನ್ನ ಬಾಲ್ಯದ ದಿನಗಳಿಗೆ ಮನಸ್ಸು ಜಾರಿಕೊಂಡಾಗ ಸುಮಧುರ ಗಾನವೊಂದನ್ನು ಕೇಳಿ ಸಂತೋಷಗೊಂಡಂತೆ ಮನಸ್ಸು ಅರಳುತ್ತದೆ. ಮರತೇ ಹೋಗಿದ್ದ ಭಾವಲಹರಿಯೊಂದು ನೆನಪಿಗೆ ಬಂದರೆ ನಾನು ಖುಷಿಪಡುವುದೂ ಉಂಟು; ಹಾಗೆಯೇ ಇದ್ದಕ್ಕಿದ್ದಂತೆ ಏಕಕಾಲದಲ್ಲಿ ನೋವು ಹಣಕಿ ಹಾಕಿಬಿಡುವುದುಂಟು. ಆ ಸುಂದರವಾದ ದಿನಗಳು ಮತ್ತೆ ಬರಲು ಸಾಧ್ಯವೇ ೭೦ರ ಈ ಇಳಿವಯಸ್ಸಿನಲ್ಲಿ! ಇಪ್ಪತ್ತರ ಹಿಂದಿನ ಬದುಕನ್ನು ಕುರಿತು ಯೋಚಿಸುವಾಗ ಕಾಡುವ ನೋವಿಗೆ ಶರಣೆನ್ನಲಾದೀತೆ ಎನ್ನುವ ಆಲೋಚನೆಯೂ ಬರುತ್ತದೆ. ಎಂಥ ಸಂಪತ್‌ಭರಿತವಾದ ಬದುಕು ಅಂದಿನದಾಗಿತ್ತು. ವಿದ್ಯೆ ಕಲಿತು ಬಾಳುವವರಿಗಿಂತ ವಿದ್ಯೆ ಕಲಿಯದೆಯೇ ಮೇಟಿ ವಿದ್ಯೆಯೇ ಕೋಟಿ ವಿದ್ಯೆಗಿಂತ ಮೇಲು ಎಂದು ನಾಟಿ ಮಾಡುತ್ತಿದ್ದ ಜನರ ಮಧ್ಯೆ ಬೆಳೆದ ನನಗೆ ಸಿಕ್ಕ ಅನುಭವದ ವ್ಯಾಪ್ತಿ ಬಹಳ ದೊಡ್ಡದು. ಬಯಲಾಟ, ಯಕ್ಷಗಾನ ತಾಳಮದ್ದಳೆಯಂತಹ ರಸಮಯ ಕಲೆಗಳ ಬೀಡು ತುಳುನಾಡು. ತುಳುನಾಡಿನ ಸಾಂಸ್ಕೃತಿಕ ಮೌಲ್ಯಗಳ ನಡುವೆ ಕಳೆದ ಆ ಬಾಲ್ಯವನ್ನು ನಾನೆಂದೂ ಮರೆಯಲಾರೆ.

ಲೇಖಕಿಯಾದವರಿಗೆ ಬರೀ ದೂರದೃಷ್ಟಿತ್ವ, ಸೂಕ್ಷ್ಮ ದೃಷ್ಟಿತ್ವವಿದ್ದರೆ ಸಾಲದು. ಹಣವನ್ನು ಜೇಬಿಗೋ ಕೈಚೀಲಕ್ಕೋ ತುಂಬಿಸಿಕೊಳ್ಳುವಂತೆ ಕಂಡದ್ದನ್ನು, ಅನುಭವಿಸಿದ್ದನ್ನು ಮಸ್ತಕದಲ್ಲಿ ಹಿಡಿದಿಟ್ಟುಕೊಳ್ಳುವ ಜಾಣ್ಮೆಯೂ ಬೇಕಾಗುತ್ತದೆ. ಅನುಭವಗಳು ಎಂದೂ ಖಾಲಿಯಾಗದ ಕಣಜ. ಬೇಕಾದಾಗ ಅದನ್ನು ಕೆದಕಿ



ಹೊರತೆಗೆಯುವುದಕ್ಕೆ ಬರುತ್ತದೆ. ಮೇಟಿ ವಿದ್ಯೆ ಹೇಗೆ ಕೋಟಿ ವಿದ್ಯೆಗೆ ಸಮವೋ ಹಾಗೆ ಅನುಭವ ಎನ್ನುವುದು ಕೂಡ ಕೋಟಿ ವಿದ್ಯೆಗೆ ಸಮ. ಅನುಭವ ಎನ್ನುವ ಬುತ್ತಿಯ ಭಂಡಾರ ತುಂಬದೆ ಹೋದರೆ ಲೇಖಕಿಯಾಗಲು ಸಾಧ್ಯವಿಲ್ಲ. ಅನುಭವ ಸೃಜನಶೀಲತೆ ಬರವಣಿಗೆಗೆ ಬೇಕಾದ ಮೂಲಾಧಾರ.

ಕಾಣುವ ಕಣ್ಣು, ನೋಡುವ ಮನಸ್ಸು ಎರಡೂ ಇದ್ದಾಗ ಚಿಕ್ಕಚಿಕ್ಕ ವಸ್ತುಗಳೂ ಮಹತ್ವದ್ದು ಎನಿಸುತ್ತದೆ. ನಾನು ಚಿಕ್ಕವಳಿದ್ದಾಗ ನೋಡಿದ್ದೆಷ್ಟೋ, ಅನುಭವಿಸಿದ್ದೆಷ್ಟೋ; ಹಳ್ಳಿಯ ಬದುಕೇ ಹಾಗೆ. ವೈವಿಧ್ಯಮಯ ಅನುಭವವನ್ನು ಕಟ್ಟಿಕೊಡುತ್ತದೆ. ನಿಂತಲ್ಲಿ ನಡೆದಲ್ಲಿ ಹೋದಲ್ಲಿ-ಬಂದಲ್ಲಿ ಹಲವು ಹತ್ತು ಸಮಸ್ಯೆಗಳನ್ನು ವಿವರಿಸುವ ಜನರು ಘನೀಭೂತರಾಗಿ ಕಣ್ಣಮುಂದೆ ನಿಲ್ಲುತ್ತಾರೆ. ಎಲ್ಲೆಲ್ಲಿ ನೋಡಿದರೂ ಅವಿಭಕ್ತ ಕುಟುಂಬಗಳು. ಆ ಕುಟುಂಬಗಳಲ್ಲಿ ಅದೆಂತಹ ಪ್ರೀತಿ, ಅದೆಂತಹ ವಾತ್ಸಲ್ಯ. ಕೆಲವೊಮ್ಮೆ ಭಿನ್ನಾಭಿಪ್ರಾಯಗಳು ತಲೆದೋರಿದರೂ ಅದನ್ನಲ್ಲಿಗೆ ಬಿಟ್ಟು, ಸರಿಪಡಿಸಿಕೊಂಡು ಹೋಗುವ ಹಿರಿತನದ ಜವಾಬ್ದಾರಿ ಹೊತ್ತವರಿಂದ ನಡೆಯುತ್ತಿರುತ್ತಿತ್ತು. ಎಂತಹ ಸಹನೆ ಹೆಂಗಸರಲ್ಲಿ, ಸಮೃದ್ಧ ಬದುಕನ್ನು ಕಟ್ಟಿಕೊಟ್ಟವರೆ ಹೆಂಗಸರು. ಮನಸ್ಸು ಮನಸ್ಸುಗಳು ಒಡೆಯದಂತೆ ನೋಡಿಕೊಳ್ಳುವ ಜಾಣ್ಮೆ ಹೆಂಗಸರಲ್ಲಿ ಕಂಡಿದ್ದೆ. ಪತಿಪತ್ನಿಯರಲ್ಲಿ ವಿರಸ ಬಂದರೂ ಅದು ವಿಕೋಪಕ್ಕೆ ಹೋಗದಂತೆ ನೋಡಿಕೊಳ್ಳುತ್ತಿದ್ದರು ಹಿರಿಯರು. ಇಂದಿನ ಹಾಗೆ ವಿವಾಹ ವಿಚ್ಛೇದನದ ಪ್ರಶ್ನೆಯೇ ಉದ್ಭವಿಸುತ್ತಿರಲಿಲ್ಲ. ಹೆಣ್ಣುಮಕ್ಕಳಿಗೆ ಶಿಕ್ಷಣವಿರಲಿಲ್ಲ; ಒಪ್ಪಿಕೊಳ್ಳೋಣ. ಆದರೆ ಶಿಕ್ಷಣ ಪಡೆದಿರುವ, ಪಡೆಯುತ್ತಿರುವ ಹೆಣ್ಣು ಮಕ್ಕಳಿಗೆ ಹೋಲಿಸಿದರೆ ಅಂದಿನ ಹೆಣ್ಣುಮಗಳು ಯಾವುದಕ್ಕೆ ಕಡಿಮೆಯಿದ್ದಳು? ಬುದ್ಧಿಮತ್ತೆಯಲ್ಲಿ ಇಂದಿನ ಮಹಿಳೆಯನ್ನು ಮೀರಿ ಬೆಳೆದ ಉದಾಹರಣೆಗಳಿವೆ. ಇದಕ್ಕೆ ಉದಾಹರಣೆ ನನ್ನ ಅಜ್ಜಿ ನಾಗಮ್ಮ, ಮೌಖಿಕವಾಗಿ ಕಟ್ಟುತ್ತಿದ್ದ ಹಾಡು ಹಸೆಗಳು ಯಾವ ಶಿಷ್ಟ ಸಾಹಿತ್ಯಕ್ಕೆ ಕಡಿಮೆ ಇರಲಿಲ್ಲ. ಹಾಗೆ ಎದ್ದರೆ ಕೂತರೆ ತುಳುಗಾದೆಗಳನ್ನು ಉದುರಿಸುತ್ತಿದ್ದ ದೊಡ್ಡಮ್ಮ ವಾಗ್ದೇವಿ ಯಾವ ವಿದ್ಯಾವಂತರಿಗೆ ಕಡಿಮೆ ಇದ್ದಳು? ಬೆಳಗಿನ ಜಾವಕ್ಕೆ ಎದ್ದುಮೊಸರು ಕಡೆಯುತ್ತಾ ನಮ್ಮಮ್ಮ ವನಜಾಕ್ಷಿ ಹೇಳುತ್ತಿದ್ದ ಪದ 'ದಧಿಯ ಮಥಿಸುವೆನೆಂಬ ಸಮಯದಿ' ಎನ್ನುವುದರಿಂದ ಪ್ರಾರಂಭಿಸಿ, ರಾತ್ರಿ ಮಲಗುವವರೆಗೂ ಬಿಡದೆ ಹಾಡಿಕೊಳ್ಳುತ್ತಿದ್ದು, ಮಲಗುವ ಹೊತ್ತಿಗೆ ದೇವರಿಗೆ ಲಾಲಿ ಹಾಡು ಹೇಳಿ ದೇವರನ್ನು ಮಲಗಿಸಿ ತಾನು ಮಲಗಿಕೊಳ್ಳುತ್ತಿದ್ದಳಲ್ಲ, ಅವಳಿಗೆ ಈ ಶಿಕ್ಷಣವನ್ನು ಯಾರು ಕಲಿಸಿಕೊಟ್ಟರು ಅಥವಾ ಅಷ್ಟೊಂದು ಪುರಂದರ ದಾಸರ ಹಾಡುಗಳು ಅವಳಿಗೆ ಹೇಗೆ ಬಾಯಿಪಾಠವಾಯಿತು ಎನ್ನುವುದು ನನಗೀಗಲೂ ಒಂದು ಅಚ್ಚರಿಯ ಸಂಗತಿಯೇ. ಇಂಥದೊಂದು ಸಂಸ್ಕಾರ ಅಂದಿನ ಹೆಣ್ಣುಮಕ್ಕಳಲ್ಲಿದ್ದುದರಿಂದ ಕುಟುಂಬ ಸಾಮರಸ್ಯ ಇಂದಿನಷ್ಟು ಹದಗೆಟ್ಟಿರಲಿಲ್ಲ.

ನಾನು ವಿಧಾನಸೌಧಕ್ಕೆ ಕೆಲಸಕ್ಕೆ ಸೇರಿದ್ದು ೧೯೬೭ರಲ್ಲಿ, ಕಿರಿಯ ಸಹಾಯಕಿಯಾಗಿ ನೇಮಕಾತಿ ಹೊಂದಿದಾಗ ವಿಧಾನಸೌಧದಲ್ಲಿ ಭ್ರಷ್ಟಾಚಾರ ಎನ್ನುವುದು ಬಿಗಿಮುಷ್ಟಿ ಯೊಳಗೆ ಇದ್ದುದನ್ನು ಕಂಡಿದ್ದೆ. ಎಲ್ಲೂ ಯಾರಮೇಲೂ ಅಪಪ್ರಚಾರವಾಗಲಿ

ಗುಮ್ಮನಗುಸುಗಿನ ಸದ್ದಾಗಲೀ ಕೇಳಿ ಬಂದದ್ದಿಲ್ಲ. ಕೆಲಸ ಮಾಡಿಕೊಟ್ಟರೆ ಒಂದು ಸಣ್ಣ ಪಾರ್ಟಿ, ಇಲ್ಲ ಒಂದು ಸಣ್ಣ ಸಿಹಿತಿಂಡಿಯ ಡಬ್ಬಕೊಟ್ಟರೆ ತೃಪ್ತರಾಗುತ್ತಿದ್ದರು. ಲಂಚ ಪಡೆದು ಸಿಕ್ಕಿ ಹಾಕಿಕೊಂಡರೆ ಅವಮಾನ ಎನ್ನುವ ಭಾವನೆ ಇತ್ತು, ಧರ್ಮದ ಬಗ್ಗೆ ಹೆದರಿಕೆಯಿತ್ತು, ಕಿರಿಯ ಸಹಾಯಕಿಯಿಂದ ನಾನು ಸಹಾಯಕರ ಹುದ್ದೆಗೆ ಬಡ್ತಿ ಹೊಂದುವಷ್ಟರಲ್ಲಾಗಲೇ ಲಂಚ ತೆಗೆದುಕೊಳ್ಳುವವರ ಸಂಖ್ಯೆ ಹೆಚ್ಚತೊಡಗಿತ್ತು, ಆದರೆ ಅದು ಗುಟ್ಟಿನಲ್ಲೇ ನಡೆಯುತ್ತಿತ್ತು. ಮುಂದೆ ಹಿರಿಯ ಸಹಾಯಕರ ಹುದ್ದೆಗೆ ಬಂದೆ ಅಷ್ಟಾರಲ್ಲಾಗಲೇ ಭ್ರಷ್ಟಾಚಾರ ಎನ್ನುವುದು ಸ್ವಚ್ಛಂದವಾಗಿ ಬಿಟ್ಟಿತ್ತು. ಸಂಕೋಚ, ಅಳುಕು ಭೀತಿ ಇಲ್ಲದೆ ಎದುರೆದುರಿಗೆ ಲಂಚ ಪಡೆಯುತ್ತಿದ್ದವರನ್ನು ಕಾಣುತ್ತಿದ್ದೆ. ನನ್ನ ಅನುಭವಕ್ಕೆ ಬಂದ ಏನೆಲ್ಲವನ್ನೂ ನನ್ನ ಹೃದಯದೊಳಗೆ ಮುಚ್ಚಿಟ್ಟುಕೊಳ್ಳದೆ ಕತೆಗಳ ಮೂಲಕ ತೆರೆದಿಟ್ಟಿದ್ದೇನೆ. ನಾನು ಹಿರಿಯ ಸಹಾಯಕರ ಹುದ್ದೆಯಿಂದ ಪತ್ರಾಂಕಿತ ಹುದ್ದೆಗೆ ಬರುವ ಹೊತ್ತಿಗಾಗಲೇ ಲಂಚ ಎನ್ನುವುದು ಆಲದ ಮರದ ಹಾಗೆ ಎಲ್ಲೆಡೆ ಹಬ್ಬಿಕೊಂಡಿತ್ತು.

ಮಗುವನ್ನು ತನ್ನೆದೆಯ ಗೂಡಿನಲ್ಲಿ ಮುಚ್ಚಿಟ್ಟುಕೊಂಡು ಭವಿಷ್ಯವನ್ನು ರೂಪಿಸಿ ಕೊಳ್ಳುವ ಅಮ್ಮನನ್ನು, ಮಾರ್ಕೆಟ್ ಎಂಬ ಸಂತೆಯ ಒಂದು ಬದಿಯಲ್ಲಿ ಕುಳಿತು ಪೊಟ್ಟಣದ ಅನ್ನವನ್ನು ಮೊದಲು ಕೂಸಿಗೆ ಉಣ್ಣಿಸಿ ನಂತರ ತಾನುಣ್ಣುವ ಅಮ್ಮಂದಿರು ಕಾರ್ಮಿಕರಲ್ಲಿ ಕಾಣಸಿಗಬಹುದೇ ಹೊರತು, ಹೈಟೆಕ್ ಶೈಲಿಯಲ್ಲಿ ಬದುಕುವ ಅನೇಕ ಮಹಿಳೆಯರಲ್ಲಿ ಕಾಣಸಿಗುವುದಿಲ್ಲ ಎನ್ನುವ ಕಟುಸತ್ಯ ನನ್ನ ಗಮನಕ್ಕೆ ಬಂದಂತೆ ಪುರುಷನಿಂದ ಮಹಿಳೆ ಅನುಭವಿಸುತ್ತಿರುವ ಸಂಕಷ್ಟ-ದೌರ್ಜನ್ಯಗಳೂ ಕಣ್ಣಿಗೆ ಬೀಳುತ್ತಿದ್ದವು. ಇಂಥ ವಿಷಯಗಳು ಗಮನಕ್ಕೆ ಬಂದಾಗಲೆಲ್ಲಾ ಆಯ್ದುಕೊಂಡು ಕತೆ ರಚಿಸಿದ್ದೇನೆ. ಸೃಜನಶೀಲ ಸಾಹಿತ್ಯಕ್ಕೆ ಬೇಕಾದ್ದು ಗಟ್ಟಿಯಾದ ಜೀವನಾನುಭವ. ಇತರರ ನೋವನ್ನು ಗ್ರಹಿಸುವ ಸಾಮರ್ಥ್ಯ, ದೂರ ದೃಷ್ಟಿತ್ವ, ಸೂಕ್ಷ್ಮ ದೃಷ್ಟಿತ್ವ ಎಲ್ಲವೂ ಇರಬೇಕಾಗುತ್ತದೆ. ಲೇಖಕಿಯಾದ ನಾನು ಮೌನವಾಗಿ ನನ್ನ ಸುತ್ತಮುತ್ತ ನಡೆಯುವ ವಿದ್ಯಮಾನವನ್ನು ಸೂಕ್ಷ್ಮವಾಗಿ ಅವಲೋಕಿಸುತ್ತೇನೆ. ನನ್ನ ಅನುಭವಕ್ಕೆ ದಕ್ಕಿದ ನೂರಾರು ಸಂಗತಿಗಳನ್ನು ನೂರು ಕೋನಗಳಿಂದ ವೀಕ್ಷಿಸುತ್ತೇನೆ. ಮತ್ತೆ ಲೆಕ್ಕಣಿಕೆಗೆ ಇಳಿಸುತ್ತೇನೆ. ಇಂತಹ ಸಂಗತಿಗಳೇ ನೂರಾರು ಕತೆಗಳಾಗಿವೆ.

ನಾನು ಕಂಡ ಸಹೃದಯರು, ಸಜ್ಜನರು, ಅಂತಃಕರಣವುಳ್ಳ ಹಿರಿಯ ಮಹನೀಯರು ನನ್ನ ಕತೆಗಳ ಪಾತ್ರಗಳ ಮೂಲಕ ಇಣುಕಿರುತ್ತಾರೆ ಎನ್ನುವುದು ಸತ್ಯ. ಕೆ. ಗೋಪಾಲಕೃಷ್ಣರಾಯರು ಆ ಕಾಲಕ್ಕೆ ಸಣ್ಣಕತೆಗಳ ಜನಕ ಎಂದೇ ಹೆಸರಾದವರು. ಅವರು ಮತ್ತು ಅವರ ಧರ್ಮಪತ್ನಿ ಸುಶೀಲಮ್ಮ ನಮಗೆ ಪರಿಚಯವಾಗಿದ್ದು ತಿರುಮಲೆ ತಿರುಪತಿ ದೇವಸ್ಥಾನದಲ್ಲಿ. ಮಾತನಾಡುತ್ತಾ ಹೋದ ಹಾಗೆಲ್ಲ ವಿಷಯ ಬಿಚ್ಚಿಕೊಳ್ಳುತ್ತಿತ್ತು. ಅವರೊಬ್ಬ ಕತೆಗಾರ ಎಂದು ತಿಳಿಯಿತು. ನನಗೆ ಅವರ ಕತೆಗಳನ್ನು ಓದಿದ ನೆನಪು ಸಹ ಇತ್ತು. ಗೋಪಾಲಕೃಷ್ಣರಾಯರ ಪರಿಚಯವಾದ ಮೇಲೆ ನಾವು ಆಗಾಗ ಅವರಲ್ಲಿಗೆ ಹೋಗಿ ಬರುತ್ತಿದ್ದೆವು. ಅಷ್ಟೇನು ಅನುಕೂಲವಿಲ್ಲದಿದ್ದರೂ ಶುದ್ಧಾತ್ಮರಾಗಿದ್ದ ಅವರು ಪ್ರತಿವರ್ಷ ರಾಯರ ಆರಾಧನೆಯನ್ನು ಮನೆಯಲ್ಲಿ ಅದ್ಧೂರಿಯಿಂದ ನಡೆಸುತ್ತಿದ್ದರು.

ಈ ಆರಾಧನೆಗೆ ನಮ್ಮನ್ನು ತಪ್ಪದೆ ಆಹ್ವಾನಿಸುತ್ತಿದ್ದರು. ಆ ಹಿರಿಯರೆಲ್ಲೋ, ನಾವೆಲ್ಲೋ. ಅವರ ಪ್ರೀತಿಗೆ ವಿಶ್ವಾಸಕ್ಕೆ ಮಣಿದು ನಾವಿಬ್ಬರೂ ಹೋಗುತ್ತಿದ್ದೆವು. ಅಲ್ಲಿಗೆ ತ.ಸು. ಶಾಮರಾಯರು ಬರುತ್ತಿದ್ದರು. ಗೆಳೆಯರಿಬ್ಬರೂ ಪೂಜೆ ಮುಗಿದು ಪ್ರಸಾದ ವಿನಿಯೋಗವಾದ ಮೇಲೆ ಅರ್ಧ ಗಂಟೆ ಮಾತಿಗೆ ಕೂರುತ್ತಿದ್ದರು. ನಾವು ಅವರಾಡುವ ಮಾತುಗಳನ್ನು ಹತ್ತಿರದಲ್ಲಿ ಕುಳಿತು ಕೇಳುತ್ತಿದ್ದೆವು. ಅವರ ಮಾತಿನಲ್ಲಿ ಸಾಹಿತ್ಯದ ಬಗ್ಗೆ ವಿಮರ್ಶೆ ಇರುತ್ತಿತ್ತು ಆಧ್ಯಾತ್ಮದ ಬಗ್ಗೆ ಚಿಂತನೆಗಳಿರುತ್ತಿದ್ದವು. ಅವನ್ನೆಲ್ಲಾ ಕೇಳಿಸಿಕೊಂಡು ನಾವು ಮನೆಗೆ ಹಿಂತಿರುಗು ತ್ತಿದ್ದೆವು. ಗೋಪಾಲಕೃಷ್ಣರಾಯರು ನಮ್ಮನ್ನೊಮ್ಮೆ ವೀ.ಸೀ.ಯವರ ಮನೆಗೆ ಕರೆದುಕೊಂಡು ಹೋಗಿ ಪರಿಚಯ ಮಾಡಿಸಿದ್ದರು. ಹೀಗೆ ನನಗೆ ಎಂತೆಂತಹ ಮಹನೀಯರ ಒಡನಾಟ, ಮಾರ್ಗದರ್ಶನ, ಆಶೀರ್ವಾದ ಎಲ್ಲವೂ ಸಿಕ್ಕಿತ್ತು. ಆಗಿನ ಹಿರಿಯರಲ್ಲಿ ಹಿರಿತನ ಇರುತ್ತಿತ್ತು. ಹೃದಯ ಶ್ರೀಮಂತಿಕೆ ಇರುತ್ತಿತ್ತು. ಶಿಷ್ಯಕೋಟಿಗಳನ್ನು ಬೆಳೆಸುವಲ್ಲಿ ಅಪಾರವಾದ ಒಲವನ್ನು ಹೊಂದಿದವರಾಗಿರುತ್ತಿದ್ದರು.

ಕನ್ನಡದ ಬಗ್ಗೆ ನನಗೆ ಮೊದಲಿಂದಲೂ ಪ್ರೀತಿ, ಶಾಲೆ ಕಲಿಯುವ ದಿನಗಳಲ್ಲಿ ನನ್ನ ಗೆಳತಿಯರೆಲ್ಲಾ ಇಂಗ್ಲಿಷ್ ಮಾಧ್ಯಮ ಪ್ರವೇಶಿಸಿದಾಗ ನನಗೆ ಕನ್ನಡ ಇಷ್ಟವಾದ ಭಾಷೆ ಎಂದು ಕನ್ನಡ ಮಾಧ್ಯಮದಲ್ಲಿ ಓದಿದೆ. ರಸಾಯನ ಶಾಸ್ತ್ರ, ಭೌತಶಾಸ್ತ್ರ, ಸಮಾಜಶಾಸ್ತ್ರ ಗಳನ್ನೆಲ್ಲಾ ಓದುವಾಗ ಹಿಗ್ಗುತ್ತಿದ್ದೆ. ಕನ್ನಡದಲ್ಲಿ ಸುಲಭದಲ್ಲಿ ಅರ್ಥವಾಗುವಂತೆ ವಿಜ್ಞಾನ ವಿಷಯ ಆಂಗ್ಲಭಾಷೆಯಲ್ಲಿ ಅರ್ಥವಾಗದು ಎಂದು ಹೇಳುತ್ತಿದ್ದೆ. ಕನ್ನಡ ಐಚ್ಛಿಕ ವಿಷಯದಲ್ಲಿ ಹೆಚ್ಚಿನ ಅಂಕ ಪಡೆದು ತೇರ್ಗಡೆಯಾಗುತ್ತಿದ್ದೆ.

ಸರ್ಕಾರ ಆಡಳಿತ ಭಾಷೆಯನ್ನು ೧೯೭೭ರಲ್ಲಿ ಜಾರಿಗೆ ತಂದಾಗ ಮೊದಲಿಗೆ ಸರ್ಕಾರಿ ಪತ್ರವ್ಯವಹಾರಗಳನ್ನು ಕನ್ನಡದಲ್ಲಿ ನಡೆಸಿ ತೋರಿಸಿದೆ. ಕನ್ನಡದಲ್ಲಿ ಟಿಪ್ಪಣಿ ಅಧಿಸೂಚನೆ, ಆದೇಶ, ಸುತ್ತೋಲೆ ಎಲ್ಲವನ್ನೂ ನಿರ್ವಹಿಸಿದ್ದೇನೆ. ಆಗ ಕನ್ನಡ ಸಂಸ್ಕೃತಿ ಇಲಾಖೆ ಕನ್ನಡದಲ್ಲಿ ಸರ್ಕಾರಿ ಪತ್ರವ್ಯವಹಾರವನ್ನು ಮಾಡುವವರಿಗೆ ವಿಶೇಷವಾಗಿ ಪ್ರೋತ್ಸಾಹಧನ ನೀಡಿ ಗೌರವಿಸುತ್ತಿತ್ತು. ಮೊದಲಿಗೆ ಪ್ರಶಸ್ತಿ ಪ್ರೋತ್ಸಾಹ ಧನ ಪಡೆದವಳು ನಾನು, ಕೆಳ ಇಲಾಖೆಯ ಲೆಕ್ಕ ಪರಿಶೋಧಕರೊಬ್ಬರು ಮತ್ತು ಸಹಾಯಕ ನಿರ್ದೇಶಕ ರೊಬ್ಬರು ಪಡೆದುಕೊಂಡಿದ್ದೆವು.

ಆಡಳಿತವನ್ನು ಕನ್ನಡದಲ್ಲಿ ನಿರ್ವಹಿಸಬೇಕು ಎಂದು ಆದೇಶ ಹೊರಬಿದ್ದ ಹೊಸದರಲ್ಲಿ ನನ್ನ ಮೇಲಧಿಕಾರಿಯೊಬ್ಬರು, ಕನ್ನಡ ಇಂಗ್ಲಿಷ್ ಶಬ್ದಕೋಶದ ಸಹಾಯ ಪಡೆದು ಕೆಲಸ ಮಾಡಲು ಯತ್ನಿಸುತ್ತಿದ್ದುದನ್ನು ನೋಡಿ ಹೇಳಿದ್ದೆ. 'ಒಂದು ಶಬ್ದಕ್ಕೆ ಹಲವಾರು ಅರ್ಥಗಳಿರುತ್ತವೆ. ದಯವಿಟ್ಟು ಶಬ್ದಕೋಶವನ್ನು ಬಳಸಬೇಡಿ' ಎಂದಿದ್ದೆ ಆದರೂ ಆ ಅಧಿಕಾರಿ ನನ್ನ ಮಾತನ್ನು ಕೇಳುತ್ತಿರಲಿಲ್ಲ. ಒಂದು ದಿನ ಕೆಳ ಇಲಾಖೆಯಿಂದ ಅಧಿಕಾರಿಗೆ ಪತ್ರ ಬಂತು. ನೀವೇನು ಬರೆದಿದ್ದೀರೋ ನಮಗೆ ಅರ್ಥವಾಗಲಿಲ್ಲ. ದಯವಿಟ್ಟು ಇನ್ನೊಮ್ಮೆ ಪರಿಶೀಲಿಸಿ ಸರಿಯಾಗಿ ಬರೆದು ಕಳಿಸಿ ಎಂದು ಬರೆದಿದ್ದರು. ಅದನ್ನು ನೋಡಿ ಆ ಅಧಿಕಾರಿ ನನ್ನನ್ನು ಕರೆದು ತಾವು ಬರೆದಿದ್ದ ಪತ್ರವನ್ನು ಕೊಟ್ಟು ನನ್ನ ಕೈಯಿಂದಲೇ ಉತ್ತರ ಹಾಕಿಸಿದ್ದರು.

ರಾ.ನಂ. ಚಂದ್ರಶೇಖರ ಒಬ್ಬ ಛಲಗಾರ. ಎಂ.ಚಿದಾನಂದಮೂರ್ತಿಯವರು ಕಟ್ಟಿ ಬೆಳೆಸಿದ ಕನ್ನಡ ಶಕ್ತಿ ಕೇಂದ್ರದ ಕಾರ್ಯಕಲಾಪಗಳನ್ನು ಅತ್ಯಂತ ಆಸ್ಥೆಯಿಂದ ನೋಡಿಕೊಳ್ಳುತ್ತಿದ್ದ ಏಕೈಕ ವ್ಯಕ್ತಿ ರಾ.ನಂ. ಚಂದ್ರಶೇಖರ ಎನ್ನುವುದನ್ನು ಕೇಳಿದ್ದೆ. ಕನ್ನಡಕ್ಕಾಗಿ ಎತ್ತಿದ ಕೈಗೆ ಅಭಿಮಾನಿಗಳು, ಅಭಿಮಾನದಿಂದ ಅಭಿನಂದನಾ ಗ್ರಂಥ ಅರ್ಪಿಸುತ್ತಿರುವುದು ಸಂತೋಷದ ವಿಚಾರ.

ಅನುಭವ, ಚಿತ್ರ ಕಲಾವಿದನೊಬ್ಬ ಕ್ಯಾನ್‌ವಾಸ್ ಮೇಲೆ ಎಳೆಯುವ ಗೆರೆಯಲ್ಲ. ಮನಸ್ಸಿನಲ್ಲಿ ನೋವಿನಗೆರೆ ಮೂಡಬೇಕು, ನೋವನ್ನು ತಾನು ಅನುಭವಿಸಿದ್ದಲ್ಲದೆ ಗೆರೆ ಮೂಡುವುದಿಲ್ಲ. ಒಂದು ಪತ್ರ ಕೊಡುವ ನೋವು ಅಥವಾ ಸಂತೋಷ ಅದು ಮಾಯದಂತಿರಬೇಕು. ಅದು ಅನುಭವ. ಇದರ ಜಾಡನ್ನು ಹಿಡಿದೇ ನಾನು ಬರವಣಿಗೆ ಮಾಡಿದವಳು ಎಂದು ಹೇಳುತ್ತಾ ರಾ.ನಂ. ಚಂದ್ರಶೇಖರ ಅವರಿಗೆ ಶುಭವಾಗಲಿ, ಅಭಿನಂದನಾ ಗ್ರಂಥ ಸುಂದರವಾಗಿ ಬರಲಿ ಎಂದು ಹಾರೈಸುತ್ತೇನೆ.

❐



ಭಾಗ ೩

ವಿಜ್ಞಾನ, ಉದ್ದಿಮೆಯ ಜೋರು ಬೀಸು

ನಮ್ಮ ಹೆಮ್ಮೆಯ ವಿಜ್ಞಾನ ಸಂಸ್ಥೆಗಳು

■ ಸುಧೀಂದ್ರ ಹಾಲ್ದೊಡ್ಡೇರಿ

ಚಳವಳಿಗಳು ಪ್ರದೇಶವೊಂದರ ಬೆಳವಣಿಗೆಗೆ ಮಹತ್ತರ ಕಾಣಿಕೆಗಳನ್ನು ನೀಡುತ್ತವೆಂಬ ವಿಷಯ ನಮ್ಮ ದೇಶದ ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಮನದಟ್ಟಾಗಿದೆ. ಚಳವಳಿಗಳಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಭಾಗವಹಿಸುವ ಜನರಿದ್ದಾರೆ. ಈ ಎರಡೂ ಬಗೆಯ ಚಳವಳಿಗಾರರ ಮೂಲ ಉದ್ದಿಶ್ಯ ತಾವು ನಂಬಿದ ತತ್ತ್ವಗಳತ್ತ ನಿರ್ದಿಷ್ಟ ಸಮುದಾಯವನ್ನು ಕರೆದೊಯ್ಯುವುದು, ಹಾಗೆಯೇ ಚಳವಳಿ ಆರಂಭಿಸಿದಾಗಿನ ಮೂಲ ಗುರಿಯನ್ನು ಯಶಸ್ವಿಯಾಗಿ ತಲುಪುವುದು. ಹಾಗೆಂದ ಮಾತ್ರಕ್ಕೆ ಎಲ್ಲ ಚಳವಳಿಗಳೂ ಯಶಸ್ವಿಯಾಗಬೇಕೆಂದಿಲ್ಲ, ಜತೆಗೆ ಇಂದಿನ ಯಶಸ್ಸು ನಾಳೆಗೆ ಪ್ರಶ್ನಾರ್ಹವಾಗಲೂಬಹುದು. ರಾ.ನಂ. ಚಂದ್ರಶೇಖರ ಅಥವಾ ಅವರ ಜನಪ್ರಿಯ ಆವೃತ್ತಿ 'ರಾ.ನಂ.' ಬಗ್ಗೆ ಬರೆಯುವಾಗ ಚಳವಳಿಯ ಬಗ್ಗೆ ಪ್ರಸ್ತಾಪಿಸಲೇ ಬೇಕು. ಹುಟ್ಟು ಹೋರಾಟಗಾರೆಂಬ ಪದಪುಂಜ ಕ್ಲೀಶೆಯಾಗುತ್ತಿರುವ ಇಂದಿನ ಸಂದರ್ಭದಲ್ಲಿ 'ರಾ.ನಂ.' ಅವರನ್ನು ಕೇವಲ ಕನ್ನಡದ ಹುಟ್ಟು ಪರಿಚಾರಕನೆಂದೇ ಕರೆಯುವುದು ಸೂಕ್ತ. ಇಂಥದೊಂದು ಅದ್ಭುತ ಕನ್ನಡ ಮನಸ್ಸಿನ ಜತೆಗೆ ಸುಮಾರು ಇಪ್ಪತ್ತೈದಕ್ಕೂ ಹೆಚ್ಚಿನ ವರ್ಷಗಳ ಸಂಪರ್ಕವಿಟ್ಟುಕೊಂಡಿದ್ದೇನೆಂಬುದೇ ನನಗೆ ಹೆಮ್ಮೆಯ ವಿಷಯ. ಈ ಇಪ್ಪತ್ತೈದು ವರ್ಷಗಳಲ್ಲಿ ನಮ್ಮ 'ರಾ.ನಂ' ಅವರ ನಡೆ-ನುಡಿ-ಭಾವ-ಪ್ರೀತಿ-ವಾತ್ಸಲ್ಯ ಯಾವುದೂ ಬದಲಾಗಿಲ್ಲ. ಹತ್ತಿರದಿಂದ ನೋಡಿದವರಿಗೆ ಅವರ ಹುಡುಗಾಟ ಮತ್ತು ಹುಡುಕಾಟ ಹಾಗೆಯೇ ಮುಂದುವರಿದಿದೆ. ನಮ್ಮೆಲ್ಲರಿಗೂ ವಯಸ್ಸಾಗುವಂತೆ ಮಾಡಿ, ಅವರ



ವಯಸ್ಸನ್ನು ಮಾತ್ರ ನಿಲ್ಲಿಸಿಕೊಂಡ ಗುಟ್ಟು ಅದೇನೋ, ಗೊತ್ತಿಲ್ಲ. ಯಾವ ದೃಷ್ಟಿಯಿಂದ ನೋಡಿದರೂ 'ರಾ.ನಂ.' ಬದಲಾಗುವುದೂ ಇಲ್ಲ. ಬದಲಾಗುವುದು ಬೇಡವೆಂದೇ ಅವರ ಸಹಸ್ರಾರು ಒಡನಾಡಿಗಳ ಆಶಯ.

ಅಂದಿನ ಮೈಸೂರು ಪ್ರಾಂತ್ಯ ಅಥವಾ ಸಂಸ್ಥಾನ ಹಾಗೂ ಇಂದಿನ ಕರ್ನಾಟಕ ರಾಜ್ಯ ದೇಶದ ಮಹತ್ವದ ಭೌಗೋಳಿಕ ಭಾಗ. ಕೇವಲ ಜನಸಂಖ್ಯೆಯಲ್ಲಷ್ಟೇ ಅಲ್ಲ, ವಿಸ್ತೀರ್ಣ ದಲ್ಲಷ್ಟೇ ಅಲ್ಲ, ಸ್ವತಂತ್ರ ಭಾರತದ ಗಣನೀಯ ಪ್ರಗತಿಯ ಹಿರಿಯ ಪಾಲುದಾರ. ವಿಶೇಷವಾಗಿ ಉಲ್ಲೇಖಿಸಬೇಕೆಂದರೆ ಇವೆಲ್ಲವೂ ಸ್ವಾತಂತ್ರ್ಯಾನಂತರ ಏಕಕಾಲಕ್ಕೆ ಬಂದುದಲ್ಲ. ಈ ಸಂಸ್ಥಾನವನ್ನು ಆಳಿದ ಮಹಾರಾಜರು, ಅವರೊಟ್ಟಿಗಿದ್ದ ದಿವಾನರು ಪ್ರಧಾನ ಎಂಜಿನಿಯರ್‌ಗಳು, ಉತ್ತಮೋತ್ತಮ ಆಡಳಿತಗಾರರು ಉನ್ನತಿಗಗತ್ಯವಾದ ಸುಭದ್ರ ಬುನಾದಿಗಳನ್ನು ಹಾಕಿದರು. ಆ ಅಡಿಪಾಯಗಳ ಮೇಲೆದ್ದ ಭವ್ಯ ಸಂಸ್ಥೆಗಳು ಇಂದಿನ ನಮ್ಮೆಲ್ಲರ ಸುಖ ಸಂತೋಷಗಳಿಗೆ, ಸಂಪದಭ್ಯುದಯಕ್ಕೆ ಕಾರಣವಾಗಿವೆ. ಹಾಗೆಯೇ ಅಂದಿನ ಮೈಸೂರು ಹಾಗೂ ಇಂದಿನ ಕರ್ನಾಟಕದ ಕೀರ್ತಿ ಪತಾಕೆಯನ್ನು ಜಗದೆಲ್ಲೆಡೆ ಹಾರಿಸಿವೆ. ಇದನ್ನು ವಿಜ್ಞಾನ ಚಳವಳಿಯೆನ್ನೋಣವೆ? ಉನ್ನತ ಅಧ್ಯಯನ ದಾಸೋಹವೆನ್ನೋಣವೆ? ಅಭಿವೃದ್ಧಿಯೆಂಬ ಕ್ರಾಂತಿಯ ಮುನ್ನುಡಿಯೆನ್ನೋಣವೆ?

ನಮ್ಮ ದೇಶವು ವಿಜ್ಞಾನ-ತಂತ್ರಜ್ಞಾನ ಕ್ಷೇತ್ರದಲ್ಲಿ ಇಂದು ಜಾಗತಿಕ ಮನ್ನಣೆ ಗಳಿಸಲು ಅಂದಿನ ಮೈಸೂರಿನಲ್ಲಿ ಹುಟ್ಟಿದ ವಿಜ್ಞಾನ ಚಳವಳಿಗಳೇ ಮೂಲ ಪ್ರೇರಣೆ. ಅವುಗಳಲ್ಲಿ ಒಂದಷ್ಟನ್ನು 'ರಾ.ನಂ' ಅವರ ಅರವತ್ತನೆಯ ಹುಟ್ಟುಹಬ್ಬದ ಸಂದರ್ಭದಲ್ಲಿ ನೆನೆಯುವುದು ಸೂಕ್ತವೆಂಬ ಅಭಿಪ್ರಾಯ ನನ್ನದು. ಮೈಸೂರು ಸಂಸ್ಥಾನದ ಪ್ರಮುಖ ನಗರವಾಗಿದ್ದ ಬ್ರಿಟಿಷ್ ದಂಡು ಪ್ರದೇಶದ ಭಾಗವಾಗಿದ್ದ, ಬೆಂಗಳೂರು ಎಂದೊಡನೆಯೇ ನಮಗೆ ಪುಳಕ ಹುಟ್ಟಿಸುವುದು ದೇಶದ ಅತ್ಯಂತ ಹಳೆಯ ವಿಜ್ಞಾನ ಸಂಸ್ಥೆಗಳು, ಜಗನ್ಮಾನ್ಯ ಉನ್ನತ ಅಧ್ಯಯನ ಸಂಸ್ಥೆಗಳು, ಮೂಲ ವಿಜ್ಞಾನ ಸಂಶೋಧನಾ ಕೇಂದ್ರಗಳು ಮತ್ತು ವಿಮಾನ-ವಿದ್ಯುನ್ಮಾನ ಸಾಧನ ಸಲಕರಣೆಗಳ ಅಭಿವೃದ್ಧಿ-ನಿರ್ಮಾಣದಲ್ಲಿ ತೊಡಗಿಕೊಂಡಿರುವ ಸಾರ್ವಜನಿಕ ವಲಯದ ಬೃಹತ್ ಉದ್ದಿಮೆಗಳು ಹಾಗೂ ಭಾರತೀಯ ಬಾಹ್ಯಾಕಾಶ ಸಂಸ್ಥೆ 'ಇಸ್ರೋ'ದ ಮುಖ್ಯಾಲಯವೂ ಸೇರಿದಂತೆ ಉಪಗ್ರಹ-ಉಡ್ಡಯಣಾ ವಾಹನ-ನಿಯಂತ್ರಣ ವ್ಯವಸ್ಥೆಗಳನ್ನು ಅಭಿವೃದ್ಧಿಪಡಿಸುವ ಕೇಂದ್ರಗಳು, ಯುದ್ಧ ವಿಮಾನ-ರೇಡಾರ್-ಸಂಪರ್ಕ ಸಾಧನಗಳ ಸಂಶೋಧನೆಯಲ್ಲಿ ತೊಡಗಿಕೊಂಡಿರುವ 'ಡಿ.ಆರ್.ಡಿ.ಓ.' ಪ್ರಯೋಗಶಾಲೆಗಳು, ನಾಗರಿಕ ವಿಮಾನಕ್ಕೆ ಸಂಬಂಧಿಸಿದ ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ಭಾಗಿಯಾಗಿರುವ 'ಸಿ.ಎಸ್.ಐ.ಆರ್.' ಲ್ಯಾಬೋರೇಟರಿಗಳು ಇತ್ಯಾದಿ.

ಮೈಸೂರು ಪ್ರಾಂತ್ಯವನ್ನು ನಿಜವಾಗಲೂ ಬೆಳಗಿಸಿದ್ದು ವಿದ್ಯುದ್ದೀಪಗಳೆನ್ನಬಹುದು. ೧೯೦೫ರ ಆಗಸ್ಟ್ ೫ನೆಯ ತಾರೀಖು ಬೆಂಗಳೂರಿನಲ್ಲಿ ವಿದ್ಯುತ್ ದೀಪ ಬೆಳಗಿದಾಗ ಇಡೀ ಇಂಡಿಯಾ ದೇಶದಲ್ಲಿ ಅಂಥದೊಂದು ಅದ್ಭುತವನ್ನು ಯಾರೂ ಅನುಭವಿಸಿರಲಿಲ್ಲ. ೧೯೦೮ರಲ್ಲಿ ಮೈಸೂರು ನಗರಕ್ಕೂ ವಿದ್ಯುತ್ ದೀಪ ಹಾಕಿಸುವ ವ್ಯವಸ್ಥೆಯಾಯಿತು. ಈ

ದೀಪಗಳು ಪ್ರಜ್ವಲ ಬೆಳಕು ಸೂಸುವ ಮುನ್ನವೇ ಮೈಸೂರು ಪ್ರಾಂತ್ಯದಲ್ಲಿ ಅನೇಕ ವಿಜ್ಞಾನ ಹಣತೆಗಳು ಅಜ್ಞಾನದ ಕತ್ತಲೆಯನ್ನು ಹಿಮ್ಮೆಟ್ಟಿಸುತ್ತಿದ್ದವು. ಒಂದರ ನಂತರ ಒಂದರಂತೆ ಇಡೀ ಭಾರತ ದೇಶದಲ್ಲಿಯೇ ಮೊದಲೆನಿಸಬಹುದಾದ ಅನೇಕ ಸಂಶೋಧನಾ ಸಂಸ್ಥೆಗಳು ಇಲ್ಲಿ ಸ್ಥಾಪನೆಗೊಂಡವು.

ಈ ಸಾಲಿನಲ್ಲಿ ನಮ್ಮ ನೆನಪಿಗೆ ಬರುವ ಮೊದಲ ವಿಜ್ಞಾನ ಸಂಸ್ಥೆಯೆಂದರೆ ೧೮೫೮ರಲ್ಲಿ ಸ್ಥಾಪನೆಯಾದ ಸೆಂಟ್ರಲ್ ಕಾಲೇಜು; ಆದರೆ ೧೮೫೮ಕ್ಕೂ ಮುನ್ನ ಇಂಟರ್‌ಮೀಡಿಯಟ್ ಸೈನ್ಸ್ ಕಾಲೇಜು ಆರಂಭವಾಗಿತ್ತು. ೧೯೨೧ರಲ್ಲಿ ಅದು ಸರ್ಕಾರಿ ಪದವಿ ಕಾಲೇಜಾಗಿ ಪರಿವರ್ತನೆಯಾಯಿತು. ಪದವಿಪೂರ್ವ ವಿಜ್ಞಾನ ಶಿಕ್ಷಣ ನೀಡುತ್ತಿದ್ದ ಸೆಂಟ್ರಲ್ ಕಾಲೇಜಿಗೆ ೧೮೮೬ರ ನಂತರ ಪದವಿ ನೀಡುವ ಅವಕಾಶ ಸಿಕ್ಕಿತು. ಮತ್ತೂ ಇಪ್ಪತ್ತು ವರ್ಷಗಳ ನಂತರ ಅದು (೧೯೦೬) ಮದ್ರಾಸ್ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬಂತು. ಮೈಸೂರು ಪ್ರಾಂತ್ಯಕ್ಕೆ ವಿಶ್ವವಿದ್ಯಾಲಯ ಬರುವ ಹೊತ್ತಿಗೆ, ಇನ್ನೂ ಹತ್ತು ವರ್ಷಗಳು ಉರುಳಿದವು. ಇವೆಲ್ಲ ನಡೆಯುವ ಹೊತ್ತಿಗೆ, ಬೆಂಗಳೂರಿನಲ್ಲಿ ವಿಜ್ಞಾನ ವಿಷಯಗಳ ಅಧ್ಯಯನಕ್ಕೆಂದು 'ಟಾಟಾ ಇನ್‌ಸ್ಟಿಟ್ಯೂಟ್' ಆರಂಭವಾಗಿತ್ತು. ಇದಕ್ಕೊಂದು ಐತಿಹಾಸಿಕ ಮಹತ್ವದ ಹಿನ್ನೆಲೆಯಿದೆ. "ಬೆಂಗಳೂರಿಗೆ ಆಗಮಿಸಿದ್ದ ಸ್ವಾಮಿ ವಿವೇಕಾನಂದರನ್ನು ಮುಂಬೈ ಉದ್ಯಮಿ ಜಮ್‌ಶೇಟ್‌ಜಿ ನಸರವಾಂಜಿ ಟಾಟಾ ಭೇಟಿ ಮಾಡುತ್ತಾರೆ. ಆ ಸಂದರ್ಭದಲ್ಲಿ ಮೈಸೂರಿನ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಆತಿಥ್ಯ ನೀಡುತ್ತಾರೆ.

ಟಾಟಾ ಅವರು 'ರಿಸರ್ಚ್ ಇನ್‌ಸ್ಟಿಟ್ಯೂಟ್' ಅಥವಾ 'ಯೂನಿವರ್ಸಿಟಿ ಆಫ್ ರಿಸರ್ಚ್' ಆರಂಭಿಸುವ ಪ್ರಸ್ತಾವನೆ ಮಾಡುತ್ತಾರೆ (೧೮೯೬). ಬ್ರಿಟನ್ ಸರ್ಕಾರದ ಅನುಮೋದನೆಗೆ ಪ್ರಸ್ತಾವನೆ ಹೋಗುತ್ತದೆ. ವೈಸ್‌ರಾಯ್ ಆಗಿದ್ದ ಲಾರ್ಡ್ ಕರ್ಜನ್ ೧೮೯೮ರಲ್ಲಿ ಯೋಜನೆಗೆ ಒಪ್ಪಿಗೆ ನೀಡುತ್ತಾರೆ. ಎಲ್ಲವೂ ಸುಸೂತ್ರವಾಯಿತು ಅಂದುಕೊಳ್ಳುವ ಹೊತ್ತಿಗೆ ಜೆ.ಎನ್. ಟಾಟಾ ಅವರು ಹಠಾತ್ತಾಗಿ ವಿಧಿವಶರಾಗುತ್ತಾರೆ (೧೯೦೪). ಟಾಟಾ ಅವರ ವಾರಸುದಾರರು ಯೋಜನೆ ಕೈಗೆತ್ತಿಕೊಂಡಾಗ ನಾಲ್ವಡಿ ಕೃಷ್ಣರಾಜ ಒಡೆಯರ್ ೪೦೦ ಎಕರೆ ಭೂಮಿಯನ್ನು ದಾನವಾಗಿ ನೀಡುತ್ತಾರೆ (೧೯೦೭). ಕಟ್ಟಡಗಳು ನಿರ್ಮಾಣಗೊಂಡು, ಅಗತ್ಯ ಸಾಧನ ಸಲಕರಣೆಗಳೊಂದಿಗೆ ಮೇ ೨೭ ೧೯೧೯ರಂದು ಟಾಟಾ ಇನ್‌ಸ್ಟಿಟ್ಯೂಟ್ ಆರಂಭ ವಾಗುತ್ತದೆ. ಜನರಲ್ ಕೆಮಿಸ್ಟ್ರಿ, ಅಪ್ಲೈಡ್ ಕೆಮಿಸ್ಟ್ರಿ, ಎಲೆಕ್ಟ್ರೋ ಟೆಕ್ನಾಲಜಿ ವಿಭಾಗಗಳಲ್ಲಿ ಕೋರ್ಸುಗಳು ಶುರುವಾಗುತ್ತವೆ. ಬ್ರಿಟಿಷ್ ಪ್ರೊಫೆಸರ್‌ಗಳೇ ಆರಂಭದ ದಿನಗಳಲ್ಲಿ ನಿರ್ದೇಶಕತ್ವ ವಹಿಸಿಕೊಳ್ಳುತ್ತಾರೆ. ಆಗಲೇ ನೊಬೆಲ್ ಪುರಸ್ಕೃತರಾಗಿದ್ದ ಸರ್ ಸಿ.ವಿ.ರಾಮನ್ ಅವರು ೧೯೩೩ರಲ್ಲಿ ಮೊದಲ ಭಾರತೀಯ ನಿರ್ದೇಶಕರಾಗಿ ಅಧಿಕಾರ ಸ್ವೀಕರಿಸುತ್ತಾರೆ." ಇಲ್ಲಿ ಮತ್ತೊಂದು ವಿಷಯ ಉಲ್ಲೇಖನೀಯ. ಸಿ.ವಿ.ರಾಮನ್ ಅವರಿಗೆ ನೊಬೆಲ್ ಪುರಸ್ಕಾರ (೧೯೩೦) ತಂದು ಕೊಟ್ಟ ಭೌತ ವಿಜ್ಞಾನದ ಹೊಸ ಹೊಳಹಿನ ಬಗ್ಗೆ ಅವರು ಪ್ರಸ್ತಾಪ ಮಾಡಿದ್ದು ಫೆಬ್ರವರಿ ೨೮ ೧೯೨೮ರಂದು ನಮ್ಮ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ. ಅವರು ನೀಡಿದ ಆ

ಉಪನ್ಯಾಸದ ನೆನಪಿನಲ್ಲಿ ಭಾರತ ದೇಶಾದ್ಯಂತ ಫೆಬ್ರವರಿ, ೨೮ನ್ನು 'ರಾಷ್ಟ್ರೀಯ ವಿಜ್ಞಾನ ದಿನ'ವನ್ನಾಗಿ ಆಚರಿಸಲಾಗುತ್ತಿದೆ.

ಕಾಲಚಕ್ರದಲ್ಲಿ ಕೊಂಚ ಹಿಂದೆ ಹೋದರೆ, ಬೆಂಗಳೂರಿನ ಹೆಬ್ಬಾಳದ ಕೃಷಿ ವಿಶ್ವವಿದ್ಯಾಲಯದ ಸ್ಥಾಪನೆಯೂ ಮುಂದಿನ ದಿನಗಳ ಹಸಿರು ಕ್ರಾಂತಿಗೆ ಅಥವಾ ದೇಶದ ಮುನ್ನಡೆಗೆ ನೆರವಾದದ್ದು ನೆನಪಿಗೆ ಬರುತ್ತದೆ. ೧೮೯೯ರಲ್ಲಿ ಮಹಾರಾಣಿ ಕೆಂಪ ನಂಜಮ್ಮಣ್ಣಿ ವಾಣಿವಿಲಾಸ ಸನ್ನಿಧಾನ ಅವರು 'ಪ್ರಾಯೋಗಿಕ ಕೃಷಿ ಕೇಂದ್ರ'ದ ಸ್ಥಾಪನೆಗೆಂದು ಹೆಬ್ಬಾಳದಲ್ಲಿ ೩೦ ಎಕರೆ ಜಮೀನು ನೀಡಿ, ಬೆಳೆಯ ಅಭಿವೃದ್ಧಿಯಲ್ಲಿ ಮಣ್ಣಿನ ಪಾತ್ರವನ್ನು ಅರಿಯುವ ಬಗ್ಗೆ ಸಂಶೋಧನೆಗಳನ್ನು ನಡೆಸಲು ಜರ್ಮನ್ ವಿಜ್ಞಾನಿ ಡಾ. ಲೆಹಮನ್ ಅವರನ್ನು ಕರೆಸಿಕೊಂಡಿದ್ದರು.

ನಂತರ ೧೯೦೬ರಲ್ಲಿ ಕೆನಡಾ ದೇಶದ ವಿಜ್ಞಾನಿ ಡಾ. ಲೆಸ್ಲಿ ಕೋಲ್‌ಮನ್ ಅವರನ್ನು ಕೃಷಿ ಶಾಲೆಯ ಅಭಿವೃದ್ಧಿಗೆಂದು ಮೈಸೂರು ಸರ್ಕಾರ ನೇಮಕ ಮಾಡಿತು. ಮುಂದೆ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ೨೦೨ ಎಕರೆ ಜಮೀನನ್ನು ಕೃಷಿ ಶಾಲೆಗೆಂದು ನೀಡಿದರು. ದಿವಾನರಾಗಿದ್ದ ವಿಶ್ವೇಶ್ವರಯ್ಯನವರು ೧೯೧೩ರಲ್ಲಿ ಇದೇ ಸ್ಥಳದಲ್ಲಿ ಕೃಷಿ ರೆಸಿಡೆನ್ಷಿಯಲ್ ಸ್ಕೂಲ್ ಆರಂಭಿಸಿದರು. ೧೯೪೬ರಲ್ಲಿ ಅದು 'ಕಾಲೇಜ್ ಆಫ್ ಅಗ್ರಿಕಲ್ಚರ್' ಆಯಿತು.

೧೯೧೨ರಲ್ಲಿ ಆರಂಭವಾದ ಬೆಂಗಳೂರಿನ 'ಸ್ಕೂಲ್ ಆಫ್ ಇಂಜಿನಿಯರಿಂಗ್'ನಲ್ಲಿ ಡಿಪ್ಲೊಮಾ ಹಂತದ ಮೆಕ್ಯಾನಿಕಲ್ ಎಂಜಿನಿಯರಿಂಗ್ ಬೋಧನೆ ಪ್ರಾರಂಭವಾಯಿತು. ಮೈಸೂರು ಪ್ರಾಂತ್ಯದ ವಿದ್ಯಾರ್ಥಿಗಳು ಡಿಗ್ರಿ ಹಂತದ ಎಂಜಿನಿಯರಿಂಗ್ ಕಲಿಯಲು ಪೂನಾ ಅಥವಾ ಮದ್ರಾಸ್‌ಗೆ ಹೋಗಬೇಕಿತ್ತು. ಮೈಸೂರು ವಿದ್ಯಾರ್ಥಿಗಳಿಗೆ ಕಡಿಮೆ ಸಂಖ್ಯೆಯ ಸೀಟುಗಳು ಲಭ್ಯವಿರುವುದನ್ನು ಮನಗಂಡಿದ್ದ ದಿವಾನ್ ವಿಶ್ವೇಶ್ವರಯ್ಯನವರು ೧೯೧೭ರಲ್ಲಿ ಸ್ಕೂಲ್ ಆಫ್ ಎಂಜಿನಿಯರಿಂಗ್‌ಅನ್ನು 'ಸರ್ಕಾರಿ ಎಂಜಿನಿಯರಿಂಗ್ ಕಾಲೇಜ್' ಆಗಿ ಮೇಲ್ದರ್ಜೆಗೆ ಏರಿಸಿದರು. ವರ್ಷದ ಹಿಂದೆ ಆರಂಭವಾಗಿದ್ದ ಮೈಸೂರು ವಿಶ್ವವಿದ್ಯಾಲಯಕ್ಕೆ ಈ ಕಾಲೇಜು ಸೇರ್ಪಡೆಯಾಯಿತು.

ಇದೇ ಸಮಯದಲ್ಲಿ (೧೯೧೬) ಮೈಸೂರಿನಲ್ಲಿ ಆರಂಭವಾಗಿದ್ದ ಗವರ್ನಮೆಂಟ್ ಸ್ಯಾಂಡಲ್‌ವುಡ್ ಆಯಿಲ್ ಫ್ಯಾಕ್ಟರಿ, ಗಂಧದೆಣ್ಣೆಯ ತಯಾರಿಕೆಯಲ್ಲಿ ಜಗದ್ವಿಖ್ಯಾತಿ ಗಳಿಸಿತ್ತು. ಈ ಗಂಧದೆಣ್ಣೆಯನ್ನು ಸಾಬೂನು ತಯಾರಿಕೆಯಲ್ಲಿ ಬಳಸಿಕೊಳ್ಳುವ ಆಲೋಚನೆಯಿಂದ, ಬೆಂಗಳೂರಿನ ಕಬ್ಬನ್‌ಪಾರ್ಕ್ ಬಳಿ (ಸುಮಾರಾಗಿ ಇಂದಿನ ಎಂ.ಎಸ್.ಬಿಲ್ಡಿಂಗ್‌ನ ಹಿಂಭಾಗ) ೧೯೧೮ರಲ್ಲಿ ಆರಂಭವಾದದ್ದು ಗವರ್ನಮೆಂಟ್ ಸೋಪ್ ಫ್ಯಾಕ್ಟರಿ. ತನ್ನ ಉತ್ಪನ್ನಗಳನ್ನು ಹೊರದೇಶಗಳಿಗೆ ರಫ್ತು ಮಾಡುವ ಸಾಮರ್ಥ್ಯ ವನ್ನೂ ಅದು ಗಳಿಸಿಕೊಂಡಿತು.

ಹೈನುಗಾರಿಕೆ ಸಂಶೋಧನೆಗೆಂದು ಬೆಂಗಳೂರಿನಲ್ಲಿ 'ಇಂಪೀರಿಯಲ್ ಇನ್‌ಸ್ಟಿಟ್ಯೂಟ್ ಆಫ್ ಅನಿಮಲ್ ಹಸ್ಬೆಂಡರಿ ಅಂಡ್ ಡೈರಿಯಿಂಗ್' ೧೯೨೩ರಲ್ಲಿ ಸ್ಥಾಪನೆಯಾಯಿತು. ೧೯೩೬ರಲ್ಲಿ ಇದರ ಹೆಸರು 'ಇಂಪೀರಿಯಲ್ ಡೈರಿ ಇನ್‌ಸ್ಟಿಟ್ಯೂಟ್' ಎಂದು ಬದಲಾಗಿ

ಎರಡು ವರ್ಷಗಳ ಡಿಪ್ಲೊಮ ಕೋರ್ಸ್ ಕೂಡಾ ಆರಂಭವಾಯಿತು. ಮುಂದೆ ಇದು ನ್ಯಾಷನಲ್ ಡೈರಿ ರಿಸರ್ಚ್ ಇನ್‌ಸ್ಟಿಟ್ಯೂಟ್‌ನ ದಕ್ಷಿಣ ವಿಭಾಗದ ಕೇಂದ್ರವಾಗಿ ಬೆಳೆಯಿತು.

೧೯೩೬ರಲ್ಲೇ ಆರಂಭವಾದದ್ದು ವಿದ್ಯುದ್ದೀಪಗಳ ತಯಾರಿಕಾ ಕಂಪನಿ 'ಮೈಸೂರು ಲ್ಯಾಂಪ್ಸ್'. ಮರಗಳಿಗೆ ತಗಲುವ ರೋಗಗಳು, ಕ್ರಿಮಿ-ಕೀಟ ನಿಯಂತ್ರಣ, ಅರಣ್ಯೋತ್ಪನ್ನಗಳ ಬಳಕೆ, ಅಗತ್ಯ ತೈಲಗಳ ಸಂಗ್ರಹ ಮತ್ತಿತರ ಉದ್ದೇಶಗಳಿಗೆಂದು ಮೈಸೂರು ಸರ್ಕಾರ ೧೯೩೮ರಲ್ಲಿ ಸ್ಥಾಪಿಸಿದ ಪ್ರಯೋಗಶಾಲೆ 'ಫಾರೆಸ್ಟ್ ರಿಸರ್ಚ್ ಲ್ಯಾಬೊರೇಟರಿ'. ಮರಮುಟ್ಟು ಉತ್ಪಾದನೆಗಳ ಗುಣಮಟ್ಟವನ್ನು ಜಾಗತಿಕ ಮಾನದಂಡಕ್ಕೇರಿಸುವ ಉದ್ದಿಶ್ಯದ ಮೊದಲ ಭಾರತೀಯ ಪ್ರಯೋಗಶಾಲೆಯಿದು.

ಟಾಟಾ ಇನ್‌ಸ್ಟಿಟ್ಯೂಟ್‌ನಿಂದ ಹೊರಬರಲು ನಿರ್ಧರಿಸಿದ್ದ ಸರ್ ಸಿ.ವಿ. ರಾಮನ್ ಖಗೋಳ ವಿಜ್ಞಾನಕ್ಕೆ ಸಂಬಂಧಿಸಿದ ಸಂಶೋಧನೆಗಳು, ಬೆಳಕು ಮತ್ತು ಇತರ ವಿಜ್ಞಾನ ವಿಷಯಗಳಿಗೆ ಸಂಬಂಧಿಸಿದ ಭೌತವಿಜ್ಞಾನದ ಅಧ್ಯಯನದ ಸಂಸ್ಥೆಯ ಸ್ಥಾಪನೆಗೆ ಯೋಚಿಸಿದ್ದರು. ಅವರನ್ನು ಮೈಸೂರಿನಲ್ಲಿಯೇ ಉಳಿಸಿಕೊಳ್ಳಲು ಮೈಸೂರು ಮಹಾರಾಜರು ಪ್ರಯೋಗಶಾಲೆಯೊಂದರ ಸ್ಥಾಪನೆಗೆ ಡಿಸೆಂಬರ್, ೧೯೩೪ರಲ್ಲೇ ಜಮೀನು ನೀಡಿದರೂ. ಅವರ ಕನಸು ೧೯೪೪ರಲ್ಲಿ ನನಸಾಯಿತು, 'ರಾಮನ್ ರಿಸರ್ಚ್ ಇನ್‌ಸ್ಟಿಟ್ಯೂಟ್' ಆರಂಭವಾಯಿತು.

ಜವಳಿ ಉದ್ದಿಮೆಗೆ ಅಗತ್ಯವಾದ ತಂತ್ರಜ್ಞಾನ ಶಾಲೆಯನ್ನು ಸ್ಥಾಪಿಸುವ ಕನಸು ದಿವಾನರಾಗಿದ್ದ ಸರ್ ಎಂ. ವಿಶ್ವೇಶ್ವರಯ್ಯ ಹಾಗೂ ಸರ್ ಮಿರ್ಜಾ ಇಸ್ಮಾಯಿಲ್ ಅವರದು. ಡಿಸೆಂಬರ್, ೧೯೩೮ರಲ್ಲಿ ಆರಂಭಗೊಂಡ ಶ್ರೀ ಕೃಷ್ಣರಾಜೇಂದ್ರ ಸಿಲ್ವರ್ ಜ್ಯೂಬಿಲಿ ಟೆಕ್ನಲಾಜಿಕಲ್ ಇನ್‌ಸ್ಟಿಟ್ಯೂಟ್, ಇಡೀ ದಕ್ಷಿಣ ಭಾರತದಲ್ಲಿಯೇ ಮೊದಲ ಟೆಕ್ಸ್‌ಟೈಲ್ ತರಬೇತಿ ಕೇಂದ್ರವಾಗಿತ್ತು. ಸಂಘಟಿತ ಜವಳಿ ಉದ್ದಿಮೆಗೆ ಅಗತ್ಯವಾದ ಎಲ್ಲಾ ತಂತ್ರಜ್ಞಾನ ಸೌಕರ್ಯಗಳನ್ನು ಕಲ್ಪಿಸಿಕೊಡುವ ಸದುದ್ದೇಶ ಇದರದಾಗಿತ್ತು.

ಕಾರು ಕಾರ್ಖಾನೆ ಸ್ಥಾಪಿಸಬೇಕೆಂಬ ವಿಶ್ವೇಶ್ವರಯ್ಯನವರ ಕನಸಿಗೆ ನೀರೆರೆದವರು ನಾಲ್ವಡಿ ಕೃಷ್ಣರಾಜ ಒಡೆಯರ್. ಅದಕ್ಕೆ ಬೇಕಿದ್ದ ಸಂಪನ್ಮೂಲಗಳನ್ನು ಕ್ರೋಡೀಕರಿಸಿಕೊಂಡು, ಜರ್ಮನ್ ತಂತ್ರಜ್ಞರ ನೆರವು ಪಡೆದು ಇನ್ನೇನು ಕಾರ್ಖಾನೆ ಆರಂಭವಾಗಬೇಕೆನ್ನುವ ಹೊತ್ತಿಗೆ ಬ್ರಿಟನ್ ಸರ್ಕಾರ ಅನುಮತಿ ನೀಡಲಿಲ್ಲ. ಭಾರತದಲ್ಲಿ ಕಾರು ಉದ್ದಿಮೆ ಆರಂಭವಾದರೆ ತನ್ನ ದೇಶದಿಂದಾಗುವ ರಫ್ತಿಗೆ ಹೊಡೆತ ಬೀಳುತ್ತದೆನ್ನುವ ಭೀತಿ, ಜತೆಗೆ ಭಾರತದಲ್ಲಿ ಕೈಗಾರಿಕಾ ಅಭಿವೃದ್ಧಿ ನಡೆಯಬಾರದೆಂಬ ಹುನ್ನಾರವೂ ಇದರ ಹಿಂದಿತ್ತು. ದ್ವಿತೀಯ ಮಹಾಯುದ್ಧದ ಸಂದರ್ಭದಲ್ಲಿ ವಿಮಾನಗಳ ಬಳಕೆ ಹೆಚ್ಚಾದಂತೆ, ರಿಪೇರಿ ಕೇಂದ್ರವೊಂದನ್ನು ಭಾರತದಲ್ಲಿ ಆರಂಭಿಸುವುದು ಸೂಕ್ತವೆಂದು ಬ್ರಿಟನ್ನಿಗೆ ಅನಿಸಿತು. ಬೆಂಗಳೂರಿನಲ್ಲಿ ಒಂದು ವಿಮಾನ ದುರಸ್ತಿ ಕಾರ್ಖಾನೆ ಆರಂಭಿಸುವ ಇಚ್ಛೆಯನ್ನು ಅದು ವ್ಯಕ್ತಪಡಿಸಿದಾಗ, ಮೈಸೂರು ಸರ್ಕಾರ ಮತ್ತು ಸೇಠ್ ವಾಲ್‌ಚಂದ್ ಹೀರಾಚಂದ ಅವರು ಬ್ರಿಟನ್ ಸರ್ಕಾರದೊಡನೆ ಒಡಂಬಡಿಕೆ ಮಾಡಿಕೊಂಡು ೧೯೪೦ರಲ್ಲಿ ಸ್ಥಾಪಿಸಿದ ಕಾರ್ಖಾನೆ 'ಹಿಂದೂಸ್ತಾನ್ ಏರ್‌ಕ್ರಾಫ್ಟ್ ಲಿಮಿಟೆಡ್'. ದೇಶದ ಮೊದಲ ಖಾಸಗಿ-

ಸರ್ಕಾರಿ ಸಹಭಾಗಿತ್ವದ ಕಾರ್ಖಾನೆಯಿದು. ಉದ್ಯಾನ ನಗರಿಯಾಗಿ, ವಿಜ್ಞಾನ ನಗರಿಯಾಗಿ ವಿಜೃಂಭಿಸುತ್ತಿದ್ದ ಬೆಂಗಳೂರಿಗೆ ವಿಮಾನ ನಗರಿಯೆಂಬ ಖ್ಯಾತಿಯನ್ನು ಎಚ್.ಎ.ಎಲ್. ತಂದುಕೊಟ್ಟಿತು. ಈ ಕೀರ್ತಿಯಲ್ಲಿ ಟಾಟಾ ಇನ್‌ಸ್ಟಿಟ್ಯೂಟ್‌ನ ಏರೋನಾಟಿಕಲ್ ಡಿಪಾರ್ಟ್‌ಮೆಂಟಿನ ಪಾಲು ಸಹಾ ಇದೆ.

ಇದೇ ಸಂದರ್ಭದಲ್ಲಿ ಮತ್ತೊಂದು ವಿಶೇಷ ಉಲ್ಲೇಖವನ್ನು ಮಾಡಲೇಬೇಕು. ಯುರೋಪ್ ದೇಶಗಳಲ್ಲಿ ಒಂದು ದಶಕಕ್ಕೂ ಹೆಚ್ಚು ಕಾಲ ಭೌತವಿಜ್ಞಾನದ ಮುಂಚೂಣಿ ವಿಷಯಗಳಲ್ಲಿ ಸಂಶೋಧನೆ ನಡೆಸುತ್ತಿದ್ದ ಡಾ. ಹೋಮಿ ಜಹಾಂಗೀರ್ ಬಾಬಾ ರಜೆಗೆಂದು ಬೆಂಗಳೂರಿಗೆ ಆಗಮಿಸಿದ್ದಾಗ, ಎರಡನೆಯ ಮಹಾಯುದ್ಧ ಆರಂಭವಾಯಿತು (೧೯೩೯). ವಾಪಸ್ ಹೋಗಲಾಗದೇ ಬೆಂಗಳೂರಿನಲ್ಲಿ ಉಳಿದಿದ್ದ ಬಾಬಾ ಅವರನ್ನು ಸರ್ ಸಿ.ವಿ. ರಾಮನ್ ಅವರು ಟಾಟಾ ಇನ್‌ಸ್ಟಿಟ್ಯೂಟ್‌ನ ಭೌತ ವಿಜ್ಞಾನ ವಿಭಾಗದ ರೀಡರ್ ಆಗಿ ನೇಮಕ ಮಾಡಿದರು. ಆ ಕಾಲದ ಪ್ರಧಾನ ಅಧ್ಯಯನ ವಿಷಯವಾಗಿದ್ದ 'ಕಾಸ್ಮಿಕ್ ಕಿರಣ ಭೌತವಿಜ್ಞಾನ'ಕ್ಕಾಗಿಯೇ ಒಂದು ಪ್ರತ್ಯೇಕ ಘಟಕವನ್ನು ಬಾಬಾ ಸ್ಥಾಪಿಸಿದರು. 'ಶಕ್ತಿವಂತನನ್ನು ಮಾತ್ರ ಮತ್ತೊಬ್ಬ ಶಕ್ತಿವಂತ ಗೌರವಿಸುತ್ತಾನೆ' ಎಂದು ಬಲವಾಗಿ ನಂಬಿದ್ದ ಬಾಬಾ, ಭಾರತದಲ್ಲಿ ಪರಮಾಣು ಶಕ್ತಿಗೆ ಸಂಬಂಧಿಸಿದ ಪ್ರಯೋಗಶಾಲೆಯನ್ನು ಆರಂಭಿಸಲು ಉತ್ಸುಕರಾದರು. ಅವರ ಕೋರಿಕೆಯನ್ನು ಮನ್ನಿಸಿದ ಟಾಟಾ ಟ್ರಸ್ಟ್, ೧೯೪೪ರಲ್ಲಿ ಟಾಟಾ ಇನ್‌ಸ್ಟಿಟ್ಯೂಟ್ ಆವರಣದಲ್ಲಿ ಆರಂಭಿಸಿದ್ದು 'ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್'. ಮುಂದಿನ ದಿನಗಳಲ್ಲಿ ಇದು ಪರಮಾಣು ಶಕ್ತಿ ಪ್ರಯೋಗಶಾಲೆಗಳನ್ನು ಭಾರತದಲ್ಲಿ ಹುಟ್ಟುಹಾಕಿದ ಮಾತೃಸಂಸ್ಥೆಯಾಯಿತು.

ಸ್ವಾತಂತ್ರ್ಯಾನಂತರ ಶರಾವತಿ ಕೊಳ್ಳದಿಂದ ಉತ್ಪತ್ತಿಯಾಗುತ್ತಿದ್ದ ಹೆಚ್ಚಿನ ವಿದ್ಯುತ್ತು ಕೈಗಾರಿಕೆಗಳಿಗೆ ಪೂರಕವಾದ ಪರಿಸರ, ಹಿತಕರ ವಾತಾವರಣ... ಇವೆಲ್ಲ ಕಾರಣಗಳಿಂದ ಬೆಂಗಳೂರಿನಲ್ಲಿ ಬೃಹತ್ ಸಾರ್ವಜನಿಕ ವಲಯದ ಉದ್ದಿಮೆಗಳು ಆರಂಭವಾದವು. ಇವುಗಳಲ್ಲಿ ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್, ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ಹಿಂದೂಸ್ತಾನ್ ಮೆಶಿನ್ ಟೂಲ್ಸ್, ಭಾರತ್ ಹೆವಿ ಎಲೆಕ್ಟ್ರಿಕಲ್ಸ್ ಲಿಮಿಟೆಡ್ ಪ್ರಮುಖವಾದವುಗಳು. ಹಾಗೆಯೇ ಮೈಸೂರು ರಾಜ್ಯಸರ್ಕಾರ ಹೊಸದಾಗಿ ಸ್ಥಾಪಿಸಿದ ಗವರ್ನ್‌ಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ, ಸ್ವಾತಂತ್ರ್ಯಪೂರ್ವದಲ್ಲಿಯೇ ಸ್ಥಾಪಿಸಿದ್ದ ಭದ್ರಾವತಿ ಐರನ್ ಅಂಡ್ ಸ್ಟೀಲ್ಸ್, ಮೈಸೂರು ಪೇಪರ್ ಮಿಲ್ಸ್, ಕೋಲಾರದ ಚಿನ್ನದ ಗಣಿಗಳು ದೇಶದೆಲ್ಲೆಡೆ ಪ್ರಖ್ಯಾತಗೊಂಡವು. ಇವೆಲ್ಲವುಗಳಿಗೆ ಪೂರಕವಾಗಿ ಖಾಸಗಿ ಆಡಳಿತದ ನೂರಾರು ಕೈಗಾರಿಕೆಗಳು ಸ್ಥಾಪನೆಯಾದವು. ಪಶುವೈದ್ಯ ವಿಜ್ಞಾನ, ಜಾನುವಾರು ಸಂವರ್ಧನೆ, ತೋಟಗಾರಿಕೆಗಳಿಗೆ ಸಂಬಂಧಿಸಿದ ಪ್ರತ್ಯೇಕ ಶಿಕ್ಷಣ ಸಂಸ್ಥೆಗಳನ್ನು ಸರ್ಕಾರ ಆರಂಭಿಸಿತು. ದೇಶದಲ್ಲಿಯೇ ಮೊದಲ ಖಾಸಗಿ ಎಂಜಿನಿಯರಿಂಗ್ ಕಾಲೇಜನ್ನು ೧೯೪೬ರಲ್ಲಿಯೇ ಬಿ.ಎಂ. ಶ್ರೀನಿವಾಸಯ್ಯನವರು ಬೆಂಗಳೂರಿನಲ್ಲಿ ಸ್ಥಾಪಿಸಿದರು. ಮೆಶಿನ್‌ಟೂಲ್ಸ್ ಸಂಶೋಧನೆಗೆ ಸಂಬಂಧಿಸಿದ 'ಸಿ.ಎಂ.ಟಿ.ಐ.', ವಿದ್ಯುತ್ತಿಗೆ ಸಂಬಂಧಿಸಿದ ಸಂಶೋಧನೆಗೆಂದು ಆರಂಭಗೊಂಡ 'ಸಿ.ಪಿ.ಆರ್.ಐ.', ಲಿಕ್ವಿಡ್ ಕ್ರಿಸ್ಟಲ್ಸ್ ಸಂಶೋಧನಾಲಯ

'ಸಾಫ್ಟ್ ಮ್ಯಾಟರ್ ರಿಸರ್ಚ್ ಸೆಂಟರ್', ರೇಡಾರ್‌ಗಳ ಅಭಿವೃದ್ಧಿಗೆಂದು ಆರಂಭಗೊಂಡ 'ಎಲ್.ಆರ್.ಡಿ.ಇ' ವಿಜ್ಞಾನ ಸಂಸ್ಥೆಗಳ ದಾಖಲಾತಿ ಪಟ್ಟಿಯನ್ನು ಹಿಗ್ಗಿಸುತ್ತವೆ.

ಅಹ್ಮದಾಬಾದ್ ಹಾಗೂ ತಿರುವನಂತಪುರದಲ್ಲಿ (ತುಂಬಾ) ಬಾಹ್ಯಾಕಾಶ ಸಂಶೋಧನೆಗಳನ್ನು ಆರಂಭಿಸಿದ್ದ 'ಇಸ್ರೋ' ತನ್ನ ಮುಖ್ಯ ಕಛೇರಿ ಹಾಗೂ ಹಲವಾರು ಪ್ರಮುಖ ಸಂಶೋಧನಾ ಕೇಂದ್ರಗಳನ್ನು ಬೆಂಗಳೂರಿನಲ್ಲಿ ಸ್ಥಾಪಿಸಿತು. ಇದೇ ಸಮಯದಲ್ಲಿ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿ.ಆರ್.ಡಿ.ಓ.) ವಿಮಾನಕ್ಕೆ ಸಂಬಂಧಿಸಿದ ಎಲ್ಲ ಪ್ರಯೋಗಶಾಲೆಗಳನ್ನೂ ಬೆಂಗಳೂರಿಗೆ ವರ್ಗಾಯಿಸಿತು. ಇತ್ತ ವೈಜ್ಞಾನಿಕ ಹಾಗೂ ಔದ್ಯಮಿಕ ಸಂಶೋಧನಾ ಕೌನ್ಸಿಲ್ (ಸಿ.ಎಸ್.ಐ.ಆರ್.) ತನ್ನ ವೈಮಾಂತರಿಕ್ಷ ಪ್ರಯೋಗಶಾಲೆಗಳನ್ನು ಬೆಂಗಳೂರಿಗೆ ವರ್ಗಾಯಿಸಿತು. ಹಾಗೆಯೇ ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್‌ಗೆ ಸಂಬಂಧಿಸಿದ ಪ್ರಯೋಗಶಾಲೆಗಳನ್ನು ಬೆಂಗಳೂರಿನಲ್ಲಿ ಸ್ಥಾಪಿಸಿತು. ವೈಮಾನಿಕ ಹಾಗೂ ಬಾಹ್ಯಾಕಾಶಕ್ಕೆ ಸಂಬಂಧಿಸಿದ ಶಿಕ್ಷಣ ಸಂಸ್ಥೆಗಳು, ಸಂಶೋಧನಾ ಸಂಸ್ಥೆಗಳು ಹಾಗೂ ಕೈಗಾರಿಕೆಗಳು ಬೆಂಗಳೂರಿಗೆ ವರ್ಗಾಯಿಸಿತು. ಇದ್ದ ಕಾರಣ, 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಆಸ್ಟ್ರೋಫಿಸಿಕ್ಸ್' ತನ್ನ ಮುಖ್ಯ ಕಚೇರಿಯನ್ನು ೧೯೭೫ರಲ್ಲಿ ಬೆಂಗಳೂರಿಗೆ ಬದಲಿಸಿ ಕೊಂಡಿತು. ವಿಮಾನ ನಗರಿಯಾಗಿದ್ದ ಬೆಂಗಳೂರು ಎಲೆಕ್ಟ್ರಾನಿಕ್ಸ್ ನಗರಿಯಾಯಿತು. ನೋಡ ನೋಡುತ್ತಿದ್ದಂತೆ ಏರೋಸ್ಪೇಸ್ ನಗರವಾಗಿ ಬದಲಾಯಿತು. ವಾಯುಪಡೆಯ ತರಬೇತಿ ಕೇಂದ್ರಗಳು ಹೆಬ್ಬಾಳ, ಜಾಲಹಳ್ಳಿ, ಯಲಹಂಕಗಳಲ್ಲಿ ವಿಸ್ತರಿಸಿಕೊಂಡು ತರಬೇತಿ ಕಮ್ಯಾಂಡ್ ಬೆಂಗಳೂರಿಗೇ ಬರುವಂತೆ ಮಾಡಿತು.

ಹೀಗೆಯೇ ಏರಿತು, ಹಾರಿತು ಬೆಂಗಳೂರಿನ ವಿಜ್ಞಾನ-ತಂತ್ರಜ್ಞಾನ ಬಾವುಟ. ೧೯೭೦ರ ದಶಕದಲ್ಲಿ ಆರಂಭವಾದ ಪೀಣ್ಯ ಕೈಗಾರಿಕಾ ಪ್ರದೇಶ ಆಗ್ನೇಯ ಏಶಿಯಾದಲ್ಲಿಯೇ ಅತಿ ದೊಡ್ಡದಾದ, ಸುಮಾರು ೪೦೦೦ಕ್ಕೂ ಹೆಚ್ಚು ಕಾರ್ಖಾನೆಗಳ ಸಮುಚ್ಚಯ. ೧೯೯೦ರ ದಶಕದಲ್ಲಿ ಆರಂಭವಾದ 'ಟೆಕ್ಸಾಸ್ ಇನ್‌ಸ್ಟ್ರುಮೆಂಟ್ಸ್' ಐ.ಟಿ. ಕ್ಷೇತ್ರದ ಮೊದಲ ಎಂ.ಎನ್.ಸಿ. ಅದೇ ಸಮಯದಲ್ಲಿ ಆರಂಭಗೊಂಡ ಭಾರತೀಯ ಎಂ.ಎನ್.ಸಿ. ಗಳೆಂದರೆ 'ಇನ್‌ಫೋಸಿಸ್' ಹಾಗೂ 'ವಿಪ್ರೋ'. ಇವೆಲ್ಲವೂ ಐ.ಟಿ. ಶಕೆಗೆ ನಾಂದಿ ಹಾಡಿ, ಬೆಂಗಳೂರನ್ನು ಮಾಹಿತಿ ತಂತ್ರಜ್ಞಾನ ನಗರವನ್ನಾಗಿಸಿದವು. ದೇಶದ ಹೆಮ್ಮೆಯ ಉನ್ನತ ವಿಜ್ಞಾನ ಸಂಸ್ಥೆಗಳ ಪಟ್ಟಿಯಲ್ಲಿ ಬೆಂಗಳೂರಿನ 'ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್' (೧೯೮೮) ಹಾಗೂ 'ಜವಹರಲಾಲ್ ನೆಹರು ಸೆಂಟರ್ ಫಾರ್ ಅಡ್ವಾನ್ಸ್ಡ್ ಸೈಂಟಿಫಿಕ್ ರಿಸರ್ಚ್' (೧೯೮೯) ಗಳನ್ನು ಮರೆಯದೆಯೇ ಸೇರಿಸಬೇಕು. ಮಾನಸಿಕ ಆರೋಗ್ಯ ಸಂಶೋಧನೆಯಲ್ಲಿ ಜಗದ್ವಿಖ್ಯಾತವಾದ 'ನಿಮ್ಹಾನ್ಸ್' ಬೆಂಗಳೂರಿನ ಅತ್ಯಂತ ಹಳೆಯ ಸಂಶೋಧನಾಲಯ. ಹಾಗೆಯೇ ಸೇಂಟ್ ಜೋಸೆಫ್ ಕಾಲೇಜು, ನ್ಯಾಷನಲ್ ಕಾಲೇಜು, ವಿಜಯಾ ಕಾಲೇಜುಗಳು ವಿಜ್ಞಾನ ಬೋಧನೆಗೆ ಖಾಸಗಿ ಪ್ರಯತ್ನಗಳ ದ್ಯೋತಕಗಳು. ಮಾದರಿ ರಾಜ್ಯವಾಗಿದ್ದ ಮೈಸೂರು ಕರ್ನಾಟಕವೆಂದು ಹೆಸರು ಬದಲಿಸಿಕೊಳ್ಳುವ ಹೊತ್ತಿಗೆ ಇಡೀ ಭಾರತದ ಹೆಮ್ಮೆಯ ವಿಜ್ಞಾನ-ತಂತ್ರಜ್ಞಾನ

ರಾಜಧಾನಿಯಾಗಿ ಪರಿವರ್ತನೆಗೊಂಡಿತು. ಇದೀಗ ಕಲಶಪ್ರಾಯವಾಗಿ ಚಿತ್ರದುರ್ಗ ಸಮೀಪದ ಚಳ್ಳಕೆರೆಯಲ್ಲಿ ೧೧,೫೦೦ ಎಕರೆ ಪ್ರದೇಶವನ್ನು ವಿಜ್ಞಾನ-ತಂತ್ರಜ್ಞಾನ ಸಂಶೋಧನೆಗೆಂದು ಮೀಸಲಾಗಿ ಇಡಲಾಗಿದೆ. ಅಂದಿನ 'ಟಾಟಾ ಇನ್‌ಸ್ಟಿಟ್ಯೂಟ್' ಹಾಗೂ ಇಂದಿನ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್', 'ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ' (ಡಿ.ಆರ್.ಡಿ.ಓ.), 'ಭಾರತೀಯ ಬಾಹ್ಯಕಾಶ ಸಂಶೋಧನಾ ಸಂಸ್ಥೆ' (ಐ.ಎಸ್.ಆರ್.ಓ.), 'ಬಾಬಾ ಅಟಾಮಿಕ್ ರಿಸರ್ಚ್ ಸೆಂಟರ್' (ಬಿ.ಎ.ಆರ್.ಸಿ.) 'ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗಶಾಲೆ' (ಎನ್.ಎ.ಎಲ್.)ಗಳು ತಮ್ಮ ದ್ವಿತೀಯ ಕ್ಯಾಂಪಸ್ಸುಗಳನ್ನು ಈ ವಿಜ್ಞಾನ ನಗರದಲ್ಲಿ ಆರಂಭಿಸುತ್ತಿವೆ. ಬೆಂಗಳೂರು ನಗರದಲ್ಲಿ ಸುಮಾರು ನಾಲ್ಕು ನೂರು ವಿಜ್ಞಾನ ಸಂಶೋಧನಾ ಪ್ರಯೋಗಶಾಲೆಗಳಿವೆ. ಜೈವಿಕ ವಿಜ್ಞಾನಕ್ಕೆ ಸಂಬಂಧಿಸಿದ ಇನ್ನೂರು ಸಂಸ್ಥೆಗಳು ಬೆಂಗಳೂರಿನಲ್ಲಿವೆ. ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ನೂರು ಕೋಟಿ ರೂಪಾಯಿಗಳ ಬಂಡವಾಳದಲ್ಲಿ ವಿಜ್ಞಾನ-ತಂತ್ರಜ್ಞಾನ ಸಂಶೋಧನಾ ಕೇಂದ್ರದ ಕಟ್ಟಡ ನಿರ್ಮಾಣವಾಗುತ್ತಿದೆ. ಇವೆಲ್ಲ ಬೆಂಗಳೂರಿನ ಮುಡಿಗೇರಿಸಿರುವ ಹಲವು ಬಣ್ಣದ ಗರಿಗಳಾಗಿವೆ.

ಎಲ್ಲೋ ಹಚ್ಚಿದ ಹಣತೆ, ಯಾರೋ ಸ್ವಿಚ್ ಒತ್ತಿದ ವಿದ್ಯುದ್ದೀಪ, ರೋಗ-ರುಜಿನ ನಿವಾರಿಸಲು ಚುಚ್ಚಿದ ಮದ್ದು, ಗಿಡ-ಮರಗಳು ಹಾಳಾಗದಿರಲೆಂದು ಹಚ್ಚಿದ ಲೇಪನ ಮೈಗೆ ಸುವಾಸನೆ ಪೂಸಲು ಮೆತ್ತಿದ ಎಣ್ಣೆ, ಕೊಳೆ ತೊಳೆದ ಹೊಳೆವ ಸಾಬೂನು, ಸೂರಿನ ಭದ್ರತೆಯನ್ನು ಖಚಿತಪಡಿಸಿದ ಉಕ್ಕು, ವಿದ್ಯಾಭ್ಯಾಸ ನಮ್ಮ ಹಕ್ಕು ಎಂದು ಸಾರಿದ ಶಿಕ್ಷಣ ಸಂಸ್ಥೆ, ದೇಶ ರಕ್ಷಣೆಗೆ ಬದ್ಧವಾದ ಸೈನಿಕ ತರಬೇತಿ ಕೇಂದ್ರ, ವೈಮಾನಿಕ ಸಂಶೋಧನೆಯಿಂದ ದೇಶದ ಕೀರ್ತಿಯನ್ನು ಜಗದಗಲ ಹೆಚ್ಚಿಸಿದ ಕಾರ್ಖಾನೆ, ಅರಮನೆಯಲ್ಲಿ ಸಿಕ್ಕ ಸ್ಥಾನವನ್ನು ರಾಜ್ಯದ ಮಾನವನ್ನು ಹೆಚ್ಚಿಸಲು ಬಳಸಿದ ದಿವಾನರು ಹೀಗೆ, ಶಕ್ತಿವಂತನನ್ನು ಮತ್ತೊಬ್ಬ ಶಕ್ತಿವಂತ ಗುರುತಿಸಿದಂತೆ ವಿಜ್ಞಾನಿಯನ್ನು ಮತ್ತೊಬ್ಬ ತತ್ವಜ್ಞಾನಿ ಬೆಳೆಸಿದ ಕತೆ. ಇದನ್ನು ಹೋರಾಟವೆನ್ನಿ, ಚಳವಳಿಯೆನ್ನಿ, ದೇಶ ಕಟ್ಟುವ ಕೆಲಸವೆನ್ನಿ, ಸ್ವಾರ್ಥರಹಿತ ಸೇವೆಯೆನ್ನಿ... ಯಾವುದೇ ಒಂದು ಪ್ರಾಂತ್ಯ, ಸಂಸ್ಥಾನ, ರಾಜ್ಯ ಕೊನೆಗೆ ದೇಶ ಹೆಮ್ಮೆ ಪಡುವ ಕಾರ್ಯ ನಾವು ಹುಟ್ಟಿದ ನೆಲದಲ್ಲೇ ಜರುಗಿದೆ.





ಕರ್ನಾಟಕದ ಕೈಗಾರಿಕೋದ್ದಿಮೆಗಳು

■ **ಕೆ.ಎನ್. ಭಗವಾನ್**

ಒಂದು ನಾಡಿನ ಅಥವಾ ದೇಶದ ಆರ್ಥಿಕ ಪ್ರಗತಿಯಲ್ಲಿ ಉದ್ಯಮಗಳು ಮಹತ್ವದ ಪಾತ್ರ ವಹಿಸುತ್ತವೆಂಬುದು ಎಲ್ಲ ಕಾಲದ ಸತ್ಯ. 'ಕೈಗಾರಿಕೆ' ಎಂದರೆ ಕೈಯಿಂದ ಮಾಡುವ ಕೌಶಲಪೂರ್ಣ ಕೆಲಸ ಅಥವಾ ಕಸುಬು ಎಂದು ಸರಳವಾಗಿ ಅರ್ಥೈಸಬಹುದಾದರೂ, ಆಧುನಿಕ ಕಾಲಘಟ್ಟದಲ್ಲಿ ಅದರ ಅರ್ಥ ತುಂಬಾ ವಿಸ್ತಾರವಾದುದು. ಆಧುನಿಕ ತಂತ್ರಜ್ಞಾನವನ್ನು ಬಳಸಿ, ಕಚ್ಚಾ ವಸ್ತುವನ್ನು ಸಿದ್ಧವಸ್ತುವನ್ನಾಗಿ ಮಾಡುವ ಕಾರ್ಯವಿಧಾನವೇ ಕೈಗಾರಿಕಾ ಸ್ಥಾಪನೆಯ ಮುಖ್ಯಗುರಿ. ಆದಷ್ಟೂ ಕಡಿಮೆ ಅವಧಿಯಲ್ಲಿ ಹೆಚ್ಚು ಸಂಖ್ಯೆಯ ವಸ್ತುಗಳನ್ನು ಉತ್ಪಾದಿಸುವುದು ಹಾಗೂ ಅವುಗಳನ್ನು ಶೀಘ್ರಗತಿಯಲ್ಲಿ ಮಾರಾಟ ಮಾಡುವುದು ವಿವೇಚನಾಯುತ ಉದ್ಯಮಪತಿಯ ಉದ್ದೇಶ.

ಪ್ರಾಚೀನ ಕಾಲದಿಂದಲೂ ನಮ್ಮ ದೇಶದಲ್ಲಿ ಮುಖ್ಯ ಕಸುಬಾಗಿದ್ದ ಕೃಷಿಗೆ ಗೃಹ ಕೈಗಾರಿಕೆಗಳು ಪೂರಕವಾಗಿದ್ದವು. ಒಂದು ಅರ್ಥದಲ್ಲಿ ಈ ಗೃಹ ಕೈಗಾರಿಕೆಗಳು ಕುಲಕಸುಬುಗಳೇ ಆಗಿದ್ದವು. ಅಂದರೆ ನಿರ್ದಿಷ್ಟ ಕುಟುಂಬಗಳು ವಂಶಪಾರಂಪರ್ಯವಾಗಿ ರೂಢಿಸಿಕೊಂಡು ಬರುತ್ತಿದ್ದ ಕಸುಬುಗಳು. ಕ್ರಮೇಣ ಇಂಥ ಕುಲಕಸುಬುಗಳ ಕುಟುಂಬಗಳು 'ಜಾತಿ' ಎನಿಸಿದವು. ಇಂಥ ಪದ್ಧತಿಯು ನಮ್ಮ ದೇಶಕ್ಕೆ ಮಾತ್ರ ಸೀಮಿತವಾಗಿದ್ದುದಲ್ಲ. ಇಂಗ್ಲೆಂಡ್‌ನಲ್ಲಿ ಇಂದಿಗೂ ಗುರ್ತಿಸಲ್ಪಡುವ ಕಾರ್ಪೆಂಟರ್ ಬುಚರ್, ಬಾರ್ಬರ್, ಬಿಷಪ್, ಸ್ಮಿತ್ ಮುಂತಾದ ಕುಲ ನಾಮಗಳನ್ನು ಕಾಣಬಹುದಾಗಿದೆ. ಆದರೆ ಅಲ್ಲಿ ಉಚ್ಚ–ನೀಚ, ಸ್ಪೃಶ್ಯ–



ಅಸ್ಪೃಶ್ಯ ಎಂಬ ಸಾಮಾಜಿಕ ಕಂದಕಗಳು ಏರ್ಪಡಲಿಲ್ಲ ಅಷ್ಟೆ. ಇಂದು ಅದೇ ಕುಲಕಸುಬುಗಳು ಸಾರ್ವಜನಿಕವಾಗಿ ರೂಪುಗೊಂಡು 'ಕೈಗಾರಿಕೆ' ಎನಿಸಿವೆ. 'ಕುಲ' ಅಥವಾ 'ಜಾತಿ' ಎಂಬ ಪದಗಳು ಕೈಗಾರಿಕಾ ಕ್ರಾಂತಿಯಿಂದ ಹಿಂದಿನ ಅರ್ಥ ಕಳೆದುಕೊಂಡಿವೆ.

ಕರ್ನಾಟಕದ ಕೈಗಾರಿಕಾ ಇತಿಹಾಸ ಬಹು ವಿಶಿಷ್ಟವಾದದ್ದು. ಅದಕ್ಕೆ ಪ್ರೇರಕ ಪೂರಕವಾದ ಪ್ರಕೃತಿ ಸಂಪತ್ತು, ಹವಾಮಾನ ವೈವಿಧ್ಯಮಯವಾದದ್ದು. ಪೂರ್ವ-ಪಶ್ಚಿಮ ಘಟ್ಟಗಳಲ್ಲಿ ಹೇರಳವಾಗಿ ಲಭ್ಯವಿರುವ ಖನಿಜಗಳು, ಪಶ್ಚಿಮ ಘಟ್ಟಗಳಲ್ಲಿ ಹುಟ್ಟುವ ನದಿಗಳು ಸೃಷ್ಟಿಸಿರುವ ಜಲಪಾತಗಳು, ಪಶ್ಚಿಮ ಕರಾವಳಿಯ ಸಾಗರೋತ್ಪನ್ನಗಳು ಮಲೆನಾಡಿನ ಸಮೃದ್ಧ ಕಾಡು-ಇವೆಲ್ಲ ಹಲಬಗೆಯ ಕೈಗಾರಿಕೋದ್ಯಮಗಳಿಗೆ ಮುಖ್ಯ ಸೆಲೆಗಳಾಗಿವೆ. ಕರ್ನಾಟಕದಲ್ಲಿ, ಅದರಲ್ಲೂ ಮುಖ್ಯವಾಗಿ ಮೈಸೂರು ಸಂಸ್ಥಾನದಲ್ಲಿ ಕೈಗಾರಿಕೀಕರಣ ಎಂದಾಗಲೆಲ್ಲ 'ಭಾರತ ರತ್ನ' ಸರ್ ಎಂ. ವಿಶ್ವೇಶ್ವರಯ್ಯ, ದಿವಾನ್ ಮಿರ್ಜಾ ಇಸ್ಮಾಯಿಲ್ ಹಾಗೂ ೩೬ ವರ್ಷಗಳ ಕಾಲ ಎಲ್ಲ ಪ್ರಗತಿಪರ ಯೋಜನೆಗಳ ಪೋಷಕರಾಗಿದ್ದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಹೆಸರುಗಳು ಥಟ್ಟನೆ ನೆನಪಿಗೆ ಬರುತ್ತವೆ.

ರಾಜ್ಯದ ಆರಂಭಿಕ ಉದ್ದಿಮೆಗಳು: ನಮ್ಮ ರಾಜ್ಯದಲ್ಲಿ ಬೆಳೆದು ಬಂದ ಉದ್ದಿಮೆಗಳನ್ನು ನಾಲ್ಕು ಕಾಲಘಟ್ಟಗಳಿಂದ ಗುರ್ತಿಸಬಹುದು. ಹೈದರಾಬಾದ್ ನಿಜಾಮರ ಮತ್ತು ಟಿಪ್ಪು ಸುಲ್ತಾನ್-ಇವರ ಆಡಳಿತ ಕಾಲದಲ್ಲಿ ಅಭಿವೃದ್ಧಿಗೊಂಡ ಹತ್ತಿ ಮತ್ತು ರೇಷ್ಮೆ ಕೈಗಾರಿಕೆಗಳು, ಬ್ರಿಟಿಷರು ಮತ್ತು ಮೈಸೂರು ಅರಸರು ಆರಂಭಿಸಿದ ಆಧುನಿಕ ಉದ್ಯಮಗಳು, ಸ್ವಾತಂತ್ರ್ಯಾನಂತರದಲ್ಲಿ ಸ್ಥಾಪನೆಗೊಂಡ ಸಾರ್ವಜನಿಕ ಉದ್ದಿಮೆಗಳು ಹಾಗೂ ಜಾಗತೀಕರಣೋತ್ತರ ಉದ್ದಿಮೆಗಳು ಹೀಗೆ.

ರಾಜ್ಯದಲ್ಲಿ ಬೆಳೆದ ಸಾಂಬಾರ ಪದಾರ್ಥಗಳು, ಶ್ರೀಗಂಧ, ತೇಗ, ರೇಷ್ಮೆ, ಹತ್ತಿ ಮುಂತಾದ ಬೆಳೆಗಳನ್ನು ಸರ್ಕಾರದಿಂದಲೇ ಖರೀದಿಸಿ, ಅವುಗಳನ್ನು ಶ್ರೀರಂಗಪಟ್ಟಣ ಬೆಂಗಳೂರು ಮುಂತಾದ ಕಡೆಗಳಲ್ಲಿ ಶೇಖರಿಸಿ ವಿದೇಶಗಳಲ್ಲಿ ಉತ್ತಮ ಬೆಲೆಗೆ ಮಾರಿ ರಾಜ್ಯದ ಬೊಕ್ಕಸ ತುಂಬಿಸುತ್ತಿದ್ದ ಟಿಪ್ಪುಸುಲ್ತಾನನ ಆರ್ಥಿಕನೀತಿಯನ್ನು ಹಲವು ಅರ್ಥಶಾಸ್ತ್ರಜ್ಞರೂ ಪ್ರಶಂಸಿಸಿದ್ದಾರೆ. ಆ ದಿನಗಳಲ್ಲಿ ಶ್ರೀಗಂಧದ ಮರಗಳನ್ನು ಶೇಖರಿಸಿ ಇಡುತ್ತಿದ್ದ ಪ್ರದೇಶವು 'ಶ್ರೀಗಂಧದ ಕೋಠಿ' ಎಂದೇ ಹೆಸರಾಗಿತ್ತು. ಟಿಪ್ಪುಸುಲ್ತಾನ್ ಕನಕಪುರದ ಬಳಿಯಲ್ಲಿರುವ ತೊರೆಕಾಡನ ಹಳ್ಳಿಯಲ್ಲಿ ರಾಕೆಟ್ಟಿನ ಕಾರ್ಖಾನೆ ಸ್ಥಾಪಿಸಿದ್ದನೆಂದು ಹೇಳಲಾಗುತ್ತದೆ. ರಾಕೆಟ್ ತಯಾರಿಕೆಯ ತಂತ್ರಜ್ಞಾನ ಪ್ರಾಯಶಃ ಫ್ರೆಂಚ್ ವಿಜ್ಞಾನಿಗಳದ್ದಿರಬಹುದು. ಏಕೆಂದರೆ ಈಗಿನ ಪಾಂಡವಪುರ ಆಗ ಫ್ರೆಂಚರ ವಸಾಹತು ನೆಲೆಯಾಗಿದ್ದು, ಅದನ್ನು 'ಫ್ರೆಂಚ್ ರಾಕ್ಸ್' ಅಂತಲೇ ಕರೆಯಲಾಗುತ್ತಿತ್ತು.

ಟಿಪ್ಪು ಸ್ಥಾಪಿಸಿದ ಇತರೆ ಉದ್ದಿಮೆಗಳು-ಗಂಜಾಂ ಬಳಿಯಲ್ಲಿ ತುಪಾಕಿಗಳನ್ನು ಎಳೆಯಬಲ್ಲ ಎತ್ತಿನಗಾಡಿಗಳ ಕಾರ್ಖಾನೆ, ಕುಣಿಗಲ್‌ನಲ್ಲಿ ಅರಬ್-ಮಹಾರಾಷ್ಟ್ರ ಕುದುರೆಗಳ ಹೈಬ್ರಿಡ್ ಕೇಂದ್ರ, ಮಂಗಳೂರು ಬಳಿಯ ಹಡಗು ನಿರ್ಮಾಣ ಕಟ್ಟೆ, ಪಾಲಹಳ್ಳಿ (ಮೈಸೂರು ಬಳಿ)ಯಲ್ಲಿ ಒಂದು ಸಕ್ಕರೆ ಕಾರ್ಖಾನೆ, ಬನ್ನೂರು ಬಳಿ 'ಬಂಡೂರು ಕುರಿ'

ತಳಿಯ ಪ್ರಯೋಗಶಾಲೆ ಇತ್ಯಾದಿ. ಇದಲ್ಲದೆ ಇನ್ನೊಂದು ವಾಣಿಜ್ಯ ಉದ್ಯಮವಾದ 'ರೇಷ್ಮೆ'ಯನ್ನು ದೂರದ ಚೀನಾದಿಂದ ತರಿಸಿ, ಕೃಷಿಕರಿಗೆ ಪರಿಚಯಿಸಿದ್ದ. ರಾಮನಗರ ಚನ್ನಪಟ್ಟಣ, ಕುಣಿಗಲ್ ಮುಂತಾದ ಕಡೆಗಳಲ್ಲಿ ರೇಷ್ಮೆಯ ನೂಲು ಮತ್ತು ರೇಷ್ಮೆ ಕೈಗಾರಿಕೆಗಳನ್ನು ಸ್ಥಾಪಿಸಲು ಅಗತ್ಯ ನೆರವು ನೀಡಿದ.

ಇನ್ನು ನಿಜಾಮರ ಆಳ್ವಿಕೆಯಲ್ಲಿದ್ದ ಗುಲಬರ್ಗಾದಲ್ಲಿ ೧೮೮೪ರ ಹೊತ್ತಿಗಾಗಲೇ ಸರ್ಕಾರವು ಒಂದು ಹತ್ತಿಗಿರಣಿಯನ್ನು ಆರಂಭಿಸಿತ್ತು. ಇದೇ ವೇಳೆಯಲ್ಲಿ ಕೆಲವು ಆಂಗ್ಲ ಉದ್ಯಮಪತಿಗಳು ೧೮೮೯-೧೮೯೭ರ ಅವಧಿಯಲ್ಲಿ ಬೆಳಗಾವಿ ಜಿಲ್ಲೆಯ ಗೋಕಾಕದ ಬಳಿ ಒಟ್ಟು ೫ ಹತ್ತಿ ಗಿರಣಿಗಳನ್ನು ಸ್ಥಾಪಿಸಿದರು. ಘಟಪ್ರಭ ನದಿಯ ನೀರು ನಿರ್ಮಿಸುವ ಜಲಪಾತದ ಶಕ್ತಿಯಿಂದ ಟರ್ಬೈನುಗಳನ್ನು ತಿರುಗಿಸಿ, ಅದರಿಂದ ಹತ್ತಿ ಗಿರಣಿಗಳ ಯಂತ್ರಗಳನ್ನು ಚಲಿಸಲಾಗುತ್ತಿತ್ತು. ಈ ಜಲಚಕ್ರದ ಪರಿಕಲ್ಪನೆಯ ಮುಂದುವರಿದ ಪ್ರಯತ್ನವೇ ವಿದ್ಯುಚ್ಛಕ್ತಿ ಉತ್ಪಾದನಾ ಕೇಂದ್ರದ ಸ್ಥಾಪನೆ (೧೯೧೩ರಲ್ಲಿ). ಆದರೆ ಅದಕ್ಕೂ ಮುಂಚೆಯೇ (೧೯೦೨ರಲ್ಲಿ) ಶಿವನ ಸಮುದ್ರದಲ್ಲಿ ಕೆ. ಶೇಷಾದ್ರಿ ಅಯ್ಯರ್ ಪವರ್ ಹೌಸ್ ಕಾರ್ಯಾಚರಣೆಗೊಂಡಿತ್ತು.

ಜಲವಿದ್ಯುತ್ ಕೇಂದ್ರಗಳು ಮತ್ತು ಕೈಗಾರಿಕಾ ಅಭಿವೃದ್ಧಿ: ೧೯೦೨ರಲ್ಲಿ ಶಿವನಸಮುದ್ರದ ಬಳಿ ಕಾರ್ಯಾರಂಭ ಮಾಡಿದ ಜಲವಿದ್ಯುತ್ ಕೇಂದ್ರದ ಸ್ಥಾಪನೆಯಾಗಿದ್ದು ಕೋಲಾರದ ಚಿನ್ನದ ಗಣಿ ಪ್ರದೇಶಕ್ಕೆ ವಿದ್ಯುತ್ತನ್ನು ಪೂರೈಸಲು. ಬ್ರಿಟನ್ನಿನ ಜಾನ್ ಟೇಲರ್ ಸಂಸ್ಥೆಯು ಮೈಸೂರು ಸಂಸ್ಥಾನದ ಅನುಮತಿಯೊಂದಿಗೆ ಗಣಿಗಳಿಂದ ಚಿನ್ನವನ್ನು ತೆಗೆಯಲಾರಂಭಿಸಿತು. ಅದಕ್ಕೆ ಸಂಸ್ಥಾನದ ಪರ ಸಹಿ ಹಾಕಿದ್ದು ಮಹಾರಾಣಿ ನಂಜರಾಜಮ್ಮಣ್ಣಿಯವರು (ನಾಲ್ವಡಿ ಕೃಷ್ಣರಾಜಒಡೆಯರ ತಾಯಿ). ದಿವಾನ್ ಕೆ. ಶೇಷಾದ್ರಿ ಅಯ್ಯರ್ ಹಾಗೂ ಮೈಸೂರು ಸರ್ಕಾರದ ಉಪಮುಖ್ಯ ಎಂಜಿನಿಯರ್ ಆಗಿದ್ದ ಕರ್ನಲ್ ಡಿ.ಎಂ. ಕ್ಯಾಂಪ್‌ಬೆಲ್ ಅವರ ಅವಿರತ ಪರಿಶ್ರಮದಿಂದಾಗಿ ಯೋಜನೆಯು ಪೂರ್ಣಗೊಂಡಿತು. ದಿನಾಂಕ ೩೦-೬-೧೯೦೨ ಭಾರತದ ಕೈಗಾರಿಕಾ ಚರಿತ್ರೆಯಲ್ಲಿ ಸುವರ್ಣಾಕ್ಷರದಲ್ಲಿ ಬರೆದಿಡಬೇಕಾದ ದಿನ. ಶಿವನಸಮುದ್ರ ವಿದ್ಯುತ್ ಕೇಂದ್ರದಲ್ಲಿ ಆರು ಜನರೇಟರುಗಳಿಂದ ಉತ್ಪತ್ತಿಯಾದ ವಿದ್ಯುತ್ ೮೬ ಮೈಲಿಗಳ ದೂರಕ್ಕೆ ಹರಿದು 'ವಿಶ್ವದಾಖಲೆ' ನಿರ್ಮಿಸಿತು. ಕೆ.ಜಿ.ಎಫ್.ಗೆ ವಿದ್ಯುತ್ ಪೂರೈಕೆಯಾಗಿದ್ದು ೧೫-೭-೧೯೦೨ರಂದು.

ಕಾವೇರಿಯ ಎರಡನೇ ಹಂತದಲ್ಲಿ ಬೆಂಗಳೂರಿಗೆ ವಿದ್ಯುತ್ ಹರಿಸಲು ಅನುಮತಿ ದೊರಕಿದ್ದು ೩೦-೫-೧೯೦೪ರಂದು. ಶಿವನ ಸಮುದ್ರದ ಕೇಂದ್ರದಿಂದ ಬೆಂಗಳೂರಿನವರೆಗೆ ವಿದ್ಯುತ್ತನ್ನು ಹರಿಸಲು ಮೈಸೂರು ಸರ್ಕಾರವು ಸ್ವಂತ ಖರ್ಚಿನಲ್ಲಿ ಪ್ರತ್ಯೇಕ ಪ್ರಸರಣ ಮಾರ್ಗವನ್ನು ನಿರ್ಮಿಸಿಕೊಳ್ಳಬೇಕಾಯಿತು. ಇದರಿಂದಾಗಿ ೫-೮-೧೯೦೫ರಿಂದ ಬೆಂಗಳೂರು ವಿದ್ಯುದ್ದೀಪಗಳಿಂದ ಬೆಳಗಿತು. ಕಾವೇರಿ ೩ನೇ ಹಂತದ ಲಾಭ ಪಡೆದದ್ದು ಮೈಸೂರು ನಗರ. ೧೯೦೮ರಿಂದ ೧೯೩೪ರ ವೇಳೆಗೆ ಕಾವೇರಿ ಜಲವಿದ್ಯುತ್ ಯೋಜನೆಯು ವಿಸ್ತೀರ್ಣದ ೮ನೇ ಹಂತ ತಲುಪಿತು. ಅದರಿಂದ ಕೆ.ಜಿ.ಎಫ್. ಬೆಂಗಳೂರು, ಮೈಸೂರು ನಗರಗಳ ಹಲವಾರು ಉದ್ದಿಮೆಗಳು ವಿದ್ಯುತ್

ಪಡೆದುಕೊಳ್ಳಲು ಸಾಧ್ಯವಾಯಿತು. ಆ ಪೈಕಿ ಬಹುಮುಖ್ಯವಾದದ್ದು ೧೯೨೩ರಲ್ಲೇ ಆರಂಭಗೊಂಡಿದ್ದ ಭದ್ರಾವತಿಯ ಕಬ್ಬಿಣದ ಕಾರ್ಖಾನೆ. ಇದಕ್ಕಾಗಿ ಮೈಸೂರು-ಹಾಸನ ಪ್ರಸರಣ ಮಾರ್ಗವನ್ನು ನಿರ್ಮಿಸಿ, ೧೯-೨-೧೯೩೬ ರಂದು ವಿದ್ಯುತ್ ಪೂರೈಕೆ ಮಾಡಲಾಯಿತು.

೧೯೧೨ರ ವೇಳೆಗಾಗಲೇ ಬೆಂಗಳೂರಿನ ಬಿನ್ನಿಮಿಲ್, ರೈಲ್ವೆ ವರ್ಕ್‌ಷಾಪ್ ಎಂ.ಎಸ್.ಎಂ. ರೈಲ್ವೆ ಪಂಪಿಂಗ್ ಕೇಂದ್ರ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್-ವಿದ್ಯುಚ್ಛಕ್ತಿಯ ಬಳಕೆ ಮಾಡುತ್ತಿದ್ದವು. ೧೯೩೦ರ ಹೊತ್ತಿಗೆ ಬೆಂಗಳೂರಿನ ಸರ್ಕಾರಿ ಪಿಂಗಾಣಿ ಕಾರ್ಖಾನೆ, ಬೆಳಗೊಳದ 'ಮೈಸೂರು ರಸಗೊಬ್ಬರ ಮತ್ತು ರಾಸಾಯನಿಕ ಕಾರ್ಖಾನೆ' ಮತ್ತು 'ಮೈಸೂರು ರಸಾಯನಿಕ ಸಂಸ್ಥೆ' ಭದ್ರಾವತಿ ಕಬ್ಬಿಣ ಕಾರ್ಖಾನೆಯ ವಿದ್ಯುತ್ ಕುಲುಮೆ, ಹಾಸನದ 'ಮೈಸೂರು ವ್ಯವಸಾಯೋಪಕರಣ ಕಾರ್ಖಾನೆ' ಶಿವಮೊಗ್ಗದ ಬೆಂಕಿಪೊಟ್ಟಣ ಕಾರ್ಖಾನೆ, ಚಿಕ್ಕಮಗಳೂರಿನ ಕಾಫಿ ಸಂಸ್ಕರಣ ಕೇಂದ್ರ ಮೈಸೂರಿನ ವನಸ್ಪತಿ, ಕಲ್ನಾರು ಮತ್ತು ಕುಂಬಗಾರಿಕೆ ಕಾರ್ಖಾನೆಗಳು, ಇವುಗಳಿಗೆಲ್ಲಾ ವಿದ್ಯುಚ್ಛಕ್ತಿ ಸರಬರಾಜು ಆಗುತ್ತಿತ್ತು.

೧೯೧೬ರ ಹೊತ್ತಿಗೆ ಜೋಗ ಜಲಪಾತದಿಂದ ವಿದ್ಯುಚ್ಛಕ್ತಿ ಉತ್ಪಾದಿಸುವ ಆರಂಭಿಕ ರೂಪುರೇಷೆಗಳನ್ನು ಹಾಕಿದ, ಸರ್ ಎಂ.ವಿಶ್ವೇಶ್ವರಯ್ಯ, ವಿದ್ಯುತ್ ಉತ್ಪಾದನೆ ಮತ್ತು ಪ್ರಸರಣ ಮಾರ್ಗಗಳ ಕುರಿತಂತೆ ಸರ್ವೇಕ್ಷಣ ಕಾರ್ಯವನ್ನೂ ಆರಂಭಿಸಿ ೫ ಹಂತಗಳ ಕಾರ್ಯಯೋಜನೆಯನ್ನೂ ಸಿದ್ಧಪಡಿಸಿದರು. ಅದರ ಫಲವಾಗಿ ಜೋಗ್‌ನ ಮಹಾತ್ಮಾಗಾಂಧಿ ವಿದ್ಯುತ್ ಕೇಂದ್ರದ ಮೊದಲ ಘಟಕ ಅಂದಿನ ಮಹಾರಾಜರಾದ ಶ್ರೀ ಜಯಚಾಮರಾಜ ಒಡೆಯರ್‌ರಿಂದ ೨೧-೨-೧೯೪೮ರಂದು ಉದ್ಘಾಟಿಸಲ್ಪಟ್ಟಿತು. ಇದರಿಂದ ಬೆಂಗಳೂರಿನಲ್ಲಿಯೇ ಅಲ್ಲದೆ ರಾಜ್ಯದ ಹಲವಾರು ಕೇಂದ್ರಗಳಲ್ಲಿ ದೊಡ್ಡ ಮತ್ತು ಭಾರಿ ಪ್ರಮಾಣದ ಕಾರ್ಖಾನೆಗಳು ಪ್ರಾರಂಭವಾದವು. ಹಳ್ಳಿ ಹಳ್ಳಿಗಳೂ ವಿದ್ಯುತ್ ಪಂಪ್‌ಸೆಟ್‌ಗಳ ಲಾಭ ಪಡೆಯಲಾರಂಭಿಸಿದವು.

ಆ ನಂತರದಲ್ಲಿ ಆರಂಭಗೊಂಡ ೧) ಕಾಳಿನದಿ ಯೋಜನೆ, ೨) ವಾರಾಹಿ ಯೋಜನೆ, ೩) ಕೃಷ್ಣಾ ಯೋಜನೆ, ೪) ಘಟಪ್ರಭಾ ಯೋಜನೆ, ಕೆಲವೊಂದು ಮುಖ್ಯ ಜಲವಿದ್ಯುತ್ ಕೇಂದ್ರಗಳು.

ಪರ್ಯಾಯ ವಿದ್ಯುತ್ ಮೂಲಗಳು: ಮೇಲೆ ತಿಳಿಸಲಾದ ಎಲ್ಲ ಯೋಜನೆಗಳಿಂದ ಉತ್ಪಾದನೆಯಾಗುವ ವಿದ್ಯುತ್, ಸಂಬಂಧಿಸಿದ ಜಲಾಶಯಗಳಲ್ಲಿನ ನೀರಿನ ಪ್ರಮಾಣ ವನ್ನು ಆಧರಿಸಿರುತ್ತದೆ. ಮಳೆಯ ಪ್ರಮಾಣವು ವರ್ಷದಿಂದ ವರ್ಷಕ್ಕೆ ಕ್ಷೀಣಿಸುತ್ತಾ ಹೋಗುತ್ತಿದ್ದುದರಿಂದಲೂ, ಹೊಸ ಹೊಸ ಕೈಗಾರಿಕೆಗಳಿಂದಾಗಿ ವಿದ್ಯುತ್ ಬೇಡಿಕೆ ಹೆಚ್ಚುತ್ತ ಹೋಗಿದ್ದರಿಂದಲೂ ರಾಜ್ಯವು ಪರ್ಯಾಯ ವಿದ್ಯುತ್ ಉತ್ಪಾದನೆಗೆ ತೊಡಗ ಬೇಕಾಯಿತು. ಆಗ ಸ್ಥಾಪನೆಗೊಂಡ ರಾಯಚೂರು ಉಷ್ಣವಿದ್ಯುತ್ ಸ್ಥಾವರಗಳು ಬಳ್ಳಾರಿಯ ಶಾಖೋತ್ಪನ್ನ ವಿದ್ಯುತ್ ಕೇಂದ್ರ, ಯಲಹಂಕದ ಬಳಿಯಿರುವ ಡೀಸೆಲ್ ವಿದ್ಯುತ್ ಸ್ಥಾವರ, ಕೈಗಾದಲ್ಲಿರುವ ಅಣುವಿದ್ಯುತ್ ಕೇಂದ್ರ, ಕಪ್ಪತಗುಡ್ಡ (ಚಿತ್ರದುರ್ಗ)

ದಲ್ಲಿರುವ ಪವನಶಕ್ತಿ ಕೇಂದ್ರ ಮತ್ತು ಕೋಲಾರ ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿರುವ ಸೌರಶಕ್ತಿ ಕೇಂದ್ರಗಳು ವಿದ್ಯುತ್ ಕೊರತೆಯನ್ನು ಸಾಕಷ್ಟು ನೀಗಿಸಿವೆ.

ರಾಜ್ಯದಲ್ಲಿ ಒಟ್ಟಾರೆಯಾಗಿ ೬೦೦೦ ಮೆಗಾವ್ಯಾಟ್ (ಸ್ಥಾಪಿತ ಸಾಮರ್ಥ್ಯ)ನಷ್ಟು ಉತ್ಪಾದಿಸಬಲ್ಲ ವಿದ್ಯುತ್ ಉತ್ಪಾದನಾ ಕೇಂದ್ರಗಳಿವೆ. ಹಾಗಿದ್ದೂ ಪ್ರತಿವರ್ಷ ಹೊರ ರಾಜ್ಯ ಗಳಿಂದ ಶೇ. ೩೦ರಷ್ಟು ವಿದ್ಯುತ್ತನ್ನು ತರಿಸಿಕೊಳ್ಳಬೇಕಾದ ಪರಿಸ್ಥಿತಿಯಿದೆ. ಏಕೆಂದರೆ ವಿದ್ಯುತ್ತಿಲ್ಲದೆ ಇಂದು 'ತೃಣಮಪಿ ನ ಚಲತಿ'!

ಹತ್ತಿಬಟ್ಟೆ ಮತ್ತು ಸಿದ್ಧ ಉಡುಪು ತಯಾರಿಕೆ : ಮೈಸೂರು ಸರ್ಕಾರದ ಸ್ವಾಮ್ಯದ ಮಿನರ್ವ ಮಿಲ್ಸ್ ೧೯೧೯ರಲ್ಲೂ, ಮಹಾರಾಜಾ ಮಿಲ್ಸ್ ಕೂಡಾ ಅದೇ ವೇಳೆಯಲ್ಲಿ ಬೆಂಗಳೂರಿನಲ್ಲಿ ಆರಂಭವಾದವು. ಮೈಸೂರಿನಲ್ಲಿ ಶ್ರೀಕೃಷ್ಣರಾಜೇಂದ್ರ ಮಿಲ್ಸ್ ೧೯೨೪ರಲ್ಲಿ ಆರಂಭವಾಯಿತು. ಇವುಗಳ ಪೈಕಿ ಮಿನರ್ವ ಮಿಲ್ ಮಾತ್ರ ಕೇಂದ್ರ ಸರ್ಕಾರದ 'ರಾಷ್ಟ್ರೀಯ ಜವಳಿ ನಿಗಮ'ದ ಅಧೀನದಲ್ಲಿದ್ದು, ಉಳಿದೆರಡು ಮುಚ್ಚಿವೆ. ಬ್ರಿಟಿಷ್ ಮಾಲಿಕತ್ವದಲ್ಲಿದ್ದ ಬಿನ್ನಿಮಿಲ್ ಕೂಡಾ ಈಗ ಮುಚ್ಚಿದೆ. ಹತ್ತಿಬಟ್ಟೆ ತಯಾರಿಕೆಯಲ್ಲಿ 'ಕರ್ನಾಟಕದ ಮ್ಯಾಂಚೆಸ್ಟರ್' ಎನಿಸಿದ್ದ ದಾವಣಗೆರೆಯಲ್ಲಿ ಕೆಲವು ಹತ್ತಿಬಟ್ಟೆಯ ಗಿರಣಿಗಳು ೧೯೩೬ರಲ್ಲೇ ಆರಂಭವಾಗಿ ಒಳ್ಳೆಯ ಹೆಸರು ಪಡೆದಿದ್ದವು. ರಾಜ್ಯದಲ್ಲೀಗ ಸುಮಾರು ೪೦ ವಿದ್ಯುತ್ ಚಾಲಿತ ಹತ್ತಿ ಗಿರಣಿಗಳಿವೆ. ಆ ಪೈಕಿ ಗದಗ ಜಿಲ್ಲೆಯೊಂದರಲ್ಲೇ ಏಕವ್ಯಕ್ತಿ ಸ್ವಾಮ್ಯದ ಇಲ್ಲವೆ ಸಹಕಾರಿ ವಲಯದ ಒಟ್ಟು ೭ ಗಿರಣಿಗಳಿವೆ. ಬೆಂಗಳೂರು ಸಮೀಪದ ದೊಡ್ಡಬಳ್ಳಾಪುರದಲ್ಲಿ ತಯಾರಿಕಾ ಸಂಸ್ಥೆಗಳು ಮತ್ತು ಕಚ್ಚಾವಸ್ತು ಮಾರಾಟ ವಿನಿಮಯ ಕೇಂದ್ರಗಳನ್ನು ಒಳಗೊಳ್ಳುವ 'ರಾಷ್ಟ್ರೀಯ ಜವಳಿ ಉದ್ಯಾನ' (National Textile Park) ಸ್ಥಾಪನೆಗೊಂಡಿದೆ.

ರಾಜ್ಯಸರ್ಕಾರವು ೧೯೭೫ರಲ್ಲಿ 'ಕೈಮಗ್ಗ ಅಭಿವೃದ್ಧಿ ನಿಗಮ'ವನ್ನು ಪ್ರಾರಂಭಿಸಿ, ಆ ಮೂಲಕ ೪೪೦೦೦ ಕೈಮಗ್ಗಗಳನ್ನು ತನ್ನ ವ್ಯಾಪ್ತಿಗೆ ತೆಗೆದುಕೊಂಡಿದೆ. ರೋಗಗ್ರಸ್ತ ಗಿರಣಿಗಳ ಪುನರುಜ್ಜೀವನ ಮತ್ತು ಕಾರ್ಮಿಕರ ಪುನರ್ವಸತಿಗಾಗಿಯೇ ಸರ್ಕಾರವು ೧೯೮೪ರಲ್ಲಿ 'ಕರ್ನಾಟಕ ರಾಜ್ಯ ಜವಳಿ ನಿಯಮಿತ' (Karnataka State Textile Ltd.)ವನ್ನು ಸ್ಥಾಪಿಸಿತು. ಆದರೆ ಈ ಎಲ್ಲ ಪ್ರಯತ್ನಗಳಿಂದ ರಾಜ್ಯ ಬೊಕ್ಕಸಕ್ಕೆ ಹೊರೆಯಾಗುತ್ತದೆ ಎಂಬುದನ್ನು ಮರೆಯುವಂತಿಲ್ಲ.

ಕಳೆದ ೩೦-೩೫ ವರ್ಷಗಳಿಂದ ಜನರು ಸಿದ್ಧ ಉಡುಪುಗಳತ್ತ ಹೆಚ್ಚು ಗಮನ ಹರಿಸುತ್ತಿರುವುದರಿಂದ, ಸಿದ್ಧ ಉಡುಪು ತಯಾರಿಕಾ ಘಟಕಗಳು ಹೆಚ್ಚುತ್ತಿವೆ. ಬೆಂಗಳೂರು ಒಂದರಲ್ಲೇ ಈಗ ೩೦೦ಕ್ಕೂ ಹೆಚ್ಚು ಸಣ್ಣ ಘಟಕಗಳು ಕೆಲಸ ಮಾಡುತ್ತಿದ್ದು, ಸಹಸ್ರಾರು ಅಶಿಕ್ಷಿತ, ಹಿಂದುಳಿದ ಮಹಿಳೆಯರಿಗೆ ಉದ್ಯೋಗ ನೀಡಿವೆ. ಸಿದ್ಧ ಉಡುಪು ತಯಾರಿಕೆಯಲ್ಲಿ ಅಂತರರಾಷ್ಟ್ರೀಯ ಖ್ಯಾತಿ ಪಡೆದಿರುವ 'ಗೋಕುಲ್‌ದಾಸ್ ಇಮೇಜಸ್' ಸಂಸ್ಥೆಯು ಬೆಂಗಳೂರಿನಲ್ಲೇ ಐದಾರು ಶಾಖೆಗಳನ್ನು ಹೊಂದಿದೆ.

ರೇಷ್ಮೆ ಉದ್ಯಮ-ರಾಜ್ಯದ ಹೆಮ್ಮೆ : ಇಂದಿಗೂ ಸಹ ರೇಷ್ಮೆ ಉತ್ಪಾದನೆಯಲ್ಲಿ ರಾಜ್ಯವು ದೇಶದಲ್ಲೇ ಮೊದಲನೇ ಸ್ಥಾನದಲ್ಲಿದೆ. ದೇಶದಲ್ಲಿಯ ಒಟ್ಟಾರೆ ರೇಷ್ಮೆ ನೂಲು

ಉತ್ಪಾದನೆಯಲ್ಲಿ ರಾಜ್ಯದ ಕೊಡುಗೆ ಶೇ. ೮೦ರಷ್ಟು. ೩೦೦-೪೦೦ ವರ್ಷಗಳಷ್ಟು ಹಿಂದೆಯೇ ಲಕ್ಷ್ಮೇಶ್ವರ ಮತ್ತು ವರಗಿರಿ (ಧಾರವಾಡ ಜಿಲ್ಲೆ) ಎಂಬಲ್ಲಿ ರೇಷ್ಮೆ ಕೈಗಾರಿಕೆ ಅಸ್ತಿತ್ವದಲ್ಲಿತ್ತು ಎಂದು ತಿಳಿಸುವ ಶಿಲಾಲಿಪಿಗಳಿವೆ. ಚನ್ನಪಟ್ಟಣದಲ್ಲಿ ಖಾಸಗಿ ಒಡೆತನದ 'ಮೈಸೂರು ಸ್ಪನ್ ಮಿಲ್' ೧೯೩೬ರಲ್ಲಿಯೇ ಆರಂಭವಾಗಿತ್ತು.

ಎರಡನೇ ಮತ್ತು ವಿಶೇಷ ದರ್ಜೆಯ ರೇಷ್ಮೆ ನೂಲು, ಸೀರೆ, ಷರ್ಟಿಂಗ್ ಮುಂತಾದವು ಅಲ್ಲಿ ತಯಾರಾಗುತ್ತಿದ್ದವು. ಕಾರಣಾಂತರದಿಂದ ಕಾರ್ಖಾನೆಯು ಭಾಗಶಃ ಹಾನಿಗೊಳಗಾದಾಗ ಮೈಸೂರು ಸರ್ಕಾರವು ೧೯೬೦ರಲ್ಲಿ ಅದನ್ನು ತನ್ನ ವಶಕ್ಕೆ ತೆಗೆದುಕೊಂಡಿತು. ರಾಜ್ಯದ ಸಾವಿರಾರು ಗ್ರಾಮಗಳ ಲಕ್ಷಾಂತರ ಹೆಕ್ಟೇರಿನಲ್ಲಿ ಹಿಪ್ಪನೇರಳೆಯನ್ನು ಬೆಳೆಯಲಾಗುತ್ತಿದ್ದು, ಇದರಿಂದ ಅನೇಕ ಲಕ್ಷ ಕುಟುಂಬಗಳು ಒಂದಿಷ್ಟು ಬದುಕನ್ನು ಕಂಡಿವೆ. ರಾಜ್ಯದಲ್ಲೀಗ ಉತ್ಪತ್ತಿ ಯಾಗುವ ರೇಷ್ಮೆನೂಲು ಮತ್ತು ಬಟ್ಟೆಗಳ ಮಾರಾಟ ವ್ಯವಸ್ಥೆಯನ್ನು ಮಾತ್ರ 'ಕರ್ನಾಟಕ ರಾಜ್ಯ ರೇಷ್ಮೆ ಮಾರಾಟ ಮಂಡಳಿ' ವಹಿಸಿಕೊಂಡಿದೆ.

ಸಕ್ಕರೆ ಉದ್ಯಮ : ಪ್ರತಿವರ್ಷವೂ ರಾಜ್ಯದಲ್ಲಿ ಸರಾಸರಿ ೨೨೫ ಲಕ್ಷ ಟನ್‌ನಷ್ಟು ಕಬ್ಬನ್ನು ಬೆಳೆಯಲಾಗುತ್ತಿದ್ದು, ರಾಜ್ಯವು ದೇಶದಲ್ಲಿ ೫ನೇ ಸ್ಥಾನದಲ್ಲಿದೆ. 'ಸಕ್ಕರೆ ಜಿಲ್ಲೆ' ಎಂಬ ಹೆಸರಿರುವ ಮಂಡ್ಯದಲ್ಲಿ ೧೯೩೩ರಲ್ಲಿ ಆರಂಭಗೊಂಡ 'ಮೈಸೂರು ಸಕ್ಕರೆ ಸಂಸ್ಥೆ ನಿಯಮಿತ' (Mysore Sugar Company Ltd.) ರಾಜ್ಯದಲ್ಲೇ ಮೊಟ್ಟ ಮೊದಲನೆಯದು. ಇಲ್ಲಿ ಸಕ್ಕರೆ ಉತ್ಪಾದನೆಯ ಜೊತೆಗೆ ಮದ್ಯಸಾರ, ಅಸಿಟಿಕ್ ಆಮ್ಲ ಲಿಕ್ಕರ್, ಸಾರಾಯಿ ಮುಂತಾದವು ಉತ್ಪನ್ನವಾಗುತ್ತವೆ. ರಾಜ್ಯದಲ್ಲಿ ಒಟ್ಟು ೪೮ ಸಕ್ಕರೆ ಕಾರ್ಖಾನೆಗಳಿದ್ದು, ಆ ಪೈಕಿ ಹೆಚ್ಚಿನವು ಅಂದರೆ ೨೦ ಕಾರ್ಖಾನೆಗಳು ಬೆಳಗಾವಿ ಜಿಲ್ಲೆಯೊಂದರಲ್ಲೇ ಇವೆ. ಮಂಡ್ಯದ ನಂತರ ಸ್ಥಾಪನೆ ಯಾದ ಎರಡನೆಯ ಕಾರ್ಖಾನೆ ಬೆಳಗಾವಿ ಜಿಲ್ಲೆ-ಅಥಣಿ ತಾಲ್ಲೂಕಿನ 'ಉಗಾರ ಖುರ್ದ ಸಹಕಾರಿ ಸಕ್ಕರೆ ಕಾರ್ಖಾನೆ'. ೧೭ ಕಾರ್ಖಾನೆಗಳು ಖಾಸಗಿ ಒಡೆತನಕ್ಕೆ ಸೇರಿದವಾಗಿವೆ. ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳಿಂದ ಸುಮಾರು ೪೮ರಿಂದ ೫೦ ಸಾವಿರ ಮಂದಿ ಉದ್ಯೋಗ ಪಡೆದಿದ್ದಾರೆ ಎನ್ನಬಹುದು.

ಕಾಗದ ಕಾರ್ಖಾನೆಗಳು : ಇಡೀ ದಕ್ಷಿಣ ಭಾರತಕ್ಕೆ ಮೊದಲನೆಯ ಕಾಗದದ ಕಾರ್ಖಾನೆ ಭದ್ರಾವತಿಯಲ್ಲಿ ೧೯೩೭ರಲ್ಲಿ ಆರಂಭವಾಗಿ ಇಂದಿಗೂ ಒಂದು ಲಾಭದಾಯಕ ಉದ್ದಿಮೆಯಾಗಿ ನಡೆಯುತ್ತಿದೆ. ಸರ್ಕಾರದ ಅಧೀನದಲ್ಲೇ ಇದೆ. ಬರವಣಿಗೆ ಹಾಗೂ ಮುದ್ರಣಕ್ಕೆ ಉಪಯುಕ್ತವಾದ ಸಾಧಾರಣ ಮತ್ತು ವಿಶೇಷ ಕಾಗದವೇ ಅಲ್ಲದೆ, ರಟ್ಟು, ಮರೆ ಹಾಳೆಗಳೂ ಇಲ್ಲಿ ತಯಾರಾಗುತ್ತಿವೆ.

ದಾಂಡೇಲಿ ಅರಣ್ಯ ಪ್ರದೇಶದಲ್ಲಿ (ಉತ್ತರ ಕನ್ನಡ ಜಿಲ್ಲೆ) 'ದಿ ವೆಸ್ಟ್ ಕೋಸ್ಟ್ ಪೇಪರ್ ಮಿಲ್ಸ್' ಎಂಬ ಖಾಸಗಿ ಕಾಗದ ಕಾರ್ಖಾನೆ ೧೯೫೫ರಲ್ಲಿ ಪ್ರಾರಂಭವಾಯಿತು. ಕಚ್ಚಾವಸ್ತು ಪೂರೈಕೆಗಾಗಿ ಈ ಸಂಸ್ಥೆಯು ತನ್ನ ಸ್ವಾಧೀನದಲ್ಲಿರುವ ೧೦,೦೦೦ ಹೆಕ್ಟೇರು ಭೂಮಿಯಲ್ಲದೆ, ಇತರರ ಒಡೆತನವಿರುವ ೨೪೦೦೦ ಹೆಕ್ಟೇರು ಭೂಮಿಯಲ್ಲಿ ಬಿದಿರನ್ನು ಬೆಳೆಸುತ್ತ ಬಂದಿದೆ. ರಫ್ತು ಗುಣಮಟ್ಟದ ಕಾಗದ, ಸಾಧಾರಣ ಕಾಗದವೇ ಅಲ್ಲದೆ ವಿಶೇಷ ಬಗೆಯ ರಟ್ಟುಗಳೂ ಇಲ್ಲಿ ತಯಾರಾಗುತ್ತವೆ.

ಇವೆರಡರ ಜೊತೆಗೆ ಬೆಳಗೊಳ (ಮಂಡ್ಯಜಿಲ್ಲೆ) ಮತ್ತು ನಂಜನಗೂಡಿನಲ್ಲಿ ಇರುವ ಕಾರ್ಖಾನೆಗಳೂ ಸಹ ವಾರ್ಷಿಕವಾಗಿ ೫೦೦ ಟನ್ (ಸರಾಸರಿ) ಕಾಗದ ಉತ್ಪಾದಿಸುತ್ತಿವೆ. ರಾಮನಗರ, ಮುನಿರಾಬಾದ್ (ರಾಯಚೂರು ಜಿಲ್ಲೆ) ಹಾಗೂ ಕುಶಾಲನಗರ (ಕೊಡಗು ಜಿಲ್ಲೆ)ಗಳಲ್ಲಿ ಸಣ್ಣ ಪ್ರಮಾಣದ ಕಾಗದ ಕಾರ್ಖಾನೆಗಳಿವೆ. ಕಾಡಿನ ಬಿದಿರು, ನೀಲಗಿರಿ ಮರದ ತೊಗಟೆ ಮತ್ತು ಕಾಂಡ, ಕಬ್ಬಿನ ಸಿಪ್ಪೆ, ಜೋಳ ಮತ್ತು ದಪ್ಪ ಹುಲ್ಲಿನ ದಂಟು ಇವೆಲ್ಲವೂ ಕಚ್ಚಾವಸ್ತುಗಳಾಗಿ ಬಳಕೆಯಾಗುತ್ತವೆ.

ಬೇಡಿಕೆ ಇಳಿಯದ ಸಿಮೆಂಟು : ರಾಜ್ಯದಲ್ಲಿ ಸುಮಾರು ೧೨೦೦೦ ಮಂದಿಗೆ ನೇರ ಉದ್ಯೋಗವನ್ನು ಒದಗಿಸಿರುವ ಹಾಗೂ ಹಿಂದಿನಿಂದಲೂ ಒಂದು ಲಾಭದಾಯಕ ಉದ್ಯಮ ಎನಿಸಿರುವುದು ಸಿಮೆಂಟ್ ಉತ್ಪಾದನೆ. ಸಿಮೆಂಟ್ ಉತ್ಪಾದನೆಗೆ ಮುಖ್ಯವಾಗಿ ಬೇಕಾಗಿರುವುದು ಸುಣ್ಣದ ಕಲ್ಲು. ೫೦ ವರ್ಷಗಳ ಹಿಂದಿನ ಅಂದಾಜಿನಂತೆ ರಾಜ್ಯದಲ್ಲಿ ಸುಮಾರು ೨೦ ಕೋಟಿ ಟನ್ನಿನಷ್ಟು ಸುಣ್ಣದ ಕಲ್ಲಿನ ನಿಕ್ಷೇಪವಿತ್ತು. ಈ ಪೈಕಿ ಗುಲಬರ್ಗಾ ಜಿಲ್ಲೆಯೊಂದರಲ್ಲೇ ಅಂದಾಜಾಗಿದ್ದು ೧೫೦೦ ಚ. ಕಿಲೋಮೀಟರ್ ವಿಸ್ತೀರ್ಣದಲ್ಲಿನ ನಿಕ್ಷೇಪ. ಇತ್ತೀಚಿನ ಅಂದಾಜಿನಂತೆ ಸುಣ್ಣದ ಕಲ್ಲಿನ ನಿಕ್ಷೇಪಗಳು ನಾಗರಗಾಳಿ (ಬೆಳಗಾವಿ) ಹೊಸದುರ್ಗ (ಚಿತ್ರದುರ್ಗ ಜಿಲ್ಲೆ) ಮತ್ತು ದಾಂಡೇಲಿ (ಉ.ಕ. ಜಿಲ್ಲೆ)ಗಳಲ್ಲಿ ಕಂಡುಬಂದಿವೆ. ಈಗ ರಾಜ್ಯದಲ್ಲಿ ಒಟ್ಟು ೧೫ ಸಿಮೆಂಟ್ ಕಾರ್ಖಾನೆಗಳಿವೆ; ಆ ಪೈಕಿ ಹೆಚ್ಚಿನವು ಗುಲಬರ್ಗಾ ಮತ್ತು ಬಾಗಲಕೋಟೆ ಜಿಲ್ಲೆಯಲ್ಲಿವೆ.

ಶಹಾಬಾದ್, ವಾಡಿ ಮತ್ತು ಭದ್ರಾವತಿಯಲ್ಲಿ ದೇಶದ ಸ್ವಾತಂತ್ರ್ಯ ಪೂರ್ವದಲ್ಲೇ ಸಿಮೆಂಟ್ ಕಾರ್ಖಾನೆಗಳಿದ್ದವು. ಆ ಬಳಿಕ ಅಮ್ಮಸಂದ್ರ (ತುಮಕೂರು ಜಿಲ್ಲೆ)ದಲ್ಲಿ ೧೯೫೯ರಲ್ಲಿ, ಗುರಗುಂಟಾ (ಗುಲಬರ್ಗಾ ಜಿಲ್ಲೆ)ದಲ್ಲಿ ೧೯೭೭ರಲ್ಲಿ ಆರಂಭಗೊಂಡವು. ಮಂಡ್ಯದ ಮೈಸೂರು ಸಿಮೆಂಟ್ಸ್ ಕೂಡ ಇದೇ ಸಮಯದಲ್ಲಿ ಆರಂಭಗೊಂಡಿತು. ೨೦೦೮-೦೯ನೇ ಸಾಲಿನಲ್ಲಿ ರಾಜ್ಯಕ್ಕೆ ಸೇರ್ಪಡೆಯಾದ ಸಣ್ಣ ಪ್ರಮಾಣದ ಎಸಿಸಿ ಸಂಸ್ಥೆಯ ಕಾರ್ಖಾನೆ ತೊಂಡೇಭಾವಿ (ಚಿಕ್ಕಬಳ್ಳಾಪುರ ಜಿಲ್ಲೆ)ಯಲ್ಲಿದೆ.

ಕಬ್ಬಿಣ ಮತ್ತು ಉಕ್ಕು ತಯಾರಿಕೆ : ಇಡೀ ಭಾರತದಲ್ಲಿರುವ ಕಬ್ಬಿಣದ ಅದಿರು ನಿಕ್ಷೇಪದಲ್ಲಿ ಕರ್ನಾಟಕದ್ದು ಶೇ. ೩೭ರಷ್ಟು. ಆ ಪ್ರಮಾಣದಿಂದಾಗಿ ನಮ್ಮ ರಾಜ್ಯವು ದೇಶದಲ್ಲಿ ೩ನೇ ಸ್ಥಾನದಲ್ಲಿದೆ. ಒಂದು ಅಂದಾಜಿನಂತೆ ರಾಜ್ಯದಲ್ಲಿ ೨೪೨೧ ಮಿಲಿಯನ್ ಟನ್‌ಗಳಷ್ಟು ಅದಿರು ನಿಕ್ಷೇಪವಿದೆ. ಆ ಪೈಕಿ ಹೆಚ್ಚಿನ ಪ್ರಮಾಣವು ಚಿಕ್ಕಮಗಳೂರು ಜಿಲ್ಲೆಯ ಕೆಮ್ಮಣ್ಣುಗುಂಡಿ ಮತ್ತು ಕುದುರೆಮುಖಗಳಲ್ಲೂ, ಬಳ್ಳಾರಿ ಜಿಲ್ಲೆಯ ತೋರಣಗಲ್ ಪ್ರದೇಶಗಳಲ್ಲೂ ಇದೆ. ಕೆಮ್ಮಣ್ಣು ಗುಂಡಿ ಹಾಗೂ ಕುದುರೆಮುಖಗಳಲ್ಲಿ ಈಗ ಗಣಿಗಾರಿಕೆ ನಿಂತಿದೆ. ಉಕ್ಕು ತಯಾರಿಕೆಗೆ ಅಗತ್ಯವಾದ ಮ್ಯಾಂಗನೀಸ್, ಕ್ರೋಮೈಟ್ ಮತ್ತು ಬೆಣಚುಕಲ್ಲು ರಾಜ್ಯದ ಬೇರೆ ಬೇರೆ ಪ್ರದೇಶಗಳಲ್ಲಿ ದೊರೆಯುತ್ತವೆ.

ದಕ್ಷಿಣ ಭಾರತದಲ್ಲಿ ಮೊದಲನೆಯ ಕಬ್ಬಿಣದ ಕಾರ್ಖಾನೆಯನ್ನು ಆರಂಭಿಸಿದ ಕೀರ್ತಿ ೧೯೨೩ರಲ್ಲಿ ಆರಂಭವಾದ 'ಮೈಸೂರು ಕಬ್ಬಿಣ ಕಾರ್ಖಾನೆ' (ಭದ್ರಾವತಿ)ಯು ದಿನವೂ ೬೦ ಟನ್‌ನಷ್ಟು ಕಬ್ಬಿಣ ತಯಾರಿಸುತ್ತಿತ್ತು. ಸರ್ ಎಂ. ವಿಶ್ವೇಶ್ವರಯ್ಯನವರು ಇದರ

ಆಡಳಿತ ವಹಿಸಿಕೊಂಡ ೬ ವರ್ಷಗಳಲ್ಲಿ ಉತ್ಪಾದನೆಯು ೮೦ ಟನ್ (ಪ್ರತಿದಿನ) ಗೇರಿತು. ೧೯೩೬ರಲ್ಲಿ ಹಾಗೂ ೧೯೪೩ರಲ್ಲಿ ಒಂದೊಂದು ತೆರೆದ ಕುಲುಮೆಗಳು ವಿದ್ಯುಚ್ಛಕ್ತಿಯಿಂದ ಕಾರ್ಯಾರಂಭ ಮಾಡುತ್ತ ಉತ್ಪಾದನೆ ಸಾಮರ್ಥ್ಯವನ್ನು ೪೧೦೦೦ ಟನ್‌ಗೆ ಹೆಚ್ಚಿಸಿದವು. ಇದಲ್ಲದೆ ೩೦,೦೦೦ ಟನ್‌ನಷ್ಟು ಉಕ್ಕಿನ ಗಟ್ಟಿಗಳನ್ನು ವಿವಿಧ ರೂಪಗಳಲ್ಲಿ ತಯಾರಿಸಲು ಸಾಧ್ಯವಾಯಿತು. ಆಗ ಕಾರ್ಖಾನೆಯ ಹೆಸರು 'ಮೈಸೂರು ಕಬ್ಬಿಣ ಮತ್ತು ಉಕ್ಕು ನಿಯಮಿತ' (Mysore Iron and Steel Ltd.) ಎಂದಾಗಿತ್ತು. ೧೯೬೫ರಲ್ಲಿ 'ಭಾರತ ಉಕ್ಕು ಪ್ರಾಧಿಕಾರ' (Steel Authority of India) ಅದನ್ನು ವಹಿಸಿಕೊಂಡು, ಸಂಸ್ಥೆಯ ಹೆಸರನ್ನು 'ಸರ್ ಎಂ. ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ನಿಯಮಿತ' (V.I.S.L.) ಎಂದು ಬದಲಿಸಿತು. ೧೯೭೦ರ ವೇಳೆಗೆ ೧೧೫೦೦ದಷ್ಟಿದ್ದ ಉದ್ಯೋಗಿಗಳ ಸಂಖ್ಯೆ ಈಗ ೩೫೦೦ಕ್ಕೆ ಕುಸಿದಿದೆ. ಈಗ ಮಿಶ್ರ ಉಕ್ಕು ಕೂಡಾ ತಯಾರಾಗುತ್ತಿಲ್ಲ.

೧೯೭೬ರ ಏಪ್ರಿಲ್ ೨ರಂದು, ೬೩೪೫ ಕೋಟಿ ರೂ.ಗಳ ಬಂಡವಾಳದೊಂದಿಗೆ ಆರಂಭವಾದ 'ಕುದುರೆಮುಖ ಕಬ್ಬಿಣದ ಅದಿರು ಸಂಸ್ಥೆ ನಿಯಮಿತ' (Kuduremukh Iron ore company Ltd.) ಹೆಚ್ಚು ಸಾಂದ್ರದ ಕಬ್ಬಿಣದ ಉಂಡೆಗಳನ್ನೂ, ಅದಿರನ್ನೂ ಉತ್ಪಾದಿಸುತ್ತ ಬಂದಿತು. ಪ್ರಾರಂಭದಿಂದಲೂ ಒಂದು ಲಾಭದಾಯಕ ಉದ್ದಿಮೆಯಾಗಿಯೇ ಬೆಳೆದುಬಂದಿದ್ದ ಈ ಸಂಸ್ಥೆಯನ್ನು, ಪರಿಸರವಾದಿಗಳ ಒತ್ತಡ ಮತ್ತು ನಕ್ಸಲರ ಭಯೋತ್ಪಾದನೆಯಿಂದಾಗಿ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ೨೦೦೫ರಲ್ಲಿ ಮುಚ್ಚಲೇಬೇಕಾಯಿತು. ಈ ಪ್ರದೇಶವನ್ನೀಗ 'ಕಮ್ಯಾಂಡೋ ತರಬೇತಿ'ಗಾಗಿ ಬಳಸಿಕೊಳ್ಳುವ ಆಲೋಚನೆ ಸರ್ಕಾರಕ್ಕಿದೆ.

ಕೇಂದ್ರ ಸರ್ಕಾರವು ೧೯೯೫ರ ವೇಳೆಗೆ ದೇಶದೆಲ್ಲೆಡೆ ಖಾಸಗೀಕರಣ ನೀತಿಯನ್ನು ಜಾರಿಗೊಳಿಸಿದ್ದರ ಪರಿಣಾಮವಾಗಿ ರಾಜ್ಯದಲ್ಲಿ ಅಧಿಕೃತ ಹಾಗೂ ಅನಧಿಕೃತ ಗಣಿಗಾರಿಕೆ ತೀವ್ರವಾಗಿ ಹೆಚ್ಚಿತು. ಅದಿರಿನ ರಫ್ತಿನ ಮೇಲೂ ಯಾವುದೇ ನಿರ್ಬಂಧ ಹೇರದಿದ್ದರಿಂದ ಬಳ್ಳಾರಿ ಜಿಲ್ಲೆಯೊಂದರಲ್ಲೇ ೨೦ಕ್ಕೂ ಹೆಚ್ಚು ಗಣಿ ಸಂಸ್ಥೆಗಳು ಶ್ರೀಮಂತವಾಗ ತೊಡಗಿದವು. ಇದೊಂದು ದಂಧೆಯಾಗಿ ಬೆಳೆದು ರಾಜ್ಯದ ರಾಜಕಾರಣದ ಮೇಲೆ ತೀವ್ರ ಆಘಾತಗಳಾಗಿ ಆಡಳಿತ ವ್ಯವಸ್ಥೆಯೇ ಸಡಿಲಗೊಳ್ಳುವಂತಾಯಿತು.

ಅಲ್ಯೂಮಿನಿಯಂ ಕೈಗಾರಿಕೆ : ರಾಜ್ಯದ ಬೆಳಗಾವಿ ಮತ್ತು ಅದರ ಗಡಿಪ್ರದೇಶಗಳಲ್ಲಿ ಬಾಕ್ಸೈಟ್ ಅದಿರು ಹೆಚ್ಚಾಗಿ ಕಂಡು ಬಂದಿತ್ತಾದ್ದರಿಂದ ೧೯೬೯ರ ಹೊತ್ತಿಗೆ 'ಇಂಡಿಯನ್ ಅಲ್ಯೂಮಿನಿಯಂ ಕಂಪನಿ' ಎಂಬ ಖಾಸಗಿ ಸಂಸ್ಥೆ ಬೆಳಗಾವಿಯಲ್ಲಿ ಆರಂಭವಾಯಿತು. ಇಲ್ಲಿ ಅಲ್ಯೂಮಿನಾ (ಪುಡಿ), ಅಲ್ಯುಮಿನಿಯಂ ಆಕ್ಸೈಡ್ ಮತ್ತು ಅಲ್ಯುಮಿನಿಯಂ ವಸ್ತುಗಳನ್ನು ಉತ್ಪಾದಿಸಲಾಗುತ್ತಿದೆ. ಬಳ್ಳಾರಿ ಜಿಲ್ಲೆಯ ಸಂಡೂರಿನಲ್ಲಿರುವ 'ಜಿಂದಾಲ್ ಅಲ್ಯುಮಿನಿಯಂ ಕಂಪೆನಿ' ಹಾಗೂ ನಂಜನಗೂಡಿನಲ್ಲಿರುವ 'ಕರ್ನಾಟಕ ಅಲ್ಯುಮಿನಿಯಂ ಕಂಪನಿ' ರಾಜ್ಯದಲ್ಲಿನ ಇನ್ನೆರಡು ಉತ್ಪಾದನಾ ಸಂಸ್ಥೆಗಳು.

ಚಿನ್ನದ ಉತ್ಪಾದನೆಯ ನಂಬರ್ ೧ ರಾಜ್ಯ : ದೇಶದಲ್ಲಿನ ಒಟ್ಟು ಚಿನ್ನದ ಉತ್ಪಾದನೆಯಲ್ಲಿ ನಮ್ಮ ರಾಜ್ಯದ ಪಾಲೇ ಶೇ. ೭೮ರಷ್ಟು. ಹಾಗಾಗಿ ಕಳೆದ ೧೦೦

ವರ್ಷಗಳಿಂದಲೂ ನಮ್ಮದು 'ನಂಬರ್ ೧ ಚಿನ್ನದ ನಾಡು'. ಕೋಲಾರ ಚಿನ್ನದ ಗಣಿಗಳು ೨೦೦೩ರಲ್ಲಿಯೇ ಮುಚ್ಚಲ್ಪಟ್ಟವಾದರೂ ಅದರ ಕೊರತೆಯನ್ನು ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದಿಂದ ವಿದ್ಯುತ್ತನ್ನೂ, ತುಂಗಭದ್ರಾ ನದಿಯಿಂದ ನೀರನ್ನು ಬಳಸಿಕೊಳ್ಳುವ ಹಟ್ಟಿ ಚಿನ್ನದ ಗಣಿಗಳು ತುಂಬಿವೆ. ಇಲ್ಲಿ ತೆಗೆಯಲ್ಪಡುವ ಒಂದು ಟನ್ ಮಣ್ಣಿನಲ್ಲಿ ೬ ಗ್ರಾಮ್‌ನಷ್ಟು ಚಿನ್ನವು ಸಿಗುತ್ತಿದೆ.

ಗಂಧದ ಗುಡಿ : ನಮ್ಮದು 'ಗಂಧದ ಗುಡಿ'ಯೆಂದೇ ಹೆಸರಾದ ರಾಜ್ಯ. ಶಿವಮೊಗ್ಗ ಮತ್ತು ಉತ್ತರಕನ್ನಡ ಜಿಲ್ಲೆಗಳಲ್ಲಿ ವಿಶೇಷವಾಗಿ ಬೆಳೆಯುವ ಶ್ರೀಗಂಧದ ಮರಗಳಿಂದ ಉತ್ಪಾದಿಸಲಾಗುವ ಎಣ್ಣೆ ಹಾಗೂ ಪುಡಿಗಳು ದೇಶ-ವಿದೇಶಗಳಲ್ಲೂ ಸುಗಂಧವನ್ನು ಪಸರಿಸುತ್ತ ಬಂದಿವೆ. 'ಮೈಸೂರು ಸ್ಯಾಂಡಲ್ ಸೋಪು' ಎಂಬುದು ಈಗಲೂ ಜನಪ್ರಿಯವಾದ ಹೆಸರು.

ಗಂಧದೆಣ್ಣೆಯ ಕಾರ್ಖಾನೆಗಳು ಶಿವಮೊಗ್ಗ ಹಾಗೂ ಮೈಸೂರು ಜಿಲ್ಲೆಗಳಲ್ಲಿ ೧೯೪೬ರ ವೇಳೆಗೇ ಪ್ರಾರಂಭವಾಗಿದ್ದವು. ೧೯೧೮ರಲ್ಲಿ ಬೆಂಗಳೂರಿನಲ್ಲಿ ಗಂಧದ ಸಾಬೂನು ಕಾರ್ಖಾನೆ ಅಸ್ತಿತ್ವಕ್ಕೆ ಬಂತು. ಈಗಿನ ವಿಕಾಸಸೌಧ ಮತ್ತು ಎಸ್.ಜೆ. ಪಾಲಿಟೆಕ್ನಿಕ್‌ಗಳ ನಡುವೆ ಇದ್ದ ಒಂದು ಕಲ್ನಾರು (asbestors) ಛಾವಣಿಯ ಕಟ್ಟಡದಲ್ಲಿ ವನಸ್ಪತಿ, ಉಪ್ಪು ಮತ್ತು ಗಂಧದೆಣ್ಣೆಗಳನ್ನು ಬರಿಗೈಯಿಂದಲೇ ಮಿಶ್ರಣ ಮಾಡಿ ಸಾಬೂನು ಬಿಲ್ಲೆಗಳಾಗಿ ಮಾಡಲಾಗುತ್ತಿತ್ತು. ನಾಲ್ವಡಿ ಕೃಷ್ಣರಾಜ ಒಡೆಯರ್ ದಾನ ಮಾಡಿದ್ದ ಯಶವಂತಪುರದ ಬಳಿಯ ೪೫ ಎಕರೆ ಪ್ರದೇಶಕ್ಕೆ ಅದು ಸ್ಥಳಾಂತರಗೊಂಡಿತು. ಗಂಧದ ಕೊರಡುಗಳನ್ನು ಒಟ್ಟು ಹಾಕಲಾಗುತ್ತಿದ್ದ ತಗ್ಗಿನ ಪ್ರದೇಶವನ್ನು 'ಗಂಧದ ಕೋಠಿ' ಎಂದು ಕರೆಯಲಾಗುತ್ತಿತ್ತು. ಆ ಜಾಗವೇ ಈಗಿನ ಸ್ಯಾಂಕಿ ಟ್ಯಾಂಕ್ (ಮಲ್ಲೇಶ್ವರ ೧೮ನೇ ಅಡ್ಡರಸ್ತೆ)

ಪ್ರಸ್ತುತ ಯಶವಂತಪುರದಲ್ಲಿರುವ 'ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ' (Karnataka Soaps and Detergents Ltd.) ಎಂಬ ಹೆಸರಿನ ಸರ್ಕಾರಿ ಸ್ವಾಮ್ಯದ ಕಾರ್ಖಾನೆ ಪರಿಮಳಯುಕ್ತ ಸಾಬೂನುಗಳು, 'ಧೂಪ್' (ಸಾಮ್ರಾಣಿ) ಗಂಧದೆಣ್ಣೆ, ಅಗರಬತ್ತಿ ಇನ್ನಿತರ ವಸ್ತುಗಳನ್ನು ಉತ್ಪಾದಿಸುತ್ತಿದೆ.

ಯಂತ್ರೋಪಕರಣ ಉದ್ಯಮ : ಮಾನವ ಎಂದು 'ಬಂಡಿಯ ಚಕ್ರ'ವನ್ನು ಕಂಡು ಹಿಡಿದನೋ, ಅಂದಿನಿಂದಲೇ ಯಂತ್ರಯುಗ ಆರಂಭವಾಯಿತು ಎನ್ನಬಹುದು.

ರಾಜ್ಯದಲ್ಲಿ ಭಾರಿ ಬಂಡವಾಳದ ಕೇಂದ್ರೋದ್ಯಮಗಳು ಸ್ಥಾಪನೆಗೊಳ್ಳುವ ಮೊದಲೇ ಯಂತ್ರೋಪಕರಣ ಉತ್ಪಾದನೆಗೆ ನಾಂದಿ ಹಾಡಿದ್ದು ಖಾಸಗಿ ಒಡೆತನದ ಸಂಸ್ಥೆಗಳು. ಆ ಪೈಕಿ ಮೊದಲು ನೆನಪಿಗೆ ಬರುವಂಥ ಒಂದು ಸಂಸ್ಥೆಯೆಂದರೆ ಅದು– 'ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪನಿ'. ಇದರ ಸ್ಥಾಪಕರಾದ ಲಕ್ಷ್ಮಣರಾವ್ ಕಿರ್ಲೋಸ್ಕರ್ ಬೆಳಗಾವಿ ಜಿಲ್ಲೆಯ ಗುರ್ಲ ಹೊಸೂರಿನವರು. ೧೮೮೮ರಲ್ಲಿ ಬೆಳಗಾವಿಯಲ್ಲೇ ಒಂದು ಸೈಕಲ್ ಅಂಗಡಿ ತೆರೆದು, ಅಲ್ಲಿಯೇ ಹೊಲ ಉಳುವ ನೇಗಿಲನ್ನು ತಯಾರಿಸತೊಡಗಿದರು. ಅವುಗಳನ್ನು ಇಂಗ್ಲೆಂಡ್ ದೇಶಕ್ಕೂ ಮಾರಾಟ ಮಾಡುತ್ತಿದ್ದರು. ಹಂತ ಹಂತವಾಗಿ ಮೇವು ಕಟಾವು ಯಂತ್ರ, ಆರು ರಾಟೆಗಳ ಯಂತ್ರ, ನೀರೆತ್ತುವ ಯಂತ್ರಗಳನ್ನು ತಯಾರಿಸಿದರು. ಆ

ಯಂತ್ರಗಳನ್ನು ಚಾಲಿಸಲು ೧೯೨೭ರಲ್ಲಿ ವಿದ್ಯುತ್ ಯಂತ್ರಗಳನ್ನೂ, ೧೯೪೦ರಲ್ಲಿ ಡೀಸೆಲ್ ಯಂತ್ರಗಳನ್ನೂ ತಯಾರಿಸಿದರು. ಯಶವಂತಪುರ ಘಟಕದಲ್ಲಿ ತಯಾರಾಗುತ್ತಿದ್ದ ಪ್ರಮುಖ ಉತ್ಪನ್ನಗಳಲ್ಲಿ ಎಲೆಕ್ಟ್ರಿಕ್ ಮೋಟಾರು ಮತ್ತು ನೀರೆತ್ತುವ ಪಂಪ್, ಪರಿವರ್ತಕಗಳು (Transformers) ಪರ್ಯಾಯಕಗಳು (Alternators) ಬೆಸುಗೆ ಉಪಕರಣಗಳು, ಡಿ.ಸಿ. ಮೋಟಾರುಗಳು ವಿದ್ಯುತ್ ಚಾಲಿತ ನಿಯಂತ್ರಕಗಳು ವಿದ್ಯುನ್ಮಾಪನ ಉಪಕರಣಗಳು ಮುಖ್ಯವಾದವು.

ಈಗ ಬೆಂಗಳೂರಿನ 'ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪನಿ' ಅಸ್ತಿತ್ವದಲ್ಲಿ ಇಲ್ಲದಿದ್ದರೂ ಬಿಡದಿ ಕೈಗಾರಿಕಾ ಪ್ರದೇಶ (ರಾಮನಗರ ಜಿಲ್ಲೆ)ಯಲ್ಲಿ ಸ್ಥಾಪನೆಗೊಂಡಿರುವ 'ಟೊಯೋಟಾ ಮೋಟಾರ್' ಸಂಸ್ಥೆಯೊಂದಿಗೆ ಸಹ ಭಾಗಿತ್ವ ಹೊಂದಿದ್ದು, 'ಟೊಯೋಟಾ ಕಿರ್ಲೋಸ್ಕರ್ ಮೋಟಾರ್ ಪ್ರೈವೇಟ್ ಲಿಮಿಟೆಡ್' ಕಾರು ತಯಾರಿಕೆಗೆ ಹೆಸರಾಗಿದೆ.

ಎಲ್ ಅಂಡ್ ಟಿ–ಕೊಮಾತ್ಸು ಸಂಸ್ಥೆ : ಡೆನ್ಮಾರ್ಕಿನ ಲಾರ್ಸನ್ ಮತ್ತು ಟೂಬ್ರೋ ಸೋದರರು ಖಾಸಗಿಯಾಗಿ ೧೯೩೮ರಲ್ಲಿ ಪ್ರಾರಂಭಿಸಿದ ಈ ಸಂಸ್ಥೆಯು ಆಗ್ನೇಯ ಏಷಿಯಾದ ಅತಿದೊಡ್ಡ ಎಂಜಿನಿಯರಿಂಗ್ ಸಂಸ್ಥೆಗಳಲ್ಲಿ ಒಂದೆನಿಸಿದ 'ಎಲ್ ಅಂಡ್ ಟಿ ಕೊಮಾತ್ಸು' ಸಿಮೆಂಟ್, ಕಟ್ಟಡ ನಿರ್ಮಾಣ ಮತ್ತು ಎಂಜಿನಿಯರಿಂಗ್ ವಲಯದಲ್ಲಿ ಮಹತ್ವ ಪಡೆದಿದೆ. ಮಣ್ಣೆತ್ತುವ ಯಂತ್ರ, ಭಾರ ಎತ್ತುವ ಯಂತ್ರ, ಕವಾಟಗಳು, ಬೆಸುಗೆ ವಸ್ತುಗಳು, ಕಾಂಕ್ರೀಟ್ ಮಿಶ್ರಣ ಯಂತ್ರ ಮುಂತಾದ ಹಲವು ಉತ್ಪನ್ನಗಳಿಗೆ ಹೆಸರಾಗಿದೆ. ಬೆಂಗಳೂರಿನ ಪ್ರಥಮ ಮೇಲುರಸ್ತೆ (flyover) ನಿರ್ಮಾಣದಲ್ಲಿ ಎಲ್ ಅಂಡ್ ಟಿ ಯ ಕೊಡುಗೆ ಮಹತ್ತರವಾದುದು. ಜಪಾನಿನ 'ಕೊಮಾತ್ಸು ಏಷಿಯಾ ಅಂಡ್ ಪೆಸಿಫಿಕ್' ಸಂಸ್ಥೆಯ ಜೊತೆಗೂಡಿ ಕಟ್ಟಡ ನಿರ್ಮಾಣ ಮತ್ತು ಯಂತ್ರ ತಯಾರಿಕಾ ಘಟಕವಾಗಿ ಖ್ಯಾತಿ ಗಳಿಸಿದೆ.

ಹಿಂದೂಸ್ಥಾನ್ ಮೆಷಿನ್ ಟೂಲ್ಸ್ (ಎಚ್.ಎಂ.ಟಿ.): ಸ್ವಿಟ್ಜರ್‌ಲ್ಯಾಂಡಿನ 'ಆರ್ಲಿಕಾನ್' ಸಂಸ್ಥೆಯ ಸಹಯೋಗದೊಂದಿಗೆ ೧೯೫೩ರಲ್ಲಿ ಆರಂಭವಾದ ಎಚ್.ಎಂ.ಟಿ. ಹತ್ತು ಹಲವು ಬಗೆಯ ಯಂತ್ರ ತಯಾರಿಕೆಯಲ್ಲಿ ಹೆಸರು ಗಳಿಸಿತು. 'ಎಚ್.ಎಂ.ಟಿ. ಲೇತ್' ಎಂದರೆ ಆ ಕಾಲದಲ್ಲಿ ವಿಶ್ವಾಸಾರ್ಹತೆಯ ಒಂದು ಸಂಕೇತ. ೩೦ಕ್ಕೂ ಹೆಚ್ಚು ವಿದೇಶಿ ಕಂಪನಿಗಳೊಂದಿಗೆ ಪಾಲುದಾರಿಕೆ ಪಡೆದು ಕೊರೆಯುವ–ಲೋಹ ತೆಗೆಯುವ ಯಂತ್ರಗಳು ಕೈಗಡಿಯಾರಗಳು, ಟ್ರ್ಯಾಕ್ಟರ್‌ಗಳು, ಒತ್ತು ಮತ್ತು ಮುದ್ರಣ ಯಂತ್ರಗಳು ಎರಕ ಯಂತ್ರಗಳು, ಸಿ.ಎನ್.ಸಿ. ಯಂತ್ರಗಳು, ಆಹಾರ ಸಂಸ್ಕರಣ ಯಂತ್ರಗಳು ಹೀಗೆ ಬಹುವಿಧ ಉತ್ಪನ್ನಗಳನ್ನು ತಯಾರಿಸಿ ಖ್ಯಾತಿ ಗಳಿಸಿತು. ಈ ಪೈಕಿ ಯಂತ್ರ ವಿಭಾಗ–೧ ಮತ್ತು ೨, ಎಚ್.ಎಂ.ಟಿ. ಅಂತರರಾಷ್ಟ್ರೀಯ, ಕೈಗಡಿಯಾರ ೧ ಮತ್ತು ೨, ಹೀಗೆ ೫ ಘಟಕಗಳು ಬೆಂಗಳೂರಿನಲ್ಲಿವೆ. ತುಮಕೂರಿನ ಕ್ಯಾತ್ಸಂದ್ರ ಬಳಿ ಇರುವ ಕೈಗಡಿಯಾರದ ಬಿಡಿ ಭಾಗಗಳ ತಯಾರಿಕಾ ಘಟಕದಲ್ಲಿ ೧೭೫೦ ಮಂದಿ ಸ್ಥಳೀಯರಿಗೆ ಉದ್ಯೋಗ ನೀಡಲಾಗಿದೆ.

ಭಾರತ್ ಫ್ರಿಟ್ಸ್ ವರ್ನರ್ ಸಂಸ್ಥೆ : ಇದು ಜರ್ಮನಿಯ ಫ್ರಿಟ್ಸ್ ವರ್ನರ್ ಸಂಸ್ಥೆಯೊಂದಿಗೆ ಒಂದು ಜಂಟಿ ಸಂಸ್ಥೆಯಾಗಿ ಬೆಂಗಳೂರಿನ ಪೀಣ್ಯಾ ಕೈಗಾರಿಕಾ

ಪ್ರದೇಶದಲ್ಲಿ ೧೯೬೧ರಲ್ಲಿ ಅಸ್ತಿತ್ವಕ್ಕೆ ಬಂತು. ಕಾರಣಾಂತರದಿಂದ ಆ ಮುಂದಿನ ೫ ವರ್ಷಗಳಲ್ಲೇ ಕೊಲ್ಕೊತ್ತಾದ ಕೊಠಾರಿ ಸಮೂಹಕ್ಕೆ ಸೇರಿಕೊಂಡಿತು. ಮತ್ತೆ ೧೯೭೭ರಲ್ಲಿ ಜರ್ಮನಿಯ 'ಬರ್ಕ್‌ಹಾರ್ಡ್ ಅಂಡ್ ವೆಬರ್' ಸಂಸ್ಥೆಯ ಜೊತೆಗೂಡಿತು. ಹತ್ತು ಹಲವು ಕ್ಷೇತ್ರಗಳಿಗೆ ಬಳಸಲಾಗುವ ಮಿಲ್ಲಿಂಗ್, ಡ್ರಿಲ್ಲಿಂಗ್, ಸಿ.ಎನ್.ಸಿ. ಯಂತ್ರಗಳು ಉತ್ಪಾದನೆ ಯಾಗುತ್ತವೆ. ಸುಮಾರು ೪೫೦ ಮಂದಿಗೆ ಇಲ್ಲಿ ಉದ್ಯೋಗ ನೀಡಲಾಗಿದೆ.

ವಿದ್ಯುತ್ ಮತ್ತು ವಿದ್ಯುನ್ಮಾನ ಉಪಕರಣ ತಯಾರಿಕೆ : ಮೈಸೂರು ಸರ್ಕಾರವು ೧೯೩೬ರ ವೇಳೆಗೆ ಆರಂಭಿಸಿದ ಹಲವಾರು ವಿದ್ಯುತ್ ಮತ್ತು ವಿದ್ಯುನ್ಮಾನ ಉಪಕರಣ ಸಂಸ್ಥೆಗಳಲ್ಲಿ ಹೆಚ್ಚಿನವನ್ನು ಬೆಂಗಳೂರಿನಲ್ಲೇ ಸ್ಥಾಪಿಸಿತು. ಈ ಪೈಕಿ ಮುಖ್ಯವಾದವು ಮೈಸೂರು ಲ್ಯಾಂಪ್ಸ್, ರೆಮ್‌ಕೋ, ಮೈಸೂರು ವಿದ್ಯುತ್ ಕಾರ್ಖಾನೆ, ಮೈಸೂರು ಪಿಂಗಾಣಿ ಕಾರ್ಖಾನೆ. ಹೀಗೆ ೧೯೬೫ರಲ್ಲಿ ಜರ್ಮನಿಯ 'ಎಇಜಿ-ಟೆಲಿಫಂಕನ್' ಸಂಸ್ಥೆಯ ಸಹಯೋಗದೊಂದಿಗೆ ಆರಂಭವಾದ 'ನೂತನ ಸರ್ಕಾರಿ ವಿದ್ಯುತ್ ಕಾರ್ಖಾನೆ (NGEF) ೧೯೮೬ರ ವರೆಗೆ ಅತ್ಯಂತ ಸಮರ್ಥವಾಗಿಯೂ, ಲಾಭದಾಯಕವಾಗಿಯೂ ಕೆಲಸ ಮಾಡಿತು. ಈ ಸಂಸ್ಥೆಯಲ್ಲಿ ವಿದ್ಯುತ್ ಮೋಟಾರ್, ವಿದ್ಯುತ್ ಪರಿವರ್ತಕ ಸರ್ಕ್ಯೂಟ್ ಬ್ರೇಕರ್ ಸ್ವಿಚ್‌ಗೇರ್, ವಿದ್ಯುತ್ ಪರ್ಯಾಯಕ, ಪವರ್ ಡಯೋಡ್ ಮುಂತಾದ ವಿದ್ಯುತ್ ಉಪಕರಣಗಳು ತಯಾರಾಗುತ್ತಿದ್ದವು. ೧೯೮೬ರಲ್ಲಿ ಎ.ಇ.ಜಿ. ಸ್ವತಂತ್ರ ಸಂಸ್ಥೆಯಾಗಿ ಹೊರಬಂತು. ಅಂದಿನಿಂದ 'ನೂಸವಿಕಾ' ರಫ್ತು ವಹಿವಾಟಿನಲ್ಲಿ ತೀರ ಇಳಿಮುಖವಾಯಿತು. ಆಡಳಿತದಲ್ಲಿ ರಾಜಕೀಯ ಹಸ್ತಕ್ಷೇಪವೂ ಹೆಚ್ಚಾಗಿ ಸಂಸ್ಥೆಯು ನಷ್ಟ ಅನುಭವಿಸತೊಡಗಿತು. ೨೦೦೦ದ ಹೊತ್ತಿಗೆ ಕಾರ್ಖಾನೆಯು ಮುಚ್ಚಲೇಬೇಕಾದ ಪರಿಸ್ಥಿತಿಗಿಳಿಯಿತು. ಕಾರ್ಖಾನೆಯಲ್ಲಿ ಮುಖ್ಯ ಆಡಳಿತಾಧಿಕಾರಿ ಯಾಗಿದ್ದ ತ.ರಂ. ಕೃಷ್ಣಗೌಡರು ತಾಂತ್ರಿಕ ವಿಷಯಗಳೂ ಸೇರಿದಂತೆ ಎಲ್ಲ ವಿಷಯಗಳಲ್ಲೂ ಕನ್ನಡಭಾಷೆಗೆ ಆದ್ಯತೆ ನೀಡುತ್ತಿದ್ದುದು ಅವರೇ ಉತ್ಸಾಹದಿಂದ ಒಂದು 'ಇಂಗ್ಲಿಷ್ ಕನ್ನಡ ತಾಂತ್ರಿಕ ನಿಘಂಟು' ರಚಿಸಿದ್ದು ಹೆಚ್ಚಿನ ವಿಶೇಷ. ರಾಜ್ಯ ಸರ್ಕಾರ ೧೯೮೮ರಲ್ಲಿ ಇನ್ನೊಂದು 'ನೂ.ಸ.ವಿ.ಕಾ' ಘಟಕವನ್ನು ಹುಬ್ಬಳ್ಳಿಯಲ್ಲಿ ಆರಂಭಿಸಿದ್ದು ಎ.ಸಿ. ಮೋಟಾರುಗಳ ತಯಾರಿಕೆ ಮತ್ತು ಮಾರಾಟ ಇದಿಷ್ಟನ್ನೇ ಗುರಿಯಾಗಿಟ್ಟು ಕೊಂಡಿರುವ ಈ ಘಟಕ ಈಗಲೂ ಉಳಿದುಕೊಂಡಿದೆ.

ಬೆಂಗಳೂರು-ಮೈಸೂರು ರಸ್ತೆಯ ಬ್ಯಾಟರಾಯನಪುರದಲ್ಲಿರುವ 'ಕರ್ನಾಟಕ ವಿದ್ಯುತ್ ಕಾರ್ಖಾನೆ' (ಹಿಂದಿನ ಮೈಸೂರು ಎಲೆಕ್ಟ್ರಿಕ್ ಕಂಪನಿ)ಯು ತನ್ನ ಹಿಂದಿನ ಪ್ರಾಮುಖ್ಯತೆಯನ್ನು ಉಳಿಸಿಕೊಂಡಿಲ್ಲವಾದರೂ, ವಿದ್ಯುತ್ ಇಲಾಖೆಗೆ ಅಗತ್ಯವಾದ ಪರಿವರ್ತಕ (Transformer), ಪ್ರಸರಣ ಗೋಪುರ ಮತ್ತು ವಿದ್ಯುತ್ ಪಂಪ್‌ಗಳನ್ನು ಉತ್ಪಾದಿಸುತ್ತಿದೆ.

ಬೆಂಗಳೂರಿನ ಯಶವಂತಪುರ ಪ್ರದೇಶದಲ್ಲಿ ರಾಜ್ಯಸರ್ಕಾರ ಹೂಡಿದ ೧.೬೭ ಕೋಟಿ ರೂ.ಗಳ ಬಂಡವಾಳದಿಂದ ೧೯೩೬ರಲ್ಲಿ ಆರಂಭವಾದ ಪ್ರಸಿದ್ಧ **'ಮೈಸೂರು ಲ್ಯಾಂಪ್ಸ್'** ಈಗ ಇತಿಹಾಸ ಸೇರಿದೆ. ಸುಮಾರು ೧೯೦೦ ಮಂದಿ ಕಾರ್ಮಿಕರಿದ್ದ

ಈ ಕಾರ್ಖಾನೆಯಲ್ಲಿ ವಿದ್ಯುತ್ ಬಲ್ಬ್‌ಗಳು, ಫ್ಲೋರಸೆಂಟ್ ಕೊಳವೆ ದೀಪಗಳು, ಆಧಾರ ತಂತಿಗಳು, ಮೆಗ್ನೀಷಿಯಂ ಮತ್ತು ಟಂಗ್‌ಸ್ಟನ್ ತಂತಿ ಸುರುಳಿಗಳು ಮುಂತಾದ ವಸ್ತುಗಳು ತಯಾರಾಗುತ್ತಿದ್ದವು. ಇಂದಿಗೂ ಕಂಗೊಳಿಸುವ ಮೈಸೂರು ಅರಮನೆಯ ಬೃಂದಾವನ ಉದ್ಯಾನದ ವಿದ್ಯುದಲಂಕಾರಗಳು 'ಮೈಸೂರ್ ಲ್ಯಾಂಪ್ಸ್'ನ ಕೊಡುಗೆಗಳು. ಈ ಕಾರ್ಖಾನೆಯ ಉತ್ಪನ್ನಗಳಿಗೆ ತೀವ್ರ ಪೈಪೋಟಿ ಒಡ್ಡುತ್ತಿದ್ದ ದೇಶದ ಇನ್ನೊಂದು ಸಂಸ್ಥೆ ಎಂದರೆ 'ಬೆಂಗಾಲ್ ಲ್ಯಾಂಪ್ಸ್' ಮಾತ್ರ. ದೇಶದ ಮಾರುಕಟ್ಟೆಯನ್ನು ಅಂತರರಾಷ್ಟ್ರೀಯ ಹಾಗೂ ಖಾಸಗಿ ಸಂಸ್ಥೆಗಳು ಆಕ್ರಮಿಸಿದ ನಂತರ ಇವೆರಡೂ ಸಂಸ್ಥೆಗಳು ಈಗ ಮುಚ್ಚಿವೆ.

'ರೆಮ್ಕೋ' ಎಂದೇ ಹೆಸರಾಗಿದ್ದ **'ರೇಡಿಯೋ ಮತ್ತು ಎಲೆಕ್ಟ್ರಿಕಲ್ ಮಾನ್ಯುಫ್ಯಾಕ್ಚರಿಂಗ್ ಕಂಪನಿ'** ಬೆಂಗಳೂರಿನಲ್ಲಿ ೧೯೪೬ರಲ್ಲಿ ಆರಂಭವಾಯಿತು. ವಾಣಿಜ್ಯ ಮತ್ತು ಕೈಗಾರಿಕಾ ಬಳಕೆಯ ವಿದ್ಯುನ್ಮಾನ ಉಪಕರಣ ತಯಾರಿಕೆ ಇದರ ಮುಖ್ಯ ಗುರಿಯಾಗಿತ್ತು. ವೋಲ್ಟ್‌ಮೀಟರ್, ಆಮ್‌ಮೀಟರ್, ವ್ಯಾಟ್‌ಮೀಟರ್ ಎನರ್ಜಿಮೀಟರ್ ಮುಂತಾದ ಉಪಕರಣಗಳು ಮತ್ತು ಅವುಗಳ ಬಿಡಿಭಾಗಗಳು ಇಲ್ಲಿ ತಯಾರಾಗುತ್ತಿವೆ. ಹಿಂದೆ ಎ.ಸಿ. ಕವಾಟಗಳ ರೇಡಿಯೋ ಪ್ರಚಲಿತವಾಗಿತ್ತು. ಆಗ ಡಯೋಡ್, ಟ್ರೈಯೋಡ್, ಪೆಂಟೋಡ್ ಮುಂತಾದ ವಿದ್ಯುನ್ಮಾನ ಕವಾಟಗಳು ಇಲ್ಲಿ ತಯಾರಾಗುತ್ತಿದ್ದವು. ಮುಂದೆ ರಾಜ್ಯ ಸರ್ಕಾರವು ಹಣಕಾಸಿನ ಪರಿಸ್ಥಿತಿಯನ್ನು ನಿಭಾಯಿಸಲಾರದೆ ಇದನ್ನು ೧೯೭೬ರಲ್ಲಿ 'ಭಾರತ್ ಹೆವಿ ಎಲೆಕ್ಟ್ರಿಕಲ್ಸ್ ನಿಯಮಿತ' (ಬಿ.ಎಚ್.ಇ.ಎಲ್.)ನಲ್ಲಿ ವಿಲೀನಗೊಳಿಸಿತು.

ಭಾರತ ಎಲೆಕ್ಟ್ರಾನಿಕ್ಸ್ ನಿಯಮಿತ, (ಬಿ.ಇ.ಎಲ್.): ಕೇಂದ್ರ ಸರ್ಕಾರದ ಅಧೀನ ಸಂಸ್ಥೆಯಾಗಿ ೧೯೫೪ರಲ್ಲಿ ಆರಂಭವಾಯಿತು. ಇದು ಸುಮಾರು ೭೮೦೦ ಉದ್ಯೋಗಿಗಳನ್ನು ಹೊಂದಿದ್ದು, ದೇಶದ ಇತರ ಕೇಂದ್ರಗಳಲ್ಲೂ ತಯಾರಿಕಾ ಮತ್ತು ವಿತರಣ ಘಟಕಗಳನ್ನು ಹೊಂದಿದೆ.

ಕಳೆದ ಶತಮಾನದ ೬೦-೭೦ರ ದಶಕದಲ್ಲಿ ವಿದೇಶಿ ವಸ್ತುಗಳ ಆಮದಿಗೆ ನಿರ್ಬಂಧವಿದ್ದ ಕಾರಣ, ಇಲ್ಲಿ ತಯಾರಾಗುತ್ತಿದ್ದ ವಿವಿಧ ರೇಡಿಯೋ ಕವಾಟಗಳು (valves), ಟ್ರಾನ್ಸಿಸ್ಟರ್ ಕವಾಟಗಳು, ರೋಧಕಗಳು, ರೇಡಿಯೋ ಕಾಯಿಲ್‌ಗಳು ಮುಂತಾದ ವಿದ್ಯುನ್ಮಾನ ಬಿಡಿಭಾಗಗಳಿಗೆ ಅಗಾಧ ಬೇಡಿಕೆಯಿತ್ತು. ತಂತ್ರ ಜ್ಞಾನದ ಹೊಸ ಹೊಸ ಆವಿಷ್ಕಾರಗಳನ್ನು ಅಳವಡಿಸಿಕೊಳ್ಳುತ್ತ ಬಂದಿರುವ ಬಿ.ಇ.ಎಲ್., ದೇಶದ ರಕ್ಷಣಾ ಇಲಾಖೆಗೆ ಅಗತ್ಯವಾದ ವಿದ್ಯುನ್ಮಾನ ಸಾಧನಗಳ ಉತ್ಪಾದನೆಯಲ್ಲಿ ಅಪೂರ್ವ ಸಾಧನೆ ಮಾಡುತ್ತ ಬಂದಿದೆ. ವಿಮಾನದ ೩ಡಿ ರೇಡಾರ್‌ಗಳ ಬಿಡಿಭಾಗಗಳನ್ನು ಇಂಡೋನೇಷಿಯಾಕ್ಕೂ, ಲೇಸರ್ ವ್ಯಾಪ್ತಿ ಗುರ್ತಿಸುವ ಸಾಧನಗಳನ್ನು ಇಸ್ರೇಲ್‌ಗೂ ಸಿಂಬಲೈನ್ ರೇಡಾರ್‌ಗಳ ನವೀಕರಣವನ್ನು ಈಜಿಪ್ಟಿಗೂ, ಸೌರಶಕ್ತಿ ಬ್ಯಾಟರಿ ವ್ಯವಸ್ಥೆಯನ್ನು ಜರ್ಮನಿಗೂ, ಸೌರಶಕ್ತಿ ಚಾಲಿತ ಸಂಚಾರ ನಿಯಂತ್ರಣ ವ್ಯವಸ್ಥೆಯನ್ನು ದಕ್ಷಿಣ ಅಮೆರಿಕಾ ದೇಶಗಳಿಗೂ ನೀಡಿ ಅಪಾರ ವಿದೇಶೀ ವಿನಿಮಯ ಗಳಿಸಿದೆ. ಆಕಾಶವಾಣಿಯ 'ಪ್ರಸಾರ ಭಾರತಿ' ಯೋಜನೆಯಡಿ ಅಗತ್ಯವಾದ ಡಿ.ಟಿ.ಎಚ್. ಸಾಧನ, ಟಿವಿ ಶಿರಪೆಟ್ಟಿಗೆ ವಿದ್ಯುನ್ಮಾನ ಮತಯಂತ್ರ ಇಂತಹ ವಿಶಿಷ್ಟ ಉತ್ಪನ್ನಗಳು ಬಿ.ಇ.ಎಲ್.ನ ಕೊಡುಗೆಗಳು.

ಬೆಂಗಳೂರಿನ ಜಾಲಹಳ್ಳಿ ಪ್ರದೇಶದಲ್ಲಿ ನೆಲೆಗೊಂಡಿರುವ ಬಿ.ಇ.ಎಲ್. ದೇಶದ ರಕ್ಷಣಾ ವ್ಯವಸ್ಥೆಯಲ್ಲಿ ಒಂದು ಮಹತ್ತರ ಪಾತ್ರ ವಹಿಸುತ್ತಿದೆ.

ಐ.ಟಿ.ಐ. ಮತ್ತು ಕರ್ನಾಟಕ ಟೆಲಿಕಾಮ್ : ೧೯೪೮ರಲ್ಲಿ ಒಂದು ಖಾಸಗಿ ಸಂಸ್ಥೆಯಾಗಿ ಜನ್ಮ ತಳೆದು ೧೯೮೫ರ ಹೊತ್ತಿಗೆ ಕೇಂದ್ರ ಸರ್ಕಾರದ ಸಾರ್ವಜನಿಕ ಉದ್ದಿಮೆಯಾಗಿ ಬೆಳೆದುಬಂದಿದ್ದು ಒಂದು ರೋಚಕ ಇತಿಹಾಸ. ಅಂದಿನ ಅಗತ್ಯಗಳಲ್ಲಿ ಒಂದೆನಿಸಿದ್ದ ದೂರವಾಣಿ ಉಪಕರಣ (ಟೆಲಿಫೋನ್), ಸ್ವಯಂಚಾಲಿತ ವಿನಿಮಯ ಕೇಂದ್ರಗಳು, ಪ್ರಸರಣ ವ್ಯವಸ್ಥೆಗಳು ಮುಂತಾದವುಗಳ ವಿನ್ಯಾಸ, ಅಭಿವೃದ್ಧಿ ತಯಾರಿಕೆ ಹಾಗೂ ವಿತರಣೆ ಇವುಗಳ ಗುರಿ ಹೊಂದಿದ್ದ ಈ ಸಂಸ್ಥೆ ೧೯೯೨ರಲ್ಲಿ ಆಲ್ಕಾಟೆಲ್ (Alkatel) ಸಂಸ್ಥೆಯೊಂದಿಗೆ OCB 283/OSN ಎಂಬ ಹೊಸ ಯೋಜನೆ, ೧೯೯೩ರಲ್ಲಿ ಡೆನ್ಮಾರ್ಕ್‌ನ ಎನ್.ಕೆ.ಟಿ. ಸಂಸ್ಥೆಯೊಡಗೂಡಿ 'ದ್ಯುತಿ ಎಳೆ' (optical fibre) ಬಳಸುವ ಆಂಕಿಕ ಉಪಕರಣ ತಯಾರಿಕೆಗೂ, ಕೊರಿಯಾದ ಟೆಲಿಕಾಂ ಸಂಸ್ಥೆಗಳೊಡಗೂಡಿ ರೇಡಿಯೋ ಪೇಜಿಂಗ್ ಸೇವೆಯಲ್ಲಿ ತೊಡಗಿತು. ೧೯೯೭ರ ಹೊತ್ತಿಗೆ ಖಾಸಗಿ ಟೆಲಿಕಾಂ ಸಂಸ್ಥೆಗಳ ಪೈಪೋಟಿಯಿಂದಾಗಿ ಐಟಿಐನ ಸಾರ್ವಭೌಮತ್ವಕ್ಕೆ ಧಕ್ಕೆಯಾಯಿತು. ಸುಮಾರು ೭೮೦೦ ಮಂದಿ ಉದ್ಯೋಗಿಗಳನ್ನು ಹೊಂದಿದ್ದ ಈ ಸಂಸ್ಥೆ ೨೦೧೦ರ ವೇಳೆಗೆ ಕೇವಲ ೧೫೦೦ ಮಂದಿ ಉದ್ಯೋಗಿಗಳನ್ನು ಮಾತ್ರ ನಿಭಾಯಿಸಲು ಸಾಧ್ಯವಾಯಿತು.

ಐ.ಟಿ.ಐ.ನ ಸಹಸಂಸ್ಥೆಯೆಂಬಂತೆ ೧೯೮೫ರಲ್ಲಿ ಪ್ರಾರಂಭವಾದ **'ಕರ್ನಾಟಕ ಟೆಲಿಕಾಂ'** ಈಗ ಒಂದು ಸಾರ್ವಜನಿಕ ನಿಯಮಿತ ಸಂಸ್ಥೆಯಾಗಿದೆ. ದೂರವಾಣಿ ಉಪಕರಣಗಳ ತಯಾರಿಕೆ ಮತ್ತು ಮಾರಾಟ ವ್ಯವಸ್ಥೆಯನ್ನು ಇದು ಇರಿಸಿಕೊಂಡಿದೆ. ppm-30 ಛಾನೆಲ್ ಹಾಗೂ Rax/ILT-512 ಉಪಕರಣಗಳು ಇಲ್ಲಿ ತಯಾರಾಗುತ್ತಿವೆ. ಹೊಸ ವಸ್ತುಗಳ ಉತ್ಪಾದನೆಗಾಗಿ ಬೇಕಾದ ತಂತ್ರಜ್ಞಾನವನ್ನು 'ಸಿ-ಡಾಟ್' ಸಂಸ್ಥೆಯಿಂದ ಪಡೆದುಕೊಂಡಿದೆ. ಸಂಸ್ಥೆಯ ಮೂಲ ಬಂಡವಾಳ ೧೦೦ ಕೋಟಿ ರೂ.ಗಳಾಗಿದ್ದು, ಸುಮಾರು ೩೨೦ ಮಂದಿ ಖಾಯಂ ಉದ್ಯೋಗಿಗಳನ್ನು ಹೊಂದಿದೆ.

ವಾಯುಯಾನ ವಾಹನ ಸಂಸ್ಥೆಗಳು : ವಿಮಾನ, ಹೆಲಿಕಾಪ್ಟರ್ ಹಾಗೂ ಅವುಗಳ ಬಿಡಿಭಾಗಗಳ ತಯಾರಿಕೆ ಮತ್ತು ಅದಕ್ಕೆ ಸಂಬಂಧಿಸಿದ ಎಲ್ಲ ಚಟುವಟಿಕೆಗಳು ಬೆಂಗಳೂರಿನಲ್ಲಿ ನೆಲೆಗೊಂಡಿರುವ ೪ ಕೇಂದ್ರ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಲ್ಲಿ ನಡೆಯುತ್ತಿವೆ. ಆ ನಾಲ್ಕು ಸಂಸ್ಥೆಗಳೆಂದರೆ ಹಿಂದೂಸ್ಥಾನ್ ಏರೋನಾಟಿಕ್ಸ್ ನಿ., ಅನಿಲ ತಿರುಬಾನಿ ಪರಿಶೋಧನಾ ಸಂಸ್ಥೆ (G.T.R.E), ವೈಮಾನಿಕ ಅಭಿವೃದ್ಧಿ ಸಂಸ್ಥೆ (A.D.E.) ಮತ್ತು ರಾಷ್ಟ್ರೀಯ ವೈಮಾನಿಕ ಪ್ರಯೋಗಾಲಯ (N.A.L) ಈ ಎಲ್ಲ ಚಟುವಟಿಕೆಗಳ ಜೊತೆಗೆ 'ವೈಮಾನಿಕ ಅಭಿವೃದ್ಧಿ ಏಜೆನ್ಸಿ' (ADA) ಕೂಡಾ ಇದೆ.

ಎಚ್‌ಎಎಲ್ : ಮೈಸೂರು ಸಂಸ್ಥಾನದಲ್ಲಿ ವಿಮಾನ ತಯಾರಿಕೆಗೂ ಮುಂಚೆ ಸರ್ ಎಂ. ವಿಶ್ವೇಶ್ವರಯ್ಯ ಅವರ ಆಲೋಚನೆಯಿದ್ದುದು ಕಾರುಗಳ ತಯಾರಿಕೆಗೆ. ಅದರ ಪೂರ್ವಸಿದ್ಧತೆ ಗಾಗಿ ಅವರು ಕೆಲವು ಯೂರೋಪ್ ದೇಶಗಳಿಗೆ ಭೇಟಿ ನೀಡಿ ಬಂದು ಯೋಜನೆ ಯೊಂದನ್ನು ಸಿದ್ಧಪಡಿಸಿ ಸರ್ಕಾರಕ್ಕೆ ನೀಡಿದ್ದರು (೧೯೩೫ರಲ್ಲಿ). ಆದರೆ

ಬ್ರಿಟಿಷ್ ಆಡಳಿತದ ಭಾರತ ಸರ್ಕಾರ ಅದಕ್ಕೊಪ್ಪಲಿಲ್ಲ. ಅದಕ್ಕಾಗಿ ಬೆಂಗಳೂರಿನಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ನಿಗದಿಪಡಿಸಿದ್ದ ೩೦೦ ಎಕರೆ ಭೂಮಿಯನ್ನು, ೪ ಕೋಟಿ ರೂ.ಗಳ ಬಂಡವಾಳ ಹೂಡಿ ವಿಮಾನ ಕಾರ್ಖಾನೆಯೊಂದನ್ನು ಸ್ಥಾಪಿಸಲು ಮುಂದೆ ಬಂದ ಮುಂಬೈನ ಉದ್ಯಮಿ ವಾಲ್‌ಚಂದ್ ಹೀರಾಚಂದ್ ಅವರಿಗೆ ನೀಡುವಂತೆ ಶಿಫಾರಸು ಮಾಡಿದರು. ಅದಕ್ಕೆ ಅಗತ್ಯವಾದ ವಿದ್ಯುತ್ತು ಮತ್ತು ನೀರು ಒದಗಿಸಲು ಮೈಸೂರು ಸರ್ಕಾರ ಒಪ್ಪಿದ್ದರಿಂದಾಗಿ **'ಹಿಂದೂಸ್ಥಾನ್ ಏರ್‌ಕ್ರಾಫ್ಟ್'** ಸಂಸ್ಥೆ ೧೯೪೧ರ ಜನವರಿ ೧೨ರಂದು ಅಸ್ತಿಭಾರ ಹಾಕಿತು.

ಅಮೆರಿಕದ ೨೨ ಮಂದಿ ಭಾರತದ ೩೦೦ ಮಂದಿ ತಂತ್ರಜ್ಞರು ಮತ್ತು ಕುಶಲಕರ್ಮಿಗಳು ಹಗಲಿರುಳೂ ಶ್ರಮಿಸಿದ್ದರ ಫಲವಾಗಿ ಮೊದಲ ವಿಮಾನ 'ಹಾರ್ಲೋ ಪಿ.ಸಿ. ೫ಎ' ತನ್ನ ಮೊದಲ ಹಾರಾಟ ಪರೀಕ್ಷೆಯನ್ನು ೨೯-೭-೧೯೪೧ರಂದು ನಡೆಸಿತು. ೧೯೪೩ರಲ್ಲಿ ಡಾ. ವಿ.ಎಂ. ಘಾಟ್ಗೆ ಅವರು ವಿನ್ಯಾಸಗೊಳಿಸಿ ಸಿದ್ಧಗೊಂಡ ೧೦ ಆಸನಗಳ ಗ್ಲೈಡರ್ ವಿಮಾನ ಕೂಡಾ ಯಶಸ್ವಿಯಾಗಿ ಹಾರಾಡಿತು.

ಅತ್ಯಲ್ಪ ಕಾಲದಲ್ಲೇ ವಿಶ್ವದ ಗಮನ ಸೆಳೆದ ಎಚ್.ಎ.ಎಲ್. ಎರಡನೇ ಜಾಗತಿಕ ಸಮರದಲ್ಲಿ ಹಾನಿಗೊಳಗಾದ ಅಮೆರಿಕ ವಿಮಾನಗಳ ದುರಸ್ತಿ ಕಾರ್ಯದಲ್ಲಿ ತೊಡಗಿತು. ಜಪಾನ್ ಭಾರತದ ಮೇಲೆ ಧಾಳಿ ಮಾಡಬಹುದಾದ ಭೀತಿಯಿಂದ ವಾಲ್‌ಚಂದ್ ಹೀರಾಚಂದ್ ಸಂಸ್ಥೆಯನ್ನು ಅಮೆರಿಕ ವಾಯುದಳಕ್ಕೆ ಮಾರಿಬಿಟ್ಟರು. ೧೯೪೨ರಲ್ಲಿ ಇದು ಮೈಸೂರು ಮತ್ತು ಅಮೆರಿಕ ಸರ್ಕಾರಗಳ ಜಂಟಿ ಮಾಲೀಕತ್ವಕ್ಕೆ ಒಳಪಟ್ಟಿತು.

ಆ ಮುಂದಿನ ೩ ವರ್ಷಗಳಲ್ಲಿ ೧೨೭೧ ವಿವಿಧ ಬಗೆಯ ವಿಮಾನಗಳ, ದಿನಕ್ಕೆ ೧೦ ಎಂಜಿನ್‌ಗಳ ಪುನರ್ ಜೋಡಣೆಯ ಸಾಮರ್ಥ್ಯವನ್ನು ಬೆಳೆಸಿಕೊಂಡಿತು. ೧೯೪೫ರಲ್ಲಿ ಭಾರತ ಸರ್ಕಾರದ ಪೂರ್ಣ ಆಡಳಿತಕ್ಕೆ ಬಂತು. ಡಾ. ವಿ.ಎಂ. ಘಾಟ್ಗೆ ಅವರ ನೇತೃತ್ವದಲ್ಲಿ ಆಧುನಿಕ ತರಬೇತಿ ವಿಮಾನ 'ಎಚ್.ಟಿ.-೨' (Hindustan Trainer) ಸಿದ್ಧಗೊಂಡು ೫.೮.೧೯೫೧ರಂದು ಮೊದಲ ಹಾರಾಟ ನಡೆಸಿತು. ೧೯೬೪ರ ಅಕ್ಟೋಬರ್ ೧ರಂದು 'ಹಿಂದೂಸ್ಥಾನ್ ಏರ್‌ಕ್ರಾಫ್ಟ್ ಲಿಮಿಟೆಡ್' ಮತ್ತು ಕಾನ್‌ಪುರದ 'ಏರ್‌ಕ್ರಾಫ್ಟ್ ಮಾನ್ಯುಫ್ಯಾಕ್ಚರಿಂಗ್ ಲಿಮಿಟೆಡ್' ಸಂಸ್ಥೆಗಳು ವಿಲೀನಗೊಂಡು 'ಹಿಂದೂಸ್ಥಾನ್ ಏರೋನಾಟಿಕ್ಸ್ ಲಿಮಿಟೆಡ್' ಎಂಬ ಹೊಸ ಸಾರ್ವಜನಿಕ ಉದ್ದಿಮೆ ಅಸ್ತಿತ್ವಕ್ಕೆ ಬಂತು. ಎಚ್.ಎ.ಎಲ್.ನ ಒಂದು ಭಾಗವಾಗೇ ಇದ್ದ 'ರೈಲ್ ಕೋಚ್' ವಿಭಾಗವು **'ಭಾರತ್ ಅರ್ತ್‌ಮೂವರ್ಸ್ ಲಿಮಿಟೆಡ್'**ನ ಬೆಂಗಳೂರು ವಿಭಾಗ ವಾಯಿತು. ಎಚ್.ಎ.ಎಲ್. ದೇಶಾದ್ಯಂತ ಏಳು ಸ್ಥಳಗಳಲ್ಲಿ ಘಟಕಗಳನ್ನು ಹೊಂದಿದ್ದರೂ, ತನ್ನ ಆಡಳಿತ ಕಛೇರಿಯನ್ನು ಬೆಂಗಳೂರಿನಲ್ಲಿಯೇ ಹೊಂದಿದೆ.

ಬೆಂಗಳೂರಿನ ಸಿ.ವಿ.ರಾಮನ್ ನಗರದಲ್ಲಿರುವ **'ಅನಿಲ ತಿರುಬಾನಿ ಪರಿಶೋಧನಾ ಸಂಸ್ಥೆ'** (GTRE) ಮಿಲಿಟರಿ ಟ್ಯಾಂಕ್, ಟರ್ಬೋಚಾರ್ಜರ್ ಮತ್ತಿತರ ಪ್ರಯೋಗಗಳಿಗೆ ಅನಿಲ ತಿರುಬಾನಿ(gas trubine)ಗಳನ್ನು ತಯಾರಿಸುತ್ತಿದೆ. 'ತೇಜಸ್' ಹಗುರ ಯುದ್ಧ ವಿಮಾನಕ್ಕೆ 'ಕಾವೇರಿ' ಎಂಜಿನ್ನನ್ನು ಸಿದ್ಧಪಡಿಸುತ್ತಿದೆ. ೧೯೫೯ರಲ್ಲಿ ಆರಂಭಗೊಂಡು

೧೯೮೧ರಲ್ಲಿ ಪೂರ್ಣ ವಿಕಾಸಗೊಂಡ ಈ ಸಂಸ್ಥೆಯಲ್ಲಿ ೮೦೦ ಮಂದಿ ವಿಜ್ಞಾನಿಗಳು ಮತ್ತು ೧೦೦೦ ಮಂದಿ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ.

ಭಾರತೀಯ ವಾಯುದಳ ಮತ್ತು ಇತರ ಸಂಸ್ಥೆಗಳ ವಿಮಾನ ಬಿಡಿಭಾಗಗಳನ್ನು ಸಂಗ್ರಹಿಸಿ ಪರೀಕ್ಷೆಗೊಳಪಡಿಸುವ ಉದ್ದೇಶದಿಂದ ೧೯೫೯ರಲ್ಲಿ **'ವೈಮಾನಿಕ ಅಭಿವೃದ್ಧಿ ಸಂಸ್ಥೆ'** (ADE) ಆರಂಭವಾಯಿತು. ೧೯೮೦ರ ಹೊತ್ತಿಗೆ ಪೈಲೆಟ್ ತರಬೇತಿ ಸಾಮೀಪ್ಯತೆ (Pilot Training Simulation), ಮರುಬಳಕೆ ಯೋಗ್ಯ ರಾಕೆಟ್ ಪಾದುಕೆ (Reusable Rocket Pad), ವಿದ್ಯುತ್‌ದ್ಯುತಿ ಸಂವೇದಕ (Electro-optic sensor), ಹಾರಾಟ ನಿಯಂತ್ರಣ ವ್ಯವಸ್ಥೆ (Flight Control System)ಗಳನ್ನು ಸಿದ್ಧಪಡಿಸಿತು. 'ಲಕ್ಷ್ಯ' ಎಂಬ ಚಾಲಕರಹಿತ ವಿಮಾನವನ್ನು ತಯಾರಿಸಿ, ಹಾರಾಟ ಪರೀಕ್ಷೆಗಳನ್ನು ನಡೆಸಿತು. ವಿಮಾನ ಬಿಡಿಭಾಗಗಳ ಪರೀಕ್ಷೆ ನಡೆಸುವ ಈ ಸಂಸ್ಥೆಯಲ್ಲಿ ೭೫೦ ಮಂದಿ ಎಂಜಿನಿಯರ್‌ಗಳೂ ತಂತ್ರಜ್ಞರೂ ಇದ್ದಾರೆ.

ವಿಶೇಷ ಆರ್ಥಿಕ ವಲಯ (S.E.Z.)ದ ಸೌಲಭ್ಯಗಳನ್ನೂ, ರಿಯಾಯಿತಿಗಳನ್ನೂ ಪಡೆದು ಬೆಳಗಾವಿಯಲ್ಲಿ ನೆಲೆಗೊಂಡಿರುವ ನಾಲ್ಕಾರು ವೈಮಾನಿಕ ಸಂಸ್ಥೆಗಳಲ್ಲಿ ಬೋಯಿಂಗ್ ವಿಮಾನದ ಬಿಡಿಭಾಗಗಳನ್ನು ತಯಾರಿಸಲಾಗುತ್ತಿದೆ.

ಆಟೋಮೊಬೈಲ್ ಉದ್ಯಮ: ಯಂತ್ರ ಚಾಲಿತ ವಾಹನಗಳು ಮತ್ತು ಅವುಗಳ ಬಿಡಿಭಾಗಗಳ ತಯಾರಿಕೆಯನ್ನು ನಾವು 'ಆಟೋಮೊಬೈಲ್ ಉದ್ಯಮ' ಎನ್ನುತ್ತೇವೆ. ಇಂದು ದೇಶದಲ್ಲಿ ಅತ್ಯಂತ ವೇಗಗತಿಯಲ್ಲಿ ಮುನ್ನಡೆಯುತ್ತಿರುವುದು ಇದೇ ಉದ್ಯಮ ಎಂದರೆ ತಪ್ಪಾಗದು.

ಕರ್ನಾಟಕದಲ್ಲಿ ಮೊದಲ ಸ್ಕೂಟರ್ ತಯಾರಿಕೆ ಆರಂಭವಾಗಿದ್ದು ಮದ್ದೂರು ಬಳಿಯ ಸೋಮನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ. 'ಕರ್ನಾಟಕ ಸ್ಕೂಟರ್ ಲಿಮಿಟೆಡ್' ಎಂಬ ಒಂದು ಖಾಸಗಿ ಸಂಸ್ಥೆ ೧೫೦ ಸಿ.ಸಿ. ಸಾಮರ್ಥ್ಯದ 'ಫಾಲ್ಕನ್' ಸ್ಕೂಟರುಗಳನ್ನು ಅಲ್ಲಿ ತಯಾರಿಸಿತು. ಆದರೆ ಹೆಚ್ಚಿನ ಅಭಿವೃದ್ಧಿಗೆ ಬೇಕಿದ್ದ ಬಂಡವಾಳದ ಕೊರತೆ, ಬಿಡಿ ಭಾಗಗಳಿಗೆ ಬೇರೆ ಉತ್ಪಾದಕರನ್ನು ಅವಲಂಬಿಸಬೇಕಿದ್ದ ಪರಿಸ್ಥಿತಿ, ಲ್ಯಾಂಬ್ರೆಟ್ಟಾ, ವೆಸ್ಪಾ ಬಜಾಜ್ ಸಂಸ್ಥೆಗಳ ಜೊತೆಗೆ ನಡೆದ ಸ್ಪರ್ಧೆ ಇವುಗಳಿಂದಾಗಿ ಅಸ್ತಿತ್ವಕ್ಕೆ ಬಂದ ೧೦ ವರ್ಷ ಗಳಲ್ಲೇ ಕಾರ್ಖಾನೆ ಮುಚ್ಚಲ್ಪಟ್ಟಿತು.

ಮೈಕೋ ಬಾಷ್ ಕಂಪನಿ: ಬೆಂಗಳೂರಿನ ಆಡುಗೋಡಿ ಪ್ರದೇಶದಲ್ಲಿ ಜರ್ಮನಿಯ ಬಾಷ್ (Bosch) ಸಂಸ್ಥೆಯು ೧೯೫೧ರಲ್ಲಿ 'ಮೋಟಾರ್ ಇಂಡಸ್ಟ್ರೀಸ್ ಕಂಪನಿ' (MICO)ಯನ್ನು ಸ್ಥಾಪಿಸಿತು. ಮೋಟಾರ್ ಎಂಜಿನ್‌ಗಳ ಬಿಡಿಭಾಗಗಳು ಮತ್ತು ಇತರೆ ವಿದ್ಯುದುಪಕರಣಗಳನ್ನು ಈ ಸಂಸ್ಥೆ ಉತ್ಪಾದಿಸುತ್ತಿದೆ. ಆಟೋಮೊಬೈಲ್‌ಗೆ ಸಂಬಂಧಿಸಿದ ತಂತ್ರಾಂಶ (software) ಅಭಿವೃದ್ಧಿ ಯೋಜನೆಯನ್ನು ಕಳೆದ ೧೫-೧೬ ವರ್ಷಗಳಿಂದ ಮಾಡುತ್ತ ಬಂದಿದೆ. ಹೊಸೂರು ರಸ್ತೆ ಬದಿಯ ನಾಗನಾಥಪುರದಲ್ಲಿ ಇನ್ನೊಂದು ಉತ್ಪಾದನಾ ಘಟಕವನ್ನು ಹೊಂದಿರುವ ಇದು ಸುಮಾರು ೬೦೦೦ ಮಂದಿಗೆ ಉದ್ಯೋಗ ನೀಡಿದೆ.

'ಬಿ.ಇ.ಎಂ.ಎಲ್.' ಎಂದೇ ಚಿರಪರಿಚಿತವಾಗಿರುವ **'ಭಾರತ್ ಅರ್ತ್ ಮೂವರ್ಸ್ ಲಿಮಿಟೆಡ್'** ಬೆಂಗಳೂರು ರೈಲ್ ಕೋಚ್ ವಿಭಾಗವೇ ಅಲ್ಲದೆ, ಕೆ.ಜಿ.ಎಫ್. ಬಳಿಯಿರುವ ವಿಭಾಗದಲ್ಲಿ ಗಣಿಗಾರಿಕೆ ಯಂತ್ರ, ಮಣ್ಣೆತ್ತುವ ಯಂತ್ರ, ಸಿಮೆಂಟ್-ರಸಗೊಬ್ಬರ ಹಾಗೂ ನೀರಾವರಿ ಕ್ಷೇತ್ರಗಳಿಗೆ ಸಂಬಂಧಿಸಿದ ಹಲಬಗೆಯ ಯಂತ್ರಗಳು ತಯಾರಾಗುತ್ತಿವೆ. ೧೯೮೦ರ ಹೊತ್ತಿಗೆ ಮೈಸೂರಿನಲ್ಲೂ ಒಂದು ಹೊಸ ವಿಭಾಗವನ್ನು ಆರಂಭಿಸಿ ಅಲ್ಲಿಯೂ ಭಾರೀ ಪ್ರಮಾಣದ ಡೀಸೆಲ್ ಯಂತ್ರಗಳನ್ನು ತಯಾರಿಸುತ್ತ ಬಂದಿದೆ.

ಬೆಂಗಳೂರಿನಲ್ಲಿರುವ ರೈಲ್‌ಕೋಚ್ ವಿಭಾಗವು ಉತ್ತಮ ಗುಣಮಟ್ಟದ ರೈಲು ಬೋಗಿಗಳನ್ನು ತಯಾರಿಸುತ್ತಿದೆ. ಭಾರತೀಯ ರೈಲ್ವೆ ನಿಗಮಕ್ಕೇ ಅಲ್ಲದೆ ಮಿಯೆನ್ಮಾರ್ (ಬರ್ಮಾ), ಶ್ರೀಲಂಕಾ, ಮಲೇಶಿಯಾ ಮುಂತಾದ ದೇಶಗಳ ಬೇಡಿಕೆಯನ್ನೂ ಪೂರೈಸುತ್ತಿದೆ. ಭೂಚಲನ ಯಂತ್ರಗಳ ಮಾರುಕಟ್ಟೆಯಲ್ಲಿ ಶೇ. ೭೦ ರಷ್ಟು ಆಧಿಪತ್ಯ ಹೊಂದಿರುವ ಬಿ.ಇ.ಎಂ.ಎಲ್., ಈಗ ರೊಬೋ ಯಂತ್ರಗಳನ್ನೂ ತಯಾರಿಸುತ್ತಿದೆ. ಸಂಸ್ಥೆಯಲ್ಲಿ ಸುಮಾರು ೭೫೦೦ ಮಂದಿ ಉದ್ಯೋಗಿಗಳಿದ್ದಾರೆ.

ವಿಕ್ರಾಂತ್ ಜೆ.ಕೆ. ಟೈರ್ಸ್ ನಿಯಮಿತ– ಚೆಕೋಸ್ಲವಾಕಿಯಾದ ಸಹಯೋಗದೊಂದಿಗೆ ಮೈಸೂರು ಕೆ.ಆರ್.ಎಸ್. ಹೆದ್ದಾರಿಯಲ್ಲಿ ೧೯೭೦ರಲ್ಲಿ ಅಸ್ತಿತ್ವಕ್ಕೆ ಬಂದ **'ವಿಕ್ರಾಂತ್ ಟೈರ್ಸ್ ಲಿಮಿಟೆಡ್'** ದಕ್ಷಿಣ ಭಾರತದ ಮೊಟ್ಟಮೊದಲ ಟೈರು ರಫ್ತು ಸಂಸ್ಥೆಯೆನಿಸಿತು. ೧೯೭೫ರಲ್ಲಿ ಕರ್ನಾಟಕ ಸರ್ಕಾರವೇ ಹೆಚ್ಚಿನ ಷೇರುಗಳನ್ನು ಕೊಂಡು ಇದನ್ನೊಂದು ಸಾರ್ವಜನಿಕ ಉದ್ದಿಮೆಯನ್ನಾಗಿಸಿತು. ೧೯೯೭ರಲ್ಲಿ ಹೆಸರಾಂತ 'ಜೆ.ಕೆ. ಟೈರ್ಸ್'ನೊಡನೆ ವಿಲೀನಗೊಂಡ ಇದರ ವಹಿವಾಟು ೨೦೧೦ರಲ್ಲಿ ೪೦೦೦ ಕೋಟಿ ರೂ.ಗಳಷ್ಟಾಯಿತು. ಇಂದು ತನ್ನ ಉತ್ಪನ್ನಗಳನ್ನು ೬೪ ದೇಶಗಳಿಗೆ ರಫ್ತು ಮಾಡುತ್ತಿರುವ ಮೈಸೂರಿನ ಒಂದು ಹೆಮ್ಮೆಯ ಉದ್ದಿಮೆ ಎನಿಸಿರುವ ಈ ಸಂಸ್ಥೆಯಲ್ಲಿ ಸುಮಾರು ೨೬೦೦ ಮಂದಿಗೆ ಉದ್ಯೋಗ ಲಭಿಸಿದೆ.

ರಾಜ್ಯದಲ್ಲಿ ಆರಂಭವಾದ ಕೆಲವೊಂದು ಹಳೆಯ ಕಾರ್ಖಾನೆಗಳ ಪೈಕಿ ಆಮ್ಕೋ ಬ್ಯಾಟರೀಸ್, ದಿ ಸನ್‌ರೈಸ್ ಆಟೋ ಇಂಡಸ್ಟ್ರೀಸ್, ಸಿಪಾನಿ ಆಟೋಮೊಬೈಲ್ಸ್ ಐಡಿಯಲ್ ಜಾವಾ, ಎಸ್ಕಾರ್ಟ್ಸ್(ಈಗ ಫೆಡರಲ್ ಮೊಘಲ್) ಮುಂತಾದವು ತಮ್ಮದೇ ರೀತಿಯ ಮಹತ್ವ ಪಡೆದುಕೊಂಡಿವೆ.

ತೈಲೋತ್ಪನ್ನಗಳ ಉದ್ಯಮ : ರಾಜ್ಯದಲ್ಲಿ ಯಾವುದೇ ತೈಲ ಉತ್ಪನ್ನಗಳ ನಿಕ್ಷೇಪ ಕಂಡುಬಂದಿಲ್ಲ. ಆದರೆ ಬೇರೆ ಬೇರೆ ಮೂಲಗಳಿಂದ ಸರಬರಾಜಾಗುವ ಕಚ್ಚಾತೈಲವನ್ನು ಹಂತಹಂತವಾಗಿ ಸಂಸ್ಕರಿಸಿ ಉಪ ಉತ್ಪನ್ನಗಳನ್ನು ಸಿದ್ಧಪಡಿಸುವ ಉದ್ದಿಮೆಗಳು ಮಂಗಳೂರು ಬಳಿ ಸ್ಥಾಪನೆಗೊಂಡಿವೆ. ೧೯೮೯ರಲ್ಲಿ **'ಮಂಗಳೂರು ರಿಫೈನರಿ ಮತ್ತು ಪೆಟ್ರೋಕೆಮಿಕಲ್ಸ್ ನಿ.'** (M.R.P.L) ಎಂಬ ಸಂಸ್ಥೆಯಲ್ಲಿ ಮೋಟಾರ್ ಸ್ಪಿರಿಟ್, ದ್ರವೀಕೃತ ಪೆಟ್ರೋಲಿಯಂ ಅನಿಲ (L.P.G.) ಕಲ್ಲೆಣ್ಣೆ (Naptha) ಹಾಗೂ ಶಿಲಾಜಿತ್ತು (Bituman) ಸಿದ್ಧಗೊಳ್ಳುತ್ತಿದ್ದು ಸುಮಾರು ೧೨೦೦ ಮಂದಿಗೆ ಉದ್ಯೋಗ ನೀಡಿದೆ. ಈ ಉದ್ದಿಮೆಯು ಈಗ ಕೇಂದ್ರ ಸರ್ಕಾರ ಅಧೀನದ **'ತೈಲ ಮತ್ತು ನೈಸರ್ಗಿಕ ಅನಿಲ ನಿಗಮ ನಿಯಮಿತ'**ದ (ONGC) ಅಂಗ ಸಂಸ್ಥೆಯಾಗಿದೆ.

ಎಂ.ಆರ್.ಪಿ.ಎಲ್.ನ ಅವಲಂಬಿತ ಸಂಸ್ಥೆಯಾಗಿ **'ಎಲ್.ಪಿ.ಜಿ. ಬಾಟ್ಲಿಂಗ್ ಪ್ಲ್ಯಾಂಟ್'** ಎಂಬ ಇನ್ನೊಂದು ಉದ್ದಿಮೆಯು "ಭಾರತ್ ಪೆಟ್ರೋಲಿಯಂ ಕಾರ್ಪೋರೇಷನ್(ನಿ)'ಯ ಅಧೀನದಲ್ಲಿ ೧೯೮೬ರಲ್ಲಿ ಕಾರ್ಯಾರಂಭ ಮಾಡಿತು. ಇಲ್ಲಿ ಗೃಹಬಳಕೆಯ ಹಾಗೂ ವಾಣಿಜ್ಯ ಬಳಕೆಯ ಅನಿಲವನ್ನು ಸಿಲಿಂಡರ್‌ಗಳಿಗೆ ತುಂಬಿಸಲಾಗುತ್ತದೆ.

ಮಾಹಿತಿ ತಂತ್ರಜ್ಞಾನ ಸಂಸ್ಥೆಗಳು : ದೇಶದ ಇಂದಿನ ಒಟ್ಟಾರೆ ವಿದೇಶೀ ವಿನಿಮಯದಲ್ಲಿ ಶೇ. ೧೫ರಷ್ಟನ್ನು ತಂದುಕೊಡಬಲ್ಲ ಏಕೈಕ ಉದ್ಯಮವೆಂದರೆ ಅದು ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಿಸಿದ್ದು. ಕರ್ನಾಟಕವು ಈ ಕ್ಷೇತ್ರದಲ್ಲಿ ಎಲ್ಲ ರಾಜ್ಯಗಳಿಗಿಂತ ಮುಂದಿದೆ. ರಾಜ್ಯ ಸರ್ಕಾರವು ೧೯೭೧ರ ಹೊತ್ತಿಗೇ ಗಣಕಯಂತ್ರ ಅಭಿವೃದ್ಧಿ ಕುರಿತ ಚಿಂತನೆ ನಡೆಸಿತಲ್ಲದೆ ವಿದೇಶದಿಂದ ಗಣಕವನ್ನು ಖರೀದಿಸಿತು. ೧೯೮೫ರಲ್ಲಿ ಮುಖ್ಯಮಂತ್ರಿ ರಾಮಕೃಷ್ಣ ಹೆಗ್ಡೆಯವರು, ರಾಜ್ಯದಲ್ಲಿ ಮಾಹಿತಿ ತಂತ್ರಜ್ಞಾನ ಅಭಿವೃದ್ಧಿ ಸಂಸ್ಥೆಗಳನ್ನು ಆರಂಭಿಸಲು ಅನಿವಾಸಿ ಭಾರತೀಯರನ್ನು ಆಮಂತ್ರಿಸಿದರು. ಕೇಂದ್ರ ಸರ್ಕಾರದ ಪೂರ್ಣ ಬೆಂಬಲ ಮತ್ತು ಸಹಕಾರದಿಂದ ಅತ್ತಿಬೆಲೆ (ಹೊಸೂರು ರಸ್ತೆ) ಸಮೀಪ 'ವಿದ್ಯುನ್ಮಾನ ನಗರ'ದ ನೆಲೆಗಾಗಿ ಅಗತ್ಯವಾದ ಭೂಮಿಯನ್ನು ನೀಡಿದರು. ಆ ನಂತರದಲ್ಲಿ ಎಸ್.ಎಂ. ಕೃಷ್ಣ ಅವರ ಭಾರೀ ಉತ್ತೇಜನದಿಂದಾಗಿ ಈ ಪ್ರದೇಶದಲ್ಲಿ ಮಾಹಿತಿ ತಂತ್ರಜ್ಞಾನದ ದೈತ್ಯ ಸಂಸ್ಥೆಗಳು ಎನಿಸಿರುವ **ವಿಪ್ರೋ, ಇನ್‌ಫೋಸಿಸ್, ಸೀಮೆನ್ಸ್ ಬಿರ್ಲಾ ೩-ಎಂ, ಮೋಟಾರೋಲಾ, ಟಾಟಾಪವರ್, ಫಿಲಿಪ್ಸ್, ಬಿರ್ಲಾ, ದಾಲ್ಮಿಯಾ ಮುಂತಾದವೇ ಅಲ್ಲದೆ, ಐ.ಟಿ.ಐ., ಬಿ.ಎಚ್.ಇ.ಎಲ್.**ನಂಥ ಹಳೆಯ ಸಂಸ್ಥೆಗಳೂ ಮಾಹಿತಿ ತಂತ್ರಜ್ಞಾನ ಅಭಿವೃದ್ಧಿ ಮತ್ತು ಮಾರಾಟದಲ್ಲಿ ತೊಡಗಿವೆ. ಇದರ ಜೊತೆಗೆ ರಾಜ್ಯಸರ್ಕಾರವು ವೈಟ್‌ಫೀಲ್ಡ್ ಸಮೀಪದಲ್ಲಿ 'ಅಂತರರಾಷ್ಟ್ರೀಯ ತಂತ್ರಜ್ಞಾನ ವನ' (I.T. Park)ವನ್ನು ಸ್ಥಾಪಿಸಿ, ೮೦ಕ್ಕೂ ಹೆಚ್ಚು ಐ.ಟಿ. ಸಂಸ್ಥೆಗಳಿಗೆ ನೆಲೆಯೊದಗಿಸಿದೆ.

ಇನ್‌ಫೋಸಿಸ್, ವಿಪ್ರೋಗಳು ಇಂದು ಹಲವು ಕ್ಷೇತ್ರಗಳಿಗೆ ಸಂಬಂಧಪಟ್ಟ 'ಕ್ರಮವಿಧಿ' ಗಳನ್ನು ಅಭಿವೃದ್ಧಿಪಡಿಸುತ್ತ ಬಂದಿವೆ. ಒಂದೊಂದು ಸಂಸ್ಥೆಯೂ ೫೦,೦೦೦ ಮಂದಿಗೆ ಉದ್ಯೋಗ ನೀಡಿದೆ. ಇದಲ್ಲದೆ ಐಟಿ ವಲಯದ ಮತ್ತೊಂದು ದೊಡ್ಡ ಸಂಸ್ಥೆ 'ಟಾಟಾ ಕನ್ಸಲ್ಟೆನ್ಸಿ ಸೇವಾ ಸಂಸ್ಥೆ (ಟಿ.ಸಿ.ಎಸ್)' ಒಂದರಲ್ಲೇ ಸುಮಾರು ೯೫೦೦೦ ಮಂದಿ ಉದ್ಯೋಗಿಗಳಿದ್ದಾರೆ. ಮುಖ್ಯ ಐ.ಟಿ. ಕಂಪನಿಗಳಿಗೆ ಪೂರಕವಾಗಿ ನೆಲೆಗೊಂಡಿರುವ ೧೦೦ಕ್ಕೂ ಹೆಚ್ಚು ಚಿಕ್ಕ ಪ್ರಮಾಣದ ಸಂಸ್ಥೆಗಳು ಬೆಂಗಳೂರಿನಲ್ಲಿವೆ.

ಇವಿಷ್ಟೆ ಅಲ್ಲದೆ ಬಾಹ್ಯಾಕಾಶ ಸಂಶೋಧನ ಸಂಸ್ಥೆ (ISRO), ರೈಲು ಅಚ್ಚು ಮತ್ತು ಗಾಲಿ ಕಾರ್ಖಾನೆ, ಹತ್ತಾರು ಔಷಧಿ ಮತ್ತು ಜೈವಿಕ ಕ್ಷೇತ್ರದ ತಯಾರಿಕಾ ಸಂಸ್ಥೆ ಬೆಂಗಳೂರಿನಲ್ಲಿ ಪ್ರಮುಖ ನೆಲೆಹೊಂದಿವೆ. ಎ.ಬಿ.ಬಿ., ಕೆನ್ನಾ ಮೆಟಲ್ ಇತ್ಯಾದಿ ಖಾಸಗಿ ಕ್ಷೇತ್ರದ ಮದ್ಯಮ ಗಾತ್ರದ ಸಂಸ್ಥೆಗಳು ಸೇರಿದಂತೆ ಬೆಂಗಳೂರಿನ ಪೀಣ್ಯಾ ಆಗ್ನೇಯ ಏಷ್ಯಾದಲ್ಲಿಯೇ ಅತಿ ವಿಸ್ತಾರವಾದ ಕೈಗಾರಿಕಾ ಪ್ರದೇಶವೆಂಬ ಹೆಗ್ಗಳಿಕೆ ಹೊಂದಿದೆ.

ಕರ್ನಾಟಕದಲ್ಲಿ ಪ್ರಮುಖವೆನಿಸುವ ಉದ್ಯಮಗಳನ್ನೆಲ್ಲ ಪಟ್ಟಿ ಮಾಡುತ್ತ ಹೋದರೆ ಈಗಾಗಲೇ ಉದ್ದವಾಗಿರುವ ಲೇಖನ 'ಅತಿ' ಎನಿಸುವಷ್ಟು ಬೆಳೆದೀತು. ಆದ್ದರಿಂದ

ಪ್ರಾತಿನಿಧಿಕವಾಗಿಯಷ್ಟೇ ಕೆಲವೊಂದು ಉದ್ದಿಮೆ–ಉದ್ಯಮಗಳನ್ನು ಇಲ್ಲಿ ಪರಿಚಯಿಸುವ ಪ್ರಯತ್ನ ಮಾಡಿದ್ದೇನೆ. ಉದ್ದಿಮೆಗಳ ಅಭಿವೃದ್ಧಿ ಹೆಸರಿನಲ್ಲಿ ಕೃಷಿ ಮತ್ತು ಅರಣ್ಯಭೂಮಿ ಕಬಳಿಸುತ್ತಿರುವ ಹೊಸ ದಂಧೆ ಈಗಾಗಲೇ ಸಾಕಷ್ಟು ಕಾವನ್ನೆಬ್ಬಿಸಿದೆ. ಅದು ಹೊಗೆಯಾಗಿ ಧಗೆಯಾಗಿ ರಾಜ್ಯದ ಬದುಕು, ಸಂಸ್ಕೃತಿಗಳನ್ನು ಸುಡುವಂತಾಗಬಾರದಷ್ಟೇ ಎಂಬ ಎಚ್ಚರದಲ್ಲಿ ನಾವು ಸದಾ ಇರಬೇಕು.



ಉತ್ತಮ ನಾಯಕನ ಲಕ್ಷಣಗಳು

■ **ಪ್ರೊ. ತೀ. ಶ್ರೀ. ನಾಗಭೂಷಣ**

ಸಾಮಾನ್ಯವಾಗಿ ಎಲ್ಲಿಯೇ ಆಗಲಿ ಇಬ್ಬರು ಅಥವಾ ಅದಕ್ಕಿಂತ ಹೆಚ್ಚಾಗಿ ಜನರು ಗುಂಪು ಸೇರಿದಾಗ ಅಲ್ಲಿ ನಾವು ಒಬ್ಬ ನಾಯಕನನ್ನು ಕಾಣಬಹುದು. ಒಂದು ಗುಂಪಿನಲ್ಲಿ ಯಾರಾದರೊಬ್ಬಿಬ್ಬರು ಉಳಿದವರಿಗಿಂತ ಹೆಚ್ಚು ಪ್ರಭಾವಯುತವಾದ ಪಾತ್ರವಹಿಸುವುದನ್ನೂ, ಇಷ್ಟಪಟ್ಟಿರುವುದನ್ನೂ, ಗೌರವಯುತವಾಗಿ ಆಲಿಸಲ್ಪಡುತ್ತಿರುವುದನ್ನು ನಿಸ್ಸಂದೇಹವಾಗಿ ಗುರುತಿಸಬಹುದು. ಇದೇ ಒಬ್ಬ ನಾಯಕ ಮತ್ತು ಆ ಗುಂಪಿನ ಉಳಿದವರ ನಡುವಿನ ವ್ಯತ್ಯಾಸಕ್ಕೆ ನಾಂದಿಯಾಗುತ್ತದೆ. ಗುಂಪು ಬೆಳೆದಂತೆ ಮತ್ತು ಹೆಚ್ಚು ಸದೃಢವಾಗುತ್ತಿದ್ದಂತೆ ನಾಯಕನ ಸ್ಥಾನ ಸ್ಪಷ್ಟವಾಗುತ್ತಾ ಬರುತ್ತದೆ. ಅದರೊಡನೆಯೇ ಗುಂಪಿನ ಕಾರ್ಯನಿರ್ವಹಣೆಯಲ್ಲಿ ನಾಯಕನ ಪಾತ್ರವೂ ಹೆಚ್ಚು ಪರಿಷ್ಕಾರವಾಗಲು ಪ್ರಾರಂಭವಾಗುತ್ತದೆ.

ವ್ಯವಸ್ಥಾಪನ ವಿಜ್ಞಾನದಲ್ಲಿ (Management Science) 'ನಾಯಕತ್ವ' (Leadership) ವಿಷಯದ ಬಗ್ಗೆ ನಡೆದಿರುವಷ್ಟು ಚರ್ಚೆಗಳು, ವಿಧವಿಧವಾದ ಸಂಶೋಧನೆಗಳು, ಪ್ರಯೋಗಗಳು ಮತ್ತು ಪ್ರಕಟವಾಗಿರುವ ಸಹಸ್ರಾರು ಪುಸ್ತಕಗಳು ಮತ್ತು ಲೇಖನಗಳು ಇನ್ನು ಯಾವ ವಿಷಯದ ಮೇಲೂ ಆಗಿಲ್ಲವೆಂದು ಪ್ರತೀತಿ. ಆದ್ದರಿಂದ ಈ 'ನಾಯಕತ್ವ'ದ ವಿಷಯ ಅನೇಕ ಜನರನ್ನು ಎಲ್ಲಾ ಕಾಲದಲ್ಲಿಯೂ ಮತ್ತು ಎಲ್ಲ ಕ್ಷೇತ್ರಗಳಲ್ಲಿಯೂ ಎಷ್ಟರಮಟ್ಟಿಗೆ ಚಿಂತನೆಗೆ ಒಳಪಡಿಸಿದೆಯೆಂದು ವಿವರಿಸುವ ಅಗತ್ಯವಿಲ್ಲ. ಇಂದಿನ ಉದ್ಯಮ ಮತ್ತು ವಾಣಿಜ್ಯ ಕ್ಷೇತ್ರಗಳಲ್ಲಂತೂ ಸಂಸ್ಥೆಗಳ ಯಶಸ್ಸಿಗೆ ಉತ್ತಮವಾದ ನಾಯಕತ್ವವೇ ಮೂಲಭೂತವಾದ ಅವಶ್ಯಕತೆ ಎಂದು



ಪ್ರತಿಪಾದಿಸಲಾಗುತ್ತಿದೆ ಮತ್ತು ಇದಕ್ಕೆ ವಿಪುಲವಾಗಿ ಉದಾಹರಣೆಗಳನ್ನು ಕೊಡಲಾಗುತ್ತಿದೆ. ಈ ಉತ್ತಮ ನಾಯಕತ್ವದ ಅವಶ್ಯಕತೆ ರಾಜಕೀಯ, ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ ಮತ್ತು ಇತರ ಎಲ್ಲಾ ಕ್ಷೇತ್ರಗಳಲ್ಲಿಯೂ ಎಷ್ಟಿದೆಯೆನ್ನುವುದು ಸರ್ವ ವಿದಿತ. ಈ ದಿನಗಳಲ್ಲಿ ಇದರ ಅವಶ್ಯಕತೆಗಿಂತ, ಇದರ ಕೊರತೆಯ ವಿಷಯವೇ ಹೆಚ್ಚಿನ ಚರ್ಚೆಗೆ ಗ್ರಾಸವಾಗಿದ್ದು ಈ ಕೊರತೆ ಎಂತೆಂತಹ ದುಷ್ಪರಿಣಾಮಗಳಿಗೆ ಎಡೆಮಾಡಿಕೊಟ್ಟಿದೆ ಎನ್ನುವ ಅನೇಕ ದೃಷ್ಟಾಂತಗಳು ನಮ್ಮ ಕಣ್ಣೆದುರಿಗಿವೆ.

ಇಂದಿನ ಪರಿಸ್ಥಿತಿಯಲ್ಲಿ ಸಾರ್ವಜನಿಕ ಕ್ಷೇತ್ರದಲ್ಲಿ ನಮ್ಮ ನಾಡು, ಭಾಷೆ ಇತ್ಯಾದಿಗಳಿಗೆ ಸಂಬಂಧಪಟ್ಟಂತೆ ವಿವಾದಾಂಶಗಳಿರುವ ವಿಷಯಗಳಲ್ಲಿ ಹೊಣೆ, ಕಾಳಜಿ ಮತ್ತು ಬಾಧ್ಯತೆಗಳಿರುವ ಅನೇಕ ಸಂಘಟನೆಗಳು, ಸಂಸ್ಥೆಗಳು ಚಳವಳಿ, ಸತ್ಯಾಗ್ರಹ ಮುಂತಾದವುಗಳ ಮೂಲಕ ತನು ಮನ ಧನಗಳನ್ನರ್ಪಿಸಿ, ತ್ಯಾಗ ಮನೋಭಾವದಿಂದ ಹೋರಾಟ ಮಾಡಬೇಕಾಗಿ ಬಂದಿರುವುದು ದುರದೃಷ್ಟಕರ ವಿಷಯವಾದರೂ, ಇದು ಅವಶ್ಯವಾಗಿದೆ. ಸಾಹಿತ್ಯ ಕ್ಷೇತ್ರದ ಅನೇಕ ಹಿರಿಯರು, ಕಲಾವಿದರು, ಸಾರ್ವಜನಿಕರು ಮತ್ತು ಸಂತ್ರಸ್ಥರು ಕಳೆದ ಅನೇಕ ದಶಕಗಳಿಂದಲೂ ಪರಿಣಾಮಕಾರಿಯಾಗಿ ಚಳವಳಿ ಸತ್ಯಾಗ್ರಹಗಳನ್ನು ನಡೆಸಿ ಸಾರ್ವಜನಿಕ ಗುರಿ ಸಾಧನೆಯಲ್ಲಿ ಯಶಸ್ಸನ್ನು ಪಡೆದಿರುವುದು ಎಲ್ಲರಿಗೂ ತಿಳಿದಿರುವ ವಿಷಯ. ಈ ಸಂದರ್ಭಗಳಲ್ಲಿ ಬಹು ನಿಸ್ವಾರ್ಥತೆ ಮತ್ತು ಸಾಮರ್ಥ್ಯಗಳಿಂದ ಎಲ್ಲರನ್ನೂ ಪ್ರೇರೇಪಿಸಿ, ಹುರಿದುಂಬಿಸಿ ನಮ್ಮ ನಾಯಕರು ಸೂಕ್ತವಾದ ಮಾರ್ಗದರ್ಶನ ನೀಡಿ, ಗುರಿ ಸಾಧನೆಯಲ್ಲಿ ಮುಂದುವರಿದಿರುವುದು ಬಹು ಶ್ಲಾಘನೀಯ.

ಈ ಮೇಲಿನ ಸಂದರ್ಭಗಳಲ್ಲಿ ನನ್ನ ವ್ಯವಸ್ಥಾಪನ ವಿಜ್ಞಾನದ ಹಿನ್ನೆಲೆಯಲ್ಲಿ, ಈ 'ನಾಯಕತ್ವ'ದ ವಿಷಯ, ತಾರ್ಕಿಕ ನೆಲೆಯಲ್ಲಿ ನನ್ನನ್ನು ಆಗಾಗ್ಗೆ ಚಿಂತನೆಗೆ ಹಚ್ಚಿದೆ. ನಾಯಕತ್ವ ಎಂದರೇನು? ಉತ್ತಮ ನಾಯಕನಲ್ಲಿರಬೇಕಾದ ಲಕ್ಷಣಗಳೇನು? ಇತ್ಯಾದಿ ವಿಷಯದಲ್ಲಿ ನನ್ನ ಅಧ್ಯಯನ, ಅಧ್ಯಾಪನ ಮತ್ತು ಅನುಭವಗಳ ಮೂಲಕ ತಾತ್ತ್ವಿಕ ಚಿಂತನೆಯಿಂದ ರೂಪಿಸಿಕೊಂಡ ಕೆಲವು ಅಭಿಪ್ರಾಯ ಮತ್ತು ರೂಪುರೇಷೆಗಳನ್ನು ಈ ಲೇಖನದಲ್ಲಿ ನಿರೂಪಿಸಿದ್ದೇನೆ.

ನಾಯಕತ್ವ ಎಂದರೆ ಏನು?

ಒಂದು ಗುಂಪು ನಿರ್ಧರಿಸಿರುವ ಗುರಿಯನ್ನು ತಲುಪುವುದಕ್ಕೆ ಅಥವಾ ಉದ್ದೇಶವನ್ನು ಸಾಧಿಸುವುದಕ್ಕೆ ಅದರ ಎಲ್ಲ ಸದಸ್ಯರೂ ತಮ್ಮ ಸ್ವಇಚ್ಛೆ, ಉತ್ಸಾಹ, ಶ್ರದ್ಧೆ ಮತ್ತು ಆತ್ಮವಿಶ್ವಾಸದಿಂದ ಶ್ರಮಸಹಿತ ಪ್ರಯತ್ನ ಮಾಡುವುದಕ್ಕೆ ಪ್ರಭಾವ ಬೀರುವ ಒಂದು ಕಲೆ (art) ಅಥವಾ ಪ್ರಕ್ರಿಯೆ (process) ಎಂದು ಹೇಳಬಹುದು. ಈ ಶ್ರದ್ಧೆ ಅವರಿಗೆ ಗುರಿಸಾಧನೆಯ ಬಗ್ಗೆ ಇರುವ ದೃಢ ನಿಶ್ಚಯ ಮತ್ತು ತೀವ್ರತೆಯನ್ನು ತೋರಿಸಿದರೆ, ಅವರ ಆತ್ಮವಿಶ್ವಾಸ ಈ ಕಾರ್ಯದಲ್ಲಿ ಅವರ ಅನುಭವ ಮತ್ತು ತಾಂತ್ರಿಕ ಪರಿಣತಿಯನ್ನು ಪ್ರತಿಬಿಂಬಿಸುತ್ತದೆ. ನಾಯಕರಾದವರು ಇದಕ್ಕೆ ಅಗತ್ಯವಾದ ನೆರವು ಮತ್ತು ಮಾರ್ಗದರ್ಶನ ನೀಡುತ್ತಾರೆ ಹಾಗೂ ಗುಂಪಿನ ಮುಂದೆ ನಿಂತು ಅವರನ್ನು

ಹುರಿದುಂಬಿಸುತ್ತಾರೆ; ಹಿಂದಿನಿಂದ ತಳ್ಳುವುದಿಲ್ಲ. ಈ ನಾಯಕತ್ವದ ಉತ್ಕೃಷ್ಟತೆಯ ಮೇಲೆ ಗುಂಪಿನ ಸಾಧನೆ ಅವಲಂಬಿಸಿರುತ್ತದೆ.

'ನಾಯಕತ್ವ' ಎನ್ನುವುದು ಒಂದು ಪೀಠವಲ್ಲ. ಅದು ಒಂದು ರೀತಿಯ ವಾಹನ. ಗುಂಪಿನ ಗುರಿ ಸಾಧನೆಯಲ್ಲಿ ತನ್ನ ಸೂಕ್ತ ಮಾರ್ಗದರ್ಶನದ ಮೂಲಕ ಸದಸ್ಯರನ್ನು ಕರೆದ್ಯೊಯುವುದು ನಾಯಕನ ಆದ್ಯ ಕರ್ತವ್ಯ. ನಾಯಕನು ಜನಗಳ ಮನುಷ್ಯ. ಅಮೆರಿಕ ದೇಶದ ಬಹುದೊಡ್ಡ ಉಕ್ಕಿನ ಉದ್ಯಮಿ ಮತ್ತು ಪ್ರಸಿದ್ಧ ಪರೋಪಕಾರಿ ಆನ್‌ಡ್ರ್ಯೂ ಕಾರ್ನೆಗೀ (೧೮೩೫–೧೯೧೯)ಯ ಚರಮಗೀತೆ ಹೀಗಿದೆ:

Here lies a man
Who knew how to enlist
In his service
Better men than himself

ನಾಯಕನು ತನ್ನ ಗುಂಪಿನ ಸದಸ್ಯರಿಂದ ಅಭಿಪ್ರಾಯಗಳನ್ನು ಹೆಚ್ಚು ಸ್ವಾಗತಿಸಿದಷ್ಟೂ ಗುಂಪಿನ ಶಕ್ತಿ ಬೆಳೆಯುತ್ತದೆ. ಇದು ಅವರ ಸಹಾಯವನ್ನು ಕೋರುವುದಕ್ಕಿಂತಲೂ ಹೆಚ್ಚಿನ ಆದ್ಯತೆಯ ವಿಷಯ. ಅವನು ತನ್ನ ಜನರಿಂದ ಸದಾ ಕಾಲವೂ ಆದಷ್ಟು ಕಲಿಯುತ್ತಲೇ ಇರಬೇಕು. ಗುಂಪಿನ ಶ್ರೇಷ್ಠತೆ ಎನ್ನುವುದು ಎಲ್ಲಾ ಸದಸ್ಯರ ಏಕತಾನದ ಚಿಂತನೆಯಲ್ಲ. ಅದು ಅವರ ಆದಷ್ಟು ವೈವಿಧ್ಯವಾದ ಚಿಂತನೆಗಳ ಮೂಲಕ ಒಂದು ಸಮಸ್ಯೆ ಅಥವಾ ಅವಕಾಶದ ಬಗ್ಗೆ ಅನೇಕ ಚಿತ್ರಣಗಳನ್ನು ಸೃಷ್ಟಿಸುವಂತೆ ಮಾಡುವುದು. ಎಲ್ಲಾ ರೀತಿಯ ಭಿನ್ನಾಭಿಪ್ರಾಯಗಳ ಸೂಚನೆಗಳಿಗೆ, ಯಾವ ಅಡೆತಡೆಯೂ ಇಲ್ಲದ ಮುಕ್ತ ವಾತಾವರಣವನ್ನು ಸಜ್ಜುಗೊಳಿಸಿ, ಅದರ ಸೂಕ್ತ ಮೌಲ್ಯಮಾಪನಕ್ಕೆ ಅವಕಾಶ ಕಲ್ಪಿಸಿ ಕೊಡುವುದು. ನಾಯಕನ ದೃಷ್ಟಿಯ ಕೇಂದ್ರ ಬಿಂದು 'ಸಮಸ್ಯೆ'ಯೇ ಹೊರತು ಒಬ್ಬ ವ್ಯಕ್ತಿ ಅಥವಾ ಯಾರ ವ್ಯಕ್ತಿತ್ವವೂ ಅಲ್ಲ. ಸಂಘಟನೆಯ ಸತ್ವ ಮತ್ತು ಚೇತನಗಳ ಸೃಷ್ಟಿಗೆ ನಾಯಕನೇ ಜವಾಬ್ದಾರ. ನಾಯಕನ ಕಾರ್ಯಸಿದ್ಧಿ ತನ್ನ ಗುಣಗಳ ಮೇಲೆ ಎಷ್ಟು ಅವಲಂಬಿಸಿದೆಯೋ, ಆತನ ಸಂಘದ ಸದಸ್ಯರ ಮೇಲೂ ಅಷ್ಟೇ ಅವಲಂಬಿಸಿದೆ.

ಒಬ್ಬ ಉತ್ತಮ ನಾಯಕನು ಉಳಿದವರಿಗೆ ಮುಂದಾಳಾಗಿ, ಮಾರ್ಗದರ್ಶನ ಮಾಡುವುದು, ಅವರು ಸದಾ ಕಾಲಕ್ಕೂ ತನ್ನ ಅನುಯಾಯಿಗಳಾಗಿದ್ದು, ತನ್ನನ್ನೇ ಅನುಸರಿಸುತ್ತಿರಲಿ ಅಥವಾ ಹಿಂಬಾಲಿಸುತ್ತಿರಲಿ ಎಂದಲ್ಲ; ಅವರೂ ನಾಯಕರಾಗಿ ರೂಪುಗೊಂಡು ಬೆಳೆಯಲಿ ಎಂದು. ನಾಯಕನಿಗೆ ನಾಯಕರನ್ನು ಸೃಷ್ಟಿಸುವುದು ಮುಖ್ಯ ಕರ್ತವ್ಯ. ನಾಯಕತ್ವ ಎನ್ನುವುದು ಸ್ವಾರ್ಥವನ್ನು ಮೇಲಕ್ಕೆತ್ತುವ ವಿಷಯವಲ್ಲ; ಅದು ನಿಸ್ವಾರ್ಥತೆಯ ಔನ್ನತ್ಯಕ್ಕೆ ಏರುವುದು.

ಅದೃಷ್ಟವೋ, ದುರದೃಷ್ಟವೋ ಒಂದು ಸಂಘಟನೆಯ ಕಾರ್ಯದಲ್ಲಿ ಬಿಕ್ಕಟ್ಟಿನ ಸಂದಿಗ್ಧದ ಸಂದರ್ಭಗಳನ್ನು ಎದುರಿಸಬೇಕಾದ ಸಾಧ್ಯತೆಗಳು ಯಾವಾಗಲೂ ಇರುತ್ತವೆ. ಆಗ ನಾಯಕನ ಪಾತ್ರ ಇನ್ನೂ ಮುಖ್ಯವಾಗುತ್ತದೆ. ಆಗ ಸಂಘಟನೆ ಮಾರ್ಗದರ್ಶನಕ್ಕಾಗಿ ಅವನ ಕಡೆ ನೋಡುತ್ತದೆ. ನಾಯಕನ ಕೆಲಸ ಇಂತಹ ಸಂದರ್ಭಗಳನ್ನು

ತಡೆಯುತ್ತೇನೆಂದು ಹೇಳುವುದಕ್ಕಿಂತ, ಪೂರ್ವಭಾವಿಯಾಗಿ ಇಂತಹವನ್ನು ನಿರೀಕ್ಷಿಸಿ ಅದನ್ನು ನಿಭಾಯಿಸಲು ಸಜ್ಜಾಗುವುದು. ನಾಯಕನು ಸಂಘಟನೆ ಮತ್ತು ಅದರ ಒಪ್ಪಿತ ಗುರಿ ಉದ್ದೇಶಗಳ ಮಧ್ಯೆ ತನ್ನ ಅಹಂಭಾವವನ್ನು ಎಂದೂ ಹರಿಯಲು ಬಿಡಬಾರದು. ಈ ಗುರಿ ಸಾಧನೆಯಲ್ಲಿ ಸಹಾಯವಾಗುವುದಾದರೆ ತನಗೆ ನ್ಯಾಯವಾಗಿ ಬರಬೇಕಾದ ಮೆಚ್ಚುಗೆ ಕೀರ್ತಿಗಳನ್ನೂ ತ್ಯಜಿಸಲು ಸಿದ್ಧನಾಗಿರಬೇಕು. ಒಬ್ಬ ವ್ಯಕ್ತಿ ಸೇವಕನಾಗುವುದನ್ನು ತಪ್ಪಿಸಿಕೊಂಡರೆ ಮಾತ್ರ ಸ್ವಾತಂತ್ರ್ಯವನ್ನು ಪಡೆಯುವುದಿಲ್ಲ; ಅವನು ಯಜಮಾನನಾಗುವುದರಿಂದಲೂ ತಪ್ಪಿಸಿಕೊಳ್ಳಬೇಕು!

ಜನರನ್ನು ಒಲಿಸುವ ಕಲೆ ನಾಯಕನಲ್ಲಿರಬೇಕಾದ ಒಂದು ಗುಣ. ಇದಕ್ಕಾಗಿ ಇವನು ಬಹುದೊಡ್ಡ ವಾಗ್ಮಿಯೇ ಆಗಬೇಕೆಂದೇನಿಲ್ಲ. ಆದರೆ ನಾಯಕನು ತನ್ನ ಕೌಶಲ್ಯ ಮತ್ತು ಚಾತುರ್ಯಗಳಿಂದ ಎಲ್ಲ ಸಂದಿಗ್ಧಗಳನ್ನೂ, ವಿಷಯಗಳನ್ನೂ ಪ್ರಾಮಾಣಿಕವಾಗಿ ತನ್ನ ಗುಂಪಿಗೆ ಪೂರ್ಣವಾಗಿ, ಸರಳವಾಗಿ ಅವರನ್ನು ಪ್ರೇರೇಪಿಸುವಂತೆ ವಿವರಿಸಿ ಹೇಳಬೇಕಾದುದು ಹೆಚ್ಚು ಪರಿಣಾಮಕಾರಿಯಾದ ರೀತಿ. ಎಲ್ಲರನ್ನು ಸಾವಧಾನವಾಗಿ ಆಲಿಸಬೇಕಾದುದು ಅವನ ಆದ್ಯ ಬದ್ಧತೆ. ಈ ಪರೀಕ್ಷಿಸುವ ಸಂದರ್ಭಗಳಲ್ಲಿ ಶಕ್ತಿಯುತವಾದ ನಾಯಕನ ಬಹುದೊಡ್ಡ ಶಕ್ತಿಯೆಂದರೆ ಆತ್ಮನಿಗ್ರಹ.

ವ್ಯವಸ್ಥಾಪನ ವಿಜ್ಞಾನದ ಅನೇಕ ವಿದ್ವಾಂಸರುಗಳ ಅಭಿಪ್ರಾಯದಂತೆ 'ನಾಯಕ' (leader) ಮತ್ತು 'ವ್ಯವಸ್ಥಾಪಕ' (manager) ನಡುವಿನ ವ್ಯತ್ಯಾಸವೆಂದರೆ "ನಾಯಕ ಸರಿಯಾದ ಕೆಲಸವನ್ನು ಮಾಡುತ್ತಾನೆ; ವ್ಯವಸ್ಥಾಪಕ ಕೆಲಸವನ್ನು ಸರಿಯಾಗಿ ಮಾಡುತ್ತಾನೆ." (Leader does the right thing; manager does the thing right). ಜಗತ್ತಿನ ಇತಿಹಾಸ ಸಹಸ್ರಾರು ನಾಯಕರುಗಳನ್ನು ಕಂಡಿದ್ದರೂ, ಅವರಲ್ಲಿ ಎಷ್ಟು ಜನ ಈ ಅರ್ಥದಲ್ಲಿ ನಿಜವಾದ, ಉತ್ತಮ ನಾಯಕರು ಎನ್ನುವ ವಿವಾದ ಸರ್ವಕಾಲಕ್ಕೂ ಇದೆ. ಶತಶತಮಾನಗಳ ನಂತರ ಮಹಾತ್ಮ ಗಾಂಧಿಯಂತಹ ಒಬ್ಬ ಉತ್ಕೃಷ್ಟ ನಾಯಕನನ್ನು ಈ ಜಗತ್ತು ಕಂಡಿತು. ಇಂತಹ ಮತ್ತೊಬ್ಬ ಮಹಾನಾಯಕನನ್ನು ನೋಡಲು ಈ ಧರಣಿ ಇನ್ನು ಎಷ್ಟು ಶತಮಾನಗಳನ್ನು ಕಾಯಬೇಕೋ! ಈ ಮಟ್ಟದಲ್ಲಲ್ಲದಿದ್ದರೂ, ಎಷ್ಟೋ ಜನ ಒಳ್ಳೆಯ ಮಹಾನಾಯಕರು ಬಂದು ಹೋಗಿದ್ದಾರೆ. ಅದರಂತೆ ಅನೇಕ ಕ್ರೂರಿಗಳು ಕೂಡ ನಾಯಕರ ಹೆಸರಿನಲ್ಲಿ ಈ ಜಗತ್ತಿನಲ್ಲಿ ಆಗಿ ಹೋಗಿದ್ದಾರೆ. ವಾಣಿಜ್ಯ ಕ್ಷೇತ್ರದಲ್ಲಿ ಈ 'ನಾಯಕ' ಮತ್ತು 'ವ್ಯವಸ್ಥಾಪಕ'ರ ನಡುವಿನ ವಿವಾದ ಸದಾ ಜಾಗೃತವಾಗಿದ್ದು, "ಒಳ್ಳೆಯ ನಾಯಕ ಒಳ್ಳೆಯ ವ್ಯವಸ್ಥಾಪಕನಾಗಲು ಸಾಧ್ಯವೇ?" (ಅಥವಾ ಅದೇ ಹಿಂದು ಮುಂದಾಗಿ) – ಇದು ಅಸಾಧ್ಯವೆಂದು ಯಾರೂ ಭಾವಿಸಿಲ್ಲ! – ಎನ್ನುವ ಪ್ರಶ್ನೆ ಸದಾ ಪ್ರಸ್ತುತವಾಗಿರುತ್ತದೆ.

ಇಲ್ಲಿ ಇನ್ನೂ ಒಂದು ವಿಷಯ ನೆನಪಿನಲ್ಲಿಡಬೇಕು. ಕೆಲವು ಅಸಾಮಾನ್ಯ ಪರಿಸ್ಥಿತಿಗಳನ್ನು ವಿನಾಯಿಸಿದರೆ ಎಲ್ಲಾ ಕಾಲಕ್ಕೂ, ಎಲ್ಲಾ ಸಂದರ್ಭಗಳಲ್ಲೂ ಅದೇ ವ್ಯಕ್ತಿ ನಾಯಕನಾಗಿ, ಪರಿಣಾಮಕಾರಿಯಾಗಿ ಅಥವಾ ಅಪರಿಣಾಮಕಾರಿಯಾಗಿ ಇರುತ್ತಾನೆಂದು ಹೇಳುವುದು ಅರ್ಥಪೂರ್ಣವಲ್ಲದ ಮಾತಾಗುತ್ತದೆ. ಅದು ಸಂದರ್ಭ, ಸಂಘಟನೆ, ಗುರಿ

ಇತ್ಯಾದಿಗಳ ಮೇಲೆ ಅವಲಂಬಿಸಿರುತ್ತದೆ. ಕಳೆದ ೨೦ನೆಯ ಶತಮಾನ ಕಂಡ ಒಬ್ಬ ಮಹಾನಾಯಕ ಇಂಗ್ಲೆಂಡ್ ದೇಶದ ಪ್ರಧಾನ ಮಂತ್ರಿಯಾಗಿದ್ದ ಚರ್ಚಿಲ್. ಅವನ ನಾಯಕತ್ವವಿಲ್ಲದಿದ್ದರೆ, ಯುರೋಪಿನ ದೇಶಗಳು ಹಿಟ್ಲರ್‌ನ ವಿರುದ್ಧ ದ್ವಿತೀಯ ಮಹಾಯುದ್ಧವನ್ನು ಗೆಲ್ಲುತ್ತಿರಲಿಲ್ಲವೆಂದು ಅನೇಕರ ಅಭಿಪ್ರಾಯ. ಚರ್ಚಿಲ್ ಜನರಿಗೆ ನೈತಿಕ ಅಧಿಕಾರ, ಮೌಲ್ಯಗಳಲ್ಲಿ ನಂಬಿಕೆ ಮತ್ತು ತರ್ಕಸಮ್ಮತವಾದ ಕೃತ್ಯಗಳಲ್ಲಿ ಶ್ರದ್ಧೆಯನ್ನು ಅರಿವುಗೊಳಿಸಿ, ಅವರನ್ನು ಹುರಿದುಂಬಿಸಿ ಯುದ್ಧವನ್ನು ಗೆಲ್ಲಿಸಿದನು. ಆದರೆ ಅದೇ ಇಂಗ್ಲೆಂಡ್ ದೇಶದ ಜನತೆ, ಯುದ್ಧಾನಂತರದ ಶಾಂತಿಯ ಕಾಲದ ಚುನಾವಣೆಯಲ್ಲಿ ಚರ್ಚಿಲ್‌ನನ್ನು ಅಧಿಕಾರದಿಂದ ಕೆಳಗಿಳಿಸಿತು!

ನಮ್ಮ ಜಗತ್ತಿನ ಇತಿಹಾಸದಲ್ಲಿ ಸಹಸ್ರಾರು ವರ್ಷಗಳಿಂದ ನಾವು ಅನೇಕ ಉತ್ತಮ ನಾಯಕರ ಬಗ್ಗೆ ಕೇಳಿದ್ದೇವೆ ಮತ್ತು ಕಂಡಿದ್ದೇವೆ. ಕೆಲವರ ಸಾಧನೆಗಳನ್ನು ತುಂಬಾ ಮೆಚ್ಚಿದ್ದೇವೆ. ನಮ್ಮ ವರ್ತಮಾನ ಕಾಲವೂ ಇದಕ್ಕೆ ಹೊರತಾಗಿಲ್ಲ. ಇಂತಹ ಅನೇಕ ಉತ್ತಮ ನಾಯಕರು ಇತಿಹಾಸವನ್ನು ನಿರ್ಮಿಸಿದ್ದಾರೆಯೇ ಹೊರತು, ಇತಿಹಾಸ ಯಾವ ನಾಯಕನನ್ನೂ ಸೃಷ್ಟಿಸಿಲ್ಲವೆಂದು ಹೇಳಿದರೆ ತಪ್ಪಾಗಲಾರದು! ❐



ರಾಷ್ಟ್ರ ರಾಜಕಾರಣದಲ್ಲಿ ಕರ್ನಾಟಕದ ಮುತ್ಸದ್ಧಿಗಳು

■ ಪ್ರೊ. ಆರ್.ಎಲ್.ಎಂ. ಪಾಟೀಲ್

ಕರ್ನಾಟಕವೆಂಬುದರ ಪರಿಕಲ್ಪನೆಯು ಒಂದು ದೃಷ್ಟಿಯಲ್ಲಿ ತುಂಬ ಹಳೆಯದೂ ಹೌದು, ಇನ್ನೊಂದು ದೃಷ್ಟಿಯಲ್ಲಿ ತೀರ ಹೊಸದಾಗಿಯೂ ಇದೆ. ಮಧ್ಯದ ಅವಧಿಯಲ್ಲಿ ಕನ್ನಡಭಾಷಿಕರು ಬೇರೆ ಬೇರೆ ರಾಜ್ಯಗಳಲ್ಲಿ ಹರಿದು ಹಂಚಿ ಹೋಗಿ ಎಲ್ಲೆಡೆಯೂ ಅಲ್ಪಸಂಖ್ಯಾತರಾಗಿಯೋ, ನಿರ್ಲಕ್ಷ್ಯಕ್ಕೆ ಒಳಗಾಗಿಯೋ ತಮ್ಮ ಜೀವನ ನಿರ್ವಹಿಸುವಂತಾಯಿತು. ಮೈಸೂರು ಪ್ರಾಂತವೊಂದು ಹೆಚ್ಚು ಕಡಿಮೆ ಸ್ವತಂತ್ರವಾಗಿದ್ದರೂ ರಾಜಕೀಯವಾಗಿ ರಾಷ್ಟ್ರಮಟ್ಟದಲ್ಲಿ ಗಣನೀಯ ಪಾತ್ರ ವಹಿಸುವಲ್ಲಿ ಸಫಲವಾಗಲಿಲ್ಲ. ತನ್ನದೇ ಆದ ಆಂತರಿಕ ರಾಜಕಾರಣದಲ್ಲಿ ಅದು ಮಗ್ನವಾಗಿತ್ತು. ದೇಶವ್ಯಾಪಿ ನಡೆದ ಸ್ವಾತಂತ್ರ್ಯ ಸಂಗ್ರಾಮವು ಮೈಸೂರು ಪ್ರಾಂತಕ್ಕೆ ಹಬ್ಬದಿರಲಿ ಎಂದೇ ರಾಜಮನೆತನವೂ, ಅದರೊಂದಿಗೆ ಆಡಳಿತವರ್ಗವೂ ಬಯಸಿದ್ದವು. ರಾಜಶಾಹಿಯ ವಿರುದ್ಧವೂ, ಬ್ರಿಟಿಷ್ ಆಳ್ವಿಕೆ ವಿರುದ್ಧವೂ ಹೋರಾಟ ಮಾಡುವವರನ್ನು ಒಂದೇ ಎಂದು ಗುರುತಿಸಿ ಅವರನ್ನೆಲ್ಲ ಸದೆಬಡಿಯುವ ಪ್ರಯತ್ನವೂ ನಿರಂತರವಾಗಿ ಸಾಗಿತ್ತು. ತಾವು ಬಹುಸಂಖ್ಯಾತರಾಗಿದ್ದ ಕಡೆ ಸ್ವಾತಂತ್ರ್ಯವಿಲ್ಲ ಅಲ್ಪಸಂಖ್ಯಾತರಾಗಿದ್ದ ಕಡೆ ರಾಜಕೀಯ ಅವಗಣನೆಗೆ ತುತ್ತಾಗಿ ಕನ್ನಡಿಗರು ವಿಚಿತ್ರವಾದ ಅವಸ್ಥೆಯಲ್ಲಿದ್ದರು.



ಸಾಹಿತ್ಯ, ಸಂಗೀತ, ಕಲೆ, ಉದ್ಯೋಗ, ಕ್ರೀಡೆ, ಸೈನ್ಯ, ಆಡಳಿತ ಮುಂತಾದ ಕ್ಷೇತ್ರಗಳಲ್ಲಿ ಕನ್ನಡಿಗರು ಅಪ್ರತಿಮ ಸಾಧನೆಗೈದು ತಾವು ಎಲ್ಲಿಯೇ ಇದ್ದರೂ ಮಿಂಚಿದರು: ಆದರೆ ಇವೆಲ್ಲ ವೈಯಕ್ತಿಕ ಸಾಧನೆಗಳಾಗಿದ್ದವು. ಸಂಗೀತದಲ್ಲಿ ವೀಣೆ ಶೇಷಣ್ಣ

ವಾಸುದೇವಾಚಾರ್ಯ, ಬಿಡಾರಂ ಕೃಷ್ಣಪ್ಪ, ಸವಾಯಿ ಗಂಧರ್ವ, ಭೀಮಸೇನ ಜೋಶಿ ಮಲ್ಲಿಕಾರ್ಜುನ ಮನಸೂರ, ಕುಮಾರ ಗಂಧರ್ವ ಮುಂತಾದ ದಿಗ್ಗಜರು; ಸಾಹಿತ್ಯದಲ್ಲಿ ಗೋವಿಂದ ಪೈ, ಕುವೆಂಪು, ಬೇಂದ್ರೆ, ಕಾರಂತ, ರಾಜಾರಾವ್, ಕಲೆಯಲ್ಲಿ ಕೆ.ವೆಂಕಟಪ್ಪ ಹೆಬ್ಬಾರ, ನಾಟಕದಲ್ಲಿ ಗುಬ್ಬಿವೀರಣ್ಣ, ಸುಬ್ಬಯ್ಯನಾಯ್ಡು, ವರದಾಚಾರ್ಯ, ಸವಾಯಿ ಗಂಧರ್ವ; ನೃತ್ಯದಲ್ಲಿ ವೆಂಕಟಲಕ್ಷ್ಮಮ್ಮ, ಕೋಲಾರ ಕಿಟ್ಟಣ್ಣ, ಕೃಷ್ಣರಾವ್, ಮಾಯಾರಾವ್; ಸಿನಿಮಾದಲ್ಲಿ ಗುರುದತ್ತ; ಬ್ಯಾಂಕಿಂಗ್ ಕ್ಷೇತ್ರದಲ್ಲಿ ಪೈಗಳು; ಸೈನ್ಯದಲ್ಲಿ ಕಾರಿಯಪ್ಪ ತಿಮ್ಮಯ್ಯ, ಬೇವೂರ, ಶ್ರೀನಾಗೇಶ್; ಆಡಳಿತದಲ್ಲಿ ವಿಶ್ವೇಶ್ವರಯ್ಯ, ಮಿರ್ಜಾ, ಬೆನೆಗಲ್ ಕುಟುಂಬ; ಹೀಗೆಯೇ ಅನೇಕಾನೇಕ ಪ್ರಸಿದ್ಧ ಹೆಸರುಗಳಲ್ಲಿ ಕೆಲವನ್ನೇ ನಮೂದಿಸಿದರೂ ಸಾಕು. ಅರ್ಥವತ್ತಾಗಿ ಕಾಣಬರುವ ಅಂಶವೆಂದರೆ ರಾಜಕೀಯೇತರ ಕ್ಷೇತ್ರಗಳಲ್ಲಿ ಕನ್ನಡಿಗರು ಮಿಂಚುವಂತಾದರೂ, ರಾಜಕೀಯ ಕ್ಷೇತ್ರದಲ್ಲಿ ಮಾತ್ರ ನಗಣ್ಯರಾದರು. ಇಡೀ ಹಿಂದೂಸ್ಥಾನದ ರಾಜಕೀಯದಲ್ಲಿ ಪ್ರಮುಖ ಪಾತ್ರವಹಿಸಿದ ನಾಯಕರೆಲ್ಲ ಹೆಚ್ಚು ಕಡಿಮೆ ಮುಂಬೈ, ಕಲ್ಕತ್ತ, ಮದ್ರಾಸ್, ಲಾಹೋರ್, ದಿಲ್ಲಿ, ಲಕ್ನೋಗಳ ಆಸುಪಾಸಿನಿಂದ ಬಂದವರೇ ಆಗಿದ್ದರು. ಮೈಸೂರು, ಧಾರವಾಡ, ಗುಲ್ಬರ್ಗ, ಮಂಗಳೂರು ಕಡೆಗಳ ಜನರು ರಾಷ್ಟ್ರ ಮಟ್ಟದಲ್ಲಿ ಮನೆಮಾತಾದ ಹೆಸರೇಕಾಗಲಿಲ್ಲವೆಂಬುದು ಯಕ್ಷಪ್ರಶ್ನೆಯೇನಲ್ಲ. ರಾಜಕೀಯದಲ್ಲಿ ಪ್ರವರ್ಧಮಾನರಾಗಿ ಮೂಡಿಬರಲು ಜನಸಾಮಾನ್ಯರಲ್ಲಿ ತಾವು ಒಳಗಿನವರಾಗಿರಬೇಕು, ಹೊರಗಿನವರಾಗಿ ಅಲ್ಲ. ಭಾಷೆ, ಆಚಾರ–ವಿಚಾರ, ಸಾಮಾಜಿಕ ಕಳಕಳಿಗಳು, ಪ್ರಜೆ ಹಾಗೂ ನಾಯಕರ ಮಧ್ಯೆ ಬಾಂಧವ್ಯ ಮೂಡಿಸುವಲ್ಲಿ ಮಹತ್ವದ ಪಾತ್ರವಹಿಸುತ್ತವೆ. ಪರದೇಶಗಳಲ್ಲಿರುವ "ನಾವ್ ಕನ್ನಡಿಗರಿಗೆ" ಸ್ವದೇಶವಿಲ್ಲವಾಗುತ್ತದೆ. ಮೈಸೂರು ಪ್ರಾಂತದಲ್ಲಿ ತನ್ನದೇ ಆದ ವಿಶಿಷ್ಟ ಆಂತರಿಕ ಭಿನ್ನತೆಗಳಿಂದ ರಾಷ್ಟ್ರಮಟ್ಟದ ಮುಖಂಡರು ಉದ್ಭವವಾಗಲು ಕಷ್ಟವಾಯಿತೆಂದು ಅಂದುಕೊಳ್ಳಬಹುದು. ಅಷ್ಟೇ ಏಕೆ ಪೂರ್ತಿ ಕನ್ನಡ ನಾಡಿನ ಪ್ರತಿನಿಧಿ ಎನ್ನಿಸಬಲ್ಲ ರಾಜಕೀಯ ನಾಯಕರೂ ಇರಲಿಲ್ಲವೆಂದರೆ ಬಹಳ ತಪ್ಪಾಗಲಾರದು.

ಒಬ್ಬ ವ್ಯಕ್ತಿ ಮಾತ್ರ ಅಪವಾದವೇನೋ ಅನ್ನುವ ರೀತಿಯಲ್ಲಿ ಮೈಸೂರಿನಲ್ಲಿ ಮೈಸೂರೇತರ ಕನ್ನಡ ಪ್ರದೇಶಗಳಲ್ಲಿ ಹಾಗೂ ದಿಲ್ಲಿಯಲ್ಲಿ ರಾಜಕೀಯ ಮುತ್ಸದ್ದಿಯೆಂದು ಹೆಸರು ಗಳಿಸಿದ್ದರು. ಅವರ ಅಗಾಧ ಆಡಳಿತ ಕೌಶಲ್ಯ, ರಾಜಕೀಯ ವಿಚಾರ ಹಾಗೂ ಧೈರ್ಯಗಳಿಂದಾಗಿ ಪಂ. ಜವಾಹರಲಾಲ ನೆಹರುರವರನ್ನು ಎದುರುಹಾಕಿಕೊಂಡು ದೇಶವೇ ಅಚ್ಚರಿಗೊಳ್ಳುವಂತೆ ಮಾಡಿದರು ಶ್ರೀಮಾನ್ ಕೆಂಗಲ್ ಹನುಮಂತಯ್ಯನವರು.

ಭಾರತದ ಸಂವಿಧಾನ ರಚನಾ ಸಭೆಯಲ್ಲಿ ಮೈಸೂರು ಹಾಗೂ ಕನ್ನಡ ಪ್ರಾಂತಗಳಿಂದ ಆರಿಸಿ ಇಲ್ಲವೇ ನೇಮಕಹೊಂದಿ ಬಂದಿದ್ದ ಹಲವಾರು ಮಹನೀಯರು ಉಪಸ್ಥಿತರಿದ್ದರು. ಹೆಚ್ಚಿನ ಸಂಖ್ಯೆಯವರು ಏನೂ ಮಾತನಾಡಲಿಲ್ಲ. ಕೆಲವೇ ಕೆಲವರು ಔಪಚಾರಿಕ ಭಾಷಣಕ್ಕೆ ತೃಪ್ತರಾದರು. ಆದರೆ ಕೆಂಗಲ್ಲರು, ನೆಹರು ಮತ್ತು ಅಂಬೇಡ್ಕರರು ಪ್ರಸ್ತಾಪಿಸಿದ ಕರಡು ಸಂವಿಧಾನವನ್ನು ಸ್ಪಷ್ಟ ಮತ್ತು ಸಮಂಜಸ ರೀತಿಯಲ್ಲಿ ವಿಮರ್ಶಿಸಿದರು. 'ನಾವೇನೋ ಇಲ್ಲಿ ಭಾರತದ ಸಾಮಾಜಿಕ ಪರಂಪರೆ, ಸಂಸ್ಕೃತಿಗೆ

ಉಚಿತವಾಗಿರುವ ಸಂವಿಧಾನ ನಿರ್ಮಾಣವಾಗುತ್ತದೆಯೆಂದು ನಂಬಿ ಇದ್ದೆವು. ಆದರೆ ಈಗ ಕೇಳಿಬರುತ್ತಿರುವುದು ಶಾರದೆಯ ವೀಣಾಧ್ವನಿಯಲ್ಲ, ಬದಲಾಗಿ ಪಾಶ್ಚಿಮಾತ್ಯರ ಕರ್ಕಶ ವಾದ್ಯಮೇಳ ಮಾತ್ರ'. ಹೀಗೊಂದು ಆಕ್ಷೇಪಣೆ ಎತ್ತಿದವರು ಕೆಂಗಲರು ಮಾತ್ರ. ಆಗಲೇ ದೇಶದ ಚಿತ್ತ ಅವರತ್ತ ನೆಟ್ಟಿತು. ಮುಂದೊಮ್ಮೆ ನೆಹರೂ ಸಂಜ್ಞೆಯ ಮೇರೆಗೆ ಕೆಂಗಲರನ್ನು ಅಧಿಕಾರವಂಚಿತರನ್ನಾಗಿ ಮಾಡಲಾಯಿತು. ಧೃತಿಗೆಡದ ಕೆಂಗಲ್ಲರು ತಮ್ಮದೇ ರಾಜಕೀಯ ಹಾದಿಯಲ್ಲಿ ಕ್ರಮಿಸಿದರು. ೧೯೬೨ರ ಚೀನಾದ ಆಕ್ರಮಣದಿಂದ ಘಾತಕ್ಕೀಡಾದ ಭಾರತರಾಷ್ಟ್ರಕ್ಕೆ ನೆಹರು ಒಂದು ಕುಂಟು ನೆಪಹೇಳಿಕೊಂಡು ತನ್ನಿಂದಾದ ಮಹಾ ಅಪರಾಧಕ್ಕೆ ಇನ್ನೊಬ್ಬರು ಹೊಣೆಯೆಂದು ದೂಷಿಸುವಂತಹ ಅಪಾಯಕಾರಿ ಅಸಮರ್ಥ, ನಂಬಿಕೆಗೆ ಅನರ್ಹವಾದ ನಾಯಕರೆಂದು ಕಂಡುಬಂದರೂ, ನೇರವಾಗಿ ನೆಹರುರನ್ನು ಉದ್ದೇಶಿಸಿ ಆರೋಪವನ್ನು ಅವರ ತಲೆಗೇ ಕಟ್ಟುವ ಧೈರ್ಯವನ್ನು ಕಾಂಗ್ರೆಸ್‌ಪಕ್ಷದಲ್ಲಿ ಯಾರೂ ಮಾಡಲಿಲ್ಲ. ಆದರೆ ಕೆಂಗಲ್ ಹನುಮಂತಯ್ಯನವರು ಆ ಧೈರ್ಯವನ್ನು ಬಹಿರಂಗವಾಗಿ ತೋರಿಸಿಕೊಂಡರು. ಕೃಷ್ಣಮೆನನ್ ರಕ್ಷಣಾಮಂತ್ರಿಯಾಗಿ ತಮ್ಮ ಕಾರ್ಯಭಾರವನ್ನು ನಿಭಾಯಿಸುವಲ್ಲಿ ವಿಫಲರಾಗಿದ್ದಾರೆ. ಚೀನಾದ ಆಕ್ರಮಣಕ್ಕೆ ತಕ್ಕುದಾದ ತಯ್ಯಾರಿ ಉತ್ತರ ಅವರಿಂದ ಮಾಡಲಾಗಲಿಲ್ಲ. ಅಷ್ಟೇ ಅಲ್ಲ ಅವರು ದೇಶದ ದಾರಿ ತಪ್ಪಿಸಿದ್ದಾರೆಂದು ಬಹಿರಂಗವಾಗಿ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಟೀಕೆಗಳಾದವು. ಹೊಣೆಗಾರಿಕೆ ಕೇವಲ ಕೃಷ್ಣಮೆನನ್‌ರದ್ದು ಮಾತ್ರ ಅಲ್ಲ, ಎಲ್ಲರದ್ದೂ ಇದೆ. ಚೀನಾದ್ದೂ ಇದೆ; ಹೀಗಾಗಿ ಕೃಷ್ಣಮೆನನ್‌ರನ್ನು ತ್ಯಜಿಸುವಂತಿಲ್ಲ. "ಕೃಷ್ಣ ಹೋದರೆ ನಾನೂ ಹೋದೇನು" ಎಂದು ನೆಹರು ಹೇಳಿದ್ದೇ ತಡ, "ಹಾಗಾದರೆ ನೀವೂ ಹೋಗಬಹುದು" ಎಂದು ಹೇಳಿದವರು ಕೆಂಗಲ್ ಹನುಮಂತಯ್ಯನವರು. ಉಳಿದವರೆಲ್ಲ ಚಕಿತರಾಗಿ ಇವರನ್ನೇ ಮೆಚ್ಚುಗೆ ದೃಷ್ಟಿಯಿಂದ ನೋಡಿದರು.

ಮುಂದೊಮ್ಮೆ ಮುರಾರ್ಜಿ ದೇಸಾಯಿಯವರು ಖಾಲಿಮಾಡಿದ ರಾಷ್ಟ್ರೀಯ ಆಡಳಿತ ಸುಧಾರಣಾ ಸಮಿತಿಗೆ ಇವರನ್ನೇ ಅಧ್ಯಕ್ಷರನ್ನಾಗಿ ನೇಮಿಸಲಾಯಿತು. ಉತ್ತಮ ಕೆಲಸ ಮಾಡಿ ದೇಶದ ಶಭಾಷ್‌ಗಿರಿಯನ್ನು ಕೆಂಗಲ್ಲರು ಗಿಟ್ಟಿಸಿಕೊಂಡರು. ಆನಂತರದ ದಿನಗಳಲ್ಲಿ ಶ್ರೀಮತಿ ಇಂದಿರಾಗಾಂಧಿಯವರ ಸಚಿವ ಸಂಪುಟವನ್ನು ಸೇರಿ, ರೈಲ್ವೆ ಖಾತೆಯನ್ನು ದಕ್ಷವಾಗಿ ನಿಭಾಯಿಸಿದ ಖ್ಯಾತಿ ಇವರದು.

ಸ್ವಾತಂತ್ರ್ಯಾನಂತರವೂ ನಮ್ಮ ಕರ್ನಾಟಕದ ನಾಯಕರು ರಾಷ್ಟ್ರಮಟ್ಟದಲ್ಲಿ ಏಕೆ ಮುಂದೆ ಬಂದಿಲ್ಲವೆಂಬ ಪ್ರಶ್ನೆಗೂ ಉತ್ತರ ಕಂಡುಹಿಡಿಯಬೇಕಿದೆ. ಅದಕ್ಕೆ ಸಾಕಷ್ಟು ಕಾರಣಗಳು ಇವೆ. ಅವೆಲ್ಲವನ್ನೂ ಇಲ್ಲಿ ಪ್ರಸ್ತಾಪಿಸಲು ಆಸ್ಪದವಿಲ್ಲ. ಒಂದು ಅಂಶ ಮಾತ್ರ ಹೇಳಬಹುದು. ನಮ್ಮ ಜನ ಹಿಂಜರಿಯುವ ಸ್ವಭಾವದವರು. ಮುನ್ನುಗ್ಗಿ ಹೋರಾಟ ಮಾಡುವವರಲ್ಲ. ಇದಕ್ಕೆ ಪೂರಕವಾದ ನಿದರ್ಶನವೊಂದನ್ನು ನನ್ನ ಅನುಭವಕ್ಕೆ ಬಂದಂತಹ ನನ್ನ ದಿಲ್ಲಿಯ ದಿನಗಳ ಘಟನೆಯೊಂದನ್ನು ಉದಾಹರಿಸಬಹುದಾಗಿದೆ. ನಿರ್ಮಲ ಮನಸ್ಸಿನ, ಗಾಂಧೀವಾದಿ, ಸಜ್ಜನ, ಸರಳ ರಾಜಕಾರಣಿಯೊಬ್ಬರು ಶ್ರೀ ನಿಜಲಿಂಗಪ್ಪನವರಿಗೆ ಬೇಕಾದವರು. ಅವರ ಮಂತ್ರಿ ಮಂಡಲದಲ್ಲಿ ಉತ್ತಮ

ಖಾತೆಯನ್ನೇ ಹೊಂದಿದ್ದವರು. ಆದರೆ ಕಾರ್ಯಕ್ಷಮತೆ ಏನೂ ಇರಲಿಲ್ಲವಾದ್ದರಿಂದ ಬಹುಶಃ ಅವರನ್ನು ಎಂ.ಎಲ್.ಎ. ಬದಲಾಗಿ ಮುಂದಿನ ಚುನಾವಣೆಯಲ್ಲಿ ಎಂ.ಪಿ.ಯನ್ನಾಗಿ ಆರಿಸಿ ದಿಲ್ಲಿಯ ಲೋಕಸಭೆಗೆ ಕಳುಹಿಸಿಕೊಡಲಾಯಿತು. ಅವರ ದಿಲ್ಲಿಯ ಮನೆಯಲ್ಲೂ ಬಾಡಿಗೆಗೆಂದು ಕೆಲದಿನ ಆಂಧ್ರದ ನನ್ನ ಮಿತ್ರೆಯೊಬ್ಬರು ತಂಗಿದ್ದರು. ಅವರು ಹೇಳುವ ಪ್ರಕಾರ "ನಿಮ್ಮ ಎಂ.ಪಿ. ನೋಡಿ ಲೋಕಸಭೆಯ ಅಧಿವೇಶನವಿದ್ದಾಗ ಶ್ರದ್ಧಾಪೂರ್ವಕವಾಗಿ ದಿನವೂ ಪೂಜೆ–ಪುನಸ್ಕಾರ ಮಾಡಿ ಲೋಕಸಭೆಗೆ ೧೦ ಗಂಟೆಗೆ ತೆರಳುತ್ತಾರೆ. ಅಪ್ಪಟ ಖಾದಿ ಭಕ್ತರು. ಮಾಜಿ ಮಂತ್ರಿಗಳು. ಸಾಯಂಕಾಲ ಸಭೆಯು ಮುಗಿದ ನಂತರ ಮನೆಗೆ ಬಂದು ಪುನಃ ಸ್ನಾನ ಪೂಜೆ ಮುಗಿಸಿ ಕಪ್ಪು ಚಹಾ ಕುಡಿದು ಸರಿಯಾಗಿ ೭ ಗಂಟೆಗೆ ರೇಡಿಯೋ ಸುದ್ದಿ 'ಇಂದು ಲೋಕಸಭೆಯಲ್ಲಿ' ಕಾರ್ಯಕ್ರಮವನ್ನು ಕೇಳುತ್ತಾರೆ. ದಿನದಿನವೂ ಈ ಚರ್ಯೆಯನ್ನು ಕಂಡು ಒಮ್ಮೆ ಅವರನ್ನು ಕೇಳಿದೆ, 'ಸ್ವಾಮಿ ನೀವು ದಿನಾಲು ಲೋಕಸಭೆಯಲ್ಲೇ ಇರುತ್ತಿರಿ. ಮತ್ತೆ ಪುನಃ ಈ ಕಾರ್ಯಕ್ರಮವನ್ನು ಅಷ್ಟೇಕೆ ತದೇಕಚಿತ್ತರಾಗಿ ಕೇಳುತ್ತೀರಿ?' ಅದಕ್ಕೆ ಅವರು ನೀಡಿದ ಹಸುಗೂಸಿನಂತಹ ಉತ್ತರ '...ಅಲ್ಲಮ್ಮ ಅಲ್ಲಿ ಏನು ನಡೆಯಿತೆಂದು ನನಗೆ ಗೊತ್ತಾಗ ಬೇಡವೇ?' !!!" ಇಂತಹ ಮುಗ್ಧ ರಾಜಕೀಯ ನಾಯಕರನ್ನು ಆರಿಸಿಕಳಿಸುವ ನಾವು ರಾಷ್ಟ್ರಮಟ್ಟದ ರಾಜಕಾರಣದಲ್ಲಿ ಕರ್ನಾಟಕದ ಮುತ್ಸದ್ದಿಗಳನ್ನು ಕಾಣಲಾದೀತೆ?

ನಾನು ಮದ್ರಾಸ್ ವಿಶ್ವವಿದ್ಯಾಲಯದಲ್ಲಿ ಕೆಲಸ ನಿರ್ವಹಿಸುತ್ತಿರುವಾಗ ನಡೆದ ಲೋಕಸಭೆ ಚುನಾವಣೆಯ ಸಂದರ್ಭದಲ್ಲಿ ಡಿ.ಎಂ.ಕೆ. ಪಕ್ಷವು ಕಾಂಗ್ರೆಸ್ಸಿನ ಉಮ್ಮೇದವಾರ ಶ್ರೀ ವೆಂಕಟರಾಮನ್ ವಿರುದ್ಧ ತಾವು ಯಾವುದೇ ಬಲಶಾಲಿ ಪ್ರತಿಸ್ಪರ್ಧಿಯನ್ನು ನಿಲ್ಲಿಸುವುದಿಲ್ಲವೆಂದು ತಿಳಿಸಿದಾಗ ಕೆಲವರು ಹುಬ್ಬೇರಿಸಿ, 'ಏಕೆ ಈ ಬ್ರಾಹ್ಮಣನನ್ನು ಬೆಂಬಲಿಸುತ್ತೀರಾ?' ಎಂದು ಕೇಳಿದರು. ಅದಕ್ಕೆ ಕರುಣಾನಿಧಿಯವರು ಕೊಟ್ಟ ಉತ್ತರ ಮಾರ್ಮಿಕವಾಗಿತ್ತು. 'ಇಲ್ಲಿ, ತಮಿಳುನಾಡಿನಲ್ಲಿ ಅವರು ಬೇಕಿಲ್ಲ. ಆದರೆ ದಿಲ್ಲಿಯಲ್ಲಿ ತಮಿಳು ಹಿತಾಸಕ್ತಿಯನ್ನು ಸಮರ್ಥವಾಗಿ ನಿಭಾಯಿಸಲು ಇಂಥವರು' ಬೇಕಾಗಿದೆ.

ಈ ದಿಶೆಯಲ್ಲಿ ಕರ್ನಾಟಕವು ಹಿಂದೆ ಬಿದ್ದಿದೆ. 'ಯಾರೇ ಆಗಿರಲಿ, ಯಾವುದೇ ಪಕ್ಷವಾಗಿರಲಿ; ಸಮರ್ಥ ವ್ಯಕ್ತಿಗಳು ನಮ್ಮ ಪರವಾಗಿ ದಿಲ್ಲಿಯಲ್ಲಿ ಧ್ವನಿಯೆತ್ತಿ ನಮ್ಮ ಹಿತಾಸಕ್ತಿಗಳನ್ನು ಬಿಂಬಿಸುವಲ್ಲಿ, ರಕ್ಷಿಸುವಲ್ಲಿ, ಯಶಸ್ವಿಯಾದರೆ ಸಾಕು. ಅಂತಹವರನ್ನು ನಾವೆಲ್ಲರೂ ಭೇದಗಳನ್ನು ಮರೆತು ಬೆಂಬಲಿಸುವ' ಎಂದು ಯಾರೂ ಅನ್ನುವುದಿಲ್ಲ. ಜೊತೆಗೆ ಕಾಂಗ್ರೆಸ್‌ಪಕ್ಷ ಕೇಂದ್ರದಲ್ಲಿ ಸರಕಾರ ರಚಿಸುವ ಸಂದರ್ಭ ಬಂದಾಗ ಕರ್ನಾಟಕದ ಮತದಾರರು ಚುನಾಯಿಸಿದ ಲೋಕಸಭಾ ಸದಸ್ಯರು ಹೆಚ್ಚಾಗಿ ವಿರೋಧಪಕ್ಷಕ್ಕೇ ಸೇರಿದವರಾಗಿರುತ್ತಾರೆ. ತದ್ವಿರುದ್ಧ ಕೇಂದ್ರದಲ್ಲಿ ಕಾಂಗ್ರೆಸ್ಸೇತರ ಪಕ್ಷಗಳು ಸರಕಾರ ರಚಿಸುವ ಸಂದರ್ಭ ಬಂದಾಗ ನಮ್ಮ ಜನ ಹೆಚ್ಚಾಗಿ ಕಾಂಗ್ರೆಸ್‌ಗೆ ಮತ ನೀಡಿರುತ್ತಾರೆ! ಹೀಗಾಗಿ 'ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯವಿಲ್ಲ'ವೆಂಬಂತೆ ಕರ್ನಾಟಕದ ಪ್ರಭೃತಿಗಳೆಲ್ಲ ವಿರೋಧ ಪಕ್ಷಗಳಲ್ಲೇ ವಿರಾಜಮಾನರಾಗಿರುತ್ತಾರೆ. ಕ್ವಚಿತ್ತಾಗಿ ಸರಕಾರದಲ್ಲಿ ಮಂತ್ರಿಯಾಗುವ ಸುಯೋಗ ಬಂದರೂ ಛೋಟಾ–ಮೋಟಾ (ಚಿಕ್ಕಪುಟ್ಟ) ಖಾತೆಗಳಿಗೆ

ತೃಪ್ತರಾಗಿ ಇರಬೇಕಾಗುತ್ತದೆ. ಆದರೆ ಇಂತಹ ಪರಿಸ್ಥಿತಿಯು ಮಹಾರಾಷ್ಟ್ರ, ತಮಿಳುನಾಡು ಪಂಜಾಬ, ಉತ್ತರಪ್ರದೇಶಗಳಿಗೆ ಬರುವುದಿಲ್ಲ! ಈ ರಾಜ್ಯದವರು ನಿಭಾಯಿಸಿದ ಖಾತೆಗಳು ಮತ್ತು ನಮ್ಮವರು ಪಡೆದ ಖಾತೆಗಳು ಯಾವ್ಯಾವುವೆಂಬುದರ ಪಟ್ಟಿ ಮಾಡಿ ನೋಡಿದರೇ ಗೊತ್ತಾಗುತ್ತದೆ ನಾವೇನೂ ಪ್ರಮುಖ ಪಾತ್ರಧಾರಿಗಳಲ್ಲವೆಂದು.

ಅದೃಷ್ಟವಶಾತ್ ನಮ್ಮವರು ದಿಲ್ಲಿಯಲ್ಲಿ ಅಂದರೆ ರಾಷ್ಟ್ರೀಯಮಟ್ಟದಲ್ಲಿ ಮಹತ್ವದ ಪದ ಅಥವಾ ಜವಾಬ್ದಾರಿಯುತ ಸ್ಥಾನಗಳನ್ನು ಅಲಂಕರಿಸುವಂತಾದರೆ ಅದರಿಂದ ವಿಶೇಷ ಹೆಮ್ಮೆಪಡುವಂತಿಲ್ಲ. ಏಕೆಂದರೆ ಅದು ಬೇರೆಯವರ ಅನುಗ್ರಹದಿಂದ ಇಲ್ಲವೇ Coalition Politicsನ ಆಕಸ್ಮಿಕದಿಂದ ಒದಗಿ ಬಂದಿರುವುದೇ ಜಾಸ್ತಿ. ತಮ್ಮ ಸ್ವಂತ ಬಲದಿಂದ ನಮ್ಮವರು ದಿಲ್ಲಿಯಲ್ಲಿ ಸಾಧಿಸಿದ್ದು ವಿರಳ. ಕರುಣಾನಿಧಿ, ಜಯಲಲಿತಾ ಚಂದ್ರಬಾಬು ನಾಯ್ಡು, ಲಾಲೂಪ್ರಸಾದ, ಶರದ್‌ಪವಾರ, ಮಮತಾ ಬ್ಯಾನರ್ಜಿ ಮುಂತಾದ ಘಟಾನುಘಟಿಗಳು ಕೇಂದ್ರದಲ್ಲಿ ಯಾವುದೇ ಸರಕಾರವಿರಲಿ, ತಮ್ಮ ರಾಜಕೀಯ ಹಿತವನ್ನೂ, ಪಕ್ಷದ ಬಲವನ್ನೂ ಕಾಪಾಡಿಕೊಂಡು ಹೋಗುವಲ್ಲಿ ಸಫಲರಾಗುತ್ತಾರೆ. ಆದರೆ ನಮ್ಮ ನಾಯಕರು ಹೀಗಲ್ಲ. ಇದ್ದುದರಲ್ಲಿ ಕೆಂಗಲ್ ಹನುಮಂತಯ್ಯ, ದೇವರಾಜ ಅರಸು, ರಾಮಕೃಷ್ಣ ಹೆಗಡೆ, ನಿಜಲಿಂಗಪ್ಪ ಜತ್ತಿಯಂತಹವರು ವಾಸಿ; ಆದರೆ ಅವರ ಕಾಲನ್ನು ಜಗ್ಗಿ ಕೆಳಗಿಳಿಸುವವರೇ ನಮ್ಮಲ್ಲಿ ಜಾಸ್ತಿ. ಹೀಗಾಗಿ ಕರ್ನಾಟಕದ ನಾಯಕರು ರಾಷ್ಟ್ರಮಟ್ಟದಲ್ಲಿ ಮುಖಂಡರಾಗಿ ಪ್ರವರ್ಧಮಾನರಾಗಿ, ಜನರಿಗೂ ದೇಶಕ್ಕೂ ಸ್ಮರಣೀಯ ಸೇವೆ ಸಲ್ಲಿಸುವ ಅವಕಾಶದಿಂದ ವಂಚಿತರಾಗಿರುತ್ತಾರೆ. ಮುಂದಾದರೂ ಇಂತಹ ಸದಾವಕಾಶಗಳು ಬರಲಿ ಎಂದು ಆಶಿಸಬಹುದಾದರೂ, ಅಂತಹ ಲಕ್ಷಣಗಳು ಕ್ಷೀಣವಾಗಿವೆ.

❐



ಹಸ್ತಪ್ರತಿ ಸಿದ್ಧತೆ ಮತ್ತು ಪ್ರಕಾಶಕರ ಹೊಣೆಗಾರಿಕೆ

■ ಡಾ. ವಿಜಯಾ

ಒಂದು ಪುಸ್ತಕವನ್ನು ಪ್ರಕಾಶನಕ್ಕೆ ಸ್ವೀಕರಿಸುವುದೆಂದರೆ ತುಂಬ ಸರಳವಾದ ಸಂಗತಿಯೇನಲ್ಲ. ಈಚೆಗೆ ಯಾರು ಬೇಕಾದರೂ ಪ್ರಕಾಶಕರಾಗುವ, ಅದರಲ್ಲೂ ಮುದ್ರಣವೆಚ್ಚ ತೂಗಿಸುವಷ್ಟು ಆರ್ಥಿಕ ಅನುಕೂಲವಿದ್ದರೆ ಪ್ರಕಾಶಕರಾಗಿಬಿಡಬಹುದು. ಆ ಪುಸ್ತಕಗಳು ಬೇಗ ಮಾರಾಟವಾಗಿ, ತಾವು ಲಾಭ ಮಾಡಿಬಿಡುತ್ತೇವೆಂಬ ಹುಸಿ ನಂಬಿಕೆ ಹೆಚ್ಚಾಗಿದೆ. ಪುಸ್ತಕ ಪ್ರಕಾಶನವೂ ಒಂದು ಉದ್ಯಮ. ಜೊತೆಗೆ ಅದು ಸಾಹಿತ್ಯ ಪರಿಚಾರಿಕೆಯೂ ಆಗಿದೆ. ಇತರ ಎಲ್ಲ ಉದ್ಯಮಗಳಿಗೆ ಇರಬೇಕಾದ ಸಿದ್ಧತೆಯನ್ನು ಇದೂ ಬೇಡುತ್ತದೆ. ಬಹುತೇಕ ಪ್ರಕಾಶಕರಿಗೆ ಲೇಖಕರೇ ಬೀಜಧನ ಕೊಡುವ ಪರಿಪಾಠವೂ ಬೆಳೆಯುತ್ತಿದೆ. ಪ್ರಕಾಶಕರಿಗೆ ಪುಸ್ತಕ ಪ್ರಕಾಶನ ಕೇವಲ ವ್ಯಾಪಾರವಲ್ಲ; ಅದರ ಹಿಂದೆ ಶುದ್ಧ ಅಭಿರುಚಿ, ಸಾಮಾಜಿಕ ಸ್ವಾಸ್ಥ್ಯದಂತಹ ಗುರುತರ ಜವಾಬ್ದಾರಿಯೂ ಇರಬೇಕಾಗುತ್ತದೆ. ಬಹುತೇಕ ಪ್ರಕಾಶಕರಲ್ಲಿ ತಾವು ಪ್ರಕಟಣೆಗೆ ಪಡೆದ ಹಸ್ತಪ್ರತಿಯನ್ನು ಒಮ್ಮೆ ಓದಿ ನೋಡುವ ಪರಿಪಾಠವೂ ಇದ್ದಂತಿಲ್ಲ. ಪುಸ್ತಕ ಪ್ರಕಾಶನಕ್ಕೆ ಅಗತ್ಯವಾದ ನಿಬಂಧನೆಗಳ ತಿಳಿವಳಿಕೆ ಹಾಗಿರಲಿ, ಪುಸ್ತಕದ ಸಿದ್ಧತೆಯ ಎಲ್ಲ ಕಾರ್ಯಕ್ಕೂ ಲೇಖಕರು ಅಥವಾ ಮುದ್ರಕರನ್ನೇ ಅವಲಂಬಿಸುವುದನ್ನೂ ಕಾಣುತ್ತಿದ್ದೇವೆ.



ವಿದೇಶಗಳಲ್ಲಿ ಅಥವಾ ಅನೇಕ ಪ್ರಸಿದ್ಧ ಪ್ರಕಾಶಕರಲ್ಲಿ ಅದಕ್ಕೊಂದು ದೊಡ್ಡ ವ್ಯವಸ್ಥೆಯೇ ಇರುತ್ತದೆ. ಯಾವ ಹಸ್ತಪ್ರತಿಯೂ ಅದು ಇದ್ದಂತೆಯೇ ಮುದ್ರಣಕ್ಕೆ ಹೋಗುವುದಿಲ್ಲ. ಪ್ರತಿಯೊಂದು ಸಾಲು, ಪದಗಳನ್ನೂ ಪರಿಶೀಲಿಸಲು ಸಂಪಾದಕ

ಮಂಡಳಿಯಿರುತ್ತದೆ. ದೋಷಗಳನ್ನು ಸರಿಪಡಿಸಿ, ಎಡಿಟ್ ಮಾಡಿಯೇ ಮುದ್ರಣಕ್ಕೆ ಕಳಿಸುತ್ತಾರೆ. ಕೆಲವೊಮ್ಮೆ ಅವರೆಷ್ಟೇ ಪ್ರಸಿದ್ಧರಾಗಿದ್ದರೂ ಲೇಖಕರಿಗೇ ಹಸ್ತಪ್ರತಿ ಹಿಂತಿರುಗಿಸಿ ಇಂತಿಂಥ ವಾಕ್ಯ, ಪದ, ಅಭಿಪ್ರಾಯ, ವಿರೋಧಾಭಿಪ್ರಾಯಗಳಿವೆ ಎಂದು ಸೂಚಿಸಿ, ಸರಿಪಡಿಸಲು ಹೇಳುತ್ತಾರೆ. ಪ್ರಕಾಶಕರು ಒಂದು ಹಸ್ತಪ್ರತಿಯನ್ನು ಒಪ್ಪಿ ಪ್ರಕಟಸುತ್ತಾರೆಂಬುದೇ ಒಂದು ದೊಡ್ಡ ಸಂಗತಿ. ಕನ್ನಡದ ಸಂದರ್ಭದಲ್ಲಿ ಇಷ್ಟು ಕಟ್ಟುನಿಟ್ಟಿನ ವ್ಯವಸ್ಥೆ ಇನ್ನೂ ಬಂದಂತಿಲ್ಲ. ಆದರೂ ಕೆಲವು ಪ್ರತಿಷ್ಠಿತ ಪ್ರಕಟಣಾ ಸಂಸ್ಥೆಗಳು ಈ ಬಗೆಯ ಎಚ್ಚರವಹಿಸುತ್ತವೆ. ಕೆಲವು ಸಂಸ್ಥೆಗಳಲ್ಲಿ ತಜ್ಞರ ಸಲಹಾ ಮಂಡಳಿಯೇ ಇರುತ್ತದೆ. ಧಾರವಾಡದ 'ಮನೋಹರ ಗ್ರಂಥಮಾಲೆ'ಯಲ್ಲಿ ಜಿ.ಬಿ. ಜೋಶಿಯವರಂಥ ತಿಳಿವಳಿಕಸ್ಥರಿದ್ದಾಗಲೂ, ಕೀರ್ತಿನಾಥ ಕುರ್ತಕೋಟಿ ಮೊದಲಾದ ಹಿರಿಯರು ಸಲಹಾ ಮಂಡಳಿಯಲ್ಲಿದ್ದರು. ಆ ಪ್ರಕಾಶನದಿಂದ ಪುಸ್ತಕ ಪ್ರಕಟವಾಗುತ್ತದೆಂದರೆ ಅದೊಂದು ವಿಶೇಷ ಸಂಗತಿ ಆಗುತ್ತಿತ್ತು. ಕುರ್ತಕೋಟಿಯವರ ಹದ್ದಿನ ಕಣ್ಣಿಗೆ ಬೀಳದೆ ದೋಷಗಳು ನುಸುಳುವುದು ಸಾಧ್ಯವಿರಲಿಲ್ಲ. ಅನಿವಾರ್ಯವಾದಾಗ ಅವರು ಹಸ್ತಪ್ರತಿಯನ್ನು ಕೇವಲ ತಿದ್ದುವುದಲ್ಲ, ಪುನಾರಚಿಸಿದ ಸಂದರ್ಭಗಳೂ ಇದ್ದವು. ಮೈಸೂರಿನ ಕೆಲವು ಪ್ರಕಟಣಾ ಸಂಸ್ಥೆಗಳಲ್ಲೂ ಇಂಥ ವ್ಯವಸ್ಥೆ ಇತ್ತು. ನವಕರ್ನಾಟಕ ಪ್ರಕಾಶನ ಸಂಸ್ಥೆಯಲ್ಲಿ ಇಂಥ ವ್ಯವಸ್ಥೆ ಇದೆ. ವಿಷಯ ವೈವಿಧ್ಯವುಳ್ಳ ಪ್ರಕಟಣೆಗಳಾದ್ದರಿಂದ ಈ ಸಲಹೆಗಾರರು ಬೇರೆ ಬೇರೆ ವಿಷಯಕ್ಕೆ ಸಂಬಂಧಿಸಿದಂತೆ, ಬೇರೆ ಬೇರೆ ಕ್ಷೇತ್ರದವರೂ ಆಗಿರುತ್ತಾರೆ. ಇವೆಲ್ಲ ಒಂದು ಹಸ್ತಪ್ರತಿಯು ಪ್ರಕಟಣೆಗೆ ಮೊದಲು ವಿಶೇಷವಾದ ಸಿದ್ಧತೆಗೆ ಒಳಗಾಗಬೇಕೆಂಬುದನ್ನು ಸೂಚಿಸುತ್ತಿವೆಯಲ್ಲವೆ?

ಪತ್ರಿಕೋದ್ಯಮ, ಪ್ರಕಾಶನ, ಮುದ್ರಣ ವಿಭಾಗಗಳಲ್ಲಿ ಒಂದೊಂದು ವಿಭಾಗಕ್ಕೂ ಅವರದ್ದೇ ಆದ ಪ್ರತ್ಯೇಕ ಶಿಸ್ತುಗಳಿವೆ.

ಪತ್ರಿಕೋದ್ಯಮದ ಎಡಿಟಿಂಗ್ ಅಥವಾ ಹಸ್ತಪ್ರತಿ ತಯಾರಿಯ ವಿಧಾನವೇ ಬೇರೆ ಸ್ವರೂಪದ್ದು. ಹಾಗೆಯೇ ಪ್ರಕಾಶಕನ, ಮುದ್ರಕನ ಜವಾಬ್ದಾರಿಗಳೂ ಬೇರೆಯೇ ಇರುತ್ತವೆ. ಪ್ರತಿಯೊಂದು ಕ್ಷೇತ್ರವೂ ಶಿಸ್ತನ್ನು ಬಯಸುತ್ತದೆ.

ಸೃಜನಶೀಲ, ಸೃಜನೇತರ, ಸಂಕಲನ, ಸಂಪಾದನೆ, ಅನುವಾದ ಮೊದಲಾಗಿ ವಿಂಗಡಿಸಿಕೊಂಡರೆ ಸೃಜನಶೀಲ ಕೃತಿಗಳಲ್ಲಿ ಹೆಚ್ಚು ಹಸ್ತಕ್ಷೇಪಕ್ಕೆ ಅವಕಾಶವಿಲ್ಲ. ಎಂದರೆ ಮನಬಂದಂತೆ ಸಾಲುಗಳನ್ನು ಕತ್ತರಿಸಿ (edit) ಬಿಡಲಾಗದು. ಉಳಿದಂತೆ ಎಲ್ಲ ಹಸ್ತಪ್ರತಿಗೆ ಅನ್ವಯವಾಗುವ ಸಿದ್ಧತೆಯೇ ಇಲ್ಲೂ ಅನ್ವಯವಾಗುತ್ತದೆ. ಕವಿತಾ ಸಂಕಲನವಾದಾಗಲೂ ಸ್ವಾತಂತ್ರ್ಯ ಕಡಿಮೆಯೇ, ಲೇಖಕರ ಗಮನಕ್ಕೆ ತರದೇ ಯಾವ ಬದಲಾವಣೆ, ತಿದ್ದುವಿಕೆ ಕತ್ತರಿಸುವಿಕೆ ಕೂಡದು.

ಗ್ರಂಥ ಸಂಪಾದನೆಯನ್ನು ಸಾಮಾನ್ಯವಾಗಿ ಸಂಪಾದಕ ಮಂಡಳಿಯು ನಿರ್ವಹಿಸುತ್ತದಾದ್ದರಿಂದ ಹೆಚ್ಚಾಗಿ ಸಮಸ್ಯೆಗಳಿರುವುದಿಲ್ಲ. ಅನುವಾದ ಕೃತಿಯಾದಾಗ ತೆಗೆದುಕೊಳ್ಳಬೇಕಾದ ಎಚ್ಚರಗಳು ಹಲವು. ಪ್ರಕಾಶಕರು ಮೊದಲು ಮಾಡಬೇಕಾದ ಕೆಲಸ ಲೇಖಕರೊಂದಿಗೆ ಗೊತ್ತಾದ ನಿಯಮಗಳಡಿ ಒಪ್ಪಂದ ಮಾಡಿಕೊಳ್ಳುವುದು.

ಈ ಹಿನ್ನೆಲೆಯಲ್ಲಿ ಸಾಕಷ್ಟು ತಜ್ಞರೊಡನೆ ಸಮಾಲೋಚನೆ ನಡೆಸಿದ ಕನ್ನಡ ಪುಸ್ತಕ ಪ್ರಾಧಿಕಾರವು, ಆ ಬಗ್ಗೆ ಒಂದು ಮಾದರಿಯನ್ನೂ ತಯಾರಿಸಿದೆ. ಅದನ್ನು ಪಡೆದುಕೊಂಡು ಅದೇ ರೀತಿಯ ಒಂದು ಲಿಖಿತ ಒಪ್ಪಂದ ಮಾಡಿಕೊಳ್ಳುವುದು ವಿಹಿತ. ಎಷ್ಟು ಪ್ರತಿಗಳನ್ನು ಮುದ್ರಿಸುತ್ತೀರಿ, ಎಷ್ಟು ಬೆಲೆ ಇಡಬಹುದು, ಈ ಆಧಾರದ ಮೇಲೆ ಶೇಕಡಾ ಎಷ್ಟು ಮೊತ್ತ ಲೇಖಕರಿಗೆ ಗೌರವಧನ ಕೊಡುತ್ತೀರಿ, ಆ ಗೌರವಧನವನ್ನು ಹೇಗೆ ಎಂದರೆ ಯಾವ ಯಾವ ಹಂತದಲ್ಲಿ ಸಂದಾಯ ಮಾಡುತ್ತೀರಿ, ಎಂಬ ವಿವರ ಒಪ್ಪಂದದಲ್ಲಿರಬೇಕು. ಸಾಮಾನ್ಯವಾಗಿ ಮುಖಬೆಲೆಯ ಮೇಲೆ ಶೇ. ೧೦ರಂತೆ ಕೆಲವೊಮ್ಮೆ ಪ್ರಸಿದ್ಧ ಲೇಖಕರಿಗೆ ಶೇ. ೧೫–೨೦ರವರೆಗೂ ಕೊಡುವುದುಂಟು. ಎಲ್ಲವೂ ಒಪ್ಪಂದದಲ್ಲಿ ದಾಖಲೆ ಆಗಬೇಕು.

ಸಾಮಾನ್ಯವಾಗಿ ಪುಸ್ತಕಕ್ಕೆ ಬಳಸುವ ಚಿತ್ರಗಳು, ಕಾಗದದ ಮೌಲ್ಯವನ್ನಾಧರಿಸಿ ತಗಲುವ ವೆಚ್ಚದ ಮೂರು ಪಟ್ಟನ್ನು ಮುಖಬೆಲೆಯಾಗಿ ತೀರ್ಮಾನಿಸುತ್ತಾರೆ. ಪುಸ್ತಕ ಮಾರಾಟದಲ್ಲಿ ಶೇಕಡಾವಾರು ರಿಯಾಯಿತಿ ಇರುತ್ತದೆ. ಇದು ಮಾರಾಟದಲ್ಲಿ ಅನಿವಾರ್ಯ.

ಎಲ್ಲಕ್ಕಿಂತ ಮುಖ್ಯವಾಗಿ ಪ್ರಕಾಶನದ ಹಕ್ಕುಗಳು ಒಂದೇ ಮುದ್ರಣಕ್ಕೋ ಅಥವಾ ಸಂಪೂರ್ಣವೋ ಎಂಬುದೂ ಸ್ಪಷ್ಟವಾಗಬೇಕು. ಕೆಲವೊಮ್ಮೆ ಲೇಖಕರು ಹಕ್ಕುಗಳನ್ನು ಬೇರೆಯವರಿಗೆ ಎಂದರೆ ತಮ್ಮ ಮಕ್ಕಳಿಗೆ, ಬಂಧುಗಳಿಗೆ ಅಥವಾ ಯಾವುದಾದರೂ ಸಂಸ್ಥೆಗೆ ಕೊಟ್ಟಿರುತ್ತಾರೆ. ಅದು ಒಪ್ಪಂದದಲ್ಲಿ, ಮುಖ್ಯವಾಗಿ ಪ್ರಕಟಿತ ಪುಸ್ತಕದಲ್ಲೇ ದಾಖಲಾಗಬೇಕು. ಲೇಖಕರು ಹಕ್ಕುಗಳನ್ನು ತಾವೇ ಇಟ್ಟುಕೊಂಡರೂ, ಅವರ ನಿಧನಾ ನಂತರ ಪುಸ್ತಕ ಮರುಮುದ್ರಣಕ್ಕೆ ಬಂದರೆ, ಅವರ ಉಯಿಲಿನಲ್ಲಿ ಹಕ್ಕುಗಳನ್ನು ಯಾರಿಗಾದರೂ ಬರೆದಿದ್ದಾರೆಯೇ ಎಂದು ಸ್ಪಷ್ಟಪಡಿಸಿಕೊಳ್ಳಬೇಕು. ಹಾಗಿಲ್ಲದಾಗಲೂ ಆ ಲೇಖಕರ ಹೆಂಡತಿ, ಮಕ್ಕಳಿಗೆ ಈ ಕೃತಿಯ ಹಕ್ಕುಗಳು ಹೋಗುತ್ತವೆ. ಯಾವುದೇ ಸಂದರ್ಭದಲ್ಲೂ ಪುಸ್ತಕ ಮರುಮುದ್ರಣವಾಗಿದ್ದು, ಪ್ರಕಾಶಕರು ಬೇರೆಯವರಾದರೆ ಈ ಮೊದಲು ಪ್ರಕಾಶನ ಮಾಡಿದ ಸಂಸ್ಥೆಯ ಒಪ್ಪಿಗೆ ಇರಬೇಕು. ಮೊದಲ ಮುದ್ರಣದ ಪ್ರತಿಗಳು ಪೂರ್ತಿಯಾಗಿ ಖರ್ಚಾಗಿರಬೇಕು. ಖರ್ಚಾಗಿಲ್ಲವಾದರೆ ಪ್ರಕಾಶಕರ ಬಳಿ ಉಳಿದಿರುವ ಪ್ರತಿಗಳನ್ನು ಕೊಂಡುಕೊಂಡಾದರೂ ಈ ಹೊಸ ಮುದ್ರಣ ಪ್ರಾರಂಭಿಸ ಬೇಕಾಗುತ್ತದೆ! ಮನ ಬಂದಂತೆ ಮುದ್ರಿಸುವುದೇ ಪ್ರಕಾಶನ ಆಗುವುದಿಲ್ಲ. ಯಾವುದೇ ಅನುಮತಿ ಲಿಖಿತವಾಗೇ ಇರಬೇಕಾದ್ದು ಅತ್ಯಗತ್ಯ. (ನಾನು ಗಿರೀಶ್ ಕಾರ್ನಾಡರ 'ಮಾನಿಷಾದ' ಏಕಾಂಕವನ್ನು ಒಮ್ಮೆ ಸೂತ್ರದ ಬೊಂಬೆಗೆ, ಮತ್ತೊಮ್ಮೆ ರಂಗಭೂಮಿಗಾಗಿ ರೂಪಾಂತರಿಸಿದ್ದೆ. ಮೌಖಿಕ ಅನುಮತಿಗಿಂತ ಲಿಖಿತ ಅನುಮತಿಯೂ ಅಗತ್ಯ ಎಂಬುದು ಇದಕ್ಕೆ ಸಂಬಂಧಿಸಿದ ವಿವಾದಗಳೆದ್ದಾಗಲೇ ಅರ್ಥವಾದದ್ದು) ಅದು ಸ್ನೇಹ ಸಂಬಂಧಕ್ಕೆ ಧಕ್ಕೆ ತರುತ್ತದೆ. ಅನುವಾದಗಳನ್ನು ಪ್ರಕಟಿಸುವಾಗ ಈ ಹಕ್ಕುಗಳ ಬಗ್ಗೆ ತುಂಬಾ ಎಚ್ಚರ ಇರಬೇಕಾಗುತ್ತದೆ. ಮೂಲ ಲೇಖಕರ ಅನುಮತಿ ಇರಲೇಬೇಕು. ಮೂಲ ಲೇಖಕರು ಜೀವಂತ ಇಲ್ಲದಿದ್ದರೆ ಅವರ ಸಂಬಂಧಿಗಳು ಅಥವಾ ವಾರಸುದಾರರು, ಕೆಲವೊಮ್ಮೆ

ಆ ಕೃತಿಯನ್ನು ಮೂಲದಲ್ಲಿ ಪ್ರಕಟಿಸಿದ ಸಂಸ್ಥೆಯ ಅನುಮತಿ ಇತ್ಯಾದಿ ತುಂಬ ಮುಖ್ಯವಾಗುತ್ತದೆ. ವಿದೇಶಗಳ ಲೇಖಕರಾದಾಗಲಂತೂ ಈ ನಿಯಮ ತುಂಬ ಕಟ್ಟುನಿಟ್ಟಾಗಿರುತ್ತದೆ. ಎಷ್ಟೇ ಪ್ರಯಾಸವಾದರೂ ಅನುಮತಿ ಪಡೆಯದೆ ಪ್ರಕಾಶನ ಮಾಡುವುದು ಒಳ್ಳೆಯದಲ್ಲ. ಲೇಖಕರು ನಿಧನಹೊಂದಿ ೫೦ ವರ್ಷಗಳಾದರೆ, ಕೃತಿಯ ಸ್ವಾಮ್ಯ ಸ್ವತಂತ್ರವಾಗುತ್ತದೆಂಬ ನಿಯಮವಿದೆ. ರವೀಂದ್ರನಾಥ ಟ್ಯಾಗೂರರ ಕೃತಿಗಳ ಅನುವಾದದ ಹಿನ್ನೆಲೆಯಲ್ಲಿ ಇದನ್ನು ೬೦ ವರ್ಷಕ್ಕೆ ವಿಸ್ತರಿಸಲಾಯಿತು. ಆದರೂ ಎಚ್ಚರಿಕೆ ವಹಿಸುವ ಅಗತ್ಯವಿದೆ. ಉದಾ: ಶ್ರೀಮತಿ ಜಿ.ಎಸ್. ವೆಂಕಟಲಕ್ಷ್ಮಿ ('ಚಾವಡಿ'ಯ ಸಂಪಾದಕಿ) ಅವರು ಒಮ್ಮೆ ಪ್ರಸಿದ್ಧ ನೃತ್ಯತಾರೆ ಇಸಡೋರಾ ಡಂಕನ್ನಳ ಆತ್ಮಚರಿತ್ರೆಯನ್ನು ಕನ್ನಡಕ್ಕೆ ಅನುವಾದಿಸಿದರು. ಅದನ್ನು ನಾನೇ ಪ್ರಕಾಶನ ಮಾಡುವ ಮನಸ್ಸಿತ್ತು. ಆದರೆ ಅನುಮತಿ ಪಡೆಯುವುದೇ ಸಾಧ್ಯವಾಗಲಿಲ್ಲ. ಆಕೆ ಪ್ರಜಾವಾಣಿಯನ್ನು ಸಂಪರ್ಕಿಸಿದರು. ಅವರಿಗೂ ಇದೇ ಸಮಸ್ಯೆಯಾಯಿತೆಂದು ತೋರುತ್ತದೆ. ಧೈರ್ಯ ಮಾಡಿದ ಪಿ. ಲಂಕೇಶರು 'ಲಂಕೇಶ್ ಪತ್ರಿಕೆ'ಯಲ್ಲಿ ಯಾವ ಅನುಮತಿಯೂ ಇಲ್ಲದೆಯೇ ಧಾರಾವಾಹಿಯಾಗಿ ಪ್ರಕಟಿಸಿದರು. ಕನ್ನಡದ ಈ ಪತ್ರಿಕೆ ವಿದೇಶದವರಿಗೆಲ್ಲಿ ತಲುಪೀತೆಂಬ ಧೈರ್ಯವಿರಬೇಕು. ಅನುಮತಿಯ ಕಾರಣದಿಂದ ಕನ್ನಡದ ಓದುಗರಿಗೆ ಒಂದೊಳ್ಳೆಯ ಆತ್ಮಚರಿತ್ರೆ ಓದುವ ಅವಕಾಶ ತಪ್ಪಿಹೋಗದಿರಲೆಂಬ ಅವರ ಆಶಯವೂ ಒಳ್ಳೆಯದೇ. ಆ ಕೃತಿಯನ್ನು ಪುಸ್ತಕ ರೂಪದಲ್ಲಿ ತರಲಿಲ್ಲವೆಂದು ಭಾವಿಸುತ್ತೇನೆ.

ವಿದೇಶದ ಕೃತಿಗಳ ಸ್ವಾಮ್ಯ ಪಡೆಯುವುದು ಕಷ್ಟ. ಅವರು ಕೇಳುವ ಗೌರವಧನವೂ ನಮ್ಮ ಅಳವಿಗೆ ಮೀರಿದ್ದು. ಹೀಗಾಗಿ ಎಷ್ಟೋ ಕೃತಿಗಳನ್ನು ಕನ್ನಡದಲ್ಲಿ ಪ್ರಕಟಿಸಲು ಸಾಧ್ಯವಾಗಿಲ್ಲ. ಪ್ರಸ್ತುತ ಸಾವಯವ ಕೃಷಿ ಕ್ಷೇತ್ರದಲ್ಲಿ ತೊಡಗಿಕೊಂಡಿರುವ 'ಸಹಜ ಸಾಗುವಳಿ' ಪತ್ರಿಕೆಯ ಸಂಪಾದಕಿ ವಿ. ಗಾಯತ್ರಿ ಅವರು 'ತೋತೊ ಚಾನ್' ಎಂಬ ಮಕ್ಕಳ ಪುಸ್ತಕವನ್ನು ಅನುವಾದಿಸಿದರು. ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದ ತುಂಬ ಸೊಗಸಾದ ಪುಸ್ತಕ ಅದು. ಏನೇ ಪ್ರಯತ್ನ ಮಾಡಿದರೂ ಮೂಲ ಲೇಖಕರ, ಪ್ರಕಾಶಕರ ಸಂಪರ್ಕ ಸಿಗಲಿಲ್ಲ. ಅನುಮತಿ ಪಡೆಯದೆ ಪ್ರಕಟಿಸುವ ಧೈರ್ಯವಾಗಲಿಲ್ಲ. ಆಕೆ ತನ್ನ ಬಾಲ್ಯದ ಅನುಭವಗಳನ್ನು ಬೆಸೆದು–ಅದೇ ಕೃತಿಯನ್ನು ಆಧರಿಸಿ ಬೇರೆಯದೇ ಸ್ವತಂತ್ರ ಕೃತಿಯನ್ನು ರಚಿಸಿದರು. ಅದೃಷ್ಟವಶಾತ್ ಅವರ ಮೊದಲ ಅನುವಾದವನ್ನು ನ್ಯಾಷನಲ್ ಬುಕ್ ಟ್ರಸ್ಟ್ ಪ್ರಕಟಿಸಿದರೆ, ಇನ್ನೊಂದು ಕೃತಿಯನ್ನು ಇತ್ತೀಚೆಗೆ ಮೇ ಫ್ಲವರ್ ಪ್ರಕಾಶನದ ಜಿ.ಎನ್. ಮೋಹನ್ ಅವರು ಪ್ರಕಟಿಸಿದರು. ಅದರ ಹೆಸರು 'ತುಂಗಾ'. ಎರಡೂ ಅಪರೂಪದ ಕೃತಿಗಳು.

ಕೆಲವು ಪ್ರಕಾಶಕರು ಪೂರ್ಣ ಹಕ್ಕನ್ನು ತಾವೇ ಪಡೆದುಕೊಂಡಿರುತ್ತಾರೆ. ಹಾಗಾದಾಗ ಲೇಖಕರೂ ತೊಂದರೆಗೆ ಸಿಕ್ಕಿಕೊಳ್ಳುತ್ತಾರೆ. ಉದಾಹರಣೆಗೆ ಕೆ.ಎಸ್. ನರಸಿಂಹಸ್ವಾಮಿಯವರ 'ಮೈಸೂರು ಮಲ್ಲಿಗೆ' ಕವಿತಾ ಸಂಕಲನ, ಎಚ್.ವಿ. ಸಾವಿತ್ರಮ್ಮನವರ ಕೃತಿಗಳ ಸ್ವಾಮ್ಯ ಇತ್ಯಾದಿ. ನರಸಿಂಹಸ್ವಾಮಿಯವರ ಕೃತಿ ಸ್ವಾಮ್ಯವನ್ನು ಹಿಂತಿರುಗಿ ಪಡೆಯಲು ಸಾಕಷ್ಟು ಪ್ರಯಾಸವಾಯಿತೆಂದು ಕೇಳಿದ್ದೇನೆ. ಈಗ ತೆರವಾಗಿದೆ! ಸಾವಿತ್ರಮ್ಮನವರ ಕತೆಗಳನ್ನು

ದೂರದರ್ಶನದಲ್ಲಿ ಧಾರಾವಾಹಿಯಾಗಿ ತರಲು ನಿರ್ದೇಶಕ ನಾಗಾಭರಣರಿಗೆ ಸಲಹೆ ಕೊಟ್ಟು, ಅನುಮತಿ ಕೊಡಿಸಲು ನಾನೇ ಪರದಾಡಬೇಕಾಯಿತು. ಆಗ ಕೈಗೂಡಿರಲಿಲ್ಲ. ಈಗ ಸ್ವತಂತ್ರವಾಗಿವೆಯಂತೆ!

ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರ ಕೃತಿಗಳ ಸ್ವಾಮ್ಯ ಅವರ ಮೊಮ್ಮಗಳು ನಿರ್ವಹಿಸುವ ಟ್ರಸ್ಟ್ ಕೈಯಲ್ಲಿದೆ. ಅನುಮತಿ ಸುಲಭವಲ್ಲ. ಹಾಗೇ ಬೇಂದ್ರೆ, ರಾಜರತ್ನಂ ಕೃತಿಗಳಿಗೂ ಅನುಮತಿ ಕಷ್ಟ. ಸರ್ಕಾರವೇ ಕೈಕಟ್ಟಿ ಕೂರಬೇಕಾಗಿ ಬಂದಿದೆ. ಈ ಎಲ್ಲ ತೊಡಕುಗಳನ್ನು ನಿವಾರಿಸಿಕೊಂಡು ಅನುಮತಿ ಪಡೆದುಕೊಂಡು, ಲೇಖಕರೊಂದಿಗೆ ಒಪ್ಪಂದವನ್ನು ಮಾಡಿಕೊಂಡ ಮೇಲೆಯೇ ಪ್ರಕಾಶನಕ್ಕೆ ತೊಡಗಬೇಕು. ಕೃತಿಯೊಂದು ಪಠ್ಯಪುಸ್ತಕವಾಗಿ ಆಯ್ಕೆ ಆದಾಗ ಪ್ರಕಾಶಕರಿಗೆ ಕೊಂಚ ಲಾಭವಿದೆ. ಆಗ ಮುಖ್ಯವಾಗಿ ಲೇಖಕರು ತಾವೇ ಪ್ರಕಟಿಸುತ್ತೇವೆ ಅನ್ನುವುದುಂಟು! ಇಲ್ಲಿಯೂ ಹಲವು ನಿಯಮಗಳ ಪಾಲನೆಯ ಅಗತ್ಯ ಇದೆ. ಲೇಖಕರೇ ಪ್ರಕಟಿಸುತ್ತೇವೆನ್ನುವುದರ ಹಿಂದೆ ನಾಲ್ಕು ಕಾಸಿನ ಲಾಭದ ಚಿಂತೆ ಇದೆ. ಒಂದೊಮ್ಮೆ ಅವರ ಕೋರಿಕೆ ಒಪ್ಪಿ ಪ್ರಕಾಶಕರು ಅನುಮತಿಸಿದರೂ ಈಗಾಗಲೇ ತಾವು ಪ್ರಕಟಿಸಿದ ಆ ಪುಸ್ತಕದ ಮುದ್ರಿತ ಪ್ರತಿಗಳಲ್ಲಿ ಮಾರಾಟವಾಗದೇ ಉಳಿದ ಪ್ರತಿಗಳನ್ನು ಲೇಖಕರು ಅಥವಾ ಅವರು ಒಪ್ಪಂದ ಮಾಡಿಕೊಂಡ ಬೇರೆ ಪ್ರಕಾಶಕರು ಕೊಂಡುಕೊಳ್ಳಬೇಕು. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಪಠ್ಯಪುಸ್ತಕಗಳಿಗೆ ಬೆಲೆ ಕಡಿಮೆ ಇಡಬೇಕಾಗಿರುತ್ತದೆ. ಆದ್ದರಿಂದ ಅವರು ಬಳಸುವ ಕಾಗದ, ಮುಖಪುಟದ ರಟ್ಟು ಬೈಂಡಿಂಗ್ ಎಲ್ಲವೂ ಅಷ್ಟೇನೂ ಶ್ರೀಮಂತವಾಗಿರುವುದಿಲ್ಲ. ಬೆಲೆ ಕಡಿಮೆ ಆದ್ದರಿಂದ ಅದಕ್ಕಿಂತ ಹೆಚ್ಚು ಬೆಲೆ ಇರುವ ನಿಮ್ಮ ಪ್ರಕಟಣೆ ಅದೆಷ್ಟೇ ಅಂದವಾಗಿದ್ದರೂ ಮಾರಾಟವಾಗದೆ ನಷ್ಟಕ್ಕೆ ಒಳಗಾಗಬೇಕಾಗುತ್ತದೆ. ಈ ಎಲ್ಲ ಎಚ್ಚರವಹಿಸದೇ ಹೋದರೆ ಪ್ರಕಾಶಕರು ಹಣದ ಮುಗ್ಗಟ್ಟಿಗೆ ಸಿಕ್ಕಿಕೊಳ್ಳುತ್ತಾರೆ. ಕೆಲವೊಮ್ಮೆ ಲೇಖಕರು ಯಾವು ದಾದರೂ ಕೃತಿಯನ್ನು ಆಧರಿಸಿ ಅಥವ ರೂಪಾಂತರ ಮಾಡಿರುವುದುಂಟು. ಅಂಥ ಸಂದರ್ಭದಲ್ಲೂ ಮೂಲ ಲೇಖಕರ ಅನುಮತಿ ಅಗತ್ಯ. ಸಾಮಾನ್ಯವಾಗಿ ಕತೆ, ಕಾದಂಬರಿ ಕಾವ್ಯಗಳನ್ನು ಆಧರಿಸಿ ನಾಟಕಗಳ ರಚನೆಯಾಗುತ್ತದೆ. ಅವರು ಪ್ರದರ್ಶನಕ್ಕೆ ಅನುಮತಿ ಪಡೆದಿರಬಹುದು. ಆದರೆ ಅದನ್ನು ಮುದ್ರಿಸಲು ಮೂಲ ಲೇಖಕರ ಅನುಮತಿ ಇದೆಯೇ ಇಲ್ಲವೇ ಎಂಬುದನ್ನೂ ತಿಳಿದುಕೊಳ್ಳದೇ ನಾಟಕ ಕೃತಿ ಪ್ರಕಟಿಸುವುದರಿಂದ ಮುಂದೆ ತೊಂದರೆಗೆ ಸಿಕ್ಕಿಕೊಳ್ಳುವ ಸಾಧ್ಯತೆಗಳಿವೆ. ಆ ಮೂಲ ಲೇಖಕರ ಕೃತಿಯ ಪ್ರಕಾಶಕರು ಕೂಡಾ ಕೆಲವೊಮ್ಮೆ ಕೇವಲ ಮುದ್ರಣದ ಹಕ್ಕಲ್ಲದೆ, ಯಾವುದೇ ಮಾಧ್ಯಮಕ್ಕೆ ಅಳವಡಿಸಲೂ ಅನುಮತಿ ಪಡೆಯಬೇಕೆಂಬ ಶರತ್ತು ಹಾಕಿ ಒಪ್ಪಂದ ಮಾಡಿರುವುದುಂಟು. ಈ ಹೊತ್ತು ಹೊಸ ಹೊಸ ಮಾಧ್ಯಮಗಳ ಆವಿಷ್ಕಾರವಾಗಿದೆ; ಆಗುತ್ತಲೇ ಇದೆ. ಹೀಗಿರುವಾಗ ಪ್ರಕಾಶಕರು ಈ ಒಪ್ಪಂದ ಪತ್ರದ ವಿಚಾರದಲ್ಲಿ ತುಂಬ ಜಾಗರೂಕರಾಗಿರುವುದು ಅತ್ಯಗತ್ಯ.

ಮುಂದಿನ ಹಂತ ಹಸ್ತಪ್ರತಿಯ ಸಿದ್ಧತೆ. ಮೇಲುನೋಟಕ್ಕೆ ಅತ್ಯಂತ ಸರಳ, ತೀರಾ ಪ್ರಾಥಮಿಕ ಸಂಗತಿ ಅನ್ನಿಸಿದರೂ ಇದೊಂದು ಬಹುಶ್ರಮವನ್ನು ಬೇಡುವ ಸಿದ್ಧತೆ. ಯಾವ ಕಾರಣಕ್ಕೂ ನಿರ್ಲಕ್ಷ್ಯ-ಧೋರಣೆ ಸಲ್ಲದು. ಕೃತಿಯ ಅಚ್ಚುಕಟ್ಟು, ಭಾಷಾ ಶುದ್ಧತೆ ಎಲ್ಲವೂ

ಒಂದು ಚೌಕಟ್ಟಿನೊಳಗೆ ಬಂದಾಗಲೇ ಚಂದ. ಮುದ್ರಕರು, ಲೇಖಕರ ಮೇಲೆ ಎಲ್ಲ ಹೊಣೆಹಾಕಿ ಪ್ರಕಾಶಕ ಸುಮ್ಮನಿರುವುದು ನಿಜವಾದ ಉದ್ಯಮಿಯ ಲಕ್ಷಣವಲ್ಲ.

ಪಿಎಚ್.ಡಿ. ಪದವಿಗಾಗಿ ಸಿದ್ಧಮಾಡಿದ ಪ್ರೌಢ ಪ್ರಬಂಧಗಳನ್ನು ಪ್ರಕಟಣೆಗೆ ಸ್ವೀಕರಿಸುವಾಗ ಹೆಚ್ಚು ಎಚ್ಚರವಹಿಸಬೇಕಾಗುತ್ತದೆ. ಆ ಪ್ರಬಂಧಗಳು ಅವರಿವರ ಪುಸ್ತಕಗಳಿಂದ ಸಾಲುಗಳನ್ನು ಹಾಗೇ ಹಾಗೇ ಎತ್ತಿಕೊಂಡಿರುವ ಸಂಭವ ಇಲ್ಲದಿಲ್ಲ. ಅಭಿಪ್ರಾಯಗಳೂ ಕೆಲವೊಮ್ಮೆ ನಕಲುಗಳಾಗಿರುತ್ತವೆ. ಇದರ ರಹಸ್ಯ ಬಯಲಾದಾಗ ಅನಗತ್ಯ ವಿವಾದಗಳಾಗಿ, ಪ್ರಕಾಶಕರೂ, ಮುದ್ರಕರೂ ವೃಥಾ ಪೇಚಿಗೆ ಸಿಲುಕುತ್ತಾರೆ. ಪ್ರಸಿದ್ಧ ಲೇಖಕರೊಬ್ಬರ ಇಂಥ ಪ್ರಬಂಧ ಪ್ರಕಟಣೆಯ ನಂತರ ಹೀಗೆ ವಿವಾದಕ್ಕೊಳಗಾದ ಪ್ರಸಂಗ ಕೆಲವೇ ವರ್ಷಗಳ ಹಿಂದೆ ನಡೆದದ್ದುಂಟು.

ಕೆಲವು ಪ್ರಸಿದ್ಧ ವ್ಯಕ್ತಿಗಳ ಬಗ್ಗೆ ಬರೆಯುವ ಪುಸ್ತಕಗಳನ್ನು, ಬರಹಗಾರರು ಪ್ರಸಿದ್ಧರೆಂಬ ಕಾರಣಕ್ಕೆ ಪರಿಶೀಲಿಸದೆ ಒಪ್ಪಿಕೊಳ್ಳುವುದೂ ಕೆಲವೊಮ್ಮೆ ವಿಪರೀತ ತೊಂದರೆಗೆ ಕಾರಣವಾಗುತ್ತದೆ. ಪ್ರಸಿದ್ಧ ಅರ್ಥಶಾಸ್ತ್ರಜ್ಞರೊಬ್ಬರು ಬರೆದ ಪುಸ್ತಕವು ಮಾಜಿ ಪ್ರಧಾನಿಗಳನ್ನು ಅವಹೇಳನ ಮಾಡಿದೆ ಎಂಬ ಆರೋಪದ ಮೇಲೆ ಕೆಲವು ವರ್ಷಗಳ ಹಿಂದೆ ಪ್ರತಿಗಳನ್ನು ಮುಟ್ಟುಗೋಲು ಹಾಕಿಕೊಂಡು, ಮುದ್ರಣಾಲಯವನ್ನು ಸೀಜ್ (ಬೀಗಮುದ್ರೆ) ಮಾಡಿದ ಉದಾಹರಣೆಯೂ ನಮ್ಮ ಮುಂದಿದೆ! ಬೇರೆಯವರ ಕೃತಿಗಳಿಂದ ಹಾಗೆ ಹಾಗೇ ಎತ್ತಿಕೊಂಡು, ಯಾವುದರ ಆಧಾರ, ಯಾವುದರಿಂದ ಉಲ್ಲೇಖ ಎಂದೂ ಸೂಚಿಸದೆ, ಲೇಖಕರು ಪ್ರಕಟಣೆಗೆ ಕೊಡುವುದರಿಂದಾಗಿ ಪ್ರಕಾಶಕರೂ ತೊಂದರೆಗೆ ಒಳಗಾಗುತ್ತಾರೆ. ಎಲ್ಲರಿಗೂ ಎಲ್ಲವೂ ಗೊತ್ತಿರುವುದಿಲ್ಲ. ಹಾಗಾಗಿ ಆಯಾ ಕ್ಷೇತ್ರದ ತಜ್ಞರಿಗೆ ತೋರಿಸಿ ಮುಂದುವರಿಯುವುದು ವಿಹಿತ. ಕೆಲವೊಮ್ಮೆ ಸೃಜನಶೀಲ ಕೃತಿಗಳಲ್ಲೂ ಇಂಥ ಅಪಾಯಗಳು ಎದುರಾಗುತ್ತವೆ. ಕವಿತಾ ಸಂಕಲನಗಳಲ್ಲಿ ಈ ಅಪಾಯ ಅಧಿಕ. ಬರಹಗಾರ ಇತರರ ಸಾಲುಗಳನ್ನು ಎತ್ತಿರುವುದು ಹಾಗಿರಲಿ, ತನ್ನದೇ ಸಾಲನ್ನೂ ತಾನೇ ಹಲವು ಬಾರಿ, ತನ್ನದೇ ಇತರ ಕವಿತೆಗಳಲ್ಲಿ ಪುನಃ ಸೇರಿಸಿಬಿಡುತ್ತಾನೆ.

ಇನ್ನೂ ಮುಂದಿನದು ಅತ್ಯಂತ ಪ್ರಾಥಮಿಕ ವಿವರಗಳು; ಆದರೆ ಅದು ತುಂಬಾ ಮುಖ್ಯ ಸಂಗತಿಗಳು ಎಂಬ ಕಾರಣಕ್ಕಾಗಿ ಗಮನಿಸಲೇಬೇಕಾದುವು. ಹಸ್ತಪ್ರತಿಯಲ್ಲಿ ಶುದ್ಧ ವಾಕ್ಯರಚನೆಯ ಬಗ್ಗೆ ಗಮನ ಇರಬೇಕು. ವಾಕ್ಯದ ಮೊದಲು ಹೇಳ ಹೊರಟ ವಿಷಯ ಸರಿಯಾಗಿ ಮುಕ್ತಾಯವಾಗಿದೆಯೆ ಎಂದು ಗಮನಿಸಿ. ಭೂತ, ವರ್ತಮಾನ ಭವಿಷ್ಯತ್‌ಗಳು ವಾಕ್ಯದಲ್ಲಿ ಸರಿಯಾಗಿ ಸೂಚಿತವಾಗಿವೆಯೇ ಎಂಬುದು ಮುಖ್ಯ. ಏಕವಚನದಿಂದ ಆರಂಭಿಸಿ ಬಹುವಚನದಲ್ಲಿ ಮುಕ್ತಾಯ ಮಾಡುವ ಅಥವಾ ಬಹುವಚನವನ್ನು ಏಕವಚನದಲ್ಲಿ ಮುಕ್ತಾಯ ಮಾಡುವ ಅಪಾಯಗಳೂ ಇರುತ್ತವೆ.

ಅತಿ ದೀರ್ಘವಾಕ್ಯಗಳಾದಾಗ ಇಂಥ ಅಪಾಯ ಇನ್ನೂ ಹೆಚ್ಚು. ಇಂಥಲ್ಲಿ ವಾಕ್ಯರಚನೆಯೂ ತಪ್ಪಾಗುವ ಸಂಭವವಿದೆ. ತುಂಬ ಸೂಕ್ಷ್ಮವಾಗಿ ಓದಿಕೊಂಡು ಸರಿಪಡಿಸುವುದು ಅಗತ್ಯ. ಹಾಗೆಯೇ ಪದ ಪ್ರಯೋಗದಲ್ಲೂ ದೋಷಗಳಿರುತ್ತವೆ. ಈಚೆಗೆ ತಪ್ಪು ಪ್ರಯೋಗವನ್ನೇ ಅತಿಯಾದ ಬಳಕೆಯಿಂದಾಗಿ 'ಸರಿ' ಎಂದು ಒಪ್ಪಿಕೊಳ್ಳುವಂತಾಗಿದೆ.

'ಕಳಕಳಿ'ಯಂಥ ಪದವನ್ನು ಸಂಭ್ರಮಕ್ಕೆ ಸಂವಾದಿಯಾಗಿ ಬಳಸುವುದು ಇತ್ಯಾದಿ. **'ಅತ್ಯಂತ ಕಳಕಳಿಯ ಸಮಾರಂಭವಿದು'** ಅಂದರೆ ಏನು ಅರ್ಥ ಬರುತ್ತದೆ? ಹೇಳುವವರ ಮನಸ್ಸಿನಲ್ಲಿ ಅದೊಂದು ಸಂಭ್ರಮ, ಸಂತೋಷ ಎಂಬ ಭಾವನೆ. ಆದರೆ 'ಕಳಕಳಿ'ಗೆ ಆ ಅರ್ಥ ಬರುವುದಿಲ್ಲ.

ಬರಹದಲ್ಲೂ ಕೆಲವು ತಪ್ಪು ಪ್ರಯೋಗಗಳನ್ನು, ಅವು ಇರುವಂತೆಯೇ ಒಪ್ಪಿಕೊಳ್ಳುವ ಹಂತ ತಲುಪಿದ್ದೇವೆ.

ಜಿಗುಪ್ಸೆ–**ಜುಗುಪ್ಸೆ**	ವೈಶಿಷ್ಟ್ಯತೆ–**ವೈಶಿಷ್ಟ್ಯ**
ಚಳುವಳಿ–**ಚಳವಳಿ**	ಕ್ರೋಢೀಕರಿಸು–**ಕ್ರೋಡೀಕರಿಸು**
ಹಾರ್ಧಿಕ–**ಹಾರ್ದಿಕ**	ವೈವಿಧ್ಯತೆ–**ವೈವಿಧ್ಯ**
ಉಚ್ಛಾರಣೆ–**ಉಚ್ಚಾರಣೆ**	ಕೂಲಂಕುಶ–**ಕೂಲಂಕಶ**

ಬೋಲ್ಡ್ ಅಕ್ಷರಗಳಲ್ಲಿರುವ ಪದಗಳು ಸರಿ. ಹೀಗೆ ನೂರಾರು ಪ್ರಯೋಗಗಳು ತಪ್ಪಾಗಿ ಬಳಕೆಯಾಗುತ್ತಿವೆ. ತಪ್ಪು–ಸರಿಗಳ ಮಧ್ಯೆ ಗೊಂದಲಮಯ ಅಭಿಪ್ರಾಯಗಳಿವೆ.

ನಿರ್ದೇಶನ–ಪದವನ್ನು ನಿರ್ದೇಶನ ಎಂದು ಬರೆಯುವುದು ರೂಢಿಯಾಗಿದೆ. ನಿಘಂಟುಗಳಲ್ಲೂ ಇಂಥ ದೋಷ ಉಳಿದುಹೋಗಿದೆ. ಉಚ್ಚಾರಣೆಯಲ್ಲಿ ಅರ್ಕಾವತ್ತು(ꠂ) ಮೊದಲು ಬರುವುದರಿಂದ ನಿರ್ದೇಶನ ಸರಿ ಎಂಬ ವಾದ ಮಂಡಿಸುತ್ತಾರೆ. 'ದೇ' ಎನ್ನುವುದು ಒಂದೇ ಅಕ್ಷರ 'ಪೂ' ಇದ್ದ ಹಾಗೆ. ಕರ್ಪೂರ ಪದವನ್ನು 'ಕರ್ಪಊರ' ಎಂದು ಬರೆದರೆ ತಪ್ಪಾಗುವ ಹಾಗೆ ನಿರ್ದೇಶನವನ್ನು ನಿರ್ದೇಶನ ಮಾಡಿದರೆ ತಪ್ಪು. ಹೀಗೆ ಅನೇಕ ಶಬ್ದಗಳನ್ನು ಉದಾಹರಿಸಬಹುದು.

ಪ್ರಾರಂಭದ ವಾಕ್ಯಕ್ಕೂ, ಕೊನೆಯ ವಾಕ್ಯಕ್ಕೂ ಅರ್ಥ ವ್ಯತ್ಯಾಸ–ವಿರೋಧಾಭಿಪ್ರಾಯ ಬರುವಂತೆ ಇದ್ದಾಗಲೂ ಲೇಖಕರ ಗಮನಕ್ಕೆ ತಂದು ಸರಿಪಡಿಸಬೇಕಾಗುತ್ತದೆ.

ಯಾವುದೇ ಕಾರಣಕ್ಕೂ ವ್ಯಕ್ತಿ ನಿಂದನೆ, ಜಾತಿನಿಂದನೆ ನುಸುಳದಂತೆ ಎಚ್ಚರ ವಹಿಸಬೇಕು. ಈಚೆಗೆ ಚಲನಚಿತ್ರದಂಥ ದೃಶ್ಯಮಾಧ್ಯಮದಲ್ಲಿ ಕೂಡಾ ಈ ನಿಯಮ ಪಾಲಿಸುತ್ತಾರೆ. ಪತ್ರಿಕೋದ್ಯಮದಲ್ಲೂ ಇಂಥ ಎಚ್ಚರಿಕೆಯ ಕ್ರಮಗಳಿವೆ. ಹಾಗೆ ನಿಯಮ ಮೀರಿ ವ್ಯಕ್ತಿನಿಂದನೆ ಇದ್ದಲ್ಲಿ, ಅದು ಮಾನನಷ್ಟ ಮೊಕದ್ದಮೆಗೆ ಕಾರಣವಾಗುತ್ತದೆ. ಹಾಗೇ ಜಾತಿನಿಂದನೆಯಂಥ ಒಂದೇ ಒಂದು ಪದ, ಬೈಗುಳಗಳಿದ್ದರೂ ತೆಗೆದು ಹಾಕುವುದೊಳಿತು.

ಯಾವುದೇ ಪ್ರಮುಖ ಘಟನೆ ನಡೆದ ಮಾಹಿತಿ ಕುರಿತು ಹೇಳುವಾಗ ಲೇಖಕರು ಇಸವಿ, ತಾರೀಖು ಇತ್ಯಾದಿ ಸೂಚಿಸಿದ್ದರೆ ಅವು ಸರಿಯಾಗಿವೆಯೇ ಎಂಬುದನ್ನು ಪರಿಶೀಲಿಸಬೇಕು. ಮುಖ್ಯ ಘಟನೆಗಳಾದಾಗಲೂ ಅವು ಸರಿಯೇ ಎಂದು ಪರಿಶೀಲಿಸುವ ಅಗತ್ಯವಿದೆ. ತಪ್ಪು ಮಾಹಿತಿಯಾದರೆ ಅವೇ ಶಾಶ್ವತವಾಗಿ ಉಳಿದು ಬಿಡುವ, ಇತರರನ್ನು ತಪ್ಪುದಾರಿಗೆಳೆಯುವ ಸಂಭವ ಇರುತ್ತದೆ. ಐತಿಹಾಸಿಕ ಸಂಗತಿಗಳ, ಪ್ರಸಿದ್ಧ ವ್ಯಕ್ತಿಗಳ ಉಲ್ಲೇಖಗಳು ಇದ್ದಾಗ ಅವುಗಳನ್ನು ಎಲ್ಲಿಂದ ಆಯ್ದುಕೊಳ್ಳಲಾಗಿದೆ ಎಂಬುದರ ಉಲ್ಲೇಖ ಮಾಡುವುದು ಅತ್ಯಗತ್ಯ. ಕೆಲವು ಪ್ರಸಿದ್ಧ ಘಟನೆಗಳಾದಾಗಲೂ ಉಲ್ಲೇಖಗಳಿದ್ದರೆ ಒಳಿತು. ಕೃತಿಯಲ್ಲಿ ಬರುವ ಅಭಿಪ್ರಾಯ, ಉಲ್ಲೇಖಗಳಿಗೆ ಕೃತಿಕಾರರೇ

ಹೊಣೆ ಎಂಬ ಸಾಲು ಸೇರಿಸಿ ಜವಾಬ್ದಾರಿ ಕಳೆಯಿತೆಂದುಕೊಳ್ಳುವುದು ಸರಿಯಲ್ಲ. ಸಂಗತಿಗಳು ಮಾನನಷ್ಟಕ್ಕೆ ದಾರಿಯಾದಾಗ ಈ ಯಾವ ಮಾತೂ ರಕ್ಷಿಸುವುದಿಲ್ಲ. ಪ್ರಕಟವಾದ ಕೃತಿಗೆ ಲೇಖಕರಷ್ಟೇ ಜವಾಬ್ದಾರಿ ಪ್ರಕಾಶಕರು, ಮುದ್ರಕರ ಮೇಲೂ ಇರುತ್ತದೆ.

ಲೇಖಕರು ಸಾಮಾನ್ಯವಾಗಿ ಕೆಲವು ಸಂಕ್ಷಿಪ್ತ ರೂಪಗಳಿಂದ ಸಂಸ್ಥೆ, ಚಳವಳಿ ಸಂಘಟನೆ, ವ್ಯಕ್ತಿಗಳನ್ನು ಗುರುತಿಸಿಬಿಡುತ್ತಾರೆ. ಆದರೆ ಪ್ರಾರಂಭದಲ್ಲಿ ಒಮ್ಮೆಯಾದರೂ ಆ ಸಂಕ್ಷಿಪ್ತ ರೂಪದ ವಿಸ್ತಾರ ರೂಪವನ್ನು ಕೊಡಬೇಕು.

ಉದಾ: ಕ.ಸಾ.ಪ. (ಕನ್ನಡ ಸಾಹಿತ್ಯ ಪರಿಷತ್ತು). ಹಾಗೇ ಕೆ.ಎಸ್.ಆರ್.ಟಿ.ಸಿ. ಮ.ನ.ಸಾ., UNO, WHO, ಎ.ಐ.ಟಿ.ಯು.ಸಿ., ಎಚ್.ಎ.ಎಲ್., ಬಿ.ಎಚ್.ಇ.ಎಲ್. ಇತ್ಯಾದಿ...

ಹಾಗೇ ಡಿ.ವಿ.ಜಿ., ವಿ.ಸೀ., ಮಾಸ್ತಿ, ತೀ.ನಂ.ಶ್ರೀ., ಬಿ.ಎಂ.ಶ್ರೀ., ಮಾನಾಚೌ, ಚಂಪಾ ಪಾಪು, ಕುವೆಂಪು ಮೊದಲಾದ ಹೆಸರುಗಳು. ಒಂದು ಕಡೆಯಾದರೂ ವಿಸ್ತಾರರೂಪ ಕೊಟ್ಟು, ಎಂದರೆ ಪಾಟೀಲ ಪುಟ್ಟಪ್ಪ, ಇನ್ನು ಮುಂದೆ ಸಂಕ್ಷಿಪ್ತ ರೂಪ ಪಾಪು ಎಂದು ಬಳಸುತ್ತೇವೆ ಎಂದು ಸೂಚಿಸುವುದು ಒಳಿತು. ಎಲ್ಲ ಓದುಗರಿಗೂ ಸಂಕ್ಷಿಪ್ತ ರೂಪ ತಿಳಿದಿರುತ್ತದೆಂಬ ಭಾವನೆ ತಪ್ಪು. ಮುಂದಿನ ಪೀಳಿಗೆಗಂತೂ ಇದೊಂದು ಸಮಸ್ಯೆಯಾಗ ಬಹುದು. ಸಾಧ್ಯವಾದಷ್ಟೂ ಆಯಾ ಹೆಸರಿನ ಹಿಂದೆ ಅವರನ್ನು ವಿಶೇಷವಾಗಿ ಗುರುತಿಸುವ ಕ್ಷೇತ್ರದ ಸೂಚನೆಯೂ ಇದ್ದರೊಳಿತು. ಕವಿ, ಕತೆಗಾರ, ವಿಮರ್ಶಕ, ಚಿತ್ರಕಲಾವಿದ ಚಲನಚಿತ್ರ ಕಲಾವಿದ, ಚಳವಳಿಯ ನಾಯಕ, ರಾಜಕಾರಣಿ ಹೀಗೆ... ಇದು ಒಂದೇ ಬಗೆಯ ಹೆಸರಿನ ಒಬ್ಬರಿಗಿಂತ ಹೆಚ್ಚು ಜನ ಇದ್ದಾಗಲೂ ಗುರುತಿಸಲು ನೆರವಾಗುತ್ತದೆ.

ಕೆಲವರು ಇತ್ತೀಚೆಗೆ, ಈಚೆಗೆ, ಮೊನ್ನೆಯಷ್ಟೇ ಇತ್ಯಾದಿ ಪದಗಳ ಬಳಕೆ ಮಾಡಿರುತ್ತಾರೆ. ಹೀಗೆ ಹೇಳಿದರೆ ಇನ್ನು ಹತ್ತಿಪ್ಪತ್ತು ವರ್ಷವಾದ ಮೇಲೆ ಅದು 'ಇತ್ತೀಚೆಗೆ' ಆಗಲಾರದಲ್ಲವೆ? ಸಾಧ್ಯವಾದಷ್ಟು ಇಂಥ ಸಂದರ್ಭಗಳಲ್ಲಿ ಆಯಾ ವಿಷಯಕ್ಕೆ ಸಂಬಂಧಿಸಿದ ಇಸವಿ, ತಾರೀಖು, ತಿಂಗಳು ಸೂಚಿಸುವುದು ಮುಖ್ಯ!

ಕೆಲವರು ತಮ್ಮ ಹೆಸರುಗಳನ್ನು ಹೀಗೇ ಬಳಸಬೇಕೆಂದು ಅಭಿಪ್ರಾಯ ಪಡುತ್ತಾರೆ. ಉದಾ: ಹೆಸರಿನ ಮುಂದೆ ರಾವ್, ಆಚಾರ್ಯ ಇಂಥದಿರುವವರು ಒಂದು ಸ್ಥಳ (space) ಬಯಸುತ್ತಾರೆ. ಕೆಲವರಿಗೆ ಈ space ಬೇಡ. ಹಾಗೇ 'ಗಾಯಿತ್ರಿ', 'ಗಾಯತ್ರಿ' ಸೆಟ್ಟಿ ಶೆಟ್ಟಿಯಂಥ ಪದಗಳು. ಇದನ್ನೆಲ್ಲ ಕೇಳಿ ತಿಳಿದಾದರೂ ಸರಿ, ಸೂಕ್ತ ರೀತಿಯಲ್ಲಿ ಬಳಸಬೇಕು. ಹಾಗೇ ಶೇಕ್ಸ್‌ಪಿಯರ್‌ಗೆ ಷೇಕ್ಸ್‌ಪಿಯರ್ ಅಂತಲೂ ಬರೆಯುತ್ತಾರೆ. ಇಂಥಲ್ಲಿ ಎರಡೂ ತಪ್ಪಲ್ಲ. ಆದರೆ ಎಲ್ಲೆಲ್ಲಿ ಈ ಹೆಸರಿನ ಬಳಕೆಯಾಗುತ್ತದೆಯೋ ಅಲ್ಲೆಲ್ಲ ನೀವು 'ಶ' ಆರಿಸಿದ್ದರೆ ಅದೇ ಇರಬೇಕು; 'ಷ' ಆರಿಸಿದ್ದರೆ ಅದೇ ಎಲ್ಲ ಕಡೆ ಇರಬೇಕು. ಪ್ರತಿಯೊಂದು ವಿಷಯಕ್ಕೂ ಇದು ಅನ್ವಯವಾಗುತ್ತದೆ. ಕೃತಿಯ ಏಕರೂಪತೆಗೆ ಇದು ಅತ್ಯಗತ್ಯ.

ಕೆಲವರು ಈ ಹಿಂದೆ ಹೇಳಿದಂತೆ ಎಂತಲೊ, ಮುಂದೆ ವಿವರಿಸಿರುವಂತೆ ಎಂತಲೊ ಒಂದು ವಿಷಯದ ಪ್ರಸ್ತಾಪದಲ್ಲಿ ಹೇಳಿ ಬಿಡುತ್ತಾರೆ. ಆದರೆ ಹಾಗೆ ಹಿಂದೆಯಾಗಲೀ ಮುಂದೆಯಾಗಲೀ ಸೇರಿಸಿದ್ದಾರೆಯೇ ಅಥವಾ ಹಾಗೆ ಸೇರಿಸಿರುವ ಸಂಗತಿ ಹೇಳುವ

ವಿಷಯಕ್ಕೆ ಸಂಬಂಧಿಸಿದ್ದೇ ಆಗಿದೆಯೇ ಎಂಬುದನ್ನು ಸರಿಯಾಗಿ ಪರಿಶೀಲಿಸಬೇಕು. ಒಂದಕ್ಕೊಂದು ತಾಳೆಯಾಗದೆ ಇದ್ದಾಗ ಲೇಖಕರನ್ನು ಸಂಪರ್ಕಿಸಿ, ಸರಿಪಡಿಸಿ ತರಿಸಬೇಕು.

ವ್ಯಕ್ತಿ ಚರಿತ್ರೆಯಂಥ ಕೃತಿಗಳು ಸಿದ್ಧವಾದ ಮೇಲೆ ಆ ವ್ಯಕ್ತಿ ನಿಧನರಾಗಿದ್ದಾರೆಂದುಕೊಳ್ಳಿ, ಆಗ ಹಸ್ತಪ್ರತಿಯಲ್ಲಿ ವರ್ತಮಾನ ಸೂಚಕ ಪದಗಳು ಭೂತಕಾಲಕ್ಕೆ ಹೋಗಬೇಕು. ಅಥವಾ ಕೃತಿ ಸಿದ್ಧವಾದ ಕಾಲ, ಪ್ರಕಟಣೆಯ ಕಾಲದ ವ್ಯತ್ಯಾಸ ಸೂಚಿಸಿ ಈ ಅಂಶವನ್ನು ಓದುಗರ ಗಮನಕ್ಕೆ ತರಬೇಕು. ಸೃಜನ, ಸೃಜನೇತರ ಯಾವುದೇ ಹಸ್ತಪ್ರತಿಯನ್ನೂ ಔಚಿತ್ಯ ನೋಡಿಕೊಂಡು ಎಡಿಟ್ ಮಾಡಬೇಕಾಗುತ್ತದೆ.

"ಹೀಗೆ ಹೇಳುವುದು ಅತಿಶಯೋಕ್ತಿಯಲ್ಲ ಎಂದು ಭಾವಿಸಿ ಘಂಟಾಘೋಷವಾಗಿ ಹೇಳಲು ಸಂತೋಷಿಸುತ್ತೇನೆ"ಯಂಥ ವಾಕ್ಯಗಳು ಸರಳವಾಗಿ ಏನು ಹೇಳಬೇಕೊ ಅದನ್ನು ನೇರವಾಗಿ ಹಾಗೇ ಹೇಳಿಬಿಡುವಂತೆ ಪರಿವರ್ತಿಸುವುದೊಳಿತು. ಕೆಲವೊಮ್ಮೆ ಕೃತಿಯಲ್ಲೇ ಹೆಸರುಗಳು, ಕ್ರಿಯೆಯ ಪುನರಾವರ್ತನೆಗಳಿರುತ್ತವೆ. ಒಂದು ಕಥೆಯ ನಾಯಕಿ ಒಂದು ಕಡೆ 'ವಿನುತ' ಆದರೆ ಇನ್ನೊಂದು ಕಡೆ 'ಸವಿತ' ಆಗಿರಬಹುದು. 'ರಮೇಶ'ನೇ 'ಸುರೇಶ'ನಾಗಿರಬಹುದು. ಬರವಣಿಗೆಯೇ ವೃತ್ತಿಯಾದ ತ.ರಾ.ಸು. ಅ.ನ.ಕೃ.ರಂಥ ಪ್ರಸಿದ್ಧ ಲೇಖಕರು ಪತ್ರಿಕೆ, ಪ್ರಕಾಶನಗಳಿಗೆಂದು ಒಂದೇ ಸಮಯದಲ್ಲಿ ೩–೪ ಕತೆ-ಕಾದಂಬರಿಗಳನ್ನು ಸಿದ್ಧಪಡಿಸುವ ಅನಿವಾರ್ಯ ಸಂದರ್ಭಗಳಲ್ಲಿ, ಅಲ್ಲಿಯ ನಾಯಕಿಯ ಹೆಸರು ಇಲ್ಲಿಗೂ, ಇಲ್ಲಿಯದು ಅಲ್ಲಿಗೂ ಹೋಗಿ ಆಭಾಸವಾಗಿರುವ ಪ್ರಸಂಗಗಳಿವೆ. ಇಂಥ ಕಡೆ ಹಸ್ತಪ್ರತಿ ಸಿದ್ಧಪಡಿಸುವ ತಜ್ಞರ ಸಮಿತಿ ಹೆಚ್ಚು ಗಮನವಿಟ್ಟು ಪರಿಶೀಲಿಸುತ್ತದೆ.

ಕೆ.ಡಿ. ಕುರ್ತಕೋಟಿಯವರು ರಾವ್ ಬಹದ್ದೂರರ 'ಗ್ರಾಮಾಯಣ'ವನ್ನು ತಿದ್ದಿ ಬರೆದ ಉದಾಹರಣೆಯಿದೆ. ಕಳೆದೇ ಹೋಗಿದ್ದ, ಎಂ.ಕೆ. ಇಂದಿರಾ ಅವರ ಮೊದಲ ಕಾದಂಬರಿ 'ತುಂಗಭದ್ರಾ' ಮರುರಚನೆ ಆದದ್ದು ನಮ್ಮೆದುರಿಗಿರುವ ಇನ್ನೊಂದು ಉದಾಹರಣೆ. ಬರಹದಲ್ಲಿ ಅತಿಯಾದ ವಿಶೇಷಣಗಳು ಸೇರಿಬಿಡುತ್ತವೆ. ಯಾವ ವ್ಯಕ್ತಿ ಪಾತ್ರ, ಆ ಪಾತ್ರದ ಸ್ಥಾನ, ಮರ್ಯಾದೆ ಏನೆಂದು ಗಮನದಲ್ಲಿಡದೆ ಅತಿರಂಜಿತ ವಿಶೇಷಣಗಳ ಅಬ್ಬರವಿದ್ದಾಗ ಅವನ್ನು ನಿವಾರಿಸಿಕೊಳ್ಳಬೇಕಾಗುತ್ತದೆ. ಭಾಷೆಯೂ ಸಹ ಆಯಾಪಾತ್ರದ ಸ್ಥಾನಮಾನದ ಹಿನ್ನೆಲೆಯಲ್ಲಿ ಬಳಕೆಯಾಗಿರಬೇಕು. ಎಲ್ಲಿ ಸರಳ, ಎಲ್ಲಿ ಆಡಂಬರ ಎಂಬುದು ಔಚಿತ್ಯವನ್ನಾಧರಿಸಿದ್ದಾಗಿದೆ. ಕೃತಿ ರಚನೆಯಲ್ಲಿ ಬರಹದ ಶೈಲಿ ಸಹ ವಿಷಯವನ್ನಾಧರಿಸಿಯೇ ಇರುತ್ತದೆ.

ವಿಷಯ ಐತಿಹಾಸಿಕವಾದಾಗ, ಸಾಮಾಜಿಕವಾದಾಗ ನಿರೂಪಣಾ ವಿಧಾನ, ಭಾಷೆ ಬೇರೆ ಬೇರೆ ಇರಲೇಬೇಕಲ್ಲವೆ? ಅದೇ ರೀತಿ ತಾತ್ತ್ವಿಕ, ವೈಜ್ಞಾನಿಕ ಸಂಶೋಧನೆ ಇತ್ಯಾದಿಗಳಲ್ಲೂ ಈ ಶೈಲಿಯ ಬಗ್ಗೆ ಎಚ್ಚರವಿರಲಿ. ಸಾಮಾನ್ಯವಾಗಿ ಲೇಖಕರಿಗೆ ಇದರ ಬಗ್ಗೆ ಗಮನ ಇರುತ್ತದೆ. ತುಂಬ ಹೊಸಬರಾದಾಗ ಇಂಥ ಸಮಸ್ಯೆ ಎದುರಾಗಬಹುದು.

ಇನ್ನು ಬರಹದಲ್ಲಿ ಅತ್ಯಗತ್ಯವಾಗಿ ಗಮನಿಸಬೇಕಾದ ಚಿಹ್ನೆಗಳು (ಪಂಕ್ಚುಯೇಷನ್); ಎಲ್ಲಿ ಅಲ್ಪ ವಿರಾಮ, ಎಲ್ಲಿ ಪೂರ್ಣವಿರಾಮ, ಪ್ರಶ್ನಾರ್ಥಕ, ಆಶ್ಚರ್ಯ ಸೂಚಕ ಮೊದಲಾದವು ತುಂಬ ಸೂಕ್ಷ್ಮವಾಗಿ ನೋಡಬೇಕಾದ ಸಂಗತಿ. ಉಲ್ಲೇಖವಾದಾಗ

"ಈ ಚಿಹ್ನೆ ಎಲ್ಲಿ ಪ್ರಾರಂಭ, ಎಲ್ಲಿಕೊನೆ ಎಂಬುದನ್ನು ಎಚ್ಚರಿಕೆಯಿಂದ ಗಮನಿಸ ಬೇಕಾಗುತ್ತದೆ. ಒಂದೆಡೆ ಎರಡು, ಒಂದೆಡೆ ಒಂದೇ 'ಚಿಹ್ನೆ ಇರುತ್ತದೆ. ಇವನ್ನೆಲ್ಲ ಗಮನಿಸಿ ಸೂಕ್ತವಾದ್ದನ್ನು ಬಳಸಬೇಕು. ಪ್ರಾರಂಭ, ಮುಕ್ತಾಯ ಸರಿಯಾಗಿದೆಯೇ ಗಮನಿಸಬೇಕು. ಕೆಲವೊಮ್ಮೆ ಅತಿ ಹೆಚ್ಚು ಸಾಲುಗಳ ಉಲ್ಲೇಖ ಎಂದರೆ ೨, ೩ ಪ್ಯಾರಾ ಇರುವುದುಂಟು. ಆಗ ಪ್ಯಾರಾದ ಮೊದಲಿಗೆ ಆರಂಭ ಆಗುವ "ಚಿಹ್ನೆ ಆ ಪ್ಯಾರಾ ಮುಗಿದು, ಮತ್ತೊಂದು ಪ್ಯಾರಾದಲ್ಲೂ ಮುಂದುವರಿದಾಗ ಮತ್ತೆ ಪ್ಯಾರಾ ಆರಂಭದಲ್ಲಿ ಅದೇ ಚಿಹ್ನೆ ಬಳಸಬೇಕು. ಮುಕ್ತಾಯದಲ್ಲಿ ಮಾತ್ರ ಉಲ್ಲೇಖ ಅಂತಿಮಗೊಂಡುದರ ಸಂಕೇತವಾಗಿ" ಚಿಹ್ನೆಯನ್ನು ಬಳಸಬೇಕು. ಉಲ್ಲೇಖ ಪೂರ್ಣವಾಗದಿದ್ದರೆ ಪ್ಯಾರಾದ ಕೊನೆಯಲ್ಲಿ ಚಿಹ್ನೆ ಇರಕೂಡದು.

ಮುಖ್ಯವಾಗಿ ಇಷ್ಟು ದೊಡ್ಡ ಉಲ್ಲೇಖ ಇದ್ದಾಗ, ಅದಕ್ಕೆ ಮೂಲ ಲೇಖಕರ ಅನುಮತಿ ಪಡೆದಿರಬೇಕು. ಸಾಮಾನ್ಯವಾಗಿ ೬–೭ ಸಾಲಿಗಿಂತ ಹೆಚ್ಚಿರುವ ಉಲ್ಲೇಖವನ್ನು ಸಂಬಂಧಿಸಿದವರ ಅನುಮತಿ ಇಲ್ಲದೆ ಬಳಸಕೂಡದು. ಭಾರತೀಯ ಸಂದರ್ಭದಲ್ಲಿ ಈ ನಿಯಮ ಅಷ್ಟೇನೂ ಸರಿಯಾಗಿ ಬಳಕೆ ಆಗುತ್ತಿಲ್ಲ. ಆದರೆ ತಿಳಿದವರು ಯಾರಾದರೂ ಆಕ್ಷೇಪ ಎತ್ತಿದರೆ ತೊಂದರೆ ಖಂಡಿತ. ಯಾವುದೇ ವ್ಯಕ್ತಿಯ, ಘಟನೆಯ, ಉಲ್ಲೇಖ ಗಳಾದಾಗ ಅದಕ್ಕೊಂದು ಗೊತ್ತಾದ ಸಂಕೇತ ಅಥವಾ ಸಂಖ್ಯೆ ಅದರ ತಲೆಯ ಮೇಲೆ ಚಿಕ್ಕ ಅಕ್ಷರದಲ್ಲಿ ಕೊಡಬೇಕು [*, (1), (೧)]. ಅದೇ ಪುಟದ ಅಡಿಯಲ್ಲಿ ಸರಿಯಾಗಿ ಈಗಾಗಲೇ ಕೊಟ್ಟಿರುವ ಚಿಹ್ನೆ–ಸಂಖ್ಯೆ ತೋರಿಸಿ ಸಂಬಂಧಿಸಿದ ವಿವರಣೆ ಕೊಡಬೇಕು. ವ್ಯಕ್ತಿ, ಘಟನೆಗಳಾದರೆ ಈ ಕೃತಿ ಕುರಿತು ಕೊಟ್ಟ ವಿವರಣೆ, ಉಲ್ಲೇಖಕ್ಕೆ ಯಾವುದಾದರೂ ಗ್ರಂಥ ಆಧಾರವಾದರೆ ಸಣ್ಣ ಅಕ್ಷರದಲ್ಲಿ ಕೃತಿಯ ಹೆಸರು, ಪುಟ ಸಂಖ್ಯೆ, ಲೇಖಕರು ಪ್ರಕಾಶಕರು, ಪ್ರಕಟಿತ ವರ್ಷ ಇತ್ಯಾದಿ ವಿವರಗಳನ್ನು ತಿಳಿಸಬೇಕು. ಇದು ಆಯಾ ಪುಟದಲ್ಲಿ ಅಥವಾ ಲೇಖನದ / ಕೃತಿಯ ಕೊನೆಯಲ್ಲಿ ಕೊಡಬೇಕು.

ಹಸ್ತಪ್ರತಿಯನ್ನು ಹಾಳೆಯ ಒಂದೇ ಮಗ್ಗುಲಿನಲ್ಲಿ ಪ್ರತಿ ಮಾಡಿರುವುದು ಮುಖ್ಯ. ಪ್ರತಿ ಪುಟದಲ್ಲೂ ಸಾಲುಗಳ ಪ್ರಾರಂಭಕ್ಕೆ ಮೊದಲು ಸಾಕಷ್ಟು ಸ್ಥಳ (ಮಾರ್ಜಿನ್) ಬಿಡಬೇಕು. ಪ್ರತಿಯೊಂದು ಸಾಲಿನ ಮಧ್ಯೆ ಸ್ಥಳ ಹೆಚ್ಚಿಗೆ ಬಿಟ್ಟರೆ ಒಳಿತು. ಪರಿಶೀಲಿಸಿದಾಗ ಏನಾದರೂ ಸೇರಬೇಕಾದ್ದಿದ್ದರೆ ಹೀಗೆ ಸ್ಥಳಾವಕಾಶವಿದ್ದರೆ ಸೇರಿಸಲು ಅನುಕೂಲ. ಕೆಲವರು ಹಿರಿಯರು ಪರಿಸರ ಕಾಳಜಿಯಿಂದಾಗಿ ಕಾಗದವನ್ನು ದುಂದುವೆಚ್ಚ ಮಾಡಲು ಇಷ್ಟಪಡುವುದಿಲ್ಲ. ಈ ಮಿತವ್ಯಯದ ಕಾರಣ ತಮಗೆ ಬಂದ ಬಣ್ಣಬಣ್ಣದ ಕರಪತ್ರಗಳು ಮುದ್ರಿತ ಹಾಳೆಯ ಹಿಂಬದಿ, ಅಮಂತ್ರಣ ಪತ್ರಿಕೆಗಳ ಹಿಂಬದಿ, ಅಂಚೆಯಲ್ಲಿ ಬಂದ ಕವರ್‌ಗಳಲ್ಲಿರುವ ಖಾಲಿಸ್ಥಳ ಇಂಥಲ್ಲೆಲ್ಲ ಬರೆದು ಒಂದು ಗುಚ್ಛಮಾಡಿ ಕೊಟ್ಟು ಬಿಡುತ್ತಾರೆ. ಪರಿಸರ ಕಾಳಜಿ, ವ್ಯರ್ಥವಾಗದ ಹಾಗೆ ಬಳಸುವ ವಿಧಾನ ಸ್ವಾಗತಾರ್ಹವೇ. ಆದರೆ ಇವನ್ನೆಲ್ಲ ಅವರು Notes ಇತ್ಯಾದಿಗೆ ಬಳಸಿ ಮುದ್ರಣಾಲಯಕ್ಕೆ ಕೊಡುವ ಹಸ್ತಪ್ರತಿ ವಿಷಯದಲ್ಲಿ ಕೊಂಚ ಉದಾರವಾಗುವುದೊಳಿತು.

ಇನ್ನು ಹಸ್ತಪ್ರತಿಯಲ್ಲೇ ಯಾವುದೋ ಪದ, ಸಾಲಿಗೆ ಒತ್ತು ಕೊಡಬೇಕೆಂಬುದನ್ನು (bold) ಸಾಮಾನ್ಯ ಅಕ್ಷರಕ್ಕಿಂತ ಬೇರೆ ಅಕ್ಷರ ಬಳಸಬೇಕೆಂದು ಗುರುತು ಮಾಡಿರಬೇಕು.

ಕೆಲವೊಮ್ಮೆ ಗೊತ್ತಾದ ವಿನ್ಯಾಸದಲ್ಲಿ ಜೋಡಣೆಯ ಸಾಲುಗಳಿಗಿಂತ ಒಳಕ್ಕೆ ಕೆಲವು ಸಾಲುಗಳನ್ನು ತೆಗೆದುಕೊಳ್ಳಬೇಕಿದ್ದರೆ (ಇದನ್ನು ಇಂಡೆಂಟ್ ಅನ್ನುತ್ತಾರೆ) ಅದನ್ನು ಸೂಚಿಸಿರಬೇಕು.

ಈಚೆಗೆ ಎಲ್ಲ ಕಡೆ ಗಣಕಯಂತ್ರಗಳು ಬಂದಿವೆ. ಎಲ್ಲ ಲೇಖಕರು, ಪ್ರಕಾಶಕರು ತಾವೇ ಸಿದ್ಧಮಾಡಿ ಕೊಡುವುದರಿಂದ, ಅದು ಇದ್ದ ಹಾಗೇ ಅಚ್ಚಾಗಿ ಬಿಡಬಹುದು ಎಂಬ ಭ್ರಮೆಯಲ್ಲಿರುತ್ತಾರೆ. ಹಾಗಾಗುವುದಿಲ್ಲ. ಅದನ್ನೂ ಅವರು ಸರಿಯಾಗಿ ಓದಿ, ತಪ್ಪುಗಳನ್ನು ತಿದ್ದಿರಬೇಕು ಮತ್ತು ಮೇಲೆ ಹೇಳಿದ ಸೂಚನೆಗಳನ್ನು ಗಮನಿಸಿ ಸೂಚಿಸಬೇಕು. ಇಲ್ಲವೇ ಅವರೇ ಪರಿಣತರಾದರೆ ಅದನ್ನೂ ಸರಿಪಡಿಸಿ ಕಳಿಸಬೇಕು. ಇಷ್ಟಾದರೂ ಮುದ್ರಕರಿಗೆ ಅವರದೇ ಆದ ಮುದ್ರಣ ವಿನ್ಯಾಸದ ನಿಯಮಗಳಿವೆ. ಇವರೇನು ಮಾಡಿದ್ದರೂ ಸೂಚಿಸಿದ ಆಕಾರಕ್ಕೆ ಪುಟ ವಿನ್ಯಾಸ ಮಾಡಬೇಕಾಗುತ್ತದೆ. ಅದು ೧/೪ ಕ್ರೌನ್, ಡೆಮಿ ಅಥವಾ ೧/೮ ಕ್ರೌನ್, ಡೆಮಿ ಅಥವಾ ಇನ್ನಾವುದೇ ಬೇರೆ ಬೇರೆ ಅಳತೆ ಆಕಾರಕ್ಕೆ ಹೊಂದುವಂತೆ ಇರಬೇಕು. ಇವಕ್ಕೆಲ್ಲ ಪುಟಕ್ಕೆ ಇಂತಿಷ್ಟು ಸಾಲುಗಳು, ಇಷ್ಟೇ ಮಾರ್ಜಿನ್ ಇತ್ಯಾದಿ ನಿಯಮಗಳಿವೆ. ಅದರಂತೆ ಹೊಂದಿಸಿಕೊಳ್ಳುವ ಪೇಜ್‌ಮೇಕಪ್ ಕೆಲಸ ಇತ್ಯಾದಿ ಇದ್ದೇ ಇರುತ್ತದೆ. ಮುದ್ರಕರ ನಿಯಮಗಳನ್ನು, ವಿನ್ಯಾಸ, ವಿಧಾನಗಳನ್ನು ಇಲ್ಲಿ ವಿವರಿಸಲು ಹೋಗುತ್ತಿಲ್ಲ. ಆದರೆ ಪ್ರಕಾಶಕರು ಅಥವಾ ಅವರ ಪರವಾಗಿ ಕರಡು ತಿದ್ದುವವರು ಗಮನಿಸಲೇ ಬೇಕಾದ ಕೆಲವು ಮುಖ್ಯಾಂಶಗಳನ್ನು ಇಲ್ಲಿ ಸೂಚಿಸಬಯಸುತ್ತೇನೆ.

ಪ್ರತಿ ಪುಟದ ಸಂಖ್ಯೆ ಸರಿಯಾಗಿದೆಯೆ? ಅದು ಕನ್ನಡ ಅಂಕಿಗಳೇ, ಇಂಗ್ಲಿಷ್ ಅಂಕಿಗಳೇ? ರೋಮನ್ ಅಂಕಿಗಳೇ ಎಂಬುದನ್ನು ಗಮನಿಸಬೇಕು. ಇನ್ನು ಪ್ರತಿ ಪುಟದ (ಫೋಲಿಯೊ) ಕೊನೆಯಲ್ಲಿ ಕೃತಿಯ ಹೆಸರು ಇತ್ಯಾದಿ ಸಣ್ಣ ಅಕ್ಷರದಲ್ಲಿ ಇದೆಯೇ, ಅವು ಏಕರೂಪದಲ್ಲಿವೆಯೇ, ಅಧ್ಯಾಯಗಳಾದಲ್ಲಿ ಅವುಗಳ ಸಂಖ್ಯೆ ಮತ್ತು ಒತ್ತು ಅಥವಾ ಸಹಜವೇ (bold or normal) ಎಂಬುದನ್ನು ಗಮನಿಸಬೇಕು.

ಪ್ರತಿ ಪುಟದ ಕೊನೆಯಲ್ಲಿ ಪ್ಯಾರಾದ ಪ್ರಾರಂಭ ಅಥವಾ ಅರ್ಧಸಾಲು ಇರಬಾರದು. ಹಾಗೆ ಅಂತ್ಯದಲ್ಲೂ ಇರಬಾರದು. ಮುಖ್ಯವಾಗಿ ಸಾಧ್ಯವಾದಷ್ಟು ಹಿಂದಿನ ಪುಟದ ಸಾಲುಗಳ ಮೇಲೆ ಇನ್ನೊಂದು ಪುಟದ ಸಾಲು ಕೂತಿರಬೇಕು. ಈಚೆಗೆ ಪುಟದ ಅಂದಕ್ಕಾಗಿ ಖಾಲಿ ಸ್ಥಳ ಹೆಚ್ಚಿಗೆ ಬಿಡುವುದರಿಂದಾಗಿ ಈ ನಿಯಮ ಸರಿಯಾಗಿ ಪಾಲನೆ ಆಗುತ್ತಿಲ್ಲ. ಇಂದು ಅವರವರ ಇಷ್ಟಾನುಸಾರ ಪುಟ ವಿನ್ಯಾಸ ಆಗುತ್ತಿದೆ. ಪ್ರತಿ ಅಧ್ಯಾಯ ಅಥವಾ ಹೊಸ ಕಥೆಯ ಶೀರ್ಷಿಕೆಯ ಪುಟದಲ್ಲಿ ಎಷ್ಟು ಸ್ಥಳ ಬಿಡಬೇಕೆಂಬ ಬಗ್ಗೆ ಗಮನ ಇರಬೇಕು. ಅದೇ ರೀತಿ ಇತರ ಪ್ರಾರಂಭದ ಪುಟಗಳೂ ಮೂಡಿಬರಬೇಕು. ಕೆಲವೊಮ್ಮೆ ಆರಂಭದ ಅಕ್ಷರಕ್ಕೆ (ಡ್ರಾಪ್‌ಲೆಟರ್) ಒತ್ತು (bold) ಇರುತ್ತದೆ. ಇನ್ನು ಸಾಲುಗಳ ಆರಂಭ–ಕೊನೆಯಲ್ಲಿ ಪದಗಳು ಒಡೆದು ಅರ್ಥ ಕೆಡಬಾರದು. ಎಂದರೆ 'ಕೊನೆ' ಒಂದು ಕಡೆಯಾಗಿ, ಇನ್ನೊಂದು ಕಡೆ 'ಯ ಸಾಲು' ಬರಬಾರದು. ಹಾಗೆಂದು ಸಾಲುಗಳ ಮಧ್ಯೆ ವಿಪರೀತ ಸ್ಥಳವೂ ಬಿಡಬಾರದು. ಯಾವುದು ಪೂರ್ಣಪದ (one word), ಯಾವುದು ಒಡೆದರೂ ಅಡ್ಡಿ ಇಲ್ಲ ಎಂದು ನೋಡಿ ಸರಿಪಡಿಸಬೇಕು. ಇಂಥ ಅನೇಕ ಸಂದರ್ಭಗಳಲ್ಲಿ

ಸಾಲುಗಳ ನಡುವೆ ಹೆಚ್ಚು ಸ್ಥಳ ಉಳಿಯುವಂತಾದರೆ 'ಮತ್ತು', 'ಹಾಗೂ', 'ಅಥವಾ' ಮೊದಲಾದವನ್ನು ಸೇರಿಸಿಯೋ, ಸಂಯುಕ್ತವಾಗಿರುವ ಪದವೊಂದನ್ನು ಅರ್ಥ ಕೆಡದಂತೆ ಎರಡು ಪದವಾಗಿ ವಿಂಗಡಿಸಿಯೋ ಇಡುವುದು ಒಳಿತು.

ಕಂಸಗಳನ್ನು (ಬ್ರಾಕ್ಯೆಟ್) ಬಳಸುವಾಗ ಎಚ್ಚರವಿರಬೇಕು. ಆರಂಭದಲ್ಲಿ ಬಳಸಿದ್ದು ಮುಕ್ತಾಯದಲ್ಲಿಯೂ ಬರುವಂತೆ ನೋಡಬೇಕು. ಕೆಲವು ಸಂದರ್ಭಗಳಲ್ಲಿ ಎಂದರೆ ಒಂದು ವಾಕ್ಯ ಕಂಸಿನಲ್ಲಿ ಸೇರುತ್ತಿರುವಾಗಲೇ ಇಸವಿ ಅಥವಾ ವ್ಯಕ್ತಿ, ಸಂಸ್ಥೆಯ ಹೆಸರು ಮತ್ತೊಂದು ಕಂಸಿನಲ್ಲಿ ಸೇರಬೇಕಾಗಬಹುದು. ಆಗಲೂ ಮೊದಲು ಬಳಸಿದ ಕಂಸ '{' '[' 'ಹೀಗಿದ್ದು ಒಳಗಿನದು' ( ) ಹೀಗಿರಬೇಕಾಗುತ್ತದೆ.

ಚಿತ್ರಗಳನ್ನು ಬಳಸುವುದಾದಲ್ಲಿ ಅವು ಕಲಾವಿದ ಬರೆದವು, ಛಾಯಾಚಿತ್ರಗಳು ಯಾವುದೇ ಆಗಿರಲಿ, ಅವನ್ನು ಸರಿಯಾಗಿ ವಿನ್ಯಾಸಗೊಳಿಸಬೇಕು. ವಿನ್ಯಾಸದಲ್ಲಿ ಉಳಿತಾಯವೇ ಪ್ರಧಾನವಾಗದೆ ಚಿತ್ರ, ಪಠ್ಯಗಳ ಮಧ್ಯೆ ಸಾಕಷ್ಟು ಖಾಲಿ ಸ್ಥಳ ಬಿಟ್ಟು ಪುಟವನ್ನು ಸುಂದರವಾಗಿರುವಂತೆ ನೋಡಿಕೊಳ್ಳಬೇಕಾಗುತ್ತದೆ.

ಪುಸ್ತಕವೊಂದರ ಪ್ರಕಟಣೆಯಲ್ಲಿ ಕೆಲವು ನಿಯಮಗಳಿವೆ. ಪ್ರಾರಂಭದ ಪುಟಗಳಲ್ಲಿ ಆ ನಿಯಮಗಳು ಕಡ್ಡಾಯ. ಶೀರ್ಷಿಕೆ ಪುಟ, ಅದರ ಹಿಂಬದಿ ಪುಟದಲ್ಲಿ ಬರಲೇಬೇಕಾದ ಮಾಹಿತಿ (Mandatory) (ಇಂಗ್ಲಿಷ್ ಹಾಗೂ ಮುದ್ರಿಸಿರುವ ಭಾಷೆಯಲ್ಲಿ), ಹಕ್ಕುಗಳು ಪುಟಗಳು, ಬೆಲೆ, ವಿನ್ಯಾಸಕಾರರ ವಿವರ, ನಾಟಕ ಕೃತಿಯಾದರೆ ಪ್ರದರ್ಶಿಸುವವರಿಗೆ ಸೂಚನೆ, ಯಾವುದೇ ಮಾಹಿತಿಯನ್ನು ನಕಲು ಮಾಡುವವರ ಮೇಲೆ ಕಾನೂನು ಕ್ರಮದ ಎಚ್ಚರಿಕೆ ಇತ್ಯಾದಿಗಳನ್ನು ಸರಿಯಾಗಿ ಛಾಪಿಸಬೇಕು. ಇಂಥಲ್ಲಿ ಮುದ್ರಕರು ನೆರವಿಗೆ ಬರುತ್ತಾರಾದರೂ ಪ್ರಕಾಶಕರು ಗಮನಿಸಬೇಕಾದ್ದು ತುಂಬ ಮುಖ್ಯ. ಮುನ್ನುಡಿ ಪ್ರಕಾಶಕರ ನುಡಿ, ಲೇಖಕರ ನುಡಿ, ಅರ್ಪಣೆ ಪರಿವಿಡಿ ಇತ್ಯಾದಿಗಳನ್ನು ಸರಿಯಾಗಿ ನೋಡಬೇಕು. ಗ್ರಂಥದ ಕೊನೆಯಲ್ಲಿ ಅನುಬಂಧಗಳಿದ್ದರೆ ಸರಿಯಾಗಿ ಸೇರಿಸಬೇಕು. ಕ್ಲಿಷ್ಟ ಪದಗಳು ಅಥವಾ ಪ್ರಾದೇಶಿಕ ವಿಶೇಷ ಪದಗಳ ಅರ್ಥವನ್ನು ಅಗತ್ಯವಿದ್ದಲ್ಲಿ ಕೊಡಬೇಕಾಗುತ್ತದೆ.

ಕೆಲವು ಲೇಖನಗಳ, ಕತೆಗಳ ಸಂಕಲನವಾದಾಗ ಮತ್ತು ಕೆಲವರು ಸೇರಿ ಅಥವಾ ಒಬ್ಬರೇ ಕೃತಿಯನ್ನು ಸಂಪಾದನೆ ಮಾಡುವಾಗಲೂ ಈಗಾಗಲೇ ಹೇಳಿರುವ ಎಲ್ಲ ಸಂಗತಿಗಳೂ ಗಮನದಲ್ಲಿರಬೇಕಲ್ಲದೆ, ಇನ್ನೂ ಕೆಲವಂಶಗಳು ಸೇರುತ್ತವೆ. ಅಂಥಲ್ಲಿ ಪ್ರಧಾನ ಸಂಪಾದಕರು, ಸಂಪಾದಕ ಮಂಡಳಿ, ಸಲಹಾ ಮಂಡಳಿ ಮೊದಲಾದ ಸಿದ್ಧತೆಗಳಿರುತ್ತವೆ. ಬಹುಮಂದಿ ಲೇಖಕರಿಂದ ಬರೆಸುವ ಗ್ರಂಥ ಇತ್ಯಾದಿಗಳಾದಾಗ ಗೌರವಧನ, ಅನುಮತಿ ಸಂಪಾದಕರೊಂದಿಗೆ ಒಪ್ಪಂದ ಮೊದಲಾಗಿ ಎಲ್ಲವೂ ನಿಯಮ ಬದ್ಧವಾಗಿರಬೇಕು.

ಇನ್ನೂ ಕೆಲವು ವಿಶೇಷ ವಿಷಯಗಳಾದಾಗ ಉದಾ: ನಿಘಂಟು, ಸಂಗೀತ, ನೃತ್ಯ ವಿಜ್ಞಾನ, ಬೇರೆ ಬೇರೆ ತಾಂತ್ರಿಕ ವಿಷಯಗಳನ್ನು ಕುರಿತ ಕೃತಿಗಳಾದಾಗ ಬಹಳ ಎಚ್ಚರಿಕೆಯಿಂದ ಆಯಾ ತಜ್ಞರೊಂದಿಗೆ ಸಮಾಲೋಚಿಸಬೇಕು. ಸೃಜನಶೀಲ ಕೃತಿ ಯಾದಾಗ ಆಯಾ ಪ್ರದೇಶದ ಭಾಷೆಯನ್ನೇ ಬಳಸುವುದು ಆಯಾ ಲೇಖಕರಿಗೆ ಸೇರಿದ

ಸಂಗತಿ. ವಿಮರ್ಶೆ, ಸಂಶೋಧನೆ ಮೊದಲಾದ ಕೃತಿಗಳಿಗೆ ಭಾಷೆಯಲ್ಲಿ ಒಂದು ಏಕರೂಪತೆ ಇರಬೇಕೇ ಎಂಬುದು ಗಂಭೀರವಾದ ಚರ್ಚೆಗೆ ಒಳಗಾಗಬೇಕಾದ ಸಂಗತಿ. ಹಿಂದಿನವರೆಲ್ಲ ಈ ಬಗ್ಗೆ ಸಾಕಷ್ಟು ಚರ್ಚಿಸಿದ್ದಾರೆ. ಒಟ್ಟಾರೆ ಸರಳವಾಗಿ ಸಂವಹನ ವಾಗುವುದು ಮುಖ್ಯ. ಪ್ರಾಚೀನ ಶಾಸ್ತ್ರಗ್ರಂಥಗಳು ಮುಖ್ಯವಾಗಿ ಶಾಸನ, ಓಲೆಗರಿ ಮುಂತಾದವುಗಳಿಂದ ಪ್ರತಿ ಎತ್ತಿ, ಪರಿಷ್ಕರಿಸಿ ಗ್ರಂಥ ಸಂಪಾದನೆ ಮಾಡುವುದು ಬೇರೆಯದೇ ಆದ ಶಾಸ್ತ್ರ. ಇದನ್ನು ತಜ್ಞರು ಮಾತ್ರ ನಿರ್ವಹಿಸಬಲ್ಲರು. ಈ ಕುರಿತು ವಿಶೇಷ ಅಧ್ಯಯನ ಮಾರ್ಗಗಳೇ ಇವೆ. ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರೀ ಅವರು ಈ ಕುರಿತ ಒಂದು ಹೊತ್ತಿಗೆಯನ್ನೇ ಪ್ರಕಟಿಸಿದ್ದಾರೆ. ಬಿ.ಎಂ.ಶ್ರೀ. ಪ್ರತಿಷ್ಠಾನ ಇದನ್ನು ಪ್ರಕಟಿಸಿದೆ. ಆಸಕ್ತರು ಗಮನಿಸಬಹುದು.

ಈವರೆಗೆ ಹೇಳಿರುವ ಸಂಗತಿಗಳು ತೀರಾ ಪ್ರಾಥಮಿಕ ಸಿದ್ಧತೆಗಳು ಮಾತ್ರ. ಆದರೆ ಅನಿವಾರ್ಯ, ಅತ್ಯಗತ್ಯ ಅಂಶಗಳು. ಕೃತಿಯೊಂದನ್ನು ಸುಂದರವಾಗಿ ಪ್ರಕಟಿಸುವುದೂ ಒಂದು ಕಲೆ. ಇದರಾಚೆಗಿನ ಇನ್ನೂ ಅನೇಕ ಅಧ್ಯಯನಯೋಗ್ಯ ವಿಷಯಗಳಿಗೆ ಹೆಚ್ಚಿನ ಅಭ್ಯಾಸದ ಅಗತ್ಯವಂತೂ ಇದೆ. ಮುದ್ರಣಾಲಯಕ್ಕೆ ಸರಿಯಾದ ಹಸ್ತಪ್ರತಿ ಮತ್ತು ಅದರಲ್ಲಿ ಆಗಬೇಕಾದ ತಿದ್ದುಪಡಿ, ಸೇರ್ಪಡೆ ಇತ್ಯಾದಿಗಳನ್ನು ಸೂಚಿಸದೆ, ಕರಡು ತಿದ್ದುವಲ್ಲಿ ಎಚ್ಚರವಹಿಸದೆ, ಅನಂತರ ಕಾಣುವ ಎಲ್ಲ ದೋಷಗಳಿಗೂ ಮುದ್ರಕರನ್ನೇ ಹೊಣೆ ಮಾಡುವುದು ತಪ್ಪು.

ಒಮ್ಮೆ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು ನಮ್ಮ ಇಳಾ ಮುದ್ರಣಕ್ಕೆ ಒಂದು ಹಸ್ತಪ್ರತಿ ತಂದು ಮುದ್ರಿಸಲು ಹೇಳಿದರು. ಆ ಮೊದಲೇ, ನಮ್ಮ ಬಗ್ಗೆ ಆ ವೇಳೆಗಾಗಲೇ ನಮ್ಮೊಂದಿಗೆ ಸಂಪರ್ಕದಲ್ಲಿದ್ದ ಹಿರಿಯ ಸಾಹಿತಿಗಳ ಅಭಿಪ್ರಾಯಗಳನ್ನು ಪಡೆದೇ ಬಂದಿದ್ದರು. ಅದೊಂದು ಸಂಸ್ಕೃತ ಶ್ಲೋಕಗಳೇ ಹೆಚ್ಚಿಗೆ ಇದ್ದ ಕೃತಿ. ನೀಲಿಯ ಒತ್ತುಗೆರೆಗಳಿದ್ದ, ನೀಲಿ ಬಣ್ಣದ ಕಾಗದದ ಮೇಲೆ, ನೀಲಿ ಇಂಕಿನಲ್ಲೇ ಬರೆದಿದ್ದರು. ಲೇಖಕರ ಅಕ್ಷರ, ಶೈಲಿಯ ಅಭ್ಯಾಸವಿಲ್ಲ, ಸಾಲುಗಳ ಮಧ್ಯೆ ನೀಲಿಬಣ್ಣ ಕಾರಣದಿಂದಾಗಿ ಸ್ಪಷ್ಟವಾಗಿ ಹಸ್ತಪ್ರತಿ ಕಾಣುತ್ತಿರಲಿಲ್ಲ.

ಈ ಎಲ್ಲ ಕಾರಣ ಹಾಗೂ ಆಗಿನ ಮೊಳೆ ಜೋಡಿಸುವ ವಿಧಾನದಿಂದಾಗಿ ವಿಪರೀತ ಶ್ರಮ-ಸಮಯ ವ್ಯಯಿಸಿದರೂ ದೋಷಗಳು ಉಳಿಯುತ್ತಿದ್ದವು. ಮಾಸ್ತಿಯವರಿಗೆ ಕೋಪ ಬರುತ್ತಿತ್ತು. ಜೊತೆಗೆ ಪುಸ್ತಕ ಬೇಗ ಸಿದ್ಧವಾಗಬೇಕೆನ್ನುತ್ತಿದ್ದರು. ನಮ್ಮ ಕಂಪೋಸಿಟರ್ಸ್ ವಿದ್ಯಾವಂತರಲ್ಲ, ಅವರು ಈ ಕೆಲಸಕ್ಕೆ ಅರ್ಹರಲ್ಲ ಎಂದೂ ಹೇಳಿಬಿಟ್ಟರು. ನನಗೆ ನನ್ನ ಕೆಲಸಗಾರರನ್ನು ಆಕ್ಷೇಪಿಸಿದರೆಂಬ ಸಿಟ್ಟು. "ವಿದ್ಯಾವಂತರಾಗಿದ್ದರೆ ಮೊಳೆ ಜೋಡಿಸಲು ಬರುತ್ತಿರಲಿಲ್ಲ, ಎಲ್ಲಾದರೂ ಗುಮಾಸ್ತರಾಗಿರುತ್ತಿದ್ದರು. ನಿಮ್ಮ ಬರಹವೇ ಸ್ಪಷ್ಟವಿಲ್ಲ" ಎಂದು ಪತ್ರ ಬರೆದು ಹಸ್ತಪ್ರತಿ ಹಿಂದಿರುಗಿಸಿಬಿಟ್ಟೆ. ಇಂಥ ಅನೇಕ ಪ್ರಸಂಗಗಳಿರುತ್ತವೆ.

ನಮ್ಮ ಇಳಾ ಮುದ್ರಣದಲ್ಲಿರುವ ಹಿರಿಯರಾದ ಮಳಲಿಗೌಡರು ತಮ್ಮ ಅನುಭವದಲ್ಲಿ ಕಂಡ ಕೆಲವರ ಬಗ್ಗೆ ಹೀಗೆ ಹೇಳುತ್ತಾರೆ:

"ನನ್ನ ಅನುಭವದಲ್ಲಿ, ಒಂದೇ ಮಾತಿನಲ್ಲಿ ಹೇಳುವುದಾದರೆ, ಯಾರೇ ಲೇಖಕರಾಗಲಿ ತಾವು ಬರೆದದ್ದನ್ನು ಒಮ್ಮೆ ಸಂಪೂರ್ಣವಾಗಿ ಓದಿ. ತಿದ್ದುಪಡಿ ಮಾಡಿ ಅದನ್ನು ಬೇರೆ ಪ್ರತಿ ಮಾಡಿ, ಮತ್ತೊಮ್ಮೆ ಅದನ್ನು ಓದಿ, ಸರಿ ಇದೆ ಎಂದು ದೃಢಪಡಿಸಿಕೊಂಡ ನಂತರ ಅದನ್ನು ಮುದ್ರಣಾಲಯಕ್ಕೆ ಕೊಟ್ಟರೆ, ಅಕ್ಷರ ಜೋಡಿಸು ವವರಿಗೂ ಹೆಚ್ಚು ಶ್ರಮವಿಲ್ಲದೆ ಬಹಳ ಬೇಗ ಕೆಲಸ ಮುಗಿಯುತ್ತದೆ. (ಅಕ್ಷರ ಜೋಡಿಸುವವರಿಗೂ ಬಹಳ ಜವಾಬ್ದಾರಿಯುತವಾದ ಪರಿಣತಿ ಇದ್ದರೆ ಮಾತ್ರ) ಲೇಖಕರೂ ಒಂದೇ ತಿದ್ದುಪಡಿಯಲ್ಲಿ ತಿದ್ದಿ ಮುದ್ರಣಕ್ಕೆ ಆದೇಶ ನೀಡಬಹುದು." ಇಲ್ಲದಿದ್ದರೆ ಹೆಚ್ಚು ಬಾರಿ ತಿದ್ದುಪಡಿ ಮಾಡುವಲ್ಲಿಯೇ ಕಾಲ ವ್ಯರ್ಥವಾಗುತ್ತದೆ. ಇದಕ್ಕೆ ನಿದರ್ಶನವಾಗಿ ಕೆಲವು ಉದಾಹರಣೆಗಳನ್ನು ಕೊಡಬಹುದು.

೧. **ಕರ್ನಾಟಕ ಲಾ ಜರ್ನಲ್‌ನ್ನು ಪ್ರಕಟಿಸುತ್ತಿದ್ದ ದಿ॥ ಎನ್.ಟಿ. ರಘುನಾಥನ್** (ಸುಪ್ರೀಂ ಕೋರ್ಟ್ ಅಡ್ವೊಕೇಟ್) : ಇವರು ಇಂಗ್ಲಿಷಿನಲ್ಲಿ ಟೈಪ್ ಮಾಡಿದ್ದ ಪ್ರತಿಯನ್ನು ಕೊಡುತ್ತಿದ್ದರು. ಅದನ್ನು ನಾವೇ (ಕಂಪೋಸಿಟರ್) ಅಕ್ಷರ ಜೋಡಣೆಯಲ್ಲಿಯೇ ಎಲ್ಲೆಲ್ಲಿ ಯಾವ ಯಾವ ಫಾಂಟ್ ಬರಬೇಕೆಂಬುದನ್ನು ತಿಳಿದು ಕಂಪೋಸ್ ಮಾಡಬೇಕು. ಎಲ್ಲೆಲ್ಲಿ ಅಬ್ರಿವೇಷನ್ ಬರಬೇಕೆಂಬುದನ್ನು ನಾವೇ ತಿಳಿದುಕೊಳ್ಳಬೇಕಾಗಿತ್ತು. ಒಟ್ಟಿನಲ್ಲಿ ಒಂದು ಅಥವಾ ಎರಡನೇ ಪ್ರೂಫ್‌ನಲ್ಲಿಯೇ ಅಪ್ರೂವ್ ಆಗುತ್ತಿತ್ತು.

೨. **ನಾಟಕ ಲೋಕದ ದಿ। ಪರ್ವತವಾಣಿ** : ನಾಟಕಗಳನ್ನು ಬರೆದರೆ ಪಾತ್ರಗಳ ಹೆಸರು ಸಂಭಾಷಣೆ, ಆವರಣದಲ್ಲಿ ಬರುವ ನಿರ್ದೇಶನ ಮುಂತಾದವುಗಳನ್ನು ಬರೆದು ಮುದ್ರಣಕ್ಕೆ ಕೊಟ್ಟರೆ ಅಕ್ಷರ ಜೋಡಿಸುವವನಿಗೆ ಯಾವ ತಲೆನೋವೂ ಇರುತ್ತಿರಲಿಲ್ಲ (ತಿಳಿವಳಿಕೆ ಇರುವವರಿಗೆ ಮಾತ್ರ).

೩. **ದಿ। ತಾತಾ ಕೃಷ್ಣಾಚಾರ್** : ಇವರು ತಮ್ಮ ಕೈಬರವಣಿಗೆಯಲ್ಲಿ ಫೂಲ್‌ಸ್ಕೇಪ್ ಸೈಜ್‌ನಲ್ಲಿ ಬರೆದ ಒಂದು ಪುಟಕ್ಕೆ ಅಕ್ಷರ ಜೋಡಣೆಯಲ್ಲಿ ಕ್ರೌನ್ ೧/೮ ಆಕಾರದಲ್ಲಿ ಮೂರುವರೆ ಪುಟಗಳಾಗುತ್ತಿದ್ದವು. ಅಂದರೆ ಅವರ ಕೈಬರಹ ಅಷ್ಟು ಸಣ್ಣದಾಗಿರುತ್ತಿತ್ತು. ಅವರು ಒಂದು ಸಾರಿ ಬರೆದರೆ ಆ ಪ್ರತಿಯಲ್ಲಿಯೇ ತಿದ್ದುಪಡಿ ಮಾಡಿ ಮುದ್ರಣಕ್ಕೆ ಕೊಡುತ್ತಿದ್ದರು.

೪. **ದಿ। ಎಂ.ವಿ. ಸೀತಾರಾಮಯ್ಯ** : ಅವರ ಕೈ ಬೆರಳುಗಳು ಮಡಿಸಿಕೊಂಡಿದ್ದರೂ ಸಹ ಅಕ್ಷರಗಳನ್ನು ಬಹಳ ದುಂಡಾಗಿ ಬರೆಯುತ್ತಿದ್ದರು. ಎಂಥವರಾದರೂ ಅವರ ಅಕ್ಷರಗಳನ್ನು ಸುಲಭವಾಗಿ ಓದಬಹುದಾಗಿತ್ತು. ಮುದ್ರಣಕ್ಕೆ ಅವರು ಹಸ್ತಪ್ರತಿಯನ್ನು ಕೊಡುವಾಗಲೆ ಯಾವ ಯಾವ ಫಾಂಟ್ ಮತ್ತು ಸೈಜ್‌ನಲ್ಲಿ ಬರಬೇಕೆಂಬುದನ್ನು ನಿರ್ದೇಶನ ಕೊಡುತ್ತಿದ್ದರು.

೫. **ದಿ। ಟಿ. ಶ್ರೀನಿವಾಸರಾಜು** : ಇವರು ಮುದ್ರಣಕ್ಕೆ ಹಸ್ತಪ್ರತಿಯನ್ನು ಕೊಡಬೇಕಾದರೆ ಯಾವ ಯಾವ ಸೈಜ್‌ನಲ್ಲಿ ಅಕ್ಷರಗಳು ಬರಬೇಕೆಂಬುದನ್ನು ಹಸ್ತಪ್ರತಿಯಲ್ಲಿಯೇ ಗುರುತಿಸಿಕೊಡುತ್ತಿದ್ದರು.

೬. **ದಿ। ಗೌಡಗೆರೆ ಗೋಪಾಲಕೃಷ್ಣಾಚಾರ್** : ಇವರು ಸಂಸ್ಕೃತ ಮಹಾವಿದ್ವಾಂಸರು. ಇವರು ತಿದ್ದುಪಡಿ ಮಾಡದ ಹಸ್ತಪ್ರತಿಯನ್ನು ನೇರವಾಗಿ ಮುದ್ರಣಕ್ಕೆ ಕೊಡುವರು. ಇವರಿಗೆ ಅಕ್ಷರ ಜೋಡಿಸಿ ಪ್ರೂಫ್ ಕೊಡುವಾಗ ಯಾವ ಸೈಜ್‌ನಲ್ಲಿ ಕೊಡುತ್ತೇವೆಯೋ ಅದರ ಜೊತೆಗೆ ಅಷ್ಟೇ ಖಾಲಿ ಇರುವ ಕಾಗದವನ್ನು ಕೊಡಬೇಕಾಗುತ್ತಿತ್ತು. ಅವರು ಮೊದಲ ಪ್ರತಿಯಲ್ಲಿ ನಾನು ತಿದ್ದುಪಡಿ ಮಾಡಲಾಗುವುದಿಲ್ಲ. ಪ್ರೂಫ್‌ನಲ್ಲೆ ನಾನು ತಿದ್ದುಪಡಿ ಮಾಡಬೇಕಾಗುತ್ತದೆ. ಅದೇ ನನಗೆ ರೂಢಿಯಾಗಿದೆ ಎಂದು ಹೇಳುತ್ತಿದ್ದರು.

೭. **ದಿ। ಕೊರಟಿ ಶ್ರೀನಿವಾಸರಾವ್** : ಇವರಂತೂ ಲೇಖನಗಳ, ಕಾದಂಬರಿಗಳ ಹಸ್ತಪ್ರತಿಯನ್ನು ಬರೆಯಲು ಕುಳಿತರೆ ಮೇಲಿನ ತುದಿಯಲ್ಲಿ ಅವರ ಲೇಖನಿ ಶುರುಮಾಡಿದರೆ, ಆ ಕಾಗದದ ಕೊನೆ ಯಲ್ಲಿಯೇ ಲೇಖನಿ ತೆಗೆಯುತ್ತಿದ್ದರು. ಅವರ ಅಕ್ಷರ ಎಷ್ಟು ದೊಡ್ಡದಾಗಿರು ತ್ತಿತ್ತೆಂದರೆ ಫೂಲ್‌ಸ್ಕೇಪ್ ಸೈಜಿನಲ್ಲಿ ಎರಡೂವರೆ ಪುಟದಷ್ಟು ಅವರ ಕೈ ಬರಹವಿದ್ದರೆ, ಅದು ಕ್ರೌನ್ ೧/೮ ಆಕಾರದಲ್ಲಿ ಒಂದು ಪುಟವಾಗುತ್ತಿತ್ತು. ಮುದ್ರಣಕ್ಕೆ ಕೊಡುವ ಮೊದಲು ಅವರ ಶ್ರೀಮತಿಯವರಾದ ಮಂಜುಳಮ್ಮ ದುಂಡಾದ ಅಕ್ಷರದಲ್ಲಿ ಪ್ರತಿಮಾಡಿ ಮುದ್ರಣಕ್ಕೆ ಕೊಡುತ್ತಿದ್ದರು. ನಮ್ಮ ಅವರ ಪರಿಚಯವಾದ ಮೇಲೆ ಅವರು ಕಾಪಿ ಮಾಡುವುದನ್ನು ನಿಲ್ಲಿಸಿದರು.

೮. ಇನ್ನು ಕೆಲವರು ಇರುತ್ತಾರೆ; ವಿದ್ಯಾಸಂಸ್ಥೆಗಳಲ್ಲಿ, ಅಲ್ಲದೆ ಬೇರೆ ಸಂಸ್ಥೆಗಳಲ್ಲೂ ವಿಶೇಷ ಸಂಚಿಕೆಗಳನ್ನು ಮುದ್ರಿಸಲು ಹಲವಾರು ಜನರು ಬರೆದ ಹಸ್ತಪ್ರತಿಗಳನ್ನು ತಂದು ಮುದ್ರಣಕ್ಕೆ ಕೊಡುತ್ತಾರೆ. ಅದರ ಜವಾಬ್ದಾರಿ ವಹಿಸಿಕೊಂಡವರು ಅವುಗಳ ಪರಾಮರ್ಶೆಗೆ ಹೋಗುವುದಿಲ್ಲ. ಪ್ರೂಫ್ ಕೊಟ್ಟಾಗ ಅದು ಹೇಗೆ ಬರಬೇಕೆಂಬುದು ಅವರ ತಲೆಗೆ ಹೋಗುತ್ತದೆ. ಅದರಲ್ಲೂ ಮುದ್ರಣಕಾರರು ಸಹಕರಿಸಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ವೃಥಾ ಕಾಲ ವ್ಯರ್ಥವಾಗುತ್ತದೆ.

೯. ಇನ್ನು ಪತ್ರಿಕಾ ಕಾರ್ಯಾಲಯದಲ್ಲಿ ಆಗಿನ ಜನರು ಹಸ್ತಪ್ರತಿಯನ್ನು ಬರೆಯುವುದೇ ವಿಶೇಷ (ಈಗ ಗಣಕಯಂತ್ರ ಬಂದಿದೆ). ಅವರ ಅಕ್ಷರವನ್ನು ಓದಲು ಅನುಭವಸ್ಥ ಅಕ್ಷರ ಜೋಡಣೆದಾರರೇ ಬೇಕಾಗುತ್ತಿತ್ತು. ಒಂದು ರೀತಿಯಲ್ಲಿ ಅದು ತುಂಬಾ ಮೋಡಿಯಾಗಿ, ಬ್ರಹ್ಮಲಿಪಿಯಂತೆಯೇ ಇರುತ್ತಿತ್ತು. ಈಗಿನ ಗಣಕಯಂತ್ರದ ಅಕ್ಷರ ಜೋಡಣೆದಾರರು ಇಂತಹ ಸ್ಕ್ರಿಪ್ಟ್ ಬಂದಾಗ ಬೇರೆ ಪ್ರತಿಯನ್ನು ಮಾಡಿಕೊಡಿ ಎನ್ನುವರು. ಇಲ್ಲದಿದ್ದರೆ ತಮಗೆ ತೋಚಿದ್ದನ್ನು ಅಕ್ಷರ ಜೋಡಿಸಿ, ತುಂಬ ತಪ್ಪುಗಳನ್ನು ಮಾಡುತ್ತಾರೆ. ಇದರಿಂದ ತುಂಬ ಕಾಲ ವ್ಯಯವಾಗುತ್ತದೆ.

ಒಂದು ವಿಷಯ ಜ್ಞಾಪಕಕ್ಕೆ ಬರುತ್ತದೆ. ಪ್ರೊ. ಎಸ್.ಜಿ. ಸಿದ್ಧರಾಮಯ್ಯನವರು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಸಮಯದಲ್ಲಿ, 'ಪುಸ್ತಕಲೋಕ'ದ ಸಂಪಾದಕೀಯ ದಲ್ಲಿ ಒಂದು ಮಾತು ಹೇಳಿದ್ದಾರೆ, "ಯಾವುದೇ ಒಂದು ಗ್ರಂಥವಾಗಲೀ, ಯಾವುದೇ

ಮುದ್ರಣವಾಗಲೀ ಅದರಲ್ಲಿ ದೋಷಗಳಿದ್ದಲ್ಲಿ, ಅವು ಎಲ್ಲಿಂದ, ಹೇಗೆ ತಪ್ಪಾಯಿತೆಂದು ಯೋಚಿಸುವ ಗೋಜಿಗೆ ಹೋಗದೆ, ನೇರವಾಗಿ ಮುದ್ರಣಕಾರರನ್ನೇ ದೂಷಿಸುತ್ತಾರೆ". ನನ್ನ ಈ ೫೨ ವರ್ಷಗಳ ಮುದ್ರಣ ಕಾರ್ಯದ ಅನುಭವದಲ್ಲಿ ಸಿದ್ಧರಾಮಯ್ಯನವರೇ ಈ ಮಾತನ್ನು ಮೊದಲು ಹೇಳಿದವರೆಂದು ತಿಳಿಯುತ್ತೇನೆ. ಕಾರಣ ಮುದ್ರಣಕಾರರು ಎಲ್ಲದರಲ್ಲೂ ಸರ್ವಜ್ಞರೆಂದು, ಹಲವಾರು ಜನರು ತಪ್ಪು ತಿಳಿದಿರುವುದೇ ಈ ಅನರ್ಥಕ್ಕೆ ಕಾರಣ.

ಒಟ್ಟಾರೆ ಲೇಖಕ, ಪ್ರಕಾಶಕ, ಮುದ್ರಕರ ನಡುವೆ ಅತ್ಯಂತ ಸೌಹಾರ್ದಮಯ ಸಂಬಂಧ, ಕೃತಿಯನ್ನು ಚಂದವಾಗಿ ಸಿದ್ಧಪಡಿಸುವ ಕಾಳಜಿ ಇರಬೇಕಾದ್ದು ಮುಖ್ಯ. ಎಲ್ಲರೂ, ಎಲ್ಲಕ್ಕೂ ಹೊಣೆಗಾರರೇ. ಅಂತೆಯೇ ಕಾನೂನು ಮೀರಿದರೆ, ಮೂವರೂ ಶಿಕ್ಷಾರ್ಹರೆಂದು ಪರಿಗಣಿಸಲಾಗುತ್ತದೆ.

❒




ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಸ್ಥಿತಿ–ಗತಿ

■ ಆರ್. ಪ್ರತಿಭಾ

ಗಾರ್ಮೆಂಟ್ಸ್ ಉದ್ಯಮ – ಹಿನ್ನೆಲೆ

ಗ್ಯಾಪ್, ನೈಕಿ, ವಾಲ್ಮಾರ್ಟ್, ಲೀ, ಆರೋಲೀವೈಸ್, ರ‍್ಯಾಂಗ್ಲರ್ ಆರೋ, ಪೀಟರ್ ಇಂಗ್ಲೆಂಡ್, ಜಾಕಿ, ಲವೆಬಲ್ ಅತ್ಯಾಧುನಿಕ ಹಾಗೂ ಅತ್ಯಂತ ಶೋಕಿಯ ಸಿದ್ಧ ಉಡುಪುಗಳ ಮೇಲೆ ಅಂಟಿಸಲಾದ ಜಗದ್ವಿಖ್ಯಾತ ಬ್ರಾಂಡುಗಳ ಹೆಸರುಗಳಿವು. ಬ್ರಾಂಡಿನ ಹೆಸರು ನೀಡುವುದರಿಂದಲೇ ಆ ಕಂಪನಿಗಳು ಕೋಟ್ಯಂತರ ಡಾಲರುಗಳನ್ನು ಬಾಚಿಕೊಳ್ಳುತ್ತವೆ. ಕಾರಣ, ಈ ಬ್ರಾಂಡಿನ ಹೆಸರಿರುವ ಸಿದ್ಧ ಉಡುಪುಗಳು ಯಾವುವೂ ಬೆಲೆಯಲ್ಲಿ ಕನಿಷ್ಠ ರೂ.೧೦೦೦ ಕ್ಕಿಂತ ಕಡಿಮೆಯಿಲ್ಲ. ಈ ಬ್ರಾಂಡಿನ ಹೆಸರಿನ ಉಡುಪು ತೊಡುವುದು ಶೋಕಿಯ ಸಂಕೇತವಷ್ಟೇ ಅಲ್ಲ, ಪ್ರತಿಷ್ಠೆಯ ಸಂಕೇತವೂ ಆಗಿದೆ. ಹಾಗಾಗಿ ಹೆಸರಿನ ಕಿಮ್ಮತ್ತಿಗೆ ಜನ ದುಡ್ಡು ತೆರುತ್ತಾರೆ. ಈ ಖ್ಯಾತಿಯ ಮೂಲವನ್ನು ಅರಸಿ ಹೊರಟರೆ ನಮಗೆ ತೆರೆಯುವುದು ಬಡ ಮಹಿಳೆಯರ ಬವಣೆಯ ಬದುಕಿನ ಬಾಗಿಲುಗಳು.

ಅಮೆರಿಕ, ಯುರೋಪ್, ಕೆನಡಾ, ಆಸ್ಟ್ರೇಲಿಯಾ, ಜಪಾನ್ ಇನ್ನಿತರ ರಾಷ್ಟ್ರಗಳಲ್ಲಿ ಮಾರಾಟವಾಗುವ ಸಿದ್ಧ ಉಡುಪುಗಳನ್ನು ಸಿದ್ಧಪಡಿಸುವವರು ಬೆಂಗಳೂರಿನ ಕೆಂಚೇನಹಳ್ಳಿ, ಗಂಗೊಂಡನಹಳ್ಳಿ ಆವಲಹಳ್ಳಿ, ನಾಯಂಡಹಳ್ಳಿ, ಅರ್ಚಕರಹಳ್ಳಿ, ಬನ್ನಿಕುಪ್ಪೆ, ಇಲೆಕ್ಟ್ರಾನಿಕ್ ಸಿಟಿ, ಸಿಂಗಸಂದ್ರ, ಬೊಮ್ಮನಹಳ್ಳಿ, ಪೀಣ್ಯ, ಹೆಗ್ಗನಹಳ್ಳಿ, ಸುಂಕದಕಟ್ಟೆ ಗಳಲ್ಲಿ ವಾಸವಾಗಿರುವ ರತ್ನಮ್ಮ, ಮದೀನಾ, ನೇತ್ರ, ಸೌಮ್ಯ ಮಲ್ಲಿಕಾ, ಅನಿತಾ, ಸುಂದರಮ್ಮ, ವೀಣಾ, ಶೋಭಾಳಂತಹ



ಮಹಿಳೆಯರು; ದುಡಿಯುತ್ತಿರುವುದು ಗೋಕುಲ್‌ದಾಸ್ ಎಕ್ಸ್‌ಪೋರ್ಟ್ಸ್, ಬಾಂಬೆ ರೆಯಾನ್ ಫ್ಯಾಷನ್ಸ್ ಲಿ., ಟೆಕ್ಸ್‌ಪೋರ್ಟ್ಸ್ ಗ್ರೂಪ್‌ಆಫ್ ಕಂಪನೀಸ್, ಎಲ್.ಟಿ. ಕಾರ್ಲೆ, ಶಾಹಿ ಎಕ್ಸ್‌ಪೋರ್ಟ್ಸ್‌ನಂತಹ ದೊಡ್ಡ ದೊಡ್ಡ ಕಂಪನಿಗಳಲ್ಲಿ. ಈ ಉದ್ಯಮವು ಇಂದು ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆ ಮೈಸೂರು, ತುಮಕೂರು, ಬಳ್ಳಾರಿ ಜಿಲ್ಲೆಗಳಲ್ಲಿ ಅತಿ ಹೆಚ್ಚು ಜನರಿಗೆ ಉದ್ಯೋಗ ಒದಗಿಸಿದೆ.

ಕರ್ನಾಟಕದಲ್ಲಿ ಸುಮಾರು ೯೨೦ ಕಾರ್ಖಾನೆಗಳಿದ್ದು, ಸರ್ಕಾರೀ ದಾಖಲೆಯ ಪ್ರಕಾರ ಸುಮಾರು ೩.೫೫ ಲಕ್ಷ ಕಾರ್ಮಿಕರು ದುಡಿಯುತ್ತಿದ್ದಾರೆ. ವಾಸ್ತವದಲ್ಲಿ ಈ ಕಾರ್ಮಿಕರ ಸಂಖ್ಯೆ ಸುಮಾರು ೫ ಲಕ್ಷಕ್ಕೂ ಹೆಚ್ಚು. ಈ ಕಾರ್ಮಿಕರೆಲ್ಲರಿಗೂ ಸರ್ಕಾರದಿಂದ ನಿಗದಿಯಾದ ಕನಿಷ್ಠ ವೇತನ ಮಾತ್ರ ದೊರೆಯುತ್ತಿದ್ದು; ಎಷ್ಟೋ ಕಾರ್ಖಾನೆಗಳು ಅದಕ್ಕಿಂತಲೂ ಕಡಿಮೆ ವೇತನವನ್ನು ನೀಡುತ್ತಿವೆ. ಜೊತೆಗೆ ಯಾವುದೇ ಹೆಚ್ಚುವರಿ ಭತ್ಯೆ ನೀಡದೆ ೮ ಗಂಟೆಗಳಿಗಿಂತ ಹೆಚ್ಚಾಗಿ ಕಾರ್ಮಿಕರನ್ನು ದುಡಿಸಿಕೊಳ್ಳುತ್ತಿವೆ.

ಯಂತ್ರದೊಂದಿಗೆ ಯಂತ್ರದಂತೆಯೇ ದಿನವೊಂದಕ್ಕೆ ೮–೧೦ ಗಂಟೆಗಳ ಕಾಲ ಬಟ್ಟೆ ಹೊಲೆದರೆ ಸಿಗುವುದು ತಿಂಗಳಿಗೆ ೨ ಪ್ಯಾಂಟಿನ ಬೆಲೆಯಷ್ಟು! ವಿವಿಧ ಅಳತೆಗೆ ತಕ್ಕಂತೆ ಕರಾರುವಾಕ್ಕಾಗಿ ಕತ್ತರಿಸಿ, ಜೋಡಿಸಿ, ಹೊಲೆಯುವವರು ಬಡ ಮಹಿಳೆಯರು. ನಮ್ಮ ಮಣ್ಣಿನಲ್ಲಿ ಬೆಳೆದ ಹತ್ತಿಯಿಂದ ನೂಲು ತೆಗೆದು, ಬಟ್ಟೆ ಮಾಡಿ, ಬಣ್ಣ ಹಾಕಿ, ಪ್ರಿಂಟ್ ಮಾಡಿ, ಕತ್ತರಿಸಿ, ಹೊಲೆದು, ಐರನ್ ಮಾಡಿ, ಬೆಲೆ ಪಟ್ಟಿ ಅಂಟಿಸಿ, ಪ್ಯಾಕ್ ಮಾಡಿ ರಫ್ತಾಗಲು ಸಿದ್ಧ ಪಡಿಸುವವರು ಈ ನೆಲದ ದುಡಿಮೆಗಾರರು. ಬಳಸುವುದು ಈ ನಾಡಿನ ನೆಲ, ಜಲ, ವಿದ್ಯುತ್, ಸಾರಿಗೆ ಇತ್ಯಾದಿಯನ್ನು.

ಸಿದ್ಧ ಉಡುಪಿನಿಂದ ನಮ್ಮ ದೇಶಕ್ಕೆ(ಬೆಂಗಳೂರು ನಗರವೊಂದರಿಂದಲೇ) ದೊರಕುವ ವಿದೇಶೀ ವಿನಿಮಯ ಹದಿನೈದು ಸಾವಿರ ಕೋಟಿಗಿಂತಲೂ ಅಧಿಕ. ಸಿದ್ಧ ಉಡುಪು ಉದ್ದಿಮೆಯ ಒಟ್ಟು ವಹಿವಾಟಿನಲ್ಲಿ ಶೇ. ೨೫ ರಷ್ಟು ಹಣ ಸ್ಥಳೀಯ ಕಂಪನಿಗಳಿಗೆ ದೊರೆತರೆ ಉಳಿದ ಶೇ. ೭೫ರಷ್ಟು ಸಲ್ಲುವುದು ಅಂತಾರಾಷ್ಟ್ರೀಯ ಬ್ರಾಂಡ್‌ಗಳಿಗೆ. ಕಾರ್ಮಿಕರಿಗೆ ತಿಂಗಳಿಗೆ ಸಿಗುವ ವೇತನ ಮಾತ್ರ, ರೂ.೪೫೦೦ ರಿಂದ ರೂ.೪೮೦೦. ದೇಶದ ಅತಿ ದೊಡ್ಡ ಸಿದ್ಧ ಉಡುಪು ಉತ್ಪಾದನಾ ಘಟಕಗಳಿರುವ ನಗರಗಳಲ್ಲಿ ಬೆಂಗಳೂರೂ ಒಂದಾಗಿದೆ. ಅಲ್ಲದೆ ಗುಣಮಟ್ಟಕ್ಕೆ ಬಂದರೆ, ದೇಶದಲ್ಲೇ ಮೊದಲನೇ ಸ್ಥಾನ ಹೊಂದಿದೆ. ಇಲ್ಲಿ ಸಿದ್ಧವಾಗುವ ಉಡುಪುಗಳು, ಜಗತ್ತಿನಾದ್ಯಂತ ಇರುವ ಪ್ರಸಿದ್ಧ ಮಾರುಕಟ್ಟೆಗಳಲ್ಲಿ ಮಾರಾಟವಾಗುತ್ತವೆ. ಕೆಲವು ಬೃಹತ್ ಕಂಪನಿಗಳು ವರ್ಷಕ್ಕೆ ೧೦೦ ರಿಂದ ೧೦೦೦ ಕೋಟಿ ರೂಪಾಯಿಗಳಿಗೂ ಹೆಚ್ಚು ವಹಿವಾಟು ನಡೆಸುತ್ತಿದ್ದು, ೧೦ ದಿಂದ ೩೦ ಸಾವಿರಕ್ಕೂ ಮೀರಿ ಕಾರ್ಮಿಕರಿಗೆ ಕೆಲಸ ನೀಡುತ್ತಿವೆ. ಉದ್ಯಮಕ್ಕೆ ಬರುತ್ತಿರುವ ಲಾಭಾಂಶವು ಎಲ್ಲ ರೀತಿಯಿಂದಲೂ ಗಣನೀಯವಾಗಿ ಹೆಚ್ಚಾಗುತ್ತಿದೆ.

ಯಂತ್ರ ಮತ್ತು ಕಾರ್ಮಿಕರನ್ನು ಸಮನಾಗಿ ಹೊಂದಿರುವುದು ಈ ಉದ್ಯಮದ ಒಂದು ಲಕ್ಷಣ. ಇಲ್ಲಿ ಕಾರ್ಮಿಕರು ಯಂತ್ರಗಳನ್ನು ಚಾಲನೆ ಮಾಡುವುದಿಲ್ಲ. ಬದಲಾಗಿ ಮಹಿಳಾ ಕಾರ್ಮಿಕರು ಯಂತ್ರಗಳೊಂದಿಗೆ ಯಂತ್ರಗಳಾಗಿ ಕೆಲಸ ಮಾಡುತ್ತಾರೆ. ಪ್ರತಿ ಸೆಕೆಂಡ್ ಸಹ

ಪ್ರೊಡಕ್ಷನ್ ಎಂಬ ಭೂತದ ಹಿಂದೆ ಓಡುತ್ತಿರುತ್ತಾರೆ. ಏನೇ ಹೊಸ ತಂತ್ರಜ್ಞಾನ ಬಂದರೂ ಅದರಿಂದ ಕಾರ್ಮಿಕರ ಕೆಲಸ ಹಗುರಾಗುವ ಬದಲು ಹೊರೆಯಾಗುತ್ತಿದೆ. ಇಲ್ಲಿನ ಕಾರ್ಮಿಕರು ವಿಶೇಷವಾಗಿ ವಿದ್ಯಾವಂತರಾಗಿರುವುದಿಲ್ಲ. ಜೊತೆಗೆ ಬೆಂಗಳೂರು ಮಹಾನಗರ ಎಲ್ಲರ ಆಕರ್ಷಣೆಯಾಗಿರುವುದರಿಂದ, ಹಳ್ಳಿಗಳಲ್ಲಿ ಉದ್ಯೋಗದ ಅವಕಾಶಗಳೇ ಇಲ್ಲದಿರುವುದರಿಂದ, ಭೂರಹಿತ ವರ್ಗವು ಉದ್ಯೋಗ ಅರಸಿ ಬೆಂಗಳೂರಿಗೆ ವಲಸೆ ಬಂದಾಗ, ಹೆಣ್ಣುಮಕ್ಕಳು ಮೊದಲು ಆಯ್ಕೆ ಮಾಡಿಕೊಳ್ಳುವುದು ಗಾರ್ಮೆಂಟ್ಸ್ ಉದ್ಯೋಗವನ್ನು. ಯಾವೊಂದು ಹಕ್ಕೂ ತಿಳಿಯದೆ ಕಾನೂನುಗಳ ಅರಿವಿಲ್ಲದೆ ಕೇವಲ 'ದುಡಿಯಲು' ಬರುವ ಈ ಮಹಿಳೆಯರನ್ನು ಆಡಳಿತವರ್ಗವು ಗರಿಷ್ಠ ಮಟ್ಟದಲ್ಲಿ ಶೋಷಿಸುತ್ತಿದೆ.

ಅತಿಯಾದ ಪ್ರೊಡಕ್ಷನ್ ಒತ್ತಡ ಕಡಿಮೆ ಸಂಬಳ, ೮ ಗಂಟೆಗಿಂತಲೂ ಹೆಚ್ಚು ದುಡಿತ, ಕೆಲಸದ ಸ್ಥಳದಲ್ಲಿ ಪುರುಷಾಧಿಕಾರಿಗಳಿಂದ ಶೋಷಣೆ, ಸಾಮಾಜಿಕ ವಾಗಿಯೂ ಕೆಳದರ್ಜೆಯ ಸ್ಥಾನಮಾನ ಹೀಗೆ ಈ ಮಹಿಳಾ ಕಾರ್ಮಿಕರು ಅನುಭವಿಸು ತ್ತಿರುವ ತೊಂದರೆಗಳು ಹಲವಾರು. ಜಾಗತಿಕ ಪೈಪೋಟಿಯ ಸಂದರ್ಭದಲ್ಲಿ ಮಾಲೀಕರು ಎಲ್ಲಿಯೂ ರಾಜಿಮಾಡಿಕೊಳ್ಳಲು ಸಾಧ್ಯವಿಲ್ಲ. ಬದಲಾಗಿ ಕಾರ್ಮಿಕರನ್ನು ಹೆಚ್ಚು ಹೆಚ್ಚು ಹಿಂಡಿ, ಪ್ರೊಡಕ್ಷನ್ ತೆಗೆಸಿ, ತಮ್ಮ ಉತ್ಪಾದನೆ ಹೆಚ್ಚಾಗುವಂತೆ ಮಾಡಿಕೊಂಡು, ತಮ್ಮ ಲಾಭಾಂಶಕ್ಕೆ ಯಾವುದೇ ಧಕ್ಕೆ ಬರದಂತೆ ನೋಡಿಕೊಳ್ಳುತ್ತಿದ್ದಾರೆ. ಉದಾಹರಣೆಗೆ ಈ ದಿನ ಗಂಟೆಗೆ ೧೨೦ ಪೀಸ್ ಮಾಡಿದರೆ, ಮಾರನೆಯ ದಿನ ಅದಕ್ಕಿಂತ ೫ ಪೀಸ್ ಹೆಚ್ಚು ನಿಗದಿ ಪಡಿಸುತ್ತಾರೆ, ಅದನ್ನೂ ಮಾಡಿದರೆ, ಮಾರನೆಯ ದಿನ ಇನ್ನೂ ೫ ಪೀಸ್ ಪ್ರೊಡಕ್ಷನ್ ಹೆಚ್ಚಿಸುತ್ತಾರೆ. ಇದು ಏರುತ್ತಲೇ ಹೋಗುತ್ತದೆ. ಇದರ ಹಿಂದಿರುವುದು ಮನುಷ್ಯನ ಗರಿಷ್ಠ ಸಾಮರ್ಥ್ಯದ ದುರ್ಬಳಕೆ ಮಾಡಿಕೊಳ್ಳುವ ಹುನ್ನಾರವಷ್ಟೇ. ಇಲ್ಲಿನ ಕಾರ್ಮಿಕರಿಗೆ ವಿಶೇಷ ತಾಂತ್ರಿಕ ಜ್ಞಾನ ಬೇಕಾಗಿಲ್ಲ. ಹೊಲಿಗೆ ಯಂತ್ರ ನಡೆಸುವುದು ಗೊತ್ತಿದ್ದರೆ ಸಾಕು.

ಕಾರ್ಮಿಕರ ಸಾಮಾಜಿಕ ಪರಿಸ್ಥಿತಿ

ಈ ಉದ್ಯಮದಲ್ಲಿ ದುಡಿಯುತ್ತಿರುವ ಹೆಚ್ಚಿನವರು, ಉದ್ಯೋಗಕ್ಕಾಗಿ ಗ್ರಾಮೀಣ ಪ್ರದೇಶದಿಂದ ಜೀವನೋಪಾಯವನ್ನು ಅರಸಿ ಬೆಂಗಳೂರಿಗೆ ಬರುವವರು. ಅವರಲ್ಲಿ ಹೆಚ್ಚಿನವರು ಒಂಟಿಯಾಗಿ ಕುಟುಂಬದ ಜವಾಬ್ದಾರಿಯನ್ನು ಹೊತ್ತಿದ್ದು, ತಮ್ಮ ಮೇಲೆ ಅವಲಂಬಿತವಾದ ಇತರ ಕುಟುಂಬ ಸದಸ್ಯರನ್ನು ನೋಡಿಕೊಳ್ಳುತ್ತಿದ್ದಾರೆ. ಗಂಡ ಇದ್ದೂ ಮನೆ ನಿರ್ವಹಣೆಗೆ ಇಲ್ಲದಂತಿರುವ, ಗಂಡ ಇಲ್ಲದಿರುವ, ಗಂಡ ಬಿಟ್ಟುಹೋಗಿರುವ ಈ ಮಹಿಳೆಯರಿಗೆ ಕೆಲಸದಲ್ಲಿಯಾಗಲೀ, ಸಾಮಾಜಿಕ ಜೀವನದಲ್ಲಾಗಲೀ ಭದ್ರತೆಯೇ ಇಲ್ಲದೆ ಸದಾ ಅಭದ್ರತೆಯಿಂದಲೇ ನರಳುತ್ತಿದ್ದಾರೆ.

ಈ ಕಾರ್ಮಿಕರು ವಾಸ ಮಾಡುವುದು, ಬಹುತೇಕ ಸ್ಲಂಗಳಲ್ಲಿ. ಒಂದೇ ಕೊಠಡಿ ಯಂತಹ ಸಣ್ಣ ಮನೆಗಳ ವಠಾರದಲ್ಲಿ. ಗಂಡನ ಜೊತೆಗಿರುವವರೂ ಸಹ ಅವನಿಂದ ಹೆಚ್ಚನ್ನು ನಿರೀಕ್ಷೆ ಮಾಡುವಂತಿಲ್ಲ. ಏಕೆಂದರೆ ಅವರುಗಳೂ ಸಹ ಆಟೋ, ಕೂಲಿ ಪೈಂಟಿಂಗ್, ತರಕಾರಿ ಮಾರುವವರು – ಹೀಗೆ ಅಸಂಘಟಿತ ಕ್ಷೇತ್ರಗಳಲ್ಲಿಯೇ

ದುಡಿಯುತ್ತಿರುತ್ತಾರೆ. ಕುಡಿತದ ದಾಸನಾದ ಗಂಡನಿಂದ ಈ ಮಹಿಳೆಯರಿಗೆ ಸಿಗುವುದು ಕೌಟುಂಬಿಕ ದೌರ್ಜನ್ಯವೇ ಹೊರತು, ಆರ್ಥಿಕ ಸಹಕಾರವಲ್ಲ.

ಮನೆ ಹಾಗೂ ಕಾರ್ಖಾನೆ ಎರಡೂ ಕಡೆ ದುಡಿಯುವ ಈ ಮಹಿಳೆಯರು ದಿನದಲ್ಲಿ ೧೮ ಗಂಟೆಗಳ ಕಾಲ ಕೆಲಸ ಮಾಡುತ್ತಾರೆ. ಮನೆಯ ಕೆಲಸ, ಮಕ್ಕಳ ಪಾಲನೆ, ಮನೆಯ ಹಿರಿಯರ ಪಾಲನೆ, ಜೊತೆಗೆ ಕಾರ್ಖಾನೆಯಲ್ಲಿ ೮ ರಿಂದ ೧೦ ಗಂಟೆಗಳ ಕಾಲ ಕೆಲಸ ಮಾಡುತ್ತಾ ಈ ಕಾರ್ಮಿಕರು ಬಳಲುತ್ತಾರೆ. ವಿಶ್ರಾಂತಿಯೇ ಇಲ್ಲದೆ, ಪೌಷ್ಟಿಕ ಆಹಾರದ ಕೊರತೆಯಿಂದ ಬಳಲುವ ಈ ಮಹಿಳೆಯರು ಹಲವಾರು ರೋಗಕ್ಕೆ ಬೇಗನೇ ತುತ್ತಾಗುತ್ತಿದ್ದಾರೆ. ೪೫ ವಯಸ್ಸಿನ ನಂತರ ಈ ಮಹಿಳೆಯರು ಯಾವುದೇ ಕೆಲಸ ಮಾಡಲು ಸಮರ್ಥರಾಗಿರುವುದಿಲ್ಲ.

ಈ ದುಡಿಯುವ ತಾಯಂದಿರ ಮತ್ತೊಂದು ಗಂಭೀರ ಸಮಸ್ಯೆ ಎಂದರೆ ಚಿಕ್ಕ ಮಕ್ಕಳ ಜವಾಬ್ದಾರಿ. ನಗರಗಳಲ್ಲಿ ದುಡಿಯುವ ತಾಯಂದಿರಿಗೆ, ತಾವು ಕೆಲಸಕ್ಕೆ ಹೋದಾಗ ಮಕ್ಕಳ ಪಾಲನೆಗೆ ವ್ಯವಸ್ಥೆ ಮಾಡುವುದೇ ಒಂದು ದೊಡ್ಡ ತೊಂದರೆ. ಅದರಲ್ಲೂ ಗಾರ್ಮೆಂಟ್ಸ್‌ಗಳಲ್ಲಿ ದುಡಿಯುವ ಮಹಿಳೆಯರು ಬಹುಪಾಲು, ಕೆಲಸ ಅರಸಿ ಪರ ಊರುಗಳಿಂದ ಬಂದ ಕಾರಣ, ಕುಟುಂಬದಲ್ಲಿ ಇತರ ಸದಸ್ಯರಾರೂ ಇರುವುದಿಲ್ಲ. ಬರುವ ಕಡಿಮೆ ಸಂಬಳದಲ್ಲಿ ಪ್ಲೇ ಹೋಂನಂತಹ ದುಬಾರಿ ವ್ಯವಸ್ಥೆ ಮಾಡಲು ಸಾಧ್ಯವಿಲ್ಲ. ಕಾರ್ಖಾನೆಗಳಲ್ಲಿ ಕ್ರಷ್ ಇರುವುದಿಲ್ಲ. ಕೆಲವೇ ಕಾರ್ಖಾನೆಗಳಲ್ಲಿ ಇದ್ದರೂ ಅಲ್ಲಿನ ವ್ಯವಸ್ಥೆ ಚೆನ್ನಾಗಿಲ್ಲ. ಇಂತಹ ಸಂದರ್ಭದಲ್ಲಿ ಮಕ್ಕಳನ್ನು ಒಬ್ಬರನ್ನೇ ಮನೆಯ ಬಳಿ ಆಟವಾಡಿಕೊಂಡಿರಲು ಬಿಡಬೇಕು, ಇಲ್ಲವೇ ತಮ್ಮ ಹುಟ್ಟಿದೂರಿನಲ್ಲಿ ತಾಯಿಯ ಮನೆಯಲ್ಲಿ ಬಿಡಬೇಕು; ಇವೆರಡೇ ಈ ಮಹಿಳೆಯರಿಗೆ ಇರುವ ಅವಕಾಶಗಳು.

ಇಂದು ಬೆಂಗಳೂರಿನಲ್ಲಿ, ಪುಟ್ಟ ಮಕ್ಕಳನ್ನು ಮನೆಯ ಬಳಿ ಆಟವಾಡಲು ಬಿಡುವುದೂ ಸಹ ಸುರಕ್ಷಿತವಲ್ಲ. ಉದಾಹರಣೆಗೆ, ಈಗ್ಗೆ ಎರಡು ವರ್ಷಗಳ ಹಿಂದೆ ಸುಂಕದಕಟ್ಟೆಯಲ್ಲಿ ವಾಸಿಸುತ್ತಿದ್ದ ಮಹಿಳಾ ಕಾರ್ಮಿಕರ ಪುಟ್ಟ ಮಕ್ಕಳಿಬ್ಬರು ಮಧ್ಯಾಹ್ನ ಶೌಚಕ್ಕೆಂದು ಕೆರೆಯ ಬಳಿಗೆ ಹೋಗಿ ಮುಳುಗಿ ಸಾವನ್ನಪ್ಪಿದ್ದರು. ಮತ್ತೊಂದು ಘಟನೆಯಲ್ಲಿ, ತಾಯಿ ಕೆಲಸಕ್ಕೆ ಹೋದ ಸಂದರ್ಭದಲ್ಲಿ ಮನೆಯಲ್ಲಿದ್ದ ೭ ಹಾಗೂ ೫ ವರ್ಷದ ಪುಟ್ಟ ಮಕ್ಕಳಿಬ್ಬರು ಟಿ.ವಿ. ಕಾರ್ಯಕ್ರಮವೊಂದನ್ನು ನೋಡುತ್ತಾ, ಅದರಂತೆಯೇ ಬೆಂಕಿ ಹಚ್ಚಿಕೊಂಡು ಸುಟ್ಟು ಕರಕಲಾದ ಘಟನೆ ಎಂತಹವರ ಮನಸ್ಸನ್ನೂ ಕಲಕಿತ್ತು. ಈ ಪುಟ್ಟ ಕಂದಮ್ಮಗಳನ್ನು ಪೋಷಣೆ ಮಾಡುವವರಿದ್ದಿದ್ದರೆ ಹೀಗಾಗುತ್ತಿತ್ತೇ? ಇವೆರಡೂ ಗಮನಕ್ಕೆ ಬಂದದ್ದಷ್ಟೇ! ಬಾರದ್ದೆಷ್ಟೋ!!!

ಆರ್ಥಿಕ ಪರಿಸ್ಥಿತಿ

ಗಾರ್ಮೆಂಟ್ಸ್ ಉದ್ಯೋಗಕ್ಕೆ ನಿಗದಿಯಾಗಿರುವ ಅತ್ಯಲ್ಪ ಕನಿಷ್ಠವೇತನದಲ್ಲಿ (೨೦೧೨ರಲ್ಲಿ ರೂ. ೪೫೦೦) ಜೀವನ ಸಾಗಿಸಲು ಮಹಿಳಾ ಕಾರ್ಮಿಕರು ಸಾಹಸ ಮಾಡುತ್ತಿದ್ದಾರೆ. ಈ ವೇತನದಲ್ಲಿ ಮನೆ ಬಾಡಿಗೆ, ದಿನಸಿ, ಆರೋಗ್ಯ, ಮಕ್ಕಳ ವಿದ್ಯಾಭ್ಯಾಸ ಓಡಾಟ, ಬಟ್ಟೆ, ಬರೆ, ಹೀಗೆ ಬದುಕಿನ ಮೂಲಭೂತ ಅವಶ್ಯಕತೆಗಳನ್ನು ಸಹ

ಪೂರೈಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಗ್ರಾಮೀಣ ಪ್ರದೇಶದಿಂದ ವಲಸೆ ಬಂದ ಕಾರ್ಮಿಕರು ಊರಿನಿಂದ ಕಾಳು/ಕಡ್ಡಿಗಳನ್ನು ತಂದು ಜೀವನ ನಡೆಸುತ್ತಿದ್ದಾರೆ. ಮನೆ ಮಂದಿಯೆಲ್ಲಾ ಯಾವುದಾದರೊಂದು ಅರೆಕಾಲಿಕ ಕೆಲಸ (ಮನೆಕೆಲಸ, ಊದುಕಡ್ಡಿ ಕಟ್ಟುವುದು ಇತ್ಯಾದಿ) ಮಾಡುತ್ತಾ ದುಡಿದರೂ, ಪ್ರತಿತಿಂಗಳು ಸಾಲ ಮಾಡುವುದು ಅನಿವಾರ್ಯವಾಗಿದೆ. ಸರ್ಕಾರವು ಈ ಮಹಿಳಾ ಕಾರ್ಮಿಕರು ದೇಶಕ್ಕೆ ನೀಡುತ್ತಿರುವ ಅಮೂಲ್ಯ ಕೊಡುಗೆಯನ್ನು ಗುರುತಿಸಿ, ಇವರಿಗೆ ಸಾಮಾಜಿಕ ಭದ್ರತೆ ನೀಡುತ್ತಿಲ್ಲ. ಸರ್ಕಾರದ ಯಾವುದೇ ವಿಶೇಷ ಸೌಲಭ್ಯವೂ ಈ ಕಾರ್ಮಿಕರಿಗೆ ಸಿಗುತ್ತಿಲ್ಲ. ಸರ್ಕಾರಕ್ಕೆ ಕೋಟ್ಯಾಂತರ ರೂ.ಗಳನ್ನು ಪರೋಕ್ಷ ತೆರಿಗೆ ಕಟ್ಟುತ್ತಾ, ದೇಶಕ್ಕೆ ವಿದೇಶಿ ವಿನಿಮಯವನ್ನು ಹೆಚ್ಚಿನ ಮಟ್ಟದಲ್ಲಿ ತಂದು ಕೊಡುತ್ತಿರುವ ಈ ಕಾರ್ಮಿಕರು ದಿನೇದಿನೇ ಬಡವರಾಗುತ್ತಿದ್ದಾರೆ. ಬದಲಾಗಿ ಲಾಭವನ್ನು ಪಡೆಯುವ ಮಾಲೀಕ ವರ್ಗಕ್ಕೆ ಹಲವಾರು ರೀತಿಯ ರಿಯಾಯಿತಿ, ಸಹಾಯಧನ ಕಾನೂನುಗಳ ಸಡಿಲೀಕರಣದಂತಹ ಸೌಲಭ್ಯಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನೀಡುತ್ತಿವೆ.

ಜೀವನದ ಮೂಲಭೂತ ಅವಶ್ಯಕತೆಗಳಿಗೆ ಅನಿವಾರ್ಯವಾಗಿ ಮಾಡುವ ಸಾಲ ಜಾಸ್ತಿಯಾದಾಗ, ಕಡೆಗೊಮ್ಮೆ ಕೆಲಸಕ್ಕೆ ರಾಜೀನಾಮೆ ನೀಡಿ, ಮುಂದಿನ ಜೀವನಕ್ಕಾಗಿ ಕೂಡಿಟ್ಟ ಭವಿಷ್ಯನಿಧಿ ಹಣವನ್ನು ತೆಗೆದು ಸಾಲ ತೀರಿಸುತ್ತಿದ್ದಾರೆ. ಇದರಿಂದ ನಷ್ಟವಾಗುವ ತಮ್ಮ ಸೇವಾವಧಿ, ಭವಿಷ್ಯದ ಯೋಚನೆ ಯಾವುದನ್ನೂ ಲೆಕ್ಕಿಸದೆ ಕೇವಲ ದಿನನಿತ್ಯದ ಜೀವನವನ್ನಷ್ಟೇ ಈ ಕಾರ್ಮಿಕರು ಪರಿಗಣಿಸುತ್ತಾರೆ. ಇದರ ಬಗ್ಗೆ ಕೇಳಿದರೆ "ಅಯ್ಯೋ ಇವತ್ತಿದ್ರೆ ತಾನೇ ನಾಳೆ" ಎಂಬ ಹತಾಶ ಉತ್ತರ ನೀಡುತ್ತಾರೆ.

ಕಾರ್ಖಾನೆಯಲ್ಲಿನ ಪರಿಸ್ಥಿತಿ

ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿರುವವರು ಶೇ. ೯೦ ಭಾಗ ಮಹಿಳೆಯರೇ. ಇದಕ್ಕೆ ಉದ್ಯಮ ಹೇಳುವ ಕಾರಣ, "ಮಹಿಳೆಯರು ಹೇಳಿದಂತೆ ಕೇಳುತ್ತಾರೆ. ಯಾವುದಕ್ಕೂ ಪ್ರತಿಭಟಿಸದೇ ಕೆಲಸ ಮಾಡುತ್ತಾರೆ. ಆದ್ದರಿಂದಲೇ ನಮಗೆ ಮಹಿಳೆಯರೇ ಬೇಕು" ಎಂದು. ಆದರೆ, ಇವರನ್ನು ಮೇಲ್ವಿಚಾರಣೆ ಮಾಡುವುದು ಮಾತ್ರ ಕೆಲವೇ ಪುರುಷರು. ಸೂಪರ್‌ವೈಸರ್, ಫ್ಲೋರ್‌ಇನ್‌ಚಾರ್ಜ್, ಮ್ಯಾನೇಜರ್, ಪ್ರೊಡಕ್ಷನ್ ಮ್ಯಾನೇಜರ್ ಹೀಗೆ ಇರುವ ಎಲ್ಲ ಅಧಿಕಾರ ಸ್ಥಾನವೂ ಪುರುಷರಿಗೇ ಮೀಸಲು. ಹೀಗಿರುವಾಗ ಪುರುಷ ಪ್ರಧಾನ ವ್ಯವಸ್ಥೆಯ ದೌರ್ಜನ್ಯಗಳು ಇಲ್ಲಿಯೂ ಮುಂದುವರಿದಿವೆ.

ದೈಹಿಕ ಸೌಂದರ್ಯದ ಅನುಸಾರ ತಾರತಮ್ಯ, ಮಹಿಳೆಯರನ್ನು ಮೂದಲಿಸುವುದು ಬೈಯುವುದು, ಅವಮಾನಿಸುವುದು, ಕೆಲವೊಮ್ಮೆ ಹಲ್ಲೆ, ಹೀಗೆ ಹಲವಾರು ರೀತಿಯಲ್ಲಿ ಈ ಮಹಿಳೆಯರು ದೌರ್ಜನ್ಯಕ್ಕೊಳಗಾಗುತ್ತಿದ್ದಾರೆ. ಇವರನ್ನು ನಾಯಿ, ಕತ್ತೆ, ಗೂಬೆ ಎಂದು ಸಂಬೋಧಿಸುತ್ತಾ, ಪಶುಗಳನ್ನು ಕರೆಯುವಂತೆ ಅಸಹ್ಯ ಸಂಜ್ಞೆಗಳಿಂದ ಕರೆಯುವುದು ಸಾಮಾನ್ಯ. "ಇವರಿಗೆ ಬೈದರೇ ಕೆಲಸ ಮಾಡುವುದು. ಇಲ್ಲದಿದ್ದರೆ ಕೆಲಸ ತೆಗೆಸಲು ಆಗುವುದಿಲ್ಲ. ಆದ್ದರಿಂದ ಬೈಯಲೇಬೇಕಾಗಿದೆ" ಎಂದು ಮ್ಯಾನೇಜರ್ ಒಬ್ಬರು ತಮ್ಮ ಜ್ಞಾನವನ್ನು ಪ್ರದರ್ಶಿಸಿದ್ದಾರೆ! ಉದ್ಯಮದ ಮತ್ತೊಂದು ಕೊರತೆ ಎಂದರೆ

ಈ ಸೂಪರ್‌ವೈಸರ್, ಫ್ಲೋರ್‌ಇನ್ ಚಾರ್ಜ್, ಮ್ಯಾನೇಜರ್, ಪ್ರೊಡಕ್ಷನ್ ಮ್ಯಾನೇಜರ್ ಯಾರಿಗೂ ಸಾಮಾನ್ಯ ಕಾನೂನು ತಿಳುವಳಿಕೆಯೂ ಇಲ್ಲ. ಮಹಿಳಾ ಹಕ್ಕು, ಮಾನವ ಹಕ್ಕು ಇವುಗಳ ಹೆಸರನ್ನೂ ಕೇಳಿಲ್ಲ. ಬಹಳಷ್ಟು ಜನ ಓದಿರುವುದು ಕೇವಲ ೧೦ನೇ ತರಗತಿ ಅಥವಾ ಅದಕ್ಕಿಂತ ಕಡಿಮೆ. ಮಹಿಳೆಯರನ್ನು ಬೆದರಿಸಿ ಕೆಲಸ ತೆಗೆಸುವುದೊಂದೇ ಇವರ ಅರ್ಹತೆಯಾಗಿದೆ.

ಉದ್ಯಮದಲ್ಲಿ ಈಗ ಅತಿ ಹೆಚ್ಚಿನ ಪ್ರೊಡಕ್ಷನ್ ಮಿತಿಯನ್ನು ನಿಗದಿಗೊಳಿಸುವುದು ಒಂದು ರೂಢಿಯಾಗಿ ಪರಿಣಮಿಸಿದೆ. ಇದರಿಂದ ಈ ಮಹಿಳೆಯರು ಇನ್ನೂ ಹೆಚ್ಚಿನ ಮಾನಸಿಕ, ದೈಹಿಕ ಒತ್ತಡಕ್ಕೆ ಸಿಲುಕುತ್ತಿದ್ದಾರೆ. ಇದರಿಂದಾಗಿಯೇ ಶೋಷಣೆಯೂ ಹೆಚ್ಚಾಗುತ್ತಿದೆ. ೮ ಗಂಟೆಯಲ್ಲಿ ಮಾಡಲು ಸಾಧ್ಯವಿಲ್ಲದಂತಹ ಸಂಖ್ಯೆಯ ಪ್ರೊಡಕ್ಷನ್‌ಅನ್ನು ಇವರು, ಸಂಜೆ ೫.೩೦ರ ನಂತರವೂ ಕುಳಿತು ಮುಗಿಸಲೇಬೇಕು. ಇದಕ್ಕೆ ಯಾವುದೇ ಹೆಚ್ಚುವರಿ ಹಣ ಅವರಿಗೆ ಸಿಗುವುದಿಲ್ಲ. ಮಧ್ಯಾಹ್ನ ಅರ್ಧ ಗಂಟೆಯ ಊಟದ ಸಮಯದಲ್ಲೂ ಗಬಗಬನೇ ತಿಂದು ಕೆಲಸದ ಸ್ಥಳಕ್ಕೆ ಓಡುತ್ತಾರೆ. ಕೆಲಸದ ಮಧ್ಯೆ ನೀರು ಕುಡಿದರೆ ಶೌಚಾಲಯಕ್ಕೆ ಹೋಗಬೇಕೆಂದು, ನೀರನ್ನೂ ಕುಡಿಯುವುದಿಲ್ಲ. ಇದರಿಂದ ಅವರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮವಾಗಿ, ಸರಿಯಾದ ಊಟವಿಲ್ಲದೆ, ನೀರಿಲ್ಲದೆ ಅಪೌಷ್ಟಿಕತೆ, ಮೂತ್ರಕೋಶದ ಸೋಂಕಿನಿಂದ ಮಹಿಳೆಯರು ಬಳಲುತ್ತಿದ್ದಾರೆ. ಆದರೆ ಮಹಿಳೆಯರನ್ನು ಈ ರೀತಿ ಹಿಂಡಿ ಪ್ರೊಡಕ್ಷನ್ ತೆಗೆಸುವ ಮ್ಯಾನೇಜರ್‌ಗಳಿಗೆ ತಿಂಗಳಿಗೆ ಲಕ್ಷಗಟ್ಟಲೇ ಸಂಬಳವಲ್ಲದೆ, 'ಇನ್ಸೆಂಟಿವ್' ಕೂಡ ಸಿಗುತ್ತದೆ. ಈ ಇನ್ಸೆಂಟಿವ್‌ನ ಆಸೆಗೋಸ್ಕರ ಅಮಾನವೀಯವಾಗಿ ಈ ಮಹಿಳೆಯರನ್ನು ಹಿಂಡಿ ಪ್ರೊಡಕ್ಷನ್ ತೆಗೆಸಲಾಗುತ್ತಿದೆ. ಉದಾಹರಣೆಗೆ ೩೦ರಿಂದ ೩೫ ಕಾರ್ಮಿಕರ ಒಂದು ಗುಂಪು ಸಾಮಾನ್ಯ ಷರ್ಟ್ ಒಂದನ್ನು ೫೦ರಿಂದ ೬೦ ಸೆಕೆಂಡ್‌ಗಳಲ್ಲಿ ಪೂರ್ಣಗೊಳಿಸುತ್ತಾರೆ. ಇದೂ ಸಹ ಇವರಿಗೆ ತೃಪ್ತಿ ತರುವುದಿಲ್ಲ.

ಈ ಶೋಷಣೆಯನ್ನು ಸಹಿಸಲಾರದೆ ಕಾರ್ಮಿಕರು ತಮ್ಮ ಕೆಲಸವನ್ನು ಬದಲಿಸುತ್ತಲೇ ಇರುತ್ತಾರೆ. ಒಂದು ವರ್ಷಕ್ಕೆ ಕಾರ್ಖಾನೆಯೊಂದರಲ್ಲಿ ಕೆಲಸ ಬಿಡುವ ಕಾರ್ಮಿಕರ ಅಂದಾಜು ಪ್ರಮಾಣ ಶೇ. ೫೦ಕ್ಕಿಂತ ಹೆಚ್ಚು.

ಗಾರ್ಮೆಂಟ್ಸ್ ಕಾರ್ಮಿಕರನ್ನು ಸಂಘಟಿಸುವಲ್ಲಿ ಸವಾಲುಗಳು

ಈ ಕಾರ್ಮಿಕರೆಲ್ಲರೂ ಮೊದಲ ತಲೆಮಾರಿನ ಕಾರ್ಮಿಕರಾಗಿದ್ದು, ಜೀವನ ನಡೆಸಲು ಹಣ ದುಡಿಯಬೇಕೆಂದು ಈ ಕೆಲಸಕ್ಕೆ ಬಂದಿದ್ದಾರೆ. ಯಾರಿಗೂ ಕಾರ್ಮಿಕ ಸಂಘಟನೆಗಳ ಹಿನ್ನೆಲೆಯಿಲ್ಲ, ಕಾನೂನಿನ ಅರಿವಿಲ್ಲ. ಮಾಲೀಕ, ಕಾರ್ಮಿಕ ಸಂಬಂಧಗಳ ಬಗ್ಗೆ ಏನೇನೂ ತಿಳಿಯದ, ಹಿಂದಿನಿಂದಲೂ ಸಮಾಜದಲ್ಲಿ ಬೇರೂರಿರುವ 'ಧಣಿ ಸೇವಕ, ಋಣ' ಮುಂತಾದ ಭಾವನೆಗಳು ಈ ಕಾರ್ಮಿಕರಲ್ಲೂ ಇವೆ. ಆದ್ದರಿಂದ ಸುಲಭವಾಗಿ ಬಂಡವಾಳಶಾಹಿಗಳ ಧುನ್ನಾರಕ್ಕೆ, ಶೋಷಣೆಗೆ, ದೌರ್ಜನ್ಯಕ್ಕೆ ಬಲಿಯಾಗು ತ್ತಿದ್ದಾರೆ. ಇದನ್ನು ಹೋಗಲಾಡಿಸಿ, 'ಶ್ರಮಕ್ಕೆ ತಕ್ಕ ಪ್ರತಿಫಲ' ಎಂಬ ಭಾವನೆ ಮೂಡಿಸುವುದು ಮೊದಲನೇ ಸವಾಲಾಗಿದೆ. ಸಂಘಟನೆ, ಯೂನಿಯನ್ ಎಂದರೇ

ಮೈಲಿ ದೂರ ಓಡುವ ಈ ಮಹಿಳಾ ಕಾರ್ಮಿಕರಿಗೆ ಈ ಬಗ್ಗೆ ತಿಳಿವಳಿಕೆ ನೀಡುವುದೇ ಒಂದು ಸವಾಲಾಗಿದೆ.

ಮಹಿಳಾ ಕಾರ್ಮಿಕರು ಬೆಂಗಳೂರಿನಲ್ಲಿ ಸಂಘಟನೆಯ ಪ್ರಕ್ರಿಯೆಯತ್ತ ಹೆಜ್ಜೆ ಹಾಕಿದ್ದು, ೨೦೦೨ ರಿಂದ ಮಹಿಳೆ ಸಾಮಾಜಿಕವಾಗಿಯೂ, ಕಾರ್ಖಾನೆಯಲ್ಲಿಯೂ ಸಂಘಟಿತಳಾಗಿರಬೇಕು ಎಂಬ ಉದ್ದೇಶದಿಂದ 'ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ' (ಸಾಮಾಜಿಕ ಸಂಘಟನೆ) ಹಾಗೂ 'ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್' (GATWU) ಕಳೆದ ೭ ವರ್ಷಗಳಿಂದ ಕೆಲಸ ಮಾಡಿಕೊಂಡು ಬರುತ್ತಿವೆ. ಅದರಲ್ಲಿ ಸಾಕಷ್ಟು ಯಶಸ್ಸನ್ನೂ ಕಂಡಿವೆ.

(ಈ ಲೇಖನ ಸಿದ್ಧಪಡಿಸಲು ನೆರವಾದ ಗಾರ್ಮೆಂಟ್ಸ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ (GATWU) ಯೂನಿಯನ್‌ನ ಜಯರಾಮ್ ಕೆ.ಆರ್., ರಾಜು ಬಿ.ಸಿ. ಹಾಗೂ ವೀಣಾ ಅವರಿಗೆ ನನ್ನ ಕೃತಜ್ಞತೆಗಳು.)

❐



ಮಾಧ್ಯಮಗಳು ಎತ್ತ ಸಾಗಿವೆ?

■ **ಡಾ. ಬಾಬು ಕೃಷ್ಣಮೂರ್ತಿ**

ಕೆಲ ವರ್ಷಗಳ ಕೆಳಗೆ ನಮ್ಮ ರಾಜ್ಯದಲ್ಲಿ ಒಂದು ಹೊಸ ಕನ್ನಡ ದಿನಪತ್ರಿಕೆ ಪ್ರಾರಂಭವಾಯಿತು. ವ್ಯವಹಾರ ಚಾಣಾಕ್ಷರೂ ಮುನ್ನುಗ್ಗುವ ಸ್ವಭಾವದವರೂ ಆದ ಅದರ ಮಾಲೀಕರು, ತಮ್ಮ ನೂತನ ಪತ್ರಿಕೆಯನ್ನು ಕನ್ನಡದ ನಂ.೧ ಪತ್ರಿಕೆ ಮಾಡಬೇಕೆಂದು ಛಲತೊಟ್ಟು ಹೊರಟರು. ದೀರ್ಘಾಲೋಚನೆಯನ್ನು ಮಾಡಿ ಕೊಂಡೇ ರಂಗಪ್ರವೇಶ ಮಾಡಿದ್ದ ಅವರು, ತಮ್ಮ ಗುರಿ ಸಾಧಿಸಲು ಪ್ರಯೋಗಿಸಿದ ತಂತ್ರಗಳಿಂದ ಕನ್ನಡದ ಇತರ ಪತ್ರಿಕೆಗಳು ತತ್ತರಿಸಿಹೋದವು. ಪತ್ರಿಕಾರಂಗದಲ್ಲಿ ಒಂದು ದೊಡ್ಡ ಸಂಚಲನವೇ ಉಂಟಾಯಿತು. ಅಂತೂ ಇಂತೂ ಅವರು ಗುರಿ ಸಾಧಿಸಿಯೇ ಬಿಟ್ಟರು. ತಮ್ಮ ಪತ್ರಿಕೆಯನ್ನು ಕನ್ನಡದ ನಂ.೧ ದಿನಪತ್ರಿಕೆಯನ್ನಾಗಿ ಮಾಡಿಯೇಬಿಟ್ಟರು.

ಅವರು ಅನುಸರಿಸಿದ ತಂತ್ರ ಬಹಳ ಸರಳವಾದದ್ದು. ಅದು ಅವರಿಗೆ ಮಾತ್ರ ಸಾಧ್ಯವಾಗುವಂಥದ್ದಾಗಿತ್ತು. ಅವರ ಈ ತಂತ್ರ ಯಶಸ್ವಿಯಾಗುವಂತೆ ಮಾಡಲು ಅವರಿಗೆ ಮೊದಲೇ ಸಿದ್ಧವಿದ್ದ ಒಂದು ವ್ಯವಸ್ಥಿತ ವಿಶಾಲ ಸಂಪರ್ಕ ಜಾಲವಿತ್ತು. ಅವರ ಇನ್ನೊಂದು ಉದ್ಯಮಕ್ಕೆ ಸಂಬಂಧಿಸಿದ ಕಚೇರಿಗಳು ರಾಜ್ಯದಾದ್ಯಂತ ಚಿಕ್ಕಚಿಕ್ಕ ಊರುಗಳಲ್ಲೂ ಇದ್ದವು. ಇದು ಅವರಿಗಿದ್ದ, ಇತರರಿಗಿಲ್ಲದ ಒಂದು ಅನುಕೂಲ. ಅವರಿಗೆ ಪತ್ರಿಕಾ ವಿತರಣೆ ಮಾಡುವುದು ಈ ಜಾಲದ ಮೂಲಕ ಸುಲಭ ಸಾಧ್ಯವಿತ್ತು.



ಅವರ ತಂತ್ರ ಏನು? ತಮ್ಮ ದಿನಪತ್ರಿಕೆಯ ಮಾರಾಟ ದರವನ್ನು ಕೇವಲ ಒಂದು ರೂಪಾಯಿಗೆ ನಿಗದಿಗೊಳಿಸಿದರು. ಅವರಿಗೆ ಪತ್ರಿಕೆಯ

ಲಾಭನಷ್ಟಗಳ ಲೆಕ್ಕಾಚಾರಕ್ಕಿಂತಲೂ ತಮ್ಮ ಗುರಿ ಮುಟ್ಟುವುದು ಮುಖ್ಯ. ಅಬ್ಬರದ ಪ್ರಚಾರ ಹಾಗೂ ಉತ್ತಮ ಸಂಪಾದಕೀಯ ಬೆಂಬಲದೊಂದಿಗೆ ಅತ್ಯಲ್ಪ ಕಾಲದಲ್ಲಿ ಅವರ ಆಸೆ ಫಲಿಸಿತು.

ಆದರೆ ಇತರ ದಿನಪತ್ರಿಕೆಗಳ ಪರಿಸ್ಥಿತಿ ದೇವರಿಗೇ ಪ್ರೀತಿ! ಅವರಿಗೆ ಒಂದು ರೂಪಾಯಿಗೆ ತಮ್ಮ ಪತ್ರಿಕೆಯನ್ನು ಕೊಡಲು ಸಾಧ್ಯವಿರಲಿಲ್ಲ. ಏನೇನೋ ತಿಪ್ಪರಲಾಗ ಹಾಕಿದರೂ, ಹೊಸ ಪತ್ರಿಕೆಯ ಮಾರಾಟವನ್ನು ಸರಿಗಟ್ಟಲಾರದಾದರು. ಹೊಸಪತ್ರಿಕೆ ಏನೂ ಹೊಸ ಓದುಗವರ್ಗವನ್ನು ಸೃಷ್ಟಿಸಲಿಲ್ಲ. ಇತರ ಸೋದರ ಪತ್ರಿಕೆಗಳ ಓದುಗರನ್ನೇ ತನ್ನತ್ತ ಸೆಳೆದುಕೊಂಡಿತ್ತು. ಇತರ ಪತ್ರಿಕೆಗಳು ಸೊರಗುತ್ತಾ ತಮ್ಮ ಪ್ರಸಾರ ಸಂಖ್ಯೆಯನ್ನು ಉಳಿಸಿಕೊಳ್ಳಲು ತಲೆ ಕೆರೆದುಕೊಳ್ಳಲಾರಂಭಿಸಿದವು.

ಈ ತಂತ್ರವೇನೂ ಹೊಸ ಪತ್ರಿಕೆಯ ಮಾಲೀಕರ ಸ್ವಂತ ಮೆದುಳಿನ ಕೂಸಲ್ಲ. ಅಮೆರಿಕ ಸಂಯುಕ್ತ ಸಂಸ್ಥಾನಗಳ ಅನಭಿಷಿಕ್ತ ಮಾಧ್ಯಮ ಚಕ್ರವರ್ತಿ ಎಂದು ಬಿರುದಾಂಕಿತನಾಗಿರುವ ರುಪರ್ಟ್ ಮುರ್ಡೋಕ್ ಇದರ ಜನಕ. ಮುಂಬಯಿನ ಒಂದು ಅತ್ಯಂತ ಹಳೆಯ ಪತ್ರಿಕೆ ಅವನನ್ನೇ ಕಾಪಿಚೆಟ್ ಮಾಡಿ ಸುಲಭವಾಗಿ ಇಡೀ ದೇಶದ ನಂಬರ್‌ಒನ್ ಇಂಗ್ಲಿಷ್ ದಿನಪತ್ರಿಕೆಯ ಸ್ಥಾನವನ್ನು ಅಲಂಕರಿಸಿತು.

ಒಂದು ಕನ್ನಡ ದಿನಪತ್ರಿಕೆ ಅತ್ಯಧಿಕ ಮಾರಾಟ ದಾಖಲೆ ಸಾಧಿಸಿದ್ದು ಕನ್ನಡಿಗರೆಲ್ಲರಿಗೂ ಸಂತೋಷದ ಸಂಗತಿಯೇ ಆದರೂ, ಅದು ಅನುಸರಿಸಿದ ಮಾರ್ಗ ಎಷ್ಟು ನ್ಯಾಯವಾದದ್ದು ಎಂಬ ಚಿಂತೆ ಕಾಡದಿರುವುದಿಲ್ಲ. ಇತರ ಸೋದರ ಪತ್ರಿಕೆಗಳನ್ನು ತುಳಿದು, ತಾನು ಮೇಲಕ್ಕೆ ಬಂದ 'ಔರಂಗಜೇಬ್ ಪ್ರವೃತ್ತಿ' ಎಷ್ಟು ಸರಿ ಎಂಬ ಪ್ರಶ್ನೆ ಏಳುತ್ತದೆ.

ನಿಜಕ್ಕೂ ನಮ್ಮ ದೇಶ ಅನೇಕ ರಂಗಗಳಲ್ಲಿ ಅದ್ಭುತ ಪ್ರಗತಿ ಸಾಧಿಸಿ ದಾಪುಗಾಲು ಹಾಕುತ್ತಿರುವುದು ನಮಗೆ ಹೆಮ್ಮೆಯ ಸಂಗತಿಯೇ. ಈ ಬಗೆಯ ಪ್ರಗತಿಯನ್ನು ಕೇವಲ ಎರಡು ಮೂರು ದಶಕಗಳ ಕೆಳಗೆ ಊಹಿಸುವುದೂ ಸಾಧ್ಯವಿರಲಿಲ್ಲ. ಬೆಂಗಳೂರು ಮುನಿಸಿಪಾಲಿಟಿಯಾಗಿದ್ದಾಗಿನ ಸ್ಥಿತಿಗತಿಗಳಿಗೂ, ಸಿಲಿಕಾನ್ ಸಿಟಿಯಾದ ಮೇಲೆ ಇರುವ ಸ್ಥಿತಿಗತಿಗಳಿಗೂ ಅಜಗಜಾಂತರ. ಎರಡು ಮೂರು ದಶಕಗಳ ಕೆಳಗೆ ಅದೊಂದು ಸುಂದರ ಉದ್ಯಾನವನಗಳ ನಗರ. ಇಂದು? ಗಗನಚುಂಬಿ, ಬಹುಮಹಡಿ ಕಟ್ಟಡಗಳ ಸಿಮೆಂಟ್ ಕಾಡು. ಬಹುಪಾಲು ಬೆಂಗಳೂರಿಗರದು ಯಾಂತ್ರಿಕ ಜೀವನ. ಇದು ಕಣ್ಣಿಗೆ ಕಾಣುವ ಹೊರನೋಟ. ಒಂದು ಕಡೆ ಪ್ರಗತಿಯಾಗುತ್ತಿದ್ದರೆ, ಇನ್ನೊಂದು ಕಡೆ ಮೌಲ್ಯಗಳ ಕುಸಿತ ಆಗುತ್ತಿರುವುದು ಯಾವುದೇ ಸಮಾಜಪರ ಚಿಂತಕನಿಗೆ ನೋವನ್ನುಂಟುಮಾಡುವ ಸಂಗತಿ. ಒಂದು ಕಡೆ ಐಹಿಕ ಪ್ರಗತಿ, ಇನ್ನೊಂದು ಕಡೆ ಮೌಲ್ಯಗಳ ಅಧೋಗತಿ. ಒಂದು ರಾಷ್ಟ್ರದ ಸಮಗ್ರ ಅಭಿವೃದ್ಧಿ ಎಂದರೆ ಕೇವಲ ಐಹಿಕವಷ್ಟೇ ಅಲ್ಲ, ಜೀವನ ಮೌಲ್ಯಗಳನ್ನು ಉಳಿಸಿಕೊಳ್ಳುತ್ತಾ, ಐಹಿಕ ಪ್ರಗತಿ ಸಾಧಿಸಿದಾಗಲೇ ಅದಕ್ಕೆ ಒಂದು ಅರ್ಥ.

ನಮ್ಮ ಮಾಧ್ಯಮಗಳ ಕಥೆಯೂ ಅಷ್ಟೇ. ಪ್ರಜಾಪ್ರಭುತ್ವ ವ್ಯವಸ್ಥೆಯ ನಾಲ್ಕನೆಯ ಸ್ತಂಭವೆಂದು ಕರೆಸಿಕೊಂಡು, ಅದರ ಮೌಲ್ಯಗಳನ್ನು ರಕ್ಷಿಸುತ್ತಾ, ಪರಿಪಾಲಿಸುತ್ತಾ ಕರ್ತವ್ಯ

ನಿರ್ವಹಿಸಬೇಕಾದ ಮಾಧ್ಯಮಗಳಲ್ಲಿ ಮೌಲ್ಯಗಳ ಸ್ಥಿತಿಗತಿ ಏನಾಗಿದೆ ಎಂಬುದರ ಪರಿಶೀಲನೆ ಇಂದು ಅಗತ್ಯವಾಗಿದೆ.

ಸ್ವಾತಂತ್ರ್ಯಪೂರ್ವದಲ್ಲಿ ನಮ್ಮ ಪತ್ರಿಕೋದ್ಯಮ ಒಂದು ಲಾಭದ ಉದ್ಯೋಗ ವಾಗಿರಲಿಲ್ಲ. ಅದೊಂದು ಧರ್ಮ ಎಂಬ ಭಾವನೆ ಎಲ್ಲ ಪತ್ರಕರ್ತರಲ್ಲೂ ಇತ್ತು. ಅದೊಂದು ಪವಿತ್ರ ವೃತ್ತಿ ಎಂಬ ಭಾವನೆ ಅವರದಾಗಿತ್ತು. ಒಂದು ನಿರ್ದಿಷ್ಟ ಗುರಿಯೂ ಇತ್ತು. ಬಹುಪಾಲು ಪತ್ರಿಕೆಗಳು ಸ್ವಾತಂತ್ರ್ಯ ಹೋರಾಟಕ್ಕೆ ಬೆಂಬಲವಾಗಿ ನಿಂತಿದ್ದುವು. ಬ್ರಿಟಿಷ್ ಆಡಳಿತದ ಪರವಾಗಿದ್ದ ಪತ್ರಿಕೆಗಳು ಇರಲಿಲ್ಲವೆಂದಲ್ಲ, ಇದ್ದವು. ಆದರೆ ಜನಮಾನಸದ ಮೇಲೆ ಪ್ರಭಾವ ಬೀರುತ್ತಿದ್ದ ಪತ್ರಿಕೆಗಳು ಸ್ವಾತಂತ್ರ್ಯ ಹೋರಾಟದ ಸುದ್ದಿಗಳನ್ನು ಜನರಿಗೆ ತಲುಪಿಸುತ್ತಿದ್ದವು. ಸಂಪಾದಕೀಯಗಳಲ್ಲಿ, ವೈಚಾರಿಕ ಬರಹಗಳಲ್ಲಿ ಮೌಲ್ಯಗಳನ್ನು ಪ್ರತಿಪಾದಿಸುತ್ತಿದ್ದವು. ಆ ದಿನಗಳಲ್ಲಿ ರೇಡಿಯೋ ಕೆಲವೇ ಸ್ಥಿತಿವಂತರ ಸ್ವತ್ತು. ಇನ್ನು ಟಿವಿಯ ಕಲ್ಪನೆಯೇ ಇರಲಿಲ್ಲ. ಕೇವಲ ಈ ಮೂರುಕಾಸು, ಆರುಕಾಸು ಪತ್ರಿಕೆಗಳೇ ಮಾಹಿತಿ ನೀಡುತ್ತಿದ್ದ ಮಾಧ್ಯಮಗಳು. ಈ ಸಣ್ಣ ಪತ್ರಿಕೆಗಳು ಅತ್ಯುತ್ತಮವಾಗಿ ತಂತಮ್ಮ ಪಾತ್ರಗಳನ್ನು ನಿರ್ವಹಿಸಿದವು. ಜನರಿಗೆ ಮಾಹಿತಿಗಳನ್ನೂ, ಪ್ರೇರಣೆಯನ್ನೂ ಒದಗಿಸಿದವು. ಆ ಪತ್ರಿಕೆಗಳಿಗೆ ಸಂಪಾದಕನೇ ಸರ್ವಸ್ವ, ಆ ಸಂಪಾದಕರಿಗೂ ತಮ್ಮ ಪತ್ರಿಕೆಯೇ ಸರ್ವಸ್ವ. ತಮ್ಮ ಪತ್ರಿಕೆಗಳಿಂದ ಅವರು ಲಾಭವನ್ನು ನಿರೀಕ್ಷಿಸಲಿಲ್ಲ. ಹೊಟ್ಟೆಪಾಡಿಗಾಗಿ ಅವನ್ನು ಬಳಸಿಕೊಳ್ಳಲೂ ಇಲ್ಲ. ಬದಲಿಗೆ ತಮ್ಮ ಹೆಂಡಂದಿರ ಆಭರಣಗಳನ್ನು ಮಾರಿಯೋ, ಅಡವಿಟ್ಟೋ ಪತ್ರಿಕೆಗಳನ್ನು ನಡೆಸಿದರು. ಪದೇ ಪದೇ ಜೈಲುದರ್ಶನ ಮಾಡಿದರು. ಕರ್ನಾಟಕದ ಮಟ್ಟಿಗಂತೂ ಇಂಥ ಧೀಮಂತ ಸಂಪಾದಕರ ದೊಡ್ಡ ಪಟ್ಟಿಯೇ ಇದೆ. ತಿ. ತಾ. ಶರ್ಮ, ಎಚ್. ಕೆ. ವೀರಣ್ಣಗೌಡ, ವೀರಕೇಸರಿ ಸೀತಾರಾಮಶಾಸ್ತ್ರಿ, ಮೊಹರೆ ಹಣಮಂತರಾಯರು, ರಂಗನಾಥ ದಿವಾಕರರು ಮುಂತಾದ ಪ್ರಾತಃಸ್ಮರಣೀಯರನ್ನು ಇಂದಿನ ಪತ್ರಕರ್ತರು ಒಮ್ಮೆಯಾದರೂ ನೆನೆಯಬೇಕು. ಕೇವಲ ಹಣಗಳಿಕೆಯ ಸಾಧನವಾಗಿ ಮಾಧ್ಯಮೋದ್ಯಮವನ್ನು ಬಳಸಿಕೊಳ್ಳುತ್ತಿರುವವರು, ಮೌಲ್ಯ ಗಳಿಗೆ ತಮ್ಮಿಂದಾಗುತ್ತಿರುವ ಅನ್ಯಾಯಗಳ ಬಗ್ಗೆ ಒಮ್ಮೆಯಾದರೂ ಚಿಂತಿಸಬೇಕು. ಕರ್ನಾಟಕದ ಈ ಪ್ರಾತಃಸ್ಮರಣೀಯ ಪತ್ರಕರ್ತರಂತಲ್ಲದಿದ್ದರೂ, ಅಂದು ಅಖಿಲ ಭಾರತ ಮಟ್ಟದಲ್ಲಿ ಪತ್ರಿಕಾ ಮೌಲ್ಯಗಳನ್ನು ಉಜ್ವಲವಾಗಿ ಬೆಳಗಿದ ಪ್ರತಿಭಾಶಾಲಿ ಸಂಪಾದಕರ ದಂಡೇ ಇತ್ತು. ರಮಾನಂದ ಚಟರ್ಜಿ, ಸಿ.ವೈ. ಚಿಂತಾಮಣಿ, ಖಾಸಾ ಸುಬ್ಬರಾವ್ 'ದಿ ಹಿಂದೂ' ಪತ್ರಿಕೆಯ ಕುಟುಂಬ. ಹೀಗೆ ಅಂತಹವರ ನೂರಾರು ಹೆಸರುಗಳನ್ನು ಉದಾಹರಿಸಬಹುದು. ಅವರನ್ನು ಸರಿಯಾದ ದಾರಿಯಲ್ಲಿ ಕರೆದುಕೊಂಡು ಹೋಗಿದ್ದು ಅವರ ನಂಬಿಕೆಗಳು, ಅವರು ನಂಬಿದ ಮೌಲ್ಯಗಳು.

ಇಂದು ದಾರಿ ತೋರಬೇಕಾದ ಮೌಲ್ಯಗಳನ್ನು ಗಾಳಿಗೆ ತೂರಲಾಗಿದೆ. ಅದರಿಂದ ಪತ್ರಕರ್ತರೆನಿಸಿಕೊಂಡವರು ಅಧಃಪತನಕ್ಕೊಳಗಾಗಿದ್ದಾರೆ ಎಂದು ಅನೇಕ ಚಿಂತನಶೀಲ ಹಿರಿಯ ಪತ್ರಕರ್ತರು ಪರಿತಪಿಸುವುದುಂಟು. ಮಾಧ್ಯಮ ಜಗತ್ತಿನಲ್ಲಿ ಭ್ರಷ್ಟಾಚಾರ ತಾಂಡವ ವಾಡುತ್ತಿದೆ. ಮಾಧ್ಯಮವನ್ನು ಬಳಸಿಕೊಂಡು ಹೇಗಾದರೂ ಹಣಮಾಡುವ

ಹುಚ್ಚು ಅನೇಕ ಮಾಧ್ಯಮಗಳವರನ್ನು ಆವರಿಸಿಕೊಂಡಿದೆ. ಮೌಲ್ಯಗಳನ್ನು ಎತ್ತಿಹಿಡಿಯ ಬೇಕಾದ ಮಾಧ್ಯಮಗಳೇ ಭ್ರಷ್ಟತೆಯ ಕೂಪಗಳಾದರೆ ದೇಶದ ಗತಿ ಏನು?

ದೃಶ್ಯಮಾಧ್ಯಮಗಳು ಅಸ್ತಿತ್ವಕ್ಕೆ ಬಂದ ಮೇಲೆ ಹಂತಹಂತವಾಗಿ ಬೆಳೆಯುತ್ತಾ, ಎಲ್ಲ ನೀತಿ ನಿಯಮಗಳನ್ನೂ, ವೃತ್ತಿಧರ್ಮವನ್ನೂ, ಕಟ್ಟುಪಾಡುಗಳನ್ನೂ ಮೂಲೆಗೆ ತಳ್ಳಿ ಹಣಗಳಿಕೆಯನ್ನೊಂದನ್ನೇ ಮುಖ್ಯ ಗುರಿಯಾಗಿಸಿಕೊಂಡು ಎರ್ರಾಬಿರ್ರಿಯಾಗಿ ವರ್ತಿಸುತ್ತಿವೆ. ದುಡ್ಡು ಕೊಟ್ಟರೆ ಸಾಕು, ಏನು ಬೇಕಾದರೂ ಮಾಡಲು ಸಿದ್ಧ! ದುಡ್ಡೊಂದೇ ಮುಖ್ಯ. ಮಿಕ್ಕೆಲ್ಲವೂ ನಗಣ್ಯ. ಯಾವ ಎಗ್ಗೂ ಇಲ್ಲದೆ ದಂಧೆ ನಡೆಸುತ್ತಿವೆ.

ಭಾರತದಲ್ಲಿ ಮೊದಲ ಟೆಲಿವಿಷನ್ ಕೇಂದ್ರ ಪ್ರಾರಂಭವಾದದ್ದು ೧೯೫೯ರಲ್ಲಿ. ಆಗ ಅದು ಮನರಂಜನಾ ಮಾಧ್ಯಮವಾಗಿರದೆ, ಸಮುದಾಯ ಅಭಿವೃದ್ಧಿ ಮತ್ತು ಕೃಷಿ ಸಂಬಂಧಿ ವಿಷಯಗಳಿಗೆ ಮಾತ್ರ ಸೀಮಿತ. ಅದರ ಪ್ರಸಾರ ವ್ಯಾಪ್ತಿಯೂ ದೆಹಲಿಯ ಸುತ್ತಮುತ್ತ ೨೫ ಕಿಲೋಮೀಟರ್‌ಗೆ ಮಾತ್ರ ಸೀಮಿತವಾಗಿತ್ತು. ಎರಡನೆಯ ಕೇಂದ್ರ ಆರಂಭಗೊಂಡಿದ್ದು ೧೯೭೨ರಲ್ಲಿ. ಆದರೆ ಈಗ, ಟಿವಿ ದೇಶವ್ಯಾಪಿಯಾಗಿ ತನ್ನ ಕಬಂಧ ಬಾಹುಗಳನ್ನು ವಿಸ್ತರಿಸಿದೆ. ಟಿವಿ ಸೆಟ್‌ಗಳೂ ಸುಲಭವಾಗಿ ಲಭ್ಯ. ಚುನಾವಣಾ ಭ್ರಷ್ಟಾಚಾರದಲ್ಲಿ ಅವುಗಳದೂ ಪಾಲು. ಓಟು ಪಡೆಯಲು ಟಿವಿ ಸೆಟ್ ಉಡುಗೊರೆಯ ಆಮಿಷ! ಜೊತೆಗೆ ಕೇಬಲ್ ವ್ಯವಸ್ಥೆ. ಒಂದೇ ಸೂರಿನಡಿ ನೂರಾರು ಚಾನಲ್‌ಗಳನ್ನು ನೋಡುವ ಅವಕಾಶ. ಆದ್ದರಿಂದ ಈಗ ಟಿವಿ ಅತ್ಯಂತ ಶಕ್ತಿಶಾಲಿ ಹಾಗೂ ಪ್ರಭಾವಿ ಮಾಧ್ಯಮ. ೧೯೯೦ರಿಂದಾಚೆಗೆ, ಆ ಮೊದಲು ಸರ್ಕಾರಿ ಸ್ವಾಮ್ಯದಲ್ಲಿ ಮಾತ್ರವಿದ್ದ ಟೆಲಿವಿಷನ್‌ಗೆ, ಖಾಸಗಿ ಚಾನಲ್‌ಗಳೂ ಕೂಡ ಸೇರಿಕೊಂಡವು. ಅವೀಗ ಲೆಕ್ಕವಿಲ್ಲದಷ್ಟು ಬೆಳೆದುಕೊಂಡುಬಿಟ್ಟಿವೆ. ಚಾನಲ್‌ಗಳ ಸಂಖ್ಯೆ ಹೆಚ್ಚಿದಂತೆ ಹಣ ಬಾಚಿಕೊಳ್ಳುವ ದಿಶೆಯಲ್ಲಿ ಪೈಪೋಟಿ ನಡೆದಿದೆ.

ದಿನಪತ್ರಿಕೆಗಳಲ್ಲೂ ೨೦೦೯ರಿಂದೀಚೆಗೆ ಒಂದು ಹೊಸ ಆವಿಷ್ಕಾರ ಆಗಿದೆ. ಪತ್ರಿಕಾರಂಗದ ಭ್ರಷ್ಟತೆಗೆ ಇದೊಂದು ಉಜ್ವಲ ಉದಾಹರಣೆ. 'ಪೇಯ್ಡ್ ನ್ಯೂಸ್' ಎಂದು ಮಾಧ್ಯಮ ವಲಯಗಳಲ್ಲಿ ಚಾಲ್ತಿಯಲ್ಲಿರುವ ಈ ಪದ್ಧತಿ, ಹಣ ಸುರಿದು ತಮಗೆ ಬೇಕಾದಂತೆ, ತಮ್ಮ ಬಗೆಗಿನ ಸುದ್ದಿಗಳನ್ನು ಪ್ರಕಟಿಸುವುದು. ಇದೊಂದು ಬಗೆಯ ಕಾಳದಂಧೆಯೇ ಸರಿ. ಚುನಾವಣಾ ಸಮಯದಲ್ಲಿ ಬಂಪರ್ ವ್ಯಾಪಾರ! ಪತ್ರಿಕೆಗಳಲ್ಲಿ ಹಾಗೂ ಖಾಸಗಿ ಟಿ.ವಿ. ಚಾನಲ್‌ಗಳಲ್ಲಿ, ಅಭ್ಯರ್ಥಿಗಳು ತಮ್ಮ ಪರವಾಗಿ ಮತ್ತು ತಮಗೆ ಅನುಕೂಲಕರವಾಗಿ ಸುದ್ದಿಗಳನ್ನು ಬಿತ್ತರಿಸುವಂತೆ ಅಥವಾ ಮುದ್ರಿಸುವಂತೆ ಮಾಡಲು ರಾಶಿ ರಾಶಿ ಹಣವನ್ನು ಚೆಲ್ಲಲು ಮುಂದಾದರು. ಈ ಮೊದಲು ಕರಪತ್ರಗಳು ಪೋಸ್ಟರ್‌ಗಳ ಮೂಲಕ ಅಥವಾ ಪತ್ರಿಕೆಗಳಲ್ಲಿ ಜಾಹಿರಾತುಗಳ ಮೂಲಕ ಪ್ರಚಾರ ಪಡೆಯುತ್ತಿದ್ದ ಈ ಅಭ್ಯರ್ಥಿಗಳು ವಾಮಮಾರ್ಗವನ್ನನುಸರಿಸಿ, ಸುದ್ದಿಯ ಹೆಸರಿನಲ್ಲಿ ತಮ್ಮ ಪ್ರಚಾರವನ್ನು ಮಾಡಿಕೊಳ್ಳುವಂತೆ ಖಾಸಗಿ ಟಿವಿ ಚಾನೆಲ್‌ಗಳು ದಾರಿ ತೋರಿಸಿದವು. ಟಿವಿ ಚಾನಲ್ ಗಳಲ್ಲಿ ಕೆಲಸ ಮಾಡುವ ಅನೇಕ ಉದ್ಯೋಗಿಗಳು (ಪ್ರಮುಖ ಸ್ಥಾನಗಳಲ್ಲಿರುವವರು) ಕೋಟಿಗಟ್ಟಲೆ ಹಣ ಲೂಟಿ ಹೊಡೆದರು. ಆ ದಿನಗಳಲ್ಲೇ ಒಂದು ಖಾಸಗಿ ಚಾನಲ್‌ನ

ಮುಖ್ಯಸ್ಥ ಒಂದು ಸುದ್ದಿ ತುಣುಕಿನ ಪ್ರಚಾರಕ್ಕೆ ೫೦ ಕೋಟಿ ರೂ. ಗಿಟ್ಟಿಸಿದ್ದ ಎಂಬುದು 'ಬಹಿರಂಗ ರಹಸ್ಯ'ವಾಗಿತ್ತು.

ಲೋಕಸಭೆ ಹಾಗೂ ವಿಧಾನಸಭೆಯ ಚುನಾವಣೆಗಳ ವೇಳೆ ಮಹಾರಾಷ್ಟ್ರ ಹರಿಯಾಣ, ಆಂಧ್ರಪ್ರದೇಶಗಳಲ್ಲಿ ಈ ಬಗೆಯ ಅನೇಕ ಪ್ರಕರಣಗಳು ಪ್ರಕಟಗೊಂಡವು. ದೇಶಾದ್ಯಂತ ದೊಡ್ಡ ಅಥವಾ ಚಿಕ್ಕ ಎಂಬ ಭೇದವಿಲ್ಲದೆ, ಲೆಕ್ಕಕ್ಕೆ ಸಿಗದಷ್ಟು ಚಾನಲ್‌ಗಳು ಈ ಸಂದರ್ಭದ ಲಾಭ ಪಡೆದವು. ಮೊದಮೊದಲು ಚಾನಲ್‌ಗಳ ಸಿಬ್ಬಂದಿ ಮಾತ್ರ ದುಡ್ಡು ಮಾಡಿಕೊಂಡು, ತಮ್ಮ 'ಗಿರಾಕಿ'ಗಳಿಗೆ ಅಧಿಕೃತ ಸುದ್ದಿಯ ರೂಪದಲ್ಲಿ ಯಥೇಚ್ಛ ಪ್ರಚಾರ ನೀಡುತ್ತಿದ್ದರು. ಆ ನಂತರ ಇದೊಂದು ಸಂಘಟಿತ ದಂಧೆಯಾಯಿತು. ಜಾಹಿರಾತು ಸಂಸ್ಥೆಗಳು, ಸಾರ್ವಜನಿಕ ಸಂಪರ್ಕ ಸಂಸ್ಥೆಗಳು, ಮಾಧ್ಯಮಗಳ ಮಾಲೀಕರು ನಿರ್ವಾಹಕರು, ಮಾಧ್ಯಮ ವರದಿಗಾರರು, ಮುಂತಾದವರು ಈ ಸಂಘಟಿತ ದಂಧೆಯ ಭಾಗಸ್ಥರಾದರು. ಮಾಧ್ಯಮಗಳ ಕಾರ್ಯನಿರ್ವಾಹಕರು ವರದಿಗಾರರನ್ನು ಬಳಸಿಕೊಂಡು ರಾಜಕೀಯ ಧುರೀಣರ ಸಂಪರ್ಕ ಸಾಧಿಸಿಕೊಂಡರು. ಅದಕ್ಕೊಂದು 'ದರಪಟ್ಟಿ'ಯೂ ಸಿದ್ಧವಾಯಿತು. ಒಬ್ಬ ಅಭ್ಯರ್ಥಿಯನ್ನು ಸುದ್ದಿಗಳ ಮೂಲಕ ಮೇಲಕ್ಕೆತ್ತಲು ಒಂದು ಮೊತ್ತವಾದರೆ, ಅವನ ಎದುರಾಳಿಯ ಕಾಲೆಳೆಯಲು ಇನ್ನೊಂದು ಮೊತ್ತ. ಇವನ ಪ್ರಚಾರ ಮತ್ತು ಎದುರಾಳಿಯ ಅಪಪ್ರಚಾರ ಎರಡೂ ಬೇಕಾದರೆ ಬೇರೊಂದು ಮೊತ್ತದ ಪ್ಯಾಕೇಜ್! ಈ 'ವ್ಯವಸ್ಥೆ'ಯೊಳಗೆ ಸೇರಲು ಇಷ್ಟಪಡದ ಅಭ್ಯರ್ಥಿಗಳ ಅಘೋಷಿತ ಬಹಿಷ್ಕಾರ; ಅವರ ಸುದ್ದಿಗಳೆಲ್ಲ ಬ್ಲ್ಯಾಕ್‌ಔಟ್.

ಈ ಮೋಸದ ದಂಧೆ ಮೂರು ಹಂತಗಳಲ್ಲಿ ಜರುಗುತ್ತದೆ. ಪತ್ರಿಕೆಯ ಓದುಗರಿಗೆ ಅಥವಾ ಚಾನಲ್ ವೀಕ್ಷಕರಿಗೆ ತಾವು ಒಂದು ಜಾಹಿರಾತಿನ ವಿಷಯವನ್ನು ಸುದ್ದಿಯ ರೂಪದಲ್ಲಿ ಪ್ರಕಟಿಸಿ, ಅದು ಅಧಿಕೃತ ಸುದ್ದಿ ಎಂಬಂತೆ ಬಿಂಬಿಸುವುದು. ತಮ್ಮ 'ಸುದ್ದಿ' ಬಿತ್ತರಿಸಲು ಅಥವಾ ಪ್ರಕಟಿಸಲು ಅಭ್ಯರ್ಥಿಗಳು ಮಾಡುವ ಖರ್ಚನ್ನು, ಅವರು ಚುನಾವಣಾ ವೆಚ್ಚದಲ್ಲಿ ಎಲ್ಲಿಯೂ ತೋರಿಸದೆ, ಚುನಾವಣಾ ಕಮೀಷನ್ ಕಣ್ಣಿಗೆ ಮಣ್ಣೆರಚುವುದು ಎರಡನೆಯ ಹಂತದ ವಂಚನೆ. ಪತ್ರಿಕಾ ಸಂಸ್ಥೆಗಳಾಗಲಿ ಅಥವಾ ಚಾನಲ್‌ಗಳಾಗಲಿ ಈ ರೀತಿ ಸಂಪಾದಿಸಿದ ಹಣವನ್ನು, ತಮ್ಮ ಕಂಪೆನಿಯ ಬ್ಯಾಲೆನ್ಸ್‌ಷೀಟ್‌ನಲ್ಲಿ ಅಥವಾ ಲೆಕ್ಕದ ಪುಸ್ತಕಗಳಲ್ಲಿ ಎಲ್ಲೂ ತೋರಿಸದೆ, ೧೯೫೬ರ ಕಂಪೆನಿಗಳ ಆ್ಯಕ್ಟ್ ಮತ್ತು ಇನ್‌ಕಂಟ್ಯಾಕ್ಸ್ ಆ್ಯಕ್ಟ್‌ಗಳ ಉಲ್ಲಂಘನೆ ಮಾಡುತ್ತಿರುವುದು ಮೂರನೆಯ ಹಂತದಲ್ಲಿನ ವಂಚನೆ.

ಇದಕ್ಕಿಂತಲೂ ಹೆಚ್ಚಿನ ಆತಂಕಕಾರಿಯಾದ ವಿಷಯ ಇನ್ನೊಂದಿದೆ. ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾ ೨೦೦೯ರಲ್ಲಿ 'ಪೇಯ್ಡ್ ನ್ಯೂಸ್' ಹಗರಣವನ್ನು ಅಧ್ಯಯನ ಮಾಡಿ ವರದಿ ಸಲ್ಲಿಸಲು ದ್ವಿಸದಸ್ಯ ಉಪಸಮಿತಿಯೊಂದನ್ನು ನೇಮಿಸಿತು. ಅದು ಸಂಬಂಧಪಟ್ಟ ವ್ಯಕ್ತಿಗಳನ್ನೆಲ್ಲ ಸಂದರ್ಶಿಸಿ, ಮಾಹಿತಿ ಸಂಗ್ರಹಿಸಿ, ಒಂದು ವಿವರವಾದ ವರದಿಯನ್ನು ತಯಾರಿಸಿ ಪ್ರೆಸ್ ಕೌನ್ಸಿಲ್‌ಗೆ ಒಪ್ಪಿಸಿತು. ಆಗ ಪ್ರೆಸ್ ಕೌನ್ಸಿಲ್ ಸದಸ್ಯರ ಮೇಲೆ ಪ್ರಭಾವ ಬೀರಿದ ಪತ್ರಿಕಾ ಸಂಸ್ಥೆಗಳ ಮಾಲೀಕರೇ ಜಯಶಾಲಿಗಳಾದರು. ಏಕೆಂದರೆ ದ್ವಿಸದಸ್ಯ ಉಪಸಮಿತಿಯ ೭೧ ಪುಟಗಳ ವರದಿಯನ್ನು ಕೆಲವು ಹಾಳೆಗಳಿಗೆ ಇಳಿಸಿ, ಅವನ್ನು ಕೇಂದ್ರ

ಸರ್ಕಾರಕ್ಕೆ ಒಪ್ಪಿಸಲಾಯಿತು. ಆ 'ಪರಿಷ್ಕೃತ' ವರದಿಯಲ್ಲಿ ಉಪ್ಪು, ಖಾರ, ಹುಳಿ ಯಾವುದೂ ಇರಲಿಲ್ಲ.

ಈ ವರದಿಯಲ್ಲಿ, ಮಹಾರಾಷ್ಟ್ರದ ಮುಖ್ಯಮಂತ್ರಿ ಆಗಲಿದ್ದ ಅಶೋಕ್ ಚವ್ಹಾಣ್‌ರವರು ಈ 'ಪ್ಯಾಕೇಜ್' ವ್ಯವಸ್ಥೆಯಂತೆ ಲೋಕಮತ್, ಮಹಾರಾಷ್ಟ್ರ ಟೈಮ್ಸ್, ಪುಢಾರಿ ಎಂಬ ಪತ್ರಿಕೆಗಳಲ್ಲಿ 'ಜಾಹಿರಾತು ಸುದ್ದಿ' ನೀಡಿದ ಆರೋಪಕ್ಕೆ ಒಳಗಾಗಿದ್ದರು. ಅಂತೆಯೇ ಅಂದಿನ ರಾಷ್ಟ್ರಪತಿ ಪ್ರತಿಭಾ ಪಾಟೀಲರ ಮಗ ರಾವ್ ಸಾಹೇಬ್ ಶೆಖಾವತ್‌ರ ಮೇಲೂ ಆರೋಪ ಇತ್ತು. ಆದರೆ ಅವರು ಅದನ್ನು ಅಲ್ಲಗಳೆದು ಜಾರಿಕೊಂಡರು. ಹಲವು ರಾಜ್ಯಗಳಲ್ಲಿ ಈ ಬಗೆಯ ದೂರುಗಳಿದ್ದವು. ಅದರಲ್ಲೂ ವಿಶೇಷವಾಗಿ ದೇಶದಲ್ಲೇ ಅತ್ಯಂತ ಹೆಚ್ಚಿನ ಪ್ರಸಾರ ಸಂಖ್ಯೆಯ ಇಂಗ್ಲಿಷ್ ಪತ್ರಿಕೆ 'ಟೈಮ್ಸ್ ಆಫ್ ಇಂಡಿಯಾ' ಮೇಲೂ ಆರೋಪ ಇತ್ತು.

ಪ್ರೆಸ್ ಕೌನ್ಸಿಲ್‌ಗೆ ಉಪಸಮಿತಿ ಸಲ್ಲಿಸಿದ ವರದಿಯಲ್ಲಿ, 'ಹಿಂದುಸ್ಥಾನ್' ಪತ್ರಿಕೆಯ ವಾರಾಣಸಿ ಆವೃತ್ತಿಯ ಒಂದು ಉದಾಹರಣೆ, 'ಪೇಯ್ಡ್ ನ್ಯೂಸ್' ಪ್ಯಾಕೇಜ್ ವ್ಯವಸ್ಥೆಯ ಮೇಲೆ ಹೆಚ್ಚಿನ ಬೆಳಕು ಬೀರುತ್ತದೆ. ೨೦೦೯ರ ಏಪ್ರಿಲ್ ೩೦ರಂದು ಅಲ್ಲಿ ಚುನಾವಣೆ. ಮೊದಲ ಪುಟದಲ್ಲಿ ಬ್ಯಾನರ್ ಸುದ್ದಿ! ಅಲ್ಲಿನ ಕಾಂಗ್ರೆಸ್ ಅಭ್ಯರ್ಥಿ ಜಯಭೇರಿ ಬಾರಿಸುತ್ತಾನೆಂದೂ, ಅವನ ಪರವಾಗಿ ರಾತ್ರೋ ರಾತ್ರಿ ಅಲೆ ಎದ್ದಿದೆ ಎಂದೂ, ಅಧಿಕೃತ ಸುದ್ದಿಯಂತೆ ಬಿಂಬಿಸಲಾಗಿದ್ದ ವರದಿ ಅಲ್ಲಿತ್ತು. ಮರುದಿನ ಆ ಪತ್ರಿಕೆ 'ತನ್ನ ವರದಿ ತಪ್ಪೆಂದು' ಓದುಗರಲ್ಲಿ ಕ್ಷಮೆ ಯಾಚಿಸಿತು. ಆದರೆ ಅದು ಕ್ಷಮೆಯಾಚಿಸುವ ವೇಳೆಗೆ ಚುನಾವಣೆ ಮುಗಿದಿತ್ತು! ಆ 'ಸುದ್ದಿ'ಯ ಉದ್ದೇಶ ಪೂರೈಸಿತ್ತು!

ಹೀಗೆ ಅನೇಕ ಬಗೆಯ ರೋಗಗಳು ಮಾಧ್ಯಮಗಳಿಗೆ ಅಡರಿಕೊಂಡಿವೆ. 'ಪೇಯ್ಡ್ ನ್ಯೂಸ್'ನಂತೆಯೇ 'ಪೇಜ್ ತ್ರೀ' ಕೂಡ ಇದೆ. ಸುದ್ದಿಯಂತೆಯೇ ಕಾಣುವ, ಪತ್ರಿಕೆಯ ಮೂರನೆಯ ಪುಟದಲ್ಲಿ ಪ್ರಕಟವಾಗುವ ಮಾಹಿತಿಗೂ ಒಂದು ಬೆಲೆ ಇದೆ. ಆ ಬೆಲೆ ಕೊಟ್ಟರೆ, ಅವರ ಸುದ್ದಿ ಪ್ರಕಟವಾಗುತ್ತದೆ. ಯಾರಿಗೆ ಪ್ರಚಾರ ಬೇಕೋ ಅವರು, ಇವನ್ನು ಬೆಲೆಕೊಟ್ಟು ಬಳಸಿಕೊಳ್ಳಬಹುದು. ಆ ಪುಟದಲ್ಲಿ ತಮ್ಮ ಚಿತ್ರಗಳನ್ನೂ, ಪ್ರಶಂಸೆಯನ್ನೂ ಪ್ರಕಟಿಸಿಕೊಳ್ಳಬಹುದು. ಇದೂ ಸಹ ಸುದ್ದಿಯ ಸೋಗಿನಲ್ಲಿ ಪ್ರಕಟವಾಗುವ ಜಾಹಿರಾತು. ಅದನ್ನು ಜಾಹಿರಾತಾಗಿಯೇ ಪ್ರಕಟಿಸಿದರೆ ಯಾರದೂ ಅಭ್ಯಂತರವಿಲ್ಲ. ಅದಕ್ಕೆ ಸುದ್ದಿಯ ಸ್ವರೂಪ ನೀಡಿದರೆ ಗ್ರಾಹಕನನ್ನು ಮೋಸಗೊಳಿಸಿದಂತೆ ಎಂಬುದು ಮಾಧ್ಯಮಗಳ ಆರೋಗ್ಯದ ಬಗ್ಗೆ ಯೋಚಿಸುವ ಚಿಂತನಶೀಲರ ಅಭಿಪ್ರಾಯ.

'ಯುದ್ಧ ಮತ್ತು ಪ್ರಣಯಗಳಲ್ಲಿ ಏನು ಮಾಡಿದರೂ ಸರಿಯೇ' ಎಂಬ ಇಂಗ್ಲಿಷ್ ಮಾತೊಂದಿದೆ. ಅದಕ್ಕೆ ಚುನಾವಣೆ ಮತ್ತು ಮಾಧ್ಯಮಗಳೂ ಸೇರಿಕೊಳ್ಳುತ್ತವೇನೋ? ಕೆಲವು ಮಾಧ್ಯಮಗಳವರಿಗೆ ತಾವು ಯಾರನ್ನು ಬೇಕಾದರೂ ಸೋಲಿಸಬಹುದು ಯಾರನ್ನಾದರೂ ಗೆಲ್ಲಿಸಬಹುದು ಎಂಬ ಧೋರಣೆ ಇರಬಹುದು. ಅದರಲ್ಲಿ ಸ್ವಲ್ಪಮಟ್ಟಿಗೆ ಸತ್ಯಾಂಶವೂ ಇರಬಹುದು. ಪ್ರಚಾರಕ್ಕೆ ತಹತಹಿಸುವ ರಾಜಕಾರಣಿಗಳು ತಮ್ಮ ಸುದ್ದಿಯು ಟಿವಿ ಚಾನಲ್ ಹಾಗೂ ಪತ್ರಿಕೆಗಳಲ್ಲಿ ಬರಲು ಹುಣಸೆ ಬೀಜದಂತೆ ಹಣವನ್ನು ಚೆಲ್ಲಲು ಸಿದ್ಧ. ಇನ್ನು ಕೆಲವರು ರಾಜಕಾರಣಿಗಳು ತಮ್ಮದೇ ಆದ ಚಾನಲ್‌ಗಳನ್ನು ಸ್ಥಾಪಿಸಿ

ಕೊಂಡಿರುವುದೂ ಉಂಟು. ಅನೇಕ ರಾಜಕಾರಣಿಗಳಿಗೆ ರಾಜಕೀಯ ಸಿದ್ಧಾಂತಗಳು ಆದರ್ಶಗಳು, ಭಾರತದ ರಾಜ್ಯಾಂಗ, ಕಾನೂನು, ಇತಿಹಾಸ ಮುಂತಾದ ಯಾವುದರ ಗಂಧ ಇಲ್ಲದಿದ್ದರೂ, ಗಣಿಯಿಂದಲೋ, ಭೂಮಿಯಿಂದಲೋ ಅಥವಾ ಲಂಚ ರುಷವತ್ತುಗಳ ಮೂಲಕವೋ ಸಂಪಾದಿಸಿದ ಕೊಪ್ಪರಿಗೆಗಟ್ಟಲೆ ಹಣಕ್ಕೇನೂ ಕೊರತೆ ಇಲ್ಲ. ಆ ಹಣವು ಓಟು ಕೊಳ್ಳೋದಿಕ್ಕೆ, ಪ್ರಚಾರ ಪಡೆಯೋದಿಕ್ಕೆ ವಿನಿಯೋಗವಾದರೆ ಅದಕ್ಕಿಂತಲೂ ಸದ್ವಿನಿಯೋಗ ಉಂಟೇ ಎಂಬುದು ಅವರ ಪರಮನಂಬಿಕೆ! ಅವರು ಸುರಿಯಲು ಸಿದ್ಧರಿರುವಾಗ, ಅದನ್ನು ಬಾಚಿಕೊಳ್ಳಲು ಮುಗಿಬೀಳುವವರಿಗೇನು ಕೊರತೆ? ರಾಜಕಾರಣಿ ಗಳು ಹೀಗೆ ಮಾಧ್ಯಮಗಳನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ.

ಕ್ಷಮಿಸಿ, ಈ ಲೇಖನದ ಉದ್ದೇಶ ಮಾಧ್ಯಮಗಳವರೆಲ್ಲರೂ ಲಂಚಕೋರರೆಂದು ಚಿತ್ರಿಸುವುದು ಖಂಡಿತ ಅಲ್ಲ, ಸಮಸ್ಯೆಯ ಬಗ್ಗೆ ಗಮನ ಸೆಳೆಯವುದು ಮಾತ್ರ. ಕೆಲವರು ಒಳ್ಳೆಯ ಮಾಧ್ಯಮದವರೂ ಸಿಗುತ್ತಾರೆ; ರಾಜಕಾರಣಿಗಳೂ ಸಿಗುತ್ತಾರೆ. ಆದರೆ ಅವರು ಅಲ್ಪಸಂಖ್ಯಾತರ ಗುಂಪಿಗೆ ಸೇರಿದ್ದಾರಷ್ಟೆ.

ದೇಶದ ಹಿತದೃಷ್ಟಿ, ಪ್ರಜಾಪ್ರಭುತ್ವದ ಆರೋಗ್ಯಗಳನ್ನು ಗಮನದಲ್ಲಿಟ್ಟುಕೊಂಡರೆ ಇಂದಿನ ಪರಿಸ್ಥಿತಿ ಅಷ್ಟು ಆಶಾದಾಯಕವಾಗಿಲ್ಲ. ಆದರೆ ಇದಕ್ಕೆ ಪರಿಹಾರ ಎಲ್ಲಿ? ಅಣ್ಣಾ ಹಜಾರೆ, ಬಾಬಾ ರಾಮದೇವ್‌ರು ಭ್ರಷ್ಟಾಚಾರದ ವಿರುದ್ಧ ಎಷ್ಟು ಬೊಬ್ಬೆ ಹೊಡೆದರೂ ಯಾವ ಭ್ರಷ್ಟಾಚಾರಿಯ ಕೂದಲೂ ಕೊಂಕಲಿಲ್ಲ. ದೇಶದ ಸರ್ವಾಂಗಗಳಿಗೂ ರೋಗ ಹಬ್ಬಿಬಿಟ್ಟಿದೆ. ರೋಗನಿವಾರಣೆಯ ಪ್ರಯತ್ನ ಎಲ್ಲಿಂದ ಆಗಬೇಕೋ, ಅಲ್ಲೇ ರೋಗದ ಮೂಲ ಇದ್ದರೆ ಹೇಗೆ? ಎಷ್ಟು ಅಣ್ಣಾಗಳೂ, ಬಾಬಾಗಳೂ ಕಿರುತೆರೆಗಳಲ್ಲಿ ಮಿಂಚುತ್ತಾ ಅಬ್ಬರಿಸಿದರೇನು? ಅರಚಿ ಕಿರುಚಿದರೇನು? ಘೋಷಣೆಗಳಿಂದ ನಭೋ ಮಂಡಲವನ್ನು ತುಂಬಿದರೇನು? ಅದು ಸ್ವಲ್ಪಮಟ್ಟಿಗೆ ಜನರನ್ನು ಜಾಗೃತಗೊಳಿಸಬಹುದಷ್ಟೇ. ಎಲ್ಲ ರಾಜಕೀಯ ಪಕ್ಷಗಳೂ ಭ್ರಷ್ಟಾಚಾರದಲ್ಲಿ ಮುಳುಗಿ, ಕೊಳೆತು ನಾರುತ್ತಿರುವಾಗ, ಜನರಿಗೆ ಸರಿಯಾದ ಆಯ್ಕೆ ಯಾವುದು ಎಂಬುದು ಹೇಗೆ ತಿಳಿಯಬೇಕು?

ದೇಶದ ಮೇಲಿನಿಂದ ಕೆಳಗಿನವರೆಗೆ ಹರಡಿರುವ ಭ್ರಷ್ಟಾಚಾರದ ಪ್ರತಿಬಿಂಬವೇ ನಮಗೆ ಮಾಧ್ಯಮದಲ್ಲೂ ಕಾಣುತ್ತಿದೆ ಅಷ್ಟೆ. ಅದರ ಶುದ್ಧೀಕರಣ ಮೇಲಿನಿಂದ ಪ್ರಾರಂಭ ವಾಗಬೇಕು. ನೈತಿಕತೆ ಇಲ್ಲದಿರುವವರು ಮೇಲಿದ್ದಾಗ, ಕೆಳಗಿನವರಿಂದ ನೈತಿಕ ಮೌಲ್ಯ ಗಳನ್ನು ನಿರೀಕ್ಷಿಸುವುದು ಹುಂಬತನ.

ಮಾಧ್ಯಮಗಳವರಾಗಲೀ, ರಾಜಕಾರಣಿಗಳಾಗಲೀ ಅಥವಾ ಸಾಮಾನ್ಯ ನಾಗರಿಕರಾಗಲೀ ತಾವು ಮಾಡುತ್ತಿರುವುದು ಸರಿಯೇ ಎಂದು ತಮ್ಮ ಅಂತಃಸಾಕ್ಷಿಯನ್ನು ಪ್ರಶ್ನಿಸಿಕೊಳ್ಳ ಬೇಕು. ಗಾಂಧಿ, ಪಟೇಲ್, ಶಾಸ್ತ್ರಿಗಳಂತಹ ಮೌಲ್ಯಾಧಾರಿತ ನಾಯಕಮಣಿಗಳನ್ನು ಸ್ಮರಿಸಿಕೊಂಡು ಪ್ರೇರಣೆ ಪಡೆಯಬೇಕು. ತನ್ನ ದೇಶ, ತನ್ನ ಜನ ಸರಿಯಾಗಬೇಕಾದರೆ ತಾನು ಮೊದಲು ಸರಿಯಾಗಬೇಕು ಎಂದು ಸಂಕಲ್ಪಿಸಬೇಕು. ಆಗ ಮಾತ್ರ ಹೊಸ ಅಧ್ಯಾಯವನ್ನು ಪ್ರಾರಂಭಿಸಬಹುದು. ಆಗಲೇ ಸಮಗ್ರ ದೇಶಕ್ಕೆ ಒಳಿತಾಗಬಹುದು.


ಭಾಗ ೪
ಕನ್ನಡ ಚಂದ್ರ ದರ್ಶನ

ನನ್ನ ತಮ್ಮ

■ ರಾ. ನಂ. ಶ್ರೀಕಂಠಯ್ಯ

ಕನ್ನಡಾಭಿಮಾನಿಗಳಿಗೆ ರಾ.ನಂ. ಚಂದ್ರಶೇಖರ ಎಂದು ಪರಿಚಿತನಾಗಿರುವ, ನನ್ನ ಪ್ರೀತಿಯ ತಮ್ಮ ಚಂದ್ರನಿಗೆ ಅರವತ್ತು ತುಂಬುತ್ತಿರುವ ಸಂದರ್ಭದಲ್ಲಿ, ಅಭಿನಂದಿಸುವ ವಿಚಾರ ತಿಳಿದು ಅಮಿತಾನಂದವಾಯಿತು. ನಾನು ಎತ್ತಾಡಿಸಿದ ಹುಡುಗನಿಗೆ ಅರವತ್ತೆ ಅನ್ನಿಸಿತು! ಜತೆಯಲ್ಲೇ ಈ ಮಟ್ಟಕ್ಕೆ ಬೆಳೆದು, ನಮ್ಮ ಕುಟುಂಬ ಹೆಮ್ಮೆಪಡುವ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾನಲ್ಲ ಎಂಬ ಧನ್ಯತೆಯೂ ಮೂಡಿತು. ಚಂದ್ರನ ಈ ಸಾಧನೆಯ ಹಿಂದಿನ ಸ್ಫೂರ್ತಿ ಯಾವುದು, ಎಂದು ಚಿಂತಿಸಿದಾಗ ನನ್ನ ನೆನಪು ಅರ್ಧ ಶತಮಾನದ ಹಿಂದಕ್ಕೆ ಜಾರಿತು.

ನಮ್ಮ ಹೆಸರಿನ ಹಿಂದೆ ರಾಮನಾಥಪುರ ಇದ್ದರೂ, ನಾವು ಹುಟ್ಟಿ ಬೆಳೆದದ್ದು ಸಕಲೇಶಪುರ ತಾಲ್ಲೂಕಿನ ಹೇಮಾವತಿ ತೀರದ ನಿಡಿಗೆರೆಯಲ್ಲಿ. ಅದು ಅಪ್ಪಟ ಮಲೆನಾಡಿನ – ನಾಗರೀಕತೆಯ ಸೋಂಕಿಲ್ಲದ ಸುಸಂಸ್ಕೃತ ಗ್ರಾಮ. "ಜಾತಿ ಸಂಕರವಿಲ್ಲ ಜಡದೇಹಿಗಳಿಲ್ಲ, ನೀತಿ ಹೀನರು, ಚೋರರಿಲ್ಲ..." ಎಂಬ ಗೋವಿಂದ ವೈದ್ಯನ ಮಾತು ಅಕ್ಷರಶಃ ಅನ್ವಯವಾಗುವ ಊರಾಗಿತ್ತು ನಿಡಿಗೆರೆ. ಹಲವು ಜಾತಿಯ ಜನರಿದ್ದರೂ ಭೇದ ಭಾವ, ಕಪಟತನ ಸುಳಿದಿರಲಿಲ್ಲ. ಗೊರೂರು ರಾಮಸ್ವಾಮಿ ಐಯ್ಯಂಗಾರ್ ಚಿತ್ರಿಸಿರುವ ಹಳ್ಳಿಯ ಉದಾತ್ತ ವ್ಯಕ್ತಿ ಚಿತ್ರಗಳನ್ನು ಅಲ್ಲಿ ಕಾಣಬಹುದಿತ್ತು. ಕಾವ್ಯವಾಚನ ಭಜನೆ ನಡೆಯುತ್ತಿತ್ತು. ನಮ್ಮ ತಂದೆಗೆ ಸಾಹಿತ್ಯ–ಸಂಗೀತ ಎರಡರಲ್ಲೂ ಆಸಕ್ತಿ. ಪತ್ರಿಕೆ ತರಿಸುತ್ತಿದ್ದರು. ಮನೆಯಲ್ಲಿ ಪುರಾಣ ಗ್ರಂಥಗಳೊಂದಿಗೆ ಸಾಮಾಜಿಕ, ಐತಿಹಾಸಿಕ ಕಾದಂಬರಿಗಳೂ



ಇದ್ದವು. ಊರಿನ ಆಗು–ಹೋಗುಗಳಲ್ಲೂ ಅಪ್ಪ ಸಕ್ರಿಯರಾಗಿದ್ದರು. ನಮ್ಮೆಲ್ಲರ ಮೇಲೆ ಪ್ರಭಾವ ಬೀರಿದ ಇನ್ನೊಬ್ಬರು, ನಮ್ಮ ತಂದೆಯ ಸೋದರಮಾವ ಅಣ್ಣಯ್ಯಪ್ಪನವರು (ವೆಂಕಟಸುಬ್ಬಯ್ಯ). ಆಜಾನುಬಾಹು, ಹಲವು ಕ್ಷೇತ್ರಗಳಲ್ಲಿ ನೈಪುಣ್ಯತೆ ಸಾಧಿಸಿದ್ದರು; ಅವರ ಸಾಹಸೀ ಪ್ರವೃತ್ತಿ ಅವರಿದ್ದಾಗಲೇ ಐತಿಹ್ಯವಾಗಿತ್ತು. ಅವು ನವರತ್ನ ರಾಮರಾಯರ ನೆನಪುಗಳಲ್ಲೂ ದಾಖಲಾಗಿವೆ. ಒರಟು ಮಾತು, ನಡವಳಿಕೆ, ಪರೋಪಕಾರಿ ಬುದ್ಧಿ ಭವಿಷ್ಯ, ಪೌರೋಹಿತ್ಯಗಳಲ್ಲಿಯೂ ಪ್ರಸಿದ್ಧರಾಗಿದ್ದರು. ಮಕ್ಕಳಿಗೆ ಕಥೆ ಹೇಳುವುದರಲ್ಲಿ ನಿಷ್ಣಾತರು. ನಾವೆಲ್ಲ ಅಜ್ಜನ ಪ್ರಭಾವಲಯದಲ್ಲೇ ಬೆಳೆದವರು. ಚಂದ್ರನಂತೂ ಅವರ ಅಚ್ಚುಮೆಚ್ಚು.

ಅಣ್ಣಯ್ಯಪ್ಪನವರು ಪೌರೋಹಿತ್ಯ, ವೈದ್ಯಕೀಯ ಕೆಲಸಗಳಿಗೆ ಹಲವು ಹಳ್ಳಿಗಳಿಗೆ ಹೋಗುತ್ತಿದ್ದರು. ಸಿಂಧುಬ್ರಹ್ಮನ ದೇವಸ್ಥಾನದ ಪೂಜೆ ಮಾಡುತ್ತಿದ್ದರು. ಅವರು ಎಲ್ಲೇ ಹೋಗಲಿ, ಅವರ ಹಿಂದೆ ಚಂದ್ರನಿರುತ್ತಿದ್ದ. ದನಗಳಿಗೆ ಹುಲ್ಲು ಕೊಯ್ಯಲು, ಬಟ್ಟೆ ತೊಳೆಯಲು ನದಿಗೆ ಹೋಗುವಾಗ, ಗದ್ದೆ ಕೆಲಸಕ್ಕೆ ಹೋಗುವಾಗಲೆಲ್ಲ ಚಂದ್ರನನ್ನು ಕರೆದುಕೊಂಡು ಹೋಗುತ್ತಿದ್ದರು. ಅವನಿಗೆ ಸಣ್ಣ ಕುಡುಗೋಲು ಮಾಡಿಸಿಕೊಟ್ಟಿದ್ದರು. ಗದ್ದೆ ನಾಟಿಯಿಂದ ಹಿಡಿದು ಅಜ್ಜ ಮಾಡುತ್ತಿದ್ದ ಎಲ್ಲ ಕೆಲಸಗಳಲ್ಲಿ ಚಂದ್ರ ಜೊತೆಗಿರುತ್ತಿದ್ದ. ನಾನು ಅಜ್ಜನ ಜೊತೆಯಲ್ಲೇ ಕೆಲಸ ಮಾಡಿಕೊಂಡಿರುತ್ತೇನೆ, ಓದುವುದಕ್ಕೆ ಬೇರೆ ಊರಿಗೆ ಹೋಗುವುದಿಲ್ಲ ಎನ್ನುತ್ತಿದ್ದ.

ನಮ್ಮೂರಿನಲ್ಲಿ ಪ್ರಾಥಮಿಕ ಶಾಲೆ ಮಾತ್ರ ಇತ್ತು. ಮಾಧ್ಯಮಿಕ ವ್ಯಾಸಂಗಕ್ಕಾಗಿ ೫ ಕಿ.ಮೀ. ದೂರದ ಶುಕ್ರವಾರ ಸಂತೆಗೆ ಹೋಗಬೇಕಿತ್ತು. ಹೆಚ್ಚಿನ ಓದಿಗೆ ಸಕಲೇಶಪುರ ಹಾಸನಕ್ಕೆ ಹೋಗಬೇಕಿತ್ತು. ೭ನೇ ತರಗತಿ ಮುಗಿಸಿದ್ದ ಚಂದ್ರನನ್ನು ಮುಂದಿನ ಓದಿಗೆ ಬೆಂಗಳೂರಿಗೆ ಕಳುಹಿಸಬೇಕೆಂಬುದು ಅಮ್ಮ–ಅಪ್ಪನ ಆಸೆ. ನನ್ನ ಸಹಮತವೂ ಇತ್ತು. ಅದಕ್ಕೆ ಅವನು ಸುತರಾಂ ಸಿದ್ಧನಿರಲಿಲ್ಲ. ನಿಡಿಗೆರೆ, ಅಪ್ಪ–ಅಮ್ಮ, ಅಜ್ಜನನ್ನು ಬಿಟ್ಟಿರುವುದು ಚಂದ್ರನ ಕಲ್ಪನೆಗೂ ನಿಲುಕದ ಸಂಗತಿಯಾಗಿತ್ತು. ಎಲ್ಲರೂ ಸೇರಿ ಹರಸಾಹಸ ಮಾಡಿ ಚಂದ್ರನನ್ನು ಒಪ್ಪಿಸಿದ್ದಾಯಿತು. ಅಜ್ಜನ ಎಲ್ಲ ಗುಣಗಳನ್ನು ಅಂತರ್ಗತ ಮಾಡಿಕೊಂಡಿದ್ದ ಈ ಹಳ್ಳೀ ಹೈದನನ್ನು ಮಾಯಾನಗರಿಯ ನಾಜೂಕುತನಕ್ಕೆ ಒಗ್ಗಿಸುವುದು ಹೇಗೆ, ಎಂಬ ದೊಡ್ಡ ಸವಾಲು ನನ್ನ ಮುಂದಿತ್ತು. ಆಗ ನಾನಿನ್ನೂ ೨೨ರ ಯುವಕ. ಬಸ್ಸೇರಿದ ಮೇಲೆ ಆ ಚಿಂತೆ ಇನ್ನಷ್ಟು ಹೆಚ್ಚಿತು. ಬೆಂಗಳೂರಿನಲ್ಲಿ ಇಳಿದಾಗಲೂ ಚಿಂತೆ ಹಾಗೇ ಉಳಿದಿತ್ತು. ಚಂದ್ರ ಬೆಂಗಳೂರಿಗೆ ಹೊಂದಿಕೊಳ್ಳುವಂತೆ ಮಾಡಿದ್ದೊಂದು ಸಾಹಸಗಾಥೆ. ನಿಜವಾಗಿ ಅದೊಂದು ಸಾಧನೆ.

ಎಚ್.ಎ.ಎಲ್.ನಲ್ಲಿ ಉದ್ಯೋಗಿಯಾಗಿದ್ದ ನಾನು ಗವೀಪುರಂ ಬಡಾವಣೆಯಲ್ಲಿ ರೂಂ ಮಾಡಿದ್ದೆ. ಸನಿಹದಲ್ಲೇ ಮಾಸ್ತಿ, ಎಂ.ವಿ.ಸೀ. ಅಂತಹ ದಿಗ್ಗಜರಿದ್ದರು. ನಾವಿದ್ದ ವಠಾರದಲ್ಲೇ ನಮ್ಮ ದೊಡ್ಡಮ್ಮ ಇದ್ದರು. ಚಿಕ್ಕ ವಯಸ್ಸಿನಲ್ಲೇ ಕಿರುಕುಳ ಸಹಿಸಲಾರದೆ ಗಂಡನ ಮನೆಯಿಂದ ಹೊರಬಂದು ಅಡಿಗೆ ಕೆಲಸ ಮಾಡಿಕೊಂಡು, ನಾಲ್ಕು ಜನರಿಗೆ ಸಹಾಯ ಮಾಡುತ್ತ ಗೌರವಯುತ ಬದುಕು ಸಾಗಿಸುತ್ತಿದ್ದರು. ಚಂದ್ರನಿಗೆ ಎಂ.ವಿ.ಸೀ.

ವಿ.ಸೀ., ಅವರಂತಹ ಹಲವು ಹಿರಿಯರನ್ನು ಪರಿಚಯಿಸಿದ್ದರು. ಚಂದ್ರ ಎಂ.ವಿ.ಸೀ. ಅವರೊಡನೆ ಅವರು ಕೊನೆಯ ಉಸಿರಿರುವ ತನಕ ಅಚ್ಚು-ಮೆಚ್ಚಿನವನಾಗಿದ್ದ. ನನ್ನ ಸಹೋದ್ಯೋಗಿಯಾಗಿದ್ದ ಶೇ.ನಾಗರಾಜ್ ಮತ್ತು ಅವರ ತಮ್ಮ ನಮ್ಮ ವಠಾರದಲ್ಲೇ ಇದ್ದರು. ನಾಗರಾಜ್‌ಗೆ ಕನ್ನಡ ಚಳವಳಿಗಾರರ ಸಂಪರ್ಕವಿತ್ತು. ಮ.ರಾಮಮೂರ್ತಿ ವಾಟಾಳ್ ನಾಗರಾಜ್ ಅವರಿಗೆ ನಿಕಟವಾಗಿದ್ದರು. ಕನ್ನಡ ಚಳವಳಿ ಬಗ್ಗೆ ನಾಗರಾಜ್ ಹೇಳುವ ಮಾತನ್ನು ಆಸಕ್ತಿಯಿಂದ ಕೇಳುತ್ತಿದ್ದ. ನಾಗರಾಜ್ ಅವರೊಡನೆ ನಾನು, ಚಂದ್ರ ಚಳವಳಿ ಸಭೆ, ಹೋರಾಟಕ್ಕೆ ಒಂದೆರಡು ಬಾರಿ ಹೋದ ನೆನಪಿದೆ. ನಾನು ರಾಮಕೃಷ್ಣಾಶ್ರಮ, ಗಾಂಧೀಬಜಾರ್‌ಗೆ ಕರೆದುಕೊಂಡು ಹೋಗುತ್ತಿದ್ದೆ. ಇಷ್ಟಾದರೂ ಚಂದ್ರನಿಗೆ ಊರಿನ ಗೀಳೇನೂ ಕಮ್ಮಿಯಾಗಿರಲಿಲ್ಲ. ಚಪ್ಪಲಿ ಹಾಕಿಕೊಂಡು ನಡೆಯಲು ಬರುತ್ತಿರಲಿಲ್ಲ. ಸದಾ ಊರಿಗೆ ಹೋಗುವ ಕನಸು ಕಾಣುತ್ತಾ ಮಂಕಾಗಿರುತ್ತಿದ್ದ.

ನಿಧಾನವಾಗಿ ಬೆಂಗಳೂರಿಗೆ ಹೊಂದಿಕೊಳ್ಳತೊಡಗಿದ. ರೂಮಿಗೆ ಹತ್ತಿರದಲ್ಲೇ ಕೆಂಪಾಬುದಿ ಕೆರೆ ಇತ್ತು. ಆಗ ಅಲ್ಲಿ ಜನ ಸ್ನಾನ ಮಾಡುವುದು, ಬಟ್ಟೆ ಒಗೆಯುವುದು ಸಾಮಾನ್ಯವಾಗಿತ್ತು. ನಗರ ಈಗಿನಂತೆ ಕಾಂಕ್ರಿಟ್ ಕಾಡಾಗಿರಲಿಲ್ಲ. ನಾನು ಕೆಲಸಕ್ಕೆ ಹೋಗುವಾಗ ಅಡಿಗೆ ಮಾಡಿಟ್ಟಿರುತ್ತಿದ್ದೆ. ಸಮಯ ಸಾಕಷ್ಟಿರುತ್ತಿದ್ದುದರಿಂದ ಅಕ್ಕಪಕ್ಕದ ಮನೆಯವರೊಡನೆ ಬೆರೆಯುತ್ತಿದ್ದ. ಅವರು ಅಂಗಡಿಗೆ ಕಳಿಸಿದರೆ ಹೋಗುತ್ತಿದ್ದ. ಕಂಡವರನ್ನೆಲ್ಲಾ ಮಾತನಾಡಿಸುತ್ತಿದ್ದುದರಿಂದ ಹೆಚ್ಚು ಜನ ಪರಿಚಯವಾಗಿದ್ದರು. ಅವರಲ್ಲಿ ನಮ್ಮ ರೂಮಿನ ಹತ್ತಿರವೇ ಇದ್ದ ಸೈಕಲ್ ಷಾಪ್‌ನ 'ರೂಭಿ ಕೃಷ್ಣ' ಎಂಬ ಕುಖ್ಯಾತ ರೌಡಿಯೂ ಸೇರಿದ್ದ. ಒಮ್ಮೆ ಚಂದ್ರ ಊರಿಗೆ ಹೋಗಿದ್ದಾಗ ಈ ಕೃಷ್ಣ 'ಎಲ್ಲಿ ಸ್ವಾಮಿ ನಿಮ್ಮ ಹುಡುಗ' ಎಂದು ಗಟ್ಟಿಯಾಗಿ ಕೇಳಿದಾಗ ಮುಜುಗರಪಟ್ಟಿದ್ದೆ. ಓದಿಗೆ ಹೆಚ್ಚು ಗಮನ ಕೊಡುತ್ತಿಲ್ಲ ಎಂದು ದಂಡಿಸಿದ್ದೂ ಇದೆ. ಚಳವಳಿ, ರಾಜಕೀಯ ಸಭೆಗಳಿಗೆ ಹೋಗಿ ನನಗೆ ಕೋಪ ತರಿಸುತ್ತಿದ್ದುದೂ ಉಂಟು.

ಆ ಹೊತ್ತಿಗಾಗಲೇ ಆರ್.ಎನ್. ಎಂಬ ಇನಿಷಿಯಲ್ ರಾ.ನಂ. ಆಗಿ ಬದಲಾಗಿತ್ತು. ಪಠ್ಯ ಪುಸ್ತಕಗಳ ಮೇಲೆ ರಾ.ನಂ. ಚಂದ್ರಶೇಖರ ಎಂದು ಬರೆಯುತ್ತಿದ್ದ. ಇವನ ಬಗ್ಗೆ ಆತಂಕ ಹೆಚ್ಚುತ್ತಿತ್ತು. ಆ ಹೊತ್ತಿಗೆ ಹೇಮಾವತಿ ನದಿಗೆ ಅಣೆಕಟ್ಟು ಕಟ್ಟುವ ಕೆಲಸ ಆರಂಭವಾಗಿ ನಮ್ಮೂರು ಮುಳುಗಡೆ ಆಗುವುದು ಖಚಿತವಾಗಿತ್ತು. ನಮ್ಮ ತಂದೆ ಬಿಟ್ಟು ಉಳಿದವರೆಲ್ಲಾ ಬೆಂಗಳೂರಿಗೆ ಬರುವುದು ಅನಿವಾರ್ಯವಾಯಿತು. ಮನೆಯವರು ಬಂದರೆ ಚಂದ್ರನ ಓಡಾಟಕ್ಕೆ ಕಡಿವಾಣ ಬೀಳುತ್ತದೆಂದು ಭಾವಿಸಿದ್ದೆ; ಆದರೆ ಹಾಗೇನೂ ಆಗಲಿಲ್ಲ. ಅವನ ಸಾಮರ್ಥ್ಯಕ್ಕೆ ಸರಿಯಾಗಿ ಓದುತ್ತಿಲ್ಲ ಎಂಬ ಕೊರಗು; ಏನೂ ಮಾಡಲಾಗಲಿಲ್ಲ. ಉಲ್ಲೇಖಿಸಬೇಕಾದ ಸಂಗತಿಯೆಂದರೆ ಮನೆಯವರ ಬಗ್ಗೆ ಅಪಾರ ಕಾಳಜಿ ಪ್ರೀತಿಯಿಟ್ಟುಕೊಂಡಿದ್ದ, ವಯಸ್ಸಿಗೆ ಮೀರಿದ ಜವಾಬ್ದಾರಿ ಹೊರುತ್ತಿದ್ದ. ನಮ್ಮ ತಾಯಿಯ ಗೃಹಕೃತ್ಯ ನಿರ್ವಹಣೆ, ನಮ್ಮ ಬಂಧು ವರ್ಗದಲ್ಲಿ ದೊಡ್ಡ ಹೆಸರು ಮಾಡಿತ್ತು. ಅವರ ಶ್ರಮದಿಂದ ಚಂದ್ರ ಓದಿನತ್ತ ಗಮನ ನೀಡಿ ಎಸ್.ಎಸ್.ಎಲ್.ಸಿ. ಪಾಸಾದ. ಆ ನಂತರ ಕಾಲೇಜಿಗೆ ಹೋಗಲು ಒಪ್ಪದೆ, ಕೈಗಾರಿಕಾ ತರಬೇತಿ ಕೇಂದ್ರಕ್ಕೆ ಹೋಗಲಿಚ್ಛಿಸಿದ.

'Welder trade' ಸಿಕ್ಕಿತು. ಅವನಿಗೆ ಬರುತ್ತಿದ್ದ ಅಲ್ಪ ಸ್ಟೈಫಂಡ್‌ನಲ್ಲೇ ಮನೆಗೆ ಏನಾದರು ತರುತ್ತಿದ್ದ. ಉತ್ತಮ ಶ್ರೇಣಿಯಲ್ಲಿ ತರಬೇತಿ ಮುಗಿಸಿದ್ದರಿಂದ BEML ನಲ್ಲಿ ಅಪ್ರೆಂಟೀಸ್‌ಗೆ ಆಯ್ಕೆಯಾದ. ಆ ಕಾಲದಲ್ಲಿ ಸಾರ್ವಜನಿಕ ಉದ್ದಿಮೆಗಳಲ್ಲಿ 'ಕನ್ನಡ' ಎಂದರೆ 'ಏನ್ನಡ' ಅನ್ನುವ ವಾತಾವರಣವಿತ್ತು. ಈ ವಾತಾವರಣ ಚಂದ್ರನೊಳಗಿದ್ದ ಕನ್ನಡ ಹೋರಾಟಗಾರ ಜಾಗೃತನಾಗಲು ಪ್ರಚೋದನೆ ನೀಡಿತು. ಇವನು ಕನ್ನಡಪರ ಧ್ವನಿ ಎತ್ತುತ್ತಿರುವ ಸುದ್ದಿಗಳು ನನಗೆ ಬರುತ್ತಿದ್ದವು.

ಬಿ.ಇ.ಎಂ.ಎಲ್. ಕನ್ನಡ ಸಂಘ ಸ್ಥಾಪನೆಗೆ ಕರೆದಿರುವ ಸಭೆಗೆ ಹೋಗುತ್ತಿರುವುದಾಗಿ ತಿಳಿಸಿದಾಗ ಏನು ಹೇಳುವುದೂ ತೋಚದಾಗಿತ್ತು. ವಾಟಾಳ್ ನಾಗರಾಜ್ ಸಭೆ ಎಲ್ಲಿರಲಿ ಅಲ್ಲಿಗೆ ಹೋಗುತ್ತಿದ್ದ. ಅದೇ ಸಂದರ್ಭದಲ್ಲಿ ನಡೆದ ನಗರಸಭೆ ಚುನಾವಣೆಯಲ್ಲಿ ಕನ್ನಡ ಚಳವಳಿ ಅಭ್ಯರ್ಥಿಪರ ಪ್ರಚಾರ ಮಾಡಿ, ನಮ್ಮನ್ನೂ ಅವರಿಗೆ ಮತ ನೀಡಿ ಅನ್ನುವಷ್ಟು ಮುಂದುವರೆದಿದ್ದ. ಇದೇ ಸಂದರ್ಭದಲ್ಲಿ ನಡೆದ ಹೋರಾಟದಲ್ಲಿ ಪಾಲ್ಗೊಂಡು ಪೊಲೀಸ್ ಲಾಠಿ ಚಾರ್ಜ್‌ನಲ್ಲಿ ಕೈಮುರಿದುಕೊಂಡು ನನ್ನ ಕಣ್ಣು ತಪ್ಪಿಸಿ ತಿರುಗುತ್ತಿದ್ದ. ಮನೆಯವರಿಗೆ ಇವನದೇ ಚಿಂತೆ. ಈ ಹೊತ್ತಿಗೆ ಅನಿವಾರ್ಯ ಕಾರಣಗಳಿಂದ ನಾನು ಮನೆ ಬಿಟ್ಟು ನನ್ನ ಹೆಂಡತಿ ಮನೆಯಲ್ಲಿ ವಾಸಿಸುತ್ತಿದ್ದೆ. ಆಗ ನಮ್ಮ ಮನೆಯಲ್ಲಿ ಯಾರೂ ಸಂಪಾದನೆ ಮಾಡುತ್ತಿರಲಿಲ್ಲ. ತಪ್ಪದೇ ಪ್ರತಿ ತಿಂಗಳೂ ಮನೆಗೆ ಹೋಗಿ ಸಂಸಾರ ಸಾಗಿಸಲು ಹಣ ಕೊಟ್ಟು ಬರುತ್ತಿದ್ದೆ. ಒಮ್ಮೆ ತೀರ ಆತಂಕದಿಂದ ನಮ್ಮ ತಂದೆ ಚಂದ್ರನ ಚಟುವಟಿಕೆ ವಿಚಾರಿಸಿ ಬುದ್ಧಿ ಹೇಳಲು ತಿಳಿಸಿದ್ದರು. ಅಲ್ಲಿನ ಮಿತ್ರರನ್ನು ವಿಚಾರಿಸಿದಾಗ ಚಂದ್ರನಿಗೆ ಕನ್ನಡ ಚಳವಳಿ ಜತೆಗೆ, ಕಮ್ಯುನಿಸ್ಟರ ಸಂಪರ್ಕ, ಕಾರ್ಮಿಕ ಸಂಘದ ಸಂಪರ್ಕವೂ ಇರುವುದು ತಿಳಿಯಿತು. ನಾನೂ ಸಾರ್ವಜನಿಕ ಜೀವನದಲ್ಲಿ ಸಕ್ರಿಯನಾಗಿದ್ದುದರಿಂದ ಇವು ತಪ್ಪೆನಿಸದಿದ್ದರೂ, ಆಡಳಿತವರ್ಗಕ್ಕೆ ಇದು ಸಹ್ಯವಾಗದೆ ಕೆಲಸ ನೀಡದಿರಬಹುದು ಅನ್ನಿಸಿ, ಚಂದ್ರನನ್ನು ಹಿಡಿದು ಎಲ್ಲ ಸಂಗತಿಗಳನ್ನು ವಿವರಿಸಿ ತಿಳಿಹೇಳಿದೆ. ಬದಲಾಗುವ ಭರವಸೆ ನೀಡಿದ. ಆದರೆ ಕಾಲಮಿಂಚಿತ್ತು. ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ ಅನ್ನುವ ಹಾಗಾಯಿತು. ಊಹಿಸಿದ್ದಂತೆಯೇ ಆಡಳಿತ ವರ್ಗ ಕೆಲಸ ನೀಡಲಿಲ್ಲ.

ಈ ಘಟನೆಯ ನಂತರ ಚಂದ್ರ ಸ್ವಲ್ಪ ಅಧೀರನಾಗಿದ್ದ. ಕೆಲಸಕ್ಕಾಗಿ ಅಲೆದು ಸಣ್ಣಪುಟ್ಟ ಕಡೆ ಕೆಲಸ ಮಾಡಿ, ಕೊನೆಗೆ ವಿಡಿಯಾ(ಈಗ ಕೆನ್ನಾ ಮೆಟಲ್)ದಲ್ಲಿ ಕೆಲಸ ಸಂಪಾದಿಸಿದ. ಕೆಲಸ ಪರವಾಗಿರಲಿಲ್ಲ. ಆದರೆ, ೧೫ ಕಿ.ಮೀ. ಸೈಕಲ್‌ನಲ್ಲಿ ಕೆಲಸಕ್ಕೆ ಹೋಗಿ ಬರುತ್ತಿದ್ದ. ಮನೆಯ ಕಡೆ ಹೆಚ್ಚು ಗಮನ ನೀಡುತ್ತಿದ್ದ. ಇಲ್ಲಿ ಕಮ್ಯುನಿಸ್ಟರ ಜೊತೆಗೆ ಶಿವಲಿಂಗಯ್ಯ ನಂತಹವರ ಸ್ನೇಹದಿಂದ ಸಾಹಿತ್ಯದ ಕೆಲಸವನ್ನು ಮಾಡತೊಡಗಿದ್ದ. ಸ್ವಲ್ಪ ಸಂಯಮ ಬೆಳೆಸಿಕೊಂಡಿದ್ದ. ಹೆಚ್ಚು ಶ್ರಮಪಡುತ್ತಿದ್ದಾನೆ ಎಂಬುದು ನೋಡಿದರೆ ತಿಳಿಯುತ್ತಿತ್ತು. ನಮ್ಮ ತಂದೆಗೆ ಚಂದ್ರನ ಕಷ್ಟ ನೋಡಲಾಗದು. ಏನಾದರೂ ಮಾಡಿ ಹೆಚ್.ಎ.ಎಲ್.ಗೆ ಸೇರಿಸು ಎಂದು ಹೇಳುತ್ತಲೇ ಇದ್ದರು. ಉದ್ಯೋಗ ಸೃಷ್ಟಿಯಾದಾಗ, ಕಷ್ಟಪಟ್ಟು ಉದ್ಯೋಗ ವಿನಿಮಯ ಕೇಂದ್ರದಿಂದ ಸಂದರ್ಶನಕ್ಕೆ ತರಿಸಿದ್ದಾಯಿತು. ಕೆಲಸವೂ ಸಿಕ್ಕಿತು. ಕೆಲಸಕ್ಕೆ

ಸೇರಿದ ಹೊಸದರಲ್ಲಿ ಒಂದು ಮುಷ್ಕರ ನಡೆಯಿತು. ನನ್ನ ಜೊತೆಯಲ್ಲೇ ಸ್ವಯಂ ಸೇವಕನಾಗಿ ಕೆಂಬಾವುಟ ಹಿಡಿದದ್ದು ಕಂಡು ಇವನು ಬದಲಾಗುವುದಿಲ್ಲ ಅನ್ನಿಸಿತು. ಕಡಿದು ಹೋಗಿದ್ದ ಕಮ್ಯುನಿಸ್ಟ್‌ರ ಸಂಪರ್ಕ ಮತ್ತೆ ಚಿಗುರಿತು. CPM ಹಿತೈಷಿಯಾಗಿ ಸೂರ್ಯನಾರಾಯಣರಾವ್, ಎಂ.ಕೆ. ಭಟ್ ಅಂತಹವರು ಗುರುತಿಸುವ ಹಂತಕ್ಕೆ ಬೆಳೆದ. ಕಮ್ಯುನಿಸ್ಟ್ ಪಕ್ಷದ ಸದಸ್ಯತ್ವ ಅಸಾಧ್ಯ ಅನ್ನುವ ಕಾಲದಲ್ಲಿ ಇವನಿಗೆ ಸಿ.ಪಿ.ಎಂ. ಸದಸ್ಯತ್ವ ಸಿಕ್ಕಿತ್ತು. ಈ ಚಟುವಟಿಕೆ ಎಂದೂ ಅವನ ಕಾರ್ಖಾನೆ ಕೆಲಸಕ್ಕೆ ಅಡ್ಡಿ ಬಂದಿದ್ದಿಲ್ಲ. ಕೆಲಸದಲ್ಲಿ ನೈಪುಣ್ಯತೆ ಸಾಧಿಸಿ ಒಳ್ಳೆ ಹೆಸರು ಮಾಡಿದ್ದ. ನಾಲ್ಕು ಜನರ ಕೆಲಸ ಒಬ್ಬನೇ ಮಾಡುತ್ತಾನೆ ಒಳ್ಳೆಯದಲ್ಲ. ಮಿತಿಯಲ್ಲಿ ಕೆಲಸ ಮಾಡಲಿ, ತಿಳಿಸಿ ಎಂದು ಅವನ ಹಿರಿಯ ಸಹೋದ್ಯೋಗಿಗಳು ನನಗೆ ಹೇಳಿದ್ದುಂಟು. ನಾನು ಎಂದೂ ಕೆಲಸ ಕಮ್ಮಿ ಮಾಡು ಎಂದು ಹೇಳಲಿಲ್ಲ. ವೆಲ್ಡರ್ ಆಗಿ ಇವನು ಅನುಭವಿಸುತ್ತಿದ್ದ ಯಾತನೆ ಕಂಡು ಬೇರೆಡೆಗೆ ಬದಲಿಸಲು ಮನೆಯವರು ಹೇಳುತ್ತಿದರು. ಅವಕಾಶ ಬಂದಾಗ ಅವನನ್ನು ಕಂಪ್ಯೂಟರ್ ಇಲಾಖೆಗೆ ಬದಲಿಸಿದೆ.

ಇಲ್ಲಿ ಎರಡು ಸಂಗತಿ ಪ್ರಸ್ತಾಪಿಸಬೇಕು. ಕಮ್ಯುನಿಸ್ಟ್‌ರ ಪ್ರಭಾವದಿಂದ, 'ಕಾರ್ಮಿಕ' ಓಡಾಟದಿಂದ ದೂರ ಸರಿದು, ಕನ್ನಡ ಸಾಹಿತ್ಯ ಚಳವಳಿಯಲ್ಲಿ ಪಾಲ್ಗೊಳ್ಳುತ್ತಿದ್ದುದು ನಮ್ಮ ಕುಟುಂಬಕ್ಕೆ ಸಂತೋಷ ತಂದಿತ್ತು. ಆದರೂ ಮನೆ ಕಡೆ ಇವನ ಗಮನ ಅಷ್ಟಕ್ಕಷ್ಟೆ. ಇವನ ಜೀವನಶೈಲಿ ನೋಡಿ, ಇವನೆಲ್ಲಿ ಕೆಟ್ಟ ಸಹವಾಸಕ್ಕೆ ಬಿದ್ದು ಹಾಳಾಗುವನೋ ಎಂದು ತಂದೆ ಬಹಳ ಆತಂಕ ಪಟ್ಟುಕೊಂಡಿದ್ದರು. ಒಂದು ದಿನ ನಾವಿಬ್ಬರೇ ಹನುಮಂತನಗರ ರಾಮಾಂಜನೇಯ ಗುಡ್ಡದಡಿ ಮಾತನಾಡುತ್ತಾ ಕುಳಿತಿದ್ದಾಗ, ತಮ್ಮ ಆತಂಕವನ್ನು ಅವರು ತೋಡಿಕೊಂಡರು. ಬಹಳ ಚರ್ಚೆಯಾದ ನಂತರ, "ಈಗ ಬೆಳೆಯುತ್ತಿರುವ ಪರಿಸರ ಎಂ. ಚಿದಾನಂದಮೂರ್ತಿಗಳಂತಹ ಸಾತ್ವಿಕರ ಒಡನಾಟ ಪ್ರಖ್ಯಾತ ಲೇಖಕರ ಸಹವಾಸ ಅವನ ಕಾರ್ಯವ್ಯಾಪ್ತಿ, ಅಷ್ಟೇ ಪ್ರಾಮಾಣಿಕ ಸಾಮಾಜಿಕ ಸೇವೆ ಎಂಬ ವಿಚಾರವನ್ನು ಮನಗಾಣಿಸಿ ಅವನ ದಾರಿ ಅವನು ಹುಡುಕಿಕೊಂಡಿದ್ದಾನೆ. ಅವನನ್ನು ಅದರಿಂದ ಕದಲಿಸಬಾರದು. ಅವನು ದೊಡ್ಡ ವ್ಯಕ್ತಿಯಾಗುತ್ತಾನೆ. ಅದನ್ನು ನೋಡಲು ನಾವು ಇರದಿರಬಹುದು. ಆದರೆ ಅವನ ಭವಿಷ್ಯ ಉಜ್ವಲವಾಗಿದೆ" ಎಂದು ತಿಳಿಸಿದೆ. ಸಮಾಧಾನದ ಮನಸ್ಸಿನಿಂದ ಅವರ ಕಣ್ಣುಗಳಿಂದ ಎರಡು ಹನಿಗಳುದುರಿದವು. ಹೀಗೆ ತಂದೆಯವರು ತಮ್ಮ ಕುಟುಂಬದ ಕುಡಿಯನ್ನು ಭುವನೇಶ್ವರಿ ಸೇವೆಗೆ ಅರ್ಪಿಸಲು ಸಹಕರಿಸಿದರು.

ನಮಗೆ ಆಘಾತಕಾರಿಯಾದ ಸಂಗತಿ ಎಂದರೆ ದೇವರ ಅಸ್ತಿತ್ವವನ್ನೇ ಪ್ರಶ್ನಿಸುವ ಇವನ ಪ್ರವೃತ್ತಿ ಮತ್ತು ಸಂಪ್ರದಾಯವನ್ನು ಹೀಗಳೆಯುವ ಇವನ ನಡೆ, ಆಸ್ತಿಕತೆ ಸಂಪ್ರದಾಯದ ಬಗ್ಗೆ ಅಪಾರ ಶ್ರದ್ಧೆ ಹೊಂದಿದ್ದ ನಮ್ಮ ತಂದೆಗಂತೂ ಬಹಳ ವೇದನೆ ನೀಡುತ್ತಿತ್ತು. ಇನ್ನೊಂದು ಸಂಗತಿ ಎಂದರೆ ಇವನ ತಮ್ಮ ರಾಮಶೇಷನ ಮದುವೆ ಆದರೂ, ಇವನು ಮದುವೆ ಬಗ್ಗೆ ಗಮನ ನೀಡದೇ ಹೋಗಿದ್ದು. ತಾಯಿ-ತಂದೆ ಬಲವಂತಕ್ಕೆ ವಧೂನ್ವೇಷಣೆ ನಡೆಯುತ್ತಿತ್ತು. ನನ್ನ ಮಿತ್ರರಾದ ವೆಂಕಟರಾಮಯ್ಯನವರ

ಅಕ್ಕನ ಮಗಳು, ಗಾಯತ್ರಿ ಎಂಬ ಸುಂದರ ಹುಡುಗಿಯನ್ನು ಇವನ ಬಾಳ ಸಂಗಾತಿಯಾಗಿ ತಾಯಿ ಭುವನೇಶ್ವರಿ ಆಯ್ಕೆ ಮಾಡಿದ್ದಳೆಂದೆನಿಸುತ್ತದೆ. ಇವನು ನಮ್ಮ ಮತ್ತು ವೆಂಕಟರಾಮಯ್ಯನವರ ಒತ್ತಾಯಕ್ಕೆ ಕಟ್ಟುಬಿದ್ದು ಹೆಣ್ಣು ನೋಡಲು ಒಪ್ಪಿದ. ಹುಡುಗಿಯನ್ನು ನೋಡಿದ ಮೇಲೂ ಚಂದ್ರ ನಿರ್ಲಿಪ್ತನಾಗಿಯೇ ಇದ್ದ. ನಮ್ಮ ತಂದೆ ಹುಡುಗಿಗೆ ಹಾಡು ಹೇಳಲು ಸೂಚಿಸಿದಾಗ, ಗಾಯತ್ರಿ ಪ್ರಸಿದ್ಧ ಕವಿಯ ಕನ್ನಡಪರ ಗೀತೆಯನ್ನು ಮಧುರವಾಗಿ ಹಾಡಿದಳು. ಆಗ ತಲೆ ಎತ್ತಿ ನಸುನಕ್ಕ. ನಂತರ ಸರಳವಾಗಿ ವಿವಾಹವಾಯಿತು. **ಗಾಯತ್ರಿ ಮನೆ ನಿರ್ವಹಣೆಯ ಜವಾಬ್ದಾರಿಯನ್ನು ಸಂಪೂರ್ಣವಾಗಿ ಹೊತ್ತಿರುವುದರಿಂದ ನನ್ನ ತಮ್ಮ ಇಷ್ಟು ಕನ್ನಡ ಕೆಲಸ ಮಾಡಲು ಸಾಧ್ಯವಾಗಿದೆ. ಹಳ್ಳಿಯಲ್ಲಿ ಬೆಳೆದ ಮುಗ್ಧೆ ಗಾಯತ್ರಿ, ಗಂಡನ ಯಾವ ನಡೆಯನ್ನೂ ಪ್ರಶ್ನಿಸದೆ, ಅವನ ದಾರಿಯಲ್ಲಿ ನಡೆಯಲು ಬಿಟ್ಟಳು. ಅವನ ಕೋಪತಾಪವನ್ನು ಸಹಿಸಿ ಸಂಸಾರ ಸಾಗಿಸುತ್ತಿರುವ ಈ ಸಾಧ್ವಿಯ ತ್ಯಾಗ ದೊಡ್ಡದು.** ಹೀಗೆಂದ ಮಾತ್ರಕ್ಕೆ ಅವನು ಸಂಸಾರದ ಬಗ್ಗೆ ಗಮನ ನೀಡಲಿಲ್ಲ ಎಂದು ಭಾವಿಸಬೇಕಿಲ್ಲ. ಇವನ ಹಿರಿಯ ಮಗ ಅಜಯ್ ೭ ತಿಂಗಳಿಗೆ ಹುಟ್ಟಿದವ. ಅವನನ್ನು ಬೆಳೆಸಲು ಪಟ್ಟ ಶ್ರಮ ಅಪಾರ. ಮನೆಯ ಬಗ್ಗೆ ಇವನಿಗೆ ಅಪಾರ ಕಾಳಜಿ ಅಭಿಮಾನ. ಇವನು ಇನ್ನೊಬ್ಬರ ಕಷ್ಟಕ್ಕೆ ಬರೀ ಮರುಗುವುದಲ್ಲ, ಸಾಧ್ಯವಾದದ್ದನ್ನೂ ಮಾಡುತ್ತಾನೆ. ತಾನು ಹಾಕಿಕೊಂಡಿರುವ ಷರಟನ್ನೇ ಕೊಡುವಷ್ಟು ಉದಾರಿ, ಪರೋಪಕಾರಿ.

ಇನ್ನು ಅವನ ಕನ್ನಡ ಕೆಲಸದ ಬಗ್ಗೆ ಹೇಳುವ ಅಗತ್ಯವಿಲ್ಲ. ಅದು ಎಲ್ಲರಿಗೂ ತಿಳಿದಿದೆ. ಡಾ. ಎಂ. ಚಿದಾನಂದಮೂರ್ತಿಯವರು ಇವನಿಗೆ ಆರಾಧ್ಯದೈವ. ಅವರ ಮಾರ್ಗದರ್ಶನದಲ್ಲಿ ಪುಟವಿಟ್ಟ ಬಂಗಾರವಾಗಿ ಮೌಲಿಕ ಕೆಲಸ ಮಾಡುತ್ತಿದ್ದಾನೆಂಬ ಹೆಮ್ಮೆ ನಮ್ಮ ಕುಟುಂಬಕ್ಕಿದೆ. ಹಗಲು–ರಾತ್ರಿಯೆನ್ನದೆ ಕನ್ನಡ ಶಕ್ತಿ ಕೇಂದ್ರದಲ್ಲಿ ದುಡಿದಿದ್ದಾನೆ. ಚಿದಾನಂದಮೂರ್ತಿಗಳ ಛಾಯಾವರ್ತಿಯಾಗಿ ನಾಡಿನ ಪ್ರಖ್ಯಾತರ ವಿಶ್ವಾಸಗಳಿಸಿಕೊಂಡಿದ್ದಾನೆ. ಲೇಖಕನಾಗಿ, ಹೋರಾಟಗಾರನಾಗಿ, 'ರಾ.ನಂ.' ನಮ್ಮ ಕುಟುಂಬದ ಹೆಸರು ರಾಜ್ಯಮಟ್ಟದಲ್ಲಿ ಪರಿಚಯವಾಗುವಂತೆ ಮಾಡಿದ್ದಾನೆ ಎಂಬ ಹೆಮ್ಮೆ ಒಡಹುಟ್ಟಿದವರದು. ಇವನ ಗೆಳೆಯರ ಬಳಗ ನಿಜವಾಗಿ ಹೆಮ್ಮೆಪಡುವಂತಹದು. ರಮೇಶ್, ಉಪೇಂದ್ರ ಅಂತಹವರು ನಮ್ಮ ಕುಟುಂಬದ ಸದಸ್ಯರಂತಿದ್ದಾರೆ. ಇವನ ಗೆಳೆಯರ ಪಟ್ಟಿ ದೊಡ್ಡದು. ಗೆಳೆಯರೆಂದರೆ ಇವನಿಗೆ ಪ್ರಾಣ. ಅವರುಗಳು ತೋರುವ ವಿಶ್ವಾಸ, ಪ್ರೀತಿ, ನೆರವನ್ನೂ ಸದಾ ಕೃತಜ್ಞತೆಯಿಂದ ನೆನೆಯುತ್ತಿರುತ್ತಾನೆ.

ನಾನು ಕಾರ್ಮಿಕ ಸಂಘಟನೆಯಲ್ಲಿ ಬೆಳೆಯುತ್ತಿದ್ದಾಗ ಅವನ ಆಸೆಯನ್ನು ಬದಿಗಿರಿಸಿ ನನ್ನ ಬೆಳವಣಿಗೆಯಲ್ಲೇ ಸಂತೋಷ ಕಂಡಿದ್ದಾನೆ. ಬೆನ್ನೆಲುಬಾಗಿ ನಿಂತ ಇವನ ಬಗ್ಗೆ ಕೃತಜ್ಞತೆ ನನ್ನಲ್ಲಿ ಅಳಿಸಲಾಗದ ಛಾಪು ಮೂಡಿಸಿದೆ. ಕಾರ್ಮಿಕ ಸಂಘಟನೆಯಲ್ಲಿ ನಾನು ಉತ್ತುಂಗಕ್ಕೇರಿದಾಗಲೆಲ್ಲಾ ಸ್ವಾರ್ಥವನ್ನು ಮರೆತು, ನನ್ನ ಅಭ್ಯುದಯದಲ್ಲೇ ಮನಸಿಟ್ಟ ಇವನ ಗುಣ ನನಗೆ ಬಹಳ ಅಚ್ಚುಮೆಚ್ಚು. ನಾನು ಸಂಘದ ಕಾರ್ಯದರ್ಶಿಯಾದಾಗ ಹೆಚ್.ಎ.ಎಲ್. ಕಾರ್ಮಿಕ ಸಂಘದ ಸ್ವರ್ಣ ಮಹೋತ್ಸವ ಅಭೂತಪೂರ್ವವಾಗಿ ನಡೆಯಿತು. ಇಂತಹ ಸಮಾರಂಭ ಬೆಂಗಳೂರಿನ ಕಾರ್ಮಿಕ ಸಂಘಗಳ ಇತಿಹಾಸದಲ್ಲಿ

ಮೈಲಿಗಲ್ಲು. ಈ ಸಂದರ್ಭದಲ್ಲಿ ಸಂಘದ ಸ್ಮರಣ ಸಂಚಿಕೆಯೊಂದನ್ನು ತರಲು ಇವನ ದುಡಿಮೆ ಅಪಾರ. ಹಗಲಿರುಳೆನ್ನದೆ ದುಡಿದು, ತೆರೆಮರೆಯ ಕಾಯಾಗಿ ಅಗಣಿತ ಸಂಖ್ಯೆಯ ಉಪಯುಕ್ತ ಮಾಹಿತಿ ಸಂಗ್ರಹಿಸಿ, ಇವನು ಸಂಪಾದಿಸಿದ ಎಚ್.ಎ.ಇ.ಎ.ನ **ಹೆಜ್ಜೆಗುರುತುಗಳು** ಕರ್ನಾಟಕ ಕಾರ್ಮಿಕ ಸಂಘಟನೆಗಳ ಹೋರಾಟ ಇತಿಹಾಸದ ಬಗ್ಗೆ ಬೆಳಕು ಚೆಲ್ಲುವ ಕೃತಿ. ಈ ದಾಖಲೆ ಹೆಚ್.ಎ.ಎಲ್. ಕಾರ್ಮಿಕ ಸಂಘಕ್ಕೆ ಮಾತ್ರವಲ್ಲ ಕಾರ್ಮಿಕ ಚಳವಳಿಗೇ ಒಂದು ಯೋಗ್ಯ ಕೊಡುಗೆ. ಸಾರ್ವಜನಿಕ ಜೀವನದಲ್ಲಿ ಶುದ್ಧ ಚಾರಿತ್ರ್ಯ ಇಟ್ಟುಕೊಂಡು ಪ್ರಾಮಾಣಿಕ ಗೆಳೆಯರ ಪಡೆಯೊಂದನ್ನು ರಚಿಸಿ, ತನ್ನಂತೆ ಅವರನ್ನೂ ಕನ್ನಡದ ಕೆಲಸದಲ್ಲಿ ತೊಡಗಿಸಿ, ಬಾಳಿಗೆ ಧನ್ಯತೆ ಒದಗಿಸಿದ ಇವನ ಕಾರ್ಯವೈಖರಿ, ಇವನ ವೈರಿಗಳೂ ಮೆಚ್ಚುವಂತಹದು.

ಇಲ್ಲಿಯವರೆಗೆ ಇವನ ಸಾರ್ವಜನಿಕ ಬದುಕು ಕನ್ನಡ ನಾಡುನುಡಿಗೆ ಮಾಡಿದ ಮಾಡುತ್ತಿರುವ ಸೇವೆಯನ್ನು ನೋಡಿದ್ದಾಯಿತು. ಇವನ ವೈಯಕ್ತಿಕ ಬದುಕಿಗೆ ಬಂದರೆ ಎದ್ದು ಕಾಣುವ ಯಾವ ದೋಷವೂ ಇವನಲ್ಲಿಲ್ಲ. ಸೋಮಾರಿತನದ ಶತ್ರು, ಆರ್ಥಿಕ ವ್ಯವಹಾರದಲ್ಲಿ ಬೆಂಕಿಯಂತೆ ಪರಿಶುದ್ಧ, ಪರರ ಕಷ್ಟಗಳಿಗೆ ಸ್ಪಂದಿಸುವ ಪೂರ್ವಾಪರ ನೋಡದೆ ಸಹಾಯ ಮಾಡುವ ಇವನ ಗುಣ ವಿಶೇಷವಾದ್ದು.

ಒಮ್ಮೆ ನಾವು ಪ್ರಯಾಣಿಸುತ್ತಿದ್ದ ಕಾರ್ಖಾನೆಯ ವಾಹನ ಮುಂದೆ ಬರುತ್ತಿದ್ದ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದು, ಅದರ ಚಾಲಕನ ಮೇಲೆ ಹರಿದು ಕಾಲು ತುಂಡಾಗಿ ತೀವ್ರ ರಕ್ತಪಾತವಾಗುತ್ತಿತ್ತು. ಆಗ ಬೆಳಗಿನ ೭.೦೦ ಗಂಟೆ ಇರಬಹುದು, ಸ್ಥಳ ಶೂಲೆ ವೃತ್ತ ಮತ್ತು ದೊಮ್ಮಲೂರ ನಡುವೆ ಇರುವ ಮಿಲಿಟರಿ ಆಸ್ಪತ್ರೆ ಹತ್ತಿರ. ಆಗ ನಾನು ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿ. ಬಸ್‌ನಲ್ಲಿ ಪ್ರಯಾಣಿಸುತ್ತಿದ್ದವರೆಲ್ಲಾ ಬಸ್‌ನಿಂದ ಕೆಳಗಿಳಿದು ನೋಡಿ, ಬೇರೆ ಬಸ್ ಹತ್ತಿ ಕಾರ್ಖಾನೆಗೆ ಧಾವಿಸುವ ಆತುರದಲ್ಲಿದ್ದರು. ನಾನೂ ಸೇರಿದಂತೆ ಯಾರಿಗೂ ನರಳುತ್ತಿದ್ದ ಗಾಯಾಳುವಿನ ಬಗ್ಗೆ ಗಮನವಿಲ್ಲ. ರಸ್ತೆಯಲ್ಲಿ ರಕ್ತದ ಕೋಡಿ ಹರಿಯುತ್ತಿದೆ. ತಕ್ಷಣ ನನ್ನ ತಮ್ಮ ಡ್ರೈವರ್ ಜತೆಗೂಡಿ, ಆ ಗಾಯಾಳುವನ್ನು ದಾರಿಯಲ್ಲಿ ಬರುತ್ತಿದ್ದ ರಿಕ್ಷಾ ಒಂದರಲ್ಲಿ ಹಾಕಿಕೊಂಡು ಅವನನ್ನು ಬದುಕಿಸಲು ಸನಿಹದ ಮಿಲಿಟರಿ ಆಸ್ಪತ್ರೆಗೆ ಧಾವಿಸಿದ. ಅಲ್ಲಿ ಗಾಯಾಳುವಿಗೆ ಚಿಕಿತ್ಸೆ ನೀಡಲು ನಿರಾಕರಿಸಿದ್ದರಿಂದ ನಮ್ಮ ಕಾರ್ಖಾನೆಯ ಹತ್ತಿರವಿದ್ದ ನಮ್ಮ ಆಸ್ಪತ್ರೆಗೆ ಕರೆತಂದು ಅಲ್ಲಿ ಸೇರಿಸಿ, ಅವನ ವಿವರ ಕೇಳಿ ಅವರ ಬಂಧುಗಳಿಗೆ ವಿಷಯ ಮುಟ್ಟಿಸಿ, ಚಿಕಿತ್ಸೆಗೆ ಅವನನ್ನು ಆಪರೇಷನ್ ಥಿಯೇಟರಿಗೆ ಕರೆದುಕೊಂಡು ಹೋಗುವವರೆಗೂ ಅವನೊಡನೆ ಇದ್ದು, ಅವನಿಗೆ ಚಿಕಿತ್ಸೆ ಆಗುತ್ತಿರುವುದನ್ನು ಖಾತ್ರಿ ಮಾಡಿಕೊಂಡು, ಕೆಲಸಕ್ಕೆ ಬಹಳ ತಡವಾಗಿ ಬಂದ. ತಕ್ಷಣ ನನ್ನನ್ನು ಕಂಡು ವಿವರಗಳೆಲ್ಲವನ್ನು ತಿಳಿಸಿ, ಆಸ್ಪತ್ರೆಗೆ ದೂರವಾಣಿ ಮಾಡಿ ಅವನ ಆರೋಗ್ಯದ ಕಡೆಗೆ ಗಮನ ನೀಡುವಂತೆ, ವೈದ್ಯಕೀಯ ಸಿಬ್ಬಂದಿಗೆ ತಿಳಿಸಲು ನನಗೆ ಒತ್ತಾಯಿಸಿದ. ಅಂದಿನ ನನ್ನ ವರ್ತನೆ ನನಗೇ ನಾಚಿಕೆ ತಂದಿತು. ಆದರೆ ನನ್ನ ತಮ್ಮ ಅಲ್ಲಿ ತನ್ನತನವನ್ನು ತಾನು ಮರೆದಿದ್ದ. ಗಾಯಾಳುವಿನ ಬಗ್ಗೆ ಗಮನವೀಯದೆ ಕೆಲಸಕ್ಕೆ ಬಂದ ನಾನೆಲ್ಲಿ? ಅವನ ನೆರವಿಗೆ ಎಲ್ಲವನ್ನೂ ಮರೆತು ಧಾವಿಸಿದ ನನ್ನ ತಮ್ಮನೆಲ್ಲಿ?

ಜವಾಬ್ದಾರಿಯುತ ಸ್ಥಾನದಲ್ಲಿದ್ದ ನಾನು ಆ ಕೆಲಸ ಮಾಡಬೇಕಿತ್ತು. ಆದರೆ ಕರ್ತವ್ಯ ಭಾರ ಅದಲು ಬದಲಾಗಿತ್ತು. ಇದೊಂದು ಸಣ್ಣ ಉದಾಹರಣೆ.

ಈ ನನ್ನ ತಮ್ಮ ಸಂಚಾರಪ್ರಿಯ. ದಿನಕ್ಕೆ ಕನಿಷ್ಟ ೧೦-೧೨ ಕಿ.ಮೀ. ನಡಿಗೆ. ನಡುಗೆಯಲ್ಲೂ ನಿಧಾನವಿಲ್ಲ. ಇವನ ದೈನಂದಿನ ಕಾರ್ಯದಂತೆ ಚುರುಕು. ಸದಾ ಚಿಂತನಶೀಲ ಮನೋಭಾವ, ಮಾತು ಚಿನಕುರುಳಿಯಂತೆ, ಯಾರನ್ನೇ ಆಗಲಿ ತನ್ನ ವಾದ ಸರಣಿಯಿಂದ ಗೆಲ್ಲುವ ಜಾಣ್ಮೆ, ಬರವಣಿಗೆ, ಮಾಹಿತಿ ಸಂಗ್ರಹಣೆ, ಹಿರಿಯ ಲೇಖಕರು-ವಿದ್ವಾಂಸರೊಡನೆ ಒಡನಾಟ, ಒಡಹುಟ್ಟಿದವರ ಜತೆ ಆತ್ಮೀಯ ಸಂಬಂಧ ಇವನಲ್ಲಿ ಎದ್ದು ಕಾಣುವ ಗುಣಗಳು. ಕೊನೆಯ ಪಕ್ಷ ತಿಂಗಳಿಗೊಮ್ಮೆಯಾದರೂ ತನ್ನ ಒಡಹುಟ್ಟಿದವರ ಮನೆಗಳಿಗೆ ತೆರಳಿ ಅವರ ಬಗ್ಗೆ ವಿಚಾರಿಸುವ ಹೃದಯವಂತಿಕೆ ಇವನದ್ದು. ತನ್ನ ಊರು, ಮನೆತನ, ಗೆಳೆಯರೆಂದರೆ ಅತೀವ ಹೆಮ್ಮೆ. ಸದಾ ಸಮಯಪ್ರಜ್ಞೆಯ ಹರಿಕಾರ, ಹೇಳಿದ ಸಮಯಕ್ಕೆ ಮೊದಲೇ ಹಾಜರು, ಮಾತುಗಾರಿಕೆ ಭಾಷಣದಲ್ಲೂ ಅಷ್ಟೇ. ಎದ್ದು ಕಾಣುವ ಸಮಯಪ್ರಜ್ಞೆ, ನಿಖರವಾದ ಮಾಹಿತಿ, ಕೊಟ್ಟ ಅಂಕಿ-ಅಂಶಗಳೂ ಎಂದಿಗೂ ತಪ್ಪಿದ್ದಿಲ್ಲ. ಸ್ವಾಭಿಮಾನಿ, ಯಾರ ಹಂಗನ್ನೂ, ದಾಕ್ಷಿಣ್ಯವನ್ನು ಬಯಸದ ಗುಣ. ಇಂತಹ ಈ ಸ್ವಾಭಿಮಾನಿಗೆ ಅರವತ್ತು ತುಂಬುತ್ತಿರುವ ಹಿನ್ನೆಲೆಯಲ್ಲಿ ಇವನು ಇನ್ನೂ ನೂರ್ಕಾಲ ಬಾಳಿ, ಕನ್ನಡದ ಜನರಿಗೆ ನೆರವಾಗಲಿ ಎಂಬುದು ಹಿರಿಯನಾದ ನನ್ನ ಹಾರೈಕೆ.

(ಹೀಗೆಂದ ಶ್ರೀಕಂಠಯ್ಯನವರು ತಾ॥ ೨೭-೧೦-೧೨ರಂದು ನಿಗದಿ ಪಡಿಸಿದ್ದ ಸನ್ಮಾನ ಸಮಾರಂಭಕ್ಕೆ ಮುನ್ನ ತಾ॥ ೧೪-೧೦-೧೨ರಂದು ತೀರಿಕೊಂಡದ್ದು ರಾ.ನಂ. ಮನದಲ್ಲಿ ಉಳಿದುಹೋದ ಒಂದು ವ್ಯಥೆ.)




ರಾ.ನಂ. ಸಂತತಿ ಸಾವಿರವಾಗಲಿ

■ ಬಾ.ಹ. ಉಪೇಂದ್ರ

ರಾಮನಾಥಪುರ ನಂಜುಂಡಭಟ್ಟ ಚಂದ್ರಶೇಖರ ಅಂದರೆ 'ಯಾರು?' ಎಂದು ಕೇಳುವ ಎಲ್ಲರಿಗೂ, ರಾ.ನಂ. ಎಂದ ಕೂಡಲೆ ಅರ್ಥವಾಗುತ್ತದೆ. ಆರ್. ನಂಜುಂಡಭಟ್ಟ – ಪಿ.ಕೆ. ಜಯಲಕ್ಷ್ಮಿ ದಂಪತಿಗಳ ಮಗನಾಗಿ ಹುಟ್ಟಿದ ರಾ.ನಂ. ಜನನ, ಬಾಲ್ಯ, ಪ್ರಾಥಮಿಕ ವಿದ್ಯಾಭ್ಯಾಸ ಎಲ್ಲವೂ ಹಾಸನ ಜಿಲ್ಲೆಯ ನಿಡಿಗೆರೆಯಲ್ಲೇ ಆದರೂ ತಮ್ಮ ಪೂರ್ವಿಕರ ಸ್ಥಳನಾಮ 'ರಾಮನಾಥಪುರ'ವನ್ನೇ ತಮ್ಮ ಹೆಸರಿನಲ್ಲಿ ಮುಂದುವರಿಸಿಕೊಂಡು ಬಂದಿದ್ದಾರೆ. ಏಳು ಮಂದಿ ಮಕ್ಕಳ ದೊಡ್ಡ ಕುಟುಂಬವಾದರೂ, ಎಲ್ಲರಿಗೂ ವಿದ್ಯಾಭ್ಯಾಸ ಒದಗಿಸಿದ ತಂದೆಯ ಬಗ್ಗೆ ಇನ್ನಿಲ್ಲದ ಅಭಿಮಾನ. ತಂದೆಯ ತಿಥಿಯ ದಿನದಂದು ಯಾವುದಾದರೂ ಕನ್ನಡ ಕಾರ್ಯಕ್ರಮ ಹಮ್ಮಿಕೊಂಡು, ಬಂಧುವರ್ಗದೊಡನೆ ಕನ್ನಡ ಚಳವಳಿಯ ಮಿತ್ರವರ್ಗಕ್ಕೂ ಭೋಜನವೇರ್ಪಡಿಸುವುದು ಇವರ ಚಾಳಿ. ಹಾಗೆ ನೋಡಿದರೆ, ರಾ.ನಂ. ಏನಾದರೊಂದು ಕಾರಣ ಹುಡುಕಿ, ಆಗಾಗ ಮಿತ್ರವರ್ಗಕ್ಕೆ ಭೋಜನಕೂಟ ಏರ್ಪಡಿಸುತ್ತಲೇ ಇರುತ್ತಾರೆ.

ಇವರು ನನಗೆ ಪರಿಚಯವಾದದ್ದು ಸುಮಾರು ೧೯೮೭ರಲ್ಲಿ. ಡಾ.ಎಂ.ಚಿದಾನಂದಮೂರ್ತಿಯವರ ಪತ್ರವನ್ನು ದಿನಪತ್ರಿಕೆಯ ವಾಚಕರ ವಾಣಿಯಲ್ಲಿ ಓದಿ, ನಾನೂ 'ದೂರದರ್ಶನಕ್ಕೆ ಮುತ್ತಿಗೆ' ಹಾಕಲು ಹೋಗಿದ್ದೆ. ಧರಣಿ ಕುಳಿತಿರುವಾಗ, ನಮ್ಮ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ (ಈಗ ನಿವೃತ್ತರು) ಬೆ.ರಾ.ನಾಗರಾಜ್‌ರವರು ರಾ.ನಂ.ರನ್ನು ನನಗೆ ಪರಿಚಯಿಸಿದರು. ಅಂದಿನಿಂದ ಆತ್ಮೀಯರಾದ ರಾ.ನಂ., ಇಂದಿನವರೆಗೂ ಕನಿಷ್ಠ ನೂರು



ಭೋಜನವನ್ನಾದರೂ ಹಾಕಿಸಿರಲಿಕ್ಕೆ ಸಾಕು! 'ಇದು ನಮ್ಮಪ್ಪನಿಂದ ಬಂದ ಗುಣ. ನಮ್ಮಪ್ಪ ಪ್ರತಿವರ್ಷ ಇಡೀ ಊರಿಗೇ ಊಟ ಹಾಕಿಸುತ್ತಿದ್ದರು' ಎಂದು ಅವರ ಭೂತದಯಾಗುಣವನ್ನು ಅವರ ತಂದೆಯವರಿಗೆ ಆರೋಪಿಸುತ್ತಾರೆ!

ಹುಟ್ಟೂರು ನಿಡಿಗೆರೆ ಹಾಗೂ ಪೂರ್ವಿಕರ ರಾಮನಾಥಪುರವೆಂದರೆ ಇವರಿಗೆ ಅಭಿಮಾನ, ಅಚ್ಚುಮೆಚ್ಚು. ಇತ್ತೀಚೆಗೆ ಪತ್ನಿ, ಮಕ್ಕಳು, ಸೊಸೆಯಂದಿರೊಡನೆ ಅಲ್ಲಿಗೆ ಪ್ರವಾಸ ಹೋಗಿ, ಹಳೆಯ ಸಂಬಂಧಗಳನ್ನೆಲ್ಲಾ ನವೀಕರಿಸಿಕೊಂಡು, ಮಕ್ಕಳು ಸೊಸೆಯಂದಿರಿಗೂ ಪರಿಚಯಿಸಿಕೊಂಡು ಬಂದಿದ್ದಾರೆ.

ರಾನಂ ಮಿತ್ರವರ್ಗ ಅಪಾರ. ಅಲ್ಲಿ ಯಾರ್‍ಯಾರಿದ್ದಾರೆಂದು ಹೇಳುವುದಕ್ಕಿಂತಲೂ ಯಾರ್‍ಯಾರಿಲ್ಲವೆಂದು ಹೇಳುವುದು ಸುಲಭವೇನೋ! ಶತಾಯುಷಿಗಳಿಂದ ತೊಡಗಿ ಚಿಕ್ಕ ಮಕ್ಕಳವರೆಗೂ, ಸಂಪ್ರದಾಯಸ್ಥ ಆಸ್ತಿಕರಿಂದ ತೊಡಗಿ ಕ್ರಾಂತಿಕಾರಿ ನಾಸ್ತಿಕರವರೆಗೂ ಅವಿದ್ಯಾವಂತರಿಂದ ತೊಡಗಿ ಪಿಎಚ್.ಡಿ. ವಿದ್ವಾಂಸರವರೆಗೂ, ಕಾರ್ಮಿಕರಿಂದ ತೊಡಗಿ ಉನ್ನತ ಅಧಿಕಾರಿಗಳವರೆಗೂ, ದಿನಗೂಲಿ ನೌಕರರಿಂದ ತೊಡಗಿ ದೊಡ್ಡ ಉದ್ಯಮಿಗಳವರೆಗೂ, ಏನೂ ಬರೆಯದವರಿಂದ ತೊಡಗಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರವರೆಗೂ – ಹರಡಿಕೊಂಡಿದೆ ಅವರ ಮಿತ್ರವರ್ಗ. ಎಲ್ಲರೊಂದಿಗೂ ಅವರವರದೇ ಫ್ರೀಕ್ವೆನ್ಸಿಯಲ್ಲೇ ಸಂಭಾಷಿಸುವ ತಾದಾತ್ಮ್ಯತೆ ಹೊಂದಿದ್ದಾರೆ. ಆದರೆ ಯಾವ ಮಿತ್ರತ್ವವನ್ನೂ ತಮ್ಮ ಸ್ವಂತದ ಕೆಲಸಗಳಿಗೆ ಉಪಯೋಗಿಸಿಕೊಂಡವರಲ್ಲ. ಇತ್ತೀಚೆಗೆ ರೂ. ೧೯,೦೦೦/– ಖರ್ಚುಮಾಡಿ ಖಾಸಗಿ ಆಸ್ಪತ್ರೆಯಲ್ಲಿ ಕಣ್ಣಿನ ಲೇಸರ್ ಆಪರೇಷನ್ ಮಾಡಿಸಿಕೊಂಡರು. ಎಚ್.ಎ.ಎಲ್. ಆಸ್ಪತ್ರೆಯ ವೈದ್ಯರನ್ನು ಪ್ರಾರ್ಥಿಸಿಕೊಂಡಿದ್ದರೆ, ಅಥವಾ ಯಾರಾದರೂ ಕಾರ್ಮಿಕ ಮುಂದಾಳುಗಳ ಮೂಲಕ ಹೇಳಿಸಿದ್ದರೆ (ಇವರಿಗೆ ಎಚ್.ಎ.ಎಲ್.ನ ಎಲ್ಲ ಕಾರ್ಮಿಕ ನಾಯಕರೂ ಗೊತ್ತು), ಅಥವಾ ಯಾರಾದರೂ ಹಿರಿಯ ಅಧಿಕಾರಿಗಳಿಂದ ಹೇಳಿಸಿದ್ದರೆ (ಇವರಿಗೆ ಎಚ್.ಎ.ಎಲ್.ನ ಸಾಕಷ್ಟು ಹಿರಿಯ ಅಧಿಕಾರಿಗಳೂ ಗೊತ್ತು), ಇದೇ ಆಪರೇಷನ್ನನ್ನು ಎಚ್.ಎ.ಎಲ್. ಆಸ್ಪತ್ರೆಯ ಮೂಲಕ ಉಚಿತವಾಗಿ ಮಾಡಿಸಿಕೊಳ್ಳಬಹುದಿತ್ತು. ಆದರೆ, ಇವರು ತಮ್ಮ ಹಣ ಖರ್ಚುಮಾಡಿದರೇ ಹೊರತು ಯಾರನ್ನೂ ಕೇಳುವ ಗೋಜಿಗೆ ಹೋಗಲಿಲ್ಲ. ಅದೇ ಯಾರಾದರೂ ತಮ್ಮ ಮಿತ್ರರಿಗೆ ಇದರ ಅವಶ್ಯಕತೆಯಿದ್ದರೆ, ಖಂಡಿತವಾಗಿಯೂ ಯಾರನ್ನು ಬೇಕಾದರೂ ಕಂಡು ಯಾರಿಂದ ಬೇಕಾದರೂ ಹೇಳಿಸಿ, ಅವರಿಗೆ ಆ ಸಹಾಯ ಮಾಡಲು ಯಾವಾಗಲೂ ಮುಂದೆ! ಇವರು ಮೊದಲು 'ವೆಲ್ಡರ್' ಆಗಿ ಕೆಲಸ ಮಾಡುತ್ತಿದ್ದ ವಿಡಿಯಾ (ಈಗ ಕೆನ್ನಾಮೆಟಲ್) ಸಂಸ್ಥೆಯಲ್ಲಿ, ವ್ಯವಸ್ಥಿತ ಷಡ್ಯಂತ್ರದ ಭಾಗವಾಗಿ ತಮ್ಮ ಮಿತ್ರನಿಗೆ ಸಂಬಂಧಿಸಿದ ವಿವಾದದಲ್ಲಿ, ಅವನಿಗಾಗಿ ತಾವೂ ಸಿಲುಕಿಕೊಂಡರು. ಕಡೆಗೆ ಮಿತ್ರ ಹುಷಾರಾಗಿ ಪಾರಾದ ಇವರು ಮಾತ್ರ ಶಿಕ್ಷೆಗೆ ಗುರಿಯಾಗಿ ಸಂಸ್ಥೆಯನ್ನೇ ಬಿಡಬೇಕಾಗಿ ಬಂತು (ಹಾಗಾಗಿರದಿದ್ದರೆ ನನಗೆ ಇವರ ಪರಿಚಯಲಾಭವಾಗುತ್ತಿರಲಿಲ್ಲವೇನೋ?). ಇವರ ಮಿತ್ರರಿಗೂ, ಇವರ ಮೇಲೆ ಅಪರಿಮಿತ ವಿಶ್ವಾಸ. ನಮ್ಮ ಚೇತನ್‌ನ ಹೆರಿಗೆಗೆಂದು, ನನ್ನ ಹೆಂಡತಿ ಶಾಂತಾ ತನ್ನ ಅಕ್ಕನೊಡನೆ, ಗುಣಶೀಲ ನರ್ಸಿಂಗ್ ಹೋಂಗೆ ಹೋಗಿದ್ದಳು. ಅಂದು ಯಾವುದೇ

ವಾರ್ಡ್‌ನಲ್ಲಿಯೂ ಪ್ರವೇಶ ದೊರಕದಿದ್ದುದರಿಂದ, ಡಾಕ್ಟರರು ಮಾರನೆಯ ದಿನ ಬರಲು ಹೇಳಿದರು. ಮತ್ತೆ ಅಷ್ಟು ದೂರ ಪ್ರಯಾಣ ಮಾಡಲಿಚ್ಛಿಸದ ಶಾಂತಾ, ಸೀದಾ ಹತ್ತಿರದಲ್ಲಿದ್ದ ರಾನಂ ಮನೆಗೆ ಹೋಗಿ, ಅದು ನಮ್ಮ ಮನೆಯ ಇನ್ನೊಂದು ಭಾಗವೋ ಎಂಬಂತೆ ಭಾವಿಸಿ ಅಲ್ಲೇ ಉಳಿದುಕೊಂಡು, ನಂತರ ನನಗೆ ದೂರವಾಣಿ ಮೂಲಕ ಹಾಗೆಂದು ತಿಳಿಸಿದಳು. ಇದಲ್ಲವೆ ಭೇದವೆಣಿಸದ ಬಾಂಧವ್ಯ.

ಇತ್ತೀಚೆಗೆ 'ಕನ್ನಡ ಶಿಕ್ಷಣ ಮಾಧ್ಯಮ'ಕ್ಕಾಗಿ ಸರ್ಕಾರವನ್ನು ಒತ್ತಾಯಿಸುವ ಬಗ್ಗೆ ಸಲಹೆ ಬಂದಾಗ ರಾ.ನಂ. ನಿರ್ದಾಕ್ಷಿಣ್ಯವಾಗಿ, "ಜನಸಾಮಾನ್ಯರ ಮಕ್ಕಳ ಬದುಕಿನೊಂದಿಗೆ ಚೆಲ್ಲಾಟವಾಡಬಾರದು. ಅವರ ಮಕ್ಕಳ ಭವಿಷ್ಯಕ್ಕೆ ನಾವು ಹೊಣೆಯಾದೇವೆಯೆ? ಕನ್ನಡ ಮಾಧ್ಯಮದಲ್ಲಿ ಓದಿದ ಮಕ್ಕಳಿಗೆ ಕೆಲಸ ಸಿಗುವ ಸಾಧ್ಯತೆಗಳೆಷ್ಟೆಂಬುದು ತಿಳಿಯದ ವಿಷಯವೇನಲ್ಲ. ಇತರರ ಮಕ್ಕಳ ಶಿಕ್ಷಣದ ಬಗ್ಗೆ ತೀರ್ಮಾನ ಕೊಡಲು ನಾವು ಯಾರು? ತಮ್ಮ ಮಕ್ಕಳ ಶಿಕ್ಷಣದ ಬಗ್ಗೆ ಜನರು ತಾವೇ ನಿರ್ಧಾರ ತೆಗೆದುಕೊಳ್ಳಲಿ. ಆದ್ದರಿಂದ 'ಕನ್ನಡ ಶಿಕ್ಷಣ ಮಾಧ್ಯಮ'ಕ್ಕಾಗಿ ಸರ್ಕಾರವನ್ನು ಒತ್ತಾಯಿಸುವ ಯಾವುದೇ ಪ್ರಯತ್ನ ಕೂಡದು" ಎಂದರು. ಈ ಮಾತನ್ನು ಕೇಳಿದ ಯಾರಾದರೂ 'ಇದೇನು? ಕನ್ನಡ ಹೋರಾಟಗಾರರಾದ ರಾ.ನಂ. ಇಂಗ್ಲಿಷ್ ಮಾಧ್ಯಮದ ಪರವಾಗಿದ್ದಾರೆಯೆ?' ಎಂದಾರು! ಆದರೆ ವಾಸ್ತವದಲ್ಲಿ, ರಾ.ನಂ. ತಮ್ಮ ಇಬ್ಬರು ಮಕ್ಕಳಿಗೂ ಕನ್ನಡ ಮಾಧ್ಯಮದಲ್ಲಿಯೇ ಶಿಕ್ಷಣ ಕೊಡಿಸಿದ್ದಾರೆ. ಕಿರಿಯ ಮಗ ಚೇತನ್ ಕನ್ನಡ ಮಾಧ್ಯಮದಲ್ಲಿಯೇ ಓದಿ ಇಂಜಿನಿಯರಿಂಗ್ ಮುಗಿಸಿ, ಪ್ರತಿಷ್ಠಿತ ಸಂಸ್ಥೆಯೊಂದರಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದಾನೆ. 'ನಾನು ಮಾಡಲಿಚ್ಛಿಸದ್ದನ್ನು ಎಂದೂ ಬೇರೆಯವರು ಮಾಡಲಿ ಎಂದು ನಿರೀಕ್ಷಿಸಲಾರೆ' ಎಂಬುದು ರಾ.ನಂ.ರವರ ಧೋರಣೆ. ಅವರ ಇಂತಹ ಪ್ರಾಮಾಣಿಕತೆಯಿಂದಾಗಿಯೇ ಅವರ ಯಾವುದೇ ಕೆಲಸಕ್ಕೂ, ಸಲಹೆಗಳಿಗೂ ಎಂದೂ ಎಲ್ಲೂ ವಿರೋಧ ಬಾರದು.

ರಾ.ನಂ.ಗೆ ಪ್ರವಾಸವೆಂದರೆ ಇಷ್ಟ. ಅದು ಕನ್ನಡಕ್ಕೆ ಸಂಬಂಧಿಸಿದ ಚಳವಳಿ ಪ್ರವಾಸವೇ ಆಗಿರಲಿ, ಕುಟುಂಬಕ್ಕೆ ಸಂಬಂಧಿಸಿದ ತೀರ್ಥಯಾತ್ರೆಯೇ ಆಗಿರಲಿ (ಶ್ರದ್ಧೆಯಿಂದ ನಾಸ್ತಿಕರಾದರೂ, ಕುಟುಂಬದವರ ನಂಬಿಕೆಗಾಗಿ ಎಲ್ಲಾ ಆಸ್ತಿಕ ಚಟುವಟಿಕೆಗಳಲ್ಲೂ ವಿನಮ್ರರಾಗಿ ಪಾಲ್ಗೊಳ್ಳುತ್ತಾರೆ!) ಮಿತ್ರರ ಆಗ್ರಹಪೂರ್ವಕ ಮಾನಸ ಸರೋವರ-ಕೈಲಾಸ ಪರ್ವತ ಯಾತ್ರೆಗಳೇ ಆಗಲಿ-ಎಲ್ಲದಕ್ಕೂ ಸೈ! ಆದರೆ ಎಲ್ಲಿ ಹೋದರೂ ಅವರ ಕಣ್ಣು ಹುಡುಕುವುದು ಕನ್ನಡವನ್ನೇ. ಮಿತ್ರರೊಡನೆ ಉತ್ತರಭಾರತದ 'ಚಾರ್‌ಧಾಮ್' ಯಾತ್ರೆಗೆ ಹೋದಾಗ, ಭಾರತದ ಕೊಟ್ಟಕೊನೆಯ ಊರಿನಲ್ಲಿಯ ಚಹದಂಗಡಿಯವನು, ಕನ್ನಡದಲ್ಲಿ ಬೋರ್ಡು ಬರೆಸಿದ್ದುದನ್ನು ಕಂಡು ಖುಷಿಯಾಗಿ ಆತನ ಅಂಗಡಿಯಲ್ಲಿ ಚಹಾ ಕುಡಿದು, ಆತನ ಕನ್ನಡ ಪ್ರೇಮಕ್ಕೆ ಭಕ್ಷೀಸು ನೀಡಿ ಬಂದುದಲ್ಲದೆ, ಅದನ್ನು ಕುರಿತು ಪತ್ರಿಕೆಗೆ ಫೋಟೋ ಸಹಿತ ಲೇಖನವನ್ನೂ ಬರೆದರು! ಹಿಮಾಲಯದ ಜ್ಯೋತಿರ್ಲಿಂಗದ ಪೂಜೆ ಮಾಡುವ ಅರ್ಚಕರು ಕನ್ನಡದವರು ಎಂಬುದನ್ನೂ ಸಹ ಕಂಡುಕೊಂಡು, ಅವರೊಂದಿಗೂ ಕನ್ನಡದಲ್ಲಿ ಮಾತನಾಡಿ

ಖುಷಿಪಟ್ಟವರು ಇವರು! ಕೇದಾರನಾಥ ಜ್ಯೋತಿರ್ಲಿಂಗದ ಪೂಜೆ ಮಾಡುವ ಅರ್ಚಕರೂ, ಕೇದಾರದ ಊಕಿಮಠದಲ್ಲಿ ಪೂಜೆ ಮಾಡುವವರು ದಾವಣಗೆರೆಯ ಕನ್ನಡಿಗರೆಂದೂ ತಿಳಿದು, ಅವರೊಡನೆ ಕನ್ನಡದಲ್ಲಿ ಮಾತನಾಡಿ ಸಂತಸಪಟ್ಟು, ಅವುಗಳ ವಿವರಗಳನ್ನು 'ಹಿಮಾಲಯದ ತಪ್ಪಲಲ್ಲೂ ಕನ್ನಡದ ಧ್ಯಾನ' ಎಂಬ ಲೇಖನದಲ್ಲಿ ವಿವರಿಸಿದ್ದಾರೆ.

ಎಚ್.ಎ.ಎಲ್.ನಲ್ಲಿ ಇವರೊಬ್ಬ ಸಾಮಾನ್ಯ ಕಾರ್ಮಿಕ. ಇವರ ಸಂಬಳ ಇವರ ಕುಟುಂಬದ ಜೀವನಕ್ಕೆ ಸಾಕಾಗುವಷ್ಟು ಮಾತ್ರ. ಅದರಲ್ಲೇ ಇವರು ಪ್ರತಿವರ್ಷ ಒಬ್ಬ ಬಡ ವಿದ್ಯಾರ್ಥಿಯ ಖರ್ಚುಗಳನ್ನು ವಹಿಸಿಕೊಂಡು ಧನಸಹಾಯ ಮಾಡುತ್ತಾರೆ. ಆದರೆ ಯಾರಿಗೂ ಇದರ ಸುಳಿವನ್ನು ಬಿಟ್ಟುಕೊಡುವುದಿಲ್ಲ. ಇದುವರೆಗೂ ಸುಮಾರು ವಿದ್ಯಾರ್ಥಿಗಳಿಗೆ ಹೀಗೆ ವಾರ್ಷಿಕ ಧನಸಹಾಯ ಮಾಡಿದ್ದಾರೆ. ಆ ವಿದ್ಯಾರ್ಥಿಗಳ ಜಾತಿ ಯಾವುದೆಂಬುದನ್ನೂ ಕೂಡ ತಿಳಿದುಕೊಳ್ಳುವ ಗೋಜಿಗೆ ಹೋಗಿಲ್ಲ.

ರಾ.ನಂ.ರವರ ಸ್ಮರಣ ಶಕ್ತಿ ಅಗಾಧ. ಬಹಳಷ್ಟು ಜನರಿಗೆ ಅದರ ಅನುಭವ ವಾಗಿರುವುದು ಕನ್ನಡ-ಕನ್ನಡಿಗ-ಕರ್ನಾಟಕಕ್ಕೆ ಸಂಬಂಧಿಸಿದ ಅಂಕಿ-ಅಂಶಗಳ ಮೂಲಕ. ಅದಷ್ಟೇ ಅಲ್ಲ- ಇವರು ನೂರಾರು ಜನರ ದೂರವಾಣಿ ಸಂಖ್ಯೆಗಳನ್ನು ನೆನಪಿನಿಂದ ಬಲ್ಲರು. ಮೊಬೈಲ್ ಬರುವ ಮೊದಲು ಇವರಿಗೆ ಬಹಳ ಬೇಡಿಕೆ ಇತ್ತು. ಯಾರದೇ ದೂರವಾಣಿ ಸಂಖ್ಯೆಯನ್ನು 'ಥಟ್ಟಂತ' ಹೇಳುತ್ತಿದ್ದರು. ಗೋಕಾಕ್ ಚಳವಳಿ ಸಾಹಿತಿಗಳ ಕಲಾವಿದರ ಬಳಗ ಹಾಗೂ ಕನ್ನಡ ಶಕ್ತಿ ಕೇಂದ್ರಗಳ ಕಾಲದಲ್ಲಿ ಎಂ.ಚಿದಾನಂದಮೂರ್ತಿ ಹಾಗೂ ಇತರರು, ಅವರಿಗೆ ಬೇಕಾದ ಯಾರದೇ ದೂರವಾಣಿ ಸಂಖ್ಯೆಯನ್ನಾದರೂ ರಾ.ನಂ.ರನ್ನು ಕೇಳುತ್ತಿದ್ದರು. ಈಗ ಮೊಬೈಲ್ ಬಂದಿರುವುದರಿಂದ ಬೇರೆಯವರು ಇವರನ್ನು ಕೇಳದಿದ್ದರೂ, ಇವರು ಮಾತ್ರ ಎಲ್ಲರ ದೂರವಾಣಿ ಸಂಖ್ಯೆಗಳಿಗೂ ಈಗಲೂ ತಮ್ಮ ಸ್ಮರಣ ಶಕ್ತಿಯನ್ನೇ ನಂಬಿದ್ದಾರೆ. ಎಚ್.ಎ.ಎಲ್.ನ ಕಂಪ್ಯೂಟರ್ ವಿಭಾಗದಲ್ಲಿ ಇನ್‌ಪುಟ್-ಔಟ್‌ಪುಟ್ (ಆವಕ-ಜಾವಕ) ಸೆಕ್ಷನ್ನಿನಲ್ಲಿ ಕೆಲಸ ಮಾಡುವ ಇವರು, ಸಾವಿರಾರು ಕಾರ್ಮಿಕರ ಸಂಬಳ, ಇನ್ಸೆಂಟಿವ್ ಇತ್ಯಾದಿ ವಿವರಗಳನ್ನು ತಾಳೆ ನೋಡುವ ಕೆಲಸದಲ್ಲಿ ನುರಿತು, ಸಂಖ್ಯೆಗಳ ಸಮುದ್ರದಲ್ಲಿ ಮುಳುಗಿ, ಬಹುಶಃ ಇಂತಹ ಅದ್ಭುತ ಸ್ಮರಣ ಶಕ್ತಿಯನ್ನು ಗಳಿಸಿಕೊಂಡಿದ್ದಾರೆನಿಸುತ್ತದೆ.

'ರಾ.ನಂ.ರವರದು ಮೊಬೈಲು, ಸ್ವಂತ ವಾಹನವಿಲ್ಲದ ಬದುಕು. ಆದರೂ ಯಾವತ್ತೂ ಯಾವ ಕಾರ್ಯಕ್ರಮವನ್ನೂ ತಪ್ಪಿಸಿದವರೇ ಅಲ್ಲ. ಸಮಯಕ್ಕೆ ಸರಿಯಾಗಿ ಹಾಜರಾಗುತ್ತಾರೆ' ಎಂದಾಕ್ಷಣ ಅವರು ಯಾವ ಗಾಡಿ ಇಟ್ಟುಕೊಂಡಿದ್ದಾರೆಂದಾಗಲೀ ಯಾವ ಮಾಡೆಲ್ ಮೊಬೈಲ್ ಫೋನ್ ಇಟ್ಟುಕೊಂಡಿದ್ದಾರೆಂದಾಗಲೀ ತಿಳಿಯುವ ಕುತೂಹಲಬೇಡ. ಏಕೆಂದರೆ, ಅವರು ಮೊಬೈಲನ್ನೂ ಇಟ್ಟುಕೊಂಡಿಲ್ಲ, ವಾಹನವನ್ನೂ ಇಟ್ಟುಕೊಂಡಿಲ್ಲ. ಹೌದೆ? ಹಾಗಾದರೆ ಅದು ಹೇಗೆ ಎಲ್ಲ ಕಡೆ ಸಮಯಕ್ಕೆ ಸರಿಯಾಗಿ ಹಾಜರಾಗುತ್ತಾರೆ? ಇದಕ್ಕೆ ಅವರು ಹೇಳುವ ಉತ್ತರ 'ಶಿಸ್ತು'. ಮೊದಲು ನಾವು ಮನಸ್ಸು ಮಾಡಬೇಕು. ಎಂದೂ ನಾನು ತಡವಾಗಿ ಹೋಗಲಾರೆ ಎಂಬ ಸಂಕಲ್ಪ ಮಾಡಬೇಕು.

ನಂತರ ಉಳಿದ ಹಾದಿಗಳು ತಾವಾಗಿಯೇ ತೋಚುತ್ತವೆ. ಆದ್ದರಿಂದಲೇ ನಾನು ಬೆಂಗಳೂರು ಬಂದ್ ದಿನವೂ ಕೂಡ ತಪ್ಪದೆ ಸಮಯಕ್ಕೆ ಸರಿಯಾಗಿ ಪ್ರತಿ ವಾರವೂ ಸಾಹಿತಿಗಳ–ಕಲಾವಿದರ ಬಳಗದ, ನಂತರ ಕನ್ನಡ ಶಕ್ತಿ ಕೇಂದ್ರದ ಬುಧವಾರದ ಸಭೆಗೆ ಸರಿಯಾಗಿ ಹಾಜರಾಗುತ್ತಿದ್ದೆ' ಎಂದು. ಅವರ ಕಿರಿಯ ಮಗನಿಗೆ ಆಪರೇಷನ್ ಇದ್ದ ದಿನದಂದೂ ಕೂಡ ಅವರು ಬಳಗದ ಬುಧವಾರದ ಸಭೆಯನ್ನು ತಪ್ಪಿಸಿಲ್ಲ. ಬಸ್ಸಾದರೆ ಬಸ್ಸು, ಆಟೋ ಆದರೆ ಆಟೋ, ಇಲ್ಲದಿದ್ದರೆ ಮಿತ್ರ ರಮೇಶನ ಸ್ಕೂಟರ್ ಸವಾರಿ. ಏನೂ ಇಲ್ಲದಿದ್ದರೆ ಕಾಲ್ನಡಿಗೆಯಲ್ಲೇ ಸೈ! ಅವರು ಎಷ್ಟೋ ಸಲ ಅವರ ಮನೆಯಿಂದ (ಕತ್ರಿಗುಪ್ಪೆ) ಮೇಷ್ಟ್ರ ಮನೆಗೆ (ಅತ್ತಿಗುಪ್ಪೆ) ಹಾಗೂ ಹಿಂದಿರುಗಿ ಅವರ ಮನೆಗೆ ಕಾಲ್ನಡಿಗೆಯಲ್ಲೇ ಮರಳಿಹೋಗಿರುವುದನ್ನು ನಾನು ಬಲ್ಲೆ. ಯಾರ ಮೇಲೂ ಅವಲಂಬಿತರಾಗದೆ, ತಮ್ಮ ಸ್ವಂತ ಕಾಲ ಮೇಲೆ ಸ್ವತಂತ್ರರಾಗಿದ್ದಾರೆ! ಹೀಗೆ ನಡೆದಾಡುವ ಮೂಲಕ ಒಳ್ಳೆಯ ಆರೋಗ್ಯವನ್ನೂ ಕೂಡ ಕಾಪಾಡಿಕೊಂಡಿದ್ದಾರೆ. ಎಂತಹ ಬಹುಮುಖೀ ಪ್ರಯೋಜನ ಅಲ್ಲವೆ?

ಬೇರೆಲ್ಲರೂ ಮೊಬೈಲ್ ಇಟ್ಟುಕೊಂಡಿರುವುದು ರಾ.ನಂ.ಗೆ ಲಾಭ. ನಾವು ಅವರನ್ನು ಹಿಡಿಯಲಾಗುವುದಿಲ್ಲ ಏಕೆಂದರೆ ಅವರ ಬಳಿ ಮೊಬೈಲಿಲ್ಲ. ಆದರೆ ನಮ್ಮೆಲ್ಲರ ಬಳಿಯೂ ಮೊಬೈಲುಗಳಿವೆ. ಅವರ ಸ್ಮರಣೆಯಲ್ಲಿ ನಮ್ಮೆಲ್ಲರ ಮೊಬೈಲು ಸಂಖ್ಯೆಗಳೂ ಸುರಕ್ಷಿತವಾಗಿವೆ. ಹೀಗಾಗಿ, ರಾ.ನಂ. ಅವರಿಗೆ ಬೇಕಾದಾಗ ನಮ್ಮನ್ನು ಸಂಪರ್ಕಿಸಬಲ್ಲರು. ಆದರೆ ನಮಗೆ ಬೇಕಾದಾಗ ನಾವು ಅವರನ್ನು ಸಂಪರ್ಕಿಸಲಾರೆವು; ಅವರಾಗಿ ನಮ್ಮ ಸಂಪರ್ಕಕ್ಕೆ ಬರುವವರೆಗೂ ನಾವು ಕಾಯಬೇಕು. ಇದು ನಮ್ಮ ಪಾಲಿನ ಕಷ್ಟ.

ಕನ್ನಡ ಹೋರಾಟಗಾರರ ಇತಿಹಾಸವನ್ನು ನೋಡಿದರೆ, ಮೊದಮೊದಲು ಬಹಳಷ್ಟು ಜನರು ಸ್ಥಿತಿವಂತರಾಗಿದ್ದರೂ, ಕೊನೆಕೊನೆಗೆ ನಿರ್ಗತಿಕರಾಗಿ, ಅತಂತ್ರರಾಗಿ ಹೇಳಹೆಸರಿಲ್ಲದಂತೆ ಮೂಲೆಗುಂಪಾಗಿ ಹೋಗಿರುವುದು ಎದ್ದು ಕಾಣುತ್ತದೆ. ನಿವೃತ್ತಿಗೆ ಇನ್ನು ಹತ್ತೇ ವರ್ಷ ಎನ್ನುವಾಗಲೂ, ರಾ.ನಂ. ಇನ್ನೂ ಸ್ವಂತ ಮನೆ ಮಾಡಿಲ್ಲದಿದ್ದಾಗ ನೋಡಿದ ನಮಗೆಲ್ಲಾ ಮನಸ್ಸಿನ ಮೂಲೆಯಲ್ಲಿ ಒಂದು ರೀತಿಯ ಕೊರಗು, ಆತಂಕ ಅತೃಪ್ತಿಗಳು ಮನೆಮಾಡಿದ್ದವು. ಆದರೆ ಅವರು ಇದಾವುದಕ್ಕೂ ಆಸ್ಪದ ಕೊಡದೆ ಮೊದಲು ಮಕ್ಕಳಿಬ್ಬರನ್ನೂ ಓದಿಸಿ, ನಂತರ ಕತ್ರಿಗುಪ್ಪೆಯಲ್ಲಿ ಸ್ವಂತ ಮನೆ ಮಾಡಿ ಎ.ಇ.ಸಿ.ಎಸ್. ನಿವೇಶನವನ್ನೂ ನೋಂದಣಿ ಮಾಡಿಸಿಕೊಂಡಾಗ, ನಮ್ಮೆಲ್ಲರ ಕೊರಗು, ಆತಂಕ ಅತೃಪ್ತಿಗಳು ದೂರವಾದವು. ಇವೆಲ್ಲವನ್ನೂ ಸಾಲಮಾಡಿ ಗಳಿಸಿಕೊಂಡಿದ್ದು ಇನ್ನೇನು ಸಾಲಗಳೆಲ್ಲಾ ಮುಗಿಯುವ ಹಂತದಲ್ಲಿವೆ. ನಿವೃತ್ತಿಯ ನಂತರ, ಎ.ಇ.ಸಿ.ಎಸ್. ನಿವೇಶನದಲ್ಲಿ ಮನೆ ಕಟ್ಟಿಸಿ, ನಿವೃತ್ತಿ ನಂತರದ ಜೀವನಕ್ಕೆ ದಾರಿ ಮಾಡಿಕೊಂಡು, ಉಳಿದ ಜೀವನವನ್ನು ನಿರಾತಂಕವಾಗಿ ಕಳೆಯುವ ಯೋಜನೆಯಲ್ಲಿರುವ ರಾ.ನಂ., ಸುಲಲಿತ ಆರ್ಥಿಕ ಯೋಜನೆಯಲ್ಲಿಯೂ ಕನ್ನಡ ಹೋರಾಟಗಾರರಿಗೆ ಮಾದರಿಯಾಗಿದ್ದಾರೆ.

ವಿದ್ಯಾರ್ಥಿ ದೆಸೆಯಲ್ಲಿಯೇ ಅ.ನ.ಕೃ. ಭಾಷಣಗಳಿಂದ ಪ್ರೇರಿತರಾಗಿದ್ದ ರಾ.ನಂ. ೯ನೇ ತರಗತಿಯಲ್ಲಿರುವಾಗಲೇ ಕನ್ನಡದಲ್ಲಿ ಸಹಿ ಮಾಡಲಾರಂಭಿಸಿದ್ದುದರಲ್ಲಿ

ಆಶ್ಚರ್ಯವೇನಿಲ್ಲ! ಅವರ ಐ.ಟಿ.ಐ. ಅಂಕಪತ್ರದಲ್ಲಿಯೇ ಅವರ ಕನ್ನಡ ಸಹಿಯನ್ನು ಕಾಣಬಹುದು. ಈಗಲೂ ಸಹ ಅವರು ಸಾಧ್ಯವಿರುವೆಡೆಯಲ್ಲೆಲ್ಲಾ ಕನ್ನಡವನ್ನೇ ಬಳಸುತ್ತಾರೆ. ಬ್ಯಾಂಕಿನ ಚೆಕ್ಕುಗಳಲ್ಲಿ, ಅಂಗಡಿಯವರು ಕೊಡುವ ರಸೀತಿಗಳಲ್ಲಿ ಪಿ.ಎಫ್.ಸಾಲದ ಅರ್ಜಿಗಳಲ್ಲಿ, ಎ.ಇ.ಸಿ.ಎಸ್. ನಿವೇಶನದ ನೋಂದಣಿ ಪತ್ರದಲ್ಲಿ – ಹೀಗೆ ಎಲ್ಲೆಲ್ಲೂ ಅವರದ್ದು ಕನ್ನಡವೇ! ಎ.ಇ.ಸಿ.ಎಸ್. ನಿವೇಶನದ ನೋಂದಣಿಪತ್ರವನ್ನು ಇಂಗ್ಲಿಷಿನಲ್ಲಿ ಮಾತ್ರವೇ ಮಾಡಿಸಿರುವುದು ಎಂದು ಎ.ಇ.ಸಿ.ಎಸ್. ನಿರ್ದೇಶಕರು ಹೇಳಿದಾಗ, "ಹಾಗಿದ್ದರೆ ನನಗೆ ಆ ನಿವೇಶನವೇ ಬೇಡ. ನನ್ನ ಹಣವನ್ನು ಹಿಂದಿರುಗಿಸಿ" ಎಂದು ಹಠ ಹಿಡಿದರು. ಆಗ ಬೇರೆ ದಾರಿ ಕಾಣದೆ, ಎ.ಇ.ಸಿ.ಎಸ್. ನಿರ್ದೇಶಕರು ಇವರಿಗಾಗಿ ನಿವೇಶನದ ನೋಂದಣಿ ಪತ್ರವನ್ನು ಇಂಗ್ಲಿಷಿನಿಂದ ಕನ್ನಡಕ್ಕೆ ಅನುವಾದಿಸಿ, ಆ ನೋಂದಣಿ ಪತ್ರವನ್ನು ಕನ್ನಡದಲ್ಲಿಯೇ ಇವರ ಹೆಸರಿಗೆ ನೋಂದಣಿ ಮಾಡಿಸಿಕೊಟ್ಟರು. ಎಚ್.ಎ.ಎಲ್.ನ ಇಲಾಖೆಗಳಲ್ಲಿ ಮುಂಬಡ್ತಿಗಾಗಿ ನಡೆಸುವ ಪರೀಕ್ಷೆಗಳು ಇಂಗ್ಲಿಷಿನಲ್ಲಿ ಇರುತ್ತಿದ್ದವು. ರಾ.ನಂ. ಅವರು ಎಸ್.ನಾಗರಾಜ್, ಹೆ.ಮ.ದೊಡ್ಡಕಣ್ಣಯ್ಯ, ರಂಗಾ ಬೆ.ರಾ.ನಾಗರಾಜ್ ಮುಂತಾದವರೊಡಗೂಡಿ, 'ಹಿವಿಕಾ ಜಾಗೃತ ಕನ್ನಡಿಗರು' ಎಂಬ ಸಂಘಟನೆಯನ್ನು ರಚಿಸಿಕೊಂಡು, ಇಲಾಖೆಗಳ ಪರೀಕ್ಷೆ, ಚಲನವಲನ ಪತ್ರ, ದ್ವಾರ ಪತ್ರ ರಜಾ ಚೀಟಿ ಇತ್ಯಾದಿಗಳನ್ನು ಕನ್ನಡದಲ್ಲಿ ಬರೆಯಲು ಅವಕಾಶ ಮಾಡಿಕೊಡಬೇಕೆಂದು ಒಂದು ಮನವಿ ಪತ್ರ ಸಿದ್ಧಪಡಿಸಿ, ಅದಕ್ಕೆ ಸುಮಾರು ೫೦೦೦ದಷ್ಟು ಕಾರ್ಮಿಕರ ಸಹಿ ಸಂಗ್ರಹಿಸಿ, ಕಾರ್ಮಿಕ ಮುಖಂಡರಾಗಿದ್ದ ಆನಂದರೆಡ್ಡಿ ಸುಬ್ರಮಣಿ, ಶ್ರೀಕಂಠಯ್ಯ ರಂಗಧಾಮಪ್ಪ ಮುಂತಾದವರ ಮೂಲಕ ಆಡಳಿತ ವರ್ಗದೊಂದಿಗೆ ಮಾತುಕತೆ ನಡೆಯುವಂತೆ ಮಾಡಿದರು. ಅದು ಯಶಸ್ವಿಯಾಗಿ ಇಲಾಖೆಗಳ ಪರೀಕ್ಷೆಗಳನ್ನು ಚಲನವಲನ ಪತ್ರ, ದ್ವಾರ ಪತ್ರ ಹಾಗೂ ರಜಾ ಚೀಟಿಗಳನ್ನು ಕನ್ನಡದಲ್ಲಿ ಬರೆಯಲು ಅವಕಾಶ ಮಾಡಿಸಿಕೊಟ್ಟಿದ್ದರು. ಇದನ್ನು ಪ್ರಪ್ರಥಮವಾಗಿ ಯಶಸ್ವಿಯಾಗಿ ಬಳಸಿ ಕೊಂಡಿದ್ದು ರಾ.ನಂ. ಆಗ ಎಚ್.ಎ.ಎಲ್.ನಲ್ಲಿ ಸರ್ವೀಸಿನಲ್ಲಿದ್ದ ಕತೆಗಾರ ಈಶ್ವರಚಂದ್ರ ವಿದ್ಯಾಸಾಗರರಿಂದ ಕನ್ನಡದಲ್ಲಿ ಪ್ರಶ್ನಪತ್ರಿಕೆ ಮಾಡಿಸಿ, ಇವರ ಉತ್ತರಪತ್ರಿಕೆಯನ್ನು ರಾಮಶೇಷ್, ರಾಮಮೂರ್ತಿ ಮುಂತಾದವರಿಂದ ಮೌಲ್ಯಮಾಪನ ಮಾಡಿಸಲಾಯಿತು. ಆ ಕನ್ನಡದಲ್ಲಿ ಬರೆದ ಪರೀಕ್ಷೆಯಲ್ಲಿ ರಾ.ನಂ., ಇಂಗ್ಲಿಷಿನಲ್ಲಿ ಪರೀಕ್ಷೆ ಬರೆದ ಇತರೆಲ್ಲರಿಗಿಂತಲೂ ಅತ್ಯಧಿಕ ಅಂಕಗಳನ್ನು ಪಡೆದು ಮುಂಬಡ್ತಿ ಪಡೆದರು. ರಾ.ನಂ. ಚಲನವಲನ ಪತ್ರ, ದ್ವಾರ ಪತ್ರ ಹಾಗೂ ರಜಾ ಚೀಟಿಗಳನ್ನು ಅಂದಿನಿಂದ ಇಂದಿನವರೆಗೂ ಕನ್ನಡದಲ್ಲೇ ಭರ್ತಿಮಾಡಿ ಉಪಯೋಗಿಸುತ್ತಿದ್ದಾರೆ.

ಇಡೀ ಪ್ರಪಂಚದಲ್ಲಿ ಯೌವನಕಾಲದಲ್ಲಿ ಕವನ ಬರೆಯದ ಅಕ್ಷರಸ್ಥರಿದ್ದಾರೆಯೆ? ಖಂಡಿತ ಇಲ್ಲ! ಹಾಗೆಯೇ ರಾ.ನಂ. ಕೂಡ ತಮ್ಮ ಚಿಗುರು ಮೀಸೆಯ ಕಾಲದಲ್ಲಿ ಸುಮಾರು ೫೦ ಕವನಗಳನ್ನು ಬರೆದಿದ್ದಾರೆ. ಅದಕ್ಕೆ ಸ್ಫೂರ್ತಿ ಹಲವಾರು ಸಾಹಿತಿಗಳು. ಅ.ನ.ಕೃ. ಕುರಿತು 'ಮತ್ತೊಮ್ಮೆ ಹುಟ್ಟಿ ಬಾ ಓ ಅನಕೃ' ಎಂಬ ಒಂದು ಕವನವನ್ನು ದ.ರಾ.ಬೇಂದ್ರೆಯವರ 'ಇಳಿದು ಬಾ, ತಾಯೆ, ಇಳಿದು ಬಾ' ಕವನದ ಧಾಟಿಯಲ್ಲಿಯೇ

ಬರೆದಿದ್ದಾರೆ. ಹಾಗೆಯೇ, 'ಕನ್ನಡಕೆ ಹೋರಾಡು ಕನ್ನಡದ ಕಂದ ಎಂದು ಬರೆದ ಕುವೆಂಪುವೇ' ಎಂದು ಕುವೆಂಪುವನ್ನು ಆರಾಧಿಸಿ ಕೂಡಾ ಕವನಿಸಿದ್ದಾರೆ. ಅಂದಿನ ಕಾಲಕ್ಕೇ ಅವರ ಒಂದು ಕವನ 'ಮಲ್ಲಿಗೆ' ಮಾಸಪತ್ರಿಕೆಯಲ್ಲಿ ಪ್ರಕಟಗೊಂಡಿತ್ತು. 'ಎಲ್ಲರೂ ಸೂರ್ಯಾಸ್ತವನ್ನು ನೋಡಿ ಆನಂದಿಸಬಯಸುತ್ತಾರೆ. ಆದರೆ ಸೂರ್ಯಾಸ್ತವು ಅಂಧಕಾರಕ್ಕೆ ಮುನ್ನುಡಿ ಬರೆಯುವಂಥದ್ದು. ಆದ್ದರಿಂದ ಜನತೆಯು ಸೂರ್ಯಾಸ್ತದ ಬದಲಿಗೆ, ಸೂರ್ಯೋದಯವನ್ನು ಆನಂದಿಸಬೇಕು. ಏಕೆಂದರೆ, ಸೂರ್ಯೋದಯವು ಪ್ರಕಾಶವನ್ನು ನೀಡುವ ಮೂಲಕ ಜ್ಞಾನ ವೃದ್ಧಿಮಾಡಿ, ಪ್ರಕೃತಿಯನ್ನು ಬೆಳೆಸುವ ಮೂಲಕ ಜನಜೀವನಕ್ಕೆ ಸೊಗವನ್ನುಂಟುಮಾಡುತ್ತದೆ. ಆದ್ದರಿಂದ ಜನರೇ, ಸೂರ್ಯೋದಯವನ್ನು ನೋಡಿ' ಎಂಬ ಆಶಯದಿಂದ ಸಂಕೇತಗಳನ್ನುಪಯೋಗಿಸಿ ಕೂಡಾ ಕವನ ರಚಿಸಿದ್ದರು! ಅವರು ಸೃಜನಶೀಲ ಕತೆಗಾರ ಕೂಡಾ. ಹಲವಾರು ಕತೆಗಳನ್ನು ಕೂಡ ಬರೆದಿದ್ದರು.

'ತೆಂಗಿನ ಮರದ ಮೇಲೆ ಊಟ ಎಂದರೆ, ಕಟ್ಟು ಜನಿವಾರಕ್ಕೆ ಲೋಟ' ಎನ್ನುವ ಗಾದೆಯನ್ನು ರಾ.ನಂ. ಹಲವಾರು ಬಾರಿ ಹೇಳುತ್ತಿರುತ್ತಾರೆ. ಮಿತ್ರರಿಗಾಗಲೀ, ಕನ್ನಡ ಕಾರ್ಯಕರ್ತರಿಗಾಗಲೀ ಭೋಜನಕೂಟ ಏರ್ಪಡಿಸುವ ಯಾವುದೇ ಅವಕಾಶವನ್ನೂ ಅವರು ಕಳೆದುಕೊಳ್ಳಲು ಇಚ್ಛಿಸುವವರಲ್ಲ. ಅವರ ತಂದೆಯವರ ತಿಥಿಯಿದ್ದಾಗ, ಮಗನಿಗೆ ಇಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರವೇಶ ಸಿಕ್ಕಿದಾಗ, ಕೆಲಸ ಸಿಕ್ಕಿದಾಗ, ಕನ್ನಡ ಗೆಳೆಯರ ಬಳಗದ ಕಾರ್ಯಕ್ರಮಗಳಿದ್ದಾಗ ಅಥವಾ ವಾರ್ಷಿಕ ಸಭೆಯಿದ್ದಾಗ, ಕನ್ನಡ ಕಾರ್ಯಕರ್ತರಿಗೆ ಸನ್ಮಾನವಾದಾಗ, ರಾ.ನಂ.ಗೆ ಯಾವುದಾದರೂ ದೊಡ್ಡ ಸನ್ಮಾನವಾದಾಗ ಅಥವಾ ಅವರ ಪುಸ್ತಕ ಬಿಡುಗಡೆಯಾದಾಗ, ಯಾರಾದರೂ ಅತ್ಯಂತ ಪರಿಚಿತ ಹಿರಿಯರಿಗೆ ಪ್ರಶಸ್ತಿ ಬಂದಾಗ, ಅವರ ಮಗನಿಗೆ ಬಡ್ತಿ ಸಿಕ್ಕಿದಾಗ, ಯಾವುದಾದರೂ ಪೂಜೆ ಏರ್ಪಡಿಸಿದಾಗ (ರಾ.ನಂ. ನಾಸ್ತಿಕರು!) ಕಡೆಗೆ ಯಾವುದೂ ಕಾರಣ ಸಿಗದಿದ್ದಾಗ ಊಟ ಹಾಕಿ ಬಹಳ ದಿನವಾಯಿತೆಂದೋ! – ಕಾರಣ ಯಾವುದಾದರೂ ಸರಿ, ಆತ್ಮೀಯರಿಗೆ ಊಟ ಹಾಕಿಸಬೇಕು ಅಷ್ಟೆ!

ನಾನು ಸಾಹಿತಿಗಳ–ಕಲಾವಿದರ ಬಳಗದ ಬುಧವಾರದ ಸಭೆಗೆ ಹೋಗಲಾರಂಭಿಸಿದ್ದು ೧೯೮೭ರಲ್ಲಿ. ಆ ವೇಳೆಗಾಗಲೇ ಜಿ.ವೈ. ಹುಬ್ಳೀಕರ, ಬರಗೂರು ಮುಂತಾದವರೆಲ್ಲ ಅಲ್ಲಿಗೆ ಬರುವುದನ್ನು ನಿಲ್ಲಿಸಿದ್ದರು. ಅಧ್ಯಕ್ಷರಾಗಿದ್ದ ಎಂ.ಚಿದಾನಂದಮೂರ್ತಿ, ಎಲ್.ಎಸ್.ಶೇಷಗಿರಿರಾವ್, ಎಂ.ವಿ.ಸೀ., ಚಿತ್ರನಟ ಅಶೋಕ್ ಕೆ.ಎಲ್.ಗೋಪಾಲಕೃಷ್ಣಯ್ಯ, ಜಿ.ಕೆ.ಸತ್ಯ, ಪಿ.ವಿ.ನಾರಾಯಣ್, ಜಿ. ರಾಮಕೃಷ್ಣ, ಅಶೋಕ್ ದೊಡ್ಡಮೇಟಿ, ಸಿ.ಚಂದ್ರಶೇಖರ್, ಎಚ್.ಎಂ.ಮರುಳಸಿದ್ದಯ್ಯ, ಬಿ.ಟಿ.ಲಲಿತಾನಾಯಕ್ ಮುಂತಾದವರು ಬರುತ್ತಿದ್ದರು. ಕಾರ್ಯಕರ್ತರಲ್ಲಿ ಎಚ್.ಎ.ಎಲ್.ನ ರಾ.ನಂ. ಚಂದ್ರಶೇಖರ ಬೆ.ರಾ.ನಾಗರಾಜ್, ಗೋಪಿನಾಥ್, ಹೊಸೂರು ನಾಗರಾಜ್, ಕೆ.ರಾಜಕುಮಾರ್ ಜಿ.ಸಿ.ನಾರಾಯಣ್, ಅಶೋಕ್ ಆರ್. ಕಿಣಿ, ರಾಧಾಕೃಷ್ಣ, ಮು.ಪಾರ್ಥಸಾರಥಿ, ಜಯಾ ಪಾರ್ಥಸಾರಥಿ, ಹೊಸಕೋಟೆ ಚಂದ್ರಶೇಖರ್, ಎಸ್.ಬಿ.ಕಪಾಲಿ, ಮು.ಲೋಕೇಶ್

ಮುನಿಸ್ವಾಮಪ್ಪ, ಡಿ.ಎಸ್.ರಾಜಶೇಖರ್, ಕ.ರಾ.ರ.ಸಾ.ಸಂಸ್ಥೆಯ ನೀ.ನೀಲಕಂಠಪ್ಪ ವ.ಚ.ಚನ್ನೇಗೌಡ, ವೆಂಕಟಪ್ಪ, ಬಿ.ಇ.ಎಲ್.ನ ಸಿದ್ದಯ್ಯ, ಬೆ.ರ.ರಂಗರಾಜ್, ವಲ್ಲಣ್ಣಿ ಚಂದ್ರೇಗೌಡ, ಅಮೃತಾ ನಾರಾಯಣ, ರಮಾದೇವಿ ವಿಶ್ವೇಶ್ವರಯ್ಯ, ಗಾಯಕಿ ಮಂಜುಳಾ ಮೋಹನ್, ಗಾಯಿತ್ರಿ, ಇಂದಿರಾ, ಮಂಜುಳಾಂಬಾ, ಕಿನ್ನಿಗೋಳಿ ರಾಮಚಂದ್ರ ರಾ.ಪ್ರಭುಶಂಕರ, ಐ.ಟಿ.ಐ. ಚನ್ನಬಸವರಾಜು, ಹರಿದಾದಾ, ಕಾರ್ ಮೊಬೈಲ್ಸ್ ಜಿ.ವಿ.ಲಕ್ಷ್ಮೀಕಾಂತ ಮೊದಲಾದವರು ಇರುತ್ತಿದ್ದರು. ಸರ್ಪಭೂಷಣ ಶಿವಯೋಗಿಗಳ ಮಠದ ಆವರಣದಲ್ಲಿ ಪ್ರತಿ ಬುಧವಾರ ಸಭೆ ನಡೆಯುತ್ತಿತ್ತು. ಸ್ವತಂತ್ರ ಕನ್ನಡ ದೂರದರ್ಶನಕ್ಕಾಗಿ ಒತ್ತಾಯ ನಡೆಯುತ್ತಿತ್ತು. ಆಗ ಎಂ. ಚಿದಾನಂದಮೂರ್ತಿಯವರು ಬರೆದಿದ್ದ 'ಕನ್ನಡ ಸಂಸ್ಕೃತಿ : ನಮ್ಮ ಹೆಮ್ಮೆ' ಎಂಬ ಕಿರು ಹೊತ್ತಿಗೆಯನ್ನು ಬಳಗವು ಪ್ರಕಟಿಸಿ, ಮಾರಿ ಅದರಿಂದ ಬಂದ ಹಣದಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿತ್ತು. ಬಳಗದ ಖಜಾಂಚಿಯಾಗಿದ್ದ ಕೆ. ರಾಜಕುಮಾರ್ ಆ ಪುಸ್ತಕದ ಮಾರಾಟದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದರು. ಕೆ.ರಾಜಕುಮಾರ್ ಆ ಕನ್ನಡ ಪುಸ್ತಿಕೆಯ ಇತರ ಭಾಷಾ ಅನುವಾದಿತ ಕೃತಿಗಳನ್ನೂ ತರಲಾರಂಭಿಸಿ, ಸುಮಾರು ಒಂಬತ್ತು ಭಾಷೆಗಳಲ್ಲಿ ಅದನ್ನು ಪ್ರಕಟಿಸಿದರು.

ಆ ಸಂದರ್ಭದಲ್ಲಿ ಕರ್ನಾಟಕ ಸರ್ಕಾರವು ಸಾಹಿತಿಗಳ-ಕಲಾವಿದರ ಬಳಗದ ಹಕ್ಕೊತ್ತಾಯಗಳಿಗೆ ಸರಿಯಾಗಿ ಸ್ಪಂದಿಸುತ್ತಿಲ್ಲವೆಂತಲೂ, ಇದಕ್ಕೆ ಕಾರಣವು ಸಾಹಿತಿಗಳ ಕಲಾವಿದರ ಬಳಗದ ವ್ಯಾಪ್ತಿಯು, ಕೇವಲ ಬೆಂಗಳೂರಿಗೆ ಮಾತ್ರ ಸೀಮಿತವಾಗಿರುವುದ ರಿಂದಲೆಂತಲೂ, ಒಂದು ಅಭಿಪ್ರಾಯವು ಸಭಿಕರಿಂದ ಬಂತು. ಆ ಸಮಸ್ಯೆಯ ಪರಿಹಾರಕ್ಕಾಗಿ ಸಾಹಿತಿಗಳ-ಕಲಾವಿದರ ಬಳಗವನ್ನು ರಾಜ್ಯವ್ಯಾಪಿಯಾಗಿ ಬೆಳೆಸಬೇಕೆಂಬ ಸಲಹೆಯೂ ಬಂತು. ಆದರೆ ಸಾಹಿತಿಗಳ, ಕಲಾವಿದರ ಬಳಗದ ಕೆಲವರು ಈ ವಿಸ್ತರಣೆಯ ಸಲಹೆಯನ್ನು ವಿರೋಧಿಸಿದರು. ಹೀಗಾಗಿ ರಾಜ್ಯವ್ಯಾಪಿ ಕನ್ನಡ ಸಂಘಟನೆಯೊಂದರ ವಿಷಯವಾಗಿ ಸಾಹಿತಿಗಳ, ಕಲಾವಿದರ ಬಳಗವು ಟಿಸಿಲೊಡೆಯಿತು. ರಾಜ್ಯವ್ಯಾಪಿ ಕನ್ನಡ ಸಂಘಟನೆಯ ಪರವಾಗಿ ಬಹಳಷ್ಟು ಕಾರ್ಯಕರ್ತರಿದ್ದುದರಿಂದ ಕ್ರಮೇಣ ಹೊಸ ಸಂಘಟನೆಯೊಂದು ರೂಪು ತಳೆಯತೊಡಗಿ, ಕನ್ನಡ ಶಕ್ತಿ ಕೇಂದ್ರವೆಂದು ಹೆಸರಾಗಿ ಗೌರವಾಧ್ಯಕ್ಷರಾಗಿ ಚನ್ನವೀರ ಕಣವಿಯವರು ನೇಮಕಗೊಂಡಿದ್ದರು. ಈ ವೇಳೆಗೆ ಕೆ.ರಾಜಕುಮಾರ್‌ರ ಪುಸ್ತಕ ಮಾರಾಟದ ಪ್ರಯತ್ನದಿಂದ ಸಾಹಿತಿಗಳ ಕಲಾವಿದರ ಬಳಗದಲ್ಲಿ ಸುಮಾರು ಒಂದು ಲಕ್ಷ ರೂಪಾಯಿಗಳ ಸಂಗ್ರಹವಾಗಿತ್ತು. ಬಳಗವನ್ನು ರಾಜ್ಯವ್ಯಾಪಿಯಾಗಿ ವಿಸ್ತರಿಸುವ ಸಲಹೆಗೆ ವಿರೋಧವಾಗಿದ್ದವರು ಬಳಗದಲ್ಲಿದ್ದ ಹಣವನ್ನು ಹೊಸ ಸಂಘಟನೆಗೆ ವರ್ಗಾಯಿಸಲು ವಿರೋಧಿಸಿದರು. ಅಷ್ಟು ಹೊತ್ತಿಗೆ ಸಾಹಿತಿಗಳ, ಕಲಾವಿದರ ಬಳಗಕ್ಕೆ ಎಚ್.ಎಂ. ಮರುಳಸಿದ್ದಯ್ಯನವರು ಅಧ್ಯಕ್ಷರಾಗಿದ್ದರು. ಸಾಹಿತಿಗಳ, ಕಲಾವಿದರ ಬಳಗದಲ್ಲಿದ್ದ ಕಾರ್ಯಕರ್ತರೇ ಹೊಸ ಕನ್ನಡ ಶಕ್ತಿ ಕೇಂದ್ರದಲ್ಲೂ ಇದ್ದು, ಅವರೆಲ್ಲರೂ ಹೊಸ ರಾಜ್ಯವ್ಯಾಪಿ ಸಂಘಟನೆಯನ್ನು ಕಟ್ಟುವ ಹುಮ್ಮಸ್ಸಿನಲ್ಲಿದ್ದುದರಿಂದ, ಸಾಹಿತಿಗಳ, ಕಲಾವಿದರ ಬಳಗದ ಕಾರ್ಯಕ್ರಮಗಳು

ನಿಂತುಹೋಗುವ ಸ್ಥಿತಿ ಬಂತು. ಅಧ್ಯಕ್ಷರಾಗಿದ್ದ ಎಚ್.ಎಂ.ಮರುಳಸಿದ್ದಯ್ಯನವರು ಒಂದು ಸರ್ವಸದಸ್ಯರ ಸಭೆ ಕರೆದು, ಎಲ್ಲ ಸದಸ್ಯರೂ ಆಸಕ್ತಿ ವಹಿಸಿ ಪೂರ್ಣೋತ್ಸಾಹದಿಂದ ಕೆಲಸ ಮಾಡಬೇಕೆಂದೂ, ಇಲ್ಲದಿದ್ದಲ್ಲಿ ಬಳಗವನ್ನು ಮುಚ್ಚ ಬೇಕಾಗುತ್ತದೆಂದೂ ತಿಳಿಸಿದರು. ಬಹಳಷ್ಟು ಕಾರ್ಯಕರ್ತರು ಕನ್ನಡ ಶಕ್ತಿ ಕೇಂದ್ರದ ವಿಚಾರದಲ್ಲಿ ಆಸಕ್ತಿ ತಳೆದುದರಿಂದ, ಅವರಲ್ಲಿ ಅನೇಕರು ತಾವು ಎರಡೆರಡು ಸಂಘಟನೆಗಳಲ್ಲಿ ಪೂರ್ಣೋತ್ಸಾಹದಿಂದ ಕೆಲಸ ಮಾಡಲಾಗದೆಂದೂ, ಸಾಹಿತಿಗಳ ಕಲಾವಿದರ ಬಳಗವನ್ನು ಮುಚ್ಚಬೇಕೆಂದೂ ಸಲಹೆ ಮಾಡಿದರು. ಆಗ ಬಳಗದ ಖಾತೆಯಲ್ಲಿದ್ದ ಹಣವನ್ನೇನು ಮಾಡಬೇಕೆಂಬ ವಿಷಯ ಎದುರಾಯಿತು. ಕಡೆಗೆ ಎಂ.ಚಿದಾನಂದಮೂರ್ತಿಯವರ ಸಲಹೆಯಂತೆ ಆ ಹಣದಲ್ಲಿ ಕುವೆಂಪು ಮತ್ತು ಬಿಎಂಶ್ರೀ ಪ್ರತಿಮೆಗಳನ್ನು ಕ್ರಮವಾಗಿ ಬೆಂಗಳೂರಿನ ಲಾಲ್‌ಬಾಗ್ ಪಶ್ಚಿಮ ದ್ವಾರ ಹಾಗೂ ನ್ಯಾಷನಲ್ ಕಾಲೇಜು ವೃತ್ತಗಳಲ್ಲಿ ಸ್ಥಾಪಿಸುವುದೆಂದು ತೀರ್ಮಾನಿಸಲಾಯಿತು. ಅದರಂತೆ ಆ ಎರಡೂ ಪ್ರತಿಮೆಗಳನ್ನು ಬೆಂಗಳೂರು ಮಹಾನಗರ ಪಾಲಿಕೆಯ ಸಹಕಾರದೊಂದಿಗೆ ಸ್ಥಾಪಿಸಿ, ನಂತರ ಸಾಹಿತಿಗಳ, ಕಲಾವಿದರ ಬಳಗವನ್ನು ವಿಧ್ಯುಕ್ತವಾಗಿ ಮುಚ್ಚಲಾಯಿತು. ಈ ಎಲ್ಲ ಕಾರ್ಯಗಳಲ್ಲಿಯೂ ಮುಂಚೂಣಿಯಲ್ಲಿದ್ದು, ಕಾರ್ಯಕರ್ತರನ್ನು ಸಂಘಟಿಸಿ ರಾಜ್ಯಾದ್ಯಂತ ಹೊಸ ಸಂಘಟನೆಯಾದ ಕನ್ನಡ ಶಕ್ತಿ ಕೇಂದ್ರವನ್ನು ಹುಟ್ಟುಹಾಕಿ ಬೆಳೆಸುವಲ್ಲಿ ಅಕ್ಷರಶಃ ತನು, ಮನ, ಧನವನ್ನು ವಿನಿಯೋಗಿಸಿದವರು ರಾ.ನಂ.

ಕರ್ನಾಟಕ ಸರ್ಕಾರವು ಕನ್ನಡಿಗರ ಹಕ್ಕೊತ್ತಾಯಗಳಿಗೆ ಸರಿಯಾಗಿ ಸ್ಪಂದಿಸುತ್ತಿಲ್ಲವೆಂಬ ಕಾರಣಕ್ಕಾಗಿ ಹುಟ್ಟಿದ ಹೊಸ ರಾಜ್ಯವ್ಯಾಪಿ ಸಂಘಟನೆಯೇ ಕನ್ನಡ ಶಕ್ತಿ ಕೇಂದ್ರ. ೧೯೮೮ರಲ್ಲಿ ಚಾಮರಾಜಪೇಟೆಯ ಜಂಗಮ ಮಠದಲ್ಲಿ ನಡೆದ ಸಮಾವೇಶದಲ್ಲಿ ಧಾರವಾಡದ ಚನ್ನವೀರ ಕಣವಿಯವರು ಗೌರವಾಧ್ಯಕ್ಷರಾಗಿಯೂ ಎಂ. ಚಿದಾನಂದಮೂರ್ತಿಯವರು ಇದರ ಅಧ್ಯಕ್ಷರಾಗಿಯೂ ನೇಮಕಗೊಂಡಿದ್ದರು; ರಾ.ನಂ. ಕಾರ್ಯದರ್ಶಿಗಳಲ್ಲೊಬ್ಬರಾಗಿದ್ದರು. ಎಲ್ಲಾ ಜಿಲ್ಲೆಗಳಿಗೂ ಜಿಲ್ಲಾಧ್ಯಕ್ಷರ ನೇಮಕವೂ ಆಯಿತು. ಅಲ್ಲಿಂದ ಮುಂದೆ ನಡೆದ ಕನ್ನಡಿಗರ ಒತ್ತಾಯಗಳಿಗೆ ರಾಜ್ಯದ ಎಲ್ಲೆಡೆ ಯಿಂದಲೂ ಒಕ್ಕೊರಲಿನ ಬೆಂಬಲ ವ್ಯಕ್ತವಾಗತೊಡಗಿತು. ಕನ್ನಡ ಶಕ್ತಿ ಕೇಂದ್ರದಿಂದಾಗಿ ಸರ್ಕಾರದಿಂದ ಹಲವಾರು ಒಳ್ಳೆಯ ಕೆಲಸಗಳು ನಡೆದವು. ಕನ್ನಡ ಅಭಿವೃದ್ಧಿ ಪ್ರಾಧಿಕಾರ ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ವಿಶ್ವವಿದ್ಯಾಲಯ, ನೈರುತ್ಯ ರೈಲ್ವೆ ವಲಯ ಇತ್ಯಾದಿಗಳು ಅವುಗಳಲ್ಲಿ ಪ್ರಮುಖವಾದುವು.

ಈ ಎಲ್ಲ ಕೆಲಸಗಳಲ್ಲಿಯೂ ಯೋಚನೆ, ಯೋಜನೆ, ಚರ್ಚೆ, ಮನವಿ ಪತ್ರ ರಚನೆ ಗಣ್ಯರನ್ನು ಕಂಡು, ಮನವಿ ಪತ್ರ ನೀಡಿ, ನಂತರ ಅದರ ಅನುಸರಣೆ ಮಾಡುವುದರಲ್ಲಿ ಬಹುಪಾಲು ಕೆಲಸಗಳನ್ನೆಲ್ಲಾ ಎಂ. ಚಿದಾನಂದಮೂರ್ತಿಯವರು ಮತ್ತು ರಾ.ನಂ.ರವರೇ ಮಾಡುತ್ತಿದ್ದುದು. ಉಳಿದವರಿಗೆ ಅವಕಾಶವಿರಲಿಲ್ಲವೆಂದಲ್ಲ; ಉಳಿದವರಾರೂ ಅವರಂತೆ ಅದಕ್ಕಾಗಿ ಸಮಯ ಮುಡುಪಿಟ್ಟು, ಯೋಚಿಸಿ, ಹೋಂವರ್ಕ್ ಮಾಡಿಕೊಂಡು ಬರುತ್ತಿರಲಿಲ್ಲ. ಈ ಎಲ್ಲ ವಿಷಯಗಳಲ್ಲಿ ರಾ.ನಂ. ಮೊದಲು ಉಳಿದೆಲ್ಲಾ ಸದಸ್ಯರಿಗೆ ಸಲಹೆ

ಸೂಚನೆ ನೀಡುವ ಅವಕಾಶ ನೀಡಿ, ಕೊನೆಗೆ ತಮ್ಮ ಸಲಹೆ ಸೂಚನೆಗಳನ್ನು ಮಂಡಿಸುತ್ತಿದ್ದರು. ಅವರ ಸಲಹೆ ಸೂಚನೆಗಳನ್ನು ಕೇಳಿದ ನಂತರ ನಾವ್ಯಾರೂ ಅದರ ಬಗ್ಗೆ ಯೋಚನೆ ಕೂಡ ಮಾಡಿಲ್ಲವೆಂಬ ಸತ್ಯ ಉಳಿದ ನಮ್ಮೆಲ್ಲರಿಗೂ ಅರಿವಾಗುತ್ತಿತ್ತು. ಇಷ್ಟಾಗಿಯೂ, ಆ ಕಾರ್ಯಕ್ರಮದ ನಂತರ, ಅದರ ಯಶಸ್ಸನ್ನು ರಾ.ನಂ. ಎಂದೂ ತಮ್ಮ ಮುಡಿಗೇರಿಸಿಕೊಳ್ಳುತ್ತಿರಲಿಲ್ಲ; ಅದು ಕನ್ನಡ ಶಕ್ತಿ ಕೇಂದ್ರದ ಸಾಂಘಿಕ ಪ್ರಯತ್ನಕ್ಕೆ ಸಂದ ಜಯವೆಂದೇ ಹೇಳುತ್ತಿದ್ದರು. ಯಾವುದೇ ಕಾರ್ಯಕ್ರಮದ ಯೋಜನೆ, ಆಹ್ವಾನ ಪತ್ರಿಕೆ ರಚನೆ, ಪತ್ರಿಕಾ ಹೇಳಿಕೆ ಬರಹ, ಪತ್ರಿಕೆಗಳಿಗೆ ಹೇಳಿಕೆ ಕೊಟ್ಟು ಪ್ರಕಟಿಸಲು ವಿನಂತಿಸುವುದು –ಹೀಗೆ ಎಲ್ಲಾ ಕೆಲಸಗಳಲ್ಲೂ ನಮ್ಮನ್ನೆಲ್ಲಾ ತೊಡಗಿಸಲು ಮತ್ತು ನಾವೂ ಅನುಭವ ಪಡೆದುಕೊಳ್ಳಲು ಅವರು ಅವಿರತವಾಗಿ ಪ್ರೋತ್ಸಾಹಿಸುತ್ತಿದ್ದರು. ಹುಟ್ಟಾ ಸೋಮಾರಿಗಳಾದ ನಾವು, ರಾ.ನಂ.ರ ಈ ಎಲ್ಲಾ ಪ್ರಯತ್ನಗಳೂ ನಮ್ಮ ಮಟ್ಟಕ್ಕೆ ಮಾತ್ರ ಯಶಸ್ವಿಯಾಗುವಂತೆ ಮಾಡುತ್ತಾ ಬಂದಿದ್ದೇವೆ!

ಹೀಗಿದ್ದರೂ, ಅವರ ವಿರುದ್ಧ ಸಾಕಷ್ಟು ಸಲ 'ಎಲ್ಲ ಕೆಲಸಗಳನ್ನೂ ಅವರೇ ಮಾಡುತ್ತಾರೆ. ಕೆಳಗಿನ ಶ್ರೇಣಿಯವರಿಗೆ ಅವಕಾಶ ಕೊಡುವುದಿಲ್ಲ. ಪತ್ರಿಕೆಗಳಲ್ಲಿ (ಅಧ್ಯಕ್ಷರು ಮತ್ತು ಉಳಿದ ಹಿರಿಯರನ್ನು ಬಿಟ್ಟು) ಅವರು ಮಾತ್ರ ಮಿಂಚುತ್ತಾರೆ. ಮಂತ್ರಿಗಳು ಮತ್ತಿತರರನ್ನು ನೋಡಲು ಹೋಗುವಾಗ ಇತರರನ್ನು ಕರೆದೊಯ್ಯುವುದಿಲ್ಲ' ಎಂದೆಲ್ಲಾ ಆರೋಪಗಳಿದ್ದವು. ಆದರೆ ವಾಸ್ತವ ಇದಕ್ಕೆ ಭಿನ್ನವಾಗಿದ್ದು, ನಾವೇ ಸರಿಯಾಗಿ ಸಭೆಗಳಿಗೆ ಹೋಗುತ್ತಿರಲಿಲ್ಲ ಹಾಗೂ ಅವರು ಹೇಳಿದ ಸ್ಥಳಕ್ಕೆ, ಸರಿಯಾದ ಸಮಯಕ್ಕೆ ಹೋಗುತ್ತಿರಲಿಲ್ಲ.

ಇಂಥ ಆರೋಪಗಳು ರಾ.ನಂ.ರವರ ಅನುಪಸ್ಥಿತಿಯಲ್ಲಿ ಬರುತ್ತಿದ್ದುವೆಂಬುದು ಗಮನಾರ್ಹ. ಒಂದು ಸಭೆಯ ಬಳಿಕ ಹೋಟೇಲಿನಲ್ಲಿ ಕಾಫಿ ಕುಡಿಯುತ್ತಿದ್ದಾಗ, ಇಂಥದೇ ಒಂದು ಆರೋಪವನ್ನು ಒಬ್ಬ ಮಹಿಳಾ ಸದಸ್ಯರು ಮಾಡಿದಾಗ, ನಾವು ಅದನ್ನು ವಿರೋಧಿಸಿ ವಾದ ಹೂಡಿ, ಅದು ಸುತ್ತಲಿದ್ದ ಇತರ ಗ್ರಾಹಕರಿಗೆ ಜಗಳವೇನೋ ಎಂದನಿಸಿದ್ದುದು ಈಗಲೂ ನೆನಪಿದೆ.

ಡಿ.ವಿ.ಗುಂಡಪ್ಪನವರ ಶತಮಾನೋತ್ಸವ ಸಮಿತಿಯವರು ನಡೆಸುವ 'ಸಂಸ್ಕೃತಿ ಶಿಬಿರ'ವನ್ನು ನಡೆಸಲೆಂದು ಪ್ರಾರಂಭಿಸಲಾದ 'ಕನ್ನಡ ಗೆಳೆಯರ ಬಳಗ'ವು ನಂತರ ಹಲವಾರು ಸಲ ಉಪಯೋಗಕ್ಕೆ ಬಂತು. ಕನ್ನಡ ಕಥೋಲಿಕ ಕ್ರೈಸ್ತರ ಮೇಲಿನ ದೌರ್ಜನ್ಯ ವಿರೋಧಿಸಿ ಧರಣ, ತಿರುವಳ್ಳುವರ್ ಪ್ರತಿಮೆ ಸ್ಥಾಪನೆಗೆ ವಿರೋಧ, ಕಾವೇರಿ ಜನಜಾಗೃತಿ ಕಾರ್ಯಕ್ರಮಗಳು, ಪ್ರತ್ಯೇಕ ಉರ್ದು ನಿರ್ದೇಶನಾಲಯಕ್ಕೆ ವಿರೋಧ, ಹಂಪೆ–ಗೋಕರ್ಣಗಳಲ್ಲಿ ಹಿಪ್ಪಿ ಹಾವಳಿ ವಿರೋಧಿಸಿ ಧರಣ, ಆಕ್ಸ್‌ಫರ್ಡ್ ವಿ.ವಿ.ಯ ಸ್ಥಳನಾಮ ವಿವರಣೆ ತಪ್ಪನ್ನು ವಿರೋಧಿಸಿ ಧರಣ, ಸರ್ಕಾರ ಪ್ರಕಟಿಸಿದ ಪಠ್ಯಪುಸ್ತಕದಲ್ಲಿನ ದೋಷ ಸರಿಪಡಿಸಲು ಧರಣ, ಉತ್ತರ ಹಾಗೂ ದಕ್ಷಿಣ ಕರ್ನಾಟಕದ ಬರ ಮತ್ತು ಪ್ರವಾಹ ಸಂತ್ರಸ್ತ ಹಳ್ಳಿಗಳಿಗೆ ಮತ್ತು ಗೋವಾ ವಸತಿ ಸಂತ್ರಸ್ತರಿಗೆ ಧಾನ್ಯ, ವಸ್ತ್ರ ವಿತರಣೆ, ಕನ್ನಡ ಕಾರ್ಯಕರ್ತರಿಗೆ ಒಂದು ದಿನದ ಶಿಬಿರ, ರಾಜ್ಯ ಮಟ್ಟದ ಜನಜಾಗೃತಿ ಸಮಾವೇಶ, ಗಣ್ಯ

ಸಾಹಿತಿಗಳಿಗೆ ಸನ್ಮಾನ, ರಾಜ್ಯೋತ್ಸವಾಚರಣೆಯಲ್ಲಿ ಕನ್ನಡ ಕಾರ್ಯಕರ್ತರಿಗೆ ಸನ್ಮಾನ ಕನ್ನಡ–ಕನ್ನಡಿಗ–ಕರ್ನಾಟಕಗಳಿಗೆ ಸಂಬಂಧಿಸಿದ ಪುಸ್ತಕಗಳ ಪ್ರಕಟಣೆ, ಬಿಡುಗಡೆ ಇತ್ಯಾದಿಗಳು ಕೆಲವು ಉದಾಹರಣೆಗಳು.

ಇದಿಷ್ಟೇ ಅಲ್ಲದೆ ಕನ್ನಡ ಚಳವಳಿಗಳಲ್ಲೂ ರಾ.ನಂ. ಪಾತ್ರವಿದ್ದೇ ಇದೆ. ಬಹುಶಃ ಅವರು ಭಾಗವಹಿಸದ ೮೦ರ ದಶಕದ ನಂತರದ ಕನ್ನಡ ಚಳವಳಿಗಳಿಲ್ಲವೇನೋ? ಯಾವುದೇ ಕನ್ನಡ ಚಳವಳಿಗಳಿರಲಿ, ಅದರಲ್ಲಿ ಅವರು ಭಾಗವಹಿಸುತ್ತಾರೆ. ಸಾಹಿತಿಗಳ ಕಲಾವಿದರ ಬಳಗದ ಗೋಕಾಕ್ ಚಳವಳಿ, ಕನ್ನಡ ದೂರದರ್ಶನ ಚಳವಳಿ, ಕನ್ನಡ ಶಕ್ತಿ ಕೇಂದ್ರದ ಕಾವೇರಿ ಹೋರಾಟ, ಶಿಕ್ಷಣ ಮಾಧ್ಯಮವಾಗಿ ಕನ್ನಡ ಹೋರಾಟ, ಉರ್ದು ವಾರ್ತೆ ವಿರೋಧಿ ಚಳವಳಿ, 'ಡೆಕ್ಕನ್ ಹೆರಾಲ್ಡ್ ನೃತ್ಯೋತ್ಸವ'ದ ಕನ್ನಡ ವಿರೋಧಿ ನಿಲುವಿನ ವಿರುದ್ಧದ ಚಳವಳಿ, ಶಿವಾಜಿ ಪ್ರತಿಮೆ ವಿರೋಧಿ ಚಳವಳಿ, ಕರ್ನಾಟಕಕ್ಕೆ ಪ್ರತ್ಯೇಕ ನೈರುತ್ಯ ರೈಲ್ವೆ ವಲಯಕ್ಕಾಗಿ ಚಳವಳಿ, ಕನ್ನಡ ನಾಮಫಲಕ ಕಡ್ಡಾಯ ಚಳವಳಿ ಬೆಳಗಾವಿಯ ಮರಾಠಿಗರ ವಿರೋಧಿ ಚಳವಳಿ, ಬಿಡದಿ–ಸಾತನೂರು ಜಪಾನ್ ಕೈಗಾರಿಕಾ ವಸಾಹತು ವಿರೋಧಿ ಚಳವಳಿ, ಕೊಡಗು ಪ್ರತ್ಯೇಕತಾವಾದಿ ವಿರೋಧಿ ಚಳವಳಿ ಇತ್ಯಾದಿ ಚಳವಳಿಗಳಲ್ಲಿ ರಾ.ನಂ. ಪಾತ್ರವು ಅತ್ಯಂತ ಮಹತ್ವದ್ದು.

ರಾ.ನಂ.ಗೆ ಪುಸ್ತಕಗಳೆಂದರೆ ಪ್ರಾಣ. ಯಾವಾಗ ಸಿಕ್ಕರೂ, 'ತೇಜಸ್ವಿಯವರ ಆ ಪುಸ್ತಕ ಓದಿದ್ದೀರಾ? ಜೋಗಿಯವರ ಈ ಪುಸ್ತಕ ಓದಿದ್ದೀರಾ? ಘೋರ್ಪಡೆಯವರ ರೆಕ್ಕೆಯ ಮಿತ್ರರು ಕೊಂಡಿರಾ?' ಇತ್ಯಾದಿ ಪ್ರಶ್ನೆಗಳನ್ನು ಕೇಳಿ ನನ್ನನ್ನು ನಿರುತ್ತರನನ್ನಾಗಿ ಮಾಡುತ್ತಿದ್ದರು. ಮಾತುಕತೆ ಎಲ್ಲ ಮುಗಿದ ಮೇಲೆ ಎರಡು ಪುಸ್ತಕಗಳನ್ನು ಕೈಗಿಟ್ಟು 'ಇವನ್ನು ಓದಿ ಗುರೂ. ಚೆನ್ನಾಗಿವೆ' ಎನ್ನುತ್ತಿದ್ದರು. ಯಾರು, ಯಾವ ಪುಸ್ತಕದ ಬಗ್ಗೆ ಮಾತಾಡಿದರೂ, ಅದರ ಬಗ್ಗೆ ಅಧಿಕಾರಯುತವಾಗಿ ಮಾತನಾಡುವಷ್ಟು ರಾ.ನಂ. ಓದಿಕೊಂಡಿದ್ದಾರೆ. ತಾವು ಓದಿರದ ಪುಸ್ತಕದ ಬಗ್ಗೆ 'ಗೊತ್ತಿಲ್ಲ' ಎಂದು ಪ್ರಾಂಜಲವಾಗಿ ಒಪ್ಪಿಕೊಳ್ಳುತ್ತಾರೆ. ತಮ್ಮ ಈ ಓದಿನ ಹುಚ್ಚನ್ನು ಅವರು ತಮ್ಮ ಸುತ್ತಲಿನ ಆಪ್ತರಿಗೂ ಹತ್ತಿಸುತ್ತಾರೆ. ಅವರ ಎರಡನೆಯ ಮಗನನ್ನೂ ಓದುಗುಳಿಯಾಗಿಸಿದ್ದಾರೆ. ಅವರ ಮಗ ಪ್ರತಿ ತಿಂಗಳೂ ನಿಯಮಿತವಾಗಿ ಪುಸ್ತಕಗಳನ್ನು ಕೊಂಡು ಓದುತ್ತಾನೆ. ಮಗನ ಆ ಆಯ್ಕೆಯ ಪುಸ್ತಕಗಳನ್ನು ಅವರೂ ಓದಿ, ನನಗೂ ಓದಲು ಕೊಡುತ್ತಾರೆ. ಓದಿದ ಅವರ ಪುಸ್ತಕಗಳಿಗೆ ಹಣ ನೀಡಲು ಹೋದರೆ ನಿರ್ದಾಕ್ಷಿಣ್ಯವಾಗಿ ನಿರಾಕರಿಸುತ್ತಾರೆ. ಕೆಲವು ಸಲ ಯಾವುದಾದರೂ ಪುಸ್ತಕಗಳನ್ನು ನೀಡಿ, 'ಗುರೂ, ಈ ಪುಸ್ತಕಗಳನ್ನು ಓದಿ, ಇದರ ಬಗ್ಗೆ ಒಂದು ಪುಸ್ತಕ ಪರಿಚಯ ಬರೆದುಕೊಡಿ' ಎಂದೋ, ಇಲ್ಲ, 'ಇದರ ಬಗ್ಗೆ ಒಂದು ಲೇಖನ ಬರೆದುಕೊಡಿ' ಎಂದೋ ಹೇಳಿ, ನನ್ನಂತಹ ಸೋಮಾರಿಯ (ಸೋಂಭೇರಿ ಎಂದರೆ ಸರಿಯೇನೋ?) ಕೈಯಲ್ಲಿ ಕೂಡಾ ಲೇಖನಗಳನ್ನು ಬರೆಸಿದ್ದಾರೆ. ಅವರೊಡನೆ ಸಾಹಿತ್ಯ ಸಮ್ಮೇಳನಕ್ಕೋ, ಪುಸ್ತಕ ಪ್ರದರ್ಶನಕ್ಕೋ ಹೋದರೆ ಮುಗಿಯಿತು! ತಾವೂ ಮಣಭಾರ ಪುಸ್ತಕಗಳನ್ನು ಖರೀದಿಸಿ, ನಮಗೂ ಖರೀದಿಸುವಂತೆ ಒತ್ತಾಯಿಸುತ್ತಾರೆ. ದುಡ್ಡಿಲ್ಲ ಎಂಬ ಸಬೂಬು ಹೇಳಿದರೆ, ಸಾಲವನ್ನೂ ನೀಡುತ್ತಾರೆ! ಮೊದಮೊದಲು, ನಾನು ರಾ.ನಂ.ರೊಡನೆ

ಸಾಹಿತ್ಯ ಸಮ್ಮೇಳನಕ್ಕೋ, ಪುಸ್ತಕ ಪ್ರದರ್ಶನಕ್ಕೋ ಹೋಗಿಬರುತ್ತೇನೆನ್ನುವಾಗ, ನನ್ನ ಹೆಂಡತಿ, 'ಬರುವಾಗ, ಕೈಬೀಸಿಕೊಂಡು ಆರಾಮವಾಗಿ ಬನ್ನಿ. ಸುಮ್ಮನೆ ಮಣಭಾರದ ಪುಸ್ತಕಗಳನ್ನು ಹೊತ್ತು ಬರಬೇಡಿ' ಎಂದು ಉಪದೇಶಿಸುತ್ತಿದ್ದಳು. ಸಾಕಷ್ಟು ಸಲ ಉಪದೇಶಿಸಿದರೂ ಪ್ರಯೋಜನವಾಗದಿದ್ದುದರಿಂದ, ಈಗ ಬದಲಾದ ಶೈಲಿಯಲ್ಲಿ 'ನೋಡೀಂದ್ರೆ, ಮೂರು ಪುಸ್ತಕಗಳಿಗಿಂತ ಜಾಸ್ತಿ ತರಬೇಡಿ; ಮನೆಯಲ್ಲಿ ಜಾಗವಿಲ್ಲ' ಎನ್ನುತ್ತಿದ್ದಾಳೆ.

ರಾ.ನಂ. ಬಿ.ಇ.ಎಂ.ಎಲ್.ನಲ್ಲಿ ೧೯೭೦-೭೧ರ ಅವಧಿಯಲ್ಲಿ ಅಪ್ರೆಂಟಿಸ್ ಮಾಡುತ್ತಿದ್ದಾಗಲೇ ತಮ್ಮ ಪ್ರಖರ ಕನ್ನಡ ಪ್ರೇಮಕ್ಕೆ ಹೆಸರಾಗಿದ್ದರು. ಅಲ್ಲಿಯ ಆಗಿನ ಕಾರ್ಮಿಕ ನಾಯಕರಾಗಿದ್ದ ಟೈಗರ್ ಸುಂದರಂ, ರಾಜಪ್ಪನ್, ನಾರಾಯಣನ್ ಮುಂತಾದ ಕಮ್ಯುನಿಸ್ಟ್ ನಾಯಕರ ಸ್ಫೂರ್ತಿಯುತ ಭಾಷಣಗಳಿಂದ ಉತ್ತೇಜಿತರಾಗಿ, ಕಮ್ಯುನಿಸ್ಟ್ ತತ್ವಗಳತ್ತ ಮುಖಮಾಡಿದ್ದರೂ, ಕನ್ನಡದಲ್ಲಿಯೇ ಭಾಷಣ ಮಾಡುವಂತೆಯೂ, ತರಬೇತಿ ಶಿಬಿರಗಳನ್ನು ಕನ್ನಡದಲ್ಲಿಯೇ ಏರ್ಪಡಿಸುವಂತೆಯೂ ಒತ್ತಾಯಿಸುತ್ತಿದ್ದರು. ಒಮ್ಮೆ ಬೇರೆ ಯಾರೋ ಕನ್ನಡದವನಿಗೆ ಹೊಡೆದರು ಎಂದು ರಾ.ನಂ. ಪ್ರತಿಯಾಗಿ ಅವರಿಗೆ ಹೊಡೆದು ಕೆಲ ದಿನ ಅಮಾನತ್ತಿಗೊಳಗಾಗಿದ್ದರು. ಅಪ್ರೆಂಟಿಸ್ ನಂತರ ರಾ.ನಂ. ಮೊದಲು ವೆಲ್ಡರ್ ಆಗಿ ವೃತ್ತಿಜೀವನ ಪ್ರಾರಂಭಿಸಿದ್ದು ವಿಡಿಯಾ (ಈಗ ಕೆನ್ನಾಮೆಟಲ್) ಸಂಸ್ಥೆಯಲ್ಲಿ. ೧೯೭೭ರಲ್ಲಿ. ಆಗ ತಾವಿದ್ದ ಚಾಮರಾಜಪೇಟೆಯಿಂದ ವಿಡಿಯಾವರೆಗೂ ಸೈಕಲ್ಲಿನಲ್ಲಿಯೇ ಹೋಗಿಬರುತ್ತಿದ್ದರು. ಅಲ್ಲಿ ಕೂಡಾ ಕಮ್ಯುನಿಸ್ಟ್ ತತ್ವಗಳತ್ತ ವಾಲಿ, ಕಾರ್ಮಿಕರ ಸಂಘಟನೆಯ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು. ಅಲ್ಲಿ ಪರಿಚಯವಾದ ಶಿವಲಿಂಗಯ್ಯನವರ ಜೊತೆ ಸೇರಿ, ಅವರು ಸ್ಥಾಪಿಸಿದ್ದ 'ಸಾಹಿತ್ಯ ಸಂಗಮ'ದ ಸದಸ್ಯರಾದರು. ಪ್ರತಿ ತಿಂಗಳೂ ೫/- ರೂ. ಚಂದಾ ಕೊಟ್ಟು, ಆಯ್ದ ಪುಸ್ತಕಗಳನ್ನು ಖರೀದಿಸಿ (ಧಾರ್ಮಿಕ ಮತ್ತು ಅಡಿಗೆಯ ಪುಸ್ತಕಗಳನ್ನು ಬಿಟ್ಟು), ಎಲ್ಲಾ ಸದಸ್ಯರೂ ಓದಿಯಾದ ಮೇಲೆ, ವರ್ಷಕ್ಕೊಮ್ಮೆ ಎಲ್ಲಾ ಪುಸ್ತಕಗಳನ್ನೂ ಎಲ್ಲಾ ಸದಸ್ಯರಿಗೂ ಸಮಾನವಾಗಿ ಹಂಚಿಬಿಡುತ್ತಿದ್ದರು. ಆ ಸದಸ್ಯರು, ತಮಗಿಷ್ಟವಾದ ಯಾವುದೇ ವಿಷಯದ ಬಗ್ಗೆ ಒಂದು ಭಾಷಣ ಮಾಡಬೇಕಿತ್ತು. ಶಿವಲಿಂಗಯ್ಯ ಇತಿಹಾಸ ಮತ್ತು ಮನಶಾಸ್ತ್ರ ನಾಗರಾಜ್ ಹಸ್ತ ಸಾಮುದ್ರಿಕೆ ಮತ್ತು ಜ್ಯೋತಿಷ್ಯ ಶಾಸ್ತ್ರಗಳನ್ನು ಆಯ್ದುಕೊಂಡರೆ ರಾ.ನಂ. ಸಾಹಿತ್ಯ ಮತ್ತು ಕಾವ್ಯ ಮೀಮಾಂಸೆ ಆಯ್ದುಕೊಂಡರು. ರಾ.ನಂ. ವಿಡಿಯಾ ಬಿಟ್ಟು ಎಚ್.ಎ.ಎಲ್. ಸೇರಿದ ನಂತರವೂ ಶಿವಲಿಂಗಯ್ಯನವರ ಜೊತೆ ಅದೇ ಸ್ನೇಹವನ್ನು ಉಳಿಸಿಕೊಂಡು ಶಂಬಾ ಸನ್ಮಾನ ಸಮಿತಿ, ಸಂಸ್ಮರಣ ಸಮಿತಿ ಹಾಗೂ ಶಂಬಾ ವಿಚಾರ ವೇದಿಕೆಯ ಕಾರ್ಯದರ್ಶಿಯಾಗಿ ಎಲ್ಲ ಸಾಹಿತ್ಯ ಚಟುವಟಿಕೆಗಳಲ್ಲಿ ಅವರ ಜೊತೆ ಇದ್ದಾರೆ.

ರಾ.ನಂ. ಎಚ್.ಎ.ಎಲ್. ಸೇರಿದ್ದು ೧೯೭೮ರಲ್ಲಿ. ಸಾಹಿತ್ಯದ ಕಡೆಗೆ ಒಲವು ಇದ್ದೇ ಇತ್ತು. 'ಪ್ರತಿಭೆ' ಎಂಬ ಒಂದು ಸೈಕ್ಲೋಸ್ಟೈಲ್ಡ್ ಪತ್ರಿಕೆಯನ್ನೂ ಸಹ ಹೊರತರುತ್ತಿದ್ದರು. ಇಲ್ಲಿಯೂ ಕಮ್ಯುನಿಸ್ಟ್ ಒಲವನ್ನು ಮುಂದುವರಿಸಿಕೊಂಡೇ ಬಂದರು. ಇಲ್ಲಿ ಅವರಿಗೆ

ರಾಮತಲ್ಪೆ ಸುಧಾಕರನ್, ಮಾಸಿಲಾ ಮಣಿ ಮುಂತಾದವರ ಮೂಲಕ ಕಮ್ಯುನಿಸ್ಟ್ ಪಕ್ಷದ ಒಳಗಿನ ಪರಿಚಯವಾಯಿತು. ಅದರೊಂದಿಗೇ ಸಿ.ಪಿ.ಎಂ. ನಲ್ಲಿನ ಮಲೆಯಾಳಿಗಳ ಹಾಗೂ ಸಿ.ಪಿ.ಐ.ನಲ್ಲಿನ ತಮಿಳರ ಪ್ರಾಬಲ್ಯದ ಅರಿವೂ ಆಯಿತು. ರಾಜ್ಯ ಕರ್ನಾಟಕವೇ ಆದರೂ, ಇಲ್ಲಿನ ಕಮ್ಯುನಿಸ್ಟ್ ಪಕ್ಷಗಳೆರಡರಲ್ಲೂ ಕನ್ನಡದವರಾರೂ ಇಲ್ಲದೆ ಬರೀ ಅನ್ಯಭಾಷಿಕರೇ ತುಂಬಿದ್ದುದು ಅವರ ಅರಿವಿಗೆ ಬಂತು. ಓದುವುದರಲ್ಲಿ ಇವರ ಆಸಕ್ತಿಯನ್ನು ಕಂಡು, ರಾಮತಲ್ಪೆ ಸುಧಾಕರನ್ ಇವರನ್ನು ಕಾರ್ಲ್‌ಮಾರ್ಕ್ಸ್, ಸಾರ್ತ್ರೆ ಕಾಮೂ, ದಾಸ್ತೊವ್ಸ್ಕಿ ಮುಂತಾದವರ ಕೃತಿಗಳನ್ನು ಓದಲು ಪ್ರೇರೇಪಿಸಿದರು. ದಾಸ್ ಕ್ಯಾಪಿಟಲ್, ಮೆಟಮಾರ್ಫಸಿಸ್, ಮದರ್ ಮುಂತಾದ ಪುಸ್ತಕಗಳನ್ನು ಓದಿ, ರಾ.ನಂ. ನಂತರ ತಾವೇ ತಮ್ಮ ದಾರಿಯನ್ನು ನಿರ್ಧರಿಸಿಕೊಂಡರು. ಕ್ರಮೇಣ ಎಂ.ಚಿದಾನಂದ ಮೂರ್ತಿಯವರೊಂದಿಗೆ ಒಡನಾಟ ಹೆಚ್ಚಿತು.

ಕನ್ನಡ ಗೆಳೆಯರ ಬಳಗದ (ಹಿಂದೆ ಕನ್ನಡ ಶಕ್ತಿ ಕೇಂದ್ರದಲ್ಲಿಯೂ ಸಹ) ಯಾವುದೇ ಕೆಲಸಗಳನ್ನೂ, ಅವುಗಳನ್ನು ಯಾರಿಗೆ ವಹಿಸಿದ್ದರೂ, ಅವುಗಳ ಮೇಲೆ ಒಂದು ಕಣ್ಣಿಟ್ಟೇ ಇರುತ್ತಾರೆ. ಹೀಗಾಗಿ ಯಾರೇ ಆದರೂ, ಮರೆವಿನಿಂದಾಗಿಯೋ ಆಲಸ್ಯದಿಂದಾಗಿಯೋ ಕೆಲಸ ಮಾಡದಿದ್ದರೂ, ರಾ.ನಂ. ಅವುಗಳನ್ನು ಅವರವರಿಗೆ ನೆನಪಿಸಿಯೋ ಅಥವ ಬೇರೆ ರೀತಿಯಲ್ಲಿಯೋ ಮಾಡಿ ಮುಗಿಸುತ್ತಾರೆ. ಅವರ ಈ ಗುಣದಿಂದಾಗಿಯೇ ಕನ್ನಡ ಗೆಳೆಯರ ಬಳಗದ ಯಾವ ಯೋಜಿತ ಕೆಲಸಗಳೂ ನಿಲ್ಲದೆ ನಡೆಯುತ್ತವೆ. ಈ ಗುಣವನ್ನು ಎಲ್ಲಿ ಕಲಿತಿರೆಂದು ಕೇಳಿದಾಗ 'ಕಮುನಿಸ್ಟ್ ಪಕ್ಷದಲ್ಲಿ' ಎನ್ನುತ್ತಾರೆ.

ಎಚ್.ಎ.ಎಲ್.ಗೆ ಸೇರಿದ ನಂತರವೂ ಕಮುನಿಸ್ಟ್ ಪಕ್ಷದ ನಂಟು ಮುಂದುವರಿಯಿತು. ಪಾದರಸದಂತೆ ಕ್ರಿಯಾಶೀಲರಾಗಿದ್ದ ರಾ.ನಂ. ಅಲ್ಲಿ, ಎಂಭತ್ತರ ದಶಕದ ವೇಳೆಗೇ ಪಾರ್ಟಿಯ ಕಾರ್ಡ್‌ಹೋಲ್ಡರ್ ಮೆಂಬರಾಗಿದ್ದರು. ಪಕ್ಷದವರು ನೀಡುತ್ತಿದ್ದ ಹಲವಾರು ತರಬೇತಿ ತರಗತಿಗಳಿಗೆ ಹಾಜರಾಗಿ, ಅವರು ಕಲಿಸುತ್ತಿದ್ದ ಎಲ್ಲ ಸಂಘಟನಾ ಚಾತುರ್ಯಗಳನ್ನೂ ಕರಗತ ಮಾಡಿಕೊಂಡಿದ್ದರು. ಅಂತಹ ಹಲವಾರು ತರಬೇತಿ ಶಿಬಿರಗಳಲ್ಲಿಯೂ, ಪಕ್ಷದ ಹೋರಾಟಗಳಲ್ಲಿ ಬಂದಿಯಾಗಿರುವಾಗಲೂ, ಪಕ್ಷದ ಹಲವಾರು ನೇತಾರರೂ, ಧುರೀಣರೂ ಶೌಚ, ಸ್ನಾನ, ಊಟಗಳ ಸರತಿಯ ಸಾಲಿನಲ್ಲಿ ಸಾಮಾನ್ಯ ಸದಸ್ಯರಂತೆ ನಿಂತದ್ದನ್ನು ಕಂಡು ವಿಸ್ಮಿತರಾಗಿದ್ದೂ ಉಂಟು. ಸದಸ್ಯರಲ್ಲಿ ಯಾರೂ ಮೇಲಲ್ಲ (ಅವರು ಪದಾಧಿಕಾರಿಯಾಗಿದ್ದರೂ), ಯಾರೂ ಕೀಳಲ್ಲ ಎಂಬ ಭಾವನೆ ಅವರಲ್ಲಿ ನೆಲೆನಿಂತದ್ದು ಅಲ್ಲಿಯೇ. ಅದರ ಪರಿಣಾಮವಾಗಿಯೇ ಅವರು ಪ್ರತಿ ವರ್ಷವೂ ಕಾರ್ಯಕರ್ತರ ಸನ್ಮಾನ ಏರ್ಪಡಿಸುವ ಕಾರ್ಯಕ್ರಮ ಹಮ್ಮಿಕೊಂಡಿರುವುದು. ಅವರು ಅಲ್ಲಿ ಕಲಿತ 'ಎಲ್ಲರನ್ನೂ ಅನುಸರಣ ಮಾಡಿ ನೋಡು'ವ ಒಂದು ಗುಣವೇ ಇಂದೂ ಸಹ, ಬಾಕಿ ಬೀಳುವ ಕೆಲಸಗಳನ್ನು ಪೂರ್ತಿಗೊಳಿಸಲು ಸಹಾಯಕವಾಗಿದೆ. ವೈಯಕ್ತಿಕ ಶ್ರಮವನ್ನು ಮರೆತು, ಪಕ್ಷವು ಹೊರಿಸುವ ಯಾವುದೇ ಕೆಲಸವನ್ನು ಚಾಚೂ ತಪ್ಪದೆ ನಿಭಾಯಿಸುವ ಗುಣ, ಚರ್ಚೆಯ ಮೂಲಕ ಸರ್ವಸಮ್ಮತ ನಿರ್ಧಾರಕ್ಕೆ ಬರುವುದು

ಒಮ್ಮೆ ತೀರ್ಮಾನವಾದ ನಿರ್ಧಾರಕ್ಕೆ, ಅದು ತಾನು ಸೂಚಿಸಿದ ಸಲಹೆಗೆ ವಿರುದ್ಧ ವಾಗಿದ್ದರೂ, ಬದ್ಧನಾಗಿರುವುದು, ಪ್ರಾಮುಖ್ಯತೆಗಳಿಗನುಗುಣವಾಗಿ ಕೆಲಸಗಳಿಗೆ ಆದ್ಯತೆ ನೀಡುವುದು, ಸಂಗಾತಿ(ಕಾಮ್ರೇಡ್)ಗಳೊಂದಿಗೆ ಹಾರ್ದಿಕ ಸಂಬಂಧಗಳನ್ನಿಟ್ಟು ಕೊಳ್ಳುವುದು, ಕಷ್ಟ ಕಾಲದಲ್ಲಿ ಅವರಿಗೆ ಸಹಾಯ, ಸಾಂತ್ವನಗಳನ್ನು ನೀಡುವುದು, ದಾರಿ ತಪ್ಪುವ ಸಮಯದಲ್ಲಿ ಸೂಕ್ತ ಸಲಹೆ, ಸೂಚನೆಗಳನ್ನು ನೀಡಿ ಸರಿದಾರಿಗೆ ತರಲೆತ್ನಿಸುವುದು, ತಪ್ಪು ತಿದ್ದಿಕೊಳ್ಳದೆ ಹಾದಿ ತಪ್ಪುವವರಿಂದ ದೂರವಿರುವುದು, ಹಾಸಿಗೆ ಇರುವಷ್ಟಕ್ಕೇ ಕಾಲು ಚಾಚುವುದು, ನಂಬಿದ ಸಿದ್ಧಾಂತಗಳಿಗನುಗುಣವಾಗಿ ಬದುಕುವುದು ಯಾವುದನ್ನು ತಾನು ಸ್ವತಃ ಅನುಸರಿಸಲಾರೆನೋ ಅದನ್ನು ಇತರರಿಗೆ ಅನುಸರಿಸಲು ಹೇಳದಿರುವುದು ಇವೇ ಮೊದಲಾದ ಸಂಘಟನಾ ಸದ್ಗುಣಗಳನ್ನು ರಾ.ನಂ. ಕಮುನಿಸ್ಟ್ ಪಕ್ಷದ ಸಹವಾಸದಲ್ಲಿ ಕಲಿತರಂತೆ. ಈಗ ಆ ಪಕ್ಷದೊಂದಿಗೆ ಸಂಬಂಧವೇನೂ ಇರದಿದ್ದರೂ, ಪಕ್ಷದ ಪರಿಚಿತರೊಂದಿಗೆ ಈಗಲೂ ಹಾರ್ದಿಕ ಸಂಬಂಧ ಇಟ್ಟುಕೊಂಡಿರು ವಂತಹ ಮುಕ್ತ ಮನಸ್ಸಿನವರಿವರು. ಕನ್ನಡವೇ ಇವರಿಗೆ ಆದ್ಯತೆಯಾದ್ದರಿಂದ, ಕನ್ನಡದ ಹಿತೈಷಿಗಳೆಲ್ಲರೂ ಇವರಿಗೆ ಹಿತೈಷಿಗಳು; ಕನ್ನಡದ ಶತ್ರುಗಳಾರೂ ಇವರಿಗೆ ಮಿತ್ರರಲ್ಲ ಅಷ್ಟೆ!

ಕನ್ನಡ ಶಕ್ತಿ ಕೇಂದ್ರದಲ್ಲಿ ಕಾರ್ಯಕ್ರಮಗಳನ್ನು ರೂಪಿಸುವಾಗ, ಅಧ್ಯಕ್ಷರು ಸಾಮಾಜಿಕ ನ್ಯಾಯವನ್ನು ಗಮನದಲ್ಲಿರಿಸಿಕೊಂಡು ಭಾಷಣಕಾರರನ್ನು ನಿರ್ಧರಿಸುತ್ತಿದ್ದರು. ಕೆಲವು ಸಂದರ್ಭಗಳಲ್ಲಿ ಸಾಮಾಜಿಕ ನ್ಯಾಯಕ್ಕನುಗುಣವಾಗಿ ಭಾಷಣಕಾರರು ಸಿಗುತ್ತಿರಲಿಲ್ಲ. ಆಗ ರಾ.ನಂ. ಸಮಾಧಾನಮಾಡುತ್ತಿದ್ದುದು, 'ಸರ್, ನಮ್ಮ ಉದ್ದೇಶದಲ್ಲಿ ಜಾತೀಯತೆ ಇಲ್ಲದಿರುವಾಗ, ಅದರ ಬಗ್ಗೆ ನಾವೇಕೆ ತಲೆ ಕೆಡಿಸಿಕೊಳ್ಳಬೇಕು? ಕಾರ್ಯಕ್ರಮದ ಯಶಸ್ಸಿನ ದೃಷ್ಟಿಯಿಂದ, ಅರ್ಹತೆಯ ಅಳತೆಗೋಲಿನಿಂದಾಗಿ ನಾವು ಈ ಆಯ್ಕೆ ಮಾಡಬೇಕಿದೆ. ಅದಕ್ಕೇಕೆ ಇಷ್ಟು ಯೋಚನೆ?' ಎಂದು. ಕನ್ನಡ ಗೆಳೆಯರ ಬಳಗದ ಕಾರ್ಯಕ್ರಮಗಳನ್ನು ರೂಪಿಸುವಾಗ ಕೂಡ, ಮೊದಲು ಸಾಮಾಜಿಕ ನ್ಯಾಯವನ್ನು ಗಮನದಲ್ಲಿರಿಸಿಕೊಂಡು ಭಾಷಣಕಾರರನ್ನು ನಿರ್ಧರಿಸಲು ಪ್ರಯತ್ನಿಸಿ, ಸಾಧ್ಯ ವಾಗದಿದ್ದಾಗ ಅರ್ಹತೆಯ ಅಳತೆಗೋಲಿನಿಂದಲೇ ಅಂತಿಮ ಆಯ್ಕೆ ಮಾಡಲಾಗುತ್ತದೆ. ಯಾವುದಾದರೂ ಕಾರ್ಯಕ್ರಮಕ್ಕೆ ಕಲಾವಿದರನ್ನು ಆಯ್ಕೆ ಮಾಡುವಾಗಲೂ ರಾ.ನಂ. ನೋಡುವುದು ಕೇವಲ ಅವರ ಅರ್ಹತೆ ಮತ್ತು ಕನ್ನಡಿಗತನ ಮಾತ್ರ. ನನಗೆ ತಿಳಿದಂತೆ ಅವರು ಕನ್ನಡತನವನ್ನು ಮರೆತು ಯಾರನ್ನಾದರೂ ಹೊಗಳಿದ್ದರೆ ಅದು ಕೇವಲ ತೆಲುಗು ಕ್ರಾಂತಿಕಾರಿ ಹಾಡುಗಾರ ಗದ್ದರ್ ಅವರನ್ನು ಮಾತ್ರ! ಎಚ್.ಎ.ಎಲ್.ನ ಬ್ರಾಹ್ಮಣ ಸಂಘಕ್ಕೆ ಸದಸ್ಯರಾಗುವಂತೆ (ಕಾರ್ಯದರ್ಶಿಯಾಗು ವಂತೆಯೂ) ಎಷ್ಟೇ ಒತ್ತಡ ಬಂದರೂ, ಅಲ್ಲಿ ತಮಿಳು, ಮಲೆಯಾಳಿ ಬ್ರಾಹ್ಮಣ ಸದಸ್ಯರಿರುವುದರಿಂದ, ಯಾವುದಾದರೂ ಸಂದರ್ಭ ದಲ್ಲಿ ಕನ್ನಡವಿರೋಧಿ ನಿಲುವು ತಳೆಯಬೇಕಾಗಬಹುದೆಂಬ ಒಂದೇ ಕಾರಣಕ್ಕಾಗಿಯೇ ಅವರು ಅದರ ಸದಸ್ಯರಾಗಲೇ ಇಲ್ಲ. ಆದರೆ ನಾನು ಒಂದು ಅವಧಿಗೆ 'ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘ'ಕ್ಕೆ ಅಧ್ಯಕ್ಷನಾದಾಗಲೂ, ನನ್ನ ಆ ನಿರ್ಧಾರವನ್ನು ಹಳಿಯದೆ 'ಗೌಡರ ಸಂಘದಲ್ಲೇನೂ ತಮಿಳರಾಗಲೀ, ಮಲೆಯಾಳಿಗಳಾಗಲೀ ಸದಸ್ಯರಾಗಿರುವುದಿಲ್ಲ

ಬಿಡಿ. ನಿಮಗೆ ಮುಜುಗರವಾಗುವಂತಹ ಸಂದರ್ಭವೆಂದೂ ಬರುವುದಿಲ್ಲ' ಎಂದು ಲಘುವಾಗಿ ತಳ್ಳಿಹಾಕಿದ್ದು ಅವರ ದೊಡ್ಡತನಕ್ಕೆ ಸಾಕ್ಷಿ. ತಾನು ಜಾತ್ಯತೀತನಾಗಿದ್ದರೂ ಇತರರೂ ಕೂಡ ಹಾಗೇ ಜಾತ್ಯತೀತರಾಗಿರಬೇಕೆಂದು ನಿರೀಕ್ಷಿಸದ ಹೃದಯ ವೈಶಾಲಿ ನಮ್ಮ ರಾ.ನಂ.!

ಎಚ್.ಎ.ಎಲ್. ಅಪ್ರೆಂಟಿಸ್‌ಷಿಪ್ ಮಾಡುವ ಬಹುತೇಕ ಐ.ಟಿ.ಐ. ಹುಡುಗರಿಗೆ ಎಚ್.ಎ.ಎಲ್.ನಲ್ಲಿ ಕೆಲಸ ಸಿಗುತ್ತದೆ ಎಂಬ ನಂಬಿಕೆ. ಆದ್ದರಿಂದ ಅಲ್ಲಿಗೆ ಅಪ್ರೆಂಟಿಸ್‌ಷಿಪ್ ಮಾಡಲೆಂದು ಬರುವವರ ನೂಕು ನುಗ್ಗಲು. ಯಥಾ ಪ್ರಕಾರ ಅಲ್ಲಿಯೂ ಕನ್ನಡೇತರರದೇ ಮೇಲುಗೈ. ಇದರ ಬಗ್ಗೆ ರಾ.ನಂ. ಚಿಂತಿತರಾಗಿದ್ದರು. ಆಗ ಒಮ್ಮೆ ರಾಜಶೇಖರ್ ಎಂಬ ಒಬ್ಬರು ಅಲ್ಲಿಗೆ ಪ್ರಾಂಶುಪಾಲರಾಗಿ ಬಂದರು. ನೋಡಲು ಕುಳ್ಳಗೆ ಕಪ್ಪಗಿದ್ದ ಅವರು ಒಳ್ಳೇ ಖಡಕ್ ಆಸಾಮಿ. ಮಾತಿನಲ್ಲಿ ಜೋರಾಗಿದ್ದರೂ ವಿವೇಕಶಾಲಿ. ಒಮ್ಮೆ ಅವರು ಸರ್ಪಭೂಷಣ ಶಿವಯೋಗಿಗಳ ಮಠದಲ್ಲಿ ನಡೆಯುತ್ತಿದ್ದ ಬುಧವಾರದ ಸಭೆಗೆ ಬಂದು, ಒಂದು ವಿಷಯದ ಬಗೆಗೆ ಮಾತನಾಡಲು ಅನುಮತಿ ಕೋರಿ ಮಾತಿಗಾರಂಭಿಸಿದರು. "ಎಚ್.ಎ.ಎಲ್.ನ ಟಿ.ಟಿ.ಐ.ನಲ್ಲಿ ಅಪ್ರೆಂಟಿಸ್‌ಷಿಪ್ ಮಾಡಲು ಬರುವ ಬಹುತೇಕ ಐ.ಟಿ.ಐ. ಹುಡುಗರು ಬರೀ ನಗರ ಪ್ರದೇಶದವರಾಗಿದ್ದು ಅಲ್ಲಿ ಗ್ರಾಮೀಣ ಪ್ರದೇಶಗಳಿಂದ ಬರುವ ಐ.ಟಿ.ಐ. ವಿದ್ಯಾರ್ಥಿಗಳ ಸಂಖ್ಯೆ ತೀರಾ ಕಡಿಮೆ. ಇದು ಸರಿಯಲ್ಲ. ಸರ್ಕಾರದ ಸೌಲಭ್ಯಗಳು ಗ್ರಾಮೀಣ ಪ್ರದೇಶಗಳ ಐ.ಟಿ.ಐ. ವಿದ್ಯಾರ್ಥಿಗಳಿಗೂ ಸಿಗಬೇಕು. ಈಗ ಪ್ರವೇಶ ಪರೀಕ್ಷೆ ಬರೆಯಲು ಬರೀ ಬೆಂಗಳೂರಿನ ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶವಿರುವುದರಿಂದ ಹೀಗಾಗಿದೆ. ಇದನ್ನು ಬದಲಾಯಿಸಿ ಪ್ರವೇಶ ಪರೀಕ್ಷೆ ಬರೆಯಲು ಗ್ರಾಮೀಣ ಪ್ರದೇಶದಿಂದ ಬರುವ ವಿದ್ಯಾರ್ಥಿಗಳಿಗೂ ಅವಕಾಶವಾಗುವಂತೆ ನೀವು ನಿಯಮಗಳನ್ನು ಬದಲಾವಣೆ ಮಾಡಿಸಿಕೊಡಬೇಕು" ಎಂದು ಅವರು ಎಂ.ಚಿದಾನಂದಮೂರ್ತಿಗಳಲ್ಲಿ ಪ್ರಾರ್ಥಿಸಿದರು. ಕೂಡಲೆ ಛಂಗನೆ ಎದ್ದು ನಿಂತ ರಾ.ನಂ. "ಇದು ಬಹಳ ಒಳ್ಳೆಯ ಸಲಹೆ. ಪ್ರಾಂಶುಪಾಲರ ಆಸೆ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳ ಮೇಲಿದೆ. ಅದರಿಂದಾಗಿ ಹೆಚ್ಚೆಚ್ಚು ಕನ್ನಡ ಐ.ಟಿ.ಐ. ವಿದ್ಯಾರ್ಥಿಗಳು ಬರುವುದರಿಂದ, ನಾವು ಕೂಡಲೆ ಕಾರ್ಯಪ್ರವೃತ್ತರಾಗಿ, ಈ ಕುರಿತ ನಿಯಮಗಳನ್ನು ಬದಲಾಯಿಸುವುದು ಒಳಿತು. ಇದಕ್ಕೆ ನನ್ನ ಸಂಪೂರ್ಣ ಬೆಂಬಲವಿದೆ" ಎಂದರು. ಸಭೆಯಲ್ಲಿದ್ದ ಎಲ್ಲರ ಆಸೆಯೂ ಅದೇ ಆಗಿತ್ತು. ನಂತರದ ದಿನಗಳಲ್ಲಿ, ರಾ.ನಂ. ಎಲ್ಲ ಕಡೆ ಓಡಾಡಿ, ಕಾಣಬೇಕಾದವರನ್ನು ಕಂಡು, ಜನರ ಗುಂಪು ಕಟ್ಟಿಕೊಂಡು, ಕಾರ್ಮಿಕ ಸಂಘದ ಪದಾಧಿಕಾರಿಗಳನ್ನು ಹುರಿದುಂಬಿಸಿ, ಆಡಳಿತ ವರ್ಗದವರಲ್ಲಿ ಪ್ರಭಾವ ಬೀರಿ ಕೊನೆಗೂ ಬದಲಾವಣೆ ತಂದೇಬಿಟ್ಟರು. ಅದಾದ ನಂತರದ ಒಂದು ಬುಧವಾರದ ಸಭೆಗೆ ಬಂದ ರಾಜಶೇಖರ್, "ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಅವಕಾಶ ನೀಡಿದ್ದಕ್ಕಾಗಿ ಕೃತಜ್ಞತೆಗಳು. ಇನ್ನು ಮುಂದಿನ ಕೆಲಸ ನಾನು ನೋಡಿಕೊಳ್ಳುತ್ತೇನೆ" ಎಂದರು. ಹೇಳಿದ ಹಾಗೆಯೇ ಅವರು, ಕರ್ನಾಟಕದ ಎಲ್ಲಾ ಜಿಲ್ಲೆಗಳ ಐ.ಟಿ.ಐ. ವಿದ್ಯಾರ್ಥಿಗಳಿಂದ ಪ್ರವೇಶ ಪರೀಕ್ಷೆ ಬರೆಸಿ, ಆ ಮೂಲಕ ಸಾಕಷ್ಟು ಸಂಖ್ಯೆಯ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು

ಎಚ್.ಎ.ಎಲ್.ನ ಟಿ.ಟಿ.ಐ.ನಲ್ಲಿ ಅಪ್ರೆಂಟಿಸ್‌ಷಿಪ್ ಮಾಡಲು ಕಾರಣಕರ್ತರಾದರು. ಅದಾದ ನಂತರ, ಎಚ್.ಎ.ಎಲ್.ನಲ್ಲೂ ಹೆಚ್ಚೆಚ್ಚು ಕನ್ನಡ ಮುಖಗಳು ಕಾಣ ಲಾರಂಭಿಸಿದವು. ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಅವಕಾಶ ನೀಡುವುದಕ್ಕಾಗಿ ಶ್ರಮಪಟ್ಟ ರಾಜಶೇಖರ್, ಪರೋಕ್ಷವಾಗಿ ಎಚ್.ಎ.ಎಲ್.ನಲ್ಲಿ ಕನ್ನಡಿಗರು ಹೆಚ್ಚಲೂ ಕಾರಣಕರ್ತರಾದರು. ಆದರೆ, ತಾವೂ ಶ್ರಮ ವಹಿಸಿ, ತಮ್ಮ ಸಕಲ ಸಾಮರ್ಥ್ಯಗಳನ್ನೂ ಬಳಸಿ, ಈ ಪ್ರಯತ್ನಕ್ಕೆ ಕೈಜೋಡಿಸಿದ್ದರೂ, ಇದರ ಸಂಪೂರ್ಣ ಕೀರ್ತಿಯನ್ನು ಪ್ರಾಂಶುಪಾಲ ರಾಜಶೇಖರ್‌ರವರಿಗೆ ಕೊಟ್ಟು, ತಾವು ಬದಿಗೆ ಸರಿದು ನಿಂತರು ವಿನಯಶಾಲಿ ರಾ.ನಂ.

ಅವರು ಹಲವಾರು ಸಾಹಿತಿಗಳಿಗೂ, ಗಣ್ಯರಿಗೂ ಸನ್ಮಾನ ಮಾಡಿದ್ದಾರೆ. ಎಂ.ಚಿದಾನಂದಮೂರ್ತಿ, ಪ್ರೊ. ಎಲ್.ಎಸ್. ಶೇಷಗಿರಿ ರಾವ್, ಟಿ.ವಿ.ವೆಂಕಟಾಚಲಶಾಸ್ತ್ರೀ ಆರ್.ಸಿ.ಹಿರೇಮಠ, ಎಚ್.ಎಂ.ಮರುಳಸಿದ್ಧಯ್ಯ ಇವರುಗಳ ಅಭಿನಂದನ ಸಮಿತಿಯ ಕಾರ್ಯದರ್ಶಿಯಾಗಿ ದುಡಿದಿದ್ದಾರೆ. ಶಂ.ಬಾ. ಅಭಿನಂದನ ಸಮಿತಿಯ ಸದಸ್ಯರಾಗಿಯೂ ಸಹ ರಾ.ನಂ. ಕೆಲಸ ಮಾಡಿದ್ದಾರೆ. ಉಳಿದಂತೆ ಶತಾಯುಷಿಗಳಾದ ಪಂಡಿತ ಸುಧಾಕರ ಚತುರ್ವೇದಿ, ಎ.ಎನ್.ಮೂರ್ತಿರಾಯರು ಇತ್ಯಾದಿ ಅನೇಕ ಗಣ್ಯರ ಸನ್ಮಾನ ಕಾರ್ಯಕ್ರಮಗಳನ್ನು ಸುಸೂತ್ರವಾಗಿ ನಡೆಸುವಲ್ಲಿ ಆಯಾ ಸಮಿತಿಗಳವರಿಗೆ ನೆರವಾಗಿದ್ದಾರೆ. ಈ ದಿಸೆಯಲ್ಲಿ ರಾ.ನಂ. ಮಾಡಿರುವ ಅತ್ಯಪೂರ್ವ ಕೆಲಸವೆಂದರೆ ಎಲೆಮರೆ ಕಾಯಿಗಳಂತಿರುವ ತಳಮಟ್ಟದ ಕಾರ್ಯಕರ್ತರನ್ನು ಗುರುತಿಸುವ ಕೆಲಸ. ಕನ್ನಡ ಗೆಳೆಯರ ಬಳಗದ ನವೆಂಬರ್ ರಾಜ್ಯೋತ್ಸವಾಚರಣೆ ಸಮಾರಂಭದಲ್ಲಿ ಪ್ರತಿವರ್ಷ ಹತ್ತು ಮಂದಿ ಕನ್ನಡ ಕಾರ್ಯಕರ್ತರಿಗೆ ಸತತವಾಗಿ ಸನ್ಮಾನ ಮಾಡಿಕೊಂಡು ಬಂದಿರುವ ಅವರ ಈ ಕೆಲಸ ಎಲ್ಲರ ಗಮನ ಸೆಳೆದಿದೆ. ಅತ್ಯುತ್ಸಾಹಿ ಕನ್ನಡ ಕಾರ್ಯಕರ್ತರಾಗಿದ್ದ ಆಲ್ಲ ಚಿರಂಜೀವಿಯವರ ನೆನಪಿನಲ್ಲಿ ಕೊಡುವ ಕನ್ನಡ ಚಿರಂಜೀವಿ ಪ್ರಶಸ್ತಿಯೂ, ಇದನ್ನು ನೋಡಿ ಸ್ಫೂರ್ತಿಗೊಂಡು, ಬೆಳಗಾವಿಯ ರಾಘವೇಂದ್ರ ಜೋಶಿಯವರು ತಮ್ಮ ತಂದೆಯವರಾದ ಅರವಿಂದ ಜೋಶಿಯವರ ನೆನಪಿನಲ್ಲಿ ಕೊಡುವ ಕನ್ನಡ ಅರವಿಂದ ಪ್ರಶಸ್ತಿಯೂ ಜನತೆಯ ಗಮನ ಸೆಳೆದಿವೆ.

ರಾ.ನಂ. ಅವರ ಪ್ರಾಮಾಣಿಕತೆ, ಶ್ರದ್ಧೆ, ಪರಿಶುದ್ಧ ಕನ್ನಡ ಪ್ರೇಮ, ನಿಷ್ಠೆಗಳಿಂದಾಗಿ ಅವರು ಪತ್ರಿಕೆಗಳವರಿಗೆ ಹತ್ತಿರದವರು. ಕನ್ನಡ-ಕನ್ನಡಿಗ-ಕರ್ನಾಟಕಗಳ ಬಗೆಗಿನ ಯಾವುದೇ ವಿಷಯ, ಅಂಕಿ-ಅಂಶಗಳ ವಿಚಾರಗಳಿದ್ದರೂ, ಅವರೆಲ್ಲರೂ ಮೊರೆ ಹೋಗುವುದು ರಾ.ನಂ.ರನ್ನೇ. ಆದರೆ ಅವರು ಯಾವತ್ತೂ ಈ ಸದಭಿಮಾನವನ್ನು ದುರ್ಬಳಕೆ ಮಾಡಿಕೊಂಡಿಲ್ಲ. ಕೆಲವು ಸಲ ಪರಿಚಯದವರು, ಅವರ ಈ ಪತ್ರಿಕಾ ಸಂಪರ್ಕವನ್ನು, ತಮ್ಮ ಸ್ವಂತದ ಕೆಲಸದ ಸಹಾಯಕ್ಕಾಗಿ ಕೇಳಿಕೊಂಡಾಗ, ರಾ.ನಂ. ನಿರ್ದಾಕ್ಷಿಣ್ಯವಾಗಿ "ಇಲ್ಲ" ಎಂದು ಹೇಳಿ ನಿಷ್ಠುರರಾದರೇ ಹೊರತು, ದಾಕ್ಷಿಣ್ಯಕ್ಕಾಗಿ ಎಂದೂ ದುರುಪಯೋಗ ಪಡಿಸಿಕೊಂಡಿಲ್ಲ. ಅವರು ಪತ್ರಕರ್ತರಿಗೆ ಹತ್ತಿರವಾಗುವುದಕ್ಕೆ ಇನ್ನೂ ಕೆಲವು ಕಾರಣಗಳಿವೆ. ಮೊದಲನೆಯದಾಗಿ 'ಸುದ್ದಿ' ಎಂದರೇನೆಂಬುದು

ರಾ.ನಂ.ಗೆ ಚೆನ್ನಾಗಿ ಗೊತ್ತು. ಯಾವುದೇ ಸಮಾರಂಭವಿರಲಿ, ಅದರಲ್ಲಿ ಪತ್ರಿಕೆಗಳಿಗೆ ಬೇಕಾದುದೇನೆಂಬುದನ್ನು ಅವರು ತಕ್ಷಣ ಗುರುತಿಸುತ್ತಾರೆ. ಅವರು ಪತ್ರಿಕೆಗಳಿಗೆ ಕೊಡುವ ಸಂಕ್ಷಿಪ್ತ ವರದಿಗಳಲ್ಲಿ ಅದನ್ನು ಮಾತ್ರ ಕೊಟ್ಟಿರುತ್ತಾರೆ. ಹೀಗಾಗಿ ಬಹಳಷ್ಟು ಸಲ, ರಾ.ನಂ. ಕೊಟ್ಟ ವರದಿಯು ಪತ್ರಿಕೆಗಳಲ್ಲಿ ಹಾಗೆಯೇ ಪ್ರಕಟವಾಗಿರುತ್ತದೆ. ಎರಡನೆಯದಾಗಿ ಸಾರ್ವಜನಿಕರಿಂದ ಹಣ ಸಂಗ್ರಹಿಸಿ ಮಾಡಿದ ಯಾವುದೇ ಕಾರ್ಯಕ್ರಮದ ನಂತರ ಅದರ ಖರ್ಚು, ವೆಚ್ಚ ಸಂಗ್ರಹಗಳ ವಿವರಗಳನ್ನು ಕೂಲಂಕಷವಾಗಿ ನೀಡಿ, ಪಾರದರ್ಶಕತೆ ತೋರುವುದು. ಮೂರನೆಯದಾಗಿ ಅವರಲ್ಲಿರುವ ಪತ್ರಿಕಾ ಪ್ರತಿಭೆ. ಎಚ್.ಎ.ಎಲ್.ನ ಬಿ.ವಿ.ರವಿಕುಮಾರ್ ಮತ್ತು ಸಂಗಡಿಗರು ಕಳೆದ ೫ ವರ್ಷಗಳಿಂದ ಕಾರ್ಮಿಕರಿಗಾಗಿಯೇ ಹೊರತರುತ್ತಿರುವ, ಮಾಸಪತ್ರಿಕೆ **'ಕರ್ನಾಟಕ ಕಾರ್ಮಿಕ ಲೋಕ'**ದ ಸಂಪಾದಕರಾಗಿ ರಾ.ನಂ. ಈವರೆಗೂ ಬರೆದಿರುವ ಸಂಪಾದಕೀಯಗಳನ್ನು ನೋಡಿದರೆ ಅವರೊಳಗಿನ ಅಸಾಧಾರಣ ಪತ್ರಿಕಾ ಪ್ರತಿಭೆಯ ದರ್ಶನವಾಗುತ್ತದೆ. ಇದುವರೆಗೂ ಅವರ ಸಂಪಾದಕೀಯಗಳಲ್ಲಿ ಯಾವುದೇ ವಿಷಯವೂ ಪುನರಾವರ್ತನೆಯಾಗಿಲ್ಲ! ಒಂದೊಂದು ಸಂಪಾದಕೀಯವೂ ಒಂದೊಂದು ಪ್ರತ್ಯೇಕ ಉತ್ಕೃಷ್ಟ ಲೇಖನದಂತಿದೆ. **'ಕರ್ನಾಟಕ ಕಾರ್ಮಿಕ ಲೋಕ'**ದಲ್ಲಿ ರಾ.ನಂ. ಈವರೆಗೂ ಬರೆದಿರುವ ಸಂಪಾದಕೀಯ ಗಳನ್ನು ಪುಸ್ತಕ ರೂಪದಲ್ಲಿ ಹೊರತಂದಲ್ಲಿ, ಅದೊಂದು ಅತ್ಯುತ್ಕೃಷ್ಟ ಕನ್ನಡ ಗ್ರಂಥವಾಗುವುದರಲ್ಲಿ ಅನುಮಾನವೇ ಇಲ್ಲ. ತಾವು ಬರೆಯುವುದಷ್ಟೇ ಅಲ್ಲ ಯಾರಾದರೂ ಬರೆಯಬಲ್ಲರೆಂಬ ಭರವಸೆಯಿರುವವರನ್ನೂ ಸಹ ಉತ್ತೇಜಿಸಿ ಸತತವಾಗಿ ಪೀಡಿಸಿ, ಕಡೆಗೆ 'ಸಾತ್ವಿಕ ಕಿರುಕುಳ' ಕೊಟ್ಟಾದರೂ ಸರಿ, ಅಂಥವರಿಂದ ಬರೆಸಿಯೇ ತೀರುತ್ತಾರೆ. ಅವರ ಇಂಥ 'ಕಿರುಕುಳ'ದಿಂದಾಗಿಯೇ ಈ ಲೇಖನದ ಲೇಖಕರೂ ಕೂಡ **'ಕರ್ನಾಟಕ ಕಾರ್ಮಿಕ ಲೋಕ'**ದಲ್ಲಿ ಹಲವಾರು ಲೇಖನಗಳನ್ನು ಬರೆಯಲು ಸಾಧ್ಯವಾಗಿದೆ. ರಾ.ನಂ. ಕೇವಲ ತಾವಷ್ಟೇ ಬೆಳೆಯದೆ, ತಮ್ಮ ಸುತ್ತಮುತ್ತಲಿನ ಆಪ್ತ ವಲಯದವರನ್ನೂ ಬೆಳೆಸುತ್ತಿದ್ದಾರೆ. ಆದರೆ, ಅವರ ಸುತ್ತಮುತ್ತಲಿರುವ ನಾವು ಮಾತ್ರ ಅದಕ್ಕೆ ನೀರಸ ಪ್ರತಿಕ್ರಿಯೆ ತೋರಿಸುತ್ತಿದ್ದೇವೆ. ಇಲ್ಲದಿದ್ದಲ್ಲಿ ಕನ್ನಡ ಗೆಳೆಯರ ಬಳಗದಲ್ಲಿ ಈ ವೇಳೆಗೆ, ಹಲವಾರು ಮರಿ ರಾ.ನಂ.ಗಳು ತುಂಬಿರಬೇಕಾಗಿತ್ತು.


ಪುಸ್ತಕ ರಚನೆಯಲ್ಲೂ ರಾ.ನಂ. ಎತ್ತಿದ ಕೈ. ಅವರು ಈವರೆಗೆ ಬರೆದಿರುವ ಹಲವಾರು ಕೃತಿಗಳಲ್ಲಿ ಕೆಲವು ಹೊಚ್ಚಹೊಸ ಕ್ಷೇತ್ರದವು. **'ಸಂಘಟನೆಯ ಮೂಲ ತತ್ವಗಳು'** ಅವರು ರಚಿಸಿದ ಅಂತಹ ಒಂದು ಕೃತಿ. ಕನ್ನಡ ಚಳವಳಿಗಾರರಿಗೆ, ಅವರವರ ಸಂಘಗಳನ್ನು ವ್ಯವಸ್ಥಿತವಾಗಿ ಬೆಳೆಸಲು ಸಹಾಯವಾಗಲೆಂದು ಅವರು ಈ ಕೃತಿಯನ್ನು ರಚಿಸಿದರು. ಈ ಕೃತಿಯಲ್ಲಿ ಅನಗತ್ಯ ವಿವರಣೆಗಳಿಲ್ಲದೆ, ಕೇವಲ ಸೂತ್ರರೂಪದ ವಿಷಯಗಳ ಮಂಡನೆಯಿದೆ. ಈ ಆಕೃತಿಗೆ ಅವರು ಸರಳವಾದ ವಿವರಣೆಗಳನ್ನು ರಕ್ತ ಮಾಂಸಗಳಂತೆ ತುಂಬಿ ಬರೆದಿದ್ದರೆ, ಅದು ಇತ್ತೀಚೆಗೆ ಬರುತ್ತಿರುವ ಯಾವುದೇ ಮೇನೇಜ್ಮೆಂಟ್ ಪುಸ್ತಕಗಳನ್ನೂ ಮೀರಿಸುತ್ತಿತ್ತು ಎಂಬುದರಲ್ಲಿ ಸಂಶಯವಿಲ್ಲ. ಇವರ ಪುಸ್ತಕಗಳಲ್ಲಿ ವಿಷಯವು ಅತ್ಯಂತ ಸಾಂದ್ರವಾಗಿರುತ್ತದೆ. ಕಡಿಮೆ ಪದಗಳಲ್ಲಿ ಹೆಚ್ಚಿನ

ವಿಷಯ ಹೇಳುವುದು ಇವರ ಹೆಚ್ಚುಗಾರಿಕೆ. ಇದು ಇವರು ಬರೆದಿರುವ ಇತರ ಪುಸ್ತಕಗಳಾದ **ಕನ್ನಡ ಹೋರಾಟಗಳು – ಒಂದು ನೋಟ, ಆಧುನಿಕ ಕರ್ನಾಟಕದ ಆತಂಕಗಳು, ಕನ್ನಡ ಕೈದೀವಿಗೆ ಕನ್ನಡ ಶಕ್ತಿ, ಕನ್ನಡ ಚಳವಳಿ ಮತ್ತು ಸಾಹಿತಿಗಳ ಕಲಾವಿದರ ಬಳಗ, ಎಚ್.ಎ.ಇ.ಎ. ಹೆಜ್ಜೆ ಗುರುತುಗಳು, ಕನ್ನಡವೆಂದರೆ ಬರಿನುಡಿಯಲ್ಲ** ಹಾಗೂ ಇತ್ತೀಚಿನ **ಸ್ಥಳಿಯರಿಗೆ ಉದ್ಯೋಗ** ಪುಸ್ತಕಗಳಲ್ಲಿ ವ್ಯಕ್ತವಾಗಿದೆ. **ಕನ್ನಡ ಹೋರಾಟಗಳು– ಒಂದು ನೋಟಕ್ಕೆ** ಕರ್ನಾಟಕ ಏಕೀಕರಣದ ನಂತರದ ಚಳವಳಿ ಬಗ್ಗೆ ಪ್ರಕಟವಾಗಿರುವ ಮೊದಲ ಕೃತಿ ಎಂಬ ಹೆಗ್ಗಳಿಕೆಯಿದೆ. **ಆಧುನಿಕ ಕರ್ನಾಟಕದ ಆತಂಕಗಳು** ಕೃತಿಗೆ **'ರಾಮಜಾಧವ'** ಪ್ರಶಸ್ತಿ ಲಭಿಸಿದೆ. **'ಎಚ್.ಎ.ಇ.ಎ. ಹೆಜ್ಜೆ ಗುರುತುಗಳು'** ಬೆಂಗಳೂರಿನ ಪ್ರಮುಖ ಸಾರ್ವಜನಿಕ ವಲಯದ ಉದ್ದಿಮೆಯಾದ ಹಿಂದೂಸ್ತಾನ್ ವಿಮಾನ ಕಾರ್ಖಾನೆಯ ಕಾರ್ಮಿಕ ಸಂಘದ ೫೦ ವರ್ಷಗಳ ಇತಿಹಾಸವನ್ನು ಕುರಿತಾದ ಕೃತಿಯಾಗಿದ್ದು, ಹಲವಾರು ಕಾರ್ಮಿಕ ನಾಯಕರಿಂದಲೂ, ಕಾರ್ಮಿಕರಿಂದಲೂ ಪ್ರಶಂಸೆಗೊಳಗಾಗಿದೆ.

ಎಲ್.ಎಸ್.ಶೇಷಗಿರಿ ರಾವ್ ಹಾಗೂ ಗೊ.ರು.ಚನ್ನಬಸಪ್ಪ ಅವರೊಂದಿಗೆ ಸೇರಿ ಸಂಪಾದಿಸಿರುವ **ಕನ್ನಡ – ಕನ್ನಡಿಗ – ಕರ್ನಾಟಕ**ವಂತೂ ಒಂಭತ್ತು ಮುದ್ರಣಗಳನ್ನು ಕಂಡಿದೆ. ಖ್ಯಾತ ಕಾದಂಬರಿಕಾರ ಎಸ್.ಎಲ್.ಭೈರಪ್ಪನವರಂತೂ 'ಇದು ಕನ್ನಡಿಗರ ಅನಧಿಕೃತ ಸಂವಿಧಾನ' ಎಂದು ಬಣ್ಣಿಸಿದ್ದಾರೆ. ಇವರ ಇತರ ಸಂಪಾದಿತ ಕೃತಿಗಳೆಂದರೆ **ಇದು ನಮ್ಮ ಕರ್ನಾಟಕ, ಕನ್ನಡ ಕಿಸೆಗನ್ನಡಿ, ಸುವರ್ಣ ಶಕ್ತಿ, ವಿಪ್ರಯಾನ ಮತ್ತು ಅನುಭಾವ. 'ಕನ್ನಡ ಗಂಗೋತ್ರಿ'** ಎಂಬ ವಾರಪತ್ರಿಕೆಯಲ್ಲಿ **'ಕನ್ನಡ ಮಾರ್ದನಿ'** ಎಂಬ ಅಂಕಣವನ್ನೂ ಸಹ ಬರೆದಿದ್ದಾರೆ. ಕರ್ನಾಟಕದ ಹಲವಾರು ಪ್ರಮುಖ ದಿನಪತ್ರಿಕೆಗಳಲ್ಲೂ ನಿಯತಕಾಲಿಕಗಳಲ್ಲೂ, ಮಹತ್ವದ ಸಾಂದರ್ಭಿಕ ಗ್ರಂಥಗಳಲ್ಲೂ ಸುಮಾರು ೧೫೦ಕ್ಕೂ ಮಿಕ್ಕು ಲೇಖನಗಳನ್ನು ಬರೆದಿದ್ದಾರೆ. ವಿಶ್ವ ಕನ್ನಡ ಸಮ್ಮೇಳನವೂ ಸೇರಿದಂತೆ ಪ್ರಮುಖ ವೇದಿಕೆಗಳಲ್ಲಿ ವಿವಿಧ ವಿಷಯಗಳ ಬಗ್ಗೆ ಪ್ರಬಂಧಗಳನ್ನು ಮಂಡಿಸಿದ್ದಾರೆ.

ರಾ.ನಂ. ಇಷ್ಟರಮಟ್ಟಿಗೆ ಕನ್ನಡ ನಿಷ್ಠೆಯುಳ್ಳವರೂ, ನಿಷ್ಠುರರೂ ಆಗಿದ್ದರೂ ಕೂಡ ಇತರ ಯಾವ ಭಾಷೆಯವರೂ ಅವರನ್ನು ಶತ್ರುವೆಂದಾಗಲೀ, ಅನಪೇಕ್ಷಿತ ವ್ಯಕ್ತಿಯೆಂದಾಗಲೀ ಪರಿಗಣಿಸಿಲ್ಲ. ಆಯಕಟ್ಟಿನ ಜಾಗಗಳಲ್ಲಿರುವ (ಪಿ.ಎಫ್., ಪೇ ರೋಲ್ಸ್ ಆಡಳಿತ ಸಿಬ್ಬಂದಿ ಇತ್ಯಾದಿ) ಹಲವಾರು ಕನ್ನಡೇತರ ಅಧಿಕಾರಿಗಳೂ, ನೌಕರರೂ ಇವರನ್ನು ಆಪ್ತರಂತೆ ಪರಿಗಣಿಸಿರುವುದು ನೇರವಾಗಿ ನನ್ನ ಅರಿವಿಗೇ ಬಂದಿದೆ. ಅನೇಕ ಸಂದರ್ಭಗಳಲ್ಲಿ ನನಗೂ, ನನ್ನಂತಹ ಇತರರಿಗೂ ಅಂತಹವರಿಂದ ಬೇಕಾದ ಸಹಾಯವನ್ನು ಒದಗಿಸಿರುವುದೇ ಇದಕ್ಕೆ ಸಾಕ್ಷಿ. ಹಲವರು ತಿಳಿದುಕೊಂಡಿರುವಂತೆ, ನೀವು ಕನ್ನಡಪ್ರೇಮಿ ಎಂದು ತೋರಿಸಿಕೊಂಡರೆ ನಿಮ್ಮನ್ನು ಕನ್ನಡೇತರರು ಕಡೆಗಣಿಸುತ್ತಾರೆಂಬುದಾಗಲೀ, ನಿಮ್ಮನ್ನು ಬಲಿಪಶು ಮಾಡುತ್ತಾರೆಂಬುದಾಗಲೀ ನಿಜವಲ್ಲವೆಂದು ರಾ.ನಂ. ತೋರಿಸಿಕೊಟ್ಟಿದ್ದಾರೆ. 'ನೀವು ಕರ್ತವ್ಯನಿಷ್ಠರಾಗಿದ್ದರೆ, ನೀವು ಮಾಡುವ ಕೆಲಸದಲ್ಲಿ ಕೌಶಲ್ಯ ಸಾಧಿಸಿದ್ದರೆ, ನಿಮ್ಮ ಕೌಶಲ್ಯದಿಂದ ಸಹಾಯವಾಗುವಂತಿದ್ದರೆ, ನಿಮ್ಮ ನಡವಳಿಕೆ

ಸೌಜನ್ಯಯುತವಾಗಿದ್ದರೆ, ನಿಮ್ಮ ಕನ್ನಡ ನಿಷ್ಠೆಗಾಗಿ ಯಾರೂ ನಿಮ್ಮನ್ನು ಏನೂ ಮಾಡಲಾರರು! ಹಾಗೆಯೇ, ನಿಮ್ಮಲ್ಲಿ ಕೌಶಲ್ಯವಿಲ್ಲದಿದ್ದಲ್ಲಿ, ನೀವು ಕನ್ನಡಪರ ನಿಲುವು ಹೊಂದಿದ್ದರೂ, ಕೇವಲ ಕನ್ನಡಿಗರು ಎಂಬ ಕಾರಣಕ್ಕೆ ಯಾರೂ ನಿಮ್ಮನ್ನು ಗೌರವಿಸಲಾರರು' ಎಂಬುದನ್ನು ರಾ.ನಂ. ತಮ್ಮ ಬದುಕಿನ ಉದಾಹರಣೆಯಿಂದ ತೋರಿಸಿಕೊಟ್ಟಿದ್ದಾರೆ. ಇಂತಹ ರಾ.ನಂ. ಒಬ್ಬ ಆದರ್ಶ ಕನ್ನಡಿಗ. ಅವರ ಬದುಕು ಎಲ್ಲ ಕನ್ನಡಿಗರಿಗೂ ಮಾದರಿ. ಇಂತಹ ರಾ.ನಂ. ಸಂತತಿ ಸಾವಿರವಾಗಲಿ! ❐



ಒಂದೇ ಹಗ್ಗದ ಎರಡು ಹುರಿಗಳು

■ ಎಸ್. ಶಿವಲಿಂಗಯ್ಯ

ಸರ್ವಜ್ಞನೆಂಬುವನು ಗರ್ವದಿಂದಾದವನೆ
ಸರ್ವರೊಳು ಒಂದೊಂದು ನುಡಿಗಲಿತು
ವಿದ್ಯೆಯಾ ಪರ್ವತವೆ ಆದ ಸರ್ವಜ್ಞ

ಹುಟ್ಟಿನಿಂದಲೇ ಯಾರೂ ಸರ್ವಜ್ಞರಲ್ಲ. ಕಾಲಪ್ರವಾಹದ ಸಾಗುದಾರಿಯಲ್ಲಿ ಸಂಧಿಸುವ ಎಲ್ಲರೂ ಒಂದೊಂದು ಅನುಭವಕ್ಕೆ ಕಾರಣಕರ್ತರು. ಪರಿಸ್ಥಿತಿಗನುಗುಣವಾಗಿ ಬಂದೊದಗಿದ ಅನುಭವವೆಲ್ಲ ಒಂದೊಂದು ಪಾಠ; ಮುಂದಿನ ವ್ಯಕ್ತಿತ್ವದ ಮೂರ್ತಿ ರೂಪುಗೊಳ್ಳಲು ಬೀಳುವ ಉಳಿಯ ಪೆಟ್ಟುಗಳು.

ಇಂದಿನ ರಾ.ನಂ. ← ಚಂದ್ರಶೇಖರ್ ← ಚಂದ್ರ ರೂಪುಗೊಂಡದ್ದು ಹೇಗೆ? ಆವೇಶಕ್ಕೆ ಒಳಗಾಗಿ, ಜೈ ಎನ್ನಲು ಹೋಗಿ ಪೊಲೀಸರ ಲಾಠಿ ಏಟಿನ ರುಚಿ ಅನುಭವಿಸಿದ್ದು, ಕೈ ಮುರಿದುಕೊಂಡದ್ದು; ಕರ್ತವ್ಯ ಪ್ರಜ್ಞೆಗೆ ಕಟ್ಟುಬಿದ್ದು, ಮಳೆಯಿಂದ ತಪ್ಪಿಸಿಕೊಳ್ಳಲು ಓಡಿ ನಾಯಿ ಕಚ್ಚಿಸಿಕೊಂಡದ್ದು; ಹುಡುಗ ಉತ್ಸಾಹಿ ಆದರೆ ವಿಶ್ವವಿದ್ಯಾಲಯದ ಯಾವುದೇ ಶಿಸ್ತಿನ ಅಧ್ಯಯನವಿಲ್ಲ ವೆಂದಾಗ ಖಿನ್ನನಾಗಿದ್ದು; ಒಂದೇ–ಎರಡೇ, ನೆನಪಿನಾಳಕ್ಕೆ ಇಳಿದಾಗ ಸಕ್ಕರೆ–ಉಪ್ಪಿನ ಮಿಶ್ರಣ ಒಟ್ಟಿಗೇ ಬಾಯಲ್ಲಿ ಬಿದ್ದ ಅನುಭವ; ಅದೇ ಜೀವನ.

ಹುಟ್ಟಿದ್ದು–ಬೆಳೆದದ್ದು ಪ್ರಕೃತಿಯ ಮಡಿಲು, ಹೇಮಾವತಿ ತೀರದ ನಿಡಿಗೆರೆಯಲ್ಲಿ. ಆ ಹಸಿರು–ನೀರು ಅಂತಃಸತ್ವವುಳ್ಳ ಯಾರನ್ನೇ ಆದರೂ ಚೈತನ್ಯಶೀಲರನ್ನಾಗಿಸುತ್ತವೆ. ಆ ನೀರಿನಿಂದ ಹೊರಬಿದ್ದ ಮೀನು–ಚಂದ್ರ ನಗರಜೀವನಕ್ಕೆ ಅನಿವಾರ್ಯವಾಗಿ



ತಳ್ಳಲ್ಪಟ್ಟು ಓದು ಮುಂದುವರಿಸಿದ್ದು, ಇಂದಿನ ಉಮಾ ಚಿತ್ರಮಂದಿರದ ಸಮೀಪವಿರುವ ಅಂದಿನ ಬೆಂಗಳೂರು ಹೈಸ್ಕೂಲ್‌ನಲ್ಲಿ. ಅಣ್ಣ ಶ್ರೀಕಂಠಯ್ಯ ಅಡಿಗೆ ಮಾಡಿಟ್ಟು ಕೆಲಸಕ್ಕೆ ಹೋದರೆ, ಕಲಿತು ಬಂದ ತಮ್ಮ ಉಂಡ ನಂತರ ಓಡಾಟ. ಸ್ತಬ್ಧ ಜೀವನದಿಂದ ಹೊರಬಂದ ಮುಗ್ಧ ಬಾಲಕನಿಗೆ ಗಜಿಬಿಜಿಯ ನಗರದಲ್ಲಿ ಕುತೂಹಲ ಮೂಡಿಸುವ ಘಟನೆಗಳು, ಎದುರಾದ ವ್ಯಕ್ತಿಗಳು ಸಹಜವಾಗೇ ಆಸಕ್ತಿಯ ಕೇಂದ್ರ. ಜಾತ್ರೆಯಲ್ಲಿ ಕುಣಿದವನಿಗೆ ನಗರದ ಮೆರವಣಿಗೆ–ಪ್ರತಿಭಟನೆ ಕಂಡಾಗ, ಜೈಕಾರ ಕೇಳಿದಾಗ, ಕೈ ಹಿಡಿದು ನಿಲ್ಲಿಸಲಾದೀತೆ; ಸಹಜವಾದ ಸೆಳೆತ. ಆವೇಶದ ಭಾಷಣ ಅಭಿಮಾನಕ್ಕೆ ಪೂರಕ; ಅಂತಹದೇ ಓದಿಗೆ ಪ್ರೇರಕ. ಕವಲೊಡೆದ ಸಾಂಪ್ರದಾಯಿಕ ಶಿಕ್ಷಣ, ಎಸ್.ಎಸ್.ಎಲ್.ಸಿ. ಮುಗಿದ ನಂತರ ಒಲವು ತೋರಿದ್ದು ಐ.ಟಿ.ಐ. ವೃತ್ತಿ ಶಿಕ್ಷಣದತ್ತ; ಆದಷ್ಟು ಬೇಗ ಕೆಲಸಕ್ಕೆ ಸೇರಬೇಕು, ದುಡಿದು ಸ್ವತಂತ್ರನಾಗಬೇಕೆಂಬ ಹಂಬಲ. ಮುಂದೆ ಬಿ.ಇ.ಎಂ.ಎಲ್.ನಲ್ಲಿ ಅಪ್ರೆಂಟಿಷಿಪ್. ವೃತ್ತಿಯಾಚೆಗಿನ ಕಾರ್ಯ ಚಟುವಟಿಕೆಗಳಿಂದ ಸೆಳೆತ, ನಾಯಕರೆಂದೆನಿಸಿ ಕೊಂಡವರ ಹಿಂಬಾಲಕ, ಒಂದಿಷ್ಟು ಕಲಿಕೆ. ಋಣಾತ್ಮಕ ಪರಿಣಾಮ, ಕೆಲಸ ಖಾಯಂ ಆಗಲಿಲ್ಲ. ಮುಂದಿನ ಬೇಟೆಗೆ ಬಂದಿಳಿದ ಸ್ಥಳ ತುಮಕೂರು ರಸ್ತೆಯಲ್ಲಿದ್ದ WIDIA ಗೆ (ಈಗ Kennametal ಆಗಿದೆ).

ನನ್ನ ವೃತ್ತಿ ಜೀವನ ಕೂಡ ಆರಂಭವಾದದ್ದು ಅದೇ WIDIA ದಲ್ಲಿ. ಐಯ್ಯಂಗಾರ್ಸ್ ಅಂಡ್ ಅಯ್ಯರ್ಸ್ ಪ್ರೈವೇಟ್ ಲಿಮಿಟೆಡ್ ಎಂದು ಅಂತರ ವಲಯದಲ್ಲಿ ಕುಹಕಕ್ಕೆ ಒಳಗಾಗಿದ್ದ ಜರ್ಮನ್ ಮೂಲದ ಸಂಸ್ಥೆ. ಸೈನಿಕ ಸಮುದಾಯ ಮಲೆಯಾಳಿ ಮಯ ಕನ್ನಡದ ಕೋಗಿಲೆಗಳು ಅಲ್ಲೊಂದು–ಇಲ್ಲೊಂದು ಬಾಯಿಬಿಡದ ಕಾಗೆಗಳಂತೆ. 'Do you know Kannada' ಎಂದು ಕೇಳಿದ ಅಚ್ಚ ಕನ್ನಡಿಗ ಸಹೋದ್ಯೋಗಿಯೊಬ್ಬನಿಗೆ 'ನಾನು ಕನ್ನಡಿಗ' ಎಂಬ ಉತ್ತರ ಕೇಳಿ ಅಚ್ಚರಿ ಮತ್ತು ಸಂತೋಷ ಎರಡರ ಸಮ್ಮಿಶ್ರ ಭಾವ. ನಾನಿದ್ದ ಗವೀಪುರ ಸಮೀಪದ ಲಕ್ಷ್ಮೀಪುರದಿಂದ ಬೆಳಿಗ್ಗೆ ೬ಕ್ಕೆ ಕಾಲ್ನಡಿಗೆಯಲ್ಲಿ ಸಿಟಿಮಾರ್ಕೆಟ್ ತಲುಪಿ, ಆ ಸಮಯಕ್ಕೆ ಇದ್ದ ಒಂದೇ ಒಂದು ನೆಲಮಂಗಲ ಬಸ್‌ನೊಳಕ್ಕೆ ತರಕಾರಿ ಸಾಗಿಸುವವರ ನಡುವೆ ಪೈಪೋಟಿ ನಡೆಸಿ ನುಗ್ಗಿ ಸೀಟೊಂದು ಹಿಡಿದರೆ, ಅದೂ ೨/೩. ಅಂದರೆ, ನಮ್ಮಂತೆಯೇ ದೀಪಕ್ ಕೇಬಲ್, ಜಿಂದಾಲ್ ಅಲ್ಯುಮಿನಿಯಂ ಇತ್ಯಾದಿ ಕಾರ್ಖಾನೆಗಳಿಗೆ ಹೋಗುವ ಸಹಕಾರ್ಮಿಕರು, ಇಬ್ಬರು ಕುಳಿತುಕೊಳ್ಳುವ ಕಡೆ ಮೂವರು ಸೀಟು ಸಿಕ್ಕ ಸಮಾಧಾನದಿಂದ ಒಂದು ಗಂಟೆಯ ಸಹ ಪ್ರಯಾಣ (ಆದರೆ ಚಾಮರಾಜಪೇಟೆಯಿಂದ ಬರುತ್ತಿದ್ದ ಚಂದ್ರನ ಸವಾರಿ ಚಳಿಯಿರಲಿ, ಮಳೆ ಬರಲಿ, ಸೈಕಲ್ ಮೇಲೆಯೇ.)

ಪ್ರತಿದಿನ ಅದೇ ಮಾತು, ಬಸ್ ಪ್ರಯಾಣದ ಏಕತಾನತೆಯಿಂದ ತಪ್ಪಿಸಿಕೊಳ್ಳಲು ಕೈಯಲ್ಲೊಂದು ಪುಸ್ತಕ; ಬರುಬರುತ್ತಾ ಅದು ಸಾಂಕ್ರಾಮಿಕವಾಯಿತು. ನನ್ನಲ್ಲಿದ್ದ ಪುಸ್ತಕಗಳನ್ನು ಮಿತ್ರರಿಗೂ ಹಂಚುತ್ತಿದ್ದೆ, ದಿನಗಳೆದಂತೆ ಓದುಗ ಬಳಗ ದೊಡ್ಡದಾಯಿತು. ಪ್ರತಿಯೊಬ್ಬರೂ ಕೊಂಡು, ಪ್ರತಿಯೊಬ್ಬರೂ ಓದುವುದು. ಅದಕ್ಕೊಂದು ಸಾಂಘಿಕ ರೂಪದ ಆಲೋಚನೆ, ಹೆಸರು 'ಸಾಹಿತ್ಯ ಸಂಪದ.' ಕೆಲಸದ ನಡುವೆ ಕದ್ದು ಮುಚ್ಚಿ, ಕನ್ನಡ

ಪುಸ್ತಕ ವಿನಿಮಯ ಮಾಡುತ್ತಿದ್ದ ನನ್ನ ಈ ಚಟುವಟಿಕೆ, ಟ್ರೇಸಿಂಗ್/ವೆಲ್ಡಿಂಗ್ ಮಾಡುತ್ತಾ ಕಣ್ಣು ಕೆಂಪಗಾಗಿದ್ದ, ನನಗಿಂತ ೨-೩ ವರ್ಷ ಕಿರಿಯ ಸಹೋದ್ಯೋಗಿಯೊಬ್ಬನ ಗಮನಸೆಳೆಯಿತು. ಪರಿಚಯ ಮಾಡಿಕೊಂಡ, 'ನನ್ನ ಹೆಸರು ಚಂದ್ರಶೇಖರ್.'

ಕುಡಿತ, ಜೂಜು ಇತ್ಯಾದಿ ಹವ್ಯಾಸಗಳ ತಾಣದಲ್ಲಿ ಯಾರು ಯಾರನ್ನು ಬೇಕಾದರೂ ಪರಿಚಯಮಾಡಿಕೊಳ್ಳಬಹುದು. ಸ್ನೇಹವೂ ಸಹಜ. ಓದಿನ/ಪುಸ್ತಕದ ಚಟವಿರುವವರಿಗೂ ಇದನ್ನು ಅನ್ವಯಿಸಬಹುದೆಂದು ನನ್ನ ಅನುಭವ. ಇಬ್ಬರ ಹುಚ್ಚೂ ಒಂದೇ ಬಗೆಯದು ಆಗಿದಾಗ ಸ್ಫೂರ್ತಿ ಸಿಕ್ಕಂತೆ ಮಾತು-ಓಡಾಟ, ಚಟುವಟಿಕೆಗಳ ವೇಗವೂ ಹೆಚ್ಚಾಯಿತು. ಚಾಮರಾಜಪೇಟೆಯಿಂದ ಹನುಮಂತನಗರಕ್ಕೆ ಸ್ಥಳಾಂತರಗೊಂಡ ಚಂದ್ರಶೇಖರ್ ಹತ್ತಿರದ ಲಕ್ಷ್ಮೀಪುರದಲ್ಲಿದ್ದ ನಾನು. ಕಾರ್ಖಾನೆಯ ಒಳಗೂ-ಹೊರಗೂ ದಿನವೂ ಹಗಲು-ರಾತ್ರಿಯೂ, ಭೇಟಿಯಾಗಲು-ಮಾತನಾಡಲು-ಚರ್ಚೆಮಾಡಲು ಸುಗಮವಾಯಿತು.

ಜೊತೆಗೆ ಅಲ್ಲೇ ಸಮೀಪದಲ್ಲಿದ್ದವರು ಜಿಂದಾಲ್ ಕಾರ್ಖಾನೆಯ ಉದ್ಯೋಗಿ ಕೆ.ಎಸ್.ವೆಂಕಟರಾಮು (ಹನುಮಂತನಗರ ರಾಮಾಂಜನೇಯ ರಸ್ತೆ-ಗಣೇಶನ ಗುಡಿಯ ಬಳಿ). ನಮ್ಮ (ವಿಷಯಾಧಾರಿತ) ಹರಟೆ ಮನೆಯಲ್ಲಲ್ಲ ಬೀದಿ ಬದಿಯಲ್ಲಿ ದೀಪದ ಕಂಬದ ಕೆಳಗೆ, ಊಟ ಮುಗಿಸಿದ ನಂತರ ರಾತ್ರಿ ೧೦-೧೧-೧೨ರ ತನಕವೂ ಸಾಗುತ್ತಿತ್ತು (ನಮ್ಮ ಆವೇಶದ ವಾಗ್ಯುದ್ಧಕ್ಕೆ ಎಷ್ಟೋ ಸಲ ಆಸುಪಾಸಿನ ಮನೆಯವರ ಆಕ್ಷೇಪವೂ ಆದದ್ದುಂಟು) ಭಾನುವಾರದ ಬೆಳಗಿನ ಲಾಲ್ ಬಾಗ್ ಭೇಟಿ ದಿನಚರಿಯ ಒಂದಂಶ.

ಸಾಹಿತ್ಯ ಸಂಪದಕ್ಕೊಂದು ಸಾಂಘಿಕ ರೂಪ. ಎಲ್ಲರೂ ಸಮಾನರು, ಸಮರೂಪದ ಚಂದಾ, ಅವರಿಗಿಷ್ಟವಾದ ಕನ್ನಡ ಪುಸ್ತಕ (ಜ್ಯೋತಿಷ್ಯ, ಅಡುಗೆ ಪುಸ್ತಕ ಹೊರತುಪಡಿಸಿ)ಕೊಳ್ಳುವುದು, ಎಲ್ಲರೂ ಸರದಿಯ ಮೇಲೆ ಓದುವುದು. ನಂತರ ಅದರ ಬಗ್ಗೆ ವಿಚಾರ ವಿನಿಮಯ-ಚರ್ಚೆ, ವರ್ಷದ ಕೊನೆಗೆ ಕೊಂಡಿದ್ದವರ ಕೈಗೆ ಹಿಂದಿರುಗಿಸುವುದು. ವರ್ಷಾಂತ್ಯದಲ್ಲಿ ಲಾಲ್‌ಬಾಗಿನಲ್ಲಿ ಒಂದು ಸಭೆ. ಹಣ ಸಂಗ್ರಹಿಸಲು, ಪುಸ್ತಕ ಹುಡುಕಿ ತರಲು, ಯಾರ್‍ಯಾರ ಬಳಿ ಯಾವ ಪುಸ್ತಕವಿದೆ ಎಂಬುದರ ವಿವರ ಇತ್ಯಾದಿಗಳಲ್ಲಿ ನಮ್ಮಿಬ್ಬರದು ಮುಗ್ಗಾಲು. ಪುಸ್ತಕ ಓದುವ, ವಿತರಿಸುವ ಪ್ರಕ್ರಿಯೆಯಲ್ಲಿ ಕನ್ನಡ ಕೋಗಿಲೆಗಳನ್ನು ಗುರುತಿಸುವುದು, ಸಂಕಷ್ಟ ಆಲಿಸುವುದು, ಅನ್ಯಾಯದ ಅನುಭವ ಹಂಚಿಕೊಳ್ಳುವುದು ಮುಂದುವರಿದಂತೆ, ವಿದ್ಯಾರ್ಥಿ ದೆಸೆಯಲ್ಲಿ SJ Polytechnicನಲ್ಲಿ ಕನ್ನಡ ಸಂಘ ಸ್ಥಾಪನೆಯ ರುಚಿಕಂಡಿದ್ದ ನನಗೆ, ಅದರ ಅನುಭವದ ರೋಮಾಂಚನ ಮತ್ತೊಮ್ಮೆ ಸವಿಯಲು ತವಕ. ಹೀಗೆ ೧೯೭೪ರಲ್ಲಿ ಸಾಕಾರಗೊಂಡದ್ದೇ ವಿಡಿಯ ಕಾರ್ಮಿಕರ ಕನ್ನಡ ಸಂಘ. ಇದರ ಬೌದ್ಧಿಕ ಚಟುವಟಿಕೆ ನಮ್ಮಿಬ್ಬರ ಕೈಯಲ್ಲಿ ಪರಂಪರೆಯ ಅರಿವು ಮೂಡಿಸುವ ಪ್ರದರ್ಶನ, ಸಾಹಿತ್ಯಕ ಸ್ವರೂಪದ ಜೊತೆಗೇ ಚಳವಳಿಯ ಬಿಸಿ, ಉದ್ಘಾಟನೆಗೆ ಮುಖ್ಯ ಅತಿಥಿಯಾಗಿ ಬಂದಿದ್ದ ವಾಟಾಳರ ಗುಡುಗು.

ಅನಂತಪುರದ ತೆಲುಗು ವಿದ್ವಾಂಸರಾದ ಸದಾನಂದಶಾಸ್ತ್ರಿ ಅವರಿಂದ ಬೆಂಗಳೂರು ವಿಶ್ವೇಶ್ವರಪುರದ ಆರ್ಯಸಮಾಜದಲ್ಲಿ ಪ್ರಥಮ ಬಾರಿಗೆ ಕನ್ನಡ ಅಷ್ಟಾವಧಾನ

ಮಾಡಿಸಿದ್ದೊಂದು ಸಾಧನೆ. ಇತ್ತ ಉತ್ಸಾಹ, ಹೊಸ ಆಲೋಚನೆಗಳಲ್ಲಿ ನಾವು ಮುಳುಗಿದ್ದರೆ, ಅತ್ತ ಈ ಸ್ಥಳೀಯ ಬೀಸುಗಾಳಿಯ ಎದುರು ತಮ್ಮ ಹಿತಾಸಕ್ತಿ ಕಾಪಾಡಿಕೊಳ್ಳಲು ಆಡಳಿತ ವರ್ಗದವರ ಖಾರ ಅರೆಯುವ ಕೆಲಸ. ಒಬ್ಬೊಬ್ಬರನ್ನು ಒಂದೊಂದು ಕಾರಣ ನೀಡುತ್ತಾ, ನಿವಾರಿಸಿಕೊಳ್ಳುವ ಕಾರ್ಯಕ್ರಮದಡಿಯಲ್ಲಿ ಚಂದ್ರಶೇಖರ್‌ಗೆ ಗೇಟ್ ಪಾಸ್, ಸಂಘವೂ ಗುಪ್ತಗಾಮಿನಿ. ಇದ್ದರೆ ಇದೆ, ಇಲ್ಲದಿದ್ದರೆ ಇಲ್ಲ, ಸದ್ಯದ ಸರಸ್ವತಿ ನದಿಯಂತೆ ಮಂಗಮಾಯ. ಮುಂದೆ ಚಂದ್ರಶೇಖರ್ ಎಚ್.ಎ.ಎಲ್. ಸೇರಿದರೂ, ನನ್ನ ಅವನ ಸ್ನೇಹಕ್ಕೆ-ಸಂಪರ್ಕಕ್ಕೆ-ಚಿಂತನೆಗೆ ಯಾವ ಭಂಗವೂ ಬರಲಿಲ್ಲ, ಬಂದಿಲ್ಲ.

ಇಲ್ಲಿ ಅವರ ಕುಟುಂಬದ ಬಗ್ಗೆ ಎರಡು ಮಾತು ಪ್ರಸ್ತುತ. ಪ್ರತಿನಿತ್ಯ ಮನೆಗೆ ಭೇಟಿಕೊಡುತ್ತಿದ್ದ ನನ್ನ ಬಗ್ಗೆ ಸದಭಿಪ್ರಾಯ, ವಿಶ್ವಾಸ. ಸಾತ್ವಿಕ ಸ್ವಭಾವದ ಅವರ ತಂದೆ ನಂಜುಂಡಭಟ್ಟರು ಸಾಹಿತ್ಯ-ಸಂಸ್ಕೃತಿಯ ಬಗ್ಗೆ ಚೆನ್ನಾಗಿ ತಿಳಿದುಕೊಂಡವರು. ಸಮಕಾಲೀನ ಚಿಂತನೆಗಳ ಅವರ ಅಣ್ಣ ಶ್ರೀಕಂಠಯ್ಯ ಎಚ್.ಎ.ಎಲ್.ನಲ್ಲಿ ಕಾರ್ಮಿಕ ಮುಂದಾಳು. ಇವರಿಬ್ಬರೊಂದಿಗೂ ಅವರವರ ಆಸಕ್ತಿ ಕ್ಷೇತ್ರವನ್ನಾಧರಿಸಿ ನನ್ನ ಚರ್ಚೆ ಪುಸ್ತಕ ವಿನಿಮಯ ನಡೆದಿತ್ತು. ತಾಯಿ ಶ್ರೀಮತಿ ಜಯಲಕ್ಷ್ಮಿ (ಮಕ್ಕಳು ಅವರನ್ನು ಜಯಮ್ಮ ಎಂದೇ ಸಂಬೋಧಿಸುತ್ತಿದ್ದರು) ಮೃದು ಮಾತಿನ ವಾತ್ಸಲ್ಯ ಮೂರ್ತಿ. ಅವರ ಕೈ ರುಚಿಯ ಅನುಭವ ಮರೆಯಲಾದೀತೆ. ಇನ್ನು ಇಬ್ಬರು ತಮ್ಮಂದಿರು, ರಾಮಶೇಷ (ಸದ್ಯ ಎಚ್.ಎ.ಎಲ್. ಉದ್ಯೋಗಿ), ಡಾ. ನರಹರಿ (ಭಾರತೀಯ ವಿಜ್ಞಾನ ಮಂದಿರ), ಅಕ್ಕ ಸತ್ಯವತಿ ಹಾಗೂ ತಂಗಿ ನಾಗರತ್ನ ಮಧ್ಯಮ ವರ್ಗದ ತಾಪತ್ರಯಗಳ ನಡುವೆ ಸಾಮರಸ್ಯದಲ್ಲೆ ಸುಖ ಕಾಣುವ ಸುಸಂಸ್ಕೃತ ಕುಟುಂಬ.

ನಮ್ಮ ಓದಿನ, ಚಿಂತನೆಯ ಚಟುವಟಿಕೆ ಪ್ರಬುದ್ಧವಾದಂತೆ ಬಂದ ಅನುಮಾನ ಗಳಿಗೆ, ಅನಿಸಿದ ಸಂದಿಗ್ಧಗಳಿಗೆ ಪುಸ್ತಕದ ಲೇಖಕರನ್ನೇ ಸಂಪರ್ಕಿಸಿ ಚರ್ಚಿಸುವ ಉಮೇದು. ಪತ್ರ ವ್ಯವಹಾರ-ಭೇಟಿ, ಅದೂ ಶಿವರಾಮ ಕಾರಂತ, ಶಂ.ಬಾ. ಜೋಶಿ ಬೀchi ಅವರಂತಹ ಹಿರಿಯೊಂದಿಗೆ. ಸಾಹಿತ್ಯ ಸಮ್ಮೇಳನಗಳಿಗೆ ತಪ್ಪದೇ ಹಾಜರ್. ನೆಚ್ಚಿನ ಲೇಖಕರ ಭೇಟಿ-ಪರಿಚಯ-ಮಾತುಕತೆ, ಸ್ನೇಹಿತರ ಸಂಪಾದನೆ ಹಳಬರ ಮರುಭೇಟಿ ನೆನಪುಗಳ ಮೆಲುಕು.

ಈ ಹುಡುಕಾಟದ ಪ್ರಕ್ರಿಯೆಯಲ್ಲಿ ಆತ್ಮೀಯರಾದ ಅನೇಕರಲ್ಲಿ ಆರ್. ಶೇಷಶಾಸ್ತ್ರಿ ಎಚ್. ಎಸ್. ಗೋಪಾಲ ರಾವ್, ದೇವರ ಕೊಂಡಾರೆಡ್ಡಿ, ಪಿ. ವಿ. ಕೃಷ್ಣಮೂರ್ತಿ ಮಲ್ಲೇಪುರಂ ಜಿ. ವೆಂಕಟೇಶ್, ಜಿ.ಎಂ. ಹೆಗಡೆ, ಆಲ್ಲ ಚಿರಂಜೀವಿ, ಬಿ.ಎಸ್.ಬಸವಾರಾಧ್ಯ ಇತ್ಯಾದಿ ಕೆಲವು ಮರೆಯಬಾರದ ಹೆಸರುಗಳು. ಕನ್ನಡದ ಯಾವ ಸಾಂಪ್ರದಾಯಿಕ ಓದೂ ಇಲ್ಲದ (ಅಂದರೆ ವಿಶ್ವವಿದ್ಯಾಲಯದ ಸರಕಲ್ಲದ), ಆದರೆ ಸಮಕಾಲೀನ ಸಾಹಿತ್ಯದ ಓದು ಹಿರಿ-ಕಿರಿಯ ಲೇಖಕರೊಂದಿಗೆ ಪರಿಚಯ-ಚರ್ಚೆ ಗಮನಿಸುವ ಅನೇಕರಿಗೆ, ಈ ಇಬ್ಬರು ಕಾರ್ಖಾನೆ ಕಾರ್ಮಿಕರ ಬಗ್ಗೆ ಅಚ್ಚರಿ, ಇಲ್ಲವೇ ಯಾವುದೋ ಕಾಲೇಜಿನಲ್ಲಿ ಉಪನ್ಯಾಸಕ ರಾಗಿರಬಹುದೇನೊ ಎಂಬ ಅನಿಸಿಕೆ ಸಹ.

೧೯೭೭ರಲ್ಲಿ 'ಪ್ರವಾಹ ಪತಿತರ ಕರ್ಮ–ಹಿಂದೂ ಎಂಬ ಧರ್ಮ' ಕುರಿತಂತೆ ಉಪನ್ಯಾಸ ನೀಡಲು ಬೆಂಗಳೂರು ವಿಶ್ವವಿದ್ಯಾಲಯದ ಆಹ್ವಾನದ ಮೇಲೆ ಬೆಂಗಳೂರಿಗೆ ಬಂದಿದ್ದ ಶಂ.ಬಾ. ಅವರ ಭೇಟಿ, ಮುಕ್ತ ಮಾತುಕತೆ. ಒಂದು ಬಗೆಯಲ್ಲಿ ನಮ್ಮಿಬ್ಬರ ಚಿಂತನೆಗೆ ತಿರುವು ಕೊಟ್ಟ ಘಟ್ಟ, ಅವರಂತೆಯೇ ಗಂಭೀರ ವಿಚಾರಗಳಲ್ಲಿ ಆಸಕ್ತರಾದ ನಮ್ಮನ್ನು ಕಂಡು ಅವರಿಗೂ ವಿಶ್ವಾಸ, ಆತ್ಮೀಯತೆ ಅವರ ವ್ಯಕ್ತಿತ್ವಕ್ಕೆ ಮಾರುಹೋದ ನಮಗೆ, ಆ ಹಿರಿಯರನ್ನು ಬೆಂಗಳೂರಿನಲ್ಲಿ ಸನ್ಮಾನಿಸಬಾರದೇಕೆ ಎಂಬುದೊಂದು ಆಲೋಚನೆ. ಸರಿ ಶುರುವಾಯ್ತು ಬಿತ್ತನೆ, ಸಾಹಿತಿಗಳ ಚಿಂತಕರ ಭೇಟಿ, ಹೇಗೆ ಮಾಡಿದರೆ ಯಾರ ಮುಂದಾಳತ್ವ–ಸಂಪಾದಕತ್ವ ಒದಗಿದರೆ ಸೂಕ್ತವೆಂಬ ಸಮಾಲೋಚನೆ. ಎಲ್ಲಿಯ ಶಂ.ಬಾ. ಅವರ ವಿಚಾರಗಳು, ಎಲ್ಲಿಯ ಈ ಇಬ್ಬರು ಕಾರ್ಖಾನೆ ಕಾರ್ಮಿಕರು. ಎಲ್ಲೆಡೆ ಮಿಶ್ರಭಾವ–ಪ್ರತಿಕ್ರಿಯೆ. ಬೀchiಯವರ ಸಲಹೆ ಮೇರೆಗೆ ಆಗ ತಾನೇ ಸರ್ಕಾರದ ಸೇವೆಯಿಂದ ನಿವೃತ್ತರಾಗಿದ್ದ ಸಿದ್ಧಯ್ಯ ಪುರಾಣಿಕರ ಅಧ್ಯಕ್ಷತೆಯಲ್ಲಿ ಸಮಿತಿ ರಚನೆ ವಿ.ಸೀತಾರಾಮಯ್ಯನವರ ಸೂಚನೆ ಮೇರೆಗೆ ಬಲು ಪ್ರಯಾಸದಿಂದ ಸಂಭಾವನ ಗ್ರಂಥದ ಸಂಪಾದಕರಾಗಲು ಎಂ. ಚಿದಾನಂದಮೂರ್ತಿಯವರ ಮನವೊಲಿಸಿ ಕಾರ್ಯಪ್ರವೃತ್ತರಾದೆವು.

ಬದುಕಿನ ಅನೇಕ ಮಗ್ಗುಲಗಳ ಅನುಭವ ಪಡೆಯಲು ಇಂತಹದೊಂದು ಹೊಣೆ–ಓಡಾಟ ಸಾಕು. ನಮ್ಮಿಬ್ಬರ ಬದುಕಿಗೆ ಸಿಕ್ಕ ತಿರುವು, ಶಂ.ಬಾ. ಅವರ ಹುಡುಕಾಟದಂತೆ ಎಲ್ಲಿಂದ ಎಲ್ಲಿಗೊ; ಅನುಭವದ ಆಗರ, ವ್ಯಕ್ತಿತ್ವ ಮಾಗಲು ದೊರೆತ ಅಪೂರ್ವ ಅವಕಾಶ. ಪುಸ್ತಕದಾಚೆಗಿನ ಓದು (Between the lines ಎನ್ನುವಂತೆ), ದಾಖಲಿಸ ಹೊರಟರೆ ಅದೇ ಒಂದು ಪುಸ್ತಕವಾಗುವ ಭಯ; ಇಲ್ಲಿ ಇಷ್ಟೇ ಸಾಕು. ಈ ಎಲ್ಲ ಓಡಾಟದಲ್ಲಿ ನಾನು–ಚಂದ್ರಶೇಖರ್ ಒಂದೇ ಹಗ್ಗದ ಎರಡು ಹುರಿಗಳಂತೆ (ಎರಡು ದೇಹ ಒಂದು ಆತ್ಮ ಎಂಬ ಮಾತು ಕ್ಲೀಷೆಯಾದ್ದರಿಂದ ಈ ಬಳಕೆ). ಎಲ್ಲ ಶ್ರಮ–ಯಶಸ್ಸು, ಸಾರ್ಥಕತೆಯಲ್ಲಿ ಸಮಭಾವ–ಸಮಪಾಲು. ಈ ಪ್ರಕ್ರಿಯೆಯಲ್ಲಿ ನಮ್ಮ ಪ್ರಾಮಾಣಿಕ ಶ್ರಮವನ್ನು ನಿಸ್ವಾರ್ಥ ಸಾಹಿತ್ಯ ಪ್ರೇಮವನ್ನು ಗುರುತಿಸಿ, ಆತ್ಮೀಯತೆಯ ಧಾರೆಯೆರೆದವರು ಡಾ. ಎಂ. ಚಿದಾನಂದಮೂರ್ತಿಯವರು.

ಅಗಾಧ ಪಾಂಡಿತ್ಯದ, ಅಸಂಖ್ಯಾತ ಶಿಷ್ಯರ ವಿದ್ಯಾಗುರುಗಳು (ನಮ್ಮಂತಹ ಏಕಲವ್ಯರಿಗೂ ಸಹ). ಕೃಶ ಶರೀರ, ಕಾಠಿಣ್ಯದ ನಿರ್ಧಾರ. ನಂದರ ಉದ್ಯಾನದಲ್ಲಿ ಕಾಲಿಗೆ ತೊಡರಿ ಬೀಳಿಸಿದ ಬಳ್ಳಿಯನ್ನು ಬುಡಸಮೇತ ಕಿತ್ತೆಸೆದ ಆ ಚಾಣಕ್ಯನ ಕತೆಯನ್ನು ಎಲ್ಲೋ ಓದಿದವರಿದ್ದಾರೆ, ಕೇಳಿದವರಿದ್ದಾರೆ. ಆದರೆ ಅಂತಹದೇ ಛಲದಿಂದ ತೀರ್ಮಾನಗೈದ ಸಾತ್ವಿಕ ಸಿಟ್ಟನ್ನು ನಾನು, ಚಂದ್ರಶೇಖರ್ ನೋಡಿದ್ದೇವೆ. ಆಶ್ಚರ್ಯ ಬೇಡ, ಅದೇ ರೆಕ್ಸ್ ಸಿನಿಮಾ ಮಂದಿರ, ಇಂಗ್ಲಿಷ್ ಸಿನಿಮಾಗೆ ಹೋದವರು ಕನ್ನಡದಲ್ಲಿ ಟಿಕೆಟ್ ಕೇಳುವುದೆಂದರೇನು? ಕಿಂಡಿಯ ಅತ್ತಣಿಂದ ಮೂದಲಿಕೆ. ನಖಶಿಖಾಂತ ಉರಿದು ಹೋದ ಮೇಷ್ಟ್ರು, ಅಲ್ಲೆ ಪ್ರತಿಭಟನೆ. ಕಿಡಿಹೊತ್ತಿತ್ತು, ಮುಂದಿನ ವಾರ ಡಾ. ಜಿ. ರಾಮಕೃಷ್ಣ ಮುಂತಾದ ಪ್ರಮುಖರ ನೇತೃತ್ವದಲ್ಲಿ ಥಿಯೇಟರ್ ಮುಂದೆ ಪ್ರತಿಭಟನೆ, ಸುದ್ದಿ

ಸಣ್ಣದಾದರೂ ದೂರಗಾಮಿ ಪರಿಣಾಮ. ಅನಕೃ, ಮ. ರಾಮಮೂರ್ತಿಯಂಥವರ ಸಾತ್ವಿಕ ಹೋರಾಟದ ಮೊನಚು ಕಳೆದುಕೊಂಡು, ಕನ್ನಡೇತರರಿಗೇನು ಕನ್ನಡಿಗರಲ್ಲಿಯೂ ಅಪಹಾಸ್ಯಕ್ಕೆ ಗುರಿಯಾಗಿದ್ದ ಕನ್ನಡ ಚಳವಳಿಯ ಕೈಹಿಡಿಯಲು, ಕನ್ನಡದ ಉಳಿವಿಗಾಗಿ ಅಭಿನವ ವಿದ್ಯಾರಣ್ಯರ ಪ್ರಾದುರ್ಭಾವ. ಸಾಹಿತಿಗಳ, ಸಾರ್ವಜನಿಕ ಪ್ರಮುಖರ ಸಭೆ-ಸಮಾಲೋಚನೆ, ಕಾರ್ಯಕ್ರಮ; ಮುಂದೊದಗಬಹುದಾದ ಸಂಘರ್ಷಕ್ಕೆ ಸಿದ್ಧತೆ. ನಾವೆಲ್ಲ ಸೈನಿಕರು ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಆಳುವವರ ಕೆಲವು ಮೂರ್ಖ ನಿರ್ಧಾರಗಳು ದೂರಗಾಮಿ ಒಳ್ಳೆಯ ಪರಿಣಾಮಕ್ಕೆ ಕಾರಣವಾಗುವುದುಂಟು (ಒಲ್ಲದ ಮನಸ್ಸಿನಿಂದ ನುಂಗುವ ಕಹಿ ಗುಳಿಗೆಯಂತೆ). ಅದು ತಪ್ಪೆಂದು ಭಾವಿಸಿದ ಕನ್ನಡದ ಜನಪದ ಮೈಕೊಡವಿಕೊಂಡು ನಿಂತದ್ದಕ್ಕೆ ಮತ್ತೊಂದು ಹೆಸರು ಗೋಕಾಕ್ ಚಳವಳಿ. ಅಭಿಪ್ರಾಯ ಸಂಗ್ರಹಕ್ಕೆ ಬೆಂಗಳೂರಿಗೆ ಬಂದ ಡಾ. ಗೋಕಾಕ್, ಡಾ. ಕೆ. ಕೃಷ್ಣಮೂರ್ತಿಯವರ ಎದುರಿಗೆ ಕಾರ್ಮಿಕರಾಗಿ ನಮ್ಮ ಅಳಲ ಅರ್ಪಣೆ, ಅಲ್ಲೇ ಪ್ರತಿಭಟನೆ (ನಾನು-ಚಂದ್ರಶೇಖರ್ ಜೊತೆಗಿದ್ದೆವು ಎಂದು ಪ್ರತ್ಯೇಕ ಹೇಳಬೇಕಾಗಿಲ್ಲ). ಕನ್ನಡ ಬೌದ್ಧಿಕ ವಲಯದಲ್ಲಿ ಉದ್ವಿಗ್ನ ವಾತಾವರಣ.

ಏನಾದರೂ ಮಾಡಬೇಕೆಂದು ಚಡಪಡಿಸುತ್ತಿದ್ದ ಚಂದ್ರಶೇಖರ್, ಅದಕ್ಕೆ ಸರಿಯಾಗಿ ಚಿದಾನಂದಮೂರ್ತಿಯವರ ಮುಂದಾಳತ್ವದಲ್ಲಿ ಪ್ರತಿಭಟನೆ, ನಿರಶನ ಆರಂಭ. ವಿಧಾನಸೌಧದ ಮುಂದೆ, ಗೋಪಾಲಗೌಡ ವೃತ್ತದ ಸಮೀಪ ಶಾಮಿಯಾನ. ಹಿಂದೆ ಬೀಳುವುದುಂಟೆ, ಇಬ್ಬರೂ ಹೊರಟೆವು. ಜನಜಂಗುಳಿ, ಹೀಗೆ ಹೋಗಿ ಹಾಗೆ ಬರುವಷ್ಟರಲ್ಲಿ ಜೊತೆಗಿದ್ದ ಚಂದ್ರಶೇಖರ್ ಮಾಯ, ಗುಂಪಿನಲ್ಲಿ ತಪ್ಪಿಸಿಕೊಂಡಿದ್ದ. ಅಲ್ಲಿಂದ ಮುಂದೆ ಎಲ್ಲಿ ಹೋದ, ಏನು ಮಾಡಿದ ಎಲ್ಲವೂ ಜನಜನಿತ. ಸಾಹಿತಿ ಕಲಾವಿದರ ಬಳಗ – ಕನ್ನಡ ಶಕ್ತಿ ಕೇಂದ್ರ-ಶಂ.ಬಾ. ವಿಚಾರ ವೇದಿಕೆ-ಕನ್ನಡ ಗೆಳೆಯರ ಬಳಗ, ಎಲ್ಲಿಲ್ಲ? ಸಭೆ-ಸಮಾರಂಭ, ಸನ್ಮಾನ-ವಿಚಾರ ಸಂಕಿರಣ, ಪ್ರತಿಭಟನೆ-ಹೋರಾಟ ಎಲ್ಲದರಲ್ಲಿ ಮುಂದೆ. ಚೈತನ್ಯ ತುಂಬಿದ ರೇಷಿಮೆಯ ಹುಳು ರೂಪಾಂತರ ಹೊಂದಿ, ಹಾರಾಡುವ ಬಣ್ಣದ ಚಿಟ್ಟೆಯಂತೆ ಹೊರಬಂದ ನನ್ನ ಆತ್ಮೀಯ ಗೆಳೆಯ ಚಂದ್ರಶೇಖರ್‌ನ ಇಂದು ಜನ ಗುರುತಿಸುವ ಹೆಸರು ರಾ.ನಂ.

❐



ಅಪರೂಪದ ಆತ್ಮೀಯ ಅನುಬಂಧ

■ ಎಚ್.ಎನ್. ರಮೇಶ್‌ಬಾಬು

ರಾ.ನಂ. ಚಂದ್ರಶೇಖರ ಅಂದರೆ ನನ್ನ ಪರಿಭಾಷೆಯಲ್ಲಿ ಚಂದ್ರ ನನ್ನ ಪಾಲಿನ ಪೂರ್ಣಚಂದ್ರ. ಹಲವರ ಮಾತಿನಲ್ಲಿ ನಾವು ರಾಮ–ಲಕ್ಷ್ಮಣ, ಇಲ್ಲವೆ ಗುರು–ಶಿಷ್ಯ. ಇವು ನಾಲ್ಕು ದಶಕಗಳ ಅವಿನಾಭಾವ ಸಂಬಂಧಕ್ಕೆ ಇತರರು ಬಳಸುವ ಶಬ್ದರೂಪ. ಇವಕ್ಕೆ ನಮ್ಮಿಬ್ಬರ ಸ್ನೇಹ–ಸಂಬಂಧವನ್ನು ಪೂರ್ಣವಾಗಿ ಅರ್ಥೈಸುವ ಸಾಮರ್ಥ್ಯವಿದೆ ಎಂದು ನನಗನಿಸುವುದಿಲ್ಲ. ಏಕೆಂದರೆ ಇವೆಲ್ಲವನ್ನೂ ಮೀರಿದ್ದು ನಮ್ಮ ಅನುಬಂಧ. ಆದರೂ ನಾಲ್ಕು ದಶಕಗಳಿಂದ ನೆರಳಿನಂತೆ ಅನುಸರಿಸಿರುವ ನಮ್ಮ ಒಡನಾಟಕ್ಕೆ ಅಕ್ಷರ ರೂಪ ಕೊಡಲು ಶಕ್ತಿಮೀರಿ ಪ್ರಯತ್ನಿಸಿದ್ದೇನೆ.

ಇಂದು–ನಿನ್ನೆಯ ಬಂಧನದ ಶಿಖರದರ್ಶನ ಮಾಡುವ ಆತುರದಲ್ಲಿ ನಾಲ್ಕು ದಶಕಗಳ ಹಿಂದಿನ ಆಸ್ತಿಭಾರ ಮರೆಯುವುದು ಬೇಡ. ನೆನಪಿನಾಳಕ್ಕೆ ಇಳಿದಾಗ ದಾಖಲೆಗೆ ದಕ್ಕುವುದು, ೧೯೭೦ರ ಸುಮಾರಿಗೆ ರಾಜಾಜಿನಗರದಲ್ಲಿದ್ದ ನಮ್ಮ ಕುಟುಂಬ ಹನುಮಂತನಗರಕ್ಕೆ ಸ್ಥಳಾಂತರಗೊಂಡ ಸಮಯ. ಆಗ ನಾನಿನ್ನೂ ಹೈಸ್ಕೂಲು ವಿದ್ಯಾರ್ಥಿ. ಸೌಮ್ಯ ಸ್ವಭಾವದ ನನಗೆ ಸ್ನೇಹಿತರು ಕೆಲವೇ ಮಂದಿ. ನಮ್ಮ ಮನೆಯ ಸಮೀಪದಲ್ಲಿದ್ದ 'ರಾಮಣ್ಣ ಸೌದೆ ಡಿಪೋ' ಅಬಾಲವೃದ್ಧರಾದಿಯಾಗಿ ಸೇರುತ್ತಿದ್ದ ಕಟ್ಟೆಯಾಗಿತ್ತು. ಕುತೂಹಲಕ್ಕೆ ಇಣಕಿ ಹಾಕುತ್ತಿದ್ದ ನನ್ನ ಗಮನಕ್ಕೆ ಬರುತ್ತಿದ್ದವು ಅನೇಕ ಮಾತುಕತೆ. ಆದರೆ ಆಕರ್ಷಿಸಿದ್ದು ನನಗಿಂತ ವಯಸ್ಸಿನಲ್ಲಿ ಸ್ವಲ್ಪ ಹಿರಿಯರಾಗಿದ್ದು ಕೈಯಲ್ಲಿ ಪುಸ್ತಕ ಹಿಡಿದು ಸಂಭಾಷಣೆಯಲ್ಲಿ ಭಾಗಿಯಾಗುತ್ತಿದ್ದ ತರುಣರೊಬ್ಬರು. ಅನುಭವದಾಚೆಯ ಶಬ್ದಗಳಿಗೆ ಕಿವಿಗೊಡದ



ನಾನು ಕುತೂಹಲಗೊಂಡದ್ದು ಅವರು ಚರ್ಚಿಸುತ್ತಿದ್ದ ಕ್ರಿಕೆಟ್, ಸದ್ಯದ ಸಿನೆಮಾ ಇತ್ಯಾದಿಗಳ ಬಗ್ಗೆ. ಆ ಸೆಳೆತ ಪರಿಚಯವಾಗಿ, ಸ್ನೇಹವಾಯಿತು. ಅವರನ್ನು ನಾನು ಸಂಬೋಧಿಸುತ್ತಿದ್ದುದು 'ಚಂದ್ರ', ಅವರ ಪಾಲಿಗೆ ನಾನು 'ಬಾಬು.'

ಆ ವಯಸ್ಸಿನ ಹುಮ್ಮಸ್ಸಿನ ಚಟುವಟಿಕೆಗಳಲ್ಲಿ ಗಣೇಶೋತ್ಸವ ಆಚರಣೆ ಒಂದು. ಆ ಚಿಂತನ ಕಟ್ಟೆಯೇ ಪ್ರತಿಷ್ಠಾಪನಾ ಸ್ಥಳ. ಸರಿ, ಉತ್ಸಾಹದಿಂದ ಓಡಾಡಿದೆವು, ಹಣ-ಸಾಮಗ್ರಿ ಸಂಗ್ರಹಿಸಲು, ಚಂದ್ರ ಕಿರಿಯನಾದ ನನ್ನನ್ನು ಹಲವು ಕಡೆ ಕರೆದುಕೊಂಡು ಹೋಗುತ್ತಿದ್ದರು; ಅನುಭವಗಳಿಗೆ ಅದೊಂದು ಅವಕಾಶ. ಸಂತೋಷದ ಕ್ಷಣಗಳು ಮುಗಿದ ನಂತರ ಚಂದ್ರ ಗಾಯಬ್. ಉಳಿದಿದ್ದ ಹಣದಲ್ಲಿ ಮಿಕ್ಕವರೆಲ್ಲ ಸೇರಿ ಊಟ ಮಾಡಿ ಕೈತೊಳೆಯುತ್ತಿದ್ದಾಗ ಚಂದ್ರ ಪ್ರತ್ಯಕ್ಷ. ಸಾರ್ವಜನಿಕ ಹಣವನ್ನು ಸ್ವಂತಕ್ಕೆ ಬಳಸಿಕೊಂಡುದರ ಬಗ್ಗೆ ತಿರಸ್ಕಾರದ ನುಡಿಗಳು. ಅದನ್ನು ಕೇಳಿ ನನಗಂತೂ ಕೋಪ ಬಂತು; ಆದರೆ ಅವರ ತರ್ಕಬದ್ಧ ಮಂಡನೆ ಬಾಣದಂತೆ ನನ್ನನ್ನು ಚುಚ್ಚಿದವು. ನನ್ನಲ್ಲಿ ಅಪರಾಧಿ ಪ್ರಜ್ಞೆ ಕಾಡಿತು. ಇವತ್ತಿಗೂ ಅವರ ಮನೋಧರ್ಮದಲ್ಲಿ ಯಾವ ಬದಲಾವಣೆಯೂ ಇಲ್ಲದ ಅದೇ ಚಂದ್ರನನ್ನು ನೋಡುತ್ತಿದ್ದೇನೆ.

ಇಂತಹ ಕೆಲವು ಘಟನೆಗಳಿಂದ ನಮ್ಮ ಸಂಬಂಧ ಇನ್ನಷ್ಟು ಆತ್ಮೀಯವಾಯಿತು. ಪ್ರತಿದಿನ ತಿರುಗಾಟದ ವೇಳೆ ಅವರ ಅಧ್ಯಯನದಲ್ಲಿ ಅರ್ಥಮಾಡಿಕೊಂಡ ಅನೇಕ ಅಂಶಗಳನ್ನು ನನಗೆ ವಿವರಿಸುತ್ತಿದ್ದರು. ತಾವು ಬರೆದ ಕತೆ-ಕವನಗಳನ್ನು ಓದಿ ಹೇಳುತ್ತಿದ್ದರು. ಎಲ್ಲವೂ ಆಕರ್ಷಕ ಎಂದು ಹೇಳಲಾಗದಿದ್ದರೂ, ಕೆಲವೊಮ್ಮೆ ಅವರಿಂದ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದುದನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತೇನೆ. ಕಾರಣ ತರಂಗಾಂತರ ವ್ಯತ್ಯಾಸ. ಆದರೆ ಸ್ನೇಹಕ್ಕೆ ಭಂಗವಿಲ್ಲ. ಚಂದ್ರ ಮಾತ್ರ ಗಂಭೀರ; ನಾನು ಸುಳ್ಳು ಹೇಳಿ ಸಿಕ್ಕಿಬಿದ್ದ ಸಂದರ್ಭಗಳಲ್ಲಿ ಅವರು ನನ್ನನ್ನು ಛೇಡಿಸುತ್ತಿದ್ದುದನ್ನು ನೆನೆಸಿಕೊಂಡರೆ ಈಗಲೂ ನಗು ಬರುತ್ತದೆ.

ಲಾಲ್‌ಬಾಗ್ ಭೇಟಿ ನಮ್ಮ ಅನೇಕ ಓಡಾಟಗಳಲ್ಲೊಂದು. ಆ ಸುಂದರ ಪರಿಸರದಲ್ಲಿ ಅವರ ಕಲ್ಪನೆ/ಕನಸುಗಳಿಗೆ ಶಬ್ದ ರೂಪ ಕೊಡುತ್ತಿದ್ದರು. ಅವರಿಂದ ಮೊದಲಾದ ಆ ಲಾಲ್‌ಬಾಗ್ ಭೇಟಿ ಇಂದಿಗೂ ನನ್ನ ದಿನಚರಿಯಾಗಿ ಮುಂದುವರಿದಿದೆ. ವಿದ್ಯಾರ್ಥಿಗಳಾಗಿದ್ದಾಗ ಸಹಜವಾಗಿ ಸಿನಿಮ, ಹೋಟೆಲ್ ಭೇಟಿಗಳಲ್ಲದೆ ಪರ ಊರುಗಳಿಗೂ ಪ್ರವಾಸ ಹೋಗುತ್ತಿದ್ದೆವು. ಒಮ್ಮೆ ಗೋವಾಕ್ಕೆ ಹೋಗಿದ್ದಾಗ ಕೈಕೊಟ್ಟ ನನ್ನ ಆರೋಗ್ಯ ಸುಧಾರಿಸಲು ವೈದ್ಯರ ಬಳಿ ಕರೆದುಕೊಂಡು ಹೋದರಲ್ಲದೆ, ಶುಶ್ರೂಸೆಗಾಗಿ ಪಟ್ಟಶ್ರಮ ನನ್ನ ಕಣ್ಣಲ್ಲಿ ನೀರೂರಿಸಿತ್ತು. ಕಷ್ಟದಲ್ಲಿರುವವರ ಬಗ್ಗೆ ಅವರ ಅನುಕಂಪ ಅಪಾರ. ಎಷ್ಟೋ ಮಂದಿ ಇವರ ಚಡಪಡಿಕೆಯನ್ನು ದುರುಪಯೋಗಪಡಿಸಿಕೊಂಡದ್ದೂ ಇದೆ.

ಇಬ್ಬರೂ ಊರಿನಲ್ಲಿದ್ದ ದಿನಗಳಲ್ಲಿ ತಪ್ಪದೇ ಭೇಟಿಯಾಗುತ್ತೇವೆ. ಕೆಲವೊಮ್ಮೆ ದಿನಕ್ಕೆ ಎರಡು ಬಾರಿ ಸಹ. ಅದೇನೋ ಸೆಳೆತ. ಕಾರಣ ಗೊತ್ತಿಲ್ಲ. ಆದರೆ ನೋಡದಿದ್ದರೆ ಮನಕ್ಕೆ ಏನೋ ಕಳೆದುಕೊಂಡ ಅನುಭವ. ನಮ್ಮದು ಪಾರದರ್ಶಕ ಸಂಬಂಧ. ನನ್ನ ಬಗ್ಗೆ ಅವರಿಗೆ ಗೊತ್ತಿಲ್ಲದ್ದು, ಅವರ ಬಗ್ಗೆ ನನಗೆ ಗೊತ್ತಿಲ್ಲದ್ದು ಬಹುಶಃ ಏನೂ ಇಲ್ಲವೆಂದರೆ

ಉತ್ಪ್ರೇಕ್ಷೆಯಲ್ಲ. ನೋವು–ನಲಿವು, ವೈಯಕ್ತಿಕ–ಸಾರ್ವಜನಿಕ ಎಲ್ಲವೂ ಕನ್ನಡಿಯ ಮುಂದೆ ನಿಂತು ಕತೆ ಹೇಳಿದಂತೆ. ಉದಾ: ನನ್ನ ಹಿರಿಯ ಮಗಳು ಹುಟ್ಟಿದಾಗ ಏನೆಂದು ಹೆಸರಿಡುವುದು ಎಂಬ ಚರ್ಚೆ ಬಂದಾಗ 'ನಿನ್ನ ಹೆಸರಿನ ಮೊದಲು ಅಕ್ಷರ, ನಿನ್ನ ಹೆಂಡತಿಯ ಹೆಸರಿನ (ಚಂದ್ರಕಲಾ) ಮೊದಲ ಅಕ್ಷರ ಸೇರಿಸಿ "ರಚನ" ಎಂದಿಡಿ ಏಕೆಂದರೆ ಅವಳು ಮಾನವ ಕುಲಕ್ಕೆ ನೀಡಿದ ನಿಮ್ಮ ರಚನೆ' ಎಂದಿದ್ದರು.

ಓದು ಮುಗಿಸಿದ ಮೇಲೆ ನನ್ನ ಕೆಲಸದ ಭೇಟೆಗೆ ಅವರ ಮಿತ್ರರ ಮೂಲಕ ನೆರವಾದವರು ಚಂದ್ರ. ಅದೊಂದು ಕೆಟ್ಟ ಅನುಭವ. ನನಗಿಂತಲೂ ಹೆಚ್ಚು ನೊಂದು ಬೆಂದವರು ಅವರು. ಅದನ್ನೇ ಸವಾಲಾಗಿ ಸ್ವೀಕರಿಸಿ, ನಾನು ಈ ಹಂತಕ್ಕೆ ಬೆಳೆಯಲು ನೆರವಾಯಿತು ಎಂದು ಹೇಳುವಲ್ಲಿ ಕೃತಾರ್ಥ ಭಾವ ಎದೆ ತುಂಬಿ ಬರುತ್ತದೆ. ಚಂದ್ರನ ಕೋಪ, ದುಡುಕು, ಸಾಹಸ ಪ್ರವೃತ್ತಿ ಕಂಡವರಿರಬಹುದು; ಆದರೆ ಕೋಪದ ಹಿಂದಿರುವ ಕರುಣಾಮೂರ್ತಿ, ದುಡುಕಿನ ಹಿಂದಿರುವ ಕ್ರಿಯಾಶೀಲತೆಯನ್ನು ಅರ್ಥಮಾಡಿ ಕೊಂಡವರು ಅತಿ ವಿರಳ. ಅವರ ಸಮಯ ಪಾಲನೆ, ಕಷ್ಟ ಸಹಿಷ್ಣುತೆ, ಸರಳ ಜೀವನ ವಿಧಾನ, ಹಠಮಾರಿತನ ಎಲ್ಲವೂ ನನಗೆ ಅಪ್ಯಾಯಮಾನ. ಹಲವು ಸಂಗತಿಗಳನ್ನು ಅವರಿಂದ ಕಲಿತಿದ್ದೇನೆ, ಅಳವಡಿಸಿಕೊಂಡಿದ್ದೇನೆ. ಯಾವುದೇ ವಿಷಯ ಇರಲಿ, ಸಮಸ್ಯೆ ಇರಲಿ, ಚಂದ್ರ ನಾನಿದ್ದೇನೆ ಎನ್ನುತ್ತಾರೆ. ಯಾರೇ ಆಗಲಿ ಬದುಕಿನಲ್ಲಿ ಅಂತಹ ಒಬ್ಬನಾದರೂ ಸ್ನೇಹಿತರನ್ನು ಪಡೆಯುವುದು ಸಾರ್ಥಕ್ಯದ ಪರಮಾವಧಿ. ಇಂತಹ ಚಂದ್ರ ನನ್ನ ಸ್ನೇಹಿತ ಎನ್ನುವುದರಲ್ಲಿ ಹೆಮ್ಮೆಯಿದೆ ಎಂದರೆ ಯಾರೂ ಅಸೂಯೆಪಡಬೇಕಾಗಿಲ್ಲ. ಕಾರಣ ಚಂದ್ರನ ಸ್ನೇಹಹಸ್ತ ಎಲ್ಲರಿಗೂ ಮುಕ್ತ (ಅವರ ಅಂತರಾಳಕ್ಕೆ ಇಳಿಯಬಲ್ಲರಾದ ವರಿಗೆ ಮಾತ್ರ).

೮೦ರ ದಶಕದಲ್ಲಿ ಎಚ್.ಎ.ಎಲ್. ಸೇರಿದಂತೆ ಎಲ್ಲ ಸಾರ್ವಜನಿಕ ವಲಯದ ಕಾರ್ಖಾನೆಗಳಲ್ಲಿ ತಿಂಗಳಾನುಗಟ್ಟಲೆ ಮುಷ್ಕರ ನಡೆದದ್ದು, ಅದರ ಪರಿಣಾಮ ಅನುಭವಿಸಿದವರ ಜೀವನದ ಮರೆಯಲಾಗದ ಕಹಿ ನೆನಪು. ಚಂದ್ರನೂ ಅವರಲ್ಲಿ ಒಬ್ಬರು ಆಗ ಅವರು ಅನುಭವಿಸಿದ ಕಷ್ಟ ಹತ್ತಿರದಿಂದ ನೋಡಿದ ನನಗೆ ಕರುಳು ಚುರುಕ್ ಎನ್ನುವಂತಹದು. ಆರ್ಥಿಕ ಮುಗ್ಗಟ್ಟು ಮಾತ್ರವಲ್ಲದೆ, ಆ ಸಂದರ್ಭದಲ್ಲಿ ಹೋರಾಟದಲ್ಲಿ ಪಾಲ್ಗೊಂಡು ಸೆರೆವಾಸ ಅನುಭವಿಸಿದ್ದು, ಪೋಲೀಸರು ಬಂಧಿಸಬಹುದೆಂಬ ಭಯ ಮಿಶ್ರಿತ ಅನುಮಾನದಿಂದ ಮನೆಬಿಟ್ಟು ಬೇರೆ ಬೇರೆ ಕಡೆ ಮಲಗಲು ಹೋಗುತ್ತಿದ್ದುದು ಒಂದೆ, ಎರಡೆ. ಅವರ ಅಣ್ಣ ಮತ್ತು ತಮ್ಮ ಸಹ ಎಚ್.ಎ.ಎಲ್.ನ ಉದ್ಯೋಗಿ ಯಾಗಿದ್ದುದು ಆ ಕುಟುಂಬದ ಸಂಕಟದ ಗಾಯಕ್ಕೆ ಖಾರ ಬೆರಸಿದಂತಾಗಿತ್ತು. ಚಂದ್ರ ಕಾರ್ಮಿಕ ಚಳವಳಿಯಲ್ಲಿ ಪಾಲ್ಗೊಂಡಿದ್ದಾಗ, ಅನೇಕ ಕಾರ್ಮಿಕ ಮುಖಂಡರನ್ನು ಭೇಟಿಯಾಗುವ, ಅವರ ಭಾಷಣ ಕೇಳುವ ಅವಕಾಶಗಳೂ ನನಗೆ ಒದಗಿದ್ದವು. ಇದಷ್ಟೇ ಅಲ್ಲದೆ ಚಂದ್ರ ಪೇಚಾಟಕ್ಕೆ ಸಿಲುಕಿದ, ಸಂಕಷ್ಟಕ್ಕೆ ಒಳಗಾದ ಸಂದರ್ಭಗಳು ಹಲವು. ಆದರೆ ಅವೆಲ್ಲವನ್ನು ಧೈರ್ಯವಾಗಿ ಎದುರಿಸಿ, ಏನೂ ಆಗೇ ಇಲ್ಲವೆಂಬಂತೆ ನಿಭಾಯಿಸಿದ್ದು ಮಾತ್ರ ಮೆಚ್ಚುವಂತಹದು.

ನಾನು ಗಮನಿಸಿದಂತೆ ಕನ್ನಡಾಭಿಮಾನಿಯಾಗಿದ್ದ ಚಂದ್ರ, ಕಾಮ್ರೇಡ್ ಆದದ್ದು ಎಷ್ಟೆಲ್ಲ ಪಾರದರ್ಶಕವೆಂದುಕೊಂಡರೂ, ಅಲ್ಲಿಯ ಅವರ ಚಟುವಟಿಕೆ ಬಗ್ಗೆ ನನಗೆ ಅಷ್ಟಾಗಿ ತಿಳಿಸುತ್ತಿರಲಿಲ್ಲ. ಒಮ್ಮೆ ಬಳೇಪೇಟೆಯಲ್ಲಿದ್ದ ಸಿ.ಪಿ.ಎಂ. ಆಫೀಸಿಗೆ ಹೋಗಿದ್ದಾಗ ನನ್ನನ್ನು ಗಂಟೆಗಟ್ಟಲೆ ಹೊರಗೆ ಕಾಯಿಸಿದ್ದು, ಏಕೆಂದು ಕೇಳಿದಾಗ ಮೌನಿಯಾಗಿದ್ದು ನಾನಿನ್ನು ಮರೆತಿಲ್ಲ. ಇಷ್ಟಾದರೂ ಮೇ ದಿನದ ಮೆರವಣಿಗೆಯಲ್ಲಿ ಪಾಲ್ಗೊಳ್ಳಲು, ನನ್ನನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗಿದ್ದರು. ಕಾಮ್ರೇಡ್‌ಗಿರಿಯಿಂದ ಹೊರಬಂದು ಕನ್ನಡ ಹೋರಾಟದಲ್ಲಿ ಭಾಗಿಯಾದ ಮೇಲೆ ಅವರು ಹೆಚ್ಚು ಪರಿಣಾಮಕಾರಿಯಾದರು ಎಂಬುದು ನನ್ನ ಅನಿಸಿಕೆ. ವಾಟಳರೊಂದಿಗೂ ಸಂಪರ್ಕವಿತ್ತು. ಅವರ ಹಲವಾರು ಹೋರಾಟಗಳಲ್ಲಿ ಅವರೊಂದಿಗೆ ನಾನೂ ಭಾಗಿಯಾಗಿದ್ದೆ. ಗೋಕಾಕ್ ಚಳವಳಿ ಅವರಲ್ಲಿದ್ದ ಹೋರಾಟಗಾರ ಪೂರ್ಣಪ್ರಮಾಣದಲ್ಲಿ ಅನಾವರಣಗೊಳ್ಳಲು ಸಹಕಾರಿ ಯಾಯಿತು.


ತಮ್ಮ ಸಹವಾಸಕ್ಕೆ ಬಂದ ಎಲ್ಲರಿಗೂ ಅವರು ತಮ್ಮ ಹೋರಾಟದಲ್ಲಿ ಸಹಯೋಗ ನೀಡುವುದು ಒಂದು ದೊಡ್ಡ ಗುಣ. ಹಾಗಾಗಿ ನಾನೂ ಚಳವಳಿಯ ಒಂದು ಭಾಗವೇ ಆಗಿಹೋದದ್ದು ಇತಿಹಾಸ. ಅವರವರ ಸಾಮರ್ಥ್ಯ ನೋಡಿ ಕೆಲಸ ಹಂಚುತ್ತಿದ್ದರು. ಅಂಚೆ, ಮುದ್ರಣಾಲಯ ಭೇಟಿ, ಸಾಹಿತಿಗಳನ್ನು ಕಾರ್ಯಕ್ರಮಗಳಿಗೆ ಕರೆತರುವ ಹೊಣೆಗಾರಿಕೆ ನನ್ನದಾಗಿತ್ತು. ಸಾಹಿತ್ಯದ ಬಗ್ಗೆ ಅಷ್ಟೇನು ಓದಿಕೊಳ್ಳದವನಾದರೂ ಉದ್ದಾಮ ಸಾಹಿತಿಗಳ ಸಂಪರ್ಕ, ಒಂದು ಮಟ್ಟದ ಸ್ನೇಹ ದೊರೆತದ್ದು ನನ್ನ ಪಾಲಿನ ಸುಕೃತ. ಬೀದರ್‌ನಲ್ಲಿ ಶಕ್ತಿಕೇಂದ್ರದ ಮಹಾಧಿವೇಶನ ನಡೆದಾಗ ಎಸ್. ನಿಜಲಿಂಗಪ್ಪ, ಎಸ್.ಎಲ್. ಭೈರಪ್ಪ, ಜಿ.ಎಸ್. ಸಿದ್ಧಲಿಂಗಯ್ಯ, ಎಲ್.ಎಸ್. ಶೇಷಗಿರಿ ರಾಯರನ್ನು ಕರೆತರುವ ಜವಾಬ್ದಾರಿ ನಿರ್ವಹಿಸಿದ್ದು, ಆ ಸಂದರ್ಭದಲ್ಲಿ ಜಿ.ಎಸ್.ಎಸ್. ನನ್ನನ್ನು 'ಮರಿದೇವರು' ಎಂದು ಕರೆಯುತ್ತಿದ್ದುದನ್ನು ಹೇಗೆ ಮರೆಯಲಾದೀತು.

ಅದು ಸಾಹಿತಿಗಳ ಕಲಾವಿದರ ಬಳಗವಾಗಲಿ ಅಥವಾ ಶಕ್ತಿ ಕೇಂದ್ರವಾಗಲಿ, ಅವರ ಹೋರಾಟದ ಹೊರಮುಖ ಬಹಳ ಮಂದಿಗೆ ಚಿರಪರಿಚಿತ. ಅವರನ್ನು ಇಂದ್ರ-ಚಂದ್ರ ಎನ್ನಬಹುದು. ಆದರೆ ಈ ಎಲ್ಲ ಚಟುವಟಿಕೆಗಳ ನೇರ ಪರಿಣಾಮ ಏನೆಂದು ಅವರ ಕುಟುಂಬದವರಿಗಷ್ಟೇ ಅನುಭವ. ಅವರ ತ್ಯಾಗದ, ಆತಂಕದ ಹಲವಾರು ಕ್ಷಣಗಳಲ್ಲಿ ಅವರೊಂದಿಗೆ ನಾನಿದ್ದೆ ಎಂದಷ್ಟೇ ಹೇಳಬಹುದು. ರಾ.ನಂ. ಇಂದು ಹೋರಾಟಗಾರ ಎಂದು ಹೆಸರು ಮಾಡಿದ್ದಾರೆ. ಆ ಸಾಧನೆಗಾಗಿ ಅವರು ಪಟ್ಟಶ್ರಮ, ಮಾಡಿದ ತ್ಯಾಗ ಅಪಾರ. ಹೋರಾಟದ ಆ ದಿನಗಳಲ್ಲಿ ಅವರು ರಾತ್ರಿ ಎಂಟು-ಒಂಬತ್ತರ ಮುನ್ನ ಮನೆ ಸೇರಿದವರಲ್ಲ. ಕೆಲವು ಹೋರಾಟದ ಸಂದರ್ಭಗಳಲ್ಲಿ ಮಧ್ಯರಾತ್ರಿಯಾದದ್ದೂ ಇದೆ. ಪತ್ರಿಕಾ ಹೇಳಿಕೆಗಳನ್ನು ಪ್ರಕಟಣೆಗಳನ್ನು ನಡದೇ ಪತ್ರಿಕಾಲಯಗಳಿಗೆ ತಲುಪಿಸಿ, ಸುಸ್ತಾಗಿ ನನ್ನ ಕಛೇರಿಗೆ ಬರುತ್ತಿದ್ದ ದಿನಗಳು ಅನೇಕ. ಹೊತ್ತು ಮೀರಿದ ಅನೇಕ ಸಂದರ್ಭಗಳಲ್ಲಿ ಅವರ ಶ್ರೀಮತಿ ಚಿಕ್ಕಮಕ್ಕಳೊಂದಿಗೆ ನಮ್ಮ ಮನೆಗೆ ಬಂದು, 'ಯಜಮಾನರು ಇನ್ನೂ ಬಂದಿಲ್ಲ. ಸ್ವಲ್ಪ ನೋಡಿ' ಎಂದ ದಿನಗಳಿಗೇನು ಕಡಿಮೆಯಿಲ್ಲ. ದೂರದರ್ಶನ ಮುತ್ತಿಗೆಯ

ದಿನ (೧೯೭೭ರಲ್ಲಿ) ಬೆಳಗಿನ ಜಾವ ಮನೆಬಿಟ್ಟವರು, ರಾತ್ರಿ ಹನ್ನೆರಡಾದರೂ ಹಿಂದಿರುಗಿ ಬಾರದಿದ್ದಾಗ ಮನೆಯವರ ಗಾಬರಿ ನಿವಾರಣೆಗಾಗಿ ನಾನು ಮತ್ತು ಚಂದ್ರ ಅವರ ಸಹೋದ್ಯೋಗಿ ಎಸ್. ರಾಜಶೇಖರ್ ಕಂಡ ಕಂಡ ಕಡೆಯಲ್ಲಾ ಹುಡುಕಿ, ನಾಲ್ಕಾರು ಪೊಲೀಸ್ ಠಾಣೆಗೂ ಭೇಟಿ ನೀಡಿ, ಬರಿಗೈಲಿ ಹಿಂದಿರುಗುತ್ತಿದ್ದಾಗ ಅವರು ರಾಮಕೃಷ್ಣಾಶ್ರಮದ ಬಳಿ ಕಾಲೆಳೆದುಕೊಂಡು ಬರುತ್ತಿದ್ದರು. ಹೊತ್ತು ಮಧ್ಯರಾತ್ರಿ ಮೀರಿತ್ತು. ಇನ್ನೊಮ್ಮೆ ಇವರನ್ನು ಪೊಲೀಸರು ಬಂಧಿಸಿದ ವಿಚಾರ ತಿಳಿಯಿತು. ಎಷ್ಟು ಹೊತ್ತಾದರೂ ತಿರುಗಿ ಬಾರದಿದ್ದಾಗ, ಠಾಣೆಯಲ್ಲಿ ವಿಚಾರಿಸಲು, ಅವರನ್ನು ಎಂಟು ಗಂಟೆಗೆ ಬಿಡುಗಡೆ ಮಾಡಿರುವುದಾಗಿ ತಿಳಿದುಬಂತು. ಅದೂ ಕೆಂಗೇರಿಯ ಆಚೆ ಕರೆದುಕೊಂಡು ಹೋಗಿಬಿಟ್ಟಿದ್ದರು. ಬರಿಗೈಯಾಗಿದ್ದ ಅವರು ಅಲ್ಲಿಂದ ನಡೆದು ಸುಸ್ತಾಗಿ ಬರುತ್ತಿದ್ದಾಗ ಎದುರುಗೊಂಡ ಅವರ ಮನೆಯವರ ಮನಃಸ್ಥಿತಿ ಕೇವಲ ಊಹೆಗೆ ಮಾತ್ರ ನಿಲುಕುವಂತದ್ದು.

ನನ್ನ ಚಂದ್ರನ ಬಗ್ಗೆ ಇಷ್ಟೆಲ್ಲ ಹೇಳಿದ ಮೇಲೆ ಅವರ ಮನೆಯವರನ್ನು ಮರೆತರೆ ನನ್ನಂಥಹ ಕಡುಮೂರ್ಖ ಇನ್ನೊಬ್ಬರಿಲ್ಲ ಎಂದು ತಿಳಿಯುತ್ತೇನೆ. ತಂದೆ ನಂಜುಂಡಭಟ್ಟರು ನನ್ನ ದೃಷ್ಟಿಯಲ್ಲಿ ಒಬ್ಬ ಸಂತ, ಮತ್ರ ಪಠಣ, ಪೌರೋಹಿತ್ಯ, ಸಾಹಿತ್ಯ, ಸಂಸ್ಕೃತಿ ಸಂಗೀತಗಳ ಬಗ್ಗೆ ಅಪಾರ ಜ್ಞಾನವಿದ್ದವರು. ನಾನು ಮರೆಯಲಾಗದ ಕೆಲವೇ ವ್ಯಕ್ತಿಗಳಲ್ಲಿ ಅವರೊಬ್ಬರು. ತಾಯಿ ಜಯಮ್ಮ ಮಮತಾಮಯಿ, ಅಪರೂಪದ ಲೋಕಜ್ಞಾನ, ಸಂಸಾರ ನಿರ್ವಹಣೆಯಲ್ಲಿ ತೋರುತ್ತಿದ್ದ ವಿವೇಕ ಅಪ್ರತಿಮ. ಅವರ ಕೈರುಚಿ ಅನುಭವಿಸಿದ ಭಾಗ್ಯ ನನ್ನದು. ನನ್ನನ್ನು ಚಂದ್ರನ ಒಡಹುಟ್ಟಿದ್ದವರಲ್ಲಿ ಒಬ್ಬನೆನ್ನುವಂತೆ ಕಂಡಿದ್ದಾರೆ. ಚಂದ್ರನ ಪತ್ನಿ ಗಾಯತ್ರಿಯವರು ಸುಸೂತ್ರವಾಗಿ ಸಂಸಾರ ನಿರ್ವಹಣೆ ಮಾಡಿಕೊಂಡು ಹೋಗುತ್ತಿರುವುದರಿಂದಲೇ ಚಂದ್ರನ ಎಲ್ಲ ಮೋಡದ ಮರೆಯಾಟ ಸಾಧ್ಯವಾಗಿರುವುದು. ಅವರ ಮಕ್ಕಳಿಗೆ ನಾನು 'ರಮೇಶ ಮಾಮ.' ಅವರ ಕುಟುಂಬದಲ್ಲಿ ಏನೇ ಕೆಲಸ ಮಾಡುವುದಕ್ಕೆ ಮುನ್ನ ನನ್ನನ್ನು ಕೇಳದೆ ಇರುವುದಿಲ್ಲ, ಬಹುಶಃ ಇದು ನನ್ನ ಪಾಲಿನ ಅಪರೂಪದ ಆತ್ಮೀಯ ಅನುಬಂಧ.

❐



ಇಂದಿಗೂ ನನಗೆ ಹೀರೋ

■ ರಾ.ನಂ. ಚೇತನ್

ಅಣ್ಣನಿಗೆ ೬೦ ತುಂಬುತ್ತಿರುವ ಸಮಯದಲ್ಲಿ ತರುತ್ತಿರುವ ಅಭಿನಂದನ ಗ್ರಂಥದಲ್ಲಿ ಅನೇಕ ದಿಗ್ಗಜರ ಲೇಖನಗಳ ಜೊತೆ ಬರೆಯಲು ನಾನು ಬಹಳ ಸಣ್ಣವ ಎಂಬ ಅಳುಕಿದ್ದರೂ, ನನ್ನ ಮನದಲ್ಲಿ 'ಅಣ್ಣ'ನ ಬಗ್ಗೆ ಹೇಳುವ ಖುಷಿಯೇ ಹೆಚ್ಚಿದೆ. ಅಪ್ಪನೇ ಮಕ್ಕಳ ಮೊದಲ ಹೀರೋ, ಅವರು ಬೆಳೆದಂತೆಲ್ಲ ಹೀರೋಗಳು ಬದಲಾಗುತ್ತಾ ಹೋಗುತ್ತಾರೆ ಅನ್ನುವ ಮಾತಿದೆ. ಆದರೆ ನನಗೆ ಅಣ್ಣ ಇಂದಿಗೂ ಹೀರೋನೇ. ಇಲ್ಲಿ ಮುಖಸ್ತುತಿ ಮಾಡುತ್ತಿಲ್ಲ ಮತ್ತು ಅವರ ಎಲ್ಲ ನಿಲುವುಗಳು, ವಿಚಾರ, ವಿಷಯಗಳನ್ನು ಒಪ್ಪುತ್ತೇನೆ ಎಂದೂ ಅಲ್ಲ. ಆದರೆ ಚಿಕ್ಕಂದಿನಲ್ಲಿ ಅವರ ಬಗ್ಗೆ ಇದ್ದ ಅಚ್ಚರಿ, ಬೆಚ್ಚನೆ ಭಾವ ಇನ್ನೂ ಹಾಗೆ ಇದೆ. ಅಚ್ಚರಿ ಪಡಲು ಕಾರಣವಾಗುವ ವಿಷಯಗಳು ಬದಲಾಗುತ್ತೆ ಅಷ್ಟೆ. ಇಂದಿಗೂ ಅವರು ಮಾಡುವ ಪ್ರತಿಯೊಂದರಲ್ಲೂ ಅಪಾರ ಶ್ರದ್ಧೆ, ಮಕ್ಕಳಿಗಷ್ಟೇ ಇರುವ ಉತ್ಸಾಹ ಹಾಗೂ ಇದನ್ನೆಲ್ಲಾ ಹೇಗೆ ಸಾಧ್ಯವಾಗಿಸುತ್ತಾರೆ ಎನ್ನುವುದು ನನಗೊಂದು ವಿಸ್ಮಯವೇ. ಯಾವುದಾದರೂ ಒಂದು ವಿಷಯದ ಬಗ್ಗೆ ಅವರಿಗಿಂತ ಸ್ವಲ್ಪ ಹೆಚ್ಚು ತಿಳಿದುಕೊಳ್ಳಬೇಕೆಂದು ಚಿಕ್ಕಂದಿನಿಂದ ಅನೇಕ ಬಾರಿ ಪ್ರಯತ್ನಿಸಿ ಕೈ ಬಿಟ್ಟಿದ್ದೇನೆ. ಕ್ರಿಕೆಟ್, ಸಾಹಿತ್ಯ, ಇತಿಹಾಸ ಇಂಗ್ಲಿಷ್ ಹೀಗೆ ಹಲವಾರು; ಕಂಪ್ಯೂಟರ್/ಸಾಫ್ಟ್ವೇರ್‌ಗಳ ಬಗ್ಗೆಯೂ ತಿಳಿದುಕೊಂಡಿದ್ದಾರೆ ಮತ್ತು ಅದರಲ್ಲೇ ಅವರ ಬಹುಪಾಲು ಕೆಲಸ. ಅವರ ಜ್ಞಾನದ ವಿಸ್ತಾರ ಬಹಳ ದೊಡ್ಡದು!

ಅವರ ಇಷ್ಟೆಲ್ಲಾ ಕೆಲಸ, ಪ್ರವಾಸಗಳ ನಡುವೆಯೂ ಯಾವತ್ತೂ ನಮಗೆ ಯಾವುದೇ ಕೊರತೆಯಾಗಿಲ್ಲ, ಈ ಸಮಯದಲ್ಲಿ



ಅವರಿರಬೇಕಿತ್ತು ಎನಿಸುವಂತೆ ನಡೆದುಕೊಂಡಿಲ್ಲ, ಅಂತಹ ಸಂದರ್ಭಗಳಲ್ಲೆಲ್ಲ ಅವರು ಇದ್ದೇ ಇರುತ್ತಾರೆ. ಅವರ ಸಮಯ ಪ್ರಜ್ಞೆ, ಬದ್ಧತೆಗಳು ಇದಕ್ಕೆ ಕಾರಣ. ಇದರ ಜೊತೆ ರಮೇಶ್ ಮಾವ (ರಮೇಶ್ ಬಾಬು) ಕೂಡ ಯಾವಾಗಲೂ ನಮ್ಮೊಂದಿಗೆ ಇದ್ದಾರೆ ಅವರು ನಮ್ಮ ಕುಟುಂಬದ ಬಗ್ಗೆ ಇಟ್ಟಿರುವ ಪ್ರೀತಿ, ವಿಶ್ವಾಸಗಳನ್ನು ಮಾತಿನಲ್ಲಿ ಹಿಡಿದಿಡಲು ಸಾಧ್ಯವಿಲ್ಲ. ಅಣ್ಣ ಅವರ ಕೆಲಸಗಳ ಮಧ್ಯೆಯೂ ಮನೆಯವರೊಂದಿಗೆ ಸಮಯ ಕಳೆಯುವುದನ್ನು ಮರೆಯುವುದಿಲ್ಲ. ದಿನಕ್ಕೊಮ್ಮೆ ಯಾದರೂ ಜೊತೆಗೆ ಊಟ ಮಾಡುವುದು, ಆಗೀಗ ಹೊರಗೆ ಊಟ, ಸಣ್ಣ ಪ್ರವಾಸ, ಹೀಗೆ. ಅವರ ಇಷ್ಟು ಸಾಧನೆಗಳ ಮಧ್ಯೆ ಅಮ್ಮನಿಗೆ ಮನೆ ಕೆಲಸದಲ್ಲೂ ಸಹಾಯ ಮಾಡುತ್ತಾರೆ. ನಮ್ಮ ಮನೆಯವರು ಲೆಕ್ಕವಿಲ್ಲದಷ್ಟು ಸಂತೋಷಮಯ ಕ್ಷಣಗಳನ್ನು ಕಳೆದಿದ್ದೇವೆ. ಇವೆಲ್ಲ ಅವರು ಜೀವನದಲ್ಲಿ ಸಮತೋಲನ ನಿರ್ವಹಿಸುವುದರ ಫಲ.

ನಾನು ಪಿ.ಯು.ಸಿ. ಫೇಲ್ ಆದಾಗ, ಆ ಕ್ಷಣಕ್ಕೆ ಕೋಪದ ಪ್ರತಿಕ್ರಿಯೆ ತೋರಿಸಿದರೂ ನಂತರ ಅವರೇ ನನ್ನನ್ನು ಸಮಾಧಾನ ಪಡಿಸಿದರು. ಯಾವತ್ತೂ ನಮ್ಮ ವೈಫಲ್ಯಗಳಲ್ಲಿ ಆಸರೆಯಾಗಿ ನಿಂತಿರುತ್ತಾರೆ ಹಾಗೂ ನಮ್ಮ ಅತಿ ಸಣ್ಣ ಗೆಲುವುಗಳಲ್ಲಿ ಕೂಡ ನಮಗಿಂತ ಹೆಚ್ಚು ಸಂಭ್ರಮಿಸುತ್ತಾರೆ. ವೈಯಕ್ತಿಕವಾಗಿ ತೀರ ಸರಳವಾಗಿರುವುದರಿಂದ ಅವರ ಸ್ವಂತ ಖರ್ಚುವೆಚ್ಚಗಳು ನಗಣ್ಯ ಎನಿಸುವಷ್ಟು ಕಡಿಮೆ. ಊಟ, ದಿರಿಸುಗಳ ಮೋಹವಿಲ್ಲ, ಆದರೆ ನಮಗೆಲ್ಲ ಯಾವುದರ ಒಂದು ಚಿಕ್ಕ ಕೊರತೆಯೂ ಇರದಂತೆ ನೋಡಿಕೊಳ್ಳುತ್ತಾರೆ. ಈ ವಯಸ್ಸಿನಲ್ಲೂ ಬಹುತೇಕ ವಿಷಯಗಳಲ್ಲಿ ನಾವು ಅವರ ಮೇಲೆ ಅವಲಂಬಿತ ರಾಗಿದ್ದೇವೆಯೇ ಹೊರತು, ಅವರು ನಮ್ಮ ಮೇಲೆ ಅಲ್ಲ! ಮಕ್ಕಳಿಗೆ ಸಣ್ಣ ಕೆಲಸ ಹೇಳಲಿಕ್ಕೂ ಸಂಕೋಚ ಪಡುತ್ತಾರೆ, ಅಚಲ ಸ್ವಾಭಿಮಾನಿ.

ಇದೆಲ್ಲ ಬಹುತೇಕ ಅವರ ವೈಯಕ್ತಿಕ ವಿಷಯಗಳು, ಅವರ ಸಾಹಿತ್ಯ–ಸಾಧನೆಗಳ ಬಗ್ಗೆ ಮಾತಾಡುವಷ್ಟು ಅರ್ಹನಲ್ಲದಿದ್ದರೂ ಕೆಲವನ್ನು ಹೇಳದೆ ಇರಲು ಸಾಧ್ಯವೇ ಇಲ್ಲ. ಸಾಹಿತ್ಯ ಕ್ಷೇತ್ರದಲ್ಲಿ ಯಾವುದೇ ಸಾಂಪ್ರದಾಯಿಕ ಡಿಗ್ರಿ ಇಲ್ಲದೆ ಇಷ್ಟು ಕೆಲಸ ಮಾಡಿರುವವರು ವಿರಳ. ಅನೇಕ ಪುಸ್ತಕಗಳು, ಲೆಕ್ಕವಿಲ್ಲದಷ್ಟು ಲೇಖನಗಳು ಉಪನ್ಯಾಸ ಗಳು, ಸಾಹಿತಿ–ಸಾಧಕರೊಡನಾಟ ಇವೆಲ್ಲವೂ ಯಾರನ್ನೂ ಒಂದು ಕ್ಷಣ ಆಶ್ಚರ್ಯಚಕಿತ ರನ್ನಾಗಿ ಮಾಡುತ್ತವೆ.

ಯಾವುದೇ ಕೆಲಸದ ರೂಪು–ರೇಷೆಯನ್ನು ಸಿದ್ಧಪಡಿಸುವ ಜೊತೆಯಲ್ಲೇ ಯೋಜನೆಯ ಯಾವುದೇ ಕೆಲಸವನ್ನು ಆರಂಭದಿಂದ ಅಂತ್ಯದವರೆಗೂ ಅವರೇ ಮಾಡಬಲ್ಲರು (ಅನೇಕ ಬಾರಿ ಮಾಡಿದ್ದಾರೆ), ಯಶಸ್ಸಿಗೆ ತಾನಲ್ಲ ಕಾರಣ ತನ್ನ ತಂಡ ಗೆಳೆಯರು ಎಂದು ಎಲ್ಲೆಡೆ ಹೇಳುತ್ತಾರೆ, ಹಾಗೇ ಭಾವಿಸಿದ್ದಾರೆ ಕೂಡ. ಇವೇ ಅವರ ನಾಯಕತ್ವದ, ಮಿಂಚಿನಂತಹ ಸಂಘಟನಾ ಶಕ್ತಿಯ ಹಿಂದೆ ಇರುವ ಗುಟ್ಟು ಎಂದು ಭಾವಿಸಿದ್ದೇನೆ. ಅವರಿಗೆ ಅಷ್ಟಾಗಿ ಒಗ್ಗದ ತಾಳ್ಮೆಯಿಂದ ಕೂತು ಬರೆದರೆ ಒಂದು ಮ್ಯಾನೇಜ್ಮೆಂಟ್ ಪುಸ್ತಕವನ್ನು ಕೂಡ ಬರೆಯಬಹುದು ಎಂದರೆ ನಿಜಕ್ಕೂ ಅತಿಶಯೋಕ್ತಿಯಲ್ಲ!

ಅವರನ್ನು ನೋಡಿ ಬೆಳೆದಿರುವ ನಾನು ಪ್ರತ್ಯಕ್ಷ/ಪರೋಕ್ಷವಾಗಿ ಅನೇಕ ವಿಷಯಗಳನ್ನು ಕಲಿತಿದ್ದೇನೆ. ವಿಶೇಷವಾಗಿ ಹೇಳಬೇಕೆಂದರೆ ಅವರು ನನ್ನನ್ನು ಕನ್ನಡ ಮಾಧ್ಯಮದಲ್ಲಿ ಓದಿಸಿದ್ದು. ನಂತರ ಇಂಗ್ಲಿಷಿನಲ್ಲಿ ಓದಬೇಕಾಗಿ ಬಂದಾಗ, ಅವರ ಮೇಲೆ ಬಹಳ ವರ್ಷಗಳ ಕಾಲ ಮುನಿಸಿಕೊಂಡಿದ್ದೆ (ಅವರ ಎದುರಿಗೆ ಹೇಳುವ ಧೈರ್ಯ ಮಾಡಲಿಲ್ಲ!) ಆದರೆ ಇವತ್ತು ಹಿಂದಿರುಗಿ ನೋಡಿದರೆ ಅವರ ಆ ನಿರ್ಧಾರದ ಬಗ್ಗೆ ಸಂತೋಷವಿದೆ, ಸ್ವಲ್ಪ ಮಟ್ಟಿಗಾದರೂ ಸ್ವಂತ ಚಿಂತನೆ ಮಾಡುವ ಶಕ್ತಿ ಬಂದದ್ದೆ ಕನ್ನಡ ಮಾಧ್ಯಮದಲ್ಲಿ ಓದಿದ್ದರ ಫಲ. ಕನ್ನಡದ ಬಗೆಗಿನ ಬದ್ಧತೆ, ನಾಯಕತ್ವದ ಗುಣ ಇದೆಲ್ಲದರ ಜೊತೆಗೆ ವೃತ್ತಿಪರತೆಯಲ್ಲಿ ಕೂಡ ಅವರು ಆದರ್ಶ ಎಂದು ನಾನಷ್ಟೇ ಅಲ್ಲ, ನನ್ನ ಹೆಂಡತಿ ಕೂಡ ಹೇಳುತ್ತಿರುತ್ತಾಳೆ. ಯಾವುದೇ ಒಂದು ಬಾರಿ ಕೂಡ ಎಚ್‌ಎಎಲ್ ಕೆಲಸದ ಬಗ್ಗೆ ಅಸಡ್ಡೆ ತೋರಿಸಿದ್ದನ್ನು ನೋಡಿಲ್ಲ. ನಿವೃತ್ತಿಯಾಗುವ ವಯಸ್ಸಿನಲ್ಲಿ ಕೂಡ ಉಳಿದ ಕೆಲಸ ಮುಗಿಸಲು ರಾತ್ರಿ ೮–೧೧ರವರೆಗೂ ದುಡಿಯುತ್ತಾರೆ ಮತ್ತು ಕೆಲ ಭಾನುವಾರಗಳು ಕೂಡ ಬೇಜಾರಿಲ್ಲದೆ ಕಚೇರಿಗೆ ಹೋಗಿ ಬರುತ್ತಾರೆ! ವಾರಕ್ಕೆ ೨ ರಜೆ ಇರುವ ನನ್ನಂತಹ corporate ಅಡಿಯಾಳುಗಳಿಗೆ ಇದೊಂದು ಅದ್ಭುತವೇ ಸರಿ. ಶ್ರಮಿಕತನದ ಮಹತ್ವವನ್ನು ಬಾಯಿಂದ ಹೇಳದೆ ಕಾರ್ಯದಲ್ಲಿ ತೋರಿಸುತ್ತಾರೆ. ನಮ್ಮ ಮನೆಯಲ್ಲಿ ಅವರ ಕನ್ನಡ ಕೆಲಸಕ್ಕೆ ಸಂದ ನೆನಪಿನ ಕಾಣಿಕೆ, ಪ್ರಶಸ್ತಿ ಪತ್ರಗಳ ಸರಿ ಸಮವಾಗಿ ಎಚ್.ಎ.ಎಲ್.ನ ನೆನಪಿನ ಕಾಣಿಕೆಗಳು ಕೂಡ ಇವೆ. ತಮಾಷೆಗೆ ಕೂಡ ನಾವ್ಯಾರು ಎಚ್.ಎ.ಎಲ್.ನ ಬಗ್ಗೆ ಹಗುರವಾಗಿ ಮಾತನಾಡುವಂತಿಲ್ಲ. ಇನ್ನು ಬಹುಶಃ ಅವರಷ್ಟೇ ಚಿರಪರಿಚಿತವಾದ ಅವರ ಕೋಪದ ಬಗ್ಗೆಯೂ ಅನೇಕರು ಹೇಳುತ್ತಿರುತ್ತಾರೆ. ಮನೆಯವರಾಗಿ ಅದನ್ನು ಯಾವಾಗಲೂ ಅನುಭವಿಸುತ್ತಿದ್ದರೂ, ಕೋಪದ ನಂತರ ತೋರಿಸುವ ಪ್ರೀತಿ ಎಲ್ಲವನ್ನು ಮರೆಸುತ್ತದೆ. ಅವರ ಕೋಪ ನಮ್ಮ ಸೋಮಾರಿತನಕ್ಕೆ ಚಾಟಿಯಂತೆ ಕೆಲಸ ಮಾಡುತ್ತದೆ.

ಅಣ್ಣನ ಬಗ್ಗೆ ಹೇಳಲು ಬಹಳಷ್ಟಿದ್ದರೂ, ನನ್ನ ಅನುಭವವಿಲ್ಲದ ಲೇಖನಿ ಮುಂದೋಡುತ್ತಿಲ್ಲ. ಇಷ್ಟನ್ನಾದರೂ ದಾಖಲಿಸಲು ಸಿಕ್ಕ ಅವಕಾಶಕ್ಕೆ ನಾನು ಕೃತಜ್ಞ.

❐



ಕನ್ನಡ ಪರ ಚಿಂತನ–ಮಂಥನಗಳ ಕೈಗನ್ನಡಿ

(ರಾ.ನಂ. ಚಂದ್ರಶೇಖರರ ಸಮಗ್ರ ಕೃತಿ ಪರಿಚಯ)

■ **ಕೆ.ಎಚ್. ನರಸಿಂಹಮೂರ್ತಿ**

"ಕುಂತ್ರೆ–ನಿಂತ್ರೆ ಕನ್ನಡ ಧ್ಯಾನ – ಅವ್ನ ಜೀವಕ್ಕಿಲ್ಲ ಸಮಾಧಾನ" ಈ ಪಲ್ಲವಿಯನ್ನು ಯಾರ ಕುರಿತಾದರೂ ಗುಣಗುಣಿಸಬಹುದಾದರೆ ಅದು ಗೆಳೆಯ ರಾ.ನಂ. ಬಗ್ಗೆ! ಕನ್ನಡಕ್ಕಾಗಿ ಅವರು ಏನು ಮಾಡಿದ್ದಾರೆ, ಮಾಡಿದ್ದು ಕೆಲಸಕ್ಕೆ ಬಂದಿದೆಯೋ ಇಲ್ಲವೋ ಎಂಬುದೆಲ್ಲಾ ಒತ್ತಟ್ಟಿಗಿರಲಿ; ನಾನು ನೋಡಿದ ಹಾಗೆ, ನನಗೆ ಮನದಟ್ಟಾಗಿರುವ ಹಾಗೆ, ರಾ.ನಂ. ತಾವು ಎಚ್ಚರವಿರುವ ಹೊತ್ತಿನಲ್ಲೆಲ್ಲಾ ಕನ್ನಡದ ಕುರಿತೇ ಯೋಚಿಸುತ್ತಿರುತ್ತಾರೆ, ಯೋಜಿಸುತ್ತಿರುತ್ತಾರೆ ಎಂದು ಖಾತ್ರಿಯಾಗಿ ಹೇಳಬಲ್ಲೆ! ಪ್ರಾಯಶಃ ಈ ಚಿಂತನಶೀಲತೆಯೇ ಡಾ. ಎಂ. ಚಿದಾನಂದಮೂರ್ತಿ, ಪ್ರೊ. ಎಲ್.ಎಸ್. ಶೇಷಗಿರಿರಾಯರಂಥ ಪ್ರಾಜ್ಞರಿಗೆ ಆತ ಅಚ್ಚುಮೆಚ್ಚಿನವರಾಗಿರಲು ಕಾರಣ. ಈ ಕನ್ನಡದ ಕನವರಿಕೆಯೇ ರಾ.ನಂ. ರಚಿಸಿರುವ–ಸಂಪಾದಿಸಿರುವ ಕೃತಿಗಳಲ್ಲೆಲ್ಲ ಒಡಮೂಡಿದೆ, ಪಡಿಮೂಡಿದೆ.



೧. "ಕನ್ನಡ ಹೋರಾಟಗಳು–ಒಂದು ನೋಟ" (ಪ್ರಕಟಣೆ ೧೯೯೯)

ಹಾಗೆ ನೋಡಿದರೆ ರಾ.ನಂ. ನನಗೆ ಗೆಳೆಯರಾಗಿದ್ದೇ ಮೇಲಿನ ಪುಸ್ತಕದ ಮೂಲಕ. ಸಾಹಿತಿಗಳ ಕಲಾವಿದರ ಬಳಗ–ಕನ್ನಡ ಶಕ್ತಿ ಕೇಂದ್ರ–ಕನ್ನಡ ಗೆಳೆಯರ ಬಳಗದ ಚಳವಳಿ ಕಾರ್ಯಕ್ರಮಗಳ ಸಂದರ್ಭದಲ್ಲಿ ಕೇವಲ ಔಪಚಾರಿಕವಾಗಿದ್ದ ನಮ್ಮ ಪರಿಚಯವನ್ನು ಆಪ್ತತೆ–ಆತ್ಮೀಯತೆಗೆ ಜಾರಿಸಿದ್ದು ಅದೇ. ಪುಸ್ತಕದ ಪುಟಪುಟಗಳಲ್ಲಿ ಹರಡಿಕೊಂಡಿರುವ ವಿಷಯ, ಮಾಹಿತಿಗಳೂ ಪರಿಚಿತವಾದುವೇ. ಆದರೂ, ಅವುಗಳ ನೇರ ನಿರೂಪಣೆ, ಸರಾಗ ಬರವಣಿಗೆ ಸಹಜವಾಗಿಯೇ ಮನಸೆಳೆಯುತ್ತವೆ. ಪುಸ್ತಕ ರಚನೆಗೆ ಪೂರಕವಾಗಿ ಅವರು

ನಡೆಸಿದ್ದ ಪೂರ್ವಸಿದ್ಧತೆ, ಕ್ರಿಯಾಶೀಲತೆಗಳೂ ಅಪೂರ್ವ. ಈ ಬಗ್ಗೆ ಇನ್ನೆಷ್ಟೇ ಸಂಖ್ಯೆ ಗಾತ್ರಗಳ ಕೃತಿ ಹೊರಬರಬಹುದಾದರೂ 'ಕನ್ನಡ ಹೋರಾಟಗಳು' ಕೃತಿಯನ್ನು ಅಲಕ್ಷಿಸುವುದು, ಅವಲೋಕಿಸದಿರುವುದು, ಆಧಾರವಾಗಿಟ್ಟು ಕೊಳ್ಳದಿರುವುದು ಹಾಗೂ ಉದ್ಧರಿಸದಿರು ವುದು ಅಶಕ್ಯ ಎಂಬಷ್ಟರ ಮಟ್ಟಿಗೆ ಅದು ವಸ್ತುನಿಷ್ಠ ಮತ್ತು ಅಧಿಕೃತ.

ಕಳೆದ ವರ್ಷ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದ 'ಕನ್ನಡ ಚಳವಳಿ ಇತಿಹಾಸ' ದಪ್ಪ ಹೊತ್ತಿಗೆಯ ಲೇಖಕರಂತೂ 'ಕಣ್ಣ ಮುಂದಿನ ಇತಿಹಾಸಕ್ಕೆ ಪೂರಕವಾದ' ಎಂದದು ಈ ರಾ.ನಂ. ಪುಸ್ತಕವನ್ನು ಬಣ್ಣಿಸುತ್ತಲೇ 'ಅಪೂರ್ಣವೆನಿಸುವ ಒಂದು ಕೈಪಿಡಿ' ಎಂದು ಒಕ್ಕಣಿಸಿ, ಅಣಕಿಸಲೆತ್ನಿಸಿದ್ದು ನಿಜಕ್ಕೂ ವಿಷಾದಕರ. ಸಾಲದೆಂಬಂತೆ ರಾ.ನಂ. ಪುಸ್ತಕದ ಪಂಕ್ತಿ-ಪಂಕ್ತಿಗಳಲ್ಲದೆ ಕೆಲ ಪ್ಯಾರಾಗಳನ್ನೇ ಇಡಿಯಾಗಿ, ನೇರವಾಗಿ ತಮ್ಮ ಕೃತಿಯಲ್ಲಿ ಭಟ್ಟಿಯಿಳಿಸಿ ನೆರವು ಪಡೆದಿರುವುದಂತೂ ಅವರ ಉಡಾಫೆತನ, ಅಸೌಜನ್ಯಕ್ಕೂ ಅಲ್ಲದೆ ರಾ.ನಂ. ಕೃತಿಗಿರುವ ಸಾರ್ವಕಾಲಿಕ ಮಹತ್ವ ಮತ್ತು ಮೌಲ್ಯಗಳಿಗೊಂದು ಜ್ವಲಂತ ಸಾಕ್ಷಿ!

'ಕನ್ನಡ ಹೋರಾಟಗಳು' ತರಹದ ಕೃತಿ ಸಿದ್ಧತೆಯಲ್ಲಿ ಎದುರಾಗುವ ಸಮಸ್ಯೆ-ಸಂದೇಹಗಳು, ಪ್ರಕಟಗೊಂಡ ನಂತರದಲ್ಲಿ ತಮ್ಮ ಮೂಗಿನ ನೇರಕ್ಕೆ ದಾಖಲಾತಿ-ಉಲ್ಲೇಖಗಳಾಗಿಲ್ಲವೆಂಬ ಆಕ್ಷೇಪ-ಅಸಮಾಧಾನಗಳು ಸಹಜವೇ ಆದರೂ, ಅದಕ್ಕೆ ಯಾವುದೇ ಮೂಲದಿಂದಲೂ ದೊರಕದ ಸಹಕಾರ-ಸ್ಪಷ್ಟನೆ-ದಾಖಲೆಗಳೇ ಕಾರಣ ಎಂಬುದನ್ನು ಅಂಥ ಟೀಕಾಕಾರರು ಖಂಡಿತಾ ಒಪ್ಪುವುದಿಲ್ಲ. ಹೀಗಾಗಿ ಕೊರತೆಗಳ ರಾಶಿಯ ನಡುವೆಯೇ ಮೂಡಿಬಂದ ಪಕ್ವ ಕೃತಿ ಇದು.

ಇತಿಹಾಸದ ದಿನಗಳಿಂದಲೇ ಕನ್ನಡ ಹೋರಾಟದ ಕಿಡಿ ಸಿಡಿದಿದ್ದು ಹೇಗೆ ಮತ್ತು ಏಕೆ ಎಂದು ಆರಂಭಿಸುವ ರಾ.ನಂ. ಏಕೀಕರಣಾನಂತರದಲ್ಲಿ ಕನ್ನಡಿಗರ ಸಮಸ್ಯೆಗಳನ್ನು ವಿಶ್ಲೇಷಿಸಿ, ಕನ್ನಡಿಗರಿಗೆ ವಿವರಿಸಿ, ಅವರಲ್ಲಿ ಜಾಗೃತಿ ಮೂಡಿಸಲು ಅನಕೃ ಮತ್ತು ಸಂಗಡಿಗರು ಅರವತ್ತರ ದಶಕದ ಆರಂಭದಲ್ಲಿ ಇರಿಸಿದ ಹೆಜ್ಜೆ ಗುರುತುಗಳನ್ನು ಸಾಕಷ್ಟು ವಿಸ್ತಾರವಾಗಿಯೇ ದಾಖಲಿಸಿದ್ದಾರೆ. ಅಂದಿನ ಚಳವಳಿಗಳ ಪ್ರೇರಣೆ, ಸ್ವರೂಪ, ಪರಿಣಾಮ ಗಳನ್ನು ಬಿಡಿಸಿಟ್ಟು, ಅವು ಕ್ರಮೇಣ ಕ್ಷೀಣಗೊಳ್ಳಲು ಕಾರಣಗಳನ್ನು ವಿವರಿಸಿದ್ದಾರೆ. ನಂತರದಲ್ಲಿ ವಾಟಾಳ್ ನಾಗರಾಜ್ ಮುಂದುವರೆಸಿಕೊಂಡು ಬಂದ ಚಳವಳಿಗಳ ರೀತಿ ಯನ್ನು ವಿವರಿಸಿದ್ದಾರೆ. ೧೯೮೦ರವರೆಗೆ ಆಗಾಗ ನಡೆದ ಬಿಡಿ ಆಂದೋಳನಗಳೂ ಚಿತ್ರಿತವಾಗಿವೆ.

ದೇಶದ ಭಾಷಾ ಚಳವಳಿ ಇತಿಹಾಸದಲ್ಲೇ ಪ್ರಮುಖವೆನಿಸುವುದು ೧೯೮೦ರಲ್ಲಿ ಆರಂಭಗೊಂಡ 'ಗೋಕಾಕ್ ಚಳವಳಿ'. ಆಗ ಜನ್ಮ ತಳೆದ ಸಾಹಿತಿಗಳ ಕಲಾವಿದರ ಬಳಗ ಕನ್ನಡ ಚಳವಳಿಗೆ ವ್ಯಾಪಕ, ಸ್ಪಷ್ಟ, ದಿಟ್ಟ, ಶಿಸ್ತಿನ ಸ್ವರೂಪ ನೀಡಿದ್ದನ್ನು ರಾ.ನಂ. ಎಳೆಎಳೆಯಾಗಿ ಬಿಡಿಸಿಡಲು ಸಾಧ್ಯವಾದದ್ದು, ತಾವೇ ಅದರಲ್ಲಿ ಸಕ್ರಿಯ ಪಾತ್ರ ವಹಿಸಿದ್ದರಿಂದ. ಮುಂದೆ ಉದಯವಾದ ಕನ್ನಡ ಶಕ್ತಿ ಕೇಂದ್ರ ನಡೆದು ಬಂದ ದಾರಿಯನ್ನೂ ರಾ.ನಂ. ಓದುಗರ ಮೆದುಳಿಗೆ ತಲುಪುವ ಹಾಗೆ ವಿವರಿಸಿದ್ದಾರೆ.

೨. "ಕನ್ನಡ ಶಕ್ತಿ" (೧೯೯೮)

ಈ ಪುಸ್ತಕದಲ್ಲಿ ಎರಡು ವಿಭಾಗಗಳಿವೆ. 'ಇಟ್ಟ ಹೆಜ್ಜೆಗಳು' ಒಂದು ಐತಿಹಾಸಿಕ ದಾಖಲೆ. ಶಕ್ತಿ ಕೇಂದ್ರ ಕೈಗೆತ್ತಿಗೊಂಡ ದೂರದರ್ಶನ, ಭಾಷಾ ಸೂತ್ರ, ರೈಲ್ವೆ ವಲಯ, ನದಿ ನೀರು, ಹಿಪ್ಪಿಹಾವಳಿ ಚಳವಳಿಗಳಲ್ಲದೆ ಅದು ನಡೆಸಿದ ಸಮಾವೇಶ, ವಿಚಾರ ಸಂಕಿರಣಗಳ ವಿವರವಿದೆ. ಶಕ್ತಿ ಕೇಂದ್ರ ಹೊರತಂದ ಪ್ರಕಟಣೆಗಳ ಅವಲೋಕನವೂ ಇದೆ. 'ಚಳವಳಿಯ ಚೇತನ' ಸ್ಫೂರ್ತಿದಾಯಕ, ಮಾಹಿತಿಪೂರ್ಣ ಬರಹಗಳ ಸಂಕಲನ. ಶಕ್ತಿ ಕೇಂದ್ರದ ಜೊತೆಜೊತೆಗೇ ಹೆಜ್ಜೆ ಹಾಕಿದ್ದ ರಾ.ನಂ. ಅದು ನಡೆದು ಬಂದ ದಾರಿಯನ್ನು ತಮ್ಮ ಅನಿಸಿಕೆ ಅನುಭವ, ಆಶಯಗಳ ಹಿನ್ನೆಲೆಯಲ್ಲಿ ಬಿಚ್ಚಿಟ್ಟಿದ್ದಾರೆ.

೩. "ಕನ್ನಡ ಚಳವಳಿ–ಸಾಹಿತಿಗಳ ಕಲಾವಿದರ ಬಳಗ" (೧೯೯೯)

ಎರಡು ಹಂತಗಳಲ್ಲಿ ನಡೆದ ಗೋಕಾಕ್ ಚಳವಳಿ, ಕನ್ನಡ ದೂರದರ್ಶನಕ್ಕಾಗಿ ಆಂದೋಳನ, ಕನ್ನಡ ವಿಶ್ವವಿದ್ಯಾಲಯ ಸ್ಥಾಪನೆಗಾಗಿ ಪ್ರಯತ್ನ ಇವುಗಳನ್ನೆಲ್ಲಾ ನಿರ್ವಹಿಸಿದ ಸಾಹಿತಿಗಳ ಕಲಾವಿದರ ಬಳಗ, ಆ ಸಂದರ್ಭಗಳಲ್ಲಿ ಜರುಗಿಸಿದ ಸಭೆ–ಸಂಕಿರಣಗಳಲ್ಲದೆ ಬಳಗದ ವಿವಿಧ ಕಾಲಘಟ್ಟಗಳ ಕಾರ್ಯಕಾರಿ ಸಮಿತಿ ವಿವರಗಳನ್ನು ರಾ.ನಂ. ಇಲ್ಲಿ ದಾಖಲಿಸಿದ್ದಾರೆ. ಅನುಬಂಧ ಭಾಗದಲ್ಲಿ ಬಳಗವು ಹೊರತರುತ್ತಿದ್ದ ಕಿರುಪತ್ರಿಕೆ 'ಕನ್ನಡ ಕಲಿ'ಯಲ್ಲಿ ಪ್ರಕಟಗೊಂಡಿದ್ದ ವಿಚಾರಪೂರ್ಣ, ಸ್ಮರಣೀಯ ಸಂಪಾದಕೀಯಗಳಲ್ಲಿ ಹಲವನ್ನು ಸೇರಿಸಲಾಗಿದೆ. ಬೀದರ್ ಗಲಭೆ ಸಂಬಂಧದ ಸತ್ಯಶೋಧನ ಸಮಿತಿಯ ವರದಿಯೂ ಅಲ್ಲಿದೆ. ಪಬ್ಲಿಕ್ ಶಾಲೆಗಳು ಕನ್ನಡ ಶಾಲೆಗಳಾಗಿ ಮಾರ್ಪಡಲೆಂಬ ಆಶಯ ಬರಹವೂ ಪ್ರಕಟಗೊಂಡಿದೆ.

೪. "ಕನ್ನಡ ಕೈದೀವಿಗೆ" (೨೦೦೬) (ಇದು ೧೯೮೮ರಲ್ಲಿ ಮೊದಲ ಮುದ್ರಣವಾಗಿ ಪ್ರಕಟವಾಗಿದ್ದ **'ಸಂಘಟನೆಯ ಮೂಲ ತತ್ವಗಳು'** ಕೃತಿಯ ಪರಿಷ್ಕೃತ ರೂಪ.)

ವಿದ್ಯಾರ್ಥಿ ದೆಸೆಯಿಂದಲೇ ಎಡಪಂಥೀಯ ವಿಚಾರಧಾರೆಗೆ ಒಲಿದು, ವಾಲಿದ ರಾ.ನಂ.ರಲ್ಲಿ ಸ್ಪಷ್ಟ ಚಿಂತನಾಕ್ರಮ, ದಿಟ್ಟ ಕಾರ್ಯಶೈಲಿಗಳನ್ನು ರೂಢಿಸಿ, ಅವರನ್ನೊಬ್ಬ ಯಶಸ್ವೀ ಕಾರ್ಯಕರ್ತನಲ್ಲದೆ, ಸಮರ್ಥ ಸಂಘಟಕನನ್ನಾಗಿಯೇ ರೂಪಿಸುವಲ್ಲಿ ಅದೇ ಪ್ರಧಾನ ಪಾತ್ರ ವಹಿಸಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ಸಂಘ–ಸಂಸ್ಥೆ–ಸಂಘಟನೆಯೊಂದು ಜನ್ಮ ತಳೆಯಲು, ಕಾರ್ಯಪ್ರವೃತ್ತವಾಗಲು ಅನೇಕ ಮೂಲಭೂತ ಅಂಶಗಳು ಅವಶ್ಯ ಎಂದು ವಿವರಿಸುವ ರಾ.ನಂ., ಅವು ಅನುಸರಿಸಬೇಕಾದ ಶಿಸ್ತು–ಸಂಯಮದ ರೀತಿ–ನೀತಿ 'ಸಂವಿಧಾನ'ಗಳನ್ನು ಪಟ್ಟಿಮಾಡಿದ್ದಾರೆ. ಕಾರ್ಯಕರ್ತರ ತರಬೇತಿ, ಸಮಿತಿಯ ನೇಮಕ ನಾಯಕತ್ವದ ಹೊಣೆಗಾರಿಕೆಗಳನ್ನು ವಿವರಿಸಿದ್ದಾರೆ.

'ಕನ್ನಡ ಸಂಘಟನೆಗಳು–ಒಂದು ವಿವೇಚನೆ' ಎಂಬ ಭಾಗದಲ್ಲಂತೂ ನಿರ್ದಿಷ್ಟ ಕಾರ್ಯಸೂತ್ರಗಳನ್ನು, ಕಾರ್ಯಕ್ರಮಗಳ ಏರ್ಪಾಡಿಗೆ ಮಾರ್ಗದರ್ಶನವನ್ನು ಆಹ್ವಾನಪತ್ರಿಕೆ–ಪತ್ರಿಕಾ ಪ್ರಕಟಣೆ–ಪತ್ರಿಕೆಗಳಿಗೆ ಪತ್ರಲೇಖನ ಮಾದರಿಗಳನ್ನು ನೀಡಿದ್ದಾರೆ. ಒಟ್ಟಿನಲ್ಲಿ ಇದು ಸಂಘಟನೆಗಳಿಗೆ ಅತ್ಯಗತ್ಯವಾದ ತತ್ವ–ಸೂತ್ರ–ಮಾರ್ಗಗಳನ್ನು ವಿವರಿಸುವ ಚಿಕ್ಕದಾದರೂ ಚೊಕ್ಕದಾದ ಮಾರ್ಗದರ್ಶಕ ಕೃತಿಯೇ ಆಗಿದೆ.

೫. "ಕನ್ನಡ ಕಿಸೆಗನ್ನಡಿ" (೨೦೦೫ ಮರುಮುದ್ರಣಗಳು – ೫)

ಗೆಳೆಯ ಬಾ.ಹ. ಉಪೇಂದ್ರರ ಜೊತೆಗೂಡಿ ರಾ.ನಂ. ಸಿದ್ಧಪಡಿಸಿದ ಈ ಅಂಗೈ ಅಗಲದ ಪುಸ್ತಕ, ಅತ್ಯಗತ್ಯ ಮಾಹಿತಿಗಳನ್ನೊಳಗೊಂಡು ಅಪಾರ ಜನಪ್ರಿಯತೆ ಗಳಿಸಿದೆ. ಸರಿಸುಮಾರು ಹತ್ತುಸಾವಿರ ಮನೆಗಳನ್ನು ಸೇರಿದೆ. ಕನ್ನಡ–ಕರ್ನಾಟಕ ಕುರಿತು ಪ್ರತಿ ಕನ್ನಡಿಗನೂ ತಿಳಿದಿರಲೇಬೇಕಾದ ಮಾಹಿತಿ, ಅಂಕಿ–ಅಂಶಗಳು ಇಲ್ಲಿವೆ. ಅನುದಿನದ ಜೀವನದಲ್ಲಿ ಕನ್ನಡವನ್ನು ಬಳಸಿ–ಬೆಳೆಸಿ, ಅಳವಡಿಸಿಕೊಳ್ಳುವುದು ಹೇಗೆಂಬ ಸಲಹೆಗಳೂ ಇವೆ. ಕನ್ನಡದ ಪತ್ರಿಕಾಮಾಧ್ಯಮಗಳು ಈ ಕೃತಿಯನ್ನು ಗ್ರಹಿಸಿ– ಸ್ವೀಕರಿಸಿ–ಬಣ್ಣಿಸಿರುವ ರೀತಿ ಅನನ್ಯ.

'ಒಂದು ಅರ್ಥದಲ್ಲಿ ಕನ್ನಡದ ಕೆಲಸ ಹೀಗೂ ಮಾಡಬೇಕೆಂಬುದಕ್ಕೆ ಒಂದು ಸಮರ್ಥ ಉದಾಹರಣೆ' –*ವಿಜಯ ಕರ್ನಾಟಕ*

"ನಾಡು ನುಡಿಯ ಕಿಸೆಗನ್ನಡಿ" – *ಪ್ರಜಾವಾಣಿ*

"ಕನ್ನಡಿಗರನ್ನು ಬಡಿದೆಬ್ಬಿಸಲು ಕಿಸೆಗನ್ನಡಿ" – *ಕನ್ನಡಪ್ರಭ*

"ಇದೊಂದು ಮಾಹಿತಿ ಖಜಾನೆ" – *ಉದಯವಾಣಿ*

"ಕನ್ನಡ – ಕನ್ನಡ ಇರಲಿ ನಮ್ಮ ಸಂಗಡ" – *ಉಷಾಕಿರಣ*

"ಕನ್ನಡದ ಬಗೆಗಿನ ವಿವರವನ್ನೇ ಅಡಗಿಸಿಟ್ಟುಕೊಂಡಿದೆ" – *ಸಂಯುಕ್ತ ಕರ್ನಾಟಕ*

"ಕನ್ನಡಿಗರಿಗೆ ಅಪರೂಪದ ಕೈಗನ್ನಡಿ" – *ಹೊಸದಿಗಂತ*

"More information on Kannada" - *ದಿ ಹಿಂದೂ*

೬. "ಆಧುನಿಕ ಕರ್ನಾಟಕದ ಆತಂಕಗಳು" (೨೦೦೧)

ಕನ್ನಡದ ಮಠವೆಂದೇ ಹೆಸರಾದ ಚಿಕ್ಕೋಡಿ ತಾ. ಚಿಂಚಣಿಯ ಸಿದ್ಧ ಸಂಸ್ಥಾನ ಮಠದಿಂದ ಕನ್ನಡ ಜಾಗೃತಿ ಮಾಲೆಯ ೪ನೇ ಕುಸುಮವಾಗಿ ಹೊರಬಂದ ಕೃತಿಯಿದು. ನಮ್ಮ ನಾಡು–ನುಡಿ–ನಾಡವರನ್ನು ಕಾಡುತ್ತಿರುವ ನೂರಾರು ಆತಂಕಗಳ ಪೈಕಿ ಹನ್ನೊಂದರ ವಿಶ್ಲೇಷಣೆಯನ್ನು ಸ್ವತಃ ಆತಂಕಿತರಾಗಿರುವ ರಾ.ನಂ. ಈ ಕೃತಿಯಲ್ಲಿ ಮಾಡಿದ್ದಾರೆ. ಜಾಗತೀಕರಣವೂ ಸೇರಿದಂತೆ ಕರ್ನಾಟಕದ ಒಟ್ಟಾರೆ ಆತಂಕಗಳು ಕೇಂದ್ರೀಕೃತ ಆಡಳಿತ ಹಾಗೂ ಪರರ ವಲಸೆಗಳಿಂದಾಗಿ ಕನ್ನಡಿಗರೇ ಸ್ಥಳೀಯ ನಿರಾಶ್ರಿತರಾಗಿರುವುದು, ಮಹಿಷಿ ವರದಿ, ಅಖಂಡ ಕರ್ನಾಟಕದಲ್ಲೂ ಪ್ರಾದೇಶಿಕ ಅಸಮಾನತೆ, ಹಿಂದಿ ಹೇರಿಕೆ ಹಾಗೂ ದೂರದರ್ಶನದಲ್ಲಿ ಕನ್ನಡದ ದುರವಸ್ಥೆ, ಕನ್ನಡ ಸಂಘಟನೆಗಳ ಅನಿವಾರ್ಯತೆ ಈ ಎಲ್ಲ ವಿಷಯಗಳ ಕುರಿತಾಗಿ ರಾ.ನಂ. ಆಲೋಚನಾ ಲಹರಿಯ ಹರಿವು–ಹರವುಗಳ ಪರಿಚಯ ದೊರೆಯುತ್ತದೆ.

೭. "ಕನ್ನಡವೆಂದರೆ ಬರಿ ನುಡಿಯಲ್ಲ" (೨೦೦೮)

ಸಂಶೋಧನಾ ವಿಷಯದಲ್ಲಿ ಆಚಾರ್ಯ ತೀನಂಶ್ರೀ ಸದಾ ಹೇಳುತ್ತಿದ್ದ 'Go to the Source' ಎಂಬ ಸೂತ್ರ ವಾಕ್ಯವನ್ನು ತಮ್ಮ ಗುರು ಡಾ. ಚಿದಾನಂದಮೂರ್ತಿಯವರ ಮೂಲಕ ಮಂತ್ರೋಪದೇಶದಂತೆ ಸ್ವೀಕರಿಸಿರುವವರು ರಾ.ನಂ. ಯಾವುದೇ ಕನ್ನಡದ ವಿಚಾರ ತಮ್ಮ ಅರಿವಿಗೆ ಬಂದರೂ ಅದರ ಆಳ–ಅಗಲಗಳಷ್ಟೇ ಅಲ್ಲದೆ ಹಿನ್ನೆಲೆ–

ಮುನ್ನೆಲೆ–ಮಗ್ಗುಲುಗಳನ್ನು ಅಂದಾಜಿಸುವುದೇ ಅವರ ಜಾಯಮಾನ. ತಮ್ಮ ಕಣ್–ಕಿವಿ–ಮನವನ್ನು ಸದಾ ತೆರೆದಿಟ್ಟುಕೊಂಡಿರುವ ರಾ.ನಂ. ಹೊಸ ವಿಷಯದ ಸುತ್ತಮುತ್ತಣ ಪುಸ್ತಕ, ಪತ್ರಿಕೆ, ತಾವೇ ಸಂಗ್ರಹಿಸಿದ ಪತ್ರಿಕಾ ತುಣುಕುಗಳನ್ನು ಕೈಚಾಚಿ–ಕಣ್ಣಾಡಿಸುತ್ತಾರೆ. ಆಯಾ ವಿಷಯ ತಜ್ಞರ ಬೆನ್ನು ಹತ್ತಿ ಕಾಡಿ–ಬೇಡಿ ಹೆಚ್ಚಿನ ವಿವರ, ಮಾಹಿತಿ, ಅಂಕಿ–ಅಂಶ ಅವುಗಳನ್ನು ಒಳಗೊಂಡ ಪುಸ್ತಕ ನಿಯತಕಾಲಿಕಗಳನ್ನು ಸಂಗ್ರಹಿಸುತ್ತಾರೆ. ವಿಷಯವನ್ನು ಖಚಿತಪಡಿಸಿಕೊಂಡು ದಾಖಲಿಸಿಕೊಳ್ಳುತ್ತಾರೆ. ಜೋಪಾನವಾಗಿಟ್ಟುಕೊಂಡು ಅವನ್ನು ತಪ್ಪದೆ ವಾಪಸುಮಾಡುತ್ತಾರೆ! ಎಲ್ಲವನ್ನೂ ಪರಿಶೀಲಿಸಿದ ನಂತರ, ಅವನ್ನು ಆಧರಿಸಿದ ಲೇಖನವೋ, ಭಾಷಣವೋ ಸಿದ್ಧಗೊಳ್ಳುತ್ತದೆ. ತಾವು ಅರಿತುಕೊಂಡದ್ದು ಆಸಕ್ತರ ಗಮನಕ್ಕೂ ಬರಲಿ ಎಂದು ಪತ್ರಿಕೆಗಳಿಗೆ ಕಳಿಸಿ, ಪ್ರಕಟವಾಗುವಂತೆ ನೋಡಿಕೊಳ್ಳುತ್ತಾರೆ.

ಈ ವೇಳೆಗೆ ಅದು ಸಾರ್ವಜನಿಕ ಚರ್ಚೆಯ ವಿಚಾರವಾಗುತ್ತದೆ. ಸಂಬಂಧಿಸಿದವರ ಸರ್ಕಾರದ ಗಮನಕ್ಕೂ ಬರುತ್ತದೆ. ಸ್ವಲ್ಪವಾದರೂ ಪರಿಣಾಮ, ಇಲ್ಲದಿದ್ದರೆ ಪ್ರತಿಕ್ರಿಯೆಯಾದರೂ ಮೂಡಿಬರುತ್ತದೆ. ಅಂಥ ಬಿಡಿಲೇಖನಗಳು ಸಂಗ್ರಹಾರ್ಹವಾಗಿದ್ದರೆ ದಾಖಲೆಯಾಗುತ್ತದೆ ಅನಿಸಿದರೆ, ಅವುಗಳ ಸಂಕಲನಮಾಡಿ ತಾವೇ ಅಥವಾ ಪ್ರಕಾಶನ ಸಂಸ್ಥೆ ಯೊಂದರ ಮೂಲಕ ಪ್ರಕಟಿಸಿ, ಆ ವಿಚಾರಗಳಿಗೆ ಒಂದು ಶಾಶ್ವತಮೌಲ್ಯವನ್ನು ದೊರಕಿಸಿಕೊಡುತ್ತಾರೆ. ಇದು ರಾ.ನಂ. ಕೆಲಸ ಮಾಡುವ ರೀತಿ, ಒಂದು ಬಗೆಯ 'ಮಧುಕರ' ವೃತ್ತಿ, ಪ್ರವೃತ್ತಿ! 'ಕನ್ನಡವೆಂದರೆ ಬರಿ ನುಡಿಯಲ್ಲ' ಇಂಥ ೩೩ ಸಂಗ್ರಹ ಯೋಗ್ಯ ಬರಹಗಳ ಸಂಕಲನ. ಕರ್ನಾಟಕದ ಹೆಸರಾಂತ ಪ್ರಕಾಶನ ಸಂಸ್ಥೆ 'ಸಪ್ನ ಬುಕ್‌ಹೌಸ್', ಕನ್ನಡ ರಾಜ್ಯೋತ್ಸವ–೫೫ ಸಂದರ್ಭದಲ್ಲಿ ಪ್ರಕಟಿಸಿದೆ. ವಿಷಯವ್ಯಾಪ್ತಿ ಸಾಕಷ್ಟು ವಿಸ್ತಾರವೂ, ವೈವಿಧ್ಯಮಯವೂ ಆಗಿದೆ. ನಾಡು–ನುಡಿ ಕುರಿತು ರಾ.ನಂ. ಎಷ್ಟೆಲ್ಲ ತಲೆ ಕೆರೆದು ಕೊಂಡಿದ್ದಾರೆ, ಕೆಡಿಸಿಕೊಂಡಿದ್ದಾರೆ ಎಂಬುದರ ಸ್ಥೂಲ ಚಿತ್ರಣ ಇಲ್ಲಿದೆ.

ಕರ್ನಾಟಕ ಏಕೀಕರಣ–ಕನ್ನಡ ಚಳವಳಿ–ಕನ್ನಡ ಬಾವುಟ–ಪ್ರಥಮ ಕನ್ನಡ ರಾಜ್ಯೋತ್ಸವ – ಈ ನಾಲ್ಕು ಲೇಖನಗಳು ಐತಿಹಾಸಿಕ ಘಟನೆ, ಸಂಗತಿಗಳನ್ನು ರೋಚಕ ವಾಗಿ ಮುಂದಿಟ್ಟಿವೆ. ಕನ್ನಡವೆಂದರೆ ಬರಿನುಡಿಯಲ್ಲ ಹಾಗೂ ಕನ್ನಡ ಸುವರ್ಣಪಥದಲ್ಲಿ ಸಾಗಲಿ ಇವು ಭಾವುಕ ನೆಲೆಯಲ್ಲೇ ನಿಲ್ಲದೆ, ಸದ್ವಿಚಾರ–ಸದಾಶಯದ ಬರಹಗಳಾಗಿವೆ ನಾಡಿನ ಅಭಿವೃದ್ಧಿ–ಆರ್ಥಿಕತೆ–ಜನಗಣತಿ ಲೇಖನಗಳು ಅಂಕಿ–ಅಂಶ ಆಧಾರಿತ ವಾಗಿಯೇ ನಾಡಿನಲ್ಲಿ ಏನಾಗಿದೆ, ಏನಿಲ್ಲ ಎಂಬುದನ್ನು ವಿಶ್ಲೇಷಿಸಿವೆ. ಲೇಖಕರ ಪರಿಸರ ಪ್ರೇಮ ಹಾಗೂ ನೈಸರ್ಗಿಕ ಸಂಪತ್ತಿನ ರಕ್ಷಣೆ ಬಗೆಗಿನ ಕಾಳಜಿ–ಕಳಕಳಿಗಳು ನಾಲ್ಕು ಲೇಖನಗಳಲ್ಲಿ ವ್ಯಕ್ತವಾಗಿವೆ.

'ಸ್ಥಳೀಯ ನಿರಾಶ್ರಿತನೇ' ಆಗಿರುವ ಕನ್ನಡಿಗನ ಔದ್ಯೋಗಿಕ ಸಮಸ್ಯೆಗಳನ್ನು ಸರೋಜಿನಿ ಮಹಿಷಿ ವರದಿ ಹಿನ್ನೆಲೆಯಲ್ಲಿ, ಮೂರು ಲೇಖನಗಳಲ್ಲಿ ವಿವರಿಸಲಾಗಿದೆ. ಕರ್ನಾಟಕಕ್ಕೆ ಗಡಿ, ಜಲವಿವಾದಗಳು, ರೈಲು, ಅಂಚೆ ಚೀಟಿ ಪ್ರಕಟಣೆ ವಿಷಯಗಳಲ್ಲೂ ಸತತವಾಗಿ ಆಗುತ್ತಿರುವ ಅನ್ಯಾಯ ಪರಂಪರೆಗೆ ಕನ್ನಡಿ ಹಿಡಿಯುವ ಕೆಲಸ ಮೂರು ಪ್ರತ್ಯೇಕ ಬರಹಗಳಲ್ಲಾಗಿದೆ. 'ಕೈಗಾರಿಕೀಕರಣ ಇಲ್ಲವೇ ವಿನಾಶ' ಎಂಬ ಆದರ್ಶ–ದರ್ಶನ

ವನ್ನಿಟ್ಟುಕೊಂಡು ರಾಜ್ಯದಲ್ಲಿ ಸರಿಸುಮಾರು ೨೨ ಕೈಗಾರಿಕೆಗಳನ್ನು ರಾಜ್ಯ ಸರ್ಕಾರದಿಂದ ಸ್ಥಾಪಿಸಿದ ದಿವಾನ್ ಸರ್ ಎಂ. ವಿಶ್ವೇಶ್ವರಯ್ಯ ಅವರ ಕನಸಿನ ಕೂಸುಗಳ ಕತ್ತನ್ನು ಹೇಗೆ ವ್ಯವಸ್ಥಿತವಾಗಿ ಹಿಚುಕಲಾಗುತ್ತಿದೆ ಎಂಬ ವ್ಯಾಕುಲ, ಕಳವಳಗಳು ಲೇಖನಗಳೆರಡರಲ್ಲಿ ವ್ಯಕ್ತವಾಗಿವೆ.

'ಶಾಸ್ತ್ರೀಯ ಭಾಷೆ' ಕನ್ನಡ, ಕಲಿಕೆ ಮಾಧ್ಯಮವಾಗುವುದಲ್ಲದೆ ಸಾರ್ವಜನಿಕ ವಲಯಗಳಲ್ಲೂ, ಸಂಸತ್ತು-ಶಾಸನ ಸಭೆಗಳಲ್ಲೂ ಹೇಗೆ ಬಳಸಲ್ಪಡಬೇಕೆಂಬ ಪರಿಕಲ್ಪನೆಗಳು ನಾಲ್ಕು ಲೇಖನಗಳಲ್ಲಿ ಪಸರಿಸಿಕೊಂಡಿವೆ. ಕರ್ನಾಟಕದ ರಾಜಧಾನಿಯೇ ಆಗಿದ್ದರೂ ಬೆಂಗಳೂರು ಪರರಾಜ್ಯಗಳ ಜನರಷ್ಟೇ ಅಲ್ಲ, ಅವರ 'ದೇವ-ದೇವಿ'ಯರಿಂದಲೂ ಆಕ್ರಮಣಕ್ಕೊಳಗಾಗಿ, ಇಲ್ಲಿ ಕನ್ನಡ ಹೇಗೆ ನಲುಗುತ್ತಿದೆ, ಕನ್ನಡಿಗ ಹೇಗೆ ನೆಲೆಕಳೆದು ಕೊಳ್ಳುತ್ತಿದ್ದಾನೆ ಎಂಬುದನ್ನು ಲೇಖನವೊಂದು ಬಿಚ್ಚಿಟ್ಟಿದೆ.

ಕನ್ನಡ ಸಂಘಟನೆಗಳ ಕುರಿತಾಗಿಯೇ ಮೂರು ಸುದೀರ್ಘ ಬರಹಗಳಿದ್ದು, ಅವುಗಳ ಅಗತ್ಯ-ಪಾತ್ರ-ಕಾರ್ಯವಿಧಾನಗಳ ಬಗ್ಗೆ ಮಾರ್ಗದರ್ಶಕ ಸೂತ್ರಗಳನ್ನು ಪ್ರಸ್ತಾಪಿಸಿವೆ. ಕರ್ನಾಟಕದ ಸಮಸ್ತ ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆ ಎನಿಸಿದ್ದರೂ ತನ್ನ ಹೊಣೆ-ಉದ್ದೇಶ-ಕರ್ತವ್ಯಗಳು ಹಾಗೂ ಕನ್ನಡಿಗರ ಅಪೇಕ್ಷೆ-ನಿರೀಕ್ಷೆಗಳನ್ನು ಈಡೇರಿಸುವಲ್ಲಿ ಬಹುಮಟ್ಟಿಗೆ ವಿಫಲವೇ ಆಗಿರುವ ಕನ್ನಡ ಸಾಹಿತ್ಯ ಪರಿಷತ್ತು, ಅದರ ವಾರ್ಷಿಕ ಸಮ್ಮೇಳನ ಗಳು, ಸಮ್ಮೇಳನಾಧ್ಯಕ್ಷರ ಆಶಯ ಪಾಲನೆ - ಈ ವಿಷಯಗಳು ನಾಲ್ಕು ಲೇಖನಗಳ ಚೌಕಟ್ಟಿನಲ್ಲಿ ಸಮಗ್ರವಾಗಿ ಚರ್ಚಿತವಾಗಿವೆ. ಒಟ್ಟಾರೆಯಾಗಿ ಈ ಕೃತಿ ಕನ್ನಡ ಕುರಿತು ಭಾವುಕ ನುಡಿಗಳ ಭಾರದಿಂದ ಜಗ್ಗದೆ, ವಾಸ್ತವಿಕ ದೃಷ್ಟಿಕೋನ, ಅಂಕಿಅಂಶಗಳು ವೈಚಾರಿಕ ಪರಿಕಲ್ಪನೆಗಳನ್ನೊಳಗೊಂಡಿದ್ದು 'ಸಿರಿನುಡಿ'ಗಳ ಹೂರಣವೇ ಆಗಿದೆ ಎಂದರೆ ಎಳ್ಳಷ್ಟೂ ಅತಿಶಯೋಕ್ತಿಯಲ್ಲ.

ಸ್ಥಳೀಯರಿಗೆ ಉದ್ಯೋಗ-ನನಸಾಗಬೇಕಾದ ಕನಸು (೨೦೧೨)

ಸ್ವಯಂ ಸಾರ್ವಜನಿಕ ವಲಯದ ಕಾರ್ಖಾನೆಯಲ್ಲಿ ಉದ್ಯೋಗಿಯಾಗಿರುವ ರಾ.ನಂ. ಕನ್ನಡಿಗರ ಬಗೆಗೆ ಉದ್ದಿಮೆದಾರರ, ಆಯಕಟ್ಟಿನ ಜಾಗದಲ್ಲಿರುವ ಅಧಿಕಾರಿಗಳ ಮಲತಾಯಿ ಧೋರಣೆಯನ್ನು ತಮ್ಮ ನಿತ್ಯದನುಭವದಲ್ಲಿ ಕಂಡುಂಡು, ರಾಜ್ಯದಲ್ಲಿ ಸ್ಥಳೀಯರಿಗೆ ಉದ್ಯೋಗದ ವಿಷಯದಲ್ಲಿ ಆಗುತ್ತಿರುವ ಅನ್ಯಾಯವನ್ನು, ಸರ್ಕಾರದ ನೀತಿ ನಿಯಮಗಳ ಬೆಳಕಿನಲ್ಲಿ ಎಳೆಎಳೆಯಾಗಿ ಬಿಡಿಸಿಟ್ಟು, ಈ ಕಿರುಹೊತ್ತಿಗೆಯನ್ನು ಓದಿದ ಯುವಜನತೆ ತಮ್ಮ ನ್ಯಾಯಬದ್ಧ ಹಕ್ಕುಗಳನ್ನು ಪಡೆಯಲು ಕ್ರಿಯಾಶೀಲರಾಗುವಂತೆ ಮಾಡಿದ್ದಾರೆ. ಮಣ್ಣಿನ ಮಕ್ಕಳಿಗೆ ಉದ್ಯೋಗ ಎಂಬ ಕೂಗಿನ ಜೊತೆ ಜೊತೆಗೇ ಪಟ್ಟಭದ್ರರು ರಾಷ್ಟ್ರೀಯ ಐಕ್ಯತೆ, ಸಂಕುಚಿತ ಮನೋಭಾವ ಎಂಬೆಲ್ಲಾ ಮಂಕುಬೂದಿ ಎರಚಿ, ಬೇಳೆ ಬೇಯಿಸಿಕೊಳ್ಳುತ್ತಿರುವ ಈ ಹೊತ್ತಿನಲ್ಲಿ ಸಮಸ್ಯೆಯ ಗಂಭೀರತೆಯನ್ನು ಅಧ್ಯಯನ ಮಾಡಿ, ಅಂಕಿ-ಅಂಶಗಳ ಸಹಾಯದಿಂದ ರಾಜ್ಯಾಂಗ, ನ್ಯಾಯಾಂಗದತ್ತ ವಾಗಿಯೇ ಇತರ ರಾಜ್ಯಗಳು ದೊರಕಿಸಿಕೊಂಡಿರುವ ವಿಶೇಷ ಅವಕಾಶಗಳತ್ತ ಕಣ್ಣಾಡಿಸಿ ಸದ್ಯದ ಪರಿಸ್ಥಿತಿಯ ಸಾಧ್ಯಾ ಸಾಧ್ಯತೆಯ ಕೈಮರವನ್ನು ಚಿತ್ರಿಸಿದ್ದಾರೆ.

ಸ್ಥಳೀಯ ನಿರುದ್ಯೋಗಿ ತನ್ನ ತವರಿನಲ್ಲಿಯೇ ಎರಡನೇ ದರ್ಜೆ ನಾಗರಿಕನಾಗಿ ಹತಾಶ ಮನೋಭಾವದಿಂದ ಕಂಗಾಲಾಗಿರುವಾಗ, ಗಾತ್ರದಲ್ಲಿ ಕಿರಿದಾದರೂ ಸೂಕ್ತ ಸಮಯದಲ್ಲಿ ಪ್ರಕಾಶನಗೊಂಡು ಕನ್ನಡಿಗರ ಕಣ್ಣು ತೆರೆಯಿಸುವ ದೊಡ್ಡ ಕಾರ್ಯಕ್ಕೆ ಪ್ರೇರಣೆಯಾಗಿದೆ ಈ ಕೃತಿ.

ರಾ.ನಂ. ಸಂಪಾದಿಸಿದ ಕೃತಿಗಳು:

೧. **ಕನ್ನಡ–ಕನ್ನಡಿಗ–ಕರ್ನಾಟಕ** (೧೯೯೦, ೯ ಮರುಮುದ್ರಣಗಳು)

ಎಂ.ಚಿದಾನಂದಮೂರ್ತಿ, ಎಲ್.ಎಸ್.ಶೇಷಗಿರಿರಾಯರಂಥ ಹಿರಿಯರೊಡಗೂಡಿ ರಾ.ನಂ. ಸಂಪಾದಿಸಿದ ಈ ಕೃತಿಯಂಥದು ಕನ್ನಡದಲ್ಲಿಯೇ ಬೇರೊಂದಿಲ್ಲ ಎಂಬುದು ಹಲವು ಚಿಂತಕ ವಿದ್ವಾಂಸರ ಅಭಿಪ್ರಾಯ. ಇದರಲ್ಲಿ ಏನಿದೆ–ಏನಿಲ್ಲ? ನಾಡ ಕುರಿತ ಕವಿಗೀತೆಗಳು– ಕರ್ನಾಟಕದ ಸಂಕ್ಷಿಪ್ತ ಇತಿಹಾಸ–ಕನ್ನಡದ ಸಮಸ್ಯೆಗಳು, ಕನ್ನಡ ಚಳವಳಿ–ನಾಡುನುಡಿ ಬಗೆಗಿನ ವಿವಿಧ ಸಮಿತಿ, ಆಯೋಗಗಳ ವರದಿಗಳು, ಭಾಷಾನೀತಿ ನಾಡಿನ ಪ್ರೇಕ್ಷಣೀಯ ಸ್ಥಳಗಳು–ದೈನಂದಿನ ಬದುಕಿನಲ್ಲಿ ಕನ್ನಡ ಇವುಗಳ ಕುರಿತ ಅಭ್ಯಾಸಪೂರ್ಣ, ಅಧಿಕೃತ ಲೇಖನಗಳಲ್ಲದೆ ನಾಡಿನ ಬಗೆಗಿನ ಅಂಕಿ–ಅಂಶಗಳ ಸಂಗ್ರಹವೇ ಇಲ್ಲಿದೆ. ಆ ಅಂಕಿ–ಅಂಶಗಳನ್ನು ಪ್ರತಿ ಮರುಮುದ್ರಣಕ್ಕೂ ಪರಿಷ್ಕೃತಗೊಳಿಸ ಲಾಗಿದೆ, ಇತ್ತೀಚಿನದನ್ನೂ ಸೇರಿಸಲಾಗಿದೆ.

ಹೆಸರಾಂತ ಕಾದಂಬರಿಕಾರ ಎಸ್.ಎಲ್. ಭೈರಪ್ಪ ಈ ಪುಸ್ತಕವನ್ನು 'ಕನ್ನಡಿಗರ ಅನಧಿಕೃತ ಸಂವಿಧಾನ' ಎಂದು ಬಣ್ಣಿಸಿದರೆ, ಸಂಸದ ಡಿ.ಬಿ. ಚಂದ್ರೇಗೌಡ 'ಕಿರುಕನ್ನಡ ವಿಶ್ವಕೋಶ' ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ನಾಡಿನ ಎಲ್ಲ ಅಭಿಮಾನಿಗಳು ವಿದ್ಯಾರ್ಥಿಗಳು ಮಾತ್ರವಲ್ಲದೆ ರಾಜಕಾರಣಿಗಳು, ಅಧಿಕಾರಿಗಳು, ಶಿಕ್ಷಕರು ತಮ್ಮ ಬಳಿ ಸದಾ ಇಟ್ಟುಕೊಂಡು ಪರಾಮರ್ಶಿಸುತ್ತಿರಬೇಕಾದ ಕೃತಿಯಿದು. ಕೊಡಲಾಗಿರುವ ಅಧಿಕೃತ ಮಾಹಿತಿ, ಅಂಕಿ–ಅಂಶಗಳನ್ನು ಕಲೆ ಹಾಕುವಲ್ಲಿ, ಪರಿಷ್ಕರಿಸುವಲ್ಲಿ ರಾ.ನಂ. ವಹಿಸಿದ ಪಾತ್ರ–ಶ್ರಮಗಳನ್ನು ಡಾ. ಎಂ. ಚಿದಾನಂದಮೂರ್ತಿ ಅವರೇ ಮುನ್ನುಡಿಯಲ್ಲಿ ಮುಕ್ತ ಕಂಠದಿಂದ ಪ್ರಶಂಸಿಸಿರುವುದು ಗಮನಾರ್ಹ.

೨. **ಇದು ನಮ್ಮ ಕರ್ನಾಟಕ (೨೦೦೫)** : ನವಕರ್ನಾಟಕ ಪ್ರಕಾಶನದ ಮಾಸಿಕ 'ಹೊಸತು' ವಾಚಿಕೆಗಳ ಮಾಲೆಯಲ್ಲಿ ೧೯ನೇ ಸಂಪುಟವಾಗಿ ಹೊರ ಬಂದಿರುವ ಇದು ಕರ್ನಾಟಕದ ಆಗು–ಹೋಗುಗಳ ಕುರಿತಾದ ೩೨ ಉತ್ತಮ ಲೇಖನಗಳ ಸಂಗ್ರಹ. ಈ ಸಂಗ್ರಹದಲ್ಲಿ ಸಂಪಾದಕ ರಾ.ನಂ.ರ ನಾಲ್ಕು ಲೇಖನಗಳೂ ಸೇರಿವೆ. ಲೇಖನ ವಿಷಯಗಳ ವೈವಿಧ್ಯ–ವ್ಯಾಪ್ತಿ, ಬರೆದವರ ಅನುಭವ, ದೃಷ್ಟಿಕೋನಗಳನ್ನು ಗಮನಿಸಿದಾಗ ಈ ವಿಷಯಗಳೆಲ್ಲದರ ಕುರಿತು ಅರಿವಷ್ಟೇ ಅಲ್ಲ, ಸಾಕಷ್ಟು ಮಟ್ಟದ ಸ್ವಂತ ಪರಿಶ್ರಮ ಇದ್ದವರಿಗಷ್ಟೇ ಅವುಗಳನ್ನು ಆಯ್ದು ಸಂಕಲನದಲ್ಲಿ ಸೇರಿಸಲು ಸಾಧ್ಯವಾಗುತ್ತದೆ ಎಂಬುದನ್ನು ಸಂಕಲನ ದೃಢಪಡಿಸುತ್ತದೆ.

'ಯಾವುದೇ ವಿಷಯಕ್ಕೆ ಸಂಬಂಧಿಸಿದ ಲೇಖನಗಳು ಒಂದೆಡೆ ದೊರೆತರೆ, ಬೌದ್ಧಿಕ ಮತ್ತು ಕ್ರಿಯಾತ್ಮಕ ಚರ್ಚೆಗೆ ಅನುವು ಮಾಡಿಕೊಟ್ಟಂತಾಗುತ್ತದೆ' ಎಂಬುದು ಹೊಸತು

ವಾಚಿಕೆಗಳ ಉದ್ದೇಶ, ಇದು ಪ್ರಸ್ತುತ ಪುಸ್ತಕದ ವಿಷಯದಲ್ಲಿ ಅಕ್ಷರಶಃ ನಿಜವಾಗಿದೆ. ನಾಡಿನ ಅಭಿವೃದ್ಧಿ ಬಗ್ಗೆ ಯಾವ, ಯಾವ ದಿಕ್ಕಿನಲ್ಲಿ ಚಿಂತನೆ ಹರಿಯಬೇಕೆಂಬ ಹಾಗೂ ಏನೇನು ಆಗಬೇಕೆಂಬುದರ ಪಕ್ಷಿನೋಟವಿಲ್ಲಿದೆ. ಯಾವುದಾದರೂ ವಿಷಯವನ್ನು ಬಿಡಲಾಗಿದೆ ಎಂದು ಖಂಡಿತಾ ಅನಿಸದ ಹಾಗೆ ವಿಷಯಗಳ ಆಯ್ಕೆ ನಡೆದಿದೆ ಹಾಗೂ ಅದು ಸಮಗ್ರವಾಗಿದೆ.

ಪುಸ್ತಕದ ಸಂಪಾದನಾ ಕಾರ್ಯದಲ್ಲಿ ರಾ.ನಂ. ತೋರಿಸಿರುವ ವಿಚಕ್ಷಣೆ ಶ್ಲಾಘನೀಯ. ಇನ್ನೊಂದು ಕುತೂಹಲದ ವಿಷಯವನ್ನು ಇಲ್ಲಿ ಪ್ರಸ್ತಾಪಿಸಬೇಕು. ಸಂಕಲನದಲ್ಲಿ ಸೇರಿರುವ ರಾ.ನಂ.ರ 'ಅಖಂಡ ಕರ್ನಾಟಕದ ಸಮಗ್ರತೆ ಪ್ರಶ್ನಾತೀತ' ಲೇಖನವು **ಹೊಸತು** ಮಾಸಿಕದಲ್ಲಿ ಪ್ರಕಟಗೊಂಡಾಗಲೇ, ಅದರಲ್ಲಿ ಪ್ರಸ್ತಾಪಿತವಾದ ಕೆಲ ಅಂಶಗಳ ಬಗ್ಗೆ ಎಚ್.ಬಿ. ಚಿಂಚೋಳಿ ಅವರು ಆಕ್ಷೇಪವೆತ್ತಿ ತಾವೂ ಒಂದು ಲೇಖನವನ್ನು ಕಳಿಸಿಕೊಟ್ಟಿದ್ದರು. ಅದು ನಂತರದ ತಿಂಗಳೊಂದರ ಮಾಸಿಕದಲ್ಲಿ ಪ್ರಕಟವೂ ಆಗಿತ್ತು, ಈ ಎರಡೂ ಬರಹಗಳನ್ನು ಪ್ರಸ್ತುತ ಸಂಕಲನದಲ್ಲಿ ಸೇರಿಸಿ ಪ್ರಕಟಿಸಿರುವುದು ರಾ.ನಂ. ತಮ್ಮ ಅಭಿಮತಕ್ಕೆ ವಿರೋಧವಾದುದನ್ನೂ ಹೇಗೆ ಕ್ರೀಡಾಮನೋಭಾವದಿಂದ ಸ್ವೀಕರಿಸುತ್ತಾರೆ ಎಂಬುದಕ್ಕೆ ಉದಾಹರಣೆ.

ರಾ.ನಂ. ಸಂಪಾದಿಸಿರುವ ಇನ್ನಿತರ ಕೃತಿಗಳು

ಎಚ್.ಎ.ಎಲ್. ಕಾರ್ಖಾನೆಯ ಚಿನ್ನದ ಹಬ್ಬದ ಸಂದರ್ಭದಲ್ಲಿ ಹೊರತರಲಾದ **'ಸುವರ್ಣಶಕ್ತಿ',** ಹಾಗೆಯೇ ಆ ಕಾರ್ಖಾನೆಯ ಕಾರ್ಮಿಕ ಸಂಘದ ಇತಿಹಾಸವನ್ನು ಕುರಿತಾದ **ಎಚ್.ಎ.ಇ.ಎ. ಹೆಜ್ಜೆಗುರುತುಗಳು,** ಅದೇ ಸಂಸ್ಥೆಯ ವಿಪ್ರ ಉದ್ಯೋಗಿ ಬಾಂಧವರು ಹೊರತಂದ **'ವಿಪ್ರಯಾನ'** ರಜತೋತ್ಸವ ಸಂಚಿಕೆಗಳನ್ನು ರಾ.ನಂ. ಸಂಪಾದಿಸಿಕೊಟ್ಟಿದ್ದಾರೆ. ಅವುಗಳಲ್ಲಿ ಸಂಗ್ರಹಾರ್ಹ ಲೇಖನಗಳಿವೆ. **ಕನ್ನಡ ಸಾಹಿತಿಗಳ ವಿಳಾಸ ದರ್ಶಿ**ನಿಯನ್ನೂ ಮೊತ್ತ ಮೊದಲಿಗೆ ಹೊರತಂದವರು ಅವರೇ.

ಕರ್ನಾಟಕ ಕಾರ್ಮಿಕಲೋಕ ಪತ್ರಿಕೆಗೆ ೨೦೦೮ರ ಫೆಬ್ರವರಿಯಿಂದಲೂ, ಅಲ್ಲದೆ ಕನ್ನಡ ಗಂಗೋತ್ರಿ ಪತ್ರಿಕೆಯಲ್ಲಿ 'ಕನ್ನಡ ಮಾರ್ದನಿ' ಎಂಬ ಅಂಕಣ ಬರಹವನ್ನು ಬರೆಯುತ್ತಿರುವ ರಾ.ನಂ. ನಾಡಿನ ಎಲ್ಲ ಪ್ರಮುಖ ಪತ್ರಿಕೆಗಳಲ್ಲೂ ಪ್ರಕಟಿಸಿರುವ ಲೇಖನಗಳ ಸಂಖ್ಯೆ ನೂರಾರು. ಕನ್ನಡ ವಿಶ್ವವಿದ್ಯಾಲಯದ ಪ್ರಕಟಣೆ 'ಸುವರ್ಣ ಕರ್ನಾಟಕ'ದಲ್ಲಿ ಬೆಂಗಳೂರಿನ ಇತಿಹಾಸ ಹಾಗೂ ಸಮಗ್ರ ನೋಟವನ್ನು ನೀಡುವ 'ಬೆಂಗಳೂರು ದರ್ಶನ'ದಲ್ಲಿ (೪ ಲೇಖನಗಳು), ವಿಶ್ವಕನ್ನಡ ಸಮ್ಮೇಳನದ ಸ್ಮರಣ ಸಂಪುಟದಂತಹ ಮಹತ್ವದ ಕೃತಿಗಳಲ್ಲೂ ರಾ.ನಂ. ಮಾಹಿತಿಯುಕ್ತ ಲೇಖನ ಬರೆದಿದ್ದಾರೆ.

ಆಗಿನ ಕನ್ನಡ ಶಕ್ತಿ ಕೇಂದ್ರ-ಸಾಹಿತಿಗಳ ಕಲಾವಿದರ ಬಳಗ ಇರಲಿ, ಈಗಿನ ಕನ್ನಡ ಗೆಳೆಯರ ಬಳಗವೇ ಆಗಲಿ, ಆ ಸಂಘಟನೆಗಳು ಕಾಲಕಾಲಕ್ಕೆ ಹೊರತಂದ ಪ್ರಚಾರ ಕರಪತ್ರಗಳಿಂದ ಹಿಡಿದು ಎಲ್ಲ ಪತ್ರಿಕಾ ಪ್ರಕಟಣೆ, ಪತ್ರವ್ಯವಹಾರ ಹಾಗೂ ಪುಸ್ತಕಗಳವರೆಗೂ ಅವುಗಳ ಸಾಹಿತ್ಯ ನಿರ್ಮಿತಿಯಲ್ಲಿ ರಾ.ನಂ.ರ ಲೇಖನಿಯೇ ಬಹುಪಾಲು ಕೆಲಸ ಮಾಡಿದೆ ಎಂದರೆ ತಪ್ಪಾಗದು.

ಕನ್ನಡ ರಾಜ್ಯೋತ್ಸವ, ಸಾಹಿತ್ಯ ಸಮ್ಮೇಳನಗಳಂಥ ಸಂಭ್ರಮದ ವಾತಾವರಣವಿರಲಿ ಕನ್ನಡದ ಯಾವುದೇ ಸಾಧಕರ ಜನ್ಮದಿನ, ಸನ್ಮಾನ ಸಮಾರಂಭಗಳಿರಲಿ, ಕನ್ನಡನಾಡು ನುಡಿಗೆ ಧಕ್ಕೆ ಒದಗುವ ಸಂಕಷ್ಟ ಸಮಯವಿರಲಿ, ಸಾಂದರ್ಭಿಕ ಲೇಖನ–ಪ್ರತಿಕ್ರಿಯೆ ವ್ಯಕ್ತಿಚಿತ್ರ ನೀಡುವಂತೆ ರಾ.ನಂ.ಗೆ ಮಾಧ್ಯಮಗಳಿಂದ ಕೋರಿಕೆ ಹೋಗುತ್ತದೆ. ಅತ್ಯಲ್ಪ ಕಾಲದಲ್ಲೇ ಉಪಯುಕ್ತ ಲೇಖನವನ್ನವರು ಸಿದ್ಧಪಡಿಸಿಕೊಡುವ 'ಆಪತ್ಕಾಲಕ್ಕೊದಗುವ ಆಪ್ತರು' ಅವರು. ಹಿರಿಯ–ಕಿರಿಯ ಸಾಹಿತಿಗಳು, ಪತ್ರಕರ್ತರು, ಸಂಸ್ಥೆ–ಸಂಘಟನೆಗಳು–ಕನ್ನಡಾಭಿಮಾನಿಗಳು ತಮಗೆ ಅವಶ್ಯಕವಿರುವ ಮಾಹಿತಿ, ಅಂಕಿ–ಅಂಶಗಳು, ಸೃಷ್ಟೀಕರಣ ಬೇಕಾದಾಗಲೆಲ್ಲ ರಾ.ನಂ.ರತ್ತ ಕಣ್ಣು ಹಾಯಿಸುತ್ತಾರೆ. ಅವರ ಸಹಾಯ ಹಸ್ತವೂ ಸದಾ ಚಾಚಿರುತ್ತದೆ. ನಾಡು, ನುಡಿ ಬಗ್ಗೆ ಯಾವುದೇ ವಿಷಯದ ಕುರಿತು ನಿಚ್ಚಳ ದೃಷ್ಟಿಕೋನ ನೇರ ನಿರೂಪಣೆಗಳ ನಿಷ್ಣಾತ ಲೇಖನಗಳು ರಾ.ನಂ. ರಿಂದ ಹೊರಬರುತ್ತಲೇ ಇರುತ್ತವೆ. ಅವರ ಮಿದುಳಿನಂತೆ ಅವರ ಲೇಖನಿಯೂ ಸದಾ ಕೆಲಸ ಮಾಡುತ್ತಿರಲಿ ಎಂಬುದೇ ನನ್ನ ಆಶಯ.




‘ಕನ್ನಡ–ಕನ್ನಡಿಗ–ಕರ್ನಾಟಕ’ – ಪುಸ್ತಕ ಪರಿಚಯ

■ **ಪ್ರೊ. ತೀ.ನಂ. ಶಂಕರನಾರಾಯಣ**

ಸೊಕ್ಕಿನಲಿ ತಲೆಯೆತ್ತಿ ಜೊತೆಯವರ ಕೂಟದಲಿ
ನಾವು ಸಮ ನಿಮಗೆಂದು ನುಡಿವ ಬಲವಿಲ್ಲ!
ಮಿಕ್ಕವರು ಕಡೆಗಣಿಸಿ ನೂಕಿದಾಕಡೆ ಬಿದ್ದು
ಯಾವ ಮಂಕೋ ಕವಿದು ಹುದುಗಿರುವೆವಲ್ಲ?

ಏಳು ದಶಕಗಳ ಹಿಂದೆ ಪ್ರೊ. ತೀ.ನಂ.ಶ್ರೀ. ಅವರು ಬರೆದ ‘ಕನ್ನಡಿಗನ ಕೊರಗು’ ಎಂಬ ಕವನದ ಈ ಸಾಲುಗಳು ಕನ್ನಡದ ಅಂದಿನ ಕರುಣಾಜನಕ ಸ್ಥಿತಿಯನ್ನು ತಿಳಿಸುತ್ತವೆ. ಬ್ರಿಟಿಷರ ಆಧಿಪತ್ಯದ ಮದ್ರಾಸ್ ಮತ್ತು ಬಾಂಬೆ ಪ್ರೆಸಿಡೆನ್ಸಿಗಳು ಹಾಗೂ ಹೈದರಾಬಾದ್ ನಿಜಾಮನ ಸಂಸ್ಥಾನದಲ್ಲಿ ಕನ್ನಡ ಮಾತನಾಡುವ ಜನ ಹಂಚಿಹೋಗಿದ್ದರು. ಹಳೆಯ ಮೈಸೂರು ಪ್ರಾಂತ್ಯದ ಒಂಬತ್ತು ಜಿಲ್ಲೆಗಳು ಮಾತ್ರ ಕನ್ನಡಿಗರದಾಗಿತ್ತು. ಆಗ ಭಾರತಕ್ಕೆ ಸ್ವಾತಂತ್ರ್ಯ ಬಂದಿರಲಿಲ್ಲ, ಕರ್ನಾಟಕದ ಏಕೀಕರಣವಾಗಿರಲಿಲ್ಲ.

ಸ್ವಾತಂತ್ರ್ಯಾನಂತರದಲ್ಲಿ ಕರ್ನಾಟಕದ ಏಕೀಕರಣವಾಗಿದೆ; ನಮ್ಮ ರಾಜ್ಯಕ್ಕೆ ಕರ್ನಾಟಕ ಎಂದು ಅಧಿಕೃತವಾಗಿ ನಾಮಕರಣವಾಗಿದೆ. ಆದರೆ ಈಗಲೂ ಕರ್ನಾಟಕದಲ್ಲಿ ಕನ್ನಡಿಗರ ಸ್ಥಿತಿ ಶೋಚನೀಯವಾಗಿದೆ. ಕರ್ನಾಟಕದಲ್ಲಿ ಕನ್ನಡವನ್ನು ಉಳಿಸಿಕೊಳ್ಳಲು ಹೋರಾಟ ಮಾಡಬೇಕಾಗಿದೆ.



ಈ ನಿಟ್ಟಿನಲ್ಲಿ ಅನಕೃ, ಮ.ರಾಮಮೂರ್ತಿ ಅವರ ಕನ್ನಡ ಚಳವಳಿಯ ನಂತರ ಈ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ದೊರಕಿಸಲು ಕನ್ನಡ ಸಾಹಿತಿಗಳು ಕಲಾವಿದರ ಬಳಗ, ಕನ್ನಡ ಶಕ್ತಿ ಕೇಂದ್ರ ಇವುಗಳು ಮಹತ್ವಪೂರ್ಣ ಕೆಲಸ ಮಾಡಿವೆ.

ಡಾ. ಎಂ. ಚಿದಾನಂದಮೂರ್ತಿ ಮತ್ತು ಪ್ರೊ. ಎಲ್.ಎಸ್. ಶೇಷಗಿರಿರಾಯರ ನೇತೃತ್ವದಲ್ಲಿ ಕನ್ನಡ ಶಕ್ತಿ ಕೇಂದ್ರವು ಅಹಿಂಸಾತ್ಮಕ ಸತ್ಯಾಗ್ರಹದ ಮೂಲಕ ಕರ್ನಾಟಕದಲ್ಲಿ ಕನ್ನಡ ಭಾಷೆ, ನೆಲ, ಜಲ ಮೊದಲಾದ ಹಲವು ಕ್ಷೇತ್ರಗಳಲ್ಲಿ ಆಗಿರುವ ಅನ್ಯಾಯಗಳನ್ನು ಸರಿಪಡಿಸಲು ವಿಶೇಷವಾಗಿ ಶ್ರಮಿಸಿದೆ. ಕನ್ನಡ ಚಳವಳಿಗೆ ಘನತೆ ಗೌರವಗಳನ್ನು ತಂದುಕೊಟ್ಟಿದೆ. ಕನ್ನಡಿಗರಲ್ಲಿ ಆತ್ಮವಿಶ್ವಾಸವನ್ನು ಮೂಡಿಸುವ ನಿಟ್ಟಿನಲ್ಲಿ ಬಹಳಷ್ಟು ಕೆಲಸ ಮಾಡಿದೆ.

ಈ ಕೇಂದ್ರವು ೧೯೯೦ರ ನವೆಂಬರ್‌ನಿಂದ ೯೧ರ ಅಕ್ಟೋಬರ್‌ವರೆಗೆ 'ಕನ್ನಡ ಉಳಿಸಿ' ಎಂಬ ವರ್ಷವನ್ನಾಚರಿಸಲು ಕನ್ನಡ ಜನತೆಗೆ ಕರೆಕೊಟ್ಟ ಸಂದರ್ಭದಲ್ಲಿ ಪ್ರಕಟಿಸಿದ ಪುಸ್ತಕ, 'ಕನ್ನಡ–ಕನ್ನಡಿಗ–ಕರ್ನಾಟಕ'. ಈ ಪುಸ್ತಕದ ಮುಖ್ಯ ಉದ್ದೇಶ ಕರ್ನಾಟಕದ ಇತಿಹಾಸವನ್ನು ಕಟ್ಟಿಕೊಡುವ ಮೂಲಕ, ಕನ್ನಡಿಗರಲ್ಲಿ ತಮ್ಮ ಪರಂಪರೆ ಎಷ್ಟು ದೊಡ್ಡದು ಹಾಗೂ ಶ್ರೇಷ್ಠವಾದುದು ಎಂಬ ಪ್ರಜ್ಞೆಯನ್ನು ಮೂಡಿಸುವುದು. ಅಲ್ಲದೆ ಇತಿಹಾಸದ ವಿವಿಧ ಘಟ್ಟಗಳಲ್ಲಿ, ಕಾವೇರಿಯಿಂದ ಗೋದಾವರಿವರೆಗಿದ್ದ ಕರ್ನಾಟಕವು, ಹೇಗೆ ಬೇರೆ ಬೇರೆ ಅಧಿಪತ್ಯಗಳಲ್ಲಿ ಸೇರಿ ಹೋಗಿ, ಸ್ವತಂತ್ರವಾದ ಅಸ್ತಿತ್ವವನ್ನು ಕಳೆದುಕೊಂಡು ಶೋಚನೀಯ ಸ್ಥಿತಿಯನ್ನು ತಲುಪಿತು ಎಂಬುದನ್ನು ವಿವರಿಸುವುದು, ಕರ್ನಾಟಕ ಏಕೀಕರಣಕ್ಕೆ ಸಂಬಂಧಿಸಿದ ಮಾಹಿತಿಯನ್ನು ದಾಖಲು ಮಾಡುವುದು, ಈ ಮೂಲಕ ಕನ್ನಡಿಗರು ಎಚ್ಚೆತ್ತು ಇಲ್ಲಿಯ ನೆಲ–ಜಲ–ಭಾಷೆ ಮೊದಲಾದುವುಗಳ ಬಗ್ಗೆ ಅಭಿಮಾನ ತಾಳುವಂತೆ ಹಾಗೂ ಅವುಗಳನ್ನು ಕಾಪಾಡುವಂತೆ ಪ್ರೇರೇಪಿಸುವುದು, ಕನ್ನಡಿಗರಿಗೆ ನ್ಯಾಯವಾಗಿ ದೊರಕಬೇಕಾದ ಅವಕಾಶಗಳೂ ದೊರಕದೆ ಅವರು ದುಃಸ್ಥಿತಿ ಯಲ್ಲಿರುವುದನ್ನು ಮನವರಿಕೆ ಮಾಡಿಕೊಡುವುದು, ಆ ಮೂಲಕ ಜನರಲ್ಲಿ ಎಚ್ಚರ ಮೂಡಿಸುವುದು ಮುಖ್ಯ ಉದ್ದೇಶವಾದ ಈ ವಿಶಿಷ್ಟ ಕೃತಿ, ೧೯೯೦ರ ಮೊದಲ ಮುದ್ರಣದಲ್ಲೇ ಹತ್ತು ಸಾವಿರ ಪ್ರತಿಗಳು ಖರ್ಚಾಗಿ, ಅನಂತರ ೯ ಮರುಮುದ್ರಣಗಳನ್ನು ಕಂಡಿದ್ದು ಬಹಳ ಬೇಡಿಕೆಯಲ್ಲಿದೆ.

ಈ ಕೃತಿಯಲ್ಲಿ ಎರಡು ಭಾಗಗಳಿವೆ. ಮೊದಲನೆಯ ಭಾಗದಲ್ಲಿ ಕನ್ನಡಕವಿಗಳು ಬರೆದಿರುವ, ಹಾಡಬಹುದಾದ ಇಪ್ಪತ್ತೊಂದು ಕನ್ನಡಪರ ಭಾವಗೀತೆಗಳನ್ನು ಸಂಕಲಿಸ ಲಾಗಿದೆ. ಕುವೆಂಪು, ತೀನಂಶ್ರೀ, ಹುಯಿಲಗೋಳ ನಾರಾಯಣರಾವ್, ಪಂಪ, ಸಾಲಿ ರಾಮಚಂದ್ರರಾಯರು, ಶಾಂತಕವಿ, ಗೋವಿಂದ ಪೈ, ಬೇಂದ್ರೆ, ಪುತಿನ, ಕೈಯ್ಯಾರ ಕಿಞ್ಞಣ್ಣ ರೈ, ಗೋಪಾಲಕೃಷ್ಣ ಅಡಿಗ, ಕಾವ್ಯಾನಂದ, ಕೆ.ಎಸ್.ನರಸಿಂಹಸ್ವಾಮಿ ನಿಸಾರ್‌ಅಹಮದ್ ಮತ್ತು ಜಿಎಂಶ್ರೀ ಅವರ ಕವಿತೆಗಳಿವೆ. ಈ ೨೧ ಕವಿತೆಗಳು ಸಭೆ–ಸಮಾರಂಭಗಳಲ್ಲಿ ಹಾಡುವಂತಿದ್ದು, ಜನರಲ್ಲಿ ಭಾಷಾಭಿಮಾನವನ್ನೂ, ದೇಶಾಭಿಮಾನ ವನ್ನೂ ಮೂಡಿಸಲು ಉಪಯುಕ್ತವಾಗಿವೆ. ಈ ಭಾಗಕ್ಕೆ 'ಸಂಕಲನದ ಸಂಪತ್ತು' ಎಂದು ಹೆಸರಿಟ್ಟ ಪ್ರೊ. ಎಲ್.ಎಸ್. ಶೇಷಗಿರಿರಾಯರು ಸಂಪಾದಕರಾಗಿದ್ದಾರೆ.

ಕನ್ನಡ–ಕನ್ನಡಿಗ–ಕರ್ನಾಟಕ ಎಂಬುದು ೨ನೆಯ ಭಾಗ. ಗೊ.ರು. ಚನ್ನಬಸಪ್ಪ ಮತ್ತು ರಾ.ನಂ.ಚಂದ್ರಶೇಖರ ಈ ವಿಭಾಗದ ಸಂಪಾದಕರು. ಎಂ. ಚಿದಾನಂದಮೂರ್ತಿ

ಮತ್ತು ಸೂರ್ಯನಾಥ ಕಾಮತ್ ಅವರು ಕರ್ನಾಟಕದ ಸಂಕ್ಷಿಪ್ತ ಇತಿಹಾಸವನ್ನು ಕಟ್ಟಿಕೊಟ್ಟಿದ್ದಾರೆ. ಕದಂಬರು, ಗಂಗರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಹೊಯ್ಸಳರು, ವಿಜಯನಗರದ ಅರಸರು ಇವರ ಆಳ್ವಿಕೆಯ ಕಾಲಾವಧಿಯಲ್ಲಿ ಕರ್ನಾಟಕದ ವ್ಯಾಪ್ತಿ ಎಷ್ಟು ವಿಶಾಲವಾಗಿತ್ತು ಎಂಬುದನ್ನು ವಿವರಿಸಿದ್ದಾರೆ. ಹಾಗೆಯೇ ಅನಂತರದ ಕಾಲಾವಧಿಯಲ್ಲಿ ನಮ್ಮ ರಾಜ್ಯದ ವ್ಯಾಪ್ತಿ ಹೇಗೆ ಕಿರಿದಾಗುತ್ತ ಬಂದು, ಬ್ರಿಟಿಷರ ಕಾಲದಲ್ಲಿ ಅದು ಇಪ್ಪತ್ತು ಆಡಳಿತಗಳಲ್ಲಿ ಹೇಗೆ ಹರಿದು ಹಂಚಿಹೋಯಿತು ಎಂಬುದನ್ನು ಗುರುತಿಸಿದ್ದಾರೆ. ಕರ್ನಾಟಕದ ಏಕೀಕರಣಕ್ಕೆ ಅನೇಕ ಹಿರಿಯರು ಮಾಡಿದ ಸೇವೆಯನ್ನೂ, ಅವರ ತ್ಯಾಗವನ್ನೂ ಸ್ಮರಿಸಿದ್ದಾರೆ. ಈ ಲೇಖನ ಇಡೀ ಪುಸ್ತಕಕ್ಕೆ ಪೀಠಿಕೆಯಾಗಿದೆ. ಎಂ. ಚಿದಾನಂದಮೂರ್ತಿ ಅವರು ಕನ್ನಡದ ಸಮಸ್ಯೆಗಳನ್ನು ಕುರಿತು ತುಂಬ ಕಳಕಳಿಯಿಂದ ವಿಚಾರಮಾಡಿದ್ದಾರೆ. ಕಳೆದ ನಾನೂರು ವರ್ಷಗಳಲ್ಲಿ ಕನ್ನಡಿಗರ ಅಭಿಮಾನದ ಕೊರತೆ ಹಾಗೂ ಹೊರಗಿನವರ ದೌರ್ಜನ್ಯದ ಕಾರಣದಿಂದಾಗಿ, ಕರ್ನಾಟಕವು ಕನಿಷ್ಠ ಹದಿಮೂರು ಜಿಲ್ಲೆಗಳನ್ನು ಕಳೆದುಕೊಂಡಿರುವ ಸಂಗತಿಯನ್ನು ಓದುಗರ ಗಮನಕ್ಕೆ ತಂದಿದ್ದಾರೆ. ಈ ಗ್ರಂಥದಲ್ಲಿ ಕೊಟ್ಟಿರುವ ಅಂಕಿ ಅಂಶಗಳನ್ನು ಕನ್ನಡಿಗರು ತಿಳಿದು ಎಚ್ಚೆತ್ತುಕೊಳ್ಳದಿದ್ದರೆ ಕನ್ನಡಕ್ಕೆ, ಕರ್ನಾಟಕಕ್ಕೆ ಮತ್ತು ಕನ್ನಡಿಗರಿಗೆ ಬಹಳ ಅಪಾಯವಿದೆ ಎಂದು ಎಚ್ಚರಿಸಿದ್ದಾರೆ. ಇತರ ರಾಜ್ಯಗಳ ಜನ ಇಲ್ಲಿಗೆ ವಲಸೆ ಬಂದು, ಕನ್ನಡಿಗರ ಮೇಲೆಯೇ ದಬ್ಬಾಳಿಕೆ ಮಾಡುವ ಸ್ಥಿತಿ ಉಂಟಾಗಿದೆ ಎಂದು ವಿಷಾದಿಸಿದ್ದಾರೆ. ಮಿತಿಮೀರಿದ ವಲಸೆಯಿಂದಾಗಿ ಕರ್ನಾಟಕ ತತ್ತರಿಸುತ್ತಿದೆ ಹಾಗೂ ಕರ್ನಾಟಕದಲ್ಲಿ ಕನ್ನಡಿಗರ ಸಂಖ್ಯೆ ತೀವ್ರವಾಗಿ ಇಳಿಯುತ್ತಿದೆ ಎನ್ನುವ ಗಂಭೀರ ಪರಿಸ್ಥಿತಿಯನ್ನು ನಮ್ಮ ಗಮನಕ್ಕೆ ತಂದಿದ್ದಾರೆ. ಹಾಗೆಯೇ ಕರ್ನಾಟಕದ ಗದ್ದೆ, ಹೊಲ ನಿವೇಶನ ಮೊದಲಾದವು ಹೇಗೆ ಅನ್ಯರ ಪಾಲಾದವು, ಕನ್ನಡಿಗರು ಹೇಗೆ ಅನಾಥರಾಗುವ ಸ್ಥಿತಿ ಬಂದಿದೆ ಎಂಬುದನ್ನು ವಿವರಿಸಿದ್ದಾರೆ. ಉದ್ಯೋಗ ಅವಕಾಶಗಳು, ನದಿ ನೀರಿನ ಸಮಸ್ಯೆ, ರೈಲ್ವೆ, ಮೊದಲಾದ ಕ್ಷೇತ್ರಗಳಲ್ಲಿ ಕರ್ನಾಟಕಕ್ಕೆ ಕೇಂದ್ರ ಸರ್ಕಾರ ಹಾಗೂ ಗಡಿರಾಜ್ಯಗಳಿಂದ ಹೇಗೆ ಅನ್ಯಾಯವಾಗುತ್ತಿದೆ ಎಂಬುದನ್ನು ತಿಳಿಸಿದ್ದಾರೆ. ಅವರ ಕೆಲವು ಮಾತುಗಳನ್ನು ಇಲ್ಲಿ ಉಲ್ಲೇಖಿಸುವುದು ಅಗತ್ಯವಾಗಿದೆ:

೧. ಕರ್ನಾಟಕದ ಇಂದಿನ ಮುಖ್ಯ ಸಮಸ್ಯೆಯೆಂದರೆ ಕನ್ನಡಿಗನ ಆತ್ಮಾಭಿಮಾನದ ಕೊರತೆ ಮತ್ತು ಅನ್ಯರ ವಿಷಯದಲ್ಲಿ ಅವನು ತೋರುವ ಮಿತಿಮೀರಿದ ಸಹನೆ. ಆತ್ಮಾಭಿಮಾನದ ಕೊರತೆಯಿಂದಾಗಿ ಇತರ ಜನರಿಗೆ ಎಲ್ಲವನ್ನೂ ಒಪ್ಪಿಸುತ್ತಿರುವ ಅವನು, ತನ್ನ ಸ್ಪಷ್ಟ ದೌರ್ಬಲ್ಯವನ್ನು 'ಔದಾರ್ಯ', 'ವಿಶಾಲಹೃದಯ' 'ಸಂಸ್ಕೃತಿವಂತಿಕೆ' ಇತ್ಯಾದಿ ದೊಡ್ಡ ಹೆಸರುಗಳಿಂದ ವೈಭವೀಕರಿಸಿಕೊಳ್ಳುತ್ತಾ ಇತರ ಜನರ ಕನಿಕರದ ವಸ್ತುವಾಗಿದ್ದಾನೆ. 'ಕನ್ನಡದ ಜನ ಒಳ್ಳೆಯವರು' ಎಂದು ಯಾರಾದರೂ ಹೇಳಿದರೆ ಸಾಕು ಉಬ್ಬಿ ಹೋಗುತ್ತಾನೆ. ಅನ್ಯ ಜನ ಅವನ ತಲೆಯನ್ನು ಹಾಗೆ ಸವರುತ್ತಲೇ, ಅವನ ಎಲ್ಲ ಸವಲತ್ತುಗಳನ್ನು ಕಿತ್ತುಕೊಂಡಿದ್ದಾರೆ. *(ಪುಟ. ೪೯)*

೭. ಭಾರತದ ಎಲ್ಲ ರಾಜಕಾರಣಿಗಳೂ ಬಹುತೇಕ ಭ್ರಷ್ಟರು. ಆದರೆ ಅವರಿಗೂ ಕರ್ನಾಟಕದ ರಾಜಕಾರಣಿಗಳಿಗೂ ಒಂದು ವ್ಯತ್ಯಾಸವಿದೆ. ಅವರು ಭ್ರಷ್ಟತೆಯ ಜೊತೆ ತಮ್ಮ ಪ್ರಾಂತದ ಹಿತಾಸಕ್ತಿಯನ್ನೂ ನೋಡಿಕೊಳ್ಳುತ್ತಾರೆ. ತಮ್ಮ ಸ್ವಂತಕ್ಕಾಗಿ ತಮ್ಮ ನಾಡನ್ನು ಬಲಿಕೊಡುವುದಿಲ್ಲ. ಕರ್ನಾಟಕದ ರಾಜಕಾರಣಿಗಳಿಗೆ ತಮ್ಮ ನಾಡನ್ನು ಯಾರೇ ಕೊಳ್ಳೆಹೊಡೆದರೂ ಸರಿ, ತಮ್ಮ ಸ್ವಾರ್ಥ ಸಾಧನೆಯಾದರೆ ಸಾಕು... ವಲಸೆಯ ವಿಷಯವನ್ನು ವೇದಿಕೆಗಳಿಂದ ಮಾತನಾಡಲು ನಮ್ಮ ರಾಜಕಾರಣಿಗಳು ಹೆದರುತ್ತಾರೆ. ಹೊರಗಿನಿಂದ ಬರುವ ಶ್ರೀಮಂತರಿಂದ 'ನೋಟು', ಬಡವರಿಂದ 'ಓಟು' ಎರಡನ್ನೂ ಪಡೆಯಲು ಹಾತೊರೆಯುವ ಕರ್ನಾಟಕದ ರಾಜಕಾರಣಿಗಳಿಗೆ ವಲಸಿಗರಿಂದ ಲಾಭವೇ ಆಗುತ್ತಿದೆ. *(ಪುಟ. ೫೭)*

ಚಿದಾನಂದಮೂರ್ತಿಯವರ ಈ ಮಾತುಗಳು ಸತ್ಯವಾದುವು. ಎಲ್ಲ ಕನ್ನಡಿಗರೂ ಗಮನಿಸಬೇಕಾದ ಹಾಗೂ ತಿದ್ದಿಕೊಳ್ಳಬೇಕಾದ ಮಾತುಗಳಿವು.

ಸೂರ್ಯನಾಥ್ ಕಾಮತ್ ಅವರು 'ಮಹಾಜನ್ ವರದಿ', 'ಕಾವೇರಿ ಜಲ ವಿವಾದ' ಈ ವಿಷಯಗಳ ಬಗ್ಗೆ ಲೇಖನಗಳನ್ನು ಬರೆದಿದ್ದಾರೆ. ಪಿ. ವಿ. ನಾರಾಯಣ ಅವರು 'ಕನ್ನಡ ಚಳವಳಿ–ಇತಿಹಾಸ ಮತ್ತು ವ್ಯಾಪ್ತಿ', 'ಗೋಕಾಕ್ ಚಳವಳಿ', 'ಹಿಂದಿ ಹೇರಿಕೆಯ ಬಗ್ಗೆ ಎಚ್ಚರ!' ಎಂಬ ಮೂರು ಲೇಖನಗಳನ್ನು ಬರೆದಿರುವುದರ ಜೊತೆಗೆ ಕನ್ನಡಪರ ಘೋಷಣೆಗಳನ್ನೂ ಸಂಕಲಿಸಿ ಕೊಟ್ಟಿದ್ದಾರೆ.

ರಾ.ನಂ. ಚಂದ್ರಶೇಖರ ಅವರು ಕೃಷ್ಣಾ ನದಿಯ ಜಲವಿವಾದದ ಬಗ್ಗೆ, ಕರ್ನಾಟಕದ ವಿದ್ಯುತ್ ಪರಿಸ್ಥಿತಿಯ ಬಗ್ಗೆ, ಕರ್ನಾಟಕಕ್ಕೆ ಕೇಂದ್ರ ಸರ್ಕಾರದಿಂದ ಆರ್ಥಿಕವಾಗಿ ಆಗಿರುವ ಅನ್ಯಾಯಗಳ ಬಗ್ಗೆ, ಹಾಗೆಯೇ ರೈಲ್ವೆ ಕ್ಷೇತ್ರದಲ್ಲಿ ಆಗಿರುವ ಅನ್ಯಾಯಗಳ ಬಗ್ಗೆ ಉದ್ಯಮಶೀಲತೆಯ ಬಗ್ಗೆ ದಾಖಲೆಗಳೊಡನೆ, ಅಂಕಿ–ಅಂಶಗಳೊಡನೆ ವಿವರಗಳನ್ನು ನೀಡಿದ್ದಾರೆ. ಇವರು ಕನ್ನಡ ಶಕ್ತಿ ಕೇಂದ್ರದಲ್ಲಿ ತಮ್ಮನ್ನು ತೀವ್ರವಾಗಿ ತೊಡಗಿಸಿಕೊಂಡು ಚಳವಳಿಗಳಲ್ಲಿ ಭಾಗವಹಿಸಿದ್ದರು. ನಿರ್ಮಲ ಕರ್ನಾಟಕ ಎಂಬ ಪರಿಕಲ್ಪನೆಯನ್ನು ವಿಶ್ವವಿದ್ಯಾಲಯದ ಸಮಾಜಕಾರ್ಯ ವಿಭಾಗದಲ್ಲಿ ಅನುಷ್ಠಾನ ಗೊಳಿಸಿದ ಎಚ್.ಎಂ. ಮರುಳಸಿದ್ಧಯ್ಯನವರು ಈ ಯೋಜನೆಯನ್ನು ಕರ್ನಾಟಕ ಸರ್ಕಾರ ಹೇಗೆ ಕಾರ್ಯಗತಗೊಳಿಸಿದೆ ಎಂಬುದನ್ನು ವಿವರಿಸಿದ್ದಾರೆ. ಅದರಲ್ಲಿ ಕನ್ನಡ ಭಾಷೆಯ ಪಾತ್ರವನ್ನು ಬಾ.ಹ. ಉಪೇಂದ್ರ ಅವರು ವಿವರಿಸಿದ್ದಾರೆ.

ಈ ಗ್ರಂಥದಲ್ಲಿ ಇನ್ನೂ ಹಲವಾರು ಲೇಖನಗಳಿವೆ; ಕನ್ನಡ ಆಡಳಿತಭಾಷೆ, ಕನ್ನಡ ನಾಮಫಲಕಗಳ ಬಗ್ಗೆ ಸರ್ಕಾರದ ಆಜ್ಞೆ, ಸರೋಜಿನಿ ಮಹಿಷಿ ವರದಿ, ಗೋಕಾಕ್ ವರದಿ ಕರ್ನಾಟಕ ಅರಣ್ಯಪ್ರದೇಶ, ಖನಿಜ ಸಂಪತ್ತು, ಕೈಗಾರಿಕೆ ಮೊದಲಾದ ಹಲವಾರು ವಿಷಯಗಳ ಬಗ್ಗೆ ವಿವರಗಳಿವೆ. ಇವುಗಳಿಗೆ ಸಂಬಂಧಿಸಿದಂತೆ ಅಂಕಿ–ಅಂಶಗಳಿವೆ ಸರ್ಕಾರಿ ಆಜ್ಞೆಗಳ ಉಲ್ಲೇಖಗಳಿವೆ; ಆದರೆ ಈ ಸರ್ಕಾರಿ ಆಜ್ಞೆಗಳು ಸಮರ್ಪಕವಾಗಿ ಕಾರ್ಯಗತವಾಗಿಲ್ಲ ಎಂಬುದನ್ನೂ ತಿಳಿಸಲಾಗಿದೆ.

ಈ ಪುಸ್ತಕವನ್ನು ಓದುವ ಯಾರಿಗಾದರೂ ಕನ್ನಡ–ಕನ್ನಡಿಗ–ಕರ್ನಾಟಕ ಇವುಗಳ ಬಗ್ಗೆ ಐತಿಹಾಸಿಕವಾದ ಹಾಗೂ ಸಮಕಾಲೀನವಾದ ಒಂದು ಸ್ಪಷ್ಟವಾದ ಚಿತ್ರ ದೊರಕುತ್ತದೆ. ಕನ್ನಡಿಗರ ಮುಂದಿನ ಕಾರ್ಯಸೂಚಿ ಹೇಗಿರಬೇಕು ಎಂಬುದರ ಬಗ್ಗೆ ಉತ್ತಮ ಮಾರ್ಗದರ್ಶನ ದೊರಕುತ್ತದೆ. ಇದು ಎಲ್ಲ ಕನ್ನಡಿಗರೂ ಅಗತ್ಯವಾಗಿ ಓದಿ ಮನನ ಮಾಡಿ, ಕ್ರಿಯಾಶೀಲರಾಗಲು ಪ್ರೇರಣೆ ನೀಡುವ ಕೃತಿಯಾಗಿದೆ. ಈ ಕೃತಿ ಕನ್ನಡಿಗರ 'ಅನಧಿಕೃತ ಸಂವಿಧಾನ' ಎಂದು ಎಸ್.ಎಲ್. ಭೈರಪ್ಪನವರು ಸಮರ್ಪಕವಾಗಿ ಹೇಳಿದ್ದಾರೆ. ಈ ಕೃತಿ ರಚನೆಗೆ ಅಗತ್ಯವಾದ ಮಾಹಿತಿಗಳನ್ನು ಸಂಗ್ರಹಿಸುವಲ್ಲಿ ರಾ.ನಂ. ಚಂದ್ರಶೇಖರ ಅವರು ವಿಶೇಷವಾಗಿ ಶ್ರಮಿಸಿದ್ದಾರೆ ಎಂಬುದನ್ನು ಇಲ್ಲಿ ಅಗತ್ಯವಾಗಿ ಉಲ್ಲೇಖಿಸಬೇಕು. ಈ ಕೃತಿ ಗುಲ್ಬರ್ಗಾ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಸೇರಿದ ಪದವಿ ಕಾಲೇಜುಗಳಲ್ಲಿ ಪಠ್ಯ ಪುಸ್ತಕವಾಗಿತ್ತು. ಇತರ ವಿಶ್ವವಿದ್ಯಾಲಯಗಳಲ್ಲೂ ಇದು ಅಗತ್ಯವಾಗಿ ಪಠ್ಯವಾಗಬೇಕು. ಆ ಮೂಲಕವಾಗಿ ವಿದ್ಯಾರ್ಥಿಗಳಲ್ಲಿ ಕನ್ನಡದ ಬಗ್ಗೆ ಅಭಿಮಾನವನ್ನು ಜಾಗೃತಗೊಳಿಸಬಹುದಾಗಿದೆ.




ಕನ್ನಡದ ಕೈಂಕರ್ಯವೇ ಕಾಯಕ

■ **ಡಾ. ಸೂರ್ಯನಾಥ ಕಾಮತ್**

ಗೆಳೆಯ ರಾ.ನಂ. ಚಂದ್ರಶೇಖರ ಅವರಿಗೆ ೬೦ ವರ್ಷ ಆಗುತ್ತಿದೆಯೆ? ಅವರ ದೇಹಗಾತ್ರ, ಅವರ ನಿರಂತರ ಚಟುವಟಿಕೆ ಅವರ ನಗುಮುಖ, ಲವಲವಿಕೆಗಳನ್ನು ಕಂಡಾಗ ಹಾಗನಿಸುವುದಿಲ್ಲ. ಹಣೆಯ ಮೇಲಿನ ಕೇಶರೇಖೆಯು ಹಿಂದೆ ಸರಿದುದು ಕಾಣಿಸುತ್ತದೆ. ಇದನ್ನು ವಯಸ್ಸಾದ ಲಕ್ಷಣವೆಂದು ಯಾವಾಗಲೂ ಭಾವಿಸಬೇಕಾಗಿಲ್ಲ.

ಕನ್ನಡಾಭಿಮಾನ ಅವರಲ್ಲಿ ಹೇಗೆ ಬೆಳೆಯಿತು? ನಾನು ಅವರಲ್ಲಿ ಚರ್ಚಿಸಿಲ್ಲ. ಆದರೆ ಅವರು ಕೆಲಸ ಮಾಡುವುದು ಅಖಿಲ ಭಾರತ ಮಟ್ಟದ ಒಂದು ಬೃಹತ್ ಕೈಗಾರಿಕೆಯ ಕಚೇರಿಯಲ್ಲಿ. ಬೆಂಗಳೂರಲ್ಲಿ ಇಂಥ ಕೇಂದ್ರ ಕಚೇರಿಗಳಲ್ಲಿ ಕನ್ನಡಿಗರಲ್ಲದ ಜನ ತುಂಬಿದ್ದಾರೆ. ಸ್ಥಳೀಯ ಜನರಿಗಿಂತ ತಾವು ಬುದ್ಧಿವಂತರು ಎಂದು ಭಾವಿಸಿ ಅಟ್ಟಹಾಸ ಮಾಡುತ್ತಾರೆ ಎಂದು ಕೇಳಿದ್ದೇನೆ. ಕನ್ನಡ ಮಾತನಾಡುವ ಜನ ಕನ್ನಡದಲ್ಲಿ ಬಾಯ್ಬಿಡಲು ಹೆದರುವ ವಾತಾವರಣ ಆ ಕಾರ್ಖಾನೆಗಳಲ್ಲಿ ಇತ್ತು. ಆದರೆ ಇಂಥ ಎಲ್ಲ ಕಾರ್ಖಾನೆ, ಕಚೇರಿಗಳಲ್ಲಿ ಕನ್ನಡ ಸಂಘ ಸ್ಥಾಪಿಸಿ, ರಾಜ್ಯೋತ್ಸವಾದಿ ಕನ್ನಡ ಕಾರ್ಯಕ್ರಮಗಳನ್ನು ಯೋಜಿಸಿ ಕನ್ನಡಿಗರಲ್ಲಿ ಒಗ್ಗಟ್ಟು ಮೂಡಿಸಿ, ಕನ್ನಡಿಗರು ನಿಶ್ಚಿಂತೆಯಿಂದ ಉಸಿರಾಡುವಂತೆ ಮಾಡಿದ್ದು ಒಂದು ಸಾಧನೆ! ಇಂಥ ಕ್ರಮಗಳಲ್ಲಿ ಚಂದ್ರಶೇಖರ ತಾವೇ ಅಲ್ಲದೆ ತಮ್ಮ ಗೆಳೆಯರ ಜೊತೆ ಶ್ರಮಿಸಿದ್ದು ಉಲ್ಲೇಖನೀಯ. ಸಾಹಿತಿಗಳ ಕಲಾವಿದರ ಬಳಗ, ಕನ್ನಡ ಶಕ್ತಿ ಕೇಂದ್ರ, ಕನ್ನಡ ಗೆಳೆಯರ ಬಳಗ ಅಥವಾ ಯಾರೇ ಕನ್ನಡಕ್ಕಾಗಿ ದುಡಿದವರ ಸನ್ಮಾನ – ಇದರಲ್ಲೆಲ್ಲ ಆಯಾ ಸಂಸ್ಥೆಗಳ ಉಸಿರಾಗಿ ಯಾರೇ ಇದ್ದರೂ ಯಾರೇ ಬಿಟ್ಟರೂ, ಸತತ ೩೦ ವರ್ಷಗಳಿಂದ ಪಾದರಸದಂತೆ ದುಡಿಯುತ್ತ ಬಂದವರು ಚಂದ್ರಶೇಖರ. ಕನ್ನಡ ಪರ



ಚಳವಳಿಗಳಲ್ಲಿ ಬೇಕಾದ ಪರಿಪತ್ರಗಳು, ಪತ್ರಿಕಾ ಹೇಳಿಕೆಗಳನ್ನು ಇವನ್ನೆಲ್ಲ ಪುಕ್ಕಟೆಯಾಗಿ ಒದಗಿಸುತ್ತಿದ್ದು, ಕನ್ನಡ ಸಂಸ್ಥೆಗಳಿಗೆ ಅಂಥ ಪ್ರಕಟಣೆಗಳನ್ನು ಮುಟ್ಟಿಸಲು ಅವರದ್ದು ಕಾಲ್ನಡೆಯದೇ ಓಡಾಟ. ನಿತ್ಯ ಸಂಜೆ ಅದೆಷ್ಟು ಓಡಾಡುವರೋ ತಿಳಿಯದು. ದ್ವಿಚಕ್ರವಾಹನ ವಾಗಲೀ, ಒಂದು ಸೈಕಲ್ ಆಗಲೀ ಅವರಿಗಿಲ್ಲ. ಸಾಹಿತ್ಯ ಪರಿಷತ್ತು, ಗೋಖಲೆ ಸಾರ್ವಜನಿಕ ಸಂಸ್ಥೆ, ಬಿ.ಎಂ.ಶ್ರೀ. ಪ್ರತಿಷ್ಠಾನ, ಕನ್ನಡ ಗಣಕ ಪರಿಷತ್ತು ಹೀಗೆ ಸುತ್ತುವ ಅವರು ಮನೆ ಸೇರುವುದು ರಾತ್ರಿ ಎಂಟು ಗಂಟೆಯ ನಂತರವೇ. ಮನೆಯಾದರೋ ಗಾಂಧಿ ಬಜಾರಿನಿಂದ ನಾಲ್ಕು ಕಿಲೋಮೀಟರ್ ದೂರ. ಕಾರ್ಖಾನೆಯ ಬಸ್ಸಿನಿಂದ ಸಂಜೆ ಇಳಿದು ಅಲ್ಲಿ, ಇಲ್ಲಿ ವಿವಿಧ ಸ್ಥಳಗಳಿಗೆ ಭೇಟಿ ನೀಡಿ, ಬೆಳಗ್ಗೆ ೭.೦೦ ರಿಂದ ರಾತ್ರಿ ೮.೦೦ನ್ನೂ ಮೀರಿ ಓಡಾಡುವ ಚೈತನ್ಯ ನೋಡಿ ಅಚ್ಚರಿಯಾಗುತ್ತದೆ. ಮೂರು ದಶಕಕ್ಕೂ ಮೀರಿ ಇವರ ಈ ಓಡಾಟಕ್ಕೆ ಕನ್ನಡ ನಾಡುನುಡಿಗಳ ಕೆಲಸಗಳ ಬಗ್ಗೆ ಅವರ ಹೃದಯದಲ್ಲಿ ಉರಿಯುತ್ತಿರುವ ಬೆಂಕಿ ಅವರಿಗೆ ಪ್ರೇರಣೆ, ಧೀಃಶಕ್ತಿ ನೀಡುತ್ತಿರಬೇಕು.

ಅವರ ಮಿತ್ರ ಸಂಪತ್ತು ಅಪಾರ. ಕನ್ನಡಾಭಿಮಾನಿಗಳೆಲ್ಲ ಅವರ ಗೆಳೆಯರು. ಕನ್ನಡ ವಿದ್ವಾಂಸರು. ಡಾ. ಎಂ. ಚಿದಾನಂದಮೂರ್ತಿ, ಪ್ರೊ. ಎಂ.ವಿ.ಸೀತಾರಾಮಯ್ಯ ಗಣ್ಯ ಸರಕಾರೀ ನೌಕರರು, ಕಾರ್ಖಾನೆಗಳ ಗಣ್ಯ ನಿರ್ವಾಹಕರು, ಅಧಿಕಾರಿಗಳು, ಬರಹಗಾರರು ಪತ್ರಕರ್ತರು ಎಲ್ಲರ ಜೊತೆ ಅವರ ಸಂಪರ್ಕ, ಸಲುಗೆ. ಅದು ಅವರು ಮಾಡುತ್ತಿರುವ ಕೆಲಸದ, ಅವರ ಧ್ಯೇಯ ಧೋರಣೆಗಳಿಂದ ಪ್ರಭಾವಿತವಾದ ಸನ್ನಿವೇಶ. ಸರಕಾರೀ ನೌಕರರು, ಪೊಲೀಸ್ ಇಲಾಖೆಯವರು ಅವರಿಗೆ ಸ್ನೇಹಿತರು. ಇಂಥ ವಾತಾವರಣ ಮೂಡಲು ಇವರ ಕೆಲಸದ ಬಗ್ಗೆ ಇರುವ ಅಭಿಮಾನ, ಕಾರ್ಯಶೀಲತೆ ಬಗ್ಗೆ ಇರುವ ಮೆಚ್ಚುಗೆ ಕಾರಣ. ಗೋಕಾಕ ಚಳವಳಿಯಲ್ಲಿ ಕನ್ನಡಪರ, ಸರೋಜಿನಿ ಮಹಿಷಿ ವರದಿ ಕಾರ್ಯರೂಪಕ್ಕೆ ತರುವಲ್ಲಿ, ಮಿತಿಯಿಲ್ಲದ ದುಡಿಮೆ ಇವರದು.

ಸದಾ ನಗುಮುಖ, ಅಷ್ಟೊಂದು ದೃಢಕಾಯವೆನಿಸದ ವ್ಯಕ್ತಿತ್ವ, ಕನ್ನಡ ಸಮಸ್ಯೆಗಳ ಬಗ್ಗೆ ಕುತೂಹಲ ಕೆರಳಿಸುವ ಮಾಹಿತಿ ನೀಡಿಕೆ ಇವೆಲ್ಲ ಚಂದ್ರಶೇಖರರ ಒಟ್ಟು ಬಂಡವಾಳ. ಈ ಎಲ್ಲ ಬಂಡವಾಳ ಕನ್ನಡದ ಹಿತಕ್ಕೆ ಬಳಕೆಯಾಗುತ್ತಿದೆ; ಇದು ಅಭಿಮಾನದ ಸಂಗತಿ. ಅವರು ಭಾಷಣ ಮಾಡುತ್ತಾರೆ. ಅಲ್ಲಿ ವಾಕ್ಚಟುತ್ವ ಇದೆಯೆಂದು ಹೇಳಲಾರೆ. ಆದರೆ ವಿಷಯಕ್ಕೆ ಸಂಬಂಧಿಸಿ ಅಂಕಿ ಅಂಶ, ಮಾಹಿತಿ ಪುಂಖಾನುಪುಂಖವಾಗಿ ಬರುತ್ತದೆ. ಕೇಳುವವರ ಹೃದಯ ಮಿಡಿಯುತ್ತದೆ.

ಅವರು ಸಮರ್ಥ ಬರಹಗಾರರು, ಕನ್ನಡದ ಸಮಸ್ಯೆ, ಅದರ ಪರಿಹಾರದ ದಾರಿ ಅದಕ್ಕಾಗಿ ನಡೆಯಬೇಕಾದ ಪ್ರಯತ್ನಗಳ ಬಗ್ಗೆ ಅವರು ಬರೆದ ಲೇಖನಗಳು ಅವೆಷ್ಟೋ! ಸಂಘಟನೆಯ ಮೂಲತತ್ತ್ವಗಳು ಯಾವುದೇ ಕ್ಷೇತ್ರದಲ್ಲಿ ಸಂಸ್ಥೆ ಕಟ್ಟುವವರಿಗೆ ಮಾರ್ಗದರ್ಶಕವಾದ ಕೃತಿ. ಅವರು ಬೇರೆ ಬೇರೆ ಸಂದರ್ಭಗಳಲ್ಲಿ ಬರೆದ ಲೇಖನಗಳ ಪುಸ್ತಕ ರೂಪದಲ್ಲಿ ಪ್ರಕಟಣೆ 'ಕನ್ನಡವೆಂದರೆ ಬರಿನುಡಿಯಲ್ಲ', ಕನ್ನಡ ಚಳವಳಿಯ ಇತಿಹಾಸಕ್ಕೆ ಹಾಗೂ ಕನ್ನಡದ ಬೌದ್ಧಿಕ ಚಟುವಟಿಕೆಗಳಿಗೆ ಒಳ್ಳೆಯ ಆಕರ ಆಗಬಹುದು.

ಅರುವತ್ತಕ್ಕೆ ಕಾಲಿಡುತ್ತಿರುವ ಈ ತರುಣನ ಆರೋಗ್ಯ, ಧೀಃಶಕ್ತಿ ಬೆಳೆಯಲಿ, ಅವರ ಕುಟುಂಬಕ್ಕೂ ಒಳಿತಾಗಲಿ ಎಂದು ಹಾರೈಸುತ್ತೇನೆ. ❐

ರಾ. ನಂ. ಎಂದರೆ ಉತ್ಸಾಹ

■ **ಈಶ್ವರಚಂದ್ರ**

ಶ್ರೀ ರಾ.ನಂ. ಚಂದ್ರಶೇಖರ ಮತ್ತು ನಾನು ಒಂದೇ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರೂ, ದೂರದ ಬೇರೆಬೇರೆ ವಿಭಾಗದಲ್ಲಿ ಇದ್ದುದರಿಂದ ಪರಸ್ಪರ ಸಂಪರ್ಕವಿರಲಿಲ್ಲ. ಆದರೆ ಅವರ ಬಗೆಗೆ ಕೇಳಿದ್ದೆ. ಕಾರ್ಮಿಕ ನಾಯಕರಾಗಿದ್ದ ಸಜ್ಜನ ಶ್ರೀಕಂಠಯ್ಯನವರ ಸೋದರ ಎಂದು ತಿಳಿದಿತ್ತು. ಸಾಹಿತಿಗಳ ಕಲಾವಿದರ ಬಳಗ ಅನಂತರ ಕನ್ನಡ ಶಕ್ತಿ ಕೇಂದ್ರದಲ್ಲಿ ಅವರ ಪ್ರಧಾನ ಪಾತ್ರದ ಬಗೆಗೆ ಪತ್ರಿಕೆಗಳಲ್ಲಿ ಓದುತ್ತಿದ್ದೆ. ೧೯೬೮–೬೯ರಲ್ಲಿ ಹಿಂದೂಸ್ಥಾನ್ ವಿಮಾನ ಕಾರ್ಖಾನೆ ನೌಕರರ ಸಂಘದ ಸುವರ್ಣ ಮಹೋತ್ಸವದ ಸಮಯದಲ್ಲಿ ಒಂದು ಸ್ಮರಣ ಸಂಚಿಕೆಯನ್ನು ಪ್ರಕಟಿಸಬೇಕೆಂದು ಸಂಘವು ತೀರ್ಮಾನಿಸಿದಾಗ, ಸಂಪಾದಕ ಮಂಡಲಿಯಲ್ಲಿ ಒಬ್ಬ ಸದಸ್ಯನಾಗಿ ಕೆಲಸ ಮಾಡುವ ಅವಕಾಶ ನನಗೆ ದೊರಕಿತು. ಅದನ್ನು ಒದಗಿಸಿಕೊಟ್ಟವರು ರಾ.ನಂ.

ರಾ.ನಂ. ಎಂದರೆ ನನಗೆ ನೆನಪಾಗುವುದು ಮಟ್ಟಸವಾದ ಆಳು, ಮುಖದಲ್ಲಿ ಎದ್ದು ಕಾಣುವ ಕನ್ನಡಕದ ಹಿಂದಿರುವ ಚುರುಕಾದ ಕಣ್ಣುಗಳು, ತಲೆಯಲ್ಲಿ ಹಿಂದೆ ಸರಿಯುತ್ತಿರುವ ಕೂದಲು, ಸ್ವಲ್ಪ ಮಂದ್ರಸ್ಥಾಯಿಯ ಧ್ವನಿ, ಮುಗುಳುನಗೆ. ಸದಾ ಚಟುವಟಿಕೆಯ ಮತ್ತು ಒಂದು ರೀತಿಯ ಚಡಪಡಿಕೆಯ ವ್ಯಕ್ತಿತ್ವ. ಏಕಕಾಲದಲ್ಲಿ ಅನೇಕ ಕಾರ್ಯಗಳನ್ನು ಎತ್ತಿಕೊಂಡವನ ಧಾವಂತ.

ನಾನು ಕೆಲಸ ಮಾಡುತ್ತಿದ್ದ ವಿಮಾನ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರಕ್ಕೆ, ಅವರು ಸ್ನೇಹಿತರೊಡನೆ ನನ್ನನ್ನು ಹುಡುಕಿಕೊಂಡು ಬಂದರು. ಮೊದಲ ಭೇಟಿಯಲ್ಲಿಯೇ ಅವರ ಉತ್ಸಾಹಕ್ಕೆ



ಮರುಳಾದೆ. ಕಾರ್ಮಿಕ ಸಂಘದ ಸಂಪರ್ಕ ನನಗಿರಲಿಲ್ಲ. ಆದ್ದರಿಂದ ಈ ಕಾರ್ಯವನ್ನು ವಹಿಸಿಕೊಳ್ಳಲು ಹಿಂಜರಿದೆ. ಅಲ್ಲದೆ ಕಾರ್ಖಾನೆಯ ಕೆಲಸದ ಸಮಯದಲ್ಲಿಯೇ ಈ ಕೆಲಸವೂ ನಡೆಯಬೇಕಾಗಿದ್ದರಿಂದ ನನಗೆ ಇದರಲ್ಲಿ ಭಾಗವಹಿಸಲು ತೊಡಕಿತ್ತು. ರಾ.ನಂ. ಅದಕ್ಕೂ ವ್ಯವಸ್ಥೆ ಮಾಡಿದರು. ಮರುದಿನವೇ ಆಡಳಿತವರ್ಗದಿಂದ ನನಗೆ ಅನುಮತಿ ಪತ್ರ ಬಂದಿತ್ತು. ನೀವು ನಮ್ಮ ಜೊತೆಗಿರಿ, ಎಲ್ಲ ಕೆಲಸವನ್ನು ನಾವು ನೋಡಿಕೊಳ್ಳುತ್ತೇವೆ ಎಂದು ರಾ.ನಂ. ಭರವಸೆ ಕೊಟ್ಟರು. ಆದರೆ ಹೊಳೆಯಲ್ಲಿ ಇಳಿದ ಮೇಲೆ ಚಳಿಯೇನು ಮಳೆಯೇನು?

ಐವತ್ತು ವರ್ಷಗಳ ಕಾಲ ಕಾರ್ಮಿಕರ ನೋವು–ನಲಿವುಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಒಂದು ಸಂಸ್ಥೆಯ ಇತಿಹಾಸವನ್ನು ಆಮೂಲಾಗ್ರವಾಗಿ ಅಗೆದು ತೆಗೆದು ಕಟ್ಟಿಕೊಡುವುದು ಸವಾಲಿನ ಕೆಲಸವಾಗಿತ್ತು. ಸಂಚಿಕೆಯ ರೂಪುರೇಷೆಗಳನ್ನು ಚರ್ಚಿಸಿ ವಾರವಾರವೂ ಸಂಪಾದಕ ಮಂಡಳಿಯ ಸಭೆ ನಡೆಸುತ್ತಾ, ಮುಂದೆ ಹೆಜ್ಜೆ ಇಟ್ಟಂತೆ ಸಂಚಿಕೆಯ ಸ್ವರೂಪ ಮೂಡಲಾರಂಭಿಸಿತು. ಸಮಯಕ್ಕೆ ಸರಿಯಾಗಿ ಸುಮಾರು ಐನೂರು ಪುಟಗಳ ಡೆಮಿ ೧/೪ ಆಕಾರದ ಪುಸ್ತಕ ಮೈ ತಳೆದಾಗ ಎಲ್ಲರಿಗೂ ಸಾರ್ಥಕ ಭಾವ ಮೂಡಿತು. ಈ ಕೆಲಸದಲ್ಲಿ ರಾ.ನಂ. ಅವರದು ಸಿಂಹಪಾಲು. ಆ ದಿನಗಳಲ್ಲಿ ರಾ.ನಂ. ಅವರೊಡನೆ ನಿಕಟವಾಗಿ ಓಡಾಡುತ್ತಾ, ಅವರ ಕಾರ್ಯ ಬಾಹುಳ್ಯದ ಪರಿಚಯ ಮಾಡಿಕೊಂಡೆ. ಅವರದು ತೀರದ ಉತ್ಸಾಹ. ಅವರ ಬಳಿ 'ಇದು ಸಾಧ್ಯವಿಲ್ಲ' ಎಂಬ ಪ್ರಶ್ನೆಯೇ ಇಲ್ಲ. ಕಾರ್ಮಿಕ ಸಂಘದ ಹಳೆಯ ಕಡತಗಳನ್ನೆಲ್ಲ ಹುಡುಕಿ ಮಾಹಿತಿಯ ನಿಖರತೆಗಾಗಿ ಅವರು ಪಟ್ಟಶ್ರಮ ಅನುಕರಣೀಯ. 'ಸುವರ್ಣಶಕ್ತಿ' ಎಂಬ ಈ ಸ್ಮರಣ ಸಂಚಿಕೆಯ ಜೊತೆ ಜೊತೆಗೇ 'ಎಚ್‌ಎಇಎ ಹೆಜ್ಜೆ ಗುರುತುಗಳು' ಎಂಬ ಪುಸ್ತಕವನ್ನು ಕನ್ನಡ, ಇಂಗ್ಲಿಷ್ ಮತ್ತು ತಮಿಳು ಭಾಷೆಗಳಲ್ಲಿ ಪ್ರಕಟಿಬೇಕೆಂದು ತೀರ್ಮಾನವಾಯಿತು. ಕನ್ನಡದಲ್ಲಿ ಅದನ್ನು ಮೊದಲು ಬರೆಯುವ ಹೊಣೆಯನ್ನು ರಾ.ನಂ. ಅವರೇ ಹೊತ್ತರು. ನನಗೆ ಅದರ ಸಂಪಾದಕನ ಪಟ್ಟ ಕೊಟ್ಟರು. ಅಷ್ಟೇ ಉತ್ಸಾಹದಿಂದ ಈ ಕೃತಿಯೂ ಸಿದ್ಧವಾಯಿತು. ಅನುವಾದಗಳೂ ಸಿದ್ಧವಾದವು. ಇಂದು ಹಿಂದೂಸ್ಥಾನ್ ವಿಮಾನ ಕಾರ್ಖಾನೆಯ ನೌಕರರ ಸಂಘದ ಇತಿಹಾಸವನ್ನು ಅಧ್ಯಯನ ಮಾಡಲು ಬಯಸುವವರಿಗೆ, ಈ ಎರಡು ಕೃತಿಗಳು ಅಮೂಲ್ಯವಾದ ಪರಾಮರ್ಶನ ಗ್ರಂಥಗಳಾಗಿವೆ. ಅವುಗಳ ಹಿಂದೆ ರಾ.ನಂ. ಇದ್ದಾರೆ.

ರಾ.ನಂ. ಎಲ್ಲಿರುತ್ತಾರೋ ಅಲ್ಲಿ ಸಂಘಟನೆಯಿದೆ. ಜನರನ್ನು ಒಟ್ಟಿಗೆ ಸೇರಿಸಿ ಯಾವ ರಚನಾತ್ಮಕ ಕೆಲಸ ಮಾಡಲೂ ಅವರು ಸಿದ್ಧ. ಕನ್ನಡದ ಕೆಲಸವೆಂದರೆ, ಹೋರಾಟ ವಾಗಿರಲಿ ಅಥವಾ ಕನ್ನಡ ಚಳವಳಿಯ ಇತಿಹಾಸದ ದಾಖಲೆಯಾಗಿರಲಿ, ಅವರು ಅಷ್ಟೇ ನಿಷ್ಠೆಯಿಂದ ತೊಡಗಿಕೊಳ್ಳುತ್ತಾರೆ. ಮಾಹಿತಿಯ ಖಚಿತತೆಯ ಬಗೆಗೆ ಅವರದು ವಿಶೇಷ ಆಸಕ್ತಿ. ಒಬ್ಬ ಇತಿಹಾಸ, ಸಂಸ್ಕೃತಿ ಸಂಶೋಧಕನಿಗಿರಬೇಕಾದ ತೀರದ ಕುತೂಹಲ ಮತ್ತು ವಿಚಕ್ಷಣೆ ಅವರಿಗಿದೆ. ಅವರು ಡಾ. ಎಂ. ಚಿದಾನಂದಮೂರ್ತಿ ಅವರ ಪಟ್ಟ ಶಿಷ್ಯ. 'ನಮ್ಮ ಮೇಷ್ಟ್ರು...' ಎಂದು ಸ್ಮರಿಸದೆ ಅವರಿಗೆ ಮಾತೇ ಹೊರಡುವುದಿಲ್ಲ. ರಾ.ನಂ. ಮೆಚ್ಚುವ

ಇನ್ನೊಬ್ಬ ಹಿರಿಯರೆಂದರೆ ಡಾ. ಜಿ. ರಾಮಕೃಷ್ಣ. ಇಂತಹ ಹಿರಿಯ ಗಣ್ಯರೊಡನೆ ಒಡನಾಡುವ ವಿನಯವೂ ಅವರಲ್ಲಿ ಸಹಜವಾಗಿಯೇ ಇದೆ. ಅವರ ಮಾರ್ಗದರ್ಶನದಲ್ಲಿ ರೂಪುಗೊಂಡ ರಾ.ನಂ. ಅವರ ವ್ಯಕ್ತಿತ್ವ ಒಬ್ಬ ಸಜ್ಜನ ಹೋರಾಟಗಾರನದು. ಇಂತಹ ಅನುಸರಣೆಯ ಸಜ್ಜನರು ಈಗ ಎಂದಿಗಿಂತಲೂ ಹೆಚ್ಚಾಗಿ ಬೇಕು.

ನೆನೆಗುದಿಗೆ ಬಿದ್ದಿರುವ ಅನೇಕ ಕನ್ನಡಪರ ಸಮಸ್ಯೆಗಳನ್ನು ಒಂದು ಸಕಾರಾತ್ಮಕ ಗುರಿಗೆ ಮುಟ್ಟಿಸಲು ಅನುಸರಣ ಕ್ರಿಯೆ ಅತ್ಯಂತ ಮುಖ್ಯವಾದದ್ದು. ಜಡವಾದ ಆಡಳಿತ ಚಕ್ರಕ್ಕೆ ಅನುಸರಣೆಯ ಕೀಲೆಣ್ಣೆ ಅತ್ಯಗತ್ಯ. ಚಕ್ರ ತಿರುಗುವುದು ಎಲ್ಲರಿಗೂ ಕಾಣುತ್ತದೆ. ಆದರೆ ಕೀಲೆಣ್ಣೆ ಯಾರಿಗೂ ಕಾಣುವುದಿಲ್ಲ. ರಾ.ನಂ. ಚಂದ್ರಶೇಖರ ಅವರಲ್ಲಿ ಈ ಅನುಸರಣೆಯ ಮೃದುಚಾಲಕತ್ವವಿದೆ, ಜೊತೆಗೆ ಬಿಚ್ಚೈರುಗಾರನ ಶ್ರದ್ಧೆ ಇದೆ. ಕನ್ನಡಕ್ಕೆ ಇಂತಹವರು ಎಷ್ಟು ಜನರಿದ್ದರೂ ಬೇಕು.

ರಾ.ನಂ. ಅರವತ್ತಕ್ಕೆ ಅಡಿಯಿಡುತ್ತಿರುವ ಈ ಶುಭ ಸಂದರ್ಭದಲ್ಲಿ ಭಗವಂತನು ಅವರಿಗೆ ಆರೋಗ್ಯ, ಆಯುಷ್ಯ ಮತ್ತು ನೆಮ್ಮದಿ ನೀಡಿ, ಅವರಿಂದ ಇನ್ನೂ ಅತಿಶಯವಾದ ಕನ್ನಡ ಸೇವೆ ನಡೆಯುವಂತೆ ಅನುಗ್ರಹಿಸಲಿ ಎಂದು ಹಾರೈಸುತ್ತೇನೆ.

❐




ಇಲ್ಲಿ, ಅಲ್ಲಿ, ಎಲ್ಲೆಲ್ಲೂ ಕೈಗೆ ಸಿಕ್ಕೂ ಸಿಗದ ಪಾದರಸ – ರಾ.ನಂ.

■ **ಡಾ. ಎಚ್.ಎಂ. ಮರುಳಸಿದ್ದಯ್ಯ**

ಇವರ ಸಂಪರ್ಕಕ್ಕೆ ಬಂದ ಎಲ್ಲರಿಗೂ ವಿಶಿಷ್ಟ ಅನುಭವವನ್ನು ನೀಡಿದ, ನೀಡುತ್ತಿರುವ ರಾ.ನಂ. ಚಂದ್ರಶೇಖರ ಒಂದೆರಡು ಸಂಗತಿಗುಚ್ಛಗಳನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದಾರೆ ಅಥವಾ ಅವು ಇವರನ್ನು ಹಿಡಿದುಕೊಂಡಿವೆ. ಅವೇ: 'ಕನ್ನಡ–ಕನ್ನಡಿಗ–ಕರ್ನಾಟಕ' ಮತ್ತು 'ಅಂಕೆ–ಸಂಖ್ಯೆ,' ಮೊದಲನೆಯ ಗುಚ್ಛವು ಹೆಚ್ಚು ಭಾವನಿಷ್ಠವಾಗಿದ್ದರೆ, ಎರಡನೆಯದು ವಸ್ತುನಿಷ್ಠವಾದದ್ದು. ಮೊದಲನೆಯದನ್ನು ಎರಡನೆಯದರ ಆಧಾರದ ಮೇಲೆ ಸದೃಢಗೊಳಿಸುತ್ತಾರೆ, ಸದೃಢವಾಗಿ ನಿಲ್ಲಿಸುತ್ತಾರೆ, ರಾ.ನಂ.

ನಾನು ಧಾರವಾಡದಿಂದ ಬೆಂಗಳೂರಿಗೆ ಬಂದ ಕೆಲವೇ ದಿನಗಳಲ್ಲಿ ನಮ್ಮ ಅಣ್ಣ ಕವಿ ಶ್ರೀ ಹಿ.ಮ. ನಾಗಯ್ಯ, ಖ್ಯಾತ ಸಂಶೋಧಕ ಡಾ. ಎಂ. ಚಿದಾನಂದ ಮೂರ್ತಿ, ಸ್ವಾತಂತ್ರ್ಯ ಹೋರಾಟಗಾರ, ಅಲ್ಲದೆ ನಗೆಯ ಬುಗ್ಗೆ ಬಳ್ಳಾರಿ ಬೀchiಯವರ ಆಪ್ತಮಿತ್ರ ಶ್ರೀ ಕೊಟ್ಟೂರು ಗೋವಿಂದರಾವ್ ಇವರ ಮೂಲಕ ರಾ.ನಂ. ಪರಿಚಯವಾಗಿ, ಅದು ಸ್ನೇಹವಾಗಿ ಬೆಳೆದು ಸಂಬಂಧವು ಗಾಢವಾಯ್ತು.



ಸಮಾಜ, ಸಮಾಜವಿಜ್ಞಾನ, ಸಮಾಜಕಾರ್ಯ ಇತ್ಯಾದಿ ಶೈಕ್ಷಣಿಕ ಸಂಗತಿಗಳಲ್ಲೇ ಮುಳುಗಿರುತ್ತಿದ್ದ ನನಗೆ, ವಾಸ್ತವ ಸಮಸ್ಯೆಗಳ ಸಿಕ್ಕನ್ನು ಬಿಡಿಸುವಲ್ಲಿ ಮಾನವನ ಮತ್ತು ಲೋಕದ ಇತರ ವಿಷಯ ಗಳಿಗೆ ಮಾನ್ಯತೆ ನೀಡುತ್ತಿದ್ದ ನನಗೆ, ಕನ್ನಡದ ಮೂಲಕ ಇವೆಲ್ಲವನ್ನೂ ತುಂಬಿಕೊಳ್ಳಲು ಸಾಧ್ಯವೆಂಬುದನ್ನು ಸಾಹಿತಿಗಳ ಕಲಾವಿದರ ಬಳಗ, ಕನ್ನಡಶಕ್ತಿ ಕೇಂದ್ರ, ಇತ್ತೀಚೆಗೆ ಕನ್ನಡ ಗೆಳೆಯರ ಬಳಗ ಇವುಗಳ ಮೂಲಕ ಇತರರೊಡನೆ ರಾ.ನಂ. ತೋರಿಸಿಕೊಟ್ಟರು ಎಂಬುದನ್ನು ಮರೆಯಲಾದೀತೆ?

ರಾ.ನಂ. ಸಂಬುಗೆಗೆ ಅರ್ಹವಾದ ವ್ಯಕ್ತಿ. ಯಾಕೆಂದರೆ, ಅವರಲ್ಲಿ ಸ್ವಾರ್ಥ ಕಾಣುವುದಿಲ್ಲ, ಹಣ ಮಾಡಿಕೊಳ್ಳುವ ಸ್ವಭಾವವಿಲ್ಲ, ತೊಂದರೆಯಲ್ಲಿ ಯಾರೇ ಸಿಕ್ಕಿರಲಿ ಅವರ ನೆರವಿಗೆ ಧುಮುಕಿಬಿಡುವ ಹುಮ್ಮಸ್ಸು, ಇದ್ದುದನ್ನು ಇದ್ದ ಹಾಗೆ ಹೇಳಿಬಿಡುವ ಹುರುಪು, ಚಾಡಿ ಚುಚ್ಚುವುದರಿಂದ ಬಹುದೂರ, ಅನ್ಯರಿಗೆ ನೋವಾಗುವುದೆಂದು ತಮ್ಮ ಅಭಿಪ್ರಾಯವನ್ನು ಅಡಗಿಸಿಕೊಳ್ಳಲಾರದ ಸ್ವಭಾವ, ಕನ್ನಡಕ್ಕೆ ಸಂಬಂಧಿಸಿದಂಥ ಸಂಗತಿಗಳಲ್ಲಿ ತೊಡಗಿಕೊಂಡು ದುಡಿಯುತ್ತಿರುವವರನ್ನು ನಿಸ್ಪೃಹತೆಯಿಂದ ಗುರುತಿಸಿ ಮೆಚ್ಚಿ, ಸನ್ಮಾನಿಸಲು ಮುಂದಾಗುವ ಆತುರ, ಹಿಡಿದ ಕೆಲಸವನ್ನು ಮುಗಿಸುವವರೆಗೂ ಬಿಡದ ಹಟ ಇತ್ಯಾದಿ, ಇತ್ಯಾದಿಗಳ ಸಂಗಮ ರಾ.ನಂ.

ಈ ಸಂದರ್ಭದಲ್ಲಿ ವೈಯಕ್ತಿಕ ಅನುಭವವನ್ನು ಹೇಳಲೇಬೇಕಾಗಿದೆ. ಪ್ರತಿವರ್ಷವೂ ನನ್ನ ಹುಟ್ಟಿದ ದಿನದ ಬೆಳಗ್ಗೆ (ಜುಲೈ ೨೯ರಂದು) ಶುಭಕೋರುವ ಮೊದಲಿಗರೆಂದರೆ ರಾ.ನಂ. ಅಷ್ಟೇ ಅಲ್ಲ ಅನೇಕ ವರ್ಷಗಳು, ನನ್ನ ಹುಟ್ಟಿದ ದಿನದ ಸಂಜೆ ಮನೆಗೆ ಗೆಳೆಯರ ಬಳಗವನ್ನೇ ಕರೆದುಕೊಂಡು ಬಂದು, ಹೂ ಗುಚ್ಛವನ್ನಿತ್ತು ಶುಭ ಕೋರುತ್ತಿದ್ದುದನ್ನು ಮರೆಯಲಾದೀತೆ? ಒಮ್ಮೊಮ್ಮೆ ಪ್ರೊ. ಎಲ್.ಎಸ್. ಶೇಷಗಿರಿ ರಾವ್‌ರಂತಹ ಹಿರಿಯರನ್ನು ಕರೆದುಕೊಂಡು ಬಂದು ನನಗೆ ಶುಭ ಕೋರುತ್ತಿದ್ದುದೂ ಉಂಟು. ಬಂದಾಗಲೆಲ್ಲಾ ಒಂದು ಕಡೆ ಕುಳಿತಿರದೆ, ಮನೆಯ ಒಳಗೆ-ಹೊರಗೆ ಓಡಿಯಾಡಿ ಏನೇನೋ ಹೊಸಹೊಸ ವಿಷಯಗಳನ್ನು ಹೇಳುತ್ತಲೇ ಹೋಗುತ್ತಿದ್ದುದನ್ನು ನೆನೆಯಲೇಬೇಕು. ನನ್ನ ಎಪ್ಪತ್ತೈದನೆಯ ಹುಟ್ಟು ಹಬ್ಬವನ್ನು ಅದ್ದೂರಿಯಾಗಿ ಆಚರಿಸುವುದರ ಜೊತೆಗೆ, ನನ್ನ ಕುರಿತು ಅನೇಕ ಸಹೃದಯರ ಲೇಖನಗಳನ್ನು ಸಂಗ್ರಹಿಸಿ, ವಾಸುದೇವ ಶರ್ಮಾ ಮುಂತಾದವರ ನೆರವಿನೊಡನೆ ಒಂದು ಪುಸ್ತಿಕೆಯನ್ನು ಹೊರತರುವುದರ ಉತ್ಸಾಹದ ಹಿಂದಣ ಚೈತನ್ಯವೇ ರಾ.ನಂ. ಇದು ನನ್ನೊಬ್ಬನ ಬಗೆಗಿನ ಸಂಗತಿಯಲ್ಲ. ಕನ್ನಡದ ನೂರಾರು ಜನ ಹಿರಿಯರ ಜನ್ಮ ದಿನಗಳ ಕೋಶವೇ ರಾ.ನಂ. ತಲೆಯ ಗಣಕಯಂತ್ರದಲ್ಲಿ ಅಡಗಿರುವುದೂ ಆಯಾಯಾ ಸಂದರ್ಭಕ್ಕೆ ಸೂಕ್ತವಾಗಿ ಹೊರಬರುತ್ತಿರುವುದೂ ಇವರೆಲ್ಲರ ಅನುಭವ.

ನಮ್ಮ ಮನೆಯವರೆಲ್ಲರನ್ನೂ, ಅವರ ಕುಟುಂಬವು ತಮ್ಮ ವ್ಯಾವಹಾರಿಕ ವಿಷಯಗಳ ಗಡಿಯನ್ನು ಮೀರಿ ಆಪ್ತತೆಯನ್ನು ಬೆಳೆಸಿಕೊಂಡಿರುವುದಕ್ಕೆ ಕಾರಣ ರಾ.ನಂ. ಅದರಲ್ಲೂ ಮುಖ್ಯವಾಗಿ ಶ್ರೀಮತಿ ಗಾಯತ್ರಿ ಚಂದ್ರಶೇಖರ ಮತ್ತು ನನ್ನ ಪತ್ನಿ ಶ್ರೀಮತಿ ಶಾಂತವೀರಮ್ಮನವರು ಪರಸ್ಪರ ಗೌರವಾದರಗಳನ್ನು ಬೆಳೆಸಿಕೊಂಡಿರುವುದನ್ನು ನಾವು ಮರೆಯುವುದೆಂತು? ಕುಟುಂಬಗಳು ಬೆಸೆದುಕೊಳ್ಳುವುದು ಅವುಗಳ ಮಹಿಳಾ ಸದಸ್ಯೆಯರ ಸಖ್ಯದಿಂದ ಎಂದು ನನಗೆ ಖಚಿತವಾಗುವುದು ಇಂಥ ಬಾಂಧವ್ಯದ ಪ್ರಸಂಗ ಗಳಿಂದಲೇ. ಈ ಅನುಭವ ಬಹುಶಃ ಗೆಳೆಯರ ಬಳಗದ ಎಲ್ಲರಿಗೂ ಸಾಮಾನ್ಯವಾಗಿದೆ ಅಂದುಕೊಳ್ಳುತ್ತೇನೆ.

ಅವರಿಗಿರುವ ಅಂಕೆ-ಸಂಖ್ಯೆಗಳ ಜ್ಞಾನವೇ ಅವರ ಅಪಾರ ಜ್ಞಾಪಕಶಕ್ತಿಗೆ ಕಾರಣವೊ ಅಥವಾ ಎರಡನೆಯದು ಮೊದಲನೆಯದರ ಬೆಳವಣಿಗೆಗೆ ಕಾರಣವೊ, ಅಥವಾ ಎರಡೂ ಪಾರಸ್ಪರಿಕ ನಂಟನ್ನು ಉಳ್ಳ ಸಂಗತಿಗಳೋ ನಾನರಿಯೆ. ಅಂತೂ ಅವರು ಹೇಳುವುದು

ಖಚಿತವಾಗಿರುತ್ತದೆ ಮತ್ತು ಉಪಯುಕ್ತವಾಗಿರುತ್ತದೆ. ಆದುದರಿಂದಲೇ ಅವರ ಬರಹವು ಈ ಎರಡೂ ಅಂಶಗಳನ್ನು ಸ್ಪಷ್ಟವಾಗಿ ಅಭಿವ್ಯಕ್ತಗೊಳಿಸುತ್ತದೆ.

ರಾ.ನಂ. ನನಗೆ ಇಷ್ಟವಾದ ವಿಷಯವನ್ನು ಕುರಿತು ಸಂಘಟನೆಯ ವಿಧಿವಿಧಾನಗಳ ಬಗ್ಗೆ ವಾಸ್ತವ ನೆಲೆಯ ಮೇಲೆ ಮಾರ್ಗಸೂತ್ರಗಳನ್ನು ವಿವರಿಸಿದ್ದಾರೆ. ಇದು ಸಮಾಜ ಕಾರ್ಯಕರ್ತರಿಗೂ ಬಹು ಉಪಯುಕ್ತ ಪಠ್ಯವಾಗುವ ಅರ್ಹತೆಯನ್ನು ಪಡೆದಿದೆ. ಕನ್ನಡವನ್ನು ಕಟ್ಟುವ, ಕನ್ನಡಿಗರನ್ನು ಸಂಘಟಿಸುವ, ಕರ್ನಾಟಕವನ್ನು ಸಮೃದ್ಧಗೊಳಿಸುವ ಐತಿಹಾಸಿಕ ಹಿನ್ನೆಲೆಯಲ್ಲಿ ಮತ್ತು ಅಂಕಿ-ಅಂಶಗಳ ಆಧಾರದ ಮೇಲೆ ಪ್ರಸ್ತುತಪಡಿಸುತ್ತಿದ್ದಾರೆ ಎಂಬುದು ನಮ್ಮ ಮೆಚ್ಚುಗೆಗೆ ಅರ್ಹವಾಗಿದೆ.

ಈ ಸಂದರ್ಭದಲ್ಲಿ ದಾಖಲಿಸಬೇಕಾದ ಅಂಶವೆಂದರೆ, ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ನಮ್ಮ ಸಮಾಜಕಾರ್ಯ ವಿಭಾಗವು ಒಂದು ರೀತಿಯಲ್ಲಿ ಕನ್ನಡದ ಕೆಲಸಗಳಿಗೆ ಕನ್ನಡ ಕಾರ್ಯಕರ್ತರ ರಚನಾತ್ಮಕ ಚರ್ಚೆಗಳಿಗೆ ಆಶ್ರಯ ಸ್ಥಾನವಾಗಿತ್ತು. ಕನ್ನಡದ ಕಟ್ಟಾಳು, ರೆಹಮಾನ್ ಖಾನ್ (ತಾರುಣ್ಯದಲ್ಲಿಯೇ ಅಪಘಾತವೊಂದರಲ್ಲಿ ಕಣ್ಮರೆಯಾದ್ದು ವಿಷಾದನೀಯ), ರಾ.ನಂ., ಮುಂತಾದವರೆಲ್ಲಾ ಅಲ್ಲಿ ಸೇರುತ್ತಿದ್ದುದನ್ನು ಆಗಿಂದಾಗ ರಾ.ನಂ. ಕೃತಜ್ಞತೆಯಿಂದ, ಆದರೆ ತುಂಬಾ ಉತ್ಸಾಹದಿಂದ ನೆನಪಿಸಿಕೊಳ್ಳುತ್ತಿರುತ್ತಾರೆ. ಕೃತಜ್ಞತೆಯ ಅಗತ್ಯವೇ ಇಲ್ಲ ಎಂದು ಹೇಳುತ್ತಲೇ ಇದ್ದೆ. ಕರ್ನಾಟಕದ ಯಾವ ಭಾಗವೂ ಕನ್ನಡಕ್ಕೇ ಮೀಸಲು ಎಂಬುದು ನನ್ನ ಅಭಿಪ್ರಾಯವಾಗಿತ್ತು. ಸಾರ್ಥಕ ಕೆಲಸಕ್ಕೆ ನಮ್ಮ ವಿಭಾಗವೂ ನೆರವಾಯಿತಲ್ಲಾ ಎಂಬುದು ನನಗೆ ಸಂತಸವನ್ನು ತರುತ್ತದೆ.

ರಾ.ನಂ. ಅವರು ಆರು ದಶಕಗಳನ್ನು ಈ ಗಡಿಬಿಡಿಯಲ್ಲಿಯೇ, ಯಾರಿಗೂ ತಿಳಿಯದ ಹಾಗೆ, ಬಹುಶಃ ಅವರಿಗೂ ಗೊತ್ತಾಗದ ಹಾಗೆ ದಾಟಿರುವುದು ಅಚ್ಚರಿಯ ಸಂಗತಿ. ಈ ಕಾಲವನ್ನು ಅಳೆಯಲು ಅವರಿಗಾದರೂ, ಇತರರಿಗಾದರೂ ಕಾಲವೆಲ್ಲಿದೆ!? ❒



ಶುದ್ಧನಿದ್ದವ ಗೆದ್ದ

■ ಡಾ. ಜಿ. ಕೃಷ್ಣಪ್ಪ

ದ.ರಾ. ಬೇಂದ್ರೆಯವರು 'ಪಂಪನಿಗೆ' ಎಂಬ ಕವನದಲ್ಲಿ 'ಕನ್ನಡವು ಕನ್ನಡವ ಕನ್ನಡಿಸುತಿರಬೇಕು.' ಎಂದು ಹೇಳಿದ್ದಾರೆ. ಹಾಗೆ ಕನ್ನಡವು ಕನ್ನಡವ ಕನ್ನಡಿಸುವುದನ್ನು ನಾನು ಟಿ. ಶ್ರೀನಿವಾಸರಾಜು ಅವರಲ್ಲಿ ಕಂಡಿದ್ದೆ. ಅವರ ಮನೆಯಲ್ಲಿ ಬೇಂದ್ರೆ ಕಾವ್ಯ ಕುರಿತು ಚರ್ಚಿಸುವಾಗ ಕಿವಿಯಾದವರು ರಾ.ನಂ. ಚಂದ್ರಶೇಖರ. ಅದೇ ನನ್ನ ಮತ್ತು ಅವರ ಪ್ರಥಮ ಭೇಟಿ.

ಬೇಂದ್ರೆ ಕಾವ್ಯ ಸಂಜೀವಿನಿ ನಮ್ಮಿಬ್ಬರನ್ನು ಬಂಧಿಸಿತು. ಹತ್ತಿರವಾದಂತೆ ನಾನು ನೋಡಿದ ವ್ಯಕ್ತಿ ಕನ್ನಡಪರ ಹೋರಾಟದ ನಿಸ್ವಾರ್ಥಜೀವಿ ಎಂದು ಗೊತ್ತಾಯಿತು. ಅಷ್ಟೇ ಅಲ್ಲ, ಆತ ಕನ್ನಡ ಸಾಹಿತ್ಯವನ್ನು ಚೆನ್ನಾಗಿ ಅಭ್ಯಾಸ ಮಾಡಿದ, ಕನ್ನಡಪರ ಸಮಸ್ಯೆಗಳ ಮೂಲಗಳನ್ನು ತಿಳಿದ, ಬೆಂಗಳೂರಿನ ಬಹುತೇಕ ಎಲ್ಲ ಕನ್ನಡಪರ ಸಂಘಟನೆಗಳಲ್ಲಿ ಒಂದಾಗಿ ಕನ್ನಡವನ್ನು ಧ್ಯಾನಿಸುವ ಸಜ್ಜನ. ಕನ್ನಡ ಭಾಷೆಯ ಅಡೆತಡೆಗೆ, ಕನ್ನಡಿಗರಿಗೆ ಉದ್ಯೋಗ ದೊರಕದ ಬದುಕಿಗೆ ತೊಡಕಾದ ಕಾರಣಗಳನ್ನು ಹುಡುಕುತ್ತ – ಎಲ್ಲ ನಿಖರ ಮಾಹಿತಿ ಗಳೊಂದಿಗೆ ಕೃತಿಗಳನ್ನು ರಚಿಸುತ್ತ, ಅವುಗಳನ್ನು ಸರ್ಕಾರಕ್ಕೆ, ಜನಕ್ಕೆ ನೀಡಿ–ಎಚ್ಚರದ ಗಂಟೆ ಬಾರಿಸಿದ ಜಾಗೃತ.



ಇಂದು ಕನ್ನಡ ಹೋರಾಟ ಎಂದರೆ ಭಯವಾಗುವ ವಾತಾವರಣವಿದೆ. ನಮ್ಮ ಪವಿತ್ರ ಉಸಿರು ಮತ್ತು ಬದುಕನ್ನು ತಮ್ಮ ಹೊಟ್ಟೆಪಾಡಿಗೆ ಒಂದು ಆಧಾರವಾಗಿಸಿಕೊಂಡು, ಉಪಜೀವನ ನಡೆಸುವ ಜನರನ್ನು ಕಂಡಾಗ–ಮಕ್ಕಳು ಕತ್ತಲು ಕಂಡು ಬೆದರಿ ಬೆಚ್ಚಿ ಬಿದ್ದಂತಾಗುತ್ತದೆ. ಕನ್ನಡ ಸಂಘಟನೆ, ಕಾರ್ಯಕ್ರಮ ಯೋಜನೆ

ಮೆರವಣಿಗೆ, ಸನ್ಮಾನ ಎಂಬ ಅಮೂಲ್ಯ ನುಡಿಗಳ ನೆರಳಲ್ಲಿ ಸ್ಥಿತಿವಂತರಾಗಿ ಓಡಾಡುವ ಜನರನ್ನು ಕಂಡಾಗ, ಕನ್ನಡವನ್ನು ಹೀಗೂ ಬಳಸಬಹುದೆ ಎಂದು ದಿಗಿಲಾಗುತ್ತದೆ.

ರಾ.ನಂ.ರನ್ನು ನಾನು ಕೆಲವು ದಶಕಗಳ ಹಿಂದೆ ಕಂಡಾಗ ಹೇಗೆ ಇದ್ದರೋ, ಈಗಲೂ ಹಾಗೇ ಇದ್ದಾರೆ. ಅದೇ ಕನ್ನಡದ ತುಂಬು ಮಾತು, ಬಡಕಲು ಶರೀರದಿಂದ ಹೊರಹೊಮ್ಮುವ ಕನ್ನಡ ತೇಜಸ್ಸು, ಪೈಲ್ವಾನ್ ಕಟಿಂಗ್ ಶೈಲಿಯ ತಲೆ, ಕನ್ನಡ ಪ್ರಕಾಶ ಹೊರಹೊಮ್ಮಿಸುವ ಕನ್ನಡಕ, ದೊಗಲೆ ಪ್ಯಾಂಟು, ಬುಷ್‌ಷರ್ಟು, ಬಿ.ಎಂ.ಟಿ.ಸಿ. ಬಸ್ ಹತ್ತಿ ಕನ್ನಡ ಪರ ಕೆಲಸಗಳನ್ನು ಮಾಡಲು ಓಡಾಡುತ್ತ, ಉತ್ಸಾಹದಿಂದ ಪುಟಿಯುತ್ತಿರುವ ಚೇತನ. ಇಂದಿನ ನಾಡಿನ ಕನ್ನಡಪರ ಸಂಘಸಂಸ್ಥೆಗಳು, ಇವರನ್ನು ಸ್ವಲ್ಪ ಹತ್ತಿರದಿಂದ ನೋಡಬೇಕು. ಕನ್ನಡದ ಕೆಲಸವಾಗುವುದು ಹಣದಿಂದ ಅಲ್ಲ, ಕನ್ನಡದ ಮನಸ್ಸಿನಿಂದ ಎಂದು ತಿಳಿಯಬೇಕು. ಹಣ ಸಂಪಾದಿಸಲು ಉದ್ಯೋಗ ಮಾಡಿ, ಕನ್ನಡಕ್ಕೆ ತನ್ನ ದುಡಿಮೆಯ ಶೇಕಡ ಒಂದರಷ್ಟಾದರೂ ವಿನಿಯೋಗಿಸಿದಾಗ, ಕನ್ನಡ ಮತ್ತೆ ನಳನಳಿಸುತ್ತದೆ. ಅದನ್ನೆ ಹಸಿರು ಹುಲ್ಲುಗಾವಲೆಂದು ಮೇಯ ಹೊರಟರೆ, ಬಳ್ಳಾರಿಯ ಗಣಿ ಲೂಟಿಗೆ ಒಳಗಾದ ಕನ್ನಡ ನೆಲದಂತೆ ಬರಡಾಗಿ ಹೋಗುತ್ತದೆ. ಈ ತತ್ತ್ವವನ್ನು ರಾ.ನಂ. ಅವರಿಂದ ತಿಳಿಯಬೇಕು. ಇದು ಕನ್ನಡಪರ ಹೋರಾಟಗಾರರ ಸಿದ್ಧಾಂತವಾಗಬೇಕು.

ಕನ್ನಡನಾಡು ಎಂದರೆ ಕನ್ನಡಿಗರು. ಕರ್ನಾಟಕಸ್ಥರೆಲ್ಲರೂ ಕನ್ನಡಿಗರೇ ಎಂದು ಬೇಂದ್ರೆ ನುಡಿದಿದ್ದಾರೆ. ನಮ್ಮ ಜನ ಉಳಿದು, ನಮ್ಮ ಭಾಷೆ–ಸಂಸ್ಕೃತಿ ಉಳಿಯಲು ಕರ್ನಾಟಕದ ನೆಲ ನಮ್ಮ ಕನ್ನಡಿಗರದಾಗಿರಬೇಕು. ಆದರೆ ನಮ್ಮನ್ನು ಆಳುವವರು ಜಾಗತೀಕರಣ, ಆರ್ಥಿಕ ಉದಾರೀಕರಣಗಳ ನೆಪದಲ್ಲಿ–ಸಹಸ್ರಾರು ವರ್ಷದಿಂದ ತಮ್ಮದಾಗಿಸಿಕೊಂಡು ಇಲ್ಲಿ ಬಾಳಿ, ಬದುಕಿ ಕನ್ನಡ ಸಂಸ್ಕೃತಿ ಉಳಿಸಿ, ಪೋಷಿಸಿಕೊಂಡು ಬರುತ್ತಿರುವ ಕನ್ನಡಿಗರ ಫಲವತ್ತಾದ ಜಮೀನುಗಳನ್ನು ಹಿಂದೊದೆತದ ಆಸೆಯಿಂದ ಮಾರಲು ಹೊರಟಿದ್ದಾರೆ. ಕಾನೂನಿನ ಕುಣಿಕೆಯಡಿಯಲ್ಲಿ ಕನ್ನಡಕ್ಕೆ ನೇಣು ಬಿಗಿಯುತ್ತಿದ್ದಾರೆ. ಪರರಾಜ್ಯ, ಪರದೇಶದವರಿಗೆ ನೀಡಲು ಲ್ಯಾಂಡ್ ಬ್ಯಾಂಕ್ ಮಾಡುತ್ತಿದ್ದಾರೆ. ಇದರ ಪರಿಣಾಮ ಒಂದು ದಿನ ಕನ್ನಡಿಗರು ಕರ್ನಾಟಕದಲ್ಲಿ ನಿರ್ನಾಮವಾಗಿ ಹೋಗುತ್ತಾರೆ. ಕನ್ನಡ ನೆಲದೊಂದಿಗೆ ಕನ್ನಡಿಗನ, ಕನ್ನಡ ಭಾಷೆಯ, ಸಾಹಿತ್ಯ–ಸಂಗೀತ, ಕಲೆ–ಸಂಸ್ಕೃತಿಯ ನಂಟಿದೆ. ಇದನ್ನು ಹೇಳುವವರು ಯಾರು? ಹೇಳಿದರೂ ಕೇಳಬೇಕಾದವರಿಗೆ ವ್ಯವಧಾನವೆಲ್ಲಿದೆ?

ನಮ್ಮಿಂದಲೇ ಆಯ್ಕೆಯಾದ, ನಮ್ಮಂತಹ ಸಾಮಾನ್ಯ ಜನರೇ ಸಚಿವ ಶಿರೋಮಣಿಗಳಾದ ಮೇಲೆ, ನಮ್ಮನ್ನೇ ಶೋಷಿಸುವ ಸಂಚು ಹೂಡಿ, ಗಣಿ, ಲ್ಯಾಂಡ್ ಮಾಫಿಯಾದಲ್ಲಿ ನವಸಿರಿವಂತರಾದರೆ, ಈ ನೆಲದ ಸಾಮಾನ್ಯ ಕನ್ನಡಿಗ ಉಳಿಯುವನೆ? ಅವರ ರಿಸಾರ್ಟ್ ಎಸ್ಟೇಟ್‌ಗಳು ನಮ್ಮ ಕನ್ನಡದ ಜನರ ಹೆಣದ ಮೇಲೆ ಕಟ್ಟಿದ–ನಮ್ಮವರದೇ ಆದ ನವ ವಸಾಹತುಷಾಹಿ ಸಮಾಧಿಯಲ್ಲವೆ? ಇದು ನಾವು ಪಾರದರ್ಶಕ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಕಾಣುತ್ತಿರುವ ಘೋರ ನಡೆ, ಕ್ರೂರ ಶೋಷಣೆ.

ಇಂತಹ ಶೋಷಣೆಯ ವಿರುದ್ಧ ದನಿ ಎತ್ತುವ ಹೋರಾಟಗಾರ ಶುದ್ಧನಿರಬೇಕು. ಅವನು ಕನ್ನಡದಿಂದ ತನ್ನ ಹೊಟ್ಟೆಪಾಡು ಮಾಡಿಕೊಂಡು, ಕನ್ನಡಪರ ಕೂಗು ಹಾಕಿದರೆ ಅದು ಅವನಲ್ಲಿ ಕನ್ನಡ ಜೀರ್ಣವಾಗಿ ಹೋದದ್ದರ, ತೇಗಿನ ಗುಟುರು ಅಷ್ಟೆ. ಅಂತಹ ಪುರಲೆಗಳಿಗೆ ಆಳುವವರು ಕವಡೆ ಕಿಮ್ಮತ್ತೂ ಕೊಡುವುದಿಲ್ಲ. ಕೂಗು ಹಾಕುವವರ ಸ್ವಾರ್ಥ ಅವರ ನಡೆನುಡಿಯಲ್ಲಿ ರಾಹುವಿನಂತೆ ರಾಚುತ್ತಿರುತ್ತದೆ. ಕನ್ನಡವನ್ನೇ ಶೋಷಿಸಿ ಮಿಂಚುವ ಇಂತಹವರಿಗೆ ಆಳುವವರೇಕೆ ಬೆಲೆ ಕೊಡುವರು.

ಈ ಹಿನ್ನೆಲೆಯಲ್ಲಿ ತುಂಬಾ ಮುಕ್ತವಾಗಿ ಕರ್ನಾಟಕದ, ಕನ್ನಡಿಗರ ಸ್ಥಿತಿಗತಿಯನ್ನು ಅವಲೋಕಿಸಿ, ನೇರ–ನಿಷ್ಠುರವಾಗಿ ಸಂವಾದಕ್ಕೆ ಇಳಿಯುವ ಶುದ್ಧ ವ್ಯಕ್ತಿತ್ವದ ನಾಯಕರು ಬೇಕು. ಅಂತಹ ವ್ಯಕ್ತಿತ್ವ ರೂಪಿಸಿಕೊಂಡಿರುವ ರಾ.ನಂ. ನಮಗೊಂದು ಆಶಾಕಿರಣ ವಾಗಿದ್ದಾರೆ. ಕನ್ನಡದ ಪರಿಸರ ಹಾಳಾಗಿದೆ ಎಂದರೆ, ಅದನ್ನು ಶುದ್ಧೀಕರಿಸಲು, ಕನ್ನಡ ಸಮುದಾಯವನ್ನು ಪ್ರತಿನಿಧಿಸುವ ವ್ಯಕ್ತಿಗಳು ನಿರ್ಮಲರಾಗಿರಬೇಕು. ಕನ್ನಡಪರ ದನಿ ಎತ್ತುವವರ ಅಂತರಂಗ ಶುದ್ಧವಿರಬೇಕು. ಪ್ರಾಮಾಣಿಕನಾಗಿರಬೇಕು. ಅದು ಆರ್ಥಿಕ ಸ್ವಾರ್ಥದ, ಲೌಕಿಕ ಆಮಿಷದ ಸಂಚಾದರೆ, ಆ ವ್ಯಕ್ತಿ ಮತ್ತು ಅವನ ಹೋರಾಟ ಕುಸಿದು ಹೋಗುತ್ತದೆ. ಇಂದಿಗೂ ಅನಕೃ, ಮ. ರಾಮಮೂರ್ತಿ ಕನ್ನಡ ಹೋರಾಟದ ಅಪ್ಪಟ ವಜ್ರಗಳಾಗಿರಲು ಕಾರಣ ಅವರ ನಿಸ್ವಾರ್ಥ ಹೋರಾಟ.

ನಾನು ರಾ.ನಂ. ಅವರ ಬಗ್ಗೆ ಕುತೂಹಲ ಮತ್ತು ಎಚ್ಚರದಿಂದ ಬರೆಯುತ್ತಿದ್ದೇನೆ. ಕನ್ನಡದ ಬಗ್ಗೆ ಬರೆಯಬೇಕಾದರೆ ಸ್ಪಷ್ಟವಾಗಿ, ಸಮಸ್ಯೆಯ ಆಳಕ್ಕೆ ಹೋಗಿ, ವಾಸ್ತವ ಸ್ಥಿತಿಯನ್ನು ಅರಿತು, ಯಾರ ಮುಲಾಜಿಗೂ ಒಳಗಾಗದೆ, ಮುಕ್ತವಾಗಿ ಚರ್ಚಿಸುವ ಮನಸ್ಸು ಬೇಕು. ತಿಪ್ಪೇಸಾರಿಸುವ ಗೊಬ್ಬರದ ಕಲಬೆರಕೆ ನೀರಿನ ಬಗ್ಗಡ ಪ್ರಯೋಜನವಿಲ್ಲ.

ಕನ್ನಡವೇ ಸತ್ಯ!
ಕನ್ನಡವೇ ನಿತ್ಯ!
ಅನ್ಯವೆನಲದೆ ಮಿಥ್ಯ!

ಎಂದು ಸಾರಿದ ಕುವೆಂಪು ಸತ್ಯ ಮತ್ತು ಶಾಶ್ವತವಾದುದರ ಬಗ್ಗೆ ಕನ್ನಡಿಗರನ್ನು ಎಚ್ಚರಿಸಿದರು. ಅದನ್ನು ಉಳಿಸುವ ಸತ್ಯಸಂಧತೆ ಮತ್ತು ನಡವಳಿಕೆಯ ಶುದ್ಧತೆ, ಕನ್ನಡದ ಬಗ್ಗೆ ಮಾತಾಡುವವರಲ್ಲಿರಬೇಕು. ಆಗ ಮಾತ್ರ ಕನ್ನಡ ಉಳಿದು, ಬೆಳೆಯುತ್ತದೆ. ಕನ್ನಡಿಗರು ಚೆನ್ನಾಗಿ ಬಾಳಿ ಬದುಕುತ್ತಾರೆ.

ಕನ್ನಡದ ಸಮಸ್ಯೆಗಳು ಮತ್ತು ಅದನ್ನು ಪರಿಹರಿಸುವ ಆಳುವವರು–ಇವರ ನಡುವೆ ಒಂದು ಜೋಡಣೆಯಾಗಿ ಶಾಂತಚಿತ್ತದಿಂದ, ಸ್ವಾರ್ಥರಹಿತರಾಗಿ, ವ್ಯಕ್ತಿತ್ವದ ಘನತೆಯಿಂದ ಮುನ್ನಡೆಸುವ ವ್ಯಕ್ತಿಗಳು ಇಂದು ಬೇಕಾಗಿದೆ. ಅಂತಹ ವ್ಯಕ್ತಿಯಾಗಿ ನನಗೆ ರಾ.ನಂ. ಕಾಣುತ್ತಿದ್ದಾರೆ. ಸರಳ ಜೀವನಕ್ಕೆ ಹೊಂದಿಕೊಂಡಂತಹ ರಾ.ನಂ. ಅವರಂತಹವರು ಕನ್ನಡದ ಬಗ್ಗೆ ಮಾತಾಡುವುದರಲ್ಲಿ ತುಂಬಾ ಅರ್ಥವಿದೆ. ಸಂಕೀರ್ಣ ವ್ಯಕ್ತಿತ್ವದ ಗೊಂದಲಗೊಂಡ ಮನಸ್ಸುಗಳು ಕನ್ನಡಿಗರನ್ನು ಒಗ್ಗೂಡಿಸುವುದು ಕಷ್ಟ.

ನನಗೆ ರಾ.ನಂ. ಸನಿಹವಾಗಿರುವುದಕ್ಕೆ ಕಾರಣ ಅವರು ಸಮಸ್ಯೆಯನ್ನು ಕೇಳುತ್ತಾರೆ. ಕುತೂಹಲದ ಕಣ್ಣಿಂದ ಅರಿಯುತ್ತಾರೆ. ಅದನ್ನು ಹಲವು ಮಾಹಿತಿಗಳೊಡನೆ ದಾಖಲಿಸುತ್ತಾರೆ. ಅದಕ್ಕೊಂದು ಪರಿಹಾರ ಹುಡುಕಲು ಪ್ರಾಜ್ಞರೂ, ಕನ್ನಡದ ಹಿರಿಯ ಚೇತನರೂ ಆದ ಪ್ರೊ.ಎಲ್.ಎಸ್. ಶೇಷಗಿರಿ ರಾವ್, ಡಾ.ಎಂ. ಚಿದಾನಂದಮೂರ್ತಿ ಅಂತಹವರೊಂದಿಗೆ ಸಂವಾದಕ್ಕೆ ತೊಡಗುತ್ತಾರೆ. ತನ್ನ ಮಿತಿಗಳನ್ನು ಅರಿತು ಹೆಜ್ಜೆ ಇಡುತ್ತಾರೆ. ತನ್ನದೇನೋ ಹಿರಿದಾದ ಕೆಲಸ ಎಂಬ ಅಹಂ ಇಲ್ಲದೆ ಎಲ್ಲರೊಡನೆ ಒಂದಾಗಿ ಮುನ್ನಡೆಯುತ್ತಾರೆ.

❒



ಕನ್ನಡ ಕೈಭಟ

■ ಎಂ.ಕೆ. ಭಾಸ್ಕರ ರಾವ್

ಅಷ್ಟು ಬಲ್ಲೆ, ಇಷ್ಟು ಬಲ್ಲೆ ಎಂದು ರಾ.ನಂ. ಚಂದ್ರಶೇಖರ ಕುರಿತು ಹೇಳುವುದು ಸರಳ, ಸುಲಭ. 'ರಾ.ನಂ. ಎಂದೇ ರಾಜ್ಯದ ಉದ್ದಗಲಕ್ಕೆ ಜನಜನಿತರಾಗಿರುವ ಅವರ ಬಗ್ಗೆ ಏನು ಬಲ್ಲಿರಿ? ಎಷ್ಟು ಬಲ್ಲಿರಿ?' ಎಂದು ಯಾರಾದರೂ ಕೇಳಿದರೆ ಉತ್ತರ ಕಷ್ಟ. ಹೌದಲ್ಲ! 'ನಿಜವಾಗಿಯೂ ಅವರನ್ನು ನಾನೆಷ್ಟು ಬಲ್ಲೆ?' ಎಂದು ಸ್ವತಃ ಪ್ರಶ್ನಿಸಿಕೊಂಡರೆ ಉತ್ತರ ಮತ್ತೂ ಕಷ್ಟ.

ಕನ್ನಡವನ್ನು ಕೆಲವರು ಅಳಿಯುತ್ತಿರುವ ಭಾಷೆ ಎನ್ನುತ್ತಾರೆ. ಆ ವಾದಕ್ಕೆ ತಲೆಬುಡವಿಲ್ಲ. ಕನ್ನಡ ಭಾಷೆ ಅಳಿಯುವುದುಂಟೆ...? ಯಾವ ಕಾಲಕ್ಕೂ ಸಾಧ್ಯವೇ ಇಲ್ಲ ಎಂಬ ಪ್ರಖರ ಪ್ರತಿವಾದ ಮಂಡಿಸುವವರೂ ಇದ್ದಾರೆ. ಕನ್ನಡದ ಅಳಿವಿಗೆ ಬಹಳ ಕಾಲವಿಲ್ಲ ಎನ್ನುವವರ ವಾದ ಕೇಳಿದಾಗ ಹೌದಿರಬಹುದೇ ಎಂಬ ಅನುಮಾನ ಕಾಡುತ್ತದೆ. ಆತಂಕ ಬೆನ್ನು ಹತ್ತುತ್ತದೆ. ನಮ್ಮ ಮೊಮ್ಮಕ್ಕಳ ಕಾಲಕ್ಕೇ ಕನ್ನಡ ಇಲ್ಲವಾದೀತೇ ಎಂಬ ಹಳವಂಡ ಹುಟ್ಟಿ ಕಸಿವಿಸಿ ಯಾಗುತ್ತದೆ. ಅಳಿವಿಗೆ ಕಾರಣವಿಲ್ಲ ಎನ್ನುವವರ ವಾದ ಕಿವಿ ಮೇಲೆ ಬಿದ್ದಾಗ ಹೌದಲ್ಲವೇ, ನಮ್ಮ ಭಾಷೆಗೆ ಗಂಡಾಂತರವಿಲ್ಲ ಎಂಬ ನಿರುಮ್ಮಳ ಭಾವ ಮೂಡುತ್ತದೆ.



ತದ್ವಿರುದ್ಧ ನಡೆಯುತ್ತಲೇ ಇರುವ ವಾದ, ಪ್ರತಿವಾದದ ವ್ಯಾಪ್ತಿಯಿಂದ ಹೊರಗೆ ನಿಂತು ನೋಡಿದಾಗ ಅಂಥ ನಿರಾಸೆ ಕಾಡುವುದಿಲ್ಲ ನಿಜ. ಆದರೆ ಅದೇ ಕಾಲಕ್ಕೆ ಹೇಳಿ ಹೆಮ್ಮೆಪಡುವಂಥ ಆಸೆಯೂ ಕೊನರುವುದಿಲ್ಲ. ಕನ್ನಡ ಒಂದು ಭಾಷೆಯಾಗಿ ಪುಸ್ತಕಗಳಲ್ಲಿ, ಹೊತ್ತಿಗೆಗಳಲ್ಲಿ, ಗ್ರಂಥಗಳಲ್ಲಿ ಚಿರಾಯುವಾಗಿರುತ್ತದೆಂಬ

ವಿಚಾರದಲ್ಲಿ ಅಂಥ ಅನುಮಾನ ಕಾಡುವುದಿಲ್ಲ. ಆಡುವ ಮಾತಾಗಿ, ಅಭಿವ್ಯಕ್ತಿಯ ಮಾಧ್ಯಮವಾಗಿ ಎಷ್ಟು ಕಾಲ ಅದು ಹೀಗೆಯೇ ಉಳಿದೀತು? ಎಂಬ ಬಗ್ಗೆ ಮಾತ್ರ ನಿರುಮ್ಮಳ ಭಾವ ಬಲಿಯುವುದಿಲ್ಲ.

ಕನ್ನಡದ ಕವಲುಗಳೇ ಆಗಿರುವ ತುಳು, ಕೊಂಕಣಿ, ಕೊಡವರಿಗೆ ಅವರದ್ದೇ ಆದ ಭಾಷೆಯ ಲಿಪಿಯಿಲ್ಲ. ಅವರೆಲ್ಲರೂ ತಮ್ಮ ಬರಹದ ಅಭಿವ್ಯಕ್ತಿಗೆ ಕನ್ನಡದ ಲಿಪಿಯನ್ನೇ ಆಧರಿಸಿದ್ದಾರೆ. ಇದು ಇಲ್ಲಿ ಕರ್ನಾಟಕದಲ್ಲಿ ಮಾತ್ರವೇ ಹೀಗೆ ಎಂದೇನೂ ಅಲ್ಲ. ಭಾರತದಲ್ಲಿ ಲಿಪಿ ಇಲ್ಲದ ಹಲವಾರು ಭಾಷೆಗಳಿವೆ. ಅವು ಇರುವ ಪ್ರಾಂತ್ಯ, ಪ್ರದೇಶದ ಲಿಪಿಯೇ ಆ ಭಾಷಾ ಲಿಪಿಯೂ ಆಗಿದೆ. ಕರ್ನಾಟಕದಲ್ಲಿ ನಾವು ನೋಡುತ್ತಿರುವ ವಿಪರೀತ ಎಂದರೆ ಕನ್ನಡ ಭಾಷಿಕರ ಮಾತುಕತೆಯಲ್ಲಿ ಕ್ರಮೇಣ ಕನ್ನಡ ಕಡಿಮೆ ಆಗುತ್ತಿರುವುದು. ತುಳುವರು, ಕೊಂಕಣಿಗರು, ಕೊಡವರು ಪರಸ್ಪರ ಭೇಟಿಯಾದಾಗಲೆಲ್ಲ ಭೇಟಿಯ ಸ್ಥಳ, ಪರಿಸರ, ಭೂಪ್ರದೇಶ, ಸನ್ನಿವೇಶ ಯಾವುದೇ ಇರಲಿ ಅಭಿಮಾನದಿಂದ ತಮ್ಮ ತಾಯ್ನುಡಿಯಲ್ಲಿ ಮಾತನಾಡುತ್ತಾರೆ. ಅದನ್ನು ನೋಡಿದಾಗ ಜೇನು ಸವಿದಷ್ಟು ಸಂತೋಷವೂ ಆಗುತ್ತದೆ. ಅದೇ ಕನ್ನಡಿಗರು ಪರಸ್ಪರ ಭೇಟಿಯ ಕಾಲದಲ್ಲಿ ಕನ್ನಡ ಬಳಸಿ ಮಾತಾಡಿದರೆ ಅದೇ ಒಂದು ಪುಣ್ಯ ಎನ್ನುವಂತಾಗಿದೆ.

ಇಬ್ಬರು ತಮಿಳರು ಭೇಟಿಯಾದಾಗ ತಮಿಳಿನಲ್ಲಿ, ಇಬ್ಬರು ತೆಲುಗರು ಮುಖಾ ಮುಖಿಯಾದಾಗ ತೆಲುಗಿನಲ್ಲಿ, ಮರಾಠಿಗರು ಮರಾಠಿಯಲ್ಲಿ, ಕೇರಳೀಯರು ಮಲಯಾಳದಲ್ಲಿ ಮಾತನಾಡುತ್ತಾರೆ. ಇವರಲ್ಲಿ ಯಾರನ್ನು ಕನ್ನಡಿಗರು ಎದುರಾದರೂ ಅವರ ಭಾಷೆಯಲ್ಲೇ ಮಾತನಾಡುವ ಯತ್ನವನ್ನು ಕನ್ನಡಿಗರು ಮಾಡುತ್ತಾರೆ. ಇಬ್ಬರು ಕನ್ನಡಿಗರು ಎದುರು ಬದುರಾದರೆ ಕನ್ನಡದ ಬದಲಿಗೆ ಇಂಗ್ಲಿಷಿನಲ್ಲಿ ಮಾತನಾಡುತ್ತಾರೆ. ಇದು ಹಳೆಯ ಜೋಕೆನ್ನುವುದು ನಿಜ, ಆದರೆ ಹಳಸಲು ಜೋಕಲ್ಲ ಎನ್ನುವುದೂ ಅಷ್ಟೇ ನಿಜ.

ಕನ್ನಡ ನಾಡು ನುಡಿಯ ವಿಚಾರದಲ್ಲಿ ಕನ್ನಡಿಗರಲ್ಲಿರುವ ತಾತ್ಸಾರದ ಭಾವ ಇದಕ್ಕೆ ಕಾರಣವಲ್ಲದೆ ಇನ್ನೇನೂ ಅಲ್ಲ. ಕುಂದಾಪುರದ ಸ್ನೇಹಿತರೊಬ್ಬರು ಅಮೆರಿಕಾದಲ್ಲಿ ಎರಡೂವರೆ-ಮೂರು ದಶಕದಿಂದ ನೆಲೆಸಿದ್ದಾರೆ. ಅವರ ಪತ್ನಿಯೂ ಅದೇ ಕುಂದಾಪುರ ಮೂಲದ ಬೆಂಗಳೂರಲ್ಲಿ ನೆಲೆಸಿರುವ ಅಪ್ಪಟ ಕನ್ನಡ ಕುಟುಂಬದ ಹೆಣ್ಣುಮಗಳು. ಆ ದಂಪತಿಗೆ ಅಮೆರಿಕಾದಲ್ಲಿಯೇ ಹುಟ್ಟಿರುವ ಅಭಿಜಾತ ಹಸಿರುಕಾರ್ಡ್ ಹೆಣ್ಣುಮಗುವೂ ಇದೆ. ಅಮೆರಿಕಾದಲ್ಲಿರುವವರಾದ್ದರಿಂದ ಅವರದು ಸುಖೀ ಸಂಸಾರ ಎನ್ನುವುದು ಸಾಮಾನ್ಯ ಭಾವನೆ. ಆದರೆ ಅಮೆರಿಕಾದ ಅಮಲನ್ನು ತಲೆಗೆ ಏರಿಸಿಕೊಂಡಿರುವ ಆ ಮಹಾರಾಯ ಹೆಂಡತಿಗೆ ಮಗು ಕನ್ನಡದಲ್ಲಿ ಮಾತನ್ನಾಡದಂತೆ ತಾಕೀತು ಮಾಡಿದ್ದಾರಂತೆ. ಹಾಗಾಗಿ ಆ ಮೊಮ್ಮಗುವಿಗೆ ಅಜ್ಜಿಯೊಂದಿಗೆ, ಅಜ್ಜಿಗೆ ಮೊಮ್ಮಗ ಳೊಂದಿಗೆ ಮಾತನಾಡುವ ಸುಖವೇ ಇಲ್ಲದಂತಾಗಿದೆ. ಅಜ್ಜಿಗೆ ಇಂಗ್ಲಿಷ್ ಬಾರದು. ಮೊಮ್ಮಗಳು ಅಪ್ಪನ ಕಣ್ತಪ್ಪಿಸಿ ಅಮ್ಮನಿಂದ ಒಂದಿಷ್ಟು ಕನ್ನಡ ಕಲಿತು, ಹರುಕು ಮುರುಕು ಕನ್ನಡದಲ್ಲಿ ಮಾತನಾಡುತ್ತಾಳೆ. ಆದರೆ ಅಪ್ಪನ ಭಯದಿಂದಾಗಿ ಅಜ್ಜಿಯೊಂದಿಗೂ ಕನ್ನಡದಲ್ಲಿ ಮಾತನಾಡುವಂತಿಲ್ಲ.

ದೇಶದ, ರಾಜ್ಯದ ಹೊರಗೆ ಇರುವ ಕನ್ನಡಿಗರೆಲ್ಲರೂ ಹೀಗೇ ಎನ್ನುವುದು ಈ ಪ್ರಕರಣ-ಪ್ರಸ್ತಾಪದ ಉದ್ದೇಶವಲ್ಲ. ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲ ಎಂಬ ಗಾದೆಯೇ ಉಂಟಲ್ಲ. ಈ ಚಾಳಿ ಅಂಟು ರೋಗವಾದರೆ ಎಂಬ ಭಯದಲ್ಲಿ ಹೇಳಿದ ಮಾತು. ತಮ್ಮ ಭಾಷೆಯ ವಿಚಾರದಲ್ಲಿ ಕನ್ನಡಿಗರಲ್ಲಿ ಅವಜ್ಞೆ ನಿಧಾನವಾಗಿ ಬೆಳೆಯುತ್ತಿರುವುದನ್ನು ನೋಡಿದಾಗ ಇಂದಲ್ಲದಿದ್ದರೆ, ನಾಳೆ ಭವಿಷ್ಯದಲ್ಲಿ ಕನ್ನಡಕ್ಕೆ ಅಪಾಯ ತಪ್ಪಿದ್ದಲ್ಲ ಎನಿಸುತ್ತದೆ. ಆ ಭಯ ಎನ್ನುವುದು ಬತ್ತದ ಒರತೆಯಾಗೇ ಮುಂದುವರಿಯುತ್ತಿದೆ.

ಇಂಥ ಭಯದ ಭವಿಷ್ಯ ಕಾಡುತ್ತಿರುವ ಈ ಸಂದರ್ಭದಲ್ಲಿ, ರಾ.ನಂ.ರ ಅನನ್ಯ ಕನ್ನಡ ಪ್ರೇಮ 'ವಾರೆವ್ಹಾ!' ಎನ್ನುವಂತೆ ಮಾಡುತ್ತದೆ. ಅವರ ಓಡಾಟ, ಒಡನಾಟ, ವೃತ್ತಿ, ಪ್ರವೃತ್ತಿ ಹೀಗೆ ಎಲ್ಲವೂ ಕನ್ನಡಮಯ. 'ಕನ್ನಡದ ಕೈಭಟ' ಎಂದು ಕರೆದರೆ ಸಾಕು, ರಾ.ನಂ. ಅವರನ್ನು ಸಂಪೂರ್ಣವಾಗಿ ವಿಶ್ಲೇಷಿಸಿದಂತಾಗುತ್ತದೆ.

ಕನ್ನಡ ನಾಡು ನುಡಿಯ ಏಳಿಗೆಯನ್ನು ಸ್ವಂತ ಗಳಿಕೆಯ ಜೊತೆ ಸಮೀಕರಿಸಿ ಕೊಂಡಿರುವ ಹೋರಾಟಗಾರರೇ ಅಧಿಕವಾಗಿರುವ ದುರಂತ ಕನ್ನಡದ್ದು. ಕನ್ನಡ ಹೋರಾಟ ಒಂದು ಕಾಲದಲ್ಲಿ ಅನೇಕರಿಗೆ ತಪಸ್ಸಾಗಿತ್ತು. ಮತ್ತೆ ಅನೇಕರಿಗೆ ಕನ್ನಡದ ಸಾರ್ವಭೌಮತ್ವ ಕನಸಾಗಿತ್ತು. ಈಗ ಅವರದೇನಿದ್ದರೂ ನೆನಪು, ಅಜ್ಜಿ ತುರುಬು ನೆನಪಿಸಿ ಕೊಂಡಂತೆ. ಅವೆಲ್ಲವೂ ನಮ್ಮ ಪಾಲಿನ ಇತಿಹಾಸ. ಈ ಹೊತ್ತು ಕನ್ನಡ ಹೋರಾಟ ಎಂದರೆ ಸುಲಭ ಆದಾಯದ ವೃತ್ತಿ. ಶ್ರಮವನ್ನು ಬೇಡದ, ತೆರಿಗೆ ಕೇಳದ, ಹೊಣೆಗಾರಿಕೆ ಇಲ್ಲದ, ಎಲ್ಲಿಂದಲೋ ಬರುವ ಆದಾಯ. ರಾಜಕೀಯಕ್ಕೆ ಧುಮುಕಿದರೆ ಎಷ್ಟು ಹಣ ಮಾಡಬಹುದು ಎಂಬ ಮನಃಸ್ಥಿತಿ ಈಗ ಕನ್ನಡ ಹೋರಾಟದ ವಿಚಾರದಲ್ಲೂ ನಿಜವಾಗಿದೆ.

ಈಗಿರುವ ಬಹುತೇಕ ಕನ್ನಡ ಹೋರಾಟಗಾರರ ಗುರಿ, ಆದರ್ಶ ಹಣ, ಹಣ ಮತ್ತು ಹಣ ಎನ್ನುವಾಗ ಕರುಳು ಕಿತ್ತುಬರುವಷ್ಟು ನೋವಾಗುತ್ತದೆ. ನೋವಿಗೆ ಪರಿಹಾರವೇ ಇಲ್ಲವೇ ಎಂದು ಯೋಚಿಸಿದರೆ ಉತ್ತರ ಸಿಗದೆ ಮನಸ್ಸು ಹಳವಂಡವಾಗುತ್ತದೆ. ಹಣ ಗಳಿಕೆ ಕನ್ನಡ ಹೋರಾಟದ ಒಂದು ಹೀನಾಯ ಮುಖ. ಇನ್ನೊಂದು ಕರಾಳ ಮುಖ ಗೂಂಡಾಗಿರಿ. ಗೂಂಡಾವರ್ತನೆ ಸುಲಿಗೆಗೆ ಸುಲಭದ ಮಾರ್ಗ. ಕೆಲವೆಡೆ ಅದೇ ಕನ್ನಡ ಹೋರಾಟವೂ ಆಗಿರುವುದು ವರ್ತಮಾನದ ದುರಂತ.

ಕನ್ನಡದ ಹೋರಾಟ ದಂಧೆಯಾಗುವುದಕ್ಕೂ ಮುಂಚಿನ ಪೀಳಿಗೆಯ ಕೆಲವರು ಇನ್ನೂ ನಮ್ಮ ನಡುವೆ ಇದ್ದಾರೆಂದೇ ಹೋರಾಟದಲ್ಲಿ ತುಸುವಾದರೂ ಆದರ್ಶ ಗೌರವಾದರ ಉಳಿದುಕೊಂಡಿದೆ. ಎಲ್ಲ ಆರೋಪಗಳಿಗೂ ಅಲ್ಲೊಂದು, ಇಲ್ಲೊಂದು ಅಪವಾದ ಇದ್ದೇ ಇರುವಂತೆ ಕನ್ನಡ ಹೋರಾಟದಲ್ಲೂ ಅಪರೂಪದವರಿದ್ದಾರೆ. ಅಂಥ ಅಪರೂಪದವರಲ್ಲಿ ಅಪರೂಪ ರಾ.ನಂ. 'ಕನ್ನಡ ನಾಡು-ನುಡಿಯ ನಿಜ ಅರ್ಥದ ಕೈಭಟ' ಎಂದು ಎದೆಯುಬ್ಬಿಸಿ, ಆತ್ಮ ವಿಶ್ವಾಸದಿಂದ ರಾ.ನಂ.ರತ್ತ ಕೈಬೆರಳು ತೋರಬಹುದು. ಕನ್ನಡಕ್ಕಾಗಿ ಸ್ವತಃ ಕಮರಲು ಸಿದ್ಧವಿರುವ ಪೀಳಿಗೆ ಕರಗುತ್ತಿರುವ ಈ ಸಮಯದ ವಿರಳರಲ್ಲಿ ವಿರಳ ರಾ.ನಂ.

ವೈಯಕ್ತಿಕ ನೆಲೆಯಲ್ಲಿ ರಾ.ನಂ. ಅವರನ್ನು ಬಲ್ಲೆ ಎಂದು ನಾನು ಹೇಳುವುದಕ್ಕೆ ಸರಿಸುಮಾರು ೨೫-೩೦ ವರ್ಷದ ಹಿನ್ನೆಲೆಯಾದರೂ ಇದೆ. ನನ್ನ ಪತ್ರಿಕೋದ್ಯಮದ ಬದುಕು ಶುರುವಾಗಿದ್ದು "ಸಂಯುಕ್ತ ಕರ್ನಾಟಕ"ದಲ್ಲಿ; ಅರವತ್ತರ ದಶಕದಲ್ಲಿ, ರೆಸಿಡೆನ್ಸಿ ರಸ್ತೆಯಲ್ಲಿರುವ ಆ ಪತ್ರಿಕಾ ಕಚೇರಿಗೆ ಕನ್ನಡ ಹೋರಾಟದ ಕರಪತ್ರ, ಹೇಳಿಕೆ, ನಡೆದ ಕಾರ್ಯಕ್ರಮದ ಸುದ್ದಿ, ಕೆಲವೊಮ್ಮೆ ಚಿತ್ರ ಸುದ್ದಿಯೊಂದಿಗೆ ಬರುತ್ತಿದ್ದ ರಾ.ನಂ. ಹೀಗೇ ಪರಿಚಯವಾದರು. ಪರಿಚಯದೊಂದಿಗೆ ಆರಂಭವಾದ ಮೆಟ್ಟಿಲು, ಮೆಟ್ಟಿಲು ಹಂತದ ಗೆಳೆತನ ಅದು. ಕ್ರಮೇಣ ನಾವಿಬ್ಬರೂ ಸ್ನೇಹದ ಕುಣಿಕೆಯಲ್ಲಿ ಬಂಧಿಗಳೂ ಆದೆವು.

ಪತ್ರಿಕಾ ಕಾರ್ಯಾಲಯಕ್ಕೆ ಹೇಳಿಕೆ, ಸುದ್ದಿ ತುಣುಕು ಹೊತ್ತು ಅನೇಕರು ಬರುತ್ತಾರೆ. ಅದರಲ್ಲಿ ಯಾವುದೇ ವಿಶೇಷವೂ ಇಲ್ಲ. ಅಂಥ ಅನೇಕರಲ್ಲಿ ರಾ.ನಂ. ಮಾತ್ರ ಭಿನ್ನ ವ್ಯಕ್ತಿತ್ವದವರಾಗಿ ಕಂಡರೇಕೆ ಎಂಬ ಪ್ರಶ್ನೆ ಸಹಜ. ಅಲ್ಲೇ ಇರುವುದು ಅವರ ವಿಶೇಷ ಕೂಡಾ. ಪತ್ರಿಕಾಲಯಕ್ಕೆ ಬರುವವರಲ್ಲಿ ಬಹುತೇಕರು ಸ್ವತಃ ಪ್ರಚಾರಪ್ರಿಯರು. ತಾವು ತಂದ ಸುದ್ದಿ, ಹೇಳಿಕೆ ಪ್ರಕಟವಾಗುವಾಗ ಅಲ್ಲಿ ತಮ್ಮ ಹೆಸರೂ ಇರಬೇಕೆಂಬ ಕೀರ್ತಿಶನಿ ಬೆನ್ನು ಹತ್ತಿದ ಜನ. ಸುತ್ತಿ ಬಳಸದೆ ಯಾವುದೇ ಸಂಕೋಚವೂ ಇಲ್ಲದೆ ಆ ಬೇಡಿಕೆಯನ್ನು ಅವರು ಮಂಡಿಸುತ್ತಾರೆ. ನಾನು ಬಲ್ಲಂತೆ ತಮ್ಮ ಹೆಸರನ್ನೂ ಜೋಡಿಸಿ ಪ್ರಕಟಿಸಿ ಎಂದು ರಾ.ನಂ. ತಪ್ಪಿಯೂ ಕೇಳಿದ ಒಂದೇ ಒಂದು ಸಂದರ್ಭದ ನೆನಪೂ ನನಗಿಲ್ಲ. ಅವರ ಪ್ರತಿ ಭೇಟಿಯ ಸಂದರ್ಭದಲ್ಲೂ ಮೂರು ಇಲ್ಲವೇ ನಾಲ್ಕು ಬೇಡಿಕೆ ಇರುತ್ತಿದ್ದವು. ಕನ್ನಡ ಚಳವಳಿಗೆ ಹೆಚ್ಚಿನ ಪ್ರಚಾರ ಕೊಡಿ; ಕನ್ನಡ ಪತ್ರಿಕೆಗಳು ಕನ್ನಡ ಕಾರ್ಯಕ್ರಮಗಳ ವರದಿಗೆ ಆದ್ಯತೆ ಕೊಡದಿದ್ದರೆ ಬೇರೆ ಯಾರು ಕೊಡುತ್ತಾರೆ, ನೀವು ಕೊಡಿ; ಕನ್ನಡದ ವಿರುದ್ಧ ಬೆಂಗಳೂರಿನಲ್ಲಿ, ರಾಜ್ಯದ ಗಡಿ ಭಾಗಗಳ ಅಲ್ಲಲ್ಲಿ ಮಸಲತ್ತು ನಡೆಯುತ್ತಿರುವ ಒಂದೊಂದೂ ಘಟನೆಯತ್ತ ಗಮನ ಸೆಳೆದು ಅದನ್ನು ಬಹಿರಂಗ ಪಡಿಸಿ; ಆ ಮೂಲಕ ಕನ್ನಡಿಗರನ್ನು ಜಾಗೃತಗೊಳಿಸುವ ಕೆಲಸ ಮಾಡಿ; ಯಾರೋ ಬರೆದ ಕೃತಿಯಲ್ಲಿ ಕನ್ನಡದ ಬಗ್ಗೆ ವಿಶೇಷವಾದುದು ಇದೆಯೆಂದೋ, ಕನ್ನಡವನ್ನು ಅವಹೇಳನ ಮಾಡುವ ದುರುದ್ದೇಶವಿದೆ ಯೆಂದೋ ಮಾಹಿತಿ ಪೂರೈಸಿ ಏನಾದರೂ ಮಾಡಿ... ಹೀಗೇ ಅವರ ಬೇಡಿಕೆ.

ಕನ್ನಡದ ನೆಲದಲ್ಲಿ ಕನ್ನಡಕ್ಕಾಗಿ ಹೋರಾಡಬೇಕಾಗಿರುವುದೇ ಕಸಿವಿಸಿಯ ಬೆಳವಣಿಗೆ. ಭಾಷಾವಾರು ಪ್ರಾಂತ್ಯ ರಚನೆಯೊಂದಿಗೆ ಕನ್ನಡಿಗರನ್ನೆಲ್ಲ ಒಂದು ಭೌಗೋಳಿಕ ವ್ಯಾಪ್ತಿಯಲ್ಲಿ ತರಬಹುದೆಂಬ ಕನಸು ಹುಸಿಯಾಗಿದ್ದೂ ಅಷ್ಟೇ ನೋವಿನ ಸಂಗತಿ. ಮಹಾರಾಷ್ಟ್ರದ ಕಿರಿಕಿರಿಯ ಮೇರೆಗೆ ರಚನೆಯಾದ ಮಹಾಜನ್ ಆಯೋಗ ಒಂದು ಇತ್ಯರ್ಥದ ಗೆರೆ ಎಳೆದೀತೆಂಬ ಆಸೆಯೂ ಕಮರಿಹೋದದ್ದು ಕನ್ನಡ, ಕನ್ನಡಿಗರ ದುರದೃಷ್ಟ.

ಕರ್ನಾಟಕ-ಮಹಾರಾಷ್ಟ್ರ ನಡುವಿನ ಕನ್ನಡ ಪ್ರದೇಶಗಳನ್ನು ಉಳಿಸಿಕೊಳ್ಳುವುದಷ್ಟೇ ಈಗಿನ ಸವಾಲಲ್ಲ. ಬೆಳಗಾವಿಯನ್ನೋ, ಖಾನಾಪುರವನ್ನೋ, ಕಾರವಾರವನ್ನೋ ಕಬಳಿಸುವ ಮಹಾರಾಷ್ಟ್ರದ ಹುನ್ನಾರ ನಿಜವಾಗುವುದು ಅಷ್ಟು ಸುಲಭವಲ್ಲ. ಅದೇ ರೀತಿ ಕಾಸರಗೋಡನ್ನು ನಮ್ಮ ತೆಕ್ಕೆಗೆ ತೆಗೆದುಕೊಳ್ಳುವುದೂ ಆಗದ ಹೋಗದ ಮಾತು. ಮಹಾಜನ ವರದಿಯನ್ನು ಬೆಳಗಾವಿ ವಿಚಾರದಲ್ಲಿ ಒಪ್ಪಿಕೊಂಡು ಕಾಸರಗೋಡು

ವಿಚಾರದಲ್ಲಿ ಒಪ್ಪದೆ ಹೋರಾಡುತ್ತೇವೆನ್ನುವುದು ವಾಸ್ತವಕ್ಕೆ ದೂರ. ಆದರೆ ಒಂದು ಕಾಲದಲ್ಲಿ ಕನ್ನಡಮಯವಾಗಿದ್ದ ಪ್ರದೇಶಗಳಲ್ಲಿ ಕುಟುಕು ಜೀವದೊಂದಿಗೆ ಇರುವ ಕನ್ನಡ ಭಾಷೆಯನ್ನು ಉಳಿಸಿಕೊಳ್ಳುವುದು ಬಹುದೊಡ್ಡ ಸವಾಲಿನ ಕೆಲಸ.

ಕನ್ನಡವೇ ಸಾಯುತ್ತಿರುವ ಇಲ್ಲವೇ ಮರೆಯಾಗುತ್ತಿರುವ ಊರು, ಕೇರಿ, ಪ್ರದೇಶ ಕರ್ನಾಟಕದೊಳಗೆ ಇದ್ದರೂ ಒಂದೇ, ಹೊರಗೆ ಇದ್ದರೂ ಒಂದೇ. ಆಯಕಟ್ಟಿನ ಸ್ಥಳಗಳಲ್ಲಿ ಕನ್ನಡವನ್ನು ಉಳಿಸಿಕೊಳ್ಳುವ ಬಗೆ ಹೇಗೆ...? ಈ ಪ್ರಶ್ನೆಗೆ ಉತ್ತರ ಕೊಡುವ ಸ್ಥಿತಿಯಲ್ಲಿ ಕನ್ನಡದ ಹೆಸರಿನಲ್ಲಿ ಹೋರಾಡುವ ಯಾವುದೇ ಸಂಘಸಂಸ್ಥೆಗಳೂ ಇಲ್ಲ. ಅದಕ್ಕೆ ಬೇಕಾಗಿರುವುದು ಕನ್ನಡ ಭಟರ ಪಡೆ. ರಾ.ನಂ. ಅಂಥವರ ನೇತೃತ್ವದ ಪಡೆ ಮಾತ್ರವೇ ನಮ್ಮ ಅಸ್ತಿತ್ವವನ್ನು ಅರ್ಥಪೂರ್ಣಗೊಳಿಸುವುದು ಸಾಧ್ಯ.

ನಮ್ಮ ಬಹುತೇಕ ಕನ್ನಡ ಸಂಘಟನೆಗಳ ಹೋರಾಟದ ಅಜೆಂಡಾ ಏನೆನ್ನುವುದರ ಪ್ರಸ್ತಾಪವಾಗಿದೆ. ಅವುಗಳ ಕಾರ್ಯಸೂಚಿಯ ಅರಿವು ರಾ.ನಂ. ಅವರಿಗೂ ಇದೆ. ಆದಾಗ್ಯೂ ಅವರು ಕನ್ನಡ ಎಂದಾಕ್ಷಣ, ಪುಂಗಿಯ ನಾದಕ್ಕೆ ಹಾವು ಹೆಡೆ ಆಡಿಸುವಂತೆ, ಆ ಹೋರಾಟಗಾರರ ಕೊಳಕುಗಳನ್ನೆಲ್ಲ ಮರೆಯುತ್ತಾರೆ, ಆ ಸಂಘಟನೆಗಳ ಕಾರ್ಯಕ್ರಮ ದಲ್ಲೂ ಭಾಗಿಯಾಗಿ, ದೂರದಲ್ಲೆಲ್ಲೋ ಕುಳಿತು ಸಾಕ್ಷಿಯಾಗುತ್ತಾರೆ.

ಕನ್ನಡ ಪುಸ್ತಕಗಳ ಬಿಡುಗಡೆ, ಭಾಷೆ ಕುರಿತಾದ ಸಂವಾದ, ಸಂಕಿರಣ, ಕನ್ನಡಕ್ಕಾಗಿ ಜನಶಕ್ತಿ ಬಲ ಪ್ರದರ್ಶನ ಮಾಡುವ ಯಾವುದೇ ಎಂಥಹುದೇ ಸಂದರ್ಭಗಳಲ್ಲೂ, ಕನ್ನಡ ಸಂಸ್ಕೃತಿಯ ಪ್ರತಿಯೊಂದು ಕಾರ್ಯಕ್ರಮಗಳಲ್ಲೂ ರಾ.ನಂ. ಹಾಜರಿ ಇದ್ದೇ ಇರುತ್ತದೆ. ಬುದ್ಧಿಬಲಿತಾಗಿನಿಂದಲೂ ಅವರ ವ್ರತ ಕನ್ನಡ, ತಪಸ್ಸು ಕನ್ನಡ, ಉಸಿರು ಕನ್ನಡ. ಭಾಷೆಯ ವಿಚಾರದಲ್ಲಿ ಅವರದು ಯಾವುದೇ ರಾಜಿ ಇಲ್ಲದ ಯುದ್ಧ. ಅದಕ್ಕೆ ಅವರ ಬದುಕು, ಬಾಳ್ವೆ ಬದ್ಧ.

❒



ನಮ್ಮ 'ಚಂದ್ರ'ನ ಗುರುತ್ವಾಕರ್ಷಣೆ

■ ಟಿ.ಆರ್. ಅನಂತರಾಮು

ರಾ. ನಂ.ಚಂದ್ರಶೇಖರ ಅವರನ್ನು ನಾನು ಮೊದಲು ನೋಡಿದ್ದು ಉದಯಭಾನು ಕಲಾ ಸಂಘದಲ್ಲಿ. ಹಿರಿಯ ವಿದ್ವಾಂಸರಾದ ಪ್ರೊ. ಎಲ್.ಎಸ್.ಶೇಷಗಿರಿ ರಾವ್ ಅವರು 'ಬೆಂಗಳೂರು ದರ್ಶನ' ಎಂಬ ಬೃಹತ್ ಗ್ರಂಥದ ಸಂಪಾದಕತ್ವವನ್ನು ವಹಿಸಿಕೊಂಡಿದ್ದರು. ಅನೇಕ ಲೇಖಕರಿಂದ ಈ ಗ್ರಂಥಕ್ಕೆ ಲೇಖನವನ್ನು ಕೋರಿದ್ದರು. ಕೆಲವರು ಖುದ್ದಾಗಿ ಬಂದು ಅವರನ್ನು ಭೇಟಿಯಾಗಿ ಲೇಖನಗಳನ್ನು ಕೊಡುತ್ತಿದ್ದರು. ಪ್ರೊ. ಎಲ್. ಎಸ್. ಶೇಷಗಿರಿರಾಯರು ಡಾ. ಎಂ.ಎಚ್. ಕೃಷ್ಣಯ್ಯ ಹಾಗೂ ಡಾ. ವಿಜಯ ಒಟ್ಟಿಗೇ ಕುಳಿತು ಅವರಲ್ಲಿ ಒಬ್ಬರು ಲೇಖನವನ್ನು ಗಟ್ಟಿಯಾಗಿ ಓದುವುದು ಉಳಿದಿಬ್ಬರು ಕರಡಿನಲ್ಲಿ ತಿದ್ದುಪಡಿ ಮಾಡುವುದು. ಇದೊಂದು ವಿಶಿಷ್ಟ ಕ್ರಮವಾಗಿತ್ತು. ಆ ಸಂದರ್ಭದಲ್ಲಿ ಒಮ್ಮೆ ರಾ.ನಂ. ಒಂದು ಲೇಖನವನ್ನು ತಂದು ನಸುನಗುತ್ತ ಸಂಪಾದಕ ಸಮಿತಿಯ ಕೈಗಿತ್ತರು. ಅವರಲ್ಲಿ ಇನ್ನಷ್ಟು ಲೇಖನಗಳನ್ನು ಬರೆದುಕೊಡುವ ಹುಮ್ಮಸ್ಸಿತ್ತು. ಅಷ್ಟೇನೂ ಕಟ್ಟುಮಸ್ತಾದ ವ್ಯಕ್ತಿಯಲ್ಲ. ಎತ್ತರದ ನಿಲುವೂ ಅಲ್ಲ. ಆದರೇನಂತೆ? ಮಾತಿನ ಮಧ್ಯೆ ನಗು, ಗಟ್ಟಿ ಸ್ವರವಾದರೂ ವಿನೀತಭಾವ. ಇದು ಎಂಥ 'ಕಾಂಟ್ರಾಸ್ಟ್' ಎಂದು ನಾನೇ ಸ್ವಗತವಾಡಿದ್ದೆ. ಅವರು ಬಹುಶಃ ಸರ್ಕಾರದ ಬೃಹತ್ ಉದ್ದಿಮೆಗಳನ್ನು ಕುರಿತು ಬೆಂಗಳೂರು ದರ್ಶನಕ್ಕಾಗಿ ದೀರ್ಘವಾಗಿ ಬರೆದುಕೊಂಡು ಬಂದಿದ್ದರು. ಆ ಕುರಿತು ಸಂಪಾದಕರುಗಳೊಂದಿಗೆ ಅಷ್ಟೇ ದೀರ್ಘವಾಗಿ ಚರ್ಚಿಸುತ್ತಿದ್ದರು. ಅಲ್ಲಿಗೆ ಆಗ ಹೋಗಿದ್ದ ನನ್ನ ಕಿವಿಗೂ ಮಾತುಗಳು ಬೀಳುತ್ತಿದ್ದವು. ಒಂದರ್ಧ ಗಂಟೆಯ ನಂತರ



ಅವರು ಅಲ್ಲಿಂದ ಹೊರಟರೆಂದು ಕಾಣುತ್ತದೆ. ನಾನು ಕುತೂಹಲ ತಡೆಯಲಾರದೆ ಕೇಳಿದೆ, 'ಈಗ ಹೋದರಲ್ಲ ಅವರು ಯಾರು?' ಯಾರನ್ನು ಕೇಳಿದೆನೆಂದು ನನಗೆ ನೆನಪಾಗದು. 'ಅವರೇ? ಗೊತ್ತಿಲ್ಲವೆ? ರಾ.ನಂ.' ಎಂದರು ಬಳಿಯಲ್ಲಿದ್ದ ಒಬ್ಬರು. ಆ ವೇಳೆಗೆ ಅವರ ಹೆಸರು ನನಗೆ ಪರಿಚಯವಿತ್ತು. ಇದಾದ ನಂತರ ಒಂದೆರಡು ಸಲ ನವಕರ್ನಾಟಕ ಪ್ರಕಾಶನ ಸಂಸ್ಥೆಗೆ ಬಂದಿದ್ದಾಗ ಅವರನ್ನು ಭೇಟಿಯಾದೆ. ಮುಂದೆ ಪರಸ್ಪರ ಭೇಟಿಯ ಸಂದರ್ಭಗಳು ಹೆಚ್ಚಾಗಿ ರಾ.ನಂ. ಅವರ ನಿಕಟ ಪರಿಚಯ ವಾಗತೊಡಗಿತು.

ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಕುರಿತು ಒಂದು ಲೇಖನವನ್ನು ಕೋರಿದ್ದೆ. ಒಂದೇ ವಾರದಲ್ಲಿ ಕೈ ಬರಹದಲ್ಲಿ ಬರೆದು ತಂದು ನನ್ನ ಕೈಗಿಟ್ಟರು. 'ಇನ್ನಾವುದಾದರೂ ಉದ್ಯಮಗಳ ಬಗ್ಗೆ ಬೇಕೆ?' ಎಂದು ಅಷ್ಟೇ ಉತ್ಸಾಹದಲ್ಲಿ ಕೇಳಿದರು. ರಾ.ನಂ. ಅವರನ್ನು ಭೇಟಿಯಾದಾಗಲೆಲ್ಲ ತಪ್ಪದೆ ಒಂದು ವಿಚಾರ ಪ್ರಸ್ತಾಪ ಮಾಡುತ್ತಿದ್ದರು. ಯಾವ ಮಾತಲ್ಲೇ ಆಗಲಿ, ಒಮ್ಮೆಯಾದರೂ ಕನ್ನಡ, ಕನ್ನಡಿಗರು ಮತ್ತು ಕರ್ನಾಟಕದ ಪ್ರಶ್ನೆ ನುಸುಳುತ್ತಿತ್ತು. ಅದು ರಾ.ನಂ. ಅವರ ಅಂತರಾಳದ ಜೀವಾಳ. ಕನ್ನಡ ಸಾಹಿತ್ಯ ಪರಿಷತ್ತಿಗೆ ಮತದಾನ ಮಾಡುವಾಗ ರಾ.ನಂ. ಸಿಕ್ಕಾಗಲೂ ಅದೇ ತಹತಹ. ಯಾಕೋ ಕನ್ನಡಿಗರು ಅ.ನ.ಕೃ., ಮ. ರಾಮಮೂರ್ತಿಯವರನ್ನು ಮರೆತಂತೆ ಕಾಣುತ್ತದೆ ಎನ್ನುವ ನೋವು ಅವರ ದನಿಯಲ್ಲಿತ್ತು.

ಕಾರ್ಮಿಕ ಲೋಕದ ಒಂಬತ್ತನೆಯ ಸಂಚಿಕೆಯನ್ನು ನನ್ನ ಕೈಗಿಡುತ್ತ, ಜೊತೆಗೆ ಆಹ್ವಾನ ಪತ್ರಿಕೆಯನ್ನೂ ಕೊಟ್ಟರು. ಕನ್ನಡ ಗೆಳೆಯರ ಬಳಗ ಹಮ್ಮಿಕೊಂಡಿದ್ದ 'ಕನ್ನಡ ಚಳವಳಿ–೫೦' ಕುರಿತ ಉಪನ್ಯಾಸಕ್ಕೆ ಆಹ್ವಾನ. 'ಚಂದಾ ಎಷ್ಟು, ಕಾರ್ಮಿಕ ಲೋಕಕ್ಕೆ?' ಎಂದು ಹಣ ಕೊಡಲು ಓದಾಗ, ಮಾರುದ್ದ ಸರಿದು 'ಅದನ್ನು ತಲಪಿಸಬೇಕಾಗಿರುವುದು ರವಿಕುಮಾರ್‌ಗೆ. ಹೇಗಿದ್ದರೂ ಈ ಉಪನ್ಯಾಸಕ್ಕೆ ಬರುತ್ತೀರಲ್ಲ, ಆಗ ಅವರಿಗೇ ಕೊಡಿ' ಎಂದು ನಯವಾಗಿ ಹೇಳಿ ಹೊರಡುವವರಿದ್ದರು. ಒಂದು ಕ್ಷಣ ತಡೆದು 'ನಮ್ಮ ಮೇಸ್ಟ್ರು...' ಎಂದು ವಾಕ್ಯವನ್ನು ಪೂರ್ತಿ ಮಾಡದೆ 'ಇರಲಿ ಬಿಡಿ, ಆಮೇಲೆ ಹೇಳುತ್ತೇನೆ' ಎಂದು ಹೊರಟುಹೋದರು.

ಅವರು 'ನಮ್ಮ ಮೇಸ್ಟ್ರು' ಎಂದರೆ ರಾ.ನಂ. ಅವರನ್ನು ಬಲ್ಲ ಎಲ್ಲರಿಗೂ ಗೊತ್ತು ಅದು ಎಂ.ಚಿದಾನಂದಮೂರ್ತಿಯವರು ಎಂದು. ಆ ಮೇಸ್ಟ್ರಿಗೂ ರಾ.ನಂ. ಎಂದರೆ ಮಮಕಾರ. ಇವರನ್ನು ಹುರಿದುಂಬಿಸಿ, ಕನ್ನಡದ ಹೋರಾಟ ಮಾಡಲು ಇವರಿಗೆ ಬೆಂಬಲಿಸಿದ್ದು ಅವರೇ. ಅಪರೂಪದ ಗುರು–ಶಿಷ್ಯ ಸಂಬಧ. ವಾಸ್ತವದಲ್ಲಿ ರಾ.ನಂ. ಅವರಿಗೆ ಚಿ.ಮೂ. ಪಾಠ ಹೇಳಿದ ಮೇಸ್ಟ್ರಲ್ಲ. ಅಲ್ಲದಿದ್ದರೆ ಏನಂತೆ? ಸಮಾಜವೇ ಶಿಥಿಲವಾಗುತ್ತ ಮೌಲ್ಯಗಳೆಲ್ಲ ಅಪಮೌಲ್ಯವಾಗುತ್ತಿರುವ ಈ ದಿನಗಳಲ್ಲಿ ಕಾಯಾ, ವಾಚಾ ಮನಸಾ ಎಂ.ಚಿದಾನಂದಮೂರ್ತಿಗಳನ್ನು ಗುರುವಾಗಿ ಸ್ವೀಕರಿಸಿರುವ ರಾ.ನಂ.ಗೆ ಆ ಗುರುತ್ವಾಕರ್ಷಣದ ಕಾರಣವಾಗಿಯೇ ಗಟ್ಟಿ ನಿಲುವು ಬಂದಿದೆ; ಗಟ್ಟಿಮಾತನ್ನು ಕೊಟ್ಟಿದೆ. ನಾನು ಎಷ್ಟೋ ಬಾರಿ ಅಂದುಕೊಂಡಿದ್ದೇನೆ, ಮೊಬೈಲ್ ಇಲ್ಲದ ಈ ಜಂಗಮನನ್ನು

ಹಿಡಿಯುವುದು ಹೇಗೆ? ಸಂಪರ್ಕಿಸುವುದು ಹೇಗೆ? ಎಂದು. ಈಗಲೂ ನನ್ನಂತೆ ಪರದಾಡುವವರು ಅವರ ಲ್ಯಾಂಡ್ ಲೈನ್‌ಗೇ ಶರಣಾಗಬೇಕು. ಹೀಗಿದ್ದೂ ಈ ಮನುಷ್ಯ ಜೇನುಗೂಡಿನಂತೆ ಗೆಳೆಯರನ್ನು ಕಟ್ಟಿಕೊಂಡಿದ್ದಾರಲ್ಲ. ನಾನೇಕೆ ಎರಡು ಘಳಿಗೆ ಮೊಬೈಲ್ ಬಿಟ್ಟಿರುವ ಸ್ಥಿತಿಯಲ್ಲಿಲ್ಲ? ರಾ.ನಂ. ಅವರನ್ನು ಭೇಟಿಯಾದಾಗಲೆಲ್ಲ ಮತ್ತೆ ಮತ್ತೆ ನನ್ನೊಳಗೆ ಕಾಡುವ ಪ್ರಶ್ನೆಗಳಿವು. ರಾ.ನಂ. ಕನ್ನಡ ಗೆಳೆಯರ ಬಳಗವನ್ನು ಕಟ್ಟಿಕೊಂಡಿದ್ದಾರೆ. ಅದರ ವತಿಯಿಂದ ಕನ್ನಡ, ಕನ್ನಡಿಗ, ಕರ್ನಾಟಕ ಕೇಂದ್ರಿತ ವಿಚಾರ ಕುರಿತು ಅನೇಕ ಚರ್ಚೆಗಳನ್ನು ಏರ್ಪಡಿಸಿದ್ದಾರೆ. ಇಡೀ ಕಾರ್ಮಿಕಲೋಕದ ಕನ್ನಡ ಬಂಧುಗಳನ್ನು ತಮ್ಮ ತೆಕ್ಕೆಗೆ ಪ್ರೀತಿಯಿಂದ ಬರಮಾಡಿಕೊಂಡಿದ್ದಾರೆ. ಎಲೆಮರೆಯಲ್ಲಿದ್ದು ಕನ್ನಡಕ್ಕಾಗಿ ದುಡಿದ ವ್ಯಕ್ತಿಗಳನ್ನು ಸಂಭ್ರಮದಿಂದ ವೇದಿಕೆಯಲ್ಲಿ ಕೂಡಿಸಿ ಸನ್ಮಾನಿಸಿದ್ದಾರೆ. ಅದರಲ್ಲೇ ಸಾಂತ್ವನ ಕಂಡುಕೊಂಡಿದ್ದಾರೆ.

ಪ್ರತಿವರ್ಷವೂ ನವೆಂಬರ್ ತಿಂಗಳಲ್ಲಿ ಕರ್ನಾಟಕದಲ್ಲಿ ಕನ್ನಡದ ಕಹಳೆಗಳು ಜೋರಾಗಿಯೇ ಮೊಳಗುತ್ತವೆ. ಆದರೆ ರಾ.ನಂ. ನವೆಂಬರ್ ಒಂದರಂದು ಸೌತ್‌ಎಂಡ್ ಸರ್ಕಲ್‌ನಲ್ಲಿರುವ ತೀ.ನಂ.ಶ್ರೀ., ಲಾಲ್‌ಬಾಗಿನ ಪಶ್ಚಿಮ ದ್ವಾರದಲ್ಲಿರುವ ಕುವೆಂಪು ನ್ಯಾಷನಲ್ ಕಾಲೇಜ್ ಬಳಿ ಇರುವ ಬಿ.ಎಂ.ಶ್ರೀ. ಹಾಗೂ ಎಚ್.ಎನ್.ಪ್ರತಿಮೆಗಳಿಗೆ ಗೆಳೆಯರೊಡನೆ ಕೂಡಿ ಮಾಲಾರ್ಪಣೆ ಮಾಡುವುದುಂಟು. ಇದು ದಶಕಗಳಿಂದ ತಪ್ಪದೇ ನಡೆಸಿಕೊಂಡು ಬಂದಿರುವ ಕಾಯಕ. ಕನ್ನಡಕ್ಕಾಗಿ ಕೈ ಎತ್ತಿದವರನ್ನು ಸ್ಮರಿಸಿಕೊಳ್ಳ ಬೇಕಾದ್ದು ಕನ್ನಡದ ಸೇವೆಯೇ ಎನ್ನುವುದು ಅವರ ಇಂಗಿತ. ಗೆಳೆಯರ ಬಳಗ ನಡೆಸುವ ಚರ್ಚೆ, ಗೋಷ್ಠಿ, ಉಪನ್ಯಾಸಗಳಲ್ಲಿ ರಾ.ನಂ. ಅವರದು ವಿಶಿಷ್ಟ ಪಾತ್ರ. ಅದೂ ನೇಪಥ್ಯದಲ್ಲಿ. ಉಪನ್ಯಾಸಕರು ಇಷ್ಟೇ ನಿಮಿಷ ಮಾತನಾಡಬೇಕೆಂಬ ಲಕ್ಷ್ಮಣರೇಖೆ ಹಾಕುತ್ತಾರೆ, ಅತಿಥಿಗಳು ಎಂಥ ಖ್ಯಾತನಾಮರಾದರೂ ಸರಿಯೇ, ಇದನ್ನು ಪಾಲಿಸಲೇಬೇಕು. 'ಇನ್ನೈದು ನಿಮಿಷವಿದೆ ಮುಗಿಸಲು' ಎಂದು ಸ್ನೇಹಪರ ಎಚ್ಚರಿಕೆ ಅವರಿಂದ ಬರುತ್ತದೆ. ಅತಿಥಿಗಳು ಅದಕ್ಕೂ ಜಗ್ಗದೆ ಮೈಕನ್ನು ಪ್ರೀತಿಸುತ್ತ ಹೋದರೆ ಸೈಡ್‌ವಿಂಗ್‌ನಿಂದ ಕೆಂಪು ಚೀಟಿ ಬಂದು ಪೋಡಿಯಂ ಮೇಲೆ ಕುಳಿತಾಗ ಉಪನ್ಯಾಸಕರು ಮುಗಿಸಲೇಬೇಕು. ಈ ಮನುಷ್ಯ ಎಷ್ಟು ಅವಿಶ್ರಾಂತ ಎಂದರೆ ವೇದಿಕೆಯಲ್ಲಿ ಗಣ್ಯರೊಡನೆ ಹೆಚ್ಚು ಕಾಲ ಕುಳಿತಿರಲಾರ. ಏನೋ ನೆನಪು ಬಂದು, ಕರ್ತವ್ಯಪ್ರಜ್ಞೆ ಕಾಡಿ ಎದ್ದೇ ಬಿಡುತ್ತಾರೆ ಕುರ್ಚಿಯಿಂದ.

'ಕರ್ನಾಟಕ ಕಾರ್ಮಿಕಲೋಕ'ದ ೫೦ನೇ ಸಂಚಿಕೆ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಬಿಡುಗಡೆಯಾದಾಗ (ಮಾರ್ಚ್ ೪, ೨೦೧೨) ಮೇಸ್ಟ್ರು ಶಿಷ್ಯನನ್ನು ಗದರಿಸಿ ಕೆಲವು ನಿಮಿಷವಾದರೂ ತಮ್ಮ ಬಳಿ ವೇದಿಕೆಯಲ್ಲಿ ಕೂಡಿಸಿಕೊಂಡಿದ್ದರು. ಮಹಿಷಿ ವರದಿ ಕುರಿತಂತೆ ನೀವು ಒಂದೇ ಒಂದು ಮಾತೆತ್ತಿದರೂ ಸಾಕು, ರಾ.ನಂ. ಪುಂಖಾನುಪುಂಖವಾಗಿ ಅದರ ಚರಿತ್ರೆ ಬಗೆಯುತ್ತಾರೆ. ಸರ್ಕಾರ ಯಾವ ಯಾವ ಸಮಿತಿಯ ವರದಿಗಳನ್ನು ಎಷ್ಟೆಷ್ಟು ವರ್ಷಗಳಿಂದ ಹೂತುಹಾಕಿದೆ ಎಂಬುದನ್ನು ಅಂಕಿ–ಅಂಶಗಳ ಮೂಲಕ ತೆರೆದಿಡುತ್ತಾರೆ.

ಕಾವೇರಿ ನದಿ ನೀರು ಹಂಚಿಕೆಯ ಪ್ರಸ್ತಾಪ ಬಂದಾಗಲೆಲ್ಲ ಚಡಪಡಿಸುತ್ತಾರೆ. ವಿಚಾರಗೋಷ್ಠಿಗಳನ್ನು ಏರ್ಪಡಿಸುತ್ತಾರೆ, ಚರ್ಚೆಯ ವರದಿಯನ್ನು ಸರ್ಕಾರಕ್ಕೂ ತಲುಪಿಸುತ್ತಾರೆ. ಒಮ್ಮೆ ರಾ.ನಂ. ಅವರ ಪ್ರಭಾವಲಯಕ್ಕೆ ಬಂದಿರೆಂದರೆ ಸಾಕು ಎದೆಯಲ್ಲಿ ಕಿಂಚಿತ್ತು ಕನ್ನಡಾಭಿಮಾನವಿದ್ದರೂ ಅದು ನೂರ್ಮಡಿ ಹೆಚ್ಚುತ್ತದೆ.

ರಾ.ನಂ. ಅವರ ದಿಟ್ಟ ನಿಲುವಿಗೆ ಒಂದು ಸಾಕ್ಷಿ: ಕರ್ನಾಟಕ ರಕ್ಷಣಾ ವೇದಿಕೆಯ ಅಧ್ಯಕ್ಷ ನಾರಾಯಣಗೌಡರು ಬೆಂಗಳೂರು ಬೃಹತ್ ಮಹಾನಗರ ಪಾಲಿಕೆ ಚುನಾವಣೆಗೆ ನಿಂತಾಗ ಅನೇಕ ಕನ್ನಡ ಸಂಸ್ಥೆಗಳಿಗೆ ಬೇಸರವಾಗಿತ್ತು. ಬೇಸರ ಏಕೆಂದರೆ ಒಮ್ಮೆ ಆಡಳಿತ ಸೂತ್ರ ಹಿಡಿದರೆ ನಿಲುವು ಬದಲಾಗಬಹುದು ಎಂಬ ಕಾರಣಕ್ಕೆ. ಟಿ.ವಿ. ವಾಹಿನಿಯೊಂದು ಸಂವಾದ ಏರ್ಪಡಿಸಿತ್ತು. ರಾ.ನಂ. ಗಟ್ಟಿ ಸ್ವರದಲ್ಲಿ ಕೇಳಿದ್ದರು. 'ನಿಮಗೆ ಕನ್ನಡಪರ ಕೆಲಸ ಮಾಡುವುದು ಮುಖ್ಯವೋ ಅಥವಾ ಅಧಿಕಾರವೊ?' 'ಅಧಿಕಾರವಿದ್ದರೆ ಕನ್ನಡಪರ ಕೆಲಸಗಳ ಅನುಷ್ಠಾನ ಸುಲಭ' ಎಂದು ಸಮರ್ಥಿಸಿಕೊಂಡ ಗೌಡರ ಮಾತುಗಳನ್ನು ರಾ.ನಂ. ಒಪ್ಪಲಿಲ್ಲ. 'ಕನ್ನಡಪರ ಹೋರಾಡುವ ಮಂದಿ ಸರ್ಕಾರವನ್ನು ಹೆಜ್ಜೆ ಹೆಜ್ಜೆಗೂ ಎಚ್ಚರಿಸುವ ಕೆಲಸ ಮಾಡಬೇಕು. ಆಡಳಿತದ ಚುಕ್ಕಾಣಿ ಹಿಡಿಯುವುದಲ್ಲ' ಎಂದು ತಿರುಗುಬಾಣ ಬಿಟ್ಟಿದ್ದರು.

ಇನ್ನೊಂದು ಸಂದರ್ಭ: ಬೆಂಗಳೂರು ವಿಶ್ವವಿದ್ಯಾಲಯ ಹಲವು ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರಿಗೆ ಗೌರವ ಡಾಕ್ಟೋರೇಟ್ ಕೊಡಲು ನಿರ್ಧರಿಸಿದಾಗ ಎಂ.ಚಿದಾನಂದಮೂರ್ತಿಯವರ ಹೆಸರನ್ನು ರಾಜ್ಯಪಾಲರು ಕೈ ಬಿಟ್ಟಿದ್ದಕ್ಕೆ ನಾಡಿಗೆ ನಾಡೇ ಬೇಸರಿಸಿತ್ತು. ಗಣ್ಯರ ಒತ್ತಡ ಹೆಚ್ಚಾದಾಗ ರಾಜ್ಯಪಾಲರು ಕೊನೆಗೆ ಚಿ.ಮೂ. ಅವರ ಹೆಸರನ್ನು ಸೇರಿಸಿದರು. ಕರ್ನಾಟಕದ ಬಲುಪಾಲು ಜನ ನಿರೀಕ್ಷಿಸಿದ್ದು ಎಂ.ಚಿದಾನಂದಮೂರ್ತಿಗಳು ಇದನ್ನು ತಿರಸ್ಕರಿಸುತ್ತಾರೆ ಎಂದು. ಆದರೆ ಅವರ ಗುರುಗಳು ಒಪ್ಪಿಕೊಂಡು ಗೌರವ ಡಾಕ್ಟೋರೇಟ್ ಪಡೆದಾಗ ರಾ.ನಂ. ಕೂಡ ಪ್ರೀತಿಯಿಂದ ಮುನಿಸಿಕೊಂಡಿದ್ದರು. 'ನಮ್ಮ ಮೇಸ್ಟ್ರು ಇದಕ್ಕಿಂತಲೂ ಹೆಚ್ಚಿನ ಪ್ರಶಸ್ತಿಗೆ ಭಾಜನರು. ಪುನರ್ ಪರಿಶೀಲಿಸಿದ ನಂತರ ನೀಡುತ್ತಿರುವ ಈ ಡಾಕ್ಟೋರೇಟನ್ನು ಅವರು ತಿರಸ್ಕರಿಸಬೇಕಾಗಿತ್ತು' ಎಂಬುದೇ ಅವರ ನಿಲುವು. ಆದರೆ ಗುರುಗಳು ಶಿಷ್ಯನ ಕಿವಿಗೆ ಒಂದು ಮಾತು ಉಲಿದಿದ್ದರು 'ಹಾಗೆ ತಿರಸ್ಕರಿಸುವುದು ಗೌರವದ ಕೆಲಸ ಅಲ್ಲ' ಎಂದು.

ನಮ್ಮ ಭೂಮಿ ಗುರುತ್ವಾಕರ್ಷಣೆಯಿಂದ ಚಂದ್ರನನ್ನು ಸೆರೆಹಿಡಿದಿದೆ, ನಿಜ. ಆದರೆ ಆ ಚಂದ್ರ, ಸಾಗರವನ್ನು ಅಲುಗಿಸಿ ಹೆಬ್ಬಲೆಗಳನ್ನು ಸೃಷ್ಟಿಸುವುದಿಲ್ಲವೆ ತನ್ನ ಗುರುತ್ವಾಕರ್ಷಣೆಯಿಂದ? ನಮ್ಮ ರಾ.ನಂ. ಕೂಡ ಹಾಗೆಯೇ. ಬರಡು ಎದೆಗಳಿಗೂ ಅವರ ಕನ್ನಡಪರ ಅಲೆಗಳು ಮತ್ತೆ ಮತ್ತೆ ಬಡಿದು ಪ್ರಜ್ಞಾವಂತರನ್ನಾಗಿ ಮಾಡುತ್ತವೆ. ಇದು ನಮ್ಮ 'ಚಂದ್ರ'ನ ಗುರುತ್ವಾಕರ್ಷಣೆ.



ಕನ್ನಡ ಚಳವಳಿಯ ಸಂಜೀವಿನಿ

■ **ವ.ಚ. ಚನ್ನೇಗೌಡ**

ಶ್ರೀ ರಾ.ನಂ. ಚಂದ್ರಶೇಖರ ಅವರಿಗೆ ೬೦ ವರ್ಷಗಳು ತುಂಬುತ್ತಿರುವ ಸುಸಂದರ್ಭದಲ್ಲಿ ಅವರನ್ನು ಸನ್ಮಾನಿಸಿ, ಒಂದು ಅಭಿನಂದನ ಗ್ರಂಥವನ್ನು ತರಲಾಗುತ್ತಿದೆ; ಅವರ ಬಗ್ಗೆ ಒಂದು ಲೇಖನವನ್ನು ಬರೆದುಕೊಡಿ ಎಂದು ಮಿತ್ರರಾದ ನಾಡಾಭಿಮಾನಿ ಬಾ.ಹ. ಉಪೇಂದ್ರ ತಿಳಿಸಿದರು. ಆಗ ನನಗೆ ಆದ ಸಂತೋಷ ಅಷ್ಟಿಷ್ಟಲ್ಲ. ಏಕೆಂದರೆ ಒಬ್ಬ ಕನ್ನಡ ಪರ ಹೋರಾಟಗಾರನಿಗೆ ಇಂಥ ಗೌರವ ದೊರಕುತ್ತಿರುವುದು ವಿರಳ. ಅದರಲ್ಲೂ ರಾ.ನಂ. ಚಂದ್ರಶೇಖರ ಅವರಂಥ ನೇರ ನಡೆಯುಳ್ಳವರನ್ನು ಗೌರವಿಸುವವರು ವಿರಳ.

ರಾ.ನಂ. ಚಂದ್ರಶೇಖರ ಅವರನ್ನು ಕಳೆದ ೨೪ ವರ್ಷಗಳಿಂದ ಬಲ್ಲ ಹಾಗೂ ನಿರಂತರವಾಗಿ ಅವರು ನಡೆಸಿರುವ ನಾಡು-ನುಡಿ ಪರ ಹೋರಾಟಗಳಲ್ಲಿ ಭಾಗವಹಿಸಿರುವ ನನಗೆ, ಅವರ ಬಗ್ಗೆ ನಾನೇ ಒಂದು ದೊಡ್ಡ ಪುಸ್ತಕ ಬರೆಯಬಲ್ಲೆನೆಂಬ ನಂಬಿಕೆ, ವಿಶ್ವಾಸ. ಆದರೆ ಅಭಿನಂದನ ಗ್ರಂಥದಲ್ಲಿ ಹಲವರ ಲೇಖನಗಳಿರ ಬೇಕಾಗಿರುವುದರಿಂದ, ಪ್ರತಿಯೊಬ್ಬರ ಲೇಖನಗಳಿಗೂ ಪುಟಗಳ ಮಿತಿಯಿರುತ್ತದೆಂಬುದನ್ನು ಬಲ್ಲೆ.

ಈ ಲೇಖನದ 'ತಲೆಬರಹ'ದಲ್ಲೇ ಹೇಳಿರುವಂತೆ ರಾ.ನಂ.ಚಂದ್ರಶೇಖರ ಅವರು ಕನ್ನಡ ಚಳವಳಿಯ ಸಂಜೀವಿನಿ. ಕನ್ನಡನಾಡು ನುಡಿಗೆ ಆಪತ್ತು ಬಂದೊದಗಿದಾಗ, ಮೊದಲು ಅದನ್ನು ಗಮನಿಸಿ, ಪತ್ರಿಕೆಗಳ ಮೂಲಕ ಸಾರ್ವಜನಿಕರ ಗಮನಕ್ಕೆ ತರುತ್ತಾರೆ. ಈ ಬಗ್ಗೆ ಕನ್ನಡಪರ ಹೋರಾಟಗಾರರನ್ನು ಸಂಘಟಿಸಿ



ಸರ್ಕಾರದ ವಿರುದ್ಧ ಅಥವಾ ಸಂಬಂಧಪಟ್ಟ ಸಂಸ್ಥೆ, ವ್ಯಕ್ತಿಗಳ ವಿರುದ್ಧ ಹೋರಾಟ ರೂಪಿಸುತ್ತಾರೆ. ಇಂಥ ಹತ್ತಾರು ಬೃಹತ್ ಹೋರಾಟಗಳು ಇವರಿಂದ ನಡೆದು, ನಾಡಿಗೆ ಒಳಿತಾಗಿದೆ. ರಾ.ನಂ. ಚಂದ್ರಶೇಖರ ಕನ್ನಡ ಚಳವಳಿಯ ಮಾಹಿತಿಕೋಶ ಎಂದೇ ಹೇಳಬಹುದು. ನಾಡಿಗೆ ಸಂಬಂಧಿಸಿದ ನೆಲ, ಜಲ, ಉದ್ಯೋಗ, ಪರಿಸರ, ಸಂಸ್ಕೃತಿ ಹೀಗೆ ಎಲ್ಲಾ ವಿಷಯಗಳ ಬಗ್ಗೆ ಅಧಿಕೃತವಾದ ಮಾಹಿತಿ ಹೊಂದಿದ್ದಾರೆ. ಇದರಿಂದ ನನ್ನಂಥ ಹೋರಾಟಗಾರರಿಗೆ, ಸಂಘ–ಸಂಸ್ಥೆಗಳಿಗೆ ಬಹು ಉಪಕಾರವಾಗಿದೆ. ಸಾಹಿತಿಗಳ ಕಲಾವಿದರ ಬಳಗದ ಖಜಾಂಚಿಯಾಗಿ ಗೋಕಾಕ್ ಚಳವಳಿಯಲ್ಲಿ ಇವರು ವಹಿಸಿದ ಪಾತ್ರ ಅಮೋಘವಾದದ್ದು. ಕನ್ನಡ ಶಕ್ತಿ ಕೇಂದ್ರದ ಕಾರ್ಯದರ್ಶಿಯಾಗಿ, ಖಜಾಂಚಿ ಯಾಗಿ ಡಾ. ಎಂ. ಚಿದಾನಂದಮೂರ್ತಿಯವರ ನೇತೃತ್ವದಲ್ಲಿ ಹಲವು ಪ್ರಮುಖವಾದ ಹೋರಾಟಗಳನ್ನು ರೂಪಿಸಿದ್ದಾರೆ, ಇದರಲ್ಲಿ ಯಶಸ್ವಿಯೂ ಆಗಿದ್ದಾರೆ. ಕನ್ನಡಿಗರಿಗೆ ಉದ್ಯೋಗದಲ್ಲಿ ಅನ್ಯಾಯವಾಗುತ್ತಿರುವುದನ್ನು ಗಮನಿಸಿ, ನಡೆಸಿದ ಹೋರಾಟದ ಫಲವಾಗಿ ಸರ್ಕಾರ ಡಾ. ಸರೋಜಿನಿ ಮಹಿಷಿಯವರ ನೇತೃತ್ವದಲ್ಲಿ ಸಮಿತಿ ರಚಿಸಿತು. ನಂತರ ರಾ.ನಂ. ಈ ವರದಿಯ ಜಾರಿಗಾಗಿ, ಬೃಹತ್ ಹೋರಾಟವನ್ನೇ ನಡೆಸಿದ್ದಾರೆ. ಗಡಿಭಾಗದಲ್ಲಿ ಕನ್ನಡಿಗರ, ಕನ್ನಡ ಶಾಲೆಗಳ ಉಳಿವಿಗಾಗಿ ಶ್ರಮಿಸಿದ್ದಾರೆ. ಮಹಾಜನ ವರದಿಯ ಜಾರಿಗಾಗಿ, ಸರ್ಕಾರವು ಕಾನೂನು ಬದ್ಧ ಹೋರಾಟವನ್ನು ಸಮರ್ಪಕವಾಗಿ ನಡೆಸುವಂತೆ ಅಮೂಲ್ಯವಾದ ಮಾಹಿತಿಗಳನ್ನು ಒದಗಿಸಿದ್ದಾರೆ. ಕಾವೇರಿ ನ್ಯಾಯ ಮಂಡಳಿಯ ಮಧ್ಯಂತರ ತೀರ್ಪಿನ ವಿರುದ್ಧ ಹೋರಾಟ ನಡೆಸಿದ್ದಲ್ಲದೆ, ಕರ್ನಾಟಕ ಸರ್ಕಾರವು ಕಾವೇರಿ ನ್ಯಾಯಮಂಡಳಿಯ ಮುಂದೆ ಸಮರ್ಥವಾಗಿ ವಾದ ಮಂಡಿಸಿ, ಅಂತಿಮ ತೀರ್ಪಿನಲ್ಲಿ ಅಲ್ಪ–ಸ್ವಲ್ಪವಾದರೂ ನ್ಯಾಯ ಸಿಕ್ಕಿದ್ದರೆ, ಅದು ಕನ್ನಡ ಶಕ್ತಿ ಕೇಂದ್ರದ ನೇತೃತ್ವದಲ್ಲಿ ಎಂ. ಚಿದಾನಂದಮೂರ್ತಿ ಮತ್ತು ರಾ.ನಂ. ಚಂದ್ರಶೇಖರ ಅವರು ನೀಡಿದ ಮಾಹಿತಿಗಳಿಂದಾಗಿ ಎಂದು ಹೇಳಬಹುದು.

ಕೃಷ್ಣಾ ಕೊಳ್ಳದ ನೀರಿನ ಉಳಿವಿಗಾಗಿ ನೀರಾವರಿ ತಜ್ಞ ಬಾಳೇಕುಂದ್ರಿ ಅವರಿಂದ ಮಾಹಿತಿ ಪಡೆದು, ಬಚಾವತ್ ಆಯೋಗದ ತೀರ್ಪಿನಂತೆ ೨೦೦೦ ಇಸವಿಯೊಳಗೆ 'ಎ' ಸ್ಕೀಮ್‌ನ ನೀರಿನ ಬಳಕೆಗೆ ರಾಜ್ಯ ಸರ್ಕಾರವು ವಿಳಂಬ ಮಾಡಿದಾಗ, ಎಸ್. ನಿಜಲಿಂಗಪ್ಪ ಅವರಂಥ ನಾಡ ಪ್ರೇಮಿ, ಮುತ್ಸದ್ದಿಯಿಂದ ಹೇಳಿಕೆ ನೀಡಿಸಿ, ನೀರಿನ ಬಳಕೆ ವಿಳಂಬವಾದರೂ ಅದನ್ನು ಮುಂದೆ ಬಳಸಿಕೊಳ್ಳುವ ಹಕ್ಕು ರಾಜ್ಯ ಸರ್ಕಾರಕ್ಕಿದೆ ಎಂದು ಎಚ್ಚರಿಕೆ ನೀಡಿಸಿದರು. ಹಂಪಿ ಕನ್ನಡ ವಿಶ್ವವಿದ್ಯಾಲಯ ಸ್ಥಾಪನೆ, ಬೆಳಗಾವಿಯಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಸ್ಥಾಪನೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ರಚನೆ, ಕನ್ನಡ ಪುಸ್ತಕ ಪ್ರಾಧಿಕಾರದ ರಚನೆಯಲ್ಲೂ ಇವರ ಪಾತ್ರ ಪ್ರಮುಖವಾಗಿದೆ.

ಕನ್ನಡ ಗೆಳೆಯರ ಬಳಗದ ಸಂಚಾಲಕರಾಗಿರುವ ಇವರು, ನೂರಾರು ಕನ್ನಡ ಪರವಾದ ಕೆಲಸಗಳನ್ನು ಮಾಡಿದ್ದಾರೆ. ಕನ್ನಡ ಹೋರಾಟಗಾರರನ್ನು ಕುರಿತ ಪುಸ್ತಕ ಹೊರತಂದಿರುವುದು, ಮರೆತು ಹೋಗಿರುವ ಹೋರಾಟಗಾರರನ್ನು ನೆನಪಿಗೆ ತಂದಿದೆ. ಒಬ್ಬ ಉತ್ತಮ ಲೇಖಕರಾಗಿರುವ ರಾ.ನಂ. ಚಂದ್ರಶೇಖರ ಹಲವು ಪುಸ್ತಕಗಳನ್ನು

ಬರೆದಿದ್ದಾರೆ. ಮೊನಚು ಶೈಲಿಯ ಇವರ ಬರಹಗಳು ಕನ್ನಡಿಗರಲ್ಲಿ ಜಾಗೃತಿ ಮೂಡಿಸಿವೆ. ನೂರಾರು ಕನ್ನಡ ಹೋರಾಟಗಾರರನ್ನು ಸನ್ಮಾನಿಸಿ ಗೌರವಿಸಿದ್ದಾರೆ. ಕಷ್ಟದಲ್ಲಿರುವ ಹತ್ತಾರು ಸಾಹಿತಿಗಳು, ಕಲಾವಿದರು, ಗಾಯಕರು, ಚಳವಳಿಗಾರರಿಗೆ ಆರ್ಥಿಕ ಸಹಾಯ ಮಾಡಿದ್ದಾರೆ. ನಾಡಿನಲ್ಲಿ ನೆರೆ ಹಾವಳಿ ಸಂಭವಿಸಿದಾಗ ಲಕ್ಷಾಂತರ ರೂಪಾಯಿಯ ಆಹಾರ ಧಾನ್ಯಗಳನ್ನು ಸಂಗ್ರಹಿಸಿ, ತೆಗೆದುಕೊಂಡು ಹೋಗಿ ಎಂ. ಚಿದಾನಂದಮೂರ್ತಿ ಅವರ ನೇತೃತ್ವದಲ್ಲಿ ಹಂಚಿದ್ದಾರೆ.

ವೈಯಕ್ತಿಕವಾಗಿ ನಾನು ಮತ್ತು ಕ.ರಾ.ರ. ಸಾರಿಗೆ ಸಂಸ್ಥೆ ಕನ್ನಡ ಕ್ರಿಯಾಸಮಿತಿ ಅವರಿಂದ ತುಂಬ ಸಹಾಯವನ್ನು ಪಡೆದುಕೊಂಡಿದ್ದೇವೆ. ನನ್ನಂಥ ಒಬ್ಬ ಸಾಮಾನ್ಯ ಕನ್ನಡ ಕಾರ್ಯಕರ್ತನನ್ನೂ, ಪ್ರೀತಿ ವಿಶ್ವಾಸದಿಂದ ಕಾಣುವ ರಾ.ನಂ. ಚಂದ್ರಶೇಖರ ಅವರು ಕೆಟ್ಟದ್ದನ್ನು ನೇರವಾಗಿ ವಿರೋಧಿಸುತ್ತಾರೆ. ಯಾವುದೇ ರಾಜಕಾರಣಿಗಳನ್ನು ಓಲೈಸುವ ಪ್ರವೃತ್ತಿ ಇವರದಲ್ಲ. ಕನ್ನಡದ ಸಮಸ್ಯೆಗಳ ಬಗ್ಗೆ ಎಷ್ಟೋ ಸಲ ಮುಖ್ಯಮಂತ್ರಿಗಳು, ಮಂತ್ರಿಗಳ ಬಳಿ ಸಭೆ ನಡೆದಾಗ, ನಾನೂ ಅವರ ಜೊತೆ ಭಾಗವಹಿಸಿದ್ದೇನೆ. ಯಾವುದೇ ಮುಲಾಜಿಲ್ಲದೆ ನೇರವಾಗಿ ಮಾತನಾಡುತ್ತಾರೆ. ಇವರು ನಾಡು–ನುಡಿಗಾಗಿ ಪಟ್ಟ ಶ್ರಮಕ್ಕೆ, ಸರ್ಕಾರದ ಮಟ್ಟದಲ್ಲಿ ಯಾವುದೇ ಹುದ್ದೆಗಳೂ ಪ್ರಶಸ್ತಿಗಳೂ ದೊರಕಲಿಲ್ಲ. ಇದಕ್ಕೆ ಇವರ ನೇರ ನಡೆ–ನುಡಿಯೇ ಕಾರಣವಿರಬಹುದು. ಆದರೆ ರಾ.ನಂ. ಇದಕ್ಕೆ ಎಂದೂ ಅಪೇಕ್ಷೆಪಟ್ಟವರಲ್ಲ. ಪಟ್ಟಿದ್ದರೆ ಎಲ್ಲವನ್ನು ಪಡೆಯುವ ಅರ್ಹತೆಯೂ ಇತ್ತು; ಶಿಫಾರಸು ಮಾಡುವಂತಹ ವ್ಯಕ್ತಿಗಳ ಪರಿಚಯವೂ ಇತ್ತು. ಏನನ್ನೂ ಬಯಸದ ಈ ಸರಳಜೀವಿಗೆ ಸಮಸ್ತ ಕನ್ನಡಿಗರ ಪರವಾಗಿ ಪ್ರೀತಿಯಿಂದ ಹೆಮ್ಮೆಯಿಂದ ಅಭಿನಂದಿಸಿ, ಅಭಿನಂದನ ಗ್ರಂಥವನ್ನು ಅರ್ಪಿಸೋಣ.

ಸದಾ ಕ್ರಿಯಾಶೀಲರಾಗಿರುವ ಇವರು ತಮ್ಮ ಸೇವೆಯಿಂದ ನಿವೃತ್ತಿಯ ನಂತರವೂ ಇವರಿಂದ ನಾಡಿಗೆ ಮತ್ತಷ್ಟು ಉಪಕಾರವಾಗಲಿ. ತಾಯಿ ಭುವನೇಶ್ವರಿಯು, ರಾ.ನಂ.ಚಂದ್ರಶೇಖರ ಅವರಿಗೂ, ಅವರ ಕುಟುಂಬ ವರ್ಗದವರಿಗೂ ಹೆಚ್ಚಿನ ಆಯಸ್ಸು, ಆರೋಗ್ಯ ನೀಡಲೆಂದು ಪ್ರಾರ್ಥಿಸುತ್ತೇನೆ.

❐




ದಣಿವರಿಯದ ಕನ್ನಡ ಕಾಯಕಯೋಗಿ

■ ಬಿ.ವಿ.ರವಿಕುಮಾರ್

ಬೆಂಗಳೂರು ಗ್ರಾಮಾಂತರ ಪ್ರದೇಶದವನಾದ ನನಗೆ, ದಿನಪತ್ರಿಕೆಗಳ 'ನಗರದಲ್ಲಿ ಇಂದು' ಗಮನಿಸಿ ಕನ್ನಡ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಅಭ್ಯಾಸವಿತ್ತು. ಹಾಗೊಂದು ದಿನ ಆರ್ಥಿಕವಾಗಿ ತೊಂದರೆಯಲ್ಲಿದ್ದ, ಕನ್ನಡ ಬಾವುಟ ರೂಪುಗೊಳ್ಳುವಲ್ಲಿ ಶ್ರಮಿಸಿದ ಕನ್ನಡ ಹೋರಾಟಗಾರ ಜೆ.ನಿ. ಈಶ್ವರಪ್ಪ ಅವರಿಗೆ ಕನ್ನಡ ಗೆಳೆಯರ ಬಳಗ ಎಂಬ ಸಂಘಟನೆಯು ಕನ್ನಡಾಭಿಮಾನಿಗಳಿಂದ ಸಂಗ್ರಹಿಸಿದ್ದ ಆರ್ಥಿಕ ನೆರವನ್ನು ನೀಡುವುದರಲ್ಲಿತ್ತು. ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಭಾಗಿಯಾದ ನನಗೆ ಆಶ್ಚರ್ಯ. ಅಂದು ಅಲ್ಲಿ ನನ್ನದೇ ಎಚ್.ಎ.ಎಲ್. ಕಾರ್ಖಾನೆಯ ಸಮವಸ್ತ್ರವನ್ನು ಧರಿಸಿದ ಮೂವರು ಹಿರಿಯ ಉದ್ಯೋಗಿಗಳು ಸಂಘಟಕರಾಗಿದ್ದರು! ಅಂದು ಉತ್ಸಾಹದಿಂದಲೇ ಪರಿಚಯ ಮಾಡಿಕೊಂಡ ಆ ವ್ಯಕ್ತಿಗಳು ಕ. ಜಯಚಂದ್ರು, ಬಾ.ಹ. ಉಪೇಂದ್ರ ಮತ್ತು ಪಾದರಸದಂತೆ ಸಭಾಂಗಣದ ತುಂಬೆಲ್ಲ ಜವಾಬ್ದಾರಿಯಿಂದ ಲವಲವಿಕೆಯಿಂದ ಮದುವೆಯಲ್ಲಿ ವಧುವಿನ ಸಹೋದರ ಓಡಾಡುವಂತೆ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದ ರಾ.ನಂ. ಚಂದ್ರಶೇಖರ.

ರಾ.ನಂ. ಆನಂತರ ಕೆಲವೇ ದಿನಗಳಲ್ಲಿ, ನಾನು ಕೆಲಸ ಮಾಡುವ ಡ್ರಾಪ್ ಟ್ಯಾಂಕ್ ಜೋಡಣೆ ಇಲಾಖೆಗೆ ನನ್ನನ್ನು ಹುಡುಕಿಕೊಂಡು ಬಂದರು, ಸುಧಾ ವಾರಪತ್ರಿಕೆಯನ್ನು ಕೈಲಿ ಹಿಡಿದು. ಆ ಸಂಚಿಕೆಯಲ್ಲಿ 'ನನ್ನ ಬಾಳ ಸಂಗಾತಿ ಹೀಗಿರಬೇಕು...' ಅಂಕಣದ ನನ್ನ ಸಚಿತ್ರ ಲೇಖನ ಪ್ರಕಟವಾಗಿತ್ತು. ನನ್ನ ಅರ್ಧಾಂಗಿಯ ಬಗ್ಗೆ ನಾನು ಇರಿಸಿಕೊಂಡಿದ್ದ ಭಾವನೆ-ಕಲ್ಪನೆಗಳ ಬಗ್ಗೆ ಮೆಚ್ಚುಗೆ ಸಲ್ಲಿಸಿದರು.



ಸಾಮಾನ್ಯನಾದ ನನ್ನನ್ನು ಹುಡುಕಿಕೊಂಡು ಓರ್ವ ಹಿರಿಯ ಕಾರ್ಮಿಕರು, ಕನ್ನಡ ಚಿಂತಕರು ಬಂದದ್ದನ್ನು ಕಂಡಾಗ, ನನಗೂ ಅವರ ಬಗ್ಗೆ ಅಭಿಮಾನ, ಗೌರವ ಬೆಳೆಯಿತು. ಮುಂದೆ ಅವರೊಂದಿಗೆ ಬೆಳೆದ ಸಲುಗೆಯಿಂದಾಗಿ ನನಗೆ ಕನ್ನಡದ ಬಗ್ಗೆ, ಕರ್ನಾಟಕದ ಬಗ್ಗೆ ಹೆಚ್ಚಿನ ಮಾಹಿತಿಯ ನಿಧಿ ದೊರೆತಂತಾಯ್ತು. ಅದು ನನ್ನ ಕನ್ನಡತನದ ಜಡತ್ವಕ್ಕೆ ಸಾಣೆ ಹಿಡಿದಂತಾಗಿ ನನ್ನನ್ನೂ ಓರ್ವ ಸಕ್ರಿಯ ಕನ್ನಡ ಕಾರ್ಯಕರ್ತನನ್ನಾಗಿಸಿತು. ಹೀಗೆ ಪ್ರಾರಂಭವಾದ ನನ್ನ ರಾ.ನಂ. ಸರ್ ಅವರ ಸಂಬಂಧ, ಹಲವು ಕನ್ನಡದ ಕೆಲಸಗಳಿಗೆ ಪ್ರೇರಣೆಯಾಗಿ ಹತ್ತು ವರ್ಷಗಳನ್ನು ದಾಟಿ, ಬಳ್ಳಿ–ಮರದ ನಂಟಿನಂತೆ ಮುಂದು ವರಿದಿರುವುದು ನನ್ನ ಪಾಲಿನ ಅದೃಷ್ಟವೇ ಸರಿ.

ರಾ.ನಂ. ಅವರ ಒಡನಾಟ ನನ್ನನ್ನೂ ಸೇರಿದಂತೆ ಕಾರ್ಖಾನೆಯ ಹಲವು ಕನ್ನಡಾಭಿಮಾನಿಗಳಿಗೆ ಹಲವು ಹತ್ತು ಅವಕಾಶಗಳನ್ನು ಕಲ್ಪಿಸಿಕೊಟ್ಟಿತು. ಕನ್ನಡ ಗೆಳೆಯರ ಬಳಗದ ಕಾರ್ಯಕ್ರಮಗಳಲ್ಲಿ ಕಾರ್ಯಕರ್ತರಾಗಿ ಶ್ರಮಿಸುವ ಅವಕಾಶದ ಜೊತೆ ಜೊತೆಗೆ ಹಿರಿಯರಾದ ಡಾ. ಎಂ. ಚಿದಾನಂದಮೂರ್ತಿ, ಪ್ರೊ. ಎಲ್.ಎಸ್. ಶೇಷಗಿರಿ ರಾವ್ ಡಾ. ವಿಜಯಾ, ವಿಜ್ಞಾನಿ ಸುಧೀಂದ್ರ ಹಾಲ್ದೊಡ್ಡೇರಿ ಸೇರಿದಂತೆ ಹಲವು ಹಿರಿಯ ಸಾಹಿತಿಗಳ, ಶ್ರ.ದೇ. ಪಾರ್ಶ್ವನಾಥ್, ಟಿ. ತಿಮ್ಮೇಶ್, ಕೆ.ಎಚ್. ನರಸಿಂಹಮೂರ್ತಿ ರಮೇಶ್‌ಬಾಬು, ಕೆ.ಎನ್.ಭಗವಾನ್, ಬಿ.ಎ.ನಂಜುಂಡಸ್ವಾಮಿ, ಮ. ಚಂದ್ರಶೇಖರ ಮುಂತಾದ ಕನ್ನಡ ಹೋರಾಟಗಾರರ ವಿಶ್ವಾಸ, ಸಂಪರ್ಕಗಳನ್ನು ಪಡೆಯುವಲ್ಲಿ ರಾ.ನಂ. ಅವರ ಪೋಷಣೆ, ಪಾತ್ರ ದೊಡ್ಡದು. ನನ್ನ ಪ್ರವೃತ್ತಿಯ ಹಾದಿಯ ಪ್ರಗತಿಯಲ್ಲಿ ರಾ.ನಂ. ಅವರ ಆರೈಕೆ–ಹಾರೈಕೆಗಳಿವೆ.

ಮುಂಚಿನಿಂದಲೂ ಕನ್ನಡಕ್ಕೆ ಹೊಸತನ್ನು ನೀಡಬೇಕೆನ್ನುವ ತುಡಿತವಿದ್ದ ನನಗೆ ನನ್ನಂಥ ಹಲವು ಕನ್ನಡಿಗರನ್ನು ಒಂದೆಡೆ ಸೇರಿಸಿ, ಕನ್ನಡದ ಕನಸುಗಳನ್ನು ನನಸು ಮಾಡಿಕೊಳ್ಳಬೇಕು ಎನ್ನುವ ಹುಚ್ಚು, ಉತ್ಸಾಹ. ಅದರಂತೆ ರಕ್ಷಿತ್‌ಮೋಹನ್, ಚಂದ್ರಪ್ಪ ಲೋಕೇಶ್, ವಿನೋದ್, ಕಿರಣ್, ಸೋಮೇಶ್ವರ, ಗೋಪಾಲನಾಯ್ಕ, ಶಂಕರ್ ಮತ್ತಿತರ ಗೆಳೆಯರು ಜೊತೆಯಾದಾಗ ರಾ.ನಂ. ಹಾಗೂ ನಮ್ಮ ಕಾರ್ಖಾನೆಯ ಹಿರಿಯ ವ್ಯವಸ್ಥಾಪಕರಾದ ಬಾ.ಹ.ಉಪೇಂದ್ರ ಅವರ ಮಾರ್ಗದರ್ಶನದಲ್ಲಿ ರೂಪು ತಳೆದದ್ದೇ 'ಕಾರ್ಮಿಕಲೋಕ' ಸಂಘಟನೆ. ದೊಡ್ಡ ಆಶಯ ಹೊತ್ತ ಯುವ ಕನ್ನಡಿಗರ ಪುಟ್ಟ ಸಂಘಟನೆ 'ಕಾರ್ಮಿಕ ಲೋಕ' ನಾಡಿನಲ್ಲೇ ವಿಶಿಷ್ಟವೆನ್ನಬಹುದಾದ ಕೆಲಸಗಳನ್ನು ಶ್ರದ್ಧೆಯಿಂದ ಮಾಡಿದೆ; ಮಾಡುತ್ತಿದೆ. ಯುವ ಪೀಳಿಗೆಗೆ ಕನ್ನಡದ ಕಾರ್ಯಗಳಲ್ಲಿ ಆಸಕ್ತಿ ಇಲ್ಲ ಎಂದು ವಿಷಾದಿಸುವ ಕಾಲಘಟ್ಟದಲ್ಲೇ, ಹಲವು ಕನ್ನಡ ಪರ ಕೆಲಸಗಳಲ್ಲಿ ಕ್ರಿಯಾಶೀಲವಾಗಿ ತೊಡಗಿಸಿಕೊಂಡ 'ಕಾರ್ಮಿಕಲೋಕ' ರೂಪು ತಳೆದುದರ ಹಿನ್ನೆಲೆಯಲ್ಲಿ, ಯುವ ಕಾರ್ಮಿಕರಿಗೆ ಒತ್ತಾಸೆಯಾಗಿ ನಿಂತದ್ದು ಇದೇ ರಾ.ನಂ. ಅವರು ಎಂದರೆ ಅದು ಹೊಗಳಿಕೆ ಯಾಗದು. 'ಕಾರ್ಮಿಕ ಲೋಕ'ದ ಸಾಧನೆಗಳಲ್ಲಿ ಪ್ರಮುಖವಾದುದು 'ಕಾರ್ಮಿಕ ಲೋಕ' ಮಾಸ ಪತ್ರಿಕೆಯ ಪ್ರಕಟಣೆ. ನಾಡಿನ ಕಾರ್ಖಾನೆಗಳ ಕನ್ನಡ ಸಂಘಗಳ, ಲಲಿತಕಲಾ ಸಂಘಗಳ ಹಾಗೂ ಕಾರ್ಮಿಕ ಸಂಘಗಳ ಚಟುವಟಿಕೆಗಳನ್ನು ದಾಖಲಿಸುತ್ತಾ, ಕಾರ್ಮಿಕರ

ಸಾಧನೆ–ಪ್ರತಿಭೆಗಳನ್ನು ಪರಿಚಯಿಸುತ್ತಾ, ಸೃಜನಶೀಲ ಕಾರ್ಮಿಕ ವರ್ಗದಲ್ಲಿ ತನ್ನದೇ ಆದ ಸ್ಥಾನವನ್ನು ಪಡೆದಿದೆ. ಇಂದು ಸುಮಾರು ೧೮ ಕಾರ್ಖಾನೆಗಳಲ್ಲಿ ಈ ಪತ್ರಿಕೆಗೆ ೧೯೦೦ ವಾರ್ಷಿಕ ಚಂದಾದಾರರಿದ್ದಾರೆ ಎಂದರೆ ಒಂದು ಸುಸಜ್ಜಿತ ಕಚೇರಿ, ಸಿಬ್ಬಂದಿ ಇಲ್ಲದೆಯೂ ಓದುಗರ ವಿಶ್ವಾಸ ಗಳಿಸಿ ಮುನ್ನಡೆಯುತ್ತಿರುವ, ಈ ಪತ್ರಿಕೆಯ ಮಹತ್ವ ಅರಿವಾಗುತ್ತದೆ. ಅಂದ ಹಾಗೆ ಈ ಪತ್ರಿಕೆ ಇಷ್ಟು ಜನಪ್ರಿಯವಾಗಿ ಹಾಗೂ ೫ ವರ್ಷಗಳ ಕಾಲ ಪ್ರಕಟಣೆ ಕಾಣಲು ಗೌರವ ಸಂಪಾದಕರಾಗಿ ಕಾರ್ಯನಿರ್ವಹಿಸುತ್ತಿರುವ ರಾ.ನಂ. ಚಂದ್ರಶೇಖರ ಅವರ ಸಾರಥ್ಯವೇ ಪ್ರಮುಖ ಕಾರಣ. ಪತ್ರಿಕೆಯ ಹೂರಣದ ಮೌಲ್ಯವರ್ಧನೆ ಇನ್ನೂ ಆಗಬೇಕಿದೆಯಾದರೂ, ತಮ್ಮ ಮೊನಚಾದ ಹಾಗೂ ನೇರ ಸಂಪಾದಕೀಯದಿಂದ, ಲೇಖನಗಳಿಂದ ಪತ್ರಿಕೆಗೊಂದು ಮೌಲ್ಯ, ಗುರುತಿಸುವಿಕೆ ತಂದುಕೊಟ್ಟಿದ್ದಾರೆ, ರಾ.ನಂ.

ನಾಡಿನ ಕನ್ನಡದ ಪ್ರಖರ ಚಿಂತಕರಲ್ಲಿ ಒಬ್ಬರಾಗಿರುವ ರಾ.ನಂ.ಚಂದ್ರಶೇಖರ ಕರ್ನಾಟಕದ ಬೌದ್ಧಿಕ ಸಂಪತ್ತು ಎಂದು ಯಾವುದೇ ಅಳುಕಿಲ್ಲದೆ ಹೇಳಬಹುದು. ಕನ್ನಡ–ಕನ್ನಡಿಗ–ಕರ್ನಾಟಕಗಳಿಗೆ ಸಂಬಂಧಿಸಿದ ಯಾವುದೇ ಚರ್ಚೆ, ಲೇಖನಗಳಲ್ಲಿ ವಿಪುಲ ಮಾಹಿತಿಯನ್ನು ಹರವಿಕೊಂಡು ನಿಲ್ಲುವ ರಾ.ನಂ. ಅವರನ್ನು, ನಾಡೋಜ ಎಂ. ಚಿದಾನಂದಮೂರ್ತಿ ಅವರು ಕ.ಅಂ.ಅಂ.ಚಂದ್ರಶೇಖರ (ಕರ್ನಾಟಕದ ಅಂಕಿ ಅಂಶ ಚಂದ್ರಶೇಖರ) ಎಂದೇ ಸಂಬೋಧಿಸುವುದು. ಅವರ ಅಧ್ಯಯನಶೀಲತೆ, ಕನ್ನಡದ ಚಲನಶೀಲತೆ, ಕನ್ನಡ ಅಸ್ಮಿತೆಗಳಿಗೆ ಹಿಡಿದ ಕನ್ನಡಿಯಾಗಿದೆ. ಕರ್ನಾಟಕದ ಸಮಗ್ರತೆ ಕುರಿತ ಪುಸ್ತಕಗಳ, ಲೇಖನಗಳ ಪ್ರಕಟಣೆ, ಕನ್ನಡಕ್ಕೆ ಅನ್ಯಾಯವಾದಾಗ ಚಳವಳಿ ಹೋರಾಟಗಳ ವ್ಯವಸ್ಥೆ ಮತ್ತು ಸ್ವತಃ ಕನ್ನಡ ಪರಿಚಾರಕನಾಗಿ ದಣಿವರಿಯದ ಶ್ರಮಿಸುವಿಕೆ ಮೂರೂ ಕ್ಷೇತ್ರಗಳಲ್ಲಿ ರಾ.ನಂ. ಚಂದ್ರಶೇಖರ ಅವರಂತಹ ವ್ಯಕ್ತಿಗಳು ಅಪರೂಪ. ಹೀಗಿದ್ದೂ ರಾ.ನಂ. ಅವರಿಗೆ ಸಲ್ಲಬೇಕಾದ ಮಾನ್ಯತೆ, ಪುರಸ್ಕಾರಗಳು ಇನ್ನೂ ಸಂದಿಲ್ಲದಿರುವುದು, ಪ್ರತಿಫಲಾಪೇಕ್ಷೆ ಇಲ್ಲದೆ ದುಡಿವ ಅವರ ನಿಸ್ವಾರ್ಥ ಸೇವೆಗೆ ಮಾತ್ರ ಸಾಕ್ಷಿಯಲ್ಲ, ಜೊಳ್ಳಿನ ಮಧ್ಯೆ ಪ್ರಾಮಾಣಿಕ ಕನ್ನಡದ ಕೆಲಸಗಾರರನ್ನೂ ಕೂಡ ಆರಿಸದ ಗೌರವಿಸದ ನ್ಯೂನತೆಯನ್ನು ಹೊಂದಿರುವ ನಮ್ಮ ವ್ಯವಸ್ಥೆಯ ದೌರ್ಬಲ್ಯಕ್ಕೂ ಹಿಡಿದ ಕೈಗನ್ನಡಿಯಾಗಿದೆ.

❒




HAL's Kanndada Hero

■ ***by Kushala Satyanarayana***

Two decades ago, HAL employee R.N. Chandrashekar managed to pull off the unthinkable. He got permission to write an internal staff examination in Kannada. It was a first in the country's premier PSU. In the 80s, such an unusual request from a Kannada-speaking employee was usually dismissed as an off shoot of the Gokak movement, which fought for first-language status for Kannada in the state. But Ra.Nam., as he is popularly known in literary circles, then working with the input-output control unit, did not give up. Not only did he get permission to sign in Kannada and use the language for all official correspondences, but he also made the management change its policy and set question papers in Kannada.

It was only after participating in the Gokak Kannada movement in 1982-83 that Ra.Nam. decided to adopt Kannada at his workplace. Back then, HAL was dominated by Tamil-speaking employees and even a Kannada newspaper in the factory premises was a rarity.

Though the Kannada-Tamil divide among employees often led to clashes, Ra.Nam. and his colleagues fought their way through.



"All this was very difficult in HAL in the 1970s and early 80s. There were objections if employees conversed in Kannada. A lot of my seniors fought the language divide in the organisation. And Kannada activism became strong after the Gokak movement and central Government's tri-language policy (English, Hindi and the local language)," says Ra.Nam.

He emulated a few like-minded colleagues and gave a letter to the management for a change of signature to Kannada. In 1987, he got an approval to write the internal exam. (for a promotion) in Kannada.

"After a lot of discussions, it was approved. The next issue was how to set just one technical question paper in Kannada when the others were in English? who would set the paper and who would examine it? But thankfully, my senior colleagues who were also Kannadigas - Eshwar Chandra, then manager in the designs department, Ramshesh and M.V. Ramamurthy - agreed to set the paper and examine it. I wrote the exam. in Kannada and secured 90%" says Ra.Nam., showing some old letters, including the request for a change of signature.

Thanks to Ra.Nam.'s efforts, many of his colleagues also got permission to write the exams. in Kannada.

Over the years, Ra.Nam. has used Kannada for all his personal correspondences, time dockets, gate passes and applications.

He edited the in-house Kannada Magazine 'Karmika Loka' and translated many company rules, including the provisions of the Gratuity Act. When the PSU started creche facilities for its employees' children and was looking for a Kannada name for it, it was Ra.Nam.'s sugestion 'shishu palana Kendra' and the bosses zeroed in on.

Ra.Nam. as also authored several books on Kannada and it's usage and participated in Wrold Kannada Meet held in Belgaum last year.

In a few months, his 39-year association with HAL will end and Raa.Nam. is scripting his final thanksgiving letter to the organisation which he will leave as chief computer supervisor, all set to log out office favourite computers at the office which, needless to say, has a Kannada Keybord.

❐

ಲೇಖಕ-ಲೇಖಕಿಯರ ವಿಳಾಸ

ಡಾ. ಬಸವಲಿಂಗ ಪಟ್ಟದ್ದೇವರು, ಹಿರೇಮಠ ಸಂಸ್ಥಾನ, ಭಾಲ್ಕಿ-೫೮೫ ೩೨೮ (ಬೀದರ).
ಮೊ.: ೯೪೪೮೧೧೫೪೦೪

ಡಾ. ಎಚ್.ಎಸ್.ಗೋಪಾಲರಾವ್, ೧೪೪, 'ಸ್ವಸ್ತಿಶ್ರೀ ಸ್ಕಂದ', ಐ.ವೈ.ಡಿ. ರಸ್ತೆ
ಅರಸಿನಕುಂಟೆ-೫೬೨ ೧೨೩, ಬೆಂಗಳೂರು(ಗ್ರಾ) ಜಿಲ್ಲೆ ಮೊ: ೯೪೪೮೬೬೯೯೨೨

ಎಂ.ಕೆ. ಗೋಪಿನಾಥ್, ಟಿ-೧೨೭, ೩೫ನೇ ಅಡ್ಡರಸ್ತೆ, ೧೬ನೇ ಮುಖ್ಯರಸ್ತೆ
'ಟಿ' ಬ್ಲಾಕ್, ಜಯನಗರ, ಬೆಂಗಳೂರು-೫೬೦ ೦೪೧. ದೂ: ೦೮೦-೨೨೪೪೩೫೬೩

ಶಾ.ಮಂ. ಕೃಷ್ಣರಾಯ, 'ಸಾಹಿತ್ಯ ಸದನ', ನಂ. ೫೦೦, ೧೧ನೇ ಅಡ್ಡರಸ್ತೆ, ೫ನೇ ಮುಖ್ಯರಸ್ತೆ,
ಗಿರಿನಗರ, ಬೆಂಗಳೂರು-೫೬೦೦೮೫. ಮೊ: ೯೪೮೧೭೮೮೮೩೨

ವೆ. ಶ್ರೀನಿವಾಸ, ೭೦/೩, ಸರ್ವಜ್ಞ ರಸ್ತೆ, ೫ನೇ ಮುಖ್ಯರಸ್ತೆ, ಶ್ರೀರಾಮಪುರ
ಬೆಂಗಳೂರು-೫೬೦೦೨೧. ಮೊ: ೯೮೮೬೯೮೭೫೧೬

ಪ್ರೊ. ಸ.ನ. ವಿಶ್ವೇಶ್ವರಯ್ಯ, ೧೧೬, ಓಂ ಶ್ರೀ ನಿಲಯ, ೧೩ನೇ ತಿರುವು, ೭ನೇ ಮುಖ್ಯರಸ್ತೆ
ಎನ್‌ಜಿಇಎಫ್ ಲೇಔಟ್, ನೃಪತುಂಗನಗರ, ನಾಗರಭಾವಿ ೨ನೇ ಹಂತ, ಬೆಂಗಳೂರು-೫೬೦೦೭೨.
ಮೊ.: ೯೮೪೫೫೩೫೬೮೨

ಬೆ.ರಾ. ನಾಗರಾಜ್, ಎಸ್.೧೦, ಪರ್ಲ್‌ಕೊರ್ನೆಟ್ ಅಪಾರ್ಟ್‌ಮೆಂಟ್, ಸದ್ದುಗುಂಟೆಪಾಳ್ಯ,
ಸಿ.ವಿ.ರಾಮನ್‌ನಗರ, ಬೆಂಗಳೂರು-೫೬೦೦೯೩. ದೂ: ೦೮೦-೨೫೨೪೩೮೬೭

ಡಾ. ಎಂ. ಚಿದಾನಂದಮೂರ್ತಿ, ೬/ಎ, 'ಮಿಂಚು', ೪ನೇ ಅಡ್ಡರಸ್ತೆ, ೧ನೇ ಮುಖ್ಯರಸ್ತೆ, ಹಂಪಿನಗರ,
ವಿಜಯನಗರ ೨ನೇ ಹಂತ, ಬೆಂಗಳೂರು-೪೦. ದೂ: ೦೮೦-೨೩೩೦೦೬೮೭

ಡಾ. ಜಿ. ರಾಮಕೃಷ್ಣ, ೨-ಎಫ್, ೨೨/೧, ಪವನ್ ಪರಂಜ್ಯೋತಿ ಗೃಹಸ್ತೋಮ, ೪ನೇ ಅಡ್ಡರಸ್ತೆ,
ಕಾವೇರಿನಗರ, ಬನಶಂಕರಿ ೩ನೇ ಹಂತ, ಬೆಂಗಳೂರು-೮೫. ದೂ: ೦೮೦-೨೬೭೯೩೯೫೧

ಡಾ. ಜಿ. ಶ್ರೀನಿವಾಸಮೂರ್ತಿ, ೩೫, ೩ನೇ ಅಡ್ಡರಸ್ತೆ, ಕೋದಂಡರಾಮಪುರ, ಮಲ್ಲೇಶ್ವರ
ಬೆಂಗಳೂರು-೫೬೦ ೦೦೩. ಮೊ.: ೯೯೮೬೦೪೮೦೯೧

ಚಿ.ವಿ. ಶ್ರೀನಾಥ ಶಾಸ್ತ್ರಿ, ೧೨೩/೧, 'ಶಿವಗೃಹ', ನೇತಾಜಿ ರಸ್ತೆ, ೪ನೇ ಬ್ಲಾಕ್, ತ್ಯಾಗರಾಜನಗರ
ಬೆಂಗಳೂರು-೫೬೦ ೦೨೮. ಮೊ.: ೮೭೬೨೨೬೫೦೬೨

ಡಾ. ಕೆ.ಆರ್.ಸಂಧ್ಯಾ ರೆಡ್ಡಿ, ೧೦೪೪, 'ಸಮಯಾ', ೮ನೇ ಅಡ್ಡರಸ್ತೆ, ೪ನೇ ಮುಖ್ಯರಸ್ತೆ, ಶ್ರೀನಿವಾಸನಗರ,
ಬೆಂಗಳೂರು-೫೬೦ ೦೫೦. ಮೊ.: ೯೨೪೨೨೧೬೧೩೮

ಕೆ.ಎಸ್.ಪಾರ್ಥಸಾರಥಿ, ೨೪೭, ವನಸಿರಿ ಬಡಾವಣೆ, ವಿದ್ಯಾನಗರ ತಿರುವು
ಬೆಟ್ಟಹಲಸೂರು ಅಂಚೆ, ಬೆಂಗಳೂರು-೫೬೨ ೧೫೭. ಮೊ.: ೯೪೪೮೦೯೩೯೬೬

ಡಾ. ಬಸವರಾಜ ಸಬರದ, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ
ಗುಲಬರ್ಗಾ-೫೮೫ ೧೦೬. ಮೊ.: ೯೮೮೬೬೯೨೨೦

ಎಸ್. ಶಂಕರಪ್ಪ ತೋರಣಗಲ್ಲು, ೯೯/೩೦, ೧ನೇ ಮಹಡಿ, ೧ನೇ ಮುಖ್ಯರಸ್ತೆ, ೪ನೇ ಅಡ್ಡರಸ್ತೆ ವಿಜಯನಗರ, ಬೆಂಗಳೂರು-೫೬೦ ೦೪೦. ಮೊ: ೮೧೯೭೨೩೬೯೭೧

ಬಿ. ಸುರೇಶ, ೧೧೬೨, ಮೀಡಿಯಾ ಹೌಸ್, ೨೨ನೇ ಅಡ್ಡರಸ್ತೆ, ೨೩ನೇ ಮುಖ್ಯರಸ್ತೆ, ಬನಶಂಕರಿ ೨ನೇ ಹಂತ ಬೆಂಗಳೂರು-೫೬೦ ೦೭೦. ಮೊ.: ೯೮೪೫೦೬೯೬೭೬

ಡಾ. ಆರ್. ಶೇಷಶಾಸ್ತ್ರಿ, ೧೩-೨-೬೪೯, ಶ್ರೀನಿವಾಸನಗರ, ಅನಂತಪುರ-೫೧೫ ೦೦೧ ಮೊ.: ೦೯೪೪೮೦೪೬೬೫೯

ಡಾ. ಮುಖ್ಯಮಂತ್ರಿ ಚಂದ್ರು, ೯೩, ೩ನೇ ಮುಖ್ಯರಸ್ತೆ, ಜೆ.ಪಿ.ನಗರ ೪ನೇ ಹಂತ, ಡಾಲರ್ಸ್ ಕಾಲನಿ ಬೆಂಗಳೂರು-೫೬೦ ೦೭೮. ಮೊ.: ೯೪೪೮೪೬೦೮೩೩

ಆರ್. ಹೃಷಿಕೇಶ್, ೧೧೪, ೧೨ನೇ 'ಎ' ಮುಖ್ಯರಸ್ತೆ, ಬಿ.ಟಿ.ಎಂ. ೧ನೇ ಹಂತ, ಬೆಂಗಳೂರು-೫೬೦ ೦೨೯. ದೂ: ೦೮೦-೨೭೮೫೦೧೭೬

ಬಿ.ಎಸ್. ಜಯಪ್ರಕಾಶ ನಾರಾಯಣ, ನಂ.೫೯, ಶ್ರೀನಿವಾಸ ನಿಲಯ, ೩ನೇ ಅಡ್ಡರಸ್ತೆ ಆರ್‌ಎಂಎಸ್ ಕಾಲನಿ, ಸಂಜಯನಗರ ಬೆಂಗಳೂರು-೫೬೦ ೦೯೪. ಮೊ.:೯೩೭೯೫೨೪೯೯೧

ಈಶ್ವರ ದೈತೋಟ, A-೫೦೩, ವಿಲ್ಸನ್ ಮೇನರ್, ೧೩ನೇ ಅಡ್ಡರಸ್ತೆ, ವಿಲ್ಸನ್ ಗಾರ್ಡನ್, ಬೆಂಗಳೂರು-೫೬೦೦೨೭. ಮೊ: ೯೩೪೩೩೮೦೬೮೬

ಕೆ.ಎನ್. ಬೆಂಗೇರಿ, G-೧೧೦೩, 'ಸ್ಪ್ರಿಂಗ್‌ಫೀಲ್ಡ್' ಗೃಹಸ್ತೋಮ, ಸರ್ಜಾಪುರ ಮುಖ್ಯರಸ್ತೆ, ಬೆಂಗಳೂರು-೫೬೦ ೧೦೨. ಮೊ: ೯೭೪೩೩೩೫೨೫೭

ರಾಘವೇಂದ್ರ ಜೋಷಿ, ೩೮೮೧, 'ಶ್ರೀಕೃಪಾ', ೭ನೇ ಅಡ್ಡರಸ್ತೆ ಭಾಗ್ಯನಗರ ಬೆಳಗಾವಿ-೫೯೦ ೦೦೬. ಮೊ.: ೯೩೪೧೧೦೦೧೭೭

ಡಾ. ಡಿ.ಬಿ. ರಾಮಚಂದ್ರಾಚಾರ್, ೬/೪೧, ೧೧ನೇ ಮುಖ್ಯರಸ್ತೆ, ಪದ್ಮನಾಭನಗರ ಬೆಂಗಳೂರು-೫೬೦ ೦೭೦. ಮೊ.:೯೧೪೧೧೨೧೧೦೮

ಎನ್.ಎಸ್. ದೇವಿಪ್ರಸಾದ್, ಸಂಪಾಜೆ ಎಸ್ಟೇಟ್, ಸಂಪಾಜೆ ೫೭೪೨೩೪, ಕೊಡಗು ಮೊ: ೯೪೪೮೪೭೨೨೪೪

ಜಿ.ಪಿ. ರಾಮಣ್ಣ, ೨೫೨, 'ಕಾವ್ಯಕಿರಣ', ೧೬ನೇ ಮುಖ್ಯರಸ್ತೆ, ೬ನೇ ಅಡ್ಡರಸ್ತೆ, ಬಿ.ಟಿ.ಎಂ. ಬಡಾವಣೆ ೨ನೇ ಹಂತ, ಬೆಂಗಳೂರು-೫೬೦ ೦೭೬. ಮೊ.: ೯೪೪೮೨೦೨೭೦೮

ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರೀ, ೬೮ 'ಬಿ', 'ಬ್ರಾಹ್ಮೀ', ಆಶ್ರಮದ ರಸ್ತೆ ಜಯಲಕ್ಷ್ಮೀಪುರ, ಮೈಸೂರು-೫೭೦ ೦೧೨. ದೂ: ೦೮೨೧-೨೨೫೧೨೯೯೦

ಡಾ. ದೇವರ ಕೊಂಡಾರೆಡ್ಡಿ, ೩೫/೧, ೨೦ 'ಎ' ಮುಖ್ಯರಸ್ತೆ, ವೆಂಕಟೇಶ್ವರ ಲೇಔಟ್ ಬಿ.ಟಿ.ಎಂ. ೧ನೇ ಹಂತ, ಬೆಂಗಳೂರು-೫೬೦ ೦೬೮. ಮೊ.: ೯೪೪೯೫೨೨೪೬೨

ಡಾ. ಜಿ.ಎಂ.ಹೆಗಡೆ, ೬ನೇ ಅಡ್ಡರಸ್ತೆ, ಕಲ್ಯಾಣನಗರ, ಧಾರವಾಡ-೫೮೦ ೦೦೭ ಮೊ.: ೯೯೪೫೨೯೯೨೭೨

ಡಾ. ಎನ್.ಎಸ್. ತಾರಾನಾಥ್, ೧೯, 'ರಾಮಲೀಲಾ' ೧ನೇ ಅಡ್ಡರಸ್ತೆ, ೨ನೇ ಹಂತ ಗಂಗೋತ್ರಿ ಬಡಾವಣೆ, ಮೈಸೂರು-೫೭೦ ೦೦೯. ದೂ: ೦೮೨೧-೨೨೩೪೪೭೧೬

ಪ್ರೊ. ಜಿ. ಅಶ್ವತ್ಥನಾರಾಯಣ, ೯೫, ೩೪ನೇ 'ಬಿ' ಅಡ್ಡರಸ್ತೆ, ೧೬ನೇ ಮುಖ್ಯರಸ್ತೆ ೪ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು-೫೬೦ ೦೪೧. ದೂ: ೦೮೦-೨೬೬೧೭೭೮೩

ಡಾ. ಜಿ.ಎನ್. ಉಪಾಧ್ಯ, ಮುಖ್ಯಸ್ಥರು, ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ, ವಿದ್ಯಾನಗರಿ, ಮುಂಬಯಿ-೪೦೦ ೦೯೮. ದೂ : ೦೨೨-೬೭೬೯೮೭೩

ಡಾ. ಅಮೃತ ನಾರಾಯಣ, ೩೯/೭೦. ೬ನೇ ಮುಖ್ಯರಸ್ತೆ, ೧ನೇ 'ಇ' ಅಡ್ಡರಸ್ತೆ ರೆಮ್ಕೋ ಬಡಾವಣೆ, ಹಂಪಿನಗರ, ಬೆಂಗಳೂರು-೫೬೦ ೧೦೪. ದೂ: ೦೮೦-೨೩೩೦೯೫೧

ಪ್ರೊ. ಎಂ.ಎಚ್. ಕೃಷ್ಣಯ್ಯ, ೧೮೨, ೭ನೇ ಅಡ್ಡರಸ್ತೆ, ೧ನೇ 'ಎನ್' ಬ್ಲಾಕ್, ರಾಜಾಜಿನಗರ ಬೆಂಗಳೂರು-೫೬೦ ೦೧೦. ಮೊ.: ೯೪೫೬೫೮೮೮೫

ಪ್ರೊ. ಡಿ. ಲಿಂಗಯ್ಯ, ೬೯೦, ೭ನೇ ಬ್ಲಾಕ್, ೨ನೇ ಫೇಸ್, ಬನಶಂಕರಿ ೩ನೇ ಹಂತ ಬೆಂಗಳೂರು-೫೬೦ ೦೮೫. ದೂ.: ೦೮೦-೨೬೭೨೦೯೮೯

ಡಾ. ಚೂಡಾಮಣಿ ನಂದಗೋಪಾಲ್, ಎ೧೦೩. ಓಕ್‌ಯಾರ್ಡ್ ಅಪಾರ್ಟ್‌ಮೆಂಟ್, ೩೮ನೇ ಕ್ರಾಸ್ ಈಸ್ಟ್‌ಎಂಡ್, ೯ನೇ ಬ್ಲಾಕ್ ಜಯನಗರ, ಬೆಂಗಳೂರು-೬೯. ಮೊ: ೯೮೮೬೪೪೩೦೧೮

ಡಾ. ಇಂದಿರಾ ಹೆಗ್ಗಡೆ, ೬. 'ಕೃಷ್ಣಾ ರೆಸಿಡೆನ್ಸಿ', ೪ನೇ ಅಡ್ಡರಸ್ತೆ ಅಮರಜ್ಯೋತಿನಗರ, ವಿಜಯನಗರ ಬೆಂಗಳೂರು-೫೬೦ ೦೪೦. ಮೊ.: ೯೮೪೫೫೭೭೫೫೩

ಡಾ. ವಸುಂಧರಾ ದೇಸಾಯಿ, ೩೬೫. ಶ್ರೀನಿವಾಸ, ೨ನೇ ಬ್ಲಾಕ್, ೪ನೇ ಮೇನ್, ೩ನೇ ಹಂತ ೬ನೇ ಘಟ್ಟ ಬನಶಂಕರಿ, ಬೆಂಗಳೂರು-೫೬೦ ೦೮೫. ಮೊ: ೯೮೮೬೧೮೨೯೬೫

ಪ್ರೊ. ಎಂ. ಧ್ರುವನಾರಾಯಣ್, ೧೦/೨. ೧೩ನೇ 'ಎ' ತಿರುವು, ಜಯನಗರ ೨ನೇ ಬ್ಲಾಕ್ ಬೆಂಗಳೂರು-೫೬೦ ೦೧೧. ದೂ: ೦೮೦-೨೬೫೬೧೬೦೮

ಪ್ರೊ. ಪಿ. ಸದಾಶಿವಮೂರ್ತಿ, ೬೧೮/೬೧೯. ೧೩ನೇ ಅಡ್ಡರಸ್ತೆ, ಎಂ.ಸಿ. ಲೇಔಟ್, ವಿಜಯನಗರ, ಬೆಂಗಳೂರು-೫೬೦ ೦೪೦. ದೂ.: ೦೮೦-೨೩೩೫೫೮೧೦

ಪ್ರೇಮಾ ಭಟ್, ೮೪೫, 'ಶ್ರೀಗುರುಪ್ರಸಾದ', ೪ನೇ ಮುಖ್ಯರಸ್ತೆ, ವಿಜಯನಗರ ಬೆಂಗಳೂರು-೫೬೦ ೦೪೦. ಮೊ: ೯೯೪೫೦೧೨೪೯೦

ಸುಧೀಂದ್ರ ಹಾಲ್ದೊಡ್ಡೇರಿ, ೧೪೯೯, ದಕ್ಷಿಣಾಂತ್ಯ-ಜಿ., ೯ನೇ ಬ್ಲಾಕ್ ಜಯನಗರ ಬೆಂಗಳೂರು-೫೬೦ ೦೬೯. ಮೊ.: ೯೪೪೮೨೮೧೮೧೮

ಕೆ.ಎನ್. ಭಗವಾನ್, ೧೫೫೫, 'ಚೈತ್ರ', ಪೂರ್ವಾಂತ್ಯ ರಸ್ತೆ, ೯ನೇ ಕೊಪ್ಪಲು(ಬ್ಲಾಕ್), ಜಯನಗರ ಬೆಂಗಳೂರು-೫೬೦ ೦೬೯. ದೂ: ೯೮೮೦೮೮೬೫೦೬

ಪ್ರೊ. ತೀ.ಶ್ರೀ. ನಾಗಭೂಷಣ, ೫೩/ಇ, 'ಒಲುಮೆ', ೧ನೇ ಅಡ್ಡರಸ್ತೆ, ೩ನೇ ಸ್ಟೇಜ್, ೪ನೇ ಬ್ಲಾಕ್ ಬನಶಂಕರಿ ೩ನೇ ಹಂತ, ಬೆಂಗಳೂರು-೫೬೦ ೦೮೫. ಮೊ.:೯೬೪೯೧೨೦೭೦

ಪ್ರೊ. ಆರ್.ಎಲ್.ಎಂ. ಪಾಟೀಲ್, ೧೧೦೫. ೪೧ನೇ ಅಡ್ಡರಸ್ತೆ, ಪೂರ್ಣಪ್ರಜ್ಞ ಬಡಾವಣೆ, ಉತ್ತರಹಳ್ಳಿ, ಬೆಂಗಳೂರು-೫೬೦೦೬೧. ಮೊ.: ೯೪೪೮೦೫೪೩೫೦

ಡಾ. ವಿಜಯಾ, ೩೬, ನಲವತ್ತಡಿ ರಸ್ತೆ, ರಾಘವನಗರ, ನ್ಯೂ ಟಿಂಬರ್‌ಯಾರ್ಡ್ ಲೇಔಟ್ ಬೆಂಗಳೂರು-೫೬೦ ೦೨೬. ಮೊ.: ೯೮೮೦೭೦೬೪೧೯

ಆರ್. ಪ್ರತಿಭಾ, ೧೭/೧, GATWU, ಮೊದಲನೇ ಮಹಡಿ, ಬಸ್‌ಸ್ಟ್ಯಾಪ್ ಹತ್ತಿರ, ಹೊಸಗುಡ್ಡದಹಳ್ಳಿ, ಮೈಸೂರು ರಸ್ತೆ, ಬೆಂಗಳೂರು-೫೬೦ ೦೨೬. ದೂ: ೦೮೦-೨೬೭೪೫೨೪೨

ಡಾ. ಬಾಬು ಕೃಷ್ಣಮೂರ್ತಿ, ೨೧, 'ಅನುಗ್ರಹ', ೮ನೇ ಮುಖ್ಯರಸ್ತೆ, ಎನ್.ಎಸ್.ಪಾಳ್ಯ, ಮೈಕೋ ಬಡಾವಣೆ ಓಂಭಾಗ ಬೆಂಗಳೂರು-೫೬೦ ೦೭೬. ಮೊ.: ೯೨೪೨೧೯೦೪೨೧

ರಾ.ನಂ. ಶ್ರೀಕಂಠಯ್ಯ, ೫೩೮/೧೧. ೭ನೇ ಮುಖ್ಯರಸ್ತೆ, ೪ನೇ ಅಡ್ಡರಸ್ತೆ, ಹನುಮಂತನಗರ
ಬೆಂಗಳೂರು-೫೬೦ ೦೧೯. ದೂ.: ೦೮೦-೨೬೬೦೩೫೨೫

ಬಾ.ಹ. ಉಪೇಂದ್ರ, ೪ಡಿ೨, ಗೋಕುಲ ಬ್ಲಾಕ್, ಕೃಷ್ಣನಗರ ಅಪಾರ್ಟ್‌ಮೆಂಟ್, ಅನ್ನಸಂದ್ರಪಾಳ್ಯ
ವಿಮಾನಪುರ, ಬೆಂಗಳೂರು-೫೬೦ ೦೧೭. ಮೊ: ೯೭೩೧೯೩೯೭೨೪

ಎಸ್. ಶಿವಲಿಂಗಯ್ಯ, ೨೭, ೨ನೇ ಮುಖ್ಯರಸ್ತೆ, ದತ್ತಾತ್ರೇಯನಗರ, ಹೊಸಕೆರೆಹಳ್ಳಿ
ಬನಶಂಕರಿ ೩ನೇ ಹಂತ, ಬೆಂಗಳೂರು-೫೬೦ ೦೮೫. ಮೊ: ೯೯೦೧೦೮೪೦೭೦

ಎಚ್.ಎನ್. ರಮೇಶ್‌ಬಾಬು, ೪೩೬, 'ಶ್ರೀರಂಗ', ೯ನೇ ಮೇನ್, ಆವಲಹಳ್ಳಿ ಬಿಡಿಎ ಲೇಔಟ್
ಬಿ.ಎಸ್.ಕೆ. ೩ನೇ ಹಂತ, ಬೆಂಗಳೂರು-೫೬೦ ೦೮೫. ಮೊ: ೯೮೪೫೦೯೬೩೭೬

ರಾ.ಚಂ. ಚೇತನ್, ೧, 'ಶ್ರೀನಿಲಯ', ಮಾರಮ್ಮ ದೇವಸ್ಥಾನದ ರಸ್ತೆ, ಕತ್ತರಿಗುಪ್ಪೆ
ಬನಶಂಕರಿ ೩ನೇ ಹಂತ, ಬೆಂಗಳೂರು-೫೬೦೦೮೫. ಮೊ.: ೯೮೮೬೯೦೨೧೩೨

ಕೆ.ಎಚ್. ನರಸಿಂಹಮೂರ್ತಿ, ೧೨೨೦, ೨೬ನೇ ಮುಖ್ಯರಸ್ತೆ, ೯ನೇ ಬ್ಲಾಕ್, ಜಯನಗರ
ಬೆಂಗಳೂರು-೫೬೦ ೦೬೯. ಮೊ.: ೯೯೦೦೧೬೬೪೫೪

ಪ್ರೊ. ತೀ.ನಂ. ಶಂಕರನಾರಾಯಣ, 'ಪ್ರತಿಭಾ', ೧ನೇ ಅಡ್ಡರಸ್ತೆ, ಎ.ಆರ್.ಜಿ.ಕಾಲನಿ, ಅಶೋಕನಗರ
ಶಿವಮೊಗ್ಗ-೫೭೭ ೨೦೫. ಮೊ.: ೯೪೪೮೮೮೫೧೭೫

ಡಾ. ಸೂರ್ಯನಾಥ ಕಾಮತ್, ೭೬೮, 'ಕೀರ್ತಿ', ೧೧ನೇ ಮುಖ್ಯರಸ್ತೆ, ೬ನೇ ಅಡ್ಡರಸ್ತೆ ಹನುಮಂತನಗರ,
ಬೆಂಗಳೂರು-೫೬೦ ೦೧೯. ದೂ: ೦೮೦-೨೬೬೨೪೮೦೬

ಈಶ್ವರಚಂದ್ರ, ೧೩೩/೨, ಪಂಚವಟಿ, ೧ನೇ ಮಹಡಿ, ೩ನೇ ಮುಖ್ಯರಸ್ತೆ, ಗೃಹಲಕ್ಷ್ಮೀ ಕಾಲೊನಿ ೨ನೇ
ಹಂತ, ಬಸವೇಶ್ವರನಗರ, ಬೆಂಗಳೂರು-೫೬೦ ೦೭೯. ಮೊ.: ೯೪೮೦೬೧೧೩೦೭

ಡಾ. ಎಚ್.ಎಂ. ಮರುಳಸಿದ್ದಯ್ಯ, ೬೨, 'ಈಶಕೃಪೆ', ಮಂಜುನಾಥ ಕಾಲನಿ, ಜೆ.ಪಿ.ನಗರ
ಬೆಂಗಳೂರು-೫೬೦ ೦೭೮. ಮೊ: ೯೪೮೦೬೧೧೩೭

ಡಾ. ಜಿ. ಕೃಷ್ಣಪ್ಪ, ನಂ. ೨೨, 'ಶ್ರೀ ಗುರುದತ್ತ ನಿಲಯ', ೧ನೇ ಅಡ್ಡರಸ್ತೆ, ನೇತಾಜಿನಗರ
ಮತ್ತಿಕೆರೆ, ಬೆಂಗಳೂರು-೫೬೦ ೦೫೪. ಮೊ: ೯೯೭೧೯೨೯

ಎಂ.ಕೆ. ಭಾಸ್ಕರರಾವ್, ಎಂ.ಎಫ್. ೨/೯, ಬಿ.ಡಿ.ಎ. ಗೃಹಸ್ತೋಮ, ಬಿ.ಟಿ.ಎಂ. ಲೇಔಟ್
ಬೆಂಗಳೂರು-೫೬೦ ೦೭೬. ಮೊ: ೯೪೪೮೭೯೭೮೭೫

ಟಿ.ಆರ್. ಅನಂತರಾಮು, ೫೩೪, ೭೦ನೇ ಅಡ್ಡರಸ್ತೆ, ೧೪ನೇ ಮುಖ್ಯರಸ್ತೆ, ೧ನೇ ಹಂತ
ಕುಮಾರಸ್ವಾಮಿ ಲೇಔಟ್, ಬೆಂಗಳೂರು-೫೬೦ ೦೭೮. ಮೊ.: ೯೮೮೬೩೫೬೦೮೫

ವ.ಚ. ಚನ್ನೇಗೌಡ, ೮೩೦/೧೧, ೯ನೇ ಮುಖ್ಯರಸ್ತೆ, ೪ನೇ 'ಎ' ಅಡ್ಡರಸ್ತೆ, ಹಂಪಿನಗರ
ಬೆಂಗಳೂರು-೫೬೦ ೦೪೦. ಮೊ.: ೯೪೪೯೪೪೬೪೭೫

ಬಿ.ವಿ. ರವಿಕುಮಾರ್, ಎಫ್.ಎ.-೭೦೧, ಹೊಸ ಅಪಾರ್ಟ್‌ಮೆಂಟ್ ೨ನೇ ಹಂತ
ಎಚ್.ಎ.ಎಲ್. ಮಧ್ಯ ಬಡಾವಣೆ, ಬೆಂಗಳೂರು-೫೬೦ ೦೩೭. ಮೊ.: ೯೯೪೫೬೯೧೧೭

ಎಸ್. ಕುಶಾಲ ಸತ್ಯನಾರಾಯಣ, ಉಪ ಸಂಪಾದಕರು, ಬೆಂಗಳೂರು ಮಿರರ್
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦ ೦೧೮. ಮೊ.:



ರೂಢಿಗತವಾಗಿ ಬಂದಿರುವ ಸಂಗತಿಗಳನ್ನು ಒಪ್ಪಿ ಬಾಳುವುದು ಹಿತವೆನಿಸಬಲ್ಲದಾಗಿದ್ದರೂ, ನೈಜ ವ್ಯಕ್ತಿತ್ವವಾಗಲಿ, ಸಾರ್ಥಕ ಅಸ್ತಿತ್ವವಾಗಲಿ ನೆರವಾಗುವುದಿಲ್ಲ ಎಂಬುದು ನನಗೆ ಬದುಕು ಕಲಿಸಿದ ಅನುಭವ.

ಹುಟ್ಟಿನಿಂದಲೇ ಬಂದಿರುವ ಮುಂಗೋಪ, ಚಡಪಡಿಕೆ, ಅನುಮಾನವೇ ಜ್ಞಾನದ ಮಾನವೆಂಬ ಧೋರಣೆ ನನ್ನ ಮಿತಿಗಳಾದಂತೆ; ಶ್ರಮವಹಿಸುವ ದುಡಿಮೆ, ಸೋಲೊಪ್ಪದ ಛಲ, ಕಷ್ಟದಲ್ಲಿರುವವರ ಬಗ್ಗೆ ಅನುಕಂಪ, ಸಮಸ್ಯೆಗಳಿಗೆ ಸುಲಭದ ಪರಿಹಾರ ಕಾಣಬಯಸುವುದು ತಪ್ಪು ಎಂಬ ಅರಿವು, ಹೋರಾಟದಲ್ಲಿ ನಿರಾಸೆಗೆ ಅವಕಾಶವಿಲ್ಲವೆಂಬ ಎಚ್ಚರ ನನ್ನನ್ನು ಇಲ್ಲಿಯವರೆಗೆ ಮುನ್ನಡೆಸಿವೆ.

ಲೇಖಕನಿಗಿಂತಲೂ ಹೋರಾಟಗಾರ, ಚಿಂತಕನಿಗಿಂತಲೂ ಸಾಮಾನ್ಯ ಕಾರ್ಯಕರ್ತ ಎನಿಸಿಕೊಳ್ಳುವುದರಲ್ಲಿ ಹೆಮ್ಮೆ ಪಡುವ ನನಗೆ ಅಜ್ಞಾನ-ಅನ್ಯಾಯ ಕಂಡಾಗ ಶಾಂತಿಯಿಂದಿರಲು ಸಾಧ್ಯವಿಲ್ಲ ಹಾಗೆಯೇ ಬರೆಯುವವರು ನೆಮ್ಮದಿಯಿಂದಿರುವುದು ಸಹ್ಯವಾಗುವುದಿಲ್ಲ.